ನಿರಂಜನ

ಪ್ರಧಾನ ಸಂಪಾದಕ:
ಪ್ರೊ|| ಕು. ಶಿ. ಹರಿದಾಸ ಭಟ್ಟ

ಸಹ ಸಂಪಾದಕರು:
ವಿ. ಬಿ. ಮೊಳೆಯಾರ
ವಿ. ಬಿ. ಅರ್ತಿಕಜೆ

ಅಭಿನಂದನ

ರಾಘವೇಂದ್ರ ಇಟಗಿ.

ನಿರಂಜನ ಅಭಿನಂದನ

ಪ್ರಧಾನ ಸಂಪಾದಕ :

ಬೋಳಂತಕೋಡಿ ಈಶ್ವರ ಭಟ್ಟ

ಸಹ ಸಂಪಾದಕರು :

ವಿ. ಬಿ. ಮೊಳೆಯಾರ

ವಿ. ಬಿ. ಅರ್ತಿಕಜೆ

೧೯೮೬

ಕರ್ನಾಟಕ ಸಂಘ

ಪುತ್ತೂರು - 574 201, ದಕ್ಷಿಣ ಕನ್ನಡ

NIRANJANA ABHINANDANA - A Felicitation Volume containing articles by various writers on the life and works of Niranjana.

Published by Karnataka Sangha, Puttur - 574 201, D. K.

First Impression : 1986

Pages : xvi + 495 *Price :* Rs. 75

Chief Editor :
BOLANTHAKODI ISHWARA BHAT

Co-Editors :
V. B. MOLEYAR
V. B. ARTHIKAJE

ರಕ್ಷಾಪುಟ ವಿನ್ಯಾಸ :
ಯಂ. ರಾಮ ಪ್ರಸಾದ್
ದರ್ಬೆ, ಪುತ್ತೂರು, ದ. ಕ.

ರಕ್ಷಾಪುಟದ ವರ್ಣಚಿತ್ರಕಾರ :
ಕೆ. ಜಿ. ಶಿವಯೋಗಿ

ಛಾಯಾಚಿತ್ರಕಾರರು :
ಗೌರಿಸುಂದರ್, ಬೆಂಗಳೂರು
ಪಿ. ಎನ್. ರಾವ್, ಮಂಗಳೂರು
ಮೂರ್ತಿ ಸ್ಟುಡಿಯೊ, ಬೆಂಗಳೂರು
ಟಿ. ಎಲ್. ರಾಮಸ್ವಾಮಿ, ಬೆಂಗಳೂರು

ಕೃತಿ-ವ್ಯಾಪ್ತಿ ಚಿತ್ರಗಳು :
ಗೌರಿಸುಂದರ್

ಕೃತಿ-ವ್ಯಾಪ್ತಿ ಪುಟಗಳ ವಿನ್ಯಾಸ :
ಎ. ಯಂ. ಪ್ರಕಾಶ್, ಕಲಾಮಂದಿರ, ಬೆಂಗಳೂರು

ಮುದ್ರಣ :
ರಾಜೇಶ್ ಪವರ್ ಪ್ರೆಸ್
ದರ್ಬೆ - 574 202, ಪುತ್ತೂರು, ದ. ಕ. ಬೆಲೆ : ರೂಪಾಯಿ ಎಪ್ಪತ್ತೈದು

ಮುನ್ನುಡಿ

ಶ್ರೀ ಕುಳುಕುಂದ ಶಿವರಾಯರು ನನ್ನ ಹಳೆಯ ಸ್ನೇಹಿತರಲ್ಲಿ ಒಬ್ಬರು. ಅವರಿಗೀಗ ಅರುವತ್ತೂರು ವರ್ಷ. ತಮ್ಮ ಕಿಶೋರಾವಸ್ಥೆಯಲ್ಲಿಯೇ 'ಕಿಶೋರ'ನೆಂಬ ಕತೆಗಾರನಾಗಿ ಸಾಹಿತ್ಯಲೋಕಕ್ಕೆ ಅಡಿಯಿಟ್ಟವರು. ತಮ್ಮ ನಿಜನಾಮದಿಂದ ಕೆಲವು ಕೃತಿಗಳನ್ನು ರಚಿಸಿದರೂ ಅವರು 'ನಿರಂಜನ'ರಾಗಿಯೇ ಕನ್ನಡಿಗರ ಮನವನ್ನು ರಂಜಿಸಿದ್ದಾರೆ, ಸೂರೆಗೊಂಡಿದ್ದಾರೆ. ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಸ್ಥಾನವನ್ನು, ಯಾರ ಹಂಗೂ ಇಲ್ಲದೆ, ಭದ್ರಗೊಳಿಸುವ ಜೊತೆಗೇ ಕನ್ನಡಿಗರ ಹೃದಯದಲ್ಲಿ ಸ್ಥಾಯಿಯಾಗಿ ನೆಲೆಸಿದ್ದಾರೆ. ಅವರ ಸಾಹಿತ್ಯಸೇವೆಗೆ ಈಗ ಐವತ್ತು ತುಂಬುತ್ತಿದೆ. ಸಂಸ್ಮರಣೆಗೆ ಇದೊಂದು ಉತ್ಕೃಷ್ಟ ಅವಕಾಶ. ಪುತ್ತೂರಿನ ಕರ್ನಾಟಕ ಸಂಘದವರು ಈ ಅವಕಾಶವನ್ನು ಸರಿಯಾಗಿಯೇ ಉಪಯೋಗಿಸಿ ಕೊಂಡು ಒಂದು ಅಭಿನಂದನಾರ್ಹ ಕೆಲಸ ಮಾಡಿದ್ದಾರೆ. ಅದೇ ಈ ಸಂಭಾವನಾ ಗ್ರಂಥ.

ತಾವು ಹೊರತರುತ್ತಿರುವ ನೆನಪಿನ ಸಂಕಲನ "ನಿರಂಜನ ಅಭಿನಂದನ"ಕ್ಕೆ ಮುನ್ನುಡಿ ಬರೆಯಬೇಕೆಂದು ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಬೋಳಂತಕೋಡಿ ಈಶ್ವರ ಭಟ್ಟರು ನನ್ನನ್ನು ಕೇಳಿಕೊಂಡಾಗ ನನಗೆ ಸಂತೋಷದೊಂದಿಗೆ ಹೆಮ್ಮೆಯೂ ಅನಿಸಿತು. ಏಕೆಂದರೆ 'ನಿರಂಜನ' ಅಂಥ ಒಬ್ಬ ವ್ಯಕ್ತಿ. ಸಾಹಿತಿಗಳಲ್ಲಿ ಅವರಂಥ ವ್ಯಕ್ತಿತ್ವ ಅಪರೂಪ. ನೇರ ನುಡಿ, ನೇರ ನಡೆ, ಸರಳ ಜೀವನ, ಎಲ್ಲದರಲ್ಲೂ ಒಪ್ಪ-ಓರಣ. ಜಾತ್ಯತೀತ, ಪ್ರಗತಿಶೀಲ, ಎಂಥ ಪ್ರತಿಕೂಲದಲ್ಲಿಯೂ ಸಾಧಿಸಿಯೇ ತೀರುವೆನೆಂಬ ಛಲವಾದಿ. ಅದೇ ಅವರ ಯಶಸ್ಸಿನ ಗುಟ್ಟು. 'ಮಜ್ಜಿಗೆಯೊಳಗಿನ ಬೆಣ್ಣೆಯಂತೆ' ಇದ್ದೂ ಇರದಂತಿರುವ ಅವರ ವ್ಯಕ್ತಿತ್ವವೇ ಒಂದು ವೈಶಿಷ್ಟ್ಯ. ಈ ಪುಸ್ತಕದ ಅರ್ಧಭಾಗ ಯಥೋಚಿತವಾಗಿಯೇ ಅವರ ವ್ಯಕ್ತಿ ಚಿತ್ರಣಕ್ಕಾಗಿ ಮೀಸಲಾಗಿದೆ. ಶ್ರೀ ವ್ಯಾಸರಾಯ ಬಲ್ಲಾಳರು 'ನಿರಂಜನ'ರಲ್ಲಿ ಓರ್ವ

'ಸತ್ಯಶೋಧಕ'ನನ್ನು ಕಂಡಿದ್ದರೆ, ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು 'ಧೀರ ಚೇತನ'ವನ್ನು ಕಂಡಿದ್ದಾರೆ. ಅವರು ದಿವಂಗತ ಗೀತಾರವರಿಗೆ 'ಛಲವಾದಿ ಅಣ್ಣ'ನಾದರೆ, ಡಾ| ಶ್ರೀನಿವಾಸಯ್ಯನವರ 'ಅಪರೂಪದ ಗೆಳೆಯ'ನಾಗಿದ್ದಾರೆ. ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರ ಕಣ್ಣಿಗೆ ಅವರೊಬ್ಬ 'ಆಪಾದಮಸ್ತಕ ಸಭ್ಯ', ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರಿಗೆ 'ಅಪ್ಪಟ ಸ್ನೇಹಜೀವಿ', ಶಂಕರ ಪಾಟೀಲರಿಗೆ 'ಕರ್ತವ್ಯ ಕಠೋರ', ಶ್ರೀ ಶಂಕರ ಪಾಠಕರಿಗೆ 'ಪುರೋಗಾಮಿ ಮಾನವತಾವಾದಿ'. 'ನಿರಂಜನ'ರ ಅರುವತ್ಮೂರರ ದ್ಯೋತಕವಾಗಿ ಅರುವತ್ಮೂರು ಗೆಳೆಯರು ಅವರ ವ್ಯಕ್ತಿತ್ವದ ಅಷ್ಟು ಛಾಯೆಗಳನ್ನು ವರ್ಣಿಸಿ, ಹೊಗಳಿ ಆನಂದಿಸಿದ್ದಾರೆ.

ನಿರಂಜನರು ಬದುಕಿನಲ್ಲಿ ಏರಿಳಿತ ಕಂಡವರು. ಬರವಣಿಗೆಯನ್ನು ವೃತ್ತಿಯನ್ನಾಗಿಸಿಕೊಂಡು ಅಪ್ಪಟ ಸಾಹಿತಿಯಾಗಿ ಸಿಹಿಗಿಂತ ಹೆಚ್ಚಾಗಿ ಕಹಿ ಉಂಡವರು. ಸ್ವಲ್ಪಕಾಲ ರಾಜಕೀಯ ಅವರನ್ನು ಆಕರ್ಷಿಸಿತು. 'ಕಾಮ್ರೇಡ್ ಶಿವರಾವ್' ಆಗಿ ಅವರು ಹೆಚ್ಚು ಕಾಲ ಇರಲಿಲ್ಲ. ಸಾಹಿತ್ಯ ಲೋಕಕ್ಕೇ ತಮ್ಮನ್ನು ಸಮರ್ಪಿಸಿ 'ನಿರಂಜನ'ರಾಗಿ ಉಳಿದಿದ್ದಾರೆ, ಬಾಳಿದ್ದಾರೆ. ಸಾಹಿತಿಯ ಜೀವನದ ತೊಳಲಾಟ ಅನುಭವಿಸಿಯೂ ತಮ್ಮ ಜೀವನದ ಬಗೆಗೆ "It has been a great fun" ಎಂದು ಹೇಳುವ ದಾರ್ಶನಿಕರಾಗಿದ್ದಾರೆ. ನಿರಂಜನರು ತಾವು ಕಂಡುಕೊಂಡ ಮೌಲ್ಯಗಳಿಗಾಗಿ ಹೊಡೆದಾಡಿದವರು. ದುರ್ಭರ ಪ್ರಸಂಗಗಳಲ್ಲೂ ಸಹ ಅವರು ಪರಿಸ್ಥಿತಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಿಲ್ಲ. ಬೀಸಣಿಕೆಗಳ ಸಹಾಯದಿಂದ ತಮ್ಮ ಬಾವುಟ ಹಾರಿಸಲಿಲ್ಲ. ತಮ್ಮ ಕರ್ತೃತ್ವ, ಕ್ರಿಯಾಶೀಲತೆ, ಕೌಶಲ್ಯಗಳಿಂದ ಸಾಹಿತ್ಯಲೋಕದಲ್ಲಿ ಗಟ್ಟಿ ಕುಳವಾಗಿದ್ದಾರೆ. ಗಟ್ಟಿ ಕಾಳು ಎನಿಸಿದ್ದಾರೆ. ಪುರಸ್ಕಾರ, ರಿಕಗ್ನಿಶನ್‌ಗಳ ಬಣ್ಣ ಬಳಿದುಕೊಂಡು ಬೀಗಿಲ್ಲ. ತಾವೇ ತಾವಾಗಿ 'ನಿರಂಜನ'ರಾಗಿ ಮೆರೆದಿದ್ದಾರೆ. ಅವರ ಕೃತಿಗಳು ಅನುವಾದಗೊಂಡು ವಿದೇಶಗಳಲ್ಲೂ ಕನ್ನಡ ಬೆಳಗಿತು.

'ಆಡು ಮುಟ್ಟದ ಗಿಡವಿಲ್ಲ'ವೆಂಬಂತೆ ನಿರಂಜನರು ಕೈಯಾಡಿಸದ ಸಾಹಿತ್ಯ ಕ್ಷೇತ್ರವಿಲ್ಲ. ಅವರು ಕತೆಗಾರರಾಗಿ ಕಾಲಿಟ್ಟರು. ಕವಿಯಾದರು. ಆದರೆ ಬಹುಬೇಗ 'ಮುದ್ದಣ'ನಿಗೆ ಮನಸೋತು 'ಗದ್ಯಂ ಹೃದ್ಯಂ' ಎಂದರು. ತಮ್ಮ ಕಲ್ಪನೆಯ 'ಮನೋರಮೆ' - 'ಸರೋಜೆ'ಯನ್ನು ಸೃಷ್ಟಿಸಿದರು. ಅವರು ಕನ್ನಡದ ಅನೇಕ ಹೆಸರಾಂತ ಪತ್ರಿಕೆಗಳಲ್ಲಿ ಅಂಕಣಕಾರರಾಗಿ ಶೋಭಿಸಿದ್ದಾರೆ. ಅವುಗಳ ಸಂಪಾದಕ ಮಂಡಲಿಗಳಲ್ಲಿ ದುಡಿದಿದ್ದಾರೆ. ಸುದ್ದಿಗಾರರಾಗಿದ್ದಾರೆ. ಕತೆಗಾರರಾಗಿದ್ದಾರೆ, ಕಾದಂಬರಿಕಾರರಾಗಿ ಓದುಗರನ್ನು ಕಲಕಿದ್ದಾರೆ. 'ಜ್ಞಾನಗಂಗೋತ್ರಿ' ಹಾಗೂ

'ವಿಶ್ವಕಥಾ ಕೋಶ'ಗಳ ಸಂಪುಟಕಾರರಾಗಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡದ ಪ್ರಗತಿಶೀಲ ಸಾಹಿತ್ಯದ ಚಳುವಳಿಯ ನೇತಾರರಾಗಿ ಶ್ರಮಿಸಿದ್ದಾರೆ. ಪ್ರಗತಿಶೀಲ ಸಾಹಿತ್ಯದ ಕೆಲವೇ ಲೇಖಕರಲ್ಲಿ ಅವರು ಅಗ್ರಗಣ್ಯರಾಗಿದ್ದಾರೆ.

'ಅಭಿನಂದನ'ದ ವ್ಯಾಪ್ತಿಯ ಉತ್ತರಾರ್ಧ ನಿರಂಜನರ ಸಾಹಿತ್ಯ ಸೇವೆಗೆ ಸಂಬಂಧಿಸಿದೆ. ಅವರ ಜನಪ್ರಿಯ ಕಾದಂಬರಿಗಳಾದ 'ರಂಗಮ್ಮನ ವಠಾರ', 'ಬನಶಂಕರಿ', 'ವಿಮೋಚನೆ', 'ಅಭಯ', 'ನೋವು' ಮುಂತಾದವುಗಳನ್ನು ಕುರಿತು ಅನೇಕ ಗೆಳೆಯರು ಚರ್ಚಿಸಿದ್ದಾರೆ. ಪ್ರಗತಿಶೀಲ ಸಾಹಿತಿಯಾಗಿ, ಕನ್ನಡದ ಕಾದಂಬರಿಕಾರರಾಗಿ, ಐತಿಹಾಸಿಕ ಕಾದಂಬರಿಕಾರರಾಗಿ, ಅಂಕಣಕಾರರಾಗಿ, ವಿಶ್ವ ಕಥಾಲೋಕದ ಮನುಷ್ಯನಾಗಿ ನಿರಂಜನರನ್ನು ತೂಕ ಹಾಕಿ, ಅಳೆದು ನೋಡಿದ್ದಾರೆ. ಇ.ಎಂ.ಎಸ್. ನಂಬೂದಿರಿಪ್ಪಾಡ್, ಭಿಷಮ್ ಸಾಹ್ನಿ, ಶಶಿ ದೇಶಪಾಂಡೆ, ಸಿ. ಅಚ್ಯುತ ಮೆನನ್ ಮೊದಲಾದ ಮಹನೀಯರೂ ನಿರಂಜನರ ಸಾಹಿತ್ಯವನ್ನು ವಿಮರ್ಶಿಸಿ ಬರೆದಿದ್ದಾರೆ. ಒಟ್ಟಿನಲ್ಲಿ ನಿರಂಜನರ ವ್ಯಕ್ತಿತ್ವ, ಜೀವನ, ಕೃತಿಗಳ ಹಲವು ಮುಖಗಳ ಒಂದು ಸುಂದರ ಸಮಾಗಮ ಈ ಸಂಭಾವನಾ ಗ್ರಂಥ. ಪುತ್ತೂರಿನ ಕರ್ನಾಟಕ ಸಂಘದ ಈ ಪ್ರಯಾಸವನ್ನು ಎಲ್ಲರೂ ಮೆಚ್ಚಿ ಕೊಂಡಾಡುವಂತಿದೆ.

ನಿರಂಜನರನ್ನು ಕುರಿತು ಬರೆಯುವಾಗ ಶ್ರೀಮತಿ ಅನುಪಮಾರವರನ್ನು ಮರೆತರೆ ಆಭಾಸವಾದೀತು. 'ಅನುಪಮಾ - ನಿರಂಜನ' ಕನ್ನಡ ಸಾಹಿತ್ಯದ ಒಂದು ಅನುಪಮ ಜೋಡಿ. ಜನಪ್ರಿಯತೆಯಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂದು ಹೇಳುವುದು ಕಷ್ಟದ ಕೆಲಸ. ಶ್ರೀಮತಿ ಅನುಪಮಾ ವೃತ್ತಿಯಿಂದ ವೈದ್ಯೆಯಾದರೂ ಕನ್ನಡದ ಅಗ್ರಗಣ್ಯ ಮಹಿಳಾ ಲೇಖಕಿಯರಲ್ಲಿ ಒಬ್ಬರು. ನಿರಂಜನರಿಗೆ ತಕ್ಕ ಜೋಡಿ. ಎರಡೆರಡು ಬಾರಿ ನಿರಂಜನರಿಗೆ ಪಕ್ಷಾಘಾತವಾದರೂ ಅವರನ್ನು 'ಮೃತ್ಯುಂಜಯ' ನನ್ನಾಗಿಸಿದ ಧೀರೆ. ನಿರಂಜನರಿಗೆ ಅಭಿನಂದನೆ ಸಲ್ಲಿಸುವಾಗ ಅದು ಅನುಪಮಾರಿಗೂ ಸಲ್ಲಲೇಬೇಕು.

ಪಾರ್ಶ್ವವಾಯುವಿನಿಂದ ದೇಹದ ಎಡಭಾಗದ ನಿಯಂತ್ರಣ ತಪ್ಪಿದ್ದರೂ ನಿರಂಜನರ ಸಾಹಿತ್ಯ ಸೇವೆ ಅಖಂಡವಾಗಿ ಮುಂದುವರಿದಿದೆ. ಅವರ ಸಮಗ್ರ ಕಥಾ ಸಾಹಿತ್ಯ - 'ಧ್ವನಿ' ಅಚ್ಚಿನಲ್ಲಿದೆಯೆಂದೂ, ಅವರು ತುಂಬ ದಿನಗಳಿಂದ ಹೊಳಹು ಹಾಕುತ್ತಿರುವ ಕಾದಂಬರಿ "ಹೆಜ್ಜೆ" ರೂಪುಗೊಳ್ಳುತ್ತಿದೆಯೆಂದೂ ಕೇಳಿ

ಸಂತೋಷವಾಯಿತು. ದೇವರಲ್ಲಿ ನಿರಂಜನರಿಗೆ ನಂಬಿಕೆಯಿಲ್ಲ. ಆದರೂ ಪರಮಾತ್ಮನು ಅವರಿಗೆ ಆರೋಗ್ಯ ಭಾಗ್ಯ ಕರುಣಿಸಿ ಸಾಹಿತ್ಯ ಸೇವೆಯ ಅವರ ಕನಸುಗಳನ್ನು ನನಸಾಗಿಸಲೆಂದು ಹಾರೈಸುತ್ತೇನೆ. ಅವರಿಗೆ ನನ್ನ ತುಂಬು ಹೃದಯದ ಅಭಿನಂದನೆಗಳು. ಈ ಸಂಭಾವನಾ ಗ್ರಂಥ ಸಂಪಾದಿಸಿ ಪ್ರಕಟಿಸಿರುವ ಪುತ್ತೂರು ಕರ್ನಾಟಕ ಸಂಘಕ್ಕೂ, ಅದರ ಅಧ್ಯಕ್ಷರೂ, ಪ್ರಧಾನ ಸಂಪಾದಕರೂ ಆದ ಶ್ರೀ ಬೋಳಂತಕೋಡಿ ಈಶ್ವರ ಭಟ್ಟರಿಗೂ ನನ್ನ ಹಾರ್ದಿಕ ಅಭಿನಂದನೆಗಳು.

ಬೆಂಗಳೂರು
ನವಂಬರ **19, 1986**

(ರಾಮಕೃಷ್ಣ ಹೆಗಡೆ)

ಪ್ರಸ್ತಾವನೆ

ಕುಳುಕುಂದ ಶಿವರಾಯ ಮತ್ತು ನನ್ನ ಪರಿಚಯ - ಸ್ನೇಹ ನಾಲ್ಕು ದಶಕಗಳಷ್ಟು ಹಿಂದಿನದು. ಪ್ರಾಮಾಣಿಕವಾಗಿ ಹೇಳುವುದಿದ್ದರೆ, ಈ ಸ್ನೇಹದ ಮೂಲ ವ್ಯಕ್ತಿಗತವಲ್ಲ. ಬದಲಾಗಿ, ವಸ್ತುನಿಷ್ಠವಾದುದು; ಎಂದರೆ, ಹೆಚ್ಚು ಕಡಿಮೆ ನಮ್ಮಲ್ಲಿಯ ಸಮಾನ ಮನೋಧರ್ಮ. ಆದುದರಿಂದಲೇ ಈ ಸ್ನೇಹ ಹಿಗ್ಗಲೂ ಇಲ್ಲ; ಕುಗ್ಗಲೂ ಇಲ್ಲ. ಮೂವತ್ತೊಂಬತ್ತು ವರ್ಷಗಳ ಹಿಂದೆ ಅವರ ಬಗ್ಗೆ ನಾನು ಯಾವ ಅಭಿಪ್ರಾಯ ತಾಳಿದ್ದೆನೋ ಅದೇ ಅಭಿಪ್ರಾಯ ಇಂದಿಗೂ ಇದೆ. ಅದರಲ್ಲಿ ಯಾವ ಬದಲಾವಣೆಯೂ ಆಗಿಲ್ಲ.

ಪ್ರತಿಷ್ಠಿತ ಪುತ್ತೂರು ಸಂತ ಫಿಲೋಮಿನಾ ಕಾಲೇಜು ಕನ್ನಡ ಸಂಘ ೧೯೮೫ ನವಂಬರದಲ್ಲಿ ಕರ್ನಾಟಕ ಸಾಹಿತ್ಯ ಆಕಾದೆಮಿಯ ಸಹಯೋಗದೊಂದಿಗೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲು ನಿರ್ಧರಿಸಿತು. ಸಂಘದ ಅಧ್ಯಕ್ಷ ವಿ. ಬಿ. ಮೊಳೆಯಾರ ಅವರು, ಯಾವ ವಿಷಯದ ಮೇಲೆ ವಿಚಾರ ಸಂಕಿರಣ ಎಂದು ಯೋಚಿಸುತ್ತಿದ್ದಾಗ, ನಿರಂಜನ ಸಾಹಿತ್ಯದ ಮೇಲೆ ಈ ವರೆಗೆ ಎಲ್ಲಿಯೂ ವಿಚಾರ ಸಂಕಿರಣ ನಡೆದದ್ದಿಲ್ಲ. ಯಾಕೆ ಅದುವೇ ವಸ್ತುವಾಗಬಾರದು ಎಂದು ನಾನು ಸೂಚಿಸಿದೆ. ಅವರು ಸಂತೋಷದಿಂದ ಒಪ್ಪಿಕೊಂಡರು. ಆದರೆ, ಒಂದು ಸಂಶಯ ವ್ಯಕ್ತಪಡಿಸಿದರು: "ನಿರಂಜನರು ಒಪ್ಪದಿದ್ದರೆ?" ನಾನೆಂದೆ: "ಒಬ್ಬ ಸಾಹಿತಿಯ ಕೃತಿಗಳ ಮೌಲ್ಯಮಾಪನ ಮಾಡುವ ಹಕ್ಕು ಓದುಗರದ್ದು; ವಿಮರ್ಶಕರದ್ದು. ಅದಕ್ಕೆ ಸಾಹಿತಿಯ ಒಪ್ಪಿಗೆಯೇನೂ ಬೇಕಿಲ್ಲ." "ಆದರೂ, ಸೌಜನ್ಯಕ್ಕಾದರೂ ಕೇಳಬೇಡವೆ?" "ಕೇಳಿ. ಅಗತ್ಯವಾಗಿ ಕೇಳಿ. ಪುತ್ತೂರು ಎಂದರೆ ಸಂತೋಷದಿಂದ ಒಪ್ಪುತ್ತಾರೆ," ಎಂದೆ. ಮೊಳೆಯಾರರು ಬೆಂಗಳೂರಿಗೆ ಹೋಗಿ ನಿರಂಜನರಲ್ಲಿ ವಿಷಯ ಪ್ರಸ್ತಾಪಿಸಿದರು. ಅನುಕೂಲ ಅಭಿಪ್ರಾಯ ಬಂತು. ನವಂಬರ ೩೦ರಂದು ವಿಚಾರ ಸಂಕಿರಣವೂ ಅತ್ಯಂತ ಯಶಸ್ವಿಯಾಗಿ ನಡೆಯಿತು. ಅದು ನಿರಂಜನ ಸಾಹಿತ್ಯದ ಮೇಲೆ ನಡೆದ ಪ್ರಥಮ ವಿಚಾರ ಸಂಕಿರಣ.

ನಾನು ನಿರಂಜನರ ಹಳೆಯ ಸ್ನೇಹಿತ ಎಂಬ ಒಂದೇ ಕಾರಣದಿಂದ ವಿಚಾರ ಸಂಕಿರಣದ ಸಮಾರೋಪ ಭಾಷಣದ ಹೊರೆಯನ್ನು ಮೊಳೆಯಾರರು ನನ್ನ ಮೇಲೆ ಹೊರಿಸಿದರು. ಅಂದಿನ ನನ್ನ ಭಾಷಣದ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸುತ್ತೇನೆ:

"ಇಷ್ಟು ವರ್ಷ ಕನ್ನಡ ಸಾಹಿತ್ಯಕ್ಕೆ ಇಷ್ಟೊಂದು ಉತ್ಕೃಷ್ಟ ಸೇವೆಯನ್ನು ಸಲ್ಲಿಸಿದ ನಿರಂಜನರನ್ನು ಸಾಹಿತ್ಯ ಕ್ಷೇತ್ರ ಸರಿಯಾಗಿ ಗುರುತಿಸಿಲ್ಲ. ಅವರ ಸ್ಥಾನ ಕನ್ನಡ ಸಾಹಿತ್ಯದಲ್ಲಿ ಏನೆಂಬುದನ್ನು ತೀರ್ಮಾನಿಸಿಲ್ಲ. ಇದಕ್ಕೆ ಕಾರಣ, ನನ್ನ ದೃಷ್ಟಿಯಲ್ಲಿ, ಇತರ ಕೆಲವರು ಸಾಹಿತಿಗಳಂತೆ ನಿರಂಜನ (ಅನೇಕ ಸ್ನೇಹಿತರಿದ್ದಾರೆ ಅವರಿಗೆ) ಯಾರನ್ನೂ ಶಿಷ್ಯರಾಗಿ ಸ್ವೀಕರಿಸಲಿಲ್ಲ. ಮಠ ಕಟ್ಟಿಕೊಳ್ಳಲಿಲ್ಲ. ನಿಷ್ಠುರ ವಾದಿ. ಜಾತಿಯಿಂದ ಅವರನ್ನು ಅಳೆಯುವುದು ಸಾಧ್ಯವಿಲ್ಲ. (ಅತ್ತ ಶೂದ್ರನೂ ಅಲ್ಲ; ಇತ್ತ ಬ್ರಾಹ್ಮಣನೂ ಅಲ್ಲ.) ಸಂಪ್ರದಾಯವಾದಿಗಳಿಗೆ ಅವರು ಪ್ರಿಯರಲ್ಲ. ಅವರ ನೆರಳೂ ಸಂಪ್ರದಾಯವಾದಿಗಳಿಗೆ ಆಗದು. ದಲಿತ, ಬಂಡಾಯ ಲೇಖಕರು ಅವರನ್ನು ಅಸ್ಪೃಶ್ಯರೆಂದು ತಿಳಿಯದಿದ್ದರೂ, ಸ್ಪೃಶ್ಯರೆಂದು ಬಹಳ ಹತ್ತಿರಕ್ಕೆ ಹೋಗಲು ಇಷ್ಟಪಡುವುದಿಲ್ಲ. ಈ ಎಲ್ಲಾ ಕಾರಣಗಳಿಂದ ನಿರಂಜನರಿಗೆ ಕರ್ನಾಟಕ ದಲ್ಲಿ ಯಾವ ಸ್ಥಾನ ಸಿಕ್ಕಬೇಕಾಗಿತ್ತೋ ಅದು ಸಿಗಲಿಲ್ಲ. ಯಾವ ಗೌರವ ನಮ್ಮ ಕನ್ನಡ ಜನತೆ ಕೊಡಬೇಕಿತ್ತೋ ಅದನ್ನು ಕೊಡಲಿಲ್ಲ....

"ನಿನ್ನೆ ನಾನು, ಮೊಳೆಯಾರರು ಮತ್ತು ಅರ್ತಿಕಜೆಯವರು ಸೇರಿದಾಗ (ವಾರದಲ್ಲಿ ಒಂದೆರಡು ಬಾರಿಯಾದರೂ ಹೀಗೆ ಸೇರುವುದುಂಟು) ನಾನೆಂದೆ: 'ನಮ್ಮ ಪುತ್ತೂರು ಕರ್ನಾಟಕ ಸಂಘದಿಂದ ೧೯೮೬ ದಶಂಬರ ೩೧ರ ಒಳಗೆ ನಿರಂಜನರ ಕುರಿತು ಒಂದು ಶ್ರೇಷ್ಠಮಟ್ಟದ ಸಂಭಾವನಾ ಗ್ರಂಥವನ್ನು ಪ್ರಕಟಿಸಬೇಕು. ನಿರಂಜನರನ್ನು ಇಲ್ಲಿಗೆ ಬರಮಾಡಿಕೊಂಡು ಅವರಿಗೆ ಅದನ್ನು ಒಪ್ಪಿಸಬೇಕು....'

"....ಮತ್ತು ಈ ಕೆಲಸ ಖಂಡಿತ ನಡೆಯುವುದೆಂಬ ವಿಶ್ವಾಸ ನನಗಿದೆ."

* * * *

ದಶಂಬರ ೬ರಂದು ನಿರಂಜನರಿಗೆ ಹೀಗೆ ಪತ್ರ ಬರೆದೆ :

"ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘ ವಿಚಾರ ಸಂಕಿರಣ ಏರ್ಪಡಿಸಿದುದರಿಂದ ನನ್ನ ಒಂದು ಬಯಕೆ ಕೈಗೂಡಿದಂತಾಗಿದೆ. ನನ್ನದು ಇನ್ನೊಂದು ಬಯಕೆ ಇದೆ. ಅದು ಕೈಗೂಡಲು ನಿಮ್ಮ ಒಪ್ಪಿಗೆ, ಸಹಕಾರ ಎರಡೂ ಬೇಕು. ಇನ್ನೂ ಪ್ರಗತಿಶೀಲರಾಗಿಯೇ ಉಳಿದಿರುವ ಕನ್ನಡದ ಏಕಮೇವ ಸಾಹಿತಿ ನಿರಂಜನರ ಬಗ್ಗೆ ಸಂಭಾವನಾ ಗ್ರಂಥವೊಂದನ್ನು ೧೯೮೬ನೇ ದಶಂಬರ ಅಂತ್ಯದೊಳಗೆ ಪ್ರಕಟಿಸಿ ಅರ್ಪಿಸುವ ಯೋಜನೆಯೊಂದನ್ನು ಹಾಕಿಕೊಂಡಿದ್ದೇವೆ....

"ನಾವು ಯೋಜಿಸಿದ ಗ್ರಂಥ ಕನ್ನಡದಲ್ಲಿ ಒಂದು ಉತ್ಕೃಷ್ಟ ಸಂಭಾವನಾ ಗ್ರಂಥವಾಗಿ ಮುಂದಿನ ಪೀಳಿಗೆಗೆ ಉಳಿಯಬೇಕು. ಅದು ನಿರಂಜನರಿಗೆ ಪ್ರಿಯವಾಗಿಯೂ ಇರಬೇಕು...."

ನಿರಂಜನರಿಂದ ೧೦/೧೧-೧೨-೮೫ರ ಪತ್ರ ಬಂತು:

"ದಿನಾಂಕ ೬ರ ನಿಮ್ಮ ಕಾಗದವೊನ್ನೆಯೇ ಬಂತು. ಓದಿ ಸುಮ್ಮನೆ ಕುಳಿತೆ. ಮರುದಿನವೂ ಓದಿದೆ. ಅನುಪಮಾ ಜತೆ ಸಮಾಲೋಚನೆ ನಡೆಸಿದೆ. ಇವತ್ತಾದರೂ ಉತ್ತರ ಬರೆಯದಿದ್ದರೆ ಹೇಗೆ? ಅದಕ್ಕೆಂದೇ ಕುಳಿತಿದ್ದೇನೆ.

"ನನ್ನ ಪಾಲಿಗೆ ವ್ಯಕ್ತ-ಅವ್ಯಕ್ತ ಒಲವೊಂದೇ ಸಾಕು ಎಂದವನು, ಅದರಂತೆ ನಡೆದುಕೊಳ್ಳಬಯಸಿದವನು ನಾನು. ಆದರೆ ನಾಲ್ಕಾರು ಅಡಕತ್ತರಿಗಳಲ್ಲಿ ಸಿಲುಕಿದೆ. ಆ ಪ್ರಶಸ್ತಿ ಇತ್ಯಾದಿಗಳಿಗಿಂತ ಹೆಚ್ಚು ಮಹತ್ವದ್ದು ಪುತ್ತೂರಿನಲ್ಲಿ ನಡೆದ ವಿಚಾರ ಸಂಕಿರಣ. ಮೊಳೆಯಾರರು ಬಂದಾಗ ಅವರೊಂದಿಗೆ ನಿಮ್ಮನ್ನು ಕಂಡೆ. ಸುಮ್ಮನಾದೆ. ಕುಳುಕುಂದ, ಕಾವು, ಸುಳ್ಯ ಎಲ್ಲ ಪುತ್ತೂರು ತಾಲೂಕಿನಲ್ಲೇ ಇದ್ದುವು ಹಿಂದೆ. ನನ್ನ ಮತ್ತು ಪುತ್ತೂರಿನ ಭಾವನಾತ್ಮಕ ಸಂಬಂಧ ಗಾಢವಾದದ್ದು. ಬೌದ್ಧಿಕ ನೆಲೆಯಲ್ಲಿ ಪುತ್ತೂರು ನನಗೆ ಪರಕೀಯವಲ್ಲ. ಅಂದ ಮೇಲೆ....

"ಒಪ್ಪಿದ್ದೇನೆ. ನೀವು ಯೋಜಿಸಿರುವ ಸಂಭಾವನಾ ಸಂಪುಟ ಸಾಹಿತ್ಯಾಸಕ್ತರಿಗೆ ಮುಂದೆಯೂ ಪ್ರಯೋಜನಕಾರಿಯಾದೀತು....."

* * * *

ನಾವು ಯೋಜಿಸಿದ ಗ್ರಂಥ "ನಿರಂಜನ ಅಭಿನಂದನ" ಈಗ ನಿಮ್ಮ ಮುಂದಿದೆ. ನಿರಂಜನ ಸಾಹಿತ್ಯದ ಕೇಂದ್ರ ಬಿಂದು ಮನುಷ್ಯ. ಮಾನವೀಯತೆಗೆ, ಬದುಕಿಗೆ ಬದ್ಧರಾದ ನಿರಂಜನ ಅದರ ಎಲ್ಲ ತೆರೆಗಳಿಗೂ ಸ್ಪಂದಿಸಿದ್ದಾರೆ. ಈ ದೃಷ್ಟಿಯಿಂದ ನಿರಂಜನರ ವ್ಯಕ್ತಿತ್ವದ ವಿವಿಧ ಮಗ್ಗುಲುಗಳನ್ನು ಈ ಸಂಭಾವನಾ ಗ್ರಂಥದ 'ವ್ಯಕ್ತಿ' ವಿಭಾಗದ ಅರುವತ್ತಮೂರು ಲೇಖನಗಳು '(ಈಗ ನಿರಂಜನರಿಗೆ ಅರುವತ್ತಮೂರನೆ ವರ್ಷ ನಡೆಯುತ್ತಿದೆ.) ತಿಳಿಸುತ್ತವೆ. ನಿರಂಜನರ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯದ ಹರಹು ವಿಪುಲ ಹಾಗೂ ವಿಶಾಲ. ಹಮ್ಮಿಕೊಂಡ ಗ್ರಂಥದ ಗಾತ್ರವನ್ನು ಪರಿಗಣಿಸಿ 'ಕೃತಿ' ವಿಭಾಗದಲ್ಲಿ ಅವರ ವಿಶಿಷ್ಟ ಸಾಹಿತ್ಯ ಪ್ರಕಾರಗಳ ಮತ್ತು ಕೃತಿಗಳನ್ನು ಕುರಿತ ವಿಮರ್ಶಾ ಲೇಖನಗಳನ್ನು ಮಾತ್ರ ಇಲ್ಲಿ ಅಳವಡಿಸಿಕೊಂಡಿದ್ದೇವೆ. ನಿರಂಜನ ಸಾಹಿತ್ಯದ ಮೌಲ್ಯಮಾಪನಕ್ಕೆ ಒತ್ತುಕೊಡುವ ಉದ್ದೇಶದಿಂದ ಲೇಖಕರಿಗೆ ಅಭಿಪ್ರಾಯ ಮಂಡನೆಗೆ ಮುಕ್ತ ಅವಕಾಶ ನೀಡಿದ್ದೇವೆ. ಇಲ್ಲಿ ಲೇಖಕರ ಅಭಿಪ್ರಾಯವೇ ಸಂಪಾದಕ ಮಂಡಳಿಯವರ ಅಭಿಪ್ರಾಯವೆಂದು ಪರಿಗಣಿಸಬೇಕಿಲ್ಲ. 'ವ್ಯಾಪ್ತಿ'

ವಿಭಾಗದಲ್ಲಿ ಕನ್ನಡೇತರ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಹೆಚ್ಚು ಬಳಕೆಯನ್ನು ಹೊಂದಿರುವ ಲೇಖಕರ ಬರೆಹಗಳು ಅಚ್ಚಾಗಿವೆ. ಇದರಲ್ಲಿ ನಿರಂಜನ ಸಾಹಿತ್ಯದ ಅಂತಾರಾಷ್ಟ್ರೀಯ ವ್ಯಾಪಕತೆಯನ್ನು ತೋರುವ ಉದ್ದೇಶ ನಮ್ಮದು. ನಿರಂಜನರ ವ್ಯಕ್ತಿತ್ವ ಮತ್ತು ಸಾಹಿತ್ಯದ ನೆಲೆ-ಬೆಲೆಗಳನ್ನು ಕಂಡುಕೊಳ್ಳಲು ಈ ಗ್ರಂಥ ಒಂದು ಸಾಧನವಾಗುವಂತಾದರೆ ನಾವು ಕೃತಾರ್ಥರು. ಆದರೆ ಮೌಲ್ಯಮಾಪನ ಮಾಡಬೇಕಾದವರು ಓದುಗರು; ಪ್ರಾಮಾಣಿಕರೂ ವಸ್ತುನಿಷ್ಠರೂ ಆದ ವಿಮರ್ಶಕರು. ಗ್ರಂಥದ ಬಗ್ಗೆ ಹೆಚ್ಚು ಹೇಳದೆ ಆ ಕೆಲಸವನ್ನು ಅವರಿಗೇ ಬಿಟ್ಟಿದ್ದೇವೆ.

* * * *

ಇನ್ನು ಕೃತಜ್ಞತೆಯ ಕೆಲವು ಮಾತುಗಳು. ಅಭಿನಂದನ ಗ್ರಂಥಕ್ಕೆ ಲೇಖನಗಳನ್ನು ಕೇಳಿ ನಾವು ನಿರಂಜನರ ಸ್ನೇಹಿತರು, ಅಭಿಮಾನಿಗಳು, ಆಪ್ತರು ಎನ್ನಿಸಿದ ೧೫೧ ಜನರಿಗೆ ಪತ್ರ ಬರೆದೆವು. ಅವರಲ್ಲಿ ೧೦೯ ಜನರು ಲೇಖನಗಳನ್ನು ಕೊಟ್ಟು ಸಹಕರಿಸಿದ್ದಾರೆ. ನಮ್ಮ ಯೋಜನೆಯ ಯಶಸ್ಸಿಗೆ ಮುಖ್ಯ ಕಾರಣರು ಅವರು. ಅವರಿಗೆ ನಾವು ಎಷ್ಟು ಕೃತಜ್ಞತೆ ಹೇಳಿದರೂ ಕಡಿಮೆಯೆ. ನಾಲ್ಕು ಜನರು ಲೇಖನ ಕಳುಹಿಸಲು ಅನನುಕೂಲ ವ್ಯಕ್ತಪಡಿಸಿದರು. ಆರು ಜನರು ಕಳುಹಿಸಿ ಕೊಡುವ ಆಶ್ವಾಸನೆ ಕೊಟ್ಟರೂ ಕಳುಹಿಸಲಿಲ್ಲ. ೩೨ ಮಂದಿ ಮೂರು ಪತ್ರಗಳನ್ನು ಬರೆದರೂ ಒಂದು ಸಾಲು ಉತ್ತರವನ್ನು ಬರೆಯುವ ಸೌಜನ್ಯವನ್ನು ಕೂಡ ತೋರಿಸಲಿಲ್ಲ. ಇವರಿಗೂ ನಾವು ಕೃತಜ್ಞತೆ ಸಲ್ಲಿಸಬೇಕು. ಗ್ರಂಥ, ಪ್ರಾರಂಭದಲ್ಲಿ ನಾವು ಯೋಜಿಸಿದ ೪೫೦ ಪುಟಗಳನ್ನು ದಾಟಿ ೫೦೦ ಮೀರಿದೆ. ಎಲ್ಲರೂ ಲೇಖನಗಳನ್ನು ಕಳುಹಿಸಿದ್ದರೆ ಹೊರಲಾರದ ಭಾರ ನಮ್ಮ ಮೇಲೆ ಬೀಳುತ್ತಿತ್ತು. ಆದುದರಿಂದ, ಗ್ರಂಥದ, ಆಂತರಿಕ ಮೌಲ್ಯಕ್ಕೆ ಚ್ಯುತಿ ಬಾರದೆ, ಗಾತ್ರವನ್ನು ಕಡಿಮೆ ಮಾಡಲು ಇವರು ಕೊಟ್ಟ ಸಹಕಾರ ಬಲು ದೊಡ್ಡದು.

ಸಾಹಿತ್ಯಾಭಿಮಾನಿಗಳೂ, ನಿರಂಜನರ ಬಹುಕಾಲದ ಸ್ನೇಹಿತರೂ ಆದ ರಾಮಕೃಷ್ಣ ಹೆಗಡೆಯವರು ಮುನ್ನುಡಿ ಬರೆದು ಕೊಟ್ಟು ಪ್ರೋತ್ಸಾಹಿಸಿದ್ದಾರೆ. ನಿರಂಜನ, ಅನುಪಮಾ, ಸೀಮಂತಿನೀ ನಾವು ಕೇಳಿದ ಸಹಾಯ - ಸಹಕಾರಗಳನ್ನಿತ್ತು ಉಪಕರಿಸಿದ್ದಾರೆ. ಇವರಿಗೆ ನಾವು ಆಭಾರಿಗಳು.

* * * *

ಇನ್ನು, ವೈಯಕ್ತಿಕವಾಗಿ ಎರಡು ಮಾತು. ಈ ಗ್ರಂಥದ ಸಂಪಾದನ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಿದವರು ವಿ. ಬಿ. ಮೊಳೆಯಾರರು. ಅವರೊಂದಿಗೆ ಸಹಕರಿಸಿದವರು ವಿ. ಬಿ. ಅರ್ತಿಕಜೆಯವರು. ಹಸ್ತಪ್ರತಿ ಸಿದ್ಧಪಡಿಸುವಲ್ಲಿ

ನೆರವಾದವರು ಹರಿನಾರಾಯಣ ಮಾಡಾವು ಮತ್ತು ಗಣರಾಜ ಕುಂಬಳೆ. ಪ್ರತಿ ಹಂತದಲ್ಲೂ ನಾವು ಕೇಳಿದ ನೆರವನ್ನು ಕೊಟ್ಟವರು ಕೆ. ಪಿ. ಶೆಟ್ಟರು ಮತ್ತು ಶಂಕರ ಪಾಠಕ ಅವರು. ಇವರನ್ನೆಲ್ಲ ಈ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ ಸ್ಮರಿಸಿ ಕೊಳ್ಳುತ್ತೇನೆ.

ಕೊನೆಯಲ್ಲಿ, ಅಂದವಾಗಿ ಮುದ್ರಿಸಿಕೊಟ್ಟ ರಾಜೇಶ್ ಪವರ್ ಪ್ರೆಸ್ಸಿನ ಎಂ.ಎಸ್. ರಘುನಾಥ ರಾವ್ ಅವರಿಗೆ, ಹಗಲಿರುಳು ಶ್ರಮಿಸಿದ ಕಾರ್ಮಿಕ ಬಂಧು ಗಳಿಗೆ, ರಕ್ಷಾಕವಚದ ವಿನ್ಯಾಸವನ್ನು ರಚಿಸಿದ ತರುಣ ಕಲಾವಿದ ಎಂ.ರಾಮಪ್ರಸಾದ್ ಅವರಿಗೆ, ರಕ್ಷಾಕವಚದ ವರ್ಣ ಪಾರದರ್ಶಿಕೆಯನ್ನು ಉಪಯೋಗಿಸಲು ಅನುಮತಿ ಕೊಟ್ಟ 'ಸುಧಾ' ವಾರಪತ್ರಿಕೆಯ ಸಂಪಾದಕ ಎಂ.ಬಿ. ಸಿಂಗ್ ಅವರಿಗೆ ನಾವು ಕೃತಜ್ಞರು.

ಬೋಳಂತಕೋಡಿ ಈಶ್ವರ ಭಟ್ಟ
ಪ್ರಧಾನ ಸಂಪಾದಕ
ಮತ್ತು ಅಧ್ಯಕ್ಷ, ಕರ್ನಾಟಕ ಸಂಘ

ಪುತ್ತೂರು
ದಿನಾಂಕ 28-11-1986

AN INTRODUCTION

Niranjana is the foremost progressive writer in Kannada. As of today, he has to his credit 142 published volumes, including novels, plays, collections of short stories, essays, translations, edited works etc. He is the pioneer columnist in Kannada and the 7 published volumes of his column writings show that he is still unsurpassed in this field. The 25 volumes of world short stories in Kannada are monumental works and the 7 Volumed Junior Encyclopaedia for children, the novel 'Mrutyunjaya' based on a peasant revolution in ancient Egypt stand in the forefront among his other works to be named. He is the most widely translated Kannada author, and his novels and short stories have been translated into English, Hindi, Bengali, Marathi, Thelugu, Tamil, Malayalam, Thulu, Polish and Russian. His works are marked by his depth of study and commitment to life and human values.

"Niranjana Abhinandana" is the Felicitation Volume published by Puttur Karnataka Sangha in honour of this great writer. The first part contains articles on "Niranjana as a person". The second part deals with his literary works and his contribution to Kannada literature. The articles in the third part are from Non-Kannadigas, and Kannadigas who are not well-versed in writing in Kannada. The fourth part includes the events in Niranjana's life, a list of his literary works and the names and addresses of the contributors to the Volume. Sri Ramakrishna Hegde, Chief Minister of Karnataka, a lover of art and literature and an old friend of Niranjana, has enriched the volume by his valuable foreword.

Niranjana still writes and will continue writing. "When the pen leaves my hand my story is finished," he has said somewhere. One hopes that his pen will never leave his hand and he will give greater works to Kannada literature and thereby enrich the world literature.

BOLANTHAKODI ISHWARA BHAT
Chief Editor,
and President, Karnataka Sangha

Puttur (Karnataka)
28—11—1986

ಒಳಗಿನ ಪುಟಗಳಲ್ಲಿ

ವ್ಯಕ್ತಿ

ಕೃತಿ

ವ್ಯಾಪ್ತಿ


ಅನುಬಂಧ

"ಪ್ರಜ್ಞಾವಂತ ಬರೆಹಗಾರ - ಕಾಲ, ಇತಿಹಾಸ, ಸಮಾಜ, ಪ್ರಗತಿಗಳ ಪ್ರಜ್ಞೆ ಇರುವ ಬರೆಹಗಾರ - ಅರ್ಥಪೂರ್ಣ ಸಾಹಿತ್ಯವನ್ನು ನಿರ್ಮಿಸಲು ಶಕ್ತ. ಅಂಥ ಸಾಹಿತ್ಯದಿಂದ ಬದುಕು ಹಸನಾಗುತ್ತದೆ; ಮಾನವ ಉನ್ನತಿಯತ್ತ ಸಾಗುತ್ತಾನೆ."

–ನಿರಂಜನ



ನಿರಂಜನ – ೧೯೮೭



ನಿರಂಜನ – ೧೯೫೧



ಕುಳುಕುಂದ ಶಿವರಾಯ – ೧೯೪೩



ನಿರಂಜನ, ತೇಜಸ್ವಿನಿ, ಅನುಪಮಾ, ಸೀಮಂತಿನಿ

ವ್ಯಕ್ತಿ

ಎಳವೆಯ ಗೆಳೆಯ

-ಪಿ. ರಾಮ ಭಟ್ಟ

ಶಿವರಾಯನಿಗೂ ನನಗೂ ಬಾಲ್ಯದ ಪರಿಚಯ, ಒಡನಾಟ ಕಾವು ಪ್ರಾಥಮಿಕ ಶಾಲೆಯಲ್ಲಿ. ಅಲ್ಲಿ ನಾವು ಸಹಪಾಠಿಗಳಾಗಿದ್ದೆವು. ದಕ್ಷ ಮತ್ತು ಶಿಸ್ತಿನ ಶಿಕ್ಷಕರಾದ ದಿ| ಪೆರ್ನಾಜೆ ರಾಮಕೃಷ್ಣ ಉಂಗ್ರುಪುಳಿತ್ತಾಯರು ಆಗ ಶಾಲಾ ಮುಖ್ಯೋಪಾಧ್ಯಾಯರಾಗಿದ್ದರು. ಇದು ಸಾಧಾರಣ ೫೫ ವರ್ಷಗಳ ಹಿಂದಿನ ವಿಚಾರ.

ಶಾಲೆಯಿಂದ ಸುಮಾರು ಅರ್ಧಮೈಲು ದೂರ, ಮಡಿಕೇರಿ - ಮಂಗಳೂರು ರಸ್ತೆಯ ಪಕ್ಕದಲ್ಲಿ ಒಂದು ಸಣ್ಣ ಹುಲ್ಲು ಚಾವಣಿ ಬಿಡಾರದಲ್ಲಿ ಶಿವರಾಯನ ವಾಸ. ಬಿಡಾರದಲ್ಲೇ ಒಂದು ಹೋಟೆಲಿನ ವ್ಯವಸ್ಥೆಯೂ ಇತ್ತು, ಜೀವನೋಪಾಯಕ್ಕಾಗಿ. ಶಾಲೆಗೆ ಬರುವಾಗ ಅವನ ತೊಡುಗೆ - ಒಂದು ಚಡ್ಡಿ, ಶುಭ್ರವಾದ ಒಂದು ಅಂಗಿ. ತೇಜಸ್ವಿಯಾದ ಮುಖ,ಮುಗುಳುನಗೆ,ಚುರುಕು ಮಾತು. ಇತರ ವಿದ್ಯಾರ್ಥಿಗಳೊಡನೆ ಹೆಚ್ಚಾಗಿ ಬೆರೆಯದೆ, ಶಾಲೆ ಬಿಟ್ಟೊಡನೆಯೆ ನಾಗಾಲೋಟದಿಂದ ಮನೆಯ ಕಡೆ ಧಾವಿಸುತ್ತಿದ್ದ. ನನ್ನ ಮನೆ, ಶಾಲೆಯಿಂದ ಸುಮಾರು ಎರಡು ಮೈಲು ಪಶ್ಚಿಮಕ್ಕೆ

ಕಾಡಿನ ಮಧ್ಯದಲ್ಲಿ ಪಟ್ಟಾಜೆ ಎಂಬಲ್ಲಿ. ಆದ್ದರಿಂದ ಇತರ ಸಮಯಗಳಲ್ಲಿ ಹೆಚ್ಚು ಪರಸ್ಪರ ಭೇಟಿಯಾಗುವ ಅವಕಾಶ ಇರಲಿಲ್ಲ.

ದಿ। ಪಟೇಲ್ ಶೀನಪ್ಪಯ್ಯನವರು ಆ ಕಾಲದಲ್ಲಿ ಕೆಲವು ಸ್ಥಳೀಯ ಉತ್ಸಾಹೀ ತರುಣರನ್ನು ಒಗ್ಗೂಡಿಸಿ ಪೌರಾಣಿಕ ಯಕ್ಷಗಾನ ಬಯಲಾಟಗಳನ್ನು ಊರಲ್ಲಿ, ಶಾಲೆಯ ಆಸುಪಾಸುಗಳಲ್ಲಿ ಆಡುತ್ತಿದ್ದರು. ಶಿವರಾಯನಿಗೆ ಈ ಕಲೆಯಲ್ಲಿ ತುಂಬ ಅಭಿರುಚಿ ಮತ್ತು ಅಭಿಮಾನ. ಬಯಲಾಟ ನೋಡುವ ಉತ್ಸಾಹದಿಂದ ನಾವಿಬ್ಬರೂ ಬೇಗನೆ ರಂಗಸ್ಥಳ ನಿರ್ಮಿಸಿದ ಗದ್ದೆಯಲ್ಲಿ ಸೇರುತ್ತಿದ್ದೆವು. ಆಕರ್ಷಕ ಬಣ್ಣಬಣ್ಣದ ವೇಷಭೂಷಣಗಳನ್ನೂ ನಾಟ್ಯನಟನೆಗಳನ್ನೂ ಹಾವಭಾವಗಳನ್ನೂ ನೋಡಿ ಶಿವರಾಯ ಉತ್ಸಾಹಗೊಳ್ಳುತ್ತಿದ್ದ. ಕಥಾವಸ್ತುವಿನ ಕಡೆಗೂ ಗಮನ ಹರಿಸುತ್ತಿದ್ದುದು ಅವನ ಮಾತಿನಿಂದ ವ್ಯಕ್ತವಾಗುತ್ತಿತ್ತು. ಕೆಲವೊಮ್ಮೆ ಇಬ್ಬರೂ ತೂಕಡಿಸುತ್ತಿದ್ದುದೂ, ಬೆಳಗ್ಗೆ ಕಣ್ಣೊರೆಸುತ್ತ ಹೊರಡುತ್ತಿದ್ದುದೂ ಉಂಟು.

ಪ್ರಾಥಮಿಕ ಶಿಕ್ಷಣ ಮುಗಿದ ಮೊದಲೇ ಕಾವನ್ನು ಬಿಟ್ಟು ಸುಳ್ಯ ಹೈಯರ್ ಎಲಿಮೆಂಟರಿ ಶಾಲೆಗೆ ಸೇರಿದ ಶಿವರಾಯ, ಅಲ್ಲೇ ೮ನೇ ತರಗತಿಯವರೆಗೂ ಕಲಿಯುವಂತಾಯಿತು. ಆ ಸಮಯದಲ್ಲಿ ಸುಳ್ಯ ಶಾಲೆಯಲ್ಲಿ ಒಂದು ಬಾರಿ 'ಮಕ್ಕಳ ಕೂಟ' ನಡೆಯಿತು. ನಾನೂ ಅದಕ್ಕೆ ಪ್ರೇಕ್ಷಕನಾಗಿ ಹೋಗಿದ್ದೆ. ನಾವಿಬ್ಬರೂ ಮತ್ತೊಮ್ಮೆ ಭೇಟಿಯಾದೆವು. ಸ್ವಯಂಸೇವಕನಾಗಿ ಓಡಾಡುತ್ತಿದ್ದ ಶಿವರಾಯನ ಆತ್ಮೀಯ ಸ್ವಾಗತ ನನಗೆ ದೊರೆಯಿತು. ನಾನು ಪ್ರತಿನಿಧಿಯಾಗಿ ಹೋದವನಲ್ಲವಾದರೂ ಸ್ನೇಹಾಚಾರದ ಮೇಲೆ ಎಲ್ಲ ಸೌಕರ್ಯಗಳನ್ನೂ ಒದಗಿಸಿ, ಊಟ ಉಪಚಾರಗಳಿಗೂ ಪ್ರತ್ಯೇಕವಾಗಿ ಪಾಕಶಾಲೆಯಲ್ಲೇ ವ್ಯವಸ್ಥೆ ಮಾಡಿಕೊಟ್ಟ. ಬೆಳಗಿನ ಹೊತ್ತು ಸ್ನಾನಕ್ಕೆ ಸಮೀಪದ ಹೊಳೆಗೆ ಕರೆದೊಯ್ಯುತ್ತಿದ್ದ. ಒಂದು ರಾತ್ರಿ ಯಾವುದೋ ಒಂದು ಕಂಪೆನಿ ನಾಟಕಕ್ಕೂ ಕರಕೊಂಡು ಹೋಗಿ ಆ ವೈಭವವನ್ನೂ ತೋರಿಸಿಕೊಟ್ಟ.

ಆಗಿನ್ನೂ ವಿದ್ಯುದ್ದೀಪದ ಸೌಕರ್ಯ ಸುಳ್ಯದಂತಹ ಪೇಟೆಗಳಿಗೆ ಬಂದಿರಲಿಲ್ಲ. ಆದರೂ ಪುತ್ತೂರಿನವರಾದ ದಿ। ಎಸ್. ಕೆ. ರಾಮಚಂದ್ರ ಭಟ್ಟರು (ಏರ್‌ಫೋರ್ಸ್‌ನಲ್ಲಿ ಪೈಲಟ್ ಆಗಿದ್ದರು) ಜನರೇಟರ್ ಮೂಲಕ ವಿದ್ಯುತ್ ಪೂರೈಸಿದ್ದರು. 'ಮಕ್ಕಳ ಕೂಟ'ದ ಆವರಣವು ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಅಲಂಕೃತವಾಗಿ ಬಹಳ ವೈಭವದಿಂದ ಕಂಗೊಳಿಸುತ್ತಿತ್ತು.

'ಮಕ್ಕಳ ಕೂಟ'ದ ಕಾರ್ಯಕ್ರಮಗಳೆಲ್ಲ ಮುಗಿದ ಮೇಲೆ ನಾನು ಕಾವಿಗೆ ಹಿಂದಿರುಗಿದೆ. ಹೈಯರ್ ಎಲಿಮೆಂಟರಿ ಶಿಕ್ಷಣಕ್ಕೆ ನಾನು ಪೆರ್ಲ ಶ್ರೀ ಸತ್ಯನಾರಾಯಣ ಶಾಲೆಗೆ ಸೇರಿದ್ದರಿಂದ ಕೆಲವು ಕಾಲ ನಮ್ಮಿಬ್ಬರ ಭೇಟಿಯಾಗಲಿಲ್ಲ. ಆಮೇಲೆ ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಪುನಃ ಸಹಪಾಠಿಗಳಾದೆವು (೧೯೩೮-'೪೧).

ಓದು, ಬರೆಹ, ಭಾಷಣಗಳಲ್ಲಿ ಅವನಿಗಿದ್ದ ವಿಶೇಷ ನೈಪುಣ್ಯವನ್ನೂ ಅಭಿರುಚಿಯನ್ನೂ ಆಗ ಗುರುತಿಸಿದೆ. ಪಠ್ಯಪುಸ್ತಕಗಳನ್ನೋದಿ ಕಂಠಪಾಠ ಮಾಡುವ ಪರಿಪಾಠ ಅವನಿಗಿರಲಿಲ್ಲ. ಅವುಗಳತ್ತ ಹೆಚ್ಚು ಗಮನವನೇ ಇರುತ್ತಿರಲಿಲ್ಲ. ಗಣ್ಯ ಗ್ರಂಥಕರ್ತರ, ಬರೆಹಗಾರರ ಪುಸ್ತಕಗಳನ್ನು ನಿಷ್ಠೆಯಿಂದ, ನೈಮರೆತು ಓದುತ್ತಿದ್ದ. ಯಾವ ವರ್ತಮಾನ ಪತ್ರಿಕೆಯಾಗಲಿ, ಮ್ಯಾಗಝಿನ್ ಆಗಲಿ ಅವನ ಅವಗಾಹನೆಗೆ ಬಾರದೆ ಇರುತ್ತಿರಲಿಲ್ಲ. ದೈನಂದಿನ ವಿಶೇಷ ಘಟನೆಗಳನ್ನು, ಸಮಾಚಾರಗಳನ್ನು ಸಂಕ್ಷೇಪವಾಗಿ ಕರಿಹಲಗೆಯ ಮೇಲೆ ತಪ್ಪದೆ ಬರೆದಿಟ್ಟು ಇತರ ಹುಡುಗರಿಗೆ ದೇಶದ ಆಗುಹೋಗುಗಳ ಮನವರಿಕೆಯಾಗಲು ಅನುಕೂಲಮಾಡಿಕೊಡುತ್ತಿದ್ದ. ತರಗತಿಯಲ್ಲಿ ಅವನಿಗೆ ಯಾವಾಗಲೂ ಒಂದನೇ ಸ್ಥಾನ. ಪಠ್ಯಪುಸ್ತಕಗಳಿಂದ ದೂರವಾಗಿರುತ್ತಿದ್ದರೂ ಪರೀಕ್ಷೆಯಲ್ಲಿ ಜಾಸ್ತಿ ಅಂಕ ಗಳಿಸುತ್ತಿದ್ದ. ಉಪಾಧ್ಯಾಯರು ತರಗತಿಯಲ್ಲಿ ಕೇಳುತ್ತಿದ್ದ ಪ್ರಶ್ನೆಗಳಿಗೆ ಸೂಕ್ತ, ತೃಪ್ತಿಕರ ಉತ್ತರಗಳನ್ನು ಸರಾಗವಾಗಿ ಕೊಡುತ್ತಿದ್ದ. ಇದರಿಂದ ಉಪಾಧ್ಯಾಯರ ಪ್ರೀತಿ, ಸಹಪಾಠಿಗಳ ಪ್ರಶಂಸೆ, ಗೌರವಗಳಿಗೆ ಪಾತ್ರನಾಗುತ್ತಿದ್ದ. ಶಾಲೆಯ ಆಶ್ರಯದಲ್ಲಿ ನಡೆಯುತ್ತಿದ್ದ ಪ್ರಬಂಧ, ಭಾಷಣ ಸ್ಪರ್ಧೆಗಳಲ್ಲಿ ಮೊದಲ ಬಹುಮಾನ ಅವನಿಗೇ ಮೀಸಲಾಗಿತ್ತು. ಅವನ ನಿರರ್ಗಳ, ಗಂಭೀರ, ಸ್ಫೂರ್ತಿಯುತ ಭಾಷಣಗಳನ್ನು ಕೇಳಲು ಎಲ್ಲರಿಗೂ ಆತುರ, ಉತ್ಸಾಹ. ಆ ಕಾಲದಲ್ಲಿ ಕೈ ಬರೆಹದ ಪತ್ರಿಕೆಯೊಂದನ್ನು ನೇತೃತ್ವವಹಿಸಿ ಪ್ರಕಟಿಸುತ್ತಿದ್ದ ನೆನಪು ಇನ್ನೂ ನನ್ನಲ್ಲಿ ಹಸಿರಾಗಿದೆ. 'ಕಿಶೋರ' ಎಂಬ ನಾಮಾಂಕಿತದಲ್ಲಿ ಆಗ ಅವನ ಸಣ್ಣ ಕಥೆಗಳು ಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತಿದ್ದುವು.

ಸಂಜೆ ಸಮಯ ವಿರಾಮವಿರುವಾಗ ಹತ್ತಿರದ ಹಂಚಿನ ಕಾರ್ಖಾನೆಗೆ ಆಗಾಗ್ಗೆ ಭೇಟಿಕೊಡುತ್ತಿದ್ದ. ಅಲ್ಲಿಯ ಪರಿಸರವನ್ನೂ ವಾತಾವರಣವನ್ನೂ ಜನಜೀವನವನ್ನೂ ಗಮನಿಸುತ್ತಿದ್ದ. ಅವನ ಬಿಡಾರವು ನಾನಿದ್ದ ವಿದ್ಯಾರ್ಥಿನಿಲಯಕ್ಕೆ ಸಮೀಪದಲ್ಲಿ ಇದ್ದುದರಿಂದ ನಾವು ಶಾಲೆಯ ಹೊರವಲಯಗಳಲ್ಲಿಯೂ ಆಗಾಗ ಒಟ್ಟುಸೇರುತ್ತಿದ್ದೆವು. ಅವನು ವಿಹಾರಕ್ಕಾಗಿ ಸಮೀಪದ ಹೊಳೆಯಲ್ಲಿ ಸ್ವತಃ ದೋಣಿ ನಡೆಸಿಕೊಂಡು ಹೋಗುವಾಗ ನನ್ನನ್ನೂ ಒಯ್ಯುತ್ತಿದ್ದ. ಅವನು ವ್ಯಾಯಾಮ ಶಾಲೆಗೆ ಅಂಗಸಾಧನೆ ತರಬೇತಿಗಾಗಿಯೂ ಹೋಗುತ್ತಿದ್ದ.

ಒಮ್ಮೆ ತಾನೇ ಮುಂದಾಳುವಾಗಿ ಪ್ರೌಢಶಾಲೆಯ ಆವರಣದಲ್ಲಿ 'ವಿದ್ಯಾರ್ಥಿ ಸಮ್ಮೇಳನ' ನಡೆಸಿದ. ಆ ಸಂದರ್ಭದಲ್ಲಿ ಧ್ವಜಾರೋಹಣ ಗೀತೆ ಹಾಡುವ ಅವಕಾಶ ನನಗೆ ದೊರೆಯಿತು. ಸಮ್ಮೇಳನದ ಮುಂದೆ ಮಂಡಿಸಲು ಎಷ್ಟೋ ಠರಾವುಗಳಿದ್ದುವು. ಅವುಗಳ ಪೈಕಿ 'ಮೊಂಟೆಸಾರಿ' ಶಿಕ್ಷಣದ ಕುರಿತು ಒಂದು ಠರಾವನ್ನು ಮಂಡಿಸುವ ಹೊರೆಯನ್ನು ನನ್ನ ಮೇಲೆ ಹಾಕಿದ್ದ. ಸಭಾಕಂಪನವನ್ನು ದೂರಮಾಡಲು ಇಂಥ

ಸಭೆಗಳಲ್ಲಿ ತಲೆಯೆತ್ತಿ ಮುಂದೆ ಬರಬೇಕೆಂದು ಪ್ರೋತ್ಸಾಹಿಸುತ್ತಿದ್ದ. ಅವನ ನೇತೃತ್ವದಲ್ಲಿ ಸಮ್ಮೇಳನವು ಯಶಸ್ವಿಯಾಗಿ ಕೊನೆಗೊಂಡಿತು. ಅವನಿಗೆ ಕಾರ್ಯಸಾಧನೆಯಲ್ಲಿ ಅಪರಿಮಿತ ಛಲವಿತ್ತು.

ಸ್ವರಾಜ್ಯದ ಕನಸು ಕಾಣುತ್ತಿದ್ದ ಅವನಲ್ಲಿ ದೇಶಪ್ರೇಮ ಉಕ್ಕಿ ಬರುತ್ತಿತ್ತು. ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯನ್ನು ಸಹಿಸಲಾರದೆ, ಭಾಷಣಗಳಲ್ಲಿ ಲೇಖನಗಳಲ್ಲಿ ತೀವ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದ. ಗಾಂಧಿಜಿಯವರ ರಚನಾತ್ಮಕ ಕಾರ್ಯಕ್ರಮಗಳು ಅವನಲ್ಲಿ ತುಂಬ ಪ್ರಭಾವ ಬೀರಿದ್ದುವು. ವಿದ್ಯಾರ್ಥಿಗಳನ್ನೆಲ್ಲ ಒಂದುಗೂಡಿಸಿ, ಪತಾಕೆ ಹಿಡಿದುಕೊಂಡು, ''Awake, Arise, Organise'' ಎಂದು ಘೋಷಣೆ ಮಾಡುತ್ತಾ, ಜೈಕಾರ ಮಾಡುತ್ತಾ, ಮೆರವಣಿಗೆಯಲ್ಲಿ ಹರಿಜನ ಕೇರಿಗಳಿಗೆ ಹೋಗಿ, ಅವರ ಮಕ್ಕಳನ್ನು ಸಾಬೂನು ಹಾಕಿ ಮೀಯಿಸುವುದು, ಅವರಿಗೆ 'ಬಿಸ್ಕತ್' ಹಂಚುವುದು, ನೈರ್ಮಲ್ಯದ ಆವಶ್ಯಕತೆಯನ್ನು ವಿವರಿಸಿ ತಿಳಿವಳಿಕೆ ಕೊಡುವುದು ಮೊದಲಾದ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿದ್ದು ಧೈರ್ಯದಿಂದ ಭಾಗವಹಿಸುತ್ತಿದ್ದ.

ಆಗ ಒಂದು ಭಾಷೆಯವರು ಇನ್ನೊಂದು ಭಾಷೆಯವರನ್ನೂ, ಒಂದು ಪ್ರಾಂತದವರು ಇನ್ನೊಂದು ಪ್ರಾಂತದವರನ್ನೂ ಪರಕೀಯರಂತೆ ಕಾಣುತ್ತಿರಲಿಲ್ಲ. ಎಲ್ಲರೂ ಭಾರತ ಮಾತೆಯ ಮಕ್ಕಳೆಂಬ ಭಾವವಿತ್ತು. ಗಾಂಧಿಜಿಯವರ ಅಸಹಕಾರ ಚಳವಳದಲ್ಲಿ, ಅಹಿಂಸಾತ್ಮಕ ಹೋರಾಟದಲ್ಲಿ ಭಾಗವಹಿಸಿ ಸ್ವರಾಜ್ಯ ಸಂಪಾದಿಸುವುದೇ ಎಲ್ಲರ ಗುರಿಯಾಗಿತ್ತು.

ನೀಲೇಶ್ವರದಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿದ ಅನಂತರ ನಾವು ಪುನಃ ಭೇಟಿಯಾದದ್ದು ಕೆಲವು ವರುಷಗಳು ಕಳೆದ ಮೇಲೆ, ಬೆಂಗಳೂರಿನಲ್ಲಿ ಶಿವರಾಯ ನಿರಂಜನರಾದ ಮೇಲೆ. ನಾನು ಆಗ ವಿಮಾನ ಕಾರ್ಖಾನೆಯಲ್ಲಿ ನೌಕರಿಯಲ್ಲಿದ್ದೆ. ಅವರು ಮಂಗಳೂರಿನಿಂದ 'ರಾಷ್ಟ್ರಬಂಧು' ಪತ್ರಿಕೆಯ ಕಾರ್ಯಾಲಯವನ್ನು ಬಿಟ್ಟು ಬೆಂಗಳೂರಿನ 'ಪ್ರಜಾಮತ' ಕಾರ್ಯಾಲಯ ಸೇರಿದ್ದರು. ಈ ನಡುವೆ 'ಕಮ್ಯೂನಿಸ್ಟ್' ಪ್ರಭಾವವು ಅವರಲ್ಲಿ ಆದಂತೆ ಕಾಣುತ್ತಿತ್ತು. ನಾವು ಆಗಾಗ ಭೇಟಿಯಾಗುತ್ತಿದ್ದೆವು. ಅವರು ಬಂಡವಾಳಶಾಹಿಯನ್ನೂ ಸಾಮ್ರಾಜ್ಯಶಾಹಿಯನ್ನೂ ಸಹಿಸುತ್ತಿರಲಿಲ್ಲ. ಭಾಷಣ ಮಾಡುವಾಗ ಗರ್ಜಿಸಿ ಕಿಡಿಕಾರುತ್ತಿದ್ದರು. ರಾಜಕೀಯ ಪರಿಸ್ಥಿತಿಯಿಂದಾಗಿ ಸರಕಾರದ ಅಧಿಕಾರಿಗಳ ದೃಷ್ಟಿಗೆ ಬೀಳದೆ ತಲೆ ಮರೆಸಿಕೊಳ್ಳಬೇಕಾದ ಪ್ರಸಂಗಗಳೂ ಉಂಟಾಗಿದ್ದುವು.

ಬಾಲ್ಯದ ಸಹಪಾಠಿ

-ಮುಹಮ್ಮದ್ ಸುಳ್ಯ

ಒಲವಿನ ಗೆಳೆಯ,

ಸುಳ್ಯದ ಹೈಯರ್ ಎಲಿಮೆಂಟರಿ ಶಾಲೆಗೆ ನೀನು ಸೇರಿದಲ್ಲಿಂದ ನಾವು ಪರಿಚಿತರಾದೆವು. ತರಗತಿಯಲ್ಲಿ ಸಹಪಾಠಿಗಳೆಲ್ಲರೂ ಮಿತ್ರರೇ ಆದರೂ ನೀನು ನನ್ನ ಆತ್ಮೀಯ ಸ್ನೇಹಿತ. ಶಾಲೆಯಲ್ಲಿ ನಮಗೆ ೮ನೇ ತರಗತಿಯ ವರೆಗೆ ಒಡನಾಟ. ತರಗತಿಯಲ್ಲಿ ಮೊದಲ, ಎರಡನೆಯ ಸ್ಥಾನವನ್ನು ಪ್ರತಿ ಪಾಠದಲ್ಲಿಯೂ ನಾವೇ ಪಡೆಯುತ್ತಿದ್ದೆವು. ಇದರಿಂದ ನಮ್ಮ ಗುರುಗಳೆಲ್ಲರಿಗೂ ನಮ್ಮಿಬ್ಬರ ಮೇಲೆ ತುಂಬ ಪ್ರೀತಿ. ಬೆಳಗಿನ ಹೊತ್ತು ನಾವಿಬ್ಬರೂ ಕೈಕೈ ಹಿಡಿದುಕೊಂಡು, ಗಟ್ಟಿ ಸ್ವರದಲ್ಲಿ ಕೂಗಾಡುತ್ತಾ ಶಾಲೆಗೆ ನಡೆದು ಹೋಗುತ್ತಿದ್ದ ಚಿತ್ರ ಈಗಲೂ ನೆನಪಾಗುತ್ತಿದೆ.

ಎಂಟನೇ ತರಗತಿಯಲ್ಲಿ ಆಗ, ಶಾಲೆಗೆ ಇನ್‌ಸ್ಪೆಕ್ಟರ್‌ರವರೇ ಬಂದು ಪರೀಕ್ಷೆ ನಡೆಸುತ್ತಿದ್ದರು. ನಮ್ಮ ತರಗತಿಯಲ್ಲಿ ೧೪ ಅಥವಾ ೧೫ ಜನ ವಿದ್ಯಾರ್ಥಿಗಳು ಇದ್ದರೆಂದು ನೆನಪು. ಅವರಲ್ಲಿ ಕೇವಲ ೩ ಮಂದಿಯನ್ನು ಮಾತ್ರ ಮಾನ್ಯ ಇನ್‌ಸ್ಪೆಕ್ಟರ್ ಬಿ. ವಿ. ರಮಣ ಎಂಬವರು ಪಾಸುಮಾಡಿದರು. ಒಬ್ಬ ಕುಳುಕುಂದ ಶಿವರಾಯ, ಮತ್ತಿನವ ನಾನು, ನನ್ನಾಚೆಗೆ ನಾರಾಯಣ ರೈ (ಕುರಿಯ), ಇದು ಸರಿಯಷ್ಟೆ?

ಒಮ್ಮೆ ಶಾಲೆಯಲ್ಲಿ ಏನೋ ಚಿಲ್ಲರೆ ಕಾರಣಕ್ಕಾಗಿ ನಾವು ಮಾತು ನಿಲ್ಲಿಸಿದೆವು. ಆದರೆ ಮನಸ್ಸಿನೊಳಗೆ ಸಿಟ್ಟಿರಲಿಲ್ಲ. ನೀನೊಮ್ಮೆ ಕ್ಲಾಸ್ ಲೀಡರ್ ಆಗಿದ್ದೆ. ನಾನು ಒಂದು ದಿನ ಕ್ಲಾಸಿಗೆ ತಡವಾಗಿ ಬಂದೆ. ನಮ್ಮ ಅಧ್ಯಾಪಕರು ಕ್ಲಾಸಿಗೆ ಬಂದಿರಲಿಲ್ಲ. ನಿನ್ನಲ್ಲಿ ಕೇಳಿಯೇ ನಾನು ಕ್ಲಾಸಿಗೆ ಬರಬೇಕು - ಕೇಳಲು ನನಗೆ ಸಂಕೋಚ. ಎಲ್ಲ ಸಹಪಾಠಿಗಳೂ ನಗಲಾರಂಭಿಸಿದ್ದರು. ಆಗ ನೀನೇನು ಮಾಡಿದೆ ಗೊತ್ತೇ? ಕೋಪವನ್ನೆಲ್ಲ ಬದಿಗಿಟ್ಟು ಸೀದಾ ನನ್ನ ಬಳಿ ಬಂದು 'ಬಾರೋ ಮದ್ದು....' ಎಂದು ಕರೆದುಕೊಂಡು ಕ್ಲಾಸಿನೊಳಗೆ ಹೋದೆಯಲ್ಲವೆ? ನೀನು 'ರಾಜಿ'ಗಾಗಿ ಕೆಲವು ಪತ್ರಗಳನ್ನು ಬರೆದಿದ್ದರೂ ಉತ್ತರಿಸದಿದ್ದುದರ ಪ್ರತಿಫಲ ನಾನು ತಡವಾಗಿ ಬಂದಾಗ ಲಭ್ಯವಾಯಿತು!

ಸುಳ್ಯದಿಂದ ನೀನು ನೀಲೇಶ್ವರದ ಹೈಸ್ಕೂಲಿಗೆ ಹೋದೆ. ನಾನು ತಂದೆಯವರ ಸಂಗಡ ವ್ಯಾಪಾರ ಆರಂಭಿಸಿದೆ. ಆಗ ನೀಲೇಶ್ವರ ಕಾಸರಗೋಡು ತಾಲೂಕಿನಲ್ಲಿತ್ತು. ಕಾಸರಗೋಡು ತಾಲೂಕು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿತ್ತು.

ನೀನು ಹೈಸ್ಕೂಲು ಸೇರಿದ ಮೇಲೆ ನಿನ್ನನ್ನು ನಾನು ಕಂಡದ್ದು ಕಡಮೆ. ನೀನು ಮೈಸೂರಿನಲ್ಲಿದ್ದಾಗ, ನಾನು ಮೈಸೂರಿಗೆ ಬಂದು ನನ್ನನ್ನು ಕಾಣುವಂತೆ ನಿನಗೊಂದು ಕಾಗದ ಬರೆದೆ. ಆದರೆ ನೀನು ನಾನು ತಂಗಿದ್ದ ಹೋಟೆಲಿಗೆ ಬರುವಾಗ ನಾನೇ ಅಲ್ಲಿಂದ ಹೊರಟುಬಿಟ್ಟಿದ್ದೆ.

ನಿಮ್ಮ ಮದುವೆ ಆಮಂತ್ರಣ ಬಂತು. ತುಂಬ ಸಂತೋಷವಾಯಿತು. ಆದರೆ ನನಗೆ ಬರಲಾಗಲಿಲ್ಲ. ನಿಮ್ಮ ಮದುವೆಯ ಎಲ್ಲ ಸಿಹಿಕಹಿಗಳನ್ನು ನಿನ್ನ ಶ್ರೀಮತಿಯವರು ಬರೆದ (ತರಂಗ ವಾರಪತ್ರಿಕೆಯಲ್ಲಿ) ಲೇಖನಗಳಲ್ಲಿ ಓದಿದೆ.

ಒಮ್ಮೆ ನೀನು (ಕುಟುಂಬ ಸಮೇತ) ಥಕ್ಕನೆ ಮಧ್ಯಾಹ್ನ ೨ ಗಂಟೆ ಬಸ್ಸಿನಲ್ಲಿ ಸುಳ್ಯಕ್ಕೆ ಬಂದಿಳಿದೆ. ಬಸ್ಸು ನಿಂತಿದ್ದಂತೆಯೇ ಒಂದೆರಡು ಮಾತಾಡಿಹೋದೆ. ನಿಮ್ಮ ಆಗಮನ - ನಿರ್ಗಮನ ಕನಸು ಕಂಡಂತಾಯಿತು. ಸಂತೋಷವೂ ಬೇಸರವೂ ಒಮ್ಮೆಲೇ ನನಗುಂಟಾಯಿತು.

ಆಮೇಲೆ ನೀನೊಮ್ಮೆ ನಿನ್ನ ಶ್ರೀಮತಿಯವರು ಮತ್ತು ಸುಪುತ್ರಿಯರೊಂದಿಗೆ ಕಾರಿನಲ್ಲಿ ಬಂದೆ. 'ಮನೆಗೆ ಹೋಗುವ' ಎಂದು ನೀನೇ ಹೇಳಿದೆ. ನನಗಂತೂ ತುಂಬ ಸಂತೋಷವಾಯಿತು. ನೀನು ಕಾರಿನಲ್ಲೇ ಕುಳಿತು ನಮ್ಮ ಕಿರು ಆತಿಥ್ಯ ಸ್ವೀಕರಿಸಿದೆ. ಶ್ರೀಮತಿ ಅನುಪಮಾ, ಮಕ್ಕಳಾದ ತೇಜಸ್ವಿನಿ, ಸೀಮಂತಿನಿಯರು ನಮ್ಮ ಮನೆಗೆ ಬಂದರು. ನಮ್ಮ ಮನೆಯವರಲ್ಲೆಲ್ಲಾ ತುಂಬ ಮಾತಾಡಿದರು.

ನಿನ್ನ ಮಗಳ ಮದುವೆಯ ಆಮಂತ್ರಣ ಪತ್ರ ಕಳುಹಿಸಲು ನೀನು ಮರೆಯಲಿಲ್ಲ. ಆದರ ಸಂತೋಷಕೂಟಕ್ಕೆ ವುಡ್‌ಲ್ಯಾಂಡ್ಸ್ (ಬೆಂಗಳೂರು)ಗೆ ಬಂದೆ. ನನಗೆ ಪ್ರಥಮವಾಗಿ ಮೂರುಚಕ್ರದ ಸೈಕಲಲ್ಲಿ ಕುಳಿತ ನಿನ್ನ ಸ್ವಾಗತ ದೊರೆಯಿತು. ಮತ್ತೆ ನಿನ್ನ ಮಗಳು, ಅಳಿಯ ಹಾಗೂ ಶ್ರೀಮತಿಯವರೆಲ್ಲರಿಂದಲೂ ಸ್ವಾಗತ. ನನ್ನನ್ನು ನೀನು ಹತ್ತಿರವೇ ಕೂತುಕೊಳ್ಳಿಸಿದೆ. ಹೆಗಲ ಮೇಲೆ ಕೈಹಾಕಿ ಕೂತುಕೊಳ್ಳುವಂತೆ ಹೇಳಿದೆ.ಕೂಡಲೇ ಒಂದು ಫೋಟೋ ಕೂಡ ತೆಗೆಸಿದೆ. ಇದರಿಂದ ನನಗಾದ ಸಂತೋಷ ಅಪಾರ. ಅನಂತರ ನನ್ನ ನಿನ್ನ ಮಧ್ಯೆ ಪತ್ರ ವ್ಯವಹಾರ ಸಾಗುತ್ತಿದೆ. ಮತ್ತೆ ನಾನು ಬೆಂಗಳೂರಿಗೆ ಬರಲಿಲ್ಲ. ನಮ್ಮ ವ್ಯಾಪಾರದ ಕಾರಣ ಪುರುಸೊತ್ತು ಆಗುವುದೂ ಇಲ್ಲ. ಅಲ್ಲಿಗೆ ಬರಬೇಕೆಂಬ ಕಾತರ ತುಂಬ ಇದೆ.

ನಿನ್ನ ಬಗ್ಗೆ ನನ್ನ ಅನಿಸಿಕೆಗಳನ್ನು ಲೇಖನವಾಗಿ ಬರೆಯಬೇಕೆಂದಾಗ ಏನು, ಹೇಗೆ ಬರೆಯಬೇಕೆಂದೇ ಹೊಳೆಯಲಿಲ್ಲ. ನಿನ್ನಲ್ಲಿಯೇ ಮತ್ತೆ ವಿನಂತಿಸಿಕೊಂಡೆ.

(ಬಾಲ್ಯದಲ್ಲಿ ನಿನ್ನಂತೆ ನಾನೂ ಲೇಖಕನಾಗಬೇಕೆಂಬ ಆಸೆಯನ್ನು ನಿನ್ನಲ್ಲಿ ತೋಡಿಕೊಂಡಾಗ ನೀನು ನನ್ನ ಹೆಸರಲ್ಲಿ ಕೆಲವು ಬರೆದುಕೊಟ್ಟಿದ್ದಿ.) ಆದರೆ 'ಈಗ ನೀನೇ ಬರೆ' ಎಂದೆ. ಇದರಿಂದ ಹೊಸ ಹುರುಪು ಹುಟ್ಟಿತು. ಇದೋ ಸಿದ್ಧವಾಯಿತು ಈ ಪುಟ್ಟ ಲೇಖನ.

ತಪ್ಪಿದ್ದರೆ ಕ್ಷಮಿಸುವೆಯಲ್ಲ? ○

ನಿನ್ನ ಪ್ರಿಯ ಮಿತ್ರ,

ಮುಹಮ್ಮದ್ ಸುಳ್ಯ

ನನ್ನ ಶಿಷ್ಯ ಶಿವ

- ದಿ। ಕೆ. ಎಸ್. ವೆಂಕಪ್ಪ ಭಟ್

ದೊಡ್ಡವರೆ, ಸಣ್ಣವರೆ - ನಾನು ಈಗ ಏನು ಹೇಳುವುದೆಂದರೆ, ಈ ನಿರಂಜನ ನನಗೆ ಶಿವ. ನಾನು ಅವನ ಅಧ್ಯಾಪಕ. ಅವನಿಗೆ ಬಹಳ ಸಲಿಗೆ ಕೊಟ್ಟಿದ್ದೇನೆ. ಇದರಿಂದಾಗಿಯೇ ಏನೋ, ಅವನು ಆಗಾಗ ತಾಪತ್ರಯ ಮಾಡಿಬಿಡುತ್ತಾನೆಂದು ಕಾಣುತ್ತದೆ.

ನಾನು ಸುಮಾರು ೩೬-೩೭ ವರ್ಷಗಳ ಕಾಲ ಅಧ್ಯಾಪಕನಾಗಿ ಶಾಲೆಗಳಲ್ಲಿ, ಒಂದೆರಡು ವರ್ಷ ಮನೆಗಳಲ್ಲಿ ಪಾಠ ಹೇಳಿದ್ದೇನೆ. ಈ ಹುಡುಗ ನಾನು ಸುಳ್ಯದಲ್ಲಿ ಅಧ್ಯಾಪಕನಾಗಿದ್ದಾಗ ನನ್ನ ನೆರೆಮನೆಯಲ್ಲಿದ್ದ. ಈತ ಹುಟ್ಟಿದ್ದು ಕುಳುಕುಂದದಲ್ಲಿ. ಕಾರಣಾಂತರದಿಂದ 'ಕಾವು' ಎಂಬಲ್ಲಿಗೆ ಬಂದು ಕೊನೆಗೆ ಸುಳ್ಯಕ್ಕೆ ಬಂದದ್ದು. ಶಾಲೆ ಸೇರಿದ ಈ ಹುಡುಗ ಯಾವುದೇ ವಿಷಯ ಹೇಳಿದರೂ ಕೂಡಲೇ ಹಿಡಿದುಕೊಳ್ಳುತ್ತಿದ್ದ. ಆದ್ದರಿಂದ ಗುಣವಂತ, ಪ್ರತಿಭಾವಂತ ವಿದ್ಯಾರ್ಥಿಯೊಬ್ಬನ ಬಗ್ಗೆ ಯಾವನೇ ಅಧ್ಯಾಪಕನಿಗೆ ಸಂತೋಷವಾಗುವಂತೆ ನನಗೂ ಆಗುತ್ತಿತ್ತು. ಸುಳ್ಯದಲ್ಲಿ ೬, ೭ನೇ ತರಗತಿಗಳಿಗೆ ಕನ್ನಡ ಕಲಿಸುವ ಕೆಲಸ ನನಗಿತ್ತು. ಮಕ್ಕಳ ಸುಪ್ತ ಚೇತನವನ್ನು ಬಡಿದೆಬ್ಬಿಸಬೇಕೆಂಬ ಉದ್ದೇಶದಿಂದ ಒಂದು ಹಸ್ತ ಪತ್ರಿಕೆ ತಯಾರು ಮಾಡಿಸಿದ್ದೆ. ಲೇಖನಗಳಿಗೆ ಪ್ರೋತ್ಸಾಹ ಕೊಡುತ್ತಿದ್ದೆ. ತಪ್ಪುಗಳನ್ನು ತಿದ್ದುತ್ತಿದ್ದೆ. ಕೆಲಸಮಯದ ಅನಂತರ ಅದರ ಹೊಣೆಯನ್ನು ವಿದ್ಯಾರ್ಥಿಗಳಿಗೇ ಬಿಟ್ಟುಕೊಟ್ಟೆ. ಶಾಲೆಯಲ್ಲಿ ಚಿತ್ರಕಲೆಯನ್ನು ಕಲಿಸುತ್ತಿದ್ದ ಸುಬ್ಬಮಾಸ್ತರ ಶಿಷ್ಯರು ಪತ್ರಿಕೆಯನ್ನು ಶೃಂಗರಿಸುತ್ತಿದ್ದರು

ಈ ಹುಡುಗ ತಿಂಗಳಿಗೊಮ್ಮೆ ಹೊರಡುತ್ತಿದ್ದ ಈ ಪತ್ರಿಕೆಗೆ ಹಲವು ಲೇಖನಗಳನ್ನು ಕೊಡುತ್ತ ಇದ್ದ. ಅವು ಉತ್ತಮವಾಗಿರುತ್ತಿದ್ದುವು. ತರಗತಿಯಲ್ಲೂ ಪ್ರಬಂಧ ಬರೆಸುತ್ತಿದ್ದೆ. ಅಚ್ಚುಕಟ್ಟಾಗಿ ಚೆನ್ನಾಗಿ ಬರೆದಾಗ ಸಂತೋಷವಾಗಿ 'Good' ಹಾಕಿಬಿಡುತ್ತಿದ್ದೆ. ಈ 'Good' ಸಿಕ್ಕಿದ ಹುಡುಗ ಶಿವ ಏನು ಮಾಡಿದ ಅಂದ್ರೆ ನನಗೇ ತಿರುಗುಬಾಣ ಮಾಡಿಬಿಟ್ಟ. ಹದಿನೈದು ವರ್ಷಗಳ ಅನಂತರ (ಸುಳ್ಯ ಬಿಟ್ಟು ೧೫ ವರ್ಷ ಚೊಕ್ಕಾಡಿಯ ಶಾಲೆಯಲ್ಲಿದ್ದೆ) ಎರಡನೇ ಸಲ ಸುಳ್ಯದಲ್ಲಿದ್ದಾಗ ಹೈಸ್ಕೂಲಿಗೆ ನನ್ನ ಮಗಳು ಹೋಗುತ್ತಿದ್ದವಳು ಒಂದು ದಿನ ಒಂದು ಕವರು ತಂದು ಕೊಟ್ಟಳು. ವಿಶೇಷ ಏನಿಲ್ಲ - "ನಾನು ನಿಮ್ಮ ಶಿಷ್ಯ, ನಾನು ನಿಮಗೊಂದು ಪುಸ್ತಕವನ್ನು ಅರ್ಪಿಸಿದ್ದೇನೆ. ಕಾದಂಬರಿ ಉಪಾಧ್ಯಾಯ ಜೀವನವನ್ನು ಕುರಿತದ್ದು. ದಯವಿಟ್ಟು ಸ್ವೀಕರಿಸಿ, ನನಗೆ ಎರಡು ಒಳ್ಳೆಯ ಮಾತುಗಳನ್ನು ಬರೆದು ಕಳಿಸಿ" - ಎಂದು ಬರೆದಿದ್ದ. ಮರುದಿನ ಪುಸ್ತಕ (ನವೋದಯ)ವೂ ಬಂತು.

ಪತ್ರ ಬರೆದೆ - "ನೋಡು, ನಮ್ಮ ಸಂಪರ್ಕ ಕಡಿದು ಹೋಗಿ ಎಷ್ಟೋ ವರ್ಷ ಆಯ್ತು. ನಿನ್ನ ಸ್ಥಿತಿಗತಿ ಏನು ಎತ್ತ ಎಂದು ನನಗೆ ಸರಿಯಾಗಿ ವಿವರ ಪ್ರಕಾರ ತಿಳಿಸಬೇಕು" - ಎಂದು ತಿಳಿಸಿದೆ. ಅದು ಅವನಿಗೆ ತಲುಪಿತು. ಅವನೂ ಬರೆದ "....ನಾನು ಹೀಗೆ ಹೀಗೆ....ರಿಮಾಂಡಿನಲ್ಲಿ....ನನಗೆ ಮದುವೆ ಆಗಿದೆ. ಅವಳೂ ಒಬ್ಬ ಸಾಹಿತಿ. ನಾನು ನಿರಂಜನ ಅಂತ ಕಾವ್ಯನಾಮ ಹಾಕಿಕೊಂಡಿದ್ದೇನೆ. ಅವಳು ಅನುಪಮಾ....ನೀವು ಆಶೀರ್ವಾದ ಕೊಟ್ಟದ್ದು ಒಳ್ಳೇದಾಯ್ತು. ತಾಯಿಯೂ ಜೊತೆಗೇ ಇದ್ದಾರೆ....". ಆಯ್ತು, ಅಲ್ಲಿಗೆ ಪತ್ರ ವ್ಯವಹಾರ ನಿಂತಿತು, ಮತ್ತೆ ಸುದ್ದಿ ಇಲ್ಲ.

ಮತ್ತೆ ಒಂದು ದಿವಸ ನಾನು ಪುತ್ತೂರಿಗೆ ಬಂದಾಗ ಗೆಳೆಯ ಬಿ.ಎಂ. ಶರ್ಮ ನನ್ನನ್ನು ಕಂಡು, "ನಿಮ್ಮ ಶಿಷ್ಯ ಅಂತೆ ನಿರಂಜನ. ಅವರಿಗೆ ನಿಮ್ಮನ್ನು ಕಾಣಬೇಕೆಂದು ಆಸೆ ತುಂಬ. ಆದರೆ ಪಾಪ ನಡೆಯಲು ಸಾಧ್ಯವಿಲ್ಲ. ಪಾರ್ಶ್ವವಾಯು, ಬಹಳ ಕಷ್ಟದಲ್ಲಿದ್ದಾರೆ. ಸುಳ್ಯಕ್ಕೆ ಬಂದವರು ನಿಮ್ಮನ್ನು ತುಂಬ ಕೇಳಿದ್ದಾರೆ" ಎಂದರು. "ಕಾರು ಮನೆಯವರೆಗೆ ಹೋಗುತ್ತದೆಯೇ? ಅವರನ್ನೊಮ್ಮೆ ಕಾಣಬೇಕಿತ್ತು" ಎಂಬ ಅವನ ಅಪೇಕ್ಷೆಯನ್ನು ಹೇಳಿದರಲ್ಲದೆ, "ನೋಡಿ, ಅವರು ಪ್ರಗತಿ ಪಂಥದ ಸಮ್ಮೇಳನದ ತಯಾರಿಗೆ ಪುತ್ತೂರಿಗೇ ಬರುತ್ತಾರಂತೆ. ಹೆಂಡತಿ ಮಕ್ಕಳೆಲ್ಲ ಜೊತೆಗಿರುತ್ತಾರೆ. ಆ ಸಮಯವನ್ನು ತಿಳಿಸುತ್ತೇನೆ; ನೀವು ಬಂದು ಬಿಡಿ, ಅವರಿಗೆ ಸಂತೋಷವಾದೀತು" ಎಂದರು. ಆ ಮೇಲೆ ಶರ್ಮರು ಪತ್ರಮೂಲಕ ಹೇಳಿಕೆ ಮಾಡಿದರು. ಬಂದೆ. ಅವನಿಗೆ ಸಂತೋಷವಾಯಿತು. ಪಂಚಾತಿಕೆ ಎಲ್ಲ ಆಯಿತು. ಅವನು ಕಷ್ಟದಿಂದ ಏಳಲಿಕ್ಕೆ ಯತ್ನಿಸುತ್ತಿದ್ದ. ಏನಪ್ಪಾ ಎಂದುಕೊಂಡಾಗ, "ನನಗೊಮ್ಮೆ ನಿಮ್ಮ ಪಾದ ಮುಟ್ಟಬೇಕು" ಎಂದ. ನಾನು ಮುಂದೆ ಹೋದೆ. ಆಮೇಲೆ ಮೆಲ್ಲನೆ ಕೈಹಿಡಿದು ಪಾದ ಮುಟ್ಟಿದ. ನೋಡಿ, ಇದು ಎರಡನೇ ತಾಪತ್ರಯ.

ಆಮೇಲೆ ಅಲ್ಲಿ ಎಲ್ಲರಿಗೂ ಪರಿಚಯ ಮಾಡಿಸಿದ. ಹೆಂಡತಿ ಡಾಕ್ಟರಂತೆ, ನಮ್ಮ ಹಳ್ಳಿ ಹೆಂಗಸಿನ ಹಾಗೇ ಇದ್ದರು, ಅಯ್ಯೋ ಇದೇನಪ್ಪಾ! ಎನಿಸಿತು. ತಯಾರಿ ಮುಗಿಸಿ ಹೋದ. ಪ್ರಗತಿ ಸಂಘದ ಕಾರ್ಯಕ್ರಮಕ್ಕೆ ಕರೆಬಂದಾಗ ಹೋಗಿದ್ದೆ, ಮತ್ತೆ ಮಾತುಕತೆ, ಬಿಡುಗಡೆ.

ಪತ್ರ ವ್ಯವಹಾರ ಆಗೊಮ್ಮೆ ಈಗೊಮ್ಮೆ. ಕಳೆದ ವರ್ಷ ಒಮ್ಮೆ ರೂ. ೧೦೧ರ ಒಂದು Gift cheque - ಗುರುಕಾಣಿಕೆ, ದಯವಿಟ್ಟು ಸ್ವೀಕರಿಸಿ ಎಂದು ಪತ್ರದೊಂದಿಗೆ ಕಳಿಸಿದ, ಆಶೀರ್ವಾದ ಬೇಡಿದ. ನಾನು ಒಂದು ಸಲ ಯೋಚಿಸಿದೆ, ವಾಪಾಸು ಮಾಡುವುದೋ ಎಂದು. ಯಾಕೆ ಸುಮ್ಮನೆ ದುಡ್ಡು? ದುಡ್ಡು ಕೊಟ್ಟಲ್ಲಿ ಸಂಬಂಧ ಮುಗಿಯುತ್ತದೆ - ಎಂದುಕೊಂಡೆ. ಆದರೆ ಪ್ರೀತಿಯಿಂದ ಕಳಿಸಿದ್ದು, ಸ್ವೀಕರಿಸಿ ಅದನ್ನು ಎಲ್ಲಿಯಾದರೂ ನಿಧಿಯನ್ನಾಗಿಟ್ಟು ಕನ್ನಡದಲ್ಲಿ ಅಧಿಕ ಅಂಕಗಳಿಸಿದವರಿಗೆ ಇನಾಮುಕೊಡುವ ವ್ಯವಸ್ಥೆ ಮಾಡಬೇಕೆಂದೆಣಿಸಿದೆ. ಸರಿಯಾದ ಅವಕಾಶ ದೊರೆಯಲಿಲ್ಲ. ಕೊನೆಗೆ ಚೊಕ್ಕಾಡಿ ಗ್ರಾಮ ದೇವಸ್ಥಾನಕ್ಕೆ ನಿತ್ಯ ಪೂಜಾ ನಿಧಿಗೆ ಕೊಟ್ಟೆ.

ಈಗ, ಮತ್ತೊಂದು ತಾಪತ್ರಯ....ನಿಜವಾಗಿ ಇದಕ್ಕೆಲ್ಲ ನಾನೇನೂ ಅರ್ಹನಲ್ಲ. ಆದರೆ ನೀವೆಲ್ಲ ಕೂಡಿ ಕೊಟ್ಟಿದ್ದೀರಿ. ನನಗೇನೂ ಹೇಳುವುದಕ್ಕೆ ತಿಳಿಯದು. ಅವನನ್ನು ಪರಮಾತ್ಮನು ಇನ್ನೂ ದೀರ್ಘಾಯುವಾಗುವಂತೆ ಕಾಪಾಡಿ, ಅವನಿಂದ ಸಾಹಿತ್ಯದೇವಿಯ ಸೇವೆಯನ್ನು ಇನ್ನೂ ಹೆಚ್ಚಾಗಿ ಮಾಡಿಸಲಿ ಅಂತ ನಾನು ಪ್ರಾರ್ಥಿಸುತ್ತೇನೆ. ○

[30–11–1985ರಂದು ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘದ 'ನಿರಂಜನ ಸಾಹಿತ್ಯ-ವಿಚಾರ ಸಂಕಿರಣ' ಸಮಾರಂಭದಲ್ಲಿ ನಿರಂಜನರ ಕೋರಿಕೆಯಂತೆ ಸಂಮಾನಿತರಾಗಿ ಮಾಡಿದ ಭಾಷಣದ ಧ್ವನಿಸುರುಳಿಯ ಸಾರ. ಲಿಪಿಕಾರ : ಗಣರಾಜ ಕುಂಬಳೆ]

ವಾಗ್ಲೆ ಶಿಷ್ಯ ಳ

- ಗಣರಾಜ ಕುಂಬಳೆ

ಸುಳ್ಯ ಪೇಟೆ ಆರಂಭವಾಗುವಲ್ಲೇ ಗದ್ದೆ ತೋಟಗಳ ಮಧ್ಯೆ ಪುಟ್ಟ ಸುಂದರ ಮನೆ ಶ್ರೀ ಜನಾರ್ದನ ವಾಗ್ಲೆಯವರದು. ಈಗ ಅವರಿಗೆ 86 ತುಂಬಿದೆ. ಕಿವಿ-ಕಣ್ಣುಗಳು ಇನ್ನು ದುಡಿಯಲು ಅಸಾಧ್ಯವೆಂದು ಮುಷ್ಕರಹೂಡುತ್ತಿವೆ. ನಿರಂಜನರ ಪ್ರಾಥಮಿಕ ಶಾಲೆಯ ಗುರುಗಳಾಗಿದ್ದವರಿವರು. ನಿರಂಜನ ಬಗ್ಗೆ ಪಿಎಚ್.ಡಿ. ಮಾಡುತ್ತಿದ್ದು ಆ ನಿಮಿತ್ತ ನಾನು ಮಾಡಿದ ಸಂದರ್ಶನದ ಸಂಕ್ಷಿಪ್ತ ರೂಪ ಇಲ್ಲಿದೆ.

ನಾನು : ನಾನು ನಿರಂಜನರ ಬಗ್ಗೆ ವಿಶೇಷ ಅಧ್ಯಯನಕ್ಕೆ ಹೊರಟಿದ್ದೇನೆ. ಸ್ವಾಮಿ, ತಾವು ಅವರ ಬಾಲ್ಯದ ಗುರುಗಳೆಂದು ತಿಳಿದೆ. ನಿಮ್ಮಲ್ಲಿ ಅವರ ಬಾಲ್ಯದ ಕೆಲವು ವಿಚಾರಗಳನ್ನು ತಿಳಿಯುವ ಇರಾದೆಯಿಂದ ಬಂದೆ....

ವಾಗ್ಲೆ : ನಿರಂಜನರ ಮೊದಲಿನ ಹೆಸರು ಶಿವರಾಯ ಅಥವಾ ಶಿವ. ಮೊದಲಿಗೆಲ್ಲ ಕತೆ ಬರೆಯುವಾಗ 'ಕುಳುಕುಂದ ಶಿವರಾಯ', 'ಕು. ಶಿ. ರಾ.' - ಹೀಗೆ. ಆಮೇಲೆ 'ನಿರಂಜನ'

ನಾನು : ನಿಮ್ಮ, ಶಿವರಾಯರ ಗುರುಶಿಷ್ಯ ಸಂಬಂಧ ಎಂದಿನಿಂದ ?

ವಾಗ್ಲೆ : ಸುಳ್ಯದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅವನಿಗೆ ನಾನು ೫, ೬, ೭, ೮ನೇ ತರಗತಿಗಳಲ್ಲಿ ಗಣಿತ ಮತ್ತು ಇಂಗ್ಲಿಷ್ ಪಾಠ ಹೇಳಿದ್ದೇನೆ.

ನಾನು : ಅಧ್ಯಾಪಕರಿಗೆ ವಿದ್ಯಾರ್ಥಿಯ ಕಲಿಕೆಯ ಬಗ್ಗೆ ತಿಳಿದಿರುವಂತೆ ಕೆಲವೊಮ್ಮೆ ಬದುಕಿನ ಬಗ್ಗೆಯೂ ಮನೆಯವರ ಬಗ್ಗೆಯೂ ತಿಳಿದಿರುವುದು ಸಹಜ. ನಿಮಗೆ ಕೂಡ ಆ ರೀತಿ ಅವರ ಬದುಕಿನ ಕುರಿತಾಗಿ ತಿಳಿದಿದೆಯೇ ?

ವಾಗ್ಲೆ : ಆ ಕಾಲದಲ್ಲಿ ಶಿವರಾಯನಿಗೆ ತುಂಬ ದಾರಿದ್ರ್ಯ. ಆ ದಾರಿದ್ರ್ಯದಲ್ಲಿ ಅವನಿಗೆ ವಿದ್ಯಾಭ್ಯಾಸ ಮುಂದುವರಿಸಲಿಕ್ಕಾದರೂ ಅವಕಾಶ ಕಡಿಮೆ ಯಿತ್ತು. ಅವನ ತಾಯಿ ಪಾಪ! ಏನೋ ಒಂದು ಚಾದಂಗಡಿ ಇಟ್ಟು ಕೊಂಡು ಕಷ್ಟಪಡುತ್ತಾ ಇದ್ದರು. ಅವನೂ ಅಷ್ಟೆ, ಬೀಡಾ ಕಟ್ಟುವುದು, ಮಾರುವುದು ಇತ್ಯಾದಿ ಸಣ್ಣ ಕೆಲಸಗಳನ್ನೆಲ್ಲ ಮಾಡಿಕೊಳ್ಳುತ್ತಿದ್ದ. ಒಕ್ಕ ಹುಡುಗ. ಆದಾಯ ಕಡಿಮೆ, ದುಡಿತ ಜಾಸ್ತಿ.

ನಾನು : ಶಾಲೆಯಲ್ಲಿ ಶಿವರಾಯರು ಹೇಗೆ........?

ವಾಗ್ಲೆ : ಶಾಲೆಯಲ್ಲಿ ಎಲ್ಲ ಚಟುವಟಿಕೆಗಳಲ್ಲೂ ಮುಂದು. ಆಗ ತಾಲೂಕು ಬೋರ್ಡ್ ಅಧ್ಯಕ್ಷರಾಗಿ ಮೊಳಹಳ್ಳಿ ಶಿವರಾಯರಿದ್ದರು. ಅವರ ಕಾರ್ಯ ಕ್ಷೇತ್ರ ಆಗಿನ ಪುತ್ತೂರು ತಾಲೂಕು. ಶಾಲೆಗಳಲ್ಲೆಲ್ಲಾ ವಿದ್ಯಾರ್ಥಿಗಳ ವಿಕಾಸದ ದೃಷ್ಟಿಯಿಂದ ಸಾಕಷ್ಟು ರಚನಾತ್ಮಕ ಚಟುವಟಿಕೆಗಳಿಗೆಲ್ಲ ಪ್ರೋತ್ಸಾಹಿಸುತ್ತಿದ್ದ ಅವರು 'ಮಕ್ಕಳ ಕೂಟ', ಸಂಚಾರೀ ವಾಚನಾಲಯ, ಶಾಲೆಗಳಲ್ಲಿ ಭಾಷಣ - ಚರ್ಚೆ - ಲೇಖನ ಇತ್ಯಾದಿಗಳಿಗೆ ಇಂಬು ದೊರಕಿಸಿಕೊಡುತ್ತಿದ್ದರು. ದಸರೆಯ ಹೊತ್ತಿಗೆ ನಾಡಹಬ್ಬ ವಂತೂ ಕಣ್ಣು ತುಂಬುವಂತಿತ್ತು. ಈ ಶಿವರಾಯ ಇಂಥ ಚಟುವಟಿಕೆ ಗಳಲ್ಲಿ ಶಾಲೆಯ ಆರಿಸಿದ ವಿದ್ಯಾರ್ಥಿಯಾಗಿ ಭಾಗಿಯಾಗುತ್ತಿದ್ದ. ಸಂಚಾರೀ ವಾಚನಾಲಯವನ್ನಂತೂ ಚೆನ್ನಾಗಿ ಬಳಸಿಕೊಳ್ಳುತ್ತಿದ್ದ.

ನಾನು : ಓದಿನ ಆಸಕ್ತಿ, ತಿಳಿವಿನ ಆಸರು ಹೆಚ್ಚಿರುವವರಿಗೆ ಗ್ರಂಥ - ಗ್ರಂಥಾಲಯ ಕೈಯಂತರದಲ್ಲಿಲ್ಲದಿದ್ದರೆ ತುಂಬ ಕಷ್ಟ ಅಲ್ಲವೆ ?

ವಾಗ್ಲೆ : ಅದು ಸರಿ........ಸ್ವಲ್ಪ ಮಟ್ಟಿಗೆ ಶಾಲೆಯಲ್ಲಿ........ಆಗ 'ಪುಸ್ತಕ ಮಾರಾಟ ಸಂಘ' ಇತ್ತು. ಪುಸ್ತಕಗಳನ್ನು ರಖಮಾಗಿ ಕೊಂಡುತಂದು ಮಾರಾಟ ಮಾಡುವ ವ್ಯವಸ್ಥೆ ಇದರದು. ಇವಕ್ಕೆ ಒಂದು ಸಮಿತಿ ರೂಪಿತವಾಗಿತ್ತು. ಅಧ್ಯಾಪಕರೊಬ್ಬರು ಅಧ್ಯಕ್ಷರು, ವಿದ್ಯಾರ್ಥಿಗಳು ಇತರ ಪದಾಧಿಕಾರಿಗಳು. ಶಿವರಾಯ ಅದರ ಕಾರ್ಯದರ್ಶಿಯಾಗಿದ್ದ. ಅಂತೆಯೇ ಸುಳ್ಯ ಪೇಟೆಯ ಮೂಲೆಯಲ್ಲೊಂದು ಗ್ರಂಥಾಲಯವೂ ಇತ್ತು. ಅಲ್ಲಿಗೂ ಅವನು ಹೋಗುತ್ತಿದ್ದ.

ನಾನು : ವಿದ್ಯಾರ್ಥಿಗಳ ವಾಚನ, ಲೇಖನ, ಭಾಷಣಗಳು ಚೆನ್ನಾಗಬೇಕಾದರೆ ಶಾಲೆ ಅದಕ್ಕೆ ತಕ್ಕ ವಾತಾವರಣ ಕಲ್ಪಿಸಬೇಕಲ್ಲವೇ? ಹಾಗೇನಾದರೂ....?

ವಾಗ್ಲೆ : ಒಬ್ಬೊಬ್ಬ ಅಧ್ಯಾಪಕರೂ ಅನೇಕ ಅವಕಾಶಗಳನ್ನು ಕಲ್ಪಿಸಿಕೊಡು ತ್ತಿದ್ದರು. ಅವುಗಳಲ್ಲಿ ಒಂದು ವಿಶೇಷ - 'ಮಕ್ಕಳ ವಾರ್ತೆಗಳು' ಎಂಬ ಒಂದು ಭಿತ್ತಿ ಫಲಕ. ಇದರಲ್ಲಿ ವಿದ್ಯಾರ್ಥಿಗಳೇ ಬರೆದ ಚುಟುಕ, ಕತೆ, ಪದ್ಯಗಳು ಬೆಳಕು ಕಾಣುತ್ತಿದ್ದುವು. ವಿದ್ಯಾರ್ಥಿಗಳು ತಮಗನಿಸಿದ್ದನ್ನು ತಿಳಿಸುವುದಕ್ಕೆ ಅವಕಾಶ ಮಾಡಿಕೊಡುವುದೇ ಅದರ ಉದ್ದೇಶ. ಶಿವರಾಯನೂ ಇಲ್ಲಿ ಬರೆಯುತ್ತಿದ್ದ.

ನಾನು : ವಿದ್ಯಾರ್ಥಿ ಸಮೂಹದಲ್ಲಿ ಶಿವರಾಯರು ಕಾಣಿಸಿಕೊಳ್ಳುತ್ತಿದ್ದ ಬಗ್ಗೆ....?

ವಾಗ್ಲೆ : ಶಿವರಾಯ ಹತ್ತು ಜನರೊಡನೆ ಬೆರೆಯುವ ಸ್ವಭಾವದ ಒಬ್ಬ ಚುರುಕು ಹುಡುಗ. ನನ್ನ ಮಗ ಆನಂದ ವಾಗ್ಲೆಯೂ ಇವನೂ ಒಂದೇ ಕ್ಲಾಸಿನವರು. ಶಿವರಾಯ ಮೂರು ವರ್ಷಗಳಲ್ಲಿ ತರಗತಿಯ ಹಿರೇಮಣಿ ಆಗಿದ್ದ.

ನಾನು : ಸ್ವಾಮೀ, ಇಂದು 'ನಿರಂಜನ'ರಾಗಿ ಬೆಳೆದಿರುವ ನಿಮ್ಮ ವಿದ್ಯಾರ್ಥಿಯ ಬಗ್ಗೆ ನಿಮ್ಮ ಅನಿಸಿಕೆ ಏನು?

ವಾಗ್ಲೆ : ನಿಜವಾಗಿಯೂ ಸುಳ್ಯವನ್ನು ಅವನು ಬಿಟ್ಟು ಹೋದ ಮೇಲೆ ನನ್ನ ಮರವೆಯಲ್ಲಿದ್ದ ಶಿವರಾಯ ಕತೆ, ಕಾದಂಬರಿ ಎಲ್ಲ ಬರೆಯುತ್ತಾನೆಂದು ತಿಳಿಯಿತು. ನನಗೂ ಎರಡು ಪುಸ್ತಕ ಕಳಿಸಿದ್ದ. ನನ್ನ ಶಾಲೆಯ ವಿದ್ಯಾರ್ಥಿಯೊಬ್ಬ ಇಂದು ಮಹಾನ್‌ವ್ಯಕ್ತಿಯಾಗಿದ್ದಾನೆ ಎಂಬುದು ನನಗೊಂದು ಹೆಮ್ಮೆಯ, ಸಂತೃಪ್ತಿ ಕೊಡುವ ಸಂಗತಿ. ○

ಹದಿಹರೆಯದ ಶಿವರಾಯ ೫

–ಕಲ್ಮಾಡಿ ರಾಮರಾಯ

ಇದು ಸುಮಾರು ೪೫ ವರ್ಷಗಳ ಹಿಂದಿನ ಕತೆ. ೧೯೪೧ರ ಮಾರ್ಚ್ ತಿಂಗಳಿರಬಹುದು. ಕರ್ನಾಟಕದಲ್ಲಿ ಈಗಿನ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ನಿರಂಜನರು ಆಗ ನೀಲೇಶ್ವರದ "ರಾಜಾಸ್ ಹೈಸ್ಕೂಲ್"ನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುತ್ತಿದ್ದರು. ನಾನು ಪರೀಕ್ಷಾ ಮೇಲ್ವಿಚಾರಕರಲ್ಲೊಬ್ಬ (invigilator) ನಾಗಿ ಮಂಗಳೂರಿಂದ ಅಲ್ಲಿಗೆ ಹೋಗಿದ್ದೆ. ಆ ಕಾಲದಲ್ಲಿ ರಾಮಕೃಷ್ಣರಾಯರೆಂಬವರು ಆ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಅವರು ಸಜ್ಜನ ಶಿಷ್ಯ ವತ್ಸಲರು. ಅದರಲ್ಲೂ ಶಿಷ್ಯನು ಪ್ರತಿಭಾವಂತ ಹಾಗೂ ಗುಣಾನ್ವಿತನೆಂದರೆ ಕೇಳಬೇಕೇ? ಇಂದಿನ ನಿರಂಜನರಾದ ಅಂದಿನ ಶಿವರಾವ್ ರಾಮಕೃಷ್ಣರಾಯರ ಅಚ್ಚುಮೆಚ್ಚಿನ ಶಿಷ್ಯ. ನಾನು ಹೋದ ದಿನವೇ ಅವರು ಸುದೀರ್ಘವಾಗಿ ತಮ್ಮ ಶಿಷ್ಯನ ಗುಣ ಕಥನ ಮಾಡಿದ್ದರು. ಆತನ ಬಾಲ್ಯದ ಕಷ್ಟ - ನಷ್ಟ, ಹೆತ್ತವರ ಸಿಹಿ - ಕಹಿ, ಅವನು ತನ್ನ ವಿದ್ಯಾಭ್ಯಾಸಕ್ಕಾಗಿ ಪಟ್ಟ ಪರಿಶ್ರಮ ಇತ್ಯಾದಿಗಳನ್ನು ತಿಳಿಸಿದ್ದರು.

ಹೀಗಾಗಿ, ಮೇಧಾವಿಯಾದ ಆ ಬಡ ಹುಡುಗನನ್ನು ಸ್ವತಃ ನೋಡಬೇಕೆಂದು ಮನಸ್ಸಾಯಿತು. ಆದರೆ ನಾನು ಮಂಗಳೂರಿನವನೆಂದು ತಿಳಿದು, ಶಿವರಾವ್ ತಾನೇ ನನ್ನನ್ನು ಭೇಟಿಮಾಡಿ ತನ್ನ ಪೂರ್ವ ವೃತ್ತಾಂತವನ್ನು ಮನಬಿಚ್ಚಿ ತಿಳಿಗನ್ನಡದಲ್ಲಿ ಹೇಳುತ್ತಿದ್ದಂತೆ ಆತನ ಧೈರ್ಯ, ಸ್ಥೈರ್ಯ, ದೈನ್ಯ, ವಿನಯ, ಸರಳತೆ ಇತ್ಯಾದಿ ಗುಣಗಳು ವ್ಯಕ್ತವಾದುವು. ಬೆಳೆಯ ಸಿರಿ ಮೊಳಕೆಯಲ್ಲೇ ತೋರಿಬಂತು. ಈ ಹದಿನೈದರ ಹರೆಯದ ಹುಡುಗನ ಬಗ್ಗೆ ನನ್ನಲ್ಲಿ ನಿಜವಾದ ಅನುಕಂಪ ಹುಟ್ಟಿಕೊಂಡಿತು.

ಇಷ್ಟರಲ್ಲಿ ನಮ್ಮೊಳಗೆ ಸಲಿಗೆಯು ಬೆಳೆಯಿತು. ಎಳೆಯ ಹಸುಳೆಯಂತಿದ್ದ ಆತನಿಗೆ ತನ್ನ ಮನೋಭಿಲಾಷೆಯನ್ನು ತೋಡಿಕೊಳ್ಳಲು ಸಂದರ್ಭ ಒದಗಿತು. ತನಗಿನ್ನು ಕಾಲೇಜು ಮೆಟ್ಟಲು ಹತ್ತುವ ಆಸೆ ಇಲ್ಲ, ವಿಪರೀತ ಖರ್ಚು. ತನ್ನ ತಾಯಿಯನ್ನು ಸಾಕಿ ಸಲಹುವ ಹೊಣೆಯೂ ಇದೆ. ತಾನು ಶಾಲಾ ಹಸ್ತಪತ್ರಿಕೆಗಳಲ್ಲಿ ಹಲವು ಚಿಕ್ಕ ಚಿಕ್ಕ ಲೇಖನಗಳನ್ನು ಬರೆದಿದ್ದು ಅವನ್ನು ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಹೀಗಾಗಿ ಪತ್ರಿಕೋದ್ಯಮಕ್ಕೆ ತನ್ನ ಒಲವು ದಿನೇ ದಿನೇ ಹೆಚ್ಚುತ್ತಿದೆ. ಮಂಗಳೂರಿನ 'ರಾಷ್ಟ್ರಬಂಧು' ಪತ್ರಿಕಾಲಯದಲ್ಲಿ ದುಡಿದು ಅನುಭವ ಪಡೆಯಬೇಕೆಂಬ ಆಸೆಯಿದೆ ಎಂದು, ಅಗತ್ಯಬಿದ್ದಲ್ಲಿ ನನ್ನನೆರವು ಕೋರಿದಾಗ ನಿಶ್ಚಯವಾಗಿಯೂ ನನ್ನಿಂದಾಗುವ ಸಹಾಯ ಮಾಡುವೆ ಎಂದು ಭರವಸೆ ಕೊಟ್ಟೆ. ಆಗ ಆ ಎಳೆ ಹರೆಯದ ವಿದ್ಯಾರ್ಥಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

ಆ ದಶಕದಲ್ಲಿ ಸಹಸ್ರಾರು ಯುವಕರು ಮಹಾತ್ಮ ಗಾಂಧಿಯವರ ಆದರ್ಶಗಳಿಂದ ಪ್ರಭಾವಿತರಾಗಿದ್ದರು. ಅಂಥವರಲ್ಲಿ ನಮ್ಮ ಶಿವರಾವ್ ಕೂಡಾ ಒಬ್ಬ. ಶುದ್ಧ ಖಾದಿ ಧರಿಸುತ್ತಿದ್ದ ಅವನು ಒಂದು ದಿನ ಪರೀಕ್ಷಾ 'ಹಾಲ್'ಗೆ ಬರೇ ಒಂದು ಖಾದಿ ಮುಂಡುಟ್ಟುಕೊಂಡು, ಮೈಗೆ ಒಂದು ತುಂಡು ಹೊದ್ದುಕೊಂಡು ಬಂದು ಬರೆಯಲಾರಂಭಿಸಿದ. ಆಗ ಪರೀಕ್ಷಾ ಮೇಲ್ವಿಚಾರಕರಲ್ಲೊಬ್ಬರಾದ ಎ. ಎಸ್. ಕರಾಟ್ (A.S. Karat) ಎಂಬವರು ಅದಕ್ಕೆ ಆಕ್ಷೇಪವೆತ್ತಿದರು. ಅಂತಹ ಉಡುಗೆ ಪರೀಕ್ಷಾ ನಿಯಮದ ಉಲ್ಲಂಘನೆಯೆಂದು ವಾದಿಸಿದರು. ಪರೀಕ್ಷೆ ಮುಗಿದ ಅನಂತರ ಮುಖ್ಯೋಪಾಧ್ಯಾಯರು ಶಿವರಾಯನನ್ನೂ ಮೇಲ್ವಿಚಾರಕರನ್ನೂ ಕರೆಸಿ ಕರಾಟರು ಎತ್ತಿದ ಆಕ್ಷೇಪದ ವಿಷಯವನ್ನು ತಿಳಿಸಿದರು. ತುಸು ಚರ್ಚೆ ನಡೆಯಿತು. ಶಿವರಾವ್ ತನ್ನನ್ನು ಸಮರ್ಥಿಸಿಕೊಂಡಾಗ, ಆತ ಗಾಂಧಿಜಿಯವರ ಆದರ್ಶ, ತತ್ತ್ವಗಳನ್ನು ಆಳವಾಗಿ ಅಭ್ಯಸಿಸಿದ್ದು ವಿದಿತವಾಯಿತು. ವಿನಯ ಸಂಪನ್ನನಾದ ಆತ ತನ್ನ ಗುರುವಿನ ಆದೇಶಕ್ಕೆ ತಲೆಬಾಗಿ ಮರುದಿನ ಎಂದಿನಂತೆ ಅಂಗಿ ಧರಿಸಿಕೊಂಡು ಬಂದಾಗ ಸಮಸ್ಯೆಯು ಬಗೆಹರಿಯಿತು.

ಸರಿ, ಎರಡು ತಿಂಗಳು ಕಳೆಯಿತು. ಒಂದು ದಿನ ಶಿವರಾಯ ನನ್ನಲ್ಲಿಗೆ ಬಂದ. ತುಂಬ ಅಂಕಗಳನ್ನು ಗಳಿಸಿ 'ಪಾಸ್' ಆದ ಶುಭವಾರ್ತೆ ಹೇಳಿದಾಗ ನಾನೂ ಹರ್ಷಭರಿತನಾದೆ.

ಅನಂತರ ಕೆಲವು ವರ್ಷಗಳ ಕಾಲ "ರಾಷ್ಟ್ರಬಂಧು"ವಿನಲ್ಲಿ ಶ್ರದ್ಧೆಯಿಂದ ದುಡಿದು ಸಂಪಾದಕ ಕಡೆಂಗೋಡ್ಲು ಶಂಕರ ಭಟ್ಟರ ಶ್ಲಾಘನೆಗೆ ಅರ್ಹನಾದ. ○

'ಕಿಶೋರ'

- ಎನ್. ಸುಬ್ಬರಾವ್

ಸುಮಾರು ೪೯–೫೦ ವರ್ಷಗಳ ಹಿಂದಿನ ಮಾತು. ನಾನು ಆಗ 'ರಾಷ್ಟ್ರಬಂಧು' ವಾರಪತ್ರಿಕೆಯ ಬಳಗದಲ್ಲಿದ್ದೆ. ಪತ್ರಿಕೆಯಲ್ಲಿ ಪ್ರಕಟನೆಗಾಗಿ ಆಗ (ಸುಮಾರು ೧೯೩೭) ಸುಳ್ಯದಿಂದ 'ಕಿಶೋರ', 'ಕುಳುಕುಂದ', 'ಕತೆಗಾರ' ಎಂಬ ಬೇರೆ ಬೇರೆ ಹೆಸರುಗಳಿಂದ ಚಿಕ್ಕ ಕತೆಗಳು ಬರುತ್ತಿದ್ದವು. ಅವುಗಳನ್ನು ಕಳುಹಿಸುತ್ತಿದ್ದವರು ತಮ್ಮ ವಿಳಾಸವನ್ನು, 'ಕುಳುಕುಂದ ಶಿವರಾಯ, ಟಾಲ್‌ಗೇಟ್ ಬಳಿ, ಸುಳ್ಯ' ಎಂದಷ್ಟೆ ಕೊಡುತ್ತಿದ್ದರು. 'ರಾಷ್ಟ್ರಬಂಧು'ವಿನಲ್ಲಿ ಈ ಕತೆಗಳು ಪ್ರಕಟವಾಗುತ್ತಿದ್ದುವು.

ಒಂದೆರಡು ವರ್ಷಗಳ ಬಳಿಕ, ಇವರ ಕತೆಗಳು ಸುಳ್ಯದ ಬದಲು ನೀಲೇಶ್ವರದಿಂದ (ರಾಜಾಸ್ ಹೈಸ್ಕೂಲ್, ನೀಲೇಶ್ವರ) ಬರತೊಡಗಿದುವು. ಆಗ 'ರಾಷ್ಟ್ರಬಂಧು' ಬಳಗದಲ್ಲಿದ್ದ ನಾವು, ಈ 'ಕಿಶೋರ' ಅರ್ಥಾತ್ ಕುಳುಕುಂದ ಶಿವರಾಯ ಶಾಲಾ ಅಧ್ಯಾಪಕರಾಗಿರಬೇಕು. ಮಾಸ್ತರರಿಗೆ ಸುಳ್ಯದಿಂದ ನೀಲೇಶ್ವರಕ್ಕೆ ವರ್ಗವಾಯಿತು ಎಂದೇ ಭಾವಿಸಿದ್ದೆವು.

೧೯೪೧ರ ಆದಿಯ ಭಾಗದಲ್ಲಿ ಕಾಸರಗೋಡು ತಾಲೂಕು ವಿದ್ಯಾರ್ಥಿಗಳ ಸಮ್ಮೇಳನವೊಂದು ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಸಮಾವೇಶಗೊಂಡಿತ್ತು. ಈ ಸಮ್ಮೇಳನದ ಸಂಘಟಕರಲ್ಲೊಬ್ಬರಾಗಿದ್ದ ಕುಳುಕುಂದ ಶಿವರಾಯರ ಆಮಂತ್ರಣದ ಮೇರೆಗೆ, ಆಗ 'ರಾಷ್ಟ್ರಬಂಧು'ವಿನ ಸಹಾಯಕ ಸಂಪಾದಕರಾಗಿದ್ದ ಕೆ. ಕೃಷ್ಣರಾಯರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕೃಷ್ಣರಾಯರು ಸಮ್ಮೇಳನದಿಂದ ಮರಳಿ ಬಂದ ಮೇಲಷ್ಟೆ ಕುಳುಕುಂದ ಶಿವರಾಯರು ಅಧ್ಯಾಪಕರಲ್ಲ, ಕೇವಲ ೧೬–೧೭ ವರ್ಷದ ಹೈಸ್ಕೂಲ್ ವಿದ್ಯಾರ್ಥಿ ಎಂದು 'ರಾಷ್ಟ್ರಬಂಧು'ವಿನಲ್ಲಿದ್ದ ನಮಗೆ ಗೊತ್ತಾದುದು.

ಆ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದೊಡನೆಯೆ ‘ರಾಷ್ಟ್ರಬಂಧು’ ಆಫೀಸಿಗೆ ಬರುವುದಾಗಿಯೂ ಕೃಷ್ಣರಾಯರೊಡನೆ ಹೇಳಿದ್ದರಿಂದ ಈ ‘ಕಿಶೋರ’ ಕತೆಗಾರನ ಆಗಮನವನ್ನು ಕುತೂಹಲದಿಂದಲೆ ನಾವು ನಿರೀಕ್ಷಿಸಿಕೊಂಡಿದ್ದೆವು.

ನಾಲ್ಕು ವರ್ಷಗಳ ಹಿಂದೆ ಸುಳ್ಯದಿಂದ ಕತೆ ಕಳುಹಿಸುತ್ತಿದ್ದಾಗ ಈತ ೭ನೆಯ ಅಥವಾ ೮ನೆಯ ತರಗತಿಯ ಹೈಯರ್ ಎಲಿಮೆಂಟರಿ ಶಾಲಾಬಾಲಕ!

೧೯೪೧ರ ಜೇಸಿಗೆಯ ಒಂದು ದಿನ ಬಿಳಿಯ ಖಾದಿ ಮುಂಡು, ಬನಿಯನಿನಂಥ ತುಂಡು ಕೈಯ ಖಾದಿ ಜುಬ್ಬ, ಗಾಂಧಿ ಟೋಪಿ ಧರಿಸಿದ್ದ ಹುಡುಗನೊಬ್ಬನ ಆಗಮನವಾಯಿತು. ಈತನೇ ಕುಳಕುಂದ ಶಿವರಾಯ ಎಂದು ಕೃಷ್ಣರಾಯರು ನಮಗೆಲ್ಲ ಪರಿಚಯ ಮಾಡಿಸಿಕೊಟ್ಟರು. ಸಂಪಾದಕ ಕಡೆಂಗೋಡ್ಲು ಶಂಕರ ಭಟ್ಟರ ಹಾಗೂ ಪತ್ರಿಕೆಯ ವ್ಯವಸ್ಥಾಪಕರಾಗಿದ್ದ ಕೆ. ಆರ್. ಆಚಾರ್ಯರ ಭೇಟಿಯೂ ಆಯಿತು. ಸ್ವಲ್ಪ ಸಮಯದಲ್ಲೇ ಶಿವರಾಯರು ‘ರಾಷ್ಟ್ರಬಂಧು’ವಿನ ಸಂಪಾದಕ ಬಳಗ ಸೇರಿಕೊಂಡು ನನ್ನ ಸಹೋದ್ಯೋಗಿಯಾದರು.

ಪತ್ರಿಕೋದ್ಯಮದ ಜತೆಗೆ ಸಮತಾವಾದಿ ಮಜೂರ ಸಂಘಟನೆ, ಮತ್ತಿತರ ಹಲವಾರು ಸಂಘ ಸಂಸ್ಥೆಗಳನ್ನು ಸಂಘಟಿಸಿ ಅವುಗಳ ಕೇಂದ್ರಬಿಂದುವಾಗಿ ದುಡಿಯ ತೊಡಗಿದರು.

ದಕ್ಷಿಣ ಕನ್ನಡ ಜಿಲ್ಲೆಯ ದಿನ ಪತ್ರಿಕೆಯಾಗಿದ್ದ ‘ನವಭಾರತ’ದ ಸಂಪಾದಕ ವಿ.ಎಸ್. ಕುಡ್ವರ ಕಣ್ಣಿಗೆ ಈ ತರುಣ ಬರಹಗಾರ ಬಿದ್ದರು. ಮುಂದೆ ‘ರಾಷ್ಟ್ರಬಂಧು’ವಿನ ಜತೆಗೆ ‘ನವಭಾರತ’ದ ವರದಿಗಾರ ಕೂಡ ಆದರು. ಆಗಲೇ ಅಖಿಲ ಕರ್ನಾಟಕ ಪತ್ರಿಕೋದ್ಯಮಿಗಳ ಮಹಾ ಸಮ್ಮೇಳನವೊಂದನ್ನು ಮಂಗಳೂರಲ್ಲಿ ಅತಿ ವಿಜೃಂಭಣೆಯಿಂದ ಜರಗಿಸಲಾಯಿತು. ಅಖಿಲ ಕರ್ನಾಟಕದ ಆ ಕಾಲದ ಹಿರಿಯ ಪತ್ರಿಕೋದ್ಯೋಗಿಗಳೆಲ್ಲರೂ ಇದರಲ್ಲಿ ಭಾಗವಹಿಸಿದ್ದರು. ವಿ. ಎಸ್. ಕುಡ್ವ, ಹಿರಿಯಡ್ಕ ರಾಮರಾಯ ಮಲ್ಯ, ಹುರುಳಿ ಭೀಮರಾವ್ ಮೊದಲಾದ ಹಿರಿಯರನ್ನು ಮುಂದಿಟ್ಟುಕೊಂಡು ಈ ಸಮ್ಮೇಳನದ ಪ್ರೇರಕಶಕ್ತಿಯಾಗಿ ದುಡಿದವರು ಶಿವರಾಯರು.

ಮಂಗಳೂರಿಗೆ ಬಂದು ಮೂರು-ನಾಲ್ಕು ವರ್ಷಗಳಾಗುತ್ತಲೆ ಶಿವರಾಯರ ಚಟುವಟಿಕೆಗಳಿಗೆ ಈ ನಗರವು ಕಿರಿದೆನಿಸತೊಡಗಿತು. ಬೆಂಗಳೂರಿಗೆ ಪಯಣ ಬೆಳೆಸಿದರು. ಆಗೊಮ್ಮೆ ಈಗೊಮ್ಮೆ ಮಂಗಳೂರಿಗೆ ಬಂದಾಗ ಭೇಟಿಯಾಗುತ್ತಿದ್ದೆವು. ಸಮತಾವಾದಿ ಪಕ್ಷದ ಮೇಲೆ ನಿರ್ಬಂಧವಿದ್ದಾಗ ಭೂಗತರಾಗಿ ಮಂಗಳೂರಿಗೆ ಬಂದಾಗಲೂ ನನ್ನನ್ನು ಕಾಣದಿರುತ್ತಿರಲಿಲ್ಲ.

ಇದು ನಾನು ಕಂಡ ‘ಕಿಶೋರ’ ಶಿವರಾಯರು ಅರ್ಥಾತ್ ನಿರಂಜನರು.

ಧೀರ ಚೇತನ

-ಕಯ್ಯಾರ ಕಿಞ್ಞಣ್ಣ ರೈ

೧೯೪೧ರ ಸುಮಾರಿಗೆ ಎಂದು ನೆನಪು. ಮಂಗಳೂರು ಶಾರದಾ ಮುದ್ರಣಾಲಯದ ಮಾಳಿಗೆಯಲ್ಲಿ 'ಸ್ವದೇಶಾಭಿಮಾನಿ' ಪತ್ರಿಕೆಯ ಕಚೇರಿಯಲ್ಲಿ ನಾನು ಕೆಲಸದಲ್ಲಿದ್ದೆ. ತುಂಬಾ ಪುಟಗಳಿದ್ದ ವಾರಪತ್ರಿಕೆಯದು; ಹೆಚ್ಚಿನ ಪುಟಗಳನ್ನು ನಾನೇ ತುಂಬಿಸಬೇಕಾಗಿತ್ತು. ಬಿಡುವಿಲ್ಲದ ದುಡಿಮೆ; ತಲೆ ಕೆಳಗೆ ಹಾಕಿ ಬರೆಯುತ್ತಾ ಇದ್ದವನು ಏನೋ ಕಾಲ ಸಪ್ಪಳ ಕೇಳಿದಂತಾಗಿ ತಲೆಯೆತ್ತಿ ನೋಡಿದೆ. ದೊರಗು ಖಾದಿಯ ಮುಂಡು ಉಟ್ಟ, ಅರ್ಧತೋಳಿನ ಚಿಕ್ಕ ಅಂಗಿ ಹಾಕಿದ, ತಲೆಗೆ ಗಾಂಧಿ ಟೋಪಿ ಧರಿಸಿದ ಯುವಕನನ್ನು ನೋಡಿದೆ.

'ನಾನು ಕುಳುಕುಂದ ಶಿವರಾವ್'

'ಬನ್ನಿ, ಕುಳಿತುಕೊಳ್ಳಿ'

ಹತ್ತಿರದ ಆಸನದಲ್ಲಿ ಕುಳಿತುಕೊಂಡು ಮಾತುಕತೆಗೆ ತೊಡಗಿದೆವು. ಕುಳುಕುಂದ ಶಿವರಾವ್ ಮುಖಪರಿಚಯ ನನಗೆ ಇಲ್ಲವಾದರೂ, ಅವರ ಲೇಖನಗಳನ್ನು ಜಿಲ್ಲೆಯ ಪತ್ರಿಕೆಗಳಲ್ಲಿ ಓದಿದ್ದೆ; ಬರೆಹಗಳಲ್ಲಿನ ತೀಕ್ಷ್ಣತೆಗೆ ಮೆಚ್ಚಿದ್ದೆ. 'ಕುಳುಕುಂದ', 'ಕು.ಶಿ.ರಾ.' ಇತ್ಯಾದಿ ಗುಪ್ತನಾಮಗಳಲ್ಲಿ ಬರೆಯುತ್ತಿದ್ದ ವ್ಯಕ್ತಿ ಒಬ್ಬರೇ ಎನ್ನುವಷ್ಟು ನಾನು ತಿಳಿದುಕೊಂಡಿದ್ದೆ. ಆದರೆ ಅಂತಹ ತೀಕ್ಷ್ಣವಾದ ಬರೆಹ ಬರೆಯಬಲ್ಲ ವ್ಯಕ್ತಿ ಇಷ್ಟು ಎಳೆಯ ವಯಸ್ಸಿನವರು, ಇಷ್ಟು ಸರಳತೆಯವರು ಎಂದು ಅವರನ್ನು ವ್ಯಕ್ತಿಶಃ ಕಾಣುವಲ್ಲಿಯ ವರೆಗೆ ನಾನು ಎಣಿಸಿರಲಿಲ್ಲ.

ಕೆಲವೇ ನಿಮಿಷಗಳಲ್ಲಿ ನಾವಿಬ್ಬರೂ ಎಷ್ಟೋ ಕಾಲದಿಂದ ಆತ್ಮೀಯರಾಗಿದ್ದವರಂತೆ ಹಲವಾರು ವಿಷಯಗಳ ಕುರಿತು ಬಿಚ್ಚುಮನಸ್ಸಿನಿಂದ ಮಾತಾಡಿದೆವು. ನನ್ನಂತೆ ಅವರೂ ಪತ್ರಿಕೋದ್ಯಮಿಯಾಗಲು ಬಂದವರೆಂದು ತಿಳಿಯಿತು. ಸಮಾನಶೀಲವ್ಯಸನ ನಮ್ಮಿಬ್ಬರ ಗೆಳೆತನವನ್ನು ಇನ್ನಷ್ಟು ಪ್ರಬಲವಾಗಿ ಬೆಸೆಯಿತು.

* * * *

'ರಾಷ್ಟ್ರಬಂಧು'ಪತ್ರಿಕೆಯಲ್ಲಿ ಕುಳುಕುಂದ ಶಿವರಾವ್ ಪತ್ರಿಕೋದ್ಯಮಿಯಾಗಿ ಸೇರಿದರು. 'ರಾಷ್ಟ್ರಬಂಧು'ವಿನ ವಾತಾವರಣ ಸಾಹಿತ್ಯ, ರಾಜಕೀಯದ ವಾತಾವರಣ. ಕವಿಶ್ರೇಷ್ಠರಾದ ಕಡೆಂಗೋಡ್ಲು ಶಂಕರ ಭಟ್ಟರು ಅದರ ಸಂಪಾದಕರು. ದೇಶಭಕ್ತರೂ ಮುಂದೆ ಪಾರ್ಲಿಮೆಂಟು ಸದಸ್ಯರೂ ಆದ ಕೆ. ಆರ್. ಆಚಾರ್ಯರು ಸಂಚಾಲಕರು.

ಕಡೆಂಗೋಡ್ಲು ಅವರ ಸಂಪಾದಕೀಯ ಲೇಖನ ತುಂಬಾ ಹರಿತವಾದುದು. ಕೆ. ಆರ್. ಆಚಾರ್ಯರ ರಾಜಕೀಯ ವಿಚಾರಧಾರೆಯೂ ನಿರ್ಭಯದ್ದು; ಆ ಪರಿಸರದಲ್ಲಿ ಕುಳುಕುಂದ ಶಿವರಾಯರಿಗೆ ಸಾಹಿತ್ಯ, ಪತ್ರಿಕೋದ್ಯಮ ಹಾಗೂ ರಾಜಕೀಯಗಳ ಒಳ್ಳೆಯ ತರಬೇತಿ ಪಡೆಯಲು ಹೆಚ್ಚಿನ ಅನುಕೂಲ ಆಗಿರಬೇಕು. ಕೆಲವೇ ಕಾಲದಲ್ಲಿ ಕುಳುಕುಂದರ ಹೆಸರು ಕತೆಗಾರರಾಗಿಯೂ, ಹರಿತಲೇಖನದ ಪತ್ರಿಕೋದ್ಯಮಿಯಾಗಿಯೂ ಎಲ್ಲೆಡೆಯಲ್ಲೂ ಕೇಳುವಂತಾಯಿತು.

* * * *

ಆ ಕಾಲದಲ್ಲಿ ಸಂಘಟನೆಯೂ ನಮಗೆಲ್ಲಾ ಪ್ರಿಯವಾದ ಕಾರ್ಯ. ದಾಸ್ಯದ ವಿರುದ್ಧ ದೇಶ ಸಂಘಟಿತವಾಗಬೇಕು; ಶೋಷಣೆಯ ವಿರುದ್ಧ ಹೋರಾಡಬೇಕು; ಬಡತನ, ದೀನತೆಗಳು ಹೋಗಿ ಸರ್ವರೂ ಸಮಸುಖಿಗಳಾಗಬೇಕು-ಇದು ಸಂಘಟನೆಗಳ ಗುರಿ. ವಿದ್ಯಾರ್ಥಿ ಸಂಘಟನೆ, ಪತ್ರಿಕೋದ್ಯೋಗಿಗಳ ಸಂಘಟನೆ ಇಂತಹವುಗಳಲ್ಲಿ ನಾವು ಜತೆಜತೆಯಾಗಿ ದುಡಿದೆವು. ಕುಳುಕುಂದ ಶಿವರಾಯರು ಕಾರ್ಮಿಕ ಸಂಘಟನೆಯಲ್ಲಿಯೂ ಸೇರಿಕೊಂಡಿದ್ದರು. ಗಾಂಧಿವಾದದಿಂದ ತುಸುದೂರ ಸರಿದು ಎಡಪಕ್ಷವಾಗಿ ಕಮ್ಯೂನಿಸ್ಟ್ ತತ್ತ್ವ ಪ್ರಣಾಳಿಕೆಯಲ್ಲಿ ಹೆಚ್ಚಿನ ಆಸಕ್ತಿ ಆಗ ಅವರಲ್ಲಿ ತಲೆದೋರಿತ್ತು ಎಂದು ನಾನು ಕಂಡುಕೊಂಡೆ. ೧೯೪೨ರ 'ತೊಲಗಿ ಭಾರತದಿಂದ' ಚಳವಳಿಯನ್ನು ಸಮರ್ಥಿಸಿದ ನಾನು, ಆ ಸಂಧಿಕಾಲದಲ್ಲಿ ಕುಳುಕುಂದ ಶಿವರಾಯರು ತಾತ್ತ್ವಿಕವಾಗಿ ಕಮ್ಯೂನಿಸ್ಟ್ ಪ್ರಭಾವಕ್ಕೊಳಗಾದ ವರ್ತನೆಯನ್ನು ಸರಿಯಾಗಿ ಅರ್ಥಮಾಡಿಕೊಂಡೆನಾದರೂ, ಅದರಿಂದ ನಮ್ಮೊಳಗಿನ ಗೆಳೆತನಕ್ಕೆ ಯಾವುದೇ ಕುಂದು ಇಂದಿನ ವರೆಗೂ ಬಂದಿಲ್ಲ.

"ಕ್ರಮೇಲಕಂ ನಿಂದತಿ ಕೋಮಲೇಚ್ಛುಃ
ಕ್ರಮೇಲಕಃ ಕಂಟಕಲಂಪಟಸ್ತಂ ।
ಪ್ರೀತೌ ತಯೋರಿಷ್ಟಭುಜೋಸ್ಸಮಾಯಾಂ
ಮಧ್ಯಸ್ಥತಾಸ್ತ್ಯೈಕತರೋಪಹಾಸಃ ॥"

ಮೃದುವಾದ ಹುಲ್ಲನ್ನು ತಿನ್ನುವ ಪಶು, ಹರಿತ ಮುಳ್ಳನ್ನು ಜಗಿಯುವ ಒಂಟೆಯನ್ನು ನೋಡಿ, ಅಯ್ಯೊ ! ಇದು ಎಂತಹ ಆಹಾರ ತಿನ್ನುತ್ತದೆ ಎಂದು ನಗುತ್ತದಂತೆ! ಅದೇ ರೀತಿ ಕೋಮಲವಾದ ಹುಲ್ಲನ್ನು ತಿನ್ನುವ ಪಶುವನ್ನು ನೋಡಿ, ಮುಳ್ಳು ತಿನ್ನುವ ಒಂಟೆ, ಅಯ್ಯೊ! ಇದು ಎಂತಹ ಆಹಾರ ತಿನ್ನುತ್ತದೆ ಎಂದು ನಗುತ್ತದಂತೆ! ಅವರವರಿಗೆ ಅವರವರ ಆಹಾರ ರುಚಿ ! ಇಂತಹ ಸಂದರ್ಭಗಳಲ್ಲಿ ಮಧ್ಯಸ್ಥಿಕೆಯೇ ಮೇಲು.

ರಾಜಕೀಯ ವಿಚಾರಧಾರೆಯೂ ಅಂತೆಯೇ; ಕಾಂಗ್ರೆಸ್ಸಿಗರಂತೆ ಕಮ್ಯೂನಿಸ್ಟರೂ ದೇಶದ ಜನತೆಯ ಮೇಲಿನ ಅಭಿಮಾನದಿಂದಲೇ ದುಡಿದರು. ಎಲ್ಲಾ ನದಿಗಳ ನೀರೂ ಸಮುದ್ರವನ್ನೇ ಸೇರುವಂತೆ, ಎಲ್ಲಾ ದೇಶಪ್ರೇಮಿಗಳ ವಿಚಾರಧಾರೆಗಳೂ ಕಾರ್ಯಕಲಾಪಗಳೂ ರಾಷ್ಟ್ರದ ಏಳಿಗೆಗೆ ಸಹಾಯವಾದುವು ಎಂಬುದನ್ನು ಮರೆಯತಕ್ಕದ್ದಲ್ಲ.

*   *   *   *

ಕುಳುಕುಂದ ಶಿವರಾಯರನ್ನೂ ನನ್ನನ್ನೂ ಇನ್ನಷ್ಟು ಹತ್ತಿರವಾಗಿಸಿದ ಇನ್ನೂ ಹಲವು ವಿಷಯಗಳು ಆ ಕಾಲದಲ್ಲಿದ್ದುವು. ಸಾಹಿತ್ಯ, ಕಲೆ ಇತ್ಯಾದಿ ವಿಷಯಗಳಲ್ಲಿ ಮಂಗಳೂರಲ್ಲಿ ಆಗ ನವೋದಯದ ಸ್ಫೂರ್ತಿ ತುಂಬಿ ದುಡಿಯುತ್ತಿದ್ದ ಯುವಕರು ಅನೇಕರಿದ್ದರು. 'ಮಿತ್ರಮಂಡಳಿ' ಮಂಗಳೂರಿನ ಸಾಹಿತ್ಯ ಪ್ರಪಂಚದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಂಸ್ಥೆ. ಪೇಜಾವರ ಸದಾಶಿವರಾಯರ ಆ ಕಾಲದ ಸಂಘಟನಾ ಶಕ್ತಿ, ಸಾಹಿತ್ಯ ಶಕ್ತಿ ಎಲ್ಲವೂ 'ಮಿತ್ರಮಂಡಳಿ'ಯ ಕಾರ್ಯಕಲಾಪಗಳಲ್ಲಿ ಎದ್ದು ಕಾಣು ವಂತಿತ್ತು. ಪಂಜೆ, ಮುಳಿಯ, ಕಡೆಂಗೋಡ್ಲು, ಕಾಮತ್ ಇಂಥವರ ಬೆಂಬಲವೂ 'ಮಿತ್ರಮಂಡಳಿ'ಗಿತ್ತು. ಪೇಜಾವರರ ಅಕಾಲ ನಿಧನದಿಂದ ಒಮ್ಮೆ 'ಮಿತ್ರಮಂಡಳಿ'ಯ ಕೆಲಸ ಸ್ಥಗಿತಗೊಂಡಿತು. ಪೇಜಾವರರ ಸಹಕಾರ್ಯಕರ್ತರಾಗಿದ್ದ ಜೆ. ವಾಮನ ಭಟ್ಟರ ಮೂಲಕ ಮತ್ತೆ 'ಮಿತ್ರಮಂಡಳಿ'ಯ ಕೆಲಸ ಪ್ರಾರಂಭಗೊಂಡಿತು; ಸಾಹಿತ್ಯ ಚಟುವಟಿಕೆಗಳು ತೊಡಗಿದುವು. ಅದೇ ಕಾಲಕ್ಕೆ 'ಪ್ರಕಾಶ್ ಎಸೋಸಿಯೇಶನ್' ಎಂಬ ಸಾಹಿತ್ಯ-ಸಾಂಸ್ಕೃತಿಕ ಸಂಸ್ಥೆಯೂ ಹುಟ್ಟಿಕೊಂಡಿತು. ಅದರ ಮೂಲಕವೂ ತುಂಬಾ ಕಾರ್ಯಕ್ರಮ ಜರಗುತ್ತಿತ್ತು. 'ಚಲಚ್ಚಿತ್ರ ವಿಮರ್ಶಕರ ಸಂಘ'ವೊಂದು ಪ್ರಾರಂಭ ವಾಯಿತು. ಅದೂ ರಭಸದ ಕೆಲಸ ನಡೆಸಿತು. ಇದರೊಂದಿಗೆ ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘವೂ ಸ್ಥಾಪನೆಗೊಂಡಿತು; ತುಂಬಾ ಕೆಲಸ ನಡೆಸಿತು. ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ಮದ್ರಾಸಿನ 'ಸ್ವದೇಶ ಮಿತ್ರನ್' ಸಂಪಾದಕರಾಗಿದ್ದ ಶ್ರೀನಿವಾಸನ್ ಅವರ ಅಧ್ಯಕ್ಷತೆಯಿಂದ ಜರಗಿತು. ಕರ್ನಾಟಕ ದಿಂದ ತಿ. ತಾ. ಶರ್ಮ, ಮೊಹರೆ ಹಣಮಂತರಾವ್, ಪಿ. ಆರ್. ರಾಮಯ್ಯ ಮೊದಲಾದ ಪ್ರಭೃತಿಗಳು ಬಂದು ಭಾಗವಹಿಸಿದ್ದರು. ಆ ಸಮ್ಮೇಳನದ ಸ್ವಾಗತ ಸಮಿತಿಯ ಜತೆಕಾರ್ಯದರ್ಶಿಗಳು ನಾನು ಮತ್ತು ಕುಳುಕುಂದ ಶಿವರಾವ್. ಸಮ್ಮೇಳನ ಅಭೂತಪೂರ್ವವಾಗಿ ಯಶಸ್ವಿಯಾಯಿತು.

*   *   *   *

'ಹಳ್ಳಿಗೆ ಹೋಗಿ' ಎನ್ನುವುದು ಗಾಂಧಿಜಿಯವರ ಸಂದೇಶ. ನನಗೆ ನಗರ ಜೀವನ ಅಷ್ಟಾಗಿ ಹಿಡಿಸಲಿಲ್ಲ-ನನ್ನ ಆರೋಗ್ಯಕ್ಕೂ. ಹಾಗಾಗಿ ನಾನು ೧೯೩೪ರಲ್ಲಿ ನನ್ನ ಹುಟ್ಟೂರಿಗೆ ಮರಳಿದೆ; ಹಳ್ಳಿಯ ಹೈಸ್ಕೂಲೊಂದರಲ್ಲಿ ಅಧ್ಯಾಪಕನಾದೆ. ಮತ್ತೆ

ಸ್ವಲ್ಪಕಾಲದಲ್ಲಿಯೇ ಕುಳುಕುಂದ ಶಿವರಾಯರೂ ಮಂಗಳೂರು ಬಿಟ್ಟ ಸುದ್ದಿ ತಿಳಿಯಿತು. ನಾನು ಹಿಂದೆ ಹೇಳಿದಂತೆ ಕಮ್ಯೂನಿಸ್ಟ್ ತತ್ತ್ವ ಪ್ರಣಾಳಿಕೆಯಲ್ಲಿ ಆಸಕ್ತರಾಗಿದ್ದ ಅವರಿಗೆ, ಅದರ ಕಾರ್ಯಕಲಾಪಗಳೂ ತುಂಬಾ ಇದ್ದಿರಬೇಕು. ಅವರೂ ಮಂಗಳೂರು ಬಿಟ್ಟು ಮೈಸೂರೋ, ಬೆಂಗಳೂರೋ, ಧಾರವಾಡವೋ ಅಲ್ಲೆಲ್ಲಾ ಸುತ್ತಾಡಿದರು. ಹೋದಹೋದಲ್ಲಿ ಪತ್ರಿಕೋದ್ಯಮವನ್ನೂ ಕೈಗೊಂಡರು. ಅಂಕಣ ಬರೆಹಗಾರರಾಗಿಯೂ ದುಡಿದರು. ಮಂಗಳೂರಲ್ಲಿ ಇರುವಾಗ ನಡೆದ ಇತಿಹಾಸ ಪ್ರಸಿದ್ಧ ಕಯ್ಯೂರು ಮೊಕದ್ದಮೆಯ ಹಿನ್ನೆಲೆಯಲ್ಲಿ ತನ್ನ ಪ್ರಖ್ಯಾತ 'ಚಿರಸ್ಮರಣೆ' ಕಾದಂಬರಿಯನ್ನೂ ಬರೆದರು.

* * * *

ಮತ್ತೆ ಪ್ರತ್ಯಕ್ಷ ರಾಜಕೀಯ ಚಟುವಟಿಕೆ ಕಡಿಮೆಯಾದಂತೆ, ಕಡಿಮೆ ಮಾಡಿದಂತೆ ತೋರಿತು; ಅಂತೆಯೇ ಕಾದಂಬರಿಗಳು, ಕಥಾಸಂಗ್ರಹಗಳು, ಅಂಕಣ ಲೇಖನ ಸಂಗ್ರಹಗಳು, ಹೀಗೆ ಹತ್ತಾರು ವಿಧದ ಅನೇಕ ಸೃಜನಾತ್ಮಕ ಸಾಹಿತ್ಯ ಕೃತಿಗಳನ್ನು ರಚಿಸಿದರು. ಈ ಕಾಲಕ್ಕೆ ಕುಳುಕುಂದರಿಗೆ ಹೊಸ ಹುಟ್ಟು ಬಂತು; ಅವರು 'ನಿರಂಜನ'ರಾದರು. ಇಂದು ಕುಳುಕುಂದ ಶಿವರಾವ್ ಹೆಸರು ಮಾಸಿ ಹೋಗಿ 'ನಿರಂಜನ' ಹೆಸರೇ ಪ್ರಖ್ಯಾತವಾಗಿ ನಿಂತಿದೆ. ಅವರ ಕೈಹಿಡಿದ ಶ್ರೀಮತಿ ವೆಂಕಟಲಕ್ಷ್ಮಿ ಅವರೂ ಅನುಪಮಾ ಹೆಸರಿನಿಂದಲೇ ಇಂದು ಖ್ಯಾತರಾಗಿದ್ದಾರೆ. ಅನುಪಮಾ ಮತ್ತು ನಿರಂಜನ-ಈ ಸಾಹಿತಿ ದಂಪತಿಗಳು ಇಂದು ಕನ್ನಡ ಸಾಹಿತ್ಯಲೋಕ ಮೆಚ್ಚುವಂತಹ ಹಲವಾರು ಕೃತಿರತ್ನಗಳನ್ನು ಕಾಣಿಕೆಯಿತ್ತು ಕೃತಾರ್ಥರಾಗಿದ್ದಾರೆ. ಅವರ ಇಬ್ಬರು ಸುಪುತ್ರಿಯರು - ತೇಜಸ್ವಿನಿ, ಸೀಮಂತಿನಿಯರೂ, ಈ ಮಾತಾಪಿತೃಗಳ ಖ್ಯಾತಿಗೆ ತಕ್ಕಂತೆ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡಿರುವರೆಂಬುದು ಅಭಿನಂದನೀಯ.

* * * *

ನಿರಂಜನರು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಶೈಲಿಯೊಂದನ್ನು ನಿರ್ಮಿಸಿದ್ದಾರೆ. ನಾನು ಹಿಂದೆ ಹೇಳಿರುವಂತೆ ಅವರ ಲೇಖನಿ ತೀಕ್ಷ್ಣ, ಆದರೆ ಅತಿ ಸರಳ. ಹರಿತವಾದ ಆ ಬರೆಹಗಳಲ್ಲಿ ಪ್ರತಿವಾಕ್ಯ, ಪ್ರತಿಪದದಲ್ಲಿಯೂ ಸಾಹಿತ್ಯಸಿದ್ಧಿ ಎದ್ದು ತೋರುತ್ತದೆ. ರೂಪಕಾದಿ ಅಲಂಕಾರಗಳು ಮಾತು ಮಾತಿಗೆ ಸಿಗುತ್ತವೆ. ಶಾಲೆಯಲ್ಲಿ ಕೇವಲ ಎಸ್.ಎಸ್.ಎಲ್.ಸಿ. ವರೆಗೆ ಸಾಂಕೇತಿಕವಾಗಿ ಓದಿದ್ದರೂ, ವಿಶಾಲ ಪ್ರಪಂಚ ವಿಶ್ವವಿದ್ಯಾನಿಲಯದಲ್ಲಿ ಅವರು ಉತ್ತಮ ಜೀವನಶಿಕ್ಷಣ ಪಡೆದಿದ್ದಾರೆ. ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡುತ್ತಾರೆ. ಸಂಶೋಧನೆಯಲ್ಲಿಯೂ ಇತ್ತೀಚೆಗೆ ಆಸಕ್ತಿ ತೋರಿಸಿದ್ದಾರೆ. ಮುಂದೆ ಬರೆಯುವ ಮಹಾಕಾದಂಬರಿಯೊಂದಕ್ಕೆ ಅವರು

ಮಾಡಿ ಇಟ್ಟಿರುವ ಅಗಾಧವಾದ ಟಿಪ್ಪಣಿಗಳನ್ನು ನೋಡಿ ನಾನು ಅಚ್ಚರಿಪಟ್ಟಿದ್ದೇನೆ. ಪಾರ್ಶ್ವವಾಯು ಪೀಡಿತರಾಗಿ ಶರೀರ ಜರ್ಝರಿತವಾಗಿದ್ದರೂ ಬುದ್ಧಿಶಕ್ತಿ ಇನ್ನೂ ತೀಕ್ಷ್ಣವಾಗಿರುವುದನ್ನು ಕಂಡಿದ್ದೇನೆ. ತನ್ನ ಒಡನಾಡಿ ಡಾ। ಅನುಪಮಾ ಕೇನ್ಸರ್ ಬಾಧಿತರಾಗಿದ್ದರೂ, ಅವರ ಚಿತ್ತಸ್ಥೈರ್ಯ ಬೆರಗುಗೊಳಿಸುವಂತಹುದು. ನನ್ನ ಈಚೆಗಿನ 'ಪಂಚಮಿ' - ಐದು ಉಪನಿಷತ್ ಕಾವ್ಯಗಳನ್ನು 'ಮೂರು ಸಲ ಓದಿದೆ' - ಎಂದು ಬರೆದ ಅವರ ಅಭಿಪ್ರಾಯವನ್ನು ಓದಿ ನಿರಂಜನರ ಅಭ್ಯಾಸದ ವೈಶಾಲ್ಯಗಳನ್ನು ತಿಳಿದು ತುಂಬಾ ಮೆಚ್ಚಿದ್ದೇನೆ.

ನಿರಂಜನ ಪ್ರಾಯದಲ್ಲಿ ನನಗಿಂತ ಸುಮಾರು ಹತ್ತು ವರ್ಷಗಳಿಗೆ ಸಣ್ಣವರು. ಆದರೆ ಹಿರಿದಾದ ಈ ಧೀರಚೇತನಕ್ಕೆ ನನ್ನ ನಮನ. ○

ಅಂದಿನ 'ಕುಳುಕುಂದ' ಇಂದಿನ ನಿರಂಜನ

• ಬಿ. ವಿ. ಬಾಳಿಗ

ನಾ ಕಂಡ ನಿರಂಜನರು ಇಂದಿಗೆ ಸುಮಾರು ೪೫ ವರ್ಷಗಳ ಹಿಂದಿನ ಕುಳುಕುಂದ ಶಿವರಾಯರು. ಆಗ ಅವರು ಪತ್ರಿಕೋದ್ಯೋಗಿಯಾಗಿದ್ದರು. ಆ ಕಾಲದಲ್ಲಿ ಮಂಗಳೂರಲ್ಲಿ 'ಸ್ವದೇಶಾಭಿಮಾನಿ', 'ಕಂಠೀರವ', 'ರಾಷ್ಟ್ರಬಂಧು' ಮತ್ತು 'ಪ್ರಭಾತ' ಸಾಪ್ತಾಹಿಕಗಳು ಒಳ್ಳೆಯ ಹೆಸರುಮಾಡಿದ್ದುವು. 'ರಾಷ್ಟ್ರಬಂಧು' ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಕುಳುಕುಂದ ಶಿವರಾಯರು ದುಡಿಯುತ್ತಿದ್ದರು. ಕಡೆಂಗೋಡ್ಲು ಶಂಕರಭಟ್ಟ, ಕೃಷ್ಣರಾಯರಂಥ ಪತ್ರಿಕಾ ದಿಗ್ಗಜಗಳ ಸಾನಿಧ್ಯ ಕುಳುಕುಂದರಿಗೆ ಆಗ ಒದಗಿತ್ತು. ಇದೇ ವೇಳೆ 'ನವಭಾರತ' ಪತ್ರಿಕೆಗೆ ಬಾತ್ಮೀದಾರರಾಗಿಯೂ ಅವರು ನೆರವು ನೀಡಿದ್ದರು. ನನ್ನ ಮತ್ತು ಕುಳುಕುಂದರ ಕೆಲವರ್ಷಗಳ ಅನ್ಯೋನ್ಯ ಮೈತ್ರಿಗೆ ಅನುವು ಮಾಡಿಕೊಟ್ಟದು ಈ ಸಂಬಂಧ. ನಾನು 'ನವಭಾರತ' ದೈನಿಕದಲ್ಲಿ ದುಡಿಯುವುದರೊಂದಿಗೆ ಪತ್ರಿಕೋದ್ಯಮಕ್ಕೆ ಕಾಲಿಡಲು ತೊಡಗಿದ್ದೆ.

ಬೆಳೆಯ ಗುಣ ಮೊಳಕೆಯಲ್ಲೇ ಕಂಡುಬರುವುದೆಂಬ ಮಾತಿನಂತೆ, ಮುಂದೆ ಪ್ರತಿಭಾವಂತ ಸಾಹಿತಿಯಾಗುವುದರ ಸೂಚನೆಯನ್ನು ಶಿವರಾಯರು ತಾವು ಪತ್ರಿಕೋದ್ಯಮಿಯಾಗಿ ಬರೆದ ಬರೆಹಗಳ ಹಾಗೂ ಕಥೆಗಳ ಮೂಲಕ ಮಾಡಿಕೊಟ್ಟಿದ್ದರು. 'ಕಯ್ಯೂರು ಮೊಕದ್ದಮೆ'ಯ ಬಗ್ಗೆ ಅವರ ಅಂದಿನ ವರದಿಗಳು, ಟೀಕೆ - ಟಿಪ್ಪಣಿಗಳು ಮುಂದೆ ವಿಮರ್ಶಕನಾಗುವ ಮೊನಚನ್ನು ಆಗಲೇ ಪ್ರತಿಬಿಂಬಿಸಿದ್ದವು.

'ಪ್ರಗತಿಶೀಲ ಸಾಹಿತ್ಯ'ದ ಪ್ರಥಮ ಪರಿಚಯವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಾಡಿಕೊಟ್ಟವರು ಕುಳುಕುಂದ ಶಿವರಾಯರು. ಜಿಲ್ಲೆಯಲ್ಲಿ ಕಮ್ಯೂನಿಸಂ ಬೆಳವಣಿಗೆಗೆ ಅವರು ನೀಡಿದ ಕೊಡುಗೆ ಗಣನೀಯ. ಒಟ್ಟಿನಲ್ಲಿ ಜನಸಾಮಾನ್ಯರ ಹಿತಚಿಂತನೆ, ಅವರ ಜೀವನ ಬೆಳಗಬೇಕೆಂಬ ಕಳಕಳಿ ಅವರ ಬರೆಹಗಳಲ್ಲಿ, ಭಾಷಣಗಳಲ್ಲಿ ಮೇಲೆದ್ದು ತೋರುತ್ತಿತ್ತು.

ಆ ಕಾಲದಲ್ಲಿ ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ನಡೆಸಿಕೊಂಡಿದ್ದ ಪ್ರಕಾಶ ಎಸೋಸಿಯೇಶನ್, ಚಲಚ್ಚಿತ್ರ ವಿಮರ್ಶಕರ ಸಂಘ, ಪ್ರಗತಿಶೀಲ ಲೇಖಕರ ಸಂಘ, ಇಂಡೋ - ಸೋವಿಯೆಟ್ ಮೈತ್ರಿಕೂಟ - ಇವೇ ಮೊದಲಾದ ಸಂಘ ಸಂಸ್ಥೆಗಳಲ್ಲಿ ಅವರು ಸಕ್ರಿಯ ಕಾರ್ಯಕರ್ತರಾಗಿದ್ದರು. ಈ ಸಂಘಗಳೆಲ್ಲಾ ಹೆಸರಿಗೆ ಮಾತ್ರ ಸಂಘಗಳಾಗಿರದೆ ಬಿರುಸಿನ, ಉತ್ಸಾಹದ ಚಟುವಟಿಕೆಗಳನ್ನು ನಡೆಸಿಕೊಂಡಿದ್ದುವೆಂಬುದನ್ನು ಮರೆಯಲಾಗುವುದಿಲ್ಲ.

'ನವಭಾರತ' ದೈನಿಕದ ಆರಂಭಿಕ ದೆಶೆಯಲ್ಲಿ ಪತ್ರಿಕೆಯ ಸಂಪಾದಕ ದಿ। ವಿ. ಎಸ್. ಕುಡ್ವರು ಮಂಗಳೂರಲ್ಲಿ ಅಖಿಲ ಕರ್ನಾಟಕ ಪತ್ರಿಕಾ ಸಮ್ಮೇಳನವೊಂದನ್ನು ಕರೆದಿದ್ದರು. ಆ ಸಮ್ಮೇಳನದ ಸ್ವಾಗತ ಸಮಿತಿಯಲ್ಲಿ ಕಯ್ಯಾರ ಕಿಞ್ಞಣ್ಣ ರೈ ಮತ್ತು ಕುಳುಕುಂದ ಶಿವರಾಯರು ಕಾರ್ಯದರ್ಶಿಗಳಾಗಿದ್ದರು. ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನವೊಂದು ಆ ಕಾಲದಲ್ಲೇ ಉಡುಪಿಯಲ್ಲಿ ನಡೆದಾಗ ಶಿವರಾಯರು ಅದರಲ್ಲೂ ಪ್ರಧಾನ ಪಾತ್ರ ವಹಿಸಿದ್ದಾರೆ. ಆ ಸಮ್ಮೇಳನದ ಕಾಲದಲ್ಲಿ ಕುಳುಕುಂದ ಶಿವರಾಯರು ನನಗೆ ದಿ। ತ.ರಾ.ಸು.ರವರ ಪರಿಚಯ ಮಾಡಿಕೊಟ್ಟ ವಿಚಾರವನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತೇನೆ.

ನನ್ನ ಜೀವಿತ ಕಾಲದಲ್ಲಿ ಮೂವರು ಶಿವರಾಯರ ನಿಕಟ ಪರಿಚಯ ನನಗಾಗಿದೆ. ಈ ಮೂವರಲ್ಲಿ ಪಾಶ್ಚಾತ್ಯ ಜಗತ್ತಿನಲ್ಲಿಯೂ ಭಾರತದ ಪ್ರತಿಭೆ ಬೆಳಗಿಸಿದ ಬೆನಗಲ್ ಶಿವರಾಯರೊಬ್ಬರು; ಜಿಲ್ಲೆಯ ಸಹಕಾರಿ ಚಳವಳಿಯ ಪಿತಾಮಹ ಮೊಳಹಳ್ಳಿ ಶಿವರಾಯರು ಇನ್ನೊಬ್ಬರು; ಪತ್ರಿಕಾ ಪ್ರಪಂಚದ ನನ್ನ ಸಹಪಾಠಿ ಕುಳುಕುಂದ ಶಿವರಾಯರು ಮೂರನೆಯವರು.

ಅಂದಿನ 'ಕುಳುಕುಂದ'ರೇ ಇಂದಿನ 'ನಿರಂಜನ'ರು. ಅಂದು ಓರ್ವ ಸಾಮಾನ್ಯ ಪತ್ರಿಕೋದ್ಯೋಗಿಯಾಗಿದ್ದವರು ಇಂದು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬಲು ಎತ್ತರಕ್ಕೆ ಏರಿದ್ದಾರೆ. ○

ಸ್ನೇಹಶೀಲ

- ಅಮ್ಮೆಂಬಳ ಶಂಕರನಾರಾಯಣ ನಾವಡ

ನನ್ನ ಹಾಗೂ ನಿರಂಜನರ ನಡುವೆ ಬೆಳೆದು ಬಂದ ಗೆಳೆತನ ಅರ್ಧಶತಮಾನದಷ್ಟು ಹಳೆಯದು. ಆದರೂ ಅದು ನಿತ್ಯನೂತನ, ಸತ್ಯಸುಂದರ. ೧೯೩೯ರಲ್ಲಿ ನಾನು ಕಾಸರಗೋಡು ತಾಲೂಕಿನ ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಹಳಗನ್ನಡ ವಿದ್ವಾನ್ ವಿದ್ಯಾರ್ಥಿಯಾಗಿದ್ದೆ. ಆ ಕಾಲದಲ್ಲಿ ಪುತ್ತೂರಿನಲ್ಲಿ ಶಿವರಾಮ ಕಾರಂತರ ನೇತೃತ್ವದಲ್ಲಿ ನಡೆಯುತ್ತಿದ್ದ ದಸರಾ ಕಾರ್ಯಕ್ರಮಕ್ಕೆ ನಾನು ಒಂದೆರಡು ವರ್ಷ ಹೋಗಿದ್ದೆ. ಅ.ನ.ಕೃ. ಭಾಷಣಗಾರರಾಗಿ ಬಂದ ವರ್ಷ, ಅಲ್ಲಿಗೆ ನನ್ನಂತೆ ಕುತೂಹಲದಿಂದ ಕುಳುಕುಂದ ಶಿವರಾಯರೂ ಬಂದಿದ್ದರು. ಆಗ ಅವರು ಸುಳ್ಯದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಎಳೆಯ ವಿದ್ಯಾರ್ಥಿ. ಆ ಎಳೆಯ ಹರೆಯದಲ್ಲೇ ಅವರು ಸಾಹಿತ್ಯದಲ್ಲಿ ಆಸಕ್ತಿಯನ್ನೂ, ಸಾಮರಸ್ಯವನ್ನೂ ಬೆಳೆಸಿಕೊಂಡ ರೀತಿ ಇಂದು ಸಾಹಿತ್ಯ ಪ್ರಪಂಚದಲ್ಲಿ ಅವರು ಏರಿದ ಎತ್ತರಕ್ಕೆ ಸಾಕ್ಷೀಭೂತವೆನ್ನಬಹುದು. ಅಂದು ಪುತ್ತೂರಿನಲ್ಲಿ ಆದ ನಮ್ಮ ಪರಿಚಯ ಕಾಲಕ್ರಮದಲ್ಲಿ ಆತ್ಮೀಯ ಸ್ನೇಹವಾಗಿ ಬೆಳೆದು ಇಂದಿನ ವರೆಗೆ ಹಸುರಾಗಿದೆ, ಹಸನಾಗಿದೆ. ನಮ್ಮಿಬ್ಬರ ಜೀವನದಲ್ಲಿ ಸ್ನೇಹಶೀಲ ಪ್ರವೃತ್ತಿ ಹಾಸುಹೊಕ್ಕಾಗಿದೆ.

೧೯೪೪ನೆಯ ಇಸವಿ. ಆಗ ನಾನು ಮಂಗಳೂರ ಶಾಲೆಯೊಂದರಲ್ಲಿ ಕನ್ನಡ ಶಿಕ್ಷಕ. ನಿರಂಜನರು ಮಂಗಳೂರಿನ ಕದ್ರಿಯಲ್ಲಿ ಇದ್ದುಕೊಂಡು 'ರಾಷ್ಟ್ರಬಂಧು'ವಿನಲ್ಲಿ ಪತ್ರಿಕೋದ್ಯಮಿ. (ಆಗಲೇ ಅವರು 'ರಾಷ್ಟ್ರಬಂಧು'ವಿನ ಸಾಹಿತ್ಯ ಸಂಚಿಕೆಗಳಲ್ಲಿ, ಬಸವರಾಜ ಕಟ್ಟೀಮನಿಯವರ 'ಉಷಾ' ಮಾಸಿಕದಲ್ಲಿ ಕತೆಗಾರರಾಗಿ ಮಿಂಚಿದುದು.)

ಆ ವರ್ಷ ನಾವಿಬ್ಬರೂ ಒಂದೇ ದೋಣಿಯ ಪಯಣಿಗರಾಗಿ ಧಾರವಾಡದ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನಕ್ಕೆ ಮತ್ತು ಅಲ್ಲಿಂದ ಮರುದಿನ ಸಾಂಗ್ಲಿ ರಬಕವಿಯಲ್ಲಿ ದಿ| ಶಿ. ಶಿ. ಬಸವನಾಳರ ಅಧ್ಯಕ್ಷತೆಯಲ್ಲಿ ನಡೆದ ಅ. ಕ. ಸಾಹಿತ್ಯ ಸಮ್ಮೇಳನಕ್ಕೆ ಕುತೂಹಲದ ಪ್ರೇಕ್ಷಕರಾಗಿ ಪ್ರವಾಸ ಕೈಕೊಂಡದ್ದು. ಆಗ ನಮ್ಮಿಬ್ಬರ ಕೈಯಲ್ಲಿ ಇದ್ದುದು ಒಂದೆರಡು ಅಂಗಿಬಟ್ಟೆಗಳನ್ನು ಇಟ್ಟುಕೊಳ್ಳಲು ಬರೇ ವಸ್ತ್ರದ ಕೈಚೀಲವೆಂದು ಮಾಸದ ನೆನಪು.

ಹಿಂದಿನಿಂದಲೂ ನಿರಂಜನರು ನನಗೆ ಬರೆದಿದ್ದ ಹಲವಾರು ಪತ್ರಗಳನ್ನು ಕಲೆಹಾಕಿ ಪ್ರಕಟಿಸಿದರೆ, ಅದು ಸಾಹಿತ್ಯಲೋಕದಲ್ಲಿ ಶಾಶ್ವತವಾಗಿ ಉಳಿಯತಕ್ಕ ಉತ್ಕೃಷ್ಟ ಪತ್ರಸಾಹಿತ್ಯ ಸಂಕಲನಕ್ಕೆ ಮಾದರಿಯಾಗಬಹುದು.

೧೯೫೪ರಲ್ಲಿ ನನಗೆ ಅವರು ಬರೆದ ಪತ್ರದ ಒಂದು ತುಣುಕನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಇಷ್ಟು ವಯಸ್ಸಾದರೂ ಉತ್ತಮ ಸಾಹಿತ್ಯ ಸೃಷ್ಟಿ ನನ್ನಿಂದ ಸಾಧ್ಯವಾಗಲಿಲ್ಲವೆಂಬ ನನ್ನ ಮನಸ್ಸಿನ ಅತೃಪ್ತಿಯನ್ನು ಆಗ ನಾನು ಪತ್ರದಲ್ಲಿ ತೋಡಿಕೊಂಡಿರಬಹುದೆಂದು ಕಾಣುತ್ತದೆ. ಅದಕ್ಕೆ ನಿರಂಜನರು ಬರೆದ ಈ ಉತ್ತರ ಬಹಳ ಮಾರ್ಮಿಕವಾದುದು.

"....ಹೃದಯದ ಮನಸ್ಸಿನ ಯೌವನವನ್ನು ಉಳಿಸಿಕೊಳ್ಳಲು ಸಮರ್ಥ ರಾಗುವವರು ನಡುವಯಸ್ಸಿನಲ್ಲಿ ಎಂದೇನು, ಮುಪ್ಪಿನಲ್ಲೂ ಯುವಕರಾಗಿಯೇ ಇರು ತ್ತಾರೆ! ನಿಮಗಾದರೋ ಇನ್ನೂ ನಾಲ್ವತ್ತು ಕೂಡ ಇಲ್ಲ. ಈ ವರೆಗಿನ ಸಾಹಿತ್ಯ ಸೃಷ್ಟಿಯಲ್ಲಿ ನಿಮಗೆ ಅತೃಪ್ತಿ ಇರುವುದೂ ಸಮಾಧಾನದ ವಿಷಯವೇ. 'ಅಮೋಘ' ಎಂದು ಜನ ಕೊಂಡಾಡುವ ಕೃತಿಯನ್ನು ಇನ್ನೂ ನೀವು ರಚಿಸಬಲ್ಲಿರಿ...."

ಇದು ಅವರ ಜೀವನದ ಅದಮ್ಯ ಉತ್ಸಾಹಕ್ಕೂ, ಇನ್ನೊಬ್ಬರಿಗೆ ಅದನ್ನು ಬೋಧಿಸುವುದಕ್ಕೂ ಎತ್ತಿ ಹಿಡಿದ ಕೈಗನ್ನಡಿಯೆನ್ನಬಹುದು.

ಅವರು ಅರ್ಧಾಂಗವಾತದಿಂದ ಬಳಲುತ್ತಿದ್ದರೂ, ಮಂಗಳೂರಿನ ಮೇಲಿನ ಪ್ರೀತಿಯಿಂದ ಕೆಲವು ವರ್ಷಗಳ ಮೊದಲು ಪತ್ನೀಪುತ್ರಿಯರನ್ನು ಕರೆದುಕೊಂಡು ಮಂಗಳೂರಿಗೆ ಬಂದಿದ್ದಾಗ ನಮ್ಮ ಮನೆಗೂ ಬಂದಿದ್ದರು. ಇದು ಅವರ ಹಳೆಯ ಸ್ನೇಹದ ದ್ಯೋತಕ.

ನನ್ನ ಅವರ ಜೀವನದಲ್ಲಿ ಸ್ನೇಹಶೀಲ ಪ್ರವೃತ್ತಿಹಾಸುಹೊಕ್ಕು. ಅದ್ದರಿಂದಲೇ ಬಹುಕಾಲದ ಬಳಿಕ ಅವರು ಬೆಂಗಳೂರಲ್ಲಿ ಸಂಪಾದಕರಾಗಿ ನಡೆಯಿಸಿದ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದಲ್ಲಿ ನನ್ನ ಚಿರಂಜೀವ ಎ.ವಿ. ನಾವಡನನ್ನು ಸಹ ಸಂಪಾದಕನಾಗಿ ನೇಮಿಸಿಕೊಂಡು, ಅವನ ಸಾಹಿತ್ಯದ ಸೃಜನಶೀಲತೆಯಲ್ಲಿ ಅವರು ಪರೋಕ್ಷವಾಗಿ ಸಾರಥಿಯಾದುದು. ○

ಅನುಪಮ ಸಾಧಕ

– ರಾ. ವೊ. ವಿಶ್ವಾಮಿತ್ರ

ನಿರಂಜನರ ಬದುಕಿನ ಬಗ್ಗೆ ಆಲೋಚಿಸಿದಾಗಲೆಲ್ಲಾ ನನಗೆ ಪ್ರೊ। ದೇ. ಜ. ಗೌ. ಅವರ ಹೋರಾಟದ ಬದುಕಿನ ನೆನಪಾಗುತ್ತದೆ. ಇವರಿಬ್ಬರ ಜೀವನದ ಹೋರಾಟವನ್ನೂ ಅನ್ಯೋನ್ಯ ಹೋಲಿಸುವಂತಿಲ್ಲ. ಅನುಪಮವಾದ ಹೋರಾಟ ದಿಂದ ಜೀವನವನ್ನು ಸಾರ್ಥಕ ಪಡಿಸಿದ ಸಾಧಕರು ನಿರಂಜನರು. ಅನುಪಮ ಸಾಧನೆ ಯಿಂದ ಸಿದ್ಧಿಯನ್ನು ಪಡೆದ ಕನ್ನಡಮ್ಮನ ವರಪುತ್ರರಲ್ಲಿ, ಧೀಮಂತ ವ್ಯಕ್ತಿಗಳಲ್ಲಿ ನಿರಂಜನರು ಒಬ್ಬರು ಎಂಬ ವಿಶೇಷ ಅಭಿಮಾನ ಅವರ ಬಗ್ಗೆ ನನಗಿದೆ.

ಕುಳುಕುಂದ ಶಿವರಾಯರನ್ನು ನಾನು ಪ್ರಥಮತಃ ನೋಡಿದ್ದು ಮಂಗಳೂರ 'ರಾಷ್ಟ್ರಬಂಧು' ಕಛೇರಿಯಲ್ಲಿ. ಹಳ್ಳಿಯಲ್ಲಿರುವ ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಯಾಗಿದ್ದ ನಾನು ಪರೀಕ್ಷೆಗೆಂದು ಬಂದವನು ಕತೆ, ಕವಿತೆ ಬರೆವ ಅಭ್ಯಾಸ ಇದ್ದುದರಿಂದ ಪತ್ರಿಕಾ ಕಛೇರಿಯ ಸಂದರ್ಶನ ಮಾಡಿದ್ದೆ. ನೀಟಾದ ಉಡುಪು ಧರಿಸಿದ್ದ ಶಿವರಾಯರು ಅಪರಿಚಿತನಾಗಿದ್ದ ನನ್ನಲ್ಲಿ ಮುಗುಳು ನಕ್ಕು ನಯ ವಾಗಿ ಮಾತನಾಡಿದ್ದರು. ಸೌಜನ್ಯ ಪೂರ್ಣವಾದ ಗಂಭೀರ ಸ್ವಭಾವ ಅವರದು. ಗೆಳೆಯರೆಂದರೆ ಅವರಿಗೆ ಜೀವ. ಹೊಸ ಬರೆಹಗಾರರಿಗೆ ಪ್ರೋತ್ಸಾಹ ಕೊಡುವ ಪ್ರವೃತ್ತಿ ಆಗಿನಿಂದಲೇ ಅವರಲ್ಲಿ ಬೆಳೆದು ಬಂದುದಾಗಿದೆ. ಆಗಲೇ ಶಿವರಾಯರ ಕೈ ಪರಿತವಾಗಿತ್ತು. ಬರವಣಿಗೆಯಲ್ಲಿ ಹೆಸರುಗಳಿಸಿದ್ದರು.

ಅವರು ಬಡತನದ ಬವಣೆಯಲ್ಲಿ ಬೆಂದ, ಯಾವುದೇ ಕಷ್ಟವನ್ನೂ ಎದುರಿಸಿ ಮುನ್ನಡೆವ ಧೈರ್ಯಶಾಲಿಗಳು, ಅಲ್ಲದೆ ದೇಶಾಭಿಮಾನಿಗಳೂ ಕಮ್ಯುನಿಸಮಿನಲ್ಲಿ ಒಲವು ತಾಳಿದವರೂ ಆಗಿದ್ದರು. ಕ್ರಾಂತಿಕಾರಿ ಮನಃಪ್ರವೃತ್ತಿ ಅವರಲ್ಲಿ ಎಳವೆಯಿಂದಲೇ ಬೆಳೆದು ಬಂದುದು. ಸಾಹಿತ್ಯದಲ್ಲಿ ದಿಟ್ಟ ಹಜ್ಜೆಗಳನ್ನಿಟ್ಟು ಮುನ್ನಡೆಯಲು ಈ ಪ್ರವೃತ್ತಿ ಅವರಿಗೆ ಅನುಕೂಲವಾಗಿಯೇ ಪರಿಣಮಿಸಿತು. ಕ್ರಾಂತಿಕಾರಿ ಮನಃಪ್ರವೃತ್ತಿಯ ನಿರಂಜನರದು ಹೋರಾಟದ ಬದುಕು.

ಮಂಗಳೂರ'ರಾಷ್ಟ್ರಬಂಧು'ವಿನಿಂದ ಬೆಂಗಳೂರ 'ಪ್ರಜಾಮತ'ದ ಆಫೀಸನ್ನು ನಿರಂಜನರು ಸೇರಿದರು. ಪತ್ರಿಕೋದ್ಯಮ, ಬರವಣಿಗೆ, ಕಮ್ಯೂನಿಸಂ ಎಂದರೆ ಕೇಳ ಬೇಕೆ? ಒಂದಲ್ಲ ಒಂದು ವಿಧದ ಸಮಸ್ಯೆಗಳನ್ನೆದುರಿಸುತ್ತಾ ಸಾಹಿತ್ಯಾರಾಧನೆಯ ಕಾರ್ಯ ಮುಂದುವರಿಸಿದರು. ಮಿತ್ರರೇ ಅವರ ಸಂಪತ್ತು. ಅವರ ತಾಯಿ ನುಡಿದಂತೆ,

ತಾಯಿಯೆಂದರೆ ಮಗನಿಗೆ, ಮಗನೆಂದರೆ ತಾಯಿಗೆ ಪಂಚಪ್ರಾಣ. ಮಗ ಶಿವರಾಯ ತಾಯಿಗೆ ನೋವಾಗದಂತೆ, ಕಷ್ಟವಾಗದಂತೆ ಬಹು ಜಾಗರೂಕತೆ ವಹಿಸಿಕೊಂಡ ಮಾತೃ ಭಕ್ತ. ಕಡು ಬಡತನದಲ್ಲೂ ಮಗನನ್ನು ಓದಿಸಿದ ತಾಯಿಯನ್ನೆಂದೂ ಅವರು ಮರೆತಿಲ್ಲ. ಧೀಮಂತ ವ್ಯಕ್ತಿಯ ಹೋರಾಟ ಮುಂದೆ ಸಾಗಿತು.

ನಿರಂಜನರು ಮದುವೆಯಾದ ಹೊಸದರಲ್ಲಿ ಪತ್ನೀ ಸಮೇತರಾಗಿ ಮಂಗಳೂರಿಗೆ ಬಂದು ಸತ್ಕಾರ ಕೂಟದಲ್ಲಿ ಭಾಗವಹಿಸಿ ಎಲ್ಲ ವಿವರ ತಿಳಿಸಿದ್ದರು. ಸಾಹಿತ್ಯಾರಾಧನೆಗಾಗಿ ಈ ಸಂಬಂಧ ದೇವರೇ ಮಾಡಿದ್ದು ಎಂದು ನನಗೆ ಅನ್ನಿಸಿತು. ಡಾ। ಅನುಪಮಾ ನಿರಂಜನರ ಸಾಹಿತ್ಯ ಪ್ರತಿಭೆ ನಿರಂಜನರು ಬಾಳಸಂಗಾತಿಯಾಗ ದಿದ್ದರೆ ಇಷ್ಟೊಂದು ವಿಶಾಲವಾಗಿ ಬೆಳೆಯುತ್ತಿರಲಿಲ್ಲ. ನಿರಂಜನರೂ ಸಾಹಿತ್ಯ ಸೇವೆ ಮಾಡುತ್ತಾ ನಮ್ಮ ಕಣ್ಣ ಮುಂದೆ ಈ ರೀತಿ ಇರುತ್ತಿರಲಿಲ್ಲ. ಒಬ್ಬರಿಗೊಬ್ಬರು ಶಬ್ದ ಅರ್ಥಗಳಂತೆ ಅಭಿನ್ನವಾಗಿ, ಪೂರಕವಾಗಿ ಇದ್ದಾರೆ. ಅದು ಓದುಗರ ಭಾಗ್ಯ ಎನ್ನಬೇಕು. 'ಜ್ಞಾನಗಂಗೋತ್ರಿ', 'ದಿನಕ್ಕೊಂದು ಕತೆ' ಈ ದಂಪತಿಗಳ ದಿವ್ಯ ಕಾಣಿಕೆ. ಕೈಕಾಲು ಕೆಲಸ ಮಾಡದ ಸ್ಥಿತಿಯಲ್ಲಿಲ್ಲದಿದ್ದರೂ ಕೆಲಸವನ್ನು ಪೂರೈಸಿದ 'ಅನುಪಮ ಸಾಧಕ' ನಿರಂಜನರು.

ಸತ್ಯ, ಪ್ರೀತಿ, ಸಮಾನತೆ, ಸಹೃದಯತೆಗೆ ನಿರಂಜನರು ಹೆಸರಾದವರು. ಯಾವುದೇ ಜಾತಿಯ ಕಟ್ಟುಪಾಡಿಗೂ ಅವರು ಒಳಪಟ್ಟವರಲ್ಲ. 'ಮಾನವ ಜಾತಿಗೆ ಸೇರಿದವನು ತಾನು' ಎಂದು ತಿಳಕೊಂಡವರು ಮಾತ್ರವಲ್ಲದೆ ಮಾನವೀಯ ಮೌಲ್ಯ ಗಳನ್ನು ಜೀವನದಲ್ಲಿ ಅಳವಡಿಸಿಕೊಂಡವರು. ○

ಲವಲವಿಕೆಯ ವ್ಯಕ್ತಿತ್ವ

–ಆನಂದಿ ಸದಾಶಿವ ರಾವ್

ಕನ್ನಡ ಭಾಷೆಯ ಹೃದಯಂಗಮ ಶೈಲಿಯ ಪರಿಚಯ, ನಿರಂಜನರ ಬರವಣಿಗೆಯ ಮೂಲಕವೇ ನನಗಾದುದು. ಅವರ ಲೇಖನಿಯು ಚಿತ್ರಿಸುತ್ತಿದ್ದ ಆ ಕಾಲದ ಸಾಮಾಜಿಕ ಹಿನ್ನೆಲೆ ಮತ್ತು ವಿದ್ಯಮಾನಗಳು ನನ್ನ ಮನದಲ್ಲಿ ಆಳವಾದ ಪರಿಣಾಮವನ್ನುಂಟುಮಾಡಿದುವಲ್ಲದೆ, ನಾನು ಕೂಡಾ ಕೆಲವೊಂದು ವಿಚಾರಾತ್ಮಕ ಪ್ರಬಂಧಗಳನ್ನು, ಸಣ್ಣಕತೆಗಳನ್ನು ಬರೆಯುವಂತೆ ಪ್ರೇರೇಪಿಸಿದುವು. ಇದರಿಂದ ಪ್ರಗತಿಶೀಲಚಳುವಳಿಯ ಕಾಲದಲ್ಲಿ ಕರ್ನಾಟಕದ ಲೇಖಕರ ಅಗ್ರಪಂಕ್ತಿಯಲ್ಲಿ

ಹೆಸರುಗಳಿಸಿದ ಪತ್ರಿಕೋದ್ಯಮಿ, ಕತೆಗಾರ, ನಿರಂಜನರ ಅಭಿಮಾನೀ ಬಳಗದ ಸದಸ್ಯೆಯಾಗಿ, ಸೋದರಿಯಾಗಿ, ನನ್ನ ಸಾಹಿತ್ಯ ಚಟುವಟಿಕೆಗಳು ಮುಂದೆ ಸಾಗಿದುವು.

ನಿರಂಜನರು, ಆಗ ಕುಳುಕುಂದ ಶಿವರಾಯರು ಎಂದು ಎಲ್ಲರಿಗೂ ಪರಿಚಿತರು. 'ರಾಷ್ಟ್ರಬಂಧು' ಕಾರ್ಯಾಲಯಕ್ಕೆ ಭೇಟಿ ನೀಡುತ್ತಿದ್ದ ಶಿವರಾಯರನ್ನು ನಾನು ಕೆಲವು ಬಾರಿ ನೋಡಿದ್ದೆ. ಹೈಸ್ಕೂಲು ವಿದ್ಯಾರ್ಥಿನಿಯಾಗಿದ್ದ ನಾನು ಸ್ಕೂಲಿಗೆ ಹೋಗಿ ಬರುವ ರಸ್ತೆ 'ರಾಷ್ಟ್ರಬಂಧು' ಕಾರ್ಯಾಲಯದ ಮುಂದೆ ಹಾದುಹೋಗುತ್ತಿತ್ತು. ಲೇಖಕರ ಮೇಲೆ ಅತ್ಯಂತ ಗೌರವಾದರಗಳನ್ನು ಹೊಂದಿದ್ದ ನಾನು, ಅಂದಿನಿಂದಲೂ ಅವರನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದೇನೆ.

ಮುಂದೆ ಕುಳುಕುಂದ ಶಿವರಾಯರು ಬೆಂಗಳೂರಿಗೆ ವಾಸ್ತವ್ಯವನ್ನು ಬದಲಿಸಿದರು. ಅವರ ಮನತುಂಬಿದ ಡಾ। ವೆಂಕಟಲಕ್ಷ್ಮಿಯವರು ಶ್ರೀಮತಿ ನಿರಂಜನರಾದರು. ದಕ್ಷಿಣ ಕನ್ನಡ ಜಿಲ್ಲೆಗೆ ನವ ವಧೂವರರು ಪ್ರವಾಸ ಕೈಗೊಂಡಾಗ ನಮ್ಮ ಮನೆಗೂ ಭೇಟಿ ಇತ್ತಿದ್ದರು. ಬರವಣಿಗೆಯಲ್ಲಿ ಪ್ರಕಟಿಸುತ್ತಿದ್ದ ನೂರಾರು ಕನಸುಗಳನ್ನು ನೈಜವಾಗಿಸಬೇಕೆಂಬ ಹಂಬಲ ಹೊತ್ತ ನವವಿವಾಹಿತರು ಆಗ ಅವರು. ಮುಗಿಲೆತ್ತರದ ಆದರ್ಶ, ವಿಶಾಲ ವಿಶ್ವದ ಜನತೆಯು ಶೋಷಣಾರಹಿತ ಜೀವನವನ್ನು ಬಾಳಬೇಕು ಎಂಬ ಅದಮ್ಯ ಹಂಬಲ, ಈರ್ವರಲ್ಲಿಯೂ ಜೀವನದ ಬಗ್ಗೆ ಇರುವ ಲವಲವಿಕೆ ನಮಗೆ ಸಂತಸವನ್ನು ಉಂಟುಮಾಡಿತು.

ವರ್ಷಗಳು ಸರಿದಂತೆ ಲೇಖನ ವ್ಯವಸಾಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ನಿರಂತರ ಕ್ರಿಯಾಶೀಲ ವ್ಯಕ್ತಿಯಾದ ನಿರಂಜನರು ತೊಡಗಿ ಹಲವಾರು ಕತಾ ಸಂಕಲನ, ಕಾದಂಬರಿ, ಪತ್ರಿಕಾಲೇಖನಗಳನ್ನು ಬರೆದರು; ಸಾಹಿತ್ಯಿಕ ವಿಚಾರಗೋಷ್ಠಿ, ಗ್ರಂಥಪ್ರಕಟನೆ, ಸಮ್ಮೇಳನ, ಅಧಿವೇಶನ ಮುಂತಾದ ಕಾರ್ಯಕ್ರಮಗಳಲ್ಲಿ ಅವಿರತವಾಗಿ ದುಡಿದರು. ಕನ್ನಡ ನಾಡಿನಾದ್ಯಂತ ಓದುಗರಿಗೆ ಪರಿಚಿತರಾದರು. ಅವರ ಕಾದಂಬರಿಗಳು, ಬರೆಹಗಳು ಇತರ ಭಾಷೆಗೆ ಅನುವಾದಗೊಂಡಾಗ ಕರ್ನಾಟಕದ ಹೊರ ಪ್ರದೇಶಗಳಲ್ಲಿಯೂ ಅವರ ಕೀರ್ತಿ ಪಸರಿಸಿತು.

ನಿರಂಜನರ ದಿಟ್ಟ, ನೇರವಾದ ಬಿಚ್ಚು ಅಭಿಪ್ರಾಯಗಳು, ಕೇವಲ ನಾಲ್ಕಾರು ಮಾತುಗಳಲ್ಲಿಯೇ ವಸ್ತುವಿನ ಆಳ, ಗಾಢ ಪರಿಚಯವನ್ನು ಓದುಗನಿಗೆ ಮಾಡಿಸುವ ಪ್ರಬುದ್ಧ ಪಾಂಡಿತ್ಯ, ಗದ್ಯವನ್ನು ಕಾವ್ಯವಾಗಿಸುವ ನಿರಂಜನ ಶೈಲಿ, ಈ ಅಪೂರ್ವ ಸಂಗಮದಿಂದ ಮೂಡಿದ ಬರೆಹಗಳು ಸಾಧನೆಯ ಸಿದ್ಧಿಗಳಾದುವು. ಅನಾರೋಗ್ಯದ ದೆಸೆಯಿಂದ ಸಾಹಿತ್ಯಸೃಷ್ಟಿಗೆ ಆತಂಕ ಇದಿರಾದರೂ ಎದೆಗುಂದದೆ ಹೋರಾಟವನ್ನು ನಡೆಸುತ್ತಲೇ ಇದ್ದಾರೆ ನಿರಂಜನ ದಂಪತಿಗಳು.

ಈ ಹಿನ್ನೆಲೆಯಲ್ಲಿ ನಿರಂಜನರನ್ನು ಈಗ ವೀಕ್ಷಿಸಿದರೆ, ಒಂದಾನೊಂದು ಕಾಲದಲ್ಲಿ ಮಂಗಳೂರಿನ ರಸ್ತೆಗಳಲ್ಲಿ ನಡೆದು ಸಾಗುತ್ತಿದ್ದ ಯುವಕ ಭಾವನಾತ್ಮಕ ಸೃಜನಶೀಲ ಬರೆಹಗಾರನಾಗಿ, ವಾಸ್ತವಿಕತೆಯನ್ನು ಮರೆಯದ ಆದರ್ಶವಾದಿಯಾಗಿ, ಬಾಳ್ವೆಯಲ್ಲಿ ಬತ್ತಿ ಹೋಗದ ಭರವಸೆಗಳನ್ನು ಹೊಂದಿ, ಈಗಲೂ ಹೋರಾಟವನ್ನು ಮುಂದುವರಿಸುತ್ತಿರುವುದು ಜೀವಂತಿಕೆಯ ಸಲ್ಲಕ್ಷಣವಾಗಿದೆ.

ನಿರಂಜನರ ಬಾಳ್ವೆಯ ಚೌಕಟ್ಟಿಗೆ ಸುಪ್ರಸಿದ್ಧ ಅಮೆರಿಕನ್ ಕವಿ, ರಾಬರ್ಟ್ ಫ್ರೋಸ್ಟ್ (Robert Frost)ನ ಕವಿತಾ ಪಂಕ್ತಿಗಳು ಸಮರ್ಪಕವಾಗಿ ರೂಪು ರೇಖೆಗಳನ್ನು ನೀಡುವುವು ಎಂದರೆ ತಪ್ಪಾಗದು.

> "The woods are lovely dark and deep,
> But I have promises to keep,
> And miles to go before I sleep,
> And miles to go before I sleep."

○

ಸೃಜನಶೀಲ ಸತ್ಯಶೋಧಕ

• ವ್ಯಾಸರಾಯ ಬಲ್ಲಾಳ

ಆತ್ಮೀಯರಲ್ಲೊಬ್ಬ ಆತ್ಮೀಯರೆನಿಸುವವರ ಬಗೆಗೆ ಬರೆಯುವುದು ಕಷ್ಟದ ಕೆಲಸ. ಆದರೆ ಅದು ಪ್ರಿಯವಾದ ಕೆಲಸವೂ ಹೌದು. ನಿರಂಜನ ನನ್ನ ಸಮವಯಸ್ಕರು; ಸಮಕಾಲೀನರು. ಆದರೆ ನಾನಿನ್ನೂ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ನನ್ನ ಮೊದಲ ಪ್ರಯತ್ನಗಳ ಪ್ರಕಟಣೆಯ ದಾರಿನೋಡುತ್ತಿದ್ದ ಕಾಲದಲ್ಲೇ, ನನ್ನ ದೃಷ್ಟಿಯಲ್ಲಿ ಅವರು ತುಂಬ ಎತ್ತರಕ್ಕೆ ಬೆಳೆದಿದ್ದ ವ್ಯಕ್ತಿ. ಮಂಗಳೂರಿನ 'ರಾಷ್ಟ್ರಬಂಧು', ಬೆಂಗಳೂರಿನ 'ಉಷಾ' ಪತ್ರಿಕೆಗಳ ಅವರ ಲೇಖನಗಳ ಮೂಲಕವೇ - ಆಗ ಅವರು ಕುಳಕುಂದ ಶಿವರಾಯ - ಅವರ ವ್ಯಕ್ತಿತ್ವದ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಿಕೊಂಡಿದ್ದ ನನಗೆ, ನಲವತ್ತರ ದಶಕದ ಪ್ರಥಮಾರ್ಧದಲ್ಲಿ (೧೯೪೪) ಉಡುಪಿಯಲ್ಲಿ ಜರಗಿದ ಕಿರಿಯರ ಸಮ್ಮೇಳನಕ್ಕೆ ಅವರು ಬರುತ್ತಾರೆ ಎಂದು ನನ್ನ ಸೋದರ ತಿಳಿಸಿ, ಸಮ್ಮೇಳನದ ಅಂಗವಾಗಿ ಪ್ರಕಟಿಸಲಿದ್ದ ಒಂದು ಕವನ ಸಂಗ್ರಹಕ್ಕೆ ನನ್ನದೊಂದು ಕವನ ಕೊಡು ಎಂತೆ ಕಾಡಿದ್ದ. ಆಗಲೇ ಪ್ರಸಿದ್ಧರಾಗಿ, ಪತ್ರಿಕೋದ್ಯಮಿಯೆಂದೂ ಹೆಸರುಗಳಿಸಿದ್ದ ಕುಳಕುಂದ ಶಿವರಾಯರು ನನ್ನ ಕವನವನ್ನು ನೋಡಬಹುದು ಎಂಬ ಅಭಿಮಾನದಿಂದಲೇ ನಾನೊಂದು ಕವನ ಗೀಚಿದ್ದ ನೆನಪು. ಪ್ರಾಯಶಃ ಅದು ಅಚ್ಚಾಗಿದ್ದ ನನ್ನ ಮೊದಲ ಹಾಗೂ ಕೊನೆಯ ಕವನ.

ಅದರ ಹಿಂದಿನ ವರ್ಷ ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಅವರು ಭಾಗವಹಿಸಿದ್ದಾರೆ ಎಂದು ತಿಳಿದಾಗ ನನ್ನ ದೃಷ್ಟಿಯಲ್ಲಿ ಅವರು ಇನ್ನಷ್ಟು ಎತ್ತರಕ್ಕೆ ಬೆಳೆದಿದ್ದರು. ಮುಂದೆ ನಲುವತ್ತು ವರ್ಷ ಕಾಲ, ಸಾಹಿತ್ಯ ತಂದ ಸಖ್ಯ ಒಡನಾಟಗಳಲ್ಲಿ ಅವರು ಈ ಎತ್ತರವನ್ನು ಕಾದುಕೊಂಡೆ ಬಂದಿದ್ದಾರೆ. ನಿರಂಜನ ವಯಸ್ಸಿನಲ್ಲಿ ನನಗಿಂತ ಕೆಲವು ತಿಂಗಳು ಕಿರಿಯರೆಂದು ನನಗೆ ತಿಳಿದದ್ದು ಮೊನ್ನೆ ಮೊನ್ನೆ.

ಎಲ್ಲ ರೀತಿಯಲ್ಲೂ ಎತ್ತರವನ್ನೇರುವ ಸಾಧನೆಯ ದಾರಿ ತುಳಿದ ನಿರಂಜನ-ಸಾಧನ ಅವರಿಗೆ ತುಂಬ ಪ್ರಿಯವಾದ ಹೆಸರು-ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ತನ್ನ ಹಜ್ಜೆ ಗುರುತುಗಳನ್ನು ನಿಚ್ಚಳವಾಗಿ, ವಿಶಿಷ್ಟವಾಗಿ ಮೂಡಿಸಿದ ವ್ಯಕ್ತಿ. ಅವರು ಪತ್ರಕರ್ತನಾಗಿ, ಸಂಪಾದಕನಾಗಿ, ಸಾಹಿತಿಯಾಗಿ, ಪ್ರಗತಿಶೀಲ ಚಳವಳಿಯ ನೇತಾರನಾಗಿ, ಮಾನವೀಯ ಮೌಲ್ಯಗಳ ಪ್ರತಿಪಾದಕನಾದ ಬುದ್ಧಿಜೀವಿಯಾಗಿ, ಇತಿಹಾಸಕ್ಕೆ, ವರ್ತಮಾನಕ್ಕೆ, ತೀಕ್ಷ್ಣವೂ ಪ್ರಾಮಾಣಿಕವೂ ಆದ ಸಂವೇದನೆಯಿಂದ ಸ್ಪಂದಿಸುವ ವ್ಯಕ್ತಿಯಾಗಿ, ಕನ್ನಡದ ನೆಲದ ವಿಶ್ವಮಾನವರಾಗಿದ್ದಾರೆ. ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯ ಪ್ರಕಾರಗಳೆರಡರಲ್ಲೂ ಅವರ ಸಾಧನೆ ಬೆರಗುಗೊಳಿಸುವಂಥದು.

೧೯೪೫ರಲ್ಲಿ ನಾನು ಉದ್ಯೋಗಾರ್ಥಿಯಾಗಿ ಮುಂಬಯಿಗೆ ಬಂದೆ. ಆಗ ನಾನು ಸಾಹಿತ್ಯದ ಮೊದಲ ಪ್ರಯತ್ನಗಳನ್ನು ಯಾರು ಪ್ರಕಟಿಸಿಯಾರು ಎಂದು ನಿರೀಕ್ಷಿಸುತ್ತಿದ್ದ ಎಳೆಯ ಕತೆಗಾರ. ೧೯೪೭ರಲ್ಲಿ ಮುಂಬಯಿಯಿಂದ 'ನುಡಿ' ಎಂಬ ಒಂದು ಸಾಪ್ತಾಹಿಕ, ಸಮಾಜವಾದದಲ್ಲಿ ಆಸಕ್ತಿಯಿದ್ದ ಕೆಲವು ಉತ್ಸಾಹೀ ತರುಣರ ಸಾಹಸದ ಫಲವಾಗಿ ಪ್ರಕಟವಾಗತೊಡಗಿತ್ತು. ಮುಂದೆ ಮೂರು ವರ್ಷ ಕಾಲ ಕರ್ನಾಟಕದಲ್ಲಿ ಸಾಕಷ್ಟು ಕೀರ್ತಿ ಗಳಿಸಿದ್ದ ಈ ಪತ್ರಿಕೆಯ ಸಂಪಾದಕೀಯ ಬಳಗದಲ್ಲಿ ನಾನೂ ಸೇರಿದ್ದೆ. ಅದೇ ಅವಧಿಯಲ್ಲಿ ಅಂದಿನ ಯುವಜನಾಂಗದ ಆಶೋತ್ತರಗಳನ್ನು ಪ್ರತಿನಿಧಿಸುವಂತೆ ಬೆಂಗಳೂರಿನಿಂದ 'ದೇಶಬಂಧು' ಮತ್ತು 'ಛಾಯಾ' ಎಂಬ ಎರಡು ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಆಗ ಕೋಮುವಾರು ದಂಗೆಗಳಿಗೆ ಮುಂಬಯಿ ಕುಪ್ರಸಿದ್ಧ ಶಹರ. ಇಂಥದೊಂದು ಕೊಲೆಯ ದುರಂತ ಪ್ರಜ್ಞೆಯಿಂದ ನಾನು ಬರೆದ ಒಂದು ಕತೆ 'ಮುಗಿದ ಯುದ್ಧ' 'ಛಾಯಾ'ದಲ್ಲಿ ಪ್ರಕಟವಾಗಿತ್ತು. ನಾಡಿಗೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ, 'ನುಡಿ' ಪ್ರಕಟಿಸಿದ ವಿಶೇಷ ಸಂಚಿಕೆಗಾಗಿ, ನಮ್ಮ ಸಾಮಾಜಿಕ ಸಂದರ್ಭದಲ್ಲಿ ಒಡೆದು ಕಾಣುವ ಆರ್ಥಿಕ ವಿಷಮತೆಗಳ ಕುರಿತ ಎರಡು ಶಬ್ದಚಿತ್ರಗಳನ್ನು ನಾನು ಬರೆದಿದ್ದೆ. ಇವು ಪ್ರಕಟವಾಗಿ ಕೆಲವು ದಿನಗಳು ಕಳೆದ ಮೇಲೆ 'ನುಡಿ'ಯ ವಿಳಾಸಕ್ಕೆ, ನನ್ನ ಹೆಸರಿಗೆ ಒಂದು ಪತ್ರ ಬಂದಿತ್ತು. ಪತ್ರ ಬರೆದವರು

ಕುಳುಕುಂದ ಶಿವರಾಯರು. ಆಗ ತೀರ ಅಪರಿಚಿತನಾಗಿ, ಸೃಜನಶೀಲ ಸಾಹಿತ್ಯ ರಚನೆಯಲ್ಲಿ ಆಗಷ್ಟೆ ತೊಡಗಿಸಿಕೊಳ್ಳುತ್ತಿದ್ದ ನನ್ನನ್ನು ನಿರಂಜನ ಬೆನ್ನು ತಟ್ಟಿದ ರೀತಿ ಅವರ ವ್ಯಕ್ತಿತ್ವಕ್ಕೇ ಕನ್ನಡಿ ಹಿಡಿಯುವಂಥದಾದ ಕಾರಣ, ಅದನ್ನು ಉಲ್ಲೇಖಿಸುವ ಮನಸ್ಸಾಗುತ್ತಿದೆ. ತೀರ ಅಪರಿಚಿತ ಲೇಖಕನಿಗೆ, ಆತ ಬರೆಯುತ್ತಿದ್ದ ಪತ್ರಿಕೆಯ ವಿಳಾಸಕ್ಕೆ ಅವರು ಬರೆದ ಪತ್ರದ ಸಾರ ಇಷ್ಟೆ: "ಈಗೆರಡು ತಿಂಗಳ ಹಿಂದೆ 'ಛಾಯಾ'ದಲ್ಲಿ ಪ್ರಕಟವಾದ ನಿಮ್ಮ ಕತೆ, ಮೊನ್ನೆ 'ನುಡಿ'ಯ ಸ್ವಾತಂತ್ರ್ಯ ಸಂಚಿಕೆಯಲ್ಲಿ ನೀವು ಬರೆದ 'bits' ಓದಿದೆ. ತುಂಬಾ ಸಂತೋಷವಾಗಿದೆ. ಹೀಗೆಯೇ ಬರೆಯುತ್ತ ಬನ್ನಿ. ನೀವು ಹಿಡಿದಿರುವುದು ಸರಿಯಾದ ದಾರಿ." ಅವರ ಬರೆವಣಿಗೆಯ ಪರಿಚಯವಾದಂದಿನಿಂದ ನಾನು ಗೌರವಿಸುತ್ತಿದ್ದ ನಿರಂಜನರ ಪತ್ರದಿಂದ ನನಗಾದ ಸಂತೋಷ ಇಷ್ಟೇ ಎಂದು ಹೇಳಲಾರೆ. ನಮ್ಮ ಸಾಮಾಜಿಕ ಇತಿಮಿತಿಗಳಿಗೆ ಸ್ಪಂದಿಸುವ ಮನೋಧರ್ಮ ಬರೆವಣಿಗೆಯಲ್ಲಿ ಎಲ್ಲಿ ವ್ಯಕ್ತವಾದರೂ, ಅದನ್ನು ಸ್ವಾಗತಿಸಬೇಕು ಎನ್ನುವ ಕಳಕಳಿಯೊಂದೆಡೆ, ಸೋದರ ಲೇಖಕನೊಬ್ಬನಿಗೆ ಎಷ್ಟು ಪ್ರೋತ್ಸಾಹ ಸಾಧ್ಯವೋ ಅಷ್ಟನ್ನು ಕೊಡಬೇಕು ಎನ್ನುವ ಸಹೃದಯತೆ ಇನ್ನೊಂದೆಡೆ, ಇವೆರಡು ಗುಣಗಳನ್ನೂ ನಿರಂಜನರ ಬದುಕು-ಬರೆಹಗಳಲ್ಲಿ ನಾವು ದೊಡ್ಡ ಪ್ರಮಾಣದಲ್ಲಿ ಗುರುತಿಸುತ್ತೇವೆ.

ನನಗೆ ನಿರಂಜನರ ಮುಖ ಪರಿಚಯವಾದಾಗ-ಆಗಲೂ ಅವರು ಮುಂಬಯಿಯ 'ನುಡಿ' ಕಾರ್ಯಾಲಯಕ್ಕೆ ಬಂದಾಗ ಬಲ್ಲಾಳರನ್ನು ಕಾಣಬೇಕು ಎಂಬ ಆಸೆಯನ್ನು ಸೂಚಿಸಿದ್ದರು - ಅವರು ಕಮ್ಯೂನಿಸ್ಟ್ ಪಕ್ಷದ ಶಿಸ್ತಿಗೆ ಒಳಗಾದ ಪತ್ರಕರ್ತ; ಬರೆಹಗಾರ. 'ನುಡಿ' ಬಳಗದ ನಾವು ಸಮಾಜವಾದಿ ಸಿದ್ಧಾಂತಗಳಲ್ಲಷ್ಟೆ ಆಸಕ್ತಿಯಿದ್ದ ಆದರ್ಶವಾದಿ ಯುವಕರ ತಂಡ. ಪಕ್ಷದ ಶಿಸ್ತು, ನಿಯಮಗಳೇನೇ ಇರಲಿ, ಆಗ ಕುಳುಕುಂದ ಶಿವರಾಯರ ಜೀವನದೃಷ್ಟಿ ಬದ್ಧವಾಗಿದ್ದುದು ಮಾನವೀಯ ಮೌಲ್ಯಗಳಿಗೆ, ಅವರ ಸಹಾನುಭೂತಿ ಪರಿಪೂರ್ಣ ಮಾನವನಾಗಬೇಕು ಎಂದು ಹಂಬಲಿಸುವ ಹೋರಾಡುವ ಎಲ್ಲ ಪ್ರಯತ್ನಗಳಿಗೆ ಎಂದು ಆಗಲೇ ನನಗೆ ಸ್ಪಷ್ಟವಾಗಿತ್ತು.

ಕುಳುಕುಂದರ ಬಾಲ್ಯದ, ತಾರುಣ್ಯದ, ಸಂಘರ್ಷದ ಎಲ್ಲ ಚಿತ್ರಗಳೂ ಈಗ ಅವರ ಬರೆವಣಿಗೆಯಿಂದಲೇ ಲಭ್ಯವಿರುವ ಕಾರಣ ನಾನು ಅವುಗಳನ್ನು ಪುನರುಚ್ಚರಿಸುವುದಿಲ್ಲ. ಆದರೆ ಎಂಥ ಹೋರಾಟದಲ್ಲೂ, ಆ ಹೋರಾಟದ ಹಿಂದಿನ ತಾತ್ವಿಕ ನಿಲುಮೆಯೇನೇ ಇರಲಿ, ಅವರು ತನ್ನ ಹೃದಯ ವೈಶಾಲ್ಯವನ್ನೂ ಪ್ರೀತಿಯ ಮನೋಧರ್ಮವನ್ನೂ ಕಳೆದುಕೊಂಡಿಲ್ಲ. ಅವರು ಕಮ್ಯೂನಿಸ್ಟ್ ಪಕ್ಷದ ಶಿಸ್ತಿಗೆ ಒಳಗಾಗಿ 'ಜನಶಕ್ತಿ'ಯ ಸಂಪಾದಕರಾಗಿ ಆಡಳಿತ ವ್ಯವಸ್ಥೆಯ ವಿರುದ್ಧ ನಡೆಸಿದ ಹೋರಾಟದಲ್ಲಿ ಅನುಭವಿಸಬೇಕಾಗಿ ಬಂದ ಕಷ್ಟ ಕೋಟಲೆಗಳೆಷ್ಟೋ. ಆದರೆ ಇವುಗಳಿಂದಾಗಿ ಅವರು ಸಿನಿಕತನವನ್ನು ಬೆಳೆಸಿಕೊಳ್ಳಲಿಲ್ಲ. ತನ್ನ ಹೃದಯದ ಶ್ರೀಮಂತಿಕೆಯನ್ನು

ಅಳಿಸಿಕೊಳ್ಳಲಿಲ್ಲ. ಮನುಷ್ಯನ ಕುರಿತ ಅವರ ಪ್ರೀತಿ, ಅವನ ಭವಿಷ್ಯದ ಕುರಿತ ಶ್ರದ್ಧೆ ಕಡಿಮೆಯಾಗಲೇ ಇಲ್ಲ. ಪ್ರಾಯಶಃ ಮುಂದೆ ಅವರು ಪಕ್ಷದ ಶಿಸ್ತನ್ನು ತೊರೆದು ಮಾನವೀಯ ಮೌಲ್ಯಗಳಿಗಷ್ಟೆ ಬದ್ಧರಾದ ಲೇಖಕರಾದುದು ಈ ಕಾರಣದಿಂದ.

೧೯೫೦ರಲ್ಲಿ ಮುಂಬಯಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಷ್ಟರ ತನಕ ಭೂಗತರಾಗಿದ್ದ ಕುಳುಕುಂದ ಶಿವರಾಯರು ಪ್ರತ್ಯಕ್ಷರಾಗಿ ಸಮ್ಮೇಳನದಲ್ಲಿ ಭಾಗವಹಿಸಿದುದರಿಂದ ನನಗೆ ಲಭಿಸಿದ ಅವರ ನಿಕಟ ಪರಿಚಯ ಸಮಾನ ಧರ್ಮೀಯರ ಆತ್ಮೀಯತೆಯಾಗಿ ಬೆಳೆದು ನಾಲ್ಕು ದಶಕಗಳ ಕಾಲ ನಿರಂಜನ ದಂಪತಿಗಳ ಆತ್ಮೀಯತೆಯ ಸುಖವನ್ನು ನನಗೆ ಒದಗಿಸಿಕೊಟ್ಟಿದೆ.

ತನ್ನ ಬಾಲ್ಯದ ಕಹಿ ಅನುಭವಗಳಾಗಲೀ, ಮುಂದೆ ಕಮ್ಯೂನಿಸ್ಟ್ ಪಕ್ಷದ ಶಿಸ್ತಿಗೆ ಒಳಪಟ್ಟು, ತನ್ನ ಸೃಜನಶೀಲ ಹಾಗೂ ವೈಚಾರಿಕ ಪ್ರವೃತ್ತಿಗಳಿಗೆ ಸೈದ್ಧಾಂತಿಕ ನಿಯಂತ್ರಣ ತರಬೇಕಾದಂಥ ಸಂದರ್ಭವಲ್ಲಾಗಲೀ, ತನ್ನ ಸೃಜನಶೀಲ ಪ್ರತಿಭೆ ಅರಳಲು ಎಲ್ಲ ಅವಕಾಶಗಳಿದ್ದಂಥ ಕಾಲದಲ್ಲಿ ಕಾಡಿದ ಅನಾರೋಗ್ಯವಾಗಲೀ ಅವರ ಜೀವನದೃಷ್ಟಿಯನ್ನು ಯಾವ ರೀತಿಯಲ್ಲೂ ಪರಿವರ್ತಿಸಿಲ್ಲವೆನ್ನುವುದರಲ್ಲಿ ನಿರಂಜನರ ವ್ಯಕ್ತಿತ್ವದ ಎತ್ತರ ಕಾಣುತ್ತದೆ. ಸಂದರ್ಭಕ್ಕೆ ಹೊಂದಿಕೊಂಡು ತಮ್ಮ ಜೀವನ ದೃಷ್ಟಿಗೆ ಬರುವ ಆಕಸ್ಮಿಕವೆನಿಸಬಹುದಾದ ತಿರುವುಗಳನ್ನು ಸಮರ್ಥಿಸುವ ಸಾಹಿತಿಗಳ ಬಳಗಕ್ಕೆ ನಿರಂಜನ ಸೇರಿಲ್ಲ, ಸೇರುವಂತಿಲ್ಲ. ತನ್ನ ಎಳೆಯ ವಯಸ್ಸಿನಲ್ಲೆ ಕಂಡು ಕೊಂಡ ಸಾಮಾಜಿಕ ವೈಪರೀತ್ಯಗಳಿಗೆ, ವಿಷಮತೆಗಳಿಗೆ, ದೌರ್ಬಲ್ಯಗಳಿಗೆ ಅವರು ಸ್ಪಂದಿಸುತ್ತ ಬಂದ ರೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಕಾರಣ, ಈ ಸ್ಪಂದನ ಉಂಟಾಗುವುದೇ ಬದುಕಿನ ಕುರಿತ ಅಪಾರವೆನಿಸುವ ಪ್ರೀತಿಯ ಹಿನ್ನೆಲೆಯಲ್ಲಿ. ಇದರಿಂದಾಗಿಯೇ, ನಿರಂಜನ ದಕ್ಷಿಣ ಕನ್ನಡದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಬೆಳೆದ ಲೇಖಕರಾದರೂ, ಎಲ್ಲ ಪ್ರಾದೇಶಿಕವೆನಿಸುವ ಎಲ್ಲೆಗಳನ್ನು ಮೀರುವಂಥ ವೈಚಾರಿಕತೆಯನ್ನು ಅವರು ರಕ್ತಗತವಾಗಿಸಿಕೊಂಡಿರುವುದರಿಂದ, ಅವರ ಬರೆಹಗಳೆಲ್ಲ ಭಾಷೆಯ ಗಡಿಯನ್ನು ಮೀರುವಂಥವು ಎಂದೇ ನಾನು ತಿಳಿದಿದ್ದೇನೆ. ತೀರ ಪ್ರಾದೇಶಿಕವೆನಿಸಬಹುದಾದ ಕಯ್ಯೂರಿನ ಪ್ರಕರಣದ ಹಿನ್ನೆಲೆಯಲ್ಲಿ ರಚಿತವಾದ 'ಚಿರಸ್ಮರಣೆ', ಪ್ರಾಚೀನ ಐಗುಪ್ತದ ಒಂದು ಸಾಮಾಜಿಕ ಸನ್ನಿವೇಶವನ್ನು ಆಧರಿಸಿ ಅವರು ಬರೆದ ಮಹಾಕೃತಿ 'ಮೃತ್ಯುಂಜಯ', 'ಕೊನೆಯ ಗಿರಾಕಿ'ಯಂಥ ಅವರ ಹಲವಾರು ಸಣ್ಣ ಕತೆಗಳು ಈ ಮಾತಿಗೆ ಉದಾಹರಣೆಗಳು.

ನಿರಂಜನ ತನ್ನ ಮೊದಲ ಕಾದಂಬರಿ 'ವಿಮೋಚನೆ' ಬರೆದಾಗ ನಾನು ಆಗಲೇ ಎರಡು ಕಾದಂಬರಿಗಳನ್ನು ಬರೆದಾಗಿತ್ತು. ನನ್ನ ಮೊದಲ ಕಾದಂಬರಿ ಆಗಲೇ ಪ್ರಕಟವಾಗಿದ್ದು, ಎರಡನೆಯ ಕಾದಂಬರಿಯ ಹಸ್ತಪ್ರತಿ ಹಿಡಿದುಕೊಂಡು

ಪ್ರಕಾಶಕರ ಭೇಟಿಗೆಂದು ಬೆಂಗಳೂರು ಮೈಸೂರುಗಳತ್ತ ಹೊರಟಿದ್ದೆ. ನಾನು ಬೆಂಗಳೂರಲ್ಲಿ ನೋಡಬಯಸಿದ್ದುದು ಆಗ ಪರಿಚಿತರಿದ್ದ ನಿರಂಜನರನ್ನು ಮಾತ್ರ. ಆದರೆ ಅಂದು ಅವರು ಸೋದರ ಲೇಖಕನೊಬ್ಬನ ಬಗೆಗೆ ತೋರಿದ ಪ್ರೀತಿಯನ್ನು ನೆನೆಸಿಕೊಂಡಾಗ ಎದೆ ತುಂಬಿ ಬರುತ್ತಿದೆ. ನನ್ನನ್ನು ಪರಿಷತ್ತಿನ ವಸಂತೋತ್ಸವಕ್ಕೆ ಕರೆದೊಯ್ದು, ಬೆಂಗಳೂರಲ್ಲಿ ನೋಡಬೇಕಾಗಿದ್ದ ಲೇಖಕರನ್ನೆಲ್ಲ ನೋಡುವ ವ್ಯವಸ್ಥೆ ಮಾಡಿ, ನನ್ನ ಕಾದಂಬರಿಯ ಹಸ್ತಪ್ರತಿಯನ್ನೋದಿ ಸಂತೋಷಿಸಿ, ಮೈಸೂರಿಗೆ ಹೊರಟಾಗ ಜತೆಗೇ ಬಂದ ನಿರಂಜನ ತೋರಿದ ಪ್ರೀತಿಯಲ್ಲಿ ನಾನು ಕಂಡ ನಿರ್ಮಲ ಅಂತಃಕರಣವನ್ನು ಯಾವ ಸಾಹಿತ್ಯಕ್ಷೇತ್ರದಲ್ಲೂ ಕಾಣುವುದು ವಿರಳ. ಆಗಲೇ ಅವರು ಪ್ರಸಿದ್ಧ ಕತೆಗಾರರಾಗಿದ್ದರೂ,ಕಾದಂಬರಿಯ ರಚನೆಗೆ ಕೈಹಾಕಿರಲಿಲ್ಲ.ತಾನಿನ್ನೂ ಪ್ರವೇಶಿಸದ ಕ್ಷೇತ್ರಕ್ಕೆ ಮುಂಬಯಿಯ ಸೋದರ ಲೇಖಕ ಪ್ರವೇಶಿಸಿದ್ದಾನೆಂದು ಯಾವ ರೀತಿಯ ಉಪೇಕ್ಷೆಯನ್ನೂ ತೋರದೆ, ನನ್ನ ಸೃಜನಶೀಲ ಪ್ರಕ್ರಿಯೆಗೆ ತಾನೂ ಸ್ಪಂದಿಸಿ ಸಂತೋಷಪಟ್ಟ ನಿರಂಜನ, ನನ್ನ ದೃಷ್ಟಿಯಲ್ಲಿ ಯಾವಾಗಲೂ ಎತ್ತರದಲ್ಲಿರುವವರೇ.

ಮುಂದೆ ಅವರ ಮೊದಲ ಕಾದಂಬರಿ 'ವಿಮೋಚನೆ' ಪ್ರಕಟವಾದಾಗ ನಾನು ಅದನ್ನು ವಿಮರ್ಶಿಸಬೇಕು ಎನ್ನುವುದು ಅವರ ಅಪೇಕ್ಷೆಯಾಗಿತ್ತು. ಅವರು ಕೇಳಿದರೆಂದಷ್ಟೆ ಆ ಕಾದಂಬರಿಯನ್ನು ಕುರಿತ ಸುದೀರ್ಘ ವಿಮರ್ಶೆಯೊಂದನ್ನು ಬೆಂಗಳೂರಿನ 'ಚಿತ್ರಗುಪ್ತ' ಸಾಪ್ತಾಹಿಕಕ್ಕಾಗಿ ಬರೆದಿದ್ದೆ. ಇಂದಿನ ತನಕವೂ ನಾನು ಅವರಿಗಿಂತ ಎಲ್ಲ ರೀತಿಗಳಲ್ಲೂ ಕಿರಿಯನೆನಿಸುವ ನನಗೆ ಇಂಥವೆಲ್ಲ ಹೊಣೆಗಾರಿಕೆ ಒಪ್ಪಿಸಿದ ಅವರ ಸೌಜನ್ಯವನ್ನು ನೆನೆದು ಈಗಲೂ ಆಶ್ಚರ್ಯಪಡುತ್ತಿದ್ದೇನೆ.

ಹಲವಾರು ಮಜಲುಗಳನ್ನು ಹಾದುಬಂದ ನಿರಂಜನರ ಸಾಹಿತ್ಯದಲ್ಲಿ ನಾವು ಗುರುತಿಸಬಹುದಾದ ಏಕಸೂತ್ರತೆ ಮಾನವೀಯ ಆದರ್ಶಗಳಿಗೆ ಸಂಬಂಧಿಸಿದ್ದು. ಆರಂಭದಿಂದಲೇ ಮಾರ್ಕ್ಸಿಸ್ಟ್ ಸಿದ್ಧಾಂತಗಳ ಕುರಿತ ಒಲವಿನಲ್ಲಿ ತನ್ನ ಪತ್ರಕರ್ತನ ಮನೋಧರ್ಮವನ್ನೂ, ಸೃಜನಶೀಲತೆಯನ್ನೂ ಬೆಳೆಸಿಕೊಂಡ ನಿರಂಜನರಿಗೆ ಬದುಕು ಒಂದು ಆಹ್ವಾನದಂತೆ ಎಂಬುದನ್ನು ಅವರ ಎಲ್ಲ ಕೃತಿಗಳೂ ಒಂದಲ್ಲ ಒಂದು ರೀತಿಯಿಂದ ಸಾರುತ್ತವೆ. ಸೈದ್ಧಾಂತಿಕ ನಿಲುವುಗಳನ್ನು ಬದಿಗಿರಿಸಿದರೂ, ಅವರ ಚಿಂತನೆಯ ಹರವಿನಲ್ಲಿ ಮನುಷ್ಯನೇ ಕೇಂದ್ರಬಿಂದು. ಅಪರೂಪವಾಗಿ ನಾನು ಬೆಂಗಳೂರಿಗೆ ಹೋದಾಗಲೆಲ್ಲ ಗಂಟೆಗಟ್ಟಲೆ ಅವರೊಡನೆ ಚರ್ಚಿಸುವಾಗಲೂ, ಮನುಷ್ಯನೂ ಆತನ ಕಾರ್ಯಕ್ಷೇತ್ರವಾದ ಭೂಖಂಡದ ಇತಿಹಾಸವೂ ಮುಗಿಯದ ಚರ್ಚೆಗೆ ವಸ್ತುವಾಗುವುದನ್ನು ಕಂಡು ನಾನು ವಿಸ್ಮಿತನಾಗಿದ್ದೇನೆ. ಅವರ ಚಿಂತನೆಯ ಆಳ ವಿಸ್ತಾರಗಳಲ್ಲಿ ಮಾನವನ ಇತಿಹಾಸದ ಹಜ್ಜೆಗುರುತುಗಳನ್ನು ಗಮನಿಸುತ್ತ ಹೋಗುವಾಗ ಅವರ ಸೃಜನಶೀಲತೆಯನ್ನು ಪೋಷಿಸಿಕೊಂಡು ಬಂದ ಅಧ್ಯಯನಶೀಲತೆ, ಇತಿಹಾಸ ಪ್ರಜ್ಞೆ, ಸಾಮಾಜಿಕ ಸ್ಪಂದನಗಳ ತಿಳಿವಳಿಕೆ ಕಂಡುಕೊಂಡು ನಾವು ಬೆರಗಾಗುತ್ತೇವೆ.

ಒಂದು ರೀತಿಯಲ್ಲಿ ನಿರಂಜನ ಬರೀ ಕನ್ನಡದ ಲೇಖಕರಲ್ಲ. ತನ್ನ ಸೃಜನಶೀಲ ಶಿಲ್ಪಕ್ಕೆ ಅವರು ಆರಿಸಿಕೊಂಡ ವಸ್ತುಗಳೆಲ್ಲ ವಿಶಿಷ್ಟತೆಯಿಂದ ಸಾರ್ವತ್ರಿಕತೆಯೆಡೆ (from the particular to the universal) ಸಾಗುವಂಥವು. ಅವು ಮಾನವ ಜನಾಂಗದ ಇತಿಹಾಸಕ್ಕೆ ಸ್ಪಂದಿಸುವ ಸಾಮಾಜಿಕ ಪ್ರಜ್ಞೆಯಿಂದ ಪ್ರೇರಿತವಾದಂಥವು. ಇತಿಹಾಸದಲ್ಲಿ ಸಂಭವಿಸಿದ್ದಿರಬಹುದಾದ ದಲಿತರ ಸಂಘರ್ಷದ ಒಂದು ಕಿಡಿ ಹೊರಡಿಸಿದ ನೋವು, ನಿರಂಜನರ ಕಲೆಗಾರಿಕೆಯಿಂದ 'ಮೃತ್ಯುಂಜಯ'ದ ಆಕಾರ ತಳೆಯಬಲ್ಲದು.

ನಿರಂಜನರ ಸಮತಾವಾದದ ಕುರಿತ ಒಲವು ನಿಲುಮೆ ಸ್ಪಷ್ಟವಾದರೂ, ಅದನ್ನು ನಾನು, ಮನುಷ್ಯನ ನಾಗರಿಕತೆಯ ಇತಿಹಾಸದಲ್ಲಿ ಅವರು ಗ್ರಹಿಸಿರುವ ನೋವಿನ ಅಂಶಗಳಿಂದ ಉಂಟಾದ ಮಾನವೀಯ ಮೌಲ್ಯ ಶೋಧನೆಯ ಕಾಯಕ ರೂಪಿಸಿದ ನಿಲುಮೆಯೆಂದೆ ತಿಳಿದಿದ್ದೇನೆ. ವಿಚಿಕಿತ್ಸೆ - ವಿಮರ್ಶೆಗಳಿಂದ ಸಂಶೋಧನೆಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಲೇಖಕರು ಸೃಜನಶೀಲ ಸಾಹಿತ್ಯರಚನೆಯಲ್ಲೂ ಮೆರೆಯುವುದು ವಿರಳ. ಈ ವಿರಳ ಗುಂಪಿನಲ್ಲಿ ನಿರಂಜನರಿದ್ದಾರೆ.

ಇದೇ ಕಾರಣದಿಂದ, ನಮ್ಮ ಮಹತ್ವದ ಕಥೆ ಕಾದಂಬರಿಕಾರರಾದ ನಿರಂಜನರ ಸೃಜನೇತರ ಸಾಹಿತ್ಯ ಕೃಷಿಯನ್ನೂ ನಾವು ತುಂಬ ಗೌರವದಿಂದ ನೋಡಬೇಕಾಗಿದೆ. ಅವರ ಜ್ಞಾನದಾಹದಿಂದಲೇ ನಮಗೆ ಲಭಿಸಿರುವ 'ಜ್ಞಾನಗಂಗೋತ್ರಿ'ಯ ಸಂಪುಟಗಳು, ವಿಶ್ವದ ಕಥಾಸಾಹಿತ್ಯವನ್ನೆಲ್ಲ ತಿರುವಿಹಾಕಿ, ಗುಣ, ಕಲಾತ್ಮಕತೆ, ಸಾಮಾಜಿಕ ಸಂಬದ್ಧತೆಗಳ ನೆಲೆಯಲ್ಲಿ ಅವರು ಸಂಪಾದಿಸಿದ ಕನ್ನಡ ವಿಶ್ವಕಥಾಕೋಶ, ಅವುಗಳಿಗಾಗಿ ಅವರು ಬರೆದ ಪ್ರಸ್ತಾವನಾರೂಪದ ವಿಶ್ವದ ಹತ್ತಾರು ರಾಷ್ಟ್ರಗಳ ಸಾಹಿತ್ಯೇತಿಹಾಸ, ಕನ್ನಡ ಸಾಹಿತ್ಯವನ್ನೇ ಶ್ರೀಮಂತವಾಗಿಸಿದ ಕೃತಿಗಳು. ಇವೆರಡರ ಉದ್ದೇಶ, ವ್ಯಾಪ್ತಿಗಳನ್ನು ಗಮನಿಸಿದಾಗಲೂ ನಮಗೆ ನಿರಂಜನರ 'ವಿಶ್ವದೃಷ್ಟಿ'ಯನ್ನು ಕಾಣಲು ಸಾಧ್ಯವಾಗುತ್ತದೆ.

'ಪ್ರಗತಿಶೀಲ ಚಳವಳಿ', ಮುಂದೆ 'ಪ್ರಗತಿ ಪಂಥ'ದ ಚಟುವಟಿಕೆಗಳಿಗೆ ನಿರಂಜನ ಕೊಟ್ಟ ನಾಯಕತ್ವದಲ್ಲಿ ನಾವು, ಇತಿಹಾಸದ ಗತಿಗೆ ತೀಕ್ಷ್ಣತೆ ಬರಬೇಕು ಎಂಬ ಅವರ ಕಳಕಳಿಯನ್ನೂ ಕನ್ನಡದ ಸಾರಸ್ವತ ಲೋಕ ತನ್ನ ಸಾಮಾಜಿಕ ಪರಿಸರದ ಎಲ್ಲ ಅನಿಷ್ಟಗಳಿಗೆ ತೀವ್ರವಾಗಿ ಸ್ಪಂದಿಸಬೇಕು ಎಂಬ ಚಡಪಡಿಕೆಯನ್ನೂ ಕಾಣುತ್ತೇವೆ. ನಿರಂಜನರ ವೈಯಕ್ತಿಕ ಬದುಕಿನಲ್ಲೇ ಪ್ರಾಮಾಣಿಕತೆ, ಛಲ, ಸ್ನೇಹ, ಬದುಕಿನ ಕುರಿತ ಶ್ರದ್ಧೆ ಅವರು ನೆಚ್ಚಿಕೊಂಡ ನೀತಿಮೌಲ್ಯಗಳು. ಅವರ ಸಂಪಾದನೆಗಳೆಲ್ಲ ಜೀವನ ಪ್ರೀತಿಯಿಂದ ರೂಪುಗೊಂಡ ಸೌಂದರ್ಯಪ್ರಜ್ಞೆ ಕುದುರಿಸುವ ಹಂಬಲಗಳು (aesthetic aspirations) ಮತ್ತು ವರ್ತಮಾನದ ಸಾಮಾಜಿಕ ಪರಿಸರದ ಅನಿಷ್ಟಗಳ ನಡುವಣ ವೈದೃಶ್ಯದಿಂದ ರೂಪುಗೊಂಡಂಥವು.

ವೈಯಕ್ತಿಕ ಬದುಕಿನಲ್ಲೂ, ತನ್ನ ಆರೋಗ್ಯ ಕೆಟ್ಟಾಗ, ತನ್ನ ಪ್ರೀತಿಯ ಮಡದಿ ಡಾ। ಅನುಪಮಾ ಅವರ ಆರೋಗ್ಯ ಕೆಟ್ಟಾಗ, ಇದನ್ನು ಸರಿಪಡಿಸಲು ತಾನು ಓಡಾಡುವಷ್ಟು ಸಮರ್ಥನಲ್ಲವೆಂಬ ನೋವು ಕಾಡಿದಾಗ, ತನ್ನ ಪ್ರೀತಿಯ ಮಕ್ಕಳು ಏನೆಲ್ಲ ಭಾರ ಹೊರಬೇಕಾಗಿದೆ ಎಂಬ ನೋವು ಕಾಡಿದಾಗ, ನಿರಂಜನ ತನ್ನ ಮನಸಿನ ಸ್ತಿಮಿತವನ್ನು ಕಾಪುಕೊಂಡೆ, ಬದುಕಿನ ಕುರಿತ ತನ್ನ ಶ್ರದ್ಧೆಯನ್ನು ಕಳೆದುಕೊಳ್ಳದೆ, ಅದೇ ಛಲಗಾರನಾಗಿ ಜೀವನವನ್ನು ಇದಿರಿಸಿರುವವರು. ನಿರಂಜನ ದಂಪತಿಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಮಾಡಿದ ಹೋರಾಟದ ಕಥೆಯೇ ಒಂದು ಕಾದಂಬರಿಯ ವಸ್ತುವಾಗಬಹುದು.

ಎಲ್ಲ ಸೃಜನಶೀಲ ಲೇಖಕರೂ ತಮ್ಮ ಸೃಜನಶೀಲತೆಯ ಬೆಳಕಿನಲ್ಲಿ ತಮ್ಮ ಸುತ್ತಣ ಪರಿಸರವನ್ನು ವಿಮರ್ಶಿಸುವುದು ತೀರ ಸಾಮಾನ್ಯ. ನಿರಂಜನ ಮಾತ್ರ ಇದಕ್ಕೆ ಅಪವಾದ. ಅವರು ಸೃಜನಶೀಲತೆಯ ಬೆಳಕು ಎಲ್ಲಿದ್ದರೂ ಅದು ತನ್ನ ಬೆಳಕಿನಂತೆ ಎಂದು ಭಾವಿಸುವವರು. ಈ ಛಲಗಾರ ಧೀಮಂತ ಸಾಹಿತಿಗೆ ಸ್ನೇಹವೇ ಶ್ರೀರಕ್ಷೆ. ಈ ಸ್ನೇಹ ಔಪಚಾರಿಕವೆನಿಸಬಹುದಾದ ಸ್ವಭಾವ ವಿಶೇಷವಷ್ಟೇ ಅಲ್ಲ. ಅದು ಅವರ ಮೌಲ್ಯ ಶೋಧನೆಯ ಕಾಯಕದ ಒಂದು ಅಂಗ.

ಆರೋಗ್ಯ ಕೆಟ್ಟರೂ ವಿಚಾರ ಕೆಡುವುದೇ ಎನ್ನುವ ನಿರಂಜನರ ಮಾನಸಿಕ ಸ್ಥೈರ್ಯ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಇನ್ನೂ ದೀರ್ಘಕಾಲ ಹೆಚ್ಚಿಸಲು ಸಹಕಾರಿಯಾಗುವುದು ಎಂದು ನಂಬಿರುವವನು ನಾನು. ಬದುಕಿನ ಕುರಿತ ಅಚಲ ಶ್ರದ್ಧೆ, ಮಾನವಜನಾಂಗದ ಕುರಿತ ತುಂಬು ಪ್ರೀತಿ, ಇವನ್ನು ವ್ಯಕ್ತಪಡಿಸಲು ತನ್ನ ಸೃಜನಶೀಲತೆ ಎಂಥ ಕಷ್ಟಗಳನ್ನೂ ಎದುರಿಸಿ ಗೆದ್ದು ಬರಬೇಕು ಎನ್ನುವ ಛಲದ ಲೇಖಕರು ಯಾರೆಂದು ಯೋಚಿಸುವಾಗ ನನಗೆ ನಿರಂಜನ ಕಾಣುತ್ತಾರೆ. 'ಮೃತ್ಯುಂಜಯ'ದ ನಂತರ ಅವರು ಬರೆಯಲಾಶಿಸಿರುವ, ಯೋಜಿಸಿರುವ, 'ಪ್ರಾಗ್ಭಾರತ ಕಥಾ'ದ ಬರೆವಣಿಗೆ ಮುಗಿದು, ಆ ಗ್ರಂಥ ಬೇಗ ಮುದ್ರಣ ಕಾಣುವಂತಾಗಬೇಕು ಎಂದು ಆಸೆಯಿರಿಸಿಕೊಂಡವನು ನಾನು. ಆಗ ನಾನು ಸೃಜನಶೀಲ ನಿರಂಜನರ ಸತ್ಯಶೋಧನೆಯ ಇನ್ನೊಂದು ಮುಖವನ್ನು ಕಾಣುತ್ತೇನೆ ಎಂಬ ನಂಬಿಕೆ ನನಗಿದೆ. ಅಪೂರ್ವ ಹೃದಯವೈಶಾಲ್ಯ, ಸಾಹಿತ್ಯದ ಶ್ರೀಮಂತಿಕೆ ಎರಡನ್ನೂ ಬೆಳೆಸಿಕೊಂಡ ಕನ್ನಡದ ಕೀರ್ತಿಯೆನಿಸಿರುವ ನಿರಂಜನರನ್ನು ನಾನು ಕಾಣುವುದು ಈ ರೀತಿ. ○

ಅಚಲ

- ವಿ. ಜಿ. ಭಟ್ಟ

ಕಳೆದ ೪೫ ವರ್ಷಗಳಿಗಿಂತಲೂ ಹೆಚ್ಚಿನ ಕಾಲ ನಾನು ನಿರಂಜನನ ಗೆಳೆತನ ಬೆಳೆಸಿಕೊಂಡು ಬಂದಿದ್ದೇನೆ. ಹುಬ್ಬಳ್ಳಿಯ ಒಂದು ಸಣ್ಣ ಕೋಣೆಯಲ್ಲಿ ಅಜ್ಜಿ (ಅವನ ತಾಯಿ)ಯ ಜತೆಗೆ ಬದುಕಿ ಬಂದ ಸ್ಥಿತಿ, ಪತ್ರಿಕೆಗಳ ಮೂಲಕ ಜನ ಜಾಗೃತಿಗೊಳಿಸಲು ಕೆಂಪು ಬಾವುಟ ಎತ್ತಿ ಹಿಡಿದು ಬಂದ ಗತಿ, ಕುಳುಕುಂದ ಶಿವರಾಯ - ನಂತರ ನಿರಂಜನನಾಗಿ ಗೈದ ಅವನ ಸಾಹಿತ್ಯ ನಿರ್ಮಿತಿ . ಅವುಗಳನ್ನೆಲ್ಲ ಆತ್ಮೀಯನಾಗಿ ಕಾಣುತ್ತ ಬಂದಿದ್ದೇನೆ. ಮುಂದೆ ಕೆಲಕಾಲ ಮಡದಿ ಡಾ। ಅನುಪಮಾ ನಿರಂಜನ ವೈದ್ಯಕೀಯ ವೃತ್ತಿ ಪ್ರಾರಂಭಿಸಲು ಆಗ ನಾನು ವಾಸಿಸುತ್ತಿದ್ದ ಧಾರವಾಡಕ್ಕೆ ಬಂದಾಗ ಅವರಿಗೆ ತೀರ ಹತ್ತಿರದವನಾಗುವ ಸದವಕಾಶ ನನಗೆ ಒದಗಿತು.

ನಿರಂಜನನ ಕೃತಿಗಳನ್ನೆಲ್ಲ ಓದಿ ಆನಂದಪಟ್ಟಿದ್ದೇನೆ. ಅವನು ಸಂಪಾದಿಸಿದ ಕಿರಿಯರ ವಿಶ್ವಕೋಶ, ವಿಶ್ವಕಥಾ ಸಂಗ್ರಹಗಳಿಗೆ ಬೆರಗಾಗಿದ್ದೇನೆ. ಹಿಡಿದ ಕೆಲಸವನ್ನು ಅಚ್ಚುಕಟ್ಟಾಗಿ, ನಿರ್ಧರಿಸಿದ ಅವಧಿಯೊಳಗೇ ಕಟ್ಟುನಿಟ್ಟಾಗಿ ಮಾಡಿ ಮುಗಿಸುವ ಅವನ ದೃಢಸಂಕಲ್ಪ, ದೈತ್ಯಶಕ್ತಿಗೆ ತಲೆಬಾಗಿದ್ದೇನೆ.

ಕಳೆದ ಒಂದು ವರ್ಷ ನಾನು ಬೆಂಗಳೂರಿನಲ್ಲಿರಬೇಕಾಗಿ ಬಂತು. ವಾರಕ್ಕೊಮ್ಮೆ ನಿರಂಜನನ ದರ್ಶನ. ನನ್ನ ಕವನಗಳನ್ನೆಲ್ಲ ದುರ್ಬೀನು ಹಿಡಿದು ಓದಿ ತಪ್ಪುಗಳನ್ನು ತೋರಿಸುವದು, ಅದಕ್ಕೆ "ನಾನು ದೋಷಾಲಂಕಾರ ಪ್ರಿಯನಯ್ಯಾ" ಅಂದಾಗ ನಸುನಗುವದು, ಒಮ್ಮೊಮ್ಮೆ ನಾನು ನಿರ್ವಿಣ್ಣನಾಗಿ ಕುಳಿತಾಗ "ನೋಡು ವಿ.ಜಿ...." ಎಂದು ಜೀವನದ ರಹಸ್ಯವನ್ನೇನೋ ಬಿಚ್ಚಿತೋರಿಸುವವನಂತೆ ಸಮಾಧಾನ ಪಡಿಸುವದು, ಅರ್ಧಾಂಗವಾಯುವಿನಿಂದ ತನ್ನ ಎಡಗೈ ನಿಷ್ಕ್ರಿಯವಾಗಿ ನಡೆದಾಡಲೂ ಆಗದ ಪರಿಸ್ಥಿತಿಯಲ್ಲೂ, ಸಹಧರ್ಮಿಣಿ ಅನುಪಮಾ ಅರ್ಬುದ ನಿವಾರಣೆಗೆ ಮೂರು ಸಲ ಶಸ್ತ್ರಕ್ರಿಯೆ ಮಾಡಿಸಿಕೊಂಡು ತೀವ್ರಚಿಕಿತ್ಸೆಗೆ ಒಳಗಾದಾಗಲೂ "ನೋಡು ವಿ.ಜಿ. ಜೀವನದಲ್ಲಿ...." ಎಂದು ಕಂಬನಿದುಂಬಿದ ನನ್ನನ್ನೇ ಸಂತೈಸುವದು ಕೆಚ್ಚೆದೆಗಾರ ನಿರಂಜನನಿಗೇ ಸಾಧ್ಯ.

ಇಷ್ಟೂ ಅಲ್ಲದೆ ನನ್ನ ಕವನ ಸಂಗ್ರಹಗಳೆಲ್ಲ (೬-೭) ತೀವ್ರವಾಗಿ ಪ್ರಕಟವಾಗಲೇ ಬೇಕು ಎಂಬ ಛಲದಿಂದ ಏನೇನೋ ಯೋಜಿಸುತ್ತಾನೆ; (ಎರಡನೆಯ) ಮಗಳು ಸೀಮಂತಿನಿಗೆ ಸೌಮ್ಯವಾಗಿ ಸೂಚಿಸುತ್ತಾನೆ. ಅವಳು ತನ್ನ ಅಭ್ಯಾಸ,

ಮನೆಕೆಲಸ, ಸ್ಪಂದನ ಪ್ರಕಾಶನದ ಕಾರ್ಯ, ತಂದೆ ತಾಯಿಯರ ಶುಶ್ರೂಷೆ ಮಾಡುತ್ತ ನನ್ನ ಕವನ ಸಂಗ್ರಹಗಳ ಬಗ್ಗೆ ಹಲವು ಕಾರ್ಯಗಳನ್ನು ನಗುಮೊಗದಿಂದಲೇ ಮಾಡುತ್ತಾಳೆ.

ಎಷ್ಟು ಬೇತಾಳಗಳನ್ನು ಈ ವಿಕ್ರಮ ಒಂದೇ ಕೈಯಲ್ಲಿ ಹೆಡಮುರಿಗೆ ಕಟ್ಟಿ ಹಿಡಿದು ತಿವಳುತ್ತಲಾದರೂ ಸಾಗಿದ್ದಾನೆಂದು ನಾನು ಮೂಕವಿಸ್ಮಿತನಾಗುತ್ತೇನೆ.

ಈ ಮಹಾವೃಕ್ಷದ ಟೊಂಗೆ, ಟಿಸಿಲು, ಹಸಿರೆಲೆಗಳನ್ನು ಕಂಡು, ಅವುಗಳಲ್ಲಿ ಅರಳಿದ ಹೂಗಳ ಸುಗಂಧ ಹೀರಿ, ಫಲಗಳ ಸವಿ ಆಸ್ವಾದಿಸಿದವರು ಅಸಂಖ್ಯ. ನಾನೂ ಅವರಲ್ಲಿ ಒಬ್ಬ. ಈ ವೃಕ್ಷದ ಬೇರು ಎಷ್ಟು ಆಳಕ್ಕೆ ಹೋಗಿರಬಹುದು ಎಂದು ಧೇನಿಸಿ ಅರಿಯಲು ಯತ್ನಿಸುತ್ತೇನೆ. ನೋಡುತ್ತ ಹೋದಂತೆ ಆಳದಲ್ಲಿ ಪಿರಾಮಿಡ್ಡುಗಳು, ಮನುಕುಲದ ಕತೆಯ ರೇಖಾಚಿತ್ರಗಳು.... ಏನೇನೋ ಕಾಣುತ್ತವೆ.

ಈಗ ಅಜ್ಜಿ ಇಲ್ಲ. ಆದರೆ ೪೫ ವರ್ಷಗಳ ಹಿಂದೆ ಹುಬ್ಬಳ್ಳಿಯ ಚಿಕ್ಕ ಕೋಣೆಯಲ್ಲಿ ಮೆದುವಾಗಿ 'ಶಿವಾ....' ಎಂದು ತನ್ನ ಮಗನನ್ನು ಕರೆಯುತ್ತಿದ್ದದ್ದು ಇಂದಿಗೂ ನನ್ನ ಕಿವಿಯಲ್ಲಿ ಗುಂಜಿಸುತ್ತದೆ. "ಹೌದು ಅಜ್ಜೀ, ಅವನೇ ನಿರಂಜನ, ಅಚಲ" ಎಂದು ಹೇಳಿಕೊಳ್ಳುತ್ತೇನೆ.

ನಿರಂಜನನನ್ನು ಒಂದಿಷ್ಟು ಅರಿತಿದ್ದೇನೆಂದು ಹೇಳಿಕೊಳ್ಳಬಹುದು. ಆದರೆ ಅಚಲ ಶಿವನ ದರ್ಶನ ಆಗಿದೆಯೇ? ಯೋಚಿಸುತ್ತಲೇ ಇದ್ದೇನೆ. ○

ನಿರಂಜನ ಸಂಚಯ

- ಚೆನ್ನವೀರ ಕಣವಿ

'ಸರೋಜ ಸಂಚಯ', 'ಸಂಗಾತಿಯ ಸಂಚಯ', 'ಸಾಧನ ಸಂಚಯ' –ನಿರಂಜನರಿಗೆ ಇವು ಬಹು ಪ್ರಿಯವಾದ, ಹಾಗೆಯೇ ಬಹು ಜನಪ್ರಿಯವಾದ ಅಂಕಣಗಳು. ಅವರಲ್ಲೂ ಕೊನೆಯದು ಎರಡು ಜೀವಿಗಳ ಎದೆಯ ತುಡಿತವನ್ನು ಒಳಗೊಂಡು, ಸಾಹಿತ್ಯಿಕವಾಗಿ, 'ರಜಸಾತ್ಮಕ'ವಾಗಿ ಪ್ರೇಮವನ್ನು ಗಟ್ಟಿಗೊಳಿಸುವಲ್ಲಿ ಮುಖ್ಯಪಾತ್ರ ವಹಿಸಿತೆನ್ನಬೇಕು, ಅದಿರಲಿ. ಇದೀಗ ನಾನು ನನ್ನ ಸ್ಮೃತಿಸಂಚಯವನ್ನು ಬಿಚ್ಚಬೇಕಾಗಿದೆ. ನಿರಂಜನರನ್ನು ನಾನು ಮೊದಲು ಕಂಡದ್ದೆಂದು?

ನಾನಾಗ ಹೈಸ್ಕೂಲಿನ ವಿದ್ಯಾರ್ಥಿ. 'ಪ್ರಗತಿಶೀಲ ಕನ್ನಡ ಮಾಸಪತ್ರಿಕೆ'ಯಾಗಿ (ಸಂಪಾದಕರು : ಬಸವರಾಜ ಕಟ್ಟೀಮನಿ) 'ಉಷಾ' ಓದುಗರ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿದ ಕಾಲ. ೧೯೪೪ರ ಅದರ ದೀಪಾವಳಿ ಸಂಚಿಕೆಯಲ್ಲಿ 'ಸಂಧಿಕಾಲ' ಎಂಬ ಸಣ್ಣಕತೆ ಲೇಖಕರ ಸುಂದರವಾದ ಮುಖಚಿತ್ರದೊಂದಿಗೆ ಪ್ರಕಟವಾಗಿತ್ತು. ಚಿತ್ರದ ಕೆಳಗೆ 'ಶ್ರೀ ಶಿ. ರಾ. ಕುಳುಕುಂದ, ಮಂಗಳೂರು' ಎಂದಿತ್ತು. ಅದರ ವಸ್ತು ಹೀಗಿತ್ತೆಂದು ನೆನಪು: ಜನತಾದ್ರೋಹಿ ತಂದೆ; ರಾಜಭಕ್ತ ಹಿರಿಮಗ; ಗಾಂಧಿ ಭಕ್ತ ನಡುಮಗ; ಕಮ್ಯೂನಿಸ್ಟ್ ಕಿರಿಯ ಮಗ. ಈ ಕುಟುಂಬದಲ್ಲಿ ನಡೆದ ಸಂಘರ್ಷಣೆ ಇಡಿಯ ನಾಡಿನ ಸಂಘರ್ಷಣೆಯ ಸಂಧಿಕಾಲವನ್ನು ಸೂಚಿಸಿತ್ತು. ನಾಡಿನ ರಾಜಕೀಯ ರಂಗವನ್ನು ನಾನು ಮೊದಲು ಸಾಹಿತ್ಯದ ಮೂಲಕ ಪರಿಚಯ ಮಾಡಿಕೊಂಡದ್ದು ಬಹುಶಃ ಈ ಕಥೆಯ ಮೂಲಕ ಎಂದು ತೋರುತ್ತದೆ. ("ಪುಟ್ಟದೊಂದು ಪ್ರದೇಶಕ್ಕೆ ಸೀಮಿತವಾಗಿದ್ದ ನನ್ನ ಬರೆವಣಿಗೆ 'ಉಷಾ' ಮಾಸಿಕದ ಮೂಲಕ ನಾಡಿನ ನಾಲ್ಕು ಮೂಲೆಗಳನ್ನು ಮುಟ್ಟಿತು" ಎಂದು ಮುಂದೆ (೧೯೬೯) ನಿರಂಜನರೇ ಒಂದೆಡೆ ಹೇಳಿದ್ದಾರೆ.)

ಮುಂದೆ ಕೆಲ ದಿನಗಳಲ್ಲಿಯೇ ರಬಕವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ. ಪ್ರಗತಿಶೀಲ ಸಾಹಿತ್ಯ ಗೋಷ್ಠಿಯಲ್ಲಿ ಅ. ನ. ಕೃ., ತ. ರಾ. ಸು. ಮೊದಲಾದವರೊಂದಿಗೆ ಕುಳುಕುಂದ ಶಿವರಾಯರ ಭಾಷಣ. ಹಿಂದೆ 'ಉಷಾ'ದಲ್ಲಿ ಕಂಡ ಭಾವಚಿತ್ರಕ್ಕೂ ಈಗ ಪ್ರತ್ಯಕ್ಷ ನೋಡಿದ ವ್ಯಕ್ತಿಗೂ ಯಾವ ಅಂತರವೂ ಇರಲಿಲ್ಲ. ಮಾತುಗಾರಿಕೆಯೂ ಹಾಗೇ. ಸುಮಾರು ಇಪ್ಪತ್ತರ ಹರೆಯದಲ್ಲಿಯೇ ಪತ್ರಿಕಾರಂಗ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ತಕ್ಕಷ್ಟು ಅನುಭವ ಪಡೆದಿದ್ದ ಈ ವ್ಯಕ್ತಿ ನನ್ನ ಕುತೂಹಲವನ್ನು ಕೆರಳಿಸಿದ್ದರು.

'ಪ್ರಜಾಮತ'ದಲ್ಲಿ 'ಸರೂ ಕೇಳಿದೆಯಾ ?' ಅಂಕಣವನ್ನು ನಾನು ಆಗೀಗ ಓದುತ್ತಿದ್ದೆ. ಬರೆವಣಿಗೆಯಲ್ಲಿ ತಮ್ಮದೇ ಆದ ಶೈಲಿಯನ್ನು ಅವರು ಆಗಲೇ ಸಾಧಿಸಿಕೊಂಡಿದ್ದರು. ಆ ಹೊತ್ತಿಗೆ ಪ್ರಕಟವಾಗಿದ್ದ ಎರಡು ಕಥಾಸಂಗ್ರಹಗಳಲ್ಲಿಯೂ ಅದು ಒಡೆದು ಕಾಣುತ್ತಿತ್ತು.

೧೯೪೬ರಲ್ಲಿ ನಾನು ಕಾಲೇಜು ಪ್ರವೇಶಿಸಿದಾಗ, ಜನಪದ ಸಾಹಿತ್ಯ ಸಂಗ್ರಹದಲ್ಲಿ ತಲ್ಲೀನರಾಗಿದ್ದ ಶಿವೇಶ್ವರ ದೊಡ್ಡಮನಿಯವರ ಪರಿಚಯವಾಯಿತು. ಅವರು ಸಂಗ್ರಹಿಸಿದ್ದ ಕೆಲವು ಸುಂದರ ಜನಪದ ಗೀತಗಳು 'ಉಷಾ' ಪತ್ರಿಕೆಯಲ್ಲಿ ಪ್ರಕಟವಾಗಿದ್ದನ್ನು ನೋಡಿದ್ದೆ. ಹಳ್ಳಿಯ ಸರಳತೆ, ಮುಗ್ಧತೆಗಳ ಪ್ರತೀಕವಾಗಿದ್ದ ಶಿವೇಶ್ವರ ಅಲ್ಪಕಾಲದಲ್ಲಿಯೇ ನನ್ನ ಆಪ್ತಮಿತ್ರರಾಗಿಬಿಟ್ಟರು. ಕುಳುಕುಂದರಿಂದ ತಮಗೆ ಬಂದ

ಪತ್ರಗಳನ್ನು ಅವರು ನನಗೆ ತೋರಿಸುತ್ತಿದ್ದರು. ತರುಣ ಬರೆಹಗಾರರೊಡನೆ ಮೈತ್ರಿಯನ್ನು ಬೆಳೆಸುವವರಲ್ಲಿ ಹಾಗೂ ಅವರನ್ನು ಒಂದಿಲ್ಲ ಒಂದು ರೀತಿಯಲ್ಲಿ ತಮ್ಮ ಅಂಕಣದ ಬರೆಹದ ಮೂಲಕ ಓದುಗರಿಗೆ ಪರಿಚಯ ಮಾಡಿಕೊಡುವಲ್ಲಿ ಕುಳಕುಂದರು ತಮ್ಮ ಚಾಣಾಕ್ಷತೆಯನ್ನು ವ್ಯಕ್ತಪಡಿಸುತ್ತಿದ್ದರು. ಎಡೆಬಿಡದ ಸಂಚಾರ, ಸಭೆ ಸಮ್ಮೇಳನಗಳ ಒಡನಾಟ ಅವರಿಗೆ ಇದಕ್ಕೆ ಹೆಚ್ಚು ಸಹಾಯಕವಾಗಿರಬೇಕು.

೧೯೪೭ರ ಪ್ರಾರಂಭದಲ್ಲಿ ಅವರೊಮ್ಮೆ ಧಾರವಾಡದ ಮಾಳಮಡ್ಡಿಯಲ್ಲಿದ್ದ ನನ್ನ ಕೋಣೆಗೆ ಬಂದರು. ಸ್ಟೋವ್ ಹೊತ್ತಿಸಿ ನಾನು ಚಹ ಮಾಡಿದೆ. ಗೆಳೆಯ ಶಿವೇಶ್ವರರ ಮೂಲಕ ಪರಸ್ಪರ ಪರಿಚಯವಾಯಿತು. ತಮ್ಮ ಬರೆವಣಿಗೆಯ ಮೂಲಕ ಅವರು ಆಗಲೇ ಪರಿಚಯವಾಗಿಬಿಟ್ಟಿದ್ದರಿಂದ ಈಗ ನಾವು ಹೆಚ್ಚು ಸಲಿಗೆಯವರಾದೆವು. ಶುಭ್ರವಾದ ಬಿಳಿ ಪಾಯಜಾಮಾ ಹಾಗೂ ಬುಶ್‌ಶರ್ಟಿನಲ್ಲಿ ಸ್ಫುರದ್ರೂಪಿಯಾಗಿದ್ದರು. (ಬಿಳಿ ಬಟ್ಟೆಗಳ ಆ ಶುಭ್ರತೆ, ಅಚ್ಚುಕಟ್ಟುತನ ಇಂದಿಗೂ ಅಚ್ಚಳಿಯದೆ ಅವರಲ್ಲಿ ಉಳಿದುಕೊಂಡು ಬಂದಿದೆ.) ಸಿಗರೇಟು ಸೇವನೆಯಿಂದ ಅವರ ಮನಸ್ಸಿಗೆ ಏನೊ ನೆಮ್ಮದಿ ದೊರೆಯುತ್ತಿತ್ತೆಂದು ತೋರುತ್ತದೆ. ಈ ವಿಷಯದಲ್ಲಿ ಶಿವೇಶ್ವರ ಅವರಿಗೆ ಜೊತೆಗೂಡುತ್ತಿದ್ದರು. ಕಮ್ಯೂನಿಸ್ಟ್ ಪಕ್ಷದ ಸಾಪ್ತಾಹಿಕ 'ಜನಶಕ್ತಿ'ಯನ್ನು ಹುಬ್ಬಳ್ಳಿಯಿಂದ ಹೊರಡಿಸುವ ತಯಾರಿಯಲ್ಲಿದ್ದ ಅವರು ಲೇಖಕಮಿತ್ರರನ್ನು ಕಾಣಲು ಮೇಲಿಂದ ಮೇಲೆ ಧಾರವಾಡಕ್ಕೆ ಬಂದು ಹೋಗುತ್ತಿದ್ದರು.

ಕುಳಕುಂದರ ಸಂಪಾದಕತ್ವದಲ್ಲಿ ೧೯೪೭ ಮೇ ೧ರಂದು 'ಜನಶಕ್ತಿ' ಪ್ರಾರಂಭವಾಯಿತು. ಈ ಮೊದಲೇ ಅವರಿಂದ ಆಕರ್ಷಿತರಾಗಿದ್ದ ಶಿವೇಶ್ವರ ಪತ್ರಿಕೆಯ ಪ್ರಕಾಶಕರಾದರು; ಉಪಸಂಪಾದಕರೂ ಆದರು. ನಾನು ಆಗೊಮ್ಮೆ ಈಗೊಮ್ಮೆ 'ಜನಶಕ್ತಿ'ಯ ಕಾರ್ಯಾಲಯಕ್ಕೆ ಹೋಗುತ್ತಿದ್ದೆ. ನನ್ನನ್ನು ನೋಡಿ ನಸುನಕ್ಕು, ಒಂದೆರಡು ಮಾತಾಡಿ ಮರುಕ್ಷಣದಲ್ಲಿಯೇ ಕುಳಕುಂದ ತಮ್ಮ ಕೆಲಸದಲ್ಲಿ ಮಗ್ನರಾಗಿಬಿಡುತ್ತಿದ್ದರು. ಜೊತೆಗೆ ಶಿವೇಶ್ವರ, ಕೆ. ಸದಾಶಿವ, ಕೆ. ಶ್ರೀಧರ್ - ಎಲ್ಲರೂ ಮೇಜಿಗೆ ತಲೆಬಗ್ಗಿಸಿ ಪತ್ರಿಕೆಯ ಬರೆವಣಿಗೆಯಲ್ಲಿ ತೊಡಗಿದವರು ಕೆಲಸ ಪೂರೈಸಿದ ಮೇಲೆಯೇ ಮೇಲೇಳುತ್ತಿದ್ದರು. ಆಮೇಲೆ ಸಮೀಪದ ಹೋಟಲಿನಲ್ಲಿ ದೋಸೆ, ಚಹ ಇತ್ಯಾದಿ. ಅವರ ಕೆಲಸದ ಶಿಸ್ತು ಮಾತ್ರ ನನ್ನನ್ನು ದಂಗುಬಡಿಸುತ್ತಿತ್ತು. ಪತ್ರಿಕೆ ಹೊರಬಂದ ದಿನ ಒಂದೆರಡು ಸಂಚಿಕೆಗಳನ್ನು ಹಿಡಿದು ಶಿವೇಶ್ವರ ನನ್ನ ಕೋಣೆಗೆ ಬರುತ್ತಿದ್ದರು. ರಾತ್ರಿಯೆಲ್ಲ ಏನೇನೊ ಮಾತುಕತೆ, ಕಾವ್ಯಾಲಾಪ. ಯಾವುದೊ ಉತ್ಸಾಹ, ಸಂತೋಷದಲ್ಲಿ ತಮ್ಮ ಕಣ್ಣುನೋವು, ಅಸ್ವಸ್ಥತೆಯನ್ನೆಲ್ಲ ಅವರು ಮರೆಯುತ್ತಿದ್ದರು. ಒಂದು ಪಕ್ಷದ ಪತ್ರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ನನ್ನ ಸಹವಾಸದಿಂದಲೊ ಏನೋ ಅವರು ತಮ್ಮ ಪರಿಶುದ್ಧ ಹೃದಯದ ಕಾವ್ಯರಚನೆಯನ್ನು

ಕೊನೆಯವರೆಗೂ ಉಳಿಸಿಕೊಂಡಿದ್ದರು. (ಈಗ 'ಪ್ರಜಾಮತ'ದ ಸಂಪಾದಕರಾಗಿರುವ ಹ.ವೆಂ.ನಾಗರಾಜರಾಯರು ಒಂದೆರಡು ತಿಂಗಳು 'ಜನಶಕ್ತಿ'ಯ ಉಪಸಂಪಾದಕರಾಗಿದ್ದರು. ಕೋಮಲ ಶರೀರದ ಅವರ ಕಂಠವೂ ಇಂಪಾಗಿತ್ತು. ಕೆಲವು ಕವಿತೆಗಳನ್ನು ತುಂಬ ಭಾವಪೂರ್ಣವಾಗಿ ಹಾಡುತ್ತಿದ್ದರು. ಅಡಿಗರ 'ಎಂದು ಕೊನೆ ಓ ಎಂದು ಕೊನೆ?'ಎಂಬ ಕವಿತೆಯನ್ನು ಅವರು ಹಾವಭಾವದಿಂದ ಹಾಡುತ್ತಿದ್ದುದು ಇನ್ನೂ ನನ್ನ ಕಿವಿಯಲ್ಲಿ ತುಂಬಿಕೊಂಡಂತಿದೆ.)

'ಜನಶಕ್ತಿ' ಶ್ರಮಜೀವಿ ವರ್ಗದ ರಾಜಕೀಯ ಸಾಪ್ತಾಹಿಕವೆನಿಸಿದ್ದರೂ ಸಾಹಿತ್ಯಿಕ ವಾದ-ವಿವಾದಗಳು, ಏಕೀಕರಣ ಚಳುವಳಿಗೆ ಸಂಬಂಧಪಟ್ಟ ಲೇಖನಗಳು ಅದರಲ್ಲಿ ಬರುತ್ತಿದ್ದವಲ್ಲದೆ ಸಣ್ಣ ಕತೆ ಕವಿತೆಗಳೂ ಕಾಣಿಸಿಕೊಳ್ಳುತ್ತಿದ್ದವು. ಪಕ್ಷದ ವಿಚಾರವೇನೇ ಇರಲಿ, ಕುಳಕುಂದರ ಜಾದೂಗಾರಿಕೆಯಿಂದ ಪತ್ರಿಕೆ ಸಾಹಿತಿಗಳಿಗೆ ಅಪ್ರಿಯವೆನಿಸಿರಲಿಲ್ಲ. ಆಗ ನನ್ನಿಂದಲೂ ಒಂದು ಕಥೆ ಬರೆಯಿಸಿದ ಶ್ರೇಯಸ್ಸು ಕುಳಕುಂದರಿಗೆ ಸಲ್ಲುತ್ತದೆ. ಹಳ್ಳಿಯ ಜೀವನದ ನನ್ನ ಅನುಭವದಿಂದ ರೈತನೊಬ್ಬನ ಸಂಸಾರದ ಕಷ್ಟವನ್ನು ಚಿತ್ರಿಸಿದ ಆ ಕಥೆಯ ಹೆಸರು: 'ಮಣ್ಣಿನ ಮಕ್ಕಳು'. ೧೯೪೭ ಜುಲೈ ೧೩ರ 'ಜನಶಕ್ತಿ'ಯಲ್ಲಿ ಪ್ರಕಟವಾಯಿತು.

ಮುಂದೆ ಮೂರು ನಾಲ್ಕು ವರ್ಷ ಕುಳಕುಂದರನ್ನು ಕಾಣುವ ಅವಕಾಶ ವಿರಲಿಲ್ಲ. ಕಾರಣ: ಅವರ 'ಭೂಗತ' ಜೀವನ. ಹುಬ್ಬಳ್ಳಿ - ಧಾರವಾಡಗಳಲ್ಲಿ ತಲೆಮರೆಸಿಕೊಂಡು ಓಡಾಡುವಾಗ ಶಿವೇಶ್ವರ, ಅವರ ತಾಯಿ ಚೆನ್ನವೀರಮ್ಮ ನವಲೂರಿನಲ್ಲಿ ಅವರಿಗೂ ಅವರ ಸಂಗಾತಿಗಳಿಗೂ ಒದಗಿಸಿದ ರಕ್ಷಣೆ ಅವಿಸ್ಮರಣೀಯ.'ಜನಶಕ್ತಿ'ಗೆ ತಮ್ಮ ಶಕ್ತಿಯನ್ನೆಲ್ಲ ಧಾರೆಯೆರೆದ ಶಿವೇಶ್ವರ ತಾವು ಮಾತ್ರ ತಮ್ಮ ಆರೋಗ್ಯದ ಕಡೆಗೆ ಲಕ್ಷ್ಯವಹಿಸಲಿಲ್ಲ. ೧೯೫೦ರ ಮಾರ್ಚ್ ೨೬ ರಂದು ಅವರು ವಿಷಮಜ್ವರದಿಂದ ತೀರಿಕೊಂಡರು. ಆಪ್ತಮಿತ್ರನ ಅಗಲಿಕೆಯ ಅನುತಾಪದಲ್ಲಿಯೇ ನಾನು ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳಬೇಕಾಯಿತು.

೧೯೫೧ರಲ್ಲಿ ಭೂಗತ ಪ್ರಪಂಚದಿಂದ ಹೊರಬಂದ ಕುಳಕುಂದರು ಕಮ್ಯೂನಿಸ್ಟ್ ಪಕ್ಷದಿಂದಲೂ ಬಿಡುಗಡೆ ಪಡೆದು 'ನಿರಂಜನ'ರಾಗಿ ಹೊಸ ಹುಟ್ಟು ಪಡೆದರು. ಶಿವೇಶ್ವರರ ಅಕಾಲ ಮರಣದಿಂದ ಅವರಿಗೂ ಆಘಾತವಾಗಿತ್ತು. ಬೆಂಗಳೂರಿನಲ್ಲಿ 'ಮುಂದೋಗಾಮಿ ಪ್ರಕಾಶನ'ವನ್ನು ಆರಂಭಿಸಿ ನನಗೊಂದು ಪತ್ರ ಬರೆದರು. ಆ ಪ್ರಕಾಶನದ ದ್ವಿತೀಯ ಪ್ರಕಟನೆಯಾಗಿ 'ನಮ್ಮ ನಡುವಿನ ಗೋಡೆ' ಕಥಾಸಂಗ್ರಹವನ್ನು ಪ್ರಕಟಿಸಿ 'ಸಂಗಾತಿ ಶಿವೇಶ್ವರನ ಚಿರಸ್ಮರಣೆ'ಗೆ ಅದನ್ನು ಅರ್ಪಿಸಿದರು. ಶಿವೇಶ್ವರನ ಹಾಗೂ ನನ್ನ ಒಂದೊಂದು ಕಥೆ, ನಿರಂಜನರ ನಾಲ್ಕು ಕಥೆಗಳು ಅದರಲ್ಲಿ

ಸೇರಿವೆ. ಶಿವೇಶ್ವರನ ಬಗೆಗಿನ ತಮ್ಮ ಆತ್ಮೀಯತೆ, ತಳಮಳ, ಸಂವೇದನೆಗಳನ್ನು 'ಸೋದರ ಶಿವೇಶ್ವರನ ನೆನಪಿಗೆ' ಎಂಬ ಅಲ್ಲಿಯ ಲೇಖನದಲ್ಲಿ ಸ್ಮಾರಕವಾಗಿ ಕೆತ್ತಿದ್ದಾರೆ ನಿರಂಜನ. (ಶಿವೇಶ್ವರರ ಕೆಲವು ಕವಿತೆಗಳನ್ನೂ ಅವರು ಸಂಗ್ರಹಿಸಿದ ಜಾನಪದ ಗೀತೆಗಳನ್ನೂ ಬಸವರಾಜ ಕಟ್ಟೀಮನಿಯವರೂ ನಾನೂ ಕೂಡಿ ಸಂಪಾದಿಸಿ ೧೯೫೩ರಲ್ಲಿ 'ನವಿಲೂರ ಮನೆಯಿಂದ' ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದೆವು. ಇದೇ ಹೆಸರಿನ ತಲೆಬರೆಹವಡಿಯಲ್ಲಿ ಹಲವಾರು ಲೇಖನಗಳನ್ನು ಶಿವೇಶ್ವರ ಹಿಂದೆ ಪತ್ರಿಕೆಗಳಲ್ಲಿ ಬರೆದಿದ್ದರು.)

೧೯೫೭ ಮೇ ತಿಂಗಳು ಧಾರವಾಡದಲ್ಲಿ, ಕರ್ನಾಟಕ ಏಕೀಕರಣವಾದ ಮೇಲೆ ಪ್ರಥಮ ಸಾಹಿತ್ಯ ಸಮ್ಮೇಳನ - ಅದೂ ಕುವೆಂಪು ಅಧ್ಯಕ್ಷತೆಯಲ್ಲಿ. ಆ ಸಮ್ಮೇಳನದ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಅವಕಾಶ ನನಗೆ ಒದಗಿದ್ದಿತು. ಕಾರ್ಯಕ್ರಮಗಳ ಸಂಯೋಜನೆಯಲ್ಲಿ ಪ್ರಥಮ ಬಾರಿಗೆ ಹೊಸ ಹಾದಿ ಹಾಕಿಕೊಟ್ಟ ಸಮ್ಮೇಳನ ಅದಾಗಿದ್ದಿತು. ಗೋಕಾಕರು ಅಧ್ಯಕ್ಷರಾಗಿದ್ದ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಲು ನಿರಂಜನರನ್ನು ಆಮಂತ್ರಿಸಲಾಗಿತ್ತು. 'ಸಾಹಿತಿಯು ತನ್ನ ತತ್ವ ಹಾಗೂ ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದ ಹಾಗೆ ಅಭಿವ್ಯಕ್ತಿಗೊಳಿಸಲು ಸಾಧ್ಯವೆ ?' ಎಂಬುದು ಅದರ ವಿಷಯ. "ಯಾವುದೇ ತತ್ವದ ಪ್ರಚಾರಕ ಇಲ್ಲವೆ ಆರಾಧಕ ಆ ತತ್ವದ ಪ್ರತಿಪಾದನೆಗೆಂದೇ ಸಿದ್ಧಗೊಳಿಸುವ ಬರವಣಿಗೆ ಎಂದಿಗೂ ಸಾಹಿತ್ಯವೆನಿಸದು. ಬರೆಯುವವನು ಮುಖ್ಯತಃ ಮೂಲತಃ ಪ್ರಾಮಾಣಿಕ ಕಲಾವಿದನಾಗಿದ್ದರೆ ಆತನ ತತ್ವನಿಷ್ಠೆಯಿಂದ, ನಂಬುಗೆಗಳಿಂದ ಕಲೆಗೆ ಹಾನಿಯೊದಗದು, ಅಷ್ಟೇ ಅಲ್ಲ, ಆ ಸಾಹಿತಿ ತನ್ನ ತತ್ವ ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದ ಹಾಗೆ ಅಭಿವ್ಯಕ್ತಿಗೊಳಿಸುವುದು ದುಸ್ಸಾಧ್ಯವಾಗದು" ಎಂದು ನಿರಂಜನ ಪ್ರತಿಪಾದಿಸಿದರು. ಅವರು ಕಮ್ಯೂನಿಸ್ಟ್ ಪಕ್ಷದಿಂದ ಬಿಡುಗಡೆ ಪಡೆದು ಆಗಲೇ ಆರು ವರುಷವಾಗಿತ್ತು.

೧೯೫೮ರಲ್ಲಿಯೇ ಡಾ। ಅನುಪಮಾ ಅವರೊಂದಿಗೆ ನಿರಂಜನರ ಮದುವೆಯಾಗಿತ್ತು. (ಅದನ್ನು ನಾನು ನಾಲ್ಕೈದು ವರ್ಷ ಮೊದಲೇ ಊಹಿಸಿದ್ದೆ.) ಸಮ್ಮೇಳನಕ್ಕೆ ಅನುಪಮಾ ಜೊತೆಗೆ ತ್ರಿವೇಣಿಯವರೂ ಬಂದಿದ್ದರು. ಶ್ರೀಮತಿ ಕಣವಿಯವರಿಗೆ ಅವರಿಬ್ಬರ ಪರಿಚಯದಿಂದ ಹೆಚ್ಚಿನ ಸಂತೋಷವಾಯಿತು.

೧೯೫೭, ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಜರುಗಿದ ದಸರಾ ಕವಿಸಮ್ಮೇಳನದಲ್ಲಿ ಭಾಗವಹಿಸಲು ಮನೆಯವರೊಡನೆ ನಾನು ಮೈಸೂರಿಗೆ ಹೋದಾಗ ನಿರಂಜನ ಗೋಕುಲ ವಿಸ್ತರಣದಲ್ಲಿ ಮನೆ ಮಾಡಿದ್ದರು. ನಮ್ಮಿಬ್ಬರನ್ನೂ ಊಟಕ್ಕೆ ಆಮಂತ್ರಿಸಿ ಧಾರವಾಡದ ಹಿಂದಿನ ನೆನಪುಗಳನ್ನು ಮೆಲುಕು ಹಾಕಿದರು. ಡಾ। ಅನುಪಮಾ

ಧಾರವಾಡದಲ್ಲಿ ತಮ್ಮ ವೈದ್ಯಕೀಯ ವೃತ್ತಿಯನ್ನು ಆರಂಭಿಸಿದರೆ ಹೇಗೆ ಎಂಬುದರ ಬಗೆಗೂ ಸಮಾಲೋಚಿಸಿದರು. ನಾವಿಬ್ಬರೂ ಆ ವಿಚಾರವನ್ನು ಬೆಂಬಲಿಸಿ ಸ್ವಾಗತಿಸಿದೆವು. ಆ ಸಂದರ್ಭದಲ್ಲಿಯೇ ನಿರಂಜನ ತಮ್ಮ ತಾಯಿಯವರ ಪರಿಚಯ ಮಾಡಿಕೊಟ್ಟರು. ಚೆಲುವಿನಲ್ಲಿ, ಸುಖದ ಮಾತಿನಲ್ಲಿ ನಿರಂಜನ ತಾಯಿಯು ಪಡಿಯಚ್ಚಿನಂತೆ ತೋರಿದರು. (ದೈವಭಕ್ತಳಾದ ಆ ತಾಯಿಯ ಭಾವನೆಗಳಿಗೆ ನೋವಾಗದ ರೀತಿಯಲ್ಲಿ ಅವರನ್ನು ಕೊನೆಯವರೆಗೂ ಜೋಪಾನ ಮಾಡಿದ ನಿರಂಜನರ ಬಗ್ಗೆ ನನ್ನಲ್ಲಿ ಹೆಚ್ಚಿನ ಆದರವುಂಟಾಯಿತು.) ದಸರೆಯ ಉತ್ಸವವನ್ನು ಮೊದಲ ಬಾರಿಗೆ ನೋಡುತ್ತಿದ್ದ ನಮಗೆ ಅನುಕೂಲವಾಗುವಂತೆ ನಿರಂಜನ ನಮ್ಮ ಜೊತೆಗೆ ಓಡಾಡಿದರು. ತಿರುಗಿ ಊರಿಗೆ ಬರುವಾಗಲೂ ಸ್ಟೇಶನ್ನಿಗೆ ಬಂದು ಆ ಜನಸಮ್ಮರ್ದದಲ್ಲಿ ಹೇಗೋ ತಾವೇ ಮುಂದಾಗಿ ಒಂದು ಬೋಗಿಯಲ್ಲಿ ನಮಗೆ ಸ್ಥಳ ಒದಗಿಸಿ ಬೀಳ್ಕೊಟ್ಟರು.

ಧಾರವಾಡದ ಸಾರಸ್ವತಪುರದಲ್ಲಿ ನಮ್ಮ ಮನೆಯ ಸಮೀಪದಲ್ಲಿಯೇ ಅವರಿಗಾಗಿ ಒಂದು ಮನೆಯನ್ನು ನೋಡಿಟ್ಟಿದ್ದೆವು. ಮರುವರ್ಷವೇ ನಿರಂಜನ ದಂಪತಿಗಳು ತಾಯಿಯೊಡನೆ ಬಂದು ಅಲ್ಲಿ ನೆಲಸಿದರು. ನಾವು ಇನ್ನೂ ಹೆಚ್ಚು ಆತ್ಮೀಯರಾದೆವು. ಒಳ್ಳೆಯ ಕವಯಿತ್ರಿಯೆನಿಸಿ ಈಗ ಅಮೇರಿಕೆಯಲ್ಲಿ ಡಾಕ್ಟರೇಟ್ ಮಾಡುತ್ತಿರುವ ತೇಜಸ್ವಿನಿಗೆ ಧಾರವಾಡ ಜನ್ಮಸ್ಥಳವಾಯಿತು. (ತಮ್ಮ ಆತ್ಮಕಥನ 'ನೆನಪು : ಸಿಹಿ-ಕಹಿ'ಯಲ್ಲಿ ಡಾ। ಅನುಪಮಾ ಧಾರವಾಡದ ನಾಲ್ಕು ವರ್ಷಗಳ ವಾಸದ ಅನುಭವಗಳನ್ನು ವೈದ್ಯೆಯಾಗಿ, ಲೇಖಕಿಯಾಗಿ ಸೊಗಸಾಗಿ ನಿರೂಪಿಸಿದ್ದಾರೆ.) 'ಜನಶಕ್ತಿ'ಯ ಹೋರಾಟಗಾರರಾಗಿ ಹಿಂದೆ ಧಾರವಾಡಕ್ಕೆ ಬಂದಿದ್ದ ಕುಳುಕುಂದರಿಗೂ ಪೊರೆ ಕಳಚಿದ ಈಗಿನ ನಿರಂಜನರಿಗೂ ತೀವ್ರ ವ್ಯತ್ಯಾಸ ಕಂಡುಬಂದರೂ ಮೊದಲಿನಂತೆಯೇ ಸ್ನೇಹಶೀಲ, ಕಾರ್ಯತತ್ಪರ, ಸತತಾಭ್ಯಾಸಿ; ಯೋಜನೆಗಳನ್ನು ತೀವ್ರ ಕೃತಿಗಿಳಿಸುವ ಅವರ ಸ್ವಭಾವದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಬರೆಯುವುದಕ್ಕೆ ಪ್ರಶಾಂತ ವಾತಾವರಣವಿದ್ದರೂ ಪ್ರಕಾಶಕರ ಅಭಾವವಿರುವ ಧಾರವಾಡಕ್ಕಿಂತ ಬೆಂಗಳೂರೇ ಕ್ರಿಯಾಶೀಲರಾದ ನಿರಂಜನರನ್ನು ಮತ್ತೆ ತನ್ನೆಡೆಗೆ ಸೆಳೆಯಿತು. ಆದರೆ ಡಾ। ಅನುಪಮಾ ಅವರ ವೈದ್ಯಕೀಯ ವೃತ್ತಿಯ ವಿವಿಧಾನುಭವಕ್ಕೆ ಧಾರವಾಡ ತಳಹದಿಯಾದದ್ದನ್ನು ಅವರು ನೆನೆಯದೆ ಇಲ್ಲ.

೧೯೫೮ರಲ್ಲಿ ಕಾರವಾರದಲ್ಲಿ ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ನಿರಂಜನ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಹಿಂದಿನ ಹತ್ತು ವರ್ಷಗಳ ಸಾಹಿತ್ಯ ಸಮೀಕ್ಷೆ ಕೈಗೊಂಡ ಹೊಸ ಬಗೆಯ ಗೋಷ್ಠಿಗಳನ್ನು ಅಲ್ಲಿ ಏರ್ಪಡಿಸಿದ್ದು, ಏನಾದರೂ ಹೊಸದನ್ನು ಮಾಡಬೇಕೆಂಬ

ಅವರ ಹಂಬಲಕ್ಕೆ ಸಾಕ್ಷಿಯಾಗಿತ್ತು. ಕವಿಸಮ್ಮೇಳನದಲ್ಲಿ ಓದಿದ 'ಕಾಲ ನಿಲ್ಲುವುದಿಲ್ಲ' ಎಂಬ ನನ್ನ ಕವಿತೆಯನ್ನು ನಿರಂಜನ ತುಂಬ ಮೆಚ್ಚಿಕೊಂಡರು. ನವ್ಯದ ಅಂದಿನ ಅನವಶ್ಯ 'ಅಬ್ಬರ'ಕ್ಕೆ ಅವರು ಬೇಸರಗೊಂಡಂತಿತ್ತು.

ಒಂದು ದಿನ ಸಂಜೆ ಕಾರವಾರದ ಸಮುದ್ರ ತೀರಕ್ಕೆ ಹೋದಾಗ ಜೊತೆಗೆ ಅನುಪಮಾ ಅವರು ಬಂದರು. ನಿರಂಜನ ಸಮ್ಮೇಳನದ ಮಂಟಪದಲ್ಲಿಯೇ ಇರಬೇಕಾಯಿತು. ಸೂರ್ಯಾಸ್ತದ ಸೊಬಗನ್ನು ನೋಡುತ್ತ, ಅದು ಇದು ಮಾತಾಡುತ್ತ ಕುಳಿತಾಗ ಧಾರವಾಡದ ಸುದ್ದಿಗಳನ್ನೆಲ್ಲ ಕೇಳಿದರು. ಅವರ ದವಾಖಾನೆಯಲ್ಲಿ ಹುಟ್ಟಿದ ನನ್ನ ಮಗ ಪ್ರಿಯದರ್ಶಿಯ ಆರೋಗ್ಯವನ್ನು ವಿಚಾರಿಸಿದರು. ಅವರ ಮಕ್ಕಳು ತೇಜಸ್ವಿನಿ, ಸೀಮಂತಿನಿ ಮಳಲ ದಂಡೆಯಲ್ಲಿ ಸ್ವಚ್ಛಂದ ರೀತಿಯಲ್ಲಿ ತೊಡಗಿದ್ದ ಚಿತ್ರ ಇನ್ನೂ ಕಣ್ಣಮುಂದಿದೆ. ಸಮ್ಮೇಳನ ಮುಗಿದೊಡನೆ ನಿರಂಜನ ಪರಿಷತ್ತಿನ ಕಾರ್ಯದರ್ಶಿತ್ವದಿಂದ ನಿವೃತ್ತಿಯನ್ನು ಪಡೆದುಕೊಂಡರು.

ಬರೆವಣಿಗೆಯ ಜೊತೆಗೆ ಯಾವುದಾದರೂ ಒಂದು ವಿಶೇಷ ಯೋಜನೆಯಲ್ಲಿ ತೊಡಗಿಕೊಳ್ಳದಿದ್ದರೆ ನಿರಂಜನರಿಗೆ ಸಮಾಧಾನವೆನಿಸದು. 'ಜ್ಞಾನಗಂಗೋತ್ರಿ'ಯ ಬೃಹತ್ ಯೋಜನೆಯ ಸಂಪಾದಕತ್ವ ವಹಿಸಿಕೊಂಡ ನಿರಂಜನ ದಣಿವರಿಯದ ದುಡಿಮೆಗೆ ಮತ್ತೊಂದು ಹೆಸರೆನ್ನುವಂತೆ ಕಾರ್ಯಮಗ್ನರಾದರು. ಮೊದಲನೆಯ ಸಂಪುಟ ಪ್ರಕಟವಾಗಿ ಎರಡನೆಯ ಸಂಪುಟದ ಸಿದ್ಧತೆ ನಡೆದಿರುವಾಗಲೇ ಅವರು ಪಾರ್ಶ್ವವಾಯು ಪೀಡೆಗೆ ಪಕ್ಕಾದ ಸುದ್ದಿ ಅನೇಕರಿಗೆ ಆಘಾತವನ್ನುಂಟುಮಾಡಿತು. ಇನ್ನೇನು ಆ ಯೋಜನೆ ಅಲ್ಲಿಗೇ ಮುಗಿದ ಹಾಗೆ ಎಂದು ಕೆಲವರು ಭಾವಿಸಿದ್ದರೇನೋ. ಆದರೆ ನಿರಂಜನರದು ಪ್ರಬಲವಾದ ಇಚ್ಛಾಶಕ್ತಿ; ಅದಮ್ಯ ಚೇತನ. ಕೆಲ ತಿಂಗಳಲ್ಲಿ ಚೇತರಿಸಿಕೊಂಡು, ಮಲಗಿದಲ್ಲಿಯೇ ಆ ಕೆಲಸವನ್ನು ಮುಂದುವರಿಸಿದರು. ಮುಂದೆ ಕೋಲೂರಿಕೊಂಡು ಆಫೀಸಿಗೂ ಹೋಗಹತ್ತಿದರು. ಆ ಸಂದರ್ಭದಲ್ಲಿ ನಾನೊಮ್ಮೆ ಅವರನ್ನು ಕಂಡು ಮಾತಾಡಿಸಲು ಜ್ಞಾನಗಂಗೋತ್ರಿ ಆಫೀಸಿಗೆ ಹೋದೆ. ದೇಹ ತತ್ತರಿಸಿದ್ದರೂ ಮುಖದ ಕಳೆ ಮಾಸಿರಲಿಲ್ಲ. ಆ ಸ್ಥಿತಿಯಲ್ಲಿಯೂ ಕಾರ್ಯೋತ್ಸಾಹ ಅವರ ಅಂತರಂಗದ ಯಾವ ಮೂಲೆಯಿಂದ ಪುಟಿಯುತ್ತಿತ್ತೊ! ಅವರಿಂದ ಬೀಳ್ಕೊಂಡು ಬರುವಾಗ ಅವರು, "ಎರಡೂ ಕೈ ಕೂಡಿಸಿ ನಮಸ್ಕಾರ ಹೇಳಲು ಆಗುತ್ತಿಲ್ಲ, ಕ್ಷಮಿಸಿ" ಎಂದರು. ನನಗೆ ಮಾತು ಹೊರಬರಲಿಲ್ಲ. ಅವರ ಮುಖವನ್ನು ಸುಮ್ಮನೆ ನೋಡಿದೆ. ಇಬ್ಬರ ಕಣ್ಣಿನಲ್ಲೂ ನೀರಾಡಿತ್ತು.

ಎರಡನೆಯ ಸಂಪುಟದ ಬಿಡುಗಡೆಯ ಸಮಾರಂಭದಲ್ಲಿ ಮಾತನಾಡುತ್ತ ಡಾ। ಶಿವರಾಂ ಅಂದರಂತೆ: "ನಿರಂಜನ ಉಳಿದುಕೊಂಡದ್ದು ಜ್ಞಾನಗಂಗೋತ್ರಿಯಿಂದ"!

ಎಷ್ಟು ಸತ್ಯ! ಐದಾರು ವರ್ಷಗಳಲ್ಲಿ ಕಿರಿಯರ ವಿಶ್ವಕೋಶದ ಯೋಜನೆಯು ಯಶಸ್ವೀ ಮುಕ್ತಾಯ. 'ಛಲದೊಳ್ ನಿರಂಜನಂ' ಎಂದು ರನ್ನನ ಜೊತೆಗೆ ದನಿಗೂಡಿಸೋಣವೇ ಎನಿಸುತ್ತದೆ.

ಈ ಸ್ಥಿತಿಯಲ್ಲಿ ಇನ್ನೊಬ್ಬರಾಗಿದ್ದರೆ ವಿಶ್ರಾಂತಿ ಪಡೆಯುತ್ತ ಏನೊ ಒಂದಿಷ್ಟು ಓದು ಬರೆಹ ಮಾಡಿ ಸಮಾಧಾನಪಟ್ಟುಕೊಳ್ಳುತ್ತಿದ್ದರೇನೊ. ಆದರೆ ನಿರಂಜನ 'ಆರಾಮು' ಎನ್ನುವುದನ್ನೇ ಅರಿಯರು. ಬರೆವಣಿಗೆ ಬಿಡುವಿಲ್ಲದೇ ನಡೆಯುತ್ತಿದ್ದರೂ ಏನಾದರೂ ವಿಶೇಷವಾದದ್ದನ್ನು ಕೈಕೊಳ್ಳಬೇಕು. ಎಡಗೈ ಹತೋಟಿ ತಪ್ಪಿದರೇನಾಯಿತು? ಬಲಗೈಯಿದೆಯಲ್ಲ! ದೇವರು ಈ ಬರೆಹಗಾರನ ಬಲಗೈಗೆ ಧಕ್ಕೆ ತರದಿದ್ದುದು ಕನ್ನಡದ ಪುಣ್ಯ. ('ದೇವರು' 'ಪುಣ್ಯ' ಅಂದರೆ ಏನು? ಎಂದು ಅವರು ಕೇಳಿಯಾರು.) 'ಗವಿವಾಸಿ' ಎಂದು ತಮ್ಮನ್ನು ಈಗ ಕರೆದುಕೊಂಡ ನಿರಂಜನ 25 ಸಂಪುಟಗಳ ವಿಶ್ವಕಥಾಕೋಶ ಯೋಜನೆಯನ್ನು ರೂಪಿಸಿ ಪ್ರಧಾನ ಸಂಪಾದಕನ ಹೊಣೆ ಹೊತ್ತರು. ಅದನ್ನು ಪೂರೈಸುವ ಹೊತ್ತಿಗೆ ಮತ್ತೆ ಪಾರ್ಶ್ವ ಪೀಡೆ. 'ಎರಡನೆಯ ಪರಿಷ್ಕೃತ ಆವೃತ್ತಿ' ಎಂದು ಅದನ್ನು ನಿರಂಜನ ಕರೆದಿದ್ದಾರೆ. ನೋವುಗಳನ್ನು ಮೆಟ್ಟಿ ದಾಟುವಲ್ಲಿ ಎಂಥ ಎದೆಗಾರಿಕೆ!

೧೯೮೫ ಏಪ್ರಿಲ್‌ನಲ್ಲಿ ಅವರ ಮನೆ 'ಕಥೆ'ಗೆ ಹೋದಾಗ ಕೈತೋಟದಲ್ಲಿ ಹಲವು ಬಣ್ಣದ ಗುಲಾಬಿಗಳು ಅರಳಿದ್ದವು. ಹೂವು ಕಣ್ಣಿಗೆ ಬಿದ್ದಾಗ ದಂಟಿನ ಮುಳ್ಳುಗಳನ್ನು ಯಾರು ಲಕ್ಷಿಸುತ್ತಾರೆ? ಆದರೆ ನನಗೆ ಆ ಮುಳ್ಳುಗಳ ತೀಕ್ಷ್ಣತೆಯ ಅರಿವಿತ್ತು.

"ಹ್ಯಾಗಿದ್ದೀರಿ" ಎಂದೆ. ಗಾಲಿಯ ಕುರ್ಚಿಯನ್ನು ಮುಂದೂಡುತ್ತ ಬಂದು, "ಇನ್ನೂ ಬದುಕಿದ್ದೀನಿ" ಎಂದು ತಮ್ಮದೇ ಆದ ವಿಶಿಷ್ಟ ನಸುನಗೆ ಸೂಸಿದರು. ಆ ನಗೆಯೂ ಹಣ್ಣಾದಂತೆ ಕಂಡಿತು. ಎರಡು ತಾಸು ಏನೇನೊ ಮಾತಾಯಿತು. ಪರಿಷತ್ತು ಅಕಾಡೆಮಿಗಳೂ ಬಂದು ಹೋದವು. (ಈಗ ಎಲ್ಲಿ ಹೋದರೂ ಅವುಗಳನ್ನು ಮರೆಯುವಂತಿಲ್ಲವಲ್ಲ!) ತಮ್ಮ ಕನಸಿನ ಕಾದಂಬರಿ 'ಹೆಜ್ಜೆ'ಯ ಹಂದರವನ್ನು ವಿವರಿಸಿದರು. (ನಮ್ಮ 'ಗಣ್ಯ' ವಿಮರ್ಶಕರ ಕಣ್ಣಿಗೆ 'ಮೃತ್ಯುಂಜಯ'ದಂಥ ಕಾದಂಬರಿ ಹೇಗೆ ಬೀಳಲಿಲ್ಲವೊ, ಆಶ್ಚರ್ಯ.) ಆ ಹೊತ್ತಿಗೆ ವಿ. ಜಿ. ಭಟ್ಟರೂ ಅಲ್ಲಿಗೆ ಬಂದರು. ಎಷ್ಟೋ ವರ್ಷಗಳ ಮೇಲೆ ಅವರನ್ನು ಕಂಡು ಸಂತೋಷವಾಯಿತು. ನಡುವೆ ಬಹುಕಾಲ ಸ್ಥಗಿತಗೊಂಡಿದ್ದ ಅವರ ಕಾವ್ಯರಚನೆ ಈಗ ಒಮ್ಮೆಲೆ ಬೃಂದಾವನದ ಕಾರಂಜಿಯಂತೆ ಪುಟಿಯತೊಡಗಿತ್ತು. ಆಗಲೇ ಅಚ್ಚಾಗಿದ್ದ, ಅಚ್ಚಿಗೆ ಸಿದ್ಧಗೊಂಡಿದ್ದ ಕೆಲವು ಕವಿತೆಗಳನ್ನು ಭಟ್ಟರು ಓದಿದರು. ಘಾಟಿ ತಿನ್ನುತ್ತ, ಚಹ ಕುಡಿಯುತ್ತ ಅವುಗಳನ್ನು

ಜಪಿದೆದ್ದಾಯಿತು. ಮಲ್ಲೇಶ್ವರದಲ್ಲಿದ್ದ ಭಟ್ಟರಿಗೆ ಪ್ರೆಸ್ಸಿಗೆ ಬರಲು ಅನನುಕೂಲವೆಂದು ಅವುಗಳ ಕರಡು ತಿದ್ದುವ ಕೆಲಸವನ್ನು ನಿರಂಜನ ವಹಿಸಿಕೊಂಡಿದ್ದರು. ಅವರಿಬ್ಬರ ಸ್ನೇಹದ ಬಗ್ಗೆ ಮೊದಲಿನಿಂದಲೂ ನನಗೆ ಗೊತ್ತು. ಅವರೆ ಹೀಗೆ ಕೊನೆಯ ವರೆಗೂ ಬಾಳಬಲ್ಲ ಸ್ನೇಹಗಳನ್ನು ಹೆಸರಿಟ್ಟು ಹೇಳಬೇಕು, ಅಷ್ಟೆ.

ನಮ್ಮ ಮಾತುಕತೆ ಮುಗಿದರೂ ಡಾ। ಅನುಪಮಾ ಅವರೊಡನೆ ಶ್ರೀಮತಿ ಕಣವಿಯವರ ಮಾತುಗಳು ಇನ್ನೂ ಮುಗಿದಿರಲಿಲ್ಲ. ಅಷ್ಟು ಹೊತ್ತು ಪರಸ್ಪರರು ಏನೇನು ಸುಖ - ದುಃಖ ತೋಡಿಕೊಂಡಿದ್ದರೋ! ಅವರ ಪಾಡಿಗೆ ಅವರನ್ನು ಬಿಟ್ಟಿದ್ದರಿಂದ ಅವರಿಬ್ಬರ ಮನಸ್ಸುಗಳು ಹಗುರಗೊಂಡು ಉಲ್ಲಸಿತವಾದದ್ದು ಕಂಡುಬಂದಿತು. ನಿರಂಜನರದು ಒಂದು ಬಗೆಯಾದರೆ ಅನುಪಮಾ ಅವರ ದೈಹಿಕ ಯಾತನೆ ಮತ್ತೊಂದು ಬಗೆ. ಎರಡೂ ಅಷ್ಟೇ ಘೋರವಾದವುಗಳು. ಅವುಗಳನ್ನು ಎದುರಿಸುವಲ್ಲಿ ಇಬ್ಬರೂ ಅಷ್ಟೇ ಗಟ್ಟಿಗರು. ಈ ದೃಷ್ಟಿಯಿಂದಲೂ ಅವರದು ಅನುರೂಪದ ದಾಂಪತ್ಯ - ಬರೆಯುವದೇ ಅವರ ಬದುಕು; ಅದೇ ಸಾವಿಗೆಸೆದ ಸವಾಲು.

ನಿರಂಜನರ ಸಾವಿರಾರು ಪುಟಗಳ ಬಿಡಿ ಬರೆಹಗಳನ್ನು ಸಂಪುಟಗಳಲ್ಲಿ ಪ್ರಕಟಿಸುವ ಹೊಣೆ ಹೊತ್ತು 'ಸ್ಪಂದನ ಪ್ರಕಾಶನ' ಆರಂಭಿಸಿರುವ ಮಗಳು ಸೀಮಂತಿನಿ, ನಿರಂಜನರ ಸಂದರ್ಶನಗಳ ಸಂಕಲನ 'ಮುಖತಃ' ಕೈಗಿತ್ತಳು.

* * * *

ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ನಿರಂಜನರಿಗೆ ಈಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಗೌರವ ಸದಸ್ಯತ್ವ' (ಹಣದ ಯಾವ ಸೋಂಕೂ ಇರದೆ, ಅದರ ಉಳಿದೆಲ್ಲ ರೀತಿಯ ಮರ್ಯಾದೆಯಿಂದ ಕೂಡಿದ ವಿಶಿಷ್ಟ ಪುರಸ್ಕಾರ ವಿಧಾನವಂತೆ ಇದು) ನೀಡಲಾಗಿದೆ. ಆದರೆ ಅವರ ಕೃತಿಗಳನ್ನು ಓದಿ ಮನವಾರೆ ಮೆಚ್ಚಿಕೊಂಡ ವಾಚಕ ಲೋಕದ ಪ್ರಶಸ್ತಿ ಎಲ್ಲಕ್ಕೂ ಹೆಚ್ಚಿನದು. ಅವರ ಅನೇಕ ಕಥೆ ಕಾದಂಬರಿಗಳು ಹಲವಾರು ಮುದ್ರಣಗಳನ್ನು ಕಂಡಿರುವುದಲ್ಲದೆ, ತೆಲುಗು, ತಮಿಳು, ತುಳು, ಮಲಯಾಳಂ, ಮರಾಠಿ, ಬಂಗಾಳಿ, ಇಂಗ್ಲಿಷ್, ಪೋಲಿಷ್, ರಶಿಯನ್ ಭಾಷೆಗಳಲ್ಲಿಯೂ ಭಾಷಾಂತರಗೊಂಡು ಮತ್ತೆ ಮತ್ತೆ ಹೊಸ ಮುದ್ರಣಗಳನ್ನು ಕಾಣುತ್ತಿವೆ. ಕನ್ನಡದ ಎಷ್ಟು ಜನ ಲೇಖಕರಿಗೆ ಈ ಭಾಗ್ಯವಿದೆ ?

ಉಳಿದ ಎಷ್ಟೋ ವಿಷಯಗಳಲ್ಲಿ ವ್ಯತ್ಯಾಸವಿದ್ದರೂ ನಿರಂತರ ಬರೆವಣಿಗೆ, ದಣಿವರಿಯದ ದುಡಿಮೆ ಮುಂತಾದ ಸಂಗತಿಗಳಲ್ಲಿ ಕಾರಂತರ ತರುವಾಯ ನನ್ನ ಕಣ್ಣೆದುರು ನಿಲ್ಲುವ ಚಿತ್ರ ನಿರಂಜನರದು. (ಇಬ್ಬರೂ ದಕ್ಷಿಣ ಕನ್ನಡ ಜಿಲ್ಲೆಯವರೆ) ಆದರೆ ಇಬ್ಬರಿಗೂ ಇಪ್ಪತ್ತು ವರ್ಷಗಳ ಅಂತರ. ಅಲ್ಲದೆ ನಿರಂಜನ ಈಗ 'ಗವಿವಾಸಿ'.

"ಸಾವಿರ ಎಳೆಗಳಿಂದ ಬರೆಹಗಾರ ಬದುಕಿಗೆ ಬಂಧಿತ, ಕಾಡಿನ ಸ್ಥಿತಿಯಿಂದ ನಾಡಿನವನಾಗಲು ಮನುಷ್ಯ ಬಹಳ ಕಷ್ಟಪಟ್ಟಿದ್ದಾನೆ. ಅದು ಇನ್ನೂ ನಡೆಯುತ್ತಲೇ ಇರುವ ಹೋರಾಟ. ಸಾಹಿತಿಗಳೂ ಮನುಕುಲಕ್ಕೆ ಸೇರಿದವರು, ಸಮಾಜದ ಸದಸ್ಯರು. ಆ ಕಾರಣದಿಂದಲೇ ಸಮೃದ್ಧ ಬದುಕಿಗಾಗಿ ಮಾನವ ನಡೆಸುವ ಸಮರ ದಲ್ಲಿ ಅವರು ಭಾಗಿಗಳು. ಜನರ ನೋವು, ನಲಿವು, ದುಃಖ, ಸುಖ ಯಾವುದರಿಂದಲೂ ಅವರು ಹೊರತಲ್ಲ." ಹತ್ತು ವರ್ಷಗಳ ಹಿಂದೆ 'ಉತ್ತಮ ಬದುಕಿನ ಎತ್ತರಕ್ಕೆ ಸಾಹಿತ್ಯದ ಏಣಿ' ಎಂಬ ಲೇಖನದಲ್ಲಿ ನಿರಂಜನ ವ್ಯಕ್ತಪಡಿಸಿದ ಅಭಿಪ್ರಾಯವಿದು.

ಅವರು ಈಗ ಬರೆಯುತ್ತಿರುವ ಬೃಹತ್ ಕಾದಂಬರಿ ಈ ದಿಸೆಯಲ್ಲಿ ಒಂದು ದೊಡ್ಡ 'ಹೆಜ್ಜೆ'ಯಾಗಬಹುದೆ? ○

ಛಲವಾದಿ ಅಣ್ಣ

—ದಿ। ಗೀತಾ ಕುಲಕರ್ಣಿ

ಧಾರವಾಡ ಗಂಡು ಮೆಟ್ಟಿನ ಕನ್ನಡದ ನೆಲವಂತೆ. ಆದರೆ ನಾನು ಪುತ್ತೂರಿಂದ ಧಾರವಾಡಕ್ಕೆ ಮದುಮಗಳಾಗಿ ಹದಿನಾರರ ಹುಡುಗಿ ಬಂದಾಗ ಇಲ್ಲಿಯ ಕನ್ನಡ ನನ್ನನ್ನೂ ದಿಕ್ಕು ಕೆಡಿಸಿತ್ತು.

ಶಿವರಾಮ ಕಾರಂತರ ವಿಶ್ವಕೋಶದಿಂದ ಹೊರಬಂದ ನನಗೆ ಇಲ್ಲಿಯೂ ತಲೆಗೆ ಅದೇ ಆಹಾರವಾಗಿತ್ತು. ೧೯೪೭ರಲ್ಲಿ ಒಂದು ದಿನ ಸುಮಾರು ಇಪ್ಪತ್ತೆರಡರ ಪ್ರಾಯದ ಇಬ್ಬರು ಧಾರವಾಡದಲ್ಲಿನ ನಮ್ಮ ಮನೆಗೆ ಬಂದರು. ಅವರಲ್ಲಿ ಒಬ್ಬರು ಕುಳಕುಂದ ಶಿವರಾಯರು. ಅವರು ತಮ್ಮ ಜತೆಯಲ್ಲಿದ್ದ ವ್ಯಕ್ತಿಯನ್ನು ತೋರಿಸಿ, "ನಿಮ್ಮ ಅನ್ನಿಬೆಸೆಂಟ್ ಸ್ಕೂಲಿನಲ್ಲಿ ಕಲಿತ ಸದಾಶಿವನ ನೆನೆಪುಂಟಾ!" ಎಂದರು. ನೆನಪು ತಟ್ಟನೆ ಹಿಂದಕ್ಕೋಡಿತು. ಮಂಗಳೂರಿನಲ್ಲಿ ಅನ್ನಿಬೆಸೆಂಟ್ ಸ್ಥಾಪಿಸಿದ ಸ್ಕೂಲು ಕೇವಲ ಹುಡುಗಿಯರಿಗಾಗಿ. ನಮ್ಮ ಸ್ಕೂಲು ಸುಪರಿಂಟೆಂಡೆಂಟ್ ತುಂಬ ಮೃದು ಮನಸ್ಸಿನವರು.ಅವರು ಈ ಸದಾಶಿವನ ಬುದ್ಧಿಗೆ, ಗುಣಕ್ಕೆ ಮೆಚ್ಚಿ,ಬಡವನೆನ್ನುವ ಅನುಕಂಪ ತೋರಿ, ನಮ್ಮ ಸ್ಕೂಲಿನಲ್ಲಿ ಕಲಿಯೋದಕ್ಕೆ ಅನುವುಮಾಡಿಕೊಟ್ಟಿದ್ದರು. ಅಂಥ ಸದಾಶಿವನನ್ನು ಮರೆಯೋದಕ್ಕೆ ಸಾಧ್ಯವೇ? ಆದರೆ ಮೀಸೆ ಮೂಡದ, ಶರ್ಟು-ನಿಕ್ಕರಿನಲ್ಲಿದ್ದ ಅವನಿಂದು ಶಿವರಾಯರ ಎತ್ತರಕ್ಕೆ ನಿಂತು ಪಾಯಿಜಾಮಾ-ಅಂಗಿ ತೊಟ್ಟ ಮೀಸೆ ಮೂಡಿದ ಯುವಕ. ಅವನ ಗುರುತು ಥಟ್ಟನೆ ನನಗೆ ಆಗಲಿಲ್ಲ.

ಎಷ್ಟೋ ವರ್ಷಗಳ ಬಳಿಕ ಅವನನ್ನು ಕಂಡ ನನಗೆ ಖುಶಿಯಾಯಿತು. ಅವನ ಮುಖದಲ್ಲಿ ನಗು ಮಿಂಚಿತ್ತು.

“ಯಾಕೆ ಸದಾಶಿವ, ನೀನು ಮಾತಾಡಬಾರದಿತ್ತೆ ?” ಆಗ ಸದಾಶಿವ ನಗು ನಗುತ್ತ ಮಾತಾಡಿದ, “ಮೊದಲೇ ನೀನು ‘ಗಾಂಧಾರಿ ಮೆಣಸು’. ಒಂದು ನಿಮಿಷದ ಕೋಪ ಬಿಡು. ಅಲ್ಲಿ ನೀನು ಅಹಲ್ಯಾ ಆಳ್ವ - ಇಲ್ಲಿ ನೀನು ಗೀತಾ ಕುಲಕರ್ಣಿ. ಪುಟ್ಟಿ-ಗೌರಮ್ಮ ಎಂದು ಕಥೆಗಳನ್ನು ಬರೆದಿದ್ದಿ. ಅಲ್ಲದೆ ಮದುವೆಯಾದ ಮೇಲೆ ಎಷ್ಟೋ ಹುಡುಗಿಯರು ಗುರುತಿಲ್ಲದವರ ಹಾಗೆ ಮುಖ ತಿರುಗಿಸಿ ಹೋಗ್ತಾರೆ”.

“ಕಾಲೇಜು, ಯೂನಿವರ್ಸಿಟಿಗಳಲ್ಲಿ ಹಾಗೆ ಮಾಡ್ತಾರೋ ಗೊತ್ತಿಲ್ಲ. ಹುಡುಗಿಯರ ಸ್ಕೂಲಿನಲ್ಲಿ ನೀನೊಬ್ಬನೇ ಗಂಡು ಹುಡುಗ. ಎಲ್ಲರಿಗೂ ನಿನ್ನ ಕಂಡರೆ ಅಚ್ಚುಮೆಚ್ಚು. ನಿನ್ನ ಮರೆಯೋದುಂಟೇ ?”

ಶಿವರಾಯರು, ಸದಾಶಿವ, ಶಿವೇಶ್ವರ ದೊಡ್ಡಮನಿ, ಶ್ರೀಧರ್, ಹುಬ್ಬಳ್ಳಿಯಲ್ಲಿ ‘ಜನಶಕ್ತಿ’ ವಾರಪತ್ರಿಕೆ ಪ್ರಾರಂಭಿಸಿದರು. ಅದರ ತುಂಬ ‘ಕ್ರಾಂತಿಕಾರಕ’ ಬರೆವಣಿಗೆ. ಮುಂದಿನ ವರ್ಷ ಶಿವರಾಯರು ಭೂಗತರಾದರು. ಪತ್ರಿಕೆಗಾಗಿ ಬೇರೆ ಮುದ್ರಣಾಲಯ ಹುಡುಕಬೇಕಾಯಿತು. ಧಾರವಾಡದಲ್ಲಿದ್ದ ನಮ್ಮ ‘ಸಾಧನಾ ಪ್ರೆಸ್’ಗೆ ಸದಾಶಿವ ಬಂದು ನನ್ನ ಪತಿ ಶೇ. ಗೋ. ಕುಲಕರ್ಣಿಯವರ ಜತೆ ಮಾತನಾಡಿ ಹೊಸ ಏರ್ಪಾಡು ಮಾಡಿಕೊಂಡ. ನಮ್ಮಲ್ಲಿ ಮುದ್ರಣವಾಗುತ್ತಿದ್ದ ಪತ್ರಿಕೆಗೆ ಎಲ್ಲೋ ತಲೆಮರೆಸಿ ಕುಳಿತು ಕುಳುಕುಂದ ಶಿವರಾಯರು ‘ಮ್ಯಾಟರ್’ ಬರೆಯುತ್ತಿದ್ದರು. ಮುಂದೆ ಆ ಪತ್ರಿಕೆ ನಿಷೇಧಿಸಲ್ಪಟ್ಟಿತು. ಸದಾಶಿವನನ್ನು ಬಂಧಿಸಿದರು.

ಇಲ್ಲಿಂದ ಹೋದ ಮೇಲೆ ಕುಳುಕುಂದ ಶಿವರಾವ್ ಬದಲಾಗಿ ‘ನಿರಂಜನ’ರಾದರು. ಈ ಹೆಸರಿನಲ್ಲಿ ಕಥೆ-ಕಾದಂಬರಿಗಳು ಮಹಾಪೂರದಂತೆ ಕನ್ನಡನಾಡಿನಲ್ಲಿ ಉಕ್ಕಿ ಹರಿದುವು.

ಒಂದು ದಿನ ನಿರಂಜನ - ಡಾ। ಅನುಪಮಾರನ್ನು ಮದುವೆ ಮಾಡಿಕೊಂಡು ಚತುರ್ಭುಜರಾದರು ಎನ್ನುವ ಸಂಭ್ರಮದ ಸುದ್ದಿ ಕೇಳಿದೆ. ಡಾ। ಅನುಪಮಾ ಅವರ ‘ನೆನಪು: ಸಿಹಿ - ಕಹಿ’ಯಲ್ಲಿ ಒಂದು ಮಾತು ಬರುತ್ತದೆ. ನಿರಂಜನ - ಅನುಪಮಾ ಅವರ ಮೊದಲ ನೋಟದಲ್ಲೇ, ಅನುಪಮಾಗೆ ನಿರಂಜನರ ನಿಲುವು, ಮಾತು, ಚೆಲುವು, ಛಲ ಕಂಡು “ತಾನು ಮದುವೆ ಆದರೆ ಇವರನ್ನೆ” ಎಂದುಕೊಂಡರಂತೆ. ಮದುವೆಯಾಗಿ ಜೋಡು ನಕ್ಷತ್ರದಂತೆ ಡಾ। ಅನುಪಮಾ ಮತ್ತು ನಿರಂಜನ ಜತೆಗೆ ಮತ್ತೆ ಧಾರವಾಡಕ್ಕೆ

ಬಂದರು. ನಿರಂಜನರು ಧಾರವಾಡದಲ್ಲಿ ಸಾಹಿತ್ಯ ರಚನೆಯಲ್ಲಿ, ಡಾ। ಅನುಪಮಾ ಕ್ಲಿನಿಕ್ ತೆರೆದು, ವೈದ್ಯಕೀಯದೊಂದಿಗೆ ಸಾಹಿತ್ಯ ಕೃಷಿಯಲ್ಲೂ ಕೈ ತೊಡಗಿಸಬೇಕು ಎನ್ನುವ ಅಭಿಲಾಷೆ ಹೊಂದಿದ್ದರು.

ಧಾರವಾಡದಲ್ಲೇ ನಿರಂಜನ ದಂಪತಿಗಳ ಬಳ್ಳಿ ಕುಡಿ ಬಿಟ್ಟದ್ದು. ಅಪ್ಪನ ಮೂಗನ್ನು ಹೊತ್ತು ಮುದ್ದಾದ ತೇಜಸ್ವಿನಿ ಹುಟ್ಟಿದ್ದು ಎಲ್ಲರಿಗೂ ಖುಶಿಯೋ ಖುಶಿ. ಸ್ನೇಹಿತರ ಬಳಗಕ್ಕೆ ನಿರಂಜನ ದಂಪತಿಗಳು ಬಂದದ್ದು ಸಂತೋಷ. ಆದರೆ ನನಗೆ ಏಕೋ ಒಂದು ಬಗೆಯ ತಳಮಳ, ಬೇಸರ. ಡಾ। ಅನುಪಮಾ ಅವರ ಪರಿಚಯ ನನಗೆ ಹೊಸತು. ಆದರೆ ಅಣ್ಣ (ನಿರಂಜನ) ನನ್ನವರು ಎಂಬ ಹಕ್ಕು - ಅಭಿಮಾನ ! ಮಾತು ಆಡುತ್ತ ಅಂದೆ, "ಸಂಪ್ರದಾಯ ಬಿಟ್ಟು ವಿವಾಹವಾದವರಿಗೆ ಈ ಸ್ಥಳ ಬಾವಿ ಇದ್ದ ಹಾಗೆ. ಈಜಲು ಸಾಧ್ಯವಿಲ್ಲದೆ ಉಸಿರು ಕಟ್ಟಿಸುತ್ತದೆ. ನೀವು ಇಲ್ಲಿ ಯಾಕೆ ಬಂದದ್ದು ? ಬೆಂಗಳೂರು ಸಮುದ್ರ ಇದ್ದ ಹಾಗೆ! ಈಜಲು ಬಂದ ನಿಮಗೆ, ನಿಮ್ಮಲ್ಲಿದ್ದ ಪ್ರತಿಭೆಯನ್ನು ಹೊರತರಲು ಬೆಂಗಳೂರೇ ಸರಿ ! ಇಲ್ಲಿ ನಾನು ಉಸಿರುಗಟ್ಟಿ ಬದುಕುತ್ತಿದ್ದೇನೆ."

ಇತರರಿಗಿಂತ ಬೇರೆಯಾಗಿದ್ದ ನನ್ನ ಮಾತು ಅನುಪಮಾಗೆ ಅಪಸ್ವರದಂತೆ ಕೇಳಿರಬೇಕು. ಕ್ಲಿನಿಕ್ ಚೆನ್ನಾಗಿ ನಡೆದರೂ ಅಣ್ಣ ನಿರಂಜನರ ಸಾಹಿತ್ಯಕ್ಕೆ ಹೆಚ್ಚಿನ ಸ್ಫೂರ್ತಿ ದೊರೆಯಲಿಲ್ಲ. ಆಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡುವ ಪಕ್ಷಿಯನ್ನು ಪಂಜರದಲ್ಲಿ ಇಟ್ಟರೆ ಹೇಗೆ ? ಕೊನೆಗೆ ಧಾರವಾಡ ಬಿಟ್ಟು ಬೆಂಗಳೂರಿಗೇ ಪುನಃ ಹೋಗೋದೆಂದು ನಿರ್ಧರಿಸಿದರು.

ಅಲ್ಲಿ ಹೋದ ನಂತರ ನಿರಂಜನ ದಂಪತಿಗಳ ಬದುಕಿನಲ್ಲಿ ಸುವರ್ಣಯುಗ ! ಎಲ್ಲರಿಂದಲೂ ಪ್ರೀತಿ - ವಿಶ್ವಾಸದ ಸುರಿಮಳೆ ! ಸನ್ಮಾನ-ಸಮಾರಂಭ. ಅತ್ತ ಸಾಹಿತ್ಯ - ಇತ್ತ ಕ್ಲಿನಿಕ್. ಡಾ। ಅನುಪಮಾರನ್ನು ನಿರಂಜನ ಪ್ರೋತ್ಸಾಹದ ಉಯ್ಯಾಲೆಯಲ್ಲಿ ತೂಗಿಬಿಟ್ಟರು. ಎರಡನೆಯ ಮಗಳು ಸೀಮಂತಿನಿ ಅಮ್ಮನ ದುಂಡು ಮುಖ, ಅಪ್ಪನ ಗುಂಗುರು ಪ್ರೊಡಿಗೂದಲನ್ನು ತಂದು ಇಬ್ಬರ ಬದುಕಿಗೂ ಇನ್ನೊಂದು ಕೊಂಡಿಯಾದಳು.

ನಿರಂಜನರಿಗೆ ಪ್ರತಿಯೊಂದು ಕಾರ್ಯದಲ್ಲೂ ಶಿಸ್ತು ಇರಬೇಕು. ಮಕ್ಕಳನ್ನು ಪ್ರಾಯಕ್ಕೂ ಮೀರಿದ ಓದಿನ ಕೋಣೆಯಲ್ಲಿ ಬಿಟ್ಟು, ಅಪೂರ್ವ ಕೃತಿಗಳನ್ನು ಕಡೆದ ಶಿಲ್ಪಿಯಾದವರು. ಇತ್ತ 'ಜ್ಞಾನ ಗಂಗೋತ್ರಿ'ಯ ಪ್ರಧಾನ ಸಂಪಾದಕರಾಗಿ ಬಹು ದೊಡ್ಡ ಹೊಣೆ ಹೊತ್ತು ಇನ್ನಿತರ ಸಾಹಿತ್ಯ ರಚನೆಯಲ್ಲೂ ಕೈಯಾಡಿಸಿದರು.

ದೃಷ್ಟಿ ತಗಲಿತೇ ? ಒಂದು ದಿನ ಕೇಳಲಾರದ ಸುದ್ದಿ ! ನಿರಂಜನ ಅವರಿಗೆ. ಪ್ಯಾರಲಿಸಿಸ್ ಬಡಿಯಿತಂತೆ. ತಲೆಯಿಂದ ಪಾದದವರೆಗೂ, ದುಡಿದರೂ ದಣಿವಿಲ್ಲದ ದೇಹಕ್ಕೆ ಇಂಥ ಆಘಾತ !

ಮತ್ತೆ ಮೆಲ್ಲನೆ ಚೇತರಿಸಿಕೊಳ್ಳುತ್ತಿದ್ದಾರೆ ಎನ್ನುವ ವಾರ್ತೆ ಮನಸ್ಸಿಗೆ ನೆಮ್ಮದಿ ತಂದಿತು. ಕೆಲವೇ ಸಮಯದಲ್ಲಿ ಇನ್ನೊಂದು ತಡೆಯಲಾರದ ಸುದ್ದಿ ! ಡಾ। ಅನುಪಮಾಗೆ ಕ್ಯಾನ್ಸರ್ ! ಪ್ರಾರಂಭದಲ್ಲೇ ಗೊತ್ತಾಗಿ ಅಪಾಯವಿಲ್ಲ ಎಂದು ತಿಳಿದೆ.

ಮೂಕ ರೋದನ ನನ್ನದು. ಇಬ್ಬರೂ ಛಲವಾದಿಗಳು ! ಧೀರ ಹೋರಾಟಗಾರರು ! ಅನುಕಂಪದ ಮಾತನ್ನು ಸಮೀಪಕ್ಕೆ ಬರಲು ಬಿಡದವರು, ನಡೆಯಲು ಆಗದಿದ್ದರೂ ಸುಮ್ಮನೆ ಕುಳಿತುಕೊಳ್ಳದವರು.

ಇಪ್ಪತ್ತೈದು ಸಂಪುಟಗಳ ವಿಶ್ವಕಥಾಕೋಶದಂಥ ಬಹುದೊಡ್ಡ ಹೊಣೆಯನ್ನು ಹೊತ್ತು, ನಾಲ್ಕು ವರ್ಷಗಳಲ್ಲಿ ಲೋಕದ ಬೇರೆ ಬೇರೆ ಭಾಷೆಯಲ್ಲಿಯ ಕಥೆಗಳನ್ನು ಕನ್ನಡಕ್ಕೆ ಅನೇಕರಿಂದ ಅನುವಾದಿಸಿ ಸಿದ್ಧಪಡಿಸಿದ ಅಪೂರ್ವ ವ್ಯಕ್ತಿ. ತನ್ನ ದುಃಖ ದುಮ್ಮಾನಗಳನ್ನು ಮರೆತು ಇನ್ನೂ ದುಡಿಯುತ್ತಿದ್ದಾರೆ. ಡಾ। ಅನುಪಮಾ ಆಸ್ಪತ್ರೆಯ ದುಡಿತ ಬೇಡ ಎಂದು ಎಲ್ಲರ ಒತ್ತಾಯಕ್ಕೆ ಮಣಿದರೂ, ಅದೇ ಮಂದಸ್ಮಿತ ಮಾತು, ಬರೆಹ, ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಅಲ್ಲಲ್ಲಿ ಒಬ್ಬರನ್ನೊಬ್ಬರು ನಾವು ಕಾಣುತ್ತೇವೆ. ಆದರೆ ನೇರವಾಗಿ ನೋಡಲಾಗುವುದಿಲ್ಲ. ನೋವು ಒತ್ತಿ ಬರುತ್ತದೆ.... ○

(ದಿ। ಗೀತಾ ಕುಲಕರ್ಣಿಯವರು ಕಳುಹಿಸಿದ್ದ ದೀರ್ಘ ಲೇಖನದಿಂದ ಉದ್ಧೃತ ಅಂಶಗಳು.)

-ಡಾ। ಹೊ. ಶ್ರೀನಿವಾಸಯ್ಯ

ಹುಬ್ಬಳ್ಳಿ
೨-೧-೧೯೪೬

ಗೆಳೆಯರಾದ ಶ್ರೀನಿವಾಸಯ್ಯನವರಿಗೆ ವಂದನೆಗಳು. ಮದ್ರಾಸಿನಿಂದ ನಾನು ಇಲ್ಲಿಗೆ ಬಂದಿರುವೆನು. ತಾಯಿ ಸೌಖ್ಯವಾಗಿರಬಹುದು ಎಂದು ಭಾವಿಸುತ್ತೇನೆ. ನಾನು ಹುಷಾರಾಗಿರುವುದಾಗಿಯೂ ಇನ್ನು ಹತ್ತು ದಿನಗಳ ಮೇಲೆ ಅಂದರೆ ೧೨ನೇ ತಾರೀಖು ಬಂದು ಮುಟ್ಟುವುದಾಗಿಯೂ ದಯವಿಟ್ಟು ತಿಳಿಸಬೇಕು. ಊಟ ತಿಂಡಿ ಸರಿಯಾಗಿದೆ. ಕೆಮ್ಮು ಶೀತ ಯಾವುದೂ ಇಲ್ಲ. ಸಿಗರೇಟ್ ಮುಟ್ಟುವುದೇ ಇಲ್ಲ. ಆಶೀರ್ವಾದ ಕೇಳಿರುವೆನೆಂದು ತಿಳಿಸಿ. ನೀವೆಲ್ಲರೂ ಸೌಖ್ಯವೆಂದು ಭಾವಿಸಿರುತ್ತೇನೆ.

ಇತೀ ವಂದನೆಗಳು
ಕುಳುಕುಂದ ಶಿವರಾಯ

ಕುಳುಕುಂದ ಶಿವರಾಯರಿಂದ ೧೯೪೬ರ ಜನವರಿ ೨ರಂದು ಬಂದ ಪತ್ರ ಇದು. ನಮ್ಮ ಮನೆಯಲ್ಲಿನ ವಠಾರದಲ್ಲಿ ಆರು ಮನೆಗಳಿವೆ. ಕೊನೆಯ ಮನೆಯಲ್ಲಿದ್ದವರು ಕುಳುಕುಂದ ಶಿವರಾಯರು (೧೯೪೫-೪೬). ಎತ್ತರವಾದ, ಪೃಥಕಾಯರಾದ ಸುಮಾರು ೨೬-೨೭ರ ತರುಣ. ಗುಂಗುರು ಕೂದಲು. ಉಬ್ಬನೆಯ ಮೂಗು, ಲಕ್ಷಣವಾಗಿದ್ದ ಯುವಕ. ಖಾದಿ ಜುಬ್ಬ, ಪೈಜಾಮ ಇವರ ಉಡುಗೆ.

ಶಿವರಾಯರ ತಾಯಿ ಮನೆಯಲ್ಲಿ ಒಬ್ಬರೇ ಇರುತ್ತಿದ್ದರು. ನಮ್ಮ ತಾಯಿಯವರಿಗೂ ಅವರಿಗೂ ಬಹಳ ಸ್ನೇಹ. ಶಿವರಾಯರು ಯಾವಾಗಲೂ ಮನೆಯಲ್ಲಿರುತ್ತಿರಲಿಲ್ಲ. ಹಾಗಾಗಿ ಹೆಚ್ಚು ಕಾಲ ನಮ್ಮ ಮನೆಯಲ್ಲಿ ಅವರ ತಾಯಿ ಕಾಲ ಕಳೆಯುತ್ತಿದ್ದರು. ಕೆಲವೊಮ್ಮೆ ನಮ್ಮ ತಾಯಿಯವರೇ ಅವರ ಮನೆಯಲ್ಲಿ ಹೋಗಿ ಕುಳಿತು ಮಾತನಾಡುತ್ತಿದ್ದರು.

ಕುಳುಕುಂದ ಶಿವರಾಯರು ಬರೆಹಗಾರರು ಅಂತ ಗೊತ್ತಿತ್ತು. ಇವರನ್ನು ಪರಿಚಯ ಮಾಡಿಕೊಟ್ಟವರು ಸಿದ್ದವನಹಳ್ಳಿ ಕೃಷ್ಣಶರ್ಮರು. "ಶ್ರೀನಿವಾಸಯ್ಯ, ಇವರು ಕುಳುಕುಂದ ಶಿವರಾಯ ಅಂತ. ಬರೆಹಗಾರ. ನಿಮ್ಮ ಮನೆಗಳಲ್ಲಿ ಖಾಲಿ ಇದ್ದರೆ ಒಂದು ಮನೆ ಕೊಡಿ" ಅಂದರು. ಆಗ ಪರಿಚಯವಿದ್ದವರಿಗೆ ಮಾತ್ರ ಮನೆ ಕೊಡುತ್ತಿದ್ದೆ. ಹೀಗೆ ಬಂದವರು ಶಿವರಾಯರು. ಆಗ ಮನೆ ಬಾಡಿಗೆ ೪ ರೂ. ಹುಬ್ಬಳ್ಳಿಗೆ ಹೋಗಬೇಕೆಂದು ಮನೆ ಬಿಟ್ಟರು. ಅನಂತರ ಆ ಮನೆಯು ಗಾಂಧಿ ಸಾಹಿತ್ಯ ಸಂಘವಾಯಿತು.

ಒಂದು ಸಾರಿ ಪಾಂಡುರಂಗರಾಯರು "ನಿಮಗೆ ನಿರಂಜನರು ಗೊತ್ತೇ!" ಅಂತ ಕೇಳಿದರು. "ಅವರ ಹೆಸರನ್ನು ಕೇಳಿರುವೆ" ಎಂದೆ. ಅದಕ್ಕೆ ಅವರು "ನಿರಂಜನ ಹೇಳಿದರು ನಮ್ಮ ಗಾಂಧೀ ಸಾಹಿತ್ಯ ಸಂಘದಲ್ಲಿ ಎಚ್. ಶ್ರೀನಿವಾಸಯ್ಯ ಅಂತ ಇದ್ದರು. ನಾನು ಅವರ ಮನೇಲಿ ಬಾಡಿಗೆಗೆ ಇದ್ದೆ. ಇಂಜಿನಿಯರಿಂಗ್ ಓದಲು ಪ್ರಾರಂಭಿಸಿದ್ದರು. ಜರ್ಮನಿಯ ಪ್ರವಾಸದ ಅನುಭವವನ್ನು ರೇಡಿಯೋನಲ್ಲಿ ತಿಳಿಸಿದವರು ಅದೇ ಶ್ರೀನಿವಾಸಯ್ಯನವರೇ? ಅಂತ ಕೇಳಿದರು. ಆಗ ನಾನು ಗಾಂಧೀ ಸಾಹಿತ್ಯ ಸಂಘದಲ್ಲಿ ಶ್ರೀನಿವಾಸಯ್ಯ ಇದ್ದಾರೆ. ಜರ್ಮನಿಯ ಬಗ್ಗೆ ಪುಸ್ತಕವನ್ನೂ ಬರೆದಿದ್ದಾರೆ. ವಿಚಾರಿಸುತ್ತೇನೆಂದು ಹೇಳಿದೆ. ನಿಮಗೆ ಚೆನ್ನಾಗಿ ನಿರಂಜನರ ಪರಿಚಯ ಇರಬೇಕಲ್ಲ?" ಎಂದು ಕೇಳಿದರು. ಆಗ ನನಗೆ ಜ್ಞಾಪಕಕ್ಕೆ ಬಂತು. ಕುಳುಕುಂದ ಶಿವರಾಯ ನಮ್ಮ ಮನೆಯಲ್ಲಿ ಇದ್ದರು. 'ನಿರಂಜನ' ಅಂತ ಹೆಸರಿನಲ್ಲಿ ಲೇಖನಗಳನ್ನು ಬರೆದಿದ್ದರು. ಅಷ್ಟು ನನಗೆ ಪೂರ್ಣ ವಿವರ ಗೊತ್ತಿಲ್ಲ. "ಅವರೇ ಆದರೆ ಚೆನ್ನಾಗಿ ಪರಿಚಯವಿದೆ" ಅಂತ ಹೇಳಿದೆ. ಪಾಂಡುರಂಗರಾಯರು ಹೇಳಿದರು "ಕುಳುಕುಂದ ಶಿವರಾಯರೇ ನಿರಂಜನರು". ಆಗ ಅವರ ಮೂಲಕ ನಿರಂಜನರಿಗೆ 'ನಾ ಕಂಡ ಜರ್ಮನಿ' ಪುಸ್ತಕವೊಂದನ್ನು ಕಳಿಸಿಕೊಟ್ಟು "ನೋಡುತ್ತೇನೆ!" ಎಂದು ಹೇಳಿ ಕಳುಹಿಸಿದೆ. ನಿರಂಜನರು ಪುಸ್ತಕ ಓದಿ ನನಗೆ ಪತ್ರ ಬರೆದರು. ಮನೆಗೆ ಆಹ್ವಾನಿಸಿದರು.

ಒಂದು ದಿನ ಅವರ ಮನೆಗೆ ಹೋದೆ. ಆತ್ಮೀಯತೆಯಿಂದ ಬರಮಾಡಿಕೊಂಡರು. ಅಂದು ಯುಗಾದಿ ಹಬ್ಬ ಅಂತ ಕಾಣುತ್ತೆ. ಹೋಳಿಗೆ ಕೊಟ್ಟರು. ಅವರ ಪತ್ನಿ ಡಾ। ಅನುಪಮಾರ ಪರಿಚಯ ಆಯಿತು. ಆಗ ಎಲ್ಲ ವಿವರವನ್ನು ವಿಚಾರಿಸಿದರು. ನಮ್ಮ ತಾಯಿಯವರು ಮಡಿವಂತರು. ಅವರನ್ನು ಕೇಳಿದರು. ಅವರ ತಾಯಿಯವರೂ ಮನೆಯಲ್ಲಿ ಇದ್ದರು. ಅವರೂ ಸಹ ಮಡಿವಂತರು. ಅವರಿಗೆ ಪ್ರತ್ಯೇಕ ಕೊಠಡಿ. ಸೌದೇಲೆ ಅಡಿಗೆ ಮಾಡಿಕೊಳ್ಳುತ್ತಿದ್ದರು. "ತಿಮ್ಮಕ್ಕ ಹೇಗಿದ್ದಾರೆ?" ಅಂತ ವಿಚಾರಿಸಿದರು ನಮ್ಮ ತಾಯಿಯವರನ್ನು. ಆಗ ನಿರಂಜನರು ಅಸ್ವಸ್ಥರಾಗಿದ್ದರು. ದಂಪತಿಗಳಿಬ್ಬರೂ 'ನಾ ಕಂಡ ಜರ್ಮನಿ' ಪುಸ್ತಕ ಓದಿ ಮೆಚ್ಚುಗೆ ವ್ಯಕ್ತಪಡಿಸಿದರು. ನನಗೆ ಬಹಳ ಆನಂದವಾಯಿತು.

ಅನಂತರ ನನ್ನ ಅವರ ಸಂಪರ್ಕ ಹೆಚ್ಚು ಬೆಳೆಯುತ್ತಾ ಬಂತು. ಅವರು ಜ್ಞಾನಗಂಗೋತ್ರಿಯ ಪುಸ್ತಕದ ಕೆಲಸ ನಿರ್ವಹಿಸುತ್ತಿದ್ದರು. ಆಗ, ತಾಂತ್ರಿಕ ವಿಷಯದ ಬಗ್ಗೆ ರೈಲ್‌ಕೋಚ್ ವಿಭಾಗದ ಲೇಖನ ಬರೆದುಕೊಡಿ ಅಂದರು. ಯಂತ್ರ ಜಗತ್ತಿಗೆ ಸಲಹೆಗಾರನಾಗಿ ತೆಗೆದುಕೊಂಡರು. ಲೇಖನ ಬರೆದುಕೊಟ್ಟೆ. ಚಿತ್ರಗಳನ್ನು ಕೊಟ್ಟು ಆಗಾಗ ಹೋಗಿ ಬರುತ್ತಿದ್ದೆ. ಒಮ್ಮೆ ನಿಮ್ಮ ಮನೆಗೆ ಬರಲೇಬೇಕು ಅಂತ

ಹೇಳಿದೆ. ಅನಾರೋಗ್ಯವಿದ್ದರೂ ಮನೆಗೆ ಬಂದರು. ಹಿಂದಿನ ನೆನಪನ್ನು ಮಾಡಿಕೊಂಡರು. ತಾವು ಇದ್ದ ಮನೆಯನ್ನೂ, ನೆನಪನ್ನೂ, ಹೆಂಡತಿ ಅನುಪಮಾ ಮತ್ತು ಮಕ್ಕಳಿಗೆ ಹೇಳಿ ಸಂತೋಷಪಟ್ಟರು.

ಜ್ಞಾನಗಂಗೋತ್ರಿಯ ಸಂಪುಟದ ಬಿಡುಗಡೆ ಸಮಾರಂಭ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಭೆ ಸೇರಿತ್ತು. ಮಾತನಾಡುವಾಗ ನಮ್ಮ ತಾಯಿಯವರನ್ನು ನೆನೆದು ಅತಿ ಉದ್ವೇಗದಿಂದ ಮಾತನಾಡಿ ಕುಸಿದರು. ತಕ್ಷಣವೇ ನೀರು ಕುಡಿಸಿ ಸಮಾಧಾನ ಮಾಡಿದೆವು. ಅಂತಹ ಪ್ರೀತಿ, ಆತ್ಮವಿಶ್ವಾಸದ ಬೆಳವಣಿಗೆ ಅವರಲ್ಲಿತ್ತು.

ಡಾ। ಅನುಪಮಾರವರ 'ಸಿಹಿ - ಕಹಿ' ಪುಸ್ತಕದಲ್ಲಿ ಅವರೇ ಹೇಳಿರುವಂತೆ ನಿರಂಜನರನ್ನು ಮೊದಲನೇ ಸಾರಿ ಭೇಟಿ ಮಾಡಿದ್ದು ನಮ್ಮ ಮನೆಯಲ್ಲಿ. "ಶ್ರೀನಿವಾಸಯ್ಯನವರ ಮನೆಯಲ್ಲಿ ಗಾಂಧೀ ಸಾಹಿತ್ಯ ಸಂಘವಿದೆ. ಅಲ್ಲಿ ನಾನು ಮೊದಲ ಬಾರಿಗೆ ನಿರಂಜನರನ್ನು ಭೇಟಿಮಾಡಿದೆ" ಎಂದು ಬರೆದಿದ್ದಾರೆ. ಇದು ನನಗೆ ಸಂತೋಷ ಉಂಟುಮಾಡಿತು.

ನಿರಂಜನರು ಆಗಾಗ ದೂರವಾಣಿ ಮೂಲಕ ಮಾತನಾಡುತ್ತಿರುತ್ತಾರೆ. ಅದಕ್ಕಿಂತ ಹೆಚ್ಚಾಗಿ ಪತ್ರಗಳನ್ನು ಬರೆಯುತ್ತಿರುತ್ತಾರೆ. ದೂರವಾಣಿಗಿಂತ ಪತ್ರಗಳಲ್ಲಿ ಆತ್ಮೀಯತೆ ಹೆಚ್ಚು ಅಂತ ಕಾಣುತ್ತೆ.

ನನಗೆ ರಾಜ್ಯದ ಪರವಾಗಿ ಸನ್ಮಾನ ಏರ್ಪಡಿಸಿದ್ದರು. ಅಭಿನಂದನ ಪುಸ್ತಕಗಳನ್ನು ಹೊರತರಲಾಯಿತು. ಆ 'ಸೇವಾಶ್ರೀ', 'ಜಯಶ್ರೀ' ಪುಸ್ತಕಗಳನ್ನು ಅವರಿಗೆ ಕಳಿಸಿಕೊಟ್ಟೆ. ಓದಿ ಪತ್ರ ಬರೆದರು. ಅಭಿಪ್ರಾಯಗಳನ್ನು ಬಹು ಸ್ಪಷ್ಟವಾಗಿ, ಕೆಲವೇ ಸಣ್ಣ ವಾಕ್ಯಗಳಲ್ಲಿ ತಿಳಿಸುವುದು ಅವರ ಶ್ರೇಷ್ಠತೆ. ಇಂತಹ ಪತ್ರಗಳಲ್ಲಿ ಬರೆದ ಕೆಲವು ವಾಕ್ಯಗಳನ್ನು ಇಲ್ಲಿ ಆಯ್ದು ತಿಳಿಸುತ್ತೇನೆ:

"ನಿಮ್ಮ ಪುಸ್ತಕಗಳನ್ನು ಓದಿದೆ. ಲೇಖನಗಳನ್ನು ಓದಿದಾಗ ನಿಮ್ಮ ನೆನಪು ಗರಿ ಕೆದರಿತು. ನಾನು ೧೯೩೪ರಲ್ಲಿ ನನ್ನ ೧೧ನೇ ವಯಸ್ಸಿನಲ್ಲಿ ಗಾಂಧಿಜಿಯವರನ್ನು ಕಂಡೆ. ನೂಲ ತೊಡಗಿದೆ. ಖಾದಿ ತೊಟ್ಟೆ. ಜಾತೀಯ ಕಲ್ಪನೆ ಎಳೆಯುದರಲ್ಲಿ ಕಿತ್ತು ಹಾಕಿದೆ. ಮುಂದೆ ಕಮ್ಯೂನಿಸಂ ಹಣಿಕಿ ನೋಡಿದ ಮೇಲೂ ಖಾದಿಯನ್ನೇ ತೊಡುತ್ತಿದ್ದೆ. ನಿಜ ಹೇಳಲೇ ? ನಿಮ್ಮ ಆವರಣದಲ್ಲಿದ್ದ ಒಂದು ವರ್ಷವಿಡೀ ನೀವು ಯಾವ ಜನ ಎಂದು ಕೇಳಿದವನಲ್ಲ. ಆ ಬಳಿಕ ಎಷ್ಟೋ ವರ್ಷಗಳಾದ ಮೇಲೆ ೧೯೭೧ರಲ್ಲಿ ನಾನು ಪಾರ್ಶ್ವಪೀಡಿತನಾದ ಮೇಲೆ ನೀವೇ ಒಮ್ಮೆ ನಾಗಮಂಗಲದ ಮಾತೆತ್ತಿದಿರಿ.

'ಹೊನ್ನೇಗೌಡ' ಎಂದೇನೋ ಅಂದಿರಿ. ಅರ್ಥವಾಯಿತು. ನೀವು ಬೇರೆ ಆದಿರೆ? ಇಲ್ಲ. ಅದೇ ವ್ಯಕ್ತಿತ್ವ. ಜಾತಿ ಇಲ್ಲದ, ಜಾತಿಗಳಲ್ಲಿ ನಂಬಿಕೆ ಇಲ್ಲದ ನನಗೆ ಹಾಗೆನಿಸುವುದು ಸ್ವಾಭಾವಿಕ. ಈ ಎರಡು ದಶಕಗಳಲ್ಲಿ ಸ್ವಾತಂತ್ರ್ಯವನ್ನು ಬಲ ಉಳ್ಳವರು ಸವಿಯ ತೊಡಗಿದಂತೆ ಜಾತಿ, ಭೇದ, ತಾಂಡವ ಆಡಿದೆ. ನಾನು ಈ ಬೆಳವಣಿಗೆಯನ್ನು ನಿರೀಕ್ಷಿಸಿರಲಿಲ್ಲ. ವಿಷಣ್ಣನಾದೆ.

'ಜಯಶ್ರೀ' ಓದಿದೆ. ಹಲವು ಸಲ ಉಮ್ಮಳ ಬಂತು. ಮಾನವೀಯ ಸೆಲೆಗೆ ನಾನು ಮಾರುಹೋಗುತ್ತೇನೆ. ಮುಖವಾಡದ ರಾಜಕಾರಣಕ್ಕೆ ಹೇಸುತ್ತೇನೆ. ನೀವು ಗಂಧದ ಕೊರಡಂತೆ ನಿಮ್ಮನ್ನು ತೇದುಕೊಂಡಿದ್ದೀರಿ.

ನೀವೊಮ್ಮೆ ಉಗಾದಿ ದಿನ ಬಂದಿರಿ. ಒಬ್ಬಟ್ಟು ತಂದಿದ್ದಿರಿ. ನನ್ನ ತಾಯಿ ತಿಮ್ಮಕ್ಕನ ವಿಷಯ ಕೇಳಿದರು. ಸುದ್ದಿಯಿಂದ ಆಘಾತವಾಗಿರಬೇಕು. ೧೯೭೫ರಲ್ಲಿ ತಮ್ಮ ಲಗನೇ ವಯಸ್ಸಿನಲ್ಲಿ ಈ ತಾಯಿಯೂ ಹೋದರು. ಕೇವಲ ನಾಲ್ಕೇ ದಿನಗಳ ನೆಪದ ಅಸ್ವಾಸ್ಥ್ಯ. ಆಕೆ ಪಟ್ಟ ಕಷ್ಟ ನೆನೆದರೂ ಸಾಕು ಮೈ ಮುಳ್ಳಾಗುತ್ತದೆ. ಮೊಮ್ಮಕ್ಕಳಿಬ್ಬರನ್ನೂ ಶೈಶವದಲ್ಲಿ ಅವರೇ ಸ್ನಾನಮಾಡಿಸುತ್ತಿದ್ದರು. ಗಂಡು ಹುಟ್ಟಲಿಲ್ಲ ಎಂದು ಒಮ್ಮೆಯೂ ಹೇಳಿದವರಲ್ಲ. ೪೧ ವರ್ಷದ ಹಿಂದಿನ ಸ್ನೇಹ, ಗೆಳೆತನ ನಿರಂತರವಾಗಿ ಮುಂದುವರಿದುಕೊಂಡು ಬಂದಿದೆ. ನಿಮ್ಮ ಚಟುವಟಿಕೆಗಳನ್ನು ಆಗಾಗ್ಗೆ ಕೇಳುತ್ತಿರುತ್ತೇನೆ; ಓದುತ್ತಿರುತ್ತೇನೆ. ನನ್ನ ಸ್ನೇಹಿತ ಎಂದು ಹೇಳಿಕೊಳ್ಳಲು ಸಂತೋಷಪಡುತ್ತೇನೆ."

ಈ ಪತ್ರ ಅವರ ಜಾತೀಯ ಕಲ್ಪನೆಯ ಬಗ್ಗೆ, ರಾಷ್ಟ್ರಪ್ರೇಮದ ಬಗ್ಗೆ, ಗಾಂಧಿಜಿಯವರ ಬಗ್ಗೆ, ಸ್ನೇಹವಾತ್ಸಲ್ಯದ ಬಗ್ಗೆ ಇರುವ ಅಭಿಪ್ರಾಯದ ಸ್ಪಷ್ಟೀಕರಣ.

ಇತ್ತೀಚೆಗೆ ಮನೆಯಲ್ಲಿ ಓಡಾಡಲು ಕುರ್ಚಿಬೇಕು ಅಂತ ಹೇಳಿದ್ದರು. ಆ ವಿಚಾರದಲ್ಲಿ ಅವರ ಮನೆಗೆ ಹೋಗಿದ್ದೆ. ಅದನ್ನು ಮಾಡಿಸಿಕೊಡುವ ಏರ್ಪಾಡು ಮಾಡಿದ್ದೆ. ನಮ್ಮ ಮನೆಗೇ ಬಂದು ತೆಗೆದುಕೊಂಡು ಹೋಗುತ್ತೇನೆಂದು ಹೇಳಿ ನನ್ನಲ್ಲಿಗೆ ಬಂದಿದ್ದರು. ಹಿಂದಿನದನ್ನೆಲ್ಲಾ ನೆನಪು ಮಾಡಿಕೊಂಡರು. ಅವರಿಗೆ ಏಳಲು, ಕುಳಿತುಕೊಳ್ಳಲು ಆಗದಿದ್ದರೂ ಒಬ್ಬರ ಸಹಾಯ ಪಡೆಯದೆ ಮೆಟ್ಟಿಲು ಹತ್ತಿ ಮೇಲೆ ಬಂದರು. ಇದು ಅವರ ಮನಸ್ಥೈರ್ಯಕ್ಕೆ ಉದಾಹರಣೆ. ಬಂದು ಹೋದ ಮೇಲೆ ಪತ್ರ ಬರೆದರು:

"ನಿನ್ನೆ ಸಂಜೆಯ ಭೇಟಿ ಚೇತೋಹಾರಿಯಾಗಿತ್ತು. ಕಡಿಮೆ ಮಾತಿನವಳಾದ ಸೀಮಂತಿನಿಯೂ ಸಂತೋಷಪಟ್ಟಳು. ಕುರ್ಚಿ ನೋಡಿ, ನನ್ನ ಪಾಲಿಗೆ ಅದರ ಉಪಯುಕ್ತತೆ ಎಷ್ಟೆಂಬುದು ಮನವರಿಕೆಯಾಗಿ ಅನುಪಮಾ ಖುಷಿ ಪಟ್ಟರು. ಇವತ್ತು

ಬೆಳಗ್ಗೆ ಸೀಮಾ, ಮನೆಯಿಂದ ಹೊರ ಹೋಗಿ ಸ್ವಚ್ಛಗಾಳಿ ಸೇವಿಸಿದಳು. ನಾಳೆಯಿಂದ ನಾನೂ ಅಂಗಳಕ್ಕಿಳಿಯುತ್ತೇನೆ. ಸದಾಕಾಲ ಕೊಠಡಿಯಲ್ಲಿರುವುದೇ ನನ್ನ ಅವ್ಯಾಹತ ಆಕ್ಷಿಗೆ ಕಾರಣ (ನಿಮ್ಮಿಂದ ಕಲಿತಪಾಠ) ಸಂದೇಹವಿಲ್ಲ?"

ಹೀಗೆ ನನಗೂ ನಿರಂಜನರಿಗೂ ಸುಮಾರು ೪೧ ವರ್ಷಗಳ ಪರಿಚಯ. ಹಿಂದೆ ಕುಳುಕುಂದ ಶಿವರಾಯರಾಗಿ ಪರಿಚಯವಾದವರು ಇಂದು ನಿರಂಜನರಾಗಿ ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾಗಿದ್ದಾರೆ. ಸ್ನೇಹಕ್ಕಿಂತ ಅವರು ನಮ್ಮ ಮನೆಯವರಂತೆ ಇದ್ದಾರೆ ಎಂದರೆ ತಪ್ಪಾಗಲಾರದು. ಇಂತಹ ಗೆಳೆಯ ಬಂಧುಗಳು ಸಿಗುವುದು ಅಪರೂಪ. ○

ಆಪಾದಮಸ್ತಕ ಸಭ್ಯ

- ಬಡಕ್ಕಿಲ ಕೃಷ್ಣ ಭಟ್ಟ

'ಕುಟ್ಟಿ-ದೊಣ್ಣೆ' ಹಿಡಿದುಕೊಂಡು ಕಂಡವರ ಮನೆಯಂಗಳದಲ್ಲಿ ದಾಂಧಲೆ ಮಾಡುವ ಪೋರ. ಈ ಪೋರ ಬೇರಾರೂ ಅಲ್ಲ-'ಕಿಶೋರ'.

ಅವನ ಕಥೆ 'ಮೋಹಜಾಲ' ಜಿಲ್ಲೆಯ ಹೆಸರಾಂತ ಸಾಹಿತಿ ಕಡೆಂಗೋಡ್ಲು ಅವರು ಸಂಪಾದಿಸುತ್ತಿದ್ದ 'ರಾಷ್ಟ್ರಬಂಧು'ವಿನಲ್ಲಿ ಅಚ್ಚಾಗಿ ಹೊರಬಂತು. ಆಗ 'ಕಿಶೋರ' ಸುಳ್ಯದ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ. ತುತ್ತಿಗೂ ತತ್ವಾರ. ಸುಮಾರು ಐದು ದಶಕಗಳ ಹಿಂದಿನ ಸುಳ್ಯ ನೆನೆಸಿಕೊಂಡರೆ ಬರುವುದು ಛಳಿ ಜ್ವರ. ಈ ಪ್ರತಿಕೂಲ ಪರಿಸ್ಥಿತಿಯಲ್ಲಿ, ಚಿಮಿಣಿ ಎಣ್ಣೆಯ ಮಂದ ಬೆಳಕಿನಲ್ಲಿ ಕಿಶೋರ ತನ್ನ ಮೊದಲ ಕತೆಯನ್ನು ಬರೆದ.

'ಕಿಶೋರ' - ಕುಳುಕುಂದ ಶಿವರಾಯರ ಕಾವ್ಯನಾಮ. ಈ ಕಾವ್ಯನಾಮ ಅನ್ವರ್ಥನಾಮವೂ ಹೌದು. ಕೆ. ಯಸ್. ಆರ್. ಪ್ರಥಮಾಕ್ಷರಗಳ ಕನ್ನಡೀಕರಣ.

ಕುಳುಕುಂದ ದಕ್ಷಿಣ ಕನ್ನಡ ಜಿಲ್ಲೆಯ ಕುಗ್ರಾಮ. ಅವರೂ ಪ್ರಸಿದ್ಧ ಅಲ್ಲಿ ನಡೆಯುವ ಜಾನುವಾರು ಜಾತ್ರೆಯಿಂದ. ಶಿವನನ್ನು ಕೆನೆಹಾಲು ಕೊಡಬಲ್ಲ ಆಕಳೆಂದು ಮೊದಲು ಗುರುತಿಸಿದವರು, ಸಾಹಿತ್ಯ ಲೋಕಕ್ಕೆ ಪರಿಚಯಿಸಿದವರು ಕಡೆಂಗೋಡ್ಲು.

ಗೌರ ವರ್ಣದ ಆಕರ್ಷಕ ನಿಲುವು. ನಡೆ ನೇರ. ನೋಟ ತೀಕ್ಷ್ಣ. ತುಡಿತಗಳು ತೀವ್ರ. ಮಾತು ವಿಚಾರಗಳಲ್ಲಿ ಖಚಿತತೆ. ಹೇಳಬೇಕಾದ್ದನ್ನು ಸುತ್ತಿ ಬಳಸದೆ ಹೇಳಿ ಬಿಡುವ ಅಮಿತೋತ್ಸಾಹ. ಅಯಸ್ಕಾಂತದಂತೆ ಆಕರ್ಷಿಸಬಲ್ಲ ವ್ಯಕ್ತಿತ್ವ.

ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುವಾಗಲೆಂದು ತಾಯಿ-ಮಗ ಕಂಬಿಕಿತ್ತುದು ನೀಲೇಶ್ವರಕ್ಕೆ. ಅಲ್ಲಿಯ ರಾಜಾಸ್ ಹೈಸ್ಕೂಲಿಗೆ ಪ್ರವೇಶ. ಯಸ್.ಯಸ್.ಯಲ್.ಸಿ. ವರೆಗಿನ ವ್ಯಾಸಂಗ. ಪರೀಕ್ಷೆಯಲ್ಲಿ ಉತ್ತೀರ್ಣನಾದರೂ ಮುಂದುವರಿಸಲು ಆರ್ಥಿಕ ಅನಾನುಕೂಲತೆ ಅಡ್ಡವಾಯಿತು. ಅಲ್ಲದೆ ಶಿಕ್ಷಣವ್ಯವಸ್ಥೆಯಲ್ಲಿ ವಿಶ್ವಾಸ ಕಳೆದು ಕೊಂಡಿದ್ದ ಶಿವರಾಯ 'ಓದಿದ್ದು ಇಷ್ಟು ಸಾಕು' ಎಂದು ನಿರ್ಧರಿಸಿದ.

ನೀಲೇಶ್ವರದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕಯ್ಯೂರಿನಲ್ಲಿ ಆಂದೋಲನದ ಹೊಸ ಅಲೆ ಕಾಣಿಸಿದ್ದು. ಅದು ಶಿವರಾಯನ ಕಣ್ಣು ತೆರೆಯಿಸಿತು. ಆತ ಅಲ್ಲಿನ ಘಟನೆಗಳಿಂದ ಪ್ರಭಾವಿತನಾದ. ಅದು ಆಸೆ-ಭರವಸೆಗಳನ್ನು ಹುಟ್ಟಿಸಿದ ಆಂದೋಲನ. ಆಂದೋಲನದೊಡನೆ ಹೊಸ ವಿಚಾರಗಳೂ ತೂರಿ ಬಂದುವು. ಈ ಮೂಲಕ ಹೊಸ ಜಗತ್ತನ್ನು ಹುಟ್ಟುಹಾಕಬಹುದು, ಎಲ್ಲರ ಬದುಕನ್ನು ಹಸನು ಮಾಡಬಹುದು, ಎಂದು ಬೆಳೆದು ಬರುತ್ತಿದ್ದ ಕಿಶೋರ ತರ್ಕಿಸಿದ. ಮಾರ್ಕ್ಸ್, ಲೆನಿನ್ ವಿಚಾರಗಳನ್ನು, ಗಾರ್ಕಿ, ಟಾಲ್‌ಸ್ಟಾಯ್, ಡೋಸ್ಟೆಯೆವ್‌ಸ್ಕಿ ಬರೆಹಗಳನ್ನು ಅಭ್ಯಸಿಸಿದ. ಕಾರ್ಮಿಕ ಸಂಘಟನೆಯಲ್ಲಿ, ಕಮ್ಯೂನಿಸ್ಟ್ ಪಕ್ಷದ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡ. ಕಮ್ಯೂನಿಸ್ಟ್ ಪಕ್ಷದ ಮುಖವಾಣಿಯ ಸಂಪಾದಕನಾದ. ಹೀಗೆ ವರದಿಗಾರ, ಅಂಕಣಕಾರ, ಕತೆಗಾರ ರೂಪುಗೊಂಡ. ಪತ್ರಿಕೆಯನ್ನು ಸುಸ್ಥಿತಿಗೆ ತರಲು ಗ್ರಾಹಕ ರನ್ನು ಗಿಟ್ಟಿಸಲು, ಪಕ್ಷ ಸಂಘಟಿಸಲು ಕರ್ನಾಟಕದ ಬಹುಭಾಗವನ್ನು ಸಂಚರಿಸಿದ. ಕಲಿಕೆಯಿಂದ, ಸಂಚಾರದಿಂದ ಶಿವರಾಯನ ಬದುಕು ಬದಲಾಯಿತು. ಕಸುವು ದ್ವಿಗುಣಿತವಾಯಿತು. ಬರೆಯ ಬಲ್ಲೆ, ಬರೆದು ಬದುಕಬಲ್ಲೆ ಎಂಬ ಆತ್ಮವಿಶ್ವಾಸ ತಂದುಕೊಟ್ಟಿತು. ಜೀವನಾನುಭವ ಬರೆವಣಿಗೆಗೆ ಹದ, ವಿಸ್ತಾರ, ಆಳ ತಂದು ಕೊಟ್ಟಿತು. ಸಣ್ಣ ಕತೆಗಳಿಂದ ಆರಂಭವಾದ ಕೃಷಿಕಾರ್ಯ ಕಾದಂಬರಿ ಕ್ಷೇತ್ರಕ್ಕೂ ಕಾಲಿಟ್ಟಿತು. ಬೃಹತ್ ಕಾದಂಬರಿಗಳನ್ನು ರಚಿಸಿದ. ಅನ್ಯ ಭಾಷೆಯ ಅಮೂಲ್ಯ ಕೃತಿಗಳನ್ನು ಕನ್ನಡಿಸಿಕೊಟ್ಟ. ಸಂಪಾದನ ಕಾರ್ಯವನ್ನೂ ನಡೆಸಿದ.

ಕೈ ಮೂಳೆ ಮುರಿದು ಚಿಕಿತ್ಸಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅಂಟಿದ ಚಿಂತೆಯೊಂದೇ ! ಕೈ ಕೊಟ್ಟರೆ ಮುಂದೆ ಬರೆಯುವುದೆಂತು? ಕಿಶೋರ ಆಗ ತ್ರಿವಿಕ್ರಮನಾಗಿ ಬೆಳೆದಿದ್ದ. ಬಿರುಗಾಳಿಗೆ ಸಿಲುಕಿ ಎತ್ತೆಂದರತ್ತ ತೊನೆಯುತ್ತಿದ್ದ-ನಾವೆ ಹಿಡಿದು ನೆಲೆ ಕಾಣದ ಬದುಕು ನೆಲೆಕಂಡುದು ಬರೆವಣಿಗೆಯಲ್ಲಿ. ಹೋರಾಟ ಗಾರನ ಬದುಕಿನ ಒಂದು ಅಧ್ಯಾಯ ಅಲ್ಲಿಗೆ ಕೊನೆಗೊಂಡಿತು.

ಆದರೆ ಹೋರಾಟ ಮಾತ್ರ ನಿಲ್ಲಲಿಲ್ಲ.

ಗಂಭೀರ ಪ್ರಕೃತಿಯ ಶಿವನಿಗೆ ಹಮ್ಮಿರುವುದಿಲ್ಲ. ಯಾವೂ ಹೆಮ್ಮೆಪಡ ಬೇಕಾದ ಸಾಧನೆಯಿದ್ದರೂ ತುಂಬು ನಿಗರ್ವಿ. ಅನ್ಯರನ್ನು ತೆಗಳುವ, ಹಳಿಯುವ ಪ್ರವೃತ್ತಿ ಅವನಿಂದ ಗಾವುದ ದೂರ. ಅಮಾತ್ಸರ್ಯ ಶಿವನ ಬಹುದೊಡ್ಡ ಗುಣ. ಎಲ್ಲರನ್ನೂ ವಿಶ್ವಾಸದಿಂದ, ಆತ್ಮೀಯತೆಯಿಂದ ಕಾಣುವ ಸ್ವಭಾವ. ಕೆಲಸ ಯಾವುದೇ ಇರಲಿ, ಒಪ್ಪಿಕೊಂಡುದನ್ನು ಒಪ್ಪವಾಗಿ ಮಾಡಿ ಮುಗಿಸುವ ಛಲಗಾರ.

ಕ್ರಾಂತಿಕಾರರೆಂಬ ಹಣೆಪಟ್ಟಿ ಹಾಕಿಕೊಂಡ ಬಹುಮಂದಿಯಲ್ಲಿ ಕಾಣಸಿಗದ ಅಪೂರ್ವವಾದ ಅಚ್ಚುಕಟ್ಟುತನ ಆತ ಬೆಳೆಸಿಕೊಂಡಿದ್ದಾನೆ. ಶಿವನ ಸೌಂದರ್ಯ ಪ್ರಜ್ಞೆ ಬಹುದೊಡ್ಡದು. ಪತ್ರವ್ಯವಹಾರದಲ್ಲಿ, ಪುಸ್ತಕಗಳನ್ನು ಓರಣವಾಗಿಟ್ಟು ಕೊಳ್ಳುವುದರಲ್ಲಿ, ಹಾಕಿಕೊಳ್ಳುವ ಬಟ್ಟೆ ಬರೆಯಲ್ಲಿ ಕ್ರಾಂತಿಕಾರಿ ವಿಚಾರಗಳ ಅಧ್ವರ್ಯು ಆಗಿ ನಿಂತ ಅವನಲ್ಲಿ, ಕ್ರಾಂತಿಕಾರರ ಬಾಹ್ಯ ಲಕ್ಷಣಗಳು ಕಾಣಬರುವು ದಿಲ್ಲ. ಅಪಾಯಕಾರಿ ಬದುಕನ್ನು ನಡೆಸಿದರೂ, 'ನಾವೂ ಮನುಷ್ಯರೆ'ಂದು ಗುಡುಗಿದರೂ, ಅನ್ಯರಿಗೆ ಅಪಾಯವಾಗುವಂತೆ, ಅಸಹ್ಯವೆನಿಸುವಂತೆ ವರ್ತಿಸಲಿಲ್ಲ ಆಪಾದಮಸ್ತಕ ಸಭ್ಯ.

ತನ್ನದೆನ್ನುವ ಸಂಪತ್ತು ಇರಲಿಲ್ಲ. ಪರಂಪರೆ? ಅದು ಶೂನ್ಯ. ಹೇಳಿ ಕೊಳ್ಳಲು ನಾಚಬಹುದು. ಆ ಹುಟ್ಟಿನ ಹಿನ್ನೆಲೆ 'ಬನಶಂಕರಿ'ಯಲ್ಲಿ ಮೂಡಿ ಬಂತು. ಕಯ್ಯೂರಿನ ದಾರುಣ ಘಟನೆ ನೆನಪಿನಂಗಳದಲ್ಲಿ ತಂಗಿದ್ದು 'ಚಿರಸ್ಮರಣೆ'ಯಾಯಿತು. ಪಾರ್ಶ್ವವಾಯು ಎರಗಿ ದೇಹದ ಎಡ ಭಾಗದ ಮೇಲೆ ಹತೋಟಿ ತಪ್ಪಿತು. ಒಂದು ಭಾಗಕ್ಕೆ ಎರವಾದರೂ ಇನ್ನೊಂದು ಭಾಗ ಸರಿಯಾಗಿಯೇ ಇದೆಯಲ್ಲ. ಬಲ ಭಾಗಕ್ಕೆ ಆಗಿದ್ದರೆ ಬರೆವಣಿಗೆಗೆ ಬಾಧಕ. ಆದ್ದರಿಂದ ಬುದ್ಧಿಗೆ, ಮಾತಿಗೆ, ಚಿಂತನಕ್ಕೆ ತೊಂದರೆಯಾಗಲಿಲ್ಲ. ಅನ್ಯರನ್ನು ಕಂಡು, ತನಗೆ ಹಾಗಾಗಿಲ್ಲವೆಂಬ ತೃಪ್ತಿ: ಚಿತ್ತವೃತ್ತಿ. ಈ ಅಗ್ನಿಪರೀಕ್ಷೆ ಸಾಕಾಗಲಿಲ್ಲವೇನೋ? ಕೈ ಹಿಡಿದು ನಡೆಯಿಸಿದ ಕಾಮಿನಿಗೆ ಕಾಯಿಲೆ. ಶಿವ ಅಧೀರನಾಗಲಿಲ್ಲ. ಅದನ್ನೂ ಮೆಟ್ಟಿನಿಲ್ಲುವ ಧೀಶಕ್ತಿ.

ಬಾಳಿನಲ್ಲಿ ಯಥೇಚ್ಛ ಹಾಲಾಹಲವನ್ನು ಭುಂಜಿಸಿ, ಸದಾ ಅಗ್ನಿಪರ್ವತದ ಮೇಲೆ ಕುಳಿತಿರುವ ಶಿವ ಚಿತ್ತವಿಕಾರಕ್ಕೆ ಎಡೆಕೊಡದೆ ಏನೂ ಆಗಿಲ್ಲವೇನೋ ಎಂಬಂತಿರುವ ನಿತ್ಯತೃಪ್ತ; ನಿರ್ಲಿಪ್ತ. ಅದ್ದರಿಂದ ನಿರಂಜನ. ಕಿಶೋರ . ನಿರಂಜನ ಎರಡೂ ಸಮಸ್ಥಿತಿಯ ಹಂತಗಳು.

ಪ್ರತಿಭಾವಂತ ಕ್ರಿಯಾಶೀಲ

- ಚದುರಂಗ

ನನಗೆ ಅನೇಕ ಪರಿಚಯಸ್ಥರಿದ್ದಾರೆ. ಹಾಗೆಯೇ ಬಹಳಷ್ಟು ಮಂದಿ ಸ್ನೇಹಿತರು ಅನ್ನಿಸಿಕೊಂಡವರೂ ಇದ್ದಾರೆ. ಆದರೆ ನನಗೆ ನಿಜವಾದ ಕಷ್ಟಸುಖಗಳಲ್ಲಿ ಬೆಂಬಲವಾಗಿ ನಿಲ್ಲುವ ಕೆಲವು ಸ್ನೇಹಿತರೂ ಇದ್ದಾರೆ. ಅಂಥ ಕೆಲವೇ ಕೆಲವು ಸ್ನೇಹಿತರಲ್ಲಿ ನಿರಂಜನರೂ ಒಬ್ಬರು. ನಿರಂಜನರ ಮತ್ತು ನನ್ನ ಸ್ನೇಹ ಹತ್ತಿರ ಹತ್ತಿರ ನಲವತ್ತು ವರ್ಷಗಳಷ್ಟು ಹಿಂದಿನದು. ನಾವಿಬ್ಬರು ಗೆಳೆಯರಾದುದಕ್ಕೆ ಪ್ರಾಯಶಃ ನಾವಿಬ್ಬರೂ ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದುದು ಕಾರಣವಾಗಿರಬಹುದು. ನಾನು ಅವರಿಗಿಂತಲೂ ಕೆಲವು ವರ್ಷಗಳಿಗೆ ಮುಂಚೆಯೇ ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದು, ಅನಂತರ ಎಂ.ಎನ್.ರಾಯ್ ಪ್ರಭಾವಕ್ಕೂ ಒಳಗಾಗಿದ್ದವನು. ಅವರೂ ಸಹ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿ ಹಲವು ವರ್ಷ ಕಾರ್ಯನಿರತರಾಗಿದ್ದು ಭ್ರಮನಿರಸನ ಹೊಂದಿ ಪಾರ್ಟಿಯಿಂದ ಹೊರಬಂದಿದ್ದವರು. ಆದರೆ ನಾವಿಬ್ಬರೂ ಕಮ್ಯೂನಿಸ್ಟ್ ಪಾರ್ಟಿಯಿಂದ ಅಧಿಕೃತವಾಗಿ ದೂರವಾಗಿದ್ದರೂ, ಕಾರ್ಲ್ ಮಾರ್ಕ್ಸ್‌ನ ತತ್ವದಿಂದ ಸಂಪೂರ್ಣವಾಗಿ ದೂರವಾದವರಲ್ಲ. ಲೇಖಕರಾದ ನಮ್ಮಿಬ್ಬರ ಮೇಲೂ ರಷ್ಯನ್ ಸಾಹಿತಿ ಮ್ಯಾಕ್ಸಿಮ್ ಗಾರ್ಕಿಯ ಪ್ರಭಾವವಂತೂ ಸಹಜವಾಗಿಯೇ ದಟ್ಟವಾಗಿತ್ತು.

ಆ ದಿನಗಳಲ್ಲಿ ಮೈಸೂರು ನಗರದ ಕ್ಲಾಕ್‌ಟವರ್ ಸಮೀಪದಲ್ಲಿರುವ ಜಿ.ಎಚ್. ರಾಮರಾಯರ ಮುದ್ರಣಾಲಯದಲ್ಲಿ ನಮ್ಮಿಬ್ಬರ ಪ್ರಥಮ ಭೇಟಿ. ರಾಮರಾಯರಿಗೂ ಕಮ್ಯೂನಿಸ್ಟ್ ಒಲವು ಇದ್ದುದರಿಂದ ಎಡ ಪಂಥದ ಲೇಖಕರಾದ ನಿರಂಜನ ಮತ್ತು ನನ್ನನ್ನು ಪ್ರೀತಿಯಿಂದ ನಡೆಸಿಕೊಳ್ಳುತ್ತಿದ್ದರು. ಕಾಸಿಲ್ಲದ ಆ ದಿನಗಳಲ್ಲಿ ಅಡಿಗ, ಆನಂದ ಇತ್ಯಾದಿ ಲೇಖಕರ ಜೊತೆಗೆ ನಮ್ಮಿಬ್ಬರಿಗೂ ಆಗಾಗ ಕಾಫಿ, ತಿಂಡಿ ಸೇವೆ ನಡೆಯುತ್ತಿತ್ತು.

ಕ್ರಮೇಣ ನಿರಂಜನ ಹಾಗೂ ನನ್ನ ಸ್ನೇಹ ಗಾಢವಾಗುತ್ತಾ ಬಂದಿತು. ಆದರೆ ಕೆಲವು ವೈಯಕ್ತಿಕ ಕಾರಣಗಳಿಂದ ನಾನು ಹಲವು ವರ್ಷ ಮೈಸೂರು ನಗರವನ್ನು ಬಿಟ್ಟು ನನ್ನ ಹುಟ್ಟೂರಾದ ಕಲ್ಲಹಳ್ಳಿಗೆ ಹೋಗಿ ವಾಸಮಾಡಬೇಕಾಗಿ ಬಂದಿತು. ಸರಿಯಾದ ದಾರಿಗಳಿಲ್ಲದ, ನಲ್ಲಿ ದೀಪಗಳಿಲ್ಲದ ಆ ಕಾಡು ಹಳ್ಳಿಯ ವಾಸ ಬಲು ಕಠಿಣತಮವಾಗಿತ್ತು. ಕಾಲಕಾಲಕ್ಕೆ ಪತ್ರಿಕೆಗಳು ದೊರೆಯುತ್ತಿರಲಿಲ್ಲ. ಒಳ್ಳೆಯ ಪುಸ್ತಕಗಳು ದೊರಕುವುದು ಸಹ ದುರ್ಲಭವಾಗಿತ್ತು. ವಿಚಾರಗಳನ್ನು ಹಂಚಿಕೊಳ್ಳಲು ಸ್ನೇಹಿತರು ಕೂಡ ದೂರವಾಗಿದ್ದರು. ಆಗೊಮ್ಮೆ ನಾನು ಮೈಸೂರಿಗೆ ಬಂದಿದ್ದೆ. ಅಂದು ಏಕೋ ನನ್ನ ಮನಸ್ಸು ವ್ಯಗ್ರವಾಗಿತ್ತು. ಒಂಟಿಕೊಪ್ಪಲಿನ ಬಡಾವಣೆಯ ಒಂದು ಬೀದಿಯಲ್ಲಿ

ನಾನು ಅನ್ಯಮನಸ್ಕನಾಗಿ ನಡೆದು ಬರುತ್ತಿದ್ದೆ. ಆಗ ಯಾರೋ ನನ್ನನ್ನು ಹೆಸರ್ಹಿಡಿದು ಕೂಗಿದಂತಾಯಿತು. ಚಕಿತನಾಗಿ ತಿರುಗಿ ನೋಡಿದೆ. ರಸ್ತೆಯ ಬದಿಯ ಔಟ್‌ಹೌಸ್‌ನ ಗೇಟಿನ ಬಳಿಯಲ್ಲಿ ನಿರಂಜನರು ನಿಂತಿದ್ದರು. ಅವರನ್ನು ಕಂಡ ಕೂಡಲೇ ಕ್ಷೋಭೆಗೊಂಡಿದ್ದ ನನ್ನ ಮನಸ್ಸಿಗೆ ತಂಪೆರೆದಂತಾಯಿತು. ನಿರಂಜನ ನಾಲ್ಕು ಹೆಜ್ಜೆ ಮುಂದೆ ಬಂದು ನನ್ನನ್ನು ಬಾಚಿ ತಬ್ಬಿ, "ಇದೇನಿದು ಈ ಲೋಕವನ್ನೇ ಮರೆತು ಸಾಗುವಂತಿದೆಯಲ್ಲಾ, ಸಾಹೇಬರು?" ಎಂದು ಹಾಸ್ಯ ಮಾಡಿ, "ಬನ್ನಿ ಬಹಳ ಬಳಲಿದಂತಿದೆ, ನನ್ನ ಪರ್ಣಕುಟಿಯಲ್ಲಿ ಕೆಲಸಮಯ ವಿಶ್ರಮಿಸಿಕೊಂಡು ತೆರಳುವಿರಂತೆ" ಎಂದು ಪ್ರೀತಿಯಿಂದ ಆಹ್ವಾನಿಸಿದರು.

ಬೇಸಿಗೆಯ ದಿನಗಳಾದ್ದರಿಂದ ನನಗೂ ತುಂಬಾ ದಾಹವಾಗಿತ್ತು. ಅವರು ಅರ್ಘ ಮಾಡಿಕೊಂಡು ತಣ್ಣನೆಯ ನೀರನ್ನು ನೀಡಿದ್ದಲ್ಲದೆ ರಸ ತುಂಬಿದ ಕಿತ್ತಲೆ ಹಣ್ಣು ಒಂದನ್ನು ತಂದು ತಾವೇ ಪ್ರೀತಿಯಿಂದ ಒಂದೊಂದು ತೊಳೆಯನ್ನು ಬಿಡಿಸಿ ನನಗೆ ತಿನ್ನಿಸತೊಡಗಿದರು. ಅವರ ಮಾನವೀಯತೆ ತುಂಬಿದ ವಿಶ್ವಾಸಕ್ಕೆ ನಾನು ಮಾರುಹೋದೆ. ಅನಂತರದ ದಿನಗಳಲ್ಲಿ ಕಿತ್ತಲೆ ಹಣ್ಣನ್ನು ತಿನ್ನುವ ಪ್ರಸಂಗ ಬಂದಾಗಲೆಲ್ಲ ಅಂದು ನಿರಂಜನರು ತಿನ್ನಿಸಿದ ಕಿತ್ತಲೆ ಹಣ್ಣಿನ ರುಚಿಕಟ್ಟು ಮತ್ತು ಅವರ ಹೃದಯವಂತಿಕೆ ನನ್ನ ಅಂತರಂಗವನ್ನು ತುಂಬುತ್ತದೆ.

ನಿರಂಜನರು ನನ್ನಲ್ಲಿಟ್ಟ ಸ್ನೇಹಕ್ಕೆ ಇನ್ನೊಂದು ನಿದರ್ಶನವನ್ನು ಕೊಡಬಹುದು. ನಾನು ಅನೇಕ ವರ್ಷ ಸೃಜನಶೀಲವಾಗಿ ಏನನ್ನೂ ಬರೆಯದಿದ್ದುದು ಅವರಿಗೆ ಬಹಳ ವ್ಯಥೆಯನ್ನುಂಟುಮಾಡಿತ್ತು. ಹೇಗಾದರೂ ಮಾಡಿ ನನ್ನ ನಿಂತ ಲೇಖನಿಗೆ ಚಾಲನೆ ಕೊಡಬೇಕು ಎಂಬ ಮಹದಾಸೆ ಅವರದು. ಆದರೆ ಅವರು ಎಷ್ಟು ಬಗೆಯಲ್ಲಿ ಒತ್ತಾಯಿಸಿದರೂ ನಾನು ಬರೆಯುವ ಸ್ಥಿತಿಯಲ್ಲಿರಲಿಲ್ಲ. ಮೈಸೂರಿನಲ್ಲಿ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ನಾವಿಬ್ಬರೂ ಜೊತೆಗಿದ್ದಾಗ ಕೆಲವು ಕಾಲೇಜು ವಿದ್ಯಾರ್ಥಿನಿಯರು ಹಸ್ತಾಕ್ಷರ ಪಡೆಯಲು ನಿರಂಜನರಲ್ಲಿಗೆ ಬಂದರು. ಅವರಿಗೆ ತಮ್ಮ ಹಸ್ತಾಕ್ಷರವನ್ನು ನೀಡಿದ ನಿರಂಜನರು ನನ್ನನ್ನು ಉಪೇಕ್ಷಿಸಿ ತೆರಳುತ್ತಿದ್ದ ಆ ವಿದ್ಯಾರ್ಥಿನಿಯರನ್ನು ಸಂಬೋಧಿಸಿ, "ಅಯ್ಯೋ ಚದುರಂಗರು ಇಲ್ಲೇ ಇದ್ದಾರೆ, ಅವರ ಹಸ್ತಾಕ್ಷರವನ್ನು ಪಡೆದುಕೊಳ್ಳದೆ ಹೋಗುತ್ತಿದ್ದೀರಲ್ಲಾ" ಎಂದರು. ಅವರ ಮಾತಿಗೆ ಬೆಲೆ ಕೊಟ್ಟು ಆ ವಿದ್ಯಾರ್ಥಿನಿಯರು ನನ್ನ ಬಳಿಗೂ ಬಂದರು. ನನ್ನ ಪೆನ್ನನ್ನು ತೆಗೆದು ಸಹಿ ಮಾಡಲು ಹೊರಟಾಗ ನನ್ನ ಪೆನ್ನಿನಲ್ಲಿ ಶಾಯಿ ಇಲ್ಲದಿರುವುದನ್ನು ಕಂಡ ನಿರಂಜನರು "ಅಯ್ಯೋ, ಚದುರಂಗರ ಪೆನ್ನಿನಲ್ಲಿ ಶಾಯಿಯೇ ಇಲ್ಲ, ಅದಕ್ಕೆ ಶಾಯಿ ತುಂಬುವುದನ್ನು ಅವರು ಮರೆತು ಬಹಳ ಸಮಯವಾಯಿತು" ಎಂದು ಗೇಲಿ ಮಾಡಿ ತಮ್ಮ ಪೆನ್ನನ್ನು ಕೊಟ್ಟು ಸಹಿ ಹಾಕಿಸಿದರು.

ವಿದ್ಯಾರ್ಥಿನಿಯರು ತೆರಳಿದ ಬಳಿಕ ನನ್ನನ್ನು ಪ್ರೀತಿಯಿಂದ ತಬ್ಬಿ "ನೋವಾಯಿತೆ? ಹೀಗೆ ಚುಚ್ಚಿಯಾದರೂ ನೀವು ಬರೆಯಬೇಕೆಂಬುದೇ ನನ್ನ ಆಸೆ. ನಿಮ್ಮಂಥ ಸಮರ್ಥ ಲೇಖಕರ ಲೇಖನಿ ಯಾವ ಕಾರಣಕ್ಕೂ ಹೀಗೆ ತಟಸ್ಥವಾಗಬಾರದು" ಎಂದು ಹುರಿದುಂಬಿಸಿದರು. ಇಂಥ ಸ್ನೇಹಿತರಿರುವುದು ನನ್ನ ಪುಣ್ಯವೆಂದೇ ಭಾವಿಸುತ್ತೇನೆ.

ಇಷ್ಟು ಕಾಲ ನಿರಂಜನರನ್ನು ಒಂದು ರೀತಿಯಲ್ಲಿ ಕಡೆಗಣಿಸಿದ್ದ ಸಾಹಿತ್ಯಲೋಕ ಈಗೀಗ ಅವರ ಸಾಹಿತ್ಯಕೃತಿಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಸಂತೋಷವನ್ನುಂಟುಮಾಡಿದೆ. ಕಲ್ಲುಮುಳ್ಳಿನ ಹಾದಿಯಲ್ಲೇ ನಡೆದು ಸಾಹಿತ್ಯ ರಚಿಸಿದವರು ನಿರಂಜನರು. ಅವರ ಬಾಳ ಸಂಗಾತಿ ಅನುಪಮಾ ಸಹ ಅಂಥದೇ ದಾರಿಯಲ್ಲಿ ನಡೆದರು. ಇವರಿಬ್ಬರ ಬಾಳಿನಲ್ಲೂ ಆಗಿಂದಾಗ ಮೃತ್ಯು ಬಾಗಿಲು ತಟ್ಟಿದ್ದಿದೆ. ಆಗ ಈ ದಂಪತಿಗಳದು ಒಂದೇ ಉತ್ತರ: "ಕೊಂಚ ತಾಳಪ್ಪ, ನಿನ್ನ ಜೊತೆಗೆ ಬರುವುದಂತೂ ಇದ್ದೇ ಇದೆ. ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವೇ? ಆದರೆ ನಾವಿನ್ನೂ ಮಾಡಿ ಮುಗಿಸಬೇಕಾದ ಕೆಲಸ ಬಹಳಷ್ಟಿದೆ. ಅಲ್ಲಿವರೆಗೂ ಸ್ವಲ್ಪ ನಿಧಾನಿಸು" ಎಂದು ದಿಟ್ಟವಾಗಿ ಮೃತ್ಯುವನ್ನು ಸಾಗಹಾಕಿದ್ದಾರೆ.

ನಿರಂಜನರು ಬರೆದ ಅನೇಕ ಕಥೆ ಕಾದಂಬರಿಗಳಲ್ಲಿ ನನಗೆ ಮೆಚ್ಚುಗೆಯಾದ ಕೃತಿಗಳೆಂದರೆ 'ಕೊನೆಯ ಗಿರಾಕಿ' ಎಂಬ ಸಣ್ಣ ಕತೆ ಮತ್ತು 'ಚಿರಸ್ಮರಣೆ', 'ರಂಗಮ್ಮನ ವಠಾರ', 'ವಿಮೋಚನೆ' ಹಾಗೂ 'ಮೃತ್ಯುಂಜಯ' ಕಾದಂಬರಿಗಳು.

ನಿರಂಜನ ದಂಪತಿಗಳಿಬ್ಬರದು ಸಾರ್ಥಕ ಜೀವನ; ನಾಡು ನುಡಿಗಳಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಎಂಥ ಕಠಿಣ ಸಂದರ್ಭದಲ್ಲೂ ಸೋಲೊಪ್ಪದ ಕ್ರಿಯಾಶಾಲಿಗಳಾದ ಈ ದಂಪತಿಗಳಿಗೆ ದೈವ ಆರೋಗ್ಯ ತುಂಬಿದ ಆಯುಷ್ಯ ಕರುಣಿಸಲಿ, ಎಂಬುದೇ ನಾಡು ನುಡಿಗಳನ್ನು ಪ್ರೀತಿಸುವವರೆಲ್ಲರ ಹಾರೈಕೆಯಾಗಿದೆ. ಆ ಹಾರೈಕೆಯಲ್ಲಿ ನಾನೂ ಭಾಗಿ ಎಂದು ಬೇರೆ ಹೇಳಬೇಕೆ? ○

ನೇರ ನುಡಿ, ನೇರ ನಡೆ !

–ಬಸವರಾಜ ಕಟ್ಟೀಮನಿ

ನಲವತ್ತು ವರ್ಷಗಳ ಸ್ನೇಹ, ವಿಶ್ವಾಸ, ಆತ್ಮೀಯತೆ ಇಂದಿಗೂ ಅಂದಿನಂತೆಯೇ ಉಳಿಯುವುದು ಕಠಿಣ. ಆದರೆ, ನಿರಂಜನರೊಡನೆ ಮಾತ್ರ ಅಂದಿನ ಆ ಸೋದರಭಾವವೇ ಅಚ್ಚಳಿಯದೆ ಉಳಿದುಕೊಂಡು ಬಂದಿದೆ. ನನಗೆ ಗೆಳೆಯರು ಕಡಿಮೆ. ಮೂರು ನಾಲ್ಕು ಜನ ಇರಬಹುದು, ಅಷ್ಟೆ. ಪರಿಚಿತರಿದ್ದಾರೆ ನೂರಾರು ಜನ. ಅವರದೆಲ್ಲ ಔಪಚಾರಿಕ ವ್ಯವಹಾರ. ನಿರಂಜನರಿಗೂ ನನಗೂ ನಲವತ್ತು ವರ್ಷಗಳ ಅವಧಿಯಲ್ಲಿ ಅನೇಕ ಭಿನ್ನಾಭಿಪ್ರಾಯಗಳೂ ಸಣ್ಣಪುಟ್ಟ ಜಗಳಗಳೂ ನಡೆದಿಲ್ಲವೆಂದಲ್ಲ. ಆದರೆ, ನಿರಂಜನರ ಹೃದಯವಂತಿಕೆ, ನನ್ನ ಸ್ವಭಾವದ ಗಡಿಬಿಡಿ, ದುಡುಕು, ಕಟು ನುಡಿ ಇತ್ಯಾದಿ ಎಲ್ಲ ದೌರ್ಬಲ್ಯಗಳನ್ನೂ ನುಂಗಿಕೊಂಡು ಬಂದಿವೆ. ಇನ್ನೇನು, ಅವರ-ನನ್ನ ಗೆಳೆತನ ಮುಗಿದೇಹೋಯಿತು ಎಂಬಂಥ ಪ್ರಸಂಗ ಬಂದಾಗ, ನಾನೂ ಹಿಂದಿನದೆಲ್ಲವನ್ನೂ ಮರೆತು ಅವರನ್ನು ಹುಡುಕಿಕೊಂಡು ಹೋದದ್ದುಂಟು. ನಿರಂಜನ ನನ್ನಂತೆ ಅವಸರದ ಪ್ರಕೃತಿಯವರಲ್ಲ. ಅವರು ಏನನ್ನೇ ಮಾಡಿದರೂ, ಬರೆದರೂ ಸಾವಧಾನವಾಗಿ, ಅಚ್ಚುಕಟ್ಟಾಗಿ ಮಾಡುತ್ತಾರೆ. ನನ್ನದು ಘಟಪ್ರಭೆಯ ರಭಸವಾದರೆ ನಿರಂಜನರದು ಕೃಷ್ಣಾನದಿಯ ಧೀರಗಂಭೀರ ಪ್ರವಾಹ.

ಆದರಿಷ್ಟು ನಿಜ. ನಿರಂಜನ ಮತ್ತು ಬ. ಕ. ರೈಲುದಾರಿಯ ಎರಡು ಹಳಿಗಳಿದ್ದಂತೆ. ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ಚಳವಳಿ ಹುಟ್ಟುಹಾಕಿದವರೇ ನಿರಂಜನ. ಅವರು ಆಗ ಮಂಗಳೂರಿನಲ್ಲಿ; ನಾನು ಬೆಂಗಳೂರಿನಲ್ಲಿ. ಆದರೆ ಇಬ್ಬರ ವಿಚಾರಗಳೂ ಒಂದೇ ಗುರಿಯತ್ತ ಧಾವಿಸುತ್ತಿದ್ದುವು. ೧೯೪೦ರಿಂದಲೂ ಮಂಗಳೂರಿನ ಪತ್ರಿಕೆಗಳಲ್ಲಿ ಅವರ ಕಥೆಗಳನ್ನೂ ಬರಹಗಳನ್ನೂ ಓದುತ್ತ ಬಂದಿದ್ದೆ. ೧೯೪೪ರಲ್ಲಿ 'ಉಷಾ' ಆರಂಭಿಸಿದಾಗ ನಿರಂಜನರಿಗೆ ಪತ್ರ ಬರೆದು ಕಥೆಗಳನ್ನು ಕಳಿಸಲು ಕೇಳಿಕೊಂಡೆ. ಇಬ್ಬರೂ ಆಗ ಪಯಣ ಹೊರಟಿದ್ದುದು ಮುರುಕು ದೋಣಿಗಳಲ್ಲಿಯೇ. ೧೯೪೫ರಲ್ಲಿ ಬೆಂಗಳೂರಿನಲ್ಲಿ ಅವರ ಮೊದಲ ಭೇಟಿ. ನನಗಿಂತಲೂ ಎಳೆಯರೂ, ಚಿರ ವಿಶ್ವಾಸಿಯಂತೆ ನಗುನಗುತ್ತ ಮಾತನಾಡುವವರೂ, ನನ್ನಂತೆಯೇ ಶ್ವೇತ ಖಾದೀಧಾರಿಯೂ ಆದ ಕುಳಕುಂದ ಶಿವರಾಯರ ತೇಜಸ್ವೀ ವ್ಯಕ್ತಿತ್ವವೂ ನನ್ನನ್ನು ಸೆಳೆಯಿತು. ಆಗ ಅವರಿದ್ದುದು ಕಮ್ಯೂನಿಸ್ಟ್ ಪಾರ್ಟಿಯಲ್ಲಿ. ನಾನು ಪಾರ್ಟಿಯಲ್ಲಿರಲಿಲ್ಲ. ಆದರೆ, ಪಾರ್ಟಿಯ ಧ್ಯೇಯೋದ್ದೇಶಗಳಲ್ಲಿ ನಂಬುಗೆಯಿತ್ತು. ಈಗಲೂ ಉಂಟು. ಆದರೆ, ಕೆಲವೇ ಜನ ಮೂರು ನಾಲ್ಕು ದಶಕಗಳ ವರೆಗೂ ಪಾರ್ಟಿಯ ಪದಾಧಿಕಾರಿಗಳಾಗಿರುವುದು ನನಗೆ ಹಿಡಿಸಲಿಲ್ಲ. ಎಂ. ಎಸ್. ರಾಮರಾವ್ ಮತ್ತು ಉಪಾಧ್ಯಾಯರು ನನ್ನನ್ನು ಪಾರ್ಟಿಗೆ ಸೇರಿಸಲು ಪ್ರಯತ್ನಪಟ್ಟರು. ಕುಳಕುಂದರು ಆಗ ಪಾರ್ಟಿಯ ನಿಷ್ಠಾವಂತ ಕಾರ್ಯಕರ್ತರು.

೧೯೪೫ ಇರಬಹುದು. ಆಗ ನನಗೆ 'ಬ್ಲಿಟ್ಜ್' ಪತ್ರಿಕೆ ಮೆಚ್ಚುಗೆಯದು. ಅದರದು 'ಸ್ಟಂಟು'ಗಳೇ ಬಹಳ ಎನ್ನುವುದು ತಿಳಿದಿರಲಿಲ್ಲ. ಇನ್ನೂ ಹುಡುಗು ಬುದ್ಧಿ! ಆ ಪತ್ರಿಕೆಯಲ್ಲಿ ಬಂದಿದ್ದ ಯಾವುದೋ ಒಂದು ಲೇಖನ ಓದಿ, ಕಮ್ಯೂನಿಸ್ಟರ ಬಗೆಗೆ ಏನೋ ತಿಳಿದುಕೊಂಡು, ನಿರಂಜನರನ್ನೂ ವಿಚಾರಿಸದೆ, ಬರೆಯಬಾರದ ಕೆಲ ಮಾತುಗಳನ್ನು ಬರೆದುಬಿಟ್ಟೆ. ಆ ಬರೆಹ ಓದಿ ಕಮ್ಯೂನಿಸ್ಟರೆಲ್ಲರೂ ಸಿಟ್ಟಾದದ್ದು ಸಹಜ. ಆದರೆ, ಬೇರೆ ಯಾರೂ ಆ ಬಗೆಗೆ ನನ್ನೊಡನೆ ಜಗಳಕ್ಕಿಳಿಯಲಿಲ್ಲ. ನಿರಂಜನರು ಮಾತ್ರ ಸುಮ್ಮನೆ ಬಿಡಲಿಲ್ಲ. ಮಲ್ಲೇಶ್ವರಂ ವೃತ್ತದಲ್ಲಿ ನನ್ನನ್ನು ಚೆನ್ನಾಗಿ ಝಾಡಿಸಿದರು. ಕೈಗೆ ಕೈ ಹತ್ತುವ ಪ್ರಸಂಗವೂ ಬಂದಿದ್ದುದು ಹೇಗೋ ತಪ್ಪಿತು!

"ಬ್ಲಿಟ್ಜ್ ಓದಿ ಬರೆದೆ," ಎಂದು ಹೇಳಿದೆ.

"ಇರಬಹುದು. ಬ್ಲಿಟ್ಜ್‌ನಲ್ಲಿ ಬರೋದೆಲ್ಲಾ ಪರಮ ಸತ್ಯವಲ್ಲ. ನನ್ನನ್ನೇಕೆ ಕೇಳಲಿಲ್ಲ?" - ನಿರಂಜನ.

"ಕೇಳಬೇಕಿತ್ತು - ಕೇಳಲಿಲ್ಲ. ದುಡುಕಿನ ಸ್ವಭಾವ. ಕ್ಷಮಿಸಿ" ಎಂದೆ.

ಆ ಪ್ರಕರಣ ಅಲ್ಲಿಗೇ ಮುಗಿಯಿತು. ಅದನ್ನು ನಾನೂ ಮರೆತೆ, ಅವರೂ ಮರೆತರು. ಮತ್ತೆ ಮೊದಲಿನಂತೆಯೇ ಸ್ನೇಹ-ಆತ್ಮೀಯತೆ ಮುಂದುವರಿಯಿತು.

ನಿರಂಜನರು ಆರಂಭಿಸಿದ್ದ ಪ್ರಗತಿಶೀಲ ಚಳವಳಿಯನ್ನು ಅ. ನ. ಕೃ. ಹಿಡಿದು ಕೊಂಡು ಯದ್ವಾತದ್ವಾ ಮಾತು ಸುರುಮಾಡಿದರು. ತ. ರಾ. ಸು., ನಾಡಿಗೇರ, ಅರ್ಜಕ ವೆಂಕಟೇಶ, ಕುಮಾರ ವೆಂಕಣ್ಣ, ಮ. ಶ್ರೀಧರಮೂರ್ತಿ ಇವರ ಗುಂಪಿಗೆ ಅ. ನ. ಕೃ. ನಾಯಕರಾದರು. ಶಿವರಾಯರಿಗಾಗಲಿ, ನನಗಾಗಲಿ ಆ ಗುಂಪಿನಲ್ಲಿ ಪ್ರವೇಶವಿರಲಿಲ್ಲ. ಅ. ನ. ಕೃ. ಅವರ ನುಡಿಗೂ ನಡೆಗೂ ಇದ್ದ ಮಹದಂತರ ಕಂಡು ನನಗೂ ಅವರ ಬಗೆಗೆ ಬೇಸರವಾಯಿತು. 'ನಟಸಾರ್ವಭೌಮ', 'ನಗ್ನಸತ್ಯ', 'ಶನಿಸಂತಾನ', 'ಸಂಜೆಗತ್ತಲು' ಇತ್ಯಾದಿ ವಿಕೃತ ಕಾಮಕೇಳಿಯ ಕಾದಂಬರಿಗಳೇ ಪ್ರಗತಿಶೀಲ ಸಾಹಿತ್ಯ ಎಂದು ಅ. ನ. ಕೃ. ಮತ್ತು ಅವರ ಗುಂಪು ವಿತಂಡವಾದ ಹೂಡುತ್ತಲೂ, ನಿರಂಜನರು ತಮ್ಮ ಖಡ್ಗದಂಥ ಲೇಖನಿ ಬಳಸಿ ಆ ಅವಿವೇಕದ ವಾದವನ್ನು ಕೊಚ್ಚಿ ಹಾಕುತ್ತಲೂ ಇದ್ದರು. ಸರಿ, ಮೂರು ನಾಲ್ಕು ವರ್ಷ ಗಳಲ್ಲಿಯೇ ಪ್ರಗತಿಶೀಲ ಲೇಖಕರ ಸಂಘ ಒಡೆದು ಎರಡು ಹೋಳಾಯಿತು. ಅ. ನ. ಕೃ. ಮತ್ತು ಅವರ ಸಂಗಡಿಗರದೊಂದು ಗುಂಪು. ನಿರಂಜನ ಮತ್ತು ಬಸವರಾಜ ಕಟ್ಟೀಮನಿ ಅವರದೊಂದು ಗುಂಪು.

ಈಗ ಅ. ನ. ಕೃ. ಇಲ್ಲ, ಅವರ ಗುಂಪೂ ಇಲ್ಲ. ನಿರಂಜನ - ಬಸವರಾಜ ಕಟ್ಟೀಮನಿ ಮಾತ್ರ ಅಂದಿನಿಂದಲೂ ಒಂದೇ ಗುಂಪು. ೧೯೭೬ರಲ್ಲಿ 'ಪ್ರಗತಿಪಂಥ' ಕಟ್ಟುವ ಯತ್ನ ನಡೆಯಿತು. ದಾವಣಗೆರೆಯಲ್ಲಿ ನಡೆದ ಪಂಥದ ಪ್ರಪ್ರಥಮ ಸಮ್ಮೇಳನಕ್ಕೆ ನಿರಂಜನ ರನ್ನೇ ಅಧ್ಯಕ್ಷರನ್ನಾಗಿ ಮಾಡಿದೆವು. ಮೊದಲಿನಿಂದಲೂ ಶಿಸ್ತಿನ ವ್ಯಕ್ತಿಯಾಗಿದ್ದ ನಿರಂಜನರು ಒಂದು ವರ್ಷ ತಮ್ಮೆಲ್ಲ ಕೆಲಸಗಳನ್ನೂ ಬದಿಗಿರಿಸಿ 'ಪ್ರಗತಿಪಂಥ'ಕ್ಕಾಗಿ ದುಡಿದರು. ಪುತ್ತೂರಿನಲ್ಲಿ ದ್ವಿತೀಯ ಸಮ್ಮೇಳನ ನಡೆಯಿತು. ನನ್ನದು ನಿರಂಜನರಂಥ ಶಿಸ್ತಿನ ಸ್ವಭಾವವಲ್ಲ. ಕೆಲವು ವೈಯಕ್ತಿಕ ತೊಂದರೆಗಳೂ ನನ್ನನ್ನು ಕಾಡುತ್ತಿದ್ದುವು. ಅದರಿಂದಾಗಿ ನಾನು ಈ ಸಂಘಟನೆಗಾಗಿ ದುಡಿಯಲು ಶಕ್ಯನಾಗಲಿಲ್ಲ. ವಜ್ರಮಟ್ಟಿ, ಹಿಂಗಮಿರೆ, ಷಡಾಕ್ಷರಪ್ಪ, ಈಶ್ವರ ಭಟ್ಟ ಮೊದಲಾದವರು 'ಪ್ರಗತಿಪಂಥ' ಉಳಿಸಿ ಬೆಳೆಸಲು ಶಕ್ಯವಿತ್ತು. ಅದೂ ಆಗಲಿಲ್ಲ. ಕ. ವೆಂ. ರಾಜಗೋಪಾಲ್ ಉತ್ಸಾಹೀ ಕಾರ್ಯಕರ್ತರು. ಆದರೆ, ಅವರು ಜನಿವಾರ ಧರಿಸುವವರೆಂಬ ಕಾರಣದಿಂದಾಗಿ ನಾನು ಕೋಪಿಸಿಕೊಂಡೆ. ನಾನೆಂದೂ ಶಿವದಾರ ಧರಿಸಿದವನಲ್ಲ. ಈ ಎರಡೂ ದಾರಗಳು ಜಾತೀಯ ಕುರುಹುಗಳು. 'ಪ್ರಗತಿಪಂಥ'ದವರು ಈ ದಾರಗಳಿಗೆ ಜೋತುಬೀಳ ಬಾರದು. ಶ್ರೀರಂಗ, ಅ. ನ. ಕೃ. ಜನಿವಾರ ಧರಿಸುತ್ತಿರಲಿಲ್ಲ.

ಪ್ರಗತಿಶೀಲ ಲೇಖಕರ ಸಂಘ, ಪ್ರಗತಿಪಂಥ ಎರಡೂ ಈಗ ಐತಿಹಾಸಿಕ ಆಂದೋಲನಗಳು. ಸಂಘಟನೆಗಳು ಉಳಿಯಲಿಲ್ಲವಾದರೂ, ನಿರಂಜನರಾಗಲಿ, ನಾನೇ ಆಗಲಿ, ಪ್ರಗತಿಶೀಲತೆಯ ಧ್ಯೇಯಾದರ್ಶಗಳಿಂದ ದೂರ ಸರಿದಿಲ್ಲ. ನಿರಂಜನರು ಬರೆದ ಎಲ್ಲ ಕಥೆ ಕಾದಂಬರಿ.ಬರಹ.ದಿನಚರಿಗಳಲ್ಲಿ ಪ್ರಗತಿಶೀಲತೆಯ ಮುದ್ರೆ ಅಚ್ಚಳಿಯದಿದೆ.

'ಚಿರಸ್ಮರಣೆ', 'ರಂಗಮ್ಮನ ವಠಾರ', 'ಮೃತ್ಯುಂಜಯ'ಗಳಂಥ ಮಹಾ ಕಾದಂಬರಿಗಳನ್ನು ರಚಿಸಿದ ನಿರಂಜನರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಚಿರಸ್ಮರಣೀಯರು. 'ಜ್ಞಾನಗಂಗೋತ್ರಿ' ಮತ್ತು 'ವಿಶ್ವಕಥಾಕೋಶ'ಗಳು ಅವರ ಪ್ರಚಂಡ ಶಕ್ತಿ-ಸಾಮರ್ಥ್ಯ ಗಳಿಗೆ ಸಾಕ್ಷಿ. ಹಾಳು ಹರಟೆ ಕೊಚ್ಚುತ್ತ ಸಮಯ ಹಾಳು ಮಾಡುವ ವ್ಯಕ್ತಿಯಲ್ಲ ನಿರಂಜನ. ಗಡಿಯಾರದ ಮುಳ್ಳಿನಂತೆ ಅವರ ದಿನಚರಿ ವಿರಾಮವಿಲ್ಲದೆ ತಿರುಗುತ್ತದೆ. ಈಗಲೂ ಅವರು ಒಂದು ಮಹಾಕಾದಂಬರಿ ಬರೆಯುತ್ತಿರುವರೆಂದು ಕೇಳಿದ್ದೇನೆ. ಪಾರ್ಶ್ವವಾಯು ಪೀಡಿತರಾಗಿದ್ದಾಗಲೂ ಅವರು ಮಾಡುತ್ತಲೇ ಇರುವ ಈ ಅದ್ಭುತ ಸಾಹಿತ್ಯ ರಚನೆ ಅವರ ಗಟ್ಟಿವ್ಯಕ್ತಿತ್ವವನ್ನು ಪ್ರಕಟಪಡಿಸುತ್ತದೆ.

'ಮೃತ್ಯುಂಜಯ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಲ್ಲಬೇಕಿತ್ತು. ಅವರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕಿತ್ತು. ನಿರಂಜನರ ಕಾಲುಪಾಲು ಸಹ ಕೆಲಸ ಮಾಡದಿದ್ದವರಿಗೂ ಅಧ್ಯಕ್ಷತೆ ಲಭಿಸಿದೆ.

ಯಾರೂ ಓದದಿದ್ದ ಪುಸ್ತಕಗಳಿಗೂ ಅಕಾಡೆಮಿ ಪ್ರಶಸ್ತಿ ಬಂದಿವೆ. ನಿರಂಜನರು ಇಂಥವಕ್ಕೆಲ್ಲ ನೊಂದುಕೊಳ್ಳುವವರಲ್ಲ. ಆದರೆ, ಅವರ ಸಂಗಡಿಗನಾಗಿ ನನಗೇ ಸಂಕಟವಾಗಿದೆ. ಸೋವಿಯತ್ ದೇಶ ನೆಹರೂ ಪ್ರಶಸ್ತಿ ಸಮಿತಿಯವರು ಮಾತ್ರ ನಮ್ಮಿಬ್ಬರ ಕೃತಿಗಳನ್ನೂ ಗೌರವಿಸಿದರು. ನಾನು ಕಮ್ಯೂನಿಸ್ಟ್ ಅಲ್ಲ; 'ಫೆಲೋ ಟ್ರಾವಲರ್' ಸಹ ಅಲ್ಲ. ನಿರಂಜನರು ಮಾಜೀ ಕಮ್ಯೂನಿಸ್ಟ್. ಆದರೆ ಇಬ್ಬರೂ ಎಡಪಂಥೀಯ ಒಲವಿನವರು, ಅಷ್ಟೆ. ನಮ್ಮಿಬ್ಬರಿಗೂ ಸೋವಿಯತ್ ದೇಶದ ನೆಹರೂ ಪ್ರಶಸ್ತಿ ಲಭಿಸುತ್ತವೆ; ನಮ್ಮ ದೇಶದ ಅಕಾಡೆಮಿಗಳ ಪ್ರಶಸ್ತಿಗಳೇ ಲಭಿಸುವುದಿಲ್ಲ. ಇದೆಂಥ ಚೋದ್ಯ ? ತಿಳಿಯದಾಗಿದೆ.

ಮತ್ತೆ, ನನ್ನ ಹಾಗೆ, ಡಾ. ಗೋಕಾಕ್ ಮೊದಲಾದ ಅಕಾಡೆಮಿ ಪುಡಾರಿಗಳೊಡನೆ ನಿರಂಜನರು ಎಂದೂ ಜಗಳ ಮಾಡಿದವರಲ್ಲ. ನಾಲ್ವತ್ತು ವರ್ಷಗಳ ಹಿಂದೆ ಗೋಕಾಕರು ತಾನೂ 'ಪ್ರಗತಿಶೀಲ' ಎಂದು ಕೊಚ್ಚಿಕೊಳ್ಳುತ್ತಿದ್ದರು. ಅನಂತರ 'ನವ್ಯ'ವೂ ಆದರು! ನಿರಂಜನರಾಗಲಿ, ನಾನಾಗಲಿ, ಶ್ರೀರಂಗರಾಗಲಿ ಹೀಗೆ ಓತೀಕೇತದಂತೆ ಬಣ್ಣ ಬದಲಿಸಲಿಲ್ಲ. ನಿರಂಜನರ ಪ್ರಗತಿಪರ ನಿಲವು - ಸಮಾಜವಾದದಲ್ಲಿನ ಶ್ರದ್ಧೆ ನಲವತ್ತೈದು ವರ್ಷಗಳಿಂದಲೂ ದೃಢವಾಗಿಯೇ ಇದೆ. ಜೀವನದಲ್ಲಿ ಎಂಥ ಕಷ್ಟ ಸಂಕಟಗಳು ಬಂದರೂ ಅವುಗಳನ್ನು ನಿರಂಜನರು ಗಂಡುತನದಿಂದ ಎದುರಿಸಿದ್ದಾರೆ; ಇಲ್ಲದ ದೇವರಿಗಾಗಲಿ, ಡಾಂಭಿಕರೂ ಸಮಾಜ ದ್ರೋಹಿಗಳೂ ಆದ ಬಾಬಾಗಳಿಗಾಗಲಿ ಶರಣುಹೋಗಿಲ್ಲ. 'ಮೃತ್ಯುಂಜಯ'ದ ಕಥಾನಾಯಕನಂತೆಯೇ ನಿರಂಜನರ ವ್ಯಕ್ತಿತ್ವ. ○

ಪುರೋಗಾಮಿ ಮಾನವತಾವಾದಿ

- ಶಂಕರ ಪಾಠಕ

ಕುಳುಕುಂದ ಶಿವರಾಯರ ಪ್ರಥಮ ಪರಿಚಯ ನನಗಾದದ್ದು ಅಪ್ರತ್ಯಕ್ಷವಾಗಿ ಅವರ ಬರೆಹದ ಮೂಲಕ. ನಾನು ನನ್ನ ಊರಾದ ಬನವಾಸಿಯಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ೧೯೪೭ರಲ್ಲಿ ಶಿರಸಿಗೆ ಬಂದೆ. ಅಲ್ಲಿಯ ಶ್ರೀಮಾರಿಕಾಂಬಾ ಹೈಸ್ಕೂಲಿನಲ್ಲಿ ಆಗ ಕನ್ನಡ ಶಿಕ್ಷಕರಾಗಿದ್ದ ಜಿ.ಕೆ. ಹೆಗಡೆಯವರಿಂದ ನನಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಉಂಟಾಯಿತು. ಕನ್ನಡ ಭಾಷೆಯ ಬಗ್ಗೆ ಅಭಿಮಾನ ಮೂಡಿತು. ಸುಮಾರು ೧೯೪೮-೪೯ರಲ್ಲಿ ನಾನು ಮತ್ತಿತರ ಕಿರಿಯರೂ ಸೇರಿ 'ಕಿರಿಯರ ಕೂಟ' ಎನ್ನುವ

ಗುಂಪೊಂದನ್ನು ಸ್ಥಾಪಿಸಿ ನಮ್ಮ ಸಾಹಿತ್ಯಾಸಕ್ತಿಗೆ ಅವಕಾಶವಮಾಡಿಕೊಂಡಿದ್ದೆವು. 'ಹೂವಿನಸರ' ಎನ್ನುವ ಕೈಬರೆಹದ ತ್ರೈಮಾಸಿಕ ಪತ್ರಿಕೆ,ಒಂದು ಸಣ್ಣ ಲೈಬ್ರರಿಗಳನ್ನು ನಡೆಸುತ್ತಿದ್ದೆವು. ಇವರ ಸದಸ್ಯರಾದವರೆಲ್ಲ ಹೆಚ್ಚಾಗಿ ಶಿರಸಿಯ ಕನ್ನಡ ಶಾಲೆಯಲ್ಲಿ, ಇಲ್ಲವೆ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಾಗಿದ್ದರು. ವಿದ್ಯಾರ್ಥಿಗಳಲ್ಲದ ಸದಸ್ಯರು ಕೇವಲ ಮೂರು - ನಾಲ್ಕು. ಇಂತಹವರಲ್ಲಿ ಒಬ್ಬರು ಕ್ವಿಟ್ ಇಂಡಿಯ ಚಳವಳಿಯಲ್ಲಿ ಹೈಸ್ಕೂಲುಬಿಟ್ಟು ತಮ್ಮಅಣ್ಣನ ಅಡಿಕೆ ಮಂಡಿಯಲ್ಲಿ ಕೆಲಸಮಾಡುತ್ತಿದ್ದ ರಾಮಕೃಷ್ಣ ಹೆಗಡೆ ದೊಡ್ಡಮನೆ. ಅವರು 'ಕಿರಿಯರ ಕೂಟ'ದ ಅಧ್ಯಕ್ಷರು. ನಾನು ಕಾರ್ಯಾಧ್ಯಕ್ಷ ಹಾಗೂ ಪತ್ರಿಕೆಯ ಸಂಪಾದಕ. ಯಕ್ಷಗಾನ ಮತ್ತು ನಾಟಕ ಕ್ಷೇತ್ರಗಳಲ್ಲಿ ಹೆಸರು ಪಡೆದ ವಿ.ತಿ. ಶೀಗೇಹಳ್ಳಿಯವರು ಮತ್ತು ಲೇಖಕ, ಪತ್ರಿಕೋದ್ಯೋಗಿ ಎಂದು ಖ್ಯಾತರಾದ ದಿ। ಪ. ಸು. ಭಟ್ಟರು ಸಕ್ರಿಯ ಸದಸ್ಯರು.

ಆಗ ನಮ್ಮೆಲ್ಲರ ಚರ್ಚೆಯ ವಿಷಯ - ಪ್ರಗತಿಶೀಲ ಸಾಹಿತ್ಯ. ಪ್ರಗತಿಶೀಲ ಚಳವಳಿಯ ಸೂತ್ರಧಾರರಲ್ಲಿ ಪ್ರಮುಖರಾದ ಕುಳುಕುಂದ ಶಿವರಾಯರು ನಮಗೆಲ್ಲ ಅವರ ಲೇಖನಗಳ ಮೂಲಕ ಪರಿಚಿತರಾಗಿದ್ದರು. 'ಉಷಾ' ಮಾಸ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಅಂಕಣ ಬರೆಹ 'ಸರೋಜ ಸಂಚಯ' ನಮ್ಮನ್ನು ಆಕರ್ಷಿಸಿತ್ತು. ಶಿವರಾಯರು ಒಮ್ಮೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಚಾರ ಮಾಡಿ ಹೋದ ನಂತರ ತಮ್ಮ ಅಂಕಣದಲ್ಲಿ ದಿ। ಪ. ಸು. ಭಟ್ಟರ ಬಗ್ಗೆ ಒಂದೆರಡು ವಾಕ್ಯಗಳನ್ನು ಬರೆದಿದ್ದರು. ಇದು ಅವರ ಲೇಖನಗಳನ್ನು ಮತ್ತಷ್ಟು ಆಸಕ್ತಿಯಿಂದ ಓದುವಂತೆ ನಮ್ಮನ್ನು ಪ್ರೇರೇಪಿಸಿತ್ತು.

ನಾನು ೧೯೪೬ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಯ ತಯಾರಿಗಾಗಿ ಹುಬ್ಬಳ್ಳಿಗೆ ಹೋದೆ. ಸಣ್ಣ ಊರಿನಲ್ಲಿದ್ದು ಬೆಳೆದ, ಹೆಚ್ಚು ತಿರುಗಾಡಿ ಅನುಭವವಿಲ್ಲದ ನನಗೆ ಅದು ಅಪರಿಚಿತ ಶಹರ. ಒಂದು ರೀತಿಯ ಅಂಜಿಕೆ ನನ್ನಲ್ಲಿ. ಎಲ್ಲಿ ಇರಬೇಕೋ ಎನ್ನುವದೇ ನನ್ನೆದುರಿಗಿದ್ದ ದೊಡ್ಡ ಸಮಸ್ಯೆ. ಆಗ ಮರಾಠಾಗಲ್ಲಿಯಲ್ಲಿದ್ದ 'ಜನತಾ ಸಾಹಿತ್ಯ'ದ ಆಫೀಸಿನಲ್ಲಿ ಶಿವರಾಯರನ್ನು ಕಂಡು ಇಷ್ಟ ವಿಷಯ ಹೇಳಿ ಅವರ ಸಹಾಯ ಯಾಚಿಸಿದೆ. ಅವರು ಕಮ್ಯೂನಿಸ್ಟ್ ಪಕ್ಷ ನಡೆಸುತ್ತಿದ್ದ ಹಬೀಬಲ್ಯಾಂಡಿನಲ್ಲಿದ್ದ ಸಮುದಾಯ ವಸತಿಗೃಹದಲ್ಲಿ ಕೆಲ ದಿನಗಳ ಮಟ್ಟಿಗೆ ನಾನು ಉಳಿಯಲು ಅವಕಾಶ ಮಾಡಿಕೊಟ್ಟರು. ನಂತರ ಅದರ ಪಕ್ಕದಲ್ಲಿಯೇ ಇದ್ದ 'ಚಾಳ್' (Chawl) ನಲ್ಲಿ ಬಾಡಿಗೆಯ ರೂಮೊಂದನ್ನು ನನಗೆ ದೊರಕಿಸಿ ಕೊಟ್ಟರು. ಶಿವರಾಯರು ತಮ್ಮ ತಾಯಿಯ ಜತೆ ಜೇಮೊಂಮ ಕಡೆ ಬಾಡಿಗೆ ಮನೆ ಯಲ್ಲಿ ವಾಸವಾಗಿದ್ದರು. ಆ ಮನೆಗೆ ಒಮ್ಮೆ ಹೋದ ನೆನಪು. ನನ್ನ ಅವರ ನೇರ ಸಂಪರ್ಕ, ಪರಿಚಯ, ಸಂಬಂಧ ಕುದುರಿದ್ದು ಈ ರೀತಿ. ಹೆಚ್ಚಾಗಿ ನನ್ನ ಬಿಡುವಿನ

ವೇಳೆಯನ್ನು ಮರಾಠಾಗಲ್ಲಿಯಲ್ಲಿದ್ದ 'ಜನತಾ ಸಾಹಿತ್ಯ'ದ ಆಫೀಸಿನಲ್ಲಿ ಕಳೆಯುತ್ತಿದ್ದೆ. ನಿಜವಾಗಿಯೂ ಅದು ಹುಬ್ಬಳ್ಳಿ ಕಮ್ಯೂನಿಸ್ಟ್ ಪಕ್ಷದ ಆಫೀಸು. ಶಿವರಾಯರು ಬೆಂಗಳೂರಿನ 'ಪ್ರಜಾಮತ' ಪತ್ರಿಕೆಯಲ್ಲಿದ್ದು, ನೌಕರಿಯನ್ನು ಬಿಟ್ಟು ಕಮ್ಯೂನಿಸ್ಟ್ ಪಕ್ಷದ ಪೂರ್ಣಸಮಯದ ಕಾರ್ಯಕರ್ತರಾಗಿ ಕೆಲಸಮಾಡುತ್ತಿದ್ದರು. ಅವರು ಪಕ್ಷದ ಕನ್ನಡ ವಾರಪತ್ರಿಕೆಯಾದ 'ಜನಶಕ್ತಿ'ಯ ಸಂಪಾದಕರು. ಇವಲ್ಲದೆ 'ಜನತಾ ಸಾಹಿತ್ಯ' ಅವರ ಜವಾಬುದಾರಿ.

ಹುಬ್ಬಳ್ಳಿಯಲ್ಲಿ ಸುಮಾರು ಆರು ತಿಂಗಳು ನಾನಿದ್ದೆ. ಶಿವರಾಯರು ನನ್ನನ್ನು ಕಮ್ಯೂನಿಸ್ಟ್ ವಿಚಾರ ಪ್ರಣಾಲಿಗೆ ಪರಿವರ್ತಿಸಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅವರ ಪ್ರೋತ್ಸಾಹ ಹಾಗೂ ಸಹಾಯದಿಂದ ನಾನು 'ಗೋವೆಯಿಂದ ಚಲೇಜಾವ್' ಹೆಸರಿನ ಚಿಕ್ಕ ಪುಸ್ತಿಕೆಯನ್ನು ಬರೆದೆ. (ಆಗ ರಾಮಮನೋಹರ ಲೋಹಿಯಾ ನಿಷೇಧಾಜ್ಞೆಯನ್ನು ಉಲ್ಲಂಘಿಸಿ, ಗೋವಾ ಪ್ರವೇಶಿಸಿದ್ದರು. ಪೋರ್ಚ್‌ಗೀಸ್ ಸಾಮ್ರಾಜ್ಯಶಾಹಿಯನ್ನು ಗೋವೆಯಿಂದ ಓಡಿಸಲು ಚಳವಳಿ ಆಗಷ್ಟೇ ಪ್ರಾರಂಭವಾಗಿತ್ತು.) ಅದು 'ಜನತಾ ಸಾಹಿತ್ಯ'ದ ಪ್ರಕಾಶನ. ಇದರಿಂದ ನನ್ನನ್ನು ಲೇಖಕನೆಂದು ಶಿರಸಿಯಲ್ಲಿ ನನ್ನ ಪರಿಚಿತರು ಮಾತನಾಡುವಂತಾಯಿತು.

ಹುಬ್ಬಳ್ಳಿಯಲ್ಲಿ ನಾನಿದ್ದಾಗ ನನ್ನ-ಶಿವರಾಯರಲ್ಲಿದ್ದ ಸಂಬಂಧವನ್ನು ಅಣ್ಣ-ತಮ್ಮನ ಸಂಬಂಧಕ್ಕೆ ಹೋಲಿಸಬಹುದು. ಅವರು ನನ್ನೊಡನೆ ವಾತ್ಸಲ್ಯಭಾವನೆಯಿಂದ, ಹಿತೈಷಿಯಾಗಿ, ಮಾರ್ಗದರ್ಶಕನಾಗಿ ನಡೆದುಕೊಂಡಿದ್ದರು. ನನ್ನಲ್ಲಿ ಅವರ ಬಗ್ಗೆ ಭಯ-ಆದರ ಮಿಶ್ರಿತ ಭಾವನೆ. ವಯಸ್ಸಿನ ಅಂತರವಲ್ಲದೆ (ನನಗಾಗ ಹದಿನಾರು ವರ್ಷ) ನನ್ನ ಸಂಕೋಚದ ಸ್ವಭಾವ ಹಾಗೂ ನವತಾರುಣ್ಯದಲ್ಲಿದ್ದ ಶಿವರಾಯರ ಗಂಭೀರ ಮುದ್ರೆ, ಸಾಹಿತಿ ಎಂದು ಹೆಸರು ಪಡೆದ ಅವರ ಸ್ಥಾನಮಾನ ನನ್ನ ಈ ಭಾವನೆ ಮತ್ತು ನಮ್ಮಿರ್ವರ ಈ ಬಗೆಯ ಸಂಬಂಧಕ್ಕೆ ಕಾರಣವಾಗಿರಬಹುದು.

ಮೆಟ್ರಿಕ್ ಪರೀಕ್ಷೆ ಪಾಸಾದ ನಂತರ ೧೯೪೭ ಜೂನ್ ತಿಂಗಳಿನಲ್ಲಿ ನಾನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪ್ರಾರಂಭಿಸಿದೆ. ಪ್ರೊ! ಆರ್. ವಿ. ಜಾಗಿರದಾರ ಎಂದು ಆಗ ಹೆಸರಿದ್ದ 'ಶ್ರೀರಂಗ'ರು ನಮಗೆ ಸಂಸ್ಕೃತ ಪಾಠ ಹೇಳುತ್ತಿದ್ದರು. ಸ. ಸ. ಮಾಳವಾಡರು ಕನ್ನಡ ಪ್ರಾಧ್ಯಾಪಕರು. ಹೀಗಾಗಿ ಅಲ್ಲಿಯ ಪರಿಸರ ನನ್ನ ಕನ್ನಡ ಸಾಹಿತ್ಯದ ಆಸಕ್ತಿಯನ್ನು ಉಳಿಸಿ ಬೆಳೆಸಿಕೊಳ್ಳಲು ಅನುಕೂಲವಾಯಿತು. ೧೯೫೧ರಲ್ಲಿ ನಾನು ಕರ್ನಾಟಕ ವಿಶ್ವವಿದ್ಯಾಲಯದ ಮೊದಲನೇ ತಂಡದಲ್ಲಿ ಒಬ್ಬನಾಗಿ ಅರ್ಥಶಾಸ್ತ್ರದಲ್ಲಿ ಪದವೀಧರನಾದೆ. ಈ ನಾಲ್ಕು ವರ್ಷಗಳಲ್ಲಿ

ಸ್ವಾತಂತ್ರ್ಯವೀರ. ಆಧುನಿಕ ವಿಜ್ಞಾನ - ತಂತ್ರವಿಜ್ಞಾನದಲ್ಲಿ ಆಸಕ್ತಿ ಇದ್ದ, ತನ್ನ ಕಾಲಮಾನಕ್ಕಿಂತಲೂ ಮುಂದಿದ್ದ ಭವಿಷ್ಯವಾದಿ. ನಿರಂಜನರು ಬರೆಯಬೇಕೆಂದ ಪುಸ್ತಕಕ್ಕಾಗಿ ಮಾಡಿದ ಅಧ್ಯಯನದಿಂದ ಆರಿಸಿಟ್ಟ ಅಂಶಗಳಿವು. ನಾನು ಮತ್ತು ನನ್ನ ಹೆಂಡತಿ ಆಶ್ಚರ್ಯ, ಕುತೂಹಲದಿಂದ ಮೈಯೆಲ್ಲ ಕಿವಿಯಾಗಿ ಆಲಿಸಿದೆವು. ನಾನು ಕಾತರದಿಂದ ನಿರೀಕ್ಷಿಸಿದ್ದ ಪುಸ್ತಕವನ್ನು ನಿರಂಜನರು ಬರೆಯಲೇ ಇಲ್ಲ. (ಈ ರೀತಿ ಚಿತ್ರಣಗೊಂಡ ಐತಿಹಾಸಿಕ ಕಾದಂಬರಿಯನ್ನು ಕೆಲವು ವರ್ಷಗಳ ಹಿಂದೆ ಮುಂಬಯಿಯ ವಕೀಲರೊಬ್ಬರು ಇಂಗ್ಲಿಷಿನಲ್ಲಿ ಬರೆದು ಪ್ರಕಟಿಸಿದರು.)

ನನ್ನ-ನಿರಂಜನರ ಭೇಟಿ ಪ್ರತಿವರ್ಷ ನಾನು ಬೇಸಿಗೆಯ ರಜದಲ್ಲಿ ಬೆಂಗಳೂರಿಗೆ ಬಂದಾಗ ಆಗುತ್ತಲೇ ಇದೆ. ಇದಲ್ಲದೆ ಇತ್ತೀಚೆಗೆ ನಮ್ಮಿಬ್ಬರಲ್ಲಿ ನಡೆಯುತ್ತಿರುವ ಧಾರಾವಾಹಿ ಪತ್ರ ವ್ಯವಹಾರ - ಇವುಗಳಿಂದ ಬೆಸೆದು ಬಂದ ಸಂಬಂಧ ನನ್ನ-ಕುಳುಕುಂದ ಶಿವರಾಯರ ಸಂಬಂಧಕ್ಕಿಂತ ತೀರ ವಿಭಿನ್ನವಾದದ್ದು. ಇದು ವಯಸ್ಸಿನ ಅಂತರದಿಂದ ದೂರವಾಗದ, ಬಿಚ್ಚುಮನಸ್ಸಿನ ಮಾತುಕತೆಯಿಂದ ನಮ್ಮನ್ನು ಹತ್ತಿರವಾಗಿಸಿದ ಆತ್ಮೀಯತೆಯ ಸಂಬಂಧ. ಈ ಸಂಬಂಧದಿಂದಾಗಿ ನಾನು ನಿರಂಜನರನ್ನು ಸ್ವಲ್ಪ ಅರಿತುಕೊಳ್ಳಲು ಸಾಧ್ಯವಾಗಿದೆ. ಪಾರ್ಶ್ವವಾಯುವಿನಿಂದ ಬಳಲಿದ ನಿರಂಜನರು ಬದುಕುವುದಕ್ಕಾಗಿಯೇ ಹೋರಾಟ ನಡೆಸಬೇಕಾಯಿತು. ಇದು ಅವರ ಅಂತಃಸ್ಸತ್ವದ ಅಗ್ನಿಪರೀಕ್ಷೆ. ಯೋಚಿಸುವ ಮನಸ್ಸು, ಬರೆಯುವ ಬಲಗೈ ಶಕ್ತಿಹೀನವಾಗದೆ, ನಿಸ್ಸತ್ವವಾಗದೆ ಇದ್ದದ್ದರಿಂದ ನಿರಂಜನರಿಗೆ ಅವರ ಮೆಚ್ಚಿನ ಯೋಜನೆ - ಜ್ಞಾನಗಂಗೋತ್ರಿಯ ಉಳಿದ ಸಂಪುಟಗಳನ್ನು ಮುಗಿಸಲು ಸಾಧ್ಯವಾಯಿತು. ಈ ಮಧ್ಯೆ ಸಂಪಾದಕವರ್ಗದಲ್ಲಿದ್ದವರೊಬ್ಬರು ತಾವು ಪ್ರಧಾನ ಸಂಪಾದಕರಾಗುವ ಕನಸು ಕಂಡಿದ್ದರು. ಆದರೆ ಪುನಶ್ಚೇತನ ಪಡೆದ ನಿರಂಜನರು ತಮ್ಮ ದೃಢ ಮನಸ್ಸು, ಕೈಹಾಕಿದ ಕೆಲಸವನ್ನು ಮುಗಿಸಿಯೇ ತೀರುವ ಹಟದ ಸ್ವಭಾವ ಇವುಗಳಿಂದಾಗಿ ಸಂಚು ಹೂಡಿದ ಸಹೋದ್ಯೋಗಿಯ ಕನಸನ್ನು ಹಗಲುಗನಸಾಗುವಂತೆ ಮಾಡಿದರು. ಸರಕಾರದಿಂದ ಪಡೆದ ಹಣವನ್ನು ಸಕಾಲದಲ್ಲಿ ಬಡ್ಡಿ ಸಹಿತ ವಾಪಾಸುಮಾಡಿ ದಾಖಲೆಯನ್ನು ಸ್ಥಾಪಿಸಿದರು.

ಜ್ಞಾನಗಂಗೋತ್ರಿಯ ಕಾರ್ಯದಲ್ಲಿನ್ನೂ ನಿರತರಾಗಿದ್ದಾಗಲೇ ತಮ್ಮ ಮನಸ್ಸನ್ನು ಆವರಿಸಿದ ಕಥಾವಸ್ತುವನ್ನು ಕಾದಂಬರಿಯಾಗಿ ಬರೆಯಬೇಕೆಂಬ ಹಂಬಲ ಅವರನ್ನು ಕಾಡಿತ್ತು. ಅನಾರೋಗ್ಯದಿಂದ ಅದನ್ನು ಬರೆದುಮುಗಿಸುವಷ್ಟು ಕಾಲ ಜೀವಿಸಿರುತ್ತೇನೆಯೋ ಇಲ್ಲವೋ ಎಂಬ ಅನಿಶ್ಚಿತತೆ ಅವರ ಮನಸ್ಸನ್ನು ಕವಿದಿತ್ತು. ಆಗೊಮ್ಮೆ ನನ್ನೆದುರು ಹೇಳಿದ್ದರು: "ಇನ್ನು ಐದು ವರ್ಷ ಬದುಕಿದ್ದರೆ ಪೂರ್ವಸಿದ್ಧತೆ ಮಾಡಿ ಯೋಜಿಸಿದ 'ಪ್ರಾಗ್ಭಾರತ ಕಥಾ' ಎರಡು ಸಂಪುಟಗಳಲ್ಲಿ

ಮುಗಿಸಿ, ಕಲ್ಪಿಸಿದ ಪ್ರಾಚೀನ ಈಜಿಪ್ಟಿನ ಇತಿಹಾಸದಿಂದ ಆಯ್ದ ಕಥಾವಸ್ತುವನ್ನು ಬಳಸಿ ಇನ್ನೊಂದು ಕಾದಂಬರಿ (ಮೃತ್ಯುಂಜಯ) ಬರೆಯುತ್ತೇನೆ. ಆ ನಂತರವೂ ಬದುಕಿದ್ದರೆ ಆ ಅವಧಿ ಬೋನಸ್ (Bonus) ಎಂದುಕೊಳ್ಳುತ್ತೇನೆ." 'ಮೃತ್ಯುಂಜಯ' ಬರೆದು ಪ್ರಕಟವಾಗಿ, ಭಾರತದ ಹಲವು ಭಾಷೆಗಳಲ್ಲಿ ಭಾಷಾಂತರಗೊಂಡಿತು. ಇದಾದ ನಂತರ 'ವಿಶ್ವಕಥಾಕೋಶ'ವನ್ನೂ ಅತ್ಯಲ್ಪಕಾಲದಲ್ಲಿಯೇ ಸಂಪಾದಿಸಿ ಪ್ರಕಟಣೆಯೂ ಆಯಿತು. ಆದರೆ ಇನ್ನೂ ರೂಪುತಾಳದ 'ಪ್ರಾಗ್ಭಾರತ ಕಥಾ' (ಹೆಜ್ಜೆ) ಕನಸಿನ ಕಾದಂಬರಿಯಾಗಿಯೇ ಉಳಿದಿದೆ.

ಇತ್ತೀಚೆಗೆ ನಾನು ಕಂಡ, ಅರಿತುಕೊಂಡ ನಿರಂಜನರು ಹಿಂದಿನಂತೆ ಮಿತಭಾಷಿಯಲ್ಲ, ಹರಟೆಗಾರ. ಆಗಾಗ ನಗುವ, ನಸುಹಾಸ್ಯ ಸೇರಿದ, ಮಾರ್ದವತೆ ಎದ್ದು ಕಾಣುವ, ಜೀವನದ ಕಹಿಯನ್ನೆಲ್ಲ ನುಂಗಿದ ನೀಲಕಂಠ. ಎಂತಹ ಸಂಕಟ ಕಾಲ, ಸತ್ವಪರೀಕ್ಷೆಯ ಸಮಯ ಬಂದರೂ ಧೃತಿಗೆಡದೆ, ಅಚಲವಾಗಿ ತಾವು ನಂಬಿದ ತತ್ವಗಳಿಗೆ ಅಂಟಿಕೊಂಡ ಧೀರ. ಜೀವನದ ಸುದೀರ್ಘಕಾಲ ಏಕೈಕನಾಗಿ ಹೋರಾಡಿದ ಹೋರಾಟಗಾರ. "ಮುಸ್ಸಂಜೆಯ ಸಮಯದಲ್ಲಿ ಗವಿಯ ಏಕಾಂತವನ್ನು ಬಯಸಿ ಸ್ಥಿತಪ್ರಜ್ಞನಾಗಲು ಪ್ರಯತ್ನಿಸುತ್ತಿದ್ದೇನೆ, ಇನ್ನೂ ಸಾಧಿಸಬೇಕಾದದ್ದಿದೆ" ಎಂದು ಬರೆದ ಸಾಧಕ; ಮುಂದೆ ಕಾಲಿಟ್ಟು ಭವಿಷ್ಯದತ್ತ ದೃಷ್ಟಿ ಹಾಯಿಸಿದ ಪುರೋಗಾಮಿ ಮಾನವತಾವಾದಿ.

ಮೃತ್ಯುಂಜಯರು

- ಗೌರೀಶ ಕಾಯ್ಕಿಣಿ

ನನ್ನ ಮತ್ತು ನಿರಂಜನರ ಸಂಪರ್ಕ - ಸಮಾಗಮ ನಾಲ್ಕು ದಶಕದಿಂದ. ಆದರೆ ಆಗೊಮ್ಮೆ ಈಗೊಮ್ಮೆ, ವಾಲ್ಮೀಕಿಯ ಪ್ರಸಿದ್ಧ ಉಪಮೆಯಂತೆ - "ಯಥಾ ಕಾಷ್ಠಂ ಚ ಕಾಷ್ಠಂ ಚ". ಎರಡು ದಿಮ್ಮಿಗಳು ತೆರೆಗಳ ತೆಕ್ಕೆಯಲ್ಲಿ ತೇಲಿಬಂದು ಒಂದನ್ನೊಂದು ಸಂಧಿಸುತ್ತವೆ. ಆಮೇಲೆ ಅದೇ ತೆರೆಗಳ ಸೆಳೆತಕ್ಕೆ ದೂರ ಸರಿದು ಕಡಲಪಾಲಾಗುತ್ತವೆ. ನಿರಂಜನರೂ ನಾನೂ ಕೂಡಿ ಸಾಗಲಿಲ್ಲ; ಕಡಲ ಪಾಲಾಗಲೂ ಇಲ್ಲ. ದೂರ ಹೋದರೂ ಮತ್ತೆ ಮತ್ತೆ ಕೂಡಿದ್ದೇವೆ, ಅಗಲಿದ್ದೇವೆ. Parted for good ಎನ್ನುವುದುಂಟು. ನಾವಿಬ್ಬರೂ ಕೂಡಿದ್ದು ನಮ್ಮಿಬ್ಬರ ಒಳಿತಿಗೇ ಅಂತಲ್ಲ. ಆದರೂ ಕೂಡಿದಾಗೆಲ್ಲ, ಕೂಡಿದ್ದರಿಂದೆಲ್ಲ ನನಗೇ ಒಳಿತಾಗಿದೆ. ಅವರ ಒಡನಾಟದಿಂದ,

ವಿನಯ ಮಧುರ ಪರಿಹಾಸ ರಸಿಕತೆಯಿಂದ, ಚಾಟೂಕ್ತಿ ಚತುರೋಕ್ತಿಗಳ ಅಕೃತ್ರಿಮ ಮಾತುಕತೆಯಿಂದ, ನಾನು ಪುಲಕಿತನಾಗಿದ್ದೇನೆ. ನನ್ನ ಸಹವಾಸದಿಂದ ಅವರೂ ಸಂತೋಷಪಟ್ಟಿದ್ದಾರೆ.

ನಾನು ಕುಳುಕುಂದ ಶಿವರಾಯರನ್ನು ಮೊದಲು ಕಂಡದ್ದು ೧೯೪೬ರಲ್ಲಿ. ಕಮ್ಯೂನಿಸ್ಟ್ ಕಾಮ್ರೇಡರಾಗಿ ಹುಬ್ಬಳ್ಳಿಯ ಅದರ ಪ್ರಧಾನ ಕಚೇರಿಯಿಂದ ಪ್ರಚಾರ ಕಾರ್ಯಕ್ಕಾಗಿ ಗೋಕರ್ಣಕ್ಕೆ ಅವರು ಬಂದಿದ್ದರು. ನಮ್ಮ ಕರ್ನಾಟಕ ಸಂಘದಲ್ಲಿ ಅವರು ಭಾಷಣ ಮಾಡಿದ್ದರು. ಇಂದಿನಂತೆ - ಎಂದಿನಂತೆ, ಅಂದೂ ಅವರ ಮಾತು ಮೃದು; ಅಷ್ಟೇ ಋಜು. ಬೆಂಕಿ ನುಂಗಿ ಕೆಂಡ ಕಾರುವ ಸದಾ ಕಾವೇರಿದ ಕಮ್ಯೂನಿಸ್ಟ್ ಕಾಮ್ರೇಡನದಾಗಿರಲಿಲ್ಲ! ಆ ಪ್ರಥಮ ಭೇಟಿಯಲ್ಲಿಯೇ ಈ ಸುಸಂಸ್ಕೃತ ಸಾಹಿತ್ಯ ಪ್ರೇಮಿ, ಶಿಷ್ಟವೃತ್ತಿಯ ಕಮ್ಯೂನಿಸ್ಟ ನನಗೆ ಆತ್ಮೀಯರಾದರು. ಶಿವರಾಯರ ಮಾನವೀಯ ಆತ್ಮೀಯತೆ ಹಾಗೂ ಸ್ನೇಹಪರತೆ ನನಗೆ ಹಿಡಿಸಿತು. ಆ ಹಿಡಿತ ಇಂದಿಗೂ ಸಡಿಲಾಗದೆ ಉಳಿದಿದೆ! ನಾನು ಅನೇಕ ಸೋಶಲಿಸ್ಟರನ್ನು ಕಂಡಿದ್ದೇನೆ. ಅವರಲ್ಲಿ ಅನ್‌ಸೋಶಲಿಸ್ಟರೇ ಹೆಚ್ಚು! ಆದರೆ ನಮ್ಮ ನಿರಂಜನರು ಆ ಶ್ರೇಣಿಗೆ ಹೊರತಾದವರು. ೧೯೫೦ರ ಅನಂತರ ಅವರು ಕಮ್ಯೂನಿಸ್ಟ್ ಪಕ್ಷ ತ್ಯಜಿಸಿದಾಗ ನನಗೆ ಸೋಜಿಗವೆನಿಸಲಿಲ್ಲ.

ಅವರು ಕಮ್ಯೂನಿಸ್ಟ್ ಪೊರೆಯನ್ನು ಕಳಚಿ 'ವಿಮೋಚನೆ'ಗೊಂಡರು. ಅನಂತರದ ಆ ಹೆಸರಿನ ಕಾದಂಬರಿಯಲ್ಲಿ ಈ ಅವಸ್ಥಾಂತರದ ಯಾವ ಕಹಿಯೂ ಅಪ್ರತ್ಯಕ್ಷವಾಗಿಯೂ ಕಾಣಿಸಿಕೊಂಡಿಲ್ಲ. ಅನೇಕ ಪಾಶ್ಚಾತ್ಯ ಮಾಜೀ ಕಮ್ಯೂನಿಸ್ಟರಲ್ಲಿ ತಾವು ಬಿಟ್ಟು ಬಂದ ಮಠದ ಬಗೆಗೆ ಒಂದು 'ವಿರೋಧ ಭಕ್ತಿ' ಇರುವುದುಂಟು. ಆದರೆ ನಿರಂಜನರು ಈ syndromeದಿಂದ ಪೂರ್ತಿ ಮುಕ್ತರು. ನಿರಂಜನರು ನಿಷ್ಕಲ್ಮಷ ನಿಷ್ಕಲಂಕರು. "ಕಲಿಕಪ್ಪು ಎಲ್ಲಿಯೂ ಇಲ್ಲ! ಒಂದೆ ಸಮನೆಲ್ಲ! ಎಲ್ಲವೂ ಸುಣ್ಣವು."

ನಾವು ಆಮೇಲೆ ಒಬ್ಬರನ್ನೊಬ್ಬರು ಭೇಟಿಯಾದದ್ದು ೧೯೬೪ರ ಸುಮಾರಿಗೆ. ದೇಶಕಾಲಗಳ ದೂರವನ್ನೂ ದಾಟಿ, ನಮ್ಮಿಬ್ಬರ ನಡುವಿನ ಹಿಂದಿನ ಒಂದು ದಿನದ ಭೇಟಿಯ ಋಣಾನುಬಂಧದ 'ಜೀವಧ್ವನಿ' ಅಂದಿಗೂ ಊರ್ಜಿತವಾಗಿಯೇ ಮಿಡಿಯುತ್ತಿತ್ತು. ಆ ತನಕದ ಕರ್ನಾಟಕ ಸರಕಾರದ ಕಾರ್ಯದ ಪರಿಚಯ ಪ್ರಶಂಸೆಗೆ ಮೀಸಲಾದ ಒಂದು ಸಂಪುಟ ತಯಾರಿಸುವ ಸಮಿತಿಗೆ ನಾವಿಬ್ಬರೂ ಸದಸ್ಯರಾಗಿದ್ದೆವು. ಮಾನ್ಯ ರಾಮಕೃಷ್ಣ ಹೆಗಡೆ ಅದಕ್ಕೆ ಅಧ್ಯಕ್ಷರಾಗಿದ್ದರು. ಅಂದು ನಮ್ಮ ಅನ್ಯೋನ್ಯ ಪ್ರೀತ್ಯಾದರಗಳು ಪುನರ್ನವೀಕರಣಗೊಂಡವು. ಇಷ್ಟರಲ್ಲಿ ಅವರು ಕಾದಂಬರಿಕಾರರಾಗಿ ಖ್ಯಾತರಾಗಿದ್ದರು. ಅವರ ಪ್ರಥಮ ಕಾದಂಬರಿ 'ವಿಮೋಚನೆ' ಜನಪ್ರಿಯವಾಗಿತ್ತು. ನಾನು ಅದನ್ನು ಮನಸಾರೆ ಮೆಚ್ಚಿಕೊಂಡಿದ್ದೆ. ಅಂದು ನಮ್ಮ ಮಾತುಕತೆಗಳ ನಡುವೆ

ಅವರು ನನಗೆ 'ಸ್ವಾಮಿ ಅಪರಂಪಾರ' ಮತ್ತು 'ಕಲ್ಯಾಣ ಸ್ವಾಮಿ' ಕಾದಂಬರಿಗಳನ್ನು ಕೊಟ್ಟಿದ್ದರು. ಇತ್ತೀಚೆಗೆ, ಪೂಜ್ಯ ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ನೀಡಲು ನಿಮಿತ್ತವಾದ 'ಚಿಕವೀರ ರಾಜೇಂದ್ರ' ಕಾದಂಬರಿ ಪ್ರಖರ ಟೀಕೆಗೆ ಬಲಿಯಾದಾಗ, ಈ ಸಮಸ್ಯೆಯ ಕುರಿತು ತಮ್ಮ ಸಹೃದಯ ಸಮೀಕ್ಷೆಯನ್ನು ಪ್ರಕಟಿಸಲು ಅದೇ ವಸ್ತುವಿನ ಮುಂದಿನ ಪರ್ವಗಳಂತಿದ್ದ ಎರಡು ಕಾದಂಬರಿಗಳ ಕರ್ತೃ ನಿರಂಜನರಿಗಿಂತ ಅಧಿಕೃತ ಅರ್ಹತೆಯ ಸಾಹಿತಿ ಇನ್ನೊಬ್ಬರು ಇರಲಾರರು. ಆದರೆ ಅದೇಕೋ ಅವರು ಮೌನವಾಗಿಯೇ ಉಳಿದುಬಿಟ್ಟರು. ("ಮೌನಕ್ಕೂ ಮಾತುಂಟೆ? ಉಂಟು! ಉಂಟು!")

ಆಗ ತಿಂಗಳಿಗೊಮ್ಮೆ ಆ ಸಮಿತಿಯ ಸಭೆಗಾಗಿ ನಾನು ಬೆಂಗಳೂರಿಗೆ ಹೋಗುತ್ತಿದ್ದೆ. ಅವರ ಒಡನಾಟದಲ್ಲಿ, ಬೆಂಗಳೂರಿನ ಸಾಹಿತಿಗಳ ಪ್ರಪಂಚಕ್ಕೆ ಅವರು ನನಗೆ 'ಕನಕನ ಕಿಂಡಿ'ಯನ್ನು ತೆರೆದು ಕೊಟ್ಟರು. ಯಾರು ಏನು? ಎಷ್ಟು? - ಎಂಬುದರ ಯೋಗ್ಯ ಅನುಪಾತದ ದೃಷ್ಟಿ (of right perspective) ನನ್ನಲ್ಲಿ ಒಡಮೂಡಿತು. ಅವರ ಚುಚ್ಚುಮಾತು ಅವರ ಶ್ರೀಮತಿ ಡಾ। ಅನುಪಮಾರ ಸಿರಿಂಜಿನ ಸೂಜಿಯಷ್ಟೇ ಸೂಕ್ಷ್ಮ ಮತ್ತು ತೀಕ್ಷ್ಣ; ಚುಚ್ಚಿದ್ದೇ ಗೊತ್ತಾಗುತ್ತಿದ್ದಿಲ್ಲ ಮರ್ಮಭೇದಕವಲ್ಲದ ಮಾತುಕತೆ ನಿರಂಜನರದು.

ನಿರಂಜನರಾಗಿ ಅವರು ವ್ಯವಹರಿಸಿದ ಹೊಸ ಪರ್ವಗಳು ಎರಡು. ದುರ್ಗಾದಾಸರ 'ಇನ್ಫಾ' ಸುದ್ದಿ ಸಂಸ್ಥೆಯ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ದುಡಿದದ್ದು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ೧೯೬೫ರ ಕಾರವಾರ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿಸಿದ್ದು. ಹಿಂದೆ ಪತ್ರಿಕೋದ್ಯಮಿ ಯಾಗಿ ಮಿಂಚಿದ ನಿರಂಜನರಿಗೆ 'ಇನ್ಫಾ' ವ್ಯಾಪಕವೂ ವಿಶಿಷ್ಟವೂ ಆದ ಸಮರ್ಥ ಆಯಾಮ ಒದಗಿಸಿತು. ಪರಿಷತ್ತಿನ ಕಾರ್ಯದರ್ಶಿತ್ವದಲ್ಲಿ ಅವರು ನನಗೆ ಆ ದಶಕದ ವೈಚಾರಿಕ ಸಾಹಿತ್ಯದ ಕುರಿತಾಗಿ ಒಂದು ಪ್ರಬಂಧವನ್ನು ಓದಲು ವೇದಿಕೆ ಒದಗಿಸಿ ದರು. ಆ ತನಕ ನಾನು ಯಾವ ಸಾಹಿತ್ಯ ಸಮ್ಮೇಳನಕ್ಕೂ ಹಾಜರಿದ್ದಿಲ್ಲ - ಈಚಿನ ಮಡಿಕೇರಿ ಸಾಹಿತ್ಯ ಸಮ್ಮೇಳನ ಬಿಟ್ಟು. ಕಾರವಾರ ಸಮ್ಮೇಳನದ ವಿಶೇಷವೆಂದರೆ ನಮ್ಮ ಪ್ರಬಂಧಗಳನ್ನು ಹಾಳೆಗಳ ಒಂದೇ ಮಗ್ಗುಲಿಗೆ ಅಂದವಾಗಿ ಅಚ್ಚುಮಾಡಿಸಿ ನಿರಂಜನರು ಒದಗಿಸುವ ಏರ್ಪಾಡು ಮಾಡಿದ್ದರು. ಅಂಥ ಉಪಕ್ರಮ ಅಪೂರ್ವ.

ಅನಂತರ ನಿರಂಜನರು ಮೃತ್ಯುಂಜಯರಾದರು! ಅವರ ಜಂಘಾಬಲವೇ ಕುಸಿಯಿತು. ಪಾರ್ಶ್ವವಾಯುವಿನಿಂದ ಅವರ ಎಡಗೈ ಎಡಗಾಲುಗಳ ಚಲನೆ ಕುಂಠಿತ ವಾಯಿತು. ಆದರೂ ಈ ಸತ್ವಧೀರ ಸಾಹಸಭೀಮ ಕುಸಿಯದೆ ತಮ್ಮ ಸಾಹಿತ್ಯ ಪ್ರಪಂಚವನ್ನು, ಮಕ್ಕಳ ಜ್ಞಾನಕೋಶ 'ಜ್ಞಾನಗಂಗೋತ್ರಿ', ಅದರ ಬೆನ್ನಿಗೇ

ವಿಶ್ವಕಥಾಕೋಶದ ೨೫ ವಿಶಿಷ್ಟ ಸಂಪುಟಗಳನ್ನು ಹಿಡಿದ ಪಟ್ಟು ಬಿಡದೆ ಸಂಪಾದಕ ರಾಗಿ ಬೆಳಕಿಗೆ ತಂದು ಬಿತ್ತರಿಸಿದರು, ಎತ್ತರಿಸಿದರು. ಅಲ್ಲದೆ, ಆ ಎರಡು ಕೆಲಸ ಗಳ ನಡುವೆ ಈಜಿಪ್ತದ ಫೆರೋವಾರ ಕಾಲದ ವಸ್ತುವನ್ನೆತ್ತಿಕೊಂಡು ಪ್ರಚಂಡ ಕಾದಂಬರಿ 'ಮೃತ್ಯುಂಜಯ'ವನ್ನು ನೀಡಿದರು.

ಅದನ್ನು ಬರೆಯುತ್ತಿರುವಾಗಲೆ, ಅವರು ಒಮ್ಮೆ ಸಕುಟುಂಬಿಗಳಾಗಿ ನನ್ನ ಭೇಟಿಗಾಗಿ ಗೋಕರ್ಣಕ್ಕೆ ಬಂದಿದ್ದರು. ನಿರಂಜನರು ನನ್ನ ಮನೆಗೆ ನಡೆದು ಬರುವ ಸ್ಥಿತಿಯಲ್ಲಿರಲಿಲ್ಲ. ಕಾರಿನಲ್ಲೇ ಕಾಫಿ - ತಿಂಡಿ ಸೇವಿಸಿ ನಾವಿಬ್ಬರೂ ಹಳೆಯ ನೆನಪು ಗಳಿಗೆ ಹೊಸ ಕುದಿತಂದು ನವಿದೆವು. ತಮ್ಮ ದೇಹಸ್ಥಿತಿಯ ಅಸಹಾಯಕತೆಯನ್ನು ವರ್ಣಿಸುವಾಗಲೂ ಅವರ ವಿನೋದ ಪರಿಹಾಸ ಚತುರೋಕ್ತಿಗಳನ್ನು ಕೇಳಿಯೇ ನಂಬ ಬೇಕು; ಕಂಬನಿಗರೆಯಬೇಕು. ಡಾ। ಅನುಪಮಾ, ಮಕ್ಕಳು ತೇಜಸ್ವಿನೀ, ಸೀಮಂತಿನೀ, ನಮ್ಮ ಮನೆಯವರೊಂದಿಗೆ ಮಾತನಾಡಿದರು; ಸಂತೋಷಪಟ್ಟರು.

ಆಗ ನನಗೆ ನನ್ನ ಇನ್ನೊಬ್ಬ ಪ್ರಿಯಮಿತ್ರ ಗಂಗಾಧರ ಚಿತ್ತಾಲರ ತೀವ್ರ ನೆನಪಾಯಿತು. ಅವರೂ ಪಾರ್ಕಿನ್‌ಸನ್ ವ್ಯಾಧಿಯ ತೀವ್ರ ಆಘಾತದಿಂದ, ಹಲವು ವರ್ಷಗಳಿಂದ ಉಸಿರುಗಟ್ಟಿದ ಅವಸ್ಥೆಯಲ್ಲಿ ಬಳಲುತ್ತಿದ್ದಾರೆ. ಇಬ್ಬರಿಗೂ "ಜೀವಕ್ಕೆ ಬಿಗಿದ ಘಟ ಸರ್ಪವಾಯಿತು ದೇಹ". ಚಿತ್ತಾಲರು ನೋತು ಹಣ್ಣಾಗಿದ್ದಾರೆ. "ಪ್ರತಿಯೊಂದು ಮುಂದಿನ ಹೆಜ್ಜೆ। ಇನ್ನಷ್ಟು ಇನ್ನಷ್ಟು ಒಜ್ಜೆ॥ ಪ್ರತಿಯೊಂದು ಮುಂದಿನ ಮಾತು । ಇನ್ನಷ್ಟು ಇನ್ನಷ್ಟು ನೋತು । ಹೋಗಿದೆ ಎಲ್ಲೋ ಹೂತು॥"

ನಮ್ಮಿಬ್ಬರ ಮಿತ್ರ ಕವಿ ವಿ.ಜಿ. ಭಟ್ಟರು ಒಮ್ಮೆ ಅಂದಿದ್ದರು, ನಿರಂಜನರಿಗೆ ಮತ್ತೆ ಅಪಘಾತವಾಯಿತೆಂದು. ನಾನು ಬರೆದು ಕೇಳಿದೆ. ಅವರ ಉತ್ತರ ಬಂತು- ಹೃದಯಸ್ಪರ್ಶಿ ಹಾಸ್ಯದಲ್ಲಿ. ಹೌದು, ಗಾಲಿಕುರ್ಚಿ ಮುಗ್ಗರಿಸಿ ಬಿದ್ದಿದ್ದರು. ೨೦ ನಿಮಿಷ ನಿಶ್ಚೇಷ್ಟ. ತಾವೇ ಸಾವರಿಸಿಕೊಂಡು ಎದ್ದು ಮಂಚವೇರಿ ಮಲಗಿದರು! ಎಂಥ ಆತ್ಮವಿಶ್ವಾಸ! ಆತ್ಮಶಕ್ತಿ!

ನಿರಂಜನರು ಜಡದ ಮೇಲೆ ಚೇತನದ ವಿಜಯ ಸಾಧಿಸಿದ್ದಾರೆ. ಅವರ ಕೋಶದಲ್ಲಿ ಸೋಲೆಂಬ ಶಬ್ದವೇ ಇಲ್ಲ. ನಿರುಪಮ ಪ್ರೇಮದ ಪತ್ನಿ ಡಾ। ಅನುಪಮಾರು ಕ್ಯಾನ್ಸರ್ ಶಸ್ತ್ರಕ್ರಿಯೆಗೆ ಪದೇ ಪದೇ ಒಳಗಾಗುತ್ತಿರುವ ದುರ್ಭರ ಸನ್ನಿವೇಶಗಳು ನಿರಂಜನರನ್ನು ಕಾಡಿದರೂ ಕಂಗೆಡಿಸಲಿಲ್ಲ. ಡಾ। ಅನುಪಮಾರು ವಿದೇಶ ಸಂಚಾರ, ಪ್ರವಾಸಕಥನ, ಆತ್ಮಚರಿತ್ರೆ, ಕಾದಂಬರಿಗಳ ರಚನೆಗಳಿಂದ ಬಾಹ್ಯ ಜಗತ್ತಿಗೆ

ಈಗಲೂ ಸ್ಪಂದಿಸುತ್ತಲೇ ಇದ್ದಾರೆ. ಈ ಧೀರ ಧೀಮಂತ ದಂಪತಿಗಳಿಗೆ ಮೃತ್ಯುವೇ ನಾಚಬೇಕು. ಸುಪ್ರಸಿದ್ಧ ಡಾಕ್ಟರರೂ ಸತ್ವಶಾಲಿ ಲೇಖಕಿಯೂ ಅವ ಧರ್ಮಪತ್ನಿ ಡಾ! ಅನುಪಮಾ, ಪ್ರತಿಭಾವಂತ ಪುತ್ರಿಯರಾದ ತೇಜಸ್ವಿನೀ, ಸೀಮಂತಿನಿಯರ ತುಂಬು ಸಂಸಾರದಲ್ಲಿ ಈ ಧೀರ ಅದಮ್ಯ ಚೇತನದ ನಿರಂಜನರು ಮಾನವನನ್ನೇ ಕೇಂದ್ರಬಿಂದುವೆಂದು ನಿರ್ವಿಕಾರಚಿತ್ತದಿಂದ ದುಡಿಯುತ್ತಿರುವುದು ನನಗೆ ಅಭಿಮಾನದ ವಿಷಯ. ○

೨ ಹೋರಾಟಗಾರ

- ವಾಸುದೇವ

ನಿರಂಜನರು ಕುಳುಕುಂದ ಶಿವರಾಯರಾಗಿದ್ದಾಗಿನಿಂದಲೂ ಅವರ ಆದರಾಭಿಮಾನಗಳನ್ನು ಪಡೆದ ಆತ್ಮೀಯರಲ್ಲೊಬ್ಬ ನಾನು. ಅವರು 'ಜನಶಕ್ತಿ' ಪತ್ರಿಕೆಯ ಸಂಪಾದಕರಾಗುವ ವೇಳೆಗೇ ಸ್ವತಃ ಹೆಸರಾಂತ ಕತೆಗಾರರಾಗಿಯೂ ವಿಚಾರಶೀಲ ಲೇಖಕರಾಗಿಯೂ ಕನ್ನಡಿಗರಿಗೆ ಪರಿಚಿತರಾಗಿದ್ದರು. ಅನೇಕ ಪತ್ರಿಕೆಗಳಲ್ಲಿ ದುಡಿದು ಪಳಗಿದ್ದ ಅವರ ಲೇಖನಗಳು ತುಂಬ ಜನಪ್ರಿಯವಾಗಿದ್ದುವು. ಅವರ ಕತೆಗಳಲ್ಲಿ ಬಡಜನರ ಬಗೆಗೆ ಅನುಕಂಪ, ಶೋಷಕರು ಮತ್ತು ಅಧಿಕಾರವರ್ಗದವರ ಬಗೆಗೆ ವಿರೋಧ ವ್ಯಕ್ತವಾಗುತ್ತಿತ್ತು. ಬರಿಯ ಮನೋರಂಜನೆಯ ಧೋರಣೆ ಅವುಗಳಲ್ಲಿರಲಿಲ್ಲ.

'ಜನಶಕ್ತಿ'ಯಲ್ಲಿ ಅವರು 'ಸಂಗಾತಿ ಸಂಜಯ' ಎಂಬ ಅಂಕಣವೊಂದನ್ನು ಪ್ರತಿವಾರವೂ ಬರೆಯುತ್ತಿದ್ದರು. ಆಕರ್ಷಕವಾಗಿ ಚುಟುಕಾದ ತೀಕ್ಷ್ಣ ಮನಸ್ಸಿಗೆ ನಾಟುವಂಥ ಮಾತುಗಳಿರುತ್ತಿದ್ದುವು. ಕಮ್ಯೂನಿಸ್ಟ್ ಪಕ್ಷದ ಬಗೆಗೆ ಯಾರಲ್ಲಾದರೂ ಅದು ಕುತೂಹಲವನ್ನು ಮೂಡಿಸುತ್ತಿತ್ತು, ಸಹಾನುಭೂತಿಯನ್ನು ಹುಟ್ಟಿಸುತ್ತಿತ್ತು. ಇದರ ಟೀಕೆಯಿಂದ ಮೊರಾರ್ಜಿ ಸರಕಾರದ ಕೋಪಕ್ಕೆ ಅವರು ತುತ್ತಾಗಬೇಕಾಯಿತು. ಆಗಿನ ಕಾಲದಲ್ಲಿ ಅವರ ನಡೆ, ನುಡಿ, ಬರೆಹಗಳಿಗೆ ಮನಸೋತವರೆಷ್ಟೋ ಮಂದಿ ಪಕ್ಷದ ಹಿತೈಷಿಗಳೂ ಸದಸ್ಯರೂ ಆದರು.

ವಸ್ತುತಃ ನಾನೂ ಅವರ ಬರೆಹಗಳಿಂದಲೇ ಆಕರ್ಷಿತನಾದವನು. ಮುಂಬಯಿಯಲ್ಲಿ ಸೋವಿಯತ್ ಮಿತ್ರ ಸಂಘ, ಜನತಾ ರಂಗಭೂಮಿ, ಪ್ರಗತಿಶೀಲ ಲೇಖಕರ ಸಂಘ ಇತ್ಯಾದಿಗಳಲ್ಲಿ ನಾನು ಕೆಲಸಮಾಡತೊಡಗಿದ್ದೆ. ಕುಳುಕುಂದರು

ಮುಂಬಯಿಗೆ ಬಂದಾಗ ನನ್ನಲ್ಲೇ ತಂಗುತ್ತಿದ್ದರು - ಭೂಗತರಾಗಿದ್ದಾಗಲೂ ಸಹ. ನಾನು ಆಗ 'ಜನಶಕ್ತಿ', 'ಅರುಣ' ಪತ್ರಿಕೆಗಳನ್ನು ತರಿಸಿಕೊಂಡು ಕನ್ನಡಿಗ ಸಂಗಾತಿಗಳಿಗೆ ಹಂಚುತ್ತಿದ್ದೆ. ಕನ್ನಡ ವಾರ್ತಾಪತ್ರಿಕೆಗಳು ಅನಿವಾರ್ಯವಾಗಿ ನಿಂತಾಗ ಸಂಗಾತಿ ತೋನ್ಸೆ ಸಂಜೀವ ಹೆಗ್ಗಡೆಯವರು, ಕೆ. ವಿ. ಶೆಟ್ಟರು, ಇನ್ನಿತರ ಸಂಗಾತಿಗಳ ಸಹಕಾರದಿಂದ 'ಸಮದರ್ಶಿ' ಎಂಬ ಮಾಸ ಪತ್ರಿಕೆಯನ್ನು ಸ್ವಲ್ಪ ಸಮಯ ನಡೆಸಲು ಪ್ರಯತ್ನ ಮಾಡಿದಾಗ, ಕುಳುಕುಂದ ಶಿವರಾಯರು ನಮಗೆ ಸಂಪೂರ್ಣ ಸಹಕಾರ ನೀಡಿದ್ದರು.

ಆಮೇಲೆ ಶಿವರಾಯರು ಮತ್ತು ನಾನು ಕೂಡಿಕೊಂಡು ೧೯೫೧ರಲ್ಲಿ 'ಪುರೋಗಾಮಿ ಪ್ರಕಾಶನ' ಪುಸ್ತಕ ಪ್ರಕಟಣೆಯನ್ನು ಕೈಗೊಂಡಿದ್ದೆವು. ಅದರಲ್ಲಿ ಬಹುಪಾಲಿನ ಕೆಲಸ ಶಿವರಾಯರದು. ಆ ವೇಳೆಗಾಗಲೇ ಅವರು 'ನಿರಂಜನ'ರಾಗಿದ್ದರು. ಶಿವರಾಯರೊಮ್ಮೆ ಕೋಲಾರ ಜಿಲ್ಲೆಯ ನಮ್ಮ ಹಳ್ಳಿಗೂ ಬಂದಿದ್ದರು. ನನ್ನ ಮಾತಾಪಿತರ ಪರಿಚಯ ಮಾಡಿಕೊಂಡಿದ್ದರು. ೧೯೫೦ರಲ್ಲಿ ಮುಂಬಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ೧೯೫೨ರಲ್ಲಿ ದೆಹಲಿಯಲ್ಲಿ ಜರಗಿದ ಪ್ರಗತಿಶೀಲ ಲೇಖಕರ ಸಮ್ಮೇಳನಗಳಲ್ಲಿ ನಾವಿಬ್ಬರೂ ಭಾಗವಹಿಸಿದ್ದೆವು.

೧೯೫೩ರ ಮೇ ತಿಂಗಳ ಅಂತ್ಯದಲ್ಲಿ ಕಾಲುಜಾರಿ ಬಿದ್ದು ನಿರಂಜನರು ಬಲಗೈ ಮೂಳೆ ಮುರಿದು, ಆಸ್ಪತ್ರೆಯಲ್ಲಿ ಜೋಡಣೆಯ ಮತ್ತು ಪ್ಲಾಸ್ಟರ್ ಸುತ್ತು ಕಟ್ಟಿನ ಚಿಕಿತ್ಸೆ ಪಡೆಯಬೇಕಾಯಿತು. ಅವರ ಬರೆವಣಿಗೆಗೆ ತತ್ಕಾಲ ತೊಂದರೆಯಾಗಿತ್ತು. ಅನಂತರ ಅವರ ಬರೆವಣಿಗೆ ಬಹುಮುಖವಾಗಿ ಪ್ರವರ್ಧಮಾನವಾಗಿ ಬೆಳೆಯಿತು.

ಗುಪ್ತ ರಾಜಕೀಯ ಚಟುವಟಿಕೆಯಲ್ಲಿ ಅವರು ತೊಡಗಿದ್ದ ಸಮಯದಲ್ಲೊಮ್ಮೆ ಅವರನ್ನು ನಾನು ಬೆಂಗಳೂರಲ್ಲಿ ಕಂಡಿದ್ದೆ. ರಸ್ತೆಯ ಬದಿಯ ಗೋಡೆಯ ಮೇಲೆ ಕುಳಿತು ನಾವು ಮಾತನಾಡುತ್ತಿದ್ದೆವು. ಅವರು ಉತ್ತರ ಕರ್ನಾಟಕದವರಂತೆ ಉಡುಪು ಧರಿಸಿದ್ದರೆಂದು ನನ್ನ ನೆನಪು. ಇದನ್ನು ಗಮನಿಸಿದ ಯಾರೋ ನಮ್ಮ ಬಳಿ ಬಂದರು. ಒಡನೆಯೇ ಸಮಯಸ್ಫೂರ್ತಿಯಿಂದ ಶಿವರಾಯರು ಉತ್ತರ ಕರ್ನಾಟಕದ ಭಾಷೆಯಲ್ಲಿ ಮಾತನಾಡತೊಡಗಿದ್ದರು! ದಸ್ತಗಿರಿಗೆಂದು ಬಂದವರಿಗೆ ಆಗ ಶಿವರಾಯರ ಚಹರೆ ಸಿಕ್ಕಿರಲಿಲ್ಲ!

ನಿರಂಜನರು ಕನ್ನಡದ ಉತ್ತಮ ವರದಿಗಾರರಾಗಿದ್ದರು. ಧೀರ ರಾಜಕೀಯ ಹೋರಾಟಗಾರರಾಗಿದ್ದರು. ನಾಟಕಗಳನ್ನು ರಚಿಸಿದ್ದಾರೆ, ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಂಗೀತಾಸ್ವಾದನೆಯ ಸಂತೋಷವನ್ನೂ ಅವರು ಅನುಭವಿಸಿದ್ದಾರೆ. ಕಲೆ,

ಸಾಹಿತ್ಯ, ಸಂಸ್ಕೃತಿಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಈ ಸುಸಂಸ್ಕೃತ ಚೇತನವನ್ನು ಕಂಡು ನಾನು ಬೆರಗಾಗಿದ್ದೇನೆ. ಕನ್ನಡ ನಾಡಿಗೆ, ನುಡಿಗೆ, ಮಾನವ ಜನಾಂಗಕ್ಕೆ ಇವರು ಸಲ್ಲಿಸಿರುವ ಅಪೂರ್ವ ಕೊಡುಗೆಗಳನ್ನು ಕಂಡು, ಅಭಿಮಾನದಿಂದ ಕಣ್ತುಂಬಿಕೊಳ್ಳುತ್ತೇನೆ. ಬದುಕನ್ನು ಪ್ರೀತಿಸುವ, ಆಸ್ವಾದಿಸುವ, ಗೌರವಿಸುವ ನಿರಂಜನರು ಧೀರ ಹೋರಾಟಗಾರರು, ಬಹುಮುಖ ಸಾಧಕರು. ○

೩ ಸಾವಿರಕ್ಕೊಬ್ಬ ಗೆಳೆಯ

-ರಾಘವೇಂದ್ರ ಇಟಗಿ

ನಿರಂಜನರ - ನನ್ನ ಸ್ನೇಹ ಮಾತುಗಳಿಗೆ ಮೀರಿ ಬೆಳೆದದ್ದು. ಎಟುಕಿದಷ್ಟನ್ನು ನೆನೆಯುತ್ತೇನೆ. ಸುಮಾರು ಮೂವತ್ತು ವರ್ಷಕ್ಕೂ ಹಿಂದಿನ ಮಾತು. ಆಗ ನಾನು ಮೈಸೂರಿನಲ್ಲಿದ್ದೆ. ಒಂದು ಭಾನುವಾರ ಬೆಳಗ್ಗೆ ಚಿಕ್ಕ ಕಾಫಿ ಹೋಟೆಲಿನಲ್ಲಿ ಟೀ ಕುಡಿಯುತ್ತಿರುವಾಗ ಒಬ್ಬ ಧೀರ ನಿಲುವಿನ ತರುಣ ಮಿಂಚುಗಣ್ಣಿನಲ್ಲಿ ಮುಗುಳುನಗೆ ಬೀರುತ್ತ ಒಳಬಂದ. ನನ್ನ ಬದಿಯಲ್ಲಿದ್ದ ಒಬ್ಬ ಹುಡುಗ ಇನ್ನೊಬ್ಬನಿಗೆ ಪಿಸುಮಾತಿನಲ್ಲಿ ನಿರಂಜನ - ಎಂದು ತೋರಿಸುತ್ತ ಹಿಗ್ಗಿದ. 'ರಕ್ತ ಸರೋವರ'ದ ಕುಳಕುಂದ ಶಿವರಾವ್ ಅವರೇ 'ರಂಗಮ್ಮನ ವಠಾರ'ದ ನಿರಂಜನ-ಎಂದು ಯಾಕೋ ನನಗೆ ತಕ್ಷಣ ಹೊಳೆಯಲಿಲ್ಲ. ಬಂದವರೇ ನನ್ನ ಎದುರಿನ ಬೆಂಚಿನ ಮೇಲೆ ಕುಳಿತರು. ಅದು ಹೇಗೋ ಅಲ್ಲಿ ಪರಿಚಯ ಆಯಿತು. ಅವರ ಮಾತಿನ ಚಳಕು, ಹಾಸ್ಯ, ಅವರಲ್ಲೂ ಅಡಿಗೆರೆಯನ್ನೆಲ್ಲ ಅಂಡರ್‌ಲೈನ್ (underline) ಮಾಡಿಕೊಳ್ಳಬೇಕೆನಿಸುವಂಥ ಖಚಿತತೆ ನನಗೆ ತುಂಬ ಹಿಡಿಸಿದುವು. ಪರಿಚಯ ಬೆಳೆದು ಸ್ನೇಹವಾಯಿತು ಮತ್ತು ಅದು ಗಾಢವಾಯಿತು. ಅವರ ನಿರ್ವ್ಯಾಜ ಸ್ನೇಹದ ಸವಿಯನ್ನು ಅಂದಿನಿಂದ ಸವಿಯುತ್ತಿದ್ದೇನೆ. 'ಸಾವಿರಕ ಒಬ್ಬ ನನ ನಲ್ಲ' - ಇದು ಬೇಂದ್ರೆಯವರ ಕವಿತೆಯ ಒಂದು ಸಾಲು. ನಿರಂಜನರ ಸ್ನೇಹ ಇದನ್ನು ಪಲಸಲವೂ ನೆನಪಿಸುತ್ತದೆ. ಇಲ್ಲಿ ನಲ್ಲ-ತೆಗೆದು ಗೆಳೆಯ - ಬಂಧು ಎನ್ನಬೇಕು, ಅಷ್ಟೆ.

ಬಿಸಿಲುಂಡು, ಬಿಸಿಲು ತೊಟ್ಟು, ಬಿಸಿಲನ್ನೇ ಉಸಿರಾಡಿ ಬೆಳೆದ ನಿರಂಜನ ವ್ಯಕ್ತಿತ್ವ ಸಾವಿರದ ಗುಂಪಿನಲ್ಲಿ ಎದ್ದು ಕಾಣುವಂತಹದು. ಇದಕ್ಕೆ ಕಾರಣ, ನನ್ನ ನಂಬಿಕೆಯಲ್ಲಿ, ಅವರ ಜಿಗಟುತನ, ಸರಳತನ, ಖಚಿತ ನಿಲುವು, ಬಾಗದ ಮನ, ಅಚ್ಚುಕಟ್ಟುತನ ಮತ್ತು ಸಮಯ ಪರಿಪಾಲನೆ. ಇವುಗಳ ಜೊತೆಗೆ ವ್ರತಧಾರಿಯಂತೆ

ಸಾಹಿತ್ಯಚಿಂತನ, ಇತಿಹಾಸ ಮಂಥನ, ಸಮಾಜಜೀವನವನ್ನು ಅದರ ಒಳಹೊಕ್ಕು ಪದರು ಪದರುಗಳನ್ನು ಬಿಚ್ಚಿ ಕಂಡುಕೊಂಡ ದೃಷ್ಟಿಕೋನ. ಈ ಎಲ್ಲ ಗುಣಗಳ ಬಹ್ವಂಶವನ್ನು ಅವರ ಬಾಳಿನಲ್ಲಿ, ಬರೆಹದಲ್ಲಿ, ಸಂಗ-ಸಹವಾಸದಲ್ಲಿ ನಾನು ಸ್ಪಷ್ಟವಾಗಿ ಗುರುತಿಸಿದ್ದೇನೆ. ಹೊಗಳಿಕೆಗೆ ಸುತರಾಂ ಹಿಗ್ಗದ, ಧಮ್ಕಿ (ಬೆದರಿಕೆ)ಗೆ ಬಗ್ಗದ, ತೆಗಳಿಕೆಗೆ ಕುಗ್ಗದ ಈ ಆಸಾಮಿಯ ದಿಟ್ಟತನ ಒಂಟಿ ಸಲಗನ ಪರಸೆ. ಆದರೆ ಎಂದೂ ಧಾರ್ಷ್ಟ್ಯವನ್ನು ನಾನು ಕಂಡಿಲ್ಲ. ತಮ್ಮ ನಿಲುವನ್ನು ಮಂಡಿಸುವಾಗ ಮಾತ್ರ ಇವರ ಧೋರಣೆ ದೃಢವಾದದ್ದು. ಯಾರೋ ಇವರನ್ನು 'ಹೊತ್ತಿ ಉರಿವ ಇತಿಹಾಸ ಪ್ರಜ್ಞೆ' ಎಂದಿದ್ದಾರೆ. ಬಹಳ ಯಥೋಚಿತ ಈ ಮಾತು. 'ಮೃತ್ಯುಂಜಯ'ಕ್ಕೆ ಬಹುಮುಂಚಿಯೆ ನಾವು ಈ ಮಾತನ್ನು ಗುರುತಿಸಿ ಹೇಳಬೇಕಾಗಿತ್ತು. ಅವರು ಧಾರವಾಡ ಆಕಾಶವಾಣಿ ನಿಲಯಕ್ಕೆಂದು, 'ಆಹ್ವಾನ' - ಶೀರ್ಷಿಕೆಯ ಮೇಲೆ ಕೆಲ ರೂಪಕಗಳನ್ನು ರಚಿಸಿಕೊಟ್ಟರು. ಇತಿಹಾಸಪ್ರಜ್ಞೆಯ ಅಂತರ್‌ವಾಹಿನಿಯುಳ್ಳ ಆವುಗಳಲ್ಲಿ ನಮ್ಮಲ್ಲಿಯ ಅಂತಃಕಲಹ, ಸ್ವಾರ್ಥ, ಬಡಾಯಿತನ, ದೂರದೃಷ್ಟಿಯ ಅಭಾವದ ರಾಜಕಾರಣ ಇವುಗಳನ್ನು ಕೆದಕಿ ಮಾರ್ಮಿಕವಾಗಿ ಚಿತ್ರಿಸುತ್ತ ರಾಷ್ಟ್ರ ಘಾತುಕ ಪ್ರವೃತ್ತಿಗಳಿಂದಾಗಿ ಪರಾಕ್ರಮಣಕ್ಕೆ ಇಷ್ಟರಲ್ಲಿಯೇ ತುತ್ತಾದೇವು - ಎಂದು ದಿಟ್ಟ ಎಚ್ಚರಿಕೆಯ ನುಡಿ ಆಡಿದ್ದರು-ಅಲ್ಲಿಯ ಪಾತ್ರಗಳ ಮೂಲಕ. ಇದು ಚೀನಾ ಪರಾಕ್ರಮಣದ ಒಂದು ವರುಷಕ್ಕೆ ಮೊದಲು! ಚಿರಮೌಲ್ಯದ 'ಮೃತ್ಯುಂಜಯ' ದಂಥ ಸೃಜನಸಾಹಿತ್ಯ, ಜ್ಞಾನಗಂಗೋತ್ರಿ, ವಿಶ್ವಕಥಾಕೋಶದಂಥ ಸಂಪಾದನಾ ಸಾಹಿತ್ಯ ನಿರಂಜನರ ಸಾಹಸಪಡೆಯ ಕಪ್ತಾನರು.

ಈ ಸ್ನೇಹಪರ ಜೀವಿಗೆ ತಮ್ಮ ಬೆಂಬಡೊಂದಿಗೆ ನನ್ನಿ ಮಾತಾಡುವ ಧೈರ್ಯವಿದೆ. ಅದಕ್ಕಾಗಿ ಆತ್ಮಪರೀಕ್ಷಣದ ಗೀಳೂ ಇದೆ. ಅನೇಕ ಸಲ ಬದಲಾಗುತ್ತಿರುವ ಕಾಲಗತಿ, ಬದುಕಿನ ಇತಿ-ಮಿತಿಗಳ ಮೂಸೆಯಲ್ಲಿ ತಮ್ಮ ನಿಲುವು-ನೀಳವಾದ ಬೆನ್ನು ಹುರಿ ಇರುವ ನಿಲುವು ಮತ್ತು ಯಾವುದನ್ನು ತಾವು ಋಜುಮಾರ್ಗವೆಂದು ನಿಷ್ಠೆಯಿಂದ ನಂಬಿರುವರೋ ಅದು-ಏನಾದರೂ ವ್ಯತ್ಯಯವಾಗಿದೆಯೇ ಅಥವಾ ಎಲ್ಲಿಯೋ ಬಾಗಿ ಒಪ್ಪಂದವಾಗಿದೆಯೇ - ಎಂದು ಸ್ವತಃ ಇಲ್ಲವೆ ನನ್ನಂಥ ಸ್ನೇಹಿತರೊಂದಿಗೆ ಮುಕ್ತವಾಗಿ ಚರ್ಚಿಸಿ ಪರೀಕ್ಷಿಸಿಕೊಂಡು, ತಪ್ಪನೊಪ್ಪಿಸಿಕೊಂಡು ಒಪ್ಪಿಗೊಂಡಿದ್ದಾರೆ. ಇದು ಇವರ ವಿಶೇಷತೆ ಎಂದು ನನ್ನ ಭಾವನೆ. ಇವರ ಬರೆಹವಲ್ಲಿಯಾಗಲೀ, ಭಾಷಣ - ಸಂಭಾಷಣಗಳಲ್ಲಿಯಾಗಲೀ, ಎಲ್ಲಿಯೂ 'ಬಹುಶಃ' ಎಂಬ ಪದಕ್ಕೆ ಆಸ್ಪದ ಕಾಣಸಿಗದು. ವೃಥಾ ವಿಶೇಷಣಗಳ ಪೌಡರ್ - ಲಿಪ್‌ಸ್ಟಿಕ್ ಇವರಿಗೆ ಸೇರದು. ಬಣ್ಣನೆಯ 'ಸೆಂಟು' ಒಲಿಸದು, ಎಲ್ಲವೂ ಸಹಜವಾಗಿರಬೇಕು.

ಬಹುದು ಗಿಹುದಿನ ಮಾತೇ ಇಲ್ಲ - ಎಲ್ಲವೂ ಖಚಿತ
ಅಲ್ಲ - ಗಿಣಿಯುಲಿವ ನುಡಿ ಗೊಂಬೆ ವೈಯಾರ ಕುಣಿತ
ಬಾಣದೊಲು ತೀಕ್ಷ್ಣದೃಷ್ಟಿಯು ಸೂಕ್ಷ್ಮ ದರ್ಶಕತೆ
ಸಂವೇದನೆಗೆ ಒಪ್ಪವಿಡುವಂಥ ಸೃಜನಶೀಲತೆ ॥

* * * *

ನಿರಂಜನರ ಸಮಯ ಪರಿಪಾಲನೆ ನನ್ನಂಥ ನಿಶ್ಚಿಂತ ಆಲಸಿಗೆ ತೊಡಕನ್ನುಂಟು ಮಾಡುವಂಥದು. ಇಷ್ಟೊತ್ತಿಗೆ ಇಂಥಲ್ಲಿ ಭೇಟಿ - ಎಂದರೆ ಗಡಿಯಾರದ ಮುಳ್ಳೇ ಆ ಹೊತ್ತಿಗೆ ತಿರುಗುವುದು ಇವರ ಹಾಜರಿಯಿಂದ ಎಂದು ತಮಾಷೆ ಮಾಡಿದ್ದೇನೆ, ಸಮಯಕ್ಕೆ ಬರದ ನಾನು. ಆ ಮಾತು ಇರಲಿ. ಇವರ ಸ್ನೇಹಪರತೆಯನ್ನು ಧಾರಾಳ ವಾಗಿ ಪಡೆದವರಲ್ಲಿ ನಾನೂ ಒಬ್ಬ. ಸೂಕ್ಷ್ಮಗ್ರಾಹಿಯಾದ ಬಿಚ್ಚು ಮನಸ್ಸಿನ ಈ ನಿರಾಡಂಬರ ಜೀವಿಯ ಎದೆಯಲ್ಲಿ ಎಂಥ ಬಗೆಯ ಅನುಕಂಪವಿದೆ ಎಂಬುದನ್ನು ನನ್ನ ಒಂದು ಅನುಭವದಿಂದ ಹೇಳಬಯಸುತ್ತೇನೆ. ಹೇಳಲು ಅವರ ಅನುಮತಿ ಇಲ್ಲ-ಗೊತ್ತು; ಹೇಳಿದ್ದಕ್ಕೆ ಪ್ರತಿಭಟಿಸಲೂ ಬಹುದು. ಅದೂ ಗೊತ್ತು. ಆದರೆ ನನ್ನ ಜಾಯಮಾನ ಅವರಿಗೂ ಗೊತ್ತು. ಆದ್ದರಿಂದ ನಿಮಗೆ ಭಯವಿಲ್ಲ.

ನನ್ನ ಒಬ್ಬನೇ ಒಬ್ಬ ಮಗ ಚಿಕ್ಕವನಿದ್ದಾಗ ಪೋಲಿಯೊ ಘಾತಕ್ಕೆ ಒಳಗಾದ. ಚಿಕಿತ್ಸೆಗೆ ಬೆಂಗಳೂರಿಂದ ಮುಂಬೈಗೆ ಹೊರಟಿದ್ದೆ. ಧಾರವಾಡದಲ್ಲಿದ್ದ ನಿರಂಜನರಿಗೆ ತಿಳಿಸಿದ್ದೆ, ಅಷ್ಟೆ. ಅವರು ರಾತ್ರಿ ರೈಲು ಬರುವವರೆಗೆ ಹುಬ್ಬಳ್ಳಿಯಲ್ಲಿ ಕಾಯ್ದು - ಅಲ್ಲಿಂದ ನಮ್ಮೊಂದಿಗೆ ಧಾರವಾಡಕ್ಕೆ ಪ್ರಯಾಣಿಸುತ್ತ ಧೈರ್ಯ ಹೇಳಿದರು, ಹಿತವಚನ ಹೇಳಿದರು. ಧಾರವಾಡ ಬಂತು. ಬೀಳ್ಕೊಡುವಾಗ ಜೇಬಿನಲ್ಲಿ ಒಂದು ಲಕೋಟೆಯನ್ನು ಇಳಿಜಾರಿಸಿ, 'ಆಮೇಲೆ ಓದಿ' - ಎಂದರು. ರೈಲು ಹೊರಟಿತು. ಆತುರದಿಂದ ಲಕೋಟೆ ತೆರೆದು ನೋಡಿದರೆ, ಸಾಂತ್ವನ ನುಡಿಗಳೊಂದಿಗೆ ನಾಲ್ಕುನೂರು ರೂಪಾಯಿಗಳು. ಆನಂದ - ಉದ್ವೇಗಗಳಿಂದ ಭಾವನಾಪರವಶನಾದೆ. ಈಗ ಬೆಳೆದು ಪ್ರಬುದ್ಧ ಯಂತ್ರಶಿಲ್ಪಿಯಾಗಿರುವ ನನ್ನ ಮಗನಿಗೆ ನಿರಂಜನ ಬದುಕಿನ ಹೋರಾಟದಲ್ಲಿ ಆದ್ಯಸ್ಫೂರ್ತಿ. ○

ಮಾನವೀಯತೆಗೆ ಪರ್ಯಾಯ ನಾಮ

-ಜಿ. ಟಿ. ನಾರಾಯಣ ರಾವ್

ಕಡೆಂಗೋಡ್ಲು ಶಂಕರಭಟ್ಟರು ಸಂಪಾದಿಸುತ್ತಿದ್ದ 'ರಾಷ್ಟ್ರಬಂಧು' ಸಾಪ್ತಾಹಿಕದ ಮೂಲಕ ಇವರ ಹೆಸರು ನನಗೆ ತಿಳಿದಿತ್ತು. ಕುಳುಕುಂದ ಶಿವರಾಯ ಅಥವಾ ಶಿ.ರಾ. ಕುಳುಕುಂದ ಎಂಬ ಹೆಸರಿನಿಂದ ಇವರು ಆ ಪತ್ರಿಕೆಯಲ್ಲಿ ಕತೆಗಳನ್ನು ಪ್ರಕಟಿಸುತ್ತಿದ್ದರು. ಆಗ ನಾನು ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಇಂಟರ್ಮೀಡಿಯೆಟ್ ವಿದ್ಯಾರ್ಥಿ (೧೯೪೨-೪೪). ಬರೆಯುವ ಪ್ರವೃತ್ತಿ ಇತ್ತು. ಶಿವರಾಯರ ಕತೆಗಳಿಂದ ಸ್ಫೂರ್ತಿ ಹೀರಿ ನಾನೂ ಕತೆ ಹೊಸೆಯತೊಡಗಿದೆ. ಅವರ ಕತೆಗಳಲ್ಲಿ ಮಾನವೀಯತೆಯ ದಿವ್ಯ ಅನೌಪಚಾರಿಕತೆ ಲಕಲಕಿಸುತ್ತಿದ್ದರೆ ನನ್ನ ಕತೆಗಳಲ್ಲಿ ತಾರ್ಕಿಕತೆಯ ಶುಷ್ಕ ಯಾಂತ್ರಿಕತೆ ಅನುರಣಿಸುತ್ತಿದೆ ಎಂಬುದು ನನ್ನ ವಿಮರ್ಶಾಪ್ರಜ್ಞೆಗೆ ಗೋಚರವಾಗುತ್ತಿತ್ತು.

ನನ್ನ ಆ 'ಮೇರು ಕೃತಿ'ಗಳನ್ನು ಹಲವಾರು ಪತ್ರಿಕೆಗಳಿಗೆ ಪ್ರಕಟಣೆಗೆಂದು ಕಳಿಸಿದೆ. ಆದರೆ ಪ್ರಕಟವಾದವು ಕೆಲವೇ ಕೆಲವು. ಶುಷ್ಕ ತಾರ್ಕಿಕತೆಯ ಜಳ್ಳು, ಎಂದೂ ಗಟ್ಟಿ ನೆಲೆ ಪಡೆಯಲಿಲ್ಲ. ಒಂದೆರಡು ಕತೆಗಳು 'ರಾಷ್ಟ್ರಬಂಧು'ವಿನಲ್ಲಿ ಪ್ರಕಟವಾದಾಗ ಅಲ್ಲೇ ನೌಕರಿಯಲ್ಲಿದ್ದ ಕುಳುಕುಂದರ ಔಪಚಾರಿಕ ಪರಿಚಯ ನನಗಾಯಿತು. ಔಪಚಾರಿಕ ಏಕೆಂದರೆ ಅವರು ನನಗಿಂತ ವಯಸ್ಸು ಅನುಭವ ಕೀರ್ತಿ ಎಲ್ಲದರಲ್ಲೂ ಹಿರಿಯರು. ಅವರ ಸ್ಥಾನವೂ ಹಾಗಿತ್ತು - ಪತ್ರಿಕೆಯ ಉಪ ಸಂಪಾದಕತ್ವ. ನನಗೆ ಅವರ ಬಗ್ಗೆ ಉಂಟಾದದ್ದು ಭಯಮಿಶ್ರಿತ ಗೌರವ.

ಮುಂದಿನ ಐದು ವರ್ಷ (೧೯೪೪-೪೯) ನಾನು ಮದ್ರಾಸಿನಲ್ಲಿದ್ದೆ. ಮೊದಲು ವಿದ್ಯಾರ್ಥಿಯಾಗಿ ಮತ್ತೆ ಉದ್ಯೋಗಿಯಾಗಿ. ಕನ್ನಡ ಕಥಾಜಗತ್ತಿನಲ್ಲಿ ಆಗ ನನ್ನ ಅಂತಸ್ತು ಕೊಂಚ ಏರಿತ್ತು. ಏಕೆಂದರೆ ನನ್ನ ಕತೆಗಳು ಬೆಟಗೇರಿ ಕೃಷ್ಣ ಶರ್ಮರ 'ಜಯಂತಿ'ಯಲ್ಲಿಯೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ 'ಜೀವನ'ದಲ್ಲಿಯೂ ಪ್ರಕಟವಾಗುತ್ತಿದ್ದುವು. ತರುವಾಯದ ವರ್ಷಗಳಲ್ಲಿ (೧೯೪೯-೬೫) ನನ್ನ ಆಸಕ್ತಿ, ವೃತ್ತಿ ಮತ್ತು ಕಾರ್ಯಕ್ಷೇತ್ರ ಬೇರೆಡೆಗೆ ಹರಿದು ಸಾಹಿತ್ಯಪ್ರಪಂಚ ಕುರಿತಂತೆ ಅನಾಮಧೇಯನಾಗಿ ಮಾಸಿಹೋದೆ. ಈ ಅವಧಿಯಲ್ಲಿ ಒಂದು ದಿನ ಕಾರ್ಯಾರ್ಥ ಬೆಂಗಳೂರಿಗೆ ಹೋಗಿದ್ದೆ.

ಅಲ್ಲಿ ರೇಲ್ವೇ ನಿಲ್ದಾಣದ ಹತ್ತಿರ ಆಕಸ್ಮಾತ್ತಾಗಿ ಎದುರಾದ ದಷ್ಟ ಪುಷ್ಟ ಯುವಕನೊಬ್ಬ "ನೀವು ಜಿ. ಟಿ. ನಾರಾಯಣರಾಯರಲ್ಲವೇ? ೧೯೪೯ರಿಂದೀಚೆಗೆ ಕತೆ ಬರೆಯುವುದನ್ನೇಕೆ ನಿಲ್ಲಿಸಿದಿರಿ? 'ಕರ್ಮವೀರ'ದಲ್ಲಿ ನಿಮ್ಮ ವಿಜ್ಞಾನ

ಲೇಖನಗಳನ್ನು ಓದಿದ್ದೇನೆ. ಅಂಥವನ್ನು ನೀವು ಜಾಸ್ತಿ ಬರೆಯಬೇಕು" ಎಂದು ನನ್ನ ಬಗ್ಗೆ ತುಂಬ ಆತ್ಮೀಯತೆ ಪ್ರದರ್ಶಿಸಿದರು.

ವ್ಯಕ್ತಿಯ ಮುಖಕ್ಕೂ ಹೆಸರಿಗೂ ಆತನನ್ನು ಕಂಡಕ್ಷಣ ತಳಕುಹಾಕುವುದು ನನಗೆಂದೂ ಸಿದ್ಧಿಸದ ಕಲೆ. ಇಷ್ಟೊಂದು ಕಳಕಳಿಯಿಂದ ನನ್ನ ಜೊತೆ ಮಾತನಾಡುತ್ತಿರುವ ಈ ಅನಾದಿ ಕಾಲದ ಹಿರಿಯ ಮಿತ್ರನನ್ನು 'ನಿಮ್ಮ ಹೆಸರೇನು?' ಎಂದು ಹೇಗೆ ತಾನೇ ಕೇಳಲಿ? ಕಣ್ಣುಗಳಲ್ಲಿಯ ಪ್ರಶ್ನಾರ್ಥಕ ಚಿಹ್ನೆ ಗಮನಿಸಿದ ಅವರೇ ನೆರವಿಗೆ ಬಂದರು "ನಾನು ನಿರಂಜನ - ಅಂದಿನ ಕುಳಕುಂದ".

ಹೌದು! ಕನ್ನಡ ನಾಡಿನ ಪ್ರಸಿದ್ಧ ಕ್ರಾಂತಿಕಾರಿ ಲೇಖಕ ನಿರಂಜನರ ಎದುರು ನಾನಾಗ ನಿಂತಿದ್ದೆ. ಅವರ ಸಾಹಿತ್ಯ ಶ್ರೀಮಂತಿಕೆ ಮತ್ತು ಜೀವನಸಿದ್ಧಿ ನನಗೆ ಚೆನ್ನಾಗಿ ತಿಳಿದಿದ್ದುವು.

ಮುಂದೆ ೧೯೬೫ರಲ್ಲಿ ನಾನು ಬೆಂಗಳೂರಿಗೆ ವರ್ಗವಾಗಿ ಹೋದೆ. ಅಲ್ಲಿಯ ಸರ್ಕಾರಿ ಕಾಲೇಜಿನಲ್ಲಿ ನಾನು ಗಣಿತ ಅಧ್ಯಾಪಕ ಮತ್ತು ಎನ್‌ಸಿಸಿ ಅಧಿಕಾರಿ. ನನ್ನ ಕೆಲಸ, ಕಾಲೇಜಿನ ಪರಿಸರ ಮತ್ತು ನಗರದ ನಿತ್ಯಚಟುವಟಿಕೆಗಳು ನನ್ನೆದುರು ಅಸಂಖ್ಯ ನೂತನಾವಕಾಶಗಳನ್ನು ತೆರೆದಿಟ್ಟುವು. ಇಂಥ ಒಂದು ಸುಸನ್ನಿವೇಶದಲ್ಲಿ ನಾನು ನನ್ನ ಹಳೆಯ 'ಚಾಳಿ'ಯನ್ನು ಪುನಃ ಪ್ರಾರಂಭಿಸಿದೆ: ವೃತ್ತಪತ್ರಿಕೆಗಳಿಗೆ ವಿಜ್ಞಾನ ವಿಷಯಗಳ ಮೇಲೆ ಲೇಖನ ಬರೆಯುವುದು. 'ಕಸ್ತೂರಿ', 'ಪ್ರಜಾವಾಣಿ', 'ಸಂಯುಕ್ತ ಕರ್ನಾಟಕ', 'ಸುಧಾ', 'ಕರ್ಮವೀರ' ಮತ್ತು 'ಪ್ರಜಾಮತ' ಪತ್ರಿಕೆಗಳಲ್ಲಿ ಅವು ಪ್ರಕಟವಾಗುತ್ತಿದ್ದುವು. ಜನ ಅವನ್ನು ಓದಿದರೋ ಇಲ್ಲವೋ ಅದು ಮುಖ್ಯವಲ್ಲ, ಅವು ನನಗೆ 'ಖ್ಯಾತ ಜನಪ್ರಿಯ ವಿಜ್ಞಾನ ಲೇಖಕ' ಎಂಬ ಬಿರುದನ್ನಂತೂ ತಂದುಕೊಟ್ಟುವು!

ಹೊಸತಾಗಿ ಗಳಿಸಿದ ಈ ಪ್ರಭಾಪರಿವೇಷದಲ್ಲಿ ರಾರಾಜಿಸುತ್ತಿದ್ದ ನನ್ನನ್ನು ಎಂ. ಎಚ್. ಕೌಜಲಗಿಯವರ ಬೃಂದಾವನ ಮುದ್ರಣಾಲಯದಲ್ಲಿ ಒಬ್ಬ ತೂಕದ ವ್ಯಕ್ತಿ ಅಕಸ್ಮಾತ್ತಾಗಿ ಸಂಧಿಸಿ, ನನ್ನ ವಿಜ್ಞಾನ ವಾಙ್ಮಯಕೃಷಿ ಬಗ್ಗೆ ಪ್ರಶಂಸೆಯ ಮಾತು ಆಡಿದರು. ಅವರು ಕಾರಿನಿಂದ ಇಳಿದ ಠೀವಿ, ಅವರ ವಯಸ್ಸು, ಗಾತ್ರ ಮತ್ತು ಮಾತಿನ ಧಾಟಿ ಪ್ರತಿಯೊಂದರಲ್ಲೂ ಅವರು ನನಗಿಂತ ಎಷ್ಟೋ ಎತ್ತರದಲ್ಲಿದ್ದರೆಂಬುದು ಸ್ಪಷ್ಟ. ಯಾರಿವರು? ಈ ಸಲ ನನ್ನ ಮುಜಗರವನ್ನು ನಿವಾರಿಸಿದ್ದು ಕೌಜಲಗಿಯವರ ಉದ್ಗಾರ "ಏನಂತೀರಿ ನಿರಂಜನ! ಈ ನಾರಾಯಣರಾಯರಿಗೆ...."

ಆಗ ಅವರು ಇನ್ಸಾ ಎಂಬ ವಾರ್ತಾಸಂಸ್ಥೆಯ ಸಂಚಾಲಕರಾಗಿದ್ದರು, ಹಿರಿಯ ಸಾಹಿತಿಗಳಾಗಿದ್ದರು, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದ ವರಿಷ್ಠ ಸದಸ್ಯರಾಗಿದ್ದರು. ಅವರ ಪತ್ನಿ ಡಾ! ಅನುಪಮಾ ನಿರಂಜನ ನಗರದ ಪ್ರಸಿದ್ಧ ವೈದ್ಯೆಯಾಗಿ ಮತ್ತು ಕನ್ನಡದ ಹಿರಿಯ ಲೇಖಕಿಯಾಗಿ ಪತಿಯಷ್ಟೇ ಹೆಸರುಗಳಿಸಿದ್ದರು. ಆದರೆ ಯಶಸ್ಸಿನ ಈ ಉನ್ಮೇಷದಿಂದ ಎಂದೂ ಅವರ ತಲೆ ಬೀಗಲಿಲ್ಲ, ಜನಕಾಳಜಿ ಕಡಿಮೆಯಾಗಲಿಲ್ಲ, ಜ್ಞಾನದಾಹ ಸ್ಥಗಿತವಾಗಲಿಲ್ಲ, ಎಲ್ಲಕ್ಕೂ ಮಿಗಿಲಾಗಿ ವಿನಯಶೀಲತೆ ತುಸುವೂ ಮಸುಳಲಿಲ್ಲ.

ಕನ್ನಡ ಕುರಿತಂತೆ ೧೯೬೭–'೬೯ ಅವಧಿಯಲ್ಲಿ ಎರಡು ಮಹಾಯೋಜನೆಗಳು ಕಾರ್ಯಗತವಾದುವು: ಕನ್ನಡ ವಿಶ್ವಕೋಶ, ಜ್ಞಾನಗಂಗೋತ್ರಿ (ಕಿರಿಯರ ವಿಶ್ವಕೋಶ). ಜ್ಞಾನಗಂಗೋತ್ರಿಯು ತ್ರಿಮೂರ್ತಿಯಾಗಿ - ೧೯೬೯ರಲ್ಲಿ ಸೃಷ್ಟಿ - ೧೯೬೯–'೭೪ ಅವಧಿಯಲ್ಲಿ ಸ್ಥಿತಿ, ೧೯೭೪ರಲ್ಲಿ ಸಮಾಪ್ತಿ - ನಿರಂಜನರು ಹೊತ್ತ ಹೊರೆ ಮತ್ತು ಎಳೆದ ತೇರು ಅಸಾಮಾನ್ಯವಾದವು. ಡಾ! ದೇ. ಜವರೇ ಗೌಡರು ಬರೆದ ಮುನ್ನುಡಿ "ಶ್ರೀ ನಿರಂಜನ ಅವರಂತು ತಮ್ಮ ಲೇಖನಕಾರ್ಯವನ್ನು ಒತ್ತಟ್ಟಿಗಿಟ್ಟರು. ಅವರ ಶ್ರದ್ಧಾಯುಕ್ತವಾದ ನಿಷ್ಠೆ ಹಾಗೂ ದುಡಿಮೆಗಳಿಲ್ಲದಿದ್ದರೆ ಇಷ್ಟು ಶೀಘ್ರವಾಗಿ ಈ 'ಜ್ಞಾನಗಂಗೋತ್ರಿ' ಬೆಳಕು ಕಾಣುತ್ತಿರಲಿಲ್ಲ. ಇದರ ನಿರ್ಮಾಣ ಕಾರ್ಯದಲ್ಲಿ ಅವರು ಮಾಡಿದ ತ್ಯಾಗ ನನಗೆ ತಿಳಿದಿದೆ; ಇದಕ್ಕಾಗಿ ತಮ್ಮ ಸ್ವಂತ ಕೆಲಸಗಳಿಗೆಲ್ಲ ತಿಲಾಂಜಲಿಯೆರೆದರು; ಇದಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ನಿವೇದಿಸಿಕೊಂಡರು". ('ಜ್ಞಾನಗಂಗೋತ್ರಿ' ಸಂಪುಟ ಒಂದು, ೧೯–೯–೧೯೭೦)

ನನ್ನ ಬಗ್ಗೆ ಅತಿಶಯ ವಿಶ್ವಾಸ (ಸ್ವತಃ ನನಗೇ ಇರದಷ್ಟು) ತಳೆದಿದ್ದ ನಿರಂಜನ ನಾನು 'ಜ್ಞಾನಗಂಗೋತ್ರಿ'ಯ ಸಂಪಾದಕ ವರ್ಗ ಸೇರಿ ಅವರ ಜೊತೆ ದುಡಿಯಬೇಕೆಂದು ಬಯಸಿದರು. ಆದರೆ ನನ್ನ ಸಹಜ ಅಳುಕಿನಿಂದಾಗಿ ನಾನು ಈ ಭಾಗ್ಯದಿಂದ ವಂಚಿತನಾದೆ. ತೀರ ಸೀಮಿತ ಸಾಮರ್ಥ್ಯ ಹೊಂದಿದ್ದ ನಾನು, ಅವರ ಹಿರಿ ನಿರೀಕ್ಷೆಗನುಗುಣವಾಗಿ ಎತ್ತರ ಏರದಾಗ, ಅವರಿಗೆ ಉಂಟಾಗುವ ಭ್ರಮನಿರಸನ ಪರಿಸ್ಥಿತಿ ಊಹಿಸಿ ಹಿಂಜರಿದಿದ್ದೆ. ಆದರೂ ಅವರು ನನಗೆ ವಿನಾಯತಿ ಕೊಡಲೊಲ್ಲರು. ನನ್ನನ್ನು 'ಜ್ಞಾನಗಂಗೋತ್ರಿ'ಯ ಗೌರವ ಸಂಪಾದಕ ಮಂಡಳಿಯ ಒಬ್ಬ ಸದಸ್ಯನಾಗಿ ನಾಮಕರಣಮಾಡಿ ನನ್ನ ಬಗೆಗಿನ ತಮ್ಮ ವಿಶ್ವಾಸ ಪ್ರದರ್ಶಿಸಿದರು.

'ಜ್ಞಾನಗಂಗೋತ್ರಿ'ಯನ್ನು ಅವರು ರೂಪಿಸಿ ನಿರ್ವಹಿಸಿದ ಬಗೆಗೆ ಸಾಟಿಯಾದದ್ದು ಮಣಿಪಾಲದ ಮಾಂತ್ರಿಕ ಡಾ! ಟಿ. ಎಂ. ಎ. ಪೈಯವರು ಕಲ್ಲನ್ನು ಆರಳಿಸಿ ಜೀವ ಪುಟಿಯುವಂತೆ ಮಾಡಿದ ಸವಾಡ. ನಿರ್ದಿಷ್ಟ ಕಾಲಾವಧಿಗಿಂತ ಮೊದಲೇ

(೧೯೬೯-೭೪, ಏಳು ಸಂಪುಟಗಳು) ಮತ್ತು ನಿಗದಿ ಮಾಡಿದ್ದ ಅಂದಾಜು ವೆಚ್ಚದ ಒಳಗೇ ಈ ಯೋಜನೆಯನ್ನು ಅತ್ಯುತ್ಕೃಷ್ಟವಾಗಿ ಪೂರೈಸಲು ಸಾಧ್ಯವಾದದ್ದು ನಿರಂಜನರ ಕ್ರತುಶಕ್ತಿಯಿಂದ. ಏಳನೆಯ ಸಂಪುಟದ 'ಇಂತಿ ನಮಸ್ಕಾರ'ದಲ್ಲಿ ಅವರೇ ಬರೆದಿದ್ದಾರೆ (೧೦-೩-೧೯೭೪):

ಯೋಜನೆ ಆರಂಭವಾದಾಗ 'ವಿಶ್ವಕೋಶದ ರಚನೆ ನಿರಂಜನನಿಂದ ಆಗುವ ಕೆಲಸವಲ್ಲ' ಎಂದು ಯಾರಿಗೋ ಯಾರೋ ಹೇಳಿದರಂತೆ. ವ್ಯಂಗ್ಯೋಕ್ತಿ ಆಡಿದರಂತೆ. 'ನಿರಂಜನ ಬರೆವಣಿಗೆಯಲ್ಲಿ ಬುದ್ಧಿವಂತ, ಆದರೆ ಹಣದ ವಿಷಯ ತಿಳೀದು' ಎಂದು ಒಬ್ಬರು ನುಡಿದರೆ, ಇನ್ನೊಬ್ಬರು 'ಲಕ್ಷಾಂತರ ರೂಪಾಯಿ ವ್ಯವಹಾರ, ಭಾರೀ ಹಂಚಿಕೆ!' ಎಂದರಂತೆ. ಬೆನ್ನ ಹಿಂದಿನ ಮಾತುಗಳಿಗೆ ಬೆಲೆಯಿಲ್ಲ.

ಆದರೆ ಒಬ್ಬ ಹಿರಿಯ ಪ್ರಾಧ್ಯಾಪಕ-ಕವಿ 'ಈ ಕೆಲಸಕ್ಕೆ ಹತ್ತು ಹದಿನೈದು ವರ್ಷಗಳಾದರೂ ಬೇಕು. ಇದೇನು ಕಥೆ ಕಾದಂಬರಿಯಲ್ಲ' ಎಂದು ಸ್ವತಃ ನನಗೇ ಹೇಳಿದರು, ೧೯೬೯ರಲ್ಲಿ.

'ಅಲ್ಲಿ ನಾನಿದ್ದೇನೆ' ಎಂದು ಆಗ ಉತ್ತರಿಸಿದ್ದೆ. (ಅಹಂ, ಅತಿಯಾದ ಹಮ್ಮು, ಅಲ್ಲವೆ?)

ಸಂಪುಟಗಳ ರಚನೆ ಮುಗಿದಿದೆ-ಹದಿನೈದಲ್ಲ, ಹತ್ತಲ್ಲ, ನಾಲ್ಕು ವರ್ಷ ಒಂಭತ್ತು ತಿಂಗಳಲ್ಲಿ.

"ನಾನು ಕಥೆ ಕಾದಂಬರಿಗಳ ಕ್ಷೇತ್ರದಿಂದ ಬಂದೆ. 'ಲೆಂಟ್ ಹ್ಯಾಂಡ್!' ಅಲ್ಲಿಗೆ ಈಗ ನಾನು ಮರಳಬೇಕು."

Lent hand ಆಗಿ ಬಂದವರು crippled hand ಆಗಿ ಮರಳಬೇಕಾದದ್ದು ಹೇಗೆ ಈ ನಿಷ್ಠುರ ಕಾಲಬಂಧಿತ ಕಾರ್ಯ ಇವರ ಜೀವಸತ್ತ್ವವನ್ನೇ ಹೀರಿಬಿಟ್ಟಿತು ಎನ್ನುವುದಕ್ಕೆ ನಿದರ್ಶನ. ಪಾರ್ಶ್ವವಾಯು ಪೀಡಿತರಾಗಿದ್ದರೂ ದೇಹದ ನೋವು ಮತ್ತು ಅಸಹಾಯಕತೆ ಮರೆತು ಮನೋಬಲದಿಂದ ದುಡಿದು ಜಯಶೀಲರಾದರು. ಪ್ರಾಮಾಣಿಕ ಕರ್ತವ್ಯ ನಿರ್ವಹಣೆಗೆ ಇವರು ಪರ್ಯಾಯ ನಾಮ. ಇವರ ಅಂದಿನ ಒಡನಾಡಿಗಳ ಪೈಕಿ ಯಾರಾದರೊಬ್ಬರು (ಅದ್ಯನಡ್ಕ ಕೃಷ್ಣ ಭಟ್ಟ?) 'ಜ್ಞಾನ ಗಂಗೋತ್ರಿ'ಯ ಕತೆ ಬರೆದರೆ ಆ ಸಾಹಸಗಾಥಾ ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟ ಕೊಡುಗೆಯಾದೀತು.

೧೯೬೯ರಲ್ಲಿ ನಾನು ಮೈಸೂರು ಸೇರಿದೆ. ಅದೇ ವರ್ಷದ ಜುಲೈಯಲ್ಲಿ ಮಾನವ ಮೊದಲ ಬಾರಿಗೆ ಚಂದ್ರನ ಮೇಲೆ ಕಾಲೂರಿ "ಇದು ಒಬ್ಬ ವ್ಯಕ್ತಿಗೆ ಬಲು ಪುಟ್ಟ ಹೆಜ್ಜೆ, ಆದರೆ ಮಾನವ ಜನಾಂಗಕ್ಕೆ ಹನುಮಂತ ನೆಗೆತ" ಎಂದು ಉದ್ಗರಿಸಿದ. ಈ ಐತಿಹಾಸಿಕ ವಿಕ್ರಮವನ್ನು ನಾನೊಂದು ಪುಸ್ತಕ ರೂಪದಲ್ಲಿ ಬರೆದುಕೊಡಬೇಕೆಂದು ನಿರಂಜನರು ಕೋರಿದರು. ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದ ವತಿಯಿಂದ ಪ್ರಕಟವಾಗಲಿದ್ದ ಈ ಪುಸ್ತಕಕ್ಕೆ ಆ ಸಂಸ್ಥೆ ನನಗೆ ಶೇಕಡಾ ೧೫ ಗೌರವಧನ ಪಾವತಿ ಮಾಡಲಿದೆ ಎಂದು ಕೂಡ ತಿಳಿಸಿದರು.

"ಸಂಭಾವನೆ ಮುಖ್ಯವಲ್ಲ. ನೀವು ಹೇಳಿದ್ದೀರಿ. ನಾನು ಬರೆಯುತ್ತೇನೆ" ಎಂದೆ.

"ಸಂಭಾವನೆ ಏಕೆ ಮುಖ್ಯವಲ್ಲ? ನಿಮಗೆ ಬೇಡವಾದರೆ ಅದನ್ನು ನಿಮ್ಮ ಗೃಹಸ್ತ್ರೀಗೆ ಕೊಡಿ. ಮನೆವಾರ್ತೆ ನಡೆಸುವ ಆ ಗೃಹಸ್ತ್ರೀಗೆ ಅದು ಚೆನ್ನಾಗಿ ಅರ್ಥವಾಗುತ್ತದೆ" ಅವರು ನನ್ನ ಬಾಯಿ ಮುಚ್ಚಿಸಿದರು.

ನಮ್ಮ ಮನೆಯ ವೈಶಿಷ್ಟ್ಯವಾದ ಕೊಡಗಿನ ಅಕ್ಕಿಯ ಉಬ್ಬುರೊಟ್ಟಿ, ಆಗತಾನೇ ಕಡೆದು ತೆಗೆದ ಬೆಣ್ಣೆ ಮತ್ತು ಕೊಡಗಿನ ಜೇನು ಅವರ ಅತಿ ಪ್ರಿಯ ಖಾದ್ಯ. ವರ್ಷಕ್ಕೆ ಒಮ್ಮೆಯಾದರೂ ಈ 'ಸೇವೆ' ನಡೆಯಬೇಕೆಂದು ಬಯಸಿದ್ದರು. ಈ ನೆವದಲ್ಲಿ ಸ್ನೇಹಜ್ಯೋತಿಗೆ ಎಣ್ಣೆ ಎರೆಯುತ್ತಿರಬೇಕೆಂಬುದು ಅಂತರ್ಗತ ಭಾವ. ಆದರೆ ಅವರ ಅನಾರೋಗ್ಯದಿಂದಾಗಿ ನನಗೆ ಈ ಸುಯೋಗ ಈಚಿನ ಹಲವಾರು ವರ್ಷಗಳಿಂದ ತಪ್ಪಿಹೋಗಿದೆ.

ಇತ್ತ ನಾನಾದರೂ ಅವರ ಸಂಪರ್ಕವನ್ನು ಮುಂದುವರಿಸಿಲ್ಲ. ಕಾರಣ? ನನ್ನ ಸ್ವಭಾವಾಂತರ್ಗತ 'ದೋಷ': nonfunctional visits are nonexistent ಮತ್ತು in the ultimate analysis everything including friendship, love, altruism etc. is functional (ಅಕ್ರಿಯಾತ್ಮಕ ಭೇಟಿಗಳು ಅನುಪಸ್ಥಿತ ಮತ್ತು ಅಂತಿಮ ವಿಶ್ಲೇಷಣೆಯಲ್ಲಿ ಸ್ನೇಹ, ಪ್ರೇಮ, ಪರೋಪಕಾರ ಮುಂತಾದ ಪ್ರತಿಯೊಂದೂ ಕ್ರಿಯಾತ್ಮಕವೇ) ಎಂಬ 'ಅಮಾನವೀಯ' ನಿಲವಿನ ಫಲ ಎಂದು ನನಗೆ ಗೊತ್ತಿದೆ. ಇದು ಇತರರ ಬಗ್ಗೆ ಗೌರವ, ಆದರ, ಸೇವಾಭಾವ ಅಥವಾ ಸಹಾನುಭೂತಿ ಇಲ್ಲದುದರ ಅಥವಾ ಕಡಿಮೆಯಾದುದರ ಲಕ್ಷಣವಲ್ಲ. ನನ್ನಂತೆಯೇ ಅತಿ ಬಿಸಿ (busy) ಆಗಿರುವ ಅವರ ಕಾಲಹರಣ ಮಾಡಲು ನನಗೆ ಅಧಿಕಾರವಿಲ್ಲ ಎಂಬ ಅಪ್ಪಟ ವ್ಯಾವಹಾರಿಕತೆಯ ಲಕ್ಷಣ. ನಾನು ಹಗಲಿರುಳು ದುಡಿದರೂ ದಕ್ಷವಾಗಿ ಸಕಾಲದಲ್ಲಿ ಮಾಡಿ ಮುಗಿಸಲಾರದ ಅಸಂಖ್ಯ ಪ್ರಿಯ ಹವ್ಯಾಸಗಳ ಒತ್ತಡ. ನಾನೇನು ಮಾಡಲಿ?

ನಿರಂಜನರಿಗೆ ಬಡಿದ ಪಾರ್ಶ್ವವಾಯು ಆಘಾತ ಹಾಗೂ ಅದರಿಂದ ಉದ್ಭವಿಸಿದ ಅಸಂಖ್ಯ ವೈಯಕ್ತಿಕ ಸಮಸ್ಯೆಗಳನ್ನು ಗಮನಿಸಿದವರಿಗೆ ಅವರ ಬದುಕಿನ ಒಂದೊಂದು ನಿಮಿಷವೂ ಹೇಗೆ ಅವರ ದೃಢಸಂಕಲ್ಪದ-ಬದುಕಲೇಬೇಕು, ಮಾನವೀಯ ಕಾರ್ಯಕಲಾಪಗಳಲ್ಲಿ ಆಸಕ್ತಿ ತಳೆಯಲೇಬೇಕು, ತತ್ಫಲವಾಗಿ ಗ್ರಹಿಸಿದ ಅನುಭವವನ್ನು ಇತರರ ಜೊತೆ ಹಂಚಿಕೊಳ್ಳಲೇಬೇಕು, ಒಟ್ಟಾರೆ ಉನ್ನತ ಮಾನವನಾಗಿ ಬಾಳಬೇಕು-ಪ್ರತ್ಯಕ್ಷಫಲ ಎಂಬುದು ಗೊತ್ತಿದೆ. ಜೀವನವನ್ನು ಮತ್ತು ಅದರ ಬಿಡಿ ಘಟಕಗಳಾದ ವ್ಯಕ್ತಿಗಳನ್ನು ಇವರಿಗಿಂತ ಹೆಚ್ಚಿಗೆ ಪ್ರೀತಿಸುವವರು ಅತಿ ವಿರಳ. ಈ ಗಾಢ ಪ್ರೀತಿಯೇ ಇವರ ದೀರ್ಘಾಯುಷ್ಯದ ರಹಸ್ಯವೆಂದು ಇವರನ್ನು ನಿಕಟವಾಗಿ ಬಲ್ಲವರಿಗೆ ಗೊತ್ತಿದೆ.

ಬೆಂಗಳೂರಿನ ಜಯನಗರದ 'ಕಥೆ'ಯಲ್ಲಿ ಮನುಕುಲದ ಕಥೆಯ ಜೀವಂತ ಚೇತನಗಳು ಕನ್ನಡ ನಾಡಿನ, ಕನ್ನಡ ಜನರ ಮತ್ತು ಕನ್ನಡ ವಾಙ್ಮಯದ ಹಿತ ಕೋರುತ್ತ ಅದಕ್ಕಾಗಿ ದುಡಿಯುತ್ತ ಮತ್ತು ದುಡಿಯುವವರಿಗೆ ಪ್ರೋತ್ಸಾಹವೀಯುತ್ತ ತಪಸ್ಸ್ವಾಧ್ಯಾಯನಿರತವಾಗಿವೆಯೆಂಬುದು ಕನ್ನಡಿಗರಿಗೆ ತಿಳಿದಿದೆ. ವ್ಯಾವಹಾರಿಕತೆಯನ್ನು ಕಳೆದುಕೊಳ್ಳದ ಆತ್ಮೀಯತೆ, ಆತ್ಮೀಯತೆಗೆ ಊನ ಬಾರದ ದಕ್ಷತೆ ಮತ್ತು ದಕ್ಷತೆಯನ್ನು ಎಂದೂ ಬಲಿಕೊಡದ ಮಾನವೀಯತೆ ಇವು ಅವರ ಸಾರ್ಥಕ ಜೀವನದ ಶ್ರುತಿಯನ್ನು ನಿರ್ಧರಿಸಿವೆ. ಇಂಥವರು ನಿಜಕ್ಕೂ ಅಜರಾಮರರು. ○

ಅಪ್ಪಟ ಸ್ನೇಹಜೀವಿ

- ಪಿ. ಆರ್. ತಿಪ್ಪೇಸ್ವಾಮಿ

'ನಿರಂಜನ' ಅವರು ೧೯೮೬ರ ಜನವರಿ ೧೩ರಂದು ನನಗೊಂದು ಕಾರ್ಡು ಬರೆದಿದ್ದರು. "ಆತ್ಮೀಯ ಪಿ.ಆರ್.ಟಿ., ಮೈಸೂರು ಪತ್ರಿಕೆಯಲ್ಲಿ ಎರಡು ಬಾರಿ ನಿಮ್ಮನ್ನು ಕಂಡೆ. ಮೊದಲು 'ಅವಲೋಕನ'ಕ್ಕೆ ಸಂಬಂಧಿಸಿ (ಗೆಲಿಲಿಯೋಗೂ ಹುಟ್ಟಿಸಿದ್ದರು ಈ ವಿಶ್ವದಲ್ಲಿ), ಎರಡನೆಯದಾಗಿ ಇವತ್ತು 'ಸ್ಮೃತಿ ದಿಗಂತದಿಂದ' (ಮಾಸ್ತಿ ಅವರ ಮೊಸರಿನ ಮೋಹ). ಕಳೆದ ತಿಂಗಳು ಟಿ.ವಿ.ಯಲ್ಲಿ ಹಿಂದಿಯಲ್ಲಿ ಮಂಗಮ್ಮ ನಾಟಕ (The Curd Seller) ಬಂದಿತ್ತು. ರೋಹಿಣಿ ಹಟ್ಟಂಗಡಿ ಮಂಗಮ್ಮ ಆಗಿದ್ದರು. ಮೆಚ್ಚಬೇಕಾದ ನಾಟಕ. ಇದು ಯಾವುದಕ್ಕೂ ಸಂಬಂಧಿಸದ ನಿಮ್ಮ ಲೇಖನ ಬಿಸಿನಾದದ್ದು ಓದಿ ಎಳೆತನದ ಬಿಸಿಯನ್ನು ಅನುಭವಿಸಿದೆ

ಶ್ರೀರಂಗರಾಜು ನಿನ್ನೆ ಹೋದರು. ಆಮೇಲೆ ಬೆಂಗಳೂರು ಚಳಿ ಪೀಡಿತ ಮುಗುಳ್ನಕ್ಕಿದ್ದು ನಿಮ್ಮ ಲೇಖನ ಓದಿದ ಮೇಲೆಯೇ. ತುಂಬಾ ಬರೆಯಿರಿ, ಕೊನೆಯಲ್ಲಿ 'ಸ್ಮೃತಿ ದಿಗಂತದಿಂದ' ಹೆಬ್ಬೊತ್ತಗೆಯಾಗುತ್ತದೆ. ಶುಭಾಶಯ, ಒಲವು.... ನಿರಂಜನ". ಈ ಪತ್ರ ನನಗೆ, ನನ್ನ ಬರೆಹಕ್ಕೆ ಸ್ಫೂರ್ತಿ ಹಾಗೂ ಸಮಾಧಾನ ತಂದಿತ್ತು.

೧೯೫೧–೫೨ರ ಸಮಯ ನಿರಂಜನರನ್ನು (ಕುಳುಕುಂದ ಶಿವರಾಯ) ಪ್ರಥಮ ಕಂಡದ್ದು ಬೆಂಗಳೂರಿನಲ್ಲಿ. 'ಚಿತ್ರಗುಪ್ತ' ವಾರಪತ್ರಿಕೆಯ ಕಾರ್ಯಾಲಯದಲ್ಲಿ. ಸಂಪಾದಕ ಎಂ. ಎಸ್. ಭಾರದ್ವಾಜರ ಮೂಲಕ. ನಿಸಾರ್ ಅಹಮದ್, ವೀಚಿ, ಜೀಶಂಪ, ಮೊದಲಾದ ತರುಣರ ಬರೆಹಕ್ಕೆ ಪ್ರೋತ್ಸಾಹ ನೀಡಿದ ಭಾರದ್ವಾಜರು ನಿರಂಜನರ ಆತ್ಮೀಯ ಗೆಳೆಯರಾಗಿದ್ದರು. ನಿರಂಜನರ ಲೇಖನಗಳನ್ನೂ 'ಚಿತ್ರಗುಪ್ತ'ದಲ್ಲಿ ಕಂಡಿದ್ದೆ. ನನ್ನ ಕಲಾವಿದರ ಪರಿಚಯ ಲೇಖನಗಳೂ ಪ್ರಕಟವಾಗಿದ್ದುವು. ಆ ವೇಳೆ ಮೈಸೂರಿನಲ್ಲಿ ನಾನು, ಹೇಮದಳ ರಾಮದಾಸ್, ಜೀಶಂಪ, ಕೆಲವು ಮಿತ್ರರು 'ಕಲಾಕ್ಷೇತ್ರ' ಸಂಸ್ಥೆ ಕಟ್ಟಿಕೊಂಡು ಕೈಬರೆಹ ಸಂಚಿಕೆ ಪ್ರಕಟಿಸುತ್ತಿದ್ದೆವು. ಮತ್ತೊಂದು ಯುವಕ ಮಿತ್ರರು 'ಕನ್ನಡ ಕುಲ' ಸಂಸ್ಥೆ ಕಟ್ಟಿಕೊಂಡಿದ್ದರು. ಈ ಎರಡು ಸಂಸ್ಥೆಗಳ ಮೂಲಕ ಪ್ರಕಟಣೆಗೆ ಕೈಹಾಕಿ ಕೆಲವು ಕಿರು ಪುಸ್ತಕಗಳನ್ನು ಪ್ರಕಟಿಸುತ್ತ ಕೈ ಸುಟ್ಟುಕೊಂಡಿದ್ದೆವು. ನಿರಂಜನರು ನಮ್ಮ ಸಾಹಿತ್ಯಾಸಕ್ತಿಯನ್ನು ಗಮನಿಸಿ ಒಳ್ಳೆ ಮಾತುಗಳನ್ನು ಬರೆದಿದ್ದರು. ನಿರಂಜನರ ಮತ್ತು ನಮ್ಮ ಸ್ನೇಹಕ್ಕೆ ನಮ್ಮ ಆಸಕ್ತಿ ಉತ್ಸಾಹಗಳೇ ಕಾರಣ ಇರಬಹುದು.

ನಿರಂಜನರು ಒಮ್ಮೆ ಬೆಂಗಳೂರಿನಲ್ಲಿ ಸಿಕ್ಕಿದ್ದರು. "ನೀವು ಪದವೀಧರರು, ಹಿರಿಯ ಕಲಾವಿದರನ್ನು ಪರಿಚಯಿಸಬಾರದೇಕೆ?" ಎಂದು ಸೂಚಿಸಿದರು. ಇವರ ಪ್ರೋತ್ಸಾಹದ ನುಡಿಗಳಿಂದ ೩೨ ಜನ ಚಿತ್ರಕಾರರ, ಶಿಲ್ಪಿಗಳ ಪರಿಚಯದ ನನ್ನ ಲೇಖನಗಳು 'ಜನಪ್ರಗತಿ'ಯಲ್ಲಿ ಬೆಳಕು ಕಂಡುವು. ನಿರಂಜನರು ಪ್ರಸಿದ್ಧ ಶಿಲ್ಪಿ, ವ್ಯಂಗ್ಯ ಚಿತ್ರಕಾರ ಆರ್. ಎಸ್. ನಾಯಿಡು ಬಗ್ಗೆ ಬರೆದ ಲೇಖನವನ್ನು 'ಜನಪ್ರಗತಿ'ಯಲ್ಲಿ ಓದಿದ್ದೆ. ಆರ್.ಎಸ್.ಎನ್. ಅವರು ಚಿತ್ರಿಸಿದ ತಮ್ಮದೇ ಭಾವಚಿತ್ರ ಆ ಲೇಖನದ ಜೊತೆಗೆ ಪ್ರಕಟವಾಗಿತ್ತು. ಶಕ್ತಿಶಾಲಿ ರೇಖಾಚಿತ್ರ ಗಮನಿಸಿದ್ದು ನಿರಂಜನರ ಈ ಲೇಖನದಲ್ಲೇ ಪ್ರಥಮ. ಅಂದಿನಿಂದ ನಿರಂಜನರ ಬಗ್ಗೆ ಹೆಚ್ಚು ಆಸಕ್ತಿ ಮೂಡಿತು.

ಧಾರವಾಡ ಕಡೆಯಿಂದ ನಿರಂಜನರ ಸಂಪಾದಕತ್ವದಲ್ಲಿ ವಾರಪತ್ರಿಕೆಯೊಂದು ಪ್ರಕಟವಾಗುತ್ತಿತ್ತು. ಕಾರ್ಮಿಕರ-ಬಡಜನರ ಶೋಷಣೆ ವಿರುದ್ಧ ಸುದ್ದಿ ಸಮಾಚಾರಗಳು ಆ ಕ್ರಾಂತಿಕಾರಿ ಪತ್ರಿಕೆಯಲ್ಲಿ ಪ್ರಸಾರವಾಗುತ್ತಿದ್ದುವು. ಜನಮನವನ್ನು ಎಚ್ಚರಗೊಳಿಸುತ್ತಿತ್ತು. ನಿರಂಜನರ ಬರೆಹಗಳು ಜನಜಾಗೃತಿ ಮಾಡುತ್ತಿದ್ದುವು.

ಮುಂದೆ ನಿರಂಜನರು ಬೆಂಗಳೂರಿಗೆ ಬಂದು ನೆಲೆಸಿದರು. 'ಪುರೋಗಾಮಿ ಪ್ರಕಾಶನ' ಸ್ಥಾಪಿಸಿದರು. ಈ ಮೂಲಕ ಕೆಲವು ಪುಸ್ತಕಗಳನ್ನು ಪ್ರಕಟಿಸುತ್ತಿದ್ದರು. ಮೈಸೂರಿಗೆ ಒಮ್ಮೆ ನಿರಂಜನರು ಬಂದಿದ್ದರು. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಹಾ. ಮಾ. ನಾಯಕ, ಯು. ಆರ್. ಅನಂತಮೂರ್ತಿ, ಕೆ. ವಿ. ಸುಬ್ಬಣ್ಣ, ಹೆಚ್. ಎಸ್. ಬಿಳಿಗಿರಿ, ವೃಷಭೇಂದ್ರಸ್ವಾಮಿ, ಮರುಳಸಿದ್ಧ, ಎಂ. ಬಿ. ಮರಕಿಣಿ, ಜೀಶಂಪ, ಹೇಮದಳ ಮೊದಲಾದ ವಿದ್ಯಾರ್ಥಿ ಮಿತ್ರರನ್ನು ಭೇಟಿ ಮಾಡಿದರು. ಅವರೆಲ್ಲರನ್ನು ತಮ್ಮ ಗ್ರಂಥಮಾಲೆಗೆ ಚಂದಾದಾರರನ್ನಾಗಿ ಮಾಡಿಕೊಂಡರು. ನಾನೂ ಒಬ್ಬ ಚಂದಾದಾರ. ಏಳು ರೂಪಾಯಿಗಳ ವಾರ್ಷಿಕ ಚಂದ. ಒಮ್ಮೆಗೇ ಕೊಡಲಾಗದ ಕಷ್ಟದ ದಿನಗಳು ಅವು.

ನಿರಂಜನರ ಜೊತೆ ನಾನೂ ಮೈಸೂರಲ್ಲಿ ಸುತ್ತಾಡಿದ್ದೆ. ಅವರನ್ನು ಬೀಳ್ಕೊಡಲು ರೈಲ್ವೆ ನಿಲ್ದಾಣಕ್ಕೆ ಹೋದೆ. ಬೆಂಗಳೂರಿಗೆ ಹೊರಡಲಿರುವ ಇವರ ಬೋಗಿಯಲ್ಲಿ ಇದ್ದ ಓರ್ವ ನಡುವಯಸ್ಸಿನ ಗಡ್ಡಧಾರಿಗಳ ಪರಿಚಯಮಾಡಿಕೊಟ್ಟರು. ಅವರೇ ಖ್ಯಾತ ಚಿತ್ರಶಿಲ್ಪಿ ಆರ್. ಎಸ್. ಎನ್. ಇಲ್ಲಿ ಈ ಮಹಾನ್ ಕಲಾವಿದರ ಪ್ರಪ್ರಥಮ ಭೇಟಿ ನನಗಾದದ್ದು, ಅದೂ ನಿರಂಜನರಿಂದ.

ನಿರಂಜನರಿಂದ ಒಂದು ಕಾರ್ಡು ಬಂದಿತ್ತು - "ನನ್ನ ಕೈ ಮುರಿದು ಆಸ್ಪತ್ರೆಯಲ್ಲಿರುವೆ. ನಿಮ್ಮಿಂದ ಬರಬೇಕಾಗಿರುವ ಚಂದಾ ಹಣ (ಏಳು ರೂಪಾಯಿ) ಬೇಗ ಕಳಿಸಿರಿ" ಎಂಬ ಅರ್ಥ ಬರುವ ಒಕ್ಕಣೆ. (ಕಾರ್ಡು ನನ್ನ ಬಳಿ ಈಗಲೂ ಇದೆ.) ನಿರಂಜನರ ಅಂದಿನ ಆರ್ಥಿಕ ಪರಿಸ್ಥಿತಿಗೆ ಈ ಒಂದು ಕಾರ್ಡು ಸಾಕ್ಷಿಯಾಗಿದೆ.

ನಿರಂಜನರದು ನೋಡಲು ಆಕರ್ಷಕ ಮುಖಭಾವ, ಗಂಭೀರ ನಡೆ ನುಡಿ. ಕೆಲವು ಹುಡುಗಿಯರು ಇವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿದ್ದುದನ್ನು ನಾನು ಬಲ್ಲೆ. ನಿರಂಜನರು 'ಜನಪ್ರಗತಿ'ಯಲ್ಲಿ 'ಸಾಧನ ಸಂಚಯ' ಪತ್ರಮಾಲೆ ಪ್ರಾರಂಭಿಸಿದ್ದರು. ಇವರ ಬರೆಹ ತುಂಬಾ ಆಕರ್ಷಕವಾಗಿತ್ತು. ಯಾರನ್ನೋ ಕುರಿತು, ಓರ್ವ ಪ್ರಿಯತಮೆಗೆ ಬರೆದ ಪ್ರೇಮ ಪತ್ರದಂತೆ ಎನ್ನುವಂತಿದ್ದುವು. ಈ ಬರೆಹಗಳು ನಿರಂಜನರ ಬಗ್ಗೆ ಏನೇನೋ ಊಹೆಗೆ ಗುರಿಮಾಡಿದುವು. ನಿರಂಜನರು ಪ್ರೀತಿಸುವ ಹುಡುಗಿ ಯಾರಿರಬಹುದು ? ಈ ಪ್ರಶ್ನೆ ಮಿತ್ರರ ಕುತೂಹಲವನ್ನು ಕೆರಳಿಸಿದುವು.

ನಿರಂಜನರು ಮೈಸೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ವೆಂಕಟಲಕ್ಷ್ಮಿ ಅವರನ್ನು (ಅನುಪಮಾ) ಪ್ರೀತಿಸುತ್ತಿದ್ದಾರೆ ಎಂಬ ಗುಮಾನಿ. ತಿಂಗಳಿಗೊಮ್ಮೆ. ವಾರಕ್ಕೊಮ್ಮೆ ನಿರಂಜನರು ಮೈಸೂರಿಗೆ ಬರುವುದು, ವೆಂಕಟಲಕ್ಷ್ಮಿ ಅವರನ್ನು ಭೇಟಿ ಮಾಡುವುದನ್ನು ವೈದ್ಯಕೀಯ ಮಿತ್ರ ಎಂ. ಬಿ. ಮರಕಿಣಿ ನಿಜಮಾಡಿ ತೋರಿಸಿದರು.

ಕಾರಣ, ವೆಂಕಟಲಕ್ಷ್ಮಿ ಅವರು ವಾಸವಾಗಿದ್ದ ತಂದೆಯ ಮನೆಸಾಲಿನಲ್ಲೇ ಮರಕಿಣಿಯ ವಾಸ. ಮರಕಿಣಿಯವರ ಭೇಟಿ ಆದಾಗಲೆಲ್ಲಾ ನಿರಂಜನರ ಮಾತು ಬರುತ್ತಿತ್ತು. ನಿರಂಜನರು ಬಂದು ಹೋದ ಸುದ್ದಿ ನಮಗೂ ತಿಳಿಯುತ್ತಿತ್ತು. ನಿರಂಜನ-ಅನುಪಮಾರ ಪ್ರೇಮ ಸಹಬಾಳ್ವೆಗೆ ತಿರುಗಿದ್ದು, ಮುಂದೆ ತಿರುಪತಿಯಲ್ಲಿ ಲಗ್ನ ಆದದ್ದು, ಆ ಕಾಲದಲ್ಲಿ ಅನ್ಯಜಾತೀಯ ಹುಡುಗಿ ಕೈಹಿಡಿದದ್ದು ನಮಗೆಲ್ಲಾ ಸಂತೋಷ ತಂದಿತು. ಕೆಲವರ ಕುಹಕ ಮಾತುಗಳಿಗೆ ಕಡಿವಾಣ ಹಾಕಿದಂತಾಯಿತು. ಕಾರವಾರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ನಿರಂಜನರು ಕಾರ್ಯದರ್ಶಿಗಳಾಗಿದ್ದ ಸಂದರ್ಭ. ನಾನು ಆ ಭಾಗದ ನಿಸರ್ಗ ಚಿತ್ರಗಳನ್ನು ರಚಿಸುವ ನೆಪದಲ್ಲಿ ಹೋಗಿದ್ದೆ. ನನಗೆ ಅವರು ಊಟ-ವಸತಿ ಏರ್ಪಡಿಸಿದ್ದು ಮರೆಯುವಂತಹದಲ್ಲ.

ನಿರಂಜನರು ತಮ್ಮ ಜೊತೆಯಲ್ಲೇ ವೃದ್ಧ ತಾಯಿಯನ್ನೂ ಕಾಪಾಡಿಕೊಂಡು ಬಂದರು. ಸ್ವತಂತ್ರ ಜೀವನದಲ್ಲೂ ಕಷ್ಟದ ದಿನಗಳಲ್ಲೂ ತಾಯಿಯ ವಾತ್ಸಲ್ಯ ಮಮತೆ ಆಶೀರ್ವಾದ ಸದಾ ಪುತ್ರ ನಿರಂಜನರ ಮೇಲೆ ಇದ್ದಿತು.

ನಿರಂಜನರು ಲಗ್ನವಾಗುವ ಮುಂಚೆ ಮೈಸೂರಿನಲ್ಲಿ ತಾಯಿಯ ಜೊತೆ ವಾಸವಾಗಿದ್ದರು. ಒಮ್ಮೆ ವಾಣಿವಿಲಾಸ ಮೊಹಲ್ಲದಲ್ಲಿ ಕಾರ್ಯಾರ್ಥವಾಗಿ ಹೋಗಿದ್ದ ನಾನು ಹಾಗೆಯೇ ನಿರಂಜನರನ್ನು ನೋಡಿಬರೋಣವೆಂದು ಹೊರಟೆ. ನಾನು ನಿರಂಜನರನ್ನು ಕಂಡಾಗಲೆಲ್ಲಾ ಕಲಾ ಸಂಬಂಧವಾದ ಚರ್ಚೆಯನ್ನು ನಡೆಸುವುದು ವಾಡಿಕೆಯಾಗಿತ್ತು. ಅಂದು ಕಲಾವಿದರ ಮಾತು ಬಂದಾಗ ಅವರು ತಟ್ಟನೆ "ಓಹೋ ನಿಮಗೆ ಇವರು ಗೊತ್ತಿರಬೇಕಲ್ಲಾ ?" ಎಂದರು. ಆ 'ಇವರು' ಯಾರೆಂಬುದು ಅರ್ಥವಾಗದೆ ಎಸ್. ಆರ್. ಅಯ್ಯಂಗಾರ್ಯರ ವಿಷಯವನ್ನು ನಿರಂಜನರು ಹೇಳಲು ಹೊರಟದ್ದು, ಅಯ್ಯಂಗಾರ್ಯರು ಅಚ್ಚುಮೆಚ್ಚಿನ ಸ್ನೇಹಿತರು. ಅದರೆ ನನಗೆ ಅವರ ಜೀವನದ ಪರಿಚಯ ಹತ್ತು ವರ್ಷಗಳಷ್ಟು ಹಳೆಯದಾಗಿತ್ತು. ಎಂತಲೇ ಅಲ್ಲಿಂದ ಅಯ್ಯಂಗಾರ್ಯರನ್ನು ನೋಡಲು ಹೊರಟೆ. ಅವರೂ ನಿರಂಜನರೂ ಒಂದೇ ಮನೆಯ ಆವರಣದ ಮನೆಯಲ್ಲಿ ವಾಸವಾಗಿದ್ದರು. ಅಯ್ಯಂಗಾರ್ಯರ ಕಲಾಪೂರ್ಣ ಭಾವ ಚಿತ್ರಗಳ ಪರಿಚಯ ಬಹಳ ಹಿಂದಿನಿಂದಲೂ ಇದ್ದರೂ ಅಷ್ಟು ಹತ್ತಿರದಿಂದ ಮಾತಾಡಿರಲಿಲ್ಲ. ಈ ಸದವಕಾಶ ನಿರಂಜನರಿಂದಲೇ ಕೂಡಿಬಂದಂತಾಯಿತು. ನಿರಂಜನರಿಗೆ ಕಲಾವಿದರೆಂದರೆ ಅದೆಷ್ಟು ಪ್ರೇಮ ಅಭಿಮಾನ ಎನ್ನುವುದಕ್ಕೆ ನಾಯಿಡು, ಅಯ್ಯಂಗಾರ್ ಅವರ ಸ್ನೇಹ ಸಂಪರ್ಕವೇ ಸಾಕ್ಷಿ.

ನಿರಂಜನರು 'ಮಕ್ಕಳ ವಿಶ್ವಕೋಶ', 'ವಿಶ್ವ ಕಥಾಕೋಶ'ಗಳ ಪ್ರಧಾನ ಸಂಪಾದಕರಾಗಿ ಕನ್ನಡ ಸಾಹಿತ್ಯಲೋಕಕ್ಕೆ ಅನುಪಮ ಸೇವೆ ಸಲ್ಲಿಸಿದ್ದಾರೆ.

ಒಳ್ಳೆಯ ಕತೆಗಾರರಾಗಿ, ಕಾದಂಬರಿಕಾರರಾಗಿ ಅನೇಕ ಕೃತಿಗಳನ್ನು ನೀಡಿ ಜನರನ್ನು ರಂಜಿಸಿದ್ದಾರೆ. 'ಮಕ್ಕಳ ವಿಶ್ವಕೋಶ'ದ ಕಲಾವಿಭಾಗದ ಗ್ರಂಥದ ಓರ್ವ ಸಲಹಾ ಮಂಡಲಿಯ ಸದಸ್ಯನನ್ನಾಗಿ ನನ್ನನ್ನು ನೇಮಿಸಿದ್ದು, ವಿಮರ್ಶಾ ವಿಭಾಗದಲ್ಲಿ ನನ್ನನ್ನು ಪರಿಚಯಿಸಿದ್ದು ನಿರಂಜನರು ನನ್ನ ಬಗ್ಗೆ ತೋರಿಸ ಈ ಎಲ್ಲ ಅಭಿಮಾನವನ್ನು ನಾನೆಂದೂ ಮರೆಯುವಂತಿಲ್ಲ.

ಹಿಂದಿನ ವರ್ಷ ಆರ್. ಎಸ್. ನಾಯುಡು ತೀರಿಕೊಂಡಾಗ ಬೆಂಗಳೂರಿನ ಉಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ನಾಯುಡು ಅವರಿಗೆ ಶ್ರದ್ಧಾಂಜಲಿ ಅರ್ಪಣೆ ಸಲ್ಲಿಸುವ ಸಭೆ. ನಿರಂಜನರೂ ಆಗಮಿಸಿದ್ದರು ಓರ್ವ ಪುತ್ರಿ ಜೊತೆ. ಆರ್. ಎಸ್. ಎನ್. ಅವರ ಆತ್ಮೀಯರಾದ ನಿರಂಜನರು ಅಂದು ಮಾಡಿದ ಭಾಷಣ ಮರೆಯುವಂತಹದಲ್ಲ. “ಮೈಸೂರಿನಲ್ಲಿ ನಾಯುಡು ತೀರಿಕೊಂಡಾಗ ಯಾವ ಅಧಿಕಾರಿಯೂ ಬರಲಿಲ್ಲ” ಎಂದು ಒಬ್ಬರು ನುಡಿದ ಕೊಂಕು ನುಡಿಗೆ ನಿರಂಜನರು “ಕಲಾವಿದ ತಿಪ್ಪೇಸ್ವಾಮಿಗಳು ಇರಲಿಲ್ಲವೆ? ಅವರೇ ಸರ್ಕಾರದ ಪ್ರತಿನಿಧಿಗಳು” ಎಂದು ಹೇಳಿ ಆತನ ಬಾಯಿ ಮುಚ್ಚಿಸಿದರು. ಶ್ರದ್ಧಾಂಜಲಿ ಸಮಾರಂಭ ಮುಗಿಯಿತು. ನಿರಂಜನರು ಕೈಕೋಲಿನ ಆಶ್ರಯ ಪಡೆದು ಕಾರು ಸೇರುವಾಗ ಅವರು ಶ್ರಮ ತೆಗೆದುಕೊಂಡ ಚಿತ್ರ ನೆನಪಾದಾಗ ಲೆಲ್ಲಾ ಹೃದಯ ಹಿಂಡುತ್ತದೆ, ಕಣ್ಣು ಹನಿಗೂಡುತ್ತದೆ. ಚೊಕ್ಕ ಆದರ್ಶ ಸಂಸಾರ, ಜಾತ್ಯತೀತ ವ್ಯಕ್ತಿತ್ವ, ಸ್ನೇಹ ಜೀವಿ, ನಿಷ್ಕಪಟತನ ಹೊಂದಿರುವ ನಿರಂಜನರು ಸಾಹಿತ್ಯ ಲೋಕದಲ್ಲಿ ಅಮೋಘ ಸೇವೆಸಲ್ಲಿಸಿದ್ದಾರೆ. ಯುವ ಪೀಳಿಗೆಗೆ ಆದರ್ಶ ಪ್ರಾಯರಾಗಿದ್ದಾರೆ. ○

ಪ್ರೋತ್ಸಾಹದ ಬೆಂಬಲಿಗ

- ಎಚ್. ಎಸ್. ಪಾರ್ವತಿ

ನಿರಂಜನ ಎಂದ ಕೂಡಲೇ ನನ್ನ ಮನಸ್ಸು ಮೂವತ್ತು ವರ್ಷಗಳ ಹಿಂದಕ್ಕೆ ಹಾರಿಹೋಗುತ್ತದೆ. ಸುಮಾರು ೧೯೫೦ನೇ ವರ್ಷ. ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸಿದ್ದ ನನಗೆ ಪುಸ್ತಕಗಳನ್ನು ಓದುವುದೇ ಮುಖ್ಯ ಕೆಲಸವಾಗಿತ್ತು. ಹೀಗಾಗಿ ನಿರಂಜನರ ಹೆಸರಿನ ಪರಿಚಯ ನನಗೆ ಸಾಕಷ್ಟಿತ್ತು. ಅಲ್ಲದೆ 'ಜನಪ್ರಗತಿ' ಪತ್ರಿಕೆಯಲ್ಲಿ ಅ.ನ.ಕೃ. ಮತ್ತು ನಿರಂಜನರ ನಡುವೆ ನಡೆದ ವಾದ-ವಿವಾದಗಳು ಆಗ ಎಲ್ಲರ ಗಮನ ಸೆಳೆದಿದ್ದವು. ಅ.ನ.ಕೃ. ಅವರ ಎಲ್ಲ ಕಾದಂಬರಿಗಳನ್ನೂ ಓದಿದ್ದ ನನಗೆ ನಿರಂಜನರ ವಾದ

ತುಂಬಾ ಒಪ್ಪಿಗೆಯಾಗಿತ್ತು. ಇದೇ ಸಂದರ್ಭದಲ್ಲಿ ನಮ್ಮ ರಸ್ತೆಯಲ್ಲೇ ನಿರಂಜನ ಬಾಡಿಗೆಗೆ ಮನೆ ಹಿಡಿದಿದ್ದಾರೆಂದು ನಮ್ಮ ಅಣ್ಣ (ಸೂರಿ) ಹೇಳಿದ. ಒಂದು ದಿನ ಸಂಜೆ ನಾನು ಮತ್ತು ನಮ್ಮ ಅತ್ತಿಗೆ ಮನೆಯಲ್ಲಿದ್ದೆವು. ಆಜಾನುಬಾಹುವಾದ ಒಬ್ಬ ವ್ಯಕ್ತಿ; ಬಿಳಿ ಉಡುಪು, ಕೈಯಲ್ಲಿ ಅಗಸನ ಅಂಗಡಿಗೆ ಹಾಕಲು ತೆಗೆದುಕೊಂಡು ಹೋಗುತ್ತಿದ್ದ ಕೆಲವು ಬಟ್ಟೆಗಳು; ನಮ್ಮ ಮನೆಗೆ ಬಂದು "ಸೂರಿ ಇದಾರಾ?" ಎಂದರು. ನಮ್ಮ ಅಣ್ಣ ಎಂದೂ ಆ ಸಮಯದಲ್ಲಿ ಮನೆಯಲ್ಲಿ ಇರುತ್ತಿರಲಿಲ್ಲ. ಆದ್ದರಿಂದ, "ಇಲ್ಲ, ಯಾರು ಬಂದಿದ್ರು ಅಂತ ಹೇಳಬೇಕು?" ಎಂದು ನಾವು ಕೇಳಿದೆವು. ಅವರು "ಪರವಾಗಿಲ್ಲ, ಬೆಳಗ್ಗೆ ಬರ್ತೀನಿ. ನಿರಂಜನ ಬಂದಿದ್ದ ಅಂತ ಹೇಳಿಬಿಡಿ" ಅಂದು ಹೊರಟರು. ನಾವು ತಲೆಯಾಡಿಸಿದೆವು.

ನನಗೆ ನಿರಂಜನರ ಪರಿಚಯವಾದದ್ದು ಹೀಗೆ. ಅಂದಿನಿಂದ ಆ ರಸ್ತೆಯಲ್ಲಿ ಇರುವ ತನಕ ಅವರು ಸಾಮಾನ್ಯವಾಗಿ ಬೆಳಗ್ಗಿನ ಹೊತ್ತು ನಮ್ಮ ಮನೆಗೆ ಬರುತ್ತಿದ್ದರು. ಪತ್ರಿಕೆ ಓದುತ್ತಿದ್ದರು - ಮಾತನಾಡುತ್ತಿದ್ದರು.

ಆದರೆ ನನಗೆ ಮಾತ್ರ ಅವರನ್ನು ಕಂಡರೆ ಏನೋ ಒಂದು ರೀತಿಯ ಭಯ. ಗೌರವಪೂರ್ಣವಾದ ಭಯ. ಎಲ್ಲ ವಿಚಾರಗಳ ಬಗ್ಗೆಯೂ, ಎಲ್ಲರ ಜೊತೆಯೂ ಗಂಟೆಗಟ್ಟಲೆ ಚರ್ಚೆ ಮಾಡಿ ಅತಿ ಮಾತು ಎನ್ನಿಸಿಕೊಂಡಿದ್ದ ನನಗೆ ಅವರೊಂದಿಗೆ ಮಾತನಾಡುವ ಧೈರ್ಯ ಮಾತ್ರ ಇರಲಿಲ್ಲ. ಆಗ ನಾನು ಹಿಂದಿ ಓದುತ್ತಿದ್ದೆ. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಿಶಾರದ ಪರೀಕ್ಷೆಗೆ ಕಟ್ಟಿದ್ದೆ. ನಮ್ಮ ಪಠ್ಯಪುಸ್ತಕ ದಲ್ಲಿದ್ದ 'ದುಃಖ' ಎನ್ನುವ ಒಂದು ಕತೆ ನನಗೆ ತುಂಬಾ ಇಷ್ಟವಾಯಿತು. ಬೇರೇನೂ ಕೆಲಸವಿಲ್ಲದ್ದರಿಂದ ಯಾವ ಉದ್ದೇಶವೂ ಇಲ್ಲದೆ ಅದನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಮೇಜಿನ ಮೇಲೆ ಇಟ್ಟಿದ್ದೆ. ಎಂದಿನಂತೆ ನಮ್ಮ ಮನೆಗೆ ಬಂದ ನಿರಂಜನರ ಕಣ್ಣಿಗೆ ಅದು ಬಿತ್ತು. ಸರಿ, "ಇದನ್ನು ಯಾರು ಅನುವಾದ ಮಾಡಿದ್ದು?" ಎಂದು ವಿಚಾರಿಸಿದರು. ನಾನು ಎಂದು ತಿಳಿದ ಕೂಡಲೇ ನನ್ನನ್ನು ಕರೆದು "ಚೆನ್ನಾಗಿ ಅನುವಾದ ಮಾಡಿದ್ದೀರಿ. ಕೃಷನ್ ಚಂದರ್ ಅವರ ಒಂದು ಕಾದಂಬರಿ ತಂದುಕೊಡ್ತೀನಿ. ಅದನ್ನು ಕನ್ನಡಕ್ಕೆ ಮಾಡಿ" ಅಂದರು. ಅವರ ಮಾತನ್ನು ಕೇಳಿ ನನಗೆ ಸಂತೋಷಕ್ಕಿಂತ ಗಾಬರಿಯೇ ಹೆಚ್ಚಾಯಿತು. ಅದುವರೆಗೆ ನಾನು 'ಸೋದರಿ', 'ವಿಕ್ರಮ' ಈ ಪತ್ರಿಕೆ ಗಳಲ್ಲಿ ಸಣ್ಣಪುಟ್ಟ ಲೇಖನ ಬರೆದಿದ್ದೆನಾದರೂ ನಾನೂ ಬರೆಯಬಲ್ಲೆ ಎನ್ನುವ ನಂಬಿಕೆ ಯಾಗಲೀ, ಲೇಖಕಿಯಾಗಬೇಕೆನ್ನುವ ತೀವ್ರ ಆಸೆಯಾಗಲೀ ನನ್ನಲ್ಲಿ ಇರಲಿಲ್ಲ. ನಿರಂಜನ ಮಾರನೇ ದಿನವೇ ಕೃಷನ್‌ಚಂದರ್ ಅವರ 'ಪರಾಜಯ' ಕಾದಂಬರಿಯನ್ನು ತಂದರು. ಮುನ್ನೂರು ಪುಟಗಳಷ್ಟು ದಪ್ಪ ಪುಸ್ತಕ. ಓದಿದ ಕೂಡಲೇ ಭಾಷೆಯೂ ಸರಿಯಾಗಿ ಅರ್ಥವಾಗಲೊಲ್ಲದು. "ನಾನು ಅನುವಾದ ಮಾಡಲಾರೆ" ಎಂದರೆ ನಿರಂಜನ

ಕೇಳಬೇಕಲ್ಲ. "ಶುರುಮಂತೂ ಮಾಡಿ. ಎಲ್ಲ ಸರಿಹೋಗುತ್ತೆ" ಅಂದರು. ಒಂದೆರಡು ಪುಟಗಳನ್ನು ಮುಗಿಸುವ ತನಕ ತುಂಬಾ ಕಷ್ಟವೇ ಆಯಿತು. ಅನಂತರ ಸ್ವಲ್ಪ ಧೈರ್ಯ ಬಂತು. ಅಂದು ಪ್ರಸಿದ್ಧವಾಗಿದ್ದ 'ಚಿತ್ರಗುಪ್ತ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸುವ ಏರ್ಪಾಡು ಮಾಡಿದರು. ಮುಂದೆ ಹೈದರಾಬಾದಿನ ಸಾಧನಾ ಪ್ರಕಾಶನದ ಮೂಲಕ ಪುಸ್ತಕ ಪ್ರಕಟಿಸಿದರು. ಅದಕ್ಕೆ ಮುನ್ನುಡಿಯನ್ನೂ ಬರೆದರು.

ಒಂದು ಜನಪ್ರಿಯ ವಾರಪತ್ರಿಕೆಯಲ್ಲಿ ಒಂದೇ ಸಮನೆ ಸುಮಾರು ಆರು ತಿಂಗಳ ಕಾಲ ಅನುವಾದ ಪ್ರಕಟವಾದ್ದರಿಂದ ನನ್ನ ಹೆಸರು ಸಾಕಷ್ಟು ಪ್ರಸಿದ್ಧವಾಯಿತು. ಹೀಗಾಗಿ ಸಾಮಾನ್ಯವಾಗಿ ಉದಯೋನ್ಮುಖ ಬರೆಹಗಾರರು ಇದಿರಿಸಬೇಕಾದ, ತಮ್ಮ ಕೃತಿಗಳ ಪ್ರಕಟಣೆಗೆ ಪರದಾಡಬೇಕಾದ ಪರಿಸ್ಥಿತಿ ನನಗೆ ಬರಲಿಲ್ಲ. ನನ್ನ ಯಾವ ಕತೆ ಅಥವಾ ಲೇಖನವೂ ಪತ್ರಿಕಾಲಯದಿಂದ ವಾಪಾಸು ಬಂದದ್ದು ನನಗೆ ನೆನಪಿಲ್ಲ.

ನಾನು ಮಾತ್ರವಲ್ಲ, ನನ್ನಂತಹ ಅನೇಕರನ್ನು ಸಾಹಿತ್ಯಿಕ ಕಾರ್ಯದಲ್ಲಿ ತೊಡಗಿಸಿದವರು ನಿರಂಜನ.

ಸಮಯ ಕಳೆದಂತೆ ನೆನಪು ಮಸುಕಾಗುತ್ತದೆ ಎನ್ನುತ್ತಾರೆ.ಆದರೆ 'ನಿರಂಜನ' ಎಂದ ಕೂಡಲೇ ನನ್ನ ಮನಸ್ಸಿನ ಕಣ್ಣ ಮುಂದೆ ಬಂದು ನಿಲ್ಲುವುದು ಮೂವತ್ತು ವರ್ಷದ ಹಿಂದಿನ ಆ ನಿರಂಜನರೇ ಎನ್ನುವುದು ವಿಚಿತ್ರ ಎನ್ನಿಸಿದರೂ ಸತ್ಯ. ○

೭ ನಿರ್ಲಿಪ್ತ ಸ್ವಾಭಿಮಾನಿ

- ಸುರೇಂದ್ರ ದಾನಿ

ಕುಳುಕುಂದ ಶಿವರಾಯರ ಹೆಸರನ್ನು ನಾನು ಮೊದಲೇ ಕೇಳಿ ಬಲ್ಲವನಾಗಿದ್ದೆ. ನಿರಂಜನರ ಪ್ರತ್ಯಕ್ಷ ಪರಿಚಯ ಆದಾಗ ಅವರ ಆ ಹಿಂದಿನ ಚಿತ್ರದ ಚೌಕಟ್ಟಿನಲ್ಲಿಯೇ ಅವರನ್ನು ಇರಿಸಲು ಪ್ರಯತ್ನಿಸಿದೆ. ಸರಿ ಹೊಂದಲಿಲ್ಲ. ಮತ್ತೆ ಮತ್ತೆ ಪ್ರಯತ್ನಿಸಿದೆ. ಸಫಲತೆ ದೊರೆಯಲಿಲ್ಲ. ಇವೆರಡೂ ಚಿತ್ರಗಳು ಬೇರೆ ಬೇರೆ ಎಂಬ ನಿರ್ಧಾರಕ್ಕೆ ಬಂದೆ. ನಿರಂಜನರ ಬಗ್ಗೆ ನನ್ನ ಅಭಿಪ್ರಾಯವನ್ನು ಬದಲಿಸಿಕೊಂಡೆ.

ಕಮ್ಯೂನಿಸ್ಟರೆಂದರೆ ಅರಾಜಕತಾವಾದಿಗಳು, ಹಿಂಸೆಗೆ ಹೇಸದವರು, ನಿಷ್ಕರುಣಿಗಳು, ಯಾವ ಪಾಪಕ್ಕೂ ಹಿಂದೆಗೆಯದವರು, ಒಮ್ಮೆ ಕಮ್ಯೂನಿಸ್ಟನಾದವನು ಅವರ ಹಿಡಿತದಿಂದ ಹೊರ ಬರುವದೇ ಅಸಾಧ್ಯ, ಇತ್ಯಾದಿ, ಇದು ನಾನು ಕಮ್ಯೂನಿಸ್ಟರ ಬಗ್ಗೆ ರೂಪಿಸಿಕೊಂಡಿದ್ದ ಚಿತ್ರ. ಆಗ ನಾನು ಇನ್ನೂ ಕಾಲೇಜು ವಿದ್ಯಾರ್ಥಿ. "ಭಾರತ ಬಿಟ್ಟು ತೊಲಗಿರಿ" ಚಳವಳಿ ಉನ್ನತ ಮಟ್ಟದಲ್ಲಿದ್ದ ದಿನಗಳವು. ಅತ್ತ ಜಾಗತಿಕ ರಂಗದಲ್ಲಿ ದ್ವಿತೀಯ ಮಹಾಯುದ್ಧ ಕುಂಡ ಪ್ರಖರವಾಗಿ ಉರಿಯುತ್ತಿತ್ತು. ಈ ಯುದ್ಧದಲ್ಲಾದ ಒಂದು ಮಹತ್ವದ ತಿರುವು ಎಲ್ಲರನ್ನೂ ಅಚ್ಚರಿಗೊಳಿಸಿತ್ತು. ಪ್ರಾರಂಭದಿಂದಲೂ ಜರ್ಮನಿಯ ಕಡೆಗಿದ್ದ ರಶಿಯ ಒಮ್ಮೆಲೇ ಪಕ್ಷ ಬದಲಾಯಿಸಿ ಮಿತ್ರ ಪಕ್ಷವನ್ನು ಸೇರಿಕೊಂಡಿತು. ಆ ಕೂಡಲೇ ನಮ್ಮ ದೇಶದ ಕಮ್ಯೂನಿಸ್ಟರಿಗೆ ಇದು ಜನತಾ ಯುದ್ಧವಾಗಿ ಪರಿಣಮಿಸಿತು. ಇದು ರಾಷ್ಟ್ರೀಯವಾದಿ ಭಾರತೀಯರನ್ನು ಬಹಳಷ್ಟು ತಲ್ಲಣಗೊಳಿಸಿತು. ನಾವೆಲ್ಲ ಕಮ್ಯೂನಿಸ್ಟರನ್ನು ದೇಶದ್ರೋಹಿಗಳೆಂದೇ ಕರೆದೆವು.

ಕುಳುಕುಂದ ಶಿವರಾಯರು ಕಮ್ಯೂನಿಸ್ಟರ ಸಂಗವನ್ನು ತ್ಯಜಿಸಿರುವರೆಂದೂ ಕೇಳಿದ್ದೆ. ಧಾರವಾಡವನ್ನು ಬಿಟ್ಟು ಬೆಂಗಳೂರಿಗೆ ಸ್ಥಳಾಂತರ ಹೊಂದಿರುವರೆಂದೂ ತಿಳಿದಿದ್ದೆ. ಅವರ ಪ್ರತ್ಯಕ್ಷ ಪರಿಚಯ ಆದ ಸಂದರ್ಭ ಬಂದದ್ದು ನಾನು ಬೆಂಗಳೂರಿಗೆ ಹೋದ ಮೇಲೆಯೇ. ಭೇಟಿ ಆದಾಗ ಒಮ್ಮೆ ನಮಸ್ಕಾರ ಚಮತ್ಕಾರ ಉಭಯ ಕುಶಲೋಪರಿಗಳಲ್ಲಿ ಕೊನೆಗೊಳ್ಳುತ್ತಿದ್ದ ಸಂಪರ್ಕ ೧೯೬೭ ಚುನಾವಣೆಗೆ ಮುನ್ನ ನಿಕಟಗೊಳ್ಳುವ ಸಂದರ್ಭ ಒದಗಿತು. ತಮ್ಮ ಮಿತ್ರ ರಾಮಕೃಷ್ಣ ಹೆಗಡೆಯವರ ಅಪೇಕ್ಷೆಯಂತೆ ಕಾಂಗ್ರೆಸ್ ಚುನಾವಣಾ ಪ್ರಚಾರ ಸಾಹಿತ್ಯ ಸಿದ್ಧಪಡಿಸುವ ಹೊಣೆಯನ್ನು ಅವರು ನಿರ್ವಹಿಸಿಕೊಂಡರು. ಅವರಲ್ಲಿ ಸಹಾಯ ಮಾಡಲು ನನ್ನನ್ನೂ ಕರೆದರು. ಆಗ ಅವರ ಕಾರ್ಯ ಪದ್ಧತಿ, ಸಂಘಟನಾ ಶೈಲಿ, ಸಮಯ ನಿಷ್ಠೆ ಮತ್ತು ಆತ್ಮ ಗೌರವವನ್ನು ಕಾಪಾಡಿಕೊಳ್ಳುವಿಕೆ ಇವುಗಳನ್ನು ಹತ್ತಿರದಿಂದ ಕಾಣುವ ಅವಕಾಶ ಪ್ರಾಪ್ತವಾಯಿತು. ಅಧಿಕಾರಾರೂಢ ರಾಜಕೀಯ ಪಕ್ಷದ ಕಛೇರಿಯಲ್ಲಿ ಕೆಲಸ ಮಾಡುವುದೆಂದರೆ ಎಷ್ಟೊಂದು ಒತ್ತಡ ಹಸ್ತಕ್ಷೇಪಗಳನ್ನು ಎದುರಿಸಬೇಕಾಗುತ್ತದೆಂಬುದನ್ನು ಹೇಳುವುದೇ ಬೇಡ. ಸ್ವಾಭಿಮಾನವನ್ನಂತೂ ಅನೇಕ ಸಲ ಗಂಟು ಕಟ್ಟಿಟ್ಟೇ ಅಲ್ಲಿ ಪ್ರವೇಶಿಸಬೇಕಾಗುತ್ತದೆ. ಆದರೆ ನಿರಂಜನರು ಇಂಥ ಯಾವ ಪೇಚಿನ ಪ್ರಸಂಗಗಳಿಗೂ ಸಿಕ್ಕಿಕೊಳ್ಳದೆ ನಿರ್ಲಿಪ್ತರಾಗಿದ್ದುಕೊಂಡು ತಾವು ಒಪ್ಪಿಕೊಂಡ ಕೆಲಸವನ್ನು ನಿಗದಿತ ವೇಳೆಗೆ ಸರಿಯಾಗಿ ಪೂರೈಸಿ ಹೊರಬಂದರು. ಈ ಬಗ್ಗೆ ಅವರು ಮೊದಲಿನಿಂದಲೂ ಯೋಗ್ಯವಾದ ಮುಂಜಾಗರೂಕತಾ ಕ್ರಮಗಳನ್ನು ಕೈಕೊಂಡಿದ್ದರು. ಒಬ್ಬ ವೃತ್ತಿನಿರತ ಲೇಖಕ ವ್ಯವಹಾರವನ್ನು ಹೇಗೆ ನಿರ್ವಹಿಸಬೇಕು ಎಂಬುದಕ್ಕೆ ಅದೊಂದು ಉತ್ಕೃಷ್ಟ ಉದಾಹರಣೆ ಆಗಿತ್ತು. ಅವರು

ಈ ಕೆಲಸವನ್ನು ಒಪ್ಪಿಕೊಂಡಾಗ ಮತ್ತು ನಿರ್ವಹಿಸುತ್ತಿರುವಾಗ ಅವರ ಮೇಲೆ ಅನೇಕ ಟೀಕೆ ಟಿಪ್ಪಣಿಗಳು ಕೇಳಿ ಬರುತ್ತಿದ್ದುವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕಮ್ಯೂನಿಸ್ಟ್ ರಕ್ತದ ನಿರಂಜನರು ಕಾಂಗ್ರೆಸ್ ಪ್ರಚಾರ ಸಾಹಿತ್ಯವನ್ನು ವಸ್ತುನಿಷ್ಠವಾಗಿ ತಯಾರಿಸಬಲ್ಲರೇ ಎಂಬುದು ಒಂದು. ಕಾಂಗ್ರೆಸ್ ಪಕ್ಷದಲ್ಲಿಯ ವಿವಿಧ ನಾಯಕರ ತರ ತರಹದ ಪ್ರಭಾವಗಳಿಂದಾಗಿ ಅವರು ತಮ್ಮ ವ್ಯಕ್ತಿತ್ವವನ್ನು ಮತ್ತು ಆತ್ಮಗೌರವವನ್ನು ಉಳಿಸಿಕೊಂಡು ಹೊರ ಬರಬಲ್ಲರೇ? ಎಂಬುದು ಇನ್ನೊಂದು. ಇವೆರಡೂ ಸವಾಲುಗಳನ್ನು ನಿರಂಜನರು ಸಮರ್ಪಕವಾಗಿ ಎದುರಿಸಿ ನಿರೀಕ್ಷೆ ಮೀರಿ ಯಶಸ್ಸು ಗಳಿಸಿದರು. ಅವರು ನಿರ್ಮಿಸಿದ ಪ್ರಚಾರ ಸಾಹಿತ್ಯ ರಾಶಿಯಲ್ಲಿ ಕಮ್ಯೂನಿಜಂನ ಯಾವ ಛಾಯೆಯೂ ಇರಲಿಲ್ಲ; ಅವರು ಸ್ವತಃ ಕಾಂಗ್ರೆಸ್ಸಿಗರಾಗಿ ಪರಿವರ್ತನೆಯನ್ನೂ ಹೊಂದಲಿಲ್ಲ.

ಇದೇ ರೀತಿ ಅವರೊಡನೆ ಇನ್ನೊಂದು ಸಂಪರ್ಕ ಬಂದದ್ದು ಮತ್ತೆ ಕೆಲ ವರ್ಷಗಳ ಅನಂತರ. ಆಗ ನಾನು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟಣೆಗಾಗಿ ನಿತ್ಯ ಧಾರಾವಾಹಿ ಕಾದಂಬರಿಯೊಂದನ್ನು ನೀಡಬೇಕೆಂದು ಅವರನ್ನು ಕೇಳಿಕೊಳ್ಳಲು ಹೋದಾಗ, ಅವರಲ್ಲಿ ಸಿದ್ಧ ಕೃತಿ ಯಾವುದೂ ಇರಲಿಲ್ಲ. ನನ್ನ ಆಗ್ರಹಕ್ಕಾಗಿ ಪ್ರತ್ಯೇಕವಾಗಿ ಒಂದನ್ನು ಬರೆದು ಕೊಡಲು ಒಪ್ಪಿದರು. ಆದರೆ ಅದು ಸಿದ್ಧವಾಗುವ ವರೆಗೂ ನನಗೆ ವ್ಯವಧಾನ ಇರಲಿಲ್ಲ. ಕೊನೆಗೆ ಅವರು ಮೊದಲ ೩–೪ ದಿನಗಳಿಗಾಗುವಷ್ಟು ಹಸ್ತಪ್ರತಿಯನ್ನು ಕೊಟ್ಟು ಕೊನೆವರೆಗೂ ಅದೇ ರೀತಿ ಬರೆಯುತ್ತ ಹೋದರು (‘ಸ್ಮರಣೆಯೊಂದೇ ಸಾಲದೆ?’). ‘ಸ್ಫೂರ್ತಿಗಾಗಿ’ ಕಾದು, ಇಲ್ಲವೆ ಬಿಡುವಿಲ್ಲದ ಬೇರೆ ಕಾರ್ಯಕ್ರಮಗಳಿಂದಾಗಿ ಅವರ ಹಸ್ತಪ್ರತಿ ಎಲ್ಲಿ ಹಿಂದೆ ಬೀಳುತ್ತದೊ ಎಂಬ ಹೆದರಿಕೆ ನನಗೆ ಇತ್ತು. ಆದರೆ ನಿರಂಜನರು ಅದಕ್ಕೆ ಅವಕಾಶ ಕೊಡಲಿಲ್ಲ. ಇದು ಅವರ ಶಿಸ್ತುಬದ್ಧ ಮತ್ತು ಪ್ರಜ್ಞಾವಂತ ಜೀವನಕ್ಕೆ ಸಾಕ್ಷಿ. ಇಂದು ಮಾಡಬೇಕಾದ ಕೆಲಸವನ್ನು ಇಂದೇ ಮಾಡಿ ಮುಗಿಸುವುದು ಅವರ ಸ್ವಭಾವ. ಅದಕ್ಕಾಗಿ ಎಂದೂ ಆಲಸ್ಯತನ ಮಾಡಿದವರಲ್ಲ. ಅದನ್ನೆಂದೂ ನಾಳೆಗೆ ಮುಂದೂಡಿದವರಲ್ಲ. ಹಿಡಿದ ಕೆಲಸವನ್ನು ಹೇಳಿದ ಸಮಯಕ್ಕೆ ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಪೂರೈಸುವುದು ಅವರ ಗುಣ ವೈಶಿಷ್ಟ್ಯ. ಸಹಕಾರೀ ಪ್ರಕಾಶನದ ಆಶ್ರಯದಲ್ಲಿ ಅವರು ಪೂರೈಸಿಕೊಟ್ಟ ಮಕ್ಕಳ ವಿಶ್ವಕೋಶ ನಿರಂಜನರ ಈ ಸ್ವಭಾವಕ್ಕೆ ಪ್ರತ್ಯಕ್ಷ ಸಾಕ್ಷಿ. ಇದನ್ನು ಅವರ ಜಿಗುಟುತನವೆಂದು ನಾನು ಹೇಳುವುದಿಲ್ಲ; ಅವರ ಪ್ರಜ್ಞಾವಂತಿಕೆಯ ಪ್ರತೀಕ ಎನ್ನುತ್ತೇನೆ. ಅವರ ಅಂತಃಪ್ರಜ್ಞೆ ಯಾವಾಗಲೂ ಜಾಗೃತವಾಗಿರುತ್ತದೆ. ಕರ್ತವ್ಯ ಪಾಲನೆಯತ್ತ ಅವರನ್ನು ಸದಾಕಾಲವೂ ತಳ್ಳುತ್ತಿರುತ್ತದೆ. ಇತ್ತೀಚೆಗೆ ಅವರು ಪಾರ್ಶ್ವವಾಯುವಿನ ಪೀಡೆಗೊಳಗಾಗಿ ಹಾಸಿಗೆ ಹಿಡಿದ ಮೇಲೂ ಅಷ್ಟೇ. ದೇಹ ದುರ್ಬಲವಾದರೂ ಮನಸ್ಸು ಅಷ್ಟೇ ದೃಢ; ಚಿತ್ತ ಅಷ್ಟೇ ವಿಶಾಲ; ಪ್ರಜ್ಞೆ ಅಷ್ಟೇ ಜಾಗೃತ

ಈ ರೀತಿ ನಿರಂಜನರು ಕೇವಲ ಒಬ್ಬ ಸಾಹಿತಿ, ಲೇಖಕ ಅಥವಾ ಪತ್ರಿಕೋದ್ಯಮಿ ಆಗಿರದೆ ಒಬ್ಬ ಆದರ್ಶ ವ್ಯಕ್ತಿಯಾಗಿದ್ದಾರೆ. ಅನುಕರಣೀಯ ಶಕ್ತಿಯಾಗಿದ್ದಾರೆ. ಸೋಲನ್ನೊಪ್ಪದೆ ಜೀವನದಲ್ಲಿ ವಿಶ್ವಾಸವನ್ನೂ ಭವಿಷ್ಯದಲ್ಲಿ ಭರವಸೆಯನ್ನೂ ಹೊಂದಿ ಬಾಳು ನಡೆಸುವದನ್ನು ನಿರಂಜನರಿಂದ ಕಲಿಯಬೇಕು. ಅವರ ಬಾಳಸಂಗಾತಿಯಾಗಿ ಬಂದಿರುವ ಡಾ| ಅನುಪಮಾ ಅವರೂ ಅಷ್ಟೇ. ಗಂಡ ಹೆಂಡಿರಾದವರು ಪರಸ್ಪರರನ್ನು ಅರಿತುಕೊಂಡು, ಒಬ್ಬರಿಗೊಬ್ಬರು ಆಸರೆಯಾಗಿ, ಸಂಯಮದ ಆದರೆ ಸಮೃದ್ಧವಾದ ಸಂಸಾರ ಸಾಗಿಸುವದು ಹೇಗೆಂಬುದಕ್ಕೆ ಈ ದಂಪತಿಗಳು ಒಂದು ಉತ್ಕೃಷ್ಟ ಉದಾಹರಣೆಯಾಗಿದ್ದಾರೆ. ○

‘ನೆನೆ ನೆನೆ ಆ ದಿನವ....’

ರಾಮಚಂದ್ರ ಉಚ್ಚಿಲ

‘ನೆನೆ ನೆನೆ ಆ ದಿನವ, ಓ ಭಾರತ ಬಾಂಧವ’ ಎಂದು ಅಡಿಗರು ಹಾಡಿದ ಹಾಡು, ಅದಕ್ಕೆ ಕಾರಣವಾದ ೧೯೪೨ನೇ ಇಸವಿ ನನ್ನ ಪಾಲಿಗೆ ಎಂದೂ ಮರೆಯಲಾರದ ವರ್ಷ. ಆ ವರ್ಷವೇ ನನಗೆ ಕುಳಕುಂದ ಶಿವರಾಯರ ಪರಿಚಯ ಮಂಗಳೂರಲ್ಲಿ ಆದುದು. ಮಂಗಳೂರು ಪುರಭವನದಲ್ಲಿ ‘Here is the noose’ ಎಂದು ಸುದ್ದಿಯನ್ನು ಅರ್ಧಕೇಳಿ ನಾನು ಮತ್ತು ನನ್ನ ಮಿತ್ರ ಉದ್ಯಾವರ ರಾಮಚಂದ್ರ, ಬಾವಟೆ ಗುಡ್ಡೆಯ ದಾರಿ ಹಿಡಿದೆವು. ಶಿವರಾಯರು ಉದ್ಯಾವರ ರಾಮಚಂದ್ರರಿಗೆ ಮೊದಲೇ ಪರಿಚಿತರು. ಉದ್ಯಾವರ ರಾಮಚಂದ್ರ ನನ್ನ ಭಾವ ದಿ| ಎ. ಕೋಟ್ಯಪ್ಪನವರ ಮೂಲಕ ನನಗೆ ಪರಿಚಿತರು. ಮಂಗಳೂರಿನ Transport ಕಚೇರಿಯಲ್ಲಿ ಉದ್ಯೋಗಿಯಾಗಿದ್ದ ರಾಮಚಂದ್ರ ಓದುಬರೆಹಗಳಲ್ಲಿ ವಿಶೇಷ ಆಸಕ್ತಿಯಿದ್ದ ಎಳೆಯರು. ಆಗಲೇ ಅವರು ಶಿವರಾಯರ ಕತೆಗಳನ್ನು ಪತ್ರಿಕೆಗಳಲ್ಲಿ ಓದಿದ್ದರು. ಮಂಗಳೂರಿನ ‘ರಾಷ್ಟ್ರಬಂಧು’ವಿನಲ್ಲಿ ಶಿವರಾಯರು ಕೆಲಸ ಮಾಡುತ್ತಿರುವುದನ್ನು ತಿಳಿದ ರಾಮಚಂದ್ರ ಅವರೊಡನೆ ನಿಕಟ ಸಂಪರ್ಕವಿರಿಸಿಕೊಂಡಿದ್ದರು. ಬಾವಟೆ ಗುಡ್ಡೆಯಲ್ಲಿ ಶಿವರಾಯರ ಪರಿಚಯ ಮಾಡಿಸಿದ ರಾಮಚಂದ್ರ ತುರ್ತಾಗಿ ನನ್ನನ್ನು ಊರಿಗೆ ಕಳುಹಿಸಿಕೊಟ್ಟರು. ಏಕೆಂದರೆ ಆಗ ಸಾರಿಗೆ ಸಂಪರ್ಕ ರೈಲು ಬಂಡಿಯೊಂದೇ. ಮಂಗಳೂರಿಂದ ಬಿಡುವ ಕೊನೆಯ ರೈಲು ಹೊರಟುಹೋಗಿತ್ತು. ನಾನು ಬಂದರಕ್ಕೆ ನಡೆದು ಅಲ್ಲಿಂದ ಕಡವಿನ ದೋಣಿಯಲ್ಲಿ ಉಳ್ಳಾಲ ಸೇರಿ ಮತ್ತೆ ನಾಲ್ಕು ಮೈಲು ಉಚ್ಚಿಲಕ್ಕೆ ನಡೆಯಬೇಕಿತ್ತು.

ನೆನಪು ಹಳೆಯದಾದಷ್ಟೂ ಮರೆವು ಆವರಿಸುವುದು ಸಹಜ ತಾನೆ! ನಾನು ಶಿವರಾಯರನ್ನು ಮತ್ತೆ ಕಂಡುದು ೧೯೪೬ರಲ್ಲಿ ಎಂದು ನೆನಪು. ಆಗ ಅವರು ಹುಬ್ಬಳ್ಳಿಯಲ್ಲಿದ್ದಿರಬೇಕು. 'ರಾಷ್ಟ್ರಬಂಧು' ಬಿಟ್ಟು ಅವರು ಬೆಂಗಳೂರಿಗೋ, ಮೈಸೂರಿಗೋ ಹೋದರೆಂದು ರಾಮಚಂದ್ರರಿಂದ ನಾನು ತಿಳಿದಿದ್ದೆ. ೧೯೪೬ರಲ್ಲಿ ಮುಂಬಯಿಯಲ್ಲಿ ಅವರು ತಮ್ಮ ಸ್ನೇಹಿತರಾದ ಕೋಲಾರ ವಾಸುದೇವರಾಯರೊಡನೆ ತಾವು ಹುಬ್ಬಳ್ಳಿಯಲ್ಲಿ ತೊಡಗಲಿದ್ದ ಅಥವಾ ತೊಡಗಿದ್ದ ಜನತಾ ಸಾಹಿತ್ಯ ಪ್ರಕಾಶನ ಸಂಸ್ಥೆಗೆ ಚಂದಾ ಸಂಗ್ರಹಿಸಲೆಂದು ಬಂದಿದ್ದರು. ಆಗಲೇ ಕಮ್ಯೂನಿಸ್ಟರೆಂದು ಖ್ಯಾತರಾಗಿದ್ದ ಅವರೊಡನೆ ಚಂದಾ ಸಂಗ್ರಹಿಸಲೆಂದು ನಾನು ಮತ್ತು ನನ್ನ ಗೆಳೆಯರು ಅಲ್ಲಿ ಇಲ್ಲಿ ಎಡತಾಕಿದ್ದೆವು. ಅದರಿಂದ ಅವರಿಗೆ ಪ್ರಯೋಜನವಾಗಲಿಲ್ಲವಾದರೂ ನಮಗೆ ಪ್ರಯೋಜನವಾಯಿತು. ಆ ಪ್ರಯೋಜನ : 'ಕಮ್ಯೂನಿಸ್ಟ್ ಸಹಚರರು' ಎಂಬ ಅಭಿಧಾನ ಮತ್ತು ವಾಸುದೇವರಾಯರ ಗೆಳೆತನ.

೧೯೪೭ರಲ್ಲಿ ನಾವು ಕೆಲವು ಮಿತ್ರರು ಕೂಡಿ ಆಗಸ್ಟ್ ೧೫ರಂದು ಒಂದು ವಾರಪತ್ರಿಕೆ ಹೊರಡಿಸುವುದೆಂದು ನಿಶ್ಚಯಿಸಿದ್ದೆವು. ಹುಬ್ಬಳ್ಳಿಯಿಂದ ಕನ್ನಡ ಅಚ್ಚುಮೊಳೆಗಳನ್ನು ತರಿಸಿ, ಮುಂಬಯಿಯ ತಮಿಳು ಸ್ನೇಹಿತರೊಬ್ಬರ ಪ್ರೆಸ್ಸಿನಲ್ಲಿ 'ನುಡಿ' ವಾರಪತ್ರಿಕೆ ಎರಡು ದಿನ ತಡವಾಗಿಯಾದರೂ ಪ್ರಕಟವಾಯಿತು. 'ನುಡಿ' ಪ್ರಕಟಣೆಯ ಅನಂತರ ಶಿವರಾಯರ ಮತ್ತು ನನ್ನ ಪರಿಚಯ, ನುಡಿಯ ಇತರ ಸ್ನೇಹಿತರ ಪರಿಚಯ ನಿಕಟವಾಯಿತು. ಅದೇ ವರ್ಷ ಅವರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ 'ಜನಶಕ್ತಿ' ಪತ್ರಿಕೆಯೂ ನುಡಿಗಿಂತ ಮೊದಲು, ಪ್ರಾಯಶಃ ಮೇ ತಿಂಗಳಲ್ಲಿ ಪ್ರಕಟವಾಗಿತ್ತು. ಅದರಲ್ಲಿ ಪ್ರಕಟವಾಗುತ್ತಿದ್ದ ಅಂಕಣ 'ಸಂಗಾತಿ ಸಂಚಯ'ದ ಮೇಲೆ ಮುಂಬಯಿ ಸರಕಾರ ಕಣ್ಣು ಕೆರಳಿಸಿತು. ಹುಬ್ಬಳ್ಳಿ ಆಗ ಮುಂಬಯಿ ರಾಜ್ಯದ ಒಂದು ಭಾಗ. ಮೊರಾರ್ಜಿ ದೇಸಾಯಿ ಆಗ ಅಲ್ಲಿನ ಗೃಹ ಮಂತ್ರಿ. ಶಿವರಾಯರಿಗೆ ಆ ಸಂಬಂಧದಲ್ಲಿ ವಾರಂಟ್ ಬಂತು. ಅವರು ಭೂಗತರಾಗಿ ಮುಂಬಯಿಗೂ ಬಂದರು. ಆಗ ಅವರಿದ್ದುದು ಅದೇ ವಾಸುದೇವರ ಮನೆಯಾದ 'ದೌಲತ್ ಭವನ'ದಲ್ಲಿ. ದೌಲತ್ತಿಗೂ ಈ ಇಬ್ಬರಿಗೂ ಗಾವುದ ಗಾವುದ ದೂರವಾದರೂ, ಜೀರ್ಣ ಶೀರ್ಣವಾಗಿದ್ದ ಕಲ್ಬಾದೇವಿಯಂಥ ನಿಬಿಡ ಜನವಸತಿಯಿದ್ದ ಆ ದೌಲತ್ ಭವನವನ್ನು ಹುಡುಕುವುದು ಮುಂಬಯಿಯ ಪೊಲೀಸರಿಗೂ ಕಷ್ಟವಾಗಿರಬೇಕು. ಹೀಗೆ ಭೂಗತರಾಗಿ ಮುಂಬಯಿಯಲ್ಲಿ ಅಲೆದಾಡುತ್ತಿದ್ದ ಶಿವರಾಯರ ಮೇಲಿನ ಪೊಲೀಸ್ ದೌರ್ಜನ್ಯವನ್ನು ಕೋರ್ಟ್ ಮೂಲಕ ಇದಿರಿಸಲು ದುಡ್ಡು ಬೇಡವೆ? ಅದಕ್ಕಾಗಿ ನಾವು ಕೆಲವು ಗೆಳೆಯರು ಧನಸಂಗ್ರಹಕ್ಕೆ ತೊಡಗಿದ್ದೆವು. ಧನಸಂಗ್ರಹ ಸಾಕಷ್ಟು ಆಗದಿದ್ದರೂ ಶಿವರಾಯರ ಕುರಿತು, ಅವರ ಕಮ್ಯೂನಿಸ್ಟ್

ಧೋರಣೆಯ ಕುರಿತು ನಮ್ಮವರಿಂದಲೇ ಭರ್ತ್ಸನೆಯ ಮಾತುಗಳನ್ನು ಕೇಳಿದೆವು. ಅದೇ ಸಂದರ್ಭದಲ್ಲಿ ಶಿವರಾಯರು ಮುಂಬಯಿಗೆ ಬಂದು ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದರು.

ಮುದರ್ ಇಂಡಿಯಾ ನೈಟ್ ಹೈಸ್ಕೂಲ್ ಹಾರ್ನ್‌ಬಿ ರಸ್ತೆಯಿಂದ ಜೋಭೀತಲಾವ್‌ನಲ್ಲಿರುವ ಎಲಿಫಿನ್‌ಸ್ಟನ್ ಟೆಕ್ನಿಕಲ್ ಹೈಸ್ಕೂಲ್ ಮಠಾರಕ್ಕೆ ಅದೇ ವರ್ಷ ಬಂದಿತ್ತು. ಒಂದು ಆದಿತ್ಯವಾರ ಅಲ್ಲಿ ಒಂದು ಚರ್ಚಾಕೂಟ. ವಿಷಯ: 'ತುಳು ಒಂದು ಭಾಷೆಯಾಗಿ ಬದುಕಲಾರದು'. ವಿಷಯದ ಪರವಾಗಿ ನಾನು, ವಿರೋಧವಾಗಿ ಶಿವರಾಯರು ಚರ್ಚೆ ನಡೆಸಿದ್ದೆವು. ತಮ್ಮ ತಲೆಯ ಮೇಲೆ ಶಾಸನದ ಕತ್ತಿ ತೂಗುತ್ತಿದ್ದರೂ ನಿರ್ಭೀತರಾಗಿ ಶಿವರಾಯರು ಚರ್ಚೆ, ಭಾಷಣ, ಧನಸಂಗ್ರಹ ಮಾಡುತ್ತಲೇ ಇದ್ದರು. 'ಸಂಗಾತಿಯ ಸಂಚಯ' ಪೊಲೀಸರ ಮೂಲಕ ಅವರ ಬೆನ್ನು ಹತ್ತುತ್ತಲೇ ಇತ್ತು. ಶಿವರಾಯರು ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ಊರಿಂದೂರಿಗೆ ಸಾಗುತ್ತಲೇ ಇದ್ದರು. ಕೊನೆಗೊಮ್ಮೆ ಪೊಲೀಸರು ಅವರನ್ನು ಹಿಡಿದು 'ಬೇಡಿ' ತೊಡಿಸಿದರು. ಆ ಊರು ಈ ಊರು ಅಲೆದಾಡಿಸಿ, ವಿಚಾರಣೆ ನಡೆಸಿ, ದಂಡ ಹಾಕಿ ಬಿಟ್ಟುಬಿಟ್ಟರು. ಹತ್ತು ವರ್ಷ ಸಮತಾವಾದಿಗಳೊಂದಿಗಿದ್ದ ಅವರ ಸಂಬಂಧವೂ ಈ ಸುಮಾರಿಗೆ ಕಡಿದುಹೋಯಿತು. ಅದುವರೆಗೆ ಕೆಂಪು ಕೆಂಪಾಗಿದ್ದ ಕುಳುಕುಂದ ಶಿವರಾಯರು ಆ ಬಣ್ಣವನ್ನು ತಾನಾಗಿ ಕಳಚಿಕೊಂಡು ನಿರಂಜನರಾಗಿ ಹೊಸ ಜೀವನ ಪ್ರಾರಂಭಿಸಿದರು. ಕ್ಷಣಕ್ಷಣಕ್ಕೆ ಬಣ್ಣ ಬದಲಾಯಿಸಿ ಹೊಸ ಆಟ ಮಾಡುವ ಕಮ್ಯೂನಿಸ್ಟ್ ಪ್ರವೃತ್ತಿ ಅವರಿಗೆ ಹಿಡಿಸದೆ ಅವರು ಪಕ್ಷದಿಂದ ಹೊರಬಿದ್ದರೂ ಇಂದಿಗೂ ಅವರನ್ನು ಕಮ್ಯೂನಿಸ್ಟರೆಂದೇ ಸಾಶಂಕ ದೃಷ್ಟಿಯಿಂದ ನೋಡುವುದು ನಡೆದೇ ಇದೆ.

ಇದಾದ ಮೇಲೆ ನಿರಂಜನರು ಬೆಂಗಳೂರಿನಲ್ಲಿ, ಬಳಿಕ ಮೈಸೂರಿನಲ್ಲಿ ನೆಲಸಿದರೆಂದು ನನ್ನ ನೆನಪು. 'ಜನಶಕ್ತಿ', 'ನುಡಿ'ಗಳು ನಿಂತುಹೋಗಿದ್ದವು. ಬೆಂಗಳೂರಿನ 'ಜನಪ್ರಗತಿ'ಗೆ ನಿರಂಜನರು 'ಸಾಧನ ಸಂಚಯ' ಅಂಕಣ ಬರೆಯುತ್ತಿದ್ದರು. "ಮುಂಬಯಿಯ ಕ್ರೀಡಾಚಟುವಟಿಕೆಗಳ ಕುರಿತು ವಾರವಾರ 'ಜನಪ್ರಗತಿ'ಗೆ ಬರೆಯಿರಿ ಸಂಪಾದಕರೊಡನೆ ನಾನು ಮಾತಾಡಿದ್ದೇನೆ" ಎಂದು ನಿರಂಜನರು ಬರೆದು ತಿಳಿಸಿದಾಗ ನನಗೇ ಆಶ್ಚರ್ಯವಾಗಿತ್ತು. ಆದರೂ 'ಮುಂಬಯಿಪತ್ರ' ಬರೆದು ನಿರಂಜನರಿಗೇ ಕಳುಹಿಸಿದೆ. ಅದು ಪ್ರಕಟವಾದಾಗ ನಾನೂ ಒಬ್ಬ ಪತ್ರಿಕೋದ್ಯೋಗಿಯಾದೆನೆಂಬ ಬಿಂಕ. ಅಲ್ಲಿಂದ ಮೇಲೆ ಎರಡು ವರ್ಷ ಈ 'ಮುಂಬಯಿಪತ್ರ' 'ಜನಪ್ರಗತಿ'ಯಲ್ಲಿ ಪ್ರಕಟವಾಗುತ್ತಿತ್ತೆಂದು ನೆನಪು. ನಾನು ವರ್ಷಕ್ಕೊಮ್ಮೆ ಊರಿಗೆ ಹೋಗುವಾಗ ಬೆಂಗಳೂರು ಹಾದಿಯಾಗಿ ಹೋಗಿ, 'ಜನಪ್ರಗತಿ'ಯಿಂದ 'ಮುಂಬಯಿಪತ್ರ'ಗ

ಸಂಭಾವನೆ ಪಡೆದು, ಅಲ್ಲಿಂದ ಚಾಮುಂಡಿ ಎಕ್ಸ್‌ಪ್ರೆಸ್ಸಿನಲ್ಲಿ ಮೈಸೂರು ಸೇರುತ್ತಿದ್ದೆ. ಆಗ ಕೆಲಕಾಲ ನಿರಂಜನರು ತಾಯಿಯೊಡನೆ ಒಂಟಿಕೊಪ್ಪಲಿನ ಗೋಕುಲ ಬಡಾವಣೆಯಲ್ಲಿದ್ದರು. (ವಾಣಿವಿಲಾಸ ಮೊಹಲ್ಲಾ ಗೋಕುಲ ವಿಸ್ತರಣ) ರಾತ್ರಿ ಅಲ್ಲಿ ತಂಗಿದ್ದು ಬೆಳಗ್ಗಿನ ಬಸ್ಸಿನಲ್ಲೋ ಸಂಜೆಯ ಬಸ್ಸಿನಲ್ಲೋ ನಾನು ಮಂಗಳೂರಿಗೆ ಪ್ರಯಾಣಿಸುತ್ತಿದ್ದೆ. ರಾತ್ರಿಯಿಡೀ ನಮ್ಮ ಪಟ್ಟಾಂಗ. ಆ ತಾಯಿ ಗಳಿಗೆಗೊಮ್ಮೆ ಎದ್ದು 'ಶಿವಾ, ಸಾಕೊ ನಿದ್ದೆ ಮಾಡಿ' ಎಂದು ತಾಕೀತುಮಾಡುತ್ತಿದ್ದರು. ಅವರಿಗಾಗಿ ದೀಪತೆಗೆದು ನಾವು ಕತ್ತಲಲ್ಲೇ ಮಾತು ಮುಂದುವರಿಸುತ್ತಿದ್ದೆವು. ಬೆಳಗಿನ ಜಾವ ಎದ್ದು ಜಟಕಾ ಹಿಡಿದೋ ನಡಕೊಂಡೊ ಬಸ್‌ಸ್ಟ್ಯಾಂಡ್‌ನಲ್ಲಿ ನನ್ನನ್ನು ನಿರಂಜನ ಬಿಟ್ಟು ಬರುತ್ತಿದ್ದರು. ಹಗಲು ಅಲ್ಲಿದ್ದರೆ ಎಲ್ಲೆಲ್ಲೊ ಸುತ್ತಾಟ. ಗೋಕುಲ ಬಡಾವಣೆಯ ಪಕ್ಕದಲ್ಲಿ ಉಡುಪಿಯವರದೊಂದು ಹೋಟೆಲಿತ್ತು. ಅಲ್ಲಿನ ಮಾಣಿಗಳು ನಿರಂಜನರ ಕಾದಂಬರಿ, ಕತೆಗಳ ಓದುಗರು. ನಿತ್ಯ ಕಾಫಿಗೆ ಬರುತ್ತಿದ್ದ ನಿರಂಜನರೊಡನೆ ಅವರದೇ ಪುಸ್ತಕದ ವಿಮರ್ಶೆ ಮಾಡುತ್ತಿದ್ದ ಮಾಣಿಗಳೊಡನೆ ಅವರೆಂದೂ ತಾನು 'ನಿರಂಜನ' ಎಂದು ಹೇಳಿದ್ದಿಲ್ಲ. ಒಮ್ಮೆ ಇಂಥ ವಿಮರ್ಶೆ ಮುಗಿಸಿ ಬಿಲ್‌ಕೊಟ್ಟು ಎದ್ದು ಬರುವಾಗ "ಇದನ್ನು ಬರೆದವರು ಯಾರು ಗೊತ್ತೊ, ಇವರು" ಎಂದು ನಾನು ಗುಟ್ಟುರಟ್ಟು ಮಾಡಿದಾಗ ಆ ವಿಮರ್ಶಕರಿಗೆ ತಬ್ಬಿಬ್ಬಾಗಿತ್ತು.

ಜನಪ್ರಗತಿಗೆ ನಾನು ಬರೆಯುವುದು ನಿಂತು ಹೋಯಿತು. ಆಮೇಲೆ 'ಚಿತ್ರಗುಪ್ತ'. ಅದರ ಸಂಪಾದಕ ಶ್ಯಾಮಸುಂದರ ಭಾರದ್ವಾಜರೂ ನಿರಂಜನರೂ ಸ್ನೇಹಿತರು. ಆ ಸ್ನೇಹ ನನಗೂ ದೊರೆಯಿತು. ಪಾನಸೆ, ಶೇಷನಾರಾಯಣರ ಪರಿಚಯವೂ ಆಯಿತು. ಮುಂದೆ 'ಚಿತ್ರಗುಪ್ತ' ಸಹಕಾರೀ ಪ್ರಕಾಶನದಡಿಯಲ್ಲಿ ಪ್ರಕಟವಾಗುವುದೆಂದು ಭಾರದ್ವಾಜರು ಶೇರು ಸಂಗ್ರಹಕ್ಕೆಂದು ಮುಂಬಯಿಗೆ ಬಂದರು. ಶೇರು ಸಂಗ್ರಹವಾಗದಿದ್ದರೂ ನಿರಂಜನರ ಅಭಿಮಾನಿಗಳ ಗುಂಪೊಂದು ಮುಂಬಯಿಯಲ್ಲಿ ಬಲವಾಗುತ್ತಿರುವುದನ್ನು ಭಾರದ್ವಾಜರು ಕಂಡರು. 'ಸಾಧನ ಸಂಚಯ'ದಿಂದ ಪ್ರಭಾವಿತವಾಗಿ 'ಸಾಧನಾ ಟೈಲರ್ಸ್', 'ಸಾಧನಾ ವಠಾರ' ಮುಂಬಯಿಯಲ್ಲಿ ಹೆಸರಾದುವು.

ನಿರಂಜನ ಪ್ರಭಾವಲಯದಲ್ಲಿ ಬೆಳಗಿದವರು ಈ ನಾಡಿನಲ್ಲಿ ಸಾಕಷ್ಟು ಇದ್ದಾರೆ. ತಾನೂ ಬೆಳಗಿ, ಇತರರನ್ನು ಬೆಳಗಿಸುವುದು ಅವರ ರೀತಿ. ಅವರು ಒಳ್ಳೆಯ ಕಾದಂಬರಿಕಾರರು, ಒಳ್ಳೆಯ ಕತೆಗಾರರು, ಒಳ್ಳೆಯ ಅಂಕಣಕಾರರು ಹೌದೋ ಅಲ್ಲವೋ ನಾನು ಹೇಳಲಾರೆ. ಅವರು ಒಳ್ಳೆಯ ಸ್ನೇಹಿತರು ಎಂಬುದಂತೂ ಖಂಡಿತ. ಸಾಹಿತಿಗಳು ಮರೆಗುಳಿಗಳು, ಅವ್ಯವಹಾರಿಗಳು ಎಂಬ ಆಕ್ಷೇಪಣೆ ಸತ್ಯವಾದರೂ ನಿರಂಜನರ ಕುರಿತು ಅದನ್ನು ಹೇಳುವಂತಿಲ್ಲ. ಬದುಕು ಬರೆಹಗಳಲ್ಲಿ ಅವರ ಸತ್ಯನಿಷ್ಠೆ ನಾಡಿನಲ್ಲೇ

ಹೆಸರಾಗಿದೆ. ಬರೆಯುವುದು ಬೇರೆ, ಬಾಳುವುದು ಬೇರೆ, ಅವೆರಡಕ್ಕೂ ಏನೇನೂ ಸಂಬಂಧವಿಲ್ಲವೆಂದು ಕ್ಷಣ ಕ್ಷಣಕ್ಕೆ ಕಾಣುವ ಇಂದಿನ ದಿನಗಳಲ್ಲಿ ಬರೆಯುವುದೂ ಬಾಳುವುದೂ ಒಂದೇ ಎಂದು ತೋರಿಸಿಕೊಟ್ಟ ನಿರಂಜನರಂಥವರು ಪ್ರಾಯಶಃ ಅವರೊಬ್ಬರೆ! ಅವರ ಯೋಚನೆಯ ಪ್ರವಾಹ ಎಂದೂ ಹರಿಗಡಿದದ್ದು ನಾನು ಕಾಣೆ. ಅದ್ದರಿಂದಲೇ ನಡೆಯಲಾರದಂಥ ಅನಾರೋಗ್ಯ ಅವರನ್ನು ಕಾಡುತ್ತಿದ್ದರೂ ಅವರು ಇನ್ನೂ ಬರೆಯುತ್ತಲೇ ಇದ್ದಾರೆ.

ಈಚಿನ ೫–೬ ವರ್ಷಗಳಲ್ಲಿ ಬೆಂಗಳೂರಿಗೆ ನಾನು ಬೇರೆ ಬೇರೆ ಕಾರಣಕ್ಕಾಗಿ ಹೋಗಿ ಬರುತ್ತಿದ್ದೇನೆ. ಹೋದಾಗಲೆಲ್ಲ ನಿರಂಜನರ ಭೇಟಿ. ಭೇಟಿಯಾದಾಗಲೆಲ್ಲ ಹೊತ್ತು ಗೊತ್ತಿಲ್ಲದೆ ನಮಗೆ ಮಾತಾಡುವುದೊಂದೇ ಕೆಲಸ. ಹೊರಡುವಾಗ ಅವರು ಯಾವಾಗಲೂ ನನ್ನಲ್ಲಿ ಒಂದು ಮಾತು ಹೇಳುವುದುಂಟು:

> "ಏನಾಯ್ತು ಸಾಧನಾ ಪತ್ರಾರದಲ್ಲಿ?
> ಏನಾಯ್ತು ಪ್ರಬಂಧ ಸಂಕಲನ?
> ಸುದರ್ಶನವನ್ನು ವಿಸ್ತರಿಸಿ ಬರೆಯುವುದು ಏನಾಯ್ತು?"

ನನ್ನಲ್ಲಿ ಅದಕ್ಕೆ ಉತ್ತರ ಇಲ್ಲ. 'ಬರೆಯಬೇಕು, ಬರೆಯುತ್ತೇನೆ' ಎಂದಿಷ್ಟೇ ಹೇಳಿ ಅಲ್ಲಿಂದ ಹೊರಡುತ್ತೇನೆ. ○

ಗಿಡದ ನೆರಳಿನಲ್ಲಿ

• ಸುಬ್ಬಣ್ಣ ರಂಗನಾಥ ಎಕ್ಕುಂಡಿ

"In my opinion there are no lucky or unlucky people. Simply there are persistent people and people who give up easily."

– *Albert Likhanov*

ಸುಮಾರು ಹತ್ತು ವರ್ಷಗಳ ಹಿಂದಿನ ಮಾತಿದು. ನಿರಂಜನ, ಅವರ ಪತ್ನಿ ಅನುಪಮಾ, ಅವರ ಮಕ್ಕಳು ಕಾರವಾರದ ಪ್ರವಾಸದಲ್ಲಿ ಗೋಕರ್ಣ ಹಾಗೂ ಬಂಕಿಕೊಡ್ಲಗಳಿಗೆ ಬರಲಿರುವರೆಂಬ ಸುದ್ದಿ ಕೇಳಿ ನಮಗೆ ತುಂಬ ಸಂತೋಷವಾಯಿತು. ಬಂದವರು ನಮ್ಮಲ್ಲಿ ಒಂದು ದಿನದ ಮಟ್ಟಿಗಾದರೂ ಉಳಿದು ಹೋಗುವರೆಂದು ನಾವು

ಆತುರ, ಅಪೇಕ್ಷೆಪಟ್ಟಿದ್ದೆವು. ಆದರೆ ಹಲವು ಕಾರ್ಯಕ್ರಮಗಳ ಅನಿವಾರ್ಯತೆಯಿಂದಾಗಿ, ನಮ್ಮಲ್ಲಿ ಅವರು ನೀಡಿದ ಭೇಟಿ, ತೀರ ಅಲ್ಪಾವಧಿಯದಾಗಿತ್ತು. ನಮ್ಮೊಂದಿಗೆ ಅವರು ಕಳೆದ ಒಂದೆರಡು ಗಂಟೆಗಳು ಹಲವು ಗಾಢ ನೆನಪಿನ ಕ್ಷಣಗಳಾಗಿದ್ದವು. ಅವನ್ನು ನಾವಾಗಲಿ, ಅವರಾಗಲಿ, ಎಂದಿಗೂ ಮರೆಯುವಂತಿಲ್ಲ. ಏಕೆಂದರೆ, ನಿರಂಜನ ನಮ್ಮೊಂದಿಗಿದ್ದಷ್ಟು ಕಾಲವನ್ನು. ನಾವಿಬ್ಬರೂ - ಮನೆಯಲ್ಲಲ್ಲ - ಮಾವಿನ ಮರವೊಂದರ ದಟ್ಟ ನೆರಳಿನಲ್ಲಿ ಕಳೆದೆವು.

ಆಗಿನ್ನೂ ಚೈತ್ರಮಾಸ ಕಾಲದ ಕಿಟಕಿಯಿಂದ ಇಣಿಕಿ ನೋಡುತ್ತಲಿತ್ತು. ಮಾವಿನ ಮರದಲ್ಲಿ ಹಣ್ಣಾಗುವದಿರಲಿ - ಇನ್ನೂ ಹೂಗಳೆ ಬಿಟ್ಟಿರಲಿಲ್ಲ. ಹೂವುಗಳು ತುಂಬಿದಾಗ ಇಲ್ಲವೆ ಹಣ್ಣುಗಳು ಸುರಿದಾಗ ಆ ಮರವನ್ನು ಯಾವುದೊ ಅಲೌಕಿಕ ಬೆಡಗು ಬಳ್ಳಿವರಿಯುತ್ತದೆ. ಅದಕ್ಕಿಂತ ಭಿನ್ನವಾದ ಸೊಬಗು, ಹೂವುಗಳು ಮೂಡುವ ಮೊದಲು - ತುಸು ದಿನಗಳ ಮೊದಲು, ಮರವನ್ನೂ ನೆರಳನ್ನೂ ತುಂಬಿಕೊಳ್ಳುತ್ತದೆ. ನಿಸರ್ಗದ ಇಂಥ ಅದ್ಭುತವನ್ನು ಕಂಡು ನಾನು ಮೋಹಿಸಿದ್ದೇನೆ. ಒಂದು ಮರದ ನೆರಳು, ಒಬ್ಬ ಮನುಷ್ಯನ ನೆರಳಿನಂತೆ, ಒಳಗೆ ಹೊರಗೆ ಸಾಗುವ ಸ್ಥಿತ್ಯಂತರಗಳನ್ನೆಲ್ಲ ಸುಂದರವಾಗಿ ಚಿತ್ರಿಸುತ್ತದೆ. ಅಂತರಂಗ ಅನಿಸಿಕೆಗಳನ್ನು ರಂಗವಲ್ಲಿಯ ಹಾಗೆ ಬರೆದಿಟ್ಟಿರುತ್ತದೆ. ಒಮ್ಮೊಮ್ಮೆ ಮರದ ಹೃದಯದ ಒಲವುಗಳು ಅದರ ನೆರಳಲ್ಲಿ ಸೂರೆಗೊಳ್ಳುತ್ತವೆ. ತನ್ನ ಪ್ರೀತಿಯ ರಸವನ್ನು, ಕೊಂಬೆಗಳ ಕೈಯಲ್ಲಿಟ್ಟು ಪುಟ್ಟಪುಟ್ಟ ಕೊಡಗಳಲ್ಲಿ ತೂಗಾಡಿಸಿ ನಲಿಯುತ್ತದೆ. ಅಂಥ ಸಮಯದಲ್ಲಿ ಗಿಡದ ನೆರಳಲ್ಲಿ ಒರಗಿದ ಅದರ ಪರಿಮಳದ ಮೈಯನ್ನು ಕಾಣಬೇಕು; ಅದರ ಪ್ರೀತಿಯ ರಸಧಾರೆಯ ಮಡುವನ್ನು ನೋಡಬೇಕು. ಆಗ ಅದರ ನೆರಳಿನಲ್ಲಿ ಕೂಡುವದೆ ಒಂದು ಸುಖ, ಹಳೆಯ ನೆನಪುಗಳನ್ನು - ಕಾಲದ ಕೊಂಬೆಗಳಿಂದ ತೂಗಾಡಿಸುವದೆ ಒಂದು ಸುಖ.

ಆಗ ನಾನು ಬಂಕಿಕೊಡ್ಲದ ಶಾಲೆಯ ಮುಖ್ಯೋಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದೆ. ಶಾಲೆಯ ಸನಿಹದ ವಿಶಾಲಹಿತ್ತಲದಲ್ಲಿ ನಮ್ಮ ಮನೆ ಇದ್ದಿತು. ಅಲ್ಲೆಲ್ಲ ಸಾಮಾನ್ಯವಾಗಿ ಇದ್ದಂತೆ, ಮನೆಯ ಸುತ್ತಲೂ ಎತ್ತರವಾದ ಗೋಡೆ ಇದ್ದಿತು. ಬೀದಿಯಿಂದ ಮನೆಯೊಳಗೆ ಬರಲು - ಕಲ್ಲಿನ turnpike ಸಂಥ - ಒಂದು ದಣಪೆಯೂ ಇದ್ದಿತು. ಅಂದು ನಿರಂಜನರೂ ಪರಿವಾರವೂ ಬಂದಾಗ - ಒಂದು ಅನಿವಾರ್ಯ ಸಮಸ್ಯೆ ಉಂಟಾಯಿತು. ೧೯೭೦ರಿಂದ ಅವರು ಪಾರ್ಶ್ವಪೀಡಿತರಾಗಿ, ಅದರ ತೀವ್ರ ಆಘಾತವನ್ನೆದುರಿಸಿ ಹೋರಾಡಿದರು. ನಿರಂಜನರು, ಆಲ್ಬರ್ಟ್ ಲಿಖಿನೊವ್ ಹೇಳಿದ 'persistent people' ವರ್ಗಕ್ಕೆ ಸೇರಿದವರು. ಕಷ್ಟಗಳಿಗೂ, ಕಾಯಿಲೆಗೂ ಅವರು ಎಂದಿಗೂ ಹಣೆ ಹಚ್ಚಿದವರಲ್ಲ. ದುರ್ಬಲ ಜೀವಗಳನ್ನು ಮುರಿದುಬಿಡುವ, ಇಲ್ಲವೆ

ಅಳಿಸಿ ಹಾಕುವ ಅವರ ಪ್ರಚಂಡ ಮುಷ್ಟಿಯನ್ನು ತಮ್ಮ ಛಲದ ತೋಳಿನಿಂದ ತಡೆದರು- ಅವರ ಆಗಿನ ಸ್ಥಿತಿಯಲ್ಲಿ, ಹೆಜ್ಜೆ ನಡೆಯುವಂತೆಯೂ ಇರಲಿಲ್ಲ. ಮೆಟ್ಟಿಲುಗಳನ್ನು ಹತ್ತಿ ಒಳಗೆ ಬರುವಂತೆಯೂ ಇರಲಿಲ್ಲ. ದಣಪೆ ದಾಟಿಕೊಂಡು ಬರುವುದಂತೂ ಅಸಾಧ್ಯವೆ ಆಗಿತ್ತು. ಅವರನ್ನು ಒಳಗೆ ಕರೆದೊಯ್ದು, ಉಪಚರಿಸಿ, ತುಸು ವಿಶ್ರಾಂತಿಯ ನಂತರ ಬೀಳ್ಕೊಡಬೇಕೆಂದಿದ್ದ ನಮಗೆ ನಿರಾಸೆ ಆಯಿತು. ನಮ್ಮ ನಿರಾಸೆಗೆ ಇನ್ನೊಂದು ಕಾರಣವೂ ಇತ್ತು. ಎಷ್ಟು ಪರಿಯಲ್ಲಿ ಯೋಚಿಸಿದರೂ, ಅವರಿಗೆ ನಾವು ಮಿಕ್ಕ ಯಾವ ಅನುಕೂಲವನ್ನೂ ಮಾಡಿ ಒಳಗೆ ಕರೆದೊಯ್ಯುವುದು ಸಾಧ್ಯವಿರಲಿಲ್ಲ.

ಕೊನೆಗೆ ಅವರೇ ತೀರ್ಮಾನಿಸಿದರು: "ಎಕ್ಕುಂಡಿ, ಇಲ್ಲಿಯೆ ಗಿಡದ ನೆರಳಿನಲ್ಲಿಯೆ ನಾವು ಕೂಡೋಣ. ಇಲ್ಲಿಯೆ ತುಸು ಹೊತ್ತು ಕಳೆಯೋಣ." ಎರಡು ಕುರ್ಚಿಗಳನ್ನು ತರಿಸಿ, ನಾವು ಗಿಡದ ನೆರಳಿನಲ್ಲಿ ಕುಳಿತೆವು. ಶ್ರೀಮತಿ ಅನುಪಮಾ ಮತ್ತು ಮಕ್ಕಳು ಒಳಗೆ ಹೋದರು. ಆ ದಿನಗಳಲ್ಲಿ, ನಮ್ಮ ಮಗಳು, ಭಾರತಿ, ಚೊಚ್ಚಲು ಮಗುವಿನ ಬರವನ್ನು ಕಾಯುತ್ತ ತವರಿಗೆ ಬಂದಿದ್ದಳು. ಆಕೆ ಶ್ರೀಮತಿ ಅನುಪಮಾ ಅವರ ಕೃತಿಗಳನ್ನು ಓದಿದವಳು, ಅಷ್ಟೇ ಅಲ್ಲ ಅವರ ಅಭಿಮಾನಿಯೂ ಆಗಿದ್ದಳು. ಹೆಣ್ಣು ಮಕ್ಕಳು ಪರಸ್ಪರ ಪರಿಚಯ ಪ್ರೀತಿಗಳನ್ನು ಬೆಳೆಸಿಕೊಂಡು, ಒಳಗೆ ಮಾತಾಡುತ್ತ ಕುಳಿತರು. ಇಲ್ಲಿ ನಾವು ಹಳ್ಳಿಯ ಹೆದ್ದಾರಿಯಂತಿದ್ದ ಪುಟ್ಟ ಬೀದಿಯ ಅಂಚಿನಲ್ಲಿದ್ದ ದಟ್ಟ ನೆರಳಲ್ಲಿ ಕುಳಿತು ಮಾತಾಡುತ್ತಿದ್ದೆವು. ಹಳೆಯ ನೆನಪುಗಳ ಸುರುಳಿ ಮೆಲ್ಲಗೆ ಬಿಚ್ಚಿಕೊಂಡಿತು.

ನಾಲ್ವತ್ತು, ನಾಲ್ವತ್ತೆರಡು ವರ್ಷಗಳ ಹಿಂದೆ ನಡೆದ ವಿಷಯ ಇದು. ಆಗ ತಾನೆ ನಾನು ಕಾಲೇಜಿನ ಗ್ರ್ಯಾಜುಯೆಟ್ ಪರೀಕ್ಷೆ ಮುಗಿಸಿಕೊಂಡು ಬಂದಿದ್ದೆ. ಕಾವ್ಯ, ಸಾಹಿತ್ಯಗಳಲ್ಲಿ ಹಲವು ಕನಸುಗಳನ್ನು ಕಾಣುತ್ತಿದ್ದ ನನಗೆ ನಿರಂಜನರ ಪರಿಚಯವಾದದ್ದು ಒಂದು ಭಾಗ್ಯವೆಂದು ಎಣಿಸಿದ್ದೇನೆ. ಅವರು ಆಗ ಹುಬ್ಬಳ್ಳಿಯಲ್ಲಿ 'ಕಮ್ಯೂನಿಸ್ಟ್ ಪಕ್ಷ'ದ ಸಕ್ರಿಯ ಕಾರ್ಯಕರ್ತರಾಗಿದ್ದು, ಪಕ್ಷದ ಕಛೇರಿಯ ಚೈತನ್ಯ ಕೇಂದ್ರವಾಗಿದ್ದರು. ದೇಶ ಸ್ವತಂತ್ರವಾಗುವ ಮೊದಲ ದಿನಗಳಲ್ಲಿ, ಕಮ್ಯೂನಿಸ್ಟ್ ಪಕ್ಷದ ಧೋರಣೆ, ನಮ್ಮ ಅಂದಿನ ರಾಜಕೀಯ ಸಂದರ್ಭದಲ್ಲಿ ವಿದ್ರೋಹ ಧೋರಣೆಯೆಂದೆ, ಗಣಿಸಲಾಗುತ್ತಿತ್ತು. ಫಾಸಿಸ್ಟ್ ವಿರೋಧಿ ಸಮರವನ್ನು ಪಕ್ಷವು ಬೆಂಬಲಿಸಿದ್ದರಿಂದ, ಆಗಿನ ಧುರೀಣರಿಗೆ 'ಅಪಚಾರ'ವೆಂದೆ ಕಂಡಿತ್ತು. ಹೀಗಾಗಿ ಕಮ್ಯೂನಿಸ್ಟರ 'ಬೇಟೆ'ಯೂ ಪ್ರಾರಂಭಗೊಂಡದ್ದರಿಂದ ಅನೇಕ ಕಾರ್ಯಕರ್ತರು ಭೂಗತರಾಗಿದ್ದರು. ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಉಪಾಧ್ಯಾಯರೂ 'ಅಜ್ಞಾತ' ವಾಸದಲ್ಲಿ ಇದ್ದು, ಆಗಾಗ ಪಕ್ಷದ ಕಚೇರಿಗೆ ನೆರಳಿನಂತೆ, ಬಂದು, ಇದ್ದು, ಹೋಗುತ್ತಿದ್ದರು.

ಅಂಥ ದಿನಗಳಲ್ಲಿ, ನಿರಂಜನರು ಪಕ್ಷವನ್ನೂ, ಅದರ ಧೋರಣೆಯನ್ನೂ ಜನಪ್ರಿಯಗೊಳಿಸಿದರು. ಅವರ ವ್ಯಕ್ತಿತ್ವವೆ ಅಷ್ಟೊಂದು ಆಕರ್ಷಕವಾಗಿದೆ. ಸ್ನೇಹ ಪರವಾದ ನಡೆನುಡಿಗಳಿಂದ, ತಾನು ನಂಬಿದ ಧೋರಣೆಗೆ ಸಂಪೂರ್ಣ ಸಮರ್ಪಿಸಿ ಕೊಂಡು, ಎಲ್ಲರೊಂದಿಗೆ ತನ್ನ ಕನಸನ್ನು ಹಂಚಿಕೊಳ್ಳಲು, ಅವಿರತವಾಗಿ ದುಡಿಯು ತ್ತಿದ್ದ ಅವರ ಉತ್ಸಾಹವು ಎಲ್ಲರನ್ನೂ ಅವರತ್ತ ಕರೆದೊಯ್ಯುತ್ತಿತ್ತು. ಪಕ್ಷದ ರಾಜಕೀಯ ಚಟುವಟಿಕೆಗಳನ್ನು ದಕ್ಷತೆಯಿಂದ ತೂಗಿಸುತ್ತ, ಪಕ್ಷದ ಪರವಾಗಿ ಒಂದು ಪತ್ರಿಕೆಯನ್ನೂ ಅವರಾಗ ನಡೆಸುತ್ತಿದ್ದರು. ವರ್ಕ್‌ಶಾಪಿನ ಸಿಳ್ಳು ಊದಿ ದೊಡನೆಯೆ, ಕಾರ್ಮಿಕರ ಕೈಯಲ್ಲಿಡಲು, ಅವರ ಸಂಗಾತಿಗಳು ಶ್ರಮಿಸುತ್ತಿದ್ದರು. ಕಾವ್ಯ, ಕಲೆ, ಸಾಹಿತ್ಯ ಪ್ರಪಂಚದಲ್ಲಿ ಕಾಲಿಡಲು ಹವಣಿಸುತ್ತಿದ್ದ ಅನೇಕರು, ಪಕ್ಷದ ಕಚೇರಿಯಲ್ಲೆ ಕಾಲಿಡುತ್ತಿದ್ದರು. ಅವರ ಆಗಿನ ಸಂಗಾತಿಗಳು, ದಿ| ಶಿವೇಶ್ವರ ದೊಡ್ಡಮನಿ, ದಿ| ಸದಾಶಿವ, ಹ. ವೆ. ನಾ. ಮುಂತಾದವರು, ಮುಂದೆ ಕನ್ನಡದಲ್ಲಿ ಒಳ್ಳೆಯ ಹೆಸರು ಗಳಿಸಿದರು.

"ವ್ಯಕ್ತಿಯ, ಇಲ್ಲವೆ, ವ್ಯಕ್ತಿನಿಷ್ಠ ಅನುಭವದ ಸುತ್ತ ಬರೆಯುವದಕ್ಕಿಂತ ಒಂದು ಧ್ಯೇಯ, ಒಂದು ಕನಸಿನ ಸುತ್ತ ಸಾಹಿತ್ಯ ರಚಿಸುವದೆ ಆರೋಗ್ಯಕರ" ಎಂದು ಸದಾ ಹೇಳುತ್ತಿದ್ದ ನಿರಂಜನರು, ಯುವಮಿತ್ರರಿಗೆ, ತಮ್ಮ ಬಳಿಯಲ್ಲಿದ್ದ ಅನೇಕ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಓದಲು ನೀಡಿ ನೆರವಾಗುತ್ತಿದ್ದರು. "ಸಾಹಿತ್ಯ, ಕಾವ್ಯ, ಕಲೆ, ಹೆಜ್ಜೆ ಹೆಜ್ಜೆ, ಜನಪರವಾಗಬೇಕು, ವಾಸ್ತವವಾಗಬೇಕು, ಬದುಕಲು ಹೋರಾಡುತ್ತಿದ್ದವರ ಬೆಂಬಲಕ್ಕಿರಬೇಕು" ಎಂದು ಹೇಳುತ್ತಿದ್ದರು. ಆ ದಿನಗಳಲ್ಲೆ ನನಗೆ, ಜಾಕ್ ಲಂಡನ್, ಗಾರ್ಕಿ ಅವರ ಕಥೆ ಕಾದಂಬರಿಗಳನ್ನು ಪರಿಚಯಿಸಿದರು. ಮಯಾಕೊವಸ್ಕಿಯ ಕಾವ್ಯದ ಕ್ಷಿತಿಜ ತೆರೆದು ತೋರಿಸಿದರು. ಮದಾಮ್ ಪಾಸ್ಸನೋರಾರ ಭಾವಪೂರ್ಣ ಉಪನ್ಯಾಸಗಳು, ಪಾಲ್ ರೋಬಸನ್‌ನ ಕಲೆಯ ಮಹತಿ, ನನಗೆ ತಿಳಿದದ್ದು ಆ ದಿನಗಳಲ್ಲೆ. ಕಮ್ಯೂನಿಸಂ ಕ್ರಾಂತಿ, ವಿದ್ರೋಹಗಳ ಹಲ್ಲು, ಪಂಜುಗಳಿರುವ ಕ್ರೂರ ಮೃಗವೆಂದು, ನಮ್ಮ ಧುರೀಣರು ಪದೇ ಪದೇ ಹೇಳುತ್ತಿದ್ದರು. ಆದರೆ ದುಡಿಯುವ ಜನರನ್ನು ವಂಚಿಸಿ, ಸುಲಿಯುತ್ತಿರುವ ಮೃಗ ಗಳಿಂದ ಅವರನ್ನು ವಿಮುಕ್ತಗೊಳಿಸಿ, ಸಂಪದ್ಭರಿತವಾದ ಕ್ರಿಯಾಶೀಲವಾದ ಹೊಸ ಬದುಕನ್ನೂ ಹೊಸ ಜಗತ್ತನ್ನೂ ಸೃಷ್ಟಿಸಲು ಹೆಣಗುವ ಒಂದು ಸಿದ್ಧಾಂತವೆಂಬು ದನ್ನು ಮಾರ್ಕ್ಸ್ ಹಾಗೂ ಲೆನಿನ್, ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದರು. ನಿರಂಜನರು ತಮ್ಮ ಕೃತಿಗಳಲ್ಲಿ, ಪತ್ರಿಕೆಯಲ್ಲಿ ಇದನ್ನೆ ಪ್ರತಿಪಾದಿಸುತ್ತಿದ್ದರು. ಹುಬ್ಬಳ್ಳಿಯ ಅಂದಿನ ಜಿಡ್ಡುಗಟ್ಟಿದ ರಾಜಕೀಯ ಹಾಗೂ ಪ್ರತಿಗಾಮಿ ಸಾಹಿತ್ಯಿಕ ಸಂದರ್ಭದಲ್ಲಿ, ನಿರಂಜನರ 'ಜನಶಕ್ತಿ'ಯು ಹೊಸ ಅಲೆಗಳನ್ನೆಬ್ಬಿಸಿ, ಹೊಸ ಕಣ್ಣುಗಳಿಂದ ನೋಡುವ ಅವಕಾಶ ಉಂಟುಮಾಡಿತು. ಯುವ ಲೇಖಕರಲ್ಲಿ, ಪುರೋಗಾಮಿ ಚಿಂತನೆ ಹಾಗೂ ಬದುಕಿನ

ವಾಸ್ತವಗಳ ಗಾಢ ಕಾಳಜಿಗಳನ್ನು ಮೂಡಿಸುವಂತೆ ಪ್ರೇರಣೆ ನೀಡಿತು. ಪುರೋಗಾಮಿ ಪ್ರಕಾಶನವನ್ನು ಆರಂಭಿಸಿ, ಅಮೇಲೆ ನಿರಂಜನರೂ, ಅವರ ಮಿತ್ರ ವಾಸುದೇವ ಅವರೂ ಹಲವು ಕೃತಿಗಳನ್ನು ಪ್ರಕಟಿಸಿದರು. ಆ ದಿನಗಳಲ್ಲೆ, ಹುಬ್ಬಳ್ಳಿಯಲ್ಲೊಂದು ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಜರಗಿಸಿ ಜಿಲ್ಲೆಯ ಬರೆಹಗಾರರಲ್ಲಿ, ಪುರೋಗಾಮಿ ವಿಚಾರಧಾರೆಗೆ ಒಂದು ಬುನಾದಿಯನ್ನು ಹಾಕಿದರು. ಏಕೀಕರಣದ ಚಳುವಳಿಗೆ, ದುಡಿಯುವ ಜನರ, ರೈತರ ಜೆಂಬಲದ ವ್ಯಾಪಕ ತಳಹದಿಗೆ, ನಿರಂಜನರ ಹಾಗೂ ಅವರ ಸಂಗಾತಿಗಳ ಶ್ರಮವು ಪರೋಕ್ಷವಾಗಿ ನೆರವಾಯಿತೆಂದೂ ಹೇಳಿದರೆ ತಪ್ಪಾಗದು.

ನಿರಂಜನರ ಪತ್ರಿಕೆಯೂ ಪಕ್ಷವೂ ಆ ದಿನಗಳಲ್ಲಿ, ಯುವಜನರಲ್ಲಿ ಉಂಟು ಮಾಡಿದ ಪುರೋಗಾಮಿ ಕಾಳಜಿಗಳೆ, ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಒಂದು ಹೊಸ ಅಲೆಯನ್ನೆಬ್ಬಿಸಿದವು. ಇವರಿಗಿಂತ ಮುಂಚೆ, ಅ. ನ. ಕೃ., ಬಸವರಾಜ ಕಟ್ಟೀಮನಿ, ತ. ರಾ. ಸು., ಚದುರಂಗ ಮುಂತಾದವರು ಇಂಥ ಒಂದು ತಿರುವನ್ನು ಕನ್ನಡಕ್ಕೆ ನೀಡಲು ತುಂಬ ಶ್ರಮಿಸಿದ್ದರು. ಆದರೆ ನಿರಂಜನರ ಪ್ರಯತ್ನದಿಂದಾಗಿ ಅದರ ಅಲೆಗಳು, ಹುಬ್ಬಳ್ಳಿ ಧಾರವಾಡಗಳತ್ತ ಬಂದು ತಲುಪಿ, ಬಡತನ ಹಸಿವುಗಳು ಕೂಡ ಸಾಹಿತ್ಯದ ವಿಷಯವಾಗಬಲ್ಲವೆಂದು ಮನಗಾಣಿಸಿದವು.

ಉಪಾಹಾರದ ನಂತರ ನಿರಂಜನರೂ, ಅವರ ಪರಿವಾರವೂ ಕಾರವಾರದತ್ತ ತೆರಳಿದರು. ಈ ಮುಂಚೆಯೂ ಅವರು ಕಾರವಾರಕ್ಕೆ ಬಂದಿದ್ದರೇನೊ ನಿಜ. ಹಲವಾರು ಬಾರಿ, ಪಕ್ಷದ ಕಾರ್ಯ ಸಂಘಟನೆಗೆ, ಸಂಗಾತಿಗಳನ್ನು ಕಾಣಲಿಕ್ಕೆ. ಮತ್ತೆ ಕೆಲವು ಬಾರಿ ಸರಕಾರ ಅವರನ್ನು ಮೊಕದ್ದಮೆಗೆ ಗುರಿಮಾಡಿದಾಗ. ತಲಚೇರಿ ರಂಗರಾಯರು ಅವರ ಪರವಾಗಿ ವಾದಿಸಿದ್ದರು. ಆ ಮೇಲೆ ಮೊಕದ್ದಮೆಯಿಂದ ಅವರು ಲಘು ಶಿಕ್ಷೆಯೊಂದಿಗೆ ಮುಕ್ತರಾದರು. ಈ ನಡುವಣ ದಿನಗಳಲ್ಲಿ, ಭೂಗತರಾಗಿ, ಪಕ್ಷದ ಸಂಘಟನೆಗಾಗಿ ಅವರು ತುಂಬ ಶ್ರಮಿಸಿದರು. ಅದರಲ್ಲೂ, ಸಾಹಿತ್ಯ ಕ್ಷೇತ್ರದಲ್ಲಿಯ ಅವರ ದುಡಿಮೆ ಯಂತೂ ಅಚ್ಚರಿಯುಂಟುಮಾಡುವಂಥದಾಗಿದೆ. ಈಚೆಗೆ ಬೆಂಗಳೂರಿನಲ್ಲಿ ನಡೆದ ಸನ್ಮಾನ ಸಮಾರಂಭವೊಂದರಲ್ಲಿ ನಿರಂಜನ ಹೇಳಿದರು: "ನಾನು ಕನಸುಗಳನ್ನು ಹೊತ್ತುಕೊಂಡು ಹೊರಟವನು. ಹೀಗಾಗಿ ನನಗೆ ಬದುಕಿನಲ್ಲಿ ಕನಸುಗಳು ಮುಖ್ಯವೆ ಹೊರತು, ವಾಸ್ತವದ ಫಲಾಫಲಗಳಲ್ಲ." ತಮ್ಮ ಕನಸುಗಳನ್ನು ರಾಜಕೀಯದಲ್ಲಿ, ಸಾಹಿತ್ಯದಲ್ಲಿ ಅವರು ಧಾರಾಳವಾಗಿ ಹಂಚಿಕೊಂಡರು. ಬದುಕಿನಲ್ಲಿ ಇವನ್ನು ಎಲ್ಲರ ಹೃದಯಕ್ಕೆ ತಲುಪಿಸಲು ಹೋರಾಡಿದರು. ಈ ಹೋರಾಟದ ದಾರಿ ಅವರಿಗೆ ಬರಿ ಸುಖದಸ್ಪರ್ಶವೇ ಆಗಿದ್ದಿಲ್ಲ. ಎಷ್ಟೆಷ್ಟೊ ಕಷ್ಟಗಳನ್ನು ಅವರು ಎದುರಿಸಿ, ಧೈರ್ಯವಾಗಿ ನಿಂತರು. ಈ ಧೈರ್ಯ, ಛಲ, ಅವಿಶ್ರಾಂತ ದುಡಿಮೆಗಳ ಫಲವಾಗಿ, ಅಪಾರ ಸಾಹಿತ್ಯವನ್ನು ಸೃಷ್ಟಿಸಿದರು.

ರಾಬರ್ಟ್ ರಾಜ್‌ದೆಸ್ತ್ವೆನಸ್ಕಿ ಎಂಬ ರಶಿಯದ ಕವಿ ಒಂದೆಡೆ ಬರೆಯುತ್ತಾನೆ: "ನನ್ನ ಕಾವ್ಯ ಹುಟ್ಟಿದ್ದು, ಇನ್ನೊಬ್ಬರು ಬೇಡಿ ಬಯಸಿದ್ದರಿಂದ; ಮಳೆ ಹಾಗೂ ಹಿಮ ಗಳಿಂದ ಮುಳುಗುವ ಸೂರ್ಯ ಕೆಂಪಿನಲ್ಲಿ ಕರಗಿದ ಬೀದಿಯಿಂದ, ಚಳಿಯಲ್ಲಿ ನಡುಗುವ ಹಕ್ಕಿಗಳಿಂದ ಹಾಗೂ ತಮ್ಮ ಶಬ್ದಗಳಿಂದ ಬರಿಗೈಗಳನ್ನು ಸುಡುವ ಪತ್ರಿಕೆಯ ಪುಟ ಗಳಿಂದ." ನಿರಂಜನರ ಸಾಹಿತ್ಯವಾದರೂ ಹುಟ್ಟಿದ್ದು ಹಾಗೆಯೆ. ಬಾಡಿದ ನಗೆಯ ಹಿಂದಿನ ನೋವು, ಹಸಿದು ನಿದ್ದೆಹೋದವರ ನೆನಪು, ಕೊಯಲಿಗೆ ಕಾದಿರುವ ತೆನೆ ಗಳನ್ನು ತಬ್ಬಿದ ಆಸೆ, ಬರಲಿರುವ ಮುಂಜಾವು, ಇವೆಲ್ಲ ಅವರ ಸಾಹಿತ್ಯ ಸೃಷ್ಟಿಯ ಪ್ರೇರಣೆಗಳಾಗಿವೆ. ಇದನ್ನೆಲ್ಲ ಆಲಿಸುವ ನಿರಂಜನರು ಬಹುಕಾಲ, ನಮ್ಮ ಸಂಗಾತಿ ಆಗಿ ಇನ್ನಷ್ಟು ಸಾಹಿತ್ಯವನ್ನು ಸೃಷ್ಟಿಸಲಿ. ○

ಉದಾರ ಹೃದಯಿ

– ಪದ್ಮಾ ಶೆಣೈ

ಸುಮಾರು ಎರಡೂವರೆ ದಶಕಗಳಷ್ಟು ಹಿಂದೆ ನಿರಂಜನ ದಂಪತಿಗಳನ್ನು ಮೊದಲ ಬಾರಿ ಭೇಟಿಯಾಗುವ ಸುಯೋಗ ಒದಗಿತ್ತು. ಆಗ ನನ್ನದು ಗೌರವ, ಭಯಮಿಶ್ರಿತ ದೃಷ್ಟಿ. ತುಂಬ ಬರೆಯುವವರು; ಜ್ಞಾನ, ಪಾಂಡಿತ್ಯ ಉಳ್ಳವರು, ಡಾಕ್ಟರ್ ಪತ್ನಿಯ ಜೊತೆಗೂಡಿ ಬರುತ್ತಿದ್ದಾರೆ ಎನ್ನುವ ಪೂಜ್ಯಭಾವದಿಂದ ಅವರನ್ನು ಸ್ವಾಗತಿಸುವಾಗ ಒಳಗೊಳಗೇ ಕಂಪಿಸುತ್ತಿದ್ದೆ. ಹಿರಿಯರನ್ನೇ ಮಾತಿಗೆ ಬಿಟ್ಟು ಕಾಫಿ, ತಿಂಡಿಯ ನೆವದಿಂದ ಮನೆಯೊಳಗೇ ಓಡಾಡಿಕೊಂಡಿದ್ದುದೇ ಹೆಚ್ಚು. ಆದರೆ, ಊರು ನೋಡಲೆಂದು ನಮ್ಮವರೂ ಜೊತೆಯಾಗಿ ಒಟ್ಟಿಗೇ ಹೊರಟಾಗ ನಿರಂಜನರನ್ನು ತೀರ ಹತ್ತಿರದಿಂದ ನೋಡುವ ಭಾಗ್ಯ ಲಭಿಸಿತು.

ಬಲು ಸರಳ, ನಿಗರ್ವಿ ಮನುಷ್ಯ. ತಮ್ಮ ನೇರ ಮಾತುಕತೆಗಳಿಂದ ಬಹುಬೇಗ ಆತ್ಮೀಯರಾಗಿ ಹೋದರು. ಬತ್ತೇರಿಯನ್ನು ಹತ್ತಿ ನಿಂತರೆ, ಇದು ಯಾವ ನದಿ, ಯಾವ ಸಮುದ್ರ, ಸಂಗಮವೆಲ್ಲಿ ಎಂಬುದನ್ನೆಲ್ಲ ತಿಳಿದುಕೊಳ್ಳುತ್ತಾ ನಾನೂ ಆಗಾಗ ಬಂದಿಷ್ಟು ಗೀಚುತ್ತೇನೆ ಎನ್ನುವುದನ್ನು ಕೇಳಿದ್ದ ಅವರು ಆಡಿದ ಪ್ರೋತ್ಸಾಹದ ನುಡಿಗಳು ಚಿರಸ್ಮರಣೀಯ. "ಬರೆಯುವುದೊಂದು ಕಲೆ. ತಮಗೆ ಅನ್ನಿಸಿದ್ದನ್ನು, ತಮ್ಮ ಅನುಭವಗಳನ್ನು ಎಲ್ಲರೂ ವ್ಯಕ್ತಪಡಿಸಲಾರರು. ಅದನ್ನು ಜೋಪಾನವಾಗಿ ಪ್ರೀತಿಸಿ, ಬೆಳೆಸಿಕೊಂಡು ಬನ್ನಿ" ಎಂದಿದ್ದರು. ಅವರ ಅಂತರಾಳದಿಂದ ಬಂದ ಈ ಹಾರೈಕೆ, ಆಶೀರ್ವಾದಗಳೇ ನನ್ನಿಂದ ಮೊದಲ ಕಾದಂಬರಿಯನ್ನು ಬರೆಯಿಸಿತು.

ಮುಂದೊಂದು ದಿನ.... ಅವರ ಆರೋಗ್ಯ ಕೈಕೊಟ್ಟಿತು ಎನ್ನುವುದನ್ನು ಕೇಳಿ, ನೋಡಿ ಬರಬೇಕೆನ್ನುವ ತವಕದಿಂದ ಧಾವಿಸಿದ್ದೆ. "ಹೇಗಿದ್ದೀರಾ ?" ಎಂದು ಕೇಳಬೇಕಾದರೇ ನನ್ನ ಹೃದಯವೇ ಬಾಯಿಗೆ ಬಂದಂತಾಗಿತ್ತು. ಆದರೆ ನಿರಂಜನರು ಎಷ್ಟು ಧೈರ್ಯವಾಗಿದ್ದರು ! ಆಕಸ್ಮಾತ್ ಬಂದೆರಗಿದ ದೈಹಿಕ ವಿಕಲತೆಯಲ್ಲೂ, ತಮ್ಮನ್ನು ತಾವು ಬರೆವಣಿಗೆಯಲ್ಲಿ ತೊಡಗಿಸಿಕೊಂಡ ಅವರ ಮನೋದಾರ್ಢ್ಯ ಮೆಚ್ಚುವಂತಹುದು. "ನೋಡಿ.... ಇದ್ದೇನೆ ಹೀಗೆ. ಅನುಪಮಾ ಏನೇನೊ ಚಿಕಿತ್ಸೆ ನಡೆಯಿಸಿದ್ದಾರೆ. ನೀವೇನು ಬರೆದಿದ್ದೀರಿ ? ನಿಮ್ಮ ಕಾದಂಬರಿಯನ್ನು ಧಾರಾವಾಹಿಯಾಗಿರಿಸಲಿಕ್ಕೆ ಪತ್ರಿಕೆಗೆ ಕಳುಹಿಸಿ ಎಂದಿದ್ದೆನಲ್ಲ ? ನನಗೆ ಆ ಸಂಪಾದಕರ ಪರಿಚಯ ಇದೆ. ನಾನೂ ಒಂದು ಮಾತು ಹೇಳ್ತೀನಿ. ನೀವು ಕಳುಹಿಸಿ."

ತಮ್ಮ ಅನಾರೋಗ್ಯದಲ್ಲೂ ನನ್ನ ಬರೆವಣಿಗೆ, ಬೆಳವಣಿಗೆಯ ಬಗ್ಗೆ ಅವರಿಗಿದ್ದ ಕಾಳಜಿಯನ್ನು ಕಂಡು ಮೂಕಳಾದೆ ! ಸಾಹಿತ್ಯ ಸರಸ್ವತಿಯ ಅಳಿಲ ಸೇವೆ ಯಲ್ಲಿ ನನ್ನ ಪಾಲು ಏನಿದ್ದರೂ ಅದರ ಪೂರ್ಣ ಯಶಸ್ಸು ನಿರಂಜನರಿಗೇ ಸೇರಿದ್ದು.

ಇತ್ತೀಚಿಗೆ ಅವರನ್ನು ಕಾಣಲೆಂದೇ ನಮ್ಮವರೊಂದಿಗೆ 'ಕಥೆ'ಗೆ ಹೋಗಿದ್ದೆ. ಮಾತಿನಲ್ಲಿ ಹೊತ್ತು ಕತ್ತಲಾಗಿತ್ತು. ಒಮ್ಮೆ ನಿರಂಜನ ದಂಪತಿಗಳೆಂದರು: "ನಾವು ಜೀವನದಲ್ಲಿ ತುಂಬ ಅಪೇಕ್ಷೆ ಪಡಬಾರ್ದು. ಯಾರಿಂದಲೂ ನಿರೀಕ್ಷಿಸಬಾರ್ದು. ಪ್ರಾಮಾಣಿಕವಾಗಿದ್ದುಕೊಂಡು, ನಮ್ಮ ಕರ್ತವ್ಯಗಳನ್ನು ಮಾಡ್ತಾ, ಬಂದುದೆಲ್ಲವನ್ನೂ ಧೈರ್ಯವಾಗಿ ಇದಿರಿಸಿದರೆ ಹೆಚ್ಚು ಸಂತೋಷವಾಗಿರಬಹುದು. ಅಲ್ವೇ ?" ಎಷ್ಟು ದೊಡ್ಡ ಮಾತು!

ದೇವರುದಿಂಡರು, ಧರ್ಮಶಾಸ್ತ್ರಗಳನ್ನು ಹಚ್ಚಿಕೊಳ್ಳದ ನಿರಂಜನರು ಗೀತಾಸಾರವನ್ನೇ ಧ್ವನಿಸಿದ್ದರು ! ಈ ಉದಾತ್ತ ಚೇತನಕ್ಕೆ ಮತ್ತೆ ಮತ್ತೆ ನಮಸ್ಕರಿಸುತ್ತಾ ಮನಸ್ಸಿನ ತುಂಬ ಸವಿನೆನಪುಗಳನ್ನೂ, ಧೈರ್ಯ, ಸ್ಥೈರ್ಯಗಳನ್ನೂ ತುಂಬಿಕೊಂಡೇ ಬೀಳ್ಕೊಟ್ಟೆ.

○

ಏಕತಾರಿಧಾರಿ

-ಬಿ. ಎ. ಸನದಿ

ಐವತ್ತರ ದಶಕದ ಆರಂಭದ ಕಾಲ. ನಾನು ಹೈಸ್ಕೂಲಿನ ಕಟ್ಟೆಯಿಂದಿಳಿದು ಕಾಲೇಜಿನ ಕಟ್ಟೆಯೇರಿದ ಕಾಲ. ಬೆಳಗಾವಿಯ ಲಿಂಗರಾಜ ಕಾಲೇಜಿನ ಸಾಹಿತ್ಯಿಕ ಪರಿಸರದಲ್ಲಿ ನನ್ನೊಳಗಿನ ಭಾವುಕತೆ ತೊದಲು ನುಡಿಗಳಲ್ಲಿ ಮೂರ್ತರೂಪ ಪಡೆಯಲು ಹವಣಿಸುತ್ತಿದ್ದ ಕಾಲ. ಸಭೆ-ಸಮಾರಂಭಗಳಲ್ಲಿ ಬಸವಣ್ಣನವರ ಕ್ರಾಂತಿಕಾರೀ ವಚನಗಳನ್ನು, ಬೇಂದ್ರೆ-ಪುಟ್ಟಪ್ಪನವರ ಪ್ರಗತಿಶೀಲ ಪದ್ಯಗಳನ್ನು, ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು'ಗಳಂಥ ವೀರಗಾಥೆಗಳನ್ನು ತೋಳೇರಿಸಿ ಹಾಡುವ ಹುಮ್ಮಸ್ಸಿನ ಕಾಲ. ಕಾಲೇಜಿನಲ್ಲಿ ಬರೆಹಗಾರರ ಬಳಗ ಮತ್ತು ನಗರದಲ್ಲಿ ಯುವಕ ಕಲಾವೃಂದದ ಕಾರ್ಯದರ್ಶಿಯೆಂದು ಆಯ್ಕೆಯಾಗಿ ಸಂಘಟನೆಯ ಗರಡೀಮನೆಯಲ್ಲಿ ಪ್ರಥಮಪಾಠಗಳನ್ನು ಪಡೆಯುತ್ತಿದ್ದ ಕಾಲ. ಆ ಕಾಲದಲ್ಲಿ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ನನ್ನ ಕಣ್ಮನಸೆಳೆದ ಒಂಟಿ ನಕ್ಷತ್ರ: ನಿರಂಜನ. ಜನಶಕ್ತಿಯ ಈ ಒಂಟಿ ನಕ್ಷತ್ರ ಯಾರ ಕಣ್ಣಿಗೂ ಬೀಳದಿರುವ ಆ ಕಾಲದಲ್ಲಿ ನಮ್ಮ ಕಣ್ಣಿಗೆ ಬಿದ್ದುದು ಬೆಳಗಾವಿಯ ವಕೀಲ - ಸಾಹಿತಿ ದಿ। ರಂಗರಾವ್ ತಲಚೇರಿಕರ್ ಅವರ ಮನೆಯಲ್ಲಿ, ಒಂದು ಸಂಜೆ. ಅಂದಿನ ಈ ಗುಟ್ಟಿನ ಭೇಟಿಗೆ ಕಾರಣರಾದವರು ನನ್ನ ಸೀನಿಯರ್ ಕವಿಮಿತ್ರರಾದ ಎಂ. ಅಕಬರ ಅಲಿ ಮತ್ತು ಶ್ರೀನಿವಾಸ ತೋಫಖಾನೆಯವರು.

ನಿರಂಜನರ ಸಮಕ್ಷಮ ಪರಿಚಯವಾಗುವ ಮೊದಲೇ ಅವರ ಬಗೆಗೆ ನನ್ನಲ್ಲೊಂದು ಅಭಿಮಾನ ಮೂಡಿಕೊಂಡಿತ್ತು. ಚಿತ್ರಗುಪ್ತ ಮತ್ತು ಜನಪ್ರಗತಿ ಪತ್ರಿಕೆಗಳಲ್ಲಿ ಅವರು ಬರೆಯುತ್ತಿದ್ದ ಅಂಕಣಗಳನ್ನೋದಲು ಆ ಪತ್ರಿಕೆಗಳ ದಾರಿ ಕಾಯುತ್ತಿದ್ದೆ. ಅವರ 'ಸಾಧನ ಸಂಚಯ' ಓದಲು ತಪ್ಪಿದಾಗಲಂತೂ ಮನಸಿನೊಳಗೊಂದು ಬಗೆಯ 'ಬೇಚೈನಿ' ಕುದಿಯುತ್ತಿತ್ತು. ಮುಂದೆ ನಾನೂ ಕರ್ನಾಟಕ ಬಂಧು, ಜಯಕರ್ನಾಟಕ, ಮೊಗವೀರ ಪತ್ರಿಕೆಗಳಲ್ಲಿ ಅಂಥ ಪತ್ರಮಾಲಿಕೆಗಳನ್ನು ಬರೆಯಲು ನಿರಂಜನರ ಸಾಧನ ಸಂಚಯದ್ದೇ ಮೂಲ ಪ್ರೇರಣೆಯೆಂದೊಪ್ಪಿಕೊಳ್ಳಬೇಕು.

ಬದುಕಿಗಾಗಿ, ತಮ್ಮ ಬದುಕಿನ ನಿಲುವು - ನಿಷ್ಠೆಗಳ ಅಭಿವ್ಯಕ್ತಿಗಾಗಿ ಕನ್ನಡದ ಹಲವೊಂದು ಜನಪ್ರಿಯ ಪತ್ರಿಕೆಗಳಲ್ಲಿ ನಿಯಮಿತ ಅಂಕಣಗಳನ್ನೂ, ಕಥೆ, ಲೇಖನಗಳನ್ನೂ ಬರೆಯುತ್ತಿದ್ದ ನಿರಂಜನರನ್ನು ರಂಗರಾವ್ ತಲಚೇರಿಕರ್ ಅವರ ಮನೆಯಲ್ಲಿ ಭೇಟಿಯಾಗಿ ಮಾತಾಡಿದ ಮರುದಿನವೇ ನಮ್ಮ ಕಾಲೇಜಿನ ಬರೆಹಗಾರರ

ಬಳಗದಲ್ಲಿ ನಾನೊಂದು ವಿಜ್ಞಾಪನೆಯನ್ನು ಮಂಡಿಸಿದೆ: "ಸಾಹಿತಿ ನಿರಂಜನರಿಗೆ ಈಗ ನಾವೆಲ್ಲ ಕೈಲಾದಷ್ಟು ಸಹಾಯ ಸಲ್ಲಿಸಬೇಕು." ಈ ವಿಜ್ಞಾಪನೆ ಕೇಳಿ ಕೆಲವೊಂದು ಸ್ನೇಹಿತರು ಸಿಡಿದೆದ್ದರು.ಒಬ್ಬ ಕಮ್ಯೂನಿಸ್ಟ್ ಲೇಖಕನಿಗೆ ಸಹಾಯವೇ ? ಎಂದು ಕಿಡಿ ಕಾರಿದರು. ಆಗಲೇ ಪ್ರಕಟವಾಗಿದ್ದ 'ಕೊನೆಯ ಗಿರಾಕಿ','ವಾರದ ಹುಡುಗ' ದಂಥ ಕಥೆಗಳನ್ನುಬರೆದ ಸಾಹಿತಿ ಕಮ್ಯೂನಿಜಂದಲ್ಲಿ ನಂಬಿಕೆಯುಳ್ಳವನೆಂದು ತಾತ್ಸಾರ ಮಾಡಿ ಬಿಡಲಾಗುತ್ತದೆಯೇ ? ನಮ್ಮಂಥವರ ಅಳಿಲು ಸಹಾಯ ಅವನಿಗೆ ಸಲ್ಲದಿದ್ದರೂ ಆತ ಬದುಕುತ್ತಾನೆ, ಬೆಳೆಯುತ್ತಾನೆ - ಎಂದೆಲ್ಲಾ ವಾದಿಸಿ ನನ್ನ ಪ್ರಿಯ ಮಿತ್ರರಲ್ಲಿ ಅಪ್ರಿಯನಾಗಿದ್ದ ಆ ದಿನಗಳನ್ನು ನಾನು ಮರೆಯುವಂತಿಲ್ಲ. ನನ್ನ ಕಾಲೇಜಿನ ದಿನಗಳಲ್ಲಿಯೇ ಹಲವು ಬಾರಿ ಓದಿ ಮೆಚ್ಚಿಕೊಂಡಿದ್ದ ಆನಂದರ 'ನಾ ಕೊಂದಹುಡುಗಿ' ಬಸವರಾಜ ಕಟ್ಟೀಮನಿಯವರ 'ಬೂಟ್ ಪಾಲೀಶ್', ಭಾರತೀಪ್ರಿಯರ 'ಮೋಚಿ' ನಿರಂಜನರ 'ಕೊನೆಯ ಗಿರಾಕಿ'ಗಳಂಥ ಮರ್ಮಸ್ಪರ್ಶಿ ಕಥೆಗಳಲ್ಲಿ ಯಾವ 'ಇಜಂ' ಅಡಕಗೊಂಡಿರಬಹುದೆಂದು ನನಗಿಂದಿಗೂ ಅರ್ಥವಾಗಿಲ್ಲ. ಪ್ರಗತಿಶೀಲ ಅಥವಾ ಪರಿವರ್ತನಾಶೀಲ ಲೇಖಕರೆಲ್ಲ ನಾಸ್ತಿಕರು ಅಥವಾ ಮಾರ್ಕ್ಸ್‌ವಾದಿಗಳೆಂಬ ವಾದದಲ್ಲಿ ಆಗಲೂ ಹುರುಳಿರಲಿಲ್ಲ; ಈಗಲೂ ಇಲ್ಲ.

೧೯೫೨ರಲ್ಲಿ ಸಮಕ್ಷಮ ಭೇಟಿಯಾದ ನಿರಂಜನರ ಸ್ನೇಹ ಕ್ರಮೇಣ ಬೆಳೆಯುತ್ತಾ ಹೋಯಿತು. ಚಿತ್ರಗುಪ್ತದ ಎಂ. ಎಸ್. ಭಾರದ್ವಾಜ್ ಮತ್ತು ವೆಂಕಟರಾಜ ಪಾನಸೆ ನಮ್ಮ ಆತ್ಮೀಯತೆಗೆ ನೀರೆರೆದು ಪೋಷಿಸಿದವರು. (ಅವರಿಬ್ಬರನ್ನೂ ನಾವಿಂದು ಕಳೆದುಕೊಂಡಿದ್ದೇವೆ.) ೧೯೫೭ರಲ್ಲಿ ಕೆ.ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದಂಗವಾಗಿ ನಡೆದ ಕವಿಗೋಷ್ಠಿಯಲ್ಲಿ ಭಾಗವಹಿಸುವ ಅವಕಾಶ ನನಗೆ ದೊರೆತಿತ್ತು. ಅಖಿಲ ಕರ್ನಾಟಕ ಮಟ್ಟದ ಸಾಹಿತ್ಯ ಸಮ್ಮೇಳನವೊಂದರಲ್ಲಿ ನಾನು ಭಾಗವಹಿಸಿದ್ದು ಅದೇ ಮೊದಲ ಬಾರಿ. ಧಾರವಾಡದ ಶಿಕ್ಷಕ ತರಬೇತಿ ಕೇಂದ್ರದ ವಸತಿಗೃಹದಲ್ಲಿ ನಮ್ಮ ವಾಸ್ತವ್ಯ. ಆ ಸಂದರ್ಭದ ವಿಶೇಷವೆಂದರೆ: ನಾವಿಬ್ಬರು ಕವಿಗಳಿದ್ದ ಕೋಣೆಯ ಒಂದು ಬದಿಯ ಕೋಣೆಯಲ್ಲಿ ನಿರಂಜನ ದಂಪತಿಗಳು ! ಮತ್ತೊಂದು ಬದಿಯಲ್ಲಿ ಮುಂಬಯಿಯ ಕಾದಂಬರಿಕಾರ ವ್ಯಾಸರಾಯ ಬಲ್ಲಾಳರು ! ಈ ಇಬ್ಬರೂ ಮಿತಭಾಷಿ ಸಾಹಿತಿಗಳು ನನಗೆ ಅತ್ಯಂತ ಆತ್ಮೀಯರಾದುದು ಅದೇ ಸಂದರ್ಭದಲ್ಲಿ. ಆಗ ತಾನೆ ನಿರಂಜನರ ಕೈ ಹಿಡಿದು ಅವರ ಬದುಕಿಗೆ ಮೆರುಗು ತರುತ್ತಿದ್ದ ಅನುಪಮಾ, ಅವರ ಬೆಂಗಳೂರಿನ ಮನೆಗೆ ಹೋದರೆ, ನನಗಿಂದಿಗೂ ಬಿಸಿ ಬಿಸಿ ಚಪಾತಿ ಮಾಡಿ ಉಣಬಡಿಸುತ್ತಾರೆ!

ಈ ಮಧ್ಯೆ ಕರ್ನಾಟಕ (ಆಗ ಮೈಸೂರು) ಸರಕಾರದ ಸಮಾಜ ವಿಕಾಸ ಇಲಾಖೆಯಲ್ಲಿ ಸಮಾಜ ಶಿಕ್ಷಣಾಧಿಕಾರಿಯ ಕೆಲಸಕ್ಕೆ ನಾನು ಅರ್ಜಿ ಮಾಡಿಕೊಂಡಿದ್ದೆ.

ಸಂದರ್ಶನ ಮುಗಿದ ಮರುದಿನ ಪಾನಸೆಯವರೊಂದಿಗೆ ನಿರಂಜನರ ಮನೆಗೆ ಹೋದೆ. ನಾನು ಬೆಂಗಳೂರಿಗೆ ಹೋದದ್ದೂ ಅದೇ ಮೊದಲ ಸಲ.

ಮುಂದಿನೆರಡು ತಿಂಗಳಲ್ಲಿ ನನ್ನ ಆಯ್ಕೆಯಾದ ಬಗ್ಗೆ ಸರಕಾರೀ ಆದೇಶ ಬಂತು. ಆ ಕುರಿತಾದ ನನ್ನ ಕಾಗದ ತಲುಪಿದ್ದೇ ತಡ, ನಿರಂಜನರ ಆತ್ಮೀಯ ಅಭಿನಂದನಾ ಪತ್ರವೂ ಬಂತು.

೧೯೫೮ರ ಆರಂಭದಲ್ಲಿ ನಿರಂಜನ ದಂಪತಿಗಳು ಧಾರವಾಡಕ್ಕೇ ಬಂದು ಬಿಡಾರ ಹೂಡಿದರು; ಆಗ ಬೆಳಗಾವಿ ಜಿಲ್ಲೆಯಲ್ಲೇ ಇದ್ದ ನನಗೆ ಹತ್ತಿರವಾದರು. ಸ್ನಾತಕೋತ್ತರ ಶಿಕ್ಷಣಕ್ಕಾಗಿ ಧಾರವಾಡದಲ್ಲಿದ್ದ ನನ್ನ ತಮ್ಮ ಅಪ್ಪಾಸಾಹೇಬನ ಮೂಲಕ ನಿರಂಜನ ದಂಪತಿಗಳ ಕ್ಷೇಮಸಮಾಚಾರಗಳೂ, ಅವರ ಹೊಸ ಪುಸ್ತಕಗಳೂ ನನಗೆ ಬಂದು ತಲುಪುತ್ತಿದ್ದವು. ೧೯೬೨ರಲ್ಲಿ ನಾನು ಬೆಂಗಳೂರಿಗೇ ವರ್ಗವಾಗಿ ಹೋಗುವ ಹೊತ್ತಿಗೆ ನಿರಂಜನರು ಮತ್ತೆ ಮರಳಿ ಬಂದಿದ್ದರು. ಬೆಂಗಳೂರಿನ ನನ್ನ ವಾಸ್ತವ್ಯದಲ್ಲಿ ನಾನು ಯಾವ ಕವಿ-ಲೇಖಕರ ಮನೆಗಳಿಗೆ ಹೋಗುವ ರೂಢಿಯನ್ನೇ ಇಟ್ಟುಕೊಂಡಿರಲಿಲ್ಲ. ಹೋದರೆ ನಿರಂಜನರ ಮನೆ; ಭಾರದ್ವಾಜರ ಮನೆ; ನಿತ್ಯವೂ ಕಚೇರಿಯಲ್ಲಿ ಕಾವ್ಯಾನಂದರ ಭೇಟಿ. ಮಿಕ್ಕುವೆಲ್ಲಾ ಹಾದಿ-ಬೀದಿಯ ಮೇಲಿನ 'ಮುಲಾಖಾತ್'ಗಳು; ಸಭೆ-ಸಮ್ಮೇಳನಗಳಲ್ಲಿ ಅವಸರವಸರದ ಹಸ್ತಲಾಘವಗಳು. ಆ ಸಂಕೋಚ ಪ್ರವೃತ್ತಿಯಿಂದ ನನಗೇ ಹಾನಿಯೆಂದು ಹೊಳೆದದ್ದು ಮಾತ್ರ ಬಲು ತಡವಾಗಿ. ನನ್ನ 'ನೀರಿಲ್ಲದ ನಲ್ಲಿ' ಕಥಾ ಸಂಕಲನದ ಪ್ರಸ್ತಾವನೆಯಲ್ಲಿ ನಿರಂಜನರು ಗುರುತಿಸಿದಂತೆ ನನಗೆ ಸಾಹಿತಿಗಳಿಗಿಂತಲೂ ಜನ ಸಮುದಾಯವೇ ಹೆಚ್ಚು ಹತ್ತಿರ; ಹೆಚ್ಚು ಸಮಾಧಾನಕರ.

ಸಮಕ್ಷಮ ಭೇಟಿಯಲ್ಲಾಗಲೀ, ಪತ್ರ ಮುಖೇನವಾಗಲೀ, ನಿರಂಜನರು ನನ್ನ ಬಗ್ಗೆ ತೋರುತ್ತ ಬಂದಿರುವ ಮಮತೆ ಏಕಪ್ರಕಾರ, ಧಾರಾಕಾರ! ಅವರ ಸ್ನೇಹ, ಸೌಜನ್ಯ ಮತ್ತು ಶಿಸ್ತಿನ ಕಾರ್ಯಪದ್ಧತಿಗಳನ್ನು ಕಂಡು ನಾನು ಅನೇಕ ಸಲ ಮೂಕನಾಗಿದ್ದೇನೆ. ಅವರು ಸೃಷ್ಟಿಸಿದ ಸಾಹಿತ್ಯದ ಆಳಗಲಗಳ ಕುರಿತಾಗಿ ಬರೆಯುವ ಸಂದರ್ಭ ಇದಲ್ಲವಾದರೂ ಅವರ ವಿಷಯವಿವೇಚನೆ ಮತ್ತು ಗದ್ಯಶೈಲಿಯ ವೈಶಿಷ್ಟ್ಯ ಅನನ್ಯವಾದುದೆಂದೇ ನನಗೆನಿಸುತ್ತದೆ. ಕನ್ನಡ ಸಾರಸ್ವತ ಪ್ರಪಂಚದ ಸೃಜನಾತ್ಮಕ ಹಾಗೂ ಸಂಪಾದಕತ್ವದ ಕ್ಷೇತ್ರಗಳಲ್ಲಿ ನಿರಂಜನರೇರಿದ ಶಿಖರಗಳು ಅನೇಕ. 'ಒಂದರೊಳು ಒಂದಿಲ್ಲ ಒಂದರೊಳು ಕುಂದಿಲ್ಲ' ಎನ್ನುವ ರೀತಿಯಲ್ಲಿ ಅವರು ಹಲವೊಂದು ಬೃಹತ್ ಕಾರ್ಯಗಳನ್ನು ಮಾಡಿ ಪೂರೈಸಿದವರು. ಎಷ್ಟೆಲ್ಲಾ ಮಾಡಿದರೂ ಇನ್ನೂ ಮಾಡುವುದುಂಟೆಂಬ ಅದಮ್ಯ ಆಶಾವಾದಿ ನಿರಂಜನ ವಿನಯ ಸಂಪನ್ನತೆಗೆ ಮೂರ್ತಿಮಂತ

ದೃಷ್ಟಾಂತ. ನನ್ನ ಇತ್ತೀಚಿನ ಭಾವಗೀತಗಳ ಸಂಕಲನ 'ಗೀತಗುಂಜನ' ಕಳಿಸಿದಾಗ ಅವರು ಬರೆದ ಮಾತು: "ಸಂಕಲನ ಓದಿದಾಗ ನೂರಾರು ಚಿತ್ರಗಳು ಕಣ್ಣಿಗೆ ಕಟ್ಟಿದುವು. ಬರೆಹಗಾರನ ಬಾಳು ಸುಟ್ಟಿತು; ನಾನು ಏಕತಾರಿಧಾರಿ ಬೀದಿಗಾಯಕನಾಗಬೇಕಿತ್ತು. ಎಂದುಕೊಂಡೆ." ○

ಗುಣಗ್ರಾಹಿ ಕರ್ಮಯೋಗಿ

–ಚಿ. ನ. ಮಂಗಳಾ

ನಿರಂಜನರನ್ನು ನಾನು ಮೊದಲು ಕಂಡದ್ದು 'ಬನಶಂಕರಿ'ಯಲ್ಲಿ.

೧೯೫೪ರಲ್ಲಿ ನಾನು ವಿಜ್ಞಾನದ ವಿದ್ಯಾರ್ಥಿನಿಯಾಗಿ ಎರಡನೆ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಕಟ್ಟಿದ್ದೆ. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗ. ಆದರೆ ನನ್ನ ಮನಸ್ಸೆಲ್ಲಾ ನಾಟಕದ ಮೇಲೆ. ನನಗೆ ಮೊದಲಿಂದ ನಾಟಕದ ಗೀಳು. ಕಾಲೇಜಿನಲ್ಲಿ ಯಾರೋ ಅಧ್ಯಾಪಕರು ವಿಜ್ಞಾನದ ವಿದ್ಯಾರ್ಥಿನಿಯರಿಗೆ ನಾಟಕವಾಡಲು ಬರುತ್ತದೆಯೇ ಎಂದಿದ್ದೇ ಸವಾಲಾಗಿ ನಾವು - ಕೆಲವರು ವಿಜ್ಞಾನದ ವಿದ್ಯಾರ್ಥಿಗಳು ಆ ಸವಾಲನ್ನು ಸ್ವೀಕರಿಸಿ ನಾಟಕರಂಗಕ್ಕಿಳಿದಿದ್ದೆವು. ನಮ್ಮ ಸಹಾಯಕ್ಕೆ ಸಾಹಿತಿ ನರೇಂದ್ರಬಾಬು ಅವರು. ಪರೀಕ್ಷೆಗೆ ಓದುವುದನ್ನೂ ಬದಿಗೊತ್ತಿ ನಾಟಕದ ಪ್ರ್ಯಾಕ್ಟೀಸ್. ಪರೀಕ್ಷೆಯಲ್ಲಿ ಪಾಸೋ ಫೇಲೋ ಎಂಬುದಲ್ಲ ನನ್ನ ಮುಂದಿದ್ದ ಪ್ರಶ್ನೆ. ನಾಟಕದಲ್ಲಿ ಪಾಸೋ ಫೇಲೊ?ಮಾರ್ಚ್ ೯, ೧೯೫೪ರಲ್ಲಿ ನಾಟಕವಾಡಿದೆವು ಅದ್ಭುತವಾಗಿ. ನಾವು ಪಾಸ್. ನಮ್ಮ ತಂಡಕ್ಕೆ ಪ್ರಥಮ ಬಹುಮಾನ! ನನಗೆ ವಯ್ಯಕ್ತಿಕವಾಗಿ ಎರಡನೆ ಬಹುಮಾನ. ಆರ್ಟ್ಸ್ ತಂಡದ ನಾಯಕಿ ದಿವಂಗತ ನರಸುಗೆ ಪ್ರಥಮ ಬಹುಮಾನ. ಆದರೆ ಅವರ ತಂಡಕ್ಕೆ ಎರಡನೆ ಬಹುಮಾನ. ಕೇಳಬೇಕೆ ನಮ್ಮ ಉತ್ಸಾಹ. ನನಗೆ ಬಹುಮಾನ ಬಂತು. ನಿರಂಜನ ಎಂಬ 'ತರುಣ ಲೇಖಕರ ಪಳಗಿದ ಲೇಖನಿ'ಯ ಕೃತಿ, ಕಾದಂಬರಿ 'ಬನಶಂಕರಿ'. ನನಗೆ ನಾಟಕದ ಗೀಳು ಒಂದುಕಡೆಯಾದರೆ, ಸಾಹಿತ್ಯದ ಗೀಳು ಇನ್ನೊಂದು ಕಡೆ. ಮನೆಗೆ ಬಂದೆ. ಬಹುಮಾನ ಬಂದ ಪುಸ್ತಕವನ್ನು ನನ್ನ ಅಜ್ಜಿಗೆ ತೋರಿಸಿ ಆ ರಾತ್ರಿಯೇ ಓದಿ ಮುಗಿಸಿದೆ. ನಿರಂಜನರನ್ನು ಕಂಡೆ. ಮೊದಲ ಮಾತಿನಲ್ಲಿ ಲೇಖಕರು "ಬನಶಂಕರಿಯನ್ನೋದಿದ ಮೇಲೆ ತಮ್ಮ ಅಭಿಪ್ರಾಯವೇನೆಂಬುದನ್ನು ಓದುಗರು ಬರೆದು ತಿಳಿಸುವರೆಂಬ ನಂಬಿಕೆ ನನಗಿದೆ" ಎಂದು ಬರೆದಿದ್ದನ್ನು ನೋಡಿ ಸಂತೋಷಪಟ್ಟು ಮಾರನೆಯ ದಿನವೇ ಅವರಿಗೊಂದು ಕಾಗದ ಗೀಚಿ ಹಾಕಿದೆ. ನಿರಂಜನರು ಚಿತ್ರಿಸಿದ 'ಅಮ್ಮ'ಯ ಪಾತ್ರ ನನಗೆ

ಬಹಳವಾಗಿ ಹಿಡಿಸಿತ್ತು. ಜೊತೆಗೆ ಕಾದಂಬರಿಕಾರರು ಆ ಕಾದಂಬರಿಯನ್ನು, ಬದುಕಿನ ಆರಾಧಕಳಾದ 'ಸಾಧನಾ'ಗೆ ಎಂದು ಅರ್ಪಿಸಿದ್ದರು. ಯಾರಿರಬಹುದು ಈ 'ಸಾಧನಾ' ಎಂಬ ಕುತೂಹಲವೂ ತಲೆಯೊಳಗೆ ಹೊಕ್ಕಿತು. ಆದರೆ ಅದಕ್ಕೆ ಅಷ್ಟು ಗಮನಕೊಡದೆ ನನ್ನ ತಲೆಯನ್ನು ತುಂಬಿದ 'ಅಮ್ಮಿ'ಯ ಪಾತ್ರವನ್ನೇ ಯೋಚಿಸುತ್ತ ದಿನಗಳೆದೆ.

೧೯೫೪ರಲ್ಲಿ 'ಬನಶಂಕರಿ' ನಿರಂಜನರನ್ನು ಪರಿಚಯಮಾಡಿಕೊಟ್ಟಾಗ ನನಗೆ ನಿರಂಜನರ ಪರಿಚಯವಾಗಲೀ ಅನುಪಮಾ ಅವರ ಪರಿಚಯವಾಗಲೀ ಇರಲಿಲ್ಲ. ಅವರನ್ನು ನೋಡಿಯೂ ಇರಲಿಲ್ಲ. ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸಲೂ ಇಲ್ಲ. ಅನಂತರ ನಾನು ಬೆಂಗಳೂರಿನ ಸೆಂಟ್ರಲ್‌ಕಾಲೇಜಿನಲ್ಲಿ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿನಿಯಾಗಿದ್ದಾಗ ಒಂದು ದಿನ - ವರುಷ - ದಿನ - ನನಗೆ ನೆನಪಿಲ್ಲ - ಒಂದು ಕರೆಯೋಲೆ ಬಂದಿತು. ನಿರಂಜನ - ಅನುಪಮಾ ಅವರ ವಿವಾಹದ ಪ್ರಯುಕ್ತ ಬೆಂಗಳೂರಿನಲ್ಲಿ ಒಂದು ಸ್ನೇಹ ಸಂಜೆ - ಸಂತೋಷಕೂಟ ಏರ್ಪಾಟಾಗಿತ್ತು. ಅದಕ್ಕೆ ಮಮತೆಯ ಕರೆಯೋಲೆ. ಆದರೆ ನಾನು ಹೋಗಲಿಲ್ಲ. ಏಕೆ ಹೋಗಲಿಲ್ಲವೋ ಜ್ಞಾಪಕವಿಲ್ಲ. ಗೊತ್ತಿಲ್ಲದವರ ಮದುವೆಗೆ ಹೇಗೆ ಹೋಗುವುದು ಎಂದೋ ಏನೋ - ಅಂತೂ ಹೋಗಲಿಲ್ಲ.

ಮುಂದೆ ೧೯೭೫ರಲ್ಲಿ ಡೆಕ್ಕನ್‌ಹೆರಾಲ್ಡ್ ಪತ್ರಿಕೆ ಕರ್ನಾಟಕದ ಲೇಖಕಿಯರ ಬಗ್ಗೆ ಒಂದು ವಿಶೇಷ ಲೇಖನವನ್ನು ಬರೆದುಕೊಡುವಂತೆ ನನ್ನನ್ನು ಕೇಳಿತು. ಆ ಲೇಖನಕ್ಕಾಗಿ ನಾನು ಆಗ ಬೆಂಗಳೂರಿನಲ್ಲೇ ಇದ್ದ ಡಾ। ಅನುಪಮಾ ಅವರನ್ನು ನೋಡಲು ಹೋದೆ. ಅನುಪಮಾ ಅವರ ಜೊತೆಯಲ್ಲಿ ನಿರಂಜನರನ್ನೂ ಕಂಡೆ. ೫೪ರಲ್ಲಿ ನಾನು ಅವರಿಗೆ ಬರೆದ ಪತ್ರವನ್ನು ನಾವಿಬ್ಬರೂ ಜ್ಞಾಪಿಸಿಕೊಂಡೆವು. ನಾನು ಅವರಿಗೆ ಬನಶಂಕರಿಯನ್ನು ಓದಿದ ಮಾರನೇ ದಿನವೇ ಒಂದು ಪತ್ರ ಬರೆದೆ ಎಂದು ಹೇಳಿದೆನಲ್ಲವೆ ? ಆ ಪತ್ರ ಬರೆಯುವಾಗ ಕೆಲವು ತಪ್ಪುಗಳನ್ನು ಮಾಡಿದ್ದು ಆ ತಪ್ಪುಗಳನ್ನು ದಯವಿಟ್ಟು ತಿದ್ದಿಕೊಳ್ಳಿ ಎಂದು ಇನ್ನೊಂದು ಪತ್ರ ಬರೆದಿದ್ದೆ !

ನಿರಂಜನರಿಗೆ ನಮ್ಮ ತಂದೆ ದಿವಂಗತ ಸಿ. ನರಸಿಂಹಮೂರ್ತಿ (ಐ.ಎ.ಎಸ್.) ಅವರ ಬಗ್ಗೆ ಅಪಾರ ಅಭಿಮಾನ. ವ್ಯಕ್ತಿಯ ಆಂತರಿಕ ಶ್ರದ್ಧೆ, ಶಿಸ್ತು, ಸ್ನೇಹಪರತೆಯನ್ನೂ ಮಾನವೀಯತೆಯನ್ನೂ ಮೆಚ್ಚುವ ನಿರಂಜನರು ನಮ್ಮ ತಂದೆಯವರನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ೧೯೭೮ರಲ್ಲಿ ನಮ್ಮ ತಂದೆ ಒಂದು ರಾತ್ರಿ ಮಲಗಿದವರು ಮೇಲೇಳದೆ ಇಹದ ಯಾತ್ರೆ ಮುಗಿಸಿದಾಗ ಮನೆಗೆ ಬಂದವರಲ್ಲಿ ನಿರಂಜನರೂ ಒಬ್ಬರು. ಅವರು ತಮ್ಮ 'ದಿನಚರಿ'ಯಲ್ಲಿ ನಮ್ಮ ತಂದೆಯ ಬಗ್ಗೆ ಹೀಗೆ ಬರೆದಿದ್ದಾರೆ- "ಐವತ್ತಾರು ಐವತ್ತೇಳು ವರ್ಷಗಳ ಕಾಲ ತಮ್ಮ ಸಜ್ಜನಿಕೆಯಿಂದ, ಸಂಸ್ಕಾರದಿಂದ ಹಲವು

ಸಹಸ್ರ ಹೃದಯಗಳನ್ನು ಗೆದ್ದಿದ್ದ ನರಸಿಂಹಮೂರ್ತಿಯವರು ಇರಲಿಲ್ಲ. ಸಮಾಜಕ್ಕಾಗಿ ಸದಾ ಮಿಡಿದ ಎದೆಗುಂಡಿಗೆ ಯಾವುದೋ ಅವೇಳೆಯಲ್ಲಿ ಕೆಲಸ ನಿಲ್ಲಿಸಿತ್ತು. ಆರು ವರುಷಗಳ ಹಿಂದೆ ಮೊದಲ ಬಾರಿ ಅವರನ್ನು ಕಂಡಾಗ ಅವರ ಸರಳ ವ್ಯಕ್ತಿತ್ವಕ್ಕೆ ಮಾರುಹೋಗಿದ್ದೆ. ನಿಷ್ಠೆ, ಶಿಸ್ತು, ನಿಸ್ಪೃಹತೆ - ಇವುಗಳನ್ನು ಜೀವನ ವಿಧಾನವಾಗಿ ರೂಪಿಸಿಕೊಂಡ ಅಲ್ಪಸಂಖ್ಯಾತರ ಸಾಲಿನಲ್ಲಿ ನರಸಿಂಹಮೂರ್ತಿ ಅಗ್ರಮಾನ್ಯರಾಗಿದ್ದರು."

ಈ ಸಾಲುಗಳನ್ನು ಓದಿ ನನಗೆ ನಿರಂಜನರ ಬಗ್ಗೆ ಅಭಿಮಾನ ಉಕ್ಕಿ ಹರಿಯಿತು. ಒಬ್ಬ ಸಾಹಿತಿ ಸಾಹಿತಿಯಲ್ಲದ ಒಬ್ಬ ಆಡಳಿತಗಾರರ ಧೀಮಂತ ವ್ಯಕ್ತಿತ್ವ ವನ್ನು ಸಹೃದಯತೆಯಿಂದ ವಿವೇಚಿಸಿ, ಆತನಲ್ಲಿ ಆತ್ಮೀಯತೆ, ಸಹೃದಯತೆಗಳನ್ನು ಕಂಡು ಅವನ್ನು ಗೌರವಿಸಿದ್ದು ನನಗೆ ಬಹಳವಾಗಿ ಹಿಡಿಸಿತು.

ಇನ್ನೊಬ್ಬರ ಗುಣವನ್ನು ಕಂಡು ಗೌರವಿಸುವುದು ನಿರಂಜನರಲ್ಲಿರುವ ವಿಶೇಷ ಗುಣ.

೧೯೭೭ರಲ್ಲಿ ನಾನು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕ ಳಾಗಿದ್ದವಳು ಇದ್ದಕ್ಕಿದ್ದ ಹಾಗೆ ಒಂದು ಮಧ್ಯಾಹ್ನ ನನ್ನ ಹುದ್ದೆಗೆ ರಾಜೀನಾಮೆ ಕೊಟ್ಟು ಮನೆಗೆ ಬಂದೆ.

ನನ್ನ ತಂದೆ ಕಾಲವಾಗಿದ್ದರು. ತಮ್ಮ, ತಂಗಿ ಓದುತ್ತಿದ್ದರು. ನಾನು ನನಗಿದ್ದ ಖಾಯಂ ಕೆಲಸವನ್ನು ಬಿಟ್ಟು ಕೆಲಸವಿಲ್ಲದೆ ಮನೆಯಲ್ಲಿದ್ದೆ. ಆಗ ನನ್ನ ನೆರವಿಗೆ ಬಂದವರು ನಿರಂಜನ. ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶವಲ್ಲಿ ಸಹಾಯಕ ಸಂಪಾದಕಿಯಾಗಿ ಕೆಲಸ ಕೊಟ್ಟರು. ಆರ್ಥಿಕವಾಗಿ, ಮಾನಸಿಕವಾಗಿ ನನಗೆ ಬೆಂಬಲವಾಗಿ ನಿಂತರು. ಒಂದು ವರ್ಷ ಕಾಲ ಜ್ಞಾನಗಂಗೋತ್ರಿಯಲ್ಲಿ ಕೆಲಸ ಮಾಡುವಾಗ ನಾನು ನಿರಂಜನರ ಹಲವು ಹತ್ತು ಮುಖಗಳನ್ನು ಕಂಡೆ. ಮೊದಲನೆಯದು ಅವರ ಶಿಸ್ತು, ಅವರ ಶ್ರದ್ಧೆ. ಹಣ ಕಾಸಿನ ವ್ಯವಹಾರದ ಬಗ್ಗೆ ಅವರಿಗಿದ್ದ ಕಟ್ಟುನಿಟ್ಟು. ಜ್ಞಾನಗಂಗೋತ್ರಿಯಲ್ಲಿ ಪ್ರಧಾನ ಸಂಪಾದಕರಿಗೊಂದು ವ್ಯವಸ್ಥೆ, ಸಂಪಾದಕ ವರ್ಗದ ಉಳಿದವರಿಗೊಂದು ವ್ಯವಸ್ಥೆ ಇರಲಿಲ್ಲ. ಎಲ್ಲರಿಗೂ ಒಂದೇ ರೀತಿ ನೀತಿ. ಎಲ್ಲರೂ ಇಷ್ಟು ಹೊತ್ತಿಗೆ ಬರಬೇಕೆಂದರೆ ನಿರಂಜನರನ್ನೂ ಸೇರಿಸಿ ಕೊಂಡು ಎಂದರ್ಥ. ಜ್ಞಾನಗಂಗೋತ್ರಿಯಂಥ ಬೃಹತ್ ಯೋಜನೆಯಲ್ಲಿ ಒಂದು ಪೈಸೆ ಹಣ ಹೇಗೆ ಪೋಲಾಗಲಿಲ್ಲವೋ ಹಾಗೆಯೇ ಒಂದು ನಿಮಿಷ ಕಾಲವೂ ವ್ಯರ್ಥ ವಾಗಲಿಲ್ಲ. ವಿಶ್ವಕೋಶದ ಪ್ರತಿ ಪದವೂ, ಪ್ರತಿ ವಿಷಯವೂ 'ಅಥೆಂಟಿಕ್' ಆಗಿರ ಬೇಕೆಂದೂ, ವ್ಯಾಕರಣ ಉಚ್ಚಾರಣೆ ಇತ್ಯಾದಿಗಳಲ್ಲಿ ತಪ್ಪಾಗಬಾರದೆಂದೂ

ನಿರಂಜನರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಬರೆದದ್ದನ್ನು ತಿದ್ದಿ, ತಿದ್ದಿದ್ದನ್ನು ಓದಿ, ಓದಿದ್ದನ್ನು ಮತ್ತೆ ತಿದ್ದಿ ಹೀಗೆ ಕೆಲಸ ಸಾಗಿ ಅಂತೂ ನಿಯಮಿತ ವೇಳೆಗೆ ವಿಶ್ವಕೋಶ ಸಿದ್ಧ. ಅಂತಹ ಬೃಹತ್ ಯೋಜನೆಯನ್ನು ಸಿಬ್ಬಂದಿಯ ಕಾಲವಾಗಲಿ, ಸರ್ಕಾರದ ಹಣವಾಗಲಿ ಎಳ್ಳಷ್ಟೂ ವ್ಯರ್ಥವಾಗದಂತೆ ಹಾಗೆ ನಡೆಸಲು ಒಬ್ಬ ನಿರಂಜನರಿಂದ ಮಾತ್ರ ಸಾಧ್ಯ. ಜ್ಞಾನಗಂಗೋತ್ರಿ ನನಗಂತೂ ಜ್ಞಾನದ ಹೊಸ ದಿಕ್ಕನ್ನೇ ತೆರೆದು ತೋರಿತು.

ಡಾ| ವಿ. ಕೃ. ಗೋಕಾಕರು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದಾಗ 'ಸಮನ್ವಯ ಸಮಿತಿ' ಎಂಬ ಒಂದು ಸಾಹಿತ್ಯ - ಸಂಸ್ಕೃತಿಗಳನ್ನೊಳಗೊಂಡಂತೆ ಸಹಚಿಂತಕರ ಸ್ನೇಹ ಕೂಟವನ್ನೊಂದನ್ನು ಸ್ಥಾಪಿಸಿದರು. ನಿರಂಜನರೂ ಅದರಲ್ಲೊಬ್ಬ ಸದಸ್ಯರು. 'ಸಮನ್ವಯ' ಮಾಸಪತ್ರಿಕೆಯೂ ಆಗ ಪ್ರಕಟವಾಗಲಾರಂಭಿಸಿತು. ಸಮನ್ವಯ ಸಾಧಕ ಡಾ| ವಿ. ಕೃ. ಗೋಕಾಕರ ನೇತೃತ್ವದಲ್ಲಿ ಮಾನವತಾವಾದಿ ನಿರಂಜನರ ವ್ಯಕ್ತಿತ್ವದ ವಿಸ್ತಾರವನ್ನು ನಾನು ಕಂಡೆ.

ಅಲ್ಲಿಂದೀಚೆಗೆ ಅವರು ದೇಹದ ಅನಾರೋಗ್ಯದಲ್ಲೂ ಹೇಗೆ ಸಾಹಿತ್ಯಿಕ, ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬಂದಿದ್ದಾರೆ ಎಂಬುದನ್ನು ಸಮೀಪದಿಂದ ನೋಡುತ್ತ ಬಂದಿದ್ದೇನೆ. ನಮ್ಮ ಮನೆಯಿಂದ ಐದು ನಿಮಿಷಗಳ ಕಾಲುನಡಿಗೆ ಅವರ ಮನೆಗೆ. ಬೇಕೆಂದಾಗಲೆಲ್ಲಾ ಅವರ ಮನೆಗೆ ಹೋಗುತ್ತೇನೆ - ಅನುಪಮಾ ಅವರ ಜೊತೆ ಹರಟಲು. ನಿರಂಜನರು ಮಾತ್ರ ಅಂದಿನವರೆ. ಅವರನ್ನು ನೋಡಿದಾಗ ಷೇಕ್ಸ್‌ಪಿಯರನ ಒಂದು ಸಾಲು ಜ್ಞಾಪಕಕ್ಕೆ ಬರುತ್ತದೆ. ಅದನ್ನು ಸ್ವಲ್ಪ ಮಾರ್ಪಡಿಸಿ ಹೀಗೆ ಹೇಳಬಹುದು:

Age cannot wither him
Nor ill health stale his infinite creativity

ಅವರ ಸ್ಥೈರ್ಯ, ಧೈರ್ಯ, ಶ್ರದ್ಧೆ, ಉತ್ಸಾಹಗಳು ನಮಗೆ ಸ್ಫೂರ್ತಿ ನೀಡಲಿ. ○

ಸ್ನೇಹದ ಹೂಬಳ್ಳಿ

-ರಾಜಶೇಖರ

ಕಾಂಬುದನೆಲ್ಲ ಕಾಣುವೆವೆ? ತಿಳಿಯಬಹುದೆಲ್ಲವನು ನಾವು ತಿಳಿಯುವೆವೆ? ನೋಡಿದುದನ್ನೆಲ್ಲ ಕಂಡೆವೆಂಬಂತೆ, ಅರಿತುದನ್ನೆಲ್ಲ ತಿಳಿದೆವೆಂಬಂತೆ ಮಾತಿನಲ್ಲಿ, ಸಂಬಂಧದಲ್ಲಿ, ಆಡುವ ವರ್ತಿಸುವ ಭಾಷಾಶೈಲಿಯ ವ್ಯವಹಾರ ಶೈಲಿಯ ಈ ನಾಡಿನಲ್ಲಿ, ಬಹುಮುಖ ಚೈತನ್ಯ, ಬಹುಮುಖ ಪ್ರತಿಭೆ ತುಂಬಿದ ಒಬ್ಬ ವ್ಯಕ್ತಿಯ ಬಗ್ಗೆ ಪೂರ್ಣ ಅನುಭವ, ಪೂರ್ಣ ಪ್ರಜ್ಞೆ, ಪೂರ್ಣ ಜ್ಞಾನದಿಂದ ಅಧಿಕಾರಯುತವಾಗಿ ಸಮಂಜಸವಾಗಿ ಮಾತಾಡುವುದು, ಬರೆಯುವುದು ಒಂದು ಅಪ್ರಾಮಾಣಿಕವೂ ಅಸೌಜನ್ಯಯುತವೂ ಆದ ಪ್ರಯತ್ನ ಎನ್ನಿಸುತ್ತದೆ. ಜೊತೆಗೆ, ಅನುಭವವನ್ನೂ, ಅದರ ಪ್ರಜ್ಞೆಯನ್ನೂ, ಅದರಿಂದ ಹೊಮ್ಮಿ ಬರುವ ಜ್ಞಾನವನ್ನೂ, ನೆಲದಡಿಯ ಬೇರಿನಿಂದಲೂ, ನೆಲದ ಮೇಲಿನ ಗಾಳಿ ಬೆಳಕು ನೀರುಗಳಿಂದಲೂ, ಆಯ್ದು ಸಂಪಾದಿಸಿ ಶೇಖರಿಸುವ ವಿಧಾನಗಳಿಂದಲೂ ಹದಗೆಡಿಸಿ, ರೂಪುಗೆಡಿಸಿ, ರುಚಿಗೆಡಿಸುವ ನೂರಾರು ಸಾಮಾಜಿಕ, ಮಾನಸಿಕ, ಸಾಂಸ್ಕೃತಿಕ, ಭಾಷಿಕ ದುರಭ್ಯಾಸ ತುಂಬಿರುವ ಈ ನಾಡಿನ ಬದುಕಿನಲ್ಲಿ, ಮನುಷ್ಯನಿರಲಿ, ಮಾನವ ಜೀವನಕ್ಕೆ ಸಂಬಂಧಿಸಿದ ಯಾವ ಸಾಮಾನ್ಯ ವಸ್ತುವನ್ನಾಗಲೀ, ಸಂಗತಿಯನ್ನಾಗಲೀ, ಸನ್ನಿವೇಶವನ್ನಾಗಲೀ, ನಾವು ನಿಜವಾಗಿ ಕಾಣುವೆವೆ, ಕಂಡು ಅರಿತುಕೊಳ್ಳುವೆವೆ, ಅರಿತು ತಿಳಿವಳಿಕೆಯನ್ನು ಸಂಪಾದಿಸುವೆವೆ ಎನ್ನುವ ಸಮಸ್ಯೆಯೊಂದು ಇದೆ. ಇವೆರಡನ್ನೂ ಮೀರಿ, ವಿಶೇಷವಾಗಿ ನನ್ನನ್ನು ಬಾಧಿಸುವ ಇನ್ನೊಂದು ಮೂಕ ನೋವು, ನನ್ನ ಮತ್ತು ನಿರಂಜನರ ಬಾಂಧವ್ಯ ಬರಿಯ ಲಘುಸ್ಮೃತಿಯ ಮಧುರ ಪರಿಮಳವಾಗಿ ಎಲ್ಲೋ ಮನದ ಮೂಲೆಯಲ್ಲಿ ಅಡಗಿಹೋಗಿ, ಅದರ ಸುತ್ತ ಲಕ್ಷಾಂತರ ಅನ್ಯ ಬೆಳೆಗಳ ಹಾಸುಹೊಕ್ಕು ಮುತ್ತಿ ಕಾಣದಂತೆ ಆಗಿಹೋಗಿದೆ ಎಂಬುದು.

ಎಷ್ಟು ವರುಷವಾಯಿತೊ ನಾನು ನಿರಂಜನರ ಮುಖ ನೋಡಿ, ಮಾತು ಕೇಳಿ, ಅವರೊಡನೆ ನಾಲ್ಕು ಗಳಿಗೆ ಓಡಾಡಿ! ಅಗಾಧ ಮಾನವ ಸ್ನೇಹ ತುಂಬಿದ ಆ ಮುಖವನ್ನು ನಾನು ಆಳವಾದ ಸ್ನೇಹದಿಂದ ನೋಡಿದ್ದೇನೆ; ಮಾನವ ದುಃಖಕ್ಕೆ ಅಪರಿಮಿತವಾಗಿ ಮರುಗುವ ಕೊರಗುವ ಮುನಿಯುವ ಅವರ ಮಾತುಗಳನ್ನು ನಾನು ಸಮಾನವಾದ ಮನುಷ್ಯ ಪ್ರೇಮದಿಂದ, ಜೀವನ ಸ್ನೇಹದಿಂದ, ದೌಷ್ಟ್ಯ ದ್ವೇಷದಿಂದ ಕೇಳಿದ್ದೇನೆ. ವ್ಯಥೆ, ಸೋಲು, ದುಷ್ಟತನ, ನೋವುಗಳನ್ನು ಆಕಾರಬದ್ಧವಾಗಿ, ಶಾಸ್ತ್ರೀಯವಾಗಿ, ನಾಗರಿಕವಾಗಿ ಸೃಷ್ಟಿಸಿ, ಮನುಷ್ಯ ಜೀವನದ ಚರಿತ್ರೆಯ ಗಳಿಗೆ ಗಳಿಗೆಗಳನ್ನೆಲ್ಲ ಶೋಕಮಯವಾಗಿ ಮಾಡಿರುವ ಮಾನವನ ದಾನವತೆಯನ್ನು ಗುರುತಿಸಿ,

ಅನುಭವಿಸಿ, ದುಃಖಿಸಿ, ಅವಕ್ಕೆ ಇರುವ ಪರಿಹಾರವಾದ ಮಾನವನ ದೈವತ್ವದ ಬಗ್ಗೆ, ಹೃದಯವೂ, ಆತ್ಮವೂ ಬುದ್ಧಿಯೂ ಕೂಡಲಸಂಗಮವಾದ ವ್ಯಕ್ತಿತ್ವದಿಂದ ನಾವಿಬ್ಬರೂ ಹಲವು ಸಲ,(ಹಲವೇ ಸಾಲ) ಚಿಂತಿಸುತ್ತ ನಾಲ್ಕು ಗಳಿಗೆ ಕಳೆದಿದ್ದೇವೆ.

ನೂರು ಸಲ, ಅವರು ಧಾರವಾಡವನ್ನು ಬಿಟ್ಟ ಮೇಲೆ, ಬೆಂಗಳೂರಿಗೆ ಹೋಗಿದ್ದೇನೆ. ಅವರು ಕಾಯಿಲೆಬಿದ್ದ ಸಮಯದಲ್ಲಿ ಬಾರಿಬಾರಿಯೂ ನನ್ನ ಪತ್ನಿ ಅವರನ್ನು ಕಂಡು ಬರಬೇಕು ಎಂದು ಆಗ್ರಹಮಾಡಿ ಮನೆಯಿಂದ ಕಳುಹಿಸಿದ್ದಾಳೆ. ಸಾವಿರಸಲ ನಿರಂಜನರನ್ನು ನೋಡಬೇಕು, ಅವರೊಡನೆ ಮಾತಾಡಬೇಕು, ಅವರೊಂದಿಗೆ ಇನ್ನೊಮ್ಮೆ, ಇನ್ನೊಮ್ಮೆ ಒಂದು ಸಂಜೆಯ ಗಳಿಗೆಗಳನ್ನು ಕಳೆಯಬೇಕು ಎಂದು ಯೋಚಿಸಿದ್ದೇನೆ-ಇವೆಲ್ಲ ಹಿಂದಿನ ಹಲವಾರು ವರುಷಗಳಲ್ಲಿ ವರ್ಡ್ಸ್‌ವರ್ತ್ ಮಹಾಕವಿ ನೋಡಲಾಗದ 'ಯಾರೋ' ಪ್ರದೇಶದಂತೆ, ಇದೆಲ್ಲ ಬರಿಯ ಯೋಚನೆಯಾಗಿ, ಯೋಜನೆಯಾಗಿ, ಆಲೋಚನೆಯಾಗಿ ಉಳಿದುಹೋಗಿದೆ. ಬೆಂಗಳೂರಿಗೆ ಹೋದಾಗಲಾಗಲಿ, ಹೋಗುವ ಪ್ರಯತ್ನ ಮಾಡುವಾಗಲಾಗಲೀ, ಹೋಗದೆಯೇ ಉಳಿದ ಬಗೆಯ ವಿಧಾನಗಳಲ್ಲಿಯಾಗಲೀ ಚಿರಂತನವೂ ಮಧುರವಾಗಿ ಪರಿಮಳಿಸುವ ಆ ಸ್ನೇಹ ಸ್ಮೃತಿ ಸುತ್ತ ಬಿಗಿದ ಬದುಕಿನ ಅರಣ್ಯ ದೈತ್ಯತೆಯ ನಡುವೆ ನಿರುಪಾಯವಾಗಿ ಅಡಗಿ ಕುಳಿತುಹೋಗಿದೆ. ತಮ್ಮ ಸ್ನೇಹಿತರ ಸಾಲಿನ ನಡುವೆ ನನ್ನನ್ನು ಗುರುತಿಸಿ ಹೆಸರಿಸಿದ ಈ ಗಳಿಗೆಯಲ್ಲಿ ಕಾಡುಮರಗಳೆಲ್ಲ ಸ್ನೇಹ ಪರಿಮಳ ತುಂಬಿದ ಹೂಬಳ್ಳಿಗಳಾಗಿವೆ.

ಈ ಸ್ನೇಹ ಪರಿಮಳವೇ ನಿರಂಜನರಲ್ಲಿ ನಾನು ಕಂಡ, ಕಂಡು ಅರಿತ, ಅರಿತು ಪೂರ್ಣವಾಗಿ ತಿಳುವಳಿಕೆ ಪಡೆದುಕೊಂಡ ವ್ಯಕ್ತಿತ್ವದ ಪ್ರಥಮ ಲಕ್ಷಣ. ಈ ಸ್ನೇಹವೇ ಮಾನವ್ಯದ ಹೃದಯ ಎಂದು ತಿಳಿದಿರುವ ನನ್ನಲ್ಲಿ, ಮನುಷ್ಯನ ಅಸಂಖ್ಯಾತ ಬೌದ್ಧಿಕ, ಹಾರ್ದಿಕ, ಶಾರೀರಿಕ, ಆಧ್ಯಾತ್ಮಿಕ ಚೈತನ್ಯಗಳಿಗಿಂತ, ಮೂಲಭೂತವಾದ ಈ ಸ್ನೇಹಕ್ಕೆ ಅತ್ಯಂತ ಹೆಚ್ಚಿನ ಮೌಲ್ಯ ಇರುವುದರಿಂದ, ನಿರಂಜನರ ಬಹುಬಗೆಯ ಶಕ್ತಿ ತುಂಬಿದ ವ್ಯಕ್ತಿತ್ವದಲ್ಲಿ ನಾನು ಈ ಗುಣವೊಂದನ್ನು ಎತ್ತಿ ಹೇಳುತ್ತೇನೆ. ಅವರ ಜೀವನಪ್ರೇಮ, ಉದ್ಯೋಗಶೀಲತೆ, ಸಾಮಾಜಿಕ ಛಲ, ಪರಚಿಂತನೆ, ಮಾನವ ಸೇವಾಕಾಂಕ್ಷೆ, ಚಿಂತನಶೀಲತೆ, ಅವುಗಳಿಂದ ಹೊಮ್ಮಿದ ಅವರ ವಿವಿಧ ಸಾಹಿತ್ಯಿಕ, ಸಾಮಾಜಿಕ, ರಚನಾತ್ಮಕ ಉದ್ಯಮಗಳೆಲ್ಲ ಆಳವಾದ ಭವ್ಯವಾದ ಸಹಜವಾದ ಈ ಸ್ನೇಹದ ಬಗೆಬಗೆಯ ಬುಗ್ಗೆಗಳು; ನೆಲದಡಿಯ ಅಪರಿಮಿತ ಜಲವಾಹಿನಿಯ ಹಳ್ಳಗಳು, ನದಿಗಳು, ಸಮುದ್ರಗಳು.

ಇಂಥ ಹರಿವಿಗೆ ಈ ನೆಲ ಸಾಲದು. ಬೇರೆಯೊಂದು ನಾಡಿನಲ್ಲಿ ಈ ಹರಿವಿಗೆ ತಕ್ಕುದಾದ ವೈಶಾಲ್ಯ, ತಕ್ಕುದಾದ ವಿಸ್ತೀರ್ಣ, ತಕ್ಕುದಾದ ಸಾರ್ಥಕತೆ ಸುಲಭ.

ಶಂಖದಲ್ಲಿ ಬಂದುದೇ ತೀರ್ಥ, ಪೂಜಾರಿ ಇತ್ತುದೇ ಪ್ರಸಾದ, ಅಧಿಕಾರ ಚಾಚಿದುದೇ ಅನುಗ್ರಹಗಳಾದ ಈ ನಾಡಿನಲ್ಲಿ, ತಾರತಮ್ಯ ಜ್ಞಾನ, ಸತ್ಯ ಅಸತ್ಯ ವೈವಿಧ್ಯಪ್ರಜ್ಞೆ, ತಪ್ಪು ಒಪ್ಪುಗಳ ವ್ಯತ್ಯಾಸದ ಅರಿವು ಕಳೆದುಹೋದ ಈ ಬದುಕಿನಲ್ಲಿ ಧ್ವನಿಗೂ ಮಾತಿಗೂ ಅರ್ಥಕ್ಕೂ, ಸಂಬಂಧವೇ ಇರದ ಈ ಭಾಷೆಯಲ್ಲಿ, ಉತ್ಪ್ರೇಕ್ಷೆಯೂ, ವೇಷಧಾರಿಕೆಯೂ, ಬರಿಯ ಆಚಾರವೂ ಸಾರ್ವಜನಿಕ ನಿಯಮವಾದ ಈ ಸಮಾಜದಲ್ಲಿ ನಿರಂಜನರಂಥ ವ್ಯಕ್ತಿಗೆ, ಶಕ್ತಿಗೆ, ನ್ಯಾಯವಾದ ಸಹಜವಾದ ಸಮರ್ಪಕವಾದ ಅಭಿವ್ಯಕ್ತಿ ಅಸಾಧ್ಯ ಎಂದು ನನ್ನ ನಂಬುಗೆ. ಆದರೂ ನನ್ನಂತೆ ವಿಮುಖನಾಗದೆ ಈ ವಿಪರೀತ ಸಂಕುಚಿತ ಮಿತಿಯಲ್ಲಿಯೇ ಅವರು ಸಾಧಿಸಿದುದನ್ನೆಲ್ಲ ದೂರದಿಂದಲೆ ನೋಡಿ ಮೆಚ್ಚಿದ್ದೇನೆ. ಕನ್ನಡನಾಡು ಈ ಮಹಾವ್ಯಕ್ತಿಯನ್ನು ಆ ವ್ಯಕ್ತಿಯೊಳಗೆ ಅನವರತವಾಗಿ ಮಿಡಿದ ಮಹಾಶಕ್ತಿಯನ್ನು ಗುರುತಿಸಿ, ಗೌರವಿಸುವುದರಿಂದ ಪುಳಕಿತನಾಗಿ, ನಾನು ಒಂದಲ್ಲ ಒಂದು ದಿನ ನಿರಂಜನರನ್ನು ಮತ್ತೆ ಕಂಡೇ ಕಾಣುತ್ತೇನೆ, ಮತ್ತೆ ಅವರೊಡನೆ ಮಾತನಾಡಿ ನಾಲ್ಕುಗಳಿಗೆ ಕಳೆದೇ ಕಳೆಯುತ್ತೇನೆ ಎಂದು ಹೇಳಲು ನನಗೆ ಅತ್ಯಂತ ಸುಖ ಎನಿಸುತ್ತದೆ.

ಕಿರಿಯರನ್ನು ಮೆಚ್ಚುವ ಹಿರಿಯ

—ಸುನೀತಿ ಉದ್ಯಾವರ

೧೯೭೯. ಮುಂಬಯಿಯಲ್ಲಿ ಕನ್ನಡಿಗರು ಜಿಲ್ಲಾಮಟ್ಟದ ಸಮ್ಮೇಳನದ ಏರ್ಪಾಡು ಮಾಡಿದ್ದರು. ಆಗ ಡಾ। ಅನುಪಮಾ ನಿರಂಜನರು ನಾನು ಭಾಗವಹಿಸಿದ ಗೋಷ್ಠಿಗೆ ಅಧ್ಯಕ್ಷತೆ ವಹಿಸಿದ್ದರು. ಅಂದೇ ನಮ್ಮ ಪ್ರಥಮ ಭೇಟಿ. ನನ್ನನ್ನು ಆತ್ಮೀಯತೆಯಿಂದ ಮಾತನಾಡಿಸಿದ ಅವರು "ಬೆಂಗಳೂರಿಗೆ ಬಂದರೆ ಖಂಡಿತವಾಗಿಯೂ ನಮ್ಮಲ್ಲಿಗೆ ಬನ್ನಿ" ಎಂದು ಆಹ್ವಾನಿಸಿದ್ದರು. ಅವರ ಆಹ್ವಾನ ನನ್ನ ಪಾಲಿಗೆ ನಿರಂಜನರನ್ನು ಕಾಣುವ ಸದವಕಾಶ ಕಲ್ಪಿಸಿಕೊಟ್ಟಿತು.

ಅದೇ ವರುಷದ ಕೊನೆಯ ತಿಂಗಳ ಕೊನೆಯ ವಾರದಲ್ಲಿ ನಾನು ಬೆಂಗಳೂರಿಗೆ ಹೋಗುವ ಪ್ರಸಂಗ ಒದಗಿತು. ಮೂವತ್ತನೆಯ ದಿನಾಂಕ ಮಧ್ಯಾಹ್ನ ದೂರವಾಣಿಯ ಮೂಲಕ ಡಾ। ಅನುಪಮಾ ಅವರನ್ನು ಸಂಪರ್ಕಿಸಿ ಯೋಗಕ್ಷೇಮ ವಿಚಾರಿಸಿದೆ. ಅಂದೇ ಬರಬೇಕೆಂದು ಅವರು ಒತ್ತಾಯಿಸಿದರು. 'ಹೂಂ' ಎಂದು ಒಪ್ಪಿಕೊಂಡೆ.

ಸಂಜೆಗೇ ಜಯನಗರಕ್ಕೆ ಹೋದೆ. ಐದನೆಯ ಬ್ಲಾಕಿನಲ್ಲಿರುವ 'ಕಥೆ' ನಿರಂಜನ ದಂಪತಿಗಳ ನಿವಾಸ ಸ್ಥಾನ. ಹೊರಬಾಗಿಲು ತೆಗೆದು ಒಳಗೆ ಕಾಲಿಟ್ಟೊಡನೆ

ನಾಯಿ ಬೊಗಳಿತು. ಡಾ। ಅನುಪಮಾ ಮನೆಯ ಬಾಗಿಲ ಬಳಿ ಕಾಣಿಸಿಕೊಂಡರು. ಬಹಳ ಪ್ರೀತಿಯಿಂದ ನನ್ನನ್ನೂ, ನನ್ನೊಡನಿದ್ದ ನನ್ನ ಗೆಳತಿಯನ್ನೂ ಆಹ್ವಾನಿಸಿದರು. ಸ್ವಲ್ಪ ಹೊತ್ತು ಮಾತುಕತೆಯಾದ ಬಳಿಕ ನಿರಂಜನರನ್ನು ಕಾಣಬೇಕೆಂದು ನಾನು ಹಂಬಲಿಸುತ್ತಿದ್ದುದು ಅನುಪಮಾ ಅವರಿಗೆ ತಿಳಿದಿರಬೇಕು. ನನ್ನನ್ನು ಒಳಕೋಣೆಗೆ ಕರೆದೊಯ್ದು "ಮುಂಬಯಿಯಿಂದ ಸುನೀತಿ ಬಂದಿದ್ದಾರೆ" ಎಂದರು. ನಾನು ಭಕ್ತಿ ಭಾವದಿಂದ ಅವರನ್ನು ನೋಡಿದೆ. "ಬನ್ನೀಮ್ಮ ಸುನೀತಿ" ಎಂದು ಪ್ರೀತ್ಯಾದರಗಳಿಂದ ಕರೆದು ಅಲ್ಲಿಯೆ ಕುಳಿತುಕೊಳ್ಳಲು ಕುರ್ಚಿ ತೋರಿಸಿದರು.

ಅವರದು ತೇಜಸ್ವೀ ವ್ಯಕ್ತಿತ್ವ, ಧೀರೋದಾತ್ತ ನಿಲುವು, ಕಣ್ಣುಗಳಲ್ಲಿ ಜ್ಞಾನದ ಹೊನಲು ಹರಿದುತಿತ್ತು. ಸ್ವಲ್ಪ ಹೊತ್ತು ನಮ್ಮಲ್ಲಿ ಸಂಭಾಷಣೆ ನಡೆಯಿತು. ಅತ್ಯಂತ ಪರಿಚಿತರಂತೆ ಅವರು ಮಾತನಾಡುತ್ತಿದ್ದಾಗ ನನಗೆ ನನ್ನ ಹಿರಿಯಣ್ಣನ ಬಳಿ ಮಾತನಾಡುತ್ತಿದ್ದಂತೆ ಭಾಸವಾಯಿತು. ಕನ್ನಡನಾಡು - ನುಡಿ, ನನ್ನ ಬರೆವಣಿಗೆ, ಅಧ್ಯಯನ, ಅವರ ಸಾಹಿತ್ಯಿಕ ಚಟುವಟಿಕೆ - ಧೋರಣೆಗಳ ಬಗ್ಗೆ ನಮ್ಮ ಮಾತಿನ ಸರಣಿ ಸಾಗಿತ್ತು. ಅವರ ವಾಗ್ಸರಣಿಯಿಂದ, ಅವರ ಅರಿವಿನ ಆಳ - ಹರಹುಗಳನ್ನು ಅರಿತಂತಾಯಿತು. ಅವರ ಅದ್ಭುತ ಸ್ಮರಣಶಕ್ತಿಯನ್ನು ಕಂಡು ನನಗೆ ಬೆರಗೆನಿಸಿತು. ಯಾವುದೇ ಘಟನೆಯ ಕುರಿತು ಹೇಳುವಾಗ ಅವರು ವರುಷ, ತಿಂಗಳು, ದಿನಾಂಕಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದು ಎಣಿಸಿದರೆ ನನಗೆ ಈಗಲೂ ಅಚ್ಚರಿ ಹುಟ್ಟಿಸುತ್ತದೆ.

ಮುಂದೆ ಎರಡುಮೂರು ಬಾರಿ ಬೆಂಗಳೂರಿಗೆ ಹೋದಾಗ ಅವರನ್ನು ಸಂದರ್ಶಿಸದೆ ಇರಲಿಲ್ಲ ನಾನು. ನಾನು ಸಂಶೋಧನೆ ಮಾಡುವ ಸಂಗತಿ ತಿಳಿದು ಅವರು ನೀಡಿದ ನೆರವು ನಾನೆಂದೂ ಮರೆಯಲಾರೆ. ಅವರು ತಿಳಿದ ಸಂಗತಿಗಳನ್ನು ತಿಳಿಸಿ, ಯಾವ ಪುಸ್ತಕಗಳು ನನ್ನ ಅಧ್ಯಯನಕ್ಕೆ ನೆರವಾಗಬಲ್ಲವು ಎಂದೂ ಹೇಳಿದರು. ನನಗೆ ಯಾರಿಂದ ನಿರ್ದಿಷ್ಟ ನೆರವು ದೊರೆಯುವ ಸಂಭವವಿದೆಯೋ ಅವರ ವಿಳಾಸಗಳನ್ನೂ ನೀಡಿ ಸಹಕರಿಸಿದರು. ನನಗೆ ಬೇಕಾದ ವಿಚಾರಗಳನ್ನು ತಿಳಿಸಿ ದೊಡನೆ ಅಂಚೆಯ ಮೂಲಕ ಹಲವುಬಾರಿ ಅವರು ಕಳುಹಿಸಿದುದುಂಟು. ನನ್ನ ಮಾತಂತಿರಲಿ, ನನ್ನ ಪರಿವಾರದ ಬಗ್ಗೆ ಅವರು ತೋರಿಸಿದ ಆತ್ಮೀಯತೆಯೂ ನನ್ನಲ್ಲಿ ಅಚ್ಚಳಿಯದೆ ಉಳಿದಿದೆ. ನನ್ನ ಅಣ್ಣನ ಮಗಳು ಇಂಗ್ಲಿಷ್ ಆಶುಕವಿತಾ ಸ್ಪರ್ಧೆಯಲ್ಲಿ ಎರಡು ಸ್ವರ್ಣಪದಕಗಳನ್ನು ಪಡೆದಿದ್ದಾಳೆಂದೊಡನೆ ಅವರು ತಮ್ಮ ಮಗಳು ತೇಜಸ್ವಿನಿ ಬರೆದ ಕವನಸಂಕಲನವನ್ನು, ಅವರ ಪರವಾಗಿ ಪ್ರೋತ್ಸಾಹವೆಂದು ನನ್ನ ಬಳಿ ಕೊಟ್ಟು ಕಳುಹಿಸಿದರು. ಇನ್ನೊಮ್ಮೆ ನನ್ನ ತಮ್ಮನ ಎಂಟುವರುಷದ ಮಗನೊಡನೆ ಅಲ್ಲಿಗೆ ಹೋದಾಗ ಅವನಿಗೆ ಒಂದು ಇಂಗ್ಲಿಷ್ ನಿಘಂಟನ್ನು ಕೊಟ್ಟು ಬಹಳವಾಗಿ ಪ್ರೀತಿಯಿಂದ ಬೆನ್ನುತಟ್ಟಿದರು.

○

ನಿರಂಜನರ ಬಗ್ಗೆ

–ಯು. ಆರ್. ಅನಂತಮೂರ್ತಿ

ನಿರಂಜನರನ್ನು ಅಭಿನಂದಿಸಲು ಬೆಂಗಳೂರಿಗೆ ಬರಬೇಕೆಂದಿದ್ದ ನನಗೆ ಇದ್ದಕ್ಕಿದ್ದಂತೆ ಅನಾರೋಗ್ಯವಾಗಿ ಮಲಗಿಕೊಂಡಿರಬೇಕಾಗಿ ಬಂದಿದೆ. ನನಗೆ ಆಗಿರುವುದು ಜಾಯಿಲೆಯೂ ಅಲ್ಲ; ಕೂತು ಕೆಲಸ ಮಾಡುವವರನ್ನೆಲ್ಲ ಸಾಮಾನ್ಯವಾಗಿ ಕಾಡುವ ಸ್ಪಾಂಡಿಲೈಟೀಸ್ - ಬೆನ್ನು ಮುರಿಯುವಂತೆ ಕೆಲಸ ಮಾಡುವ ಕೂಲಿಗಾರರಿಗೆ ಬರುವುದಿಲ್ಲವಂತೆ. ಬುದ್ಧಿಯ ಕೆಲಸವನ್ನು ಮಾಡುತ್ತಾ, ನಾವು ಮಾಡಿದ್ದಕ್ಕಿಂತ ಹೆಚ್ಚಿನ ಕೀರ್ತಿಯನ್ನು ಪಡೆಯುವ ನಮ್ಮಂತಹವರನ್ನು ಕಾಡುವ ಉಪದ್ವ್ಯಾಪ ಇದು. ಈ ಮಾತುಗಳಿಂದ ಪ್ರಾರಂಭಿಸಿ ನಿರಂಜನರ ಬಗ್ಗೆ ನನಗಿರುವ ಪ್ರೀತಿ, ಅಭಿಮಾನಗಳನ್ನು ಹೇಳಿಕೊಳ್ಳುವುದರಲ್ಲೂ ಅರ್ಥವಿರಬಹುದು. ದುಡಿಯುವ ಜನರ ಪರವಾಗಿ ನನ್ನ ಮನಸ್ಸನ್ನು ತಿರುಗಿಸಿದ ಹಲವು ಮುಖ್ಯ ಹಿರಿಯರಲ್ಲಿ ನಿರಂಜನರೂ ಒಬ್ಬರು.

ಸುಮಾರು ಇಂಕ್ಕೂ ಹೆಚ್ಚು ವರ್ಷಗಳ ಹಿಂದೆ ನಿರಂಜನರ ಪರಿಚಯವಾದದ್ದು ನನಗೆ. ಶಿವಮೊಗ್ಗದಲ್ಲಿ ಸಮಾಜವಾದಿಗಳ ಜೊತೆ ಬೆಳೆಯುತ್ತಿದ್ದ ನನ್ನಲ್ಲಿ ಮಾರ್ಕ್ಸ್‌ವಾದದ ಬಗ್ಗೆ ಕುತೂಹಲವನ್ನು ಹುಟ್ಟಿಸಿದ ಭದ್ರಾವತಿಯ ಟ್ರೇಡ್ ಯೂನಿಯನಿಸ್ಟ್ ಒಬ್ಬರು ನಿರಂಜನರ ವಿಚಾರಗಳನ್ನು ನನಗೆ ಹೇಳಿದ್ದರು. ಈ ಕಮ್ಯೂನಿಸ್ಟ್ ವಿಚಾರದ ಜೊತೆಯಲ್ಲೇ ಅದಕ್ಕೆ ವಿರೋಧವಾದ ರಾಯ್ ವಿಚಾರವನ್ನು ನಮಗೆ ಈಗ ಗತಿಸಿದ ರಂಗನಾಥ ರಾವ್ ಎಂಬ ಚಿಂತಕರು ಪಾಠ ಮಾಡಿದ್ದರು. ಈ ತಿಕ್ಕಾಟದ ನಡುವೆ ಗೋಪಾಲ ಗೌಡರ ಭಾವುಕತೆಯಲ್ಲಿ ಸಮಾಜವಾದಿ ವಿಚಾರವನ್ನು ನಾವು ಗಟ್ಟಿ ಮಾಡಿಕೊಳ್ಳಲು ಚಿಂತನೆಯಲ್ಲೂ, ಕ್ರಿಯೆಯಲ್ಲೂ ಹೆಣಗಿದ್ದೆವು. ಹೀಗೆ ಸಮಾಜವಾದೀ ವಿಚಾರ ಮತ್ತು ಕ್ರಿಯೆಯಿಂದ ಪ್ರಚೋದಿತನಾಗಿ ಮೈಸೂರಿಗೆ ಬಂದ ಕನಸುಗಾರನಾದ ನನಗೆ ನಿರಂಜನರ ಪರಿಚಯವಾಯ್ತು. ಆಗ ನಾನು ಸುಣ್ಣದಕೇರಿಯಲ್ಲಿ ಒಂದು ರೂಮಿನಲ್ಲಿದ್ದುಕೊಂಡು, ಸ್ವತಃ ಅಡಿಗೆಮಾಡಿ ಊಟಮಾಡಿ ಸಿಗರೇಟು ಸೇದುತ್ತ ಷೆಲ್ಲಿಯ ಕನಸುಗಾರಿಕೆಯಲ್ಲಿ ಮೈಮರೆತು ಓಡಾಡುತ್ತಿದ್ದೆ. ಆಗ ನನಗೆ ನನ್ನ ಹಾಗೆ ಹಸಿದಿದ್ದ ಇನ್ನೊಬ್ಬ ಕಮ್ಯೂನಿಸ್ಟ್ ಗೆಳೆಯ ಗೋಪಾಲಕೃಷ್ಣ ಎಂಬುವನಿದ್ದ. (ಈಗವನು ಮಾಸ್ಕೋದಲ್ಲಿದ್ದಾನೆ. GOPSKI ಎಂದು ನಾವವನನ್ನು ಪ್ರೀತಿಯಲ್ಲಿ ಕರೆಯೋದು) ಹಾಗೆಯೇ ಗಾರ್ಕಿಯ ಕಥೆಗಳಿಂದ ಹುಚ್ಚನಾಗಿದ್ದ ಕೆ. ವಿ. ಸುಬ್ಬಣ್ಣ, ಇನ್ನೊಬ್ಬ ನನ್ನ ಗೆಳೆಯ. ಈ ನಮ್ಮ ಲೋಕಕ್ಕೆ ಪ್ರಿಯ ಸ್ನೇಹಿತನಂತೆ ಪ್ರವೇಶಿಸಿದ ನಿರಂಜನರು ಆಗಲೇ ತುಂಬ ಪ್ರಸಿದ್ಧರು.

ಹೊಸದೊಂದು ಪ್ರಪಂಚವನ್ನು ತಮ್ಮೊಡನೆ ನಿರಂಜನರು ತಂದರು. ಹಳ್ಳಿಯ ಮುಕ್ಕನಾಗಿದ್ದ ನನ್ನನ್ನು ಎತ್ತೆತ್ತಲೋ ಚಿಗುರೊಡೆದು ಬೆಳೆಯುವಂತೆ ಮಾಡಿದ್ದ ಶಿವಮೊಗ್ಗದ ಸಮಾಜವಾದಿ ಆಂದೋಲನದ ಪ್ರಭಾವದ ನಂತರ, ಅಂತರ್‌ರಾಷ್ಟ್ರೀಯ ವಿದ್ಯಮಾನಗಳ ಕಣ್ಣಿಂದ ನಮ್ಮ ಅನುಭವಗಳನ್ನು ನೋಡಿಕೊಳ್ಳುವಂತೆ ಪ್ರೇರೇಪಿಸಿದವರು ನಿರಂಜನರು. ನಾವು ಚಿಕ್ಕವರೆಂದು ಕಾಣದೆ ನಮ್ಮನ್ನು ಸಮಾನರಂತೆ ನಿರಂಜನರು ಕಂಡು ನಮ್ಮ ಆತ್ಮಪ್ರತ್ಯಯವನ್ನು ಬೆಳೆಸಿದವರು. ನಿರಂಜನರು ತಾವೊಬ್ಬರೇ ನಮ್ಮ ಲೋಕಕ್ಕೆ ಬರಲಿಲ್ಲ. ತಮ್ಮ ಜೊತೆಯಲ್ಲಿ RSN ಎಂಬ ಒಬ್ಬ ಅದ್ಭುತ ಕಲಾವಿದನನ್ನು ತಂದರು. ಕೆಲವೊಮ್ಮೆ ಅರೆಹುಚ್ಚನೆಂದು ನಮಗೆ ಅನ್ನಿಸುತ್ತಿದ್ದ ಆರ್‌ಎಸ್‌ಎನ್ ತಮ್ಮ ವಿಚಿತ್ರ ಉಡುಪಿನಲ್ಲಿ, ಅತ್ಯಂತ ಸುಂದರವಾದ ಗಡ್ಡದ ಮುಖದಲ್ಲಿ, ಹೊಳೆಯುವ ಕಣ್ಣುಗಳಲ್ಲಿ ನಮ್ಮ ಲೋಕವನ್ನೇ ಬದಲಿಸಿಬಿಟ್ಟರು. ಅವರ ಅಸ್ಖಲಿತ ಇಂಗ್ಲಿಷ್ ಮಾತಿನ ಧಾರೆಯಲ್ಲಿ ಷಾ, ಷೇಕ್ಸ್‌ಪಿಯರ್, Freud, ಮಾರ್ಕ್ಸ್, ಗಾಂಧಿ - ಹೀಗೆ ಹಲವು ವಿಚಾರಗಳು ನಮ್ಮ ಎಳೆ ಮನಸ್ಸನ್ನು ಮುತ್ತಿಗೆ ಹಾಕಿದವು. ನನ್ನ ಬದುಕಿನಲ್ಲಿ ಬಂದ ಮೊದಲನೆಯ ದೊಡ್ಡ ಬೊಹಿಮಿಯನ್ ಮನುಷ್ಯ ಈ ಆರ್‌ಎಸ್‌ಎನ್. ಹಾಗೆಯೇ ನಿರಂಜನರ ಮುಖೇನ ಫ್ರಾನ್ಸ್‌ನಿಂದ ಬಂದಿದ್ದ ಚಿಂತಕರೊಬ್ಬರ ವಿಚಾರಗಳು ನಮಗೆ ಪರಿಚಯವಾದವು. ಅವರ ಹೆಸರು ಥಟ್ಟನೆ ಜ್ಞಾಪಕವಾಗುತ್ತಿಲ್ಲ....ಶ್ರೀನಿವಾಸನ್ ಇರಬೇಕು. ಎಲಿಯಟ್‌ನ ನವ್ಯ ಕಾವ್ಯದ ವಿರುದ್ಧದ ಅವರ ಲೇಖನಗಳು 'ಜನಪ್ರಗತಿ'ಯಲ್ಲಿ ಪ್ರಕಟವಾಗಿವೆ.

ಆ ದಿನಗಳಲ್ಲಿ ನಿರಂಜನರಿಗೆ ಒಂದು ಮಿಷನ್ ಇತ್ತು: ಅದೆಂದರೆ ಅ.ನ.ಕೃ.ರಲ್ಲಿ ಲಂಪಟತನವಾಗಿ ಬಿಟ್ಟಿದ್ದ ಪ್ರಗತಿಶೀಲತೆಯನ್ನು ರಕ್ಷಿಸಿ, ಬೂರ್ಜ್ವ ವ್ಯಕ್ತಿವಾದಕ್ಕೆ ಇಂಬು ಕೊಡುವ ಅಡಿಗರ ನವ್ಯತೆಗೆ ವಿರೋಧವಾದ ದೃಢವಾದ ಒಂದು ಪ್ರಗತಿಶೀಲ ಜನಪದ ನೆಲೆಯನ್ನು ಸ್ಥಾಪಿಸುವುದು. ಷೆಲ್ಲಿ ಮತ್ತು ಗಾರ್ಕಿಯರನ್ನು ಬಹುವಾಗಿ ಇಷ್ಟಪಡುತ್ತಿದ್ದ ನನಗೆ ನಿರಂಜನರ ಮಿಷನ್ ತುಂಬ ಪ್ರಿಯವೆನ್ನಿಸಿತ್ತು. ಶಿವಮೊಗ್ಗದಲ್ಲಿ ಅಡಿಗರ 'ಕಟ್ಟುವೆವು ನಾವು' ಕವನಗಳಿಂದ ಪ್ರಭಾವಿತನಾಗಿ ಅದರ ಅನುಕರಣೆಯ ಹಲವು ಪದ್ಯಗಳನ್ನು ಬರೆದಿದ್ದ ನನಗೆ ಅಡಿಗರು ತಮ್ಮ ಭ್ರಮನಿರಸನೆಯಲ್ಲಿ ಅಡ್ಡಹಾದಿ ಹಿಡಿಯುತ್ತಿದ್ದಾರೆಂಬ ನಿರಂಜನರ ವಾದ ಒಪ್ಪಿಗೆಯಾಗಿತ್ತು.

ನಿರಂಜನರು ನಮ್ಮ ವಿಚಾರಗಳನ್ನು ಮಾತ್ರವಲ್ಲ, ನಮ್ಮ ಜೀವನವನ್ನೂ ಹೊಕ್ಕಿದ್ದರು. ಆ ದಿನಗಳಲ್ಲಿ ಶ್ರೀಮತಿ ಅನುಪಮಾ ಮೆಡಿಕಲ್ ಕಾಲೇಜ್ ವಿದ್ಯಾರ್ಥಿನಿ. ನಾನು ಮತ್ತು ಗೋಪಾಲಕೃಷ್ಣ - ನಿರಂಜನ ಮತ್ತು ಅನುಪಮಾರ ನಡುವೆ Post ಮನ್ ಕೆಲಸವನ್ನು ಮಾಡಿದ್ದೂ ಉಂಟು. ಕೆಲವು ಸಾರಿ ನಿರಂಜನರು ನನ್ನ ರೂಮಿನಲ್ಲಿ ಚಾಪೆಯ ಮೇಲೆ ಮಲಗುತ್ತಿದ್ದುದುಂಟು. ಒನ್ - ಬೈ - ಟೂ ಕಾಫಿ, ಒನ್.

ಬ್ಲೈ-ಟೂ ತಿಂಡಿ ತಿಂದು ನಾವು ಗಂಟೆಗಟ್ಟಲೆ ಮರಗಳ ಕೆಳಗೆ ಕೂತು ಮಾತಾಡಿದ್ದುಂಟು. ಹೀಗಾಗಿ ಆ ದಿನಗಳಲ್ಲಿನ ನನ್ನ ಬಡತನ ನನ್ನನ್ನೆಂದೂ ಬಾಧಿಸಿದ್ದಿಲ್ಲ. ಒಮ್ಮೆ ನಾನು ರಜೆಗೆಂದು ತೀರ್ಥಹಳ್ಳಿಗೆ ಹೋಗಿದ್ದಾಗ ಪೊಲೀಸರು ಬಂದು ನನ್ನ ರೂಮನ್ನು ತಪಾಸಣೆ ಮಾಡಿದ್ದರು- ನಿರಂಜನ ನನಗೆ ಪರಿಚಯದವರೆಂದು. ಆದರೆ ಆಗಾಗಲೇ ಸ್ಟ್ಯಾಲಿನ್ನಿನ ಘೋರ ಪಾಪಗಳು ಬಯಲಾದ್ದರಿಂದ ನಾನು ಕಮ್ಯೂನಿಸ್ಟ್ ಪಕ್ಷದ ವಿರೋಧಿಯಾಗಿಬಿಟ್ಟಿದ್ದೆ.

ಈ ನನ್ನ ಬದಲಾವಣೆ ನಾನೀಗ ಹೇಳುತ್ತಿರುವಷ್ಟು ಸರಳವಲ್ಲ. ನನಗಿನ್ನೂ ನೆನಪಿದೆ: ಶರ್ಮ ಮತ್ತು ಅಡಿಗರ ಹೊಸ ಪದ್ಯಗಳನ್ನು ವಿರೋಧಿಸುತ್ತಿದ್ದ ನಾನು ರೊಮ್ಯಾಂಟಿಕ್ ಕಾವ್ಯವನ್ನು ಸಮರ್ಥಿಸಿ ಆರು ಲೇಖನಗಳನ್ನು 'ಜನಪ್ರಗತಿ'ಗೆಂದು ಬರೆದುಮುಗಿಸಿದ್ದೆ. ಇದನ್ನು ಬರೆಯಲು ಪ್ರೇರೇಪಿಸಿದ್ದವರು ನಿರಂಜನರು. ಚಾಮುಂಡಿ ಪುರಂನ ಕತ್ತಲಿನ ಕೋಣೆಯೊಂದರಲ್ಲಿ ಗಂಟುಗಂಟಾದ ನನ್ನ ಹರಕು ಹಾಸಿಗೆಯ ಮೇಲೆ ಕೂತು, ಒಂದು ದಿನ ಸುಮ್ಮನೇ ಎಲಿಯಟ್‌ನ 'ಪ್ರಿಲ್ಯೂಡ್ಸ್' ಎಂಬ ಪದ್ಯವನ್ನು ಓದುತ್ತಿದ್ದಂತೆ ನನಗೆ ಪದ್ಯ ತುಂಬ ಚೆನ್ನಾಗಿದೆ ಎನ್ನಿಸಿಬಿಟ್ಟಿತು. ಇದರಿಂದ ಕಕ್ಕಾಬಿಕ್ಕಿಯಾದ ನಾನು ಅಡಿಗರ ಹೊಸ ಪದ್ಯಗಳನ್ನೂ, ಶರ್ಮರ ಹೊಸ ಪದ್ಯಗಳನ್ನೂ ಮತ್ತೆ ಓದಿದೆ. ನಾನು ಯೋಚಿಸಿದ್ದೆಲ್ಲವೂ ತಪ್ಪೆಂದು ನನಗೆ ಅನ್ನಿಸಿತು. ಆ ದಿನಗಳಲ್ಲಿ ನಾನೊಂದಿಷ್ಟು ಕಥೆಗಳನ್ನು ಬರೆದು ಚಾಮುಂಡಿಪುರಂನಲ್ಲೇ ಇದ್ದ ಅನಂದರಿಗೆ ಓದಲೆಂದು ಕೊಟ್ಟಿದ್ದೆ. ಅವರು ತಮ್ಮ ಕೆಂಪು ಪೆನ್ಸಿಲನ್ನು ಉಪಯೋಗಿಸಿ ನನ್ನ ಕಥೆಗಳ ತುಂಬ ಕೋಪಾವೇಶದಿಂದ ಗೀಚಿದ್ದರು. ಇವು ನವ್ಯ ಕಥೆಗಳು ಎಂದು ಸಿಟ್ಟಿನಲ್ಲಿ ನನ್ನ ಕಥೆಗಳನ್ನು ಮೊದಲು ಕರೆದವರೇ ಅವರು. ಇಂಗ್ಲಿಷ್‌ನಲ್ಲಿ ಅವರದ್ದೊಂದು ವ್ಯಾಖ್ಯಾನವಿತ್ತು: "ಈ ಕಥೆಗಳ ರಹಸ್ಯವನ್ನು ಬಿಚ್ಚಬಲ್ಲ ಬೀಗದಕೈ ಲೇಖಕನ ಹತ್ತಿರ ಮಾತ್ರ ಇರುವುದು" ಎಂದು. ಆನಂದರ ವ್ಯಾಖ್ಯೆಯಿಂದ ನವ್ಯ ಕಾವ್ಯವನ್ನು ತಾತ್ವಿಕವಾಗಿ ವಿರೋಧಿಸುತ್ತಿದ್ದ ನಾನು ತಬ್ಬಿಬ್ಬಾಗಿದ್ದೆ. ಅಂದರೆ ಎಲ್ಲೋ ಆಳದಲ್ಲಿ ನಾನು ಈ ಹೊಸ ಮಾರ್ಗಕ್ಕೆ ಪರಿವರ್ತಿತನಾಗಿದ್ದೆ ಎಂದಿರಬಹುದು. ಆನಂದರು ಖಂಡಿಸಿದ ಕಥೆಗಳನ್ನು ಅಡಿಗರಿಗೆ ಕೊಟ್ಟೆ. ಅವರೂ ನನ್ನ ವೇಗ್‌ನೆಸನ್ನು (Vagueness) ಟೀಕಿಸಿದರು. ಆದರೆ ನನ್ನಲ್ಲೊಂದು ಹೊಸ ಧ್ವನಿಯನ್ನು ಗುರುತಿಸಿ ಮೆಚ್ಚಿದರು.

ಈ ಘಟನೆಗಳ ನಂತರ ನಾನು ವೈಚಾರಿಕವಾಗಿ ನಿರಂಜನರಿಂದ ದೂರವಾಗಬೇಕಾಗಿ ಅಡಿಗರಿಗೆ ಹತ್ತಿರವಾಗಬೇಕಾಗಿ ಬಂದಿತು. ಆದರೆ ಹೀಗೆ ದೂರವಾದಾಗಲೂ ನನ್ನ ಭಾವನಾಲೋಕವನ್ನು ನಿರಂಜನರು ಬಹಳ ಕಾಲದವರೆಗೆ ಆಳುತ್ತಲೇ ಇದ್ದರು. ನನ್ನ ಮೊದಲ ಕಥೆಯನ್ನು-'ಕ್ಷೈ ತಸ್ಕಿತು' ಎಂಬುದು ಅದರ ಹೆಸರು - ಪ್ರಕಟಿಸಿದವರು

ನಿರಂಜನರು. ಚಿತ್ರಗುಪ್ತದಲ್ಲೋ, ಜನಪ್ರಗತಿಯಲ್ಲೋ ಮರೆತಿದ್ದೇನೆ. ಆ ದಿನಗಳ ನನ್ನ ಬರೆವಣಿಗೆಯಲ್ಲಿ ನನಗೆ ಮಾದರಿಯಾಗಿದ್ದುದು ನಿರಂಜನರ 'ಕೊನೆಯ ಗಿರಾಕಿ'. ಒಬ್ಬ ಲೇಖಕನೆಂದರೆ ಹೇಗೆ ಬದುಕುತ್ತಾನೆ? ಹೇಗೆ ಕಾಣುತ್ತಾನೆ? ಎಂಬುದನ್ನು ನಮ್ಮ ಮನಸ್ಸಿನಲ್ಲಿ ಕೆಲವರು ನೆಡುತ್ತಾರೆ. ಮೊದಲು ಅಂತಹದೊಂದು ಚಿತ್ರವನ್ನು ನೆಟ್ಟವರು ಅ.ನ.ಕೃ. ಮತ್ತು ತ.ರಾ.ಸು. ಅದಾದ ಮೇಲೆ ಬೇಂದ್ರೆ ಮತ್ತು ಕುವೆಂಪು. ಹತ್ತಿರದಿಂದ ಅಂತಹದೊಂದು ಚಿತ್ರವನ್ನು ನನಗೆ ಕೊಟ್ಟವರು ನಿರಂಜನರು. ಅವರು ಕೈ ಮುರಿದುಕೊಂಡು ನೋವಿನಲ್ಲಿ ತಮ್ಮ ಮೊದಲ ಕಾದಂಬರಿಯನ್ನು ಬರೆದದ್ದು. ಪತ್ರಿಕೆಗಳಿಗೆ ಕಾಲಂಗಳನ್ನು ಬರೆದು ಸ್ವತಂತ್ರವಾಗಿ ಜೀವಿಸುತ್ತಿದ್ದುದು, ಜಗತ್ತಿನ ಅತ್ಯುತ್ತಮ ಸಾಹಿತ್ಯವನ್ನೆಲ್ಲಾ ಯಾವ ವಿಶ್ವವಿದ್ಯಾನಿಲಯದ ಹಂಗಿಲ್ಲದೆ, ತನ್ನ ಕಿರುಕೋಣೆಯ ಮೈಮರೆವಿನಲ್ಲಿ ಸ್ವಾಧೀನಪಡಿಸಿಕೊಂಡದ್ದು - ಇವೆಲ್ಲವೂ ಅಪ್ಯಾಯಿತವಾದ ವಿಷಯಗಳೇ. ಕನ್ನಡ ಇವತ್ತು ಏನಾಗಿದೆಯೋ ನನ್ನಂತಹ ಲೇಖಕರು ಏನಾಗಿದ್ದೇವೆಯೋ ಅದರ ಹಿಂದೆ ನಿರಂಜನರಂಥವರು ಇದ್ದಾರೆ. ಎಲ್ಲ ಭಿನ್ನಾಭಿಪ್ರಾಯಗಳ ನಡುವೆಯೂ ಇವನ್ನು ನಾನು ಸಂಕೋಚವಿಲ್ಲದೆ ಹೇಳುವೆ. ಎಮರ್ಜನ್ಸಿಯ ದಿನಗಳಲ್ಲಿ ನಿರಂಜನರು ಕಟ್ಟಿದ ಪ್ರಗತಿಪಂಥ ನನಗಿಷ್ಟವಾಗಲಿಲ್ಲ. ಆ ಬಗ್ಗೆ ನಾನು ಏನೋ ಮಾತಾಡಿದೆ. ಅದರಿಂದ ನಿರಂಜನರಿಗೆ ಬೇಸರವೂ ಆಯಿತು. ಆದರೆ ಆ ಮಾತಾಡುವಾಗಲೂ ನಿರಂಜನರು ನನಗೆ ಅಣ್ಣನಿದ್ದಂತೆ ಎಂಬುದನ್ನು ನಾನು ಮರೆತಿರಲಿಲ್ಲ. ದುರದೃಷ್ಟವೆಂದರೆ ಒಳಗೆ ಅನ್ನಿಸುವ ಇಂಥ ಗೌರವದ ಭಾವನೆಗಳನ್ನು ಕಿತ್ತಾಟದ ಸಮಯದಲ್ಲಿ ಹೇಳಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಯಾಕೆಂದರೆ ಹಾಗೆ ಹೇಳುವುದು ಸಜ್ಜನಿಕೆಯ ನಾಟಕ ಎನಿಸಬಹುದು, ಉಪಾಯ ಎನಿಸಬಹುದು. ಅಲ್ಲದೆ, ನಾವು ಹತ್ತಿರದವರು ದೂರವಾಗಿ ಬಿಡುತ್ತೇವೆ. ನಮ್ಮ ಅತ್ಯುತ್ತಮವಾದದ್ದನ್ನು ಬರೆಯುವ ಸಮಯದಲ್ಲಿ ನಾವು ನಮ್ಮ ಜೊತೆಯ ಲೇಖಕರಲ್ಲಿ ಅತ್ಯುತ್ತಮವಾದದ್ದನ್ನು ಗ್ರಹಿಸಿ ಮೆಚ್ಚಲಾರದವರೂ ಆಗಿಬಿಡುತ್ತೇವೆ. ಅದೊಂದು ಬರೆಯುವ ಪ್ರಕ್ರಿಯೆಯಲ್ಲೇ - ಏಕಾಗ್ರತೆಯಲ್ಲೇ - ಅನಿವಾರ್ಯವಾಗುವ ಮನಸ್ಥಿತಿ ಇರಬಹುದು. ನಮ್ಮದಷ್ಟೇ ನಮಗೆ ಉಜ್ವಲವಾಗಿ ಕಾಣಿಸುತ್ತಿರುವ ಇಂಥ ಒಂದು ಸ್ಥಿತಿಯಿಂದ ಒಳ್ಳೆಯ ಕೃತಿಗಳು ಬರುತ್ತವೆ ಎಂಬುದು ಮಾತ್ರ ಈ ಬಗೆಯ ಸ್ವಾರ್ಥಕ್ಕಿರುವ ಸಮರ್ಥನೆ. ಗರ್ಭಿಣಿಗೆ ತನ್ನ ಬಸುರೇ ಪ್ರಪಂಚವೆನ್ನಿಸುವಂತೆ ತಿಳಿದು ಬದುಕುವ ಲೇಖಕರಿಗೆ ಅಂತಹ ದಿನಗಳು ಮುಗಿದ ನಂತರ - ದೆವ್ವ ಹಿಡಿದಂತಿರುವ ಆವೇಶದ ಕಾಲ ಮುಗಿದ ನಂತರ - ಹೊರಗಿನ ಪ್ರಪಂಚದಲ್ಲಿ ಬೆಲೆಯುಳ್ಳದ್ದನ್ನು ಬರೆದವರು ಹಲವರಿದ್ದಾರೆ ಎಂಬ ಎಚ್ಚರ ಮೂಡುತ್ತದೆ. ನಮ್ಮದಲ್ಲದ್ದು ಕೂಡ ಸಂಸ್ಕೃತಿಗೆ ಎಷ್ಟು ಅಗತ್ಯವೆಂಬ ಜ್ಞಾನೋದಯವಾಗುತ್ತದೆ.

ನಮ್ಮ ಸಮಕಾಲೀನರನ್ನು ಅರ್ಥಮಾಡಿಕೊಳ್ಳಲು ಇರುವ ಅಡ್ಡಿ ಆತಂಕಗಳು ಹೀಗೇ ಇನ್ನೂ ಹಲವು. ಪರಿಷತ್ತಿನ ಚುನಾವಣೆಯಲ್ಲಿ ನಿರಂಜನರು ನಮಗೆ

ವಿರೋಧಪಕ್ಷದವರಾದರು. ನಾವು ಒಪ್ಪದ ನಿರಂಜನರ ಕ್ರಿಯೆಗಳನ್ನು, ವಿಚಾರಗಳನ್ನು ಬದಿಗೆ ಸರಿಸಿ, ಅಪ್ಪಟ ನಿರಂಜನರನ್ನು ಕಾಣಲು ಶ್ರಮಿಸಬೇಕು. ಅದನ್ನು ಮಾಡಲು ನಾನೂ ಅಪ್ಪಟನಾದ ಅನಂತಮೂರ್ತಿಯಾಗಬೇಕು. ಇಂಥ ಸವಾಲುಗಳನ್ನು ಎದುರಿಸುವುದರಲ್ಲೇ ಒಂದು ಸಂಸ್ಕೃತಿಯ ಜೀವಂತಿಕೆ ಇದೆ.

ನಮ್ಮ ಈ ಅಭಿನಂದನೆಯಿಂದ ಹಿರಿಯ ಗೆಳೆಯ ನಿರಂಜನರಿಗೆ ಸಂತೋಷ ವಾಗಲಿ ಎಂದು ಆಶಿಸುತ್ತೇನೆ. ○

[೧೯೮೬ ಫೆಬ್ರವರಿ ೧೫ರಂದು ಶನಿವಾರ ಬೆಂಗಳೂರಿನಲ್ಲಿ ನಿರಂಜನರವರ ಅಭಿನಂದನ ಸಂದರ್ಭದಲ್ಲಿ ಮಂಡಿಸಿದ ಲೇಖನ.]

ಸಹಜ ಔದಾರ್ಯದ ಸಾಹಿತಿ

—ಎಚ್. ಎಸ್. ಸುಜಾತಾ

ಇತರರು ಮಾಡಿದ ಕೆಲಸವನ್ನು - ಅದು ಎಷ್ಟೇ ಕಿರಿದಾದರೂ-ಹೃತ್ಪೂರ್ವಕ ವಾಗಿ ಮೆಚ್ಚುವ ವಿರಳರಲ್ಲಿ ನಿರಂಜನರು ಒಬ್ಬರು.

ಮೈಸೂರು ವಿಶ್ವವಿದ್ಯಾನಿಲಯದಿಂದ ನನಗೆ ಪಿಎಚ್.ಡಿ. ಪದವಿಯನ್ನು ದೊರಕಿಸಿಕೊಟ್ಟ ನನ್ನ ಪ್ರೌಢಪ್ರಬಂಧ 'ಎಂ.ಎಸ್. ಪುಟ್ಟಣ್ಣ: ಒಂದು ಅಧ್ಯಯನ' ಕೆಲವು ವರ್ಷಗಳ ಹಿಂದೆ ಆಗ ತಾನೇ ಪ್ರಕಟವಾಗಿತ್ತು. ಅದು ನನ್ನ ಪ್ರಥಮ ಕೃತಿಯೂ ಹೌದು. ನನ್ನ ಕೃತಿಯನ್ನು ಕುರಿತು ಸಾಹಿತಿಗಳ, ವಿದ್ವಾಂಸರ ಅಭಿಪ್ರಾಯ ಗಳನ್ನು ತಿಳಿಯಲು ನಾನು ಕುತೂಹಲದಿಂದ ಇದ್ದುದು ತೀರ ಸಹಜವಾಗಿತ್ತು.

ಒಂದು ದಿನ ಅಂಚೆಯಲ್ಲಿ ನನಗೊಂದು ಸಂತೋಷದ ಅಚ್ಚರಿ ಕಾದಿತ್ತು. ಅದು ನಿರಂಜನರ ಪತ್ರ. ಅವರು ನನ್ನ ಕೃತಿಯನ್ನು ಕೊಂಡು ಓದಿದ್ದರು; ನನ್ನ ಪರಿಶ್ರಮ, ಸಾಧನೆಗಳನ್ನು ಮುಕ್ತಮನಸ್ಸಿನಿಂದ ಹೊಗಳಿದ್ದರು; ಕೆಲವು ವಿಷಯ ಗಳನ್ನು ಚರ್ಚಿಸಬಹುದೆಂದು ಬರೆದಿದ್ದರು. ಆ ದಿನದ ನನ್ನ ಸಂತೋಷ ಹೇಳುವಂಥ ದಲ್ಲ, ಅದು ಅನುಭವವೇದ್ಯವಾದದ್ದು.

ಮುಂದೆ ಬೆಂಗಳೂರಿಗೆ ಹೋದಾಗ ಅವರನ್ನು ಕಂಡಿದ್ದೆ. ಅವರು ಪತ್ರದಲ್ಲಿ ಬರೆದಿದ್ದಂತೆ ನನ್ನ ಕೃತಿಯಲ್ಲಿನ ಹಲವಾರು ವಿಷಯಗಳ ಬಗೆಗೆ ಮಾತನಾಡಿದರು. ಹಿರಿಯ ಸಾಹಿತಿಯೊಬ್ಬರು ನನ್ನ ಕೃತಿಯನ್ನು ಇಷ್ಟು ಕೂಲಂಕಷವಾಗಿ ಓದಿದ್ದಕ್ಕಾಗಿ ಕೃತಜ್ಞತೆಯನ್ನು ಸೂಚಿಸಲು ನನ್ನ ಬಳಿ ಶಬ್ದಗಳಿರಲಿಲ್ಲ.

ಆನಂತರದ ದಿನಗಳಲ್ಲಿ ನಿರಂಜನರನ್ನು ಎಷ್ಟೋ ಬಾರಿ ಭೇಟಿಯಾಗಿದ್ದೇನೆ. ಸಾಹಿತ್ಯ, ಸಮಾಜಗಳಿಗೆ ಸಂಬಂಧಿಸಿದಂತೆ ಗಂಟೆಗಟ್ಟಳೆ ನಾವಿಬ್ಬರೂ ಮಾತಾಡಿದ್ದೇವೆ. ಎಲ್ಲ ಹೊತ್ತಿನಲ್ಲೂ - ಯಾವುದೇ ವಿಚಾರವಿರಲಿ - ಅವರ ಮಾತಿನಲ್ಲಿ ಕಾಣುತ್ತಿದ್ದುದು ಪೂರ್ಣ ಮಾಹಿತಿಯೊಡನೆ ಸಹಜವಾದ ಔದಾರ್ಯ ಹಾಗೂ ಕಳಕಳಿ.

ಈ ಗುಣ ತುಂಬ ಅಪರೂಪವಾದುದು. ○

ಕನ್ನಡಕ್ಕೊಬ್ಬರೆ ನಿರಂಜನ

–ದು. ನಿಂ. ಬೆಳಗಲಿ

ಇದೇ ೧೯೮೬ರ ಯುಗಾದಿಯ ದಿನ ಎಸ್. ಎಸ್. ಎಲ್. ಸಿ. ಮೌಲ್ಯಮಾಪನದ ಕೆಲಸಕ್ಕಾಗಿ ನಾನು ಬೆಂಗಳೂರಿನಲ್ಲಿದ್ದೆ. ಅಂದು ನಮ್ಮ ಕೆಲಸಕ್ಕೆ ಮಧ್ಯಾಹ್ನ ರಜೆ. ಮಧ್ಯಾಹ್ನ ಹೋಟೆಲಿನ ಊಟ ತೀರಿಸಿಕೊಂಡು ಲಾಲ್‌ಬಾಗದಲ್ಲಿ ಒಂದೆರಡು ಗಂಟೆ ಕಳೆದು, ಬಿಸಿಲು ತಗ್ಗಿದ ಬಳಿಕ ಜಯನಗರಕ್ಕೆ ಹೋಗಿ ನಿರಂಜನ ಅವರನ್ನು ಕಾಣುವ ಕಾರ್ಯಕ್ರಮ ಹಾಕಿಕೊಂಡಿದ್ದೆ. ಬೆಂಗಳೂರಿಗೆ ಹೋದಾಗ ಒಂದುದಿನ ಬಿಡುವು ಮಾಡಿಕೊಂಡು, ನಿರಂಜನರನ್ನು ಕಂಡುಬರುವುದು ನನ್ನ ಕ್ರಮ.

ಸಾಯಂಕಾಲ ೪ ಗಂಟೆಯ ಸುಮಾರಿಗೆ ಹೋದಾಗ ಸಹೋದರಿ ಅನುಪಮಾ ಅವರು ಸ್ವಾಗತಿಸಿದ್ದು, ಧ್ವನಿ ಕೇಳಿ ನಿರಂಜನ ತಮ್ಮ ಕೋಣೆಯಿಂದ ಹೊರಬಂದರು. ದೈಹಿಕವಾಗಿ ಒಂದಿಷ್ಟು ದುರ್ಬಲರಾಗಿ ಕಂಡುಬರುತ್ತಿದ್ದರೂ, ಮುಖದ ಮೇಲಿನ ಮಿಂಚು, ಕಣ್ಣುಗಳಲ್ಲಿಯ ಆ ಇಚ್ಛಾಶಕ್ತಿಗೆ ಯಾವ ಕುಂದೂ ಉಂಟಾಗದಂತೆ ಮಾನಸಿಕವಾಗಿ ದೃಢವಾಗಿಯೇ ಇದ್ದರು.

ಲೋಕಾಭಿರಾಮದ ಮಾತುಕತೆಗಳು ನಡೆದಂತೆ ಅನುಪಮಾ, "ಇಂದು ಯುಗಾದಿ. ಹೋಳಿಗೆ ತಿನ್ನಿ" ಎಂದು ಒಂದು ತಟ್ಟೆ ತಂದರು. ಅಂದು ಯುಗಾದಿ, ಹಳೆಯ ಮೈಸೂರು ಭಾಗದಲ್ಲಿ 'ಒಬ್ಬಟ್ಟು' ಮಾಡುತ್ತಾರೆ. ಅನುಪಮಾ 'ಹೋಳಿಗೆ' ಎಂದೇ ಉತ್ತರ ಕರ್ನಾಟಕದ ಹೆಸರು ಹೇಳಿ ತಂದಿದ್ದು ಸ್ವೀಕರಿಸಿದೆ. ಹಬ್ಬದ ದಿನ ನಾನು ಮನೆಯಲ್ಲಿ ಇರದೆ, ಎಲ್ಲರೂ ಚಿಂತಿಸುವ ಕಾಲಕ್ಕೆ ಸಹೋದರಿ ಅನುಪಮಾ ಆ ಕೊರತೆಯನ್ನು ನೀಗಿಸಿದ್ದು, ಹೋಳಿಗೆ ಸಿಹಿಯನ್ನು ತಪ್ಪಿಸಿಕೊಂಡಿರಲಿಲ್ಲ. ಅಂದಿನ

ಆ ನೋಳಿಗೆ ನಿರಂಜನ ದಂಪತಿಗಳ ಮಧುರ ಆತ್ಮೀಯ ಸಿಹಿ ಸಂಕೇತವಾಗಿತ್ತು. ನನ್ನ ಬಗೆಗೆ ನಿರಂಜನರ ಸಂಬಂಧ ಯಾವಾಗಲೂ ತೀರ ಆತ್ಮೀಯವಾಗಿಯೇ ಇದೆ. ಅನುಪಮಾ ಅವರು ಇದಕ್ಕೆ ಹೊರತಲ್ಲ. ಕಿರಿಯ ಲೇಖಕರನ್ನು ಕಾಣುವ ಅವರ ಸ್ವಭಾವಕ್ಕೆ ಇದೊಂದು ದೃಷ್ಟಾಂತವಷ್ಟೆ.

*　　*　　*　　*

'ಕುಳಕುಂದ ಶಿವರಾಯ' ಎಂಬ ಹೆಸರಿನ ಲೇಖನಗಳು, ಪುಸ್ತಕಗಳು ಪ್ರಕಟವಾಗುತ್ತಿರುವ ಸಮಯ ನಾನು ಐನಾಪುರ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದೆ. ಅದು ಒಂದು ಗ್ರಾಮೀಣ ಪ್ರದೇಶ. ಯಾವ ಪತ್ರಿಕೆಗಳೂ, ಪುಸ್ತಕಗಳೂ ಕಾಣದ ಆ ಸ್ಥಿತಿಯಲ್ಲಿ ಅಲ್ಲಲ್ಲಿ ಹೋದಾಗ ಆ ಹೆಸರು ಪರಿಚಿತವಾಗಿತ್ತು. ಒಮ್ಮೆ ಬೆಳಗಾವಿಗೆ ಹೋದಾಗ 'ವಿಮೋಚನೆ' ಕಾದಂಬರಿ ನೋಡಿದೆ. ಅದಾಗಲೇ ಶಿವರಾಯರು ನಿರಂಜನರಾಗಿದ್ದರು. ಅವರ ಪ್ರಥಮ ಕಾದಂಬರಿಯೇ ನನ್ನನ್ನು ಮಂತ್ರ ಮುಗ್ಧನನ್ನಾಗಿ ಮಾಡಿತ್ತು.

ಅನುಪಮಾ ಅವರು ತಮ್ಮ ವೈದ್ಯಕೀಯ ಶಿಕ್ಷಣವನ್ನು ಪೂರೈಸಿ ಧಾರವಾಡದಲ್ಲಿ ದವಾಖಾನೆ ತೆರೆದಿದ್ದು, ಆಗ ಪ್ರಥಮ ಸಲ ನಿರಂಜನರನ್ನು ಕಂಡಿದ್ದೆ. ಆಗ ನನ್ನ ಬಿಡಿಲೇಖನಗಳು ಪ್ರಕಟವಾಗುತ್ತಿದ್ದು, ಕಿರಿಯ ಲೇಖಕನೆಂದು ತುಂಬ ವಿಶ್ವಾಸದಿಂದ ಅವರು ಕಂಡಿದ್ದರು.

*　　*　　*　　*

ಅಂದಿನ ಆ ನಂಟು ಮುಂದೆ ಅಂಟಿಕೊಂಡಂತೆ ಬೆಳೆಯುತ್ತಲೇ ಹೋಯಿತು. ನಿರಂಜನ ಬೆಂಗಳೂರಿಗೆ ಹೋಗಿ ಸ್ಥಾಯಿಯಾದ ಬಳಿಕ, ಭೇಟಿ ವಿರಳವಾಯಿತು. ನಿರಂಜನರು ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರಕ್ಕಾಗಿ ಮಕ್ಕಳ ವಿಶ್ವಕೋಶ 'ಜ್ಞಾನಗಂಗೋತ್ರಿ' ಸಂಪಾದಿಸುವ ಕಾಲಕ್ಕೆ ಕೊನೆಯ ಸಂಪುಟಕ್ಕಾಗಿ ನನ್ನಿಂದ ಏಳು ಲೇಖನಗಳನ್ನು ಬರೆಯಿಸಿ "ಯಾವ ಬದಲಾವಣೆಯನ್ನೂ ಮಾಡದೆ ಇದ್ದಂತೆ ಇಡಲಾಗಿದೆ. ನನ್ನ ಶ್ರಮ ಕಡಿಮೆ ಮಾಡಿದಿರಿ" ಎಂದು ಶಹಬ್ಬಾಶ್‌ಗಿರಿ ಕೊಟ್ಟು ಲೇಖನಗಳ ಐತಿಹಾಸಿಕ ಖಚಿತತೆಗಾಗಿ ಬೆನ್ನು ಚಪ್ಪರಿಸಿದ್ದರು. ಅದೇ ಅವರ ಹೊಗಳಿಕೆಯ ಬೆನ್ನು ಹತ್ತಿ ಇನ್ನೂ ಮುಂದುವರಿದಾಗ, ನನಗೆ ಮತ್ತೂ ಪ್ರೋತ್ಸಾಹ ಕೊಟ್ಟು ಸಹಕರಿಸಿದರು.

ಆಗ ಪ್ರಕಟವಾಗುತ್ತಿದ್ದ ಜನಪ್ರಿಯ ವಾರ ಪತ್ರಿಕೆ 'ಕರ್ಮವೀರ'ದಲ್ಲಿ ನನ್ನ ಒಂದು ಮಕ್ಕಳ ಕತೆ ಬಂದಿತ್ತು. ಅದು ೧೯೭೭ರಲ್ಲಿ. ನನ್ನ ಒಲವು ವಿಶೇಷವಾಗಿ ಸಣ್ಣ ಕಥೆ, ಕಾದಂಬರಿಗಳ ಬಗೆಗೆ ಇದ್ದರೂ, ಶಿಕ್ಷಕ ವೃತ್ತಿಯಲ್ಲಿದ್ದ ನಾನು ಮಕ್ಕಳಿಗಾಗಿ

ಏಕೆ ಕಥೆ ಬರೆಯಬಾರದೆಂದು, ಆ ಕಥೆ ಬರೆದಿದ್ದೆ. ತುಂಬಾ ಚೆನ್ನಾಗಿದೆ ಎಂದು ಪ್ರತಿಕ್ರಿಯೆ ಬಂದವು. ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಕರ್ನಾಟಕ ಸಹಕಾರಿ ಪ್ರಕಾಶನದ ಪ್ರಧಾನ ಸಂಪಾದಕರಾಗಿದ್ದ ನಿರಂಜನರನ್ನೇ ಕೇಳಿ ಬರೆದೆ.

"ಒಂದೇ ಕಥೆ, ಪುಸ್ತಕ ಚಿಕ್ಕದಾಗುತ್ತದೆ. ಇನ್ನೊಂದು ಕಥೆ ಸೇರಿಸಿ ಕಳಿಸಿದರೆ ಸಂಪಾದಕ ಸಮಿತಿಯ ಮುಂದಿಟ್ಟು ನಿರ್ಧರಿಸಲಾಗುವುದು" ಎಂಬ ಉತ್ತರ ಬಂತು. ವಶೀಲಿಗೆ ಬಾಗದ ನಿರಂಜನರ ಸ್ವಭಾವದ ಬಗೆಗೆ ನನಗೆ ಮೊದಲೇ ಗೊತ್ತು. ಅದರಂತೆ ಒಪ್ಪಿ ಎರಡು ಕಥೆಗಳನ್ನು ಕಳಿಸಿದಾಗ, ಸಂಪಾದಕರ ಸಮಿತಿ ಯಿಂದ ಆಯ್ಕೆಯಾಗಿ 'ಬದುಕುವ ಬಯಕೆ' ಎಂಬ ಹೆಸರಿನಿಂದ ಪ್ರಕಟವಾಯಿತು. "ಎಳೆಯರ ಮನೋವೃತ್ತಿಯನ್ನು ಬಲ್ಲ ಬೆಳಗಲಿ ಅವರ ಈ ಕಥೆಗಳು ಬಹುಕಾಲ ಬಾಳುವಂಥವು. ಪ್ರಕಾಶನ ಮಂದಿರವು ಹೆಮ್ಮೆಯಿಂದ ಈ ಸಂಕಲನವನ್ನು ಪ್ರಕಟಿಸು ತ್ತದೆ" ಎಂದು ನಿರಂಜನ ತಮ್ಮ ಶರಾ ಸೇರಿಸಿದ್ದರು. ನಿರಂಜನರ ಮೌಲ್ಯಮಾಪನ ಸತ್ಯ ವಾಗಿತ್ತು. ಈ ಪುಸ್ತಕಕ್ಕೆ ರಾಷ್ಟ್ರೋತ್ಥಾನ ಪರಿಷತ್ತಿನ ಬಹುಮಾನ ಹಾಗೂ ರಾಷ್ಟ್ರೀಯ ಪ್ರಶಸ್ತಿ ದೊರೆತವು.

* * * *

ಪ್ರಗತಿಶೀಲ ಚಳುವಳಿಗೆ ಇನ್ನೊಂದು ತಿರುವು ಬಂದು 'ಪ್ರಗತಿ ಪಂಥ' ಸ್ಥಾಪಿತವಾದಾಗ ನಾನೂ ಅದರಲ್ಲಿ ಭಾಗವಹಿಸಿದೆ. ೧೯೭೬ರಲ್ಲಿ ಅದರ ಪ್ರಥಮ ಸಮ್ಮೇಳನ ದಾವಣಗೆರೆಯಲ್ಲಿ ಸೇರಿದಾಗ ನಿರಂಜನರೇ ಅದರ ಅಧ್ಯಕ್ಷರು. ಆಗ ಅಧ್ಯಕ್ಷೀಯ ಭಾಷಣ ಮಾಡುವ ಮುಂದೆ ಭಾವಾವೇಶಕ್ಕೆ ಒಳಗಾಗಿ ನಿರಂಜನರು ಬಿಕ್ಕಿ ಬಿಕ್ಕಿ ಅತ್ತರು. ನಿರಂಜನರು ತೀರ ಭಾವುಕ ವ್ಯಕ್ತಿ. ಅದಾಗಲೇ ದೈಹಿಕವಾಗಿ ದುರ್ಬಲ ರಾಗಿದ್ದ ಅವರನ್ನು ಅನುಪಮಾ ಸಂತೈಸುವುದನ್ನು ಕಂಡಾಗ ಎಲ್ಲರ ಕಣ್ಣು ತೇವ ಗೊಂಡಿದ್ದವು.

ಅದೇ ಭಾವುಕತೆಯ ಅಳು ಮೊನ್ನೆ ಮರುಕಳಿಸಿದ್ದನ್ನು ಕಂಡೆ.

ಇದೇ ಎಪ್ರಿಲ್ ೧೩ರಂದು ಕಾದಂಬರಿಕಾರ ವ್ಯಾಸರಾಯ ಬಲ್ಲಾಳರ ಸತ್ಕಾರ ಸಮಾರಂಭವನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದು ನಾನೂ ಹೋಗಿದ್ದೆ. ಇವಕ್ಕೆ ಕಾರಣರು ನಿರಂಜನ ದಂಪತಿಗಳೇ. ಬಲ್ಲಾಳರ ಆತ್ಮೀಯ ಸಂದರ್ಭಗಳನ್ನು ಸ್ಮರಿಸುತ್ತಿರುವಲ್ಲಿ ನಿರಂಜನರಿಗೆ ಅದೇ ಬಗೆಯ ದುಃಖ ಉಮ್ಮಳಿಸಿ, ಅಳುವಿನಲ್ಲಿಯೇ ಮಾತನ್ನು ಮುಂದುವರಿಸಿದರು. ನಿರಂಜನರ ಭಾವಾವೇಗ, ಅವರ ತೀರ ಆತ್ಮೀಯ ಸಂಬಂಧವನ್ನು ತೋರುತ್ತದೆ ಅಷ್ಟೆ.

* * * *

ಪ್ರಗತಿಶೀಲ ಚಳುವಳಿ ಜೀವಂತವಾಗಿರಲು ನಿರಂಜನ ತುಂಬ ಶ್ರಮಿಸಿದ್ದಾರೆ. ೧೯೭೮ರಲ್ಲಿ ದಾವಣಗೆರೆ ಸಮ್ಮೇಳನವಾದ ಬಳಿಕ ಪುತ್ತೂರು, ಮಹಾಲಿಂಗಪುರಗಳಲ್ಲಿ ಅಖಿಲ ಕರ್ನಾಟಕ ಮಟ್ಟದ ಸಮ್ಮೇಳನಗಳಾದವು. ಅಲ್ಲಲ್ಲಿ ಜಿಲ್ಲಾ ಮಟ್ಟದ ಸಮ್ಮೇಳನಗಳೂ ಜರುಗಿದವು. ಮಹಾಲಿಂಗಪುರ ಸಮ್ಮೇಳನಕ್ಕೆ ನಾವೇ ನಿಂತೆವು. ಆ ಸಮ್ಮೇಳನಕ್ಕೆ ನಿರಂಜನ ಬರದಿದ್ದರೂ ಅನುಪಮಾ ಅವರನ್ನು ಕಳಿಸಿದ್ದರು. ನಿರಂಜನರು ಕೊಟ್ಟ ಸ್ಫೂರ್ತಿಯಿಂದ ನಾಲ್ಕಾರು ಸಮ್ಮೇಳನಗಳನ್ನು ಜರುಗಿಸಿದೆವು. ತುಂಬಾ ಯಶಸ್ವಿಯಾದವು.

* * * *

ನಿರಂಜನರ ಬರವಣಿಗೆಯಾಗಲಿ, ಭಾಷಣವಾಗಲಿ, ಆಳಕ್ಕೆ ಇಳಿದು ಅಂತರಂಗವನ್ನು ಜಾಲಾಡಿಸುವ ಗುಣಗಳಾಗಿವೆ. ಅವರ ಕಥೆ ಕಾದಂಬರಿಗಳು ಕನ್ನಡಕ್ಕಷ್ಟೆ ಸೀಮಿತವಾಗದೆ, ಕನ್ನಡದ ಸತ್ವವನ್ನು ಗಡಿದಾಟಿ, ಸಾಗರದಾಚೆ ತೋರಿದ್ದು, ಕನ್ನಡಿಗರಿಗೆ ಹೆಮ್ಮೆಯ ವಿಷಯ.

ನಿರಂಜನರ ಶ್ರೇಷ್ಠ ದರ್ಜೆಯ ಕಥೆ - ಕಾದಂಬರಿಗಳು ಎಷ್ಟು ವಿಮರ್ಶೆಗೆ ಒಳಗಾಗಬೇಕಿತ್ತೋ, ಇನ್ನೂ ಆಗದೆ, ಸಾಹಿತಿಗಳ ಗುಂಪುಗಾರಿಕೆಯಿಂದ ಒಂದಿಷ್ಟು ನಿರ್ಲಕ್ಷಿತವಾಗಿದ್ದರೂ, ಅವುಗಳ ಸಾಮರ್ಥ್ಯವನ್ನು ಯಾರೂ ಪ್ರಶ್ನಿಸುವಂತಿಲ್ಲ. ಕನ್ನಡ ಸಾಹಿತ್ಯದ ಕಥಾ ಕ್ಷೇತ್ರದಲ್ಲಿ ಅವರ ಕೃತಿಗಳು ಧ್ರುವತಾರೆ. ನಿರಂಜನರ ಅಂಕಣ ಬರಹಗಳೂ ಶ್ರೇಷ್ಠ ದರ್ಜೆಯವು.

ನಿರಂಜನರು ಕನ್ನಡದ ಸಮಕಾಲೀನ ಅತ್ಯುತ್ತಮ ಬರಹಗಾರರು. ಈಗ ಅವರು ಬರೆಯುತ್ತಿರುವ ಸುದೀರ್ಘ ಕಾದಂಬರಿ ಬೇಗ ಪೂರೈಸಿ, ಅವರು ಅನಾರೋಗ್ಯದಿಂದ ಇನ್ನೂ ಚೇತರಿಸಿಕೊಳ್ಳಲೆಂದು ಹಾರೈಸಿ - ಇದೇ ಆತ್ಮೀಯ ಹಾರೈಕೆಯನ್ನು ಸಹೋದರಿ ಅನುಪಮಾ ಅವರ ಆರೋಗ್ಯದ ಬಗೆಗೂ ಬಯಸುತ್ತೇನೆ.

ಒಂದು ಬಗೆಯಲ್ಲಿ ಕನ್ನಡಕೊಬ್ಬರೇ 'ಕೈ' ಎಂದಂತೆ, ಇನ್ನೊಂದು ರೀತಿಯಲ್ಲಿ ಕನ್ನಡಕ್ಕೊಬ್ಬರೇ ನಿರಂಜನ ಎಂದರೆ, ಅದೇನೂ ಅತಿಶಯೋಕ್ತಿಯಲ್ಲ. ○

೮ ಸಮಯ ನಿಷ್ಠುರ - ಕರ್ತವ್ಯ ಕಠೋರ

–ಶಂಕರ ಪಾಟೀಲ

ನಿರಂಜನರ ಪರಿಚಯ ನನಗೆ ಮೂರು ದಶಕಗಳ ಹಿಂದೆ ಮೈಸೂರಲ್ಲಿ ಸೇರಿದ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಆಯಿತು. ನಾನು ಆಗ 'ಸಂಯುಕ್ತ ಕರ್ನಾಟಕ'ದ ಪ್ರತಿನಿಧಿಯಾಗಿ ಹೋಗಿದ್ದೆ. ದಿ। ದ. ಬಾ. ಕುಲಕರ್ಣಿ ಅವರು ಪರಿಚಯ ಮಾಡಿಕೊಡುತ್ತ, "ಶಂಕರ, ಇವರನ್ನು ಬಿಡಬೇಡಿ. ನಿಮಗೆ ಇವರಿಂದ ತುಂಬ ಪ್ರಯೋಜನವಾದೀತು" ಎಂದರು. ನಾನೂ ಸಾಹಿತ್ಯಾಸಕ್ತ ವಿದ್ಯಾರ್ಥಿಯೆಂದು ಹೀಗೆ ಹೇಳಿರಬೇಕು ಎಂದುಕೊಂಡಿದ್ದೆ. ದತ್ತಣ್ಣನ ಈ ಮಾತು ಪ್ರತ್ಯಕ್ಷಕ್ಕೆ ಬಂದುದು ೧೯೭೬ರಲ್ಲಿ ನಾನು 'ಕರ್ಮವೀರ'ಕ್ಕೆ ಬಂದಾಗ. ನನಗೆ ಅವಶ್ಯವಾಗಿರುವ ಬರವಣಿಗೆ ಸಕಾಲಕ್ಕೆ ನಿರಂಜನರು ಒದಗಿಸುತ್ತಿದ್ದರಲ್ಲದೆ, ಇತರರ ಲೇಖನಗಳನ್ನೂ ತಮ್ಮ ಮೂಲಕ ಬರೆಸಿಕೊಡುತ್ತಿದ್ದರು.

'ಸ್ವಾಮಿ ಅಪರಂಪಾರ' ಕಾದಂಬರಿಯನ್ನು ನಾನು ಕೇಳಿದ ಅಲ್ಪ ಅವಧಿಯಲ್ಲಿ ಬರೆದು ಕಳಿಸಿದಾಗ ನನಗೆ ಸಂತೋಷದೊಂದಿಗೆ ಆಶ್ಚರ್ಯವೂ ಆಯಿತು. ಅವರು 'ಇನ್ಫಾ' (ಇಂಡಿಯಾ ನ್ಯೂಸ್ ಅಂಡ್ ಫೀಚರ್) ಸಂಸ್ಥೆಯಲ್ಲಿದ್ದಾಗ ವಾರ ವಾರವೂ ವಿವಿಧ ವಿಷಯಗಳ ಬಗ್ಗೆ ಬರೆಯುತ್ತಿದ್ದರು. ಕರ್ಮವೀರದಲ್ಲಿ ಅವರು ಅರ್ಧಾಂಗವಾಯುವಿನಿಂದ ಪೀಡಿತರಾಗುವವರೆಗೂ ಪ್ರತಿವಾರವೂ ಬರೆಯುತ್ತಿದ್ದರು.

ಒಮ್ಮೆಯೂ ನಾನವರನ್ನು ನೆನಪಿಸುವ ಸಂದರ್ಭ ಬರಲಿಲ್ಲ. ಅವರ ಲೇಖನದ ವಿಷಯದಲ್ಲಿ ಒಂದು ಸಾಲನ್ನಾದರೂ ಕತ್ತರಿಸುವ ಪ್ರಶ್ನೆಯೂ ಹುಟ್ಟಲಿಲ್ಲ. ಇಷ್ಟು ನಿಯಮಿತವಾದ ಸಮಯಪ್ರಜ್ಞೆ ಒಂದಾದರೆ, ಬರವಣಿಗೆಯಲ್ಲಿ ಹೇಳಬೇಕಾದ, ತಿಳಿಸಬೇಕಾದ ವಿಷಯವನ್ನು ನೇರವಾಗಿ, ಸ್ಪಷ್ಟವಾಗಿ ಬರೆಯುತ್ತಿದ್ದುದು ಇನ್ನೊಂದು. ಟೀಕೆ, ಟಿಪ್ಪಣಿ ಇದ್ದರೆ ಯಾರನ್ನೂ ಎಂದೂ ವೈಯಕ್ತಿಕವಾಗಿ ಬರೆಯಲಿಲ್ಲ. ಆದೇ ಸಾಹಿತ್ಯಿಕ ಅಭಿಪ್ರಾಯವಿದ್ದಾಗ ಅದು ಮೊನಚೂ, ಹರಿತವೂ, ತೀಕ್ಷ್ಣವೂ ಆಗಿರುತ್ತಿತ್ತು. ನನ್ನ ಸಂಪಾದಕ ಜೀವನದಲ್ಲಿ ಇಂಥ ಸಮಯಪ್ರಜ್ಞ, ವಸ್ತುನಿಷ್ಠ ಬೇರೊಬ್ಬ ಬರಹಗಾರನನ್ನು ನಾನು ಕಂಡಿಲ್ಲ. ಅವರು ಅನಾರೋಗ್ಯ ಪೀಡಿತರಾದ ನಂತರವೂ ಬಹು ಆಳವಾಗಿ ಅಧ್ಯಯನ ಮಾಡಿದ ಈಜಿಪ್ತಿನ ಪ್ರಾಚೀನ ಇತಿಹಾಸವನ್ನು ಆಧರಿಸಿ ಬರೆದ 'ಮೃತ್ಯುಂಜಯ' ಕಾದಂಬರಿಯನ್ನು ಕರ್ಮವೀರಕ್ಕೆ ಕೊಟ್ಟರು.

ಈ ಬಗೆಯ ನಿಷ್ಠೆಯನ್ನೇ ತಮ್ಮ ಜೀವನದಲ್ಲಿ ರೂಢಿಸಿಕೊಂಡು, ಇನ್ನಿತರರೂ ಬೆಳೆಯಲು ಅವಕಾಶ ಮಾಡಿಕೊಟ್ಟರು. 'ಜ್ಞಾನಗಂಗೋತ್ರಿ'ಯ ಸಂಪಾದಕರಾಗಿದ್ದಾಗ,

ಬೆಳಗ್ಗೆ ೮ ಗಂಟೆಗೆ ಮನೆ ಬಿಟ್ಟು, ಮುದ್ರಣಾಲಯಕ್ಕೆ ಹೋಗಿ ಅಚ್ಚುಕರಡು ತಿದ್ದುವುದನ್ನು ಮುಗಿಸಿ, ೧೧ಕ್ಕೆ ಸಂಪಾದಕೀಯ ಸಭೆ ಸೇರುತ್ತಿದ್ದರು. ದಿನದ ಕಾರ್ಯದ ಪರಾಮರ್ಶೆಯ ಜೊತೆಗೆ, ಸಹಾಯಕರು ತಿಳಿಸಬಹುದಾದ ವಿಷಯಗಳ ಪರಿಶೀಲನೆ ನಡೆಸುತ್ತಿದ್ದರು. ಕರಾರುವಾಕ್ಕಾಗಿ ಸಮಯ ಪರಿಪಾಲನೆ, ಚರ್ಚೆಯಲ್ಲಿ ಪಾಲ್ಗೊಳ್ಳುವಿಕೆಗಳು ನಡೆಯಬೇಕೆಂದು ಆಶಿಸುತ್ತಿದ್ದರು. ಆ ಸಂದರ್ಭದಲ್ಲಿ ಸಂದರ್ಶಕರಿಗೆ ಕಾಣಲು ಅವಕಾಶವಿಲ್ಲ. "ಸ್ವಲ್ಪ ಇರ್‍ತೀರಾ ? ನಂತರ ಸೇರೋಣವೆ ?" ಎಂದು ನಯವಾಗಿ ತಿಳಿಸಿ, ಪರಸ್ಪರ ಅನುಕೂಲ ಸಮಯ ಗೊತ್ತುಪಡಿಸಿ ಕಳಿಸುತ್ತಿದ್ದರು. ಗಂಗೋತ್ರಿಯ ಕಾರ್ಯದಲ್ಲಿ ಯಾವ ಸಮಯದಲ್ಲೂ ವ್ಯತ್ಯಯ ಆಗದಂತೆ ನೋಡಿಕೊಳ್ಳುತ್ತಿದ್ದರು. ಇಂಥ ನಿಷ್ಠ ಸಮಯ ಪರಿಪಾಲನೆ, ಅಷ್ಟೇ ಕಠೋರ ಕರ್ತವ್ಯನಿಷ್ಠೆ ನಿರಂಜನರ ಅನಾರೋಗ್ಯ ಸಂದರ್ಭದಲ್ಲೂ ತಪ್ಪಲಿಲ್ಲ. ದಿ। ಡಾ। ಶಿವರಾಂ (ರಾ.ಶಿ.) ಹೇಳಿರುವಂತೆ ಅಂತಹ ಒಂದು ದೃಢವಾದ ಮನೋಬಲ ನಿರಂಜನರದು. ಅವರು ಇಂದೂ ಅಷ್ಟೇ ಕಾರ್ಯತತ್ಪರರು.

ಅವರ ನಿಯಮಿತವಾದ ಪತ್ರವ್ಯವಹಾರವೂ ಉಲ್ಲೇಖನೀಯ. ನನ್ನ ಪ್ರತಿಯೊಂದು ಪತ್ರಕ್ಕೂ, ತಾವು ಎಂಥ ಸ್ಥಿತಿಯಲ್ಲಿದ್ದರೂ, ಸಕಾಲದಲ್ಲಿ ಉತ್ತರ ಬಂದೇ ಬರುತ್ತಿತ್ತು. ನಾನು ಅಂಚೆಯಲ್ಲಿ ಕಳಿಸುತ್ತಿದ್ದ 'ಮೃತ್ಯುಂಜಯ'ದ ಕರಡನ್ನು ತಾವೇ ಸ್ವತಃ ತಿದ್ದಿ, ನಾಲ್ಕನೆಯ ದಿನ ಆ ತಿದ್ದುಪಡಿ ನನ್ನ ಕೈಸೇರುವಂತೆ ನೋಡಿಕೊಳ್ಳುತ್ತಿದ್ದರು. ನನ್ನ ಜೀವನದ ಹಲವಾರು ಹತಾಶೆಯ ಕ್ಷಣಗಳನ್ನು ಹೇಗೋ ತಿಳಿದುಕೊಂಡು, ಬರೆಯುತ್ತಿದ್ದ ಪತ್ರಗಳು ನನ್ನಲ್ಲಿ ಭರವಸೆಯನ್ನು ಮೂಡಿಸಿ, ಭವಿಷ್ಯದ ಸುಖೀದಿನಗಳನ್ನು ಕಲ್ಪಿಸಿ ಮುನ್ನಡೆಯುವಂತೆ ಮಾಡುತ್ತಿದ್ದುವು. ಇಂದಿಗೂ ಅವರ ಸ್ನೇಹ ಸಿಂಚನ ನನ್ನ ಮೇಲೆ ಆಗುತ್ತಲೇ ಇದೆ. ಸ್ನೇಹ ಜೀವಿ ಹಸನ್ಮುಖಿ ನಿರಂಜನರ ಚಿತ್ರ ಒಂದು ವಿಶೇಷ ಅನುಭವ. ಅವರ ಬದುಕೇ ಒಂದು ತಪಸ್ಸು. ○

ವಿಶಿಷ್ಟ ವ್ಯಕ್ತಿತ್ವ

—ಎಸ್. ಎನ್. ಶಿವಸ್ವಾಮಿ

ನಾನು ಕಂಡ ಕುಳಕುಂದ ಶಿವರಾಯರಿಗೂ ನಿರಂಜನರಿಗೂ ಇರುವ ವ್ಯತ್ಯಾಸ ಒಂದೇ. ಆಗ ಶಿವರಾಯರು ಮೂವತ್ತು ವರ್ಷದ ತರುಣ: ಈಗ ನಿರಂಜನರು ಅರುವತ್ತಮೂರರ ತರುಣ. ಅಷ್ಟೆ. ಇನ್ನೂ ಒಂದು ವ್ಯತ್ಯಾಸ ಗುರುತಿಸಬಹುದಾದರೆ, ಅದು ಇಂದಿನ ನಿರಂಜನರ ಮುಂದಿರುವ ಅವರ ಬರಹಗಳ ರಾಶಿ. ನಿರಂಜನರು

ಆಗಲೂ ಪುಷ್ಕಳವಾಗಿ ಬರೆಯುತ್ತಿದ್ದರು; ಈಗಲೂ ಬರೆಯುತ್ತಲೇ ಇದ್ದಾರೆ. ಶೈಲಿ ಸ್ವಲ್ಪ ಬದಲಾಗಿದೆಯೇನೋ. ಮಾತುಗಳ ಮೌಲ್ಯದ ಕಡೆ, ವಿವರಣೆಯ ಔಚಿತ್ಯದ ಕಡೆ ಗಮನ ಹೆಚ್ಚಿ, ಹೇಳಬೇಕಾದ್ದನ್ನು ಸೊಗಸಾದ ಗದ್ಯದ ಚೌಕಟ್ಟಿನಲ್ಲಿ ಇನ್ನೂ ಹದವಾಗಿ, ಇನ್ನೂ ಮೋಹಕವಾಗಿ ಈಗ ಹೇಳುತ್ತಿದ್ದಾರೆ. ಆಗಿನ ಅಂಕಣಗಳು, ಈಗಿನ 'ಮೃತ್ಯುಂಜಯ'ದಂಥ ಚಿರಸ್ಮರಣೀಯ ಕಾದಂಬರಿಗಳು, ನಡುವೆ ಅವರ ಲೇಖನಿಯಿಂದ ನಿರರ್ಗಳವಾಗಿ ಹರಿದುಬಂದ ವಿವಿಧ ಪ್ರಕಾರಗಳ ಕೃತಿಗಳೆಲ್ಲವೂ ಸಾರ್ಥಕ ಸಾಹಿತ್ಯಕ್ರಿಯೆಯ ಪ್ರತೀಕಗಳಂತೆ ಕನ್ನಡಜನರ ಗ್ರಂಥಕೋಶಗಳನ್ನು ಬೆಳಗಿವೆಯೆನ್ನುವುದು ಅವರನ್ನು ಚೆನ್ನಾಗಿ ಬಲ್ಲ, ಹೆಚ್ಚು ಕಡಿಮೆ ಅವರ ಎಲ್ಲಾ ಬರೆಹಗಳನ್ನು ಓದಿರುವ, ನನ್ನಂಥ ಗೆಳೆಯರಿಗೆ ಹೆಮ್ಮೆ. ಹೆಮ್ಮೆ, ನಾವೂ ಆ ಉತ್ತಮ ಕೃತಿಗಳನ್ನು ಓದಿರುವುದಕ್ಕಾಗಿ. ಹೆಚ್ಚಿನ ಹೆಮ್ಮೆ, ಅವು ಪ್ರತಿಭಾವಂತ ಮಿತ್ರರೊಬ್ಬರ ಅಭಿವ್ಯಕ್ತಿಯೆನ್ನುವುದಕ್ಕಾಗಿ.

ರಾಜಕೀಯದಲ್ಲಿ ಕೈಹಾಕಿದವರ ಪೈಕಿ ಅತ್ಯಂತ ಮೆಲುದನಿಯಲ್ಲಿ ಮಾತನಾಡುವವರು ಯಾರೆಂದು ಕೇಳಿದರೆ ನಾನೇನೋ ನಿರಂಜನರಿಗೇ ಓಟು ಹಾಕುತ್ತೇನೆ. ಪಡಸಾಲೆಯಲ್ಲಿ ನಾಲ್ಕು ಮಂದಿ ಅವರೊಡನೆ ಮಾತನಾಡುತ್ತಿದ್ದರೆ, ಕೊನೆಯ ಸಾಲಿನಲ್ಲಿರುವವರಿಗೆ ಅವರ ಒಂದೆರಡು ಮಾತುಗಳು ಕೇಳಿಸದೆಯೇ ಹೋಗಬಹುದು. ಅಷ್ಟು ಮೃದುತ್ವ. ಈ ಮೃದುತ್ವ ಮಾನವೀಯತೆಯಲ್ಲಿ ಅಚಲ ನಂಬಿಕೆಯಿದ್ದವರಲ್ಲಷ್ಟೇ ಕಂಡುಬಂದೀತು. ಮೃದುತನ, ಮಾನವೀಯ ಆಲೋಚನೆ - ಈ ಗುಣಗಳೇ ನಿರಂಜನರಲ್ಲಿ ನನ್ನನ್ನು ಮುಖ್ಯವಾಗಿ ಆಕರ್ಷಿಸಿದಂಥ ಗುಣಗಳು.

ಸದಾ ಹಸನ್ಮುಖಿ. ಸ್ನೇಹಿತರನ್ನು ಕಂಡರಂತೂ ಎಲ್ಲಿಲ್ಲದ ಸಂತೋಷ. ಆಗಲೂ ಹೀಗೇ ಈಗಲೂ ಹೀಗೇ. ಇದ್ದ ಕೆಲಸವನ್ನೆಲ್ಲ ಬದಿಗಿಟ್ಟು ಗಂಟೆಗಟ್ಟಲೆ ಮಾತುಕತೆಯಾಗಬೇಕು. ನಾವು ಮಾತನಾಡುವ ವಿಷಯ ಏನಾದರೂ ಇದ್ದೀತು. ಸಾಹಿತ್ಯಲೋಕದ ಆಗುಹೋಗುಗಳು, ರಾಜಕೀಯದಲ್ಲಿನ ಏರುಪೇರುಗಳು, ನನ್ನ ಅಣ್ಣ ತಮ್ಮಂದಿರ ಕುಶಲ ವೃತ್ತಾಂತ, ತಮ್ಮ ಅಚ್ಚುಮೆಚ್ಚಿನ ಮಕ್ಕಳು ತೇಜಸ್ವಿನಿ, ಸೀಮಂತಿನಿಯರ ಓದು ಬರೆಹದ ಪ್ರಗತಿ, ಹಳೆಯ ಸಂಗತಿಗಳ ಮೆಲುಕು, ಹೊಸದಾಗಿ ಓದಿದ ಪುಸ್ತಕಗಳ ಕುರಿತು ವಿಚಾರ ವಿನಿಮಯ ಇತ್ಯಾದಿ ಹತ್ತು ಹಲವು.

ನಿರಂಜನರು ಈಚಿನ ವರ್ಷಗಳಲ್ಲಿ ಅನುಭವಿಸಿದಷ್ಟು ದೈಹಿಕ, ಮಾನಸಿಕ ಯಾತನೆಗಳಿಗೆ ಬೇರೆಯವರು ಸಿಕ್ಕಿದ್ದರೆ ಈ ವರೆಗೆ ಉಳಿಯುತ್ತಿದ್ದರೇ ಎನ್ನುವುದು ಸಂದೇಹ. ಒಂದು ಕಡೆ ತಾವು ಪಾರ್ಶ್ವವಾಯುವಿನ ಆಘಾತಕ್ಕೆ ಒಳಗಾದರೆ ಇನ್ನೊಂದು ಕಡೆ ತಮ್ಮ ಶ್ರೀಮತಿ ಡಾ। ಅನುಪಮಾ, ಕ್ಯಾನ್ಸರ್ ಬೇನೆಯನ್ನೇ

ಎದುರಿಸಿ ಹೋರಾಡಬೇಕಾಗಿ ಬಂದದ್ದು. ಇಂಥ ದುರ್ಭರ ಸಮಯದಲ್ಲೂ ಇಬ್ಬರೂ ಧೃತಿಗೆಡಲಿಲ್ಲ. ಬರೆಯುವುದನ್ನು ನಿಲ್ಲಿಸಲಿಲ್ಲ. ಆ ಸಮಯದಲ್ಲೇ ನಿರಂಜನರ 'ಜ್ಞಾನಗಂಗೋತ್ರಿ' 'ವಿಶ್ವಕಥಾಕೋಶ'ದಂಥ ಅಮೂಲ್ಯ ಕೃತಿಗಳ ಸೃಷ್ಟಿ ಆದದ್ದು. 'ವಿಶ್ವಕಥಾಕೋಶ'ದ ಒಂದೊಂದು ಸಂಪುಟಕ್ಕೂ ಅವರು ಬರೆದಿರುವ ಪೀಠಿಕೆ ಸಾಹಿತ್ಯ ಪ್ರಪಂಚದಲ್ಲೇ ಒಂದು ಅಪೂರ್ವ ಸಾಧನೆಯೆಂದು ನನ್ನ ಅನಿಸಿಕೆ. ಇವೆರಡು ಸಾಹಸ ಕಾರ್ಯಗಳಲ್ಲಿ ಉದ್ಯುಕ್ತರಾಗಿದ್ದಾಗ ನಿರಂಜನರನ್ನು ನಾನು ಹಲವು ಬಾರಿ ಕಂಡು ಮಾತನಾಡಿದ್ದುಂಟು. ಆಗಲೆಲ್ಲ ನಾನು ಅವರಲ್ಲಿ ಕಾಣುತ್ತಿದ್ದುದು ಅವರ ಬೌದ್ಧಿಕ ಚೈತನ್ಯವನ್ನಷ್ಟೇ ಹೊರತು ಯಾವ ದೌರ್ಬಲ್ಯದ ಸೂಚನೆಯೂ ಅಲ್ಲಿರುತ್ತಿರಲಿಲ್ಲ. ಮಾತುಕತೆಗಳಲ್ಲಿ ಆತ್ಮೀಯತೆ, ಮಾಡುತ್ತಿರುವ ಕೆಲಸದಲ್ಲಿ ತನ್ಮಯತೆ. ಬರೆಹದಲ್ಲಂತೂ ಹೆಸರಿಗೆ ತಕ್ಕಂತೆ ಶುದ್ಧವಾದ ಭಾಷೆ, ತನ್ನದೇ ವಿಶಿಷ್ಟ ಶೈಲಿ. ಹೇಳಿಕೆಗಳಲ್ಲಿ ಸ್ಥೈರ್ಯ, ಕೆಚ್ಚು. ಇವೇ ನಾನು ಕಂಡ, ಕಾಣುತ್ತಿರುವ ನಿರಂಜನರ ವ್ಯಕ್ತಿತ್ವದ ತಿರುಳು. ○

ಸರಸ ಸಜ್ಜನಿಕೆಯ ಸಾಹಸಿ

–ಡಾ| ಎ. ನಾರಾಯಣಪ್ಪ

ನಮ್ಮ ಜೀವನದ ಅಂಧಕಾರದಲ್ಲಿ ತಡಕಾಡಿದಾಗ ನಮಗೆ ಆತ್ಮೀಯರೂ, ಹಿತಸಾಧಕರೂ ಆಗೊಮ್ಮೆ ಈಗೊಮ್ಮೆ ಅತಿ ಅಪರೂಪವಾಗಿ ದೊರೆಯುತ್ತಾರೆ. ಕೇವಲ ಲಾಭಗಳಿಕೆಯ ದೃಷ್ಟಿಯಿಂದಲೇ ಜೀವನ ನಡೆಸುವ ಜನರಿಂದ ಈ ಲೋಕ ತುಂಬಿರುವಾಗ, ಪರರ ಒಳಿತಿಗಾಗಿ ತ್ಯಾಗಮಾಡುವ ವ್ಯಕ್ತಿಗಳು ದೊರೆಯುವುದು ತುಂಬಾ ದುರ್ಲಭ.

ನಾನು ಮೈಸೂರಿನಲ್ಲಿ ಓದುತ್ತಿದ್ದಾಗ ನಿರಂಜನ, ಯು. ಆರ್. ಅನಂತಮೂರ್ತಿ ಮತ್ತು ಕೆ. ವಿ. ಸುಬ್ಬಣ್ಣನವರ ಕೂಟ ಒಂದು ಸಾಗರಸಂಗಮದಂತಿತ್ತು. ಆ ಯುವವಯಸ್ಸಿನಲ್ಲಿ ನಲಿದ ದಿನಗಳು ಇನ್ನೂ ಹಚ್ಚಹಸುರಾಗಿ ನೆನಪಿನಂಗಳದಲ್ಲಿ ಉಳಿದಿವೆ. ಕಾಲ ಉರುಳಿದಂತೆ ನಾವು ನಾಲ್ವರೂ ಬೇರೆ ಬೇರೆ ದಿಕ್ಕುಗಳಲ್ಲಿ ನಡೆಯುವುದು ಅನಿವಾರ್ಯವಾಯಿತು. ನಾನು ವೈದ್ಯಕೀಯ ಕ್ಷೇತ್ರಕ್ಕೆ ಕಾಲಿಟ್ಟರೆ, ಕೆ.ವಿ. ಸುಬ್ಬಣ್ಣ ರಂಗಭೂಮಿಯ ಕಡೆಗೆ ಧಾವಿಸಿದ. ಯು.ಆರ್. ಅನಂತಮೂರ್ತಿ ಕಿಡಿಕಾರುವ ಕ್ರಾಂತಿಕಾರನಾದ. ನಿರಂಜನ ಸೌಮ್ಯವಾದಿಯಾಗಿ ತಮ್ಮ ಹರಿತವಾದ ಲೇಖನಿಯಿಂದ ಸಾಹಿತ್ಯರಚನೆಯಲ್ಲಿ ಮುಂದುವರಿದರು.

ನಿರಂಜನರು ತಮ್ಮ ಜೀವನದ ಜೊತೆಗಾತಿಯನ್ನು ಆರಿಸಿಕೊಳ್ಳುವುದರಲ್ಲಿಯೂ ಎಚ್ಚರ ತಪ್ಪಲಿಲ್ಲ. ೧೯೫೭ರ ಆದಿಭಾಗದಲ್ಲಿ ಸಾಹಿತ್ಯಾಸಕ್ತರಾಗಿದ್ದ, ಆಗಿನ್ನೂ ವೈದ್ಯಕೀಯ ವಿದ್ಯಾರ್ಥಿನಿಯಾಗಿದ್ದ, ನನ್ನ ಸಹಪಾಠಿ ಅನುಪಮಾರನ್ನು ಮನಸಾ ಮೆಚ್ಚಿ, ಸರಳ ಸಮಾರಂಭದಲ್ಲಿ ಮದುವೆಯಾದರು. ಅನಂತರ ಮೈಸೂರಿನಲ್ಲಿ ತತ್ಸಂಬಂಧವಾಗಿ ನಡೆದ ಸಮಾರಂಭದಲ್ಲಿ ಅಭಿನಂದನಾ ಭಾಷಣ ಮಾಡುತ್ತಾ ಕತೆಗಾರ ಆನಂದರು ಒಂದು ಮಾತನ್ನು ಹೇಳಿದರು. ನಿರಂಜನರು ರಚಿಸುವ ಸಾಹಿತ್ಯಕೃತಿಗಳು ಕರಿಮನೆಯ ಸಾಲುಸೇರಿ ಜನರ ಕೈಸೇರುವ ಮುನ್ನ ಆ ಕೃತಿಗಳ ನಾಡಿಮಿಡಿತವನ್ನು ಪರೀಕ್ಷಿಸಲು ಒಬ್ಬ ವೈದ್ಯರ ಅವಶ್ಯಕತೆ ಇತ್ತಂತೆ. ಆ ಒಂದು ಕೊರತೆಯನ್ನು ತುಂಬಲು ಅತ್ಯಾವಶ್ಯಕವಾಗಿ ಅನುಪಮಾರನ್ನು ಮದುವೆಯಾದರಂತೆ. ಆದರಿಂದ ನಿರಂಜನರ ಕೃತಿಗಳು ಬುದ್ಧಿಜೀವಿಗಳೊಡನೆ ಹೇಗೆ ಸ್ಪಂದಿಸುವುವೋ ಎಂಬುದನ್ನು ಗ್ರಹಿಸಲೂ ಸಹಕಾರಿಯಾಯಿತಂತೆ.

ನನ್ನ ಗುರುಗಳಾದ ಡಾ। ಕೆ. ಕೃಷ್ಣಮೂರ್ತಿ ಮತ್ತು ಸಹಪಾಠಿ ಡಾ। ಹೆಚ್.ಕೆ. ಚಂದ್ರಶೇಖರರಿಗೆ ನಿರಂಜನರೆಂದರೆ ಅಚ್ಚುಮೆಚ್ಚು, ತುಂಬು ಮಮತೆ.

ನಿರಂಜನರ ವ್ಯಕ್ತಿತ್ವ ಒಂದು ಸೂಜಿಗಲ್ಲಿನಂತೆ. ಒಮ್ಮೆ ಅವರ ಸನಿಹಕ್ಕೆ ಬಂದವರು ಕೊನೆಯವರೆಗೂ ಅವರನ್ನು ಬಿಡುವುದಿಲ್ಲ. ಅವರೊಡನೆ ಮಾತ ನಾಡುತ್ತಿದ್ದರೆ ಕಾಲದ ಅರಿವಾಗುವುದಿಲ್ಲ; ಅನುಭವಗಳ, ವಿಚಾರಗಳ ಲಾಭ ವಾಗುತ್ತದೆ. ಅವರು ಹೊಗಳಿಕೆಗೆ ಹಿಗ್ಗಲಿಲ್ಲ; ತೆಗಳಿಕೆಗೆ ಕುಗ್ಗಲಿಲ್ಲ. ಸ್ಥಿತ ಪ್ರಜ್ಞತ್ವಕ್ಕೆ ಇರುವ ಇನ್ನೊಂದು ಹೆಸರು ನಿರಂಜನ. ಜೀವನದ ಆಗುಹೋಗುಗಳನ್ನು ಸಮಭಾವದಿಂದ ಸ್ವೀಕರಿಸುತ್ತ, ವಿಧಿಯ ಕ್ರೌರ್ಯದ ಮುಂದೆ ದಿಟ್ಟ ನಿಲುವೇಯನ್ನು ತಳೆದು ಜಯಭೇರಿ ಹೊಡೆದ ಧೀಮಂತ ವ್ಯಕ್ತಿ, ಸರಸ ಸಜ್ಜನಿಕೆಯ ಸಾಹಸಿ.

ನಿರಂಜನರ ಬದುಕೇ ಒಂದು ಆದರ್ಶದ ಚಿಲುಮೆ. ಅವರಿಗೆ ತಾವು ಬರೆದುದನ್ನೆಲ್ಲ ಎಲ್ಲರೂ ಒಪ್ಪಬೇಕೆಂಬ ಹಟವಿಲ್ಲ. ಮನುಷ್ಯನ ಬದುಕಿನ ಬೆಳವಣಿಗೆಗೆ ಪೂರಕವಾದುದನ್ನೆಲ್ಲ ಮೆಚ್ಚುತ್ತ, ಮಾರಕವಾದುವುಗಳನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತ, ಆಧುನಿಕಯುಗದ ಕಲ್ಮಶಗಳಿಂದ ದೂರವಿದ್ದು, ಸರಳ ಸುಂದರವಾದ ಜೀವನವನ್ನು ನಡೆಸುತ್ತಿರುವ ನಿರಂಜನ ದಂಪತಿಗಳು, ತಮ್ಮ ಬದುಕಿನ ಬವಣೆಗಳೆಲ್ಲ ವನ್ನೂ ದೃಢಸಂಕಲ್ಪ, ಸಹನಾಶಕ್ತಿ, ಚೈತನ್ಯಗಳಿಂದ ಗೆದ್ದ ಬಗೆ ಬಾಳನ್ನು ಬರಿದು ಮಾಡಿಕೊಳ್ಳಲು ಬಯಸುವವರಲ್ಲಿಯೂ ನೂರ್ಕಾಲ ಬದುಕಬೇಕೆಂಬ ಹಂಬಲ ಚಿಗುರೊಡೆಯುವಂತೆ ಮಾಡಬಲ್ಲುದು. ○

ಸೋಲೊಪ್ಪದ ಚೇತನ

–ಡಾ। ಹಂಪನಾ

ನಿರಂಜನ ನಮ್ಮ ಸಮಕಾಲೀನ ಹಿರಿಯ ಲೇಖಕರಲ್ಲಿ ಅತ್ಯಂತ ಮಹತ್ವದವರು. ಉದ್ದಕ್ಕೂ ದಿಟ್ಟ ಪ್ರಾಂಜಲ ಹೋರಾಟದ ಬದುಕು ನಡೆಸಿಕೊಂಡು ಬಂದವರು. ವಿಶ್ವವಿದ್ಯಾಲಯ ಪದವಿ ಪ್ರಶಸ್ತಿ ಹುದ್ದೆಗಳು ಚಲಾವಣೆಯಲ್ಲಿರುವ 'ಪ್ರತಿಷ್ಠಿತ ಪರಿಸರ'ದಲ್ಲಿ ಅವುಗಳಿಲ್ಲದೆಯೂ ಸಾಚಾ ಪ್ರತಿಭಾಶಾಲಿ ಚೆನ್ನಾಗಿ, ಹೆಗಲೆಣೆಯಾಗಿ ಬಾಳಬಹುದೆಂಬುದನ್ನು ತೋರಿಸಿಕೊಟ್ಟ ಧೀಮಂತರು. ಬರೆಹವನ್ನೇ ನೆಚ್ಚಿ ಯಶಸ್ವಿಯಾಗಿ, ಮಾದರಿಯಾಗಿ ಜೀವನ ತೂಗಿಸುತ್ತಿರುವ ಅಪರೂಪದವರು.

ನಿರಂಜನರಲ್ಲಿ ನಾನು ಕಂಡ ಮುಖ್ಯ ಗುಣ ಸದಾ ಆರ್ದ್ರವಾದ ಹೃದಯ. ಬತ್ತಿದೆಸೆಯ ಇಂದಿನ ಸ್ವಾರ್ಥ ಕಲುಷಿತ ಕ್ಷುಬ್ಧ ಹಾಗೂ ಕ್ಷುದ್ರ ಸಾಹಿತ್ಯ ವಾತಾವರಣದಲ್ಲಿ ಇವರ ಸ್ನಿಗ್ಧ ಸ್ನೇಹಮಯಿ ವ್ಯಕ್ತಿತ್ವ ಚುಂಬಕ ಗುಣ ಪಡೆದಿದೆ. ನಿರಂಜನರ ಸ್ನೇಹ ವಿಶಿಷ್ಟವಾದುದು. ಅದು ಗಾಢತರವಾದದ್ದು, ಅಕುಟಿಲವಾದದ್ದು, ಸ್ಥಿರವಾದದ್ದು, ಮತ್ತೆ ಮತ್ತೆ ಬಯಸುವಂತಹುದು. ಒಮ್ಮೆ ಒಬ್ಬರನ್ನು ಗೆಳೆಯ, ಆತ್ಮೀಯ ಎಂದು ಅವರ ಅಂತರಂಗ ಒಪ್ಪಿಕೊಂಡರೆ, ಸ್ವೀಕರಿಸಿತೆಂದರೆ ಅಲ್ಲಿಗೆ ಮುಗಿಯಿತು. ಯಾವುದೇ ಹೊರಗಿನ ಒತ್ತಡ ಪ್ರಲೋಭನೆ ಪ್ರಚೋದನೆ ಬಂದರೂ ಈ ಸ್ನೇಹಕ್ಕೆ ಚ್ಯುತಿಯಿಲ್ಲ, ಮುಕ್ಕಿಲ್ಲ, ಮುಪ್ಪಿಲ್ಲ. ಅಕೃತಕವಾದ ಆ ಸ್ನೇಹ ಒಂದು ಅಕ್ಷಯ ಪಾತ್ರೆ. ನಿರಂಜನ ದಂಪತಿಗಳ ಆತ್ಮೀಯ ಬಳಗದ ಸದಸ್ಯರಲ್ಲಿ ಒಬ್ಬನಾಗಿ (ಕಮಲಾ ಹಂಪನಾ ಸೇರಿ ಇಬ್ಬರಾಗಿ) ಆ ಪವಿತ್ರ ಸ್ನೇಹದ ಸುಖೋಷ್ಣ ಭಾಗ್ಯವನ್ನು ಯಥೇಚ್ಛವಾಗಿ ಅನುಭವಿಸಿದ್ದುಂಟು.

ನಿರಂಜನರಲ್ಲಿರುವ ಬಹುಮುಖ ಪ್ರತಿಭೆಯ ಪರಿಚಯ ಹೆಚ್ಚು ಜನರಿಗೆ ಇರಲಾರದು. ಅವರದು ಹಲವು ಹತ್ತು ಕ್ಷೇತ್ರಗಳ ಅನುಭವದಿಂದ ಮಾಗಿದ ಘನ ವ್ಯಕ್ತಿತ್ವ. ಎಷ್ಟೊಂದು ಜ್ಞಾನ ಶಾಖೆಗಳಲ್ಲಿ ಪರಿಶ್ರಮವಿದೆ ಎಂಬುದಕ್ಕೆ 'ಜ್ಞಾನಗಂಗೋತ್ರಿ' ಮತ್ತು 'ವಿಶ್ವಕಥಾಕೋಶ' ದಿಕ್ಸೂಚಿಮಾತ್ರ. ವಾಸ್ತವವಾಗಿ ಅವರ ಅರಿವಿನ ಹರಹು, ವ್ಯಾಸಂಗದ ವ್ಯಾಪ್ತಿ, ವೈದುಷ್ಯ ಇನ್ನೂ ಆಳವಾದದ್ದು. ಅದರ ಪ್ರಯೋಜನ ಪಡೆಯುವುದು ಕನ್ನಡಿಗರಿಗೆ ಬಿಟ್ಟದ್ದು.

ನಿರಂಜನರು ಪ್ರವಾಹದ ಎದುರಾಗಿ ಈಜಿ ದಡ ಸೇರಿದವರು. "ಯಾವ ಹೊತ್ತಿಗೂ ಸೋಲನ್ನೊಪ್ಪಿಕೊಳ್ಳಬಾರದು" ಎಂಬುದು ನಿರಂಜನರ ಧ್ಯೇಯವಾಕ್ಯ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಸೋಲೊಪ್ಪಿಕೊಳ್ಳದ ಚೇತನ. ಸೃಜನಶೀಲ

ಚೈತನ್ಯದ ಜತೆಜತೆಗೇ ಕ್ರಿಯಾಶೀಲವಾಗಿರುವ ಅವರ ಸಂಘಟನ ಶಕ್ತಿಯನ್ನೂ ಗಮನಿಸಬೇಕು. ಲೌಕಿಕ ಇಲ್ಲವೇ ವ್ಯಾವಹಾರಿಕ ಸೌಲಭ್ಯಗಳ ಆಮಿಷಕ್ಕಾಗಿ ತಮ್ಮ ನಿರ್ಧಾರಗಳನ್ನು ಬದಲಿಸಿ ರಾಜಿ ಮಾಡಿಕೊಳ್ಳುವ ಅವಕಾಶವಾದಿಯಲ್ಲ. ನಿಜದ ನೇರ ದಾರಿಯಲ್ಲೇ ನಡೆದುಬಂದಿರುವ ನಿರಂಜನರು ನಮ್ಮ ಕಾಲದ 'ಆಶ್ಚರ್ಯ' ವಾಗಿದ್ದಾರೆ.

ನಿರಂಜನರು ಕನ್ನಡಕ್ಕೆ ಕೊಟ್ಟಿರುವುದು ಅಪಾರ, ಪಡೆದಿರುವುದು ಕಡಮೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ, ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ - ಇವು ಅವರ ಹತ್ತಿರ ಸುಳಿದಿಲ್ಲ. ಹಾಗೆಂದು ನಿರಂಜನರ ಉನ್ನತ ವ್ಯಕ್ತಿತ್ವ ಕೊರೆಯಾಗಿಲ್ಲ. ಕೇವಲ ನಾವು ನಮ್ಮ ಸಮಾಧಾನಕ್ಕಾಗಿ, ಕೃತಜ್ಞತೆಯ ದ್ಯೋತಕವಾಗಿ ಇವೆಲ್ಲವನ್ನೂ, ಇನ್ನೂ ಹೆಚ್ಚಿನದನ್ನು ಸಲ್ಲಿಸಬೇಕಾಗಿದೆ. ಎಷ್ಟು ಬೇಗ ಇವನ್ನೂ, ಜ್ಞಾನಪೀಠ ಪ್ರಶಸ್ತಿಯನ್ನೂ ಅವರಿಗೆ ಸಲ್ಲಿಸಿದರೆ ಅಷ್ಟು ಒಳ್ಳೆಯದು ಎಂಬ ವಿವೇಕ ನಮಗೆ ಬರಬೇಕಾಗಿದೆ.

'ಅನುಪಮಾ-ನಿರಂಜನ' ಕನ್ನಡ ನಾಡಿನ ಅಪರೂಪದ ಜೋಡಿ, ಅನುರೂಪ ದಾಂಪತ್ಯದ ಹೆಸರು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈ ಇಬ್ಬರೂ, ಸಾಹಿತ್ಯದ ಆಧಾರದಿಂದ ಅಲ್ಲದೆ, ಸಾಂಸ್ಕೃತಿಕ ಕಾರಣಗಳಿಗಾಗಿಯೂ ಅನ್ಯಾದೃಶರಾಗಿದ್ದಾರೆ. ○

ಸಮಾಜವಾದಿ ದಂತಕತೆ

-ಪ್ರಸನ್ನ

ನಿರಂಜನರನ್ನು ನಾನು ಮೊದಲು ಕಂಡದ್ದು ಇರುಸು ಮುರುಸಿನ ಸಂದರ್ಭವೊಂದರಲ್ಲಿ. ಅವರು ರಷಿಯನರ ಸಂಗಡ ವೇದಿಕೆಯ ಮೇಲಿದ್ದರು. ಆಗ ರಷಿಯನರು, ಎಮರ್ಜೆನ್ಸಿಯ ಪರ ಇದ್ದರು. ನಿರಂಜನರು ಮತ್ತೊಂದು ಪಕ್ಕದಲ್ಲಿ ಇಂದಿರಾ ಕಾಂಗ್ರೆಸ್ಸಿನ ನಾಗಮ್ಮ ಕೇಶವಮೂರ್ತಿ ಕೂತಿದ್ದರು. ನಾವು ಕೆಲವರು ಸಭೆಯ ಆಚೆ ತುದಿಯಲ್ಲಿ ನಿಂತು ಆ ವಿಚಿತ್ರ ವಿವಾಹವನ್ನು ಅನುಮಾನದಿಂದ ನೋಡುತ್ತಿದ್ದೆವು. ಎರಡು ಮೂರು ದಿನ ದಾವಣಗೆರೆಯ ಧರ್ಮಪ್ರವರ್ತಕ ಹನುಮಂತಪ್ಪ ಛತ್ರದಲ್ಲಿ ನಿರಂಜನ ಆಗಾಗ ಎದುರಾಗುತ್ತಿದ್ದರು, ಅನುಮಾನ ಇರುವ ಹುಡುಗರನ್ನು ವಿಶೇಷವಾಗಿ ಕಂಡು ಮಾತನಾಡಿಸುತ್ತಿದ್ದರು, ಮುಗುಳುನಗುತ್ತಿದ್ದರು.

ಆದರೂ ನಮ್ಮ ಅನುಮಾನ ಬಗೆಹರಿದಿರಲಿಲ್ಲ. ಜೊತೆಗೆ ಆಗ ಕನ್ನಡದಲ್ಲಿ ಕಾರು ಇದ್ದ ಏಕೈಕ ಸಾಹಿತಿ ಸಂಸಾರ ಅವರದ್ದು. ಪತ್ನಿ ಅನುಪಮಾ ತುಂಬ ಯಶಸ್ವಿ ಡಾಕ್ಟರು, ಮಗಳು ಹೋಡಶದಲ್ಲೇ ಇಂಗ್ಲಿಷಿನಲ್ಲಿ ಕವನಗಳನ್ನು ಬರೆದು ಅಚ್ಚು ಹಾಕಿಸಿದ ಪ್ರಾಡಿಜಿ. ಮನೆ ಕೂಡ ಹಾಗೇ. ಇಡೀ ಗೋಡೆಗಳೆಲ್ಲ ಪುಸ್ತಕಗಳ ಕಪಾಟು. ಸುತ್ತ ಕಾಂಪೌಂಡು, ಗಿಡ, ಹೂವು, ನಾಯಿ. ನಮಗೋ ಭಯಂಕರ ಗುಮಾನಿ; ಎಲ್ಲಿಯ ಕ್ರಾಂತಿಕಾರಿ ಸಾಹಿತ್ಯ ಎಲ್ಲಿಯ ಬೂರ್ಜ್ವಾಬಳಗ ಅಂತ.

ಈಗ ನಮ್ಮ ಪ್ರಪಂಚವೂ ಹಿಗ್ಗಿದೆ. ಎಲ್ಲ ಅಷ್ಟೊಂದು ಸರಳವಲ್ಲ ಎಂದು ಅರ್ಥವಾಗಿದೆ. ಬರ್ಟೋಲ್ಟ್ ಬ್ರೆಕ್ಟ್ ಧೈರ್ಯವಾಗಿ, “ನಾನೊಬ್ಬ ಬೂರ್ಜ್ವಾ ಮನುಷ್ಯನೇ ಸೈ. ಆದರೆ ನಾನು ದಲಿತರ ಪರ” ಎಂದು ಸಾರಿದ್ದು ಕೇಳಿ ಧೈರ್ಯ ಬಂದಿದೆ, ನಾನು ದಲಿತ ಆಗಲಿಕ್ಕೆ ಕಾಲರು ಹರಿದ ಅಂಗಿ ಹಾಕಿಕೊಂಡು ಅಲೆಯ ಬೇಕಿಲ್ಲ, ಕಡ ತೆಗೆದುಕೊಂಡ ಬೀಡಿ ಸೇದಬೇಕಿಲ್ಲ, ಊಟದ ಟೇಬಲ್ಲಿನ ಮೇಲೆ ಕಾಲು ಹಾಕಿ ಕೂತು ಅಸಭ್ಯತೆಯ ಪ್ರದರ್ಶನ ಮಾಡಬೇಕಿಲ್ಲ ಎಂದು.

ನಿರಂಜನರು ಯಾರನ್ನೂ ಮೊದಲ ನೋಟದಲ್ಲಿ ಸ್ನೇಹಕ್ಕೆ ಎಳೆಯುವುದಿಲ್ಲ. ಮೊದಮೊದಲು ಬಿಗುಮಾನವೇ ಜಾಸ್ತಿ. ಜೊತೆಗೆ ಮೊದಲ ಭೇಟಿಯಲ್ಲಿ ನಮ್ಮನ್ನು ಮುಜುಗರಕ್ಕೆ ತಳ್ಳಬಲ್ಲ ಮತ್ತೊಂದು ಸಂಗತಿ ನಿರಂಜನರಲ್ಲಿದೆ. ಅದು ಅವರ ಹುಡುಕಾಟ. ಅವರ ರೂಮಿನ ಬರೆಯುವ ಟೇಬಲ್ಲಿನ ಆಚೆ ಬದಿ ಅವರು ಕುಳಿತಿರು ತ್ತಾರೆ, ಈಚೆ ಬದಿ ನಾನು ಕುಳಿತಿರುತ್ತೇನೆ. ಸಂಕೋಚದಿಂದ ಕಾಲು ಅತ್ತ ಇತ್ತ ಹೊರಳಿಸಿ ಒಂದರಮೇಲೊಂದು ಮಡಿಚಿ ಹಾಕುತ್ತ ಸಂಭಾಷಣೆಯ ಪ್ರಯತ್ನ ಮಾಡುತ್ತಿರುತ್ತೇನೆ. ಆತ ಒಂದು ಕೈಯಿಂದ ಪತ್ರ ಹರಿಯಬಲ್ಲ ಚಾಕು ಹಿಡಿದು ಆಡಿಸುತ್ತ, ನಿಮ್ಮೊಡನೆ ಮಾತನಾಡುತ್ತಲೇ ನಿಮ್ಮನ್ನು ಅಳೆಯುತ್ತಿರುತ್ತಾರೆ; ಬೆಲೆ ಕಟ್ಟುತ್ತಿರುತ್ತಾರೆ. ನನಗಂತೂ ಮೊದಮೊದಲು ತುಂಬ ಮುಜುಗರವಾಗುತ್ತಿತ್ತು. ಆದರೆ ನಿರಂಜನರಿಗೆ ಲೇಖಕರ ಬೆಲೆಕಟ್ಟಲು ಬಂದ ಹಾಗೆ ಕನ್ನಡದಲ್ಲಿ ಹೆಚ್ಚಿನವರಿಗೆ ಬರುವುದಿಲ್ಲ. ನಿಮ್ಮ ಸಾಹಿತ್ಯ, ನಿಮ್ಮ ಬುದ್ಧಿವಂತಿಕೆ, ನಿಮ್ಮ ರಾಜಕೀಯ, ನಿಮ್ಮ ಸುಳ್ಳು ಮಾತು, ವ್ಯಕ್ತಿತ್ವದ ವಿವಿಧ ಕವಚಗಳು ಎಲ್ಲ ತೂತುಮಾಡಿ ನೋಡಿ ನಿಮ್ಮ ನಿಜ ಮೌಲ್ಯ ಕಂಡುಕೊಂಡು ಬಿಡುತ್ತಾರೆ.

ಇಷ್ಟನ್ನೂ ಅವರು ರೂಮಿನ ನಾಲ್ಕು ಗೋಡೆಯ ಮಧ್ಯೆ ಕೂತೇ ಸಾಧಿಸು ತ್ತಾರೆ. ಕೂತಲ್ಲಿಂದ ಅಲುಗಾಡದೆಯೇ ಪ್ರಪಂಚ ಸುತ್ತಿ ಬರುತ್ತಾರೆ. ಅಂಬೆಗಾಲಿಕ್ಕುತ್ತಲೇ ನಡೆದು ನೈಲ್ ನದಿಯ ಆಳ ಸೆಳವು ಅರ್ಥ ಮಾಡಿಕೊಳ್ಳುತ್ತಾರೆ. ನವ್ಯರು ವ್ಯಕ್ತಿತ್ವದ ಒಂಟಿತನದ ಬಗ್ಗೆ ಸಾರ್ತ್ರೆಯ ಪ್ರಮಾಣ ಇಟ್ಟುಕೊಂಡು ಮಾತನಾಡಿದರು, ಯಾರೂ

ಅದರ ಎಲ್ಲ ಭಯಾನಕತೆಯ ಜೊತೆ ಅದನ್ನು ಅನುಭವಿಸಲಿಲ್ಲ. ನಿರಂಜನ ಅನುಭವಿಸಿದ್ದಾರೆ. ಹದಿನೈದು ವರ್ಷಗಳಿಂದ ಗರಬಡಿದು ಕೂತಿದ್ದಾರೆ. ಅವರು ಕುಳಿತಲ್ಲಿ ಬೆಳಗು, ಮಧ್ಯಾಹ್ನ, ಸಂಜೆ, ರಾತ್ರಿ ಅವಿರತವಾಗಿ ಉರುಳುತ್ತಿರುತ್ತದೆ, ಅಲ್ಲೆ ಅಲ್ಲೆ ವ್ಯರ್ಥವಾಗಿ. ಯಾವ ಮೃದು ಹೃದಯಿ ಮಾನವನಿಗಾದರೂ ಹುಚ್ಚು ಹಿಡಿಸಬಲ್ಲ ಪರಿಸ್ಥಿತಿ ಅದು. ಆದರೆ ನಿರಂಜನ ಹಟ ಹಿಡಿದು ಮತ್ತೊಂದು ಬಗೆಯ ಹಾರಾಟ ಸಾಧಿಸುತ್ತಾರೆ. ತಮ್ಮ ಬಂಧನದಲ್ಲಿ ಉಳಿದೇ ಬಿಡುಗಡೆ ಸಾಧಿಸುತ್ತಾರೆ. ಕುಳಿತಲ್ಲೇ ಹೆಗಡೆ ಸಂಪುಟದ ಸುದ್ದಿ (ಪತ್ರಿಕೆಗಳಲ್ಲಿ ಬಾರದ್ದು), 'ಶೂದ್ರ'ದ ಲೇಖನ, ಅಂತರರಾಷ್ಟ್ರೀಯ ವಿವಾದ, ಸಣ್ಣಕತೆ, ಕಾದಂಬರಿ, ಕವಿಗಳು, ಸಣ್ಣತನ, ದೊಡ್ಡತನ ಎಲ್ಲ ಗ್ರಹಿಸಿಬಿಡುತ್ತಾರೆ.

ಇಂಗ್ಲಿಷ್ ಸಾಹಿತ್ಯ ಓದುತ್ತಾರೆ. ಆ ಭಾಷೆಯ ಮೂಲಕ ಸ್ಪಾನಿಶ್, ಫ್ರೆಂಚ್, ಚೀನೀ, ಜೆಕ್, ಜರ್ಮನ್, ರಷಿಯನ್ ಸಾಹಿತ್ಯ ಓದುತ್ತಾರೆ, ಪಳೆಯುಳಿಕೆ ಸಂಸ್ಕೃತಿಗಳ ಅಧ್ಯಯನ ನಡೆಸುತ್ತಾರೆ, ಬರೆಯುತ್ತಾರೆ, ಪ್ರತಿಕ್ರಿಯಿಸುತ್ತಾರೆ, ಮನೆಯ ವರೆಗೂ ಬರುವ ಸೌಜನ್ಯ ತೋರಿಸಿದವರಿಗೆ ಕುಡಿಯಲು ಲಿಮೊನೇಡ್ ಕೊಟ್ಟು ಹರಟುತ್ತಾರೆ.

ನಿರಂಜನರ ಸಾಹಿತ್ಯದ ಬೆಲೆ ಎಷ್ಟು? ಅವರ ಚಿರಸ್ಮರಣೆಯನ್ನು ಜನರು ಸ್ವೀಕರಿಸುವುದು ಅದೊಂದು ಸಾಹಿತ್ಯ ಕೃತಿ ಅನ್ನುವುದಕ್ಕಿಂತ ಹೆಚ್ಚಾಗಿ ಸಮಾಜ ವಾದಿ ದಂತಕತೆ ಅನ್ನುವುದಕ್ಕಾಗಿ. ದಂತಕತೆ ಅಂದೆ, ಕಟ್ಟುಕತೆ ಅಲ್ಲ. ಈ ಸಂಗತಿ ಯನ್ನು ಮೊದಲು ಸೂಚಿಸಿದ್ದು ಡಿ. ಆರ್. ನಾಗರಾಜ್. ಎಡಪಂಥೀಯರು, ಕಮ್ಯೂನಿಸ್ಟ್ ಕಾರ್ಯಕರ್ತರು, ಸಾಮಾನ್ಯ ಕಾರ್ಮಿಕರು ಚಿರಸ್ಮರಣೆಗೆ ಮತ್ತೆ ಮತ್ತೆ ಹಿಂದಿರುಗುವುದು ಭಕ್ತರು ಬೈಬಲ್ಲಿಗೆ ಹಿಂದಿರುಗಿದ ರೀತಿಯಲ್ಲಿ. ದೈನಂದಿನ ಬದುಕು, ಸಂಘಟನೆ, ವರ್ಗಸಂಘರ್ಷ....ಇತ್ಯಾದಿಗಳ ಹಾದಿಯಲ್ಲಿ ಎಡವಿಬಿದ್ದು ಗಾಯವಾಗಿ ಕೊಂಡಾಗ ವಾಸಿ ಮಾಡಬಲ್ಲ ಔಷಧದ ಗುಣ ಕೆಲವು ಕೃತಿಗಳಿಗಿರುತ್ತದೆ. ನಮ್ಮ ನಂಬಿಕೆಯನ್ನು ಬಲಪಡಿಸಬಲ್ಲಂತಹವು, ಅನುಮಾನಗಳನ್ನು ಪರಿಹರಿಸಬಲ್ಲಂತಹವು, ಮತ್ತೊಮ್ಮೆ ಮುಂದೆ ನುಗ್ಗಲು ಧೈರ್ಯ ತುಂಬಬಲ್ಲಂತಹವು. ಗಾರ್ಕಿಯ ತಾಯಿ ಅಂತಹದ್ದೊಂದು ಕೃತಿ. ಕನ್ನಡಕ್ಕೆ ಚಿರಸ್ಮರಣೆ ಅಂಥದೇ ಕೃತಿ.

ಚಿರಸ್ಮರಣೆಯ ಕ್ರಾಂತಿಕಾರಿ ಹುಡುಗರು, ಕ್ರಾಂತಿಕಾರಿಗಳಲ್ಲಿ ನಾವು ಬಯಸುವ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡವರು. ಚಿರಸ್ಮರಣೆಯ ಮಾಸ್ತರು, ಮೇಷ್ಟರುಗಳಲ್ಲಿ ನಾವು ಬಯಸುವ ಅದ್ಭುತ ಹೃದಯವಂತಿಕೆಯನ್ನು ತನ್ನಲ್ಲಿ ತುಂಬಿ ಕೊಂಡವರು, ಜೊತೆಗೇ ಲೆಖ್ಖದ ಮೂಲಕ ವರ್ಗಸಂಘರ್ಷ ಬೋಧಿಸುವ ಜಾಣರು.

ಚಿರಸ್ಮರಣೆಯ ವ್ಯವಸ್ಥೆ, ವ್ಯವಸ್ಥೆಯಲ್ಲಿ ಏನೇನನ್ನು ಧಿಕ್ಕರಿಸುತ್ತೇವೆಯೋ ಅದೆಲ್ಲ ವನ್ನೂ ಉಳ್ಳಂತಹದು. ಜೊತೆಗೆ ಚಿರಸ್ಮರಣೆಗೆ ಕನಸಿನ ಆಹ್ಲಾದಕತೆಯನ್ನು ತಂದುಕೊಡಬಲ್ಲ ರಂಗಸಜ್ಜಿಕೆ ಇದೆ. ನಾನು ಇತ್ತೀಚೆಗೆ ಕಣ್ಣಾನೂರಿನಿಂದ ಮಂಗಳೂರಿಗೆ ರೈಲಿನಲ್ಲಿ ಬರುವಾಗ ಕಾಸರಗೋಡಿಗೆ ಮುಂಚೆ ಬರುವ ಒಂದೊಂದೂ ರೈಲ್ವೆ ನಿಲ್ದಾಣ ವನ್ನು ನನ್ನದೇ ಜನ್ಮಸ್ಥಳವೋ ಎಂಬಷ್ಟು ಆಸಕ್ತಿಯಿಂದ ಓದುತ್ತ ಬಂದೆ; ಪಯ್ಯನ್ನೂರು, ಚರುವತ್ತೂರು, ಕಾಸರಗೋಡು.

ನಮ್ಮ ದೇವರಮನೆಗಳಷ್ಟು ಸ್ವಚ್ಛ ಆ ಊರುಗಳು. ಒಂದುಕಡೆ ಫಳಫಳ ಹೊಳೆಯುವ ಅರಬ್ಬೀಸಮುದ್ರ, ಮತ್ತೊಂದು ಕಡೆ ಹಸಿರು ತರಕಾರಿ ಹೊಲ, ತೋಟ, ಗದ್ದೆ, ಹೆಂಚಿನಮಾಡು ಹಾಗೂ ಹೊಸ ಬಟ್ಟೆ ತೊಟ್ಟ ಹಳೆಯ ಜನ. ಆಗ ಅನ್ನಿಸಿತು, ಮಲಬಾರಿನಲ್ಲಿ ಕ್ರಾಂತಿಯಾಗದೇ ಯಾವುದಾದರೂ ಗಲೀಜು ಊರಿನಲ್ಲಿ ಆಗಿಬಿಟ್ಟಿದ್ದರೆ ಛೇ, ಎಂಥ ಅನ್ಯಾಯ ಆಗಿಬಿಡುತ್ತಿತ್ತು ಅಂತ.

ನಿರಂಜನರ ಮಿಕ್ಕ ಗದ್ಯ ಸಾಹಿತ್ಯವನ್ನು ನಾನು ಪೂರ್ತಿಯಾಗಿ ಓದಿಲ್ಲ. ಮುಖ್ಯವಾಗಿ ಅವರ 'ಮೃತ್ಯುಂಜಯ' ಓದಿಲ್ಲ. 'ರಂಗಮ್ಮನ ವಠಾರ' ಇತ್ಯಾದಿ ಕೆಲವು ಕೃತಿಗಳನ್ನು ಓದಿದ್ದೇನೆ. ಅವರ ವಾರಿಗೆಯವರಲ್ಲಿ ನಿರಂಜನ ತುಂಬ ಎತ್ತರಕ್ಕೆ ನಿಲ್ಲುತ್ತಾರೆ. ನಿರಂಜನರ ವಾಸ್ತವವಾದಕ್ಕೆ ಅ.ನ. ಕೃಷ್ಣರಾಯರಿಗಿಂತ ಸೂಕ್ಷ್ಮವಾದ ಚಿತ್ರಣ ಸಾಧ್ಯವಾಗಿದೆ.

ನಿರಂಜನ ತಮ್ಮನ್ನು ಮೆಚ್ಚುವವರನ್ನು ತುಂಬ ಸಂದಿಗ್ಧಕ್ಕೆ ತಳ್ಳಿಬಿಡು ತ್ತಾರೆ. ಅವರನ್ನು ಪೂರ್ತಿ ಆರಾಧಿಸುವುದಾಗಲೀ, ಪೂರ್ತಿ ದ್ವೇಷಿಸುವುದಾಗಲೀ ಸಾಧ್ಯವಿಲ್ಲ. ಆದರೆ ಹಟ ಹಿಡಿದು ಬದುಕಬೇಕೆಂದು ನಮಗೆಲ್ಲ ಕಲಿಸಿದವರು ಅವರು. ಒಮ್ಮೆ ಅದೇ ರೂಮಿನಲ್ಲಿ ಅದೇ ಟೇಬಲ್ಲಿನ ಅಂತರದಲ್ಲಿ ಕೂತಿದ್ದಾಗ ಹೇಳಿದರು, "ಸುಖ ಅನ್ನುವುದಿಲ್ಲ. ಇದನ್ನು ಒಪ್ಪಿಕೊಂಡು ಬಿಟ್ಟರೆ ಬಹಳಷ್ಟು ಕ್ಲೇಶ ಕಡಿಮೆ ಯಾಗುತ್ತದೆ."

○

ನನ್ನ ಪ್ರೀತಿಯ ನಿರಂಜನ

–ಬೊಳುವಾರು ಮುಹಮದ್‌ಕುಂಞಿ

(ದೇಹ ಪೂರ್ತಿ ಸಜ್ಜನಿಕೆಯನ್ನು, ತಲೆ ತುಂಬ ಹೂಹೃದಯವನ್ನು ಹೊದ್ದು-ಹೊತ್ತುಕೊಂಡು ಸೌಜನ್ಯದ ಒಜ್ಜೆಯಿಂದ ಹೆಜ್ಜೆ ಎತ್ತಲಾಗದ ನಿರಂಜನ, ಕುಳಿತಲ್ಲಿಂದಲೇ ತನ್ನ ಬಲಕ್ಕಿರುವ ಕಿಟಕಿಯ ಸೆರೆಯಿಂದ ಲೋಕಪೂರ್ತಿ ನೋಡಬಲ್ಲವರು. ಈ ದೊಡ್ಡಣ್ಣನ ಬಗ್ಗೆ ನನ್ನ ಅಭಿಪ್ರಾಯಗಳೆಲ್ಲವನ್ನೂ ನನಗೆ ಮಾತ್ರ ಇರಿಸಿಕೊಂಡು, ಈ ಹಿಂದೆ ನನ್ನ ಬದುಕಿನಲ್ಲಿ ಕನಸಿನಂತೆ ಬಂದುಹೋದ ಕೆಲವು ರೋಚಕ ಕ್ಷಣ - ದಿನಗಳಲ್ಲಿ ಈ 'ನಿರಂಜನ' ನನಗೆ ಬರೆದ ಪತ್ರಗಳ ಕೆಲವು ತುಣುಕುಗಳನ್ನು ಮತ್ತು ನನ್ನ ಬಗೆಗಿನ ಅತಿಯಾದ ಪ್ರೀತಿಯಿಂದ ನನ್ನ ಬಗ್ಗೆ ವಿಚಾರಿಸಿ ಗೆಳೆಯ ಜಿ.ಆರ್.ಗೆ ಬರೆದ ಒಂದು ಪತ್ರದ ಭಾಗವನ್ನು ಇಲ್ಲಿ ಯಥಾಪ್ರತಿ ಮಾಡಿರುತ್ತೇನೆ. ನಾ ಕಂಡ ನಿರಂಜನರನ್ನು ಇದಕ್ಕಿಂತ ಬೇರೆಯಾಗಿ ಚಿತ್ರಿಸಲು ನಾನು ಅಸಮರ್ಥ - ಬೊಳುವಾರು)

ಬೆಂಗಳೂರು : 28-10-1983

ಪ್ರೀತಿಯ ಬೊಳುವಾರು,

........ನಿನ್ನೆ ಸಂಜೆಕೈ ಸೇರಿದ ಉದಯವಾಣಿಯಲ್ಲಿ ಒಂದು ಸುದ್ದಿ ಇತ್ತು. ಅದರಲ್ಲಿ ನಿಮ್ಮ ಹೆಸರನ್ನು ಕಂಡೆ. ನಿಮ್ಮದೆ ಹೆಸರಿನ ಬೇರೊಬ್ಬರು? ಇದ್ದೀತು. ಅಥವಾ ಇಂಪ್ಲಿಕೇಟ್ ಮಾಡಿರುವ ಸಾಧ್ಯತೆ? ಏನು ಬೇಕಾದರೂ ಆಗಬಹುದು.

ನಿಮ್ಮಿಂದ ಒಂದು ಚುಟುಕು ಕಾಗದ ಬೇಕು. ಕಾರ್ಡಾದರೂ ಸರಿಯೆ. ನನ್ನ ಸಮಾಧಾನಕ್ಕಾಗಿ.

ಬೆಂಗಳೂರು : 22-11-1983

........ಬದುಕು ನಿಮ್ಮನ್ನು Tough ಆಗಿ ರೂಪಿಸಿದೆ. 'ನನ್ನ ಹೆಂಡತಿ ಧೈರ್ಯವಂತೆ. ಆದ್ದರಿಂದ ಮಕ್ಕಳು ಸುಖವಾಗಿದ್ದಾರೆ.' ಎಂಬ ನಿಮ್ಮ ಸಾಲು ಓದಿ ಅಭಿಮಾನ ಎನಿಸಿತು.

ಸಬಕ್ತಗೀನನ ಕತೆ ಓದಿದ್ದೀರಾ? ಶಕ್ಯವಿದ್ದರೆ ನಿಮ್ಮ ಬದಲಾಗಿ ನಾನು ಒಳಗೆ ಕುಳಿತುಕೊಳ್ಳಲು ಸಿದ್ಧ. ಬಲ್ಲೆ. ಈಗ ಅದಕ್ಕೆಲ್ಲ ಕಾನೂನಿನಲ್ಲಿ ಅವಕಾಶವಿಲ್ಲ. ಆದರೆ ಈ ಕಾನೂನಿನಲ್ಲೂ - ಸಂಗತಿಯನ್ನು ಕುರಿತ, ನಿಮ್ಮನ್ನು ಕುರಿತ - ಸತ್ಯ ಸಾಬೀತಾಗುತ್ತದೆ. ಸಹಿಸಬೇಕಾದದ್ದು ವಿಳಂಬದ ಯಾತನೆಯೊಂದನ್ನೆ. ಅದು ಮಾನಸಿಕ ಯಾತನೆಗೆ ಕಾರಣವಾಗದಂತೆ ನೋಡಿಕೊಳ್ಳಿ.

ನನಗೆ ಚಲನೆ ಇಲ್ಲದೆ ಹೋಯಿತಲ್ಲ ಎಂಬ ಕೊರಗು. ನೆನಪಾದಾಗಲೆಲ್ಲ ನಿಮ್ಮೂರಿಗೆ 'ಬಂದು' ನಿಮ್ಮನ್ನು 'ಕಾಣು'ತ್ತಿದ್ದೇನೆ, 'ಕಾಣು'ತ್ತಿರುತ್ತೇನೆ; ನೆನಪಾದಾಗಲೆಲ್ಲ.

Fantasy ಆಹ್ಲಾದಕರ; reality ಕ್ರೂರ. ಆದರೆ ಎರಡೂ ಬೇಕು.

ಬೆಂಗಳೂರು : 27-1-1984

ಬಹಳ ದಿನ ನಿಮ್ಮ ಕಡೆಯಿಂದ ಸುದ್ದಿ ಇರಲಿಲ್ಲ. ತವಕ, ಕಾತರ. ಏನೂ ಆಗಲಾರದೆಂಬ ನಂಬಿಕೆ. ಪ್ರಾಯಶಃ ನಿರ್ದಿಷ್ಟ ಹಂತ ಈಗ ಸ್ಫುಟವಾಗಿರಬೇಕು. ಇಲ್ಲಿಗೆ ಯಾರಾದರೂ ಬಂದಾಗಲೆಲ್ಲ ನಿಮ್ಮ ಬರವಣಿಗೆಯ ಪ್ರಸ್ತಾಪ ಇರುತ್ತದೆ. ಯಾತನೆ ಸಂಕಟಗಳ ಬಗ್ಗೆ ಬಲ್ಲವರು ಕಮ್ಮಿ. ಅದರ ಮಾತೇ ಇಲ್ಲ.

'ಆ....ಹ....' ಕಲ್ಪನೆ ಅನಗತ್ಯ. ನಾನು ನೆನೆಯುವುದು ದಾಸ್ತೊಯ್‌ವಸ್ಕಿ, ಅಲನ್ ಪೊವೊಲೆ ಸೊಯೆಂಕಾ, ದೆಬ್ರಿ ಮತ್ತಿತರರನ್ನು. ಸೃಜನಶೀಲತೆಗೆ ಇದು ಅಪೂರ್ವ ಆಹಾರ; ಗೊಬ್ಬರ. ಬಹಳ ಸಾಂದ್ರವಾದ ಶ್ರೇಷ್ಠ ಬರವಣಿಗೆ ನಿಮ್ಮಿಂದ ಬರುತ್ತದೆ. ದೊಡ್ಡ ಮಾನವನಾಗಿ ನೀವು ಬೆಳೆಯುತ್ತೀರಿ. ನಿಮ್ಮ ಹೆಂಡತಿ ಮಕ್ಕಳು ನಿಮ್ಮ ಬಗ್ಗೆ ಹೆಮ್ಮೆಪಡುತ್ತ ನಲಿಯುತ್ತಾರೆ. ಅವರ ಬೆಳವಣಿಗೆಯನ್ನು ಕಂಡು ನೀವು ಅಚ್ಚರಿಪಡುತ್ತೀರಿ.

ಬೆಂಗಳೂರು : 28-2-1984

........ನೀವು ಓದಿರುವ, ಓದುತ್ತಿರುವ ಪುಸ್ತಕಗಳ ವ್ಯಾಪ್ತಿ ಕಂಡು ಸಂತೋಷವಾಯಿತು. ಮೊಕದ್ದಮೆಯ ವಿಚಾರಣೆ ಮುಗಿದ ಮೇಲೆ ನೀವು ಪೂರ್ಣ 'ಸ್ವತಂತ್ರ'ರಾಗಿ ಓಡಾಡುತ್ತೀರಿ. ಸಂದೇಹ ಬೇಡ. ಆ ತನಕ ಜಾಮೀನಿನ ಮೇಲೆ ಸೀಮಿತ ಸ್ವಾತಂತ್ರ್ಯ. ಅದಕ್ಕಾಗಿ ಈ ಯತ್ನ. 'ಸ್ವಾತಂತ್ರ್ಯ' ಎನ್ನುವುದೇ ಸೀಮಿತ ಅಲ್ಲವೇ ? ನಾನು ಸ್ವತಂತ್ರ - ಆದರೆ ನಡೆಯಲಾರೆ.

ಬೆಂಗಳೂರು : 24-3-1984

........ಸೆಷನ್ಸ್ ಕೋರ್ಟಿನ ತೀರ್ಪು ಅನಿರೀಕ್ಷಿತವಲ್ಲವಾದ್ದರಿಂದ ಬೇಸರಕ್ಕೆ ಕಾರಣವಿಲ್ಲ. ಡಿ.ಆರ್., ಕಿ.ರಂ., ವಿಶ್ವೇಶ್ವರ ಅಡ್ವೊಕೇಟ್‌ರನ್ನು ಫೋನ್ ಮೂಲಕ ಸಂಪರ್ಕಿಸುತ್ತಿದ್ದೇನೆ. ನಿಮ್ಮ ಬರವಣಿಗೆಯನ್ನು ಓದಿರುವ ನ್ಯಾಯವಾದಿಯೊಬ್ಬರು 'ಹೈಕೋರ್ಟು ಜಾಮೀನು ನೀಡುತ್ತದೆ' ಎಂದು ದೃಢ ಭರವಸೆ ಹೊಂದಿದ್ದಾರೆ. ಅದು ನಿಜವಾದೀತು.

ನಾನು 1942ರಲ್ಲಿ ಮಂಗಳೂರಿನಲ್ಲಿದ್ದಾಗ ನಿಮ್ಮ ವಸತಿ sub-jail ಆಗಿತ್ತು. ಈಗ ಭರ್ತಿಯಾಗಿದೆ. ಆಗ ಯುವ ವಯಸ್ಸಿನ ಜೇಲರು ಇದ್ದರು. ವಿಚಾರಣಾ ಕೈದಿಗಳನ್ನು ಕಾಣಲು ಅನುಮತಿ ನೀಡಿದ್ದರು. ಈಗಲೂ ಯುವ ವಯಸ್ಸಿನ ಜೇಲರೇ ಇದ್ದಾರು. ನಿಮ್ಮ ಮನಸ್ಸಿನ ತಾಕಲಾಟ ಊಹಿಸಬಲ್ಲೆ. ಆದರೂ ಚಿತ್ತಸ್ವಾಸ್ಥ್ಯ ಕಳೆದುಕೊಳ್ಳಬೇಡಿ. ನಾವೆಲ್ಲ ದಿನವೂ ನಿಮ್ಮನ್ನು ನೆನೆಯುತ್ತೇವೆ.

ಬೆಂಗಳೂರು : 28-6-1984

........ಸಂಜೆ 6-10. ಉದಯವಾಣಿಯಲ್ಲಿ ಇದೀಗ ಸುದ್ದಿ ಓದಿದೆ. ಸೀಮಳನ್ನು ಕರೆದು ಸಂತೋಷವನ್ನು ಹಂಚಿಕೊಂಡೆ. ಸ್ವಲ್ಪ ಹೊತ್ತಿನಲ್ಲಿ ಡಾ। ಅನುಪಮಾ ಬರುತ್ತಾರೆ. ಅವರು ಸಂತಸದ ಪಾಲು ಪಡೆಯುತ್ತಾರೆ. ಅಭಿನಂದನೆಗಳು.

ನಿಮಗೂ ನಿಮ್ಮ ಕುಟುಂಬಕ್ಕೂ ಶುಭಾಶಯಗಳು.

– ನಿರಂಜನ

(ನನ್ನ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಗೆಳೆಯ ಜಿ. ರಾಜಶೇಖರ್‌ಗೆ ಬರೆದ ಪತ್ರ - ಬೊಳುವಾರು)

ಬೆಂಗಳೂರು : 11-11-1983

........ನೆಂಜುಂಡವರಿಂದಲೇ ಶ್ರೇಷ್ಠ ಸಾಹಿತ್ಯ ಸೃಷ್ಟಿ ಸಾಧ್ಯ. ಈಗಿನ ಯಾತನಾಮಯ ಅನುಭವ ಅವರ ವ್ಯಕ್ತಿತ್ವವನ್ನು ರೂಪಿಸಲು ನೆರವಾಗುತ್ತದೆ. ಉದಯವಾಣಿಯಲ್ಲಿ ಓದಿದ ಕ್ಷಣವೇ ನಿಮ್ಮನ್ನು ಸ್ಮರಿಸಿಕೊಂಡೆ. ನಿಮ್ಮಂತಹ ಗೆಳೆಯರು ಸಮೀಪ ಇರುವಾಗ ಬೊಳುವಾರರಿಗೂ ಅವರ ಕುಟುಂಬಕ್ಕೂ ಹಾನಿ ತಟ್ಟದು ಎನಿಸಿತು.

ನಿಲುವು ಸರಿ. ಬೊಳುವಾರು ದೋಷಮುಕ್ತರೆಂದು ಜಾಹೀರಾತಾಗುವುದೂ ಸಾಧ್ಯ. ಈ ವಿಚಾರಣೆ ಬೇಗನೆ ಮುಗಿಯುವುದಿಲ್ಲ. ಜಾಮೀನಿನ ಮೇಲೆ ಬಿಟ್ಟಿದ್ದಾರಾ? Sub-judice ಎನಿಸದಂತೆ ಬೊಳುವಾರರ ರಕ್ಷಣೆಗೆ ಒಂದು ಸಮಿತಿ ರೂಪಿಸ ಬಾರದೇಕೆ? ವಿಚಾರಣೆ ಮುಗಿಯುವವರೆಗೂ ಅವರಿಗೆ ವೇತನ ಕೊಡುತ್ತಾರಾ? ಶ್ರೀಮತಿ ಬೊಳುವಾರರೂ ಮಕ್ಕಳೂ ಎಲ್ಲಿದ್ದಾರೆ? ನೀವೂ ಮಿತ್ರರೂ ಚರ್ಚಿಸಿ, ವಕೀಲರನ್ನು ಕಂಡು ತೀರ್ಮಾನಕ್ಕೆ ಬನ್ನಿ. ರಾಜಧಾನಿಯ ಪತ್ರಿಕೆಗಳಲ್ಲಿ ಏನೂ

ಬಂದಿಲ್ಲವಾದ್ದರಿಂದ (ನನಗೆ ಸಿಗುವುದು Herald, ಪ್ರಜಾವಾಣಿ) ಜೊಳುವಾರು ವಿಶಿಷ್ಟ ಸುದ್ದಿಯಾಗಿಲ್ಲ. ಲೇಖಕನ ರಕ್ಷಣೆಗಾಗಿ ಮಾನವೀಯ ನಿಲುವಿನಿಂದ ಹೊರಡಿಸುವ ವಿನಂತಿಯಲ್ಲಿ ನನ್ನ ಸಹಿ ಇದ್ದೇ ಇರುತ್ತದೆ. ನೀವು ಒಂದು ದಿನದ ಮಟ್ಟಿಗೆ ಬಂದು ಸಮುದಾಯ, ಬಂಡಾಯ ಮಿತ್ರರನ್ನು ತುಸು ಎಚ್ಚರಿಸಿದರೆ ಸಾಕು. ಈ ಬಗ್ಗೆ ಇನ್ನೊಂದು ವಾರದೊಳಗೇ ನಿಮ್ಮಿಂದ ಉತ್ತರ ನಿರೀಕ್ಷಿಸುವೆ.

ಆರೋಗ್ಯಕ್ಕೆ ಬೆಂಕಿ. ನನ್ನ ಮೇಲೆಯೇ ನನಗೆ ಸಿಟ್ಟು. ಜಲನೆ ಹೋಗಲಿ - ಕೂತಲ್ಲೇ ಬರೆಯುವುದಾದರೂ ಆಗಬೇಕಲ್ಲ ? ಛಲ ಮಾತ್ರ ಇದೆ. ನನ್ನದು ಸಾರ್ಥಕ ಬದುಕಲ್ಲ. ಬದುಕು ವ್ಯರ್ಥವಾಗಿಲ್ಲ ಎಂದಷ್ಟೇ ಹೇಳಬಲ್ಲೆ. ಡಾಕ್ಟರ ಮಾನಸಿಕ ಕ್ರಿಯೆ ಪ್ರಕ್ರಿಯೆ ನನಗೆ ಸರಿಯಾಗಿ ತಿಳಿಯುತ್ತಿಲ್ಲ. ಸಿಹಿ - ಕಹಿ ಸರಳ ಬರವಣಿಗೆ. ಸಾಕಷ್ಟು ಪ್ರಾಮಾಣಿಕ. ಅವರು ಅರ್ಧ ಬರೆದಿದ್ದಾಗ ನನಗೆ ಎರಡನೇ Stroke ಆಯಿತು. ದೃಷ್ಟಿ, ವಾಕ್‌ಶಕ್ತಿ ಕೈಗೊಟ್ಟುವು. ಆಮೇಲೆ ಚೇತರಿಸಿಕೊಂಡೆ. ಆದರೆ, ಅನುಪಮಾ ಹಸ್ತಪ್ರತಿ ಪೂರ್ತಿಗೊಳಿಸಿದಾಗ ಸರಿಯಾಗಿ ಓದಲು ಆಗಲಿಲ್ಲ. ಹೀಗಾಗಿ ಕೆಲವು factual errors - ಸಣ್ಣಪುಟ್ಟವು ಸದ್ಯಃ ಉಳಿದಿವೆ. ಪುಸ್ತಕರೂಪದಲ್ಲಿ ಬರುವಾಗ ಸರಿಪಡಿಸುತ್ತಾರಂತೆ.

ನಿನ್ನೆ ರಾತ್ರಿ 'ಅಂಕ' ಓದಿದೆ. ಒಳ್ಳೆಯ ಕಥೆ. ಆ ಬರವಣಿಗೆಗೆ ಪ್ರೇರಕವಾದ ನಿಜ ಸಂಗತಿಯ ಬಗ್ಗೆ ಒಂದಿಷ್ಟು ಕೇಳಿದ್ದೇನೆ. 'ಅಂಕ' ನನಗೆ ಬಹಳ ಮೆಚ್ಚುಗೆಯಾಗಿದೆಯೆಂದು ಜೊಳುವಾರರಿಗೆ ತಿಳಿಸಲು ಮರೆಯದಿರಿ.

- ನಿರಂಜನ

ಪ್ರೇರಕ ಶಕ್ತಿ

-ಹೇಮಂತ ಕುಲಕರ್ಣಿ

ಮೈತ್ರಿ ಒಂದು ಯೋಗ. ದೇವರಿಂದ ದೂರವಿದ್ದರೂ ಈ ಯೋಗ ಸಾಧನೆಯನ್ನೂ ನಡೆಸುವುದು ಸಾಧ್ಯವಿದೆ. ಇದಕ್ಕೆ ಸಮೀಪದಂತಿರುವ ಮೈತ್ರಿಯ ಸಾಧನೆಯನ್ನು ನಿರಂಜನರು ನನ್ನಿಂದ ದೂರವಿದ್ದರೂ - ನಾನು ಮಾಡುತ್ತ ಬಂದಿದ್ದೇನೆ. ಅವರು ಯಾವಾಗಲೂ ನನ್ನ ಸಾಹಿತ್ಯಕೃಷಿಗೆ ಪ್ರೇರಕಶಕ್ತಿಯಾಗಿ ನಿಂತಿದ್ದಾರೆ.

ಅವರನ್ನು ನಾನು ಮೊದಲ ಸಲ ಕಂಡದ್ದು ೧೯೪೭ರಲ್ಲಿ. ನಾನು ಆಗ ಸಾಂಗಲಿಯಲ್ಲಿ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದೆ. ಆಗ ನನ್ನ ಒಂದು ಕಾದಂಬರಿ - 'ಭಗ್ನಮಂದಿರ' ಪ್ರಕಟವಾಗಿತ್ತು. ಅವರು ತಮ್ಮ ಹೊಗಳುಮಾತಿನಿಂದ ನನ್ನನ್ನು ಗಗನಕ್ಕೇರಿಸಿದ್ದರು. ಆಮೇಲೆ ನನ್ನ ಬಾಳಿನಲ್ಲಿ ನಡೆದ ಕೌಟುಂಬಿಕ ದುರವಸ್ಥೆಯ ಸಂಘರ್ಷ ನನ್ನನ್ನು ಮುರಿದುಬಿಟ್ಟಿತು. ನನ್ನ ಬರೆವಣಿಗೆಯ ಉತ್ಸಾಹ ಬತ್ತಿಹೋಯಿತು. ಆದರೂ ನಿರಂಜನರ ಮಾತು ನನ್ನ ಅಂತರಂಗದಲ್ಲಿ ಬೇರೂರಿತ್ತು. ಕಾಲಕಾಲಕ್ಕೆ ಅವರ ಅನುರಣನವನ್ನು ನನ್ನ ಅಂತರಂಗದಲ್ಲಿ ನಾನು ಕೇಳಿದಾಗ, ನನ್ನ ಮನಸ್ಸನ್ನು ಒಂದು ತರಹದ ಔದಾಸೀನ್ಯ ಕವಿದುಬಿಡುತ್ತಿತ್ತು.

ಆ ಮೇಲೆ ಅಮೇರಿಕೆಗೆ ಹೋಗಲು Fulbright Foundation ಅವರಿಂದ ನನ್ನ ನಿಯುಕ್ತಿಯಾಯಿತು. ಆಗ ಬೆಂಗಳೂರಿಗೆ ಹೋಗಿ ಅವರನ್ನು ಕಂಡೆ. ಅವರ ಮನೆಯಲ್ಲಿ ಕೆಲವು ಗಂಟೆಗಳ ಕಾಲ ಕಳೆದ ನಂತರ ಅವರು ನನ್ನನ್ನು ವುಡ್‌ಲ್ಯಾಂಡ್ಸ್ ಹೋಟೆಲಿಗೆ ಊಟಕ್ಕೆ ಕರೆದೊಯ್ದರು. ಅಲ್ಲಿ ಅವರ ಮಾತಿನ ಉತ್ಸಾಹ ನನ್ನ ಮನಸ್ಸನ್ನು ತುಂಬಿಬಿಟ್ಟಿತು. ಅವರು ತಮ್ಮ ಎಲ್ಲ ಕಾಲವನ್ನೂ ಸೃಜನ ಕಾರ್ಯದಲ್ಲಿ ಕಳೆಯುತ್ತಿರುವುದು ನನಗೆ ಮತ್ತೊಮ್ಮೆ ಸ್ಫೂರ್ತಿದಾಯಕವಾಯಿತು. ಬರೆವಣಿಗೆಯಿಂದಲೇ ಬದುಕನ್ನು ಸಾಗಿಸಬೇಕೆಂಬ ಅವರ ಹಟ, ನಿಶ್ಚಯ, ನಾನೆಷ್ಟು ದೀನ ಹೀನನಾಗಿದ್ದೇನೆಂಬ ನನ್ನ ಭಾವವನ್ನು ಕೆಣಕಿತು. ಆಮೇಲೆ ನಾನು ಅಮೇರಿಕೆಯಲ್ಲಿ ನಿತ್ಯವೂ ಬರೆಯತೊಡಗಿದೆ: ಕನ್ನಡದಲ್ಲಿ ಅಲ್ಲ, ಇಂಗ್ಲಿಷಿನಲ್ಲಿ. ಕಾದಂಬರಿಯನ್ನಲ್ಲ, ಕಾವ್ಯವನ್ನು. ನನಗೆ ಪರದೇಶದಲ್ಲಿ ಮುಖ್ಯಪ್ರೇರಣೆ ನಿರಂಜನರಿಂದ ದೊರಕಿತ್ತು - ಮಾತಿನಿಂದಲ್ಲ, ಮೌನದಿಂದ. ಸಾಹಿತ್ಯ ರಚನೆಯಲ್ಲಿ ನಿತ್ಯವೂ ತೊಡಗಿರುವ ಅವರ ಮೂರ್ತಿ ನನ್ನ ಮನಸ್ಸಿನಲ್ಲಿ ಮನೆಮಾಡಿತ್ತು: "ಗುರೋಸ್ತು ಮೌನವ್ಯಾಖ್ಯಾನಂ" ಎಂಬಂತೆ.

ಅಮೇರಿಕೆಯಲ್ಲಿದ್ದಾಗ ಗೆಳೆಯರಿಂದ ನನಗೆ ಬಂತು ಸುದ್ದಿ - ನಿರಂಜನರಿಗೆ ಸ್ಟ್ರೋಕ್ ಆಗಿದೆಯೆಂದು; ಎಡಗಡೆಯ ಪಕ್ಷಘಾತವಾಗಿದೆಯೆಂದು. ನಾನು ದುಃಖಿತನಾದೆ. ಈ ವಿಕಲಾವಸ್ಥೆಯಲ್ಲಿ ಅವರ ಸೃಜನ ಕಾರ್ಯ ಹೇಗೆ ನಡೆಯುತ್ತಿದೆಯೋ ಎಂದು ಶಂಕಿತನಾದೆ.

ಆ ಮೇಲೆ ನಾನು ಭಾರತಕ್ಕೆ ಮರಳಿ ಬಂದೆ. ವಿಕಲಾಂಗರಾದರೂ ಅವರು ಸಾಹಿತ್ಯ ಕ್ಷೇತ್ರದಲ್ಲಿ ಹಿಮಾಲಯದಂತೆ ಬೆಳೆದು ನಿಂತಿದ್ದಾರೆ ಎಂಬುದನ್ನು ಕಂಡೆ. ಅವರನ್ನು ಕಾಣಲು ಹೋದೆ. ತಮ್ಮ ಕೋಣೆಯಿಂದ ಕೋಲೂರಿಕೊಂಡು ಹೊರಗೆ ಬಂದು ನಿಂತಾಗ ಅವರ ಮುಖದ ಮೇಲಿನ ತೇಜಸ್ಸನ್ನು ಕಂಡು ಆಶ್ಚರ್ಯಚಕಿತನಾದೆ.

ಅಗೋಚರವಾದ ಈ ಮೈತ್ರಿ ನನಗೊಬ್ಬನಿಗೇ ಗೊತ್ತು. ನಿರಂಜನರು ನನ್ನ ಮೇಲೆ ಬೀರಿದ ಅಸಮ ಪ್ರಭಾವದ ಕಲ್ಪನೆ ಅವರಿಗಿರಲಿಕ್ಕಿಲ್ಲ. ○

ಸರಳ ಸಜ್ಜನ ಧೀರ

–ಸಾರಾ ಅಬೂಬಕ್ಕರ್

ನಿರಂಜನರ ಪರಿಚಯ ನನಗಾದದ್ದು ಯಾವಾಗ ? ನೆನಪಿನಾಳದ ಜೇನುಗೂಡನ್ನು ಕೆದಕತೊಡಗಿದೆ. ವೈಯಕ್ತಿಕವಾಗಿ ಅವರನ್ನು ಭೇಟಿಯಾಗುವುದಕ್ಕೆ ಬಹಳ ಹಿಂದೆಯೇ ಈ ಹೆಸರು ನನ್ನ ಮನದಾಳದಲ್ಲಿ ಬೇರೂರಿ ನಿಂತಿತ್ತು. ಹೈಸ್ಕೂಲು ವಿದ್ಯಾರ್ಥಿನಿಯಾಗಿದ್ದ ನಾನು ಕತೆ, ಕಾದಂಬರಿಗಳಿಗಾಗಿ ಬಾಯಿ ಬಿಡುತ್ತಿದ್ದ ಕಾಲವಾಗಿತ್ತು ಅದು. "ಲೇಖಕರು ಯಾರಾದರೇನು ? ಓದಲು ಪ್ರಾರಂಭಿಸಿದ ಮೇಲೆ ಕೈಯಿಂದ ಕೆಳಗಿಡಲಾಗದಂತಹ ಕತೆಯಾಗಿರಬೇಕು" ಎಂಬ ತತ್ವ ನನ್ನದಾಗಿತ್ತು.

"ಲೇಖಕರ ಹೆಸರನ್ನು ನೋಡಿ ಪುಸ್ತಕಗಳನ್ನಾರಿಸಿಕೊಳ್ಳಿ. ಕುಳುಕುಂದ ಶಿವರಾಯರೆಂಬವರು 'ನಿರಂಜನ' ಎಂಬ ಕಾವ್ಯನಾಮದಿಂದ ಬರೆಯುತ್ತಿದ್ದಾರೆ. ಇವರು ಇಂದಿನ ಅತ್ಯುತ್ತಮ ಬರಹಗಾರರಲ್ಲಿ ಒಬ್ಬರು. ಅವರ 'ಚಿರಸ್ಮರಣೆ' ಎಂಬ ಪುಸ್ತಕವನ್ನು ಓದಿ" ಎಂದು ಕನ್ನಡ ಪಂಡಿತರು ತರಗತಿಯಲ್ಲೆಂದಾಗ ಆ ಪುಸ್ತಕದ ಮೂಲಕ ನಾನು ನಿರಂಜನರನ್ನು ಕಂಡೆ. ಆಗಿನ ನಿಯತಕಾಲಿಕಗಳಲ್ಲಿ ಪ್ರಕಟವಾಗುತ್ತಿದ್ದ ಇವರ

ಕತೆಗಳನ್ನೂ ಓದುತ್ತಿದ್ದೆ. 'ಇವರು ನಮ್ಮ ಜಿಲ್ಲೆಯವರು' ಎಂದು ಕನ್ನಡ ಪಂಡಿತರೆಂದಾಗ ನಾನು ಪುಳಕಿತಳಾಗಿದ್ದೆ. ಅವರದೊಂದು ಕತೆಯನ್ನೋ, ಕಾದಂಬರಿಯನ್ನೋ ಓದಿದಾಗಲೆಲ್ಲ, ನಾನು ಎಂದಾದರೂ ಈ ಸಾಹಿತಿಯನ್ನು ಭೇಟಿಯಾಗಬಲ್ಲೆನೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿತ್ತು. ಮುಂದೆ ನಾನು ವಿವಾಹಿತಳಾಗಿ ಘೋಷಾದೊಳಗೆ ನುಸುಳಿ ಹೊರ ಪ್ರಪಂಚದ ಸಂಪರ್ಕವನ್ನೇ ಕಡಿದುಕೊಂಡಿದ್ದಾಗ, ನಾನು ಮನುಷ್ಯಳಾಗಿ ಉಳಿಯಲು ನನಗೆ ಸಹಕರಿಸಿದ ಕೆಲವೇ ಕೆಲವು ಸಾಹಿತಿಗಳಲ್ಲಿ ನಿರಂಜನರು ಒಬ್ಬರು. ನಿರಂಜನರ ಪುಸ್ತಕಗಳನ್ನು ಎಲ್ಲಿ ಕಂಡರೂ ಬಿಡದೆ ತಂದು ಓದುತ್ತಿದ್ದೆ.

ಇದೇ ಕಾಲದಲ್ಲಿ ಅನುಪಮಾ ಅವರ ಕತೆಗಳನ್ನೂ ಓದುತ್ತಿದ್ದೆ. ಮುಂದೆ ಅವರು ಅನುಪಮಾ ನಿರಂಜನರಾದಾಗ ಹಾಲು ಸಕ್ಕರೆ ಬೆರೆತಂತಹ ಇವರ ಬದುಕನ್ನು ನೆನೆದು ಅಸೂಯೆಪಟ್ಟದ್ದೂ ಇದೆ! ಅನುಪಮಾ ಅವರ 'ಸಂಕೋಲೆಯೊಳಗಿಂದ' ಎಂಬ ಕಾದಂಬರಿಯನ್ನೂ ನಿರಂಜನರ 'ಹೆಣ್ಣಾಗಿ ಕಾಡಿತ್ತು ಮಾಯೆ' ಎಂಬ ಕಾದಂಬರಿಯನ್ನೂ ಓದಿದಾಗ ನನಗನ್ನಿಸಿದ್ದು ಇಬ್ಬರೂ ತಮ್ಮ ತಮ್ಮ ಸಮುದಾಯವನ್ನು ಎಷ್ಟು ಚೆನ್ನಾಗಿ ಪ್ರತಿನಿಧಿಸಿದ್ದಾರಲ್ಲ ಎಂದು. ಪುರುಷನ ಕ್ರೌರ್ಯವನ್ನೂ ಸ್ತ್ರೀಯ ಅಸಹಾಯ ಕತೆಯನ್ನೂ ಅನುಪಮಾ ಚಿತ್ರಿಸಿದ್ದರೆ, ಹೆಣ್ಣಿನ ಸ್ವಾರ್ಥವನ್ನೂ ಗಂಡಿನ ಬವಣೆಯನ್ನೂ ನಿರಂಜನರು ಎತ್ತಿತೋರಿದ್ದರು! ಒಬ್ಬರಿಗೊಬ್ಬರು ಸಮನಾಗಿ ಉತ್ತರಿಸಿದ್ದಾರೆ ಎಂದು ಮನದಲ್ಲೇ ಖುಷಿಪಟ್ಟೆ. ಈ ವಿಷಯದಲ್ಲಿ ಪತಿಪತ್ನಿಯರಲ್ಲಿ ಕಲಹವಾಯಿತೇ ಎಂಬ ಸಂದೇಹವೂ ಬಾರದಿರಲಿಲ್ಲ! (ನಿರಂಜನ ದಂಪತಿಗಳ ಕ್ಷಮೆ ಕೋರಿ!)

ಈ ದಂಪತಿಗಳನ್ನೊಮ್ಮೆ ಕಣ್ಣಾರೆ ಕಾಣಬೇಕೆಂಬ ಮಹದಾಸೆ ಅದಮ್ಯವಾಗಿತ್ತು. ಆದರೆ ಆರು ವರ್ಷಗಳವರೆಗೆ ನಾನು ಬೆಂಗಳೂರಿನಲ್ಲೇ ಇದ್ದರೂ ಇವರನ್ನೊಮ್ಮೆ ಭೇಟಿಯಾಗಬೇಕೆಂಬ ನನ್ನ ಕನಸು ಕೈಗೂಡಲೇ ಇಲ್ಲ. ಯಾಕೆಂದರೆ ನಾನಾಗ ಬರಹವನ್ನು ಪ್ರಾರಂಭಿಸಿರಲಿಲ್ಲ. ಅನಾಮಿಕಳಾದ ಒಬ್ಬಳು ಈ ಹೆಸರಾಂತ ಸಾಹಿತಿಗಳ ಬಳಿ ಹೋಗಿ, 'ನಿಮ್ಮ ಪುಸ್ತಕಗಳು ನನಗೆ ತುಂಬ ಇಷ್ಟ' ಎಂದರೆ ಅವರದನ್ನು ಹೇಗೆ ತೆಗೆದುಕೊಳ್ಳಬಹುದೆಂಬ ಕಲ್ಪನೆಯೇನೂ ನನಗಿರಲಿಲ್ಲ. ನಾನು ಬರಹ ಪ್ರಾರಂಭಿಸಿದ ಬಳಿಕವೂ ಅವರನ್ನು ಭೇಟಿಯಾಗಲು ನನಗೆ ಧೈರ್ಯವಾಗಲೇ ಇಲ್ಲ. ಅವರ ಬಳಿ ಹೋದಾಗ ಅವರು ನನ್ನನ್ನು ಸಮನಾಗಿ ಮಾತನಾಡಿಸದಿದ್ದರೆ ಎಂಬ ಅಳುಕಿನಿಂದಾಗಿ ನನ್ನ ಮಹದಾಸೆಯನ್ನು ಮನದಾಳದಲ್ಲಿ ಹುದುಗಿಸಿಕೊಂಡು ಬೆಂಗಳೂರಿನಿಂದ ಊರಿಗೆ ಹಿಂತಿರುಗಿದೆ.

ಈ ಮಧ್ಯೆ ಈ ದಂಪತಿಗಳ ಕಾಹಿಲೆಯ ವಿಷಯವನ್ನೂ ಪತ್ರಿಕೆಗಳಲ್ಲಿ ಓದಿ ಮನ ಖಿನ್ನವಾಗಿತ್ತು. ಅವರಿಬ್ಬರೂ ದೀರ್ಘಾಯುಷಿಗಳಾಗಲಿ ಎಂದು ಮಾತ್ರ ಸದಾ ಹಾರೈಸುತ್ತಿದ್ದೆ.

ಮುಂದೆ ನನ್ನ ಪುಸ್ತಕ ಪ್ರಕಟವಾಗಿ, ಅದನ್ನು ಓದಿದ ಅನುಪಮಾ ಅವರು ತಾವೇ ನನಗೆ ಪತ್ರ ಬರೆದರು. "ಬೆಂಗಳೂರಿಗೆ ಬಂದಾಗ ಖಂಡಿತ ಮನೆಗೆ ಬನ್ನಿ" ಎಂದು. ನನ್ನ ಮನ ಮುಗಿಲೆತ್ತರ ಹಾರಿತು. ಆ ಹಿರಿಯ ಸಾಹಿತಿ ದಂಪತಿಗಳಿಂದ ನನಗೆ ಕರೆ ಬರುವುದೆಂದರೆ ಸಾಮಾನ್ಯವೆ? ಮುಂದಿನ ಬಾರಿ ಬೆಂಗಳೂರಿಗೆ ಹೋದಾಗ ಆ ದಂಪತಿಗಳನ್ನು ಭೇಟಿಯಾಗುವುದೇ ನನ್ನ ಮುಖ್ಯ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು.

ಮನೆ ಹುಡುಕಲು ತೊಂದರೆಯಾಗಿ ಸಮಯಕ್ಕೆ ಸರಿಯಾಗಿ ತಲಪಲಾಗ ದಿದ್ದರೂ ದಂಪತಿಗಳು ನಮ್ಮನ್ನು ಆದರದಿಂದ ಬರಮಾಡಿಕೊಂಡರು. ಬಹುಕಾಲದ ನನ್ನ ಕನಸು ಕೈಗೂಡಿದುದಕ್ಕಾಗಿ ನಾನಂತೂ ಸಂತೋಷದಿಂದ ಉಬ್ಬಿಹೋಗಿದ್ದೆ. ನಿರಂಜನರ ಅಧ್ಯಯನದ ಕೊಠಡಿಯಲ್ಲಿ ಅವರೊಡನೆ, ಅನುಪಮಾರೊಡನೆ ಹರಟೆದಾಗ ನಾನು ಹೊಸದೊಂದು ಲೋಕದಲ್ಲಿ ವಿಹರಿಸುತ್ತಿರುವಂತೆ ತೋರಿತು.

ತುಂಬ ಸರಳವಾದ ನಡೆನುಡಿಯ, ಬಿಚ್ಚು ಮನಸ್ಸಿನ ಮಾತುಗಾರರು ನಿರಂಜನರು ಎಂಬುದನ್ನು ನಾನು ಮನಗಂಡದ್ದು ಆಗಲೇ. ಪ್ರಪ್ರಥಮ ಬಾರಿ ಭೇಟಿ ಯಾಗಿದ್ದರೂ ಎಷ್ಟೋ ವರ್ಷಗಳ ಪರಿಚಯವಿದ್ದಂತೆ ನಮ್ಮೊಡನೆ ಆತ್ಮೀಯತೆಯಿಂದ ಹರಟಿದರು.

ದಂಪತಿಗಳಿಬ್ಬರೂ ರೋಗಿಗಳು. ಒಬ್ಬರು ಎದ್ದು ನಡೆದಾಡಲು ಅಶಕ್ತ ರಾದರೆ, ಇನ್ನೊಬ್ಬರು ತಲೆಯ ಮೇಲೆ ತೂಗಾಡುತ್ತಿರುವ ಕತ್ತಿಯಂತಹ ಕ್ಯಾನ್ಸರ್ ಕಾಹಿಲೆಯ ಭೀಕರವಾದ ನೆರಳಿನಲ್ಲೇ ಓಡಾಡಿಕೊಂಡಿದ್ದಾರೆ. ಆದರೂ ಇವರಷ್ಟು ಸುಖಿಗಳು, ಸಂತೃಪ್ತರು ಪ್ರಪಂಚದಲ್ಲಿ ಬೇರಾರೂ ಇರಲಾರರು ಎಂಬಂತಹ ಮುಖ ಭಾವ! ಬದುಕಿನೊಡನೆ, ಮರಣದೊಡನೆ, ಸೆಣಸಾಡಿ ಗೆದ್ದ ವೀರರು! ಮನೋ ಸಂಕಲ್ಪದ ಮುಂದೆ ಮರಣವೂ ಸೋಲುತ್ತದೆ ಎಂಬುದನ್ನು ಈ ದಂಪತಿಗಳು ದೃಢ ಪಡಿಸಿದ್ದರು.

ಹೊರಡುತ್ತಿರುವಾಗಲೇ ನಿರಂಜನರು ಒಂದು ಮಾತೆಂದರು. "ದಯವಿಟ್ಟು ನನ್ನ ಬಗ್ಗೆ ಸಹಾನುಭೂತಿ ತೋರಬೇಡಿ. ನನಗಾಗಿ ಕನಿಕರ ಪಡಬೇಡಿ." ಎಂದು.

ಆದರೆ ನನ್ನ ಮನದಲ್ಲಿ ಅವರ ಕುರಿತು ಕರುಣೆಯುಕ್ಕಿರಲೇ ಇಲ್ಲ. ಅವರ ಮನಸ್ಸ್ಥೈರ್ಯವನ್ನು ಕಂಡು, ಬದುಕನ್ನು ಅವರು ಎದುರಿಸುತ್ತಿರುವ ರೀತಿಯನ್ನು ಕಂಡು, ಮನದಲ್ಲೇ ಅವರನ್ನು ಅಭಿನಂದಿಸುತ್ತಿದ್ದೆ. ಕೂಡಲೇ ನಗುತ್ತಾ ನಾನಂದೆ,

"ಛೆ, ಛೆ, ಕಸಿಕರ ಪಡುವುದೇಕೆ? ತಮಗೇನಾಗಿದೆಯೆಂದು ಕರುಣೆ ತೋರಬೇಕು? ತಮ್ಮ ಕರ್ತವ್ಯವನ್ನು ತಾವು ಮೊದಲಿನಂತೆಯೇ ನಿರ್ವಹಿಸುತ್ತಿದ್ದೀರಾ. ಈಗ ತಮ್ಮ ವೇಳೆಯನ್ನೆಲ್ಲ ಬರಹಕ್ಕಾಗಿಯೇ ಮೀಸಲಿಡಬಹುದಲ್ಲವೇ? ಬರಹದಲ್ಲಿ ತಾವು ಎಲ್ಲ ವನ್ನೂ ಮರೆಯಬಲ್ಲಿರಿ. ಅಲ್ಲವೇ?"

ನನ್ನ ಮಾತುಗಳಿಂದ ಅವರಿಗೆ ಖುಷಿಯಾದಂತೆ ತೋರಿತು. "ಹೌದು ನೀವು ಹೇಳಿದ್ದು ಸರಿ." ಎಂದರು.

ಪುತ್ತೂರಿನಲ್ಲಿ ನನ್ನ ಮೇಲೆ ಹಲ್ಲೆಯಾದಾಗ ಮೂರೇ ದಿನಗಳಲ್ಲಿ ನಿರಂಜನ ರಿಂದ ಪತ್ರ ಬಂದಿತ್ತು. "ಭಯಪಡಬೇಡಿ. ನಿಮ್ಮೊಡನೆ ನಾವೆಲ್ಲರೂ ಇದ್ದೇವೆ" ಎಂದು ಅನುಪಮಾ ಕೂಡಾ ಬೇರೆಯಾಗಿಯೇ ಬರೆದಿದ್ದರು. ನಿಂತ ನೆಲ ಕುಸಿಯುತ್ತಿದ್ದ ಅನುಭವವಾಗುತ್ತಿದ್ದಾಗ ಈ ದಂಪತಿಗಳ ಪತ್ರ ನನ್ನಲ್ಲಿ ನವಚೈತನ್ಯವನ್ನು ಉಕ್ಕಿಸಿತ್ತು.

ಮುಂದಿನ ಬಾರಿ ಅವರಲ್ಲಿಗೆ ಹೋದಾಗ ಹೆಚ್ಚು ಹೊತ್ತು ಕುಳಿತಿರಲು ಸಾಧ್ಯವಾಗದೆ ಬೇಗನೆ ಹೊರಟು ಬಂದಿದ್ದೆ. ಮತ್ತೊಮ್ಮೆ ಬೆಂಗಳೂರಿಗೆ ಹೋದಾಗ ದೂರವಾಣಿಯಲ್ಲಿ ಅನುಪಮಾ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ಫೋನ್ ಎತ್ತಿಕೊಂಡವರು ನಿರಂಜನ. ಕೊಂಚ ಉದ್ವೇಗದಿಂದಲೇ ಹೇಳಿದರು, "ಅನುಪಮಾ ಆಸ್ಪತ್ರೆಯಲ್ಲಿದ್ದಾರೆ. ಆಪರೇಶನ್ ಆಗಿ ನಾಲ್ಕೈದು ದಿನಗಳಾದುವು."

ನನ್ನೆದೆ ಧಸಕ್ಕೆಂದಿತು. "ಏನು ಕಾರಣ? ಈಗ ಹೇಗಿದ್ದಾರೆ?" ನನ್ನನ್ನು ನಿಯಂತ್ರಿಸಿಕೊಳ್ಳಲು ಪ್ರಯತ್ನಿಸುತ್ತಾ ಕೇಳಿದೆ.

"ಈಗ ಹುಷಾರಾಗಿದ್ದಾರೆ. ಈ ಹಿಂದಿನಂತೆಯೇ ಈ ಬಾರಿಯೂ ಅವರು ಸುಖವಾಗಿ ಮನೆಗೆ ಮರಳುವರೆಂಬ ವಿಶ್ವಾಸ ನನಗಿದೆ. ನಮ್ಮ ಸ್ನೇಹಿತರೆಲ್ಲರೂ ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಆತಂಕಕ್ಕೆ ಏನೂ ಕಾರಣವಿಲ್ಲ." ಇಂತಹ ಸಂದರ್ಭದಲ್ಲಿಯೂ ಅವರು ಪ್ರದರ್ಶಿಸಿದ ಮನಃಸ್ಥೈರ್ಯವನ್ನು ಕಂಡು ನಾನು ಬೆರಗಾದೆ.

೧೯೮೫ರ ಸೆಪ್ಟೆಂಬರ್ ತಿಂಗಳಲ್ಲೊಮ್ಮೆ ನಾನು ಈ ದಂಪತಿಗಳನ್ನು ಭೇಟಿ ಯಾದೆ. ಅನುಪಮಾ ಅವರು ಸಂಪೂರ್ಣ ಗುಣಮುಖರಾಗಿದ್ದಾರೆಯೇ ಎಂದು ತಿಳಿಯಲು ನಾನು ಕಾತರಳಾಗಿದ್ದೆ. ಅವರನ್ನು ಮುಖತಃ ಕಂಡ ಬಳಿಕ ನನ್ನ ಸಂದೇಹ ನಿವಾರಣೆಯಾಯಿತು. ಈ ದಂಪತಿಗಳ ಅಮೂಲ್ಯವಾದ ವೇಳೆಯನ್ನು ಹಾಳು ಮಾಡಿ, ಒಂದರ್ಧ ಗಂಟೆ ಹರಟೆ ಹೊಡೆದು, ಕಾಫಿ ತಿಂಡಿ ಮುಗಿಸಿ, ದೇವರು ಈ ದಂಪತಿಗಳಿಗೆ ಪೂರ್ಣಾಯುಷ್ಯವನ್ನು ಕೊಡಲಿ ಎಂದು ಮನದಲ್ಲೇ ಹಾರೈಸುತ್ತಾ ಅಲ್ಲಿಂದ ಬೀಳ್ಕೊಂಡೆ. ○

ಚೈತನ್ಯದ ಚಿಲುಮೆ

–ಕೃಷ್ಣ ದೇಶಪಾಂಡೆ

ಅಂತಃಕರಣ ತುಂಬಿ ಹೊರಸೂಸುವ ಹೃದಯ ಹೊಂದಿದ ಸೋದರ, ರಚನಾತ್ಮಕ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿರುವದೇ ಯೋಗ ಎಂದು ದೃಢವಾಗಿ ನಂಬಿದ ಕರ್ಮಯೋಗಿ, ನಮ್ಮ ಭವಿತವ್ಯ ನಮ್ಮ ಅಂಗೈಯಲ್ಲಿದೆಯೇ ವಿನಾ ಗಗನದಲ್ಲಿ ಮಿನುಗುವ ತಾರೆಗಳಲ್ಲಿ ಅಲ್ಲ ಎಂಬ ಅಪೂರ್ವ ಸತ್ಯವನ್ನು ಕಂಡುಕೊಂಡ ಧೀಮಂತ ವ್ಯಕ್ತಿ, ರೋಗರುಜಿನಗಳೆಂಬ ಪೆಡಂಭೂತಗಳೊಡನೆ ಸಮರ್ಥವಾಗಿ ಸೆಣಸಾಡಿ, ಅವುಗಳನ್ನು ಸದೆಬಡಿದು, ಅವುಗಳ ಒಡೆಯನಾದ ಯಮದೇವನನ್ನು ಮಣ್ಣುಮುಕ್ಕಿಸಿದ ಧೀರ, ತನ್ನ ಜೀವನದ ಮುಂದಿಟ್ಟುಕೊಂಡ ಗುರಿಗಳನ್ನು ಸಮರ್ಪಕವಾಗಿ, ಸಕಾಲಿಕವಾಗಿ, ಅರ್ಥಪೂರ್ಣವಾಗಿ, ಅವುಗಳ ಸಾಧನೆಯಲ್ಲಿ ಬಂದ ಎಲ್ಲ ಎಡರು ತೊಡರುಗಳನ್ನು ಸಲೀಸಾಗಿ ಬದಿಗೆ ಸರಿಸಿ, ಮುನ್ನುಗ್ಗಿ ಸಾಧಿಸಿದ ವಿರಳ ಕಾರ್ಯಕರ್ತ - ನನ್ನ ಸೋದರ ನಿರಂಜನ.

ನಿರಂಜನರನ್ನು ನೆನೆದಾಗೆಲ್ಲ (ಅವರನ್ನು ಸದಾ ನೆನೆಯುತ್ತಲೇ ಇರುತ್ತೇನೆ) ನನ್ನ ಬಗೆಗಣ್ಣೆದುರು ಕುಣಿದಾಡುವ ಇನ್ನೊಂದು ಚಿತ್ರ ಎಂದರೆ ಕರ್ನಲ್ ಬೇಡರ ಅವರದು. ಕರ್ನಲ್ ಬೇಡರ ಆಂಗ್ಲ ಯುವಕ. ಚುರುಕಾದ ಬುದ್ಧಿಯ ಖಣಿ, ಚೈತನ್ಯದ ಚಿಲುಮೆ. ತನ್ನ ದೇಶವಾದ ಬ್ರಿಟನ್ನಿನ ಸಲುವಾಗಿ ಆತ್ಮಾರ್ಪಣೆ ಮಾಡಿಕೊಳ್ಳುವ ಸಂಕಲ್ಪ ಹೊಂದಿದ ಮಹಾ ದೇಶಪ್ರೇಮಿ. ಬೇಡರ ಎರಡನೇ ಮಹಾಯುದ್ಧದಲ್ಲಿ ಯುದ್ಧ ವಿಮಾನ ಚಾಲಕನಾಗಿ ಸೇರಿಕೊಂಡು ಜರ್ಮನರೊಡನೆ ಅತಿ ಪರಾಕ್ರಮದಿಂದ ಹೋರಾಡಿದ ವೀರ. ಆಕಾಶ ಯುದ್ಧದಲ್ಲಿ ಅಪಘಾತಕ್ಕೀಡಾಗಿ ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡಾಗ ಮೇಲಧಿಕಾರಿಗಳು, ಅವನು ಚೇತರಿಸಿಕೊಂಡಿದ್ದ ಮೇಲೆ ಕಚೇರಿ ಕೆಲಸಕ್ಕೆ ಅವನನ್ನು ಕಳಿಸಿದಾಗ, ಸಿಡಿದೆದ್ದು ಪ್ರತಿಭಟಿಸಿ, ವಾದದಲ್ಲಿ ಗೆದ್ದು, ಎರಡೂ ಕಾಲುಗಳಿಲ್ಲದಿದ್ದರೂ, ಪುನಃ ಆಕಾಶಕ್ಕೆ ಹಾರಿ ವೈರಿಗಳನ್ನು ಸದೆಬಡಿದು ಸೋಲಿಸಿದ ಧೀರ ಬೇಡರ.

* * * *

ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಪಾಲನಾಗಿ ನಾನು ಧಾರವಾಡದಲ್ಲಿ ಕಾರ್ಯ ಪ್ರಾರಂಭಿಸಿದ ಅವಸರದಲ್ಲಿ ನಿರಂಜನ ದಂಪತಿಗಳು ಪಕ್ಕದ ಮನೆಯವರಾಗಿ ಬಂದು ನೆಲೆಸಿದ್ದರು. ಅಂದು ಮೊಳಕೆಯೊಡೆದ ನಮ್ಮಿಬ್ಬರಲ್ಲಿಯ ಸ್ನೇಹ ಇಂದು ಬಾಂಧವ್ಯದ ಮರದಲ್ಲಿ ಬೆಳೆದು ವಿರಾಜಿಸುತ್ತಿದೆ.

೧೯೭೦ರ ದಶಕದ ಎರಡನೇ ಭಾಗ. ಡಾ। ವಿ.ಕೃ. ಗೋಕಾಕರ ಅಧ್ವರ್ಯುತ್ವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಬಹುಮುಖವಾಗಿ ಬೆಳೆಯುತ್ತಿದ್ದ ಕಾಲ. ನಮ್ಮಿಬ್ಬರಿಗೂ ಹಿರಿಯರೂ,ಮಾರ್ಗದರ್ಶಿಗಳೂ,ಆದರಣೀಯರೂ ಆದ ಡಾ।ಗೋಕಾಕ ಅವರು ನಿರಂಜನರನ್ನು ಸೆನೇಟ್ ಸದಸ್ಯರನ್ನಾಗಿ, ನನ್ನನ್ನು ಗ್ರಂಥಪಾಲನನ್ನಾಗಿ ನೇಮಿಸಿಕೊಂಡು, ಅವರೊಡನೆ ಆ ವಿಶ್ವವಿದ್ಯಾಲಯಕ್ಕೆ ನಮ್ಮ ಅಳಿಲು ಸೇವೆ ಸಲ್ಲಿಸಲು ಸದವಕಾಶ ಕಲ್ಪಿಸಿಕೊಟ್ಟರು. ನಿರಂಜನ ವಿಶ್ವವಿದ್ಯಾಲಯ ಕಾರ್ಯಸೌಧಕ್ಕೆ ಭೇಟಿ ಇತ್ತಾಗೆಲ್ಲ ಗ್ರಂಥಾಲಯದತ್ತ ಪಾದ ಬೆಳೆಸಿ, ನನ್ನ ಯೋಗಕ್ಷೇಮ ವಿಚಾರಿಸಿ, ಹೊಸ ಗ್ರಂಥಗಳನ್ನು ಅವಲೋಕಿಸಿ, ಸೌಜನ್ಯ ತೋರಿಸಿ ತೆರಳುತ್ತಿದ್ದರು. ಹೀಗೆ ಒಂದು ಸಲ ಅವರು ಬಂದಾಗ, ಗ್ರಂಥಾಲಯ ಆದೇ ಖರೀದಿಸಿದ Oxford Junior Encyclopaedia ದ ಸೆಟ್ಟನ್ನು ಪರಿಶೀಲಿಸುತ್ತ ಇದ್ದೆ. ನಿರಂಜನ ಆ ಸಂಪುಟಗಳನ್ನೇ ವೀಕ್ಷಿಸಿದರು. "ಇಂಥದೊಂದು ಕೃತಿ - ಕನ್ನಡ ಮಕ್ಕಳ ಕುತೂಹಲವನ್ನು ಕೆರಳಿಸುವ, ಅವರ ಮನದಲ್ಲಿ ಕ್ಷಣಕ್ಷಣಕ್ಕೆ ಮೂಡಿ, ತಾಂಡವವಾಡಿ, ಮುಳುಗುವ ಅನೇಕ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುವ ಸಂದರ್ಭ ಗ್ರಂಥ ಬೇಡವೇ" ಎಂದೆ ನಿರಂಜನರಿಗೆ.

ಸರಿ, ಇಂಥ ಯೋಚನೆಯಲ್ಲಿಯೇ ಎಷ್ಟು ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆದಿದ್ದರೋ ನಿರಂಜನ. ಮುಂದೆ ಕೆಲವೊಂದು ದಿನಗಳ ಮೇಲೆ ಅವರು ಗ್ರಂಥಾಲಯಕ್ಕೆ ಬಂದಾಗ, ಕರ್ನಾಟಕ ಸರಕಾರದಿಂದ ಮಕ್ಕಳ ವಿಶ್ವಕೋಶ ರಚನೆ, ಪ್ರಕಟನೆಗಾಗಿ ೩೫ ಲಕ್ಷರೂಪಾಯಿಯ ಬೃಹತ್ ಯೋಜನೆಯೊಂದನ್ನು ಒಪ್ಪಿಕೊಂಡು ಬಂದ ಸಂತಸದ ವಾರ್ತೆ ನನಗೆ ತಿಳಿಸಿದರು.

ನಿರಂಜನ ಒಂದು ಕೆಲಸ ಕೈಗೆತ್ತಿಕೊಂಡರೆಂದರೆ ಉಳಿದುದೆಲ್ಲವನ್ನೂ ಬದಿಗಿಡುತ್ತಾರೆ. 'ಜ್ಞಾನಗಂಗೋತ್ರಿ'ಯ ತಮ್ಮ ಕನಸನ್ನು ನನಸಾಗಿಸಲು ಅದೆಷ್ಟು ತ್ಯಾಗಮಾಡಿದರು ನಿರಂಜನ ! ತಮ್ಮ ಸೃಜನಶೀಲ ಸಾಹಿತ್ಯಕ ಚಟುವಟಿಕೆಗಳನ್ನು, ಮನೆಮಠಗಳನ್ನು, ಮಡದಿ ಮಕ್ಕಳನ್ನು, ತಮ್ಮ ದೈಹಿಕ ಅನುಕೂಲತೆಗಳನ್ನು ಮರೆತು 'ಜ್ಞಾನಗಂಗೋತ್ರಿ'ಗೆ ಸಮರ್ಪಣೆ ಮಾಡಿಕೊಂಡರು. ಶ್ರೀ ಅರವಿಂದ ಆಶ್ರಮದ ಮಹಾತಾಯಿಯವರ ಸಂದೇಶವೊಂದು ನಿರಂಜನರ ಈ ವೈಶಿಷ್ಟ್ಯವನ್ನು ನೆನೆದಾಗೆಲ್ಲ ನನ್ನ ಸ್ಮೃತಿಪಟಲದಲ್ಲಿ ಸುಳಿಯುತ್ತದೆ. ಆ ಸಂದೇಶ ಹೀಗಿದೆ:

Give all you have; all you can.
Nothing more is asked of you; but also nothing less.

ನಿರಂಜನರ ಈ ತಪಸ್ಸಿನ ಫಲ, ಚಿತ್ರಮಯವಾದ, ವರ್ಣಮಯವಾದ, ಸುಲಲಿತ ಸರಳ ಭಾಷೆಯ ಚಿತ್ತಾಕರ್ಷಕವಾದ, ಸರ್ವವಿಸ್ಮಯ ವ್ಯಾಪ್ತಿಯಾದ

'ಜ್ಞಾನಗಂಗೋತ್ರಿ' ಏಳು ಬೃಹತ್ ಸಂಪುಟಗಳು, ಸರಕಾರ ಹಾಕಿದ ಸಮಯದ ಗಡುವಿಗೆ ಒಂದೆರಡು ವರ್ಷ ಮುಂಚಿತವಾಗಿ, ಅವರು ನಿಗದಿಪಡಿಸಿದ ಹಣದೊಳಗೇ ಬಹಳಷ್ಟು ಉಳಿಯುವಂತಾಗಿ, ಕನ್ನಡ ಮಕ್ಕಳ ಕೈಸೇರಿದವು. ನಿರಂಜನ ಪವಾಡ ಪುರುಷರಾದರು!

ಇವೆಲ್ಲ ನಾನು ಹೇಳಿವಷ್ಟು ಸುಲಭವಾಗಿ ಜರುಗಲಿಲ್ಲ. ೬ನೇ ಸಂಪುಟ ಹೊರ ಬಿದ್ದ ಕೆಲಸಮಯದಲ್ಲಿ, ಈ ಕೆಲಸದ ಭಾರದಿಂದಲೋ ಏನೋ ನಿರಂಜನ ದೀರ್ಘ ಹಾಗೂ ಘೋರ ಕಾಯಿಲೆಯಲ್ಲಿ ಸಿಲುಕಿ ತೊಳಲಾಡಿದರು. ಆದರೆ 'ಜ್ಞಾನಗಂಗೋತ್ರಿ' ಯನ್ನು ಮುಗಿಸುವ ಸಂಕಲ್ಪ ಅವರಿಗೆ ಸಂಜೀವಿನಿಯಾಯಿತೋ ಏನೋ, ಆರೇಳು ತಿಂಗಳಲ್ಲಿ ಸ್ವಲ್ಪ ಚೇತರಿಸಿಕೊಂಡು, ಕುಂಟುತ್ತ ತಮ್ಮ ದೈಹಿಕ ಯಾತನೆಯನ್ನೂ ಲಕ್ಷಿಸದೆ ಮತ್ತೆ ಕೆಲಸ ಮುಂದುವರಿಸಿ ಪೂರೈಸಿದರು.

'ಜ್ಞಾನಗಂಗೋತ್ರಿ'ಯ ವಿಜ್ಞಾನಕ್ಕೆ ಸಂಬಂಧಿಸಿದ ಒಂದು ಸಂಪುಟ ಬಿಡುಗಡೆಯಾದ ಒಂದು ವಾರದೊಳಗೆ CSIR ಸಂಸ್ಥೆಯ Indian Languages Advisory Committee (ಭಾರತೀಯ ಭಾಷೆಗಳ ಸಲಹಾ ಸಮಿತಿ) ಸಭೆಯೊಂದರಲ್ಲಿ ಸದಸ್ಯನಾಗಿ ಭಾಗವಹಿಸಲು ನಾನು ದಿಲ್ಲಿಗೆ ಹೋಗುವವನಿದ್ದೆ. ಸಭೆಯಲ್ಲಿ ಮಕ್ಕಳಿಗಾಗಿ ವಿಜ್ಞಾನಕ್ಕೆ ಸಂಬಂಧಿಸಿದ ಪುಟ್ಟ ಪುಸ್ತಕಗಳನ್ನು, ನಿಯತಕಾಲಿಕೆಯೊಂದನ್ನು ಭಾರತೀಯ ಎಲ್ಲ ಭಾಷೆಗಳಲ್ಲಿ ಪ್ರಕಟಿಸುವ ಕುರಿತು ಚರ್ಚೆ ನಡೆಯಲಿತ್ತು. ನಿರಂಜನ ಮತ್ತು ನಾನು ವಿಚಾರ ಮಾಡಿ ಆ ಸಮಿತಿಯ ಅಧ್ಯಕ್ಷರಿಗೆ - ಅವರೊಬ್ಬ ಸುಪ್ರಸಿದ್ಧ ರಸಾಯನಶಾಸ್ತ್ರ ಪ್ರಾಧ್ಯಾಪಕರಾಗಿದ್ದು, ನಂತರ ಉತ್ತರ ಹಿಂದುಸ್ಥಾನದ ವಿಶ್ವವಿದ್ಯಾಲಯವೊಂದರ ಉಪಕುಲಪತಿಯಾದರು - ಆದೇ ಬಿಡುಗಡೆ ಹೊಂದಿದ 'ಜ್ಞಾನಗಂಗೋತ್ರಿ'ಯ ಸಂಪುಟವನ್ನು ಕಾಣಿಕೆಯಾಗಿ ಕೊಡಬೇಕೆಂದು ನಿರ್ಧರಿಸಿದೆವು. ಆ ಸಂಪುಟ ಅಧ್ಯಕ್ಷರ ಹಾಗೂ ಇನ್ನಿತರ ಸದಸ್ಯರುಗಳಿಂದ ಶ್ಲಾಘನೆಯ ಉದ್ಗಾರಗಳನ್ನು ಪಡೆಯಿತು. "ಇನ್ನಿತರ ಯಾವುದೇ ಭಾರತೀಯ ಭಾಷೆಗಳಲ್ಲಿ ಇಷ್ಟು ಆಕರ್ಷಕವಾದ, ಮಕ್ಕಳಿಗಾಗಿ ವಿಜ್ಞಾನ ವಿಷಯ ವಿಶ್ವಕೋಶ ನಾವು ಕಂಡದ್ದಿಲ್ಲ" ಎಂದರು ಸದಸ್ಯರೆಲ್ಲ. ಹೀಗೆ ಕನ್ನಡದ ಬಾವುಟವನ್ನು ಮತ್ತೆ ರಾಷ್ಟ್ರಮಟ್ಟದಲ್ಲಿ ಎತ್ತಿ ಹಾರಿಸಲು ನಿರಂಜನ ಕಾರಣಪುರುಷರಾದರು.

* * * *

ನಾನು ಬೆಂಗಳೂರಿನಲ್ಲಿದ್ದಾಗಲೇ ನಮ್ಮಿಬ್ಬರಿಗೂ ಆದರ್ಶಪ್ರಾಯರಾದ ಡಾ। ಗೋಕಾಕರ ಷಷ್ಠಿಪೂರ್ತಿ ಸಮಾರಂಭ ಜರುಗಿತು. ಆ ನಿಮಿತ್ತ ಡಾ। ಗೋಕಾಕರ ನಿಕಟವರ್ತಿಗಳು, ಅಭಿಮಾನಿಗಳು, ಶಿಷ್ಯಕೋಟಿಯವರು ಅವರನ್ನು

ಕುರಿತು ಬರೆದ ಲೇಖನಗಳನ್ನು ಕಲೆಹಾಕಿ ಸಂಸ್ಮರಣ ಪುಸ್ತಕವೊಂದನ್ನು ಹೊರಡಿಸುವ ಜವಾಬ್ದಾರಿಯನ್ನು ನಿರಂಜನ ನಿರ್ವಹಿಸಿಕೊಂಡಿದ್ದರು. ಅಷ್ಟು ಅಚ್ಚುಕಟ್ಟಾದ, ಸುಂದರವಾದ, ಸಮಗ್ರವಾದ ಸಂಸ್ಮರಣ ಸಂಚಿಕೆ ಬೇರೊಂದನ್ನು ನಾನಿನ್ನು ನೋಡಬೇಕು.

* * * *

ವೈಯಕ್ತಿಕವಾಗಿ ನನ್ನ ಹಾಗೂ ನಿರಂಜನರ ಒಡನಾಟ ಅಣ್ಣತಮ್ಮಂದಿರ ಒಡನಾಟ. ಏಕಾಕಿಯಾಗಿದ್ದ ನನ್ನನ್ನು ನಿರಂಜನರು, ಸೋದರಿ ಅನುಪಮಾ, ಅವರ ಮುದ್ದು ಮಕ್ಕಳಾದ ತೇಜೂ, ಸೀಮಂತಿನಿ ಅವರೂ ತಮ್ಮ ಕುಟುಂಬದ ಆತ್ಮೀಯ, ಅಕ್ಕರೆಯ ಆದರದ ಸದಸ್ಯನಾಗಿ ಕಾಣುತ್ತಿದ್ದುದು ನನ್ನ ಕೆಲವೇ ಸೌಭಾಗ್ಯಗಳಲ್ಲಿ ಒಂದು. ಬೆಂಗಳೂರಿನಲ್ಲಿದ್ದಾಗಲೇ ನಾನು ಬಹಳ ತಡವಾಗಿ ಮದುವೆಯಾದಾಗ ನಿರಂಜನ ದಂಪತಿಗಳು ಹಿರಿ ಹಿರಿ ಹಿಗ್ಗಿದರು. ನಮ್ಮ ಮಗ ಸಮೀರ ಉದಯಿಸಿದಾಗ ಮೊಟ್ಟಮೊದಲು ಬಂದು ಅವನಿಗೆ ಆಶೀರ್ವಾದ ಮಾಡಿ, ಕಾಣಿಕೆ ಕೊಟ್ಟು ಸಂತೋಷಿಸಿದವರು ನಿರಂಜನರು; ತಮ್ಮನೆಂದು ಕಾತುರದಿಂದ ಮುದ್ದಾಡಿದವರು ತೇಜೂ, ಸೀಮಾ ಅವರು. ನನ್ನ ಸಹಧರ್ಮಿಣಿ, ಕುಸುಮ, ಇಂದಿಗೂ ಹೇಳುತ್ತಾಳೆ:"ಅನುಪಮಾನಂತಹ ಸ್ನೇಹಜೀವಿ, ಸಹೃದಯಿ, ತಾಯ್ಕರುಳಿನ ಸೋದರಿ ಇನ್ನೊಬ್ಬಳಿಲ್ಲ" ಎಂದು.

ಹೀಗೆ ಕಾಲಚಕ್ರ ಉರುಳಿತು. ನಾನು ಪುನಃ ಕರ್ನಾಟಕ ವಿಶ್ವವಿದ್ಯಾಲಯ ಸೇರಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷನಾಗಿ ಆಯ್ಕೆಗೊಂಡೆ. ರಾಜ್ಯ ಸರಕಾರ, ತಡವಾಗಿಯಾದರೂ ನಿರಂಜನರ ಸಾಹಿತ್ಯ ಸೇವೆ, ಮಕ್ಕಳಿಗಾಗಿ ಅವರು ರೂಪಿಸಿಕೊಟ್ಟ ಜ್ಞಾನಗಂಗೋತ್ರಿಯ ಸಾಹಸ ಗುರುತಿಸಿ, ಪ್ರಶಸ್ತಿ ದಯಪಾಲಿಸಿತು. ನಾವೆಲ್ಲ ಸಂತೋಷದ ಸಮುದ್ರದಲ್ಲಿ ಮುಳುಗಿದೆವು. ವಿದ್ಯಾವರ್ಧಕ ಸಂಘದ ಪರವಾಗಿ ನಿರಂಜನರನ್ನು ಸತ್ಕರಿಸಬೇಕೆಂದು ಅಧ್ಯಕ್ಷ ಸೋದರ ಪಾಟೀಲ ಪುಟ್ಟಪ್ಪ, ನಾನು, ಕಾರ್ಯಕಾರಿ ಮಂಡಳದ ಸದಸ್ಯರು ನಿರ್ಧರಿಸಿದೆವು. ಆದರೆ ಆಗ ನಿರಂಜನ 300 ಮೈಲಿನ ಪ್ರವಾಸಗೈದು ಧಾರವಾಡಕ್ಕೆ ಬರುವಂತಹ ದೇಹ ಸ್ಥಿತಿಯಲ್ಲಿರಲಿಲ್ಲ. ಆದರೇನಂತೆ, ಪಾಪು, ನಾನು ಬೆಂಗಳೂರಿಗೆ ಪ್ರಯಾಣಿಸಿ ನಿರಂಜನರನ್ನು ಅವರ ಮನೆಯಲ್ಲೇ ಸತ್ಕರಿಸಬೇಕೆಂದು ನಿಶ್ಚಯಿಸಿಕೊಂಡು ಬೆಂಗಳೂರಿಗೆ ಬಂದೆವು. ನಿರಂಜನರ ಮನೆಗೆ ಹೋದೆವು - ಒಳ್ಳೇ ಉತ್ಸಾಹದಿಂದ, ಆತುರದಿಂದ. ಅಲ್ಲಿ ಕಾದಿದ್ದುದು ದೊಡ್ಡ ನಿರಾಸೆ. ನಿರಂಜನರು ಅರ್ಧಗಂಟೆ ಹಿಂದೆಯೇ ಅನುಪಮಾರನ್ನು ಕರೆದುಕೊಂಡು ಆಸ್ಪತ್ರೆಗೆ ಹೊರಟುಹೋಗಿದ್ದರು. ಅನುಪಮಾಗೆ ಕಾಹಿಲೆ ಅವರು ತಕ್ಷಣ ಶಸ್ತ್ರಚಿಕಿತ್ಸೆಗೊಳಗಾಗಬೇಕಿತ್ತಂತೆ.

ಆ ಮಾತು ಒಂದು ದಶಕ ಹಿಂದಿನದು. ನಿರಂಜನ ದಂಪತಿಗಳು ಹೋರಾಟದ ಬದುಕು ನಡೆಸಿಕೊಂಡು ನಮ್ಮ ಮಧ್ಯೆ ಇದ್ದಾರೆ. ಇದೇ ನಮಗೆ ಸಂತಸ. ○

ಗುಣಗ್ರಾಹಿ ಅಂತಃಕರಣ

–'ಗಂಗಾ' ಪಾದೇಕಲ್

ಬೆಂಗಳೂರಿನ ಮಹಿಳಾ ಲೇಖಕಿಯರ ಸಮ್ಮೇಳನಕ್ಕೆ ಹೋಗಿದ್ದ ನಾನು ಡಾ। ಅನುಪಮಾ ನಿರಂಜನರ ಕಾರಿನಲ್ಲೇ 'ಕಥೆ'ಗೆ ಹೆಜ್ಜೆಯಿಡುವಂತಾಯಿತು. ಡಾ। ಅನುಪಮಾರೊಂದಿಗೆ ಕುಳಿತಿದ್ದ ನನ್ನೆದೆ, ಅರ್ಥವಾಗದ ಉದ್ವೇಗದಿಂದ ತುಡಿಯುತ್ತಿತ್ತು.

"ಇವ್ರೇ ನಿರಂಜನ, ನೋಡಿ ಇವ್ರೇ ಗಂಗ, ಕರ್‍ಕೊಂಡು ಬಂದ್ಬಿಟ್ಟೆ", ಶ್ರೀಮತಿ ಅನುಪಮಾ ಸಡಗರದಿಂದ ಚಿಕ್ಕಮಕ್ಕಳಂತೆ ವಿವರಿಸುತ್ತಿದ್ದಾಗ, ನಿರಂಜನರು ಮೆಲುವಾಗಿ ನಗುತ್ತ, "ಒಳ್ಳೇದಾಯ್ತು ಒಳ್ಳೇದಾಯ್ತು, ಬನ್ನಿ ಬನ್ನಿ!" ಎಂದರು. ಗೇಟು ದಾಟಿ ಒಳಗೆ ಕಾಲಿಟ್ಟಾಗಲೇ, ಸಿಮೆಂಟಿನ ಕಾಲ್ದಾರಿಯಲ್ಲಿ, ಕುರ್ಚಿಯಲ್ಲಿ ಕೂತಿದ್ದವರನ್ನು ಗಮನಿಸಿದ್ದ ನಾನು ಗರಬಡಿದವಳಂತೆ ನಿಂತಿದ್ದೆ. ಆ ಸರಳತೆ, ಸರಳತೆಯಲ್ಲೂ ಮಿಂಚುವ ಆ ತೇಜಸ್ಸು - ಎದೆಯಾಳದಲ್ಲೇನೋ ಒತ್ತಿಕೊಂಡು ಬಂದಂತಾಗಿ ಗಂಟಲುಬ್ಬಿತು. ಮನಸ್ಸಿನಾಳದಲ್ಲಿ ಮರೆಯಾಗಿದ್ದ ನೋವು ಮತ್ತೆ ಹೆಡೆಯೆತ್ತಿ ನಾಲಗೆ ಚಾಚಿತು. ಅಳಿದ ಹಿರಿಯಣ್ಣ ಮುಳಿಯ ಕೃಷ್ಣ ಭಟ್ಟರ ನೆನಪು ಮೇಲೇಳುತ್ತಿದ್ದಂತೆಯೇ, ನನ್ನರಿವಿಲ್ಲದೇ ಮುನ್ನಡೆದು ಅವರಿಗೆ ಮಣಿದಿದ್ದೆ.

"ಛೇ ಇದೇನು? ಹೀಗೆ ಮಾಡ್ಬಾರದು ಏಳಿ ಏಳಿ" ತಬ್ಬಿಬ್ಬಾಗಿ ನಿರಂಜನರೇ ಹೇಳಿದಾಗ ಅವರ ಗಂಟಲೂ ಗದ್ಗದಿತವಾದಂತೆನಿಸಿತು.

ಮೊದಲ ಬಿಗು ಸಡಿಲಾಗಿ ವಾತಾವರಣ ತಿಳಿಯಾದಾಗ ಪಕ್ಕದಲ್ಲೇ ಇದ್ದ ಮಡದಿಯತ್ತ ಹೊರಳಿ, "ಕಂಡೊಡನೆ ಹಿರಿಯರಿಗೆ ನಮಸ್ಕರಿಸುವುದು ದಕ್ಷಿಣ ಕನ್ನಡದವರ ರೀತಿ, ಅವರ ಸೌಜನ್ಯದ ಗುರುತು" ಎಂದರು.

ತಮ್ಮೊಡಲ ತುಂಬಾ ಪುಸ್ತಕಗಳನ್ನು ತುಂಬಿಕೊಂಡ ಕಪಾಟುಗಳಿಗೆ ತುಸುದೂರದ ಸೋಫಾದಲ್ಲಿ ಕುಳಿತಾಗ ನನ್ನ ಆತಂಕವೆಲ್ಲ ಹಾರಿಹೋಗಿ, ಮನಸ್ಸು ನಿರಾಳವಾಗಿತ್ತು, ಸಂತೋಷ ಸಮಾಧಾನಗಳಿಂದ ತುಂಬಿತ್ತು. ಬಹುಶಃ ನನ್ನ ಅನುಭವ ಒಬ್ಬ ಕಿರಿಯ ಸಾಹಿತಿಗೆ ಅಲ್ಲಿ ಆದ ಅನುಭವವಾಗಿರಬಹುದೆಂದು ನನ್ನ ನಂಬಿಕೆ. ಕಾರಣ, ಆ ದಂಪತಿಗಳು ಕಿರಿಯರೊಡನೆ ನಡೆದುಕೊಳ್ಳುವ ರೀತಿ, ತೋರುವ ಆತ್ಮೀಯತೆ.

ಮಾತಾಡುತ್ತಿದ್ದಂತೆ, ನನ್ನ ಕೃತಿಗಳ ಬಗೆಗೂ ಭರವಸೆಯ ಮಾತಾಡಿದರು. ಮತ್ತೆ 'ಚಿರಸ್ಮರಣೆ' ಕಾದಂಬರಿಯ ಪ್ರಸ್ತಾಪ ಬಂದು, ಚಿರುಕಂಡ, ಅಪ್ಪು - ಪಾತ್ರಗಳ ಬಗ್ಗೆ ಕೇಳಿದೆ. ಬೇಸರಿಸದೆ ವಿವರಣೆಯಿತ್ತರು. ಅನುಪಮಾ ನನ್ನ ಕಾದಂಬರಿ -

'ಹೆಜ್ಜೆ ಮೂಡದ ಹಾದಿಯಲ್ಲಿ'ಯ 'ಪ್ರೇತ' ಪಾತ್ರದ ಬಗ್ಗೆ ವಿಚಾರಿಸಿದರು. ನಾನು ಪ್ರೇತ ಭಟ್ಟರುಗಳ ಬಗ್ಗೆ ವಿವರಿಸಿದಾಗ ನಿರಂಜನ, "ನೇಪಾಳದಲ್ಲಿ ಇದೇ ರೀತಿಯ ಪದ್ಧತಿಯಿತ್ತು. ೧೯೫೫ರ ಮನ್ಮಥ ಸಂವತ್ಸರದಲ್ಲಿ ಅಲ್ಲಿನ ರಾಜ ತ್ರಿಭುವನರು ತೀರಿಕೊಂಡಾಗ, ದೇವಾಲಯದ ನೌಕರ ಓರ್ವನ ಮೇಲೆ ರಾಜನ ಪ್ರೇತವನ್ನಾಹ್ವಾನಿಸಿ ಧಾರಾಳ ಧನ-ಕನಕವನ್ನಿತ್ತು, ದೇಶ ಬಿಟ್ಟೋಡಿಸಿದರಂತೆ. ಇಂಥ ಕ್ರಮಗಳನ್ನು ಯಾಕಾಗಿ ಸೃಷ್ಟಿಸುತ್ತಾರೋ!" ಎಂದು ವಿವರಿಸಿದಾಗ - ಮನುಷ್ಯ ಸ್ವಭಾವದ ಬಗ್ಗೆ, ಅವನು ಸೃಷ್ಟಿಸಿಕೊಂಡ ರೀತಿ ನೀತಿಗಳ ಬಗ್ಗೆ, ಅವರಿಗಿದ್ದ ಗಾಢ ಕಳಕಳಿ, ಚಿಂತನೆಗಳನ್ನು ಆ ಕ್ಷಣದಲ್ಲಿ ಗುರುತಿಸಿದೆ.

ಅಲ್ಲಿಂದ ಹೊರಟಾಗ ಎಷ್ಟೋ ದಿನಗಳ ಕನಸನ್ನು ನನಸಾಗಿಸಿಕೊಂಡ ತೃಪ್ತಿ. ಮೊದಲೇ ಓದಿ ಮೆಚ್ಚಿದ್ದ ಕೃತಿ 'ಮೃತ್ಯುಂಜಯ' ನೆನಪಿನ ಕಾಣಿಕೆಯಾಗಿ ದೊರೆಯಿತು. ಶ್ರೀಮತಿ ಅನುಪಮಾರ ಜತೆ ಮತ್ತೆ ಪರಿಷತ್ತಿನೆಡೆಗೆ ಮರಳುವಾಗ 'ಮೃತ್ಯುಂಜಯ'ದ ಮುನ್ನುಡಿಯ ಮಾತು - "ನ್ಯಾಯಕ್ಕಾಗಿ, ಒಳ್ಳೆಯ ಬದುಕಿಗಾಗಿ ಜನ ನಡೆಸುವ ಹೋರಾಟಕ್ಕೆ ಸಾವಿಲ್ಲ" - ನೆನಪಾಗಿ ಅದು ಬರೇ ಮಾತಲ್ಲ - ನಿರಂಜನ ದಂಪತಿಗಳು ಪ್ರತ್ಯಕ್ಷ ನಿದರ್ಶನಗಳೆಂದು ಅನಿಸಿತು. ○

ನಿರಂಜನ : ಚಿತ್ರ - ಪತ್ರ

—ಎಸ್. ರಾಮಚಂದ್ರ

ಸುಮಾರು ಮೂರು ದಶಕಗಳ ಹಿಂದೆ - ೧೯೫೪ ಎಂದು ನೆನಪು - ನನ್ನ ಹೈಸ್ಕೂಲು ಸಹಪಾಠಿಯೊಬ್ಬ ವಿದ್ಯಾರ್ಥಿ ನಾಯಕನಾಗಿ ಆಯ್ಕೆಯಾದ. ಅವನ ಗೆಲುವಿಗಾಗಿ ನಾವೆಲ್ಲ ದುಡಿದಿದ್ದೆವು. ಆತ ಗೆದ್ದಾಗ ಸಹಜವಾಗಿಯೇ ಸಂತೋಷ. ಆ 'ವಿಜಯೋತ್ಸವ'ವನ್ನು ನಾನು ಆಚರಿಸಿದ ರೀತಿ ಮಾತ್ರ ಸ್ವಲ್ಪ ಭಿನ್ನವಾದದ್ದು. ಶಾಲೆಗೆ ತುಸುದೂರದಲ್ಲಿದ್ದ ಪುಸ್ತಕದ ಅಂಗಡಿಯಿಂದ ಒಂದು ಕಾದಂಬರಿಯನ್ನು ಖರೀದಿ ಮಾಡಿದೆ. ಪುಸ್ತಕದ ಶೀರ್ಷಿಕ ಪುಟದಲ್ಲಿ "ಗೆಳೆಯ............ನ ಗೆಲುವಿನ ನೆನಪಿಗಾಗಿ" ಎಂದು ಒಕ್ಕಣಿಸಿ, ಕೆಳಗೆ ನನ್ನ ಸಹಿ - ತಾರೀಕುಗಳನ್ನೂ ಬರೆದೆ. ಆ ಕಾದಂಬರಿ ಈಗ ನನ್ನ ಕೈಯಲ್ಲಿಲ್ಲ. ("ಪುಸ್ತಕಂ ವನಿತಾ ವಿತ್ತಂ........" ಯಾರೋ ಕೈ ಕೊಟ್ಟಿದ್ದಾರೆ!) ಆದರೂ ನೆನಪು ಚೆನ್ನಾಗಿದೆ. ಅದರ ಹೆಸರು - 'ದೂರದ ನಕ್ಷತ್ರ'; ಲೇಖಕ - ನಿರಂಜನ.

ಮೂವತ್ತು ವರ್ಷಗಳ ಹಿಂದೆ ನನಗೆ ನಿರಂಜನರೂ ದೂರದ ನಕ್ಷತ್ರವೇ. ಅವರ ಹೆಸರನ್ನು ಕೇಳಿದ್ದೆನೇ ವಿನಾ ಕಂಡಿರಲಿಲ್ಲ. ನಮ್ಮ ಶಾಲೆಯ ಗ್ರಂಥಾಲಯದಲ್ಲಿದ್ದ ಅವರ 'ಕೊನೆಯ ನಮಸ್ಕಾರ', 'ಸಂಧಿಕಾಲ', 'ಅಯ್ಯನ್ಯೆ' ಮುಂತಾದ ಕಥಾ ಸಂಕಲನಗಳ ಮೇಲೆ ಕಣ್ಣಾಡಿಸಿದ್ದೆ. ೧೯೫೩ರ ಸುಮಾರಿಗೆ ಬೆಂಗಳೂರಿನ ವಾಹಿನಿ ಪ್ರಕಾಶನದವರು ಆರಂಭಿಸಿದ (ಆ ಮೇಲೆ ಇತರ ಪ್ರಕಾಶಕರೂ ಅನುಸರಿಸಿದ) ಒಂದೂವರೆ ರೂಪಾಯಿ ಕೈ ಹೊತ್ತಗೆಯ ಮಹಾಪೂರದಲ್ಲಿ ತೇಲಿ ಬಂದ ನಿರಂಜನರ 'ವಿಮೋಚನೆ', 'ರಂಗಮ್ಮನ ವಠಾರ'ಗಳನ್ನು ಅಲ್ಲಿಷ್ಟು-ಇಲ್ಲಿಷ್ಟು ಓದಿದ್ದೆ. ಹೈಸ್ಕೂಲು ಮುಗಿಸಿ, ಮಂಗಳೂರಲ್ಲಿ ಕಾಲೇಜಿನ ಕಟ್ಟೆ ಹತ್ತಿದ ಬಳಿಕ ಯು. ಆರ್. ಶೆಣೈಯವರ ಅಂಗಡಿಯಿಂದ ನಿರಂಜನರ 'ಪುಷ್ಪಹಾರ', 'ಪತ್ರಗುಚ್ಛ' (ಅದರ ಪ್ರಕಾಶಕರೂ ಮೆ। ಶೆಣೈಯವರೇ) ಗಳನ್ನು ಬೆಲೆತೆತ್ತು ಪಡಕೊಂಡಿದ್ದೆ. (ಅದೂ ಈಗ ನನ್ನಲ್ಲಿಲ್ಲ. ಯಾರೋ ರಸಿಕ ಮಹಾಶಯ ಕೊರಳಿಗೆ ಹಾಕಿಕೊಂಡು ಹೋದವನು ಹಿಂದಿರುಗಿಸಿಯೇ ಇಲ್ಲ!) 'ಪುಷ್ಪಹಾರ'ದಲ್ಲಿ ಪ್ರಕಟವಾಗಿದ್ದ ನಿರಂಜನರ 'ಸಾಹಸ' ಪ್ರವೃತ್ತಿ ಹದಿಹರೆಯದ ನನ್ನ ಹುಚ್ಚಿಗೆ ತುಂಬ ಒಪ್ಪಿಗೆಯಾಯಿತು.

ಕಾಲ ಕಳೆಯಿತು. ಕುಳುಕುಂದ ಶಿವರಾಯರ ಸ್ವಯಂ ನಿರ್ಮಿತ ವರ್ಣಮಯ ವ್ಯಕ್ತಿತ್ವ, ರಾಜಕೀಯಾಸಕ್ತಿ, ಭೂಗತವಾಸ, ಬಳಿಕ 'ನಿರಂಜನ'ರಾದದ್ದು ಮುಂತಾದುವುಗಳನ್ನು ಅಲ್ಲಿ - ಇಲ್ಲಿ ಓದಿ ಕೇಳಿ ತಿಳಿದುಕೊಂಡೆ. ನನಗೆ ಅವರಲ್ಲಿ ಕುತೂಹಲ ಬೆಳೆಯುತ್ತ ಹೋಯಿತು. ಸುಳ್ಯ ಸೀಮೆಯವನಾದ ನನಗೆ ಕುಳುಕುಂದ ಹೆಚ್ಚೇನೂ ದೂರವಲ್ಲ. ನನಗೇ ಅರಿವಾಗದಂತೆ ಶಿವರಾಯ - ನಿರಂಜನರೂ (ಅವರು ಕುಳುಕುಂದ ಬಿಟ್ಟು ದಶಕಗಳೇ ಸಂದಿದ್ದರೂ) ಹತ್ತಿರವಾಗುತ್ತ ಬಂದರು. ನಾನು ಘಟ್ಟ ಹತ್ತಿ ಧಾರವಾಡದಲ್ಲಿ ಓದುತ್ತಿದ್ದ ಕಾಲದಲ್ಲಿ (೧೯೬೦–'೬೨) ಡಾ। ಅನುಪಮಾ ನಿರಂಜನರು ಅಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದರು ಎಂಬುದಾಗಿ ಕೇಳಿದ್ದೆ. ಉಭಯ ಮಿತ್ರರಾಗಿದ್ದ ದಿ। ದ. ಬಾ. ಕುಲಕರ್ಣಿಯವರ ಪುಸ್ತಕದ ಅಂಗಡಿಗೆ ನಿರಂಜನರು ಬಂದು ಹೋಗುತ್ತಿದ್ದರಾದರೂ ನಮ್ಮಿಬ್ಬರಿಗೆ ಅಲ್ಲಿ ಮುಖಾಮುಖಿಯಾದದ್ದಿಲ್ಲ. ದ. ಬಾ. ಕುಲಕರ್ಣಿ ಅವರ ಬಗ್ಗೆ ಹೇಳುತ್ತಿದ್ದದ್ದು ಮಾತ್ರ ನೆನಪಿದೆ.

ನಿರಂಜನರನ್ನು ಮೊತ್ತ ಮೊದಲ ಸಲ ನಾನು ಹತ್ತಿರದಿಂದ ಕಂಡದ್ದು, ಅವರ ಮಾತುಗಳನ್ನು ಕೇಳಿದ್ದು ೧೯೬೮ರ ಫೆಬ್ರವರಿಯಲ್ಲಿ - ಮೈಸೂರಲ್ಲಿ. ಸಂದರ್ಭ- 'ಪ್ರಬುದ್ಧ ಕರ್ನಾಟಕ'ದ ಚಿನ್ನದ ಹಬ್ಬ. ಮಾನಸಗಂಗೋತ್ರಿಯಲ್ಲಿ ನೆರವೇರಿದ ಆ ಉತ್ಸವದ ಒಂದು ಗೋಷ್ಠಿಯಲ್ಲಿ ನಿರಂಜನರು ಭಾಗವಹಿಸಿದ್ದರು. ಅವರ ಚುರುಕಿನ ಮಾತು ನನಗೆ ಮೆಚ್ಚುಗೆಯಾಯಿತು. (ಮತ್ತೆ ಎರಡೇ ವರ್ಷಗಳಲ್ಲಿ ಅವರು ಪಾರ್ಶ್ವವಾಯು ಪೀಡಿತರಾದ ಆಘಾತಕರ ವಾರ್ತೆಯನ್ನು ಕೇಳಿದೆ.) ನಾಲ್ಕು

ವರ್ಷಗಳ ಅನಂತರ, ೧೯೭೩ರ ಅಕ್ಟೋಬರದಲ್ಲಿ ಪಂಜೆ ಶತಮಾನೋತ್ಸವ ನಿಮಿತ್ತ ವಾಗಿ ಬೆಂಗಳೂರಿಗೆ ಹೋಗಿದ್ದವನು, ನಿರಂಜನರನ್ನು ಜಯನಗರದ ಅವರ ಹೊಸ ಮನೆ 'ಕಥೆ'ಯಲ್ಲಿ ಕಂಡೆ. ಪ್ರೀತಿಯಿಂದ ಬರಮಾಡಿಕೊಂಡರು. ನನಗೆ ಆವಶ್ಯಕವಾಗಿದ್ದ ಕೆಲವು ಮಾಹಿತಿಗಳನ್ನು ನೀಡಿದರು, ಪಂಜೆ ಉತ್ಸವಕ್ಕೆ ಶುಭ ಕೋರಿದರು. ಅಲ್ಲಿಂದ ನೇರವಾಗಿ 'ಜ್ಞಾನಗಂಗೋತ್ರಿ' ಕಾರ್ಯಾಲಯಕ್ಕೂ ತೆರಳಿ ಅಲ್ಲಿ ನಡೆಯುತ್ತಿದ್ದ ಕಾಯಕವನ್ನು ಕಣ್ಣಾರೆ ನೋಡಿದೆ.

ಹೀಗೆ ದ್ವೀಪಾಂತರಗಳ ಆಚೆಗೆ ಬಂಗಾರದ ಅರಮನೆಯಲ್ಲಿರುವ ಚೆಲುವೆ ರಾಜಕುಮಾರಿಯನ್ನು ಬಡ ತರುಣನೊಬ್ಬ ಕನಸಿನಲ್ಲಿ ಕಂಡು, ಮೆಚ್ಚಿ ಅವಳನ್ನು ಪಡೆಯಲು ಶತ ಪ್ರಯತ್ನಗಳನ್ನು ಮಾಡಿ ಕೊನೆಗೂ ಅವಳ ಕುಡಿನೋಟ - ಕಿರುನಗೆ ಗಳಿಂದ ಕೃತಾರ್ಥನಾಗುವಂತೆ ಯಾವುದೋ ಹಳ್ಳಿ ಮೂಲೆಯಲ್ಲಿ ಹುಟ್ಟಿ ಬೆಳೆದ ನಾನು ನಿರಂಜನರಿಗೆ ಮನಸೋತದ್ದು, ಹತ್ತಾರು ವರ್ಷಗಳ ಅನಂತರ ಅವರನ್ನು ಕಂಡದ್ದು, ಕೇಳಿದ್ದು, ಅವರ ಹತ್ತಿರ ಹೋದದ್ದು; ಅವರೂ ನನ್ನನ್ನು ಹತ್ತಿರಕ್ಕೆ ಬರಮಾಡಿ ಕೊಂಡದ್ದು ಎಲ್ಲವೂ ಕನಸಿನ ಕತೆಯಂತೆಯೇ ಇವೆ. Truth is stranger than fiction ಎಂದು ಹೇಳುವುದು ಇದನ್ನೇ !

೧೯೭೫ರ ಫೆಬ್ರವರಿಯಲ್ಲಿ ನಿರಂಜನರು ಸಕುಟುಂಬಿಯಾಗಿ ದಕ್ಷಿಣ ಕನ್ನಡಕ್ಕೆ ಆಗಮಿಸಿದರು. ಒಂದು ಕಾಲದಲ್ಲಿ ತಾವು ಓಡಾಡಿದ ನೆಲವನ್ನು ಮತ್ತೊಮ್ಮೆ ಮೆಟ್ಟುವ, ಹಳೆಯ ಪಳಕೆಂಜು ಮುಖಗಳನ್ನು ಮತ್ತೊಮ್ಮೆ ನೋಡುವ ಆಸೆ. ನನ್ನ ಕರೆಯನ್ನು ಮನ್ನಿಸಿ ಕಾರ್ಕಳಕ್ಕೂ ಬಂದರು. ನಮ್ಮ ಕಾಲೇಜಿನಲ್ಲಿ ನಿರಂಜನ, ಡಾ! ಅನುಪಮಾ ನಿರಂಜನರ ಭಾಷಣ; ತೇಜಸ್ವಿನೀ-ಸೀಮಂತಿನಿಯರ ಕವಿತಾವಾಚನ ಗಳು ನಡೆದುವು. ಅದೊಂದು ಹಿತಕರವಾದ ಸಾಯಂಕಾಲ, ಆತ್ಮೀಯವಾದ ಕಾರ್ಯಕ್ರಮ. ಸಭೆ ಮುಗಿದ ಮೇಲೆ ನನ್ನ ಮನೆಗೂ ಬಂದರು, ತಮ್ಮ ಪ್ರೀತಿ - ವಿಶ್ವಾಸಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಶ್ರೀಮತಿ ಅನುಪಮಾ ಮನೆಯಲ್ಲೆಲ್ಲ ಸುತ್ತಾಡಿ ನನ್ನಾಕೆಯನ್ನು ತುಂಬ ಅಕ್ಕರೆಯಿಂದ ಕಂಡು ಅವಳ ಮನಸ್ಸನ್ನು ಗೆದ್ದರು. (ಕಾರ್ಕಳದ ತಮ್ಮ ಪ್ರವಾಸಾನುಭವವನ್ನು ಶ್ರೀಮತಿ ಅನುಪಮಾ 'ನೆನಪು: ೩೦ - ಕಹಿ'ಯಲ್ಲಿ ಉಲ್ಲೇಖಿಸಿಯೂ ಇದ್ದಾರೆ.) ನಾಲ್ಕು ತಿಂಗಳಲ್ಲಿ ಚೊಚ್ಚಲ ಮಗು ನಮ್ಮ ಮಡಿಲನ್ನು ತುಂಬಿದಾಗ, ಇಬ್ಬರೂ ಪತ್ರಮುಖೇನ ಹಸುಗೂಸನ್ನು ಹರಸಿದರು.

ಬೆಂಗಳೂರಿಗೆ ಹೋದಾಗಲೆಲ್ಲ ನಿರಂಜನರನ್ನು ಭೇಟಿ ಮಾಡಬೇಕೆಂಬ ಆಸೆ. ಆದರೆ ಅವರಿರುವ ಜಯನಗರದ ಕೊನೆಗೆ ಹೋಗುವುದಕ್ಕೆ ಅವಕಾಶವೇ ಆಗುವುದಿಲ್ಲ. ಟೆಲಿಫೋನಿನಲ್ಲೇ ನಮ್ಮಿಬ್ಬರ ಉಭಯಕುಶಲೋಪರಿ. ಪತ್ರವ್ಯವಹಾರವಂತೂ

ಇದ್ದೇ ಇದೆ. ಎರಡು ವರ್ಷದ ಹಿಂದೆ ನಿರಂಜನರ ಹಿರಿಮಗಳು ಸೌ। ತೇಜಸ್ವಿನಿಯ ವಿವಾಹ ಸಂಬಂಧವಾದ ಸತ್ಕಾರಕೂಟಕ್ಕೆ ಹೋಗಿದ್ದೆ. ಬೆಂಗಳೂರಿನ 'ವುಡ್‌ಲ್ಯಾಂಡ್ಸ್' ನಲ್ಲಿ ನನ್ನನ್ನು ಕಂಡೊಡನೆಯೇ ಗಾಲಿ ಕುರ್ಚಿಯಲ್ಲಿದ್ದ ನಿರಂಜನರು ನನ್ನ ಕೈ ಕುಲುಕಿದರು, ಕುಶಲ ಪ್ರಶ್ನೆಗಳನ್ನು ಕೇಳಿದರು. ಕುಲುಕುವ ಕೈಯ ಕಾವಿನಲ್ಲಿ, ಆಡುವ ಮಾತಿನ ಮಾರ್ದವದಲ್ಲಿ ನಿರಂಜನರ ಅಂತರಂಗ ನಮ್ಮ ಮುಂದೆ ತೆರೆಯುತ್ತದೆ. ಸಾಹಿತ್ಯಕ್ಷೇತ್ರದಲ್ಲಿ ನನ್ನ ಕೃಷಿ ದೊಡ್ಡದೇನೂ ಅಲ್ಲ, ಹೆಸರೂ ಸಣ್ಣದೇ. ಆದರೆ ನನ್ನಂತಹವನ ಬಗೆಗೂ ಅವರು ತೋರುವ ಆಸಕ್ತಿ - ಆತ್ಮೀಯತೆ ನನ್ನನ್ನು ವಿಸ್ಮಯ ಮೂಕನನ್ನಾಗಿ ಮಾಡುತ್ತದೆ; ಇದು ಕಾಳಿದಾಸನು ವರ್ಣಿಸಿದ 'ಜನನಾಂತರ ಸೌಹೃದ'ವೋ ಎಂಬ ಭಾವನೆ ಉಂಟಾಗುತ್ತದೆ.

*　　*　　*　　*

ನಿರಂಜನರು ಕ್ರಿಯಾಶೀಲ, ಗುಣಗ್ರಾಹಿ, ಸ್ನೇಹಪರ. ಅವರ ಕ್ರಿಯಾಶೀಲತೆ ಕನ್ನಡಿಗರೆಲ್ಲರ ಅರಿವಿಗೂ ಬಂದಿರತಕ್ಕದ್ದು. ಆರೋಗ್ಯ ದೃಢಕಾಯರಾಗಿದ್ದ ಕಾಲದಲ್ಲಿ ನಿರಂಜನರು ಮಾಡಿದ ಪತ್ರಿಕೋದ್ಯಮ, ಸಾಹಿತ್ಯಸೃಷ್ಟಿಗಳ ಮಾತಿರಲಿ, ಪಾರ್ಶ್ವವಾಯು ಪೀಡಿತರಾದ ಮೇಲೂ ಅವರು 'ಜ್ಞಾನಗಂಗೋತ್ರಿ'ಯ ಸಂಪಾದನವನ್ನು ಪೂರೈಸಿದ್ದು, 'ವಿಶ್ವಕಥಾಕೋಶ'ವನ್ನು ರಚಿಸಿದ್ದು - ಈ ಎರಡೂ ಅವರ ಅನನ್ಯ ಸಂಕಲ್ಪ ಶಕ್ತಿ, ಕ್ರಿಯಾ ಶಕ್ತಿಗಳಿಗೆ ಉಜ್ವಲ ಉದಾಹರಣೆಗಳು. 'ಕ್ರಿಯಾ ಸಿದ್ಧಿ ಸತ್ವೇ ಭವತಿ ಮಹತಾಂ ನ ಉಪಕರಣೇ' ಎನ್ನುವ ಮಾತುಂಟು. ನಿರಂಜನರು ಅಂತಹ ಸತ್ವಶಾಲಿ. ಇತ್ತೀಚೆಗೆ ಸಹಧರ್ಮಿಣಿ ಅನುಪಮಾ ಅವರೂ ಕ್ಯಾನ್ಸರ್ ಪೀಡಿತೆಯಾದಾಗ ಬೇರೆ ಯಾರೇ ಆಗಿದ್ದರೂ ಜರ್ಝರಿತರಾಗಿ ಬಿಡುತ್ತಿದ್ದರು. ಆದರೆ ನಿರಂಜನರಾದರೋ 'ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ' ಎಂಬಂತೆ ಎಲ್ಲವನ್ನೂ ತುಟಿಬಿಗಿದು ತಾಳಿಕೊಂಡದ್ದಲ್ಲದೆ ತಾವು ಬೆಂಗಳೂರಲ್ಲೇ ಇದ್ದು, ದೂರದ ಮುಂಬಯಿಯಲ್ಲಿ ಅನುಪಮಾ ಅವರ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು. ಆ ತಾಯಿಯೂ ಕಷ್ಟಗಳನ್ನೆಲ್ಲ ದಿಟ್ಟತನದಿಂದ ಎದುರಿಸಿ ದಾಂಪತ್ಯ ಧರ್ಮಕ್ಕೊಂದು ಹೊಸ ವ್ಯಾಖ್ಯಾನವನ್ನೇ ನೀಡಿದರು. ಬಾಲ್ಯದಿಂದಲೂ ಒಂದಲ್ಲ ಒಂದು ಬಗೆಯ ಕೋಟಲೆಯ ಕೊಡಲಿ ಪೆಟ್ಟುಗಳನ್ನು ತಿಂದಿರುವ ನಿರಂಜನರ ಜೀವಲೋಹ ಹದವಾಗಿದೆ, ಕಾಂತಿಪೂರ್ಣವಾಗಿದೆ. ಅವರು ಜೀವನೋತ್ಸಾಹವನ್ನು ಕಳಕೊಂಡಿಲ್ಲ, ಲೋಕ ವಿರೋಧಿಯೂ ಆಗಿಲ್ಲ. ಅವರು ಹೇಗೆ ಶಿವನೋ ಹಾಗೆಯೇ ನಂಜುಂಡ. ತಮ್ಮ ಕಾಯ-ಮನಸ್ಸುಗಳಿಗೆ ಕಾವು ನೋವು; ಇಷ್ಟಮಿತ್ರರಿಗೂ ಸಹಮಾನವರಿಗೂ ಬೆಲ್ಲ - ಸಕ್ಕರೆ.

'ಕಥೆ'ಯೊಳಗೆ ಗಾಲಿಯ ಕುರ್ಚಿಯಲ್ಲಿ ಕುಳಿತೇ ಲೋಕದ ಕಥೆ - ವ್ಯಥೆಗಳನ್ನು ತಿಳಿದು ಹೇಳಬಲ್ಲವರು ನಿರಂಜನ. ಒಳ್ಳೆಯದನ್ನು ಎರಡೂ ಕೈಗಳಿಂದ

ಬಾಚಿ ಎದೆಗೆ ಒತ್ತಿಕೊಳ್ಳುವ ಉದಾರತೆ, ಒಳ್ಳೆಯದಲ್ಲದ್ದಕ್ಕೆ ಕಣ್ಣು - ಕಿವಿ - ಬಾಯಿ ಮೂರನ್ನೂ ಮುಚ್ಚಿಕೊಳ್ಳುವ ಸಭ್ಯತೆ ಅವರದು. ನಾನು ಧಾರವಾಡದಲ್ಲಿ ಓದುತ್ತಿದ್ದಾಗ ಅಲ್ಲಿಯ ಹಿರಿಯ ವಿದ್ವಾಂಸ ಮ. ಪ್ರ. ಪೂಜಾರರು ನಿಧನರಾದರು. ಆ ಸುದ್ದಿಯನ್ನು ಪೂಜ್ಯ ಗುರು ಸೇಡಿಯಾಪು (ಆಗ ಅವರು ಮಂಗಳೂರಲ್ಲಿದ್ದರು.) ಅವರಿಗೆ ತಿಳಿಸಿದೆ. ಅವರು ವಿಷಾದ ಸೂಚಕವಾಗಿ ನನಗೊಂದು ಕಾರ್ಡು ಬರೆದರು. ಅದೊಂದು ಅತ್ಯಪೂರ್ವ ಪತ್ರ ಸಾಹಿತ್ಯ. ಬೆಟಗೇರಿ ಕೃಷ್ಣಶರ್ಮರು ಆ ಪತ್ರವನ್ನು 'ಜಯಂತಿ'ಯಲ್ಲಿ ಅನಾಮತ್ತಾಗಿ ಪ್ರಕಟಿಸಿದರು. ಪತ್ರವನ್ನು ಓದಿದ ನಿರಂಜನರು ಅದನ್ನು ಕುರಿತಂತೆಯೇ ಒಂದು ಲೇಖನವನ್ನು ಪ್ರಕಟಿಸಿದರು. ಈ ಬಗೆಯದು ಅವರ ಗುಣಪಕ್ಷಪಾತ.

ನಿರಂಜನರ ಸ್ನೇಹ ಪ್ರಪಂಚ ತುಂಬ ವಿಸ್ತಾರವಾದದ್ದು. ವಿವಿಧ ಕಾಲಗಳಲ್ಲಿ, ವಿವಿಧ ಕಾರಣಗಳಿಂದ ತಮಗೆ ಪರಿಚಿತರೂ - ಮಿತ್ರರೂ ಆಗಿರುವ ಎಲ್ಲರೊಂದಿಗೂ ನಿರಂಜನರಿಗೆ ನಿರಂತರ ಸಂಪರ್ಕ. ಮನೆಗೆ ಬಂದವರಿಗೆ ತೆರೆದೆದೆಯ ಸ್ವಾಗತ, ಪತ್ರ ಬರೆದವರಿಗೆ ಯುಕ್ತವಾದ ಸಕಾಲಿಕ ಉತ್ತರ - ಇದು ನಿರಂಜನರ ರೀತಿ. ನನಗೆ ಅವರು ಬರೆದಿರುವ ಪತ್ರಗಳಲ್ಲಿ ನಾಲ್ಕಾರನ್ನು ಭಾಗಶಃ ಈ ಮುಂದೆ ಉದ್ಧರಿಸುತ್ತಿದ್ದೇನೆ. ನಾನು ಹೇಳಬೇಕಾದುದನ್ನೆಲ್ಲ ಈ ಪತ್ರಗಳೇ ಹೇಳುತ್ತವೆ.

೧೯೭೧ರ ಅಕ್ಟೋಬರ ಕೊನೆಯಲ್ಲಿ ಕಾರ್ಕಳದಲ್ಲಿ ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು. ನಾನು ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿದ್ದೆ. ಸಮ್ಮೇಳನದ ಆಮಂತ್ರಣವನ್ನು ಅವರಿಗೆ ತಲಪಿಸಿದಾಗ ಬರೆದ ಪತ್ರ ಈ ಕೆಳಗಿನದು. ಅದೇ ಕಾಲಕ್ಕೆ 'ಯುಗಪುರುಷ' ಪತ್ರಿಕೆಯಲ್ಲಿ ದಿ| ಗೋವಿಂದ ಪೈಯವರನ್ನು ಕುರಿತು ನನ್ನದೊಂದು ಕಿರು ಬರೆಹವೂ ಪ್ರಕಟವಾಗಿತ್ತು. ಅದರ ಪ್ರಸ್ತಾಪವೂ ಈ ಪತ್ರದಲ್ಲಿದೆ:

"...........ಮೊನ್ನೆ 'ಯುಗಪುರುಷ' ವಿಶೇಷಾಂಕದಲ್ಲಿ ಪೈಯವರನ್ನು ಕುರಿತ ನಿಮ್ಮ ಲೇಖನ ಓದಿ ಸಂತೋಷಪಟ್ಟೆ. ಕೊನೆಯ ಪ್ಯಾರಾ ಓದುತ್ತ ಅತೀವ ಸಂಕಟವಾಯಿತು........

"ಮೇ ತಿಂಗಳ ನಿಮ್ಮ ಪತ್ರ ಬಂದಾಗ ನಾನಿನ್ನೂ ಮಲಗಿದ ರೋಗಿಯಾಗಿದ್ದೆ............ಇದು ಏಳನೆಯ ತಿಂಗಳು. ಕಳೆದ ಒಂದೂವರೆ ತಿಂಗಳಿಂದ ಬೆಳಗ್ಗೆ ಎರಡು - ಮೂರು ಘಂಟೆಗಳ ಕಾಲ 'ಜ್ಞಾನಗಂಗೋತ್ರಿ' ಕಾರ್ಯಾಲಯಕ್ಕೆ ಹೋಗಿ ಬರುತ್ತಿದ್ದೇನೆ. ಮನಸ್ಸು-ಬುದ್ಧಿ ಸರಿಯಾಗಿವೆ. ಎಡಗಾಲು ಎಡಗೈಗಳದೇ

ತೊಡಕು. ಇವು ಸರಿಹೋಗಲು ಇನ್ನೂ ಒಂದು ವರ್ಷ ಬೇಕು ಎನ್ನುತ್ತಾರೆ. ಮೊದಲಿನಂತೆ ಅಲ್ಲವಾದರೂ ಬಹಳಮಟ್ಟಿಗೆ ಸ್ವಾವಲಂಬಿಯಾಗಬಲ್ಲೆ ಎನಿಸಿದೆ, ನೋಡಬೇಕು....

"ಹಿರಿಯರಾದ ಸೇಡಿಯಾಪು ಅವರು ಬೆಂಗಳೂರಲ್ಲಿ ತಮ್ಮ ಮಗನೊಂದಿಗೆ ಇರುವ ವಿಷಯ ನನಗೆ ತಿಳಿದಿತ್ತು. ವಿಳಾಸ ದೊರಕಿಸಿಕೊಂಡು ಅಲ್ಲಿಗೊಮ್ಮೆ ಹೋಗಿ ಬರಬೇಕು ಎಂದು ಯೋಚಿಸಿದ್ದೆ. ಆಗಲೇ ಇಲ್ಲ..........

"ನೀವು ಸಮ್ಮೇಳನದ ದುಡಿಮೆಯ ಹೊಣೆ ಹೊತ್ತಿರುವ ವಿಷಯ ಪತ್ರಿಕೆಗಳಲ್ಲಿ ಓದಿದ್ದೆ. ಮುದ್ರಣವಾಗಿ ಅಚ್ಚಾಗಿರುವ ಆಹ್ವಾನ ಪತ್ರಿಕೆಯಲ್ಲಿ (ನಿಮ್ಮ) ಹೆಸರಿಲ್ಲವಲ್ಲ. ಇಷ್ಟರ ಮಟ್ಟಿಗೆ Self-effacing ಆಗಬೇಕೇ ?..........."

'ಜ್ಞಾನಗಂಗೋತ್ರಿ'ಯ ಅವತರಣ ಕಾರ್ಯ ಸಮಾಪ್ತವಾದಾಗ 'ಉದಯವಾಣಿ' ದೈನಿಕದಲ್ಲಿ ನಾನು 'ಹರಿಯುತಿಹಳು ಜ್ಞಾನಗಂಗೆ ಏಳು ಕವಲಲಿ' ಎಂಬ ಪರಿಚಯ ಲೇಖನ ಬರೆದೆ. ಈ ಮುಂದಿನ ಪತ್ರ ಅದಕ್ಕೆ ಪ್ರತಿಕ್ರಿಯೆ :

"...........ಜ್ಞಾನಗಂಗೋತ್ರಿ ಮಂಗಲದ ಬಳಿಕ ಹೊರಬರುತ್ತಿದ್ದಂತೆ ನಮ್ಮ ಸಂಪಾದಕ ಮಿತ್ರರು 'ಉದಯವಾಣಿ' ತೋರಿಸಿದರು. ಅನಂತರ ನೀವು ಕಳುಹಿಸಿದ ಪ್ರತಿಯೂ ಬಂತು. ಅದನ್ನೋದಿ ಜ್ಞಾನಗಂಗೋತ್ರಿಯ ಬಗೆಗೆ ಕುತೂಹಲ ತಳೆದಿರುವವರು ಹಲವರು. ಪತ್ರಿಕೋದ್ಯೋಗಿಗಳು ನಾಚುವಂತೆ 'ಕಾಲದ ಪ್ರಜ್ಞೆ' ಪ್ರದರ್ಶಿಸಿದ್ದೀರಿ. ಅವಸರದ್ದು ಎನ್ನುವ ಕಾರಣದಿಂದ ಬರೆಹದ ಮೌಲ್ಯ ಕಡಮೆಯಾಗಿಲ್ಲ..........."

[ಇದೇ ಲೇಖನ ಪ್ರಸ್ತಾಪವನ್ನು ನಿರಂಜನರು ತಮ್ಮ 'ಮುಖತಃ' ಎಂಬ ಪುಸ್ತಕದಲ್ಲೂ (ಪುಟ 79-80) ಮಾಡಿ, ಪ್ರೀತಿಯ ಮಾತುಗಳನ್ನು ಆಡಿದ್ದಾರೆ.]

ಬಹುಕಾಲದ ಅನಂತರ ನಿರಂಜನರು ಸಕುಟುಂಬಿಯಾಗಿ 'ಮರಳಿ ಮಣ್ಣಿಗೆ ಬರುತ್ತಿದ್ದಾರೆ' ಎಂಬುದನ್ನು ಕೇಳಿ ನಮ್ಮಲ್ಲಿಗೂ ಆಮಂತ್ರಿಸಿ ಬರೆದ ಪತ್ರಕ್ಕೆ ಇದು ಉತ್ತರ:

"........ನೀವು ಕರೆದರೆ ಓ ಎನ್ನದೆ ಇರುವುದುಂಟೆ? ಕಾಲೇಜಿನಲ್ಲಿ ಹೆಚ್ಚು ಮೆಟ್ಟಿಲುಗಳನ್ನು ಹತ್ತುವ ತೊಂದರೆ ಇಲ್ಲ ಎಂದು ನಂಬಿದ್ದೇನೆ. 9ರ ಭಾನುವಾರ ಮಂಗಳೂರಲ್ಲಿ; 10ರ ಮಧ್ಯಾಹ್ನ ಊಟದ ಅನಂತರ ಮೂಡಬಿದಿರೆ ನೋಡಿಕೊಂಡು (ನೋಡುವವರು ಅನುಪಮಾ ಮತ್ತು ಮಕ್ಕಳು - ತೇಜಸ್ವಿನೀ, ಸೀಮಂತಿನೀ)

ಕಾರ್ಕಳಕ್ಕೆ ಬರುತ್ತೇವೆ...........ನಾಲ್ಕು ಘಂಟೆಗೆ ಸರಿಯಾಗಿ ಕಾಲೇಜಿಗೆ ಬರುತ್ತೇವೆ. ಉಪಾಧ್ಯಾಯರಲ್ಲಿ ಕಾಫಿ ಕುಡಿಯುವುದರಿಂದ ತಮ್ಮ ಅಧೀನದಲ್ಲಿ ಮಾತು ಮಾತ್ರ. ಹೀಗೆ ಬರೆದೆನೆಂದು ಅನ್ಯಥಾ ಭಾವಿಸಬಾರದು. ನಿಮ್ಮ ಒಲವೇ ಸಾಕು. 5ರಿಂದ 5-30ರೊಳಗೆ ಗೋಮಟೇಶ್ವರ (ಹಳೆಯದು ಮತ್ತು ನಿರ್ಮಾಣವಾಗುತ್ತಿರುವ ಮೂರ್ತಿ - ಎರಡೂ)ರನ್ನು ಸಂದರ್ಶಿಸುತ್ತೇವೆ. ಇಲ್ಲಿ ಮೌನ...........ನಿಮ್ಮ ಜತೆ ಮನದಣಿಯೆ ಮಾತನಾಡಬೇಕು - ಇನ್ನೊಂದು ಸಲ. ಆರೋಗ್ಯ ತುಸು ಸುಧಾರಿಸಿದರೆ ಖಂಡಿತ ಮತ್ತೆ ಬಂದೇನು. 'ಇದು ಕೊನೆಯ ಭೇಟಿ' ಎಂದು ಮಂಗಳೂರಿನ ಮಿತ್ರರಿಗೆ ಬರೆದುದಕ್ಕೆ, ಹಾಗೆ 'ಹೇಳಬಾರದು' ಎಂದಿದ್ದಾರೆ. 'ಮತ್ತೆ ಬಂದೇನು' ಎನ್ನಬಹುದಲ್ಲ? ಆಶಾವಾದದ ತತ್ವಜ್ಞಾನವನ್ನು ಮತ್ತಷ್ಟು ಹಿಂಜುವುದು ಆ ಕಸಬಿನಲ್ಲಿ ಪಳಗಿದವನಿಗೆ ಕಷ್ಟವೇ ?"

ಜಿಲ್ಲೆಯ ಪ್ರವಾಸವನ್ನು ಪೂರೈಸಿ ಬೆಂಗಳೂರಿಗೆ ಹಿಂದಿರುಗಿದ ಬಳಿಕ ಹೀಗೆ ಬರೆದರು:

"....ಸುರಕ್ಷಿತವಾಗಿ ಗುರುವಾರ ಸಂಜೆ ಬೆಂಗಳೂರು ಸೇರಿದೆವು. ಇವತ್ತು ಶನಿವಾರ. ಇನ್ನೂ ಪ್ರವಾಸದ ಗುಂಗಿನಲ್ಲೇ ಇದ್ದೇವೆ.

"ದಕ್ಷಿಣ ಕನ್ನಡಕ್ಕೆ ನನ್ನಿಂದ ಸಲ್ಲಬೇಕಾದ ಬಾಕಿ ಇದ್ದರೆ ಲೆಕ್ಕ ನೋಡಿ ಬರೋಣ ಎಂದುಕೊಂಡಿದ್ದೆ-ಇಲ್ಲಿಂದ ಹೊರಟಾಗ. ಹಳೆಯ ಲೆಕ್ಕ ಬಾಕಿ ಇಲ್ಲ ಎಂಬುದು ಸ್ಪಷ್ಟವಾಯಿತು. ಆದರೆ ಒಲವಿನ ಋಣಭಾರವನ್ನು ಹೊಸದಾಗಿ ಹೊತ್ತು ತಂದೆ. ನಾನೊಬ್ಬನೇ ಅಲ್ಲ - ಅನುಪಮಾ, ಮಕ್ಕಳು ಎಲ್ಲರೂ.

"ನಿಮ್ಮಲ್ಲಿನ ಕಾರ್ಯಕ್ರಮ ನಮಗಂತೂ ತುಂಬಾ ಇಷ್ಟವಾಯಿತು. ನಿಮ್ಮ ಶುಚಿರುಚಿ ಅಚ್ಚುಕಟ್ಟುತನ ನಮಗೆಲ್ಲ ಹತ್ತಿರದ್ದು..........."

ನಾನು ಕಳುಹಿಸಿದ ಒಂದು ದೀಪಾವಳಿ ಶುಭಾಶಯಕ್ಕೆ ಉತ್ತರ ರೂಪವಾಗಿ ಬಂದದ್ದು ಈ ಕಾರ್ಡು:

"....ನಿನ್ನೆ ಸಂಜೆಯಿಂದ ಇವತ್ತು ನಡುಹಗಲಿನವರೆಗೂ ಇಲ್ಲಿ ತಡೆ ಇಲ್ಲದ ಮಳೆ; 'ಸುಡುಕ'ರಿಗೆ ಬೇಸರ. ಅಪರಾಹ್ನ ಮೂರೂವರೆಯ ವೇಳೆಗೆ ಇದೀಗ ತುಸು ಬೆಳಕು ಮೂಡಿದೆ. ಸುಡುಮದ್ದುಗಳು ಬೀದಿಗೆ ಇಳಿದಿವೆ. ಕುರುಡರು ಕಿವುಡರೇ ಪುಣ್ಯವಂತರು.

"ಆದರೂ ಹಬ್ಬ ಹಬ್ಬವೇ...........ಒಳ್ಳೆತನ್ನು ಸೂರೆಗೊಳ್ಳಿರೆಂದು ನಿಮಗೂ ನಮ್ಮ ಶುಭಾಶಯಗಳು."

ಒಂದು ಪುಸ್ತಕ ಪ್ರಕಟಣೆಯ ನಿಮಿತ್ತ ನಾನು ಬರೆದ ಪತ್ರಕ್ಕೆ ಪ್ರತಿಯಾಗಿ ನಿರಂಜನರ ಉತ್ತರ:

"....ಕಾಗದ ಬಂತು. ನಮ್ಮ ನಡುವೆ ಸಂಕೋಚದ ಮಾತೇ ಇಲ್ಲ. ಸಹಕಾರೀ ಪ್ರಕಾಶನ ಮಂದಿರದೊಡನೆ ನನ್ನ ಸಂಪರ್ಕ ಇನ್ನೂ ಇದ್ದಿದ್ದರೆ ಕೆಲಸ ಸುಲಭವಾಗುತ್ತಿತ್ತು. ಆ ಸಂಸ್ಥೆ ಈಗ ನಿರ್ಜೀವವಾಗಿದೆ......

"ಪಾರ್ಶ್ವಪೀಡೆಯ ಕಾರಣದಿಂದ (ಇರಬೇಕು) ಅನೇಕ ಪ್ರಕಾಶಕರಿಗೆ ನಾನು ಲೆಕ್ಕಕ್ಕಿಲ್ಲ. ನನ್ನ ಕಾದಂಬರಿಗಳ ಪುನರ್ಮುದ್ರಣಕ್ಕೆ ಯಾರೂ ಸಿದ್ಧರಿಲ್ಲ. ನನ್ನ ಮಗಳು ಪ್ರಕಟಿಸುತ್ತಿದ್ದಾಳೆ. ವಿತರಣೆಯ ತೊಡಕು. ಹೊಸ ಕಾದಂಬರಿ 'ಮೃತ್ಯುಂಜಯ'ದ ಜತೆ ಹಳೆಯ ಕೆಲವನ್ನೂ ಹಾಕುವ ಹಟ. ನೀವೂ ಪ್ರಕಟಣೆಯ ಕಷ್ಟ ಸುಖ ಬಲ್ಲವರು....ಬರೆದವರೇ ಪ್ರಕಟಿಸಿದಾಗ ದುಡ್ಡು ಬರುವ ಮಾತಿರಲಿ, ಹೋಗುವ ದುಡ್ಡು ಎಷ್ಟೆಂಬುದೇ ಲೆಕ್ಕ ಹತ್ತುವುದಿಲ್ಲ.....

"ನಿಮ್ಮ ನುಡಿಗಟ್ಟು, ಶೈಲಿ, ವಿಚಾರನಿರೂಪಣಾ ವೈಖರಿ ನನಗೆ ಇಷ್ಟ. ಸೊಗಸಾದ ಕಸುವುಳ್ಳ ಕನ್ನಡ. ಇದೊಂದೇ ಸಂಗ್ರಹವಲ್ಲ. ನಿಮ್ಮವೇ ಇನ್ನೆಷ್ಟೋ ಪುಸ್ತಕಗಳು ಬರಬೇಕು. ಬರುತ್ತವೆಂಬ ನಂಬಿಕೆ ನನ್ನದು............

"ಕಳೆದ ತಿಂಗಳು ಕಾರ್ಕಳ ಭೇಟಿಯ ವರ್ಷದ ನೆನಪು ಮಾಡಿಕೊಂಡೆವು. ಆರೋಗ್ಯ ನನ್ನದು ಅಷ್ಟೆ. ಕುಳಿತಲ್ಲೇ ಕಾರಭಾರ."

ಯೋಗಕ್ಷೇಮವನ್ನು ವಿಚಾರಿಸಿ ಬರೆದುದಕ್ಕೆ ಅವರು ಉತ್ತರಿಸಿದ ವೈಖರಿ:

"............ನನ್ನ ಆರೋಗ್ಯ ಕುಸಿಯುತ್ತ ಸಾಗಿದೆ. ಕರಂಟಿ ಹೋಗುವ ವರೆಗೂ ಕುದಿಯುವುದು. ಬರೆಯುವುದು ನಿಂತರೆ, ಅಲ್ಲಿಗಾಯಿತು.

"ಅನುಪಮಾ ಕ್ಯಾನ್ಸರ್ ಪೀಡಿತರಾಗಿ ಸೂಕ್ತ ಚಿಕಿತ್ಸೆಯ ಬಳಿಕ ಗುಣ ಹೊಂದಿದರು. ಕಾಲ ಮೀರುವ ಮುನ್ನ ಬಾಲ್ಯದ ಹರಕೆ ಸಲ್ಲಿಸಲೆಂದು ಸೀತಾ ಟ್ರಾವಲ್ಸ್‌ನ ಪ್ರವಾಸೀ ತಂಡ ಸೇರಿಕೊಂಡು 21 ದಿನಗಳ ಯುರೋಪ್ - ಅಮೇರಿಕ ಅಲೆದಾಟಕ್ಕೆ ತೆರಳಿದ್ದಾರೆ..........."

'ಮೃತ್ಯುಂಜಯ'ದ ಅನಂತರ ಮತ್ತೊಂದು ಬೃಹತ್ಕಾದಂಬರಿಗಾಗಿ ನಿರಂಜನರು ಟಿಪ್ಪಣಿ ಮಾಡುತ್ತಿರುವುದನ್ನು ತಿಳಿದಾಗ ಅದರ ಶೀರ್ಷಿಕೆಯನ್ನು ಕುರಿತು ನಾನೊಂದು ಸೂಚನೆ ಮಾಡಿದೆ. ಅದಕ್ಕೆ ನಿರಂಜನರ ಪ್ರತಿಕ್ರಿಯೆ:

"........ದಾಂತೆ ತನ್ನ ಮೇರುಕೃತಿಗೆ Comedy ಎಂದು ಹೆಸರಿಟ್ಟಿದ್ದ. ಪ್ರಕಾಶಕ ಅದನ್ನು The Divine Comedy ಎಂದು ಬದಲಾಯಿಸಿ ಆಗಿನ ದೈವ ಭಕ್ತರ ಮೇಲೆ ಮೋಡಿ ಬೀರಿಸಿ, ಹಣ ಮಾಡಿದ. (ದಾಂತೆಗೂ ನನಗೂ ಹೋಲಿಕೆ ಯಿಲ್ಲ. ದೃಷ್ಟಾಂತ ಬೇಕೆಂದಾಗ ಅದು ನೆನಪಾಯಿತು, ಅಷ್ಟೆ!) ನನ್ನ 'ಹೆಜ್ಜೆ' ಮೂಡಿ, ಮುಗಿದು, ಅಚ್ಚಾಗುವುದನ್ನು ಪ್ರಾಯಶಃ ನಾನು ಕಾಣಲಾರೆ. ಏನೇ ಇರಲಿ, ಬರೆದು ಮುಗಿದ ಮೇಲೆಯೇ ನಾಮಕರಣ. ('ಅಯನ' ಸಂದರ್ಭದಲ್ಲಿ ಚೆನ್ನಾಗಿದೆ. ನೋಡೋಣ) ...... ಹಿಮಯುಗದ ಭೂಗತನಿಂದ ತಥಾಗತನ ವರೆಗೆ ಸಾವಿರಾರು ಜನರ ಹೆಜ್ಜೆಗಳು (ಅಥವಾ ಅಯನ). ನಿಮ್ಮ ಪ್ರೀತಿಯ ಸಲಹೆಗಾಗಿ ಉಪಕೃತ.

"ಆರೋಗ್ಯ ಇದೆ, ಅದರ ಪಾಡಿಗೆ. ದೊಡ್ಡದಲ್ಲ."

ನಿರಂಜನರ ಪತ್ರಗಳು ಅವರ ಸ್ನೇಹಶೀಲತೆ, ಜೀವನದೃಷ್ಟಿ, ಲೋಕಾನುಭವ, ಹಾಸ್ಯಪ್ರಜ್ಞೆ ಮುಂತಾದುವಕ್ಕೆ ನಿದರ್ಶನಗಳಾಗುತ್ತವೆ. ನಾನು ಕಂಡಿರುವ ನಿರಂಜನ ರನ್ನು ನನ್ನದೇ ಮಾತುಗಳಲ್ಲಿ ಚಿತ್ರಿಸುವುದು ಒಂದಾದರೆ, ಅವರು ನನಗೆ ಬರೆದಿರುವ ಪತ್ರಗಳಲ್ಲಿ, ಅವರದೇ ಮಾತುಗಳಲ್ಲಿ ಅವರ ವ್ಯಕ್ತಿತ್ವ ಹೇಗೆ ವ್ಯಕ್ತವಾಗುತ್ತದೆ ಎಂಬು ದನ್ನು ನಿರೂಪಿಸುವ ಪ್ರಯತ್ನವನ್ನೂ ಇಲ್ಲಿ ಮಾಡಿದ್ದೇನೆ. ಈ ಲೇಖನದಲ್ಲಿ ನಿರಂಜನರ ವ್ಯಕ್ತಿಚಿತ್ರಣ - ನಿರೂಪಣಗಳು ಖಚಿತವಾಗಿ ಮೈದೋರಿಲ್ಲ ಎಂದು ಯಾರಿಗಾದರೂ ಭಾಸವಾದರೆ ಅದಕ್ಕೆ ನನ್ನ ಲೆಕ್ಕಣಿಕೆ - ಒಕ್ಕಣಿಕೆಗಳೇ ಕಾರಣವಲ್ಲದೆ ಅವರಲ್ಲ. ○

ತೀಕ್ಷ್ಣ ವಿಚಾರವಂತ

-ವೈದೇಹಿ

ನಾ ಮೊದಲು ನಿರಂಜನರ ಹೆಸರು ಕೇಳಿದ್ದು, ನಮ್ಮ ಪಕ್ಕದ ಮನೆಯಲ್ಲಿ ಮೃದುಲಾ ಎಂಬ ಹುಡುಗಿ ಇದ್ದಳು, ಅವಳಿಂದ. ಅವಳ ಕೈಯಲ್ಲಿ ಸದಾ ನಿರಂಜನರ ಕಾದಂಬರಿ. ಈ ಹುಡುಗಿ ಮೃದುಲಾ ನನಗಿಂತ ತುಂಬ ದೊಡ್ಡವಳು. ನಿರಂಜನ ಅವಳ ಅತ್ಯಂತ ಪ್ರಿಯ ಕಾದಂಬರಿಕಾರ. ಆಕೆ ನನ್ನ ಅಕ್ಕಂದಿರ ಬಳಿ ನಿರಂಜನರ ಕಾದಂಬರಿಯ ಪಾತ್ರಗಳ ಕುರಿತು ತನ್ಮಯತೆಯಿಂದ ಮಾತಾಡುತ್ತಿದ್ದಳು. ನಾನು ಚಿಕ್ಕವಳೆಂದು ಲೆಕ್ಕಕ್ಕಿರಲಿಲ್ಲ. ಅಕ್ಕಂದಿರ ಸಂದಿಯಲ್ಲಿ ನಾನೂ ಮುಖ ತೂರಿಸಿ

ಅವಳು ಹೇಳುವುದನ್ನು ಕೇಳುತ್ತಿದ್ದೆ. ಆಗ ಅವರ ಕಾದಂಬರಿಯೊಂದು, ಬಹುಶಃ ಹೆಣ್ಣಾಗಿ ಕಾಡಿತ್ತು ಮಾಯೆ', ಧಾರಾವಾಹಿಯಾಗಿ ಬರುತ್ತಿದ್ದ ನೆನಪು. "ನಿರಂಜನರ ಹೆಂಡತಿ ಡಾ। ಅನುಪಮಾ, ಅವರೂ ಕಾದಂಬರಿ ಬರೆಯುತ್ತಾರೆ - ಎಂಥ ಜೋಡಿ ಯಲ್ಲವೆ ?" ಎನ್ನುತ್ತಿದ್ದಳು ಮೃದುಲಾ. ಹೀಗೆ ನಿರಂಜನರನ್ನು ಕಾದಂಬರಿಕಾರರಾಗಿ ಕೇಳುತ್ತ ಕಂಡೆ. ದೃಷ್ಟಿಯಲ್ಲಿ ಪ್ರೇಮವಿವಾಹ ಮಾಡಿಕೊಂಡವರೆಂಬ ಕುತೂಹಲವೂ ಇತ್ತು.

'ಅವರು ದಕ್ಷಿಣ ಕನ್ನಡದವರೇ ಅಂತೆ' - ಎಂಬುದು ಪುಲಕದಿಂದ ಕೇಳಿ ಬಂದ ಮಾತು. ಅದಕ್ಕೆ ನಮ್ಮೆಲ್ಲರ ಉದ್ಗಾರವೇ ಉತ್ತರ. ಕಾರಂತರನ್ನು ಬಿಟ್ಟರೆ ನಮ್ಮ ಜಿಲ್ಲೆಯಲ್ಲಿ ಹೆಸರಾಂತ ಕಾದಂಬರಿಕಾರರೆಂದು ತೋರಿಸಲು ಯಾರಿದ್ದರು ? ಕಾದಂಬರಿ ಲೋಕದ 'ತಾರೆ'ಯರೆನಿಸಿದ್ದ ಅ.ನ.ಕೃ., ತ.ರಾ.ಸು., ನಿರಂಜನರಲ್ಲಿ ಒಬ್ಬ ತಾರೆ ನಮ್ಮೂರಿನವರೆಂದಾದರೆ ಆಗುವ ಖುಶಿ ಸಾಫ್‌ಸೀದ ಖುಶಿಯೇ ಸೈ. ಆದರೆ ಇವರು ನಮ್ಮೂರ ರಸ್ತೆಯಲ್ಲಾಗಲೀ ಕಾರ್ಯಕ್ರಮ ಗಳಲ್ಲಾಗಲೀ ಕಾಣಿಸುವುದಿಲ್ಲವಲ್ಲ! ಅದೇಕೆ? ಕಾಣಿಸುವಂತಿದ್ದರೆ ಎಷ್ಟು ಚೆನ್ನಾಗಿತ್ತು! ಅಂತೆಲ್ಲ ನಮಗೆ ಅನಿಸಿತ್ತು. ಬಹುಶಃ ಅವರು ಕುಂದಾಪುರದ ಕಡೆ ಸಾರ್ವಜನಿಕವಾಗಿ ಕಾಣಿಸಿಕೊಂಡದ್ದೇ ಇಲ್ಲವೇನೋ. ಇದರಿಂದಾಗಿ ಅವರು ನಮ್ಮ ಜಿಲ್ಲೆಯವರೆಂದರೆ ಕೇವಲ ಖುಶಿಯಲ್ಲ, ಕೆಲಸಮಯ ಆಶ್ಚರ್ಯವೂ. ಊರಿನ ಪ್ರೇಮವಿಲ್ಲವೆಂದು ತುಸು ಕೋಪವೂ ನನ್ನಲ್ಲಿ ಮೂಡಿದ್ದುವು.

ಮುಂದೆ ಹೈಸ್ಕೂಲು ದಾಟುವುದರೊಳಗೆ ಅವರ ಕೆಲ ಕಾದಂಬರಿಗಳನ್ನು ಶಾಲಾ ಲೈಬ್ರೆರಿಯಿಂದ ತಂದು ಓದಿದ್ದೆ. ತಂದಾಗ ಅವರ ಕಾದಂಬರಿಗಳೆಂದರೆ ಜೀವಬಿಡುತ್ತಿದ್ದ ಮೃದುಲಾಗೂ ಕೊಟ್ಟಿದ್ದೆ. ತನ್ನ ವಿಶಿಷ್ಟ ಚುರುಕು ನಿರೂಪಣೆ ಯಿಂದ, ಸ್ವಂತಿಕೆಯಿಂದ, ಅಂದಿನ ಆ ಬಗೆಯ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಕಾಣಸಿಗದ ಕೇಂದ್ರಗಳಿಂದ ನಿರಂಜನ ನಮ್ಮ ಗೌರವಾನ್ವಿತ ಲೇಖಕರಾಗಿದ್ದರು. ಒಬ್ಬ ರಾಷ್ಟ್ರೀಯ ಮನೋಭಾವದ ವ್ಯಕ್ತಿಯಾಗಿಯೂ ಕಂಡಿದ್ದರು. ಅವರು ಭಾವೋದ್ರೇಕಕ್ಕಿಂತ ಬುದ್ಧಿವಿಕಾಸಕ್ಕೆ ಹೆಚ್ಚು ಬೆಲೆ ಕೊಡುವ ಅಂಶವನ್ನು ತೀರ ಕರಡು ರೀತಿಯಲ್ಲಿ ಆ ವಯಸ್ಸಿಗೆ ನಿಲುಕುವಷ್ಟು, ಅರ್ಥಮಾಡಿಕೊಂಡಿದ್ದೆ.

ಅಂದು ಕಂಡದ್ದು ಕೇವಲ ಕಾದಂಬರಿಕಾರ ನಿರಂಜನರನ್ನು. ಅವರ ಲೇಖನಗಳು ನನಗರ್ಥವಾಗುತ್ತಿರಲ್ಲಿಲ್ಲ, ಓದುತ್ತಿರಲಿಲ್ಲ. ಕಮ್ಯೂನಿಸಂ ಎಂದರೆ ರಕ್ತಪಾತ ಎಂದು ಹೆದರಿಸಲ್ಪಟ್ಟಿರುವ ನಾವು ಮುಂದೊಮ್ಮೆ ನಿರಂಜನ ಒಬ್ಬ ಕಮ್ಯೂನಿಸ್ಟ್ ಎಂದು ಕೇಳಿದಾಗ ಹೆದರಿದ್ದುಂಟು. ಅವರು ಭಯಾನಕ ವ್ಯಕ್ತಿಯಾಗಿ

ಕಂಡದ್ದುಂಟು. ಅವರ ಭೂಗತ ಚಟುವಟಿಕೆಗಳ ಕುರಿತು ತಿಳಿದವರು ಅಲ್ಲಲ್ಲಿ ಒಂದೊಂದು ವಿಚಾರ ಹೇಳಿ ಅವು ಕಿವಿ ಮುಟ್ಟಿದಾಗ ಇನ್ನಷ್ಟು ನಿಗೂಢವಾಗಿ ಆತ ಕಂಡದ್ದಿದೆ. ಕೊನೆಗೆ ವೀರಪಟ್ಟವನ್ನು ಕೊಟ್ಟು ಜೆರಗಿನಿಂದ ನೋಡಿದ್ದೂ ಇದೆ.

ಎಪ್ಪತ್ತರ ದಶಕದ ವರೆಗೂ ನಾನವರನ್ನು ಕಣ್ಣಾರೆ ಕಂಡಿರಲಿಲ್ಲ. ಆ ಮೇಲೊಂದು ದಿನ ನಾನೂ ನನ್ನವರೂ ಅವರ ಮನೆಗೆ ಹೋಗಿದ್ದೆವು. ನಿರಂಜನರನ್ನು ನೋಡಬೇಕೆಂಬ ಬಯಕೆ ಇದ್ದರೂ ಹೋದದ್ದು ಅನುಪಮಾರನ್ನು ನೋಡಲೆಂದು. ನಿರಂಜನರನ್ನು ಕಂಡು ಮಾತಾಡಲಿಕ್ಕೆ ನಾನು ಬೆಳೆದದ್ದು ಸಾಲದು ಎಂಬ ಭಯ ವಿತ್ತು. ಹಾಗೆಂತ ಯಾರಾದರೂ ಅವರೊಂದಿಗೆ ಮಾತನಾಡುತ್ತಿದ್ದರೆ ಸುಮ್ಮನೇ ಒಂದು ಬದಿಯಲ್ಲಿ ಕುಳಿತು ಕೇಳುತ್ತಿರಬೇಕೆಂಬ ಆಸೆಯೂ ಇತ್ತು. ನಿರಂಜನರು ಎದುರು ಬಂದರೆ ಮಾತಿಗೆ ಮೂರ್ತಿಯವರಿದ್ದಾರೆ ಜೊತೆಗೆ ಎಂಬ ಧೈರ್ಯ.

ಆದರೆ ನಿರಂಜನರು ಎದುರು ಬಂದಾಗ ನನ್ನ ಪುಕ್ಕಲುತನ ಎಲ್ಲಿ ಮಾಯ ವಾಯಿತೋ. ಅವರ ಆತ್ಮೀಯ ನಗೆ, ಏನು ಎತ್ತ ವಿಚಾರಣೆಯಲ್ಲಿನ ಅನುಪಮ ಆಸ್ಥೆ, ತನ್ನಷ್ಟಕ್ಕೆ ನನ್ನಿಂದ ಮಾತು ಹೊರಡಿಸಿತು. ನಡುವೆಯಿದ್ದ ಅಳುಕಿನ ದೂರ ವನ್ನು ಅವರು ಹೇಗೋ ಕಡಿಮೆ ಮಾಡಿ ಬಿಟ್ಟರು. ಅನಂತರದ ಕಾಲದಲ್ಲೊಂದು ದಿನ ಈ ದಂಪತಿಗಳೊಡನೆ ಒಂದು ರಾತ್ರಿ ಕಳೆದಿದ್ದೆ. ಈ ಎರಡೂ ಸಂದರ್ಭಗಳಲ್ಲಿ ಕಂಡಂತೆ ನಿರಂಜನರನ್ನು ಎಣಿಸಿಕೊಂಡರೆ ಎದುರು ನಿಲ್ಲುವುದು ಸಜ್ಜನಿಕೆಯ ಒಬ್ಬ ತೀಕ್ಷ್ಣ ವಿಚಾರವಂತ. ಹೇಳುವ ಮಾತುಗಳಲ್ಲಿ ಸ್ಪಷ್ಟತೆ. ಚಿಂತನೆಯಲ್ಲಿ ಅನ್ಯಾದೃಶ ಸ್ಪಷ್ಟತೆ. ಓದಿ ಓದಿ ಕಾವುಗೊಂಡ ಕಣ್ಣುಗಳು. ನಿರಂಜನರೆಂದರೆ ಉರಿ ವ್ಯಕ್ತಿತ್ವ ಎಂದು ಕೇಳಿದ್ದೆ. ನಾನು ಕಂಡದ್ದು ಸ್ನೇಹ ಸೌಜನ್ಯದ ತಂಪನ್ನು. ಪತಿ - ಪತ್ನಿಯರ ನಡುವೆ ಬೂಟಾಟಿಕೆಯ ಬೂಸಲಿಲ್ಲದ ಪ್ರೀತಿಯನ್ನು. ಪತ್ನಿಯ ಬರೆಹಗಳ ಕಟು ವಿಮರ್ಶಕ ರನ್ನು! ಕಾದಂಬರಿಕಾರ ನಿರಂಜನರನ್ನು ಮೀರಿ ಬಲು ಎತ್ತರ ಬೆಳೆದು ನಿಂತಿದ್ದ ಪುಸ್ತಕ ಲೋಕದ ಬಕಾಸುರನನ್ನು.

ಸಾಹಿತ್ಯವೇ, ರಾಜಕೀಯವೇ ನಮಗೆ ಆಸಕ್ತಿಯೇ ಇಲ್ಲದ ವಿಷಯವೇ? ಆಸಕ್ತಿಯಿಂದ ಕೇಳುವ ಹಾಗೆ ಮಾತನಾಡಬಲ್ಲ ಅಪರೂಪದ ಜೀವ. ಆವಿಯಾಗದ ನೆನಪಿನ ಶಕ್ತಿ. ವ್ಯವಹಾರ ತಿಳಿದವರು. ನಮಗೆ ತಿಳಿದೇ ಇಲ್ಲದ ವಿಚಾರವಾದರೆ ಸುಲಭವಾಗಿ ತಿಳಿಸಿ ಹೇಳುವ ಶಕ್ತಿವಂತರು. ಅವರ ಕೆಲ ತೀರ್ಪುಗಳನ್ನು ತರ್ಕ ಗಳನ್ನು ನಾವು ಒಪ್ಪುವ ಬಿಡುವ ವಿಚಾರ ಬೇರೆ. ಅವರ ಮಾತನ್ನು ಕೇಳುತ್ತ ಕುಳಿತರೆ ಮಧ್ಯೆ ಮಾತಾಡಬೇಕೆಂದು ಅನಿಸುವುದಿಲ್ಲ. ಹೊತ್ತಿನ ನೆನಪೂ ಆಗುವು ದಿಲ್ಲ. ಅಲ್ಲಿ ನಾಳೆಯ ಮಾತಿದೆ. ಸಾವಿನ ಮಾತಿಲ್ಲ.

ನಾನು ನಿರಂಜನರನ್ನು ಕೇಳಿದ್ದೆ, "ಈಗಾದರೆ ನಿಮಗೆ ಹಿಂದೆ ಬರೆದಂತಹ ಕಾದಂಬರಿಗಳನ್ನು ಬರೆಯಲು ಸಾಧ್ಯವೇ?" "ಇಲ್ಲ. ಖಂಡಿತ ಸಾಧ್ಯವಿಲ್ಲ. ಅಂದಿನ ಬರವಣಿಗೆ ಅಂದಿಗೇ." ಬರುವಾಗ 'ಮೃತ್ಯುಂಜಯ' ಕೊಟ್ಟರು. ಅವರ ಮಾತಿಗೆ 'ಮೃತ್ಯುಂಜಯ' ಸಾಕ್ಷಿಯಾಗಿತ್ತು. ನನಗೆ ಮೃದುಲಾಳ ನೆನಪಾಯಿತು. ಆದರೆ ಆಕೆ ಎಲ್ಲಿದ್ದಾಳೋ.

ಭೇಟಿ ನಡೆದು ಕಾಲ ಸರಿದಂತೆ, ಮಾತುಗಳನ್ನು ನೆನೆದಂತೆ, ಪತ್ರಗಳನ್ನು ಓದಿದಂತೆ, ಅವರಿವರು ಹೇಳುವ ಮಾತುಗಳನ್ನು ಮತ್ತೆ ಜಗಿದಂತೆ, ನನಗನಿಸುತ್ತಿದೆ. ನಿರಂಜನರೆಂಬ ವ್ಯಕ್ತಿ, ಅರ್ಥವಾಗುವ ಮನುಷ್ಯರಂತೆ ಕಂಡರೂ ಬಲು ಬೇಗ ಅರ್ಥವಾಗದವರು. ○

ಹೃದಯ ವೈಶಾಲ್ಯದ ಅಪ್ಪಟ ಸಾಹಿತಿ

—ಪಾ. ಶ. ಶ್ರೀನಿವಾಸ

ನನ್ನ-ನಿರಂಜನರ ಪರಿಚಯ,ಸ್ನೇಹ ಸುಮಾರು ಮೂವತ್ತೈದು ವರ್ಷಗಳಷ್ಟು ಹಳೆಯದು. ೧೯೫೦ರ ದಶಕದಲ್ಲಿ, ಇನ್ನೂ ಹೈಸ್ಕೂಲು, ಕಾಲೇಜು ವಿದ್ಯಾರ್ಥಿ ಯಾಗಿದ್ದಾಗಲೆ, ಅವರ ಲೇಖನ ಬರವಣಿಗೆಗಳಿಂದ ನಾನು ಸೆಳೆಯಲ್ಪಟ್ಟಿದ್ದೆ. ಕುಳುಕುಂದ ಶಿವರಾಯ - ನಿರಂಜನ ಎಂಬ ಕಾವ್ಯನಾಮದಿಂದ, ತಮ್ಮ ವೈಚಾರಿಕ ಲೇಖನಗಳಿಂದ, ಕತೆಗಳಿಂದ, ಶ್ರಮಜೀವಿಗಳ ಪರವಾದ ಹೋರಾಟದಿಂದ, ಆಗಲೆ ಕನ್ನಡ ಸಾಹಿತ್ಯದಲ್ಲಿ, ಯುವ ಪೀಳಿಗೆಯ ಆದರ್ಶದ ಕನಸುಗಾರರ ಗಮನವನ್ನು ಸೆಳೆದಿದ್ದರು. ಪತ್ರಕರ್ತರಾಗಿ, ಪ್ರಗತಿಶೀಲ ಬರೆಹಗಳಿಂದ, ವಿವಾದಗಳಿಗೆ ಒಳಗಾಗಿದ್ದರು. ಕಮ್ಯೂನಿಸ್ಟ್ ಪಾರ್ಟಿಯ ಸಿದ್ಧಾಂತಗಳಿಗೆ ಒಳಪಟ್ಟು ಭೂಗತರಾಗಿ ಕೆಲಸ ಮಾಡುತ್ತಿದ್ದರು. ಪಾರ್ಟಿಯ ಮುಖವಾಣಿಯಾದ 'ಜನಶಕ್ತಿ'ಯನ್ನು ಹುಬ್ಬಳ್ಳಿಯಿಂದ ಸಂಪಾದಿಸುತ್ತ,ಆಗಿನ ಮುಂಬಯಿ ಸರಕಾರದ ಕ್ರೋಧಕ್ಕೆ ತುತ್ತಾಗಿ, ಕಷ್ಟನಷ್ಟಗಳಿಗೆ ಒಳಗಾಗಿದ್ದರು.

ನನ್ನನ್ನು ಆಕರ್ಷಿಸಿದುದು ಅವರ ಸಿದ್ಧಾಂತ ಧೋರಣೆಗಳಲ್ಲ; ಅವರ ಆದರ್ಶ ವ್ಯಕ್ತಿತ್ವ ಮತ್ತು ಬರೆಹಗಳು. ಆ ಬರೆಹಗಳ ಮೂಲಕ, ವ್ಯಕ್ತಿಯ ಮೂಲಕ ನಾನು ಪಡೆದ ಬಾಳ ನೋಟದ ಅಪೂರ್ವ ಅನುಭವ. ಪ್ರಥಮ ಪರಿಚಯದಲ್ಲಿ, ಸ್ನೇಹ-

ಸ್ನಿಗ್ಧ ನಗೆಯ ಸುರಿಮಳೆ. ಆಗ ಮಂಡ್ಯದಲ್ಲಿ 'ಕಿರಣ ಸಾಹಿತ್ಯ ಸಂಘ' ಎಂಬ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಮೂಲಕ ಕನ್ನಡದ ಹಿರಿಯ ಗಣ್ಯ ಸಾಹಿತಿಗಳನ್ನು ಆಗಾಗ ಕರೆಸಿ, ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದೆ. ಮಾಸ್ತಿ, ಕಾರಂತರು, ಅ.ನ.ಕೃ., ಡಿ.ಎಲ್.ಎನ್., ಎಸ್.ವಿ. ರಂಗಣ್ಣ, ತ.ಸು. ಶಾಮರಾಯರು, ತ.ರಾ.ಸು., ಆರ್ಚಿಕ ವೆಂಕಟೇಶ - ಹೀಗೆ ಹಲವರು ಕನ್ನಡದ ತೇರನ್ನೆಳೆವ ಗಣ್ಯಸಾಹಿತಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ಪಾಲ್ಗೊಂಡು, ಮಂಡ್ಯದ ನಾಗರಿಕರಲ್ಲಿ ಕನ್ನಡದ ಜಚ್ಚರವನ್ನು ಬಡಿದೆಬ್ಬಿಸಿದರು.

ನಿರಂಜನರ ಪರಿಚಯವಾದುದೂ ಅದೇ ಸಂದರ್ಭದಲ್ಲಿ. ನಿರಂಜನರು ಬರಿಯ ಭಾಷಣಕಾರರಾಗಿ ಬಂದು, ತಮ್ಮ ಕೆಲಸ ಮುಗಿಯಿತು ಎಂದು ಹಾಗೆ ಹೋಗಲಿಲ್ಲ. ಅಲ್ಲಿ ಬೆಳೆದ ಸ್ನೇಹಾಂಕುರವನ್ನು ಅವರು ನೀರೆರೆದು ಬೆಳೆಸಿದರು. ವಯಸ್ಸಿನಲ್ಲಿ ಅಂತರ ವಿದ್ದರೂ ನನ್ನನ್ನು ಅವರ ಬಳಿಗೆ ಮತ್ತೆ ಮತ್ತೆ ಆಕರ್ಷಿಸಿದರು.

ಮೈಸೂರಲ್ಲಿ ಕನ್ನಡ ಬಿ.ಎ. (ಆನರ್ಸ್), ಎಂ.ಎ. ವ್ಯಾಸಂಗಕ್ಕಾಗಿ ನಾನು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾಗಿ ೧೯೫೫ ರಿಂದ ೫೯ರ ವರೆಗೆ ನಾಲ್ಕು ವರ್ಷ ಇದ್ದಾಗ, ಅವರ ಸಂಪರ್ಕ ಮತ್ತಷ್ಟು ನಿಕಟವಾಯಿತು. ಆಗ ಅವರು ವೃದ್ಧೆ ತಾಯಿಯವರೊಂದಿಗೆ ಮೈಸೂರಲ್ಲಿ ಕೆಲಕಾಲ ನೆಲಸಿದ್ದರು. ಇನ್ನೂ ಮದುವೆಯಾಗಿರ ಲಿಲ್ಲ. ಮೆಡಿಕಲ್ ವಿದ್ಯಾರ್ಥಿನಿಯಾಗಿದ್ದ ಶ್ರೀಮತಿ ವೆಂಕಟಲಕ್ಷ್ಮಿ (ಆಮೇಲೆ ತಮ್ಮ ಬರೆಹಗಳಿಂದ ಅನುಪಮಾ ಆದರು) ಅವರು, ತಮ್ಮ ಸಾಹಿತ್ಯಪ್ರೇಮ, ಕಥೆಗಳ ಮೂಲಕ, ನಿರಂಜನರ ಬಳಿ ಆಗಾಗ ಬಂದು ಹೋಗುತ್ತಿದ್ದರು. ನಿರಂಜನರು ಆಕೆಯ ಹಿತೈಷಿಯಾಗಿ, ಬರೆಹಗಳನ್ನು ಪ್ರೋತ್ಸಾಹಿಸುತ್ತಿದ್ದರು. ಅದು ಪ್ರೇಮಾಂಕುರಕ್ಕೆ ಕಾರಣವಾಗಿ ಅವರಿಬ್ಬರ ಆದರ್ಶ ವಿವಾಹಕ್ಕೆ ನಾಂದಿಯಾಯಿತು.

ನಾನು ನಿರಂಜನ ದಂಪತಿಗಳನ್ನು ಕಾಣಲು ಆಗಾಗ ಬೆಂಗಳೂರಿಗೆ ಬರು ತ್ತಿದ್ದೆ. ಅವರೊಡನೆ,ಗೆಳೆಯ ಅ.ರಾ. ಮಿತ್ರ ಅವರೊಡಗೂಡಿ, ಸಾಹಿತ್ಯದ ಸಮಕಾಲೀನ ಧೋರಣೆ ಪ್ರೇರಣೆಗಳನ್ನು ಚರ್ಚಿಸುತ್ತಿದ್ದೆವು. ಸಮಕಾಲೀನ ಧೋರಣೆಗಳನ್ನು ಚರ್ಚಿಸುವಾಗ ನಿರಂಜನರು ವ್ಯಗ್ರರಾಗುತ್ತಿದ್ದರು. ಸದಾ ತಿಳಿ ನಗೆಯನ್ನು ಸೂಸುವ ಅವರ ಮುಖ ಗಂಭೀರವಾಗುತ್ತಿತ್ತು. ಆವೇಶದ ಅಗ್ಗದ ಜನಪ್ರಿಯ ಬರವಣಿಗೆಗಳ ಬಗ್ಗೆ ಅಸಮಾಧಾನ ತಾಳುತ್ತಿದ್ದರು. ಸಾಹಿತ್ಯದಲ್ಲಿ ರುಚಿ - ಶುಚಿಗಳೆರಡನ್ನೂ ಬೆಳೆಸ ಬೇಕೆಂಬುದು ಅವರ ನಿಲುವಾಗಿತ್ತು. ಚರ್ಚೆ ಬಿಸಿಯೇರುತ್ತಿದ್ದಂತೆ, ಕಾಫಿ ತಿಂಡಿ ಉಪಚಾರಗಳಿಂದ, ವಾತಾವರಣವನ್ನು ತಿಳಿಯಾಗಿಸುತ್ತಿದ್ದವರು ಈ ಸ್ನೇಹಮಯಿ ದಂಪತಿಗಳು.

ಆಮೇಲೆ ಉದ್ಯೋಗಾರ್ಥಿಯಾಗಿ ೧೯೫೫ರಲ್ಲಿ ನಾನು ಮದರಾಸು ಸೇರ ಬೇಕಾಯಿತು. ನನ್ನ ಅವರ ಭೇಟಿ ಕಮ್ಮಿಯಾಯಿತು. ಪತ್ರ ವ್ಯವಹಾರ ನಡೆಯು ತ್ತಿತ್ತು. ನಾನು ಸಂಪಾದಕನಾಗಿ ಕೆಲಸ ನಿರ್ವಹಿಸುತ್ತಿದ್ದ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಮೂಲಕ ಹೊರತಂದ ಪ್ರಾತಿನಿಧಿಕ ಕಥಾ ಸಂಕಲನ- 'ನವಕಥಾಗುಚ್ಛ'ಕ್ಕೆ ಅವರದೊಂದು ಕಥೆ ಸೇರಿಸಿಕೊಳ್ಳಲು ('ಕೊನೆಯ ಗಿರಾಕಿ' ಇರಬೇಕು) ಅನುಮತಿ ಕೊಟ್ಟರು. ಅವರ ಸ್ನೇಹದ ಕುಶಲ ವಿಚಾರಿಸುವ ಪತ್ರಗಳು ಆಗೊಮ್ಮೆ ಈಗೊಮ್ಮೆ ಬರುತ್ತಿದ್ದುವು. ಪುಸ್ತಕ ಸಂಸ್ಥೆ ಬಿಟ್ಟು ಮದರಾಸು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕನಾಗಿ ಸೇರಿ, ಪ್ರಾ. ಮರಿಯಪ್ಪ ಭಟ್ಟರು ಹಾಕಿಕೊಂಡ, 'ಕಿಟ್ಟೆಲ್' ಅರ್ಥಕೋಶದ ಪರಿಷ್ಕರಣ ಕಾರ್ಯದಲ್ಲಿ ಕೆಲಸಮಾಡುತ್ತಿದ್ದಾಗಲೂ, ನನ್ನ ಕೆಲಸ ವನ್ನು ಆಸಕ್ತಿಯಿಂದ ವಿಚಾರಿಸಿಕೊಳ್ಳುತ್ತಿದ್ದರು. ಆಮೇಲೆ ಮಧುರೆಯ ವಿಶ್ವವಿದ್ಯಾ ನಿಲಯದಲ್ಲಿ ಕನ್ನಡ ವಿಭಾಗವನ್ನು ತೆರೆದು, ಅದನ್ನು ವೃದ್ಧಿಪಡಿಸಲು ಅಂದಿನ ಕುಲಪತಿಗಳಾದ ಡಾ। ಮು. ವರದರಾಜನ್, ನನ್ನನ್ನು ಮಧುರೆಗೆ ಕರೆಸಿಕೊಂಡರು. ಮಧುರೆಗೆ ಬಂದ ಮೇಲೆ, ನನ್ನ ನಿರಂಜನರ ಭೇಟಿ ಅಪರೂಪವಾಯಿತು. ಕನ್ನಡ ಸಾಹಿತ್ಯದ ಪ್ರಮುಖ ಘಟ್ಟವೊಂದರಲ್ಲಿ ಪ್ರಗತಿಶೀಲ ಚಳುವಳಿಯ ವೇದಿಕೆಯಿಂದ ಅವರು ನಿರ್ವಹಿಸಿದ ಕಾರ್ಯವನ್ನು ಯಾರೂ ಅಳಿಸಿ ಹಾಕುವಂತಿಲ್ಲ.

* * * *

ನಿರಂಜನರು ಮಾರ್ಕ್ಸ್‌ವಾದ ಸಿದ್ಧಾಂತದ ಪ್ರೇರಣೆಯಿಂದ ತೊಡಗಿದ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಮುಂಚೂಣಿಯಲ್ಲಿದ್ದುಕೊಂಡು, ಅ.ನ.ಕೃ., ತ.ರಾ.ಸು., ಕಟ್ಟೀಮನಿ, ಕುಮಾರ ವೆಂಕಣ್ಣ, ಅರ್ಚಿಕ ವೆಂಕಟೇಶ ಮೊದಲಾದ ಗಣ್ಯ ಸಾಹಿತಿ ಗಳೊಡನೆ, ಶೋಷಿತ ಹಾಗೂ ಮಧ್ಯಮ ವರ್ಗದ ಜನರ ಬದುಕಿನ ವಿವಿಧ ಸಮಸ್ಯೆ ಗಳನ್ನು ಕಥೆ, ಕಾದಂಬರಿಗಳಲ್ಲಿ ಪ್ರಧಾನವಾಗಿ ತಂದು, ಚಳುವಳಿಯು ಜಾಗೃತ ವಾಗಿರುವಂತೆ ನೆರವಾದರು. ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದ ವಾಸುದೇವ ಅವರೊಡನೆ ಕೂಡಿ, ಪುರೋಗಾಮಿ ಪ್ರಕಾಶನ ಎಂಬ ಹೆಸರಲ್ಲಿ ಹಲವು ಗಮನಾರ್ಹ ಪುಸ್ತಕ ಗಳನ್ನೂ ಪ್ರಕಟಿಸಿದರು. ನಂತರದಲ್ಲಿ ಅ.ನ.ಕೃ. ಬಳಗದೊಡನೆ, ಮೂಲಭೂತ ವಿಚಾರ ಗಳಲ್ಲಿ ವಿರಸವುಂಟಾದಾಗ, ಏಕಾಂಗಿಯಾಗಿ ನಿಂತು ಹೋರಾಡಿದರು. ಪ್ರಗತಿಶೀಲ ಎಂಬ ಹೆಸರಲ್ಲಿ, ಅ.ನ.ಕೃಷ್ಣರಾಯರು 'ನಗ್ನಸತ್ಯ', 'ಶನಿಸಂತಾನ' ಮತ್ತು 'ಸಂಜೆಗತ್ತಲು' ಎಂದು ಮೂರು ಭಾಗಗಳಲ್ಲಿ ವೇಶ್ಯಾ ಜೀವನವನ್ನು ಕುರಿತ ಕಾದಂಬರಿ ಗಳನ್ನು ಬರೆದಾಗ, ಶೀಲಾಶ್ಲೀಲಗಳ ಗೊಂದಲವೆದ್ದು, ಬೀಸಿದ ಬಿರುಗಾಳಿಗೆ ನಿರಂಜನರು ಎದುರಾಗಿ ನಿಂತರು. ಪ್ರಜಾವಾಣಿ ಮೊದಲಾದ ಪತ್ರಿಕೆಗಳಲ್ಲಿ ಶೀಲಾಶ್ಲೀಲ ಮಥನದ ದೊಡ್ಡ ವೇದಿಕೆಯೆ ಸೃಷ್ಟಿಯಾಯಿತು. ವ. ಕೃ. ಭಾರದ್ವಾಜ, ದೇವುಡು, ತ.ರಾ.ಸು.,

ಕುಮಾರವೆಂಕಣ್ಣ, ಬೀಚಿ, ಮೊದಲಾದವರ ದೊಡ್ಡ ಬಳಗವೆ ಅ.ನ.ಕೃ. ಅವರಿಗೆ ಬೆಂಬಲವಾಗಿ ನಿಂತು ಸಮರ್ಥಿಸಿಕೊಂಡರು. ವಾಗ್ಮಿತೆಯಲ್ಲಿ, ಸಮ್ಮೋಹಕ ಶೈಲಿಯ ಕಾದಂಬರಿಗಳ ರಚನೆಯಲ್ಲಿ ಅ.ನ.ಕೃ. ದೊಡ್ಡ ಹೆಸರಾಗಿದ್ದರು. ದೈತ್ಯ ಬರೆಹಗಾರ ರೆಂದು ಪ್ರಸಿದ್ಧರಾಗಿದ್ದರು. ಯುವಕ ನಿರಂಜನರು ಪ್ರಗತಿಶೀಲದ ಮುದ್ರೆಯಲ್ಲಿ, ಹೆಣ್ಣು ಬಾಟಲಿಗಳ ಮೋಜಿನ ಬದುಕನ್ನು ಚಿತ್ರಿಸುವ ಪ್ರವೃತ್ತಿಯನ್ನು ಖಂಡಿಸಿ ಬರೆದರು. ಈ ಸಮಯದಲ್ಲಿ ನಿರಂಜನರು 'ಬನಶಂಕರಿ', 'ವಿಮೋಚನೆ', 'ರಂಗಮ್ಮನ ವಠಾರ', 'ಚಿರಸ್ಮರಣೆ' ಮೊದಲಾದ ಉತ್ತಮ ಕಾದಂಬರಿಗಳನ್ನೂ, 'ರಕ್ತ ಸರೋವರ', 'ಸಂಧಿಕಾಲ' ಮೊದಲಾದ ಕಥಾ ಸಂಕಲನಗಳನ್ನೂ ಬರೆದು ಪರಿಚಿತ ರಾಗಿದ್ದರೂ, ಮೇಲಿನ ಬರೆಹಗಾರರ ಸಮ್ಮೋಹಕ ಶೈಲಿಯ ಕಥೆ ಕಾದಂಬರಿಗಳ ಜನಪ್ರಿಯತೆಗೆ ಸರಿಸಾಟಿಯಾಗಿ ನಿಲ್ಲುವ ಶಕ್ತಿ ಇನ್ನೂ ಪಡೆದಿರಲಿಲ್ಲ. ತಮಗೆ ಬಂದ ವಿರೋಧವನ್ನು ಲೆಕ್ಕಿಸದೆ, ಕಂಡ ವಿಚಾರವನ್ನು ನಿರ್ಭಿಡೆಯಾಗಿ ಹೇಳುತ್ತ, ತಮ್ಮ ಲೇಖನಿಯ ವಿಶಿಷ್ಟತೆಯನ್ನು ಕಾಪಾಡಿಕೊಂಡು, ನಿರಂಜನರು ತಮ್ಮ ವೈಯಕ್ತಿಕ ವರ್ಚಸ್ಸನ್ನು ಬೆಳೆಸಿಕೊಂಡರು. ಹಿತೈಷಿಗಳ ಬಳಗವನ್ನು ಸೃಷ್ಟಿಸಿಕೊಂಡರು. ಆಗ ಹೊತ್ತಿಸಲ್ಪಟ್ಟ ಶೀಲಾಶ್ಲೀಲಗಳ ವಿಚಾರ ಜ್ವಾಲೆ ಎಷ್ಟು ಪ್ರಖರವಾಗಿತ್ತೆಂದರೆ, ಅ.ನ.ಕೃಷ್ಣರಾಯರು ತಮ್ಮ ನಿಲವಿನ ಸಮರ್ಥನೆಗಾಗಿ, ಪೌರ್ವಾತ್ಯ, ಪಾಶ್ಚಾತ್ಯ ಪಂಡಿತರ ವಾದಗಳನ್ನೆಲ್ಲ ಮಂಡಿಸುವ, 'ಸಾಹಿತ್ಯ ಮತ್ತು ಕಾಮಪ್ರಚೋದನೆ' ಎಂಬ ಮಹಾಪ್ರಬಂಧವನ್ನೆ ಬರೆದರು. ಹೀಗೆ ಪ್ರಗತಿಶೀಲ ಚಳುವಳಿ ಹಲವು ಘಟಕಗಳಲ್ಲಿ ಹರಿದು ಹಂಚಿಹೋದರೂ, ವಿಚಾರದ ಮೂಸೆಯಲ್ಲಿ ಕಾದು ಹದವಾದ ಹಲವು ಮಹತ್ತಿನ ಕೃತಿಗಳು ಕನ್ನಡದಲ್ಲಿ ಬೆಳಕುಕಂಡವು.

ಯುವ ಬರೆಹಗಾರ ನಿರಂಜನರು ತಮ್ಮ ನಿಲವಿನ ಪ್ರತಿಪಾದನೆಯಲ್ಲಿ ಹಲವು ನಿಷ್ಠುರಗಳನ್ನು ಎದುರಿಸುತ್ತ, ಹಲವು ಪ್ರಾತಿನಿಧಿಕವೆನಿಸಿದ ಕೃತಿಗಳನ್ನು ಬರೆದು ಹಿರಿಯರ ಪಂಕ್ತಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡರು. 'ರಕ್ತ ಸರೋವರ', 'ಸಂಧಿಕಾಲ', 'ಅನ್ನಪೂರ್ಣ', 'ಕೊನೆಯ ಗಿರಾಕಿ' ಮೊದಲಾದ ಕಥಾ ಸಂಕಲನಗಳು, 'ಬನಶಂಕರಿ', 'ವಿಮೋಚನೆ','ರಂಗಮ್ಮನ ವಠಾರ', 'ಚಿರಸ್ಮರಣೆ'ಗಳಂಥ ಸಮಕಾಲೀನ ಪ್ರಜ್ಞೆಯನ್ನು ಸಂಕೇತಿಸುವ ಕಾದಂಬರಿಗಳನ್ನು, ಸಿದ್ಧಾಂತ ಘರ್ಷಣೆಯ ಪರ್ವಕಾಲ ದಲ್ಲಿ ರಚಿಸಿದರು. ಈ ಕೃತಿಗಳಲ್ಲಿ ನಿರಂಜನರ ಲೇಖನಿಗೆ ವಿಶಿಷ್ಟತೆ ಮೂಡಿತು. ಅವರದೆ ಶೈಲಿಯ ಮುದ್ರೆ ಇತ್ತು.

ಅ.ನ.ಕೃ. ಅವರೊಡನೆ ಉಂಟಾದ ವೈಚಾರಿಕ ವಿವಾದಗಳಲ್ಲಿ ಅವರು ವೈಯಕ್ತಿಕ ಸ್ನೇಹವನ್ನು ದೂರ ಮಾಡಲಿಲ್ಲ. ಅ.ನ.ಕೃ. ಅವರ ವ್ಯಕ್ತಿಗತ ಸಾಧನೆ ಗಳನ್ನು ನಿರಂಜನರು ಗೌರವ ಸ್ನೇಹಗಳಿಂದ ಪುರಸ್ಕರಿಸುತ್ತಿದ್ದರು. ಮೈಸೂರು

ವಿಶ್ವವಿದ್ಯಾನಿಲಯದವರು ಹಿರಿಯ ಅ. ನ. ಕೃಷ್ಣರಾಯರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಇತ್ತು ಸನ್ಮಾನಿಸಿದಾಗ ಅವರನ್ನು ಹೃತ್ಪೂರ್ವಕವಾಗಿ ಅಭಿವಂದಿಸಲು, ಅವರ ಮನೆಗೆ ಹೋಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಲು ನಿರಂಜನರು ಮರೆಯಲಿಲ್ಲ. ಕನ್ನಡದ ಬಗ್ಗೆ ಅವರ ಸಾಧನೆಗಳನ್ನು ಮೆಚ್ಚಿ ಲೇಖನ ಬರೆದರು. ಇದು ನಿರಂಜನರ ವ್ಯಕ್ತಿತ್ವವನ್ನೂ, ಮನಸ್ಸಿನ ವೈಶಾಲ್ಯವನ್ನೂ ರೂಪಿಸುವ ಸಂಗತಿ ಎಂದು ನನಗನ್ನಿಸುತ್ತದೆ.

ನಿರಂಜನರ ಮುಖ್ಯವಾದ ಕೃತಿಗಳು 'ವಿಮೋಚನೆ', 'ರಂಗಮ್ಮನ ವಠಾರ', 'ಚಿರಸ್ಮರಣೆ', 'ಕಲ್ಯಾಣ ಸ್ವಾಮಿ' ಮೊದಲಾದವು ಅಗ್ಗದ ಬೆಲೆಯ ಜನಪ್ರಿಯ ಕಾದಂಬರಿ ಮುದ್ರಣಗಳಲ್ಲಿ ಹೊರಬಂದವು. ಅವು ಪ್ರಕಟವಾದಾಗ, ಅನೇಕರಿಗೆ ಅವು ಅಷ್ಟು ಪ್ರಮುಖ ಕೃತಿಗಳೆನಿಸಲಿಲ್ಲ. ಅದಕ್ಕೆ ಕಾರಣ ಅವರ ಬರವಣಿಗೆಯ ಧಾಟಿ. ಕ್ರಾಂತಿಕಾರಕ ವಿಚಾರಗಳನ್ನು ಭಾವಾವೇಶದ ಶೈಲಿಗೆ ಒಳಪಡಿಸಿ ಜನರ ರಕ್ತವನ್ನು ಕುದಿಸಲು ಅವರು ಪ್ರಯತ್ನಿಸಲಿಲ್ಲ. ಸಣ್ಣ ಸಣ್ಣ ವಾಕ್ಯಗಳಲ್ಲಿ ಅರ್ಥ ಪೂರ್ಣವಾಗಿ ವಿವರಿಸಿಕೊಂಡು ಹೋಗುತ್ತ, ವೈಚಾರಿಕ ಚಿಂತನೆಗೊಳಪಡಿಸುತ್ತ, ಮನೋವಿಕಾಸವನ್ನುಂಟುಮಾಡುವ ಶೈಲಿಯನ್ನು ಅವರು ಕಲ್ಪಿಸಿಕೊಂಡರು. ಹಲವು ವೇಳೆ ಅವರ ವಾಕ್ಯಗಳು ಅಪೂರ್ಣವೆನಿಸಿ, ವಾಕ್ಯಗಳಾಗದೆ ನುಡಿಗಟ್ಟುಗಳಾಗಿ, ವಾಚಕನ ಮನಸ್ಸಿನ ಮಂಥನದಲ್ಲಿ ಅರ್ಥ ಬಿಡಿಸಿಕೊಳ್ಳುವ, ಪತ್ರಿಕಾವರದಿಗಾರನ ಎಚ್ಚರಿಕೆಯ ಶೈಲಿಯೆಂದು ಟೀಕೆಗೂ ಒಳಗಾದರು. ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆದ ನಿರಂಜನರು ಕಥೆ ಕಾದಂಬರಿಗಳ ರಚನೆಯಲ್ಲೂ ಅದೇ ಶೈಲಿಯನ್ನು ಅಳವಡಿಸಿಕೊಂಡಿದ್ದಾರೆಂದು ಅವರ ವಿಮರ್ಶಕರು ದೂರಿದರು. ದೇವುಡು, ಅ.ನ.ಕೃ., ತ.ರಾ.ಸು., ಕಟ್ಟೀಮನಿ ಮೊದಲಾದವರ ರಂಜನೀಯ ಶೈಲಿಯ ಮೋಡಿಗೆ ವಶವಾಗಿದ್ದವರಿಗೆ ಹಾಗೆ ಕಾಣಿಸಿದಲ್ಲಿ ಆಶ್ಚರ್ಯವಿಲ್ಲ.

ಆದರೆ ಕಾಲ ಸರಿದಂತೆ, ಪಕ್ವವಾದಂತೆ, ಓದುಗರು ನಿರಂಜನರ ಕೃತಿಗಳ ಮೌಲ್ಯವನ್ನು ಗುರುತಿಸುತ್ತ ಬಂದಿದ್ದಾರೆ. ಪತ್ರಿಕಾ ವರದಿಯಂತೆ, ಸಪ್ಪೆ ಎನಿಸಿಕೊಂಡ ಕಯ್ಯೂರಿನ ರೈತ ಮಕ್ಕಳ ಕ್ರಾಂತಿಯ ಕಹಳೆಯನ್ನೂದುವ 'ಚಿರಸ್ಮರಣೆ' ಇಂದು ಕನ್ನಡದಲ್ಲಿ ಬಂದ ಅಪೂರ್ವ ಕಾದಂಬರಿಗಳ ಸಾಲಿನಲ್ಲಿ ಸೇರಿರುವುದು ಮಾತ್ರವಲ್ಲ, ಹಲವು ಭಾಷೆಗಳಲ್ಲಿ ಕನ್ನಡದ ಪ್ರಾತಿನಿಧಿಕ ಕಾದಂಬರಿಯಾಗಿ ಅನುವಾದಿತವಾಗಿದೆ. ನಿರಂಜನರನ್ನು ಭಾರತೀಯ ಸಾಹಿತ್ಯ ನಿರ್ಮಾಪಕರ ಸಾಲಿನಲ್ಲಿ ನಿಲ್ಲಿಸಿದೆ. ಅವರು ಅನುವಾದಿಸಿರುವ ಮಾಕ್ಸಿಂಗಾರ್ಕಿಯವರ 'ತಾಯಿ' ಅತ್ಯುತ್ತಮ ಭಾಷಾಂತರಗಳಲ್ಲೊಂದೆಂದು ವಿಮರ್ಶಕರಿಂದ ಪ್ರಶಂಸೆಗೊಳಗಾಗಿ, ರಷ್ಯಾದಿಂದ ಮತ್ತೆ ಪುನರ್ಮುದ್ರಣ ಕಂಡಿದೆ. ಈಜಿಪ್ಟಿನ ಇತಿಹಾಸದಲ್ಲಿ ಶೋಷಣೆಗೊಳಗಾದವರ

ಜೀವನಗಾಥಾ ಎಂದು ಮೆಚ್ಚುಗೆ ಪಡೆದ ಅವರ ಈಚಿನ ಗಾತ್ರದಲ್ಲಿ ದೊಡ್ಡದಾದ ಕಾದಂಬರಿ 'ಮೃತ್ಯುಂಜಯ' ಇತಿಹಾಸದ ತಳಹದಿಯ ಮೇಲೆ ಕಟ್ಟಿದ ಅಪೂರ್ವ ಕಾಲ್ಪನಿಕ ಸೃಷ್ಟಿಗೆ ಮಾದರಿಯಾಗಿ ನಿಂತಿದೆ. ನಿರಂಜನರು ೬೦ರ ದಶಕದಲ್ಲಿ ಪತ್ರಿಕೆಗಳಲ್ಲಿ ಬರೆದ ಅಂಕಣಗಳು, ಡಾ। ಹಾ.ಮಾ.ನಾ., ಎಚ್ಚೆಸ್ಕೆ, ಎಲ್.ಎಸ್. ಶೇಷಗಿರಿರಾಯರು ಮೊದಲಾದ ಇಂದಿನ ಅಂಕಣ ಬರೆಹಗಾರರಿಗೆ ಮಾದರಿಯಾಗಿವೆ.

ನಿರಂಜನರು ಮೊದಮೊದಲು ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದುಕೊಂಡು ಅವರ ಸಿದ್ಧಾಂತಕ್ಕೆ ಒಳಪಟ್ಟು ನಡೆದರೂ, ಅವರ ಕಥೆ ಕಾದಂಬರಿಗಳಲ್ಲಿ ಸಾರ್ವತ್ರಿಕವಾಗಬಹುದಾದ ಮೌಲ್ಯಗಳನ್ನೇ ಪ್ರತಿಪಾದಿಸಿದರು. ಸಾಮಾಜಿಕ ಶೋಷಣೆಯ ವಿರುದ್ಧ, ಬೂರ್ಜ್ವಾ ಪ್ರವೃತ್ತಿಯ ವಿರುದ್ಧ ಖಂಡಿಸುವಾಗ ಅವರೆಂದೂ ಗಾಂಧಿಜಿಯವರ ಆದರ್ಶವಾಗಿದ್ದ ಮಾನವೀಯ ಮೌಲ್ಯಗಳನ್ನು ಮರೆಯಲಿಲ್ಲ. ಇದರಿಂದಲೆ ಕನ್ನಡದ ವಿಶಿಷ್ಟ ಬರೆಹಗಾರರ ನಡುವೆ ಅವರ ಸ್ಥಾನ ಗುರುತಿಸುವುದು ಸಾಧ್ಯವಾಗಿದೆ.

ನಿರಂಜನರು ಕನ್ನಡ ವಿಚಾರ ಸಾಹಿತ್ಯಕ್ಕೆ ನೀಡಿದ ದೇಣಿಗೆ ಹಲವು ಕಾಲ ಸ್ಮರಿಸಿಕೊಳ್ಳುವಂಥದು. ೧೯೭೦ರ ದಶಕದಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನದ ಮೂಲಕ ಅವರು ಸಂಪಾದಿಸಿದ ಕಿರಿಯರ ವಿಶ್ವಕೋಶ - 'ಜ್ಞಾನಗಂಗೋತ್ರಿ'ಯ ಸಂಪುಟಗಳು, ನವಕರ್ನಾಟಕ ಪ್ರಕಾಶನದವರ ಮೂಲಕ, ಅವರು ಸಂಪಾದಿಸಿದ ೨೫ ಸಂಪುಟಗಳ 'ವಿಶ್ವಕಥಾಕೋಶ' - ಅವರ ದೈತ್ಯ ದುಡಿಮೆಗೆ ಸಾಕ್ಷಿಯಾಗಿವೆ. ೭೦ರ ದಶಕದ ಕೊನೆಯಲ್ಲಿ ಅವರು ಮತ್ತು ಶ್ರೀಮತಿ ಅನುಪಮಾ ಅವರ ಆರೋಗ್ಯ ಕೆಡುತ್ತ ಬಂದು, ಸಾವು-ಬದುಕುಗಳ ನಡುವೆ ಹೋರಾಡುತ್ತ ಅಪಾರ ದುಃಖವನ್ನು ಅನುಭವಿಸಬೇಕಾಗಿ ಬಂದಾಗಲೂ, ಸ್ಥೈರ್ಯವನ್ನು ಕಳೆದುಕೊಳ್ಳದೆ ಸಕ್ರಿಯವಾಗಿ ಉಳಿದು, ತಮ್ಮ ಬದುಕಿಗೆ ಅರ್ಥಕಲ್ಪಿಸಿಕೊಂಡಿದ್ದಾರೆ. ಬದುಕಿನ ಪ್ರತಿಕ್ಷಣವನ್ನು ಕ್ರಿಯಾಸಂಪನ್ನವಾಗಿಸಿ, ಹಲವು ತಲೆಮಾರುಗಳಿಗೆ ಉಪಯೋಗವಾಗುವ ಕೆಲಸ ಮಾಡಿದ್ದಾರೆ; ಮಾಡುತ್ತಿದ್ದಾರೆ. ಕಥೆ ಕಾದಂಬರಿಗಳೆ ಆಗಲಿ, ವಿಚಾರ ವಿಮರ್ಶೆಯೇ ಆಗಲಿ, ಜನರನ್ನು ದಾರಿತಪ್ಪಿಸಬಾರದು, ಸಮುದಾಯದ ವಿಕಾಸವನ್ನು ಗುರಿಯಾಗಿಟ್ಟುಕೊಳ್ಳಬೇಕೆಂಬ ಸಾಮಾಜಿಕ ಪ್ರಜ್ಞೆಯೊಂದಿಗೆ ಅವುಗಳನ್ನು ಬರೆದಿದ್ದಾರೆ.

* * * *

ಕೊನೆಯದಾಗಿ ಈ ಲೇಖನ ಮುಗಿಸುವ ಮುನ್ನ, ಸುಮಾರು ಹದಿನೈದು ವರ್ಷಗಳ ನಂತರ ನಿರಂಜನರು ನನ್ನ 'ತಿರುಕ್ಕುಜಳ್' ಸಮಗ್ರಾನುವಾದವನ್ನು ಓದಿ ನನಗೆ ಬರೆದ ಆತ್ಮೀಯವಾದ ಪತ್ರದ ಮಾತುಗಳನ್ನು ಇಲ್ಲಿ ಉಲ್ಲೇಖಿಸಿದರೆ ತಪ್ಪೆನಿಸಲಾರದು. ಏಕೆಂದರೆ ಆ ಪತ್ರ, ಎತ್ತರಕ್ಕೆ ಬೆಳೆದ ವ್ಯಕ್ತಿಯೊಬ್ಬನ ಅಂತರಂಗಕ್ಕೆ ಹಿಡಿದ ಕನ್ನಡಿಯಾಗಬಹುದು.

"ಆತ್ಮೀಯ ಪಾ. ಶ. ಶ್ರೀನಿವಾಸರಿಗೆ, ನಮನ. ಹದಿನೈದು ವರ್ಷಗಳಿಗೂ ಹೆಚ್ಚಾಯಿತು ನಿಮ್ಮನ್ನು ಕಂಡು. ಸುಮಾರು ಆರು ತಿಂಗಳ ಹಿಂದೆ ಅಂತ ತೋರುತ್ತದೆ. ಸ್ನಾನ ಮುಗಿಸಿ ಕೊಠಡಿಗೆ ಬಂದವನು 'ತಿರುಕ್ಕುಱಳ್' ಕಂಡೆ. ಯಾರೊ ಬಂದರಂತೆ, ಕೊಟ್ಟರಂತೆ. ಸ್ವಾಗತ ಸಪ್ಪೆಯಾಯಿತೆಂದುಕೊಂಡೆ. ಅಂದೆ ಒಂದಿಷ್ಟು ಪುಟ ಓದಿದೆ. 'ತಿರುಕ್ಕುಱಳ್' ನನಗೆ ಪರಿಚಿತ, ಆದರೆ ಪೂರ್ಣವಾಗಿ ಓದುವ ಅವಕಾಶ ದೊರೆತಿತ್ತು, ಹೊತ್ತು ಮೀರುವುದಕ್ಕೆ ಮುನ್ನ. ಎಷ್ಟು ದೊಡ್ಡ ಕಾಣಿಕೆ ನಿಮ್ಮದು, ನುಡಿಗೆ, ಜನಪದಕೆ! ಪೂರ್ತಿ ಓದಿದ ಮೇಲೆಯೆ ನಿಮಗೆ ಬರೆಯಬೇಕೆಂಬ ಛಲ. ಸ್ವಲ್ಪ ಸ್ವಲ್ಪವೆ ಓದಿ ಮುಗಿಸಿದ್ದೇನೆ. ಮತ್ತೆ ಇನ್ನೂ ಆಗಾಗ ಓದುತ್ತೇನೆ. ಒಳ್ಳೆಯ ಸಂಗಡಿಗ ನನಗೆ ಈ ವಳ್ಳುವರ್!

"ಡಾ। ಸುಬ್ರಮಣಿಯನ್ ಅವರ Sangam Polityಯನ್ನು ಕನ್ನಡಿಸಿದೆ. 1974ರ ಉತ್ತರಾರ್ಧದಲ್ಲಿ - ಜ್ಞಾನಗಂಗೋತ್ರಿಯ ಯೋಜನೆ ಮುಕ್ತಾಯವಾದ ನಂತರ, ICHRಗೋಸ್ಕರ. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ ಅದನ್ನು ಪ್ರಕಟಿಸಿತು. ಮೂಲದಲ್ಲಿದ್ದುವು ತಮಿಳು ಮೂಲದ ಹಲವು ಉಲ್ಲೇಖಗಳು. ಆಚಾರ್ಯ ಪಾಠಶಾಲೆಯ ತಮಿಳು ಪ್ರಾಧ್ಯಾಪಕ ಕೃಷ್ಣಮೂರ್ತಿ ನನಗೆ ಮೇಸ್ಟ್ರಾದರು. ಉಲ್ಲೇಖಗಳ ಅನುವಾದವನ್ನು ಅವರ ಎದುರಿನಲ್ಲಿ ಮೊದಲು ಮಾಡಿದೆ. ತಮಿಳು ಸಂಗಸಾಹಿತ್ಯ ನನಗೆ ಹತ್ತಿರವಾದದ್ದು, ಹೆಚ್ಚು ಹತ್ತಿರವಾದದ್ದು ಹಾಗೆ. ಈಗ ತಿರುಕ್ಕುಱಳ್ ವಾಚನದಿಂದ ಖುಷಿಪಟ್ಟಿದ್ದೇನೆ. ನಿಮಗೆ ಅಭಿನಂದನೆ. ಇನ್ನು ಗ್ರಂಥವನ್ನು ಅನುಪಮಾಗೆ ಕೊಡುತ್ತೇನೆ ಓದಲು.

"ಮಿದುಳು ಅತ್ತಿತ್ತ ಅಲೆದಾಗ, ಮಂಡ್ಯಕ್ಕೂ ಹೋಗುತ್ತದೆ. 1950ರ ವರ್ಷಗಳು. 1956 ಮೈಸೂರಿಗೂ ಸಾಗುತ್ತದೆ. (ಮದುವಣಗಿತ್ತಿ ಪದ ನಿಷ್ಪತ್ತಿ ಡಿ. ಎಲ್. ಎನ್.ರಿಂದ ನೀವು ಮಾಡಿಸಿದ್ದು ನೆನಪಿದೆಯೆ?) ವಯಸ್ಸಾದಂತೆ ಬಾಲ್ಯದ ಮತ್ತು ಹಳೆಯ ನೆನಪುಗಳು ಕಾಡುತ್ತವೆ. ಸದ್ಭಾವನೆಯ ಮತ್ತು ಸ್ನೇಹದ ಎಷ್ಟೊಂದು ಸೆಲೆಗಳಿಂದ ನಾನು ದಾಹ ಆರಿಸಿಕೊಂಡಿಲ್ಲ! ಇದೆಲ್ಲ ತೀರಿಸಲಾರದ ಋಣಭಾರ!"

ಅಪರಿಮಿತ ಜೀವನೋತ್ಸಾಹಿ

–ವೀಣಾ ಶಾಂತೇಶ್ವರ

ನಿರಂಜನರನ್ನು ಅವರ ಕಾದಂಬರಿಗಳ ಮುಖಾಂತರವಾಗಿ ನಾನು ಕಳೆದ ಕಾಲು ಶತಮಾನದಿಂದಲೂ ಬಲ್ಲೆ. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದ ದಿನಗಳವು. ಪ್ರತಿ ಪರೀಕ್ಷೆಯಲ್ಲೂ, ಪ್ರತಿ ವಿಷಯದಲ್ಲೂ, ಮಗಳು ಪ್ರಥಮ ಕ್ರಮಾಂಕವನ್ನೇ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯಿದ್ದ ನನ್ನ ತಾಯಿಗೆ ನಾನು ಸದಾ ಕಾದಂಬರಿಗಳನ್ನೋದುವುದು ಅಷ್ಟೇನೂ ಅಪ್ಯಾಯಮಾನವಾದ ವಿಷಯವಾಗಿರಲಿಲ್ಲ. ಆದರೂ ಪಠ್ಯಪುಸ್ತಕಗಳ ಹೊಟ್ಟೆಯಲ್ಲಿ ನಿರಂಜನರ ಹಾಗೂ ಇತರ ಪ್ರಗತಿಶೀಲ ಲೇಖಕರ (ಈ ಲೇಬಲ್ ಆಗಂತೂ ನನಗೆ ಗೊತ್ತಿರಲಿಲ್ಲ; ಇಂಥ ಯಾವ ಲೇಬಲ್ಲಿನ ಗೊಡವೆಯೂ ಇಲ್ಲದೆ ಮನಸ್ಸಿಗೆ ಸೇರಿದ ಪುಸ್ತಕಗಳನ್ನೆಲ್ಲಾ ಓದಿ ಆನಂದಿಸುತ್ತಿದ್ದ ಆ ದಿನಗಳೇ ಸೊಗಸು.) ಕಾದಂಬರಿಗಳನ್ನಿಟ್ಟುಕೊಂಡು ಓದುತ್ತಿದ್ದ ನೆನಪು ನನ್ನ ಮನಸ್ಸಿನಲ್ಲಿನ್ನೂ ಹಸಿರಾಗಿದೆ. ಸಾಮಾಜಿಕ ಅನಿಷ್ಟಗಳನ್ನು ವ್ಯಂಗ್ಯಭರಿತ ಶೈಲಿಯಲ್ಲಿ, ಹರಿತ ಭಾಷೆಯಲ್ಲಿ ನಿರಂಜನರು ಟೀಕಿಸುತ್ತಿದ್ದ ರೀತಿ ನನ್ನ ಆದರ್ಶಪ್ರಿಯ ಹೈಸ್ಕೂಲು ಬುದ್ಧಿಗೆ ತುಂಬ ಹಿಡಿಸಿತ್ತು. ನಾನು ಬೆಳೆಯುತ್ತ ಹೋದಂತೆ ನಿರಂಜನರ ಕಾದಂಬರಿಗಳನ್ನು ಓದುತ್ತಲೇ ಹೋದೆ. ನಂತರದ ದಿನಗಳಲ್ಲಿ ನಾನು ಮೆಚ್ಚಿದ್ದು - ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧಗಳ ಸೂಕ್ಷ್ಮತೆಯನ್ನು ನವಿರಾಗಿ ಅವರು ಚಿತ್ರಿಸಿದ ಬಗೆ. ಒಂದು ಹಂತದಲ್ಲಿ ಅವರ ಕಾದಂಬರಿಗಳ ಪಾತ್ರಗಳ ವಿಚಾರಸರಣಿ ನನ್ನ ಮೇಲೆ ಎಂತಹ ಗಾಢ ಪ್ರಭಾವ ಬೀರಿತ್ತೆಂದರೆ, ಅವರ ಒಂದು ಕಾದಂಬರಿಯ ನಾಯಕಿ (ಅಂಜನದ ನರ್ಮದಾ) ಗಂಡು - ಹೆಣ್ಣಿನ ದೈಹಿಕ ಸಂಬಂಧ ಬಲು ಹೇಯವಾದದ್ದೆಂದು ನಂಬಿದ್ದಳೆಂದು ಅನೇಕ ವರ್ಷಗಳ ಕಾಲ ನಾನು ಮದುವೆಯೇ ಬೇಡವೆಂದು ಹಟಮಾಡಿದ್ದೆ. ನೆನಪಾದರೆ ಈಗ ನಗು ಬರುತ್ತದೆ. ಈ ಎಲ್ಲಾ ಮಾತುಗಳ ತಾತ್ಪರ್ಯ ಇಷ್ಟೇ: ನಮ್ಮ ಸಾಮಾಜಿಕ, ಧಾರ್ಮಿಕ, ರಾಜಕೀಯ ರಂಗಗಳಲ್ಲಿನ ದುಷ್ಟ ರೂಢಿಗಳನ್ನು ಟೀಕಿಸುವ ಹಾಗೂ ವಿರೋಧಿಸುವ ನಿರಂಜನರ ಕಾದಂಬರಿಗಳು ನನ್ನ ಹದಿವಯಸ್ಸಿನ ದಿನಗಳಲ್ಲಿ ನನ್ನ ಮೇಲೆ ಬೀರಿದ್ದ ಪರಿಣಾಮ ಗಾಢ.

ಹೀಗಾಗಿ ಬಹಳ ವರ್ಷಗಳ ನಂತರ ನಿರಂಜನರನ್ನು ಮೊದಲ ಸಲ ಮುಖತಃ ಭೇಟಿಯಾದಾಗ, ನನಗೆ ಅವರು ಮೊದಲಿನಿಂದಲೂ ತೀರ ಪರಿಚಿತರಾಗಿದ್ದಂತೆ ತೋರಿತು. ಪ್ರಗತಿಶೀಲ - ನವ್ಯ, ಬ್ರಾಹ್ಮಣ - ಶೂದ್ರ, ಪಟ್ಟಭದ್ರರು - ದಲಿತರು ಹೀಗೆ ನೂರೆಂಟು ಹಣೆಪಟ್ಟಿಗಳುಳ್ಳ ಪರಸ್ಪರ ವಿರೋಧೀ ಶಕ್ತಿಗಳು ನಿರಂತರ ಕುರುಕ್ಷೇತ್ರ ನಡೆಸಿದ್ದ ಕಾಲವದು. ಆದರೆ ನಿರಂಜನರ ಬಗೆಗೆ ನನಗಿರುವ ಗೌರವ

ಹಾಗೂ ನನ್ನ ಬಗೆಗೆ ಅವರಿಗಿರುವ ಅಭಿಮಾನ ಎಂದಿಗೂ ತೀರ ವೈಯಕ್ತಿಕವಾದ ಭಾವನೆಗಳು. ಯಾವ ವಿರೋಧಾಭಾಸವೂ ಪಂಥವೂ ಪ್ರಣಾಲಿಯೂ ಈ ಭಾವನೆಗಳ ಪರಿಶುದ್ಧತೆಯನ್ನು ಸೋಂಕಿ ಕಲುಷಿತಗೊಳಿಸಲಾರದು. ವೈಯಕ್ತಿಕ ಬದುಕಿನಲ್ಲಿ ಸಿಹಿ - ಕಹಿಗಳೆರಡನ್ನೂ ಸಮನಾಗಿ ಉಂಡು, ಅನೇಕ ಧೃತಿಗೆಡಿಸುವ ಪ್ರಸಂಗಗಳನ್ನು ಸಮಚಿತ್ತದಿಂದ, ಆತ್ಮವಿಶ್ವಾಸದಿಂದ ನಿರಂಜನರು ಎದುರಿಸಿದ ಬಗೆಯನ್ನು ನಾನು ಕಂಡಿದ್ದೇನೆ. ಮೌನವಾಗಿ ಪ್ರಶಂಸಿಸಿದ್ದೇನೆ. ಅವರ ಸ್ಥಿತಪ್ರಜ್ಞತೆಯನ್ನೂ ಮನೋದಾರ್ಢ್ಯವನ್ನೂ ನಾನು ಯಾವಾಗಲೂ ಮೆಚ್ಚಿದ್ದೇನೆ.

ಇದರೊಂದಿಗೆ, ನಿರಂಜನರ ವ್ಯಕ್ತಿತ್ವದಲ್ಲಿ ನನಗೆ ಮೆಚ್ಚಿಕೆಯಾದ ಮತ್ತೊಂದು ಅಂಶವೆಂದರೆ ಅವರ ಆಳವಾದ ಓದು ಮತ್ತು ಆ ಮೂಲಕ ಅವರಿಗೆ ಸಿದ್ಧಿಸಿದ ಪಾಂಡಿತ್ಯ. ಸಾಹಿತ್ಯವಷ್ಟೇ ಅಲ್ಲದೆ ದೇಶವಿದೇಶಗಳ ಇತಿಹಾಸ, ಭೂಗೋಲ, ಧರ್ಮಶಾಸ್ತ್ರ, ರಾಜ್ಯಶಾಸ್ತ್ರ ಹಾಗೂ ವಿಜ್ಞಾನದಲ್ಲಿ ಸಹ, ಅವರಿಗಿರುವ ಜ್ಞಾನಸಂಪತ್ತು ಬೆರಗುಗೊಳಿಸುವಂತಹದು. ಅವರಷ್ಟು ಓದಿದ ಹಾಗೂ ಓದುತ್ತಲೇ ಇರುವ ಲೇಖಕರನ್ನು ಆ ತಲೆಮಾರಿನವರಲ್ಲಿ ನಾನು ಬಹಳ ಕಡಿಮೆ ಕಂಡಿದ್ದೇನೆ.

ನಿರಂಜನರಿಗೆ ಹೆಂಡತಿ - ಮಕ್ಕಳ ಬಗೆಗಿರುವ ಅನ್ಯೋನ್ಯ ಪ್ರೀತಿಯನ್ನೂ ನಾನು ಮೆಚ್ಚಿದ್ದೇನೆ. ನಾನು ತಿಳಿದಂತೆ ಇಂಥ ಅನ್ಯೋನ್ಯತೆ ಹಾಗೂ ಪರಿಪೂರ್ಣ ತಿಳುವಳಿಕೆ ಬಹಳಷ್ಟು ಲೇಖಕರ ಸಂಸಾರಗಳಲ್ಲಿ ಅಪರೂಪವಾದದ್ದು.

ನಿರಂಜನರ ಜೀವನೋತ್ಸಾಹ ನಿಜವಾಗಿ ಅದ್ಭುತವಾದದ್ದು. ಅನೇಕ ಕಾರಣಗಳಿಂದ ತಮಗೆ ಹತ್ತಿರವಾದ ವ್ಯಕ್ತಿಗಳನ್ನು ಅವರು ಪ್ರೀತಿಸುವ ಬಗೆಯೂ ಅಷ್ಟೇ ಅದ್ಭುತವಾದದ್ದು. ಮನುಷ್ಯರನ್ನು ಪ್ರೀತಿಸುವ ಈ ಗುಣ ಈಗಿನ ದಿನಗಳಲ್ಲಿ ದುರ್ಲಭವಾದುದು. ಅಸಹ್ಯವಾದ ಬದುಕನ್ನು ಬಹುಮಟ್ಟಿಗೆ ಸಹ್ಯವನ್ನಾಗಿ, ಸುಂದರವನ್ನಾಗಿ ಮಾಡುವ ಶಕ್ತಿ ಈ ಗುಣಕ್ಕಿದೆ. ನಿರಂಜನರ ಈ ಗುಣ ನನಗೆ ತುಂಬ ಪ್ರಿಯ.

○

ತುಂಬಾ ಒಳ್ಳೆಯವರು

-ವರದಾ ಶ್ರೀನಿವಾಸ

ನನ್ನ ತಂದೆ ದಿ। ಪಿ. ಕೆ. ನಾರಾಯಣ ಹಾಗೂ ನಿರಂಜನ ಆತ್ಮೀಯ ಸ್ನೇಹಿತರು. ತಂದೆಯವರಿಗೂ ನಿರಂಜನರಿಗೂ ವಯಸ್ಸಿನಲ್ಲಿ ಒಂದು ದಶಕದ ಅಂತರ. ಆತ್ಮೀಯತೆಗೆ ಈ ಅಂತರ ಯಾವತ್ತೂ ಯಾವುದೇ ಆತಂಕ ಉಂಟುಮಾಡಿರಲಿಲ್ಲ. ಅವರ ಸ್ನೇಹ ಒಂದೆರಡು ವರ್ಷಗಳ ಸ್ನೇಹ ಅಲ್ಲ, ಒಂದೆರಡು ದಶಕಗಳ ಸ್ನೇಹ ಅಲ್ಲ, ಐದು ದಶಕಗಳ - ಅರ್ಧ ಶತಮಾನದ - ದೀರ್ಘ ಸ್ನೇಹ! ತಂದೆಯವರು ದಿವಂಗತ ರಾದಾಗ ಅವರ ಬಗ್ಗೆ ಪರಿಚಯ ಪುಸ್ತಕವೊಂದನ್ನು ತರುವ ಉದ್ದೇಶದಿಂದ ಅವರ ಕೃತಿ, ಹಸ್ತಪ್ರತಿಗಳೆಲ್ಲವನ್ನು ತಂದಾಗ, 'ಪ್ರಗತಿಪಂಥ' ಎಂದು ದಪ್ಪ ಅಕ್ಷರಗಳಲ್ಲಿ ಬರೆದ 'ದೊಡ್ಡ' ಕವರನ್ನು ಬಿಡಿಸಿ ನೋಡಿದಾಗ 'ನಿರಂಜನರು ಆತ್ಮೀಯ ಪಿ. ಕೆ. ಗೆ' ಬರೆದ ಪತ್ರಗಳು, ಪ್ರಗತಿಪಂಥ ಸಮ್ಮೇಳನ - ಸಭೆಗಳ ದಾಖಲೆಗಳು, ಅದಕ್ಕೆ ಸಂಬಂಧಿಸಿದಂತೆ ಬರೆದ ಪತ್ರಗಳು - ಇತ್ಯಾದಿ ದೊರೆಯಿತು. 'ಕುಳುಕುಂದ ಶಿವರಾಯ' ಲೆಟರ್‌ಹೆಡ್‌ನ 25-6-'45ನೇ ದಿನಾಂಕದ ಎಂಟು ಪುಟಗಳ, ದೀರ್ಘಪತ್ರ, ಅತ್ಯಂತ ಹಳೆಯಪತ್ರ !

'ನಿರಂಜನ' ಅವರ ಮಾತಿನ ಪ್ರಕಾರ, "ಪಿ.ಕೆ., ಬಿ. ಶಂಕರಭಟ್ಟ, ನಾನು ಮತ್ತು ಕೆಲವರು ಒಂದೇ ಜೀವ ಎನ್ನುವಂತಿದ್ದೆವು ....ಪಿ.ಕೆ.ಯವರ ನೆನಪಾದಾಗಲೆಲ್ಲ ಆ ಸದ್ಗುಣಸಂಪನ್ನ ಇನ್ನಿಲ್ಲವೆಂದು ಖಿನ್ನನಾಗುತ್ತೇನೆ. ಆದರೆ ಮರುಕ್ಷಣವೇ ಅಂಥವರೂ ಈ ನಾಡಿನಲ್ಲಿದ್ದರು, ಅವರ ಸಾಹಚರ್ಯ ನನಗಿತ್ತು - ಎಂದು ಹೆಮ್ಮೆ ಪಡುತ್ತೇನೆ........"

ತಂದೆಯವರು ಇದ್ದಿದ್ದರೆ ಈ ಲೇಖನ ಅವರು ಬರೆಯಬೇಕಾಗಿತ್ತು. ಇಂದು ಅವರಿಲ್ಲ. ಆದರೆ ಅವರಿಂದಾಗಿ ನನಗೆ ಅವರ ಸಾಹಿತಿಮಿತ್ರರ, ಆತ್ಮೀಯರ ಸಾಹಚರ್ಯ ದೊರೆತಿರುವುದು ನನ್ನ ಭಾಗ್ಯವಿಶೇಷ ಅಂತ ಅಂದುಕೊಂಡಿದ್ದೇನೆ. ಈ ಲೇಖನದ ಅವಕಾಶವೂ ಅಷ್ಟೆ !

ತಂದೆಯವರು ಕನ್ನಡಪಂಡಿತರಷ್ಟೇ ಅಲ್ಲ; ಸಾಹಿತಿ, ಪತ್ರಿಕೋದ್ಯಮಿ, ಕನ್ನಡಾಭಿಮಾನಿ, ಗಾಂಧಿವಾದಿ, ಸಮಾಜಸೇವಾಕಾರ್ಯಕರ್ತ ಆಗಿದ್ದುದರಿಂದ ಆಯಾ ವಲಯದ ಸ್ನೇಹಿತರು ಆಗಾಗ್ಗೆ ನಮ್ಮಮನೆಗೆ ಬರುತಿದ್ದುದು ಚೆನ್ನಾಗಿ ನೆನಪಿದೆ. ನನಗಾಗ ಹತ್ತು - ಹನ್ನೆರಡು ವರ್ಷವಿರಬಹುದೇನೋ. ಮುದ್ದಣನನ್ನು ಕಣ್ಣಾರೆ ಕಂಡ ಹುರುಳಿ ಭೀಮರಾಯರನ್ನು, (ಹೆಸರು 'ಭೀಮ', ಆದರೆ ಬಹು ಸಣಕಲ ವ್ಯಕ್ತಿ)

ಸಾಹಿತಿ - ವ್ಯಂಗ್ಯ ಬರೆಹಗಾರ ಪಡುಕೋಣೆ ರಮಾನಂದ ರಾಯರನ್ನು ತಂದೆಯವರ ಜತೆಯಲ್ಲಿ ಕಂಡಿದ್ದೇನೆ. ಗೋವಿಂದ ಪೈ, ಪಂಜೆಯವರು, ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣ ಭಟ್ಟ, ಕಡೆಂಗೋಡ್ಲು ಶಂಕರ ಭಟ್ಟ, ಶಿವರಾಮ ಕಾರಂತ ಮೊದಲಾದವರ ಹೆಸರುಗಳು ನನ್ನ ಕಿವಿಗೆ ಬೀಳುತ್ತಿದ್ದುವು. ಇವರೆಲ್ಲ ಪುಸ್ತಕ ಬರೆಯುವವರು, ಪದ್ಯ ಬರೆಯುವವರೆಂದು ತಂದೆಯವರಿಂದ ಕೇಳಿ ತಿಳಿದುಕೊಂಡಿದ್ದೆ. ಆ ಪಟ್ಟಿಯಲ್ಲಿ 'ನಿರಂಜನ' ಹೆಸರೂ ಆ ತರುವಾಯ ಕೇಳಿ ಬರತೊಡಗಿತು. ಜತೆಯಲ್ಲಿ ಕಯ್ಯಾರ ಕಿಂಞಣ್ಣ ರೈ, ಅಮ್ಮೆಂಬಳ ಶಂಕರನಾರಾಯಣ, ಇದಿನಬ್ಬ, ತೆಕ್ಕುಂಜ ಗೋಪಾಲ ಕೃಷ್ಣ ಭಟ್ಟ, ಜಿ.ಪಿ. ರಾಜರತ್ನಂ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ವಿ. ಪರಮೇಶ್ವರ ಭಟ್ಟ, ಬಿ.ಶಂಕರ ಭಟ್ಟ, ಬಿ.ಈಶ್ವರ ಭಟ್ಟ, ರಾ.ಮೊ. ವಿಶ್ವಾಮಿತ್ರ, ಬಿ.ವಿ. ಬಾಳಿಗ....ಹೀಗೆ ಎಷ್ಟೋ ಸಾಹಿತಿ - ಕವಿಗಳ ಹೆಸರು ಕಿವಿಗೆ ಬೀಳುತಿತ್ತು. ಕೆಲವೊಮ್ಮೆ ಕೆಲವರ ದರ್ಶನವೂ ಆಗುತ್ತಿತ್ತು.

ಇಲ್ಲಿ ಹೆಸರಿಸಿದ ಪಂಜೆ, ಗೋವಿಂದ ಪೈ, ಮುಳಿಯರನ್ನು ಬಿಟ್ಟರೆ ಉಳಿದವರೆಲ್ಲರನ್ನು ತಂದೆಯವರ ಜತೆ ಧರ್ಮಸ್ಥಳದ ಧರ್ಮಸಮ್ಮೇಳನಗಳಲ್ಲಿ, ಇತರ ಸಾಹಿತ್ಯ ಸಮ್ಮೇಳನ, ಸಭೆಗಳಲ್ಲಿ ಕಂಡಿದ್ದೇನೆ. ತಂದೆಯವರ - ಅವರ ಸ್ನೇಹ - ಪತ್ರವ್ಯವಹಾರವನ್ನೂ ನೋಡಿದ್ದೇನೆ.

ನಿರಂಜನರ ಬಗ್ಗೆ ತಂದೆಯವರ ಜತೆ ಅಮ್ಮನೂ ಆಗಾಗ್ಗೆ ಹಲವಾರು ವಿಷಯ ಹೇಳುತ್ತಿದ್ದುದು ನನಗೆ ನೆನಪಿದೆ. ಆ ಕುರಿತು ನೆನಪನ್ನು ಜಾಲಾಡಿದಾಗ ಆಗ ಅಚ್ಚೊತ್ತಿದ್ದ ವಿಷಯಗಳು ಈ ಲೇಖನಿಯಲ್ಲಿ ಹರಿದು ಬರುತ್ತಿವೆ.

ನಾವಾಗ ಮಂಗಳೂರಿನ 'ಕರಂಗಲ್ಪಾಡಿ' ಎಂಬಲ್ಲಿ ಒಂದು ಸಾಧಾರಣ ಮನೆಯಲ್ಲಿದ್ದೆವು. ನಾನು ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದೆ. ಅಂದರೆ ಇಸವಿ ೧೯೫೮ ಇರಬಹುದು. ತಂದೆಯವರು ಒಂದು ದಿನ ಬಂದವರು ಸಂಭ್ರಮದಿಂದ ಹೇಳಿದರು - "ನಾಳೆ ನಮ್ಮನೆಗೆ ನಿರಂಜನ ಮತ್ತು ಅವರ ಹೆಂಡತಿ ಅನುಪಮಾ ಬರ್‍ತಾರೆ."

ನಾಳೆ ಬಂತು. ತಂದೆ ತಾಯಿಯರ ಸಂಭ್ರಮ ಕಂಡು ಮಕ್ಕಳಾದ ನಮಗೂ ಸಂಭ್ರಮ. ನಿರಂಜನ ದಂಪತಿಗಳು ಮನೆಗೆ ಬಂದರು. ಆಕರ್ಷಕ ವ್ಯಕ್ತಿತ್ವದ ಯುವಕ ನಿರಂಜನ! ಜತೆಯಲ್ಲಿ ತೆಳ್ಳಗೆ ಬಳುಕುವ ಅನುಪಮಾ! ಮನೆಯ ಹಾಲಿನಲ್ಲಿ ಸುರುಳಿ ಸುತ್ತಿ ಒಂದರ ಮೇಲೊಂದು ಇರಿಸಿದ ಹಾಸಿಗೆಗಳಿಗೊರಗಿ ಅನುಪಮಾ ಅವರು ನಿಂತ ಭಂಗಿ, ತಂದೆಯವರು - ನಿರಂಜನರು ಮಾತನಾಡುತ್ತ ನಿಂತ ನಿಲುವು - ಈಗಲೂ ಕಣ್ಣ ಮುಂದೆ ಕಟ್ಟಿದಂತಿದೆ.

ನಿರಂಜನ ದಂಪತಿಗಳು ಬಂದು ಹೋದ ಮೇಲೆ ಅವರ ಬಗ್ಗೆ ನಾನು ತಂದೆಯವರನ್ನು ವಿಚಾರಿಸಿದೆ. ತಂದೆಯವರು ಹೇಳುವಷ್ಟರಲ್ಲಿ ಅಮ್ಮನೇ ಮೊದಲು ಹೇಳಿದರು - "ಅವರು ನಿರಂಜನ. ಕಾದಂಬರಿ ಬರೀತಾರೆ. ನಮ್ಮ ಮದುವೆಯಾದ ಹೊಸದರಲ್ಲಿ ಮಂಗಳೂರಲ್ಲೇ ಇದ್ದರು. ನಮ್ಮ ಮೊದಲ ಮಗು 'ವಿಜಯಾ' ತೀರಿ ಹೋಗುವಾಗ ನಮ್ಮ ಮನೆಯಲ್ಲೇ ಇದ್ದರು. (ಅಮ್ಮನ ಕಣ್ಣಲ್ಲಿ ನೀರು.) ತುಂಬಾ ಒಳ್ಳೆಯವರು. 'ಕಮ್ಯೂನಿಸ್ಟ್' ಆಗಿ ಪೋಲಿಸರ ಕಣ್ಣು ತಪ್ಪಿಸಿ ಓಡಾಡುವ ಸಮಯ ದಲ್ಲಿ ಒಮ್ಮೊಮ್ಮೆ ನಮ್ಮಲ್ಲೇ ಇರುತ್ತಿದ್ದರು. ಏನಾದರೂ ಶೀತ ಆದರೆ 'ಸುಂದಕ್ಕಾ, ಒಂದು ಗ್ಲಾಸು ಕಷಾಯ ಮಾಡಿಕೊಡಿ' ಅಂತ ಹೇಳುತ್ತಿದ್ದರು."

ಆಗ ತಂದೆಯವರು ಹೇಳಿದರು - "ಕುಳುಕುಂದ ಶಿವರಾಯ ಅವರ ನಿಜವಾದ ಹೆಸರು. ಇಬ್ಬರು ಶಿವರಾಯರನ್ನು ಕಂಡರೆ ನನಗೆ ತುಂಬಾ ಇಷ್ಟ. ಒಬ್ಬರು ಮೊಳಹಳ್ಳಿ ಶಿವರಾಯರು! ಇನ್ನೊಬ್ಬರು ಕುಳುಕುಂದ ಶಿವರಾಯರು! ಇರುಳು ಶಾಲೆಯಿಂದ ಹಗಲು ಶಾಲೆಗೆ ಸೇರಿಸಿ ನನ್ನ ಜೀವನದಲ್ಲಿ ಬೆಳಕನ್ನುಂಟುಮಾಡಿದವರು ಮೊದಲನೆಯವರಾದರೆ, ಪತ್ರಿಕೋದ್ಯಮಿಯಾಗಿ ಆ ಕ್ಷೇತ್ರದಲ್ಲಿ ಹೆಸರು ಪಡೆಯಲು ನೆರವಾದವರು ಕುಳುಕುಂದ ಶಿವರಾಯರು! ಶಿವರಾಯರು ಬೆಂಗಳೂರಿಗೆ ಹೋಗುವ ಮೊದಲು 'ರಾಷ್ಟ್ರಬಂಧು', 'ನವಭಾರತ', 'ಸಂಯುಕ್ತ ಕರ್ನಾಟಕ'ಗಳ ಸುದ್ದಿಗಾರ ಪ್ರತಿನಿಧಿಯಾಗಿದ್ದರು. ಬೆಂಗಳೂರಿಗೆ ಹೋಗುವಾಗ ಆ ಕಾರ್ಯವನ್ನು ನನಗೊಪ್ಪಿಸಿ ದರು."

ಆ ತರುವಾಯ ನಾನು ನಿರಂಜನರನ್ನು ನೋಡಲೇ ಇಲ್ಲ. ಆದರೆ ತಂದೆ ಯವರು ಎಸ್. ಎಸ್. ಎಲ್. ಸಿ.ಯ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಹೋದಾಗಲೆಲ್ಲ, ಸಾಹಿತ್ಯ ಪರಿಷತ್ತಿನ ಸಭೆಗಳಿಗೆ ಬಂದಾಗಲೆಲ್ಲ ನಿರಂಜನರನ್ನು ಭೇಟಿ ಮಾಡುತ್ತಿದ್ದರು. ಪರಸ್ಪರ ಪತ್ರ ವ್ಯವಹಾರ ನಡೆಯುತ್ತಿತ್ತು. ಅವರ ಕುರಿತು ಒಟ್ಟು ಕುಳಿತು ಮಾತನಾಡುವಾಗಲೆಲ್ಲ ಹೇಳುತ್ತಿದ್ದರು.

ನಾನಾಗ ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದೆ. ತಂದೆಯವರಿಗೆ ಯಾವುದೋ ಪುಸ್ತಕ ಹುಡುಕಿ ಕೊಡಬೇಕಾಗಿತ್ತು. ಹಾಗೆ ಹುಡುಕುವಾಗ ನಿರಂಜನರ 'ಬನಶಂಕರಿ' - ಸಾಮಾಜಿಕ ಕಾದಂಬರಿ ನನಗೆ ಸಿಕ್ಕಿತು. ಸಾಮಾನ್ಯ ವಾಗಿ ತಂದೆಯವರು ಆಗ ನಮಗೆ ಹೇಳುತ್ತಿದ್ದ ಮಾತು - "ಹೈಸ್ಕೂಲು ಮುಗಿಸುವ ವರೆಗೆ ಸಾಮಾಜಿಕ ಕಾದಂಬರಿಗಳನ್ನು ಓದಬೇಡಿ. ಐತಿಹಾಸಿಕ ಕಾದಂಬರಿಗಳನ್ನು ಮಾತ್ರ ಓದಿ." ನಾನಾದರೋ ಶಾಲೆಯ ಗ್ರಂಥಭಂಡಾರದ ಐತಿಹಾಸಿಕ ಕಾದಂಬರಿ ಗಳನ್ನೆಲ್ಲ ಓದಿ ಮುಗಿಸಿದ್ದೆ. ಈಗ 'ಬನಶಂಕರಿ' ಕೈಗೆ ಸಿಕ್ಕಿದಾಗ ಓದಬೇಕೆಂಬ

ಆಸೆಯಾಯಿತು. ಪುಸ್ತಕ ಹುಡುಕುವುದನ್ನು ಬಿಟ್ಟು ಓದತೊಡಗಿದೆ. ಅದರಲ್ಲೇ ಮಗ್ನಳಾದೆ. ಅಮ್ಮಿ ಬಾಲ ವಿಧವೆಯಾದಳೆಂದು ಅತ್ತೆ. ರಾಮಾ ಶಾಸ್ತ್ರಿ ದಂಪತಿಗಳು ಅವಳಿಗೆ ಸಹಾಯ ಮಾಡಿದಾಗ ಸಮಾಧಾನವಾಯಿತು. ಬರಡಾದ ಅವಳ ಜೀವನ ನಾರಾಯಣ ರಾಯರಿಂದ ಚಿಗುರಿದಾಗ, ಮಕ್ಕಳ ತಾಯಿಯಾಗಿ ಆಕೆ ಸುಖಪಟ್ಟಾಗ, ಕೊನೆಗೆ ಬಹಿಷ್ಕಾರ ಹಾಕುವ ಸಂದರ್ಭದಲ್ಲಿ ಮಮತಾಮಯಿ ತಾಯಿಯಾಗಿ, ಮಕ್ಕಳೇ ಸರ್ವಸ್ವವೆಂದು ಊರು ಬಿಟ್ಟು ಹೋಗುವಾಗ-ಅಳು-ಸಮಾಧಾನ-ಅಳು - ಸಮಾಧಾನ - ಹೀಗೆ ಭಾವನೆಗಳ ಅಲೆಯಲ್ಲಿ ನನ್ನನ್ನೇ ನಾನು ಮರೆತೆ. ನಾನು ಓದಿದ ಮೊತ್ತಮೊದಲ ಸಾಮಾಜಿಕ ಕಾದಂಬರಿ ನನ್ನ ಮೇಲೆ ತುಂಬಾ ಪರಿಣಾಮ ಬೀರಿತ್ತು. ತಂದೆಯವರು ಪುಸ್ತಕಕ್ಕಾಗಿ ಬಂದವರು ನನ್ನ ಕೈಲಿದ್ದ 'ಬನಶಂಕರಿ'ಯನ್ನು ನೋಡಿದರು. ಏನೂ ಮಾತನಾಡಲಿಲ್ಲ. ಆಮೇಲಿಂದ ಸಾಮಾಜಿಕ ಕಾದಂಬರಿ ಓದಲು ನನಗೆ ಅನುಮತಿ ಸಿಕ್ಕಿತು. ತರುವಾಯ ಮನೆಯಲ್ಲಿದ್ದ ನಿರಂಜನರ ಕಾದಂಬರಿಗಳನ್ನೆಲ್ಲ ಓದಿ ಮುಗಿಸಿದೆ. ಪ್ರಗತಿಶೀಲ ಕಾದಂಬರಿಕಾರರ ಪೈಕಿ ನಾನು ಹೆಚ್ಚು ಇಷ್ಟಪಟ್ಟ ಕಾದಂಬರಿಕಾರರೆಂದರೆ ನಿರಂಜನ ಹಾಗೂ ತ.ರಾ.ಸು. ಇಬ್ಬರೇ.

೧೯೭೦ರಲ್ಲಿ-ನಾವಾಗಲೇ ಮಂಗಳೂರಿನಲ್ಲಿ ಲಾಲ್‌ಬಾಗಿನಲ್ಲಿರುವ, ಮೊದಲಿಗಿಂತ ಸ್ವಲ್ಪ ದೊಡ್ಡದಾದ ಮನೆಗೆ ಬಂದಿದ್ದೆವು - ನಿರಂಜನರಿಗೆ ಪಾರ್ಶ್ವವಾಯು ಉಂಟಾದಾಗ ತಂದೆಯವರಿಗೆ ಸುದ್ದಿ ಬಂದಿತ್ತು. ವಿಷಯ ಹೇಳುವಾಗ ತಂದೆಯವರ ಕಣ್ಣಲ್ಲಿ ನೀರು ತುಳುಕಿ ಅಂಚಿನಿಂದ ಇಳಿಯತೊಡಗಿತ್ತು. ಕಂಠ ಗದ್ಗದವಾಗಿತ್ತು. (ತಂದೆಯವರದು ತುಂಬಾ ಮೃದುಮನಸ್ಸು.) 'ನೋಡಲು ಹೋಗುತ್ತಿದ್ದೇನೆ' ಎಂದವರು ಮೈಸೂರಿಗೆ ಹೊರಟರು.

ತಂದೆಯವರು ಹಿಂತಿರುಗುವ ವರೆಗೂ ನಮಗೆಲ್ಲರಿಗೂ ಸಮೀಪದ ಬಂಧುವೊಬ್ಬರಿಗೆ ಅನಾರೋಗ್ಯವೆಂಬಂಥ ಭಾವ! ಬಂದ ಮೇಲೆ ಅಪಾಯದ ಗೆರೆ ದಾಟಿದ್ದಾರೆಂದು ತಿಳಿದಾಗ ಎಲ್ಲರಿಗೂ ಸಮಾಧಾನ! ನಿರಂಜನರ ಕುರಿತು ತಂದೆಯವರು ಹೇಳತೊಡಗಿದರು - "ಪ್ರಗತಿಶೀಲ ಸಾಹಿತಿಯಾಗಿ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ತಂದುಕೊಟ್ಟವರು. ಅವರಿಂದ ಕನ್ನಡ ಸಾಹಿತ್ಯಕ್ಕೆ ಇನ್ನೂ ಸೇವೆ ಸಲ್ಲಬೇಕಾಗಿದೆ. ಗಟ್ಟಿಮನಸ್ಸಿನ ಆತ್ಮವಿಶ್ವಾಸದ ವ್ಯಕ್ತಿ ಅವರು."

ನಾನಾಗ ಕನ್ನಡ ಎಂ. ಎ. ಮೊದಲ ವರ್ಷದ ವಿದ್ಯಾರ್ಥಿನಿಯಾಗಿದ್ದೆ-ಸಾಹಿತ್ಯ ನವೋದಯದಿಂದ ನವ್ಯದೆಡೆಗೆ ಅಡಿಯಿಡುತ್ತಿದ್ದ ಕಾಲ. ಹೊಸದೆಲ್ಲವನ್ನೂ ಓದುವ ಹುಮ್ಮಸ್ಸು. ಆದರೆ ನಿರಂಜನ ಸಾಹಿತ್ಯದ ಬಗ್ಗೆ ಅಪಾರ ಅಭಿಮಾನ. ಆ ಮಧ್ಯೆ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಜ್ಞಾನಗಂಗೋತ್ರಿ'ಯ ಕೆಲವು ಸಂಪುಟಗಳು

ಬಿಡುಗಡೆಯಾಗಿದ್ದುವು. ಅವುಗಳಲ್ಲಿ ತಂದೆಯವರ ಲೇಖನವೂ ಇತ್ತು. ಅದರ ಪ್ರತಿಗಳು ನಮ್ಮ ಮನೆಗೂ ಬಂದಿದ್ದವು. ಅನಾರೋಗ್ಯದಿಂದಿದ್ದರೂ ಅವರ ಆತ್ಮ ವಿಶ್ವಾಸದ ಮೇಲಿನ ನಂಬಿಕೆ, ಕಾರ್ಯತತ್ಪರತೆ ನನ್ನನ್ನು ಬೆರಗುಗೊಳಿಸಿತ್ತು.

ಸಾಹಿತ್ಯದ ಅಭ್ಯಾಸಿಯಾದ ತರುವಾಯ ನಿರಂಜನರನ್ನು ಹತ್ತಿರದಿಂದ ನೋಡುವ ಅವಕಾಶ ಲಭಿಸಿದ್ದು ೧೯೭೭ರಲ್ಲಿ; ಮದುವೆಯಾದ ತರುವಾಯ ಬೆಂಗಳೂರಿಗೆ ಬಂದಾಗ. ತಂದೆಯವರ ಜತೆಯಲ್ಲಿ ನಾವು ದಂಪತಿಗಳು ನಿರಂಜನರಲ್ಲಿಗೆ ಹೋಗಿದ್ದೆವು. ೧೮ ವರ್ಷಗಳ ತರುವಾಯ ಅವರನ್ನು ಕಂಡೆ. ಗಂಭೀರವಾದ ನಿಲುವು. ಗಂಭೀರವಾದ ಮಾತು. ಆದರೂ ಮೃದು ಮಂದಹಾಸ ಸೂಸುವ ಮುಖ. ಮಾತನಾಡುತ್ತ ಹೋದಂತೆ ಆತ್ಮೀಯತೆ. ಸರಳವಾದ ನೇರವಾದ ಮಾತು. ಬದುಕಿನಲ್ಲಿ ಅನಾರೋಗ್ಯ ಕಾಡಿದ್ದರೂ ವಿಷಾದರಹಿತ ನಿರ್ಲಿಪ್ತತೆಯ ಜತೆಯಲ್ಲಿ ಸೂಕ್ಷ್ಮವನ್ನು ಗ್ರಹಿಸುವ ತೀಕ್ಷ್ಣವಾದ ಕಣ್ಣುಗಳು.

ಈಗ ಹನ್ನೆರಡು ವರ್ಷಗಳಿಂದ ಅವರನ್ನು ಭೇಟಿ ಮಾಡುತ್ತಿದ್ದೇನೆ. ಆಗೆಲ್ಲ ಈ ಧೀಮಂತ ವ್ಯಕ್ತಿತ್ವದ ಕುರಿತು ವಿಸ್ಮಯ ಬೆರಗು - ಗೌರವ ಹೆಚ್ಚುತ್ತಲೇ ಇದೆ.

ಪಾರ್ಶ್ವವಾಯು ಉಂಟಾದರೂ ಚೈತನ್ಯಕ್ಕೆ ಭಂಗ ಉಂಟಾಯಿತೇ? ಇಲ್ಲ! ಆತ್ಮವಿಶ್ವಾಸಕ್ಕೆ ಆಘಾತವಾಯಿತೇ? - ಇಲ್ಲ! ಅವಿರತ ಅಭ್ಯಾಸ - ಬರವಣಿಗೆ ನಿಲ್ಲಲಿಲ್ಲ. ಚಿಲುಮೆ ಬತ್ತಲಿಲ್ಲ. ಅದುವೇ ನಿರಂಜನ!

ಜಾತ್ಯತೀತ ವ್ಯಕ್ತಿಯಾಗಿ, ಮಹಾಮಾನವನಾಗಿ, ಹೋರಾಟದ ಬದುಕಿನಲ್ಲಿ ಯಶಸ್ವೀ ಹೋರಾಟಗಾರನಾಗಿ, ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಆಯಾಮಗಳ ಕರ್ತಾರನಾಗಿ, ಉಳಿದೆಲ್ಲ ಪ್ರಶಸ್ತಿಗಳ ಜತೆಯಲ್ಲಿ ಕನ್ನಡ ಸಾಹಿತ್ಯಪರಿಷತ್ತಿನ ಗೌರವ ಸದಸ್ಯತ್ವ ಪಡೆದ ನಿರಂಜನರದು ಮಹಾನ್‌ಚೇತನ. ○

ಪ್ರಭಾವಿ ವ್ಯಕ್ತಿತ್ವ

–ನಾ. ಡಿಸೋಜ

ನಾನು ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಚಿತ್ರಗುಪ್ತ ಹಾಗೂ ಜನಪ್ರಗತಿಗಳ ಅಭಿಮಾನಿಯಾಗಿದ್ದವ. ಈ ಪತ್ರಿಕೆಗಳ 'ಐದು ನಿಮಿಷ' ಹಾಗೂ 'ಸಾಧನ ಸಂಚಯ' ಅಂಕಣಗಳು ನನಗಂತೂ ತುಂಬಾ ಅಚ್ಚುಮೆಚ್ಚು. ಈ ಲೇಖನಗಳ ವಸ್ತು ವೈವಿಧ್ಯ, ಸರಳತೆ, ದೀನದಲಿತರ ಬಗ್ಗೆ ಲೇಖಕರ ಕಕುಲಾತಿ ಇತ್ಯಾದಿ ಅಂಶಗಳಿಗೆ ಮಾರುಹೋಗಿದ್ದೆ. ನಿರಂಜನರ ಕತೆಗಳು, ಕಾದಂಬರಿಗಳು, ಗಾರ್ಕಿಯ 'ತಾಯಿ'ಯ ಅನುವಾದ ಇತ್ಯಾದಿಗಳನ್ನು ಒಂದಲ್ಲ ಹಲವು ಬಾರಿ ಓದಿದೆ. ಎಂದಿನಂತೆ ವಸ್ತುವಿನಲ್ಲಿ ನಾವೀನ್ಯ, ಕೆಲವೇ ಶಬ್ದಗಳ ಮೂಲಕ ಕಟ್ಟಿನಿಲ್ಲಿಸುವ ವ್ಯಕ್ತಿಚಿತ್ರಣ, ಘಟನೆಗಳು, ಜೀವನದ ಬಗ್ಗೆ ಆಸಕ್ತಿ ಉತ್ಸಾಹ ಕೆರಳಿಸುವ ಕೃತಿಗಳ ಒಟ್ಟರ್ಥ ಇವೆಲ್ಲ ನನ್ನನ್ನು ಸೆರೆಹಿಡಿದವು. ಆ ಸಮಯದಲ್ಲಿ ಪರ್ಲ್‌ಬಕ್‌ಳ ಕೆಲವು ಕಾದಂಬರಿಗಳನ್ನು ಓದಿ ಮೆಚ್ಚಿಕೊಂಡ ನಾನು ನಿರಂಜನರ ಕೃತಿಗಳನ್ನು ಅದೇ ಕಾರಣಕ್ಕಾಗಿ ಓದುತ್ತಿದ್ದೆ. ಪರ್ಲ್‌ಬಕ್ಕಳ 'ಗುಡ್ ಅರ್ತ್', 'ಗಾಡ್ಸಮನ್'ಗಳನ್ನು ಮೂರು ನಾಲ್ಕು ಬಾರಿ ಓದಿದ್ದೆ. ನಿರಂಜನರ 'ವಿಮೋಚನೆ', 'ಚಿರಸ್ಮರಣೆ', 'ತಾಯಿ'ಯನ್ನು ಕೂಡ.

ಕಾಲೇಜಿಗೆ ಮಣ್ಣು ಹೊತ್ತು ೧೯೫೭ರ ಸುಮಾರಿಗೆ ಮೈಸೂರು ಸೇರಿದ ನನಗೆ ನಿರಂಜನರನ್ನು ದೂರದಿಂದ ನೋಡುವ ಅವಕಾಶ. ಬಿಳಿ ಪ್ಯಾಂಟು, ಬಿಳಿ ಬುಶ್ ಶರಟಿನ ಈ ಎತ್ತರದ ವ್ಯಕ್ತಿ ನನಗೊಂದು ಕೌತುಕ. ಇವರ ಧೀರ ನೇರ ನಡಿಗೆಯ ಬಗ್ಗೆ ನನಗೆ ಅಭಿಮಾನ. ಒಂದಲ್ಲ ಹಲವು ಬಾರಿ ನಿರಂಜನರ ದರ್ಶನ. ಅವರ ಬಳಿ ಹೋಗುವ ಮಾತನಾಡಿಸುವ ಧೈರ್ಯ ನನಗಾಗಲಿಲ್ಲ. ದೂರ ನಿಂತು ನೋಡಿ ರೋಮಾಂಚನಗೊಂಡದ್ದಷ್ಟೆ. ನನಗಿನ್ನೂ ಸ್ಪಷ್ಟ ನೆನಪಿದೆ: ಮೈಸೂರಿನ ದೊಡ್ಡ ಹೋಟೆಲೊಂದರಲ್ಲಿ ನಾನು ಕಾಫಿ ಕುಡಿಯುತ್ತ ಕುಳಿತಾಗ ಮಹಡಿಯಿಂದ ಇಳಿದು ಬಂದರು ನಿರಂಜನ. ಗಲ್ಲದ ಬಳಿ ನಿಂತು ಹಣಕೊಡುವಾಗ ಅವರಿಗೆ ಅಷ್ಟು ದೂರದಲ್ಲಿ ಕೊಂಚ ನಾಚಿ ಅಳುಕಿ ನಿಂತ ಅನುಪಮಾ. ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಕೇವಲ ಓದುಗನಾಗಿಯೇ ಇದ್ದ ನನಗೆ ಈ ದೃಶ್ಯ ಕಂಡದ್ದು ಸುಂದರ ಕಾವ್ಯದ ಹಾಗೆ.

೧೯೫೯ರಲ್ಲಿ ಶರಾವತಿ ಯೋಜನೆಯಲ್ಲಿ ನನಗೆ ಕೆಲಸ ದೊರಕಿತು. ನಾನು ಕಾರ್ಗಲ್ಲಿನಲ್ಲಿದ್ದಾಗಲೇ ಸಂಜೆ ವಾಕಿಂಗ್ ಮುಗಿಸಿಕೊಂಡು ಹಿಂತಿರುಗುವಾಗ ಸಣ್ಣದೊಂದು ಕಾರು ಜೋಗದತ್ತ ಹೋಹುದನ್ನು ಕಂಡೆ. ಪರಿಚಿತ ಮುಖಗಳು. ಯಾರು? ಯಾರು? ಪರದಾಡಿದೆ. ಮಾರನೇ ದಿನ ಗೆಳೆಯ ಮಾವಿನಕೆರೆ ರಂಗನಾಥನ್

ಬಂದರು. ನಿರಂಜನ ಕುಟುಂಬ ಜೋಗಕ್ಕೆ ಬಂದಿದೆ ಎಂಬ ಸುದ್ದಿ. ಮೈ ಪುಳಕ ಗೊಳ್ಳುವ ಸುದ್ದಿಯೇ. ಅಂದು ಸಂಜೆ ನಿರಂಜನರನ್ನು ನಾನು ಭೇಟಿಯಾದದ್ದು ಆಗಿನ್ನೂ ಜೀವಂತವಾಗಿ ಧುಮುಕುತ್ತಿದ್ದ ಜೋಗ ಜಲಪಾತದ ಎದುರಿನ ಪ್ರವಾಸಿ ಮಂದಿರದಲ್ಲಿ. ಮಾತುಕತೆಯ ವಿವರ ನನಗೆ ನೆನಪಿಲ್ಲ. ನನಗೆ ನೆನಪಿರುವುದು ನಿರಂಜನ ಜೋಬಿಗೆ ಪಾಕೆಟ್ ಇರಿಸಿಕೊಂಡು ಹೊರ ಹೊರಟು ನಮಗೆ ಕಾಫಿ ಕುಡಿಸಲು ಮಾಡಿದ ಯತ್ನ. ಆ ಸಮಯದಲ್ಲಿ ಅಲ್ಲಿ ಎಲ್ಲೂ ಕಾಫಿ ಸಿಗಲಿಲ್ಲ. ಹೀಗೆಂದು ನಿರಂಜನ ತುಂಬಾ ನಿಡುಕಾಡಿದರು. ಆದರೆ ನಾನು ? ಅಮೃತವೇ ದೊರೆತಷ್ಟು ಸಂತಸ ನನಗೆ !

ಮತ್ತೆ ನಾನು ನಿರಂಜನರನ್ನು ನೋಡಿದ್ದು ಪುತ್ತೂರಿನ ಪ್ರಗತಿಸಂಘ ಸಮ್ಮೇಳನದಲ್ಲಿ. ಹೋಟೆಲಿನಲ್ಲಿ ರೂಮು ಹಿಡಿದವನೇ ಮುಖ ತೊಳೆದು ನೇರ ನಿರಂಜನರ ಕೊಠಡಿಗೆ ಹೋದೆ. ಅಲ್ಲಿದ್ದವರು ನನ್ನ ಮನಸ್ಸಿನಲ್ಲಿ ತುಂಬಿಕೊಂಡಿದ್ದ ನಿರಂಜನರಾಗಿರಲಿಲ್ಲ. ಕೊಂಚ ಸೋತು ಹೋದ, ಒಂದು ಪಾರ್ಶ್ವ ಕಳೆದುಕೊಂಡ ವ್ಯಕ್ತಿ. ಆದರೆ ನಗೆಯಲ್ಲಿ, ಕಣ್ಣುಗಳಲ್ಲಿ ಸೋಲು ಹತಾಶೆ ಇರಲಿಲ್ಲ. ಸಮ್ಮೇಳನದ ಎರಡೂ ದಿನ ಅವರ ಜತೆ ಕಳೆದೆ. ಅವರ ಭಾಷಣ ಕೇಳಿದೆ. 'ಚಿಮಣಿಎಣ್ಣೆ' ಎಂಬ ಅವರ ಕತೆ ಬ್ರಿಟಿಷರ ಕಾಲದಲ್ಲಿ ಪ್ರಕಟವಾಗಿ ತುರ್ತುಪರಿಸ್ಥಿತಿಯಲ್ಲಿ ಸೆನ್ಸಾರ್ ಆದುದನ್ನು ಕೇಳಿದೆ. ಮುಖ್ಯವಾಗಿ ಅವರು ಕೊರಗಿದ್ದನ್ನು ನರಳಿದ್ದನ್ನು ನಾನು ಗಮನಿಸಲಿಲ್ಲ.

ದೂರದಿಂದ ಈ ವ್ಯಕ್ತಿಯ ಸಾಧನೆ ಗಮನಿಸುತ್ತ ಬೆರಗಾದೆ. ನಿರಂಜನರ ಅದಮ್ಯ ಉತ್ಸಾಹ, ಚೇತನ, ಶ್ರದ್ಧೆ, ಪಟ್ಟುಹಿಡಿದು ಕೆಲಸ ಮಾಡುವ ಛಲ - ಮುಖ್ಯವಾಗಿ ದೇವರು, ಹಣೇಬರಹ ಇತ್ಯಾದಿ ನಂಬದ - ಮಾನವೀಯ ಗುಣ ಇವು ಗಳೆಲ್ಲ ನನ್ನ ಬೆರಗಿಗೆ ಕಾರಣವಾದವು. ಅಷ್ಟೇ ಅಲ್ಲ, ನಾನೂ ಈ ಗುಣಗಳಿಂದ ಪಾಠ ಕಲಿತೆ. ಪ್ರಭಾವಿತನಾದೆ.

ನಾನು ನಿರಂಜನರ ಜತೆ ಹತ್ತಿರದ ಸಂಪರ್ಕವಿರಿಸಿಕೊಂಡವನಲ್ಲ. ನನ್ನದು ಏನಿದ್ದರೂ ಏಕಲವ್ಯನ ಪಾತ್ರ. ಅವರೊಡನೆ ಪತ್ರ ವ್ಯವಹಾರ ಮಾಡಿದ್ದೇನೆ. ಅವರ ಕೆಲ ನಿರ್ಧಾರಗಳ ಬಗ್ಗೆ (ಕಮ್ಯೂನಿಸಂನಲ್ಲಿ ವಿಶ್ವಾಸ ಕಳೆದುಕೊಂಡಿದ್ದೇನೆಂಬ ಹೇಳಿಕೆ) ಯೋಚಿಸಿದ್ದೇನೆ. ಆದರೂ ನಿರಂಜನ ನನಗೆ ಪ್ರಿಯರಾಗಿ ಉಳಿದಿದ್ದಾರೆ. ಆತ್ಮೀಯ ರಾಗಿ ಉಳಿದಿದ್ದಾರೆ. ಶಂಖ ಜಾಗಟೆ ಊದಿಸಿಕೊಂಡು, ತಮ್ಮವೇ ಗುಂಪುಗಳನ್ನು ಕಟ್ಟಿಕೊಂಡು ಏನೇನೋ ಆಗಿರುವ ಹಲವು ಕವಿ ಕಾದಂಬರಿಕಾರ ಲೇಖಕರು ನನಗೆ ನಿರಂಜನರ ಎದುರು ಕ್ಷುಲ್ಲಕರೆನಿಸುತ್ತಾರೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿರಂಜನರ ಕೃತಿಗಳಿಗೆ ಸಲ್ಲಬೇಕಾದ ಗೌರವ ಸಂದಿಲ್ಲವಲ್ಲ ಎಂಬ ಕಾರಣಕ್ಕಾಗಿಯೂ ಅವರು ನನಗೆ ಪ್ರಿಯರಾಗಿದ್ದಾರೆ.

○

ಮರೆಯದ ಮಿತ್ರ

—ಶಂಕರ ಹೆಜ್ಮಾಡಿ

ನಿರಂಜನರ ಪರಿಚಯ ನನಗಾಗುವಾಗ ಅವರು ಕುಳುಕುಂದ ಶಿವರಾಯರಾಗಿದ್ದರು. ಸುಮಾರು ೧೯೪೪ರ ಹೊತ್ತಿಗೆ ಮಂಗಳೂರಿನ ಪ್ರಗತಿಶೀಲ ತರುಣರು ಕ್ರಾಂತಿಕಾರಿ ವಿಚಾರಗಳನ್ನೆತ್ತಿಕೊಂಡು ಚರ್ಚಿಸುತ್ತಿದ್ದ ಸಭೆಯಲ್ಲಿ ಪ್ರಥಮವಾಗಿ ನನಗೆ ಕುಳುಕುಂದ ಶಿವರಾಯರ ಪರಿಚಯವಾಗಿತ್ತು. ಆಗ ನಾನು ಸ್ಟೆಂಟ್ ಅಲೋಶಿಯಸ್ ಕೋಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ಅವರು ಕನ್ನಡ ಪತ್ರಿಕೆಗಳಲ್ಲಿ ತಮ್ಮ ಲೇಖನಗಳನ್ನು ಪ್ರಕಟಿಸುತ್ತಿದ್ದರಲ್ಲದೆ, ಪತ್ರಿಕೋದ್ಯಮಿಯಾಗಿಯೂ ದುಡಿಯುತ್ತಿದ್ದರು. ಇದು ನನ್ನ ಬಾಲ್ಯದ ಪರಿಚಯವೆಂದು ಹೇಳಬಹುದು.

ಮುಂದೆ ನಿರಂಜನರು 'ಕನ್ನಡ ಪ್ರಗತಿಶೀಲ ಲೇಖಕರ ಸಂಘ'ವನ್ನು ಕಟ್ಟಲು ಪ್ರಯತ್ನಿಸುತ್ತಿದ್ದಾಗ ಮುಂಬಯಿಯಲ್ಲಿ ನಮ್ಮಿಬ್ಬರ ಪರಿಚಯವು ಪುನಃ ಮುಂದುವರಿಯಿತು. ಈ ಸಂದರ್ಭದಲ್ಲಿ ಮುಂಬಯಿ ನಗರದ ಅನೇಕ ಲೇಖಕರ ಪರಿಚಯವಾಯಿತಲ್ಲದೆ, ಅವರೆಲ್ಲರ ಸಹಕಾರದಿಂದ ನಾನು 'ಚೇತನ' ಕನ್ನಡ ಪತ್ರಿಕೆಯನ್ನು ಪ್ರಕಟಿಸಲು ಸಾಧ್ಯವಾಯಿತು.

ಕುಳುಕುಂದ ಶಿವರಾಯರು ಮಂಗಳೂರಿನಿಂದ ಬೆಂಗಳೂರಿಗೆ, ಅಲ್ಲಿಂದ ಹುಬ್ಬಳ್ಳಿಗೆ ತಿರುಗಾಡಿ ಕನ್ನಡ ಪತ್ರಿಕೆಗಳಲ್ಲಿ ತಮ್ಮ ವಿಚಾರಸರಣಿಯನ್ನು ವ್ಯಕ್ತಪಡಿಸುತ್ತಾ ಇದ್ದರಲ್ಲದೆ ಕೆಲವು ಕನ್ನಡ ಪತ್ರಿಕೆಗಳಲ್ಲಿ ದುಡಿಯುತ್ತಿದ್ದರು.

ಇದೇ ಜೂನ್ ೧೫, ೧೯೮೩ಕ್ಕೆ ೬೦ ವರ್ಷದ ಜೀವನವನ್ನು ಪೂರ್ಣಗೊಳಿಸಿದ ಕುಳುಕುಂದ ಶಿವರಾಯರು ಕನ್ನಡ ಸಾಹಿತ್ಯದಲ್ಲಿ ಬಹುಮುಖವಾಗಿ ದುಡಿದಿದ್ದಾರೆ-ದುಡಿಯುತ್ತಾ ಇದ್ದಾರೆ. ಲೇಖಕರಾಗಿ, ಪತ್ರಿಕೋದ್ಯಮಿಯಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ವಿಚಾರಶೀಲ ಹಾಗೂ ಪ್ರಗತಿಶೀಲ ಸಾಹಿತ್ಯ ನಿರ್ಮಾಪಕರಾಗಿ ದುಡಿದ ನಿರಂಜನರು ಕನ್ನಡ ಹಾಗೂ ಭಾರತೀಯ ಸಾಹಿತ್ಯದಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಈಗ ಗಳಿಸಿಕೊಂಡಿದ್ದಾರೆ.

ಒಬ್ಬ ಲೇಖಕನು ಯಾಕೆ ಬರೆಯುತ್ತಾನೆ? ಅವನ ಬರವಣಿಗೆಯ ಉದ್ದೇಶವೇನು? ಈ ವಿಚಾರವಾಗಿ ನಿರಂಜನರೇ ತಮ್ಮ ಪ್ರಥಮ ಕಾದಂಬರಿ 'ವಿಮೋಚನೆ'ಯಲ್ಲಿ ಈ ಕೆಳಗಿನ ಸ್ಪಷ್ಟ ಉತ್ತರವಿತ್ತಿದ್ದಾರೆ:

"ಜನ ಯಾಕೆ ಬರೆಯುತ್ತಾರೆ ? ಈ ಪ್ರಪಂಚದಲ್ಲಿ ಪುಸ್ತಕಗಳನ್ನು ಯಾಕೆ ಅಚ್ಚು ಹಾಕುತ್ತಾರೆ ? ತಾನು ಬರೆದುದು ಹತ್ತು ಜನರಿಗೆ ತಿಳಿಯಲಿ ಎಂದಲ್ಲವೆ ? ಸಹಸ್ರ ಜನ ಓದಲಿ ಎಂದಲ್ಲವೆ ? ....ಹೇಳಬೇಕಾದ ಕೆಲವು ವಿಷಯಗಳಿವೆ ನನ್ನಲ್ಲಿ. ಅವುಗಳನ್ನು ನಾನು ಹೇಳಲೇ ಬೇಕು. ಮೂವತ್ತೆಂಟು ವರ್ಷಗಳ ಕಾಲ ನನಗೆ ನೀರು ಗಾಳಿ ಕೊಟ್ಟ ಈ ಲೋಕವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಆ ವಿಷಯಗಳನ್ನು ನಾನು ಬರೆದಿಡಲೇಬೇಕು. ನನ್ನ ಈ ಬರವಣಿಗೆ ಸಾಹಿತ್ಯವಾಗದೇ ಹೋಗಬಹುದು. ಆದರೂ ನಾನು ಬರೆಯಲೇಬೇಕು."

ಈವರೆಗೆ ಪ್ರಕಟವಾದ ನಿರಂಜನರ ಕೃತಿಗಳ ಸಂಖ್ಯೆ ನೂರಕ್ಕೂ ಮೀರಿರುವುದಲ್ಲದೆ, ಅಪ್ರಕಟಿತ ಬಿಡಿ ಬರಹಗಳು, ಪ್ರಸಾರ ಭಾಷಣಗಳು, ರೇಡಿಯೋ ರೂಪಕಗಳು ಹಲವಾರು ಇವೆ. ತಮ್ಮ ಅನಾರೋಗ್ಯದಿಂದ ಚಲನೆಗೆ ತೊಡಕಾಗಿರುವುದಾದರೂ ಇಷ್ಟೆಲ್ಲ ಕೃತಿಗಳನ್ನು ಬರೆಯುತ್ತಾ, ಅವುಗಳನ್ನು ಪ್ರಕಟಿಸುವ ಪ್ರಯತ್ನವನ್ನು ಮಾಡುತ್ತಾ ಇರುವ ನಿರಂಜನರ ಮನೋಬಲವನ್ನು ಕನ್ನಡ ಜನ ಮೆಚ್ಚಲೇಬೇಕು.

ಈ ಸಂದರ್ಭದಲ್ಲಿ ನಿರಂಜನರ ಸಾಹಿತ್ಯ ಸೇವೆಯಲ್ಲಿ ಸದಾ ಹಿನ್ನೆಲೆಯಲ್ಲಿ ನಿಂತು ಸಹಕರಿಸುತ್ತಿರುವ ಅವರ ಪತ್ನಿ ಡಾ। ಅನುಪಮಾ, ಹಾಗೂ ಪುತ್ರಿಯರಾದ ತೇಜಸ್ವಿನಿ ಮತ್ತು ಸೀಮಂತಿನಿಯವರು ಸ್ತುತ್ಯರ್ಹರು.

ನಿರಂಜನರು ಎಂದಿಗೂ ಅವರ ಮಿತ್ರರನ್ನು ಮರೆಯುವವರಲ್ಲ. ಕಳೆದ ೨೪ ವರ್ಷಗಳಿಂದ ನಾವಿಬ್ಬರೂ ಪರಸ್ಪರ ಕಾಣದಿದ್ದರೂ, ಈಗಲೂ ಆತ್ಮೀಯತೆಯಿಂದಲೇ ಅವರು ನನ್ನನ್ನು ಕಾಣುತ್ತಿದ್ದಾರೆ. ನಿರಂಜನರ ಲೇಖನಿಯಿಂದ ಈ ಆತ್ಮೀಯತೆ ಮತ್ತು ಮಾನವೀಯತೆಯನ್ನು ಒಳಗೊಂಡ ಇನ್ನೂ ಶ್ರೇಷ್ಠ ಕೃತಿಗಳ ಸೃಷ್ಟಿಯಾಗಲೆಂದೇ ನಾನು ಹಾರೈಸುತ್ತೇನೆ. ○

ದಿಟ್ಟ ನಿಲುವಿನ ಚಿಂತನಶೀಲ

–ಗಣರಾಜ ಕುಂಬಳೆ

ಡಾ। ಶ್ರೀನಿವಾಸ ಹಾವನೂರರ ಹತ್ತಿರ ನನ್ನ ಸಂಶೋಧನ ಪ್ರವೃತ್ತಿಯನ್ನು ಆಗಾಗ ಪ್ರಕಟಿಸುತ್ತಿದ್ದೆ. ಮುಂದೆ ಭಾಷಾವಿಜ್ಞಾನ, ಸಾಹಿತ್ಯ-ಈ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡಬೇಕೆಂದಿದ್ದ ಹಂಬಲವನ್ನು ಹಲವು ಬಾರಿ ಅವರೆದುರು ಪ್ರಕಟಮಾಡಿದ್ದೆ. ಆಗ ಅವರ ಸಲಹೆ, 'ನಿರಂಜನರ ಬಗ್ಗೆ ಅಧ್ಯಯನ ಮಾಡಿ.'

ಆ ಹೊತ್ತಿಗೆ ನಿರಂಜನರ ಕೆಲವು ಕಾದಂಬರಿಗಳನ್ನು ಮಾತ್ರ ಓದಿದ್ದೆ. ನನ್ನ ಅಜ್ಜ ದಿ। ಕೆ.ಎಸ್. ವೆಂಕಪ್ಪ ಭಟ್ಟರು ನಿರಂಜನರ ಗುರುಗಳಾಗಿದ್ದವರು. ಅವರಿಗೆ ತಮ್ಮ ಹತ್ತು ಕಾದಂಬರಿಗಳನ್ನು ನಿರಂಜನ ಕಳುಹಿಸಿದ್ದರು. ಅವುಗಳಿಗೆ ಹೊದಿಕೆಯನ್ನು ಹಾಕಿಕೊಡುವ ನಿಮಿತ್ತದಲ್ಲಿ ಅವನ್ನಷ್ಟು ಓದಿದ್ದೆ. ನಿರಂಜನರ ಹಾಸುಬೀಸುಗಳ ಪರಿಚಯವಿರಲಿಲ್ಲ. ಅವರು ಹುಟ್ಟಿದೂರು 'ಕುಳುಕುಂದ' ಎಂಬುದು ತಿಳಿದಾಗ ಸಹಜವಾಗಿ ಆಕರ್ಷಣೆಯುಂಟಾಯಿತು. ಪತ್ರಮುಖೇನ ಸಂಪರ್ಕಸೇತು ಸಾಧ್ಯವಾಯಿತು. ಅವಕಾಶ ದೊರೆತಾಗ ಅವ್ಯಕ್ತ ಆನಂದ.

ನಿರಂಜನರ ಅನೇಕ ಪುಸ್ತಕಗಳನ್ನು ಸಂಪಾದಿಸಿಕೊಂಡು ಕೆಲವನ್ನು ಓದಿ, ರಜೆ ಸಿಕ್ಕಿದಾಗ ಬೆಂಗಳೂರಿಗೆ ಹೋಗಿ ಅವರನ್ನೊಮ್ಮೆ ಸಂದರ್ಶಿಸಿದೆ. ಆ ಅನುಭವ ವಿಶಿಷ್ಟವಾದುದು. ಸ್ನೇಹಿತರ ಮನೆಯಲ್ಲಿ ಉಳಕೊಂಡಿದ್ದು, ಬೆಳಗ್ಗೆ ೯-೦೦ ಗಂಟೆಗೆ ಅವರ ಮನೆಯ ಎದುರು ಹಾಜರಾದೆ. ಡಾ। ಅನುಪಮಾ ಬಾಗಿಲು ತೆರೆದು ಆತ್ಮೀಯವಾಗಿ ಕರೆದೊಯ್ದರು.

ನಾನು ನಿರಂಜನರ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆಯೇ ನನ್ನ ಹೆಸರು ಇತ್ಯಾದಿಗಳ ಪರಿಚಯವಿದ್ದಂತೆ 'ನೀವೇ ಇರಬೇಕು ಎಂದು ಊಹಿಸಿದ್ದೆ' ಎಂದರು. ನಾನು ದಂಗಾಗಿಹೋದೆ. ಶ್ರೇಷ್ಠ ಸಾಹಿತಿಯೊಬ್ಬರು ನನ್ನ ಕುರಿತಾಗಿ ಇಷ್ಟು ಕ್ಷಿಪ್ರವಾಗಿ ಯೋಚಿಸುತ್ತಾರಲ್ಲಾ ಎನಿಸಿತು.

ಆ ಮನೆಯಲ್ಲೊಂದು ದೊಡ್ಡ ನಾಯಿ. ಅದನ್ನು ಕಂಡಾಗ ಆರಂಭದಲ್ಲಿ ತುಸು ಭಯವೆನಿಸಿತ್ತು. ನಿರಂಜನ ಅದರ ತಲೆ ಸವರಿ ಅದನ್ನು ಪ್ರೀತಿಸುವುದನ್ನು ಕಂಡು ನನಗೆ ಖುಷಿಯಾಯಿತು. ಅದನ್ನೂ ಕುಟುಂಬದ ಒಬ್ಬ ಸದಸ್ಯನಂತೆ ಅವರು ಕಾಣುತ್ತಿದ್ದುದು ವಿಚಿತ್ರವೆನಿಸಿತು.

ಸಂಭಾಷಣೆಗೆ ಮೊದಲು ನನಗೊಂದು ದಿನದ ವೇಳಾಪಟ್ಟಿಯನ್ನು ಹಾಕಿ ಕೊಟ್ಟರು. "ಬೆಳಗ್ಗೆ ೯-೦೦ರಿಂದ ಮಧ್ಯಾಹ್ನದ ವರೆಗೆ ಸಂದರ್ಶನ, ಆ ಮೇಲೆ ಇಲ್ಲೇ ಊಟ, ಮಧ್ಯಾಹ್ನ South End Circle Libraryಗೆ ಹೋಗಿ ಅಧ್ಯಯನ ಮಾಡಿ" ಎಂದರು.

ಮಾತಿನ ನಡುವೆ, 'ಬದುಕು' ಎನ್ನುವುದು ತನ್ನ ವ್ಯಕ್ತಿತ್ವದ ರೂಪೀಕರಣಕ್ಕೆ ಕಾರಣ ಎಂದರು. "ಪಡೆದದ್ದಕ್ಕಿಂತ ಹೆಚ್ಚು ಕೊಡಬೇಕೆಂಬುದು ನನ್ನ ಉದ್ದೇಶ" (ಕೇರಳದ ನೀಲೇಶ್ವರದಲ್ಲಿದ್ದಾಗಿನ ನೆನಪಿನ ಚಿತ್ರ 'ಚಿರಸ್ಮರಣೆ' ಎಂಬ ಕಲಾಕೃತಿಯಾಗಿ ಒಂದು ಶ್ರೇಷ್ಠ ಕೊಡುಗೆಯಾಯಿತು). "60ನೇ ವಯಸ್ಸಿನಲ್ಲಿ ಸನ್ಮಾನ ಮಾಡ್ತೀವೆ ಅಂತ ಬಂದರು, ನಾನು ನಿರಾಕರಿಸಿದೆ. ಈ ಸನ್ಮಾನ, ಸಂಭಾವನೆ ಇವೆಲ್ಲ ಅಮಲು ತರಿಸುವಂಥವು" ಎಂದರು.

ಶಿವ ನಿರಂಜನರಾದ ಸನ್ನಿವೇಶದ ಬಗ್ಗೆ ಮಾತು ಬಂದಾಗ "ಯಾವುದೇ ಸಿದ್ಧಾಂತವನ್ನು ಸ್ವೀಕರಿಸಿದ ಮೇಲೆ ಅದರಿಂದ ಹೊರಬರುವುದು ಅಸಾಧ್ಯವೆನಿಸುತ್ತದೆ. ಕಮ್ಯೂನಿಸ್ಟ್ ಪಕ್ಷದ ತತ್ತ್ವಗಳನ್ನು ಇಟ್ಟುಕೊಂಡಿದ್ದಾಗಲೂ Overzealous ಆಗಿರದಿದ್ದ ಕಾರಣ ಅದರಿಂದ ಹೊರಬರುವುದು ಸಾಧ್ಯವಾಯಿತು. ತಾತ್ವಿಕ ಬಂಧನಗಳಿಂದ ವಿಮೋಚನೆಯಾಗಿ ಅಭಿವ್ಯಕ್ತಿ ಮಾರ್ಗ ಸುಗಮವಾಯಿತು. 'ಇತಿಶ್ರೀ' ಎಂಬ ಹೆಸರಿನ (ಆ ಮೇಲೆ ವಿಮೋಚನೆ) ಮೊದಲ ಕಾದಂಬರಿ ಬರೆದೆ" ಎಂದರು.

"ನನ್ನಲ್ಲಿ ಎಲ್ಲದಕ್ಕೂ ಬದುಕೇ ಮೂಲ" ಎಂದ ಅವರು, "ನಾವು ಬದುಕಿನಿಂದ ವಸ್ತುವನ್ನಾರಿಸಿಕೊಳ್ಳಬೇಕು. ಇನ್ನೊಂದು ಪರಿಸರದಲ್ಲಿ ಬೆಳೆದ ಬದುಕಿನ ಸಮಸ್ಯೆಗಳ ಪರಿಹಾರ, ನಮ್ಮಲ್ಲಿ ಪಥ್ಯವಾಗುತ್ತದೆ ಎಂದೇನೂ ಹೇಳಲಾಗದು. ಆದರೂ ಅದನ್ನು ಪರಿಶೀಲಿಸುವುದು ಅವಶ್ಯ" ಎಂದರು.

"ಅಧ್ಯಯನ ವಿಶಾಲವಾಗಿರಬೇಕಾದ್ದು ಅವಶ್ಯ. ಎಲ್ಲವನ್ನೂ ಓದಿ ನಮ್ಮದಾಗಿಸಿ ನಮ್ಮತನವನ್ನು ಹುಟ್ಟಿಸಿಕೊಳ್ಳಬೇಕು. ಅದನ್ನು ತೋರಿಸಿಕೊಡಬೇಕಾದ್ದೂ ನ್ಯಾಯವೇ" ಎನ್ನುವುದು ನಿರಂಜನರ ಗಟ್ಟಿ ನಿಲುವು.

"ಸೃಜನಶೀಲತೆ ಪರಿಶ್ರಮವುಳ್ಳ ಒಂದು ಭಾಷೆಯಿಂದ ಮಾತ್ರ ಸಾಧ್ಯವಾಗುತ್ತದೆ." ಎಂದ ನಿರಂಜನರಿಗೆ ಭಾಷೆಯ ವೈಜ್ಞಾನಿಕ ಪರಿಜ್ಞಾನವಿದೆ ಎನ್ನುವುದನ್ನು ಅವರಾಡುತ್ತಿದ್ದ ಅನೇಕ ವೈಜ್ಞಾನಿಕ ವಿಶ್ಲೇಷಣೆಯಿಂದ ಅರಿತೆ.

"ಬುದ್ಧಿಜೀವಿ ಎಂಬ ಪದಬಳಕೆಯಲ್ಲಿ ಕ್ಲೀಷೆ ಇದೆ. ಸೃಷ್ಟಿಕ್ರಿಯೆಯಲ್ಲಿ ಬುದ್ಧಿ - ಭಾವಗಳೆರಡೂ ಅನಿವಾರ್ಯವಾಗಿ ಹೊಂದಿಕೊಂಡಿರಬೇಕು. ನಿಜವಾಗಿ ನೋಡಿದರೆ ನಮ್ಮ ಮಿದುಳಿನ ಸಾವಿರಕೋಟಿ ಕೋಶಿಕೆಗಳಲ್ಲಿ ಒಂದು ಭಾಗ ಮಾತ್ರ ಕೆಲಸ ಮಾಡುತ್ತಿದೆ."

"ಭಾಷೆಯನ್ನು ಕಿವಿಗೊಟ್ಟು ಕೇಳುತ್ತಿರುತ್ತೇನೆ. ನನ್ನ ಅಭ್ಯಾಸವೇ ಹಾಗೆ. Communication ಸಾಧ್ಯವಾಗಬೇಕಾದರೆ ಈ ಗುಣ ಅನಿವಾರ್ಯ."ಕೆಲವು ಬಳಕೆಯ ಪದಗಳ ಬಗ್ಗೆ: "ಈ 'ನಾವಡ' ಎಂಬ ಪದ ಬರುವುದಕ್ಕೆ ಕಾರಣ ನರ್ಮದಾ ತೀರದಲ್ಲಿ ನಾವೆಯನ್ನು ನಡೆಸುತ್ತಾ ಇದ್ದುದು ಇರಬಹುದು. 'ವಿಶ್' ಎಂದರೆ 'ಭೂಮಿ'. ಭೂ ಉತ್ಪನ್ನಗಳ ಮಾರಾಟ ವ್ಯವಹಾರಗಳಿಂದ ಸರಕಾರದ ಮೂಲಾಧಾರವಾಗಿದ್ದವರು 'ವೈಶ್ಯ'ರು. ಮೊಗೇರ>ಮೊಗವೀರ. ಮೊಗೆ-ಹವಳವನ್ನು ಆಳದಿಂದ ಮೊಗೆಯುತ್ತಾರೆ. 'ನಂಪುಕ ತಿರಿ'–'ನಂಬೂದಿರಿ' ನಂಬುಗೆಗೆ ಅರ್ಹರು ಎಂಬರ್ಥದಲ್ಲಿತ್ತು. 'ಯಕ್ಷಗಾನ ಪ್ರಸಂಗಗಳ ಮೂಲಕವೂ ಭಾಷೆಯ ಅವಸ್ಥಾಂತರವನ್ನು ತಿಳಿಯಬಹುದು." ಎಂಬ ಹೇಳಿಕೆಗಳು ಅವರು ಮೂಲದ ವರೆಗೆ ಇಳಿಯುವ 'ತಲಸ್ಪರ್ಶಿ' ಶೋಧವನ್ನು ನಡೆಸುವ ಪ್ರವೃತ್ತಿಯವರು ಎಂಬುದನ್ನು ನನಗೆ ಮನದಟ್ಟು ಮಾಡಿದವು.

"ಭಾಷೆ ಮನುಷ್ಯನ ಮಹತ್ಸಾಧನೆಗಳಲ್ಲಿ ಒಂದು. ಯಾವುದೇ ಭಾಷೆಯ ಮೇಲೆ ವ್ಯಾಮೋಹ ನನಗೆ ಸಾಧ್ಯವಿಲ್ಲ."

ರೋಮನ್ ಲಿಪಿಯನ್ನು ಯಾವ ಭಾಷೆಗೆ ಬೇಕಾದರೂ ಬಳಸಿಕೊಳ್ಳಬಹುದೆಂದು ವಿಚಾರ ಮಾಡುತ್ತಾರೆ ನಿರಂಜನರು ರಚನಾತ್ಮಕವಾಗಿ.

ಹೀಗೆ ನಿರಂಜನ ಇಂದಿನ ಜಗತ್ತಿಗೆ ಜೀವಂತವಾಗಿ ಸ್ಪಂದಿಸುತ್ತಿದ್ದಾರೆ. ರಾಜಕೀಯ, ಸಾಮಾಜಿಕ ವಿದ್ಯಮಾನಗಳನ್ನೆಲ್ಲ ಮಾಧ್ಯಮಗಳ ಮೂಲಕ ಎಚ್ಚರದ ಕಣ್ಣುಗಳಿಂದ ಗಮನಿಸುತ್ತಿರುತ್ತಾರೆ.

"ವೃದ್ಧಾಪ್ಯದಲ್ಲೂ ಕನಸುಗಳಿರಬೇಕು. ಕಣಸುಗಳಿರಬೇಕು" ಎನ್ನುವ ಹಿರಿಯಚೇತನ ಅವರದು. ನನ್ನಂತಹ ಕಿರಿಯನನ್ನೂ ಒಲವಿನಿಂದ ನೋಡಿಕೊಳ್ಳುವ, ಕನಸಿನ ಕಾದಂಬರಿಗಾಗಿ ತಯಾರಿ ನಡೆಸುತ್ತಿರುವ, ಮಾತು ಮಾತಿನಲ್ಲೂ ಘನೀಭವಿಸಿದ ಜ್ಞಾನದ್ರವ್ಯವಿರುವ ಅವರನ್ನು ಕಣ್ಣುಬಿಟ್ಟು ನೋಡುತ್ತಲೇ ಇದ್ದೇನೆ. ಅವರನ್ನು ಸಂಪೂರ್ಣವಾಗಿ ಕಂಡಿಲ್ಲ.

'ಕಥೆ'ಯಿಂದ ಹೊರಹೊರಡುವ ನನ್ನನ್ನು ನಿರಂಜನರು ಬಾಗಿಲವರೆಗೆ, ಡಾ। ಅನುಪಮಾ ಗೇಟಿನ ವರೆಗೆ ಬಂದು, ಬೀಳ್ಕೊಟ್ಟು ಮರುಭೇಟಿಗೆ ಮತ್ತೊಮ್ಮೆ ಆಹ್ವಾನಿಸುತ್ತಾರೆ.

○

ಖಚಿತ ಜೀವನೋತ್ಸಾಹಿ

–ಸರಿತಾ ಕುಸುಮಾಕರ ದೇಸಾಯಿ

ನಿರಂಜನರನ್ನು ಎಲ್ಲಿ ಯಾವಾಗ ಯಾವ ಸಂದರ್ಭದಲ್ಲಿ ಮೊಟ್ಟ ಮೊದಲು ಕಂಡೆ ಎಂದು ನೆನಪಿನಾಳಕ್ಕೆ ಇಳಿದು ಕೆದಕಬೇಕಾಗಿಯೇ ಇಲ್ಲ. ಆ ಮೊದಲ ಭೇಟಿಯ ನೆನಪು ಎಂದಿಗೂ ಹಸಿರು ಹಸಿರು.

ನಾನು ಕಾಲೇಜ್ ವಿದ್ಯಾರ್ಥಿನಿಯಾಗಿದ್ದಾಗಲೇ ಶ್ರೀಮತಿ ಡಾ। ಅನುಪಮಾ ಅವರ ಕತೆ ಕಾದಂಬರಿಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದೆ. ಅವರನ್ನು ಕಾಣುವ ಪರಿಚಯ ಪಡೆಯುವ ಹಂಬಲ ಹೊತ್ತಿದ್ದೆ. ನನ್ನ ಮದುವೆಯ ಅನಂತರ ಸಾಹಿತ್ಯ ಕ್ಷೇತ್ರಕ್ಕೆ ನನ್ನದು ಪಾದಾರ್ಪಣೆಯಾಗಿ, ಅಲ್ಲಲ್ಲಿ ಮೆಚ್ಚಿಕೆಯನ್ನು ಪಡೆಯತೊಡಗಿದ್ದೆ. ಅದರಿಂದ ಉತ್ಸಾಹಿತಳಾಗಿ ೧೯೭೦ರಲ್ಲಿ ಬೆಂಗಳೂರಿನಲ್ಲಿ ಜರಗಿದ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದೆ. ಆಗ ವಿವಿಧ ಕಡೆಗಳಿಂದ ಬಂದಿದ್ದ ಲೇಖಕಿಯರ ಪರಸ್ಪರ ಪರಿಚಯದ ಒಂದು ಚಿಕ್ಕ ಸಭೆಯಲ್ಲಿ ನನ್ನ ನೆಚ್ಚಿನ ಬರಹಗಾರ್ತಿ ಅನುಪಮಾ ಅವರೊಡನೆ ಹರಟೆಗೆ ಅವಕಾಶ ಸಿಕ್ಕಿತು. ತಮ್ಮ ಮಗಳು ಸೀಮಂತಿನಿಯ ಹುಟ್ಟು ಹಬ್ಬದ ನಿಮಿತ್ತ ಅನುಪಮಾ ನನ್ನನ್ನೂ ಆಹ್ವಾನಿಸಿದ್ದರು. ಆದರೆ ಕೆಲವು ಅನನುಕೂಲತೆಯಿಂದಾಗಿ ಅಂದು ನಾನು ಹೋಗಲಿಲ್ಲ. ಮರುದಿವಸ ಹೋದೆ. ನಾನು ಬರುತ್ತೇನೆ ಎಂದು ಹೇಳಿದ ಸಮಯಕ್ಕೆ ಒಂದು ಗಂಟೆ ಮೀರಿ ತಡವಾಗಿ ಅವರ ಮನೆಗೆ ಹೋಗಿ ಕರೆಗಂಟೆ ಒತ್ತಿದಾಗ ಸೀಮಾ ಬಾಗಿಲು ತೆರೆದಳು. ಅರೆ ನಿಮಿಷದಲ್ಲಿ ನಿರಂಜನರು "ಬನ್ನಿ - ಬನ್ನಿ, ಅವರು ಮನೆಯಲ್ಲಿಲ್ಲ. ನಿಮ್ಮ ಆತಿಥ್ಯದ ಕೆಲಸ ನನಗೊಪ್ಪಿಸಿ ಹೋಗಿದ್ದಾರೆ" ಎಂದ ಆತ್ಮೀಯ ಕರೆಗೆ ನಾನು ಬೆರಗಾಗಿ ಮೂಕ ವಿಸ್ಮಿತಳಾಗಿ ಕುಳಿತುಬಿಟ್ಟೆ. ನನ್ನೆದುರು ಕುಳಿತಿದ್ದ ಸ್ಫುರದ್ರೂಪಿ ನಿರಂಜನರ ಮುಖಕಾಂತಿಯ ಹೊಳಪು ಕಂಡು "ಅನುಪಮಾ ಅದೃಷ್ಟವಂತೆ" ಎನಿಸಿ ಹಿಗ್ಗಿದೆ. ನಾನು ಆಗ ನಿರಂಜನರ ಒಂದೆರಡು ಕಾದಂಬರಿಗಳನ್ನು ಮಾತ್ರ ಓದಿದ್ದೆ. ಮಾತು ಹೇಗೆ ಪ್ರಾರಂಭಿಸಲಿ, ಇಂಥ ಉದ್ದಾಮ ಸಾಹಿತಿಯೊಡನೆ ಹೇಗೆ ಮಾತನಾಡಲಿ ಎಂಬ ಸಂದಿಗ್ಧತೆ ಆರೆಕ್ಷಣ ಆವರಿಸಿತ್ತು. ಆದರೆ, ಕ್ಷಣ ಮಾತ್ರದಲ್ಲಿ ನನ್ನ ಮನದ ಇಂಗಿತ ಅರಿತ ನಿರಂಜನರೇ ಮಾತು ಪ್ರಾರಂಭಿಸಿ ನನ್ನ ಕೀಳರಿಮೆಯನ್ನು ಕಿತ್ತೊಗೆದು, ನನ್ನ ಬರವಣಿಗೆಯ ಬಗ್ಗೆ ಭರವಸೆ ಮೂಡಿಸುತ್ತ, ಮೆಚ್ಚಿಕೆ ವ್ಯಕ್ತಪಡಿಸುತ್ತ ಆತ್ಮೀಯತೆಯ ವಾತಾವರಣ ಸೃಷ್ಟಿಸಿಬಿಟ್ಟಾಗ ನನಗರಿವಿಲ್ಲದಂತೆ, ಮಾಂತ್ರಿಕ ಶಕ್ತಿಗೆ ಒಳಪಟ್ಟವಳಂತೆ, ನನ್ನ ಎಲ್ಲ ವೈಯಕ್ತಿಕ ಅನಿಸಿಕೆಗಳನ್ನು ಅವರೆದುರು ತೋಡಿ ಕೊಂಡುಬಿಟ್ಟೆ. ಶ್ರೀ ದೇಸಾಯಿಯವರ ವಕೀಲಿ, ರಾಜಕೀಯ ಧ್ಯೇಯಧೋರಣೆಗಳು,

ನಮ್ಮ ಮನೆತನ, ಗುಲ್ಬರ್ಗಾ ಜನಜೀವನಗಳ ಬಗ್ಗೆ ಕೇಳಿ ತಿಳಿದುಕೊಂಡು ಕಾಫಿ, ತಿಂಡಿ ಸರಬರಾಜು ಮಾಡಿಸಿ ಬೀಳ್ಕೊಟ್ಟರು. ಸುಂದರ ಸೊಬಗಿನ ಆ ಸಂಜೆಯ ಮಧುರ ಸ್ಮೃತಿಚಿತ್ರ ನನ್ನ ಮನದಲ್ಲಿ ಗಟ್ಟಿಯಾಗಿ ಮೂಡಿದೆ.

ಅಪರಿಚಿತರನ್ನೂ ತಮ್ಮೆಡೆಗೆ ಆಕರ್ಷಿಸಿಕೊಂಡುಬಿಡುವ ವಿಶೇಷತೆಯನ್ನು ನಿರಂಜನರಲ್ಲಿ ಕಂಡುಕೊಂಡೆ. ಮತ್ತೊಬ್ಬರ ಮನದಾಳದ ಮಥನವನ್ನು ಗುರುತಿಸುವ ಕಲೆ ಅವರಿಗೆ ಸಿದ್ಧಹಸ್ತವಾಗಿದೆ. ನಿರಹಂಕಾರ ಗುಣ ಅವರ ವೈಶಿಷ್ಟ್ಯ. ಎಂತಹ ಕಿರಿಯ ಬರಹಗಾರರೇ ಇರಲಿ ಅವರನ್ನು ಗೌರವದಿಂದ, ಪ್ರೀತಿಯಿಂದ ಕಾಣುವುದು ನಿರಂಜನರ ವ್ಯಕ್ತಿತ್ವದ ಹಿರಿಮೆ ಎಂಬುದು ನನ್ನ ಅನುಭವಕ್ಕೆ ಬಂದ ವಿಷಯ.

ಆಪತ್ಕಾಲೀನ ಘೋಷಣೆಯ ಪರಿಸ್ಥಿತಿಯಲ್ಲಿ ಶ್ರೀ ದೇಸಾಯಿಯವರನ್ನು ಸೆರೆಮನೆಯಲ್ಲಿ ಕಾಣಲು ಹೋಗಿದ್ದಾಗ, ಒಮ್ಮೆ ಶ್ರೀ ದೇಸಾಯಿಯವರು ಹಾಸ್ಯದಿಂದ "ಕರ್ನಾಟಕದ ಉದಯೋನ್ಮುಖ ಸಣ್ಣ ಕತೆಗಾರರೇ" ಎಂದು ನನ್ನನ್ನು ಸ್ವಾಗತಿಸಿದರು. ನಂತರ ಅದರ ವಿವರ ತಿಳಿದದ್ದು. ಸೆರೆಮನೆಯ ಪುಸ್ತಕ ಸಂಗ್ರಹಾಲಯದಲ್ಲಿ ಕಿರಿಯರ ವಿಶ್ವಕೋಶ 'ಜ್ಞಾನಗಂಗೋತ್ರಿ'ಯ ಸಾಹಿತ್ಯ - ಕಲೆ - ನಾಲ್ಕನೆಯ ಸಂಪುಟ ತಿರುವಿ ಹಾಕಿದಾಗ, ಅದರಲ್ಲಿ ನನ್ನ ಬಗ್ಗೆ ಮೆಚ್ಚಿಕೆಯ ಅಭಿಪ್ರಾಯವಿದ್ದುದರ ಬಗ್ಗೆ ನನಗೆ ತಿಳಿಸಿದರು. ಆ ಸಂಪುಟಗಳು ನನಗೆ ಸಿಕ್ಕಿರಲಿಲ್ಲ. ಇವುಗಳನ್ನು ನಿರಂಜನರು ಸಂಪಾದಿಸಿದ್ದು ಎಂದು ತಿಳಿದು ಪುಲಕಿತಗೊಂಡೆ. ಸಾಹಿತ್ಯ ಕ್ಷೇತ್ರದಲ್ಲಿ ಮುನ್ನಡೆಯಬೇಕೆಂಬ ನನ್ನ ಅಭಿಲಾಷೆ ಬದುಕಿನ ಹೊಸ ತಿರುವಿಗೆ ಬಲಿಬಿದ್ದು, ಇಂದಿಗೂ ಕುಂಠಿತಗೊಂಡಿದೆ ಎನಿಸಿದರೂ, ನನ್ನ ಮತ್ತು ಅನುಪಮಾ ಅವರ ಮೈತ್ರಿ ಗಾಢವಾಗುತ್ತ ಹೋಯಿತು. ಇದರ ಜೊತೆಗೆ ನಿರಂಜನರ ಕುತೂಹಲ ಶ್ರೀ ದೇಸಾಯಿಯವರ ಬಗ್ಗೆ ಕೆರಳಿತ್ತು. ಒಂದು ಭೇಟಿಯ ಸಂದರ್ಭದಲ್ಲಿ ನಿರಂಜನರು ತಮ್ಮ ಪುಸ್ತಕಗಳನ್ನು ನನಗೆ ಉಡುಗೊರೆ ಕೊಟ್ಟು ಅದರಲ್ಲಿ ಶ್ರೀ ದೇಸಾಯಿಯವರ ಹೆಸರನ್ನೂ ಬರೆದಿದ್ದರು.

ಶ್ರೀ ಕುಸುಮಾಕರ ದೇಸಾಯಿಯವರಿಗೆ ಒಮ್ಮೆ ತಮ್ಮ ವಿದ್ಯಾರ್ಥಿ ದೆಸೆಯ ಹೈದರಾಬಾದ್ - ತೆಲಂಗಾಣ ಆಂದೋಲನದ ಕೆಲವು ನೆನಪುಗಳು ಮರುಕಳಿಸಿದುವು. ಆಗ್ಗೆ ಕುಳುಕುಂದ ಶಿವರಾಯನೆಂಬ ಕನ್ನಡಿಗ ಆ ಆಂದೋಲನದಲ್ಲಿ ಭಾಗಿಯಾಗಿದ್ದು ಚೆನ್ನಾಗಿ ಜ್ಞಾಪಕವಿತ್ತು. ಸಮಾಜವಾದಿಗಳು ಮತ್ತು ಸಮತಾವಾದಿಗಳು ದಲಿತೋದ್ಧಾರ, ಸಮಾಜ ಪರಿವರ್ತನೆಯ ಒಂದೇ ಧ್ಯೇಯ ಉದ್ದೇಶದಿಂದ ಪ್ರೇರಿತರಾದವರು. ಇದನ್ನು ಜ್ಞಾಪಿಸುವುದಕ್ಕೆಂದು ಶ್ರೀ ದೇಸಾಯಿಯವರು ನಿರಂಜನರಿಗೆ ಬರೆದ ತಮ್ಮ ಪತ್ರದಲ್ಲಿ "ನೀವು ನಮಗೆ ಪ್ರಗತಿಪಥದ ಪಾಥೇರ್‌ದಾಬಿ" ಎಂದು

ಸಂಬೋಧಿಸಿದ್ದರು. ಒಂದು ಪ್ರಗತಿಪಥದ ಹಕ್ಕುದಾರರು, ದಾವೆದಾರರು ಎಂದು ತಮ್ಮ ನಂಟು ಜೋಡಿಸಲು ಮಾಡಿದ ಅವರ ಪ್ರಥಮ ಪ್ರಯತ್ನದ ತರುವಾಯ ನಾವು ದಂಪತಿಗಳು ಬೆಂಗಳೂರಿಗೆ ಬಂದಾಗಲೆಲ್ಲ ನಿರಂಜನ ದಂಪತಿಗಳ ಅತಿಥಿಗಳಾದೆವು. ಅವರ ಭೇಟಿ ಮಾಡುತ್ತ ಹೋದಂತೆ ಒಂದು ಅಪೂರ್ವ ವಿಶ್ವಾಸ ಪ್ರೀತಿ ಗೌರವ ಆದರಗಳಿಗೆ ನಾವು ಪಾತ್ರರಾದೆವೆನ್ನಬಹುದು. ಈ ಅವಧಿಯಲ್ಲಿಯೇ ಅನುಪಮಾ ಅವರು ತಮ್ಮ ಬರಹಗಳಲ್ಲಿ ನಮ್ಮಿಬ್ಬರ ಬಗ್ಗೆ ವ್ಯಕ್ತಪಡಿಸಿದ ಭಾವನೆಗಳು ನಮ್ಮ ವಿಶಿಷ್ಟ ಸಂಬಂಧಕ್ಕೆ ಸಾಕ್ಷಿಯಾಗಿ ನಿಂತಿವೆ.

ನನ್ನ 'ಕಾಶಿಯಲ್ಲಿ ಕಂಡದ್ದೇನು ?' ಕಥಾ ಸಂಗ್ರಹವನ್ನು ನಿರಂಜನರು ಹಾಗೂ ಅನುಪಮಾ ಓದಿದ್ದಷ್ಟೇ ಅಲ್ಲ, ಕತೆಗಳನ್ನು ಯಾಕೆ ಹೇಗೆ ಮೆಚ್ಚಿಕೊಂಡರೆಂಬುದನ್ನು ವಿವರವಾಗಿ ಬರೆದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ಈ ಮೂವತ್ತು ವರ್ಷಗಳಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಮೇರು ಪರ್ವತದಂತಿದ್ದ ನಿರಂಜನರ ಸಾಮೀಪ್ಯ, ಆ ಒಂದು ವಿಶ್ವಾಸ ನನ್ನಂತಹ ಚಿಕ್ಕವಳಿಗೆ ದೊರಕಿದ್ದು ನನ್ನ ಸುಕೃತವೆಂದೇ ಭಾವಿಸುತ್ತೇನೆ.

ಈ ಹದಿನೈದು ವರ್ಷಗಳಲ್ಲಿ ಮೇಲಿಂದ ಮೇಲೆ ನಾವು ದಂಪತಿಗಳು ಅವರಲ್ಲಿಗೆ ಹೋದಾಗ ಕಳೆದ ಆ ಮಧುರ ಸನ್ನಿವೇಶಗಳು ಮೆಲುಕು ಹಾಕುವಂತಹವುಗಳು. ಅವರ ಅನ್ಯೋನ್ಯ ದಾಂಪತ್ಯಜೀವನ ಇತರರಿಗೆ ಮಾರ್ಗದರ್ಶನ. ನಿರಂಜನರು ಅನುಪಮಾ ಅವರನ್ನು ಬಹುವಚನದಲ್ಲಿ ಸಂಬೋಧಿಸುವುದು ನನಗೆ ಮೊದಮೊದಲು ವಿಚಿತ್ರವೆನಿಸಿದರೂ, ಅವರು ಅನುಪಮಾ ಅವರನ್ನು ಕೇವಲ ಪತ್ನಿ ಎಂದಲ್ಲ ಪತ್ನಿಯಲ್ಲಿ ಸಖಿಯನ್ನೂ ಕಾಣುತ್ತಾರೆ ಎಂಬುದನ್ನು ಅರಿತೆ. ಅನುಪಮಾ ಅವರ ಸ್ವಂತ ವ್ಯಕ್ತಿತ್ವ ಅರಳಲಿಕ್ಕೆ ಪ್ರೇರಕಶಕ್ತಿಯಾಗಿರುವ ನಿರಂಜನರಂತಹ ಪತಿ ಲಭಿಸುವುದು ಅಪರೂಪ.

ನಿರಂಜನ ದಂಪತಿಗಳು ಹೆಮ್ಮೆಪಡುವಂತೆ, ತಮ್ಮ ಮಕ್ಕಳಾದ ತೇಜಸ್ವಿನಿ, ಸೀಮಂತಿನಿ ಅವರಲ್ಲಿ ಆತ್ಮವಿಶ್ವಾಸ, ಸ್ವಂತ ವ್ಯಕ್ತಿತ್ವವನ್ನು ರೂಪಿಸಿದ್ದಾರೆ.

ನಿರಂಜನರ ಸ್ವಭಾವದ ಇನ್ನೊಂದು ವಿಶೇಷವೆಂದರೆ ಸಂಭಾಷಣೆಯಲ್ಲಿ ನಾನು ಗುರುತಿಸಿದ ಅಂಶ: ಮಾತನಾಡುವಾಗ ವಿಷಯದ ಬಗ್ಗೆ ಅರೆಬರೆ ತಿಳಿದಿದ್ದರೆ ಅಥವಾ ತಪ್ಪು ತಪ್ಪು ಮಾಹಿತಿ ಕೊಟ್ಟರೆ ಅವರಿಗೆ ತುಂಬಾ ಕೋಪ ಬರುತ್ತದೆ. "ವಿಷಯ ಗೊತ್ತಿದ್ದರೆ ಮಾತ್ರ ಹೇಳಬೇಕು, ಇಲ್ಲದಿದ್ದರೆ ಸುಮ್ಮನೆ ಕೇಳಬೇಕು" ಎಂಬುದು ಅವರ ನಿಲುವು. ಒಮ್ಮೆ ಯಾವುದೋ ಪುಸ್ತಕ ಇಂತಹವರೇ ಬರೆದದ್ದು ಎಂಬ ವಿಷಯ ನಾನು ಮತ್ತು ಅನುಪಮಾ ಚರ್ಚಿಸುತ್ತಿದ್ದಾಗ, ಶ್ರೀ ದೇಸಾಯಿಯವರು ನಾವಿಬ್ಬರೂ ಹೇಳಿದ್ದು ಸರಿಯಲ್ಲ ಎಂದು ಹೇಳುತ್ತಿದ್ದಂತೆ, ನಿರಂಜನರು

ಸೀಮಂತಿನಿಯನ್ನು ಕರೆದು ತಮ್ಮ ಲೈಬ್ರೆರಿಯಿಂದ ಆ ಪುಸ್ತಕ ತರಿಸಿ ದೇಸಾಯಿಯವರು ಹೇಳಿದ್ದು ಸರಿ ಎಂದಾಗ, ನಮ್ಮಿಬ್ಬರನ್ನು ನೋಡಿದ ನಿರಂಜನರ ನೋಟ ತೀಕ್ಷ್ಣವಾಗಿತ್ತು. ಅಂದೇ ಮನದಲ್ಲಿ ನಿರ್ಧಾರ ಮಾಡಿಕೊಂಡೆ, ಸರಿಯಾದ ಮಾಹಿತಿ ಇದ್ದರೆ ಮಾತ್ರ ವಾದಿಸಬೇಕೇ ಹೊರತು ಅರೆಬರೆ ತಿಳಿದು ಮಾತನಾಡಬಾರದು ಎಂದು.

ನಿರಂಜನರಲ್ಲಿ ಶೀಘ್ರ ಕೋಪವನ್ನೂ ಕಂಡಿದ್ದೇನೆ. ಆದರೆ ಆ ಕೋಪ ಕೇವಲ ನಮ್ಮನ್ನು ತಿದ್ದುವುದಕ್ಕೆ ಮಾತ್ರ ಎಂಬುದನ್ನೂ ಗ್ರಹಿಸಿಕೊಂಡಿದ್ದೇನೆ.

ಶ್ರೀ ದೇಸಾಯಿಯವರು ಮತ್ತು ನಿರಂಜನರು ಎಲ್ಲ ಭೇಟಿಗಳಲ್ಲಿ ತಾಸು ಗಟ್ಟಲೆ ಕೆಲವು ವಿಷಯಗಳನ್ನು ಚರ್ಚಿಸುವುದುಂಟು. ಸಮಾಜಶಾಸ್ತ್ರ, ರಾಜಕಾರಣ, ಕಾನೂನು, ಸಾಹಿತ್ಯ ವಿಷಯಗಳಿಗೆ ಅವರಲ್ಲಿ ಬರವಿಲ್ಲ. ಗಾಢವಾದ ಆಳವಾದ ಅಭ್ಯಾಸಿಕ ಪ್ರವೃತ್ತಿ, ಮಾನವೀಯ ಸಂಬಂಧ ಮತ್ತು ಸ್ವಭಾವಗಳ ಉತ್ಕ್ರಾಂತಿಯಲ್ಲಿ ಒಂದು ಸತತ ಪ್ರವಾಹವನ್ನು ಗುರುತಿಸಿ, ಅದಕ್ಕೆ ರೂಪ ಮತ್ತು ಮೆರುಗು ಕೊಡುವುದು ನಿರಂಜನರ ಸಾಹಿತ್ಯದ ವೈಶಿಷ್ಟ್ಯ. ತಾವು ಅನುಭವಿಸಿದ ಸಂಘರ್ಷಮಯ ಬದುಕಿನ ಯೂನಿವರ್ಸಾಲಿಟಿಯನ್ನು ಚಿತ್ರಿಸುವುದರಲ್ಲಿ ಅವರು ಏಕಮೇವ ಅದ್ವಿತೀಯರು. ಅವರ ಸಾಹಿತ್ಯದಲ್ಲಿ ಒಬ್ಬ ವ್ಯಕ್ತಿ ಹೀರೋ ಆಗಿ ಮನಸ್ಸಿನಲ್ಲಿ ಮೂಡುವುದು ಕಠಿಣವಾದರೂ ಸರ್ವೇಸಾಮಾನ್ಯ ಮನುಷ್ಯನ ಬದುಕು ಮತ್ತು ಹೋರಾಟದ ಇತಿಹಾಸ - ಐದುಸಾವಿರ ವರ್ಷಗಳ ಹಿಂದಿನ ಈಜಿಪ್ಟಿನಿಂದ ಪ್ರಾರಂಭವಾಗಿ ಇತ್ತೀಚಿನ 'ಬುದ್ಧಿ ಭಾವ ಬದುಕು' ಕೃತಿಗಳಲ್ಲಿ 'ಮೃತ್ಯುಂಜಯ'ವಾಗಿಯೇ ನಿಂತಿದೆ.

ಒಂದು ಕಾಲದಲ್ಲಿ ಸಮತಾವಾದಿಗಳಿಗೆ ಸಮೀಪರಾಗಿದ್ದ ನಿರಂಜನರು ಆ ಸಂಗ ತ್ಯಜಿಸಿದ್ದಾರೆ. ಆದರೆ ಆ ಕಾಲ ಪರಿಸ್ಥಿತಿ ನೀಡಿದ ಪ್ರೇರಣೆ ಇಂದಿಗೂ ಅವರಲ್ಲಿ ಜಾಗೃತವಾಗಿದೆ. ಆದರೆ ಸಾಮಾಜಿಕ ಪರಿವರ್ತನೆಯ ಅಭಿಲಾಷೆಯ ಜೊತೆಗೆ, ಅವರಲ್ಲಿಯೂ ಪರಿವರ್ತನೆ ಎಂದರೆ - ದ್ವೇಷ ಮತ್ತು ಹಿಂಸೆ ಇದನ್ನು ಹೊರತುಪಡಿಸಿ ಜೀವನ ಸಮೃದ್ಧಗೊಳಿಸುವ ನಿಷ್ಠೆ ಅವರಲ್ಲಿಯ ದೃಷ್ಟಿಕೋನದ ಪರಿವರ್ತನೆ.

ಎಷ್ಟೋ ಸಲ ನಾವು ದಂಪತಿಗಳು ನಿರಂಜನರನ್ನು ಕಂಡಾಗ ರಿಚರ್ಡ್ ಕ್ರಾಸ್‌ಮನ್ ಸಂಪಾದಿತ 'ದಿ ಗಾಡ್ ದಟ್ ಫೇಲ್ಡ್' ಮಾದರಿಯಲ್ಲಿ ನಿರಂಜನರು ಅನುಭವಿಸಿದ ಪರಿವರ್ತನೆಯನ್ನು ಚಿತ್ರಿಸಲು ಕೇಳಿಕೊಂಡಿದ್ದೇವೆ. ಈ ಅನುಭವ ಸಾಹಿತ್ಯದಲ್ಲಿ ಹೊರಹೊಮ್ಮಿದರೆ ಕೆಲವರು ತಪ್ಪು ಅಭಿಪ್ರಾಯಗಳನ್ನು ತಿದ್ದಿಕೊಳ್ಳಲು ಪ್ರೇರಕವಾಗಬಹುದು.

ನಿರಂಜನ ದಂಪತಿಗಳು ಬದುಕಿನಲ್ಲಿ ಕಂಡ ಸುಖ-ದುಃಖ, ಅವರ ತಾಳ್ಮೆ, ಆ ಅದಮ್ಯ ಚೇತನ, ಅವರ ಸಂಘರ್ಷಮಯ ಬದುಕು, ಅಂತಹ ಬದುಕಿನಲ್ಲೂ ಅವರ ಜೀವನೋತ್ಸಾಹ, ಅವರ ದೃಢತೆಗೆ ಎಂತಹವರೂ ಬೆರಗಾಗಿಬಿಡುವುದು ಸಹಜ. ಇಂತಹ ಮೇಧಾವಿ ದಂಪತಿಗಳ ಸ್ನೇಹಶೀಲತೆಗೆ ನಾವೂ ಭಾಜನರಾಗಿದ್ದೇವೆಂಬ ಪ್ರಜ್ಞೆ ಸದಾ ನನಗೆ ಸುಖದ ಭಾವನೆಯನ್ನು ತರುತ್ತಿದೆ. ○

ಆ ಮುಖ - ಈ ಮುಖ

–ಜಿ. ಪಿ. ಬಸವರಾಜು

ನಿರಂಜನರನ್ನು ನಾನು 'ಕಂಡದ್ದು' ಎಷ್ಟು ಸಲ ಎಂಬುದನ್ನು ಎಣಿಸಿಬಿಡಬಹುದು. ಎರಡು ಅಥವಾ ಮೂರು ಸಲ - ಸಾರ್ವಜನಿಕ ವೇದಿಕೆಗಳ ಮೇಲೆ. ಒಂದೇ ಒಂದು ಸಲ - ಖಾಸಗಿಯಾಗಿ. ಉಳಿದಂತೆಲ್ಲ ನಾನು ನಿರಂಜನರನ್ನು 'ಕಂಡದ್ದು', 'ಮಾತನಾಡಿದ್ದು' ಪತ್ರಗಳ ಮೂಲಕವೇ !

ಮೊದಲ ಸಲ ನಾನು ನಿರಂಜನರನ್ನು 'ಕಂಡದ್ದು' ಅವರ 'ಮೃತ್ಯುಂಜಯ' ಬಿಡುಗಡೆಯ ಸಂದರ್ಭದಲ್ಲಿ; ವರದಿಗಾರನಾಗಿ. ಅದು ಪುಟ್ಟ ಸಭೆ; ಬೆಂಗಳೂರಿನ ಹೋಟೆಲೊಂದರಲ್ಲಿ ನಡೆದದ್ದು; ಅಲ್ಲಿ ನೆರೆದ ಹದಿನೈದೋ ಇಪ್ಪತ್ತೋ ಮಂದಿಯ ಹೆಸರು ಹೇಳಿ ಪರಿಚಯಿಸಿದ್ದರು. ಅದರಲ್ಲಿ ನನ್ನದೂ ಒಂದು ಹೆಸರು. ಮೊದಲ ಪರಿಚಯ ಅಷ್ಟರಲ್ಲೆ ಮುಗಿದಿತ್ತು. ನಂತರ ಅವರನ್ನು ನಾನು 'ನೋಡಿದ್ದು' ಬಂಡಾಯ ಸಾಹಿತ್ಯ ಸಂಘಟನೆಯ ಉದ್ಘಾಟನೆ ಸಮಾರಂಭದಲ್ಲಿ. ಅವರು ವೇದಿಕೆಗೆ ತೆರಳುವ ಮುನ್ನ ಕಂಡ ಹತ್ತಾರು ಮುಖಗಳಲ್ಲಿ ನನ್ನದೂ ಒಂದು. ಇಷ್ಟೆ 'ಪರಿಚಯ'.

ಇದಾದ ನಂತರ ನಾನು ಶಿವಮೊಗ್ಗಕ್ಕೆ ಬಂದೆ. 'ಲು ಷುನ್' ಕಥಾ ಸಂಕಲನದ ಅನುವಾದಕ್ಕೆ ಸಂಬಂಧಿಸಿದಂತೆ ನಿರಂಜನರಿಗೆ ಕಾಗದ ಬರೆಯುವ ಪ್ರಸಂಗ ಬಂತು. ಅಂಜಿಕೆಯಿಂದಲೇ ಕಾಗದ ಬರೆದೆ; 'ನನ್ನ ಪರಿಚಯ ನಿಮಗಿರಬಹುದು' ಎಂಬ ಪೀಠಿಕೆಯಿಂದ. ಅದು ನಿರಂಜನರಿಗೆ ನಾನು ಬರೆದ ಮೊದಲ ಪತ್ರ.

ನನಗೆ ಆಶ್ಚರ್ಯ ಕಾದಿತ್ತು ! ನಿರಂಜನರ ಪತ್ರದಲ್ಲಿ ನಮ್ಮ ಭೇಟಿಯ ಎಲ್ಲ ವಿವರಗಳೂ ಇದ್ದವು. ಜೊತೆಗೆ, ನಾನು ವರದಿ ಮಾಡಿದ್ದ ಬಂಡಾಯ ಸಮ್ಮೇಳನದ ಸಾಲುಗಳೂ !

ಎಂಥ ಮೊನಚಾದ ನೆನಪು !

ಮತ್ತೆ ನಾನು ಮಂಗಳೂರಿಗೆ ವರ್ಗವಾಗಿ ಬಂದಾಗ ನಿರಂಜನರಿಗೆ ಪತ್ರ ಬರೆದೆ. ನನ್ನ ವಿಳಾಸದಲ್ಲಿದ್ದ ಎರಡು ಪದಗಳ ಬಗ್ಗೆ ಅವರು ಪ್ರಸ್ತಾಪಿಸಿದ್ದರು. ಒಂದು - ಹಂಪನಕಟ್ಟ, ಇನ್ನೊಂದು - ಮಿಲಾಗ್ರಿಸ್ ಸೆಂಟರ್. "ಹಿಂದೆ ಹಂಪ ಎನ್ನುವ ಕ್ಷೌರಿಕನಿದ್ದನಂತೆ, ಅವನು ಬಳಸುತ್ತಿದ್ದ ಕ್ಷೌರದ ಕಟ್ಟಿ ಹಂಪನ ಕಟ್ಟೆ...." "....ನಾನು ಮಂಗಳೂರಿನಲ್ಲಿದ್ದಾಗ 'ಮಿಲಾಗ್ರಿಸ್' ಎನ್ನುತ್ತಿದ್ದರು. ಹಾಗೆಯೇ ಬರೆಯುತ್ತಿದ್ದರು. ಈಗ 'ಮಿಲಾಗ್ರೇಸ್' ಎನ್ನುತ್ತಾರಾ?" ('ಮಿಲಾಗ್ರೇಸ್' ಎಂದು ಸಾರಾಸಗಟಾಗಿ ಬರೆಯುತ್ತಿದ್ದ ನಾನು ಈ ಪದದ ಬಗ್ಗೆ ಯೋಚಿಸಿದ್ದು, ಎಚ್ಚರ ವಹಿಸಿದ್ದು ನಿರಂಜನರ ಕಾಗದದ ನಂತರವೇ)

ಸ್ಥಳ, ವಸ್ತು, ವ್ಯಕ್ತಿ, ಪರಿಸರ, ಸಂಗತಿಗಳು, ಇತಿಹಾಸ, ಭೂಗೋಳ - ಹೀಗೆ ಎಲ್ಲದರ ಬಗ್ಗೆ ನಿರಂಜನರು ತಳೆಯುವ ಆಸಕ್ತಿ, ಕುತೂಹಲ, ಸಂಶೋಧಕ ಪ್ರವೃತ್ತಿ ಇವುಗಳನ್ನು ಉಲ್ಲೇಖಿಸುವುದಕ್ಕಾಗಿ ಮೇಲಿನ ಕಾಗದದ ಬಗ್ಗೆ ಬರೆಯ ಬೇಕಾಯಿತು. ನಿರಂಜನರ ಈ ಆಸಕ್ತಿಯ ಆಳ-ಹರವುಗಳು ಎಷ್ಟು ಎಂಬುದು ನಮಗೆ ಪರಿಚಯವಾಗುವುದು 'ವಿಶ್ವಕಥಾಕೋಶ'ದ ಪ್ರತಿ ಸಂಪುಟಕ್ಕೂ ಅವರು ಬರೆದಿರುವ ಮುನ್ನುಡಿಗಳಿಂದ.

ಖಂಡಿತಾ ನನಗೆ ಗೊತ್ತು: ಇಷ್ಟೆಲ್ಲ ನಾನು ಬರೆದರೂ, ನಿರಂಜನರ ಯಾವ ಮುಖವನ್ನೂ (ವ್ಯಕ್ತಿಯ) ಕಾಣಿಸಲಾಗಿಲ್ಲ ಎಂಬುದು. ಯಾಕೆಂದರೆ ನಾವೆಲ್ಲ ಬಲ್ಲಂತೆ ನಮಗೆಲ್ಲ ಎರಡು ಮುಖಗಳಿವೆ: ಒಂದು ಸಾರ್ವಜನಿಕವಾದದ್ದು; ಇನ್ನೊಂದು ಖಾಸಗಿ ಯಾದದ್ದು. ಇನ್ನೂ ಗಮನಿಸಿದರೆ ಸಾರ್ವಜನಿಕ ಮುಖ, ಮುಖವಾಗಿರುವುದಿಲ್ಲ- ಮುಖವಾಡವಾಗಿರುತ್ತದೆ. ಖಾಸಗಿಯ ಮುಖ ಮನಸ್ಸಿನ ಕನ್ನಡಿ ಎಂಬುದು ನಿಜ ವಾದರೂ ಅದು ಕಾಣಿಸುವುದೇ ಅಪರೂಪ. ವ್ಯಕ್ತಿ ಸಿಟ್ಟಿಗೆದ್ದಾಗ, ದುಃಖಗೊಂಡಾಗ, ಗಂಭೀರ ಸಂದರ್ಭದಲ್ಲಿ, ಹಲ್ಕಾತನದಲ್ಲಿ, ಹೃದಯಬಿಚ್ಚಿ ನಗುವಾಗ, ಒಂಟಿಯಾದಾಗ, ತಳಮಳಗೊಂಡಾಗ ಹೀಗೆ ಅಪ್ಪಟ ಮನುಷ್ಯನ ರೂಪ ಹೊರಬಿದ್ದಾಗ ಆ ವ್ಯಕ್ತಿಯ ನಿಜವಾದ ಮುಖ ಕಾಣಸಿಗುತ್ತದೆ.

ನಿಜಕ್ಕೂ ನಾನು ನಿರಂಜನರ ಈ 'ಮುಖ' ಕಂಡೆನೆ ?

ನಮ್ಮ ಖಾಸಗೀಭೇಟಿಯನ್ನೇ ನೋಡಿ: ನಾನು ಅತಿಥಿ; ಅವರು ಆತಿಥೇಯ. ಹಿನ್ನೆಲೆಗೆ ಸ್ನೇಹದ ಕೊಂಡಿ. ಸಂಕೋಚ ಇರಲಿಲ್ಲ; ಆದರೆ ಸಲುಗೆ ಬೆಳೆದಿರಲಿಲ್ಲ. ಒಂದೆರಡು ಗಂಟೆ ಮಾತನಾಡಿದೆವು; ಲೋಕಾಭಿರಾಮ ಎನ್ನುತ್ತಾರಲ್ಲ, ಹಾಗೆ. ಚಹಾ ಕೊಟ್ಟರು:

ಕುಡಿದೆ. ವಿಶ್ವಾಸ ತೋರಿಸಿದರು. ಪ್ರೀತಿಯ ಕೊಡುಗೆಯಾಗಿ ಅವರ ಒಂದೆರಡು ಪುಸ್ತಕಗಳನ್ನೂ ಕೊಟ್ಟರು. ವಿಲಿಯಮ್ ಸರೋಯಾನ್ ಬಗ್ಗೆ ವಿವರ ಕೇಳಿದಾಗ ಎನ್‌ಸೈಕ್ಲೋಪಿಡಿಯಾ ತರಿಸಿ ತೋರಿಸಿದರು. ಅಷ್ಟೇ ಅಲ್ಲ ತಮ್ಮ ಮಗಳಿಗೆ ಹೇಳಿ ಅದನ್ನು ಟೈಪ್ ಮಾಡಿಸಿಕೊಟ್ಟರು. ('ಲು ಷುನ್' ಬಗ್ಗೆ ಯಾವುದೋ ಪತ್ರಿಕೆಯಲ್ಲಿ ಅಚ್ಚಾಗಿದ್ದ ಲೇಖನವನ್ನು ಹೀಗೆಯೇ ಟೈಪ್ ಮಾಡಿಸಿ ನನಗೆ ಹಿಂದೆ ಕಳುಹಿಸಿದ್ದರು.)

ಇದು ಏರು - ಇಳಿವು ಇಲ್ಲದ ಭೇಟಿ. ಇಲ್ಲಿ ಕಂಡದ್ದು ಯಾವ 'ಮುಖ'?

ಆದರೂ ಪತ್ರಗಳಲ್ಲಿ ನಿರಂಜನರು ನನಗೆ ಹತ್ತಿರ; ಆತ್ಮೀಯ. ಅಲ್ಲಿನ ಅವರ ಮೋಡಿ ಅಕ್ಷರಗಳಲ್ಲಿ, ಆತ್ಮೀಯ ಧ್ವನಿಯಲ್ಲಿ ಕಾಣಿಸುವುದು ಯಾವ 'ಮುಖ'?

○

ಸಾರ್ಥಕ ಬದುಕು

-ನಾಗಮಣಿ ಎಸ್. ರಾವ್

ಧೀರ ಗಂಭೀರ ವ್ಯಕ್ತಿತ್ವ. ನೇರನಡೆ. ಶುದ್ಧ ಸಾಹಿತ್ಯ ರಚನೆ. ನಿರರ್ಗಳವಾಗಿ ಹರಿಯುವ ಚಿಂತನೆ - ಭಾಷಣದ ವೈಖರಿ. ವಿಧಿಯ ಸಂಚಿನಿಂದಾಗಿ ಆರೋಗ್ಯಕ್ಕೇ ಕುತ್ತು ಬಂದರೂ ಅದನ್ನೂ ಮೆಟ್ಟಿ ನಿಲ್ಲುವ ಕಾರ್ಯಶ್ರದ್ಧೆ - ಮತ್ತೇನು ಬೇಕು ಒಬ್ಬ ವ್ಯಕ್ತಿ ಉದಾತ್ತನೆನೆಸಿಕೊಳ್ಳಲು! ನಿರಂಜನರ ಈ ವ್ಯಕ್ತಿತ್ವ ನನ್ನಲ್ಲಿ ಯಾವಾಗಲೂ ಕುತೂಹಲ ಮೂಡಿಸಿದೆ; ಗೌರವವನ್ನು ಗೆದ್ದುಕೊಂಡಿದೆ.

ಅವರನ್ನು ನಾನು ಪ್ರಥಮತಃ ಕಂಡದ್ದು - ಸುಮಾರು ೩೫ ವರ್ಷಗಳಷ್ಟು ಹಿಂದೆ, ೧೯೫೦ರ ಸುಮಾರಿನಲ್ಲಿ. ಪ್ರೌಢಶಾಲೆಗೆ ಆಗತಾನೇ ಅಡಿಯಿರಿಸಿದ್ದ ಕಿಶೋರಿಯಾಗಿ, ಅರಳುಗಣ್ಣಿನಿಂದ ಈ ಯುವ ಧೀಮಂತ ಬರಹಗಾರರಲ್ಲಿ ಒಬ್ಬ ಆದರ್ಶ ವ್ಯಕ್ತಿಯನ್ನು ಕಂಡಿದ್ದೆ. ಕಿಶೋರಾವಸ್ಥೆಯಿಂದ ಉಳಿದೆಲ್ಲ ಅವಸ್ಥೆ - ಅವಾಂತರಗಳನ್ನು ದಾಟಿ ನಡುವಯಸ್ಸಿನ ಗಡಿಯಲ್ಲಿರುವ ಈಗಲೂ ಅವರೆಡೆಗೆ ಅಂದಿನ ಗೌರವ ಭಾವನೆಯ ಹೊಸತನ ಕಿಂಚಿತ್ತೂ ಮಸುಕಾಗಿಲ್ಲ. ಅವರು ಜೀವನ ನಡೆಸಿರುವ ದಿಟ್ಟಬಗೆ, ಎಂತೆಂತಹ ದಾರುಣ ಸಂದರ್ಭದಲ್ಲೂ ಸಾಹಿತ್ಯದೇವಿಯ ಸಿರಿಮುಡಿಲಿಗೆ ಅವರು ತುಂಬಿಸುವ ಅಮೂಲ್ಯ ಕಾಣಿಕೆಗಳು ಅವರನ್ನು ಬೆರಗುಗಣ್ಣಿನಿಂದ ಈಗಲೂ ನೋಡುವಂತೆ ಮಾಡಿದೆ.

ಕನ್ನಡ ತಾಯಿಗೆ ಈ ಒಬ್ಬ ವ್ಯಕ್ತಿ ನೀಡಿರುವ ಸಾಹಿತ್ಯ ರಾಶಿ - ಅದರ ಗುಣ ಮಟ್ಟ, ಕಂಡಾಗ, ಇದು ಸಾಧ್ಯವೇ ಎನಿಸದಿರದು. ಜ್ಞಾನಗಂಗೋತ್ರಿಯ ಸಂಪುಟ ಗಳನ್ನು ಅವರು ಕಾಲಕ್ಕೆ ಸರಿಯಾಗಿ, ಕರಾರುವಾಕ್ಕಾಗಿ, ಜನತೆಗೆ ನೀಡಿದ ಸಂದರ್ಭ ವಂತೂ ಕನ್ನಡಿಗರೆಲ್ಲರಿಗೆ ಹೆಮ್ಮೆಯ ವಿಷಯವಾದರೆ, ಅವರನ್ನು ಬಲ್ಲ ನಮಗಂತೂ ನಮ್ಮ ಕಿರೀಟಕ್ಕೇ ಮತ್ತೊಂದು ಗರಿ ಸೇರಿದಂತೆ. ಕಾದಂಬರಿಗಳು, ಕಥಾಸಂಗ್ರಹ ಗಳು, ನಾಟಕ, ಲೇಖನ ಸಂಚಿಕೆಗಳು, ಪತ್ರಿಕೋದ್ಯೋಗಿಯಾಗಿ ಬರೆದ ಅಂಕಣ ಸಂಗ್ರಹಗಳು, ಸಮುದಾಯದ ಒಳಿತಿನ ಬಗ್ಗೆ ಚಿಂತನಶೀಲರಾಗಿ ತಂದ ರಾಜಕೀಯ ಪುಸ್ತಕಗಳು - ಇವೆಲ್ಲವುಗಳನ್ನು ಕಂಡಾಗ, ನಿರಂಜನರ ಈ ದೈತ್ಯಶಕ್ತಿ - ಅಲ್ಲ, ದೈವೀಶಕ್ತಿಗೆ ನಮೋ ನಮಃ ಎಂದು ತಲೆಬಾಗಬೇಕಾಗುತ್ತದೆ.

ಬೆಂಗಳೂರಿನ ಚಾಮರಾಜ ಪೇಟೆಯ ಮೂರನೇ ರಸ್ತೆಯ ಕೊಠಡಿ ಯೊಂದಕ್ಕೆ ಅವರು ವಾಸಕ್ಕೆ ಬಂದಾಗ, ನಾನು ಅವರನ್ನು ಮೊದಲು ಕಂಡದ್ದು. ಅ.ನ.ಕೃ., ತ.ರಾ.ಸು., ಶಿವರಾಮ ಕಾರಂತರ ಹೊಸ ಹೊಸ ಕಾದಂಬರಿಗಳ ಸೊಗಸಿಗೆ ಮನಸೋತಿದ್ದ ನಾವು ಕೆಲವು ಗೆಳತಿಯರಿಗೆ, ಹಸನ್ಮುಖದ, ದಿಟ್ಟ ನಿಲುವಿನ, ಕಮ್ಯೂನಿಸ್ಟ್ ಒಲವಿನ ಶ್ರೀಮದ್‌ಗಾಂಭೀರ್ಯದ ಈ ಹೊಸ ಸಾಹಿತಿಯ ಬಗ್ಗೆ ಮೆಚ್ಚುಗೆಯೋ ಮೆಚ್ಚುಗೆ.

ಅವರ ಕೊಠಡಿ, ಮಾವೆಯಲ್ಲಿ ನನಗೆ ತಾತನವರಾಗಬೇಕಿದ್ದವರ ಮನೆಗೇ ಸೇರಿತ್ತು. ನಾವಿದ್ದ ಮನೆಯ ಎದುರೇ ಇತ್ತು. ನಮ್ಮ ರಸ್ತೆಯಲ್ಲೇ, ಹತ್ತಿರದಲ್ಲೇ ನಿರಂಜನರು ವಾಸಕ್ಕೆ ಬಂದುದು - ನಮಗೆಲ್ಲ ತುಂಬ ದೊಡ್ಡ ವಿಷಯ; ಅವರು ನಮಗೇ ಸೇರಿದ ವ್ಯಕ್ತಿಯೆಂದೇ ನಮ್ಮ ಭಾವನೆ. ಯಾವಾಗಲಾದರೊಮ್ಮೆ ಸೌಜನ್ಯ ಕ್ಕಾಗಿ ಅವರು ನಮ್ಮೊಡನೆ ಒಂದೆರಡು ಮಾತುಗಳನ್ನಾಡಿದರಂತೂ ನಮಗೆ ಸ್ವರ್ಗಕ್ಕೆ ಮೂರೇ ಗೇಣು. ಮನೆಯ ಹತ್ತಿರವೇ ಇದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಕಾರ್ಯಕ್ರಮಗಳಿಗೂ ದಾಳಿಯಿಡುತ್ತಿದ್ದೆವು. ಹಲವಾರು ಸಮಾರಂಭಗಳಲ್ಲಿ ಭಾಗ ವಹಿಸುತ್ತಿದ್ದ ನಿರಂಜನರ ನಿರರ್ಗಳ ವಾಗ್ವೈಖರಿ ಇಂದಿಗೂ ಹಚ್ಚಹಸಿರು ನಮ್ಮ ನೆನಪಿನಂಗಳದಲ್ಲಿ.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮ ಪದವಿ ಪಡೆದು, ಬೆಂಗಳೂರಿನಲ್ಲಿ ಕಾನೂನು ಸ್ನಾತಕೋತ್ತರ ಪದವೀಧರೆಯಾಗಿ, 'ತಾಯಿನಾಡು' ಪತ್ರಿಕೆಯ ಉಪಸಂಪಾದಕಿಯಾಗಿ ಕೆಲಕಾಲ ಸೇವೆ ಸಲ್ಲಿಸಿ, ಆಕಾಶವಾಣಿಯ ಪ್ರದೇಶ ಸಮಾಚಾರ ವಿಭಾಗದಲ್ಲಿ ಉದ್ಯೋಗ ಹಿಡಿದ ನಂತರ ಮತ್ತೆ ನಿರಂಜನರನ್ನು ಹತ್ತಿರದಿಂದ ಭೇಟಿಯಾಗುವ ಸಂದರ್ಭ ಒದಗಿತು. ೧೯೬೪-'೬೫ರ ನಂತರದ ಕೆಲ

ವರ್ಷಗಳಲ್ಲಿ ವಿಧಾನ ಮಂಡಲದ ಅಧಿವೇಶನ ಕಾಲದಲ್ಲಿ ವಾರಕ್ಕೆರಡು ಬಾರಿಯಾದರೂ ಅವರ ಕಾರ್ಯಕಲಾಪವನ್ನು ಪ್ರದೇಶ ಸಮಾಚಾರಕ್ಕಾಗಿ ವರದಿಮಾಡುವ ಡ್ಯೂಟಿ ನನಗೆ ಬೀಳುತ್ತಿತ್ತು. ಆಗ 'ಇನ್ಸಾ' ಸಂಸ್ಥೆಯ ಪ್ರಾದೇಶಿಕ ಪ್ರತಿನಿಧಿಯಾಗಿ ನಿರಂಜನ ಕಾರ್ಯನಿರ್ವಹಿಸುತ್ತಿದ್ದರು. ಪತ್ರಕರ್ತರಿಗೆಂದೇ ಮೀಸಲಾದ ವಿಧಾನಸಭಾ ಗ್ಯಾಲರಿಯಲ್ಲಿ ಆಗ ನಾವು ಭೇಟಿಯಾಗುತ್ತಿದ್ದೆವು. ಎಂದಿನ ಮುಗುಳುನಗೆ, ಸಭ್ಯತೆಯೇ ಎದ್ದು ಬಂದಂತಿದ್ದ ನಡೆ - ನುಡಿ, ಮೆಲುಮಾತು, ಅಗತ್ಯವಿದ್ದೆಡೆ ನೆರವು. ನಿರಂಜನರ ಈ ವ್ಯಕ್ತಿತ್ವವನ್ನು ಯಾರು ತಾನೇ ಮೆಚ್ಚದಿರಲು ಸಾಧ್ಯ !

ಇನ್ಸಾದ ಕೆಲಸದ ಜೊತೆಗೇ ನಿರಂಜನ ಆಗ ಇನ್ನೂ ಹಲವಾರು ಪತ್ರಿಕೆಗಳಿಗೂ ಅಂಕಣಗಾರರಾಗಿದ್ದರು. ದಿನನಿತ್ಯದ ವಾಸ್ತವಿಕ ವರದಿಯಲ್ಲೇ ಅವರು ಮೂಡಿಸುತ್ತಿದ್ದ ಲಘುಹಾಸ್ಯ, ವಿಡಂಬನೆ, ಚಿಂತನೆ ಇಂದಿಗೂ ಮಾರ್ಗದರ್ಶನವಾಗಬಲ್ಲ ಬರವಣಿಗೆ.

ನಿರಂಜನ ತುಂಬ ಸಹೃದಯಿ, ಗುಣಗ್ರಾಹಿ. ಬೇರೆಯವರಲ್ಲಿ ಸ್ವಲ್ಪ ಪ್ರತಿಭೆ ಕಂಡುಬಂದರೂ ಮೆಚ್ಚಿ ನುಡಿಯುವ ಹೃದಯ ಶ್ರೀಮಂತಿಕೆ ಅವರದು. ನಾನು ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಸತತವಾಗಿ ಪ್ರದೇಶ ಸಮಾಚಾರವನ್ನು ಹಲವಾರು ವರ್ಷಗಳ ಕಾಲ ಓದಿದ್ದೇನೆ. ಇದು ನನಗೆ ಹಲವಾರು ಅಭಿಮಾನಿಗಳನ್ನು ಸಂಪಾದಿಸಿಕೊಟ್ಟಿದೆ. ನನ್ನ ಓದಿನ ಬಗ್ಗೆ ನಿರಂಜನರಿಗೆ ತುಂಬ ಮೆಚ್ಚುಗೆ. ಅವರು ಬಾಯಿತುಂಬ ಹೊಗಳಿದಾಗ ನನಗೇ ಸಂಕೋಚವಾಗುತ್ತಿತ್ತು. ಆದರೂ ಇಂತಹ ಒಬ್ಬ ಗಟ್ಟಿ ವ್ಯಕ್ತಿಯಿಂದ, ಮೇಧಾವಿಯಿಂದ, ಹೊಗಳಿಸಿಕೊಂಡೆನಲ್ಲ ಎಂಬ ಆನಂದವೂ ಒಳಗೊಳಗೇ ಹಿರಿಹಿಗ್ಗುತ್ತಿತ್ತು. ಇದು ನಿರಂಜನರ ದೊಡ್ಡತನ.

ಕಳೆದ ಕೆಲ ವರ್ಷಗಳಿಂದ ನಿರಂಜನ ದೇಹಾಲಸ್ಯಕ್ಕೆ ಈಡಾಗಿದ್ದಾರೆ. ಆದರೂ ಅವರು ಬದುಕಿನಿಂದ ವಿಮುಖರಾಗಿಲ್ಲ. ಈಗಲೂ ಒಂದಲ್ಲ ಒಂದು ವಿಧದಲ್ಲಿ ಅವರ ಸಾಹಿತ್ಯ ಕೈಂಕರ್ಯ ಮುಂದುವರಿದಿದೆ. ಸಾರ್ಥಕ ಅಪೂರ್ವ ಋಜು ಜೀವನ ಅವರದು.

○

ಪ್ರಾಮಾಣಿಕ ಲೇಖಕ

—ಡಾ। ರೊಬೆರ್ತ್ ಜೆಯ್ದೆನ್ಬೊಸ್

ಬಹುಪಾಲು ಓದುಗರೂ ವಿಮರ್ಶಕರೂ ನಿರಂಜನರನ್ನು ಕನ್ನಡ ಸಾಹಿತ್ಯದ ಪ್ರಗತಿಶೀಲರ ಗುಂಪಿನಲ್ಲಿ ಸೇರಿಸುತ್ತಾರೆ. ಅವರ ಬರಹಗಳಲ್ಲಿ ಮತೀಯತೆ, ಜಾತೀಯತೆ, ಆರ್ಥಿಕ ಶೋಷಣೆಗಳಂಥ ಸಾಮಾಜಿಕ ಅನ್ಯಾಯಗಳನ್ನು ನಾಶಪಡಿಸಬೇಕು, ಕುರುಡುನಂಬಿಕೆಗಳನ್ನೂ ಅಜ್ಞಾನವನ್ನೂ ಅಸತ್ಯವನ್ನೂ ಅಳಿಸಿ ನ್ಯಾಯಬದ್ಧ ವೈಚಾರಿಕತೆಯನ್ನು ಸ್ಥಾಪಿಸಬೇಕು ಎಂಬ ವಿಶಿಷ್ಟ ಆದರ್ಶಗಳಿವೆ. ಇಂಥ ಆದರ್ಶಗಳಲ್ಲಿ ಹೊಸತೇನಿಲ್ಲ ಎನ್ನಬಹುದು. ಹನ್ನೆರಡನೆಯ ಶತಮಾನದಲ್ಲಿ ಬಗೆಬಗೆಯ ಕುರುಡು ನಂಬಿಕೆಗಳನ್ನು ನಿರ್ನಾಮ ಮಾಡಬೇಕೆಂದು ಜೈನ ಕವಿಯಾದ ಬ್ರಹ್ಮಶಿವ ತನ್ನ 'ಸಮಯಪರೀಕ್ಷೆ'ಯನ್ನು ಬರೆದನು. ಅದೇ ಕಾಲದಲ್ಲಿ ಬಸವಣ್ಣ, ಅಲ್ಲಮ ಮುಂತಾದ ವೀರಶೈವ ವಚನಕಾರರು ಸಾಮಾಜಿಕ ವಿಕಾರಗಳನ್ನು ಟೀಕಿಸಿದರು. ಆದರೆ ಇವರೆಲ್ಲರೂ ತಮ್ಮ ಪ್ರಯತ್ನಗಳಲ್ಲಿ ಸೋತರು ಎಂಬುದು ಸ್ಪಷ್ಟವಾಗಿದೆ. ಇದರ ಒಂದು ಕಾರಣ ಅವರ ಮತೀಯತೆ ಎನ್ನಬೇಕು. ಈ ಪ್ರಯತ್ನಗಳು ಎಷ್ಟೇ ಮುಖ್ಯವಾದರೂ ಇವು ಪೂರ್ತಿಯಾಗಿ ವೈಚಾರಿಕತೆಯಿಂದ ಬರೆಯಲ್ಪಟ್ಟಿಲ್ಲ. ಪ್ರಗತಿಶೀಲರು ಇಂಥ ವೈಚಾರಿಕತೆಯಿಂದ ಬರೆಯಲು ಶ್ರಮಿಸಿದರು. ಇದು ಕನ್ನಡ ಸಾಹಿತ್ಯದಲ್ಲಿ ಹೊಸತು.

ನನಗೆ ಗೊತ್ತಾದಂತೆ ಪ್ರಗತಿಶೀಲರ ಪೈಕಿ ಉಳಿದವರಿಗಿಂತ ಸ್ಥಿರವಾದ, ಬೌದ್ಧಿಕ ಪ್ರಾಮಾಣಿಕತೆಯುಳ್ಳ ಆದರ್ಶನಿಷ್ಠೆಯಿಂದ ಬರೆಯುತ್ತಿರುವವರು ನಿರಂಜನರು. ಸುಸಂಬದ್ಧವಾಗಿ ಬರೆವ ಲೇಖಕರು ಅನೇಕರಿದ್ದಾರೆ; ಅವರಲ್ಲಿ ಕೆಲವರು ತಮ್ಮ ಬರಹಗಳಲ್ಲಿ ಸಮತೆ, ಮಾನವತಾವಾದ, ಮತಾತೀತತೆಗಳನ್ನು ಪ್ರೋತ್ಸಾಹಿಸುತ್ತಾರೆ. ಈ ಗುಂಪಿನಲ್ಲಿ ಕೆಲವರು ನಮಗೆ ಟೋಪಿ ಹಾಕುತ್ತಾರೆ ಎಂಬುದು ಹೊಸ ಸುದ್ದಿ ಅಲ್ಲ. ಮೂರು ವರ್ಷಗಳ ಹಿಂದೆ ನಾನು ಮೊದಲನೆಯ ಸಾರಿ ನಿರಂಜನರನ್ನು ಭೇಟಿಯಾದೆ. ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿ ನೆದರ್ಲೆಂಡ್ಸಿನಿಂದ ಬಂದು ಇಲ್ಲಿನ ಲೇಖಕರನ್ನು ಸಂಧಿಸಿ ನನ್ನ ಮಹಾಪ್ರಬಂಧದ ಬಗ್ಗೆ ಮಾತಾಡುತ್ತ ಕಲಿಯಬಯಸಿದೆ. ಕನ್ನಡ ಸಾಹಿತ್ಯ, ಈಚಿನ ಇತಿಹಾಸ, ಸಾಮಾಜಿಕ ರಚನೆ ಮತ್ತು ಬೆಳವಣಿಗೆಗಳು, ಜನರ ರೂಢಿಗಳು, ಚಟಗಳು ಇವೆಲ್ಲವುಗಳ ಬಗ್ಗೆ ಕಲಿಯಬೇಕಿತ್ತು. ಆ ಮೊದಲನೆಯ ಭೇಟಿಯ ತರುವಾಯ, ನಾನು ಕೆಲವು ತಾಸುಗಳ ಕಾಲ ನಿರಂಜನರೊಡನೆ ವಿವಿಧ ವಿಷಯಗಳ ಬಗ್ಗೆ ಮಾತಾಡುವ ಭಾಗ್ಯವನ್ನು ಅನುಭವಿಸಿದೆ. ಅವರ ಮುಚ್ಚುಮರೆಯಿಲ್ಲದ, ನೇರವಾದ ಶೈಲಿ ಕೂಡಲೇ ನನ್ನ ಮನಸ್ಸನ್ನು ಸೆರೆಹಿಡಿದವು. ಇದು ತುಂಬ ವೈಯಕ್ತಿಕ ಶೈಲಿ. ಸುಸಂಸ್ಕೃತ ಮಾನವರ ಸೂಕ್ಷ್ಮ

ಭಾಷಾ ಪ್ರಯೋಗ ಅವರದು (ನನ್ನ ಅಭಿಪ್ರಾಯದಲ್ಲಿ, ಅಷ್ಟು ಅಂದವಾದ ಕನ್ನಡದಲ್ಲಿ ಕೆಲವರು ಮಾತ್ರ ಬರೆಯುತ್ತಾರೆ. ವೈಯಾಕರಣಿಕ ನಿಷ್ಕೃಷ್ಟತೆ, ವಿಶಾಲ ಶಬ್ದಜ್ಞಾನದಲ್ಲಿನ ಶಬ್ದಗಳ ಅಲ್ಪ ವ್ಯತ್ಯಾಸಗಳ ಸೂಕ್ಷ್ಮವಾದ ಬಳಕೆಗಳು ಅವರ ಬರೆವಣಿಗೆಗೆ ಒಂದು ವಿಶಿಷ್ಟ ಆಕರ್ಷಣೆಯನ್ನು ಕೊಡುತ್ತವೆ). ಅಂತೂ ಅವರು ಬರೆವ ರೀತಿಯಲ್ಲೇ ಮಾತಾಡುತ್ತಾರೆ. ಹೀಗೆ, ಅವರು ಬರೆವ ಶೈಲಿ ಸ್ವೈಸರ್ಗಿಕವಾಗಿರುವುದನ್ನು ನಾವು ಕಾಣುತ್ತೇವೆ.

ಆದರೆ ಅದಕ್ಕಿಂತ ಅವರ ಬರಹಗಳಲ್ಲಿನ ಮುಖ್ಯವಾದ ಒಂದು ಅಂಶ ಉಂಟು. ಅವರು ಮಾತಾಡುವ ಭಾಷೆಯೂ ಬರೆವ ಭಾಷೆಯೂ ಒಂದೇ ಇರುವಂತೆಯೇ, ಅವರ ಬರಹಗಳಲ್ಲಿ ತೋರುವ ಆದರ್ಶಗಳನ್ನೂ ತತ್ತ್ವಗಳನ್ನೂ ಕುರಿತು ನಿಜಜೀವನದಲ್ಲೂ ಅವರಿಗೆ ನಿಷ್ಠೆ ಇದೆ. ಆದರ್ಶವಾದಿಯಾಗಿ ಉದಾರವಾದ ಯೋಜನೆಗಳನ್ನು ಬರೆವ, ಜೀವನದಲ್ಲಿ ಅವುಗಳಿಗೆ ವಿರುದ್ಧವಾಗಿ ಬಾಳುತ್ತ ನಾವು ಹಾಕುವ ಎಷ್ಟು ಮಂದಿ ಬರಹಗಾರರು ಇದ್ದಾರೆ! ವಿದೇಶೀಯ ಪುಸ್ತಕ ಮಾರುಕಟ್ಟೆಗೋಸುಗ ಇಂಗ್ಲಿಷಿನಲ್ಲಿ ರಹಸ್ಯಾತ್ಮಕ ಪೂರ್ವಲೋಕದ ಬಗ್ಗೆ ಬರೆವ ಬೂಟಾಟಗಾರರೂ, ಇಲ್ಲಿನ ಭಾವುಕತೆಯ ಮಾರುಕಟ್ಟೆಗೋಸುಗ ಸ್ಥಳೀಯ ಮತೀಯತೆಯ ಹಿರಿಮೆ ಎಂಬಂಥದರ ಬಗ್ಗೆ ಬರೆವ ಮೋಸಗಾರರೂ ಅಸಂಖ್ಯರು. ನಿರಂಜನರಲ್ಲಿ ಮೊದಲಿನಿಂದಲೂ ಇರುವ ಧಾರಾಳ ಮಾನವತಾವಾದ ಈಗಲೂ ಜೀವಂತವಾಗಿದೆ, ಅವರ ದೈನಿಕ ಜೀವನದಲ್ಲಿ. ಮನುಷ್ಯರ ನಡುವೆ ಕೃತಕ ಭೇದಗಳಿರಕೂಡದು, ಎಲ್ಲರೂ ಮಾನವ ಜಾತಿಯವರು ಎಂಬ ತತ್ತ್ವ ಅವರ ಬರಹಗಳಲ್ಲಿ ಮಾತ್ರ ತೋರುತ್ತಿಲ್ಲ; ತದ್ನಿಷ್ಠರಾಗಿ ಸ್ವತಃ ಜೀವನದಲ್ಲಿ ಕೂಡ ತೋರಿಸುತ್ತಾರೆ. ನಾನು ನನ್ನ ಅಧ್ಯಯನಗಳನ್ನು ಪ್ರಾರಂಭಿಸಲಿಕ್ಕೆ ಇಲ್ಲಿ ಬಂದಾಗ ಹೃತ್ಪೂರ್ವಕವಾಗಿ ಆತಿಥ್ಯವನ್ನು ನೀಡಿ ಆಸಕ್ತಿಯನ್ನು ತೋರಿಸಿದವರಲ್ಲಿ ಅವರೂ ಒಬ್ಬರು. ನಾನು ಕರ್ನಾಟಕದ ಒಬ್ಬ ಮಗಳನ್ನು ಮದುವೆಯಾದಾಗ, ಈ ಬಗ್ಗೆ ಹರ್ಷಿಸಿ ತಮ್ಮ ಖುಷಿಯನ್ನು ತೋರಿಸುತ್ತ, ಇದನ್ನು ಸ್ವಾಗತಿಸಿದ ಕೆಲವರಲ್ಲಿ ಅವರೂ ಒಬ್ಬರು.ಸಾಹಿತ್ಯ ಮೊದಲಾದ ಎಲ್ಲ ಕಲೆಗಳೂ ಜೀವನದಿಂದ ಉಷ್ಣವಿಸಿದುದರಿಂದ ಇದರ ಸಂಪರ್ಕವನ್ನು ಎಂದಿಗೂ ಕಳೆದುಕೊಳ್ಳಬಾರದು. ಕಲಾಕೃತಿಗೆ ಜೀವನದ ಜತೆ ಸಂಪರ್ಕ ಇರದಿದ್ದರೆ, ಅದು ಜೀವಂತ ಕೃತಿ ಅಲ್ಲ. ಒಬ್ಬ ನಿಜವಾದ, ತಾಕತ್ತಿರುವ ಕಲಾವಿದನಿಗೆ ಈ ಜೀವ ಕೊಡುವ ಸಂಪರ್ಕ ಕಣ್ಣಿನಿಂದ ತಪ್ಪುವುದಿಲ್ಲ. ತನ್ನ ಕೃತಿಗಳಲ್ಲಿ ಸೇರಿಸಿದ ತತ್ತ್ವಗಳ ಸತ್ಯವನ್ನು ಅವನು ತನ್ನ ಜೀವನದಲ್ಲಿ ತೋರಿಸುತ್ತಾನೆ.

ಜಗತ್ತಿನಲ್ಲಿನ ಎಲ್ಲ ಸಾಹಿತ್ಯಗಳಲ್ಲಿ ನಿಜವಾದ ಒಳ್ಳೆಯ ಲೇಖಕರು ಹೆಚ್ಚು ಜನಪ್ರಿಯರಲ್ಲ. ಇದರ ಕಾರಣ ಸರಳ: ಮೇಲ್‌ಹಂತದ ಸಾಹಿತ್ಯ ಬರೆಯುವುದೂ

ಓದುವುದೂ ಬೌದ್ಧಿಕ ಪ್ರಕ್ರಿಯೆಗಳು. ಲೇಖಕ ಬುದ್ಧಿಜೀವಿ. ತನ್ನ ಪರಿಸರವನ್ನೂ ಪರಿಸ್ಥಿತಿಯನ್ನೂ ವಿಶ್ಲೇಷಿಸಿ, ಮಾನಸಿಕವಾಗಿ ಗ್ರಹಿಸಿ, ತನ್ನ ತಿಳುವಳಿಕೆಯನ್ನು ಶಬ್ದಗಳ ಸಾಹಿತ್ಯ ರೂಪದಲ್ಲಿ ಓದುಗರ ಮುಂದೆ ಇಡುತ್ತಾನೆ. ಬರಹಗಾರನ ಭಾವನೆ-ಯೋಚನೆಗಳು ಮೇಲಿನ ಹಂತಹವುಗಳಾದರೆ, ಅವನ್ನು ತಿಳಿಯಲು, ಅನುಸರಿಸಲು, ಕೃತಿಯನ್ನು ರುಚಿಸಿ ಅನುಭವಿಸಲು ಓದುಗರು ತುಸು ಜಾಸ್ತಿಯೋಚಿಸುವುದು ಅವಶ್ಯ. ಒಳ್ಳೆಯ ಲೇಖಕರ ಕೃತಿಗಳಿಗೆ ಸರಿಯಾಗಿ ಬೆಲೆಕೊಡುವ, ಅವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಒಳ್ಳೆಯ ಓದುಗರು ಬುದ್ಧಿವಂತರಿರಬೇಕು. ನಮ್ಮ ಜಗತ್ತಿನಲ್ಲಿ ಬುದ್ಧಿವಂತಿಕೆಯುಳ್ಳವರ ಸಂಖ್ಯೆ ಕಡಿಮೆ. ಇದರಿಂದಾಗಿ ಒಳ್ಳೆಯ ಪುಸ್ತಕಗಳ ಮಾರಾಟ ಆರ್ಥಿಕ ದೃಷ್ಟಿಯಿಂದ ಲಾಭಕರವಲ್ಲ. ಹೀಗಿದ್ದರೂ ಹಲವು ದೇಶಗಳಲ್ಲಿ ಪ್ರಮುಖ ಲೇಖಕರ ಮುಖ್ಯ ಕೃತಿಗಳು ಸತತವಾಗಿ ಸುಲಭವಾಗಿ ದೊರಕುತ್ತವೆ. ಅಲ್ಲಿ ಇದು ದೇಶಕ್ಕೆ ಗೌರವ ತರುವ ವಿಷಯವಾಗಿದೆ ಎಂದು ಭಾವಿಸುತ್ತಾರೆ. ನಾಡಿನ ಸಂಸ್ಕೃತಿಯ ರಕ್ಷಕನಾಗಿ ಒಬ್ಬ ಪ್ರಕಾಶಕ ಈ ಕೆಲಸ ಕೈಗೊಳ್ಳುತ್ತಾನೆ. ಕನ್ನಡದಲ್ಲಿ ಬೇಕಾದಷ್ಟು ಅಚ್ಚಾದ ಹುಚ್ಚು ಕಸವೂ ದೊರಕಬಹುದಿದ್ದರೂ, ಭಾಷೆಯ ಶ್ರೇಷ್ಠ ಲೇಖಕರ ಮುಖ್ಯ ಕೃತಿಗಳು ದೊರಕುತ್ತಿಲ್ಲ ಎಂಬುದು ನಾಚಿಕೆಗೊಳಿಸುವಂಥ, ತಿದ್ದಬೇಕಾದ ವಿಷಯ. ಪ್ರಕಾಶಕರಿಗೆ ಇದು ಆರ್ಥಿಕವಾಗಿ ಕಠಿಣ ಕೆಲಸ ಇರಬಹುದು. ಆದರೆ ಉತ್ತರ ಯುರೋಪಿನ ದೇಶಗಳ ಮಾದರಿಗನುಗುಣವಾಗಿ ಆಸಕ್ತ ಓದುಗರು ಪ್ರಕಟಣಾಪೂರ್ವ ಬೆಲೆಯನ್ನು ಕೊಟ್ಟು ಒಂದು 'ನಿರಂಜನ - ರಚನಾವಳಿ'ಯನ್ನು ಪಡೆಯಬಹುದಾದರೆ, ಇದನ್ನು ಹೊರತರಲು ಪ್ರಕಾಶಕರಿಗೆ ಸಾಕಾದಷ್ಟು ಬಂಡವಾಳ ಸಿಗಬಹುದು ಎನಿಸುತ್ತೆ. ನಿರಂಜನರು ಈಗ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಗೌರವಸದಸ್ಯರಾಗಿದ್ದಾರೆ ಮತ್ತು ಇದರಿಂದಾಗಿ ಪರಿಷತ್ತು ಅವರ ಒಂದು ಪುಸ್ತಕವನ್ನು ಪ್ರಕಾಶಿಸುವುದೂ ಪ್ರಶಂಸನೀಯವಾಗಿದೆ. ಆದರೆ ಮುಂದಿನ ಪೀಳಿಗೆ ನಿರಂಜನರು ಏಕೆ ಈ ಗೌರವವನ್ನು ಹೊಂದಿದ್ದಾರೆ ಎಂದು ತಿಳಿಯಲಿಕ್ಕೆ ಈ ಒಂದು ಪುಸ್ತಕ ಸಾಲದು. ನಿರಂಜನರ ಇಂಥ ಕೃತಿಗಳಿಗೆ ಓದುಗರೂ ಪ್ರಕಾಶಕರೂ ಬೆಂಬಲ ತೋರಿಸಬೇಕಾಗಿದೆ.

○

'ಪತ್ರ'ಕರ್ತ

–ಪ್ರಭಾಕರ ಶಿಶಿಲ

ನಿರಂಜನರ ಬಗೆಗಿನ ನನ್ನ ಆಸಕ್ತಿಗೆ ಕಾರಣಗಳು ಮೂರು: ಒಂದು, ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಅಗತ್ಯವಾಗಿರುವ ಜಾತ್ಯತೀತ ವಿವಾಹದ ಸಾಧನೆ. ಎರಡು, 'ಮೃತ್ಯುಂಜಯ', 'ಚಿರಸ್ಮರಣೆ'ಗಳಂತಹ ಶಾಶ್ವತ ಮೌಲ್ಯಗಳ ಕಾದಂಬರಿಗಳಿಂದ ಪ್ರಗತಿಪಂಥವನ್ನು ಸಾಹಿತ್ಯ ಕ್ಷೇತ್ರದಲ್ಲಿ ಗಟ್ಟಿಗೊಳಿಸಿದುದು. ಮೂರು, ಅವರು ಸುಳ್ಯ ತಾಲೂಕಿನ ಕುಳುಕುಂದದ ಶಿವರಾಯರು.

'ರಾಷ್ಟ್ರಬಂಧು'ವಿನಲ್ಲಿ ಪತ್ರಕರ್ತರಾಗಿದ್ದ ನಿರಂಜನರನ್ನು ಇಂದು ಸಾಹಿತ್ಯ ಲೋಕ ಪತ್ರಕರ್ತ ಎಂದು ಗುರುತಿಸದು. ನಾನು ನಿರಂಜನರನ್ನು ಕಂಡು ಮಾತಾಡಿದುದು ಕೇವಲ ಒಂದೇ ಬಾರಿಯಾದರೂ ಅವರ ಆತ್ಮೀಯನಾಗಿಬಿಟ್ಟಿದ್ದೇನೆ. ಇವಕ್ಕೆ ಕಾರಣ ನಮ್ಮ ನಡುವಿನ ಪತ್ರವ್ಯವಹಾರ. ಆದಕ್ಕೆಂದೇ ನಿರಂಜನರು ನನ್ನ ಪಾಲಿಗೆ ಈಗಲೂ 'ಪತ್ರ'ಕರ್ತರೇ.

ನಿರಂಜನರು ವಿಶ್ವಕಥಾಕೋಶದ ಮೂಲಕ ನನಗೆ ಇನ್ನಷ್ಟು ಹತ್ತಿರವಾದರು. ಡಾ| ಅನುಪಮಾ ನಿರಂಜನರು 'ತರಂಗ'ದಲ್ಲಿ 'ನೆನಪು: ಸಿಹಿ - ಕಹಿ' ಹೇಳತೊಡಗಿದಾಗ ಆದಾಗಲೇ ಜಾತ್ಯತೀತ ವಿವಾಹ ಮಾಡಿಕೊಂಡಿದ್ದ ನನಗೆ - ಶೈಲಿಗೆ ನಿರಂಜನ ಕುಟುಂಬದ ಅನುಭವ ಮಾರ್ಗದರ್ಶಕವಾದವು. ತೇಜಸ್ವಿನಿಯ ವಿವಾಹದ ಆಮಂತ್ರಣ ಬಂದಾಗ ನಿರಂಜನರಿಗೆ ಪತ್ರಬರೆದು ನಮ್ಮ ಬಗ್ಗೆ ತಿಳಿಸಿದೆ.ಅದು ನನ್ನ ಮೊದಲ ಪತ್ರ.

ತಮ್ಮ ಮೊದಲ ಪತ್ರದಲ್ಲಿ ನಿರಂಜನರು ಹೀಗೆ ಬರೆದರು "....ತೇಜಸ್ವಿನಿ ಹತ್ತನೆಯ ವರ್ಷದವಳಿದ್ದಾಗ ಕೇಳಿದ್ದಳು. 'ನಮ್ಮಿಂದ ಒಂದು ಹೊಸ ನಾಗರಿಕತೆ ಆರಂಭವಾಗ್ತದೆ ಅಲ್ಲವೆ ?' ಮಗುವಿಗೆ ಇಪ್ಪತ್ತು ಲಕ್ಷ ವರ್ಷಗಳ ಮನುಷ್ಯನ ಕಥೆಯನ್ನು ಚುಟುಕಾಗಿ ಹೇಳಿ ಭ್ರಮೆ ಹೋಗಲಾಡಿಸಿದೆ. ಆದರೂ ಕನಸುಗಳಿಗೇನು ಬರಗಾಲ? ....ಪ್ರೇಮ ಎಂದರೇನು ? ಹತ್ತೊಂಭತ್ತರ ವಯಸ್ಸಿನಿಂದಲೂ ಉತ್ತರ ಹುಡುಕುತ್ತಿದ್ದೇನೆ. ಸಿಕ್ಕಿಲ್ಲ. ಇದೊಂದು ವಿಚಿತ್ರ ರಾಸಾಯನಿಕ ಕ್ರಿಯೆ. ನನ್ನ ಆಸೆ ಇಷ್ಟೆ. ಈ ರಾಸಾಯನಿಕ ಕ್ರಿಯೆ Regenerative ಆಗಬೇಕು. ....ಎಲ್ಲ ಹಂತಗಳಲ್ಲೂ ಮೊದಲ ದಿನಗಳ ಪ್ರೇಮವೇ ರಾರಾಜಿಸಬೇಕು. ಇತರರಿಂದ ಆಗದ್ದು ನಿಮ್ಮಿಂದ ಸಾಧ್ಯವಾಗಬೇಕು." ನವವಿವಾಹಿತರಿಗೆ ಎಂತಹ ಪ್ರೋತ್ಸಾಹ !

೧೯೮೪ರ ಅಕ್ಟೋಬರಲ್ಲಿ ಪಿ.ಯು.ಸಿ. ಮೌಲ್ಯಮಾಪನಕ್ಕೆ ಬೆಂಗಳೂರಿಗೆ ಹೋಗಿದ್ದಾಗ ಗೆಳೆಯ ಬೆಳ್ಳಿಯಪ್ಪರೊಡನೆ ಜಯನಗರದಲ್ಲೆಲ್ಲಾ ಅಲೆದು ಕೊನೆಗೂ

ಮನೆಸಿಕ್ಕಿದಾಗ ಬಾಗಿಲು ತೆರೆದದ್ದು ಸೀಮಂತಿನಿ. ಕೈಜೋಡಿಸುತ್ತಾ ಅನುಪಮಾರು ಬಂದರು. 'ನೆನಪು: ಸಿಹಿ - ಕಹಿ'ಯ ನಾಯಕಿಯನ್ನು ಕಂಡಾಗ ಏನು ಮಾತಾಡ ಬೇಕು ಎನ್ನುವುದೇ ಮರೆತುಹೋಗಿತ್ತು.

ನಾಲ್ಕು ಗಂಟೆಗೆ ಸರಿಯಾಗಿ ನಿರಂಜನರ ಕೋಣೆಯ ಬಾಗಿಲು ತೆರೆದು ಕೊಂಡಿತು. ಬಹುದಿನಗಳಿಂದ ಕಾಣಬೇಕೆಂದು ಆಶಿಸಿದ್ದ ನನ್ನ ಆದರ್ಶ ವ್ಯಕ್ತಿಯನ್ನು ಕಂಡಾಗ ಮಾತುಬಾರದ ಸ್ಥಿತಿ. ಆಕಸ್ಮಾತ್ತಾಗಿ ಅಂದು ಬಂದ ಕವಿ ವಿ.ಜಿ. ಭಟ್ಟರು ನಮ್ಮನ್ನು ಆ ಸ್ಥಿತಿಯಿಂದ ಪಾರುಮಾಡಿದರು.ನಿರಂಜನರು ಆಗ ಹೇಳಿದ ಮಾತೊಂದು ಚೆನ್ನಾಗಿ ನೆನಪಿದೆ: "ವಿ. ಜಿ. ಭಟ್ಟರ ದೇಹವೇ ಒಂದು ಕಾವ್ಯ. ನೀವು ಹೀಗೆ ಬೆರಳು ಮಿಡಿದರೆ ಸಾಕು. ನಾದ ಹೊರಡುತ್ತದೆ."

ಮುಂದೊಂದು ಪತ್ರದಲ್ಲಿ ನಿರಂಜನರು ಹೀಗೆ ಬರೆದರು: "ಕಹಿ ಬದುಕಿನಲ್ಲಿ ನಾನು ಕಲಿತ ಪಾಠಗಳಲ್ಲಿ ಒಂದು: ಸದ್ಭಾವನೆಯ ರಕ್ಷಾಕವಚ ಹೆಜ್ಜೆ ಹೆಜ್ಜೆಗೂ ಬೇಕು. ಸತ್ಪಾತ್ರರಿಗೆ ಸದ್ಭಾವನೆಯನ್ನು ಧಾರಾಳವಾಗಿ ನೀಡಿ. ಇತರರಿಂದ ಅದನ್ನು ನಿಸ್ಸಂಕೋಚವಾಗಿ ಪಡೆಯಬೇಕು. ಅದ್ದರಿಂದಲೇ ಸುಳ್ಯ - ಬೆಂಗಳೂರು ನಡುವಿನ ಈ ಹೊಸ ಸಂಬಂಧ ಇಷ್ಟ."

ನಿರಂಜನರ 'ಮುಖತಃ'ದ ಕೊನೆಯ ಸಂದರ್ಶನ ಓದಿ ಅವರಿಗೆ ಪತ್ರಿಸಿದೆ. "ಬರಹಗಾರರಲ್ಲಿ ಭಾವುಕತೆ ಇರಬಾರದು. ಗವಿವಾಸದ ನೀವು ಸಾಹಿತ್ಯ ಲೋಕ ದಲ್ಲೆಲ್ಲಾ ವಿಹರಿಸುತ್ತಿದ್ದೀರಿ. ಬೇಸರ ಬೇಡ." ಅದಕ್ಕೆ ನಿರಂಜನರು ಉತ್ತರಿಸಿದರು: "ಇಮೋಶನ್ ಎಲ್ಲರಲ್ಲೂ ಇದೆ. ಸೆಂಟಿಮೆಂಟ್ ಸ್ವಾಭಾವಿಕವಾದುದು. ಆದರೆ ಸೆಂಟಿಮೆಂಟಲ್ ಆಗುವುದು ಸರಿಯಲ್ಲ. ನಾನು ಇಮೋಶನಲ್ ಆಗುತ್ತೇನೆ. ಸೆಂಟಿ ಮೆಂಟಲ್ ಆಗುವುದಿಲ್ಲ.... ಗವಿವಾಸದ ಏಕಾಂತ ಆಗಾಗ್ಗೆ ಸೃಜನಶೀಲ ಲೇಖಕನಿಗೆ ಬೇಕು."

ಶೈಲಿಯೊಡನೆ ನಿರಂಜನರಲ್ಲಿಗೆ ಹೋಗಬೇಕೆಂದುಕೊಂಡಿದ್ದೆ. ನಿರಂಜನರಿಗೆ ಏನು ಕೊಂಡುಹೋಗುವುದು ಎಂದು ತಿಳಿಯದೆ ಅವರಿಗೇ ಬರೆದು ಕೇಳಿದೆ. "ಶೈಲಿಯ ಒಂದು ಹಿಡಿ, ನಿಮ್ಮ ಒಂದು ಹಿಡಿ - ಹೀಗೆ ಎರಡು ಹಿಡಿ ನೇರುಬೀಜ ತನ್ನಿ. ಎರಡೇ ಹಿಡಿ. ಮುಂದೆ ಬಂದಾಗ ಎರಡರ ಜತೆ ಪುಟ್ಟದೊಂದು ಹಿಡಿಯೂ ಇರುತ್ತದೆ!"

ತೇಜಸ್ವಿನಿಯನ್ನು ತುಂಬಾ ಹಚ್ಚಿಕೊಂಡಿದ್ದ ನಿರಂಜನರಿಗೆ ಆಕೆ ಅಮೇರಿಕಾಕ್ಕೆ ಹೋದುದು ಅಗಲಿಕೆಯ ನೋವುಂಟುಮಾಡುತ್ತಿತ್ತು. ಕಳೆದ ವರ್ಷ ಡಾ। ಅನುಪಮಾ ಸಾವನ್ನು ಗೆದ್ದು ಬಂದ ಬಳಿಕ ತೇಜಸ್ವಿನಿ ತಾಯಿಯನ್ನು ನೋಡಲೆಂದು ಬಂದಿದ್ದರು.

ತೇಜಸ್ವಿನಿ ವಾಪಾಸಾದಾಗ ನಿರಂಜನರು ಬರೆದರು: "ಕಳೆದ ಒಂದು ತಿಂಗಳು ಯಾವ ಬರವಣಿಗೆಯೂ ಸಾಧ್ಯವಾಗದೆ ಹೋಯಿತು. ತೇಜಸ್ವಿನಿ ಹುಟ್ಟಿದಾಗ ಇಪ್ಪ ಸ್ಥಿತಿಯೇ ಈಗಲೂ. ಹಾಗೆ ನೋಡಿವರೆ ಅವಳು ಮನೆಯಲ್ಲಿರುತ್ತಿದ್ದುದೇ ಕಡಿಮೆ. ಜನವರಿ 2ರಂದು ವಾಪಾಸಾದಳು. ನಾನಿನ್ನೂ normal ಆಗಿಲ್ಲ."

ತಮ್ಮ ಊರು ಸುಳ್ಯವನ್ನು ಕಂಡು ತಣಿಯಬೇಕೆನ್ನುವ ನಿರಂಜನರ ಹಂಬಲ ಆಗಾಗ ಪತ್ರಗಳಲ್ಲಿ ಇಣುಕುಹಾಕುತ್ತಿತ್ತು."ನೋಡಿ,ಈ ವರ್ಷಾಂತ್ಯದೊಳಗೆ ಸುಳ್ಯಕ್ಕೆ ಬರಬೇಕೆಂದಿದೆ. ಕುಳುಕುಂದದ ಮಣ್ಣಿನ ಸ್ಪರ್ಶ, ಕಾವು - ಸುಳ್ಯಗಳಲ್ಲಿ ಇಷ್ಟು ಕಾಫಿ - ತಿಂಡಿ. ನೋಡೋಣ. ಈ ಸಲ ಆಗದೆ ಇದ್ದರೆ ಮುಂದೆ ಪ್ರಾಯಶಃ ಎಂದೂ ಬರಲಾರೆ." ಅಸ್ವಸ್ಥತೆ ನಿರಂಜನರನ್ನೂ ನಿರಾಶಾವಾದಿಯನ್ನಾಗಿಸಿತ್ತು.

ದಿ। ಬಡ್ಡಡ್ಕ ಅಪ್ಪಯ ಗೌಡರ ಅನುಭವ ಕಥನ 'ಶಿಕಾರಿಯ ಸೀಳುನೋಟ' ವನ್ನು ನಿರಂಜನರಿಗೆ ಕಳುಹಿಸಿದಾಗ ಅವರ ಪ್ರತಿಕ್ರಿಯೆ: "ಭೇಷ್ ! ನೀವು ಶ್ರೇಷ್ಠ ಕಥನದ ಶ್ರೇಷ್ಠ ಲಿಪಿಕಾರರು! ತಮ್ಮ ಹಿರಿಯರ ಹೆಸರು ಬಹಳ ಕಾಲ ಜನರ ಬಾಯಲ್ಲಿ ಇರುವಂತೆ ಈ ಕೃತಿ ಪ್ರಕಟಣೆಯ ಮೂಲಕ ಕಾಣಿಕೆ ನೀಡಿದ ಅಪ್ಪಯ್ಯ ಗೌಡರ ಕಿರಿಯರಿಗೆ ನಾನು ಕೃತಜ್ಞ. 'ಶಿಕಾರಿಯ ಸೀಳುನೋಟ' ಮಂಗಳೂರು ವಿ.ವಿ.ದಲ್ಲಿ ಪದವಿ ತರಗತಿಗಳಿಗೆ ಉಪಪಠ್ಯವಾಗಲಿ ಎಂದು ಹಾರೈಸುವೆ."

ನಿರಂಜನರು ಒಮ್ಮೊಮ್ಮೆ ಪತ್ರಗಳಲ್ಲಿ ತಮ್ಮ ಒಳಗನ್ನು ತೋಡಿಕೊಳ್ಳು ತ್ತಿದ್ದರು: "1971ರ ಮಾರ್ಚ್‌ನಲ್ಲಿ ನಾನು ಅರ್ಧಶರೀರಿಯಾದೆ. ಅನಂತರದ ತೊಳಲಾಟ ಅನುಭವಿಸಿರುವ ನನಗೊಬ್ಬನಿಗೇ ಗೊತ್ತು. 1975ರಲ್ಲಿ ತಾಯಿ ಸತ್ತರು. 1978ರಲ್ಲಿ ಅನುಪಮಾಗೆ ಕ್ಯಾನ್ಸರ್ ಸರಣಿ ಶಸ್ತ್ರಕ್ರಿಯೆಗಳು ಆರಂಭ. 85ರ ಜುಲೈಯಲ್ಲಿ ಮೂರನೆಯದು ನಡೆದಾಗ 'ಇನ್ನು ಆಯಿತು' ಎಂಬ ಸ್ಥಿತಿ ಬಂತು. ಪಾರಾದರು. ಒಳಗಿನ ಕೊರಗು ಅವರಿಗೇ ಗೊತ್ತು. ೧೯೭೧ರಿಂದ ನಾವು ಏಕಾಂತ ವನ್ನೇ ಬಯಸುತ್ತೇವೆ ಹೆಚ್ಚಾಗಿ. ಸೀಮಂತಿನಿ ತನ್ನ ಒಂಟಿತನವನ್ನು ಜೀರ್ಣಿಸಿ ಕೊಳ್ಳಲು ಕಲಿಯುತ್ತಿದ್ದಾಳೆ. ಯಾವುದೇ ಕಾರಣಕ್ಕೆ ಅವಳ ಹೊರೆ ಹೆಚ್ಚಿಸಲು ನಾವು ಅಳುಕುತ್ತೇವೆ."

ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನ ಕನ್ನಡ ಸಂಘ ೧೯೮೫ ನವಂಬರದಲ್ಲಿ ನಿರಂಜನ ಸಾಹಿತ್ಯಗೋಷ್ಠಿಯನ್ನು ಏರ್ಪಡಿಸಿತ್ತು. ಆಗ ಪ್ರಕಟವಾದ ನಿರಂಜನರ 'ನಾವೂ ಮನುಷ್ಯರು' ಒಂದು ಸಾಧಾರಣ ಕೃತಿ. ಹಾಗಂತ ನಾನು ಬ ರೆ ದು ದ ಕ್ಕೆ, "ನಾವೂ ಮನುಷ್ಯರು ದಾಖಲೆಯಲ್ಲಿ ಒಂದು ಚುಕ್ಕೆ ಅಷ್ಟೆ.

ಮೊಳೆಯಾರರಿಗೆ ಖಂಡಿತ ಬೇಸರವಾಗುತ್ತದೆ ಎನಿಸಿತು ಹಸ್ತಪ್ರತಿಯನ್ನು 40 ವರ್ಷಗಳ ಬಳಿಕ ಓದಿದಾಗ. ಆದಕ್ಕಾಗಿ 'ಬಣ್ಣದ ಬಯಲು' ಬರೆದೆ. ಓದಿದವರಿಗೆ ತುಸು ಖುಶಿಯಾದೀತು. 1986ರ ನವೆಂಬರ ಅಥವಾ ಡಿಸೆಂಬರಿನಲ್ಲಿ ಪುತ್ತೂರಿಗೆ ಬರಬೇಕಾಗುತ್ತದೋ ಏನೊ ? ಆಗ ಕುಳುಕುಂದ, ಕಾವು, ಸುಳ್ಯಗಳನ್ನು ಕಣ್ತುಂಬಾ ಕೊನೆಯ ಬಾರಿ ಕಾಣುವ ಆಸೆ ಕಟ್ಟಿಕೊಂಡಿದ್ದೇನೆ. ಸಾಧ್ಯವಾದೀತು ನೋಡೋಣ" ಎಂದು ಬರೆದರು.

ನನ್ನ ಕಥಾ ಸಂಕಲನ 'ಗಗ್ಗರ'ವನ್ನು ನಿರಂಜನ ಮತ್ತು ಅನುಪಮಾ ನಿರಂಜನರಿಗೆ ಅರ್ಪಿಸಿದ್ದೆ. ಅದಕ್ಕೆ ನಿರಂಜನರು, "ನಿಮ್ಮ ಅರ್ಪಣೆ ನನಗೆ ಇಷ್ಟವಾಗ ಲಿಲ್ಲ. ಇಂಥ ಕೆಲಸ ನಾನು ಹಿಂದೆ ಮಾಡಿದವನೇ. ಈಗನಿಸುತ್ತದೆ - ಸ್ನೇಹದ ಬಹಿರಂಗ ಪ್ರದರ್ಶನ ತಪ್ಪು ಅಂತ" ಎಂದು ನೇರವಾಗಿ ಬರೆದರು.

ಇಲ್ಲಿ ನಿರಂಜನರ ಕೆಲವು ಪತ್ರಗಳಿಂದ ಒಂದಷ್ಟು ಹೆಕ್ಕಿ ಅವರ ವ್ಯಕ್ತಿತ್ವ ವನ್ನು ಬಿಚ್ಚಿಡಲು ಯತ್ನಿಸಿದ್ದೇನೆ. ಇದಕ್ಕಾಗಿ ನಿರಂಜನರು ನನ್ನನ್ನು ತರಾಟೆಗೆ ತೆಗೆದುಕೊಳ್ಳದೆ ಇರಲಾರರು. ಆಗಲಿ. ಆವರೆ ಅವರ ಪತ್ರಸರಣಿ ಕಡಿದುಹೋಗ ದಿದ್ದರೆ ಸಾಕು.

○

ಚತುರ ಸಾಹಿತಿ

-ವಾಣಿ

ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತು. 'ವಾಣಿ' ಮಾಸಪತ್ರಿಕೆ ಯವರು ಆಗ ಒಂದು ಸಣ್ಣ ಕಥೆಗಳ ಸ್ಪರ್ಧೆಯನ್ನು ನಡೆಸಿದ್ದರು. ಅದರ ಫಲಿತಾಂಶ ಪ್ರಕಟವಾದಾಗ, "ಪ್ರಥಮ ಬಹುಮಾನ ಇಬ್ಬರಿಗೆ ಹಂಚಿಕೆಯಾಗಿದೆ. ಎರಡೂ ಉತ್ತಮ ಕಥೆಗಳಾದ್ದರಿಂದ ತೀರ್ಪುಗಾರರು ಈ ಬಹುಮಾನವನ್ನು ಇಬ್ಬರಿಗೂ ಕೊಡ ಬೇಕೆಂದು ತೀರ್ಮಾನಿಸಿದರು" ಎಂದು ಕಾಗದ ಬರೆದಿದ್ದರು. ಆ ಬಹುಮಾನವನ್ನು ಪಡೆದವರು ನಾನು ಮತ್ತು ನಿರಂಜನ. ಆ ಸಮಯದಲ್ಲಿ ಆದ ನಮ್ಮ ಪರಿಚಯದ ಹಿನ್ನೆಲೆ ಇದು.

ಅವರ ಪತ್ನಿ ಡಾ। ಅನುಪಮಾ ನಿರಂಜನ ನನ್ನ ಆತ್ಮೀಯ ಗೆಳತಿ. ನಮ್ಮ ನಡುವೆ ಗಾಢ ಸ್ನೇಹ ಬೆಳೆದು ಬಂದಿದೆ. ಕನ್ನಡ ಸಾಹಿತ್ಯಕ್ಕೆ ಅವಿಶ್ರಾಂತವಾಗಿ ಅಪಾರ ಸೇವೆ ಸಲ್ಲಿಸುತ್ತಿರುವ ಕುಟುಂಬ ಅದು.

ನಿರಂಜನರ ಬಗ್ಗೆ ಬರೆಯಬೇಕೆಂದರೆ ಅದು ಬಹಳ ಕಷ್ಟವಾದ ಕೆಲಸ. ಸಾಹಿತ್ಯ ಕ್ಷೇತ್ರದ ವಿವಿಧ ಪ್ರಕಾರಗಳಲ್ಲೂ ಅವರು ಘನವಾದ ಪುಸ್ತಕಗಳನ್ನು ಬರೆದಿದ್ದಾರೆ. ಈ ಚಿಕ್ಕ ಲೇಖನದಲ್ಲಿ ಅವನ್ನೆಲ್ಲ ಹೇಳುವುದು ಸಾಧ್ಯವಿಲ್ಲ.

ಕಥೆ ಕಾದಂಬರಿಗಳಲ್ಲಿ ಸುಂದರವಾದ ಅವರ ಬರೆಹದ ಹೆಚ್ಚುಗಾರಿಕೆ ವ್ಯಕ್ತವಾಗುತ್ತದೆ. ಇಂತಹ ಶ್ರೇಷ್ಠ ಸಾಹಿತಿ ನಮ್ಮ ನಡುವೆ ಇರುವುದು, ಅವರ ಅಮರ ಕೃತಿಗಳನ್ನು ಓದಲು ಅವಕಾಶ ಸಿಕ್ಕಿರುವುದು ಅಪೂರ್ವ ಯೋಗ.

ಯಾವುದಾದರೂ ಮಹಾಕಾರ್ಯವನ್ನು ಹಿಡಿದರೆ ತಮ್ಮೆಲ್ಲ ತೊಂದರೆಗಳನ್ನೂ ಮರೆತು ಅದನ್ನು ಯಶಸ್ವಿಯಾಗಿ ನಡೆಸುವುದು ನಿರಂಜನರಲ್ಲಿ ಇರುವ ಗುಣ. ○

ಸದಾಶಯದ ಸಹಕಾರಿ

—ಸುರೇಶ್ ಹೆಬ್ಳಿಕರ್

ನನಗೆ ನಿರಂಜನರ ಪರಿಚಯವಾದದ್ದು ಸುಮಾರು ೧೫ ವರ್ಷಗಳ ಹಿಂದೆ. ಆಗ ನಾನಿನ್ನೂ ಸಿನೆಮಾ ನಟನಾಗಿರಲಿಲ್ಲ. ಬೆಂಗಳೂರಿನ ಭೂಮಿ ಬ್ಯಾಂಕಿನಲ್ಲಿ ನಾನು ನೌಕರಿಗೆ ಸೇರಿ ನಾಲ್ಕು ತಿಂಗಳಾಗಿರಬಹುದು. ನಮ್ಮ ಬ್ಯಾಂಕಿನ ಪಕ್ಕದ ಕಟ್ಟಡದಲ್ಲಿ ಖ್ಯಾತ ಕಾದಂಬರಿಕಾರ ನಿರಂಜನರು ಕಿರಿಯರ ಜ್ಞಾನಕೋಶದ ಸಂಪಾದಕೀಯ ಕೆಲಸ ನಡೆಸುತ್ತಿದ್ದರೆಂದು ತಿಳಿಯಿತು. ನಿರಂಜನರ ಬಗ್ಗೆ ತುಂಬಾ ಕೇಳಿದ್ದೆ. ಪರಿಚಯ ಮಾಡಿಕೊಳ್ಳಬೇಕು ಎಂಬ ಆಸೆಯಿಂದ, ತುಸು ಆತಂಕದಿಂದಲೇ ಅವರ ಕಚೇರಿಗೆ ಹೋದೆ.

ಆತಂಕ ಏಕೆಂದರೆ ಮೊದಲಿನಿಂದಲೂ ನನಗೆ ಕಲೆ, ಸಾಹಿತ್ಯ, ನಾಟಕ, ಸಿನೆಮಾಗಳಲ್ಲಿ, ತೀವ್ರ ಆಸಕ್ತಿ ಇದ್ದರೂ, ಇವುಗಳ ಕರ್ತಾರರ ಬಗ್ಗೆ ಆದರದಷ್ಟೇ ಅಳುಕೂ ಇತ್ತು. ಅವರು ಸಾಮಾನ್ಯ ಜನರಿಗಿಂತ ಬೇರೆ, ಕೋಪಿಷ್ಠರು, ಅಸಹನಿಗಳು, ಇತರರನ್ನು ತಿರಸ್ಕಾರದಿಂದ ನೋಡುವವರು ಎಂಬ ಭಾವನೆ ಆಗ ನನ್ನಲ್ಲಿ ಸೇರಿಕೊಂಡಿತ್ತು. ಆದರೆ ನಿರಂಜನರು ಸಾಹಿತಿಗಳ ಬಗ್ಗೆ ನನ್ನಲ್ಲಿದ್ದ ಪೂರ್ವಕಲ್ಪನೆಯನ್ನು ಸುಳ್ಳು ಮಾಡಿದರು. ನಾನು ನನ್ನ ಪರಿಚಯ ಮಾಡಿಕೊಳ್ಳುತ್ತಿದ್ದಂತೆಯೇ ಆತ್ಮೀಯತೆಯಿಂದ ಕರೆದು ಮಾತಾಡಿಸಿ ಕ್ಷೇಮ ವಿಚಾರಿಸಿದರು. ನನಗೆ ಆಶ್ಚರ್ಯ, ಸಂತೋಷ - ಎರಡೂ. ಬಿಚ್ಚು ಮನಸ್ಸಿನಿಂದ ಮಾತಾಡಿದೆ. ನಾಲ್ಕೇ ತಿಂಗಳಿಗೆ ಬ್ಯಾಂಕ್ ನೌಕರಿ

ಬೇಜಾರಾಗಿದ್ದನ್ನು ಮತ್ತು ಕಲೆ ಮತ್ತು ಸಾಹಿತ್ಯಗಳಲ್ಲಿ ನನಗಿರುವ ಆಸಕ್ತಿಯ ಬಗ್ಗೆ ಹೇಳಿದೆ. ಬ್ಯಾಂಕ್ ಕೆಲಸಕ್ಕೆ ರಾಜಿನಾಮೆ ಕೊಟ್ಟು, ನನಗೆ ನಿರಂಜನರ ಜೊತೆ ಕಿರಿಯರ ಜ್ಞಾನಕೋಶದ ಸಂಪಾದಕೀಯ ಕೆಲಸದಲ್ಲಿ ಪಾಲುಗೊಳ್ಳುವ ಆಕಾಂಕ್ಷೆಯನ್ನು ವ್ಯಕ್ತಪಡಿಸಿದೆ. ನಿರಂಜನರು ನನ್ನ ಬೆನ್ನು ತಟ್ಟುತ್ತ ಇಷ್ಟವಿಲ್ಲದ ನೌಕರಿಯಲ್ಲಿ ಮುಂದುವರಿಯಬಾರದು, ಬಿಟ್ಟುಬಿಡಿ ಎಂದರು.ಆದರೆ ಜ್ಞಾನಕೋಶದ ಸಂಪಾದಕೀಯ ಹುದ್ದೆಗಳೆಲ್ಲವೂ ಅಷ್ಟರಲ್ಲಿ ಭರ್ತಿಯಾಗಿದ್ದರಿಂದ ನನ್ನನ್ನು ತಮ್ಮ ಕೆಲಸದಲ್ಲಿ ಸೇರಿಸಿ ಕೊಳ್ಳಲು ಸಾಧ್ಯವಾಗದ್ದನ್ನು ಕಳಕಳಿಯಿಂದ ವಿವರಿಸಿದರು.

ನಾನು ಕೆಲವು ತಿಂಗಳ ನಂತರ ಬ್ಯಾಂಕ್ ನೌಕರಿಯನ್ನೇನೋ ಬಿಟ್ಟೆ. ಆದರೆ ತಕ್ಷಣ ಬಿಡಲಾಗಲಿಲ್ಲ. ನಿರಂಜನರ ಪ್ರೋತ್ಸಾಹದಿಂದಾಗಿ ನಮ್ಮ ಬ್ಯಾಂಕ್ ಪ್ರಕಟಿಸು ತ್ತಿದ್ದ ಪತ್ರಿಕೆಯ ಸಂಪಾದಕೀಯ ಕೆಲಸವನ್ನು ಕೆಲಕಾಲ ನಿರ್ವಹಿಸಿದೆ.

ನಿರಂಜನರು ಮತ್ತು ನನ್ನ ಇಷ್ಟು ವರ್ಷಗಳ ಪರಿಚಯದ ಒಂದು ಹಳೆಯ ತುಣುಕು ಮಾತ್ರ ಇದು. ಆ ಮೇಲೆ ಹಲವು ಬಾರಿ ನಾನು ಅವರ ಜೊತೆ ಸ್ವಾರಸ್ಯಕರ ಗಂಟೆಗಳನ್ನು ಕಳೆದಿದ್ದೇನೆ. ಅವರ ಮೆಲುದನಿಯ, ಹರಿತ ಮತ್ತು ಸ್ಪಷ್ಟವಾದ ವಾಕ್‌ಝರಿಯನ್ನು ಆಲಿಸುವುದೇ ಒಂದು ಅನುಭವ. ಪ್ರಪಂಚದ ಯಾವುದೇ ವಿಷಯದ ಬಗ್ಗೆ ಅವರು ಅಧಿಕಾರದಿಂದ ಮಾತಾಡಬಲ್ಲರು. ಆದರೆ ಎಲ್ಲೂ 'ನನಗೆ ಗೊತ್ತು, ನಾನು ನಿನಗಿಂತ ಬುದ್ಧಿವಂತ' ಎಂಬ ದರ್ಪವನ್ನು ಅವರಲ್ಲಿ ಗುರುತಿಸಲು ಸಾಧ್ಯವಿಲ್ಲ. ಪ್ರಪಂಚದ ಬೇರೆ ಬೇರೆ ನಾಗರಿಕತೆಗಳ ನಡುವೆ ಇರುವ ಸಾಂಸ್ಕೃತಿಕ ಸಂಬಂಧದ ಬಗ್ಗೆ, ಅವುಗಳ ಏಕಮೂಲದ ಬಗ್ಗೆ, ಅವರ ಕುತೂಹಲ ಹಲವು ಸಲ ನನ್ನ ಗಮನ ಸೆಳೆದಿದೆ. ಉದಾಹರಣೆಗೆ ಉತನೂರ್ ಎಂಬುದು ಈಜಿಪ್ಟಿನ ಪುರಾಣದಲ್ಲಿ ಸೂರ್ಯದೇವನ (ಪೂರ್ವದಲ್ಲಿ ಉದಿಸುವ ದೇವರು) ಹೆಸರು. ಆದರೆ ಇದೇ ಉತನೂರ್ ಕರ್ನಾಟಕದ ಒಂದು ಹಳ್ಳಿಯ ಹೆಸರು ಕೂಡ. ಹಾಗೆಯೇ ಮುರಾನಾಳ್ ಎಂಬ ಇಲ್ಲಿನ ಇನ್ನೊಂದು ಹಳ್ಳಿ ಪುರಾತನ ಈಜಿಪ್ಟಿನ ಒಬ್ಬ ದೊರೆಯ ಹೆಸರು. ಹೆಸರುಗಳ ಈ ಸಮಾನತೆ ಕಾಕತಾಳೀಯ ಅಲ್ಲ. ಭಾರತೀಯ ಮತ್ತು ಈಜಿಪ್ಟಿನ ಸಂಸ್ಕೃತಿಗಳ ನಡುವೆ ಪುರಾತನ ಕಾಲದಿಂದಲೂ ಸಂಬಂಧ ಇದ್ದಿರಬೇಕು ಎಂಬುದು ನಿರಂಜನರ ವಾದಸರಣಿ. ಈ ವಾದವನ್ನು ತಳ್ಳಿಹಾಕಲು ಸಾಧ್ಯವಿಲ್ಲ.

ಮತ್ತೊಮ್ಮೆ ನಿರಂಜನರು ತಾವು ನೋಡಿದ್ದ ಒಂದು ಜಪಾನೀ ಮಕ್ಕಳ ಚಿತ್ರದ ಸನ್ನಿವೇಶವೊಂದನ್ನು ನನಗೆ ವಿವರಿಸಿದರು. ಚಿತ್ರದಲ್ಲಿ ಒಬ್ಬ ಹುಡುಗಿಯನ್ನು ಆಕೆಯ ತಾಯಿ ಹೊಡೆಯತೊಡಗಿದಾಗ ಬಾಲಕಿ 'ಅಯ್ಯೋ' ಎಂದು ಕಿರುಚುತ್ತಾಳೆ. ತಾಯಿ ಇನ್ನೊಂದು ಸಲ ಹೊಡೆದಾಗ 'ಅಯ್ಯಯ್ಯೋ' ಎಂದು ಕಿರುಚುತ್ತಾಳೆ.

"ಭಯ, ಗಾಬರಿ ಮತ್ತು ದುಃಖವಾದಾಗ ನಾವು 'ಅಯ್ಯಯ್ಯೋ, ಅಯ್ಯಯ್ಯೋ' ಎನ್ನುತ್ತೇವೆ. ಜಪಾನೀಯರು ಕೂಡ ಹೀಗನ್ನುವುದನ್ನು ಕಂಡು ನನಗೆ ರೋಮಾಂಚನವಾಯಿತು" ಎಂದರು ನಿರಂಜನರು.

ಅನಾರೋಗ್ಯದಿಂದಾಗಿ ಈಗ ಹೆಚ್ಚು ದೈಹಿಕ ಚಟುವಟಿಕೆಯಿಲ್ಲದೆ ಇರುವಾಗಲೂ ನಿರಂಜನರ ಚಿಂತನಶಕ್ತಿ ಒಂದಿಷ್ಟೂ ಕುಂಠಿತವಾಗಿಲ್ಲ. ಅವರು ಹಿಂದಿನಷ್ಟೇ ಸ್ಪಷ್ಟವಾಗಿ, ತೀಕ್ಷ್ಣವಾಗಿ ಈಗಲೂ ಚಿಂತಿಸಬಲ್ಲರು, ಬರೆಯಬಲ್ಲರು. ನಿರಂಜನರಲ್ಲಿ ನಾನು ಕಂಡ ಮತ್ತು ಎಂದೆಂದಿಗೂ ಮರೆಯಲಾಗದ ಒಂದು ಗುಣವೆಂದರೆ ಸಂಕಷ್ಟದಲ್ಲಿರುವವರ ಬಗ್ಗೆ ಅವರಿಗಿರುವ ಕಳಕಳಿ, ಅನುಕಂಪ. ಇದಕ್ಕೆ ನಿರಂಜನರು ಬಾಲ್ಯದಲ್ಲಿ ಅನುಭವಿಸಿದ ಕಡುಬಡತನವೇ ಕಾರಣವಿರಬಹುದು. ಓದಲು, ಉಣ್ಣಲು, ಉಳಕೊಳ್ಳಲು ಹಣವಿಲ್ಲದೆ ಕಷ್ಟಪಡುತ್ತಿದ್ದ, ಪಡುವ ಎಷ್ಟೋ ಹುಡುಗರಿಗೆ ಈ ಸಾಹಿತಿ ನೆರವಾಗಿದ್ದಾರೆ. ನನ್ನೊಬ್ಬ ಪರಿಚಯದವರು ಈಗ ಬ್ಯಾಂಕೊಂದರ ಡಿವಿಜನಲ್ ಮ್ಯಾನೇಜರ್ ಆಗಿದ್ದಾರೆ; ನಿರಂಜನರ ಹೆಸರೆತ್ತಿದಾಗ ಪ್ರೀತಿ, ಕೃತಜ್ಞತೆ ಮತ್ತು ಗೌರವಗಳಿಂದ ಅವರ ಕಣ್ಣುಗಳು ಒದ್ದೆಯಾಗುತ್ತವೆ. ಹೈಸ್ಕೂಲು ಶಿಕ್ಷಣ ಮುಗಿಸಿ ಮುಂದೆ ಓದಲು ಅನುಕೂಲವಿಲ್ಲದೆ ಓಡಾಡುತ್ತಿದ್ದಾಗ ಅವರನ್ನು ನಿರಂಜನರು ಮನೆಗೆ ಕರೆದುಕೊಂಡು ಬಂದು ಪ್ರೋತ್ಸಾಹ ನೀಡಿ, ವಿದ್ಯಾಭ್ಯಾಸ ಪೂರ್ತಿಯಾಗುವ ತನಕ ನೆರವಾಗಿದ್ದರು. ನಿರಂಜನರು ತನ್ನ ಕೈಹಿಡಿದೆತ್ತಿರದಿದ್ದರೆ ತಾನು ನಿಷ್ಪ್ರಯೋಜಕನಾಗುತ್ತಿದ್ದೆ ಎನ್ನುತ್ತಾರೆ, ಆ ಸ್ನೇಹಿತ.

ಆದರೆ ಇಂಥ ವಿಷಯಗಳನ್ನು ನಿರಂಜನರಲ್ಲಿ ಪ್ರಸ್ತಾಪಿಸಿದಾಗ,ಅವರು, "ಯಾರು ಯಾರನ್ನೂ ಉದ್ಧಾರಮಾಡುವುದಿಲ್ಲ. ಒಬ್ಬ ಇನ್ನೊಬ್ಬನಿಗೆ ನೆರವಾದ - ಅವನ ಕೈ ಹಿಡಿದೆತ್ತಿದ ಎನ್ನುವುದೂ ಸುಳ್ಳು. ಯೋಗ್ಯತೆ ಇರುವವನು ಹೇಗಾದರೂ ಮೇಲೆ ಬರುತ್ತಾನೆ.ನಾನು ಅಥವಾ ನೀವು ಅಲ್ಲದಿದ್ದರೆ ಇನ್ನೊಬ್ಬ ಅವನ ನೆರವಿಗೆ ಬರುತ್ತಾನೆ.ಬೀಳುವುದು, ಏಳುವುದು, ಬಿದ್ದವನ ನೆರವಿಗೆ ಹೋಗುವುದು ಇದೆಲ್ಲ ಆಯಾ ಕಾಲದಲ್ಲಿ ಸಂದರ್ಭದಲ್ಲಿ ನಡೆಯುವ ಸಹಜ ಕ್ರಿಯೆ. ಇದರಲ್ಲಿ ನಾವು ಹೆಮ್ಮೆಪಟ್ಟುಕೊಳ್ಳುವಂಥದ್ದೇನಿಲ್ಲ" ಎನ್ನುತ್ತಾರೆ.

ಒಬ್ಬ ವ್ಯಕ್ತಿಯಾಗಿ, ಮನುಷ್ಯನಾಗಿ ತನ್ನೆಲ್ಲ ಕೃತಿಗಳಿಂದಾಚೆ ಬೆಳೆದು ನಿಲ್ಲುವ ನಿರಂಜನರ ಈ ವಿನಯ, ಸಜ್ಜನಿಕೆ ಮತ್ತು ಪ್ರಬುದ್ಧತೆ ನನ್ನ ಮೇಲೆ ಗಾಢ ಪ್ರಭಾವ ಬೀರಿವೆ.

○

ನಿರಂಜನ - ಅನುಪಮಾ

—ಅನುಪಮಾ ನಿರಂಜನ

ನಿರಂಜನರ ಮತ್ತು ನನ್ನ ಮದುವೆಯಾಗಿ ಮೂವತ್ತು ವರ್ಷಗಳು ಕಳೆದಿವೆ. ಇಷ್ಟು ದೂರದಲ್ಲಿ ನಿಂತು, ನಾವು ನಡೆದು ಬಂದ ದಾರಿಯನ್ನು ನೋಡುವಾಗ ಆಶ್ಚರ್ಯ, ಸಂತೋಷ, ಕಳವಳ, ಧನ್ಯತೆ ಇವೆಲ್ಲಾ ಏಕಕಾಲದಲ್ಲಿ ಉಂಟಾಗುತ್ತವೆ.

ನಮ್ಮಿಬ್ಬರ ಪರಿಚಯವಾದದ್ದೇ ವಿಚಿತ್ರ ರೀತಿಯಲ್ಲಿ. ನಾನಾಗ (೧೯೫೦) ಎರಡನೆಯ ಇಂಟರ್‌ಮೀಡಿಯೆಟ್ ತರಗತಿಯಲ್ಲಿ (ಈಗಿನ ಎರಡನೇ ಪಿ.ಯು.ಸಿ.) ಓದುತ್ತಿದ್ದೆ. ಹತ್ತಾರು ಕತೆಗಳನ್ನು ಬರೆದಿದ್ದರೂ ಯಾವುದೂ ಅಚ್ಚಾಗಿರಲಿಲ್ಲ. ನನ್ನ ಸ್ನೇಹಿತೆಯೊಬ್ಬಳು, "ಕ್ರಾಂತಿಕಾರ, ಕತೆಗಾರ ಕುಳುಕುಂದ ಶಿವರಾಯರ ಪರಿಚಯ ಮಾಡಿಸ್ತೀನಿ, ಬನ್ನಿ" ಎಂದು ಸಾಹಿತ್ಯಾಸಕ್ತರಾದ ಮೂವರು ಗೆಳತಿಯರನ್ನು ಕರೆದಳು. ಈ ಕತೆಗಾರರು ವಯೋವೃದ್ಧರಿರಬೇಕು ಎಂದು ಲೆಕ್ಕಹಾಕುತ್ತಾ ಹೋದ ನಮಗೆ ಕಂಡದ್ದು ಒಬ್ಬ ಸ್ಫುರದ್ರೂಪಿ ಯುವಕ. ಈತ ಮಿತಭಾಷಿ. ಆದರೆ ಆಡಿದ ಮಾತು ನೇರ, ಸ್ಪಷ್ಟ. ಸ್ನೇಹಿತೆ "ಇವರು ಕತೆ ಬರೀತಾರೆ" ಎಂದು ನನ್ನನ್ನು ಪರಿಚಯ ಮಾಡಿಸಿಕೊಟ್ಟಳು. ಅದನ್ನು ಕೇಳಿದ ಕೂಡಲೇ ಅವರ ಕಣ್ಣುಗಳು ಅರಳಿದುವು. ಅವರು ನೇರವಾಗಿ ನನ್ನನ್ನು ದಿಟ್ಟಿಸಿ ನೋಡತೊಡಗಿದರು. ನನಗೋ ಲಜ್ಜೆ, ಕಸಿವಿಸಿ. "ನಿಮ್ಮ ಕತೆಗಳನ್ನು ಕಳಿಸ್ಕೊಡಿ" ಎಂದರು ಅವರು. ನಾನು ಮನೆಗೆ ಬಂದೆ. "ಮದ್ವೆಯಾದರೆ ಇಂಥವರನ್ನು ಆಗ್ಬೇಕು" ಎಂದು ಅವತ್ತು ದಿನಚರಿಯಲ್ಲಿ ಬರೆದೆ. ಆದರೆ ನನಗೂ ಅವರಿಗೂ ಎಲ್ಲಿಂದೆಲ್ಲಿಯ ಹೋಲಿಕೆ ? ನಾನೋ ಅತಿ ಸಾಧಾರಣ ರೂಪಿನವಳು, ತಿಳಿವಳಿಕೆಯಿಲ್ಲದವಳು. ಕತೆ ಬರೆಯುವುದನ್ನು ಬಿಟ್ಟರೆ ಬೇರೆ ಯಾವ ಹೆಗ್ಗಳಿಕೆಯೂ ಇಲ್ಲ. ಅವರಾದರೋ ಚೆಲುವ, ಕತೆಗಾರರೆಂದೂ ಪತ್ರಿಕಾಕರ್ತರೆಂದೂ ಸಂಪಾದಕರೆಂದೂ ಆಗಲೇ ಖ್ಯಾತರಾಗಿದ್ದವರು.

ನನ್ನ ಕತೆಗಳನ್ನು ಅವರಿಗೆ ಕಳಿಸಿದೆ. ಓದಿ ನೋಡಿ ಅಭಿಪ್ರಾಯ ಬರೆದರು. "ಕೋಡಿ ಕೋಡಿಯಾಗಿ ಹರಿಯುವ ಕಣ್ಣೀರಿನ ಕತೆ 'ಕಣ್ಮಣಿ'. ಉಳಿದ ಕತೆಗಳೂ ಪರವಾಗಿಲ್ಲ. ಆದರೆ ಮತ್ತಷ್ಟು ಪ್ರಯತ್ನದಿಂದ ಇವು ಒಳ್ಳೆಯ ಕತೆಗಳಾಗಬಲ್ಲುವು........". ಕುಳುಕುಂದ ಶಿವರಾಯ ನಿರಂಜನ-ಎಂಬ ಸಹಿಯಿತ್ತು ಕೊನೆಯಲ್ಲಿ.

ನಿರಂಜನ - ನನ್ನ ಹೃದಯ ಹುಚ್ಚೆದ್ದು ಕುಣಿಯಿತು.

ಮುಂದೆ ಒಮ್ಮೆ ಭೇಟಿಯಾದ ನಿರಂಜನ, 'ಉಷಾ' ಮಾಸಪತ್ರಿಕೆಯ ಮೂರು ಸಂಚಿಕೆಗಳನ್ನು ನನ್ನ ಕೈಗಿತ್ತು, "ಇದರಲ್ಲಿ ನಾನು ಬರೆದಿರೋ 'ಸಾಧನ

ಸಂಚಯ' ಅನ್ನೋ ಲೇಖನಗಳಿವೆ. ಓದಿ ನೋಡಿ” ಎಂದರು. ನಾನು ಥವಗುಟ್ಟು ತ್ತಿದ್ದ ಹೃದಯದೊಡನೆ ಹಾಳೆ ಬಿಡಿಸಿದೆ. ಬಾಳಸಂಗಾತಿ ಸಾಧನಾ ಎಂದು ಆರಂಭ ವಾಗುವ ಒಲವಿನ ಓಲೆ. ಅದನ್ನು ಓದುತ್ತಾ ಮೊದಲ ಬಾರಿಗೆ ನನಗೆ ಗೊತ್ತಾ ಯಿತು. ಇವರ 'ಸಾಧನ ಸಂಚಯ'ದ ಒಡತಿ ನಾನೇ ಎಂದು.

ಅನಂತರ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿ ನಾನು ಅಲ್ಲಿಗೆ ಓದಲು ಹೋದೆ. ನಿರಂಜನ ಬೆಂಗಳೂರಲ್ಲಿ. ಈ ಎರಡೂ ಊರುಗಳ ಮಧ್ಯೆ ಪ್ರೇಮ ಪತ್ರಗಳು ಧಾರಾಳವಾಗಿ ಓಡಾಡಿದುವು. ನಮ್ಮನ್ನು ಪರಸ್ಪರ ಬೆಸೆದುದು ಪ್ರೀತಿ ಯೊಂದೇ ಅಲ್ಲ. ಸಮಾನ ಆಸಕ್ತಿಗಳು ಹೇರಳವಾಗಿದ್ದುವು. ಸಾಹಿತ್ಯ, ಜೀವನದ ಧೋರಣೆಗಳು, ಸಮಾನತೆಯ ಸಮಾಜ ಕಟ್ಟಬೇಕೆಂಬ ಹಂಬಲ ಇತ್ಯಾದಿ.

ನಮ್ಮ ಪರಿಚಯವಾದ ಐದು ವರ್ಷಗಳ ಬಳಿಕ ನಮ್ಮ ವಿವಾಹವಾದುದು ಸ್ನೇಹಿತರ ಸಮ್ಮುಖದಲ್ಲಿ. ನಿರಂಜನ ಬಣದಿಂದ ಹೊರಗಿನವರು ಎಂಬ ಕಾರಣಕ್ಕೆ ನನ್ನ ತಂದೆ ತಾಯಿ ಬಂಧುಬಳಗ ವಿವಾಹವನ್ನು ಬಹಿಷ್ಕರಿಸಿದ್ದರು. ಆದರೆ ಆದರಿಂದ ನನಗ್ಯಾವ ಅಂಜಿಕೆಯೂ ಆಗಲಿಲ್ಲ. ಯಾಕೆಂದರೆ ನಿರಂಜನರ ಸ್ನೇಹಿತರ ಬಳಗ ದೊಡ್ಡದು. ಅಲ್ಲದೆ ನನಗೆ ದೊರಕಿದ್ದು ನಿರಂಜನರ ಅಖಂಡವಾದ ಪ್ರೀತಿ.

ಮದುವೆಯಾದ ಮೇಲೆ ನನ್ನ ಜೀವನ ವಿಧಾನವೇ ಬದಲಾಯಿತು. ನಿರಂಜನರದು ತುಂಬಾ ಶಿಸ್ತಿನ ಬದುಕು. ಎಲ್ಲಾ ಕೆಲಸಗಳೂ ಕರಾರುವಾಕ್ಕಾಗಿ ಆಗಬೇಕು. ಪ್ರತಿಯೊಂದೂ ಪರಿಪೂರ್ಣವಾಗಿರಬೇಕು. ಸ್ವಚ್ಛತೆಗೆ ಅವರು ತುಂಬಾ ಮಹತ್ವ ಕೊಡುತ್ತಿದ್ದರು. ಮನೆಯ ಎಲ್ಲ ಸಾಮಾನುಗಳೂ ಓರಣವಾಗಿರಬೇಕೆಂದು ಬಯಸುತ್ತಿದ್ದರು. ಉದಾಹರಣೆಗೆ ಅವರು ಬರೆಯುವ ಮೇಜೇ ಸಾಕು. ಒಂದು ಕಾಗದ, ಒಂದು ಗುಂಡು ಪಿನ್ನು ಅತ್ತಿತ್ತ ಸರಿದಿರಬಾರದು. ನಾನೋ ಎಲ್ಲ ಗುಣಗಳಲ್ಲೂ ಇವಕ್ಕೆ ತದ್ವಿರುದ್ಧ. ಎಷ್ಟೋ ಬಾರಿ ಅವರು ನನ್ನ ಮೇಜಿನ ಮೇಲೆ ಹರಡಿರುತ್ತಿದ್ದ ಪುಸ್ತಕಗಳನ್ನು ಓರಣವಾಗಿಡುತ್ತಿದ್ದರು. ನನ್ನ ಬಾಲ್ಯದಲ್ಲಿ ನನಗೆ ಇಂಥ ಶಿಸ್ತಿನ ಶಿಕ್ಷಣವಾಗಿರಲಿಲ್ಲ. ಈಗ ನಿಧಾನವಾಗಿ ಎಲ್ಲವನ್ನೂ ಕಲಿಯತೊಡಗಿದೆ.

ನಿರಂಜನರು ತುಂಬಾ ಸರಳ ಉಡುಪು ತೊಡುತ್ತಿದ್ದರು. ಒಂದು ಪ್ಯಾಂಟು, ಷರಟಾದರೆ ಆಯಿತು. ನನಗೋ “ಇವರು ಸೂಟು ಬೂಟು ಟೈ ಹಾಕೊಳ್ಳಬಾರದೆ ?” ಎಂದು ಆಸೆಯಾಗುತ್ತಿತ್ತು. ಈ ಮಾತು ಹೇಳಿದಾಗ ಅವರು ದೊಡ್ಡದಾಗಿ ನಕ್ಕು “ಮನುಷ್ಯನ ಬೆಲೆ ನಿರ್ಧರಿಸೋದು ಅವನ ಉಡುಪಲ್ಲ!” ಎಂದಿದ್ದರು.

ಒಂದೇ ಸೂರಿನಡಿಯಲ್ಲಿ ನಾವು ಬದುಕುತ್ತಿದ್ದರೂ ನಮ್ಮಿಬ್ಬರ ಬರೆವಣಿಗೆಯ ರೀತಿ ಭಿನ್ನವಾಗಿರುತ್ತಿತ್ತು. ನಿರಂಜನರು ಬರೆಯಲಾರಂಭಿಸಿದರೆ ಒಂದೇ ಸಮನೆ ಹಗಲು ರಾತ್ರಿ ಬರೆಯುತ್ತಿದ್ದರು. ನಾನಾದರೋ ವೈದ್ಯಕೀಯ ಪ್ರಾಕ್ಟೀಸ್ ಮಧ್ಯೆ ಬಿಡುವು ಸಿಕ್ಕಾಗ ಬರೆಯಬೇಕು. ನಿರಂಜನ ಬೌದ್ಧಿಕವಾಗಿ ಬಹಳ ಎತ್ತರಕ್ಕೇರಿದ ವ್ಯಕ್ತಿ. ನನಗೆ ಆಗಾಗ ಹೇಳುತ್ತಿದ್ದರು: "ಪ್ರತಿಯೊಂದನ್ನೂ ಆಮೂಲಾಗ್ರ ತಿಳೀಬೇಕು. ವಿಚಾರ ಮಾಡಿ ಬರೀಬೇಕು." ನನ್ನ ವೈದ್ಯಕೀಯ ಪ್ರಾಕ್ಟೀಸ್ ಮತ್ತು ಮಕ್ಕಳ ಆರೈಕೆಯಲ್ಲಿ ಸಮಯ ಸಿಗದಿದ್ದರಿಂದ ನಾನು ಹೆಚ್ಚು ಸಾಹಿತ್ಯಾಭ್ಯಾಸ ಮಾಡುವುದು ಆಗ ಸಾಧ್ಯವಾಗಲಿಲ್ಲ. ಈ ಕೊರತೆ ನನ್ನ ಆರಂಭದ ಕೃತಿಗಳಲ್ಲಿ ಕಾಣುತ್ತದೆ.

ನಾನು ಕತೆ ಕಾದಂಬರಿ ಬರೆಯುವ ಮುನ್ನ ಯಾವಾಗಲೂ ನಿರಂಜನರ ಜೊತೆ ಚರ್ಚೆ ಮಾಡುತ್ತಿರಲಿಲ್ಲ. ಕತೆಯ ವಸ್ತು ಮನಸ್ಸಿನಲ್ಲಿ ಬೆಳೆದು ಅದೊಂದು ಆಕೃತಿ ದೊರಕಿಸಿಕೊಂಡು ಬರೆವಣಿಗೆಯ ರೂಪಕ್ಕಿಳಿದ ಮೇಲೆ ನಿರಂಜನ ನನ್ನ ಮೊದಲ ಓದುಗರಾಗುತ್ತಿದ್ದರು. ಅವರ ಟೀಕೆಗಳು ತೀಕ್ಷ್ಣವಾಗಿರುತ್ತಿದ್ದುವು. (ಹೆಂಡತಿ ಯೆಂಬ ದಯೆ ಸ್ವಲ್ಪವೂ ಇರುತ್ತಿರಲಿಲ್ಲ.) ಅವರ ಸೂಚನೆ ಆಧಾರದ ಮೇಲೆ ನಾನು ನನ್ನ ತಪ್ಪುಗಳನ್ನು ತಿದ್ದಿಕೊಂಡುದಿದೆ. ನನ್ನ ಬರೆವಣಿಗೆ 'ಜನಪ್ರಿಯ' ದಾರಿ ಹಿಡಿಯದೆ, ಗಂಭೀರ ಮಾರ್ಗದಲ್ಲಿ ಹೋದದ್ದು ನಿರಂಜನರ ಪ್ರಭಾವದಿಂದ ಎಂಬುದನ್ನು ಒಪ್ಪಿಕೊಳ್ಳಬೇಕು.

ಮಕ್ಕಳೆಂದರೆ ನಿರಂಜನರಿಗೆ ಪಂಚಪ್ರಾಣ. ನಮ್ಮ ಮೊದಲ ಮಗಳಿಗೆ 'ತೇಜಸ್ವಿನಿ' ಎಂದು ಹೆಸರು ಇಡಬಯಸಿದೆ. (ನಿರಂಜನರ 'ಚಿರಸ್ಮರಣೆ' ಕಾದಂಬರಿ ಯಲ್ಲಿ ಬರುವ ನದಿಯ ಹೆಸರು ಇದು.) ನಿರಂಜನ ಒಪ್ಪಿದರು. ಎರಡನೆಯ ಮಗಳು-ಸೀಮಂತಿನಿ - ಹುಟ್ಟಿದಾಗ ನಿರಂಜನ 'ರಾಜಕುಮಾರಿ ಹುಟ್ಟಿದ್ಲು' ಎಂದು ಹೆಮ್ಮೆ ಯಿಂದ ಹೇಳಿಕೊಳ್ಳುತ್ತಿದ್ದರು. ಮಕ್ಕಳು ಹುಟ್ಟಿನಿಂದಲೇ ತಂದೆಯಂತೆಯೇ ಶಿಸ್ತು, ಸಮಯಪ್ರಜ್ಞೆ, ಸರಳತೆಗಳನ್ನು ಕರಗತಮಾಡಿಕೊಂಡಿದ್ದರು. ನಿರಂಜನ ಮಕ್ಕಳಿಗೆ ಹೇಳುವುದಿತ್ತು: "ಯಾವಾಗ್ಲೂ ಜಂಭ ಪಡಬಾರ್ದು. ಏನೇ ಸಾಧಿಸಿದರೂ ನಮ್ರತೆ ಯಿರಬೇಕು."

ನನಗೋ ಮನೆಯನ್ನು ಸಿಂಗರಿಸುವಾಸೆ. ನಿರಂಜನರಿಗೆ ತೋರಿಕೆಯ ಅಲಂಕಾರಗಳು ಇಷ್ಟವಾಗುತ್ತಿರಲಿಲ್ಲ. "ನಾವು ಸರಳವಾಗಿದ್ದಷ್ಟೂ ಚೆನ್ನ. ನಮ್ಮ ಮನೆಯಲ್ಲಿರೋ ಪುಸ್ತಕಗಳೇ ನಮಗೆ ಶೃಂಗಾರ" ಎನ್ನುತ್ತಿದ್ದರು. ಮಕ್ಕಳೂ ಈ ವಾದಕ್ಕೆ ಪುಷ್ಟಿಕೊಟ್ಟುದರಿಂದ ಪ್ರಜಾಪ್ರಭುತ್ವ ರೀತ್ಯಾ ನನ್ನ ಮನವಿ ಬಿದ್ದು ಹೋಯಿತು.

ನನಗಾಗ ಎಲ್ಲವೂ ಇತ್ತು. ಒಳ್ಳೆಯ ವೈದ್ಯಕೀಯ ಪ್ರಾಕ್ಟೀಸ್, ಸಾಹಿತ್ಯ ರಚನೆ, ಒಪ್ಪವಾದ ಮನೆ, ಪ್ರೀತಿಸುವ ಗಂಡ, ಬುದ್ಧಿವಂತ ಮಕ್ಕಳು. ಹೆಂಗಸಿಗೆ ಇನ್ನೇನು ಬೇಕು? ಈ ಸ್ವರ್ಗಕ್ಕೂ ಕಿಚ್ಚು ಬಿತ್ತು.

೧೯೭೧ರ ಮಾರ್ಚ್‌ನಲ್ಲಿ ನಿರಂಜನ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಭಾಗವಹಿಸಲೆಂದು ಬೆಂಗಳೂರಿನಿಂದ ಹೊರಟರು. ಸಭೆಯಲ್ಲಿ ಮಾತನಾಡಿ ಕುಳಿತುಕೊಳ್ಳುವ ಹೊತ್ತಿಗೆ ಅವರಿಗೆ ಲಕ್ವ ಹೊಡೆಯಿತು. ಕೂಡಲೇ ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಿ ನನಗೆ ಫೋನು ಮಾಡಿದರು. ಬೆಳಗ್ಗೆ ಆರೋಗ್ಯವಾಗಿ ಮನೆಬಿಟ್ಟವರಿಗೆ ಇಷ್ಟು ಬೇಗ ಏನಾಯಿತು? ಎಂದು ಕಾತರಗೊಂಡು ನಾನು ಮೈಸೂರಿಗೆ ಧಾವಿಸಿದೆ. ಅಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿ ಮಲಗಿದ್ದ ನಿರಂಜನರನ್ನು ನೋಡಿ ಎದೆ ಧಸಕ್ಕೆಂದಿತು. ಆದರೆ ನಾನಾಗ ಅಳಲಿಲ್ಲ.

ಮುಂದಿನ ಮೂರುದಿನ ನಿರಂಜನ ಸಾವು ಬದುಕುಗಳ ಮಧ್ಯೆ ಹೋರಾಡಿದರು. ಆ ದಿನಗಳಲ್ಲಿ ನಾನು ನಿದ್ದೆ ಮಾಡಿದೆನೆ? ಎಚ್ಚರವಾಗಿದ್ದೆನೆ? ಒಂದೂ ನೆನಪಾಗುವುದಿಲ್ಲ. ಅಂತೂ ಗಂಡಾಂತರದಿಂದ ಪಾರಾಗಿ ಬೆಂಗಳೂರಿಗೆ ಹಿಂತಿರುಗಿದೆವು. ನಮ್ಮ ವೈದ್ಯರಾಗಿದ್ದ ಡಾ। ಶಿವರಾಂ ಬಳಿ ಆಗ ನಿರಂಜನ ಅಂದಿದ್ದರಂತೆ. "ಸಾವಿತ್ರಿ ಸತ್ಯವಾನನನ್ನು ಉಳಿಸಿಕೊಂಡ ಹಾಗೆ ಅನುಪಮಾ ನನ್ನನ್ನು ಉಳಿಸಿಕೊಂಡ್ಳು!"

ಎಲ್ಲಕ್ಕಿಂತ ಹೆಚ್ಚಾಗಿ 'ಜ್ಞಾನಗಂಗೋತ್ರಿ'ಯ ಕೆಲಸ ಅವರನ್ನು ಉಳಿಸಿತು ಅನಿಸುತ್ತದೆ. ನಿರಂಜನರಿಗೆ ಅನಾರೋಗ್ಯವಾದಾಗ ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ ಒಂದೇ ಸಂಪುಟ ಪ್ರಕಟವಾಗಿತ್ತು. ಎರಡನೆಯ ಸಂಪುಟದ ಕೆಲಸ ಮುಗಿದಿತ್ತು. ಅನಾರೋಗ್ಯದಲ್ಲೂ ಅವರು ಹಗಲಿರುಳು ದುಡಿದು ಉಳಿದ ಐದು ಸಂಪುಟಗಳು ಸಕಾಲದಲ್ಲಿ ಹೊರಬರಲು ಶ್ರಮಿಸಿದರು. ಇಂಥ ದುಡಿಮೆ, ಇಂಥ ಛಲ ಅವರೊಬ್ಬರಿಗೇ ಸಾಧ್ಯ ಅನಿಸುತ್ತದೆ.

ಈ ಬಗೆಯ ಹೋರಾಟದ ವಾತಾವರಣದಲ್ಲಿ ಮಕ್ಕಳಿಬ್ಬರೂ ಧೀಮಂತರಾಗಿ ಬೆಳೆದರು. ಅವರ ಉತ್ಕರ್ಷ ಕಂಡು ಆನಂದಪಡುವ ಅವಕಾಶ ದೊರಕಿದ್ದು ನಮ್ಮ ಭಾಗ್ಯ. ಇನ್ನು ಎಲ್ಲವೂ ಸರಿಹೋಯಿತು ಎಂದುಕೊಳ್ಳುತ್ತಿರುವಾಗಲೇ ಇನ್ನೊಂದು ಆಘಾತ. ಈ ಬಾರಿ ನನಗೆ. ಪುಟ್ಟಗಡ್ಡೆ ಎಂದುಕೊಂಡುದು ಕ್ಯಾನ್ಸರ್ ಎಂದು ಗುರುತಿಸಲ್ಪಟ್ಟಾಗ ವೈದ್ಯೆಯಾದ ನನಗೇ ಗಾಬರಿ. ಆಗ ನಿರಂಜನ ಎಷ್ಟು ಪರಿಯಲ್ಲಿ ಧೈರ್ಯ ಹೇಳಿದರು! ಎಷ್ಟು ಒತ್ತಾಸೆ ಕೊಟ್ಟರು! ಏಳು ವರ್ಷಗಳಲ್ಲಿ ಮೂರು ಬಾರಿ ನನಗೆ ಕ್ಯಾನ್ಸರ್‌ಗೆಂದು ಶಸ್ತ್ರಕ್ರಿಯೆಯಾಯಿತು, ಕಷ್ಟತರ ಚಿಕಿತ್ಸೆಗಳಾದುವು. ಈ

ಎಲ್ಲ ಯಾತನೆಗಳನ್ನೂ ಸಹಿಸಿ ಗೆದ್ದು ಬರಲು ನನಗೆ ಆಸರೆಯಾಗಿ ನಿಂತುದು ನಿರಂಜನರ ಅನುರಾಗ ಎಂದರೆ ಉತ್ಪ್ರೇಕ್ಷೆಯ ಮಾತಲ್ಲ.

ಶಸ್ತ್ರಚಿಕಿತ್ಸೆಗಳ ಗೊಂದಲದಲ್ಲಿ ನನಗೆ ಅತ್ಯಂತ ಪ್ರಿಯವಾಗಿದ್ದ ವೈದ್ಯಕೀಯ ಪ್ರಾಕ್ಟೀಸನ್ನು ಬಿಡಬೇಕಾಗಿ ಬಂತು (೧೯೮೨ರಲ್ಲಿ). ಆಗ ಸಹಜವಾಗಿಯೇ ನಾನು ತುಂಬ ಖಿನ್ನಳಾಗಿದ್ದೆ. ಆಗ ನಿರಂಜನರು, "ನೀವೀಗ ಬೇಕಾದಷ್ಟು ಓದ ಬಹುದು, ವಿಚಾರ ಮಾಡಬಹುದು. ಹೀಗೆ ಬಿಡುವು ಸಿಕ್ಕಿತೂಂತ ನೀವು ಸಂತೋಷ ಪಡಬೇಕು. ಇದರಿಂದ ನಿಮ್ಮ ಬರೆವಣಿಗೆಯ ಗುಣಮಟ್ಟ ಇನ್ನೂ ವೃದ್ಧಿಯಾಗುತ್ತೆ, ನೋಡ್ತಿರಿ" ಎಂದರು.

ಅವರು ಹೇಳಿದ ಮಾತು ನಿಜವಾಗಿದೆ. ಎಷ್ಟೋ ವರ್ಷಗಳಿಂದ ಓದಬೇಕೆಂದು ನೆನೆಸಿದ್ದ ಸಾಹಿತ್ಯ ಕೃತಿಗಳನ್ನು ಈಗ ಓದುವುದು ಸಾಧ್ಯವಾಯಿತು. ಅವುಗಳ ಬಗ್ಗೆ ಅವರೊಡನೆ ಮತ್ತು ಮಕ್ಕಳೊಡನೆ ಚರ್ಚಿಸುವ ಅವಕಾಶ ಸಿಕ್ಕಿತು. ಪೃಥಕ್ಕರಣ ಮತ್ತು ಆಲೋಚನೆಗಳಿಂದ ನನ್ನ ಬೌದ್ಧಿಕವಲಯ ವಿಸ್ತರಿಸಿದೆ. ಇತ್ತೀಚಿನ ದಿನ ಗಳಲ್ಲಿ ನನ್ನ ಬರೆವಣಿಗೆ ಹೊಸ ಕಸುವನ್ನು ಪಡೆದಿದೆ.

ನಾನೀಗ ಮನೆಯಲ್ಲಿಯೇ ಇರುತ್ತೇನಲ್ಲ. ಕರ್ನಾಟಕದ ವಿವಿಧ ಭಾಗಗಳಿಂದ ಹೊರ ಪ್ರಾಂತಗಳಿಂದ ನಿರಂಜನರನ್ನು ಕಾಣಲು ಅದೆಷ್ಟೋ ಜನ ಸಾಹಿತಿಗಳು, ಸಾಹಿತ್ಯಾಸಕ್ತರು ಮನೆಗೆ ಬರುತ್ತಿರುತ್ತಾರೆ. ಇವರೆಲ್ಲರೊಂದಿಗೆ ಕುಳಿತು ಮಾತುಕತೆ ಯಾಡಲು ವಿಚಾರವಿನಿಮಯ ಮಾಡಿಕೊಳ್ಳಲು ನನಗೀಗ ಸಾಧ್ಯವಾಗಿದೆ.

ಸಮಗ್ರ ಕಥಾಸಂಕಲನ 'ಧ್ವನಿ'ಯ ಹಸ್ತಪ್ರತಿ ಸಿದ್ಧಗೊಳಿಸಿ ಅಚ್ಚಿನ ಮನೆಗೆ ಕಳಿಸಿದ ಸಂಭ್ರಮದಲ್ಲಿರುವ ನಿರಂಜನ, ತಮ್ಮ ಕನಸಿನ ಕಾದಂಬರಿ 'ಹೆಜ್ಜೆ' ಬರೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಸುಮಾರು ಏಳೆಂಟು ವರ್ಷಗಳಿಂದಲೂ ಅವರ ಮನಸ್ಸಿನಲ್ಲಿ ಬೆಳೆಯುತ್ತ ಬಂದಿರುವ ಕಾದಂಬರಿ ಇದು. ಸಾವಿರಾರು ಪುಟಗಳಷ್ಟಿರುವ ಟಿಪ್ಪಣಿ, ಈ ಸೀಮೋಲ್ಲಂಘನಕ್ಕೆ ಇಂಬುಗೊಡುತ್ತಿದೆ.

ನಮ್ಮ ಬದುಕಿನಲ್ಲಿ ಸಿಹಿ - ಕಹಿ, ನೋವು - ನಲಿವು, ಸಂತೋಷ - ದುಃಖ, ಇವೆಲ್ಲ ಧಾರಾಳವಾಗಿಯೇ ಸಿಕ್ಕಿವೆ. ನಾವು ಸುಖ ಬಂದಾಗ ಹಿಗ್ಗಲಿಲ್ಲ; ದುಃಖ ಬಂದಾಗ ಕುಗ್ಗಲಿಲ್ಲ. ಈ ಎಲ್ಲ ಬಿರುಗಾಳಿಯ ಮಧ್ಯೆ ನಿರಂಜನ ಮತ್ತು ಅನುಪಮಾ ಅಚಲರಾಗಿ ಉಳಿದಿದ್ದಾರೆ.

○



ಸೃಜನಶೀಲ





ಸೃಜನೇತರ
ಸಂಪಾದಿತ

ನಿರಂಜನ ಅಭಿನಂದನ

ಕೃತಿ

ಪ್ರಗತಿಶೀಲ ಸಾಹಿತಿಯಾಗಿ ನಿರಂಜನ

–ಪ್ರಾ. ಪಿ. ವ್ಹಿ. ವಜ್ರಮಟ್ಟಿ

ಆಧುನಿಕ ಕನ್ನಡ ಸಾಹಿತ್ಯರಂಗದಲ್ಲಿ,ಅಕ್ಷಯ ಚರಿತ್ರೆಗಳಾಗಿ ಉಳಿಯಬೇಕಾದ ಕುವೆಂಪು, ದ. ರಾ. ಬೇಂದ್ರೆ ಮತ್ತು ಶಿವರಾಮ ಕಾರಂತರಂಥ ದಿಗ್ಗಜ ಸಾಹಿತಿಗಳ ಸಾಲಿನಲ್ಲಿ ನಿರಂಜನರೂ ಒಬ್ಬರು. ಒಂದು ರೀತಿಯಲ್ಲಿ ನಿರಂಜನರು ಇವರಿಂದ ತೀರ ಭಿನ್ನರಾಗಿ ತಮ್ಮದೇ ಆದ ಸ್ಥಾನದಲ್ಲಿ ಅದ್ವಿತೀಯ ಲೇಖಕರೆನಿಸಿಕೊಳ್ಳುತ್ತಾರೆ. ಕುವೆಂಪು ಅವರು ದಲಿತ ಹಾಗೂ ಜನಪರ ಲೇಖಕರೆನಿಸಿಕೊಂಡರೂ ಅವರ ಸಾಹಿತ್ಯ ಸೃಷ್ಟಿಯು ಮೂಲ ಪ್ರಜ್ಞಾವಂತಿಕೆ, ವ್ಯಕ್ತಿವಾದೀ ಭಾವುಕತೆಯ ಧರ್ಮಬಂಧನಕ್ಕೆ ಒಳಗಾಗಿತ್ತು. ಬೇಂದ್ರೆಯವರದು ಭಾವಗೀತೆಯ ಲೋಕ, ಒಮ್ಮೆ ಜನಪರವಾಗಿ ಇನ್ನೊಮ್ಮೆ ಮನಪರವಾಗಿ ಉಯ್ಯಾಲೆಯಾಡುತ್ತಿತ್ತು. ಶಿವರಾಮ ಕಾರಂತರದು ಕೆಲಮಟ್ಟಿಗೆ ಭೋಗವ ಜಾತಿಯ ವಿಸ್ತೃತ ಸಾಹಿತ್ಯ. ಆದರೆ ನಿರಂಜನರದು ಕೇವಲ ಸಮಾಜಪರವಾದ ಅಪ್ಪಟ ವೈಜ್ಞಾನಿಕ - ಮನೋಧರ್ಮದ, ಬಲು ಎಚ್ಚರಿಕೆಯಿಂದ ಹಾಗೂ ಪ್ರಜ್ಞಾವಂತಿಕೆಯಿಂದ ಸೃಷ್ಟಿಸಿದ ಪ್ರಗತಿಶೀಲ ಸಾಹಿತ್ಯ. ಹೀಗೆ ನಿರಂಜನರು ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲ, ಸಮಗ್ರ ಭಾರತೀಯ ಲೇಖಕರಲ್ಲಿಯೇ ತಮ್ಮ ಪುರೋಗಾಮಿ ವೈಚಾರಿಕತೆಯಿಂದಾಗಿ ಅಗ್ರಗಣ್ಯ ಪ್ರಗತಿಶೀಲ ಸಾಹಿತಿಗಳಾಗಿ ವಿಜೃಂಭಿಸುತ್ತಾರೆ.

ನಿರಂಜನರು ಈ ವರೆಗೆ ಬಿಟ್ಟುಬಿಡದೆ ಕಳೆದ ಸುಮಾರು ನಾಲ್ಕೈದು ದಶಕಗಳಿಂದ ಸಾವಿರಾರು ಪುಟಗಳಷ್ಟು ಸಾಹಿತ್ಯ ಸೃಷ್ಟಿಮಾಡುತ್ತಾ ಬಂದಿದ್ದಾರೆ. ಕಾದಂಬರಿ, ಕಥೆ, ನಾಟಕ ಅವರ ಸೃಜನಾತ್ಮಕ ಸಾಹಿತ್ಯ - ವಿಧಗಳಾಗಿದ್ದರೆ, ಪ್ರಬಂಧ, ವಿಮರ್ಶೆ, ಮುನ್ನುಡಿ, ಭಾಷಣಗಳು ವೈಚಾರಿಕ ನಿಲುವನ್ನು ವಿಶದೀಕರಿಸಿದ ವಿಧಗಳಾಗಿವೆ.

'ವಿಮೋಚನೆ', 'ಚಿರಸ್ಮರಣೆ', 'ಮೃತ್ಯುಂಜಯ'ದಂಥ ಪುರೋಗಾಮಿ ಚಿಂತನೆಯ ಕಾದಂಬರಿಗಳನ್ನು ಮತ್ತು ಹಲವಾರು ಸಣ್ಣ ಕಥೆಗಳನ್ನೂ ಪ್ರಕಟಿಸಿದ ನಿರಂಜನರು, ತಮ್ಮ ಪ್ರಗತಿವಾದೀ ಧೋರಣೆಗೆ ಅನುಗುಣವಾದ ಗಾರ್ಕಿಯ 'ತಾಯಿ' ಕಾದಂಬರಿಯನ್ನೂ, ಅಷ್ಟೇ ಮೌಲಿಕವಾಗಿ ಕನ್ನಡಿಸಿದ್ದಾರೆ. ಅಲ್ಲದೆ ತಮ್ಮ ಸಾಹಿತ್ಯ ಸೃಷ್ಟಿಯ ಉದ್ದೇಶ ಗುರಿಗಳನ್ನು ಸಖತ್ತಾದ ಶೈಲಿಯಲ್ಲಿ ನಿಬಂಧ, ವಿಮರ್ಶೆ, ಬರಹ - ಭಾಷಣಗಳಲ್ಲಿ ಪ್ರಚಾರಪಡಿಸಿದ್ದಾರೆ. ಅವರು ರಚಿಸಿದ ಸಾಹಿತ್ಯ-ಪುಟ-ಪುಟಗಳಲ್ಲಿಯೂ ಅವರ ಪ್ರಗತಿಶೀಲ ಮನೋಭಾವನೆಯನ್ನು ನೇರವಾಗಿ ಉಗ್ಗಡಿಸುತ್ತದೆ. ಯಾವುದೇ ಮುಚ್ಚು - ಮರೆ, ಭಯ - ಭೀತಿಗಳಿಗೆ ಒಳಗಾಗದೆ ತಮ್ಮ ಸಾಹಿತ್ಯಿಕ ಹಾಗೂ ಬದುಕಿನ ನಿಲುವುಗಳನ್ನು ಖಂಡಿತವಾದ ಭಾಷೆಯಲ್ಲಿ ನಿರೂಪಿಸಿದ್ದಾರೆ.

ಕನ್ನಡ ಹಾಗೂ ಭಾರತೀಯ ಭಾಷೆಗಳಲ್ಲಿಯ, ತಾವು ಪ್ರಗತಿಶೀಲರೆಂದು ಕರೆಸಿಕೊಂಡ ಅನೇಕ ಸುಪ್ರಸಿದ್ಧ ಸಾಹಿತಿ, ಕವಿಗಳು, ಸ್ವಾತಂತ್ರ್ಯಾನಂತರ ಯಾವ ಯಾವದೋ ಕಾರಣಗಳಿಂದ ತಮ್ಮ ಪ್ರಗತಿಪರ ನಿಲುವುಗಳಿಂದ ಹೊಯ್ದಾಡಿದ್ದಾರೆ. ಇವರು ತಮ್ಮ ತಾರುಣ್ಯದ ಬಿಸಿ ರಕ್ತದ ಆವೇಶದಲ್ಲಿ ಪ್ರಗತಿವಾದಿಗಳಾಗಿ, ಕ್ರಾಂತಿಕಾರಿಗಳಾಗಿ ಸಾಹಿತ್ಯಸೃಷ್ಟಿಗೆ ನುಗ್ಗಿದ್ದಾರೆ.ಆದರೆ ನಂತರ ತಮ್ಮ ಮಧ್ಯಮ ಹಾಗೂ ಕೊನೆಯ ವಯಸ್ಸಿನಲ್ಲಿ ಅಧ್ಯಾತ್ಮ, ಅಸ್ತಿತ್ವ, ದಿಗಂಬರ, ಪ್ರತೀಕ ಮೊದಲಾದ ವಾದಗಳಿಗೆ ಒಳಗಾಗಿ ಸೋತಿದ್ದಾರೆ. ತಮ್ಮ ಸುತ್ತಲಿನ ಸಾಮಂತಿ ಹಾಗೂ ಬೂರ್ಜ್ವಾ ವಾತಾವರಣಕ್ಕೆ ಹೆದರಿಕೊಂಡು ಹೇಗಾದರೂ ಬದುಕುವ ಬಯಕೆಗಾಗಿ ಒಡಂಬಡಿಕೆ (ಕಾಂಪ್ರೊಮೈಜ್) ಮಾಡಿಕೊಂಡಿದ್ದಾರೆ. ಭಾರತೀಯ ಲೇಖಕರಲ್ಲಿ ಇಂಥವರ ಸಂಖ್ಯೆ ಹೇರಳವಾಗಿದೆ. ಕೇವಲ ಬೆರಳೆಣಿಕೆಯಷ್ಟು ಸಾಹಿತಿಗಳು ಮಾತ್ರ ತಾವು ದೃಢವಾಗಿ ನಂಬಿಕೊಂಡು ಬಂದ ಪ್ರಗತಿಶೀಲ ಧೋರಣೆಗಳಿಗೆ ದ್ರೋಹಬಗೆಯದೆ ಆಜೀವನ (ಪ್ರತಿ) ಬದ್ಧರಾಗಿ ಸಾಹಿತ್ಯ ಸೃಷ್ಟಿಸುತ್ತ ಬಂದಿದ್ದಾರೆ. ಇಂಥ ಅಪರೂಪದ ಲೇಖಕರಲ್ಲಿ ನಿರಂಜನರು ಒಬ್ಬರೆಂದು ಧೈರ್ಯವಾಗಿ ಹೇಳಬಹುದು.

ಪ್ರಗತಿಶೀಲ ಸಾಹಿತ್ಯದ ವೈಜ್ಞಾನಿಕ ಧೋರಣೆಗಳನ್ನು ಬಲು ಆಳವಾಗಿ ಅರ್ಥೈಸಿಕೊಂಡವರಲ್ಲಿ, ನನಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ನಿರಂಜನರು ಅದ್ವಿತೀಯರು.

ಕಳೆದ ಅರ್ಧಶತಕದಿಂದ ರಚಿಸುತ್ತ ಬಂದ ಅವರ ಸಾಹಿತ್ಯದಲ್ಲಿ ಪ್ರಗತಿಶೀಲತೆ ನಿರಂತರ ವಾಗಿ ಯಾವುದೇ ವಿರೋಧಾಭಾಸಕ್ಕೆ ಎಡೆಗೊಡದೆ ಮೂಡಿಬಂದಿದೆ. ಚಾರಿತ್ರಿಕ ದ್ವಂದ್ವಾತ್ಮಕ ಭೌತಿಕವಾದ, ಭೌತಿಕ ದ್ವಂದ್ವಾತ್ಮಕ ಭೌತಿಕವಾದ, ವರ್ಗ - ಸಮರ, ವಿಕಾಸ ಹಾಗೂ ಪ್ರಗತಿವಾದಗಳಂಥ ತಾತ್ವಿಕ ಸಂಗತಿಗಳನ್ನು ಇಷ್ಟೊಂದು ಗಂಭೀರ ವಾದ ಚಿಂತನಪರ ಶೈಲಿಯಲ್ಲಿ ಅಭಿವ್ಯಕ್ತಪಡಿಸಿದ ನಿರಂಜನರು, ಆಧುನಿಕ ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ, ಈ ಶತಮಾನದ ಓರ್ವ ಪ್ರಮುಖ ಪ್ರಗತಿಶೀಲ ಲೇಖಕ ರಾಗಿ ದಾಖಲೆಗೊಳ್ಳುತ್ತಾರೆ.

ನಿರಂಜನರ ಸೃಜನಾತ್ಮಕ ಸಾಹಿತ್ಯ ಕೃತಿಗಳಾದ 'ವಿಮೋಚನೆ', 'ಚಿರಸ್ಮರಣೆ' ಹಾಗೂ 'ಮೃತ್ಯುಂಜಯ'ದಂಥ ಕಾದಂಬರಿಗಳಲ್ಲಿ ಮತ್ತು ಕಥೆಗಳಲ್ಲಿ ಅವರ ಪ್ರಗತಿ ಶೀಲತೆ ಪ್ರಶ್ನಾತೀತವಾಗಿ ಗೋಚರಿಸುತ್ತದೆ. ಈ ಕಾರಣದಿಂದಲೇ ಈ ಕೃತಿಗಳು ಪ್ರಗತಿಶೀಲ ಸಾಹಿತ್ಯದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯಬಲ್ಲವು. 'ತಾಯಿ' ಮ್ಯಾಕ್ಸಿಂ ಗಾರ್ಕಿ ಅವರ ವಿಶ್ವಪ್ರಸಿದ್ಧ ಕಾದಂಬರಿಯಾದರೂ, ಇದನ್ನು ಮೂಲ ಕೃತಿಕಾರನ ಅಭಿವ್ಯಕ್ತಿಗೆ ಸವಾಲಾಗಿ ನಿಲ್ಲುವಂತೆ ಅನುವಾದಿಸಿದ ನಿರಂಜನರು, ತಮ್ಮ ಪ್ರಗತಿಶೀಲತೆಗೆ ಅಕ್ಷಯ ಸಾಕ್ಷಿ ನೀಡಿದ್ದಾರೆ ಎನ್ನಬಹುದು. ತಮ್ಮ ಯಾವತ್ತೂ ಕೃತಿಗಳಲ್ಲಿ ಸಮಾಜಜೀವನದ ವರ್ಗ - ಹೋರಾಟವನ್ನು ನಿಖರವಾಗಿ ಚಿತ್ರಿಸಿದ್ದಾರೆ. ಈ ರೀತಿಯಾಗಿ ನಿರಂಜನರ ಬರವಣಿಗೆ ಸಂಪೂರ್ಣ ಪುರೋಗಾಮಿ ಮಾದರಿಯದಾಗಿ ನಿಲ್ಲುತ್ತದೆ.

ನಿರಂಜನರು ತಮ್ಮ ಬದುಕಿನುದ್ದಕ್ಕೂ ಚಿಂತನಶೀಲರು. ಅವರ ಚಿಂತನೆ ಏಕಾಂತವಾಸದ್ದಲ್ಲ; ಲೋಕಾಂತ ವಾಸದ್ದು. ವಿಶಾಲವಾದದ್ದು, ಅಷ್ಟೇ ಆಳ ವಾದದ್ದು. ಯಾವದೇ ಒಂದು ಕೃತಿ ರಚಿಸುವ ಪೂರ್ವದಲ್ಲಿ ಅದಕ್ಕೆ ನೆರವಾಗ ಬೇಕಾದ ಯಾವತ್ತೂ ಐತಿಹಾಸಿಕ ಸಂಗತಿಗಳನ್ನು ಕೂಲಂಕಷವಾಗಿ ಅಭ್ಯಸಿಸು ತ್ತಾರೆ. ಕಥಾ ರಚನೆಯ ಚೌಕಟ್ಟಿನಲ್ಲಿ ಪ್ರಗತಿವಾದೀ ನಿಲುವಿಗೆ ಬದ್ಧರಾಗಿ ಕಲಾತ್ಮಕ ಸಾಹಿತ್ಯ ಸೃಷ್ಟಿಸುತ್ತಾರೆ. ಸಾಹಿತ್ಯವನ್ನು 'ವಾಸ್ತವತೆ ಮತ್ತು ನೈಜ ವಿಚಾರಗಳ ಕಲೆ' ಎಂದು ನಂಬಿದವರು.'ಸಾಹಿತ್ಯ, ಕಲೆಗಳೆಲ್ಲ ಹುಟ್ಟಿದ್ದು ದುಡಿಮೆಯ ಜೊತೆಯಲ್ಲೇ, ಮಾನವನ ಕಾಯಕದಲ್ಲೇ' ಎಂದು ಭಾವಿಸಿದವರು. ಅವರ ಶೈಲಿ ನಿರಂಜನೀಯ (ಮನೋರಂಜನ ರಹಿತ) ವಾದರೂ ಅದರ ಗಟ್ಟಿಗತನ ಹಾಗೂ ಸ್ವರೂಪ ವಜ್ರ ಸದೃಶವಾದದ್ದು. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ, ಸಾಸಿವೆಯಲ್ಲಿ ಸಾಗರ ಸೇರಿಸಿದಂತೆ, ತಮ್ಮ ಚಿಂತನಪರತೆಯನ್ನು ಎಳೆಎಳೆಯಾಗಿ ಬಿಡಿಸುತ್ತಾರೆ. ಭಾಷೆಯ ಮೇಲಿನ ಅವರ ಅಧಿಕಾರ ಆಕರ್ಷಕವಾದದ್ದು. ಎಂಥ ಹೆಬ್ಬಂಡೆ ಸದೃಶವಾದ ವಿಷಯಗಳನ್ನೂ ಸಹ ಹನಿ ಹನಿಗಳ ರೂಪದಲ್ಲಿ ನಿರೂಪಿಸುವ ಕಲಾವಂತಿಕೆ ಅಸಾಧಾರಣವಾದದ್ದು.

ನಿರಂಜನರ ಸಮಗ್ರ ಸಾಹಿತ್ಯವು ಸಮಗ್ರ - ಪ್ರಗತಿಶೀಲ ಸಾಹಿತ್ಯವಾಗಿದೆ. ಅವರು ಯಾವದೇ ಆಶೆ - ಆಮಿಷಗಳಿಗೆ ಒಳಗಾಗದೆ ತಾವು ಅಜಸ್ರವಾಗಿ ನಂಬಿಕೊಂಡು ಬಂದ ಪ್ರಗತಿಪರ ಧೋರಣೆಗಳನ್ನು ತಮ್ಮ ಬರಹದಲ್ಲಿ ನಿರಂಕುಶಮತಿಗಳಾಗಿ ಪ್ರತಿಪಾದಿಸಿದ್ದಾರೆ. ಮಾನ - ಬಹುಮಾನ, ಪುರಸ್ಕಾರ - ಸತ್ಕಾರ ಮೊದಲಾದ ಲೋಭಗಳ ಮೋಹದಿಂದ ವಿರಕ್ತರಾಗಿ, ಕೇವಲ ಸಮಾಜಪರವಾದ ಸಾಹಿತ್ಯ ಸೃಷ್ಟಿಸಿ ತಮ್ಮ ಆತ್ಮೀಯ ಆಕಾಂಕ್ಷೆಗಳಿಗೂ ಎರವಾಗಿದ್ದಾರೆ. ಜೀವನದುದ್ದಕ್ಕೂ ನಿರಪೇಕ್ಷ ಭಾವನೆಯಿಂದ ಸಾಪೇಕ್ಷ ಮೌಲ್ಯದ ಸಾಹಿತ್ಯ ಸೃಷ್ಟಿಸಿದ ನಿರಂಜನರು, ಎಂದೆಂದಿಗೂ ಮರೆಯದ ಮಹಾಲೇಖಕರಾಗಿ ಉಳಿಯುತ್ತಾರೆ.

ಪ್ರಗತಿಶೀಲತೆ ನಮ್ಮ ಹಲವಾರು ಹಿರಿ - ಕಿರಿಯ ಲೇಖಕರ ಕೈಯಲ್ಲಿ ಸಿಕ್ಕು ಅನೇಕ ಸಲ ವಿಕೃತಿಗೆ ಬಲಿಯಾದದ್ದುಂಟು. ಸಾಹಿತ್ಯ - ಕಾವ್ಯವು ಭಾವ ಮೂಲಕ **(Subjective)** ಎಂಬ ಬಲವಾದ ನಂಬುಗೆಯಿಂದ ಪೀಡಿತರಾದ ಕೆಲವು ಲೇಖಕರು ಪ್ರಗತಿಶೀಲತೆಯನ್ನು ಭಾವುಕತೆಗೆ ಆಹುತಿಕೊಡುವ ಅಜ್ಞಾನವನ್ನು ತೋರಿಸುತ್ತಾರೆ. ಇಲ್ಲವೆ ಉದ್ದೇಶಪೂರ್ವಕವಾಗಿ ಆಧ್ಯಾತ್ಮ, ಹ್ರಾಸವಾದಗಳನ್ನೇ ವಿಕಾಸವಾದವೆಂದು ಅರ್ಥೈಸುವ ಹುಂಬತನ ತೋರುತ್ತಾರೆ. ಇಂಥದೊಂದು ಸಾಂಕ್ರಾಮಿಕ ಸ್ಥಿತಿಯಲ್ಲಿ ನಿರಂಜನರಂಥ ಲೇಖಕರು ಪ್ರಗತಿಶೀಲ ಸಾಹಿತ್ಯದ ಸ್ವರೂಪವನ್ನು ಖಚಿತಗೊಳಿಸುವ ಶಸ್ತ್ರಚಿಕಿತ್ಸಕರಾಗಿ ನಿಲ್ಲುತ್ತಾರೆ. ೧೯೪೩ರಲ್ಲಿ ಕನ್ನಡ ಸಾಹಿತ್ಯರಂಗದಲ್ಲಿ ಅ.ನ.ಕೃ. ಪ್ರಣೀತ ಪ್ರಗತಿಶೀಲ ಸಾಹಿತ್ಯ ಆಂದೋಲನ ಆರಂಭಗೊಂಡಾಗ, ನಿರಂಜನರು ಪ್ರಗತಿಶೀಲತೆಯ ಅಪಮೌಲ್ಯವನ್ನೂ ಸಹಿಸದೆ ಸಿಡಿದು ನಿಂತರು. ಜನರಂಜನೆ ಮುಖ್ಯವಲ್ಲ, ಪ್ರಗತಿಪರ ಧೋರಣೆಗಳನ್ನು ವೈಜ್ಞಾನಿಕ ಮನೋಧರ್ಮದಿಂದ ಚಿತ್ರಿಸುವದು ಮುಖ್ಯವೆಂದು ಆತ್ಮವಿಶ್ವಾಸದಿಂದ ಏಕಾಂಗವೀರರಾಗಿ ಸಾಹಿತ್ಯ ರಚನೆ ಮುಂದುವರಿಸಿದರು. ಅವರ ಬದುಕಿನಲ್ಲಿಯು, ಇಂಥ ಹೋರಾಟಗಳೇ ಅವರನ್ನು ಕನ್ನಡದ ಅಪರಾಜೇಯ ಪ್ರಗತಿಶೀಲ ಸಾಹಿತಿಯನ್ನಾಗಿ ರೂಪಿಸಿವೆ.

ನಿರಂಜನರ ಈ ವರೆಗಿನ ಯಾವತ್ತೂ ಬರಹ ಅವರ ಬದುಕಿನ ಲಿಖಿತ-ದಾಖಲೆಯಾಗಿದೆಯನ್ನಬಹುದು. ತಾರುಣ್ಯದ ಉದಯಕಾಲದಲ್ಲಿ ಅವರು ನಿಷ್ಠಾವಂತ ಸಮಾಜವಾದಿಗಳಾಗಿ, ಕಮ್ಯೂನಿಸ್ಟ್ ಸಂಘಟನೆಯ ಸಕ್ರಿಯ ಸದಸ್ಯರಾಗಿ ಹೋರಾಟದಲ್ಲಿ ಪಾಲುಗೊಂಡವರು. ಮಾರ್ಕ್ಸ್‌ವಾದೀ ಚಿಂತನೆಗೆ ಮಾರು ಹೋದವರು. ಈಗಲೂ ಅವರು - "ನನ್ನ ಅಭಿಪ್ರಾಯದಲ್ಲಿ ಕಮ್ಯೂನಿಸಂ ಎಂದರೆ ಶ್ರೇಷ್ಠತಮ ಮಾನವೀಯತೆ" - ಎಂದು ಅಚಲವಾಗಿ ನಂಬಿದವರು. ಈ ನಂಬಿಗೆಯನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಪಡಿಸುವದರೊಂದಿಗೆ ಅದರಂತೆ ನಡೆದು ತೋರಿಸಿದವರು. ಅಂತೆಯೇ ಅವರ ಸಾಹಿತ್ಯದಲ್ಲಿ ಪ್ರಗತಿಶೀಲತೆ ಚಿಂತನೆಯ ಯಾವ

ಗೊಂದಲಕ್ಕೂ ಎಡೆಗೊಡದಂತೆ ಮೂಡಿಬಂದಿದೆ. ಈ ದೃಷ್ಟಿಯಿಂದ ನಿರಂಜನರು ಇಂದಿನ ಕನ್ನಡ ಸಾಹಿತ್ಯದಲ್ಲಿ ಏಕಮೇವ ವೈಜ್ಞಾನಿಕ ಸಮಾಜವಾದೀ ಪ್ರಗತಿಶೀಲ ಲೇಖಕರಾಗಿ ಎದ್ದು ಕಾಣುತ್ತಾರೆ.

ಸಾಹಿತ್ಯ ಸಾಮ್ರಾಟ್ ಪ್ರೇಮಚಂದರ ಪರಿಭಾಷೆಯಲ್ಲಿ ಹೇಳಬೇಕೆಂದರೆ, ನಿರಂಜನರು ಸ್ವಭಾವತಃ ಪ್ರಗತಿಶೀಲ ಸಾಹಿತಿಗಳು - "ಸಾಹಿತಿ ಅಥವಾ ಕಲಾಕಾರನು ಸ್ವಭಾವತಃ ಪ್ರಗತಿಶೀಲನಾಗಿರುತ್ತಾನೆ. ಒಂದು ವೇಳೆ ಇದು ಆತನ ಸ್ವಭಾವವಾಗಿರದಿದ್ದರೆ ಬಹುತರವಾಗಿ ಅವನು ಸಾಹಿತಿಯೇ ಆಗಿರಲಾರ". ಈ ಮಾತಿನಂತೆ ನಿರಂಜನರು ನಿಸ್ಸಂದೇಹವಾಗಿ ಸಾಹಿತಿಗಳು. ಯಾಕೆಂದರೆ ಅವರ ಸಾಹಿತ್ಯದ ಪುಟ - ಪುಟಗಳಲ್ಲಿಯೂ ಅವರ ಪ್ರಗತಿಶೀಲ ಸ್ವಭಾವದ ದರ್ಶನವಾಗುತ್ತದೆ.

೧೯೪೪ರಲ್ಲಿ ಕನ್ನಡ ಸಾಹಿತ್ಯ ರಂಗದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯ ಚಳವಳಿ ಬಹಿರಂಗ ಪ್ರಚಾರದಲ್ಲಿ ಮೆರೆದಷ್ಟು ಅಂತರಂಗದಲ್ಲಿ ವಿಕಾಸ ಪಡೆಯದೆ ಹೋಯ್ತು. "೧೯೪೪ರಲ್ಲಿ ನಾನು ಕೆಲವು ಗೆಳೆಯರೊಂದಿಗೆ ಪ್ರಗತಿಶೀಲ ಸಾಹಿತ್ಯ ಚಳವಳಿ ಆರಂಭಿಸಿದೆ" ಎನ್ನುವ ಅ.ನ.ಕೃ. ಸ್ವಭಾವತಃ ಪ್ರಗತಿಶೀಲ ಸಾಹಿತಿಗಳಾಗಿರಲಿಲ್ಲ. ಆದರೆ ಅಂದಿನಿಂದ ಇಂದಿನ ವರೆಗೆ ಪ್ರಗತಿಶೀಲತೆಗೆ ಬದ್ಧರಾಗಿ ಸಾಹಿತ್ಯ ಸೃಜನ ಮಾಡುತ್ತ ಬಂದವರಲ್ಲಿ ನಿರಂಜನ ಹಾಗೂ ಬಸವರಾಜ ಕಟ್ಟೀಮನಿ ಇವರ ಹೊರತಾಗಿ, ಉಳಿದವರೆಲ್ಲರೂ ಕೇವಲ ಸಾಹಿತಿಗಳಾಗಿ ಉಳಿದು ಕರಗಿಹೋದರು. ಅದರಲ್ಲಿಯೂ ನಿರಂಜನರು ತಮ್ಮ ಆಳವಾದ ಚಿಂತನಪರತೆಯಿಂದಾಗಿ ಪ್ರಗತಿಶೀಲ ಸಾಹಿತ್ಯದ ಅಗ್ರಗಣ್ಯ ಲೇಖಕರಾಗಿ, ಹೊಸ ಪೀಳಿಗೆಯ ಪುರೋಗಾಮಿ ಸಾಹಿತಿಗಳಿಗೆ ಮಾರ್ಗದರ್ಶಕರಾದರು. ೧೯೭೪ರಲ್ಲಿ ಮತ್ತೆ ಪ್ರಗತಿ - ಆಸಕ್ತರ ಆಶೋತ್ತರಗಳಿಗೆ ಉನ್ನಾಯಕರಾಗಿ ನಿಂತು 'ಪ್ರಗತಿ ಪಂಥ' ವೇದಿಕೆಗೆ ಜನ್ಮ ನೀಡಿ, ಕೆಲಕಾಲ ಸ್ವತಃ ತಾವೇ ಅದರ ಸೂತ್ರಧಾರರಾಗಿ ಕಾರ್ಯ ನಿರ್ವಹಿಸಿದರು. ಪರಿಣಾಮವಾಗಿ ಅನೇಕ ಹಳೆ - ಹೊಸ ಲೇಖಕರು ಪ್ರಗತಿಶೀಲ ಸಾಹಿತ್ಯದತ್ತ ಮತ್ತೊಮ್ಮೆ ಕುತೂಹಲಕರ ಗಮನ ಹರಿಸುವಂತಾಯ್ತು. ಹೀಗೆ ಕನ್ನಡ ಸಾಹಿತ್ಯದ ನಾಲ್ಕೈದು ದಶಕಗಳ ತುಂಬ ನಿರಂಜನರ ಪ್ರಗತಿಶೀಲ ವ್ಯಕ್ತಿತ್ವ ಮೆರೆಯುತ್ತ ಬಂದಿದೆ.

ಸಾಹಿತ್ಯದಲ್ಲಿ ಯಾವುದು ಪ್ರಗತಿಶೀಲ? ಯಾವುದು ಅಪ್ರಗತಿಶೀಲ? ಎಂಬುದನ್ನು ನಿರ್ಧರಿಸುವಲ್ಲಿ ಇಂದಿಗೂ ಅನೇಕ ರೀತಿಯ ಗೊಂದಲಗಳನ್ನುಂಟು ಮಾಡುವ ಸಾಹಿತಿ - ವಿಮರ್ಶಕರಿಗೇನೂ ಕೊರತೆಯಿಲ್ಲ. 'ಪ್ರಗತಿ'ಯ ವಿಕಾಸವಾದೀ ಸಿದ್ಧಾಂತದ ಹಿನ್ನೆಲೆಯಲ್ಲಿ ನಿಜವಾದ ವೈಜ್ಞಾನಿಕ ಪರಿಭಾಷೆಯನ್ನು ವಿಶದಪಡಿಸುವಲ್ಲಿ ನಿರಂಜನರು ಪ್ರಮುಖರು. ಅರಿಯದೆಯೋ, ಇಲ್ಲವೆ ಉದ್ದೇಶಪೂರ್ವಕವಾಗಿಯೋ

'ಪ್ರಗತಿ'ಯ ಅರ್ಥವಂತಿಕೆಯನ್ನು ಕುಲಗೆಡಿಸುವ ಇಂಥ ಪ್ರಸಂಗದಲ್ಲಿ ನಿರಂಜನರು ತಮ್ಮ ಸಾಹಿತ್ಯ ಸೃಷ್ಟಿ ಹಾಗೂ ಭಾಷಣ - ಪತ್ರಗಳಿಂದ ಪ್ರಗತಿಶೀಲತೆಯ ದುರ್ಗರಕ್ಷಕರಾಗಿ ನಿಂತರು. ಯಾವದೇ ಭಿಡೆ ಮುರವತ್ತುಗಳಿಗೆ ಬಲಿಯಾಗದೆ ತಮ್ಮ ಅಭಿಪ್ರಾಯ, ನಿಲುವುಗಳನ್ನು ಖಡಾಖಂಡಿತವಾಗಿ ಪ್ರತಿಪಾದಿಸಿದರು.

೧೯೭೬ ಜನವರಿ ೧೧, ೧೨ರಂದು ದಾವಣಗೆರೆಯಲ್ಲಿ ಜರುಗಿದ ಕರ್ನಾಟಕ ಪ್ರಥಮ 'ಪ್ರಗತಿಪಂಥ' ಸಮ್ಮೇಳನದ ಅಧ್ಯಕ್ಷೀಯ ಭಾಷಣ ಪ್ರಗತಿಶೀಲ ಸಾಹಿತಿಗಳಿಗೆ ಎಂದೆಂದಿಗೂ ದಾರಿದೀಪವಾಗಿದೆ.

ಸಾಹಿತ್ಯ ಯಾರ ಪರವಾಗಿರಬೇಕು ? ಎಂಬ ಪ್ರಶ್ನೆಗೆ ಭೋಗವಾದಿ ಸಾಹಿತಿಗಳು ಭೋಗವಾಗಿಯೇ ಉತ್ತರಿಸುತ್ತಾರೆ. ಆದರೆ ಪ್ರಗತಿಶೀಲ ನಿರಂಜನರು ನೇರವಾಗಿ ಉತ್ತರಿಸುತ್ತಾರೆ - "ತಲೆ ತಲಾಂತರಗಳಿಂದ ಕ್ರೂರ ಶೋಷಣೆಗೆ ಒಳಗಾದ ಈ ದೇಶದ ಬಹು ಜನಸಮುದಾಯ ಎದ್ದು ನಿಲ್ಲಲು ಹವಣಿಸುತ್ತಿರುವ ಈ ಘಳಿಗೆಯಲ್ಲಿ ಬರಹಗಾರರು ಕಲಾವಿದರ ಪಾತ್ರವೇನು ? ತೀವ್ರಗೊಳ್ಳುತ್ತಿರುವ ಹೋರಾಟದಲ್ಲಿ ನಾವು ಬಯಸುವದು ಯಾರ ಹಿತವನ್ನು ? ನಾವು ಯಾರ ಕಡೆಗೆ ? ನಮ್ಮ ಸಹಾನುಭೂತಿ ಬೆಂಬಲ ಯಾರಿಗೆ ?" ಮುಚ್ಚುಮರೆಯಿಲ್ಲದೆ, ಇಂಥ ಸಾಮಾಜಿಕ ವಿಷಮ ವಾತಾವರಣದಲ್ಲಿಯೂ ಕೂಡ ತಮ್ಮ ಏಕಪಕ್ಷೀಯ ನಿಲುವನ್ನು ಘಂಟಾಘೋಷವಾಗಿ ಸಾರುವ ನಿರಂಜನರ ಧೈರ್ಯ, ಆತ್ಮವಿಶ್ವಾಸಗಳು, ಅವರ ಬದ್ಧ ವಿಚಾರಪರತೆಯನ್ನು ನಿಚ್ಚಳಗೊಳಿಸುತ್ತವೆ.

ಸಾಹಿತ್ಯದಲ್ಲಿ ವರ್ಗ ಹೋರಾಟವನ್ನು ಚಿತ್ರಿಸುವ ಬಗ್ಗೆ ನಿರಂಜನರ ನಿಲುವು ಇನ್ನೂ ಹರಿತವಾದುದು - "ಅನಾಗರಿಕ ಮಾನವ ತನ್ನ ರಟ್ಟೆಯ ಕೊರಡಿನ ಅಧಿಕ ಬಲವನ್ನು ಪ್ರಯೋಗಿಸಿ ಇನ್ನೊಬ್ಬ ಬೇಟೆಯಾಡಿದುದನ್ನು ಕಸಿದುಕೊಂಡಾಗಿನಿಂದ ಬೆಳೆದುಬಂದಿರುವ ದುಷ್ಟತನಕ್ಕೆ ನಾವು ಜಯ ಹಾರೈಸೋಣವೆ ? ಮಾನವೀಯತೆಯ ಅರ್ಚಕರು ಮಾಡುವ ಕೆಲಸ ಇದಲ್ಲ. ಹಾಗಾದರೆ ತಟಸ್ಥರಾಗೋಣವೆ ? ಸಜ್ಜನರ ತಾಟಸ್ಥ್ಯ ದುರ್ಜನರ ಬಂಡವಾಳವಾಗಬಹುದು. ಈ ಎರಡೂ ಸರಿಯಲ್ಲವೆಂದಾದರೆ ಉಳಿದಿರುವ ದಾರಿಯೊಂದೆ ! ಅಂಗಾತ ಸ್ಥಿತಿಯಿಂದ ಎದ್ದು ನಿಲ್ಲಲು ಚಡಪಡಿಸುತ್ತಿರುವ ಮಾನವನಿಗೆ ಆಸರೆಯಾಗುವದು, ಅವನ ಊರುಗೋಲಾಗುವದು."

ಭಾರತೀಯ ಲೇಖಕರಲ್ಲಿ ಅಧಿಕಾಂಶ ಜನರು ಸ್ವಾತಂತ್ರ್ಯಾನಂತರ ಪಥ ಭ್ರಾಂತರಾದ ಬಗೆಗೆ ನಿರಂಜನರು ಬಲು ಕಟುವಾಗಿ ಟೀಕಿಸುತ್ತಾರೆ - "ಸ್ವಾತಂತ್ರ್ಯಾನಂತರದ ಸಂಕೀರ್ಣ ಬದುಕಿಗೆ ಅಭಿವ್ಯಕ್ತಿ ನೀಡಬೇಕೆಂಬ ಒಳ್ಳೆಯ ವಾದವನ್ನು

ಮುಂದಿಟ್ಟು ಅದರ ಮರೆಯಲ್ಲಿ ಸೃಜನಶೀಲರನ್ನೆಲ್ಲ ಜನಸಮುದಾಯದಿಂದ ದೂರ ಒಯ್ಯುವ ಒಂದು ಪ್ರವೃತ್ತಿ ಮೊಳೆತು ಬಲಿಯಿತು......... ಇವರಲ್ಲಿ ಕೆಲವರಂತೂ ನಟ ಭಯಂಕರರು. ಪ್ರೇಕ್ಷಕರ ಚಪ್ಪಾಳೆಯೇ ಅವರ ಜೀವನದ ಉಸಿರು." ಪ್ರಗತಿಶೀಲ ನಾಗಿರುವದು ಭಯಾನಕ ಅಗ್ನಿಸಾಧನೆ. ಕರಗಸಕ್ಕೆ ತಲೆಕೊಟ್ಟಂತೆ ಎಂಬುದು ಅನೇಕರ ಅನುಭವಕ್ಕೆ ಬಂದಾಗ, ಅವರೆಲ್ಲ ಪಟ-ಪಟನೆ ಹಿಂದಕ್ಕೆ ಸರಿದು, "ನಾವು ಪ್ರಗತಿಶೀಲ ಸಾಹಿತಿಗಳಲ್ಲ, ಕೇವಲ ಸಾಹಿತಿಗಳು" ಎಂದು ಸಾಜೋಗತನ ಪ್ರದರ್ಶಿಸಿದ ಸಮಯ ಸಾಧಕರಿಗೆ ನಿರಂಜನರ ಮೇಲಿನ ಕಟೂಕ್ತಿ ಮರೆಯಲಾಗದ್ದು.

ಅರಿವು ಮತ್ತು ಇರವಿನ ಸಂಬಂಧವನ್ನು ಮಾರ್ಕ್ಸ್‌ವಾದೀ ಚಿಂತನೆಗೆ ಅನುಗುಣವಾಗಿ ನಂಬಿರುವ ನಿರಂಜನರು ಸಾಹಿತ್ಯ ಹಾಗೂ ತತ್ವಜ್ಞಾನವನ್ನು ಒಂದು ಆಯುಧಕ್ಕೆ ಹೋಲಿಸುತ್ತಾರೆ - "ಇರುವಿಕೆ ಮೂಡಿಸಿದ ಅರಿವಿನಿಂದಾಗಿ ಅವನು ತತ್ವಜ್ಞಾನಿಯಾದ. ಆ ಅರಿವು ಅವನ ಕೈಯಲ್ಲೊಂದು ಆಯುಧವಾಯ್ತು. ಅದನ್ನು ಬಳಸಿ ಸಮಾಜವನ್ನೇ ಆತ ಪರಿವರ್ತಿಸತೊಡಗಿದ." ಸಮಾಜ ವಿಕಾಸ ಹಾಗೂ ಪ್ರಗತಿಯ ಸಾಧನವಾಗಿ ಸಾಹಿತ್ಯವನ್ನು ಬಳಸಿಕೊಳ್ಳುವದು ಪ್ರಗತಿಶೀಲ ಸಾಹಿತಿಗಳ ಗುರಿಯಾಗಿದೆ.

ಸಾಹಿತ್ಯ ಮತ್ತು ರಾಜಕೀಯ ವಿಷಯಗಳಲ್ಲಿ ಅನೇಕ ಮಹಾಸಾಹಿತಿಗಳೆನ್ನುವವರೂ ಕೂಡ ನಿರಪೇಕ್ಷವಾಗಿ ಮಾತನಾಡುತ್ತಾರೆ. ನಿರಂಜನರು ಇಂಥ ಪ್ರಸಂಗದಲ್ಲಿ ಇಬ್ಬಂದಿಯಾಗಿ ಆಲೋಚಿಸುವವರಲ್ಲ. - "ಬದುಕಿಗೆ - ಸಮಾಜಕ್ಕೆ ನೂರು ಎಳೆಗಳಿಂದ ಬರಹಗಾರ ಬಂಧಿತನಾಗಬೇಕು ಎನ್ನುವಾಗ ರಾಜಕೀಯದಿಂದ ಆತ ದೂರ ಎಂಬುದು ಹೇಗೆ ಸಾಧ್ಯ? ಗ್ರೀಕ್ ಮಹಾಕಾವ್ಯಗಳ ಕರ್ತೃವಾಗಲಿ, ಭಾರತೀಯ ಮಹಾಕಾವ್ಯಗಳನ್ನು ರಚಿಸಿದವರಾಗಲಿ ರಾಜಕೀಯವನ್ನು ಬಿಟ್ಟಿರಲಿಲ್ಲ." ಎಂದು ವಾದಿಸುತ್ತಾರೆ. ಆದರೂ ರಾಜಕೀಯವನ್ನು ಸಂಕುಚಿತ ಹಾಗೂ ಪಕ್ಷೀಯ ಮನೋಧರ್ಮದಿಂದ ಸ್ವೀಕರಿಸುವದನ್ನು ವಿರೋಧಿಸುತ್ತಾರೆ. "ನಾವು ಯಾವದೇ ರಾಜಕೀಯ ಪಕ್ಷದ ಪ್ರಚಾರಕರಲ್ಲ. ಸ್ತುತಿ - ಪಾಠಕರಲ್ಲ, ಎಲ್ಲ ಪಕ್ಷಗಳ ಮೇಲೂ ಕಣ್ಣಿಡುವ ಜನತೆಯ ಕಾವಲುಗಾರರು ನಾವು" - ಸಾಹಿತ್ಯವು ರಾಜಕೀಯವನ್ನು ನಿರ್ಧರಿಸುವ ಹೆರಿಕಾರ - ಎನ್ನುತ್ತಾರೆ.

ಸಮಾಜದಲ್ಲಿಯ ಎಲೀಟ್ (Eleet) ಮಹಾಶಯರು, ಸಾಹಿತಿಗಳ ಬಗೆಗೆ ತಳೆಯುವ ಔದಾರ್ಯ ಹೇಗೆ ಸಾಹಿತ್ಯಕ್ಕೆ ಉರುಳಾಗುತ್ತದೆ ಎಂಬುದೆನ್ನು ನಿರಂಜನರು ಪ್ರಗತಿಶೀಲ ಸಾಹಿತಿಗಳಿಗೆ ಎಚ್ಚರಿಕೆ ನೀಡುತ್ತಾರೆ - "ಎಲೀಟಿಕರಣಕ್ಕೆ ತುತ್ತಾದವನ ಮುಂದಿರುವದು ಅಧಃಪತನ, ಜಾರುಬಂಡೆ. ಅವನ ಕಣ್ಣಿಗೆ ಪರೆ, ಪರೆ ಮುಖವನ್ನು

ಮುಚ್ಚುವ ಪರೆಯಾಗುತ್ತದೆ. ತೆಳು ಪರದೆ ಗಟ್ಟಿ ರಟ್ಟಾಗುತ್ತದೆ. ರಟ್ಟು ಬಹಳ ಬೇಗನೆ ಬಣ್ಣ ಬಳಿದ ಮುಖವಾಡವಾಗುತ್ತದೆ. ಮುಖವಾಡದ ಮನುಷ್ಯನಾಗುತ್ತಾನೆ ಬರಹಗಾರ, ಕಲೆಗಾರ." ಇಂದಿನ ಸಂಕೀರ್ಣ ವಾತಾವರಣದಲ್ಲಿ ಅನೇಕ ಲೇಖಕರು ಎಲೀಟಿಕರಣಕ್ಕೆ ತುತ್ತಾಗಿದ್ದಾರೆ. ಎಲೀಟಿಕರಣದ ರೇಶ್ಮೆ ಜಾಲವನ್ನು ನಿರ್ದಯವಾಗಿ ಹರಿದು ಹಾಕಿದ ನಿರಂಜನರು, ತಮ್ಮ ಜಾಗ್ರತಶೀಲ ತಾತ್ವಿಕತೆಯನ್ನು ಎಚ್ಚರಿಕೆಯಿಂದ ರಕ್ಷಿಸಿಕೊಂಡು ಬಂದಿದ್ದಾರೆ.

ಪ್ರಗತಿಶೀಲತೆ ಒಂದು ಫ್ಯಾಶನ್ನಲ್ಲ. ಅದೊಂದು ಉಗ್ರಹೋರಾಟದ ಪ್ರಕ್ರಿಯೆ. ವರ್ಗ - ಹೋರಾಟದ ರಣಭೂಮಿ. ಈ ಹೋರಾಟದಲ್ಲಿ ಯಾವುದು ಸತ್ಯ ? ಯಾವುದು ಅಸತ್ಯ ? ಎಂಬುದನ್ನು ಖಚಿತವಾಗಿ ನಿರ್ಧರಿಸಿಕೊಳ್ಳಬೇಕು. ಇಲ್ಲವಾದರೆ ಪ್ರಗತಿಶೀಲ ಸಾಹಿತಿ ಎಂಬವನಿಗೆ ಗೊಂದಲ ತಪ್ಪಿದ್ದಲ್ಲ. ಚಾರಿತ್ರಿಕ ಭೌತಿಕ ದ್ವಂದ್ವವಾದೀ ಚಿಂತನೆಯ ಹಿನ್ನೆಲೆಯಲ್ಲಿ ಸತ್ಯವನ್ನು ನಿರ್ಧರಿಸಿಕೊಳ್ಳಬೇಕು. ನಿರಂಜನರು ಇಂಥ ಅನಾವೃತ ಸತ್ಯವನ್ನು ಕಂಡುಕೊಂಡ ಅಸದೃಶ ಸಾಹಿತಿಗಳು. ಅಂತೆ ಅವರ ವಾಣಿಯಲ್ಲಿ, ಬರಹದಲ್ಲಿ ನಿರ್ದಿಷ್ಟವಾದ ತೀಕ್ಷ್ಣತೆ ತಾನೇ ತಾನಾಗಿ ಮೂಡಿ ಬರುತ್ತದೆ - "ನಾವು ಸತ್ಯಾನ್ವೇಷಕ - ಝಾಡಮಾಲಿಗಳು. ಸೌಂದರ್ಯೋಪಾಸಕ ಜಲಗಾರರು, ಶತಮಾನಗಳಿಂದ ಮನಸ್ಸುಗಳನ್ನು ಕವಿದಿದ್ದ ಜೇಡರ ಬಲೆಗಳೇ, ನೀರ ದಾರಿಗಳನ್ನು ಹೊಲಸುಗೊಳಿಸುವ ತಿಪ್ಪೆರಾಶಿಗಳೇ ! ಎಚ್ಚರ ! " ಎಂದು ಅಸತ್ಯಕ್ಕೆ ಆಹ್ವಾನಿಸುತ್ತಾರೆ.

ಪ್ರಗತಿಪರ ಬರಹಗಾರರ ವೇದಿಕೆಯಾದ 'ಪ್ರಗತಿಪಂಥ'ಕ್ಕೆ ಮಾರ್ಗದರ್ಶನ ನೀಡಿ ಅದನ್ನು ಸಮರ್ಥವಾಗಿ ಮುನ್ನಡೆಸಿದ ಕೀರ್ತಿ ನಿರಂಜನರಿಗೆ ಸಲ್ಲಬೇಕು. 'ಪ್ರಗತಿಪಂಥ'ದ ಧ್ಯೇಯ, ಧೋರಣೆಗಳನ್ನು, ಅನಿಸಿಕೆಗಳನ್ನು ಖಡಾ ಖಂಡಿತವಾಗಿ ಪ್ರಕಟಪಡಿಸುವ ನಿರಂಜನರು - "ಕಾಲದ ಇತಿಹಾಸದ ಸಮಾಜದ ಪ್ರಜ್ಞೆ ಇರುವವರು, ಸಾಮಾಜಿಕ ಕಳಕಳಿ ಉಳ್ಳವರು, ಸಾಮಾಜಿಕ ಪರಿವರ್ತನೆಯಲ್ಲಿ, ರಾಜಕೀಯ ಆಗು ಹೋಗುಗಳಲ್ಲಿ ಆಸಕ್ತಿ ತೋರುವವರು, ಬದುಕಿಗೆ ಅದರ ವ್ಯಾಪಕ ಅರ್ಥದಲ್ಲಿ - ಬದ್ಧರಾದವರು, ಮಾನವೀಯತೆಯ ಪ್ರತಿಪಾದಕರು - ಇಂಥವರಿಗೆಲ್ಲ ಪ್ರಗತಿ ಪಂಥದಲ್ಲಿ ಸ್ಥಾನವಿದೆ." ಎಂದು ಆಹ್ವಾನಿಸುತ್ತಾರೆ. ಆದರೂ ಸಹಿತ 'ಪ್ರಗತಿ - ಪಂಥ'ದ ವೈಚಾರಿಕ ಚರ್ಚೆಯನ್ನು ಮೊಟಕುಗೊಳಿಸುವದನ್ನು ಅವರು ಬಯುಸುವದಿಲ್ಲ - "ಯಾವುದು ಸರಿ, ಯಾವುದು ತಪ್ಪು, ತೀರ್ಮಾನ ನಾನು ಇಲ್ಲಿ ನೀಡಬಾರದು. ಪ್ರಗತಿ ಪಂಥದ ಘೋಷಣೆ, ಅದು ಸ್ವೀಕರಿಸುವ ನೆಲೆ, ಸುಸ್ಪಷ್ಟ. ಆದರೂ ಚರ್ಚೆ ನಡೆಯಲಿ, ಇನ್ನಷ್ಟು ಮತ್ತಷ್ಟು ನಡೆಯಲಿ" ಎಂದು ತಮ್ಮ ಬಿಚ್ಚು ಹೃದಯದ ವೈಶಾಲ್ಯವನ್ನು ಪ್ರಕಟಿಸುತ್ತಾರೆ.

'ಪ್ರಗತಿಪಂಥ'ದ ನಂತರ ಕನ್ನಡ ಸಾಹಿತ್ಯರಂಗದಲ್ಲಿ ಬಂಡಾಯ . ಸಾಹಿತ್ಯ ಚಳವಳಿ ಎದ್ದು ಬಂದಾಗ ನಿರಂಜನರು ಇದನ್ನು - "ಪ್ರಗತಿಪರ ಚಳವಳಿಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ, ಬಂಡಾಯ ಸಾಹಿತ್ಯ ಇಂಥ ಚಳುವಳಿಯ ಪುನರುತ್ಥಾನವಾಗಿದೆ........ಶೋಷಿತರೆಲ್ಲ ಒಂದಾಗಬೇಕು, ಸಮಾಜದ ಶೋಷಕರ ವಿರುದ್ಧ ಬಂಡೇಳಬೇಕು. ಆಗಲೇ ನಾವು ಹೊಸಬೆಳಕು ಕಾಣುವದಕ್ಕೆ ಸಾಧ್ಯ" ಎಂದು ಬೆಂಬಲಿಸಿದರು.

ಸಾಹಿತ್ಯದಲ್ಲಿ ಪ್ರಗತಿಶೀಲತೆ ಕುರಿತು ಅಧಿಕಾರಿಕವಾಗಿ ಪ್ರತಿಪಾದಿಸುವವರಲ್ಲಿ ನಿರಂಜನರು ಅಪ್ರತಿಮ ಪ್ರಜ್ಞಾವಂತರು. "ಪ್ರಗತಿಶೀಲತೆಯ ಬಗೆಗೆ ಸರಿಯಾದ ಅರಿವಿಲ್ಲದೆ ಸ್ವತಃ ಪ್ರಗತಿಶೀಲರೇ ಎಡವಿರುವದೂ ಉಂಟು. ಸ್ವಾತಂತ್ರ್ಯನಂತರದ ಅವಧಿಯಲ್ಲಿ ಕೆಲ ಪ್ರಗತಿಶೀಲರು........ಕ್ಕೆ ಬಲಿಯಾದರು." ಎಂಬ ಕಟು ಸತ್ಯಹೇಳುತ್ತಾರೆ.

ಭಾರತೀಯ ಸಾಹಿತ್ಯ ಹಾಗೂ ಭಾರತೀಯ ಸಾಹಿತಿಗಳ ಮನೋಧರ್ಮವನ್ನು ವೈಜ್ಞಾನಿಕವಾಗಿ ಆಲೋಚಿಸಿ, ವರ್ಗೀಯ ಹೋರಾಟದ ಹಿನ್ನೆಲೆಯಲ್ಲಿ ಸಾಹಿತ್ಯ ಹಾಗೂ ಸಾಹಿತಿಗಳನ್ನು ಎರಡು ವರ್ಗಗಳನ್ನಾಗಿ ವಿಂಗಡಿಸುತ್ತಾರೆ. ನಿರಂಜನರ ಈ ಬಗೆಯ ವಿಂಗಡನೆ ಪ್ರಗತಿಶೀಲ ಸಾಹಿತ್ಯದ ವಾಸ್ತವಿಕ ನಿಲುವಾಗಿದೆ. "ಒಬ್ಬ ಸಾಹಿತಿಯ ಸ್ವಭಾವ ಅನ್ಯಭಾವದಿಂದ ಪ್ರಭಾವಿತವಾಗಬಲ್ಲುದು. ಫಲವಾಗಿ ಒಬ್ಬನು ಪ್ರತಿಗಾಮಿಯಾಗಬಹುದು ಅಥವಾ ಪುರೋಗಾಮಿಯಾಗಬಹುದು". ಇದೇ ಪ್ರಕಾರ ಭಾರತೀಯ ಸಾಹಿತ್ಯದ ಬಗ್ಗೆ "ತನ್ನನ್ನು ಸೃಷ್ಟಿಸಿದವರ ಹಿತಾಸಕ್ತಿಗಳನ್ನು ರಕ್ಷಿಸಲು ವೈದಿಕ ಸಾಹಿತ್ಯ ಸತತವಾಗಿ ಹೋರಾಡುತ್ತ ಬಂದಿರುವದು ನಿಜ" ಎಂಬ ಐತಿಹಾಸಿಕ ಸತ್ಯವನ್ನು ನಿರ್ಭಿಡೆಯಿಂದ ಪ್ರತಿಪಾದಿಸುತ್ತಾರೆ.

ಪ್ರಗತಿಶೀಲ ಸಾಹಿತ್ಯ ರಚನೆ ಹಾಗೂ ಅದರ ಚಳುವಳಿಗಾಗಿ ಹೋರಾಡಿದವರಲ್ಲಿ ನಿರಂಜನರಷ್ಟು ತಮ್ಮನ್ನು ಆಮೂಲಾಗ್ರವಾಗಿ ಸಮರ್ಥಿಸಿಕೊಂಡವರು ಬಹಳ ಕಡಿಮೆ. ಈ ದೇಶದಲ್ಲಿ ಈಗಲೂ ಪ್ರಗತಿಶೀಲ ಮನೋಧರ್ಮದ ಸಾಹಿತಿಗಳನ್ನು ಸಂದೇಹ ದೃಷ್ಟಿಯಿಂದ ನೋಡಲಾಗುತ್ತದೆ. ಮಾನ - ಬಹುಮಾನ, ಪುರಸ್ಕಾರ - ಸತ್ಕಾರಗಳಂತೂ ದೂರ. ೧೯೭೬ನೆಯ ದಾವಣಗೆರೆ ಪ್ರಗತಿಪಂಥ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದ ಕೊನೆಯಲ್ಲಿ - "ನಮ್ಮ ರಚನೆಯೇ ಮೇರು ಕೃತಿ ಎಂದು ನಾವು ನಗಾರಿ ಬಾರಿಸುವದಿಲ್ಲ. ನಾನು ಏನನ್ನೂ ಸಾಧಿಸಲಿಲ್ಲ ಎಂದು ನುಡಿದು ಸತ್ತ ಅಮರಶಿಲ್ಪಿ ಮೈಕೆಲೆಂಜಲೋನ ವಂಶಜರು ನಾವು" ಎಂದು ಉಚ್ಚರಿಸುತ್ತ ನಿರಂಜನರು ಕಣ್ಣೀರು ಸುರಿಸಿದ ದೃಶ್ಯ, ಈಗಲೂ ನನ್ನ ಕಣ್ಣೆದುರಿಗೆ ಕಟ್ಟಿದಂತಿದೆ. ತಮ್ಮ ಜೀವನದ ಇಷ್ಟು ಅವಧಿಯಲ್ಲಿ ಅವರು ಸಾಧಿಸಿದ್ದು ಕಡಿಮೆಯೇನಲ್ಲ. ಆದರೆ ಅವರು ಸಾಧಿಸಿದ್ದನ್ನು ಕಾಣುವ ಕಣ್ಣಿಲ್ಲದ, ಮನಸ್ಸಿಲ್ಲದ ಬೂರ್ಜ್ವಾ ಸಮಾಜದಲ್ಲಿ ನಿರಂಜನರಂಥ ಪುರೋಗಾಮಿ ಜೀವಿಗಳು ಕಣ್ಣೀರು ಸುರಿಸುವದು ತಪ್ಪಿದ್ದಲ್ಲ. ○

ನಿರಂಜನರ ಕಥಾ ಸಾಹಿತ್ಯ*

–ಸುಬ್ರಾಯ ಚೊಕ್ಕಾಡಿ

ಅ.ನ.ಕೃ., ತ.ರಾ.ಸು., ಕಟ್ಟೀಮನಿ ಹಾಗೂ ನಿರಂಜನರು ನಮ್ಮ ಪ್ರಗತಿಶೀಲ ಚಳವಳಿಯು ಕೊಟ್ಟ ಅತಿಮುಖ್ಯ ಬರೆಹಗಾರರು. ಸ್ವಾತಂತ್ರ್ಯ ಚಳವಳಿ ಮತ್ತು ಈ ಚಳವಳಿಯ ಉತ್ಕಟ ಹಂತದಲ್ಲಿ ಅದಕ್ಕೆ ಬೆಸೆದುಕೊಂಡ ಮಾರ್ಕ್ಸಿಸಂ ಪ್ರೇರಿತವಾದ ಸಾಮಾಜಿಕ, ಆರ್ಥಿಕ ಸಿದ್ಧಾಂತಗಳಿಂದ ಆಕರ್ಷಿತರಾದ ಈ ಬರೆಹಗಾರರು ಸಾಮಾನ್ಯ ಮನುಷ್ಯನ ಸುಖದುಃಖಗಳನ್ನು ನಮ್ಮ ಸಾಮಾಜಿಕ ಸಂದರ್ಭದಲ್ಲಿಟ್ಟು ನೋಡಲು ಹಾಗೂ ಅರ್ಥೈಸಲು ಯತ್ನಿಸಿದರು; ಅಸಮಾನತೆಯ ವಿರುದ್ಧವಾಗಿ ಶೋಷಿತವರ್ಗದ ಮೂಕ ಅಳಲಿಗೆ ಪ್ರಥಮ ಬಾರಿಗೆ - ಬಾಯಿಕೊಡಲು ಯತ್ನಿಸಿದರು. ಇವರೆಲ್ಲರೂ ನಮ್ಮ ನವೋದಯ ಸಂದರ್ಭದಿಂದಲೇ ಮೂಡಿಬಂದವರಾದ್ದರಿಂದ ಮತ್ತು ಸ್ವಾತಂತ್ರ್ಯ ಚಳವಳಿಯೂ ಒಂದು ಆದರ್ಶದ, ಕನಸುಗಾರಿಕೆಯ ಫಲವಾಗಿಯೇ ಬೆಳೆದು ಬಂದದ್ದರಿಂದ, ಈ ಬರೆಹಗಾರರೂ ಅದರಿಂದ ಬಿಡಿಸಿಕೊಳ್ಳಲಾಗದೇನೇ, ಪ್ರಗತಿಶೀಲ ಧೋರಣೆಗಳಿಗೆ, ಆ ಮೂಲಕ ನವೋದಯದ ಆದರ್ಶಗಳಿಗೆ ಕೂಡಾ-ತಮ್ಮನ್ನು ಅರ್ಪಿಸಿಕೊಂಡರು; ವೈಚಾರಿಕತೆಯ ಅಂಶಗಳನ್ನು ಗೌಣವಾಗಿಸಿದರು. ಅಲ್ಲದೆ, ಈ ಬರೆಹಗಾರರು ಬರೆಹವನ್ನೇ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದರಿಂದ, ಮಾತ್ರವಲ್ಲದೆ, ಜನಪ್ರಿಯತೆಯ ಪ್ರವಾಹದೆದುರು ಈಜಲಾಗದ್ದರಿಂದ, ಕ್ರಮೇಣ ಅ.ನ.ಕೃ., ಕಟ್ಟೀಮನಿ ತಮ್ಮ 'ಪ್ರಗತಿಶೀಲತೆ'ಯನ್ನು ಭಾಷಣ, ಲೇಖನಗಳಿಗಷ್ಟೇ ಸೀಮಿತಗೊಳಿಸಿ, ಕತೆ-ಕಾದಂಬರಿಗಳನ್ನು ಜನಪ್ರಿಯತೆಯ, ಹಣಗಳಿಕೆಯ ಪ್ರವಾಹದಲ್ಲಿ ತೇಲಿಬಿಟ್ಟರೆ, ತ.ರಾ.ಸು., ಪುರಾಣ - ಇತಿಹಾಸಗಳ ಅದ್ಭುತರಮ್ಯ ಪ್ರಪಂಚದಲ್ಲಿ ತಮ್ಮನ್ನು ಕಳೆದುಕೊಂಡರು. ಈ ಎಲ್ಲ ಸಮಸ್ಯೆಗಳನ್ನು ಎದುರಿಸಿಯೂ, ತಮ್ಮ ಪ್ರಗತಿಶೀಲ ಧೋರಣೆಗಳಿಗೆ ತಕ್ಕ ಮಟ್ಟಿನ ವೈಚಾರಿಕ ಹಿನ್ನೆಲೆಯನ್ನು ರೂಪಿಸಿ, ಇದು ತನಕ ಕಾಪಾಡಿಕೊಂಡು ಬಂದವರು ನಿರಂಜನರು ಮಾತ್ರ ಎನ್ನಬಹುದು.

ಸಾಹಿತ್ಯ ಕ್ಷೇತ್ರಕ್ಕೆ ಕತೆಗಾರರಾಗಿ ಕಾಲಿರಿಸಿದ ನಿರಂಜನರು ೧೯೩೭ರಷ್ಟು ಹಿಂದೆಯೇ ಕತೆಗಳನ್ನು ಬರೆಯಲು ಪ್ರಾರಂಭಿಸಿದ್ದು, ಇದು ತನಕ ಪ್ರಕಟಿಸಿರುವ ೯ ಕಥಾ ಸಂಕಲನಗಳಲ್ಲದೆ, 'ಕಿಶೋರ', 'ಕತೆಗಾರ' 'ಕುಳುಕುಂದ ಶಿವರಾಯ' ಮೊದಲಾದ ಹೆಸರುಗಳಲ್ಲಿ ಅನೇಕ ಕಥೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.[1]

ತಮ್ಮ ಮೊದಲ ಸಂಕಲನವಾದ 'ಅಯ್ಯನ್ಯೆ' (ಅನಂತರದ ಹೆಸರು 'ಸಂಧಿಕಾಲ')ಯ 'ಪರಿಚಯ'ದಲ್ಲಿ ನಿರಂಜನರು ತಮ್ಮ ಕತೆಗಳ ಬಗ್ಗೆ ಹೀಗೆ ಬರೆದುಕೊಂಡಿದ್ದಾರೆ:

"**ರಾಜಕೀಯ ದೃಷ್ಟಿ** ಇರುವ, ಒಂದಕ್ಕೊಂದು ಸಂಬಂಧವಿರುವ ಆರು ಕತೆಗಳನ್ನಷ್ಟೇ ಇಲ್ಲಿ ಜೋಡಿಸಲಾಗಿದೆ. ಇದನ್ನು ಯುದ್ಧ ಸಾಹಿತ್ಯವೆಂದರೂ ಸರಿಯೇ. ಎಲ್ಲಾ **ಪ್ರಚಾರಾತ್ಮಕ ಕಥೆಗಳು** ಎಂದು ಯಾರಾದರೂ ಹೇಳಬಹುದು. ಒಂದೊಂದರಲ್ಲೂ ಉದ್ದೇಶವಿದೆ - ಪ್ರಚಾರವಿದೆ. ಅದು ಸತ್ಯವೆಂದು ನಾನು ಗಾಢವಾಗಿ ನಂಬುವುದರಿಂದ ಹೇಳುತ್ತ ಬರುತ್ತಿದ್ದೇನೆ. ವಿಶಾಲದೃಷ್ಟಿಯಿಂದ ನೋಡಿದಾಗ, ಲೋಕದಲ್ಲಿ ಪ್ರತಿಯೊಂದು ಕೃತಿ - ಕಲೆಯೂ ಒಂದು ರೀತಿ ಪ್ರಚಾರಾತ್ಮಕವಾದುದೇ ಎಂದು ಒಪ್ಪಿಕೊಳ್ಳಬೇಕಾಗುತ್ತದೆ." (ಅಯ್ಯೈನ್ಯೈ-'ಪರಿಚಯ' - 1945)

ಅದೇ ನಿರಂಜನರು ಈಚಿನ ವಿಶ್ವಕಥಾಕೋಶಕ್ಕೆ ಬರೆದ ಪ್ರಸ್ತಾವನೆಯಲ್ಲಿ ಸಣ್ಣಕತೆಗಳ ಬಗ್ಗೆ ಹೀಗೆ ಬರೆಯುತ್ತಾರೆ:

"ಸಣ್ಣಕತೆ ಎನ್ನುವುದು ಯಾವುದಕ್ಕೆ? ಅದು ಮೂರೇ ಪುಟಗಳದಿರಬಹುದು; ಮೂವತ್ತು ಪುಟಗಳದೂ ಇರಬಹುದು. ಮುಖ್ಯ ಗುಣ **ಸೂಕ್ಷ್ಮ ಸ್ವರೂಪ**. ಆದರೆ ಅದರಲ್ಲಿ ಬ್ರಹ್ಮಾಂಡವನ್ನು ಕಾಣುವುದೂ ಶಕ್ಯ. ಕಾಲದ ಒಂದು ತುಣುಕನ್ನು ಅದರಲ್ಲಿ ಸೆರೆಹಿಡಿದು, ಅನಂತಕ್ಕೆ ಅನ್ವಯಿಸಬಹುದು.... ಇದು ಹೆಚ್ಚು **ಕುಸುರಿನ ಕೆಲಸ**. ದಂತದ ಪುಟ್ಟ ತುಣುಕಿನಲ್ಲಿ ಚಿತ್ತಾರ; ಆ ಚಿತ್ತಾರ - **ವಾಸ್ತವತೆ**. ಆ ವಾಸ್ತವತೆಯ ಅಡಿಪಾಯದ ಮೇಲಿರುವುದು **ಕಲ್ಪನೆ**ಯ ಕಟ್ಟಡ." (ವಿಶ್ವಕಥಾಕೋಶ - ಪ್ರಸ್ತಾವನೆ 1980. ಮೇಲಿನ ಎರಡೂ ಹೇಳಿಕೆಗಳಲ್ಲಿನ ದಪ್ಪ ಅಕ್ಷರ ನನ್ನದು)

ಈ ಎರಡು ಹೇಳಿಕೆಗಳನ್ನು ಪರಿಶೀಲಿಸಬೇಕು. ಮೊದಲಲ್ಲಿದ್ದ 'ರಾಜಕೀಯ ದೃಷ್ಟಿ' ಹಾಗೂ 'ಪ್ರಚಾರಾತ್ಮಕ ಕಥೆಗಳು', ಇಲ್ಲಿ 'ಸೂಕ್ಷ್ಮ ಸ್ವರೂಪ', 'ಕುಸುರಿನ ಕೆಲಸ', 'ವಾಸ್ತವತೆ', '**ಕಲ್ಪನೆ**'ಯಾಗಿ ಬದಲುಗೊಂಡಿರುವುದು ಅರ್ಥಪೂರ್ಣವಾಗಿದೆ. ಮೊದಲ ಹೇಳಿಕೆಯಲ್ಲಿ ಧೋರಣೆಗೆ ಅನುಗುಣವಾದ ವಸ್ತುವಿಗೆ ಹೆಚ್ಚು ಒತ್ತು ಇದ್ದರೆ, ಎರಡನೇ ಹೇಳಿಕೆಯಲ್ಲಿ ರಚನಾ ವಿಧಾನಕ್ಕೆ, 'ಕವಿಕರ್ಮ'ಕ್ಕೆ ಹೆಚ್ಚು ಒತ್ತು ಇದೆ. ಇಲ್ಲಿ ಕಾಣಿಸುವ ಬೆಳವಣಿಗೆ ಹಾಗೂ ಮಾಗುವಿಕೆಯು ಅವರ ಕತೆಗಾರಿಕೆಯಲ್ಲಿನ ಬೆಳವಣಿಗೆ ಹಾಗೂ ಮಾಗುವಿಕೆಯೂ ಆಗಿದೆ.

ನಿರಂಜನರ ಆರಂಭದ ಸಂಕಲನಗಳಾದ 'ಅಯ್ಯೈನ್ಯೈ', 'ರಕ್ತಸರೋವರ' ಹಾಗೂ 'ಅನ್ನಪೂರ್ಣಾ'ದ ಹೆಚ್ಚಿನ ಕತೆಗಳ ವಸ್ತು ಕ್ರಾಂತಿ ಅಥವಾ ಕ್ರಾಂತಿಯ ಹಂಬಲವೇ ಆಗಿದೆ. [೧೯೩೭ರಿಂದ ೧೯೪೭ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ಅವರು 'ದಾಂಪತ್ಯದ ಸುಳ್ಳು ಚೌಕಟ್ಟು'ನಲ್ಲಿ[೨] (ಮುದ್ದಣ - ಮನೋರಮೆಯರ

ಪ್ರಭಾವ ?) ಯೌವನದ ಕನಸುಗಳ ವಸ್ತುವುಳ್ಳ ಅನೇಕ ಕತೆಗಳನ್ನು ಬರೆದಿದ್ದರೂ, ಅವುಗಳಲ್ಲಿ ಹೆಚ್ಚಿನವುಗಳನ್ನು ತಮ್ಮ ಸಂಕಲನಗಳಲ್ಲಿ ಆಗ ಸೇರಿಸಿರಲಿಲ್ಲ ಎಂಬುದು ಗಮನಾರ್ಹ.] ಸಮಾಜದ ಅಶಕ್ತವರ್ಗವನ್ನು ತುಳಿಯುತ್ತಿರುವ, ಶೋಷಿಸುತ್ತಿರುವ ಇನ್ನೊಂದು ವರ್ಗದ ವಿರುದ್ಧ ಮಸೆಯುವ ಸಿಟ್ಟು, ಕ್ರಾಂತಿಯ ರೂಪದಲ್ಲಿ ಇಲ್ಲಿನ ಕತೆಗಳಲ್ಲಿ ಹೊಮ್ಮುತ್ತದೆ. ಶೋಷಿತರು ಸ್ತ್ರೀ ಇರಬಹುದು, ಕೂಲಿಕಾರರಿರಬಹುದು, ಪತ್ರಿಕಾ ಕಛೇರಿಯಲ್ಲಿ ಕಾರ್ಖಾನೆಗಳಲ್ಲಿ ದುಡಿಯುತ್ತಿರುವವರಿರಬಹುದು; ಇವರೆಲ್ಲರ ಬಾಳನ್ನು ಅಸಹನೀಯವಾಗಿಸಿದ ಶೋಷಕರ ವಿರುದ್ಧ ಲೇಖಕರಿಗಿರುವ ಅದಮ್ಯ ಸಿಟ್ಟು, ತೀವ್ರ ತಿರಸ್ಕಾರ ಈ ಕತೆಗಳಲ್ಲಿ ವ್ಯಕ್ತವಾಗುತ್ತದೆ.

ನಿರಂಜನರೇ ಹೇಳಿಕೊಂಡಂತೆ, ಅವರು ಕಮ್ಯೂನಿಸಂನ ಮೋಹಕನಾದದಿಂದ ಆಕರ್ಷಿತರಾದವರು. ('ವಿಶ್ವಕಥಾಕೋಶ'ದ ಪ್ರಸ್ತಾವನೆ) 'ಅಯ್ಯನ್ನೆ' [3]ಯ 'ಬೆಳಕು ಹರಿಯಿತು', 'ನೀವಾ! ನೀವಾ!', 'ಇರುಳಛಾಯೆ','ಸಂಧಿಕಾಲ', 'ಅಂಧಕಾರದಲ್ಲಿ'- ಕತೆಗಳಲ್ಲಿ; 'ರಕ್ತಸರೋವರ'ದ 'ಮರಳಿ ಮನೆಗೆ', 'ಹೊಸತು', 'ಏಕಪ್ರವಾಹ', 'ಅವನ ಆಸೆ' ಕತೆಗಳಲ್ಲಿ; 'ಅನ್ನಪೂರ್ಣಾ'ದ 'ಟಿ. ಸಿ. ಕೊಂಡಯ್ಯ', 'ರೋಟರಿಯ ಕೆಳಗೆ'ಯಂತಹ ಕತೆಗಳಲ್ಲಿ ಈ 'ನಾದ'ವು ಕೆಲವೊಮ್ಮೆ ಕರ್ಕಶವಾಗಿ, ಕೆಲವೊಮ್ಮೆ ಸುಮಧುರವಾಗಿ ಕೇಳಿಸುತ್ತದೆ. ಇವುಗಳೊಂದಿಗೇ 'ಇಬ್ಬರು ಗುಂಡರು', 'ಸೈತಾನನ ಶ್ಮಶಾನಯಾತ್ರೆ', 'ಮಣ್ಣಿನ ಮಗ ಗನ್ನು ತಂದ' ಮೊದಲಾದ ದೇಶಪ್ರೇಮದ ಕತೆಗಳನ್ನೂ ನೋಡಬಹುದು. ಈ ಕತೆಗಳೆಲ್ಲ ವಸ್ತುವಿನ ದೃಷ್ಟಿಯಿಂದ ಮಹತ್ವದವುಗಳೇ ಆಗಿವೆ. ಮೊತ್ತಮೊದಲಿಗೆ, ಕಥಾಕ್ಷೇತ್ರಕ್ಕೆ ವಿಶೇಷವಾಗಿ ಪ್ರವೇಶ ಪಡೆಯದಿದ್ದ ಕಾರ್ಮಿಕ, ವೇಶ್ಯೆ, ಪತ್ರಿಕಾ ಕೆಲಸಗಾರ, ಸೈನಿಕ ಮೊದಲಾದ ಪ್ರತಿಷ್ಠಿತ ವರ್ಗದಿಂದ ಅಲಕ್ಷಿಸಲ್ಪಟ್ಟ - ವ್ಯಕ್ತಿಗಳು ಇಲ್ಲಿ ಕಾಣಿಸಿಕೊಂಡಿದ್ದಾರೆ; ತಮಗೂ ಇರುವ 'ಬಾಳುವ ಹಕ್ಕ'ನ್ನು ಸ್ಥಾಪಿಸಲು ಯತ್ನಿಸಿದ್ದಾರೆ. ಆದರೆ, ನಿರಂಜನರೇ ಹೇಳಿರುವಂತೆ, ಹೆಚ್ಚಿನ ಕತೆಗಳು 'ಉದ್ದೇಶ ಪೂರ್ವಕ'ವಾಗಿ ಬರೆದವುಗಳಾದ್ದರಿಂದ (ಅವರೇ ಒಪ್ಪಿಕೊಂಡಂತೆ ಕೆಲವು ಹಣಕ್ಕಾಗಿಯೂ ಬರೆದವುಗಳಾದ್ದರಿಂದ) ಕತೆಯ ಕಲಾತ್ಮಕತೆ ಮಾಯವಾಗಿ ಪ್ರಚಾರಘೋರಣೆಯೇ ವಿಜೃಂಭಿಸುತ್ತದೆ. ಈ ಕತೆಗಳ ನಾಯಕರು ಬೇರೆ ಬೇರೆಯೇ ಆಗಿದ್ದರೂ, ಒಂದೇ ರೀತಿಯಲ್ಲಿ ಯೋಚಿಸುತ್ತಾರೆ; ತಮ್ಮ ಒಡೆಯರ ವಿರುದ್ಧ ಹೋರಾಡುವ ಕ್ರಿಯೆಯಲ್ಲಿ ಏಕರೀತಿಯಲ್ಲಿ ತೊಡಗಿಕೊಳ್ಳುತ್ತಾರೆ. ಕೆಲವೊಮ್ಮೆ ಕತೆಯ ಶರೀರಕ್ಕೆ ಅಗತ್ಯವಿರದಿದ್ದರೂ, ಕ್ರಾಂತಿಯ ಘೋಷಣೆಯು - ನಾಯಕನ ಅನಿರೀಕ್ಷಿತವೆನ್ನಿಸುವ ನಿರ್ಧಾರದ ಮೂಲಕವಾಗಿ ಕೇಳಿಬರುತ್ತದೆ. ಉದಾಹರಣೆಗೆ 'ಏಕಪ್ರವಾಹ' ಕತೆಯ ಕೊನೆಯಲ್ಲಿ ನಾಯಕ ಪುಟ್ಟಣ್ಣಯ್ಯ ಕಾರ್ಮಿಕರ ಮೆರವಣಿಗೆಯಲ್ಲಿ ಸೇರಿಕೊಳ್ಳುವುದು, 'ಅವನ ಆಸೆ'ಯಲ್ಲಿನ ಶೇಷಗಿರಿಯ - ಅಕಾರಣವೆನ್ನಿಸುವ

ವಿಲಕ್ಷಣ ಬಯಕೆಗಳು ಅಥವಾ 'ಅಯ್ಯನ್ಯೆ' ಸಂಕಲನದ ಹೆಚ್ಚಿನೆಲ್ಲ ಕತೆಗಳನ್ನು ನೋಡಬಹುದು. ಕತೆಗಳು ಕ್ರಾಂತಿಯ ಘೋಷಣೆಯಲ್ಲಿ ಇಲ್ಲವೇ ಆದರ್ಶದ ಹಗಲು ಗನಸಿನಲ್ಲಿ ಮುಕ್ತಾಯವಾಗುತ್ತವೆ. ('ಬದುಕುವ ಬಯಕೆ', 'ಟಿ.ಸಿ. ಕೊಂಡಯ್ಯ', 'ಕೆಸರುಕೊಚ್ಚೆಯ ಕಮಲ' ಹಾಗೂ 'ಅಯ್ಯನ್ಯೆ'ಯ ಕತೆಗಳನ್ನು ಈ ನಿಟ್ಟಿನಲ್ಲೂ ನೋಡಬಹುದು.)

ಈ ಕತೆಗಳಲ್ಲೆಲ್ಲ 'ಸೂಕ್ಷ್ಮಕಲೆಗಾರಿಕೆ'ಯ ಬದಲಾಗಿ ಕ್ರಾಂತಿಯ ಭ್ರಮಾತ್ಮಕ ಉತ್ಸಾಹ ಅಥವಾ ಕನವರಿಕೆಗೆ; 'ವಾಸ್ತವ'ಕ್ಕೆ ಬದಲಾಗಿ ಕಲ್ಪನೆಯಲ್ಲಿ ಮೂಡಿಕೊಳ್ಳುವ ಕನಸುಗಳಿಗೇ ಹೆಚ್ಚು ಒತ್ತು. ಅಂದರೆ, ಕತೆಯ ವಸ್ತು ಎಷ್ಟು ಮಹತ್ವದ್ದಿದ್ದರೂ ಅದು ಕತೆಯ ಶರೀರದಲ್ಲೇ ಸಂಭವನೀಯ ಎನಿಸುವುದಿಲ್ಲ. ಎಲ್ಲ ನಾಯಕರ ಹಿಂದೆ ನಿರಂಜನರೇ ನಿಂತು 'ಪ್ರಾಂಪ್ಟ್' ಮಾಡುತ್ತಿರುವಂತೆ ಅನಿಸುವು ದರಿಂದ ಕತೆ ಉದ್ರೇಕಕಾರಿ ಏಕಮುಖ ಬರವಣಿಗೆಯಾಗಿ ರೂಪುತಳೆದಿದೆ. ಈ ಉದ್ರೇಕದಿಂದಾಗಿಯೇ ವಸ್ತುವಿನ ಉಳಿದ ಸಂಕೀರ್ಣ ಮುಖಗಳು ನಾಪತ್ತೆಯಾಗಿವೆ. ಕೆಲವು ಸಲ ಕತೆಯು ಕಾದಂಬರಿಯ ಟಿಪ್ಪಣಿಯಾಗಿಯೂ ಮಾರ್ಪಟ್ಟಂತಿದೆ. (ಉದಾ: 'ಆಜೀವನ' ಕತೆಯೇ ಮುಂದೆ 'ಬನಶಂಕರಿ' ಎನ್ನುವ ಕಾದಂಬರಿಯಾಗಿ ರೂಪು ಗೊಂಡದ್ದನ್ನು ನೆನಪಿಸಿಕೊಳ್ಳಬಹುದು.)

ಈ ಕತೆಗಳ ಪೈಕಿ 'ಬೆಳಕು ಹರಿಯಿತು', 'ಎಣ್ಣೆ, ಚಿಮಿಣಿಎಣ್ಣೆ', 'ಟಿ.ಸಿ. ಕೊಂಡಯ್ಯ'ದಂತಹ ಕತೆಗಳು ಕ್ರಾಂತಿಯ ಘೋಷಣೆಯನ್ನೇ ನೆಚ್ಚಿಕೊಂಡಿದ್ದರೂ, ಇಂದಿಗೂ ನನಗೆ ಆಕರ್ಷಕ ಕತೆಗಳಾಗಿ ಕಂಡಿರುವುದು, ಸಮಕಾಲೀನವಾಗುತ್ತಾ ಮುಂದುವರಿಯುತ್ತಿರುವ ಅದರ ವಸ್ತು ಮತ್ತು ಬರವಣಿಗೆಯಲ್ಲಿ ನಿರಂಜನರು ತೋರಿಸಿರುವ ಕಲೆಗಾರಿಕೆಗಾಗಿ. 'ಬೆಳಕು ಹರಿಯಿತು' 'ಜೋಶುವಾ ಕುನಿಜ್' ಅವರ ಕೃತಿಯಲ್ಲಿನ ಘಟನೆಯೊಂದರ ಆಧಾರದಲ್ಲಿ ಬರೆದ ಕತೆ. ಮುಗ್ಧ ಮುಸ್ಲಿಂ ಹುಡುಗಿ ಜೋಸಿಯತ್, ತನ್ನ ಘೋಷಾವನ್ನು ಕಳಚಿಕೊಂಡು ಕ್ರಾಂತಿಯ ಹಾದಿಯಲ್ಲಿ ಸಾಗುವ ಕತೆಯು, ಮಹಿಳೆ ತನ್ನ ಮುಗ್ಧತೆ ಹಾಗೂ ಸಮಾಜ ವಿಧಿಸಿದ ಬಂಧನ ಗಳನ್ನು ಕಳಚಿಕೊಂಡು ವಿಮೋಚನೆಯತ್ತ ಹೆಜ್ಜೆ ಹಾಕುವ ಕತೆಯೂ ಆಗುತ್ತದೆ. ೯೦ಳಚರಷ್ಟು ಹಿಂದೆಯೇ ಬರೆದ ಈ ಕತೆ ಇಂದೂ 'ಸಮಕಾಲೀನ'ವೇ ಆಗಿರುವುದು; ಇಂದೂ ಮಹಿಳೆ ಈ ರೀತಿಯ ಹೋರಾಟದಲ್ಲಿ ತೊಡಗುವ ಆವಶ್ಯಕತೆ ಇರುವುದು, ಈ ಕತೆ - ತನ್ನೆಲ್ಲ ದೌರ್ಬಲ್ಯಗಳ ನಡುವೆಯೂ, ಇಂದಿಗೂ ಅರ್ಥಪೂರ್ಣವಾಗಿ ಕಾಣಿಸಲು ಕಾರಣವಾಗಿದೆ. ('ಸಾರಾ' ಪ್ರಕರಣ, ಶಾಬಾನು ಪ್ರಕರಣ, ಕುದುರೆ ಮೋತಿ ಪ್ರಕರಣ - ಇವೆಲ್ಲವೂ ಇಲ್ಲಿ ಅಯಾಚಿತವಾಗಿ ನಮಗೆ ನೆನಪಾಗುತ್ತವೆ.)

ಅದೇ ರೀತಿ, ಕೊಂಚ ಉದ್ರೇಕಕಾರಿ ಬರವಣಿಗೆಯೆಂದು ಅನಿಸಿದರೂ, 'ಎಣ್ಣೆ, ಚಿಮಿಣಿ ಎಣ್ಣೆ' ಕತೆ ಕೂಡಾ ಬಗೆಹರಿಯದ ಸಾಮಾಜಿಕ ಸಮಸ್ಯೆಯೊಂದನ್ನು-ಅದನ್ನಾವರಿಸಿದ ವಿಷಮಯ ಪರಿಸರದ ಸಮ್ಮುಖದಲ್ಲಿ - ಚುರುಕಾಗಿ, ತೀಕ್ಷ್ಣವಾಗಿ ಕಟ್ಟಿಕೊಡುವ ಕತೆಯಾಗಿದೆ. ಇಲ್ಲಿ ಕ್ರಾಂತಿಯ ಘೋಷಣೆಗಿಂತ, ಅದು ಹುಟ್ಟಿಕೊಳ್ಳಲಿರುವ ವೇದಿಕೆಯ ಸೂಕ್ಷ್ಮ ಗುರುತಿಸುವಿಕೆ ಕಾಣಿಸುತ್ತದೆ.

ಕ್ರಾಂತಿಯ ತೀವ್ರ ಹಂಬಲದಲ್ಲಿದ್ದ ನಿರಂಜನರಿಗೆ ತನ್ನ ಈ ಕತೆಗಳು ಸೃಷ್ಟಿಗೊಂಡ ಪರಿಸರ ಕೂಡಾ ಅಷ್ಟೊಂದು ಸೂಕ್ತವಾದದ್ದಲ್ಲ ಎನ್ನುವ ಅಳುಕು ಇದ್ದಂತಿದೆ. ಈ ಅರಿವಿನ ಹಿನ್ನೆಲೆಯಲ್ಲೇ ಅವರು, ತನ್ನ ಕತೆಗಳ ಪರಿಸರವನ್ನು ಕೊಂಚ ಅನುಮಾನದ ಸ್ವರದಲ್ಲೇ ಸಮರ್ಥಿಸಿಕೊಳ್ಳುತ್ತಾರೆ:

'ನಮ್ಮ ಸುತ್ತಲಿನ ತಿಮ್ಮ, ಚೋಮ, ಬೋರ ಈ ಕತೆಗಳಲ್ಲಿ ಇಲ್ಲ. ಆದರೆ ನಿಖಿಲ, ರತನ, ಲಹರಿ, ನಮ್ಮ ದೇಶದವರೇ....' (ಅಯ್ಯಯ್ಯೆ, ಪುಟ ii)

ಆದರೆ ನಿರಂಜನರಿಗೂ ಗೊತ್ತಿರಬಹುದು: ತಿಮ್ಮ, ಚೋಮ, ಬೋರರು ಅರ್ಥವಾಗದೆ, ನಮ್ಮ ದೇಶದವರೇ ಆದರೂ ನಿಖಿಲ, ರತನ, ಲಹರಿ ಅರ್ಥವಾಗುವಂತಿಲ್ಲ ಎಂಬುದು. ಆದ್ದರಿಂದಲೇ ಮುಂದಿನ ಅವರ ಕತೆಗಳು, ಇಂಥವುಗಳನ್ನೆಲ್ಲ ತೊಡೆದು ಹಾಕಿ ಪ್ರಬುದ್ಧತೆಯತ್ತ ಸಾಗುವ ಮೆಟ್ಟಿಲುಗಳಾಗುತ್ತವೆ.

೨

ಕೇವಲ ಘೋಷಣೆಗಳಿಂದ 'ಕತೆ' ಆಗುವುದಿಲ್ಲ[4] ಎಂದು ಸ್ಪಷ್ಟವಾದ್ದರಿಂದ ಮತ್ತು ನಿರಂಜನರು ಮೂಲತಃ ಕಲೆಗಾರರಾದ್ದರಿಂದ, ಅವರು ರಾಜಕೀಯ ದೃಷ್ಟಿ ಹಾಗೂ ಪ್ರಚಾರಾತ್ಮಕತೆಗಿಂತ, ವಾಸ್ತವಿಕ, ಸಾಮಾಜಿಕ ಸಮಸ್ಯೆಗಳತ್ತ, ಸೂಕ್ಷ್ಮ ಕಲೆಗಾರಿಕೆಯತ್ತ; ಮನುಷ್ಯನು ಸಮಾಜದ ಕೇವಲ ಅಂಗ ಎನ್ನುವುದಕ್ಕಿಂತ, ಸಮಾಜದ ಒಂದು ಅಂಗವೇ ಆದ ಮನುಷ್ಯನ ಆಂತರಿಕ ಸುಖದುಃಖಗಳತ್ತಲೂ ಸರಿಯುತ್ತಾರೆ. ಬದ್ಧತೆಯು ಇಲ್ಲಿ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡು ಮನುಷ್ಯನ ಒಟ್ಟು ಬದುಕನ್ನು ಆವರಿಸಿಕೊಳ್ಳಲು ಹವಣಿಸುತ್ತದೆ.[5] ಒಂದು ದೃಷ್ಟಿಯಿಂದ, ನಿರುದ್ದಿಶ್ಯ ಎನ್ನಬಹುದಾದ 'ತಪ್ಪು ಎಣಿಕೆ', 'ಸ್ವಸ್ತಿಪಾನ'ದಂಥ ಕತೆಗಳೂ ಇಲ್ಲಿವೆ. 'ನಂ. 208 ಮತ್ತು ನೀಲಿ ಬುಷ್‌ಕೋಟು', 'ನಾಳೆಯ ಹಂಬಲ', 'ಯಾವ ಜನ್ಮದ ಶಾಪ', 'ಡಿಲಕ್ಸ್', 'ಹಮಾಲ ಇಮಾಂ ಸಾಬಿ' ಕತೆಗಳು, ಕಾಲ್ಪನಿಕ ಆದರ್ಶಗಳನ್ನು ಕಳೆದುಕೊಂಡ, ಉದ್ರೇಕಕಾರಿಯಲ್ಲದ ಕೆಳಸ್ವರದಲ್ಲಿ ಮನುಷ್ಯನ ಆಂತರಿಕ ಸುಖದುಃಖಗಳ ವಿವಿಧ ಮುಖಗಳನ್ನು ಗುರುತಿಸಲು ಯತ್ನಿಸುತ್ತವೆ.

ಇವುಗಳ ಪೈಕಿ 'ಯಾವ ಜನ್ಮದ ಶಾಪ', 'ಹಮಾಲ ಇಮಾಂ ಸಾಬಿ', 'ಡಿಲಕ್ಸ್' ಕತೆಗಳು ಹೆಚ್ಚು ಗಮನಾರ್ಹ ಕತೆಗಳು ಎಂದು ನಾನು ಭಾವಿಸುತ್ತೇನೆ. 'ಯಾವ ಜನ್ಮದ ಶಾಪ' ತಲೆಮಾರುಗಳ ಅಂತರವನ್ನು - ಈ ಅಂತರದಿಂದಾಗಿ ಮನುಷ್ಯನಿಗೆ ಒದಗಿ ಬರುವ ನೋವನ್ನು ಸೂಕ್ಷ್ಮವಾಗಿ ಗುರುತಿಸುವ ಕತೆ. ಸಮಸ್ಯೆಗಳನ್ನು ಗುರುತಿಸಿ, ಅರ್ಥೈಸದಿರುವುದರ ಫಲವಾಗಿ ತಂದೆ ಹಾಗೂ ಮಗ ಇಬ್ಬರೂ ಭಿನ್ನ ಧ್ರುವಗಳಾಗಿ ಉಳಿಯುತ್ತಾರೆ. ಕತೆಯ ಒಂದು ಹಂತದಲ್ಲಿ ತಂಗಿಯನ್ನು ನೌಕರಿಗೆ ಸೇರಿಸಲು ಇಚ್ಛಿಸಿದ - ವಿದೇಶಕ್ಕೆ ಹೊರಟ ಮಗ - ಪ್ರಸಾದ ತಾಯಿಯಲ್ಲಿ ಹೇಳುತ್ತಾನೆ:

"ಇದು ಹೊಗೆ ತುಂಬಿದ ಮನೆ. ಕಿಟಕಿಗಳು ಮುಚ್ಚೇ ಇರುತ್ವೆ. ಕಿಟಕಿಗಳನ್ನು ಸ್ವಲ್ಪ ತೆರೀಬೇಕು. ಅಲ್ವಾ ಅಮ್ಮಾ?"

ತಾಯಿ ಹೇಳುತ್ತಾಳೆ - "ಚಳಿಗಾಲ ಅಲ್ವೇನೋ?" (ಯಾವ ಜನ್ಮದ ಶಾಪ- ಪುಟ 175)

ಕತೆಯ ಕೊನೆಯ ಹಂತದಲ್ಲಿ ಮಗನಿಗಿಂತ ಭಿನ್ನ ಅಭಿಲಾಷೆಗಳಿರುವ ತಂದೆ ವಿಶ್ವನಾಥಯ್ಯ ಹೇಳುತ್ತಾರೆ:

"ಗಿರಿಜಾ,....ಸಮಾಜ ಗಿಮಾಜ ಅಂತ ಹೋಗ್ಬೇಡ. ಬಾಗಿಲುಹಾಕ್ಕೋ." (ಅದೇ, ಪುಟ 181)

ಈ ಮಾತುಗಳಲ್ಲಿ ವ್ಯಕ್ತವಾಗುವ ಬಿಕ್ಕಟ್ಟೇ ಕತೆಯ ಒಕ್ಕಟ್ಟೂ ಆಗಿದೆ.

ಇಲ್ಲಿಯ ತನಕ ಹೊಸ ತಲೆಮಾರಿನ ಆಕಾಂಕ್ಷೆಗಳತ್ತಲೇ ಕೊಂಚ ವಾಲಿದಂತೆ ಕಾಣುವ ಕತೆ, ಕೊನೆಯಲ್ಲಿ 'ಯಾವ ಜನ್ಮದ ಶಾಪ ನಮ್ಮ ಈ ದುಃಸ್ಥಿತಿ?' ಎಂದು ಕೊರಗುವ ನಿವೃತ್ತ ಜೀವನದ ವಿಶ್ವನಾಥಯ್ಯನತ್ತ ವಾಲುವುದು ವಿಚಿತ್ರವಾಗಿದೆ; ಅನಿರೀಕ್ಷಿತವೂ ಆಗಿದೆ. ಇಲ್ಲಿ ಕತೆಯ ಕೇಂದ್ರ ಕೊಂಚ ಚಲಿಸಿದಂತೆ ಕಾಣುವುದಲ್ಲದೆ, ತನ್ನ ಬಿಕ್ಕಟ್ಟನ್ನು ಹಿಂದಿನ ಜನ್ಮದ ಶಾಪವೆಂದು ಪರಿಗಣಿಸುವತ್ತ ಬಾಗುವುದು ಕತೆಯಲ್ಲೇ ನಿಜವಾಗುವುದಿಲ್ಲ.

'ಹಮಾಲ ಇಮಾಂ ಸಾಬಿ' ಕತೆಯೂ ಅಷ್ಟೇ - ರೈಲ್ವೇ ಸ್ಟೇಶನ್‌ನಲ್ಲಿ ಹಮಾಲನಾಗಿ ಬದುಕನ್ನು ಕಳೆದ ಇಮಾಂ ಸಾಬಿಯ ಕೊನೆಯ ದಿನಗಳ ಚಿತ್ರ ಇಲ್ಲಿದೆ. ಸ್ಟೇಶನ್‌ನಲ್ಲಿಯಾಂತ್ರಿಕವಾಗಿ ರೈಲುಗಳು ನಿರಂತರವಾಗಿ ಬರುತ್ತಾ ಹೋಗುತ್ತಾ ಇದ್ದಂತೆ, ಇಮಾಂ ಸಾಬಿಯ ಬದುಕಲ್ಲೂ ಅನೇಕ ಘಟನೆಗಳು ಯಾಂತ್ರಿಕವಾಗಿ ಘಟಿಸುತ್ತಾ

ಇರುತ್ತವೆ. ಕೊನೆಯಲ್ಲಿ ಅವನ ಮಗ ಹಮಾಲ ಕರೀಮನಿಗೊಬ್ಬ ಗಂಡು ಮಗು (ಅವನೂ ಹಮಾಲನಾಗಲಿರುವವ!) ಹುಟ್ಟುವಲ್ಲಿ - ಅನೇಕ ಆತಂಕದ ಕ್ಷಣಗಳನ್ನು ದಾಟಿ, ಕತೆ ಕೊನೆಯಾಗುತ್ತದೆ. ಇಲ್ಲೂ ಕತೆ ಕೊನೆಯಲ್ಲಿ ಅನಗತ್ಯ ತಿರುವನ್ನು ಪಡೆಯುತ್ತದೆ. ಮೊಮ್ಮಗು ಹುಟ್ಟಿದ ಸಂತೋಷದ ಸಕ್ಕರೆ ಬಾಯಿಗೆ ಬೀಳುವ ಮುನ್ನವೇ ಅವನ ಬದುಕು ಅಂತ್ಯವಾಗುತ್ತದೆ. ಆ ಚಿತ್ರ ಹೀಗಿದೆ:

"ಕೆಂಪು ರುಮಾಲು, ನೀಲಿ ಅಂಗಿ, ಕೊಳಕು ಧೋತರ ಎಲ್ಲವೂ ಇದ್ದವು. ಹರಿದ ಜೇಬಿನಲ್ಲಿ ನಾಣ್ಯಗಳಿದ್ದವು - ದಿನದ ಸಂಪಾದನೆಯಿತ್ತು.

"ಇಮಾಂ ಸಾಬಿ ಮಾತ್ರ ಇರಲಿಲ್ಲ." (ಯಾ. ಜ. ಶಾಪ. ಪುಟ 65) (ಇದರೊಂದಿಗೆ ಕಾರಂತರ 'ಚೋಮನ ದುಡಿ'ಯ ಕೊನೆಯನ್ನು ನೆನಪಿಸಿಕೊಳ್ಳಿ: "ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ ಎಲ್ಲವೂ ಇದ್ದವು. ಆದರೆ ಚೋಮ ಮಾತ್ರ ಇರಲಿಲ್ಲ.")

ಇಲ್ಲಿ ಇಮಾಂ ಸಾಬಿ ಸಾಯದಿದ್ದರೂ ಕತೆಯ ಒಟ್ಟು ಪರಿಣಾಮಕ್ಕೆ ವಿಶೇಷ ಧಕ್ಕೆ ಒದಗುತ್ತಿರಲಿಲ್ಲ. 'ಡಿಲಕ್ಸ್' ಕತೆ ಕೂಡಾ ಇದೇ ರೀತಿ ಅನಿರೀಕ್ಷಿತ ತಿರುವಿನ ಮುಕ್ತಾಯ ಪಡೆಯುತ್ತದೆ.

ಈ ಬಗೆಯ ಅನಿರೀಕ್ಷಿತ ಅಂತ್ಯ ಯಾಕೆ? ಓದುಗರಿಂದ ಮರುಕದ ಹೊನಲು ಹರಿಯುವುದನ್ನು ಅಥವಾ ಓದುಗರಿಗೆ ಶಾಕ್ ಕೊಡುವುದನ್ನು ಲೇಖಕರು ಬಯಸುತ್ತಾರೆಯೇ? ಅಥವಾ ಕತೆಯು ಪಡೆದುಕೊಂಡ ಬೆಳವಣಿಗೆಯನ್ನು ನಿಯಂತ್ರಿಸಲಾಗದೆ, ಇಂತಹ ಸುಲಭ ತಂತ್ರಗಳಿಗೆ ಮೊರೆ ಹೋಗಿದ್ದಾರೆಯೇ? ಯೋಚಿಸಬೇಕಾದ ಅಂಶ ಇದು. ಈ ಕತೆಗಳಲ್ಲಿ ಅನಗತ್ಯವಾಗಿ ಕಾಣಿಸುವ ಅಧಿಕ ವಿವರಗಳು (ಮುಖ್ಯವಾಗಿ 'ಇಮಾಂ ಸಾಬಿ' ಕತೆಯಲ್ಲಿ) - ಅವುಗಳು ಕಾದಂಬರಿಯತ್ತಲೇ ತುಯ್ಯುತ್ತಿರುವುದರ ಸೂಚನೆಯೇ? ಅಥವಾ ನಿರಂಜನರು ಪತ್ರಿಕೋದ್ಯಮಿಯಾಗಿ ಇದ್ದುದರ ಪರಿಣಾಮವೆ?

ಮುಖ್ಯವಾಗಿ ತಮ್ಮ ನಂಬಿಕೆ, ವಿಚಾರಗಳಿಗೆ ಸೂಕ್ತ ಕಲಾಭಿವ್ಯಕ್ತಿ ನೀಡುವ ನಿಟ್ಟಿನಲ್ಲಿ ವಸ್ತು, ವಿಚಾರಗಳು ವ್ಯಂಗ್ಯ ವಿಡಂಬನೆ, ನಾಟಕೀಯತೆಗಳ ಮೂಲಕ ಸಾಂಕೇತಿಕತೆಯತ್ತ ತುಯ್ಯುವುದನ್ನು ಈ ಕತೆಗಳಲ್ಲಿ ನಾವು ಗಮನಿಸಬಹುದು.

೩

ಈ ಅಂಶಗಳ ಗುಣಾತ್ಮಕ ಬೆಳವಣಿಗೆಯನ್ನು ಮತ್ತು ಆ ಮೂಲಕ ಮೂಡುವ ಪ್ರಬುದ್ಧ ಕತೆಗಾರಿಕೆಯ ಲಕ್ಷಣಗಳನ್ನು 'ಕೊನೆಯ ಗಿರಾಕಿ', 'ಧ್ವನಿ', 'ಒಂಟಿ ನಕ್ಷತ್ರ ನಕ್ಕಿತು', 'ಅನ್ನದೇವರ ರೈಲು ಪ್ರಯಾಣ', 'ಅನ್ನಪೂರ್ಣಾ',

'ನಾಸ್ತಿಕ ಕೊಟ್ಟ ದೇವರು'[6] - ಮೊದಲಾದ ಕತೆಗಳಲ್ಲಿ ನೋಡಬಹುದು. ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು 'ವಸ್ತು'ವಿನ ವಾಸ್ತವ ಸ್ವರೂಪ ಸಾಲದಾಗುವ ಅರಿವಿನಲ್ಲಿ ನಿರಂಜನರು ಅವಕ್ಕೆ ರೂಪಕ ಕತೆಗಳ ಸ್ವರೂಪ ಕೊಡಲು ಯತ್ನಿಸಿದ್ದಾರೆ. ಈ ರೀತಿಯ ಪ್ರಥಮ ಯತ್ನ 'ಅನ್ನಪೂರ್ಣಾ' ಕತೆಯಲ್ಲೇ ಕಾಣಿಸಿಕೊಂಡಿದ್ದು, ಅದು 'ಅನ್ನದೇವರ ರೈಲು ಪ್ರಯಾಣ'ದೊಂದಿಗೆ ಮುನ್ನಡೆದು, 'ಧ್ವನಿ'ಯಲ್ಲಿ ತಕ್ಕಮಟ್ಟಿನ ಪ್ರಬುದ್ಧ ರೂಪವನ್ನು ಪಡೆಯುತ್ತದೆ. 'ಧ್ವನಿ' ಕತೆಯಲ್ಲಿ ಮೂಕನಿಂದ ಹಠಾತ್ತನೆ ಹೊರಹೊಮ್ಮುವ ಧ್ವನಿ, ಶೋಷಣೆಯ, ಸರ್ವಾಧಿಕಾರದ ವಿರುದ್ಧ, ಸಮಾನತೆಯ ಪರವಾಗಿ ಎತ್ತಿದ ಶೋಷಿತರ ಒಟ್ಟು ಧ್ವನಿಯಾಗಿದೆ. ಕಳ್ಳೇಕಾಯಮ್ಮ, ಮೂಕ ಮಗು, ದಬ್ಬಾಳಿಕೆಯ ಉತ್ತುಂಗ ಹಂತದಲ್ಲಿ ಈ ಮೂಕನಿಗೆ ಮಾತು ಬರುವುದು, ಸಂದರ್ಭ ಮರೆಯಾದೊಡನೆ ಮಗು ಮೊದಲಿನಂತೆ ಮೂಕನಾಗುವುದು........ ಮೊದಲಾದವುಗಳೆಲ್ಲ ಒಟ್ಟಾಗಿ, ಬದಲಾಗುತ್ತಿರುವ ನಮ್ಮ ಸ್ವತಂತ್ರ ಭಾರತದ ಸ್ಥಿತಿಯನ್ನು ಸಂಕೇತಿಸುವುದಲ್ಲದೆ, ಅನ್ಯಾಯದ ವಿರುದ್ಧ ಸಿಡಿದೇಳುವ ಮಾನವನ ಅದಮ್ಯ ಚೇತನವನ್ನು ಸೂಕ್ಷ್ಮವಾಗಿ ಗುರುತಿಸಿ, ಕಲೆಯಾಗಿ ದಾಖಲಿಸುತ್ತದೆ. ಅರ್ಥಪೂರ್ಣ ಪ್ರತಿಮೆಗಳ ಕುಶಲ ಸಂಯೋಜನೆಯ ಮೂಲಕ ಕತೆ ಸಾಂಕೇತಿಕ ರೂಪವನ್ನು ಪಡೆದುಕೊಂಡು, ಅರ್ಥ ಪರಂಪರೆಯನ್ನೇ ಬೆಳೆಸುವುದು - ವಸ್ತು ಮತ್ತು ರಚನಾ ವಿಧಾನದಲ್ಲಿ ಕತೆಗಾರರು ಸಾಧಿಸಿದ ಖಚಿತ, ಅರ್ಥಪೂರ್ಣ ಬೆಳವಣಿಗೆಯಾಗಿದೆ.

ವಸ್ತು, ತಂತ್ರ, ಧ್ವನಿಪೂರ್ಣ ಬರೆವಣಿಗೆ, ಮೊದಲಾದ ಎಲ್ಲ ರೀತಿಗಳಿಂದ 'ಧ್ವನಿ' ಕತೆಗಿಂತ ಹೆಚ್ಚು ಅಚ್ಚುಕಟ್ಟಾದ 'ಕೊನೆಯ ಗಿರಾಕಿ' ನಾನು ಮೆಚ್ಚುವ ಈ ಬಗೆಯ ಇನ್ನೊಂದು ಕತೆ. ಸರ್ಕಲ್ಲಿನ ನಡುವೆ ಬಿದ್ದಿರುವ ಕಾಣಿ ಮತ್ತು ಆಕೆಯನ್ನು ನೋಡಿಯೂ ನೋಡದಂತೆ ಮುಂದೆ ಸಾಗುವ ಜನರ ವಿವರದೊಂದಿಗೆ ಆರಂಭವಾಗುವ ಈ ಕತೆ, ಕಾಣಿಯ ದೇಹದ ಸಾಹಚರ್ಯವನ್ನು ಪಡೆಯುವ ಕೊನೆಯ ಗಿರಾಕಿಯಾದ ಗಿಡುಗನ ಆಗಮನದ ಅರ್ಥಪೂರ್ಣವಾದ, ತಲ್ಲಣಗೊಳಿಸುವ ಚಿತ್ರದೊಂದಿಗೆ ಮುಗಿಯುತ್ತದೆ. ಈ ನಡುವೆ ಕಾಣಿಯನ್ನು ಭೋಗಿಸಲೆಂದು ಬಂದ ವ್ಯಕ್ತಿಗಳು, ಗಿಡುಗನಿಗಿಂತ ಹೆಚ್ಚು ಕ್ರೂರವಾಗಿ ಕಾಣಿಸುತ್ತಾರೆ. ಗಿಡುಗ ಕಾಣಿಯ 'ಶವ'ವನ್ನು ಕುಕ್ಕಿದರೆ, ಈ ಜನರು ಆಕೆ ಜೀವಿಸಿರುವಾಗಲೇ ಕುಕ್ಕಿ, ಕುಕ್ಕಿ, ಆಕೆಯ ಸಾವಿಗೆ ಕಾರಣರಾಗುತ್ತಾರೆ. ಮುಗ್ಧ ಕಾಣಿಗೆ ಪ್ರತಿಭಟನೆಯ ಸ್ವರವೇ ಇಲ್ಲ; ಯಾಕೆಂದರೆ ಆಕೆ ಮೂಕಿ. ಕಾಣಿಯ ಬದುಕಿಗೆ ಆಸರೆಯಿಲ್ಲ; ಆಕೆ ಬೀದಿ ಸೂಳೆ. ಈ ಬಡಜೀವದ ರಕ್ಷಣೆಯ ಜವಾಬ್ದಾರಿ ಹೊರಬೇಕಾಗಿದ್ದ ಸಮಾಜವೂ ಮೂಕ, ಕುರುಡು, ಹೃದಯಹೀನ. ಇಂಥವಳನ್ನು ಕೊನೆಗೆ ಗಿಡುಗವು ಸಮೀಪಿಸುವುದರಲ್ಲಿ ವ್ಯಕ್ತವಾಗುವ ಕಟು ವ್ಯಂಗ್ಯವು, ನಮ್ಮ ಕ್ರೂರ ವಾಸ್ತವವನ್ನು ನಗ್ನವಾಗಿ ಕಣ್ಣೆದುರಿಗೆ ತರುವುದಲ್ಲದೆ, ಭಾವದಾರಿದ್ರ್ಯದಿಂದ

ಉಬ್ಬರಿಸಿ, ವಿಕಾರಗೊಂಡ ಸಮಾಜದ ಕೊಳೆತ ಒಳಗನ್ನು ಬಿಚ್ಚಿ ಬಿಸಿಲಿಗೆ ಹರವುತ್ತದೆ. ಕತೆ ವಾಸ್ತವ ಪ್ರಪಂಚದಲ್ಲೇ ನಡೆದೂ, ಒಂದು 'ಅ - ವಾಸ್ತವ' ಅಥವಾ ಸಾಂಕೇತಿಕ ಆಯಾಮವನ್ನೂ, ಧ್ವನಿವೈವಿಧ್ಯವನ್ನೂ ಪಡೆದುಕೊಳ್ಳುತ್ತದೆ.

'ಯಾವ ಜನ್ಮದ ಶಾಪ?' ಕತೆಯಂತೆಯೇ 'ಒಂಟಿ ನಕ್ಷತ್ರ ನಕ್ಕಿತು' ಕತೆ ಕೂಡಾ ಸುಮಾರಾಗಿ ಎರಡು ತಲೆಮಾರುಗಳ ನಡುವಿನ ಅಭಿಪ್ರಾಯ ಭಿನ್ನತೆಯನ್ನು ಅಣೆಕಟ್ಟಿನ ವ್ಯಾಜದಲ್ಲಿ ನಿರೂಪಿಸುವ ಕತೆಯಾಗಿದೆ. ಮಗುವಿನ ಜನನದ ಮೂಲಕ ಈ ಭಿನ್ನತೆಯೂ ಕತೆಯಲ್ಲಿ ಒಂದು ನಿಲುಗಡೆ ಪಡೆಯುತ್ತದೆ. ಇದೇ ರೀತಿ 'ಅನ್ನದೇವರ ರೈಲು ಪ್ರಯಾಣ', 'ಅನ್ನಪೂರ್ಣಾ', 'ನಾಸ್ತಿಕ ಕೊಟ್ಟ ದೇವರು' ಕತೆಗಳಲ್ಲಿ ಹೊಮ್ಮುವ ವ್ಯಂಗ್ಯಧ್ವನಿಯ ಮೂಲಕ ಲೇಖಕರು ಒದಗಿಸಿಕೊಡುವ ಒಳನೋಟವು ಆ ಕತೆಗಳನ್ನು ಉತ್ತಮ ಕತೆಗಳ ಸಾಲಿಗೆ ಏರಿಸುತ್ತವೆ.

೪

'ರಾಜಕೀಯ ದೃಷ್ಟಿ', 'ಪ್ರಚಾರಾತ್ಮಕತೆ'ಯಿಂದ 'ಸೂಕ್ಷ್ಮಸ್ವರೂಪ', 'ಕುಸುರಿ ಕೆಲಸ', 'ವಾಸ್ತವ' ಹಾಗೂ 'ಕಲ್ಪಕತೆ' ಯತ್ತ ನಿರಂಜನರು ಪ್ರಬುದ್ಧ ಹೆಜ್ಜೆಗಳನ್ನು ಇರಿಸಿದ್ದರೂ, ಅವರು ಈ ಕತೆಗಳ ಮೂಲಕ ಹೇಳಲು ಉದ್ದೇಶಿಸಿರುವ ವಸ್ತು ವಿಚಾರಗಳು ಸರಳವೂ, ಮಿತವಾದ ಧ್ವನಿಪರಿವೇಶವನ್ನು ಹೊಂದಿದವೂ ಆಗಿವೆ. ಕೆಲವು ಕತೆಗಳು ಕೆಳವರ್ಗದ ಜನರ ಬದುಕನ್ನು ವಸ್ತುವಾಗಿ ಉಳ್ಳವುಗಳಾಗಿದ್ದರೂ, ಅವುಗಳನ್ನು ನೋಡುವ ಕಣ್ಣು ಮಧ್ಯಮ ವರ್ಗದ, ಅನುಕಂಪೆಯ ಕಣ್ಣು. ಅಲ್ಲದೆ ಇಲ್ಲಿ ಒಟ್ಟು ಮಾನವಕುಲವನ್ನು ಒಳ್ಳೆಯವರು ಮತ್ತು ಕೆಟ್ಟವರು ಎಂದು ಸರಳವಾಗಿ ವಿಂಗಡಿಸಿ ನೋಡುವ ಕ್ರಮವನ್ನು ಅವರು ಅನುಸರಿಸಿದಂತೆ ನಮಗನಿಸುತ್ತದೆ. ಬದುಕಿನ ಸಂಕೀರ್ಣ ವಿನ್ಯಾಸಗಳನ್ನು, ವರ್ಣವೈವಿಧ್ಯವನ್ನು ಗುರುತಿಸಲು ಹೋಗದ ಹೆಚ್ಚಿನ ಕತೆಗಳು ಭಾವೋದ್ರೇಕದ ಜ್ವರದಿಂದ ಕಂಪಿಸುತ್ತಿರುವಂತೆ ಕಾಣಿಸುತ್ತದೆ. ಭಾವದ ಉದ್ರಿಕ್ತ ಸ್ಥಿತಿಯಲ್ಲಿ ಕಲೆಗಾರಿಕೆ ಹಿಂದೆ ಸರಿಯುತ್ತದೆ ಎಂಬುದನ್ನು ನೆನಪಿಸಿಕೊಂಡರೆ, ನಿರಂಜನರ ಬರೆವಣಿಗೆಯ ಸೋಲು ಎಲ್ಲಿ ಅಡಗಿದೆ ಎಂಬುದು ಸ್ಪಷ್ಟವಾಗುತ್ತದೆ. ಕಂಡ, ಕೇಳಿದ ಅಥವಾ ತನ್ನ ಬದುಕಿನದ್ದೇ ಆದ ಘಟನೆಯೊಂದಕ್ಕೆ ಸ್ಪಂದಿಸಿ ಕತೆ ಬರೆಯುವ ಪ್ರವೃತ್ತಿ ನಿರಂಜನರದು.[7] ಅವರು ಒಂದು ಬಗೆಯಲ್ಲಿ ಇನ್‌ಸ್ಟಿಂಗ್ಟಿವ್ ಬರೆಹಗಾರರಾಗಿರುವುದು ಇದಕ್ಕೆ ಕಾರಣವಾಗಿರಬಹುದು. ಇವರ ಅನೇಕ ಕತೆಗಳಲ್ಲಿ ವಸ್ತು ಮತ್ತು ತಂತ್ರದ ನಡುವೆ ಬಿರುಕು ಕಾಣಿಸುತ್ತದಾದರೆ, ವಸ್ತುವಿನಲ್ಲಿ ಅವರು ಹೊಂದುವ ಮುಗ್ಧತೆ ಮತ್ತು ತಂತ್ರದ ಬಗ್ಗೆ ಅವರಿಗಿರುವ ಅತಿಯಾದ ಎಚ್ಚರವೇ ಕಾರಣವಿರಬೇಕು. ಆದರೂ, ಪ್ರಗತಿಶೀಲ ಬರೆಹಗಾರರೆಲ್ಲ ಏರುಸ್ವರದಲ್ಲೇ

ಮಾತನಾಡುತ್ತಿದ್ದಾಗ; ಎಲ್ಲವನ್ನೂ ಕಪ್ಪು-ಬಿಳಿಯಾಗಿ ವಿಂಗಡಿಸಿ ನೋಡುತ್ತಿದ್ದಾಗ, ಅವರಲ್ಲೇ ಒಬ್ಬರಾದ ನಿರಂಜನರಿಗೆ ಕೆಲವು ಸಲವಾದರೂ ಕೊಂಚ ತಗ್ಗಿನ ಸ್ವರದಲ್ಲಿ ಮಾತನಾಡಲು, ಕಪ್ಪು-ಬಿಳಿಯ ನಡುವಿನ ವರ್ಣವಿನ್ಯಾಸಗಳಲ್ಲಿ ಸ್ವಲ್ಪಾಂಶವನ್ನಾದರೂ ನೋಡಲು; ಕೊಂಚ ತೆಳುವಾದದ್ದೇ ಆದರೂ, ವೈಚಾರಿಕ ಹಿನ್ನೆಲೆಯೊಂದನ್ನು ಒದಗಿಸಲು ಸಾಧ್ಯವಾಗಿದೆ ಎನ್ನುವುದೇ, ಅವರು ಪ್ರಗತಿಶೀಲರಲ್ಲಿ ಮುಖ್ಯ ಬರೆಹಗಾರರಾಗಲು ಕಾರಣವಾಗಿದೆ.

ಇನ್ನೂ ಒಂದು ಮುಖ್ಯ ಅಂಶವನ್ನು ನಾವು ಗಮನಿಸಬಹುದು. ನಿರಂಜನರು ಕವಿಯಲ್ಲವಾದರೂ ಅವರಿಗೊಂದು ಕಾವ್ಯದ ಮುಖವೂ ಇರುವಂತಿದೆ. ಅವರು ಕಟ್ಟಾ ಪ್ರಗತಿಶೀಲರಾಗಿದ್ದರೂ, ಈ ಪ್ರಗತಿಶೀಲತೆಯ ಹಿಂದೆ ಅಡಗಿರುವುದು ರೊಮ್ಯಾಂಟಿಕ್ ಮನೋಧರ್ಮ. ಇದರಿಂದಾಗಿಯೇ ಅವರ ಕತೆಗಳ ಪಾತ್ರಗಳು ಕನಸು ಕಾಣುತ್ತವೆ. ಅಲ್ಲದೆ ಹೆಚ್ಚಿನ ಕತೆಗಳು ಕಾಲ್ಪನಿಕ ಹಾಗೂ ಆದರ್ಶದ ಮುಕ್ತಾಯ ಪಡೆಯುತ್ತವೆ. ಇದನ್ನು ಮೀರುವ ಯತ್ನವನ್ನು ನಿರಂಜನರು ಮಾಡಿದ್ದು ಗೋಚರವಾಗುತ್ತದಾದರೂ, ಮತ್ತೆ ಮತ್ತೆ ರೊಮ್ಯಾಂಟಿಕ್ ಪ್ರಗತಿಶೀಲತೆಯು ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದನ್ನು ಕಾಣಬಹುದು.

ಇನ್ನೂ ಕೆಲವು ಅಂಶಗಳನ್ನು ಗಮನಿಸುವುದು ಪ್ರಯೋಜನಕಾರಿಯಾಗಬಹುದು. ನಿರಂಜನರು ಪತ್ರಿಕೋದ್ಯಮಿಯಾಗಿ ಪಡೆದ ಅನುಭವ, ಅಂಕಣಕಾರರಾಗಿ ಪಡೆದ ಪರಿಣತಿ, ಅವರ ಸೃಜನಶೀಲ ಬರವಣಿಗೆಗೆ ಗೆಲುವನ್ನೂ ತೊಡಕನ್ನೂ ಜತೆ ಜತೆಯಾಗಿಯೇ ತಂದುಕೊಟ್ಟಂತಿದೆ. ಪತ್ರಿಕಾ ವರದಿಗಾರನ ರೀತಿ ವಿವರಗಳನ್ನು ಗ್ರಹಿಸಿ, ಸಂಗ್ರಹಿಸುವ, ದಾಖಲಿಸುವ ಬಗೆಯನ್ನು ಕತೆಗಳಲ್ಲೂ ನಾವು ನೋಡಬಹುದು. ಆ ವಿವರಗಳು ಕಾದಂಬರಿ ರಚನೆಗೆ ಹೆಚ್ಚು ಸಹಾಯಕವಾಗಬಲ್ಲವು. ಆದರೆ ಸಣ್ಣ ಕತೆಗೆ - ವಿವರಗಳ ಆಯ್ಕೆಯಲ್ಲಿ ಸೂಕ್ತ ಎಚ್ಚರ ಇಲ್ಲದಾದಾಗ - ಕತೆ, ಕಾದಂಬರಿಯ ಸಂಕ್ಷಿಪ್ತ ರೂಪವನ್ನು ತಾಳುತ್ತದೆ. ಇಲ್ಲವೇ, ಸ್ಥಿರ ಕೇಂದ್ರವೊಂದಿಲ್ಲದೆ ಅತಂತ್ರವಾಗುತ್ತದೆ. 'ಹವಾಲ ಇಮಾಂ ಸಾಬಿ'ಯಂತಹ ಕತೆಗಳಲ್ಲಿನ ಸೋಲು ಈ ಬಗೆಯದು. ಅಂಕಣಕಾರನಾಗಿ, ಕಡಿಮೆ ಮಾತುಗಳಲ್ಲಿ ಹೆಚ್ಚು ವಿವರ, ವಿಚಾರಗಳನ್ನು ಅಡಕಗೊಳಿಸಿ ಹೇಳುವ ಪರಿಣತಿಯು, ಸೂಕ್ತ ರೀತಿಯಲ್ಲಿ ಉಪಯೋಗವಾದಾಗ, ('ಕೊನೆಯ ಗಿರಾಕಿ', 'ಧ್ವನಿ' ಕತೆಗಳಂತೆ) ಕತೆ ಯಶಸ್ವಿಯಾಗುತ್ತದೆ. ಇದು 'ವರದಿಗಾರ'ನ ವಿವರಗಳೊಂದಿಗೆ ಕಣ್ಣುಮುಚ್ಚಾಲೆಯಾಡತೊಡಗಿದಾಗ, ಕತೆ ಸೋಲುತ್ತದೆ. ('ಅಂಕಣಕಾರ'ನ ಪರಿಣತಿ, ಕಾದಂಬರಿ ರಚನೆಯಲ್ಲಿಯೂ ಹೇಗೆ ತೊಡಕುಂಟುಮಾಡುತ್ತದೆ ಎಂಬುದನ್ನು ನಿರಂಜನರ ಮಹತ್ವದ ಹಾಗೂ ಮಹತ್ವಾಕಾಂಕ್ಷೆಯ ಕೃತಿ 'ಮೃತ್ಯುಂಜಯ'ದಲ್ಲಿ ಗಮನಿಸಬಹುದಾದರೂ ಅದು ಇಲ್ಲಿ ಅಪ್ರಸ್ತುತ.)

ಇಷ್ಟೆಲ್ಲ ಹೇಳಿದ ಮೇಲೆ, ನನಗೀಗಲೂ ಅನ್ನಿಸುವ ಅಂಶವೆಂದರೆ ಕತೆ ನಿರಂಜನರ ಮಾಧ್ಯಮ ಅಲ್ಲ; ಕಾದಂಬರಿ ಎಂಬುದು. ಮೃತ್ಯುಂಜಯ, ರಂಗಮ್ಮನ ವಠಾರ, ಚಿರಸ್ಮರಣೆಯಂಥ ಮಹತ್ವದ ಕಾದಂಬರಿಗಳನ್ನು ಕೊಟ್ಟಂತೆ, ಅಷ್ಟೇ ತೂಕದ, ಮಹತ್ವದ ಕತೆಯನ್ನು ನಿರಂಜನರು ಕೊಟ್ಟಿಲ್ಲ. ಈ ಕತೆಗಳೆಲ್ಲ 'ಅಂಚಿನ ರಚನೆ'ಗಳಂತಿವೆ. ಅವರ ಅನುಭವದ ಬೀಸು ಕಾದಂಬರಿಗೆ ಒಗ್ಗಿದಂತೆ ಸಣ್ಣ ಕತೆಗೆ ಒಗ್ಗುವಂಥದಲ್ಲ ಎಂದು ನನ್ನ ಭಾವನೆ. ಈ ಕತೆಗಳನ್ನೆಲ್ಲ ಈಗ ನೋಡುವಾಗ ಹೆಚ್ಚಿನವು ಸಾಂದರ್ಭಿಕ ರಚನೆಗಳಂತೆ ಕಾಣುತ್ತವೆ. ಆ ಕಾಲದಲ್ಲಿ ಅವು ಮಹತ್ವದ ರಚನೆಗಳೇ ಆಗಿದ್ದವಲ್ಲವೇ ಎಂದು ಅನೇಕರು ಹೇಳಬಹುದು. ಆದರೆ ನನ್ನ ಮಟ್ಟಿಗೆ, ಈಗ, ಕಾಲದ ಅಂತರದಲ್ಲಿ ನಿಂತು, ಆ ಅವಧಿಯನ್ನು ಯಶಸ್ವಿಯಾಗಿ ದಾಟಿಕೊಂಡು ಬಂದ ಕತೆಗಳ ಬಗ್ಗೆಯಷ್ಟೇ ಆಸಕ್ತಿ. ಅಂತಹ ಕತೆಗಳು ಕಡಿಮೆ ಎಂದರೆ - ವಿರೋಧಾಭಾಸವೆನ್ನಿಸಿದರೂ - ಅದು ನಿರಂಜನರ ಅದ್ಭುತರಮ್ಯ ಹೋರಾಟದ ಬದುಕು ಹಾಗೂ ಶಕ್ತಿಪೂರ್ಣ ಬರೆಹಕ್ಕೆ ಕೊರತೆಯೇನೂ ಅಲ್ಲ ಎಂದು ನಾನು ಭಾವಿಸುತ್ತೇನೆ.

ಟಿಪ್ಪಣಿ* ದಿನಾಂಕ ೩೦–೧೧–'೮೫ರಂದು ಪುತ್ತೂರಿನಲ್ಲಿ ನಡೆದ 'ನಿರಂಜನ ಸಾಹಿತ್ಯ' ಗೋಷ್ಠಿಗಾಗಿ ಸಿದ್ಧಪಡಿಸಿದ ಲೇಖನವಿದು.

1. ಇತ್ತೀಚೆಗೆ, ಸದ್ಯವೇ ಪ್ರಕಟವಾಗಲಿರುವ ನಿರಂಜನರ ಸಮಗ್ರ ಕಥೆಗಳ ಸಂಗ್ರಹ 'ಧ್ವನಿ' ಓದಲು ಸಿಕ್ಕಿತು. ಇದು ೪ ಸಂಪುಟಗಳಲ್ಲಿ ೧೫೬ ಕತೆಗಳು ಸೇರಿರುವ, ಹಸ್ತಪ್ರತಿಯಲ್ಲಿ ಸುಮಾರು ಸಾವಿರ ಪುಟಗಳಿರುವ - ಬೃಹತ್‌ಸಂಕಲನ. ಇವನ್ನು ಓದಿದ ಮೇಲೆ, ಲೇಖನ ವನ್ನು ಮತ್ತೆ ಬರೆಯಬೇಕೆನ್ನಿಸಿದರೂ, ಒಟ್ಟು ಲೇಖನದ ಸ್ವರೂಪವೇ ಬದಲಾಗಬಹು ದಾದ್ದರಿಂದ ಮತ್ತು ಇನ್ನೂ ಪ್ರಕಟವಾಗಬೇಕಿರುವ ಕೃತಿಯನ್ನು ಆಧರಿಸಿ ಬರೆಯುವುದು ಸರಿಯಾಗದೆನ್ನುವ ಕಾರಣದಿಂದ ಲೇಖನದಲ್ಲಿ ವಿಶೇಷ ಬದಲಾವಣೆಗಳನ್ನು ಮಾಡಲು ಹೋಗಿಲ್ಲ. ಆದರೂ, 'ಧ್ವನಿ'ಯನ್ನು ಓದಿದ್ದರಿಂದ ನನ್ನ ಅನೇಕ ಅನುಮಾನಗಳಿಗೆ ಪರಿಹಾರ ದೊರಕಿದಂತಾಗಿದೆ. ಅದಕ್ಕಾಗಿ ಕೃತಿಯನ್ನೊದಗಿಸಲು ಒಪ್ಪಿದ ಶ್ರೀ ನಿರಂಜನರಿಗೆ ಹಾಗೂ ಒದಗಿಸಿದ ಶ್ರೀ ವಿ. ಬಿ. ಮೊಳೆಯಾರ ಮತ್ತು ಶ್ರೀ ಗಣರಾಜರಿಗೆ ನಾನು ಕೃತಜ್ಞ.

2. 'ಧ್ವನಿ' ಸಂಪುಟದ ಪ್ರತಿಯೊಂದು ಕತೆಗೂ ನಿರಂಜನರು, ಆ ಕತೆ ಹುಟ್ಟಿಕೊಂಡ ಹಿನ್ನೆಲೆಯ ಕುರಿತು ಸ್ವಾರಸ್ಯಪೂರ್ಣವಾದ ಕಿರು ಟಿಪ್ಪಣಿಯನ್ನು ಬರೆದಿದ್ದಾರೆ. 'ದಾಂಪತ್ಯದ ಸುಳ್ಳು ಚೌಕಟ್ಟಿನಲ್ಲಿ ಪ್ರಾಗತಿಕ ಎನ್ನಬಹುದಾದ ವಿಚಾರಗಳನ್ನು ಸ್ವಲ್ಪ ಸ್ವಲ್ಪವಾಗಿ ತುಂಬುತ್ತಿದ್ದೆ' ಎಂಬುದು 'ಸಮಪಾಲು' ಎನ್ನುವ ಕತೆಗೆ ಅವರು ನೀಡಿದ ಟಿಪ್ಪಣಿಯ ಮೊದಲ ಸಾಲು.

3. 'ಅಯ್ಯನೈ' ಎನ್ನುವ ಕತೆಗೆ 'ಮುಗಿಯದ ಯುದ್ಧ'ಎಂದು ಪುನರ್ನಾಮಕರಣ ಮಾಡಿದ್ದಾರೆ.

4. 'ಸೃಜನಶೀಲ ಬರೆಹಗಾರ ಯಾವುದೇ ರಾಜಕೀಯ ಪಕ್ಷದ ಸದಸ್ಯನಾದಾಗ, ಅದರಲ್ಲಿ ತನ್ನನ್ನು ಗಾಢವಾಗಿ ತೊಡಗಿಸಿಕೊಂಡಾಗ ಬರವಣಿಗೆ ನರಳುತ್ತದೆ' - 'ಸಂಧಿಕಾಲ'ಕ್ಕೆ ಬರೆದ ಟಿಪ್ಪಣಿ. 'ನಾನು ಮಾನವೀಯತೆಯ ಪ್ರತಿಪಾದಕ; ಮನುಷ್ಯತ್ವದ ಆರಾಧಕ. ಹಿಂದೂ, ಕ್ರೈಸ್ತೀಯ, ಮುಸಲ್ಮಾನ..... ಯಾರೂ ಅಲ್ಲ ನಾನು' - 'ಸರೋಜಿಗೆ ಬರೆದ ಕೆಲವು ಕಾಗದಗಳು' ಕತೆಗೆ ಬರೆದ ಟಿಪ್ಪಣಿ.

5. 'ನಾನು ಬದುಕಿಗೆ ಬದ್ಧ' - 'ಘಂಟೆ' ಕತೆಯ ಟಿಪ್ಪಣಿ.

6. ಕಲಾವಿದ ಆರ್. ಎಸ್. ನಾಯ್ಡು ಕಾಫಿ ತೋಟದ ಒಡೆಯರೊಬ್ಬರ ಆತಿಥ್ಯ ಸ್ವೀಕರಿಸಿ, ರಚಿಸಿದ ಶಿಲ್ಪಗಳು, ಈ ಕಥೆಗೆ ಹಿನ್ನೆಲೆ - ಟಿಪ್ಪಣಿ.

7. ಕತೆಯ ಪಾತ್ರಗಳೊಂದಿಗೆ ನೇರವಾಗಿಯೋ, ಪರೋಕ್ಷವಾಗಿಯೋ ನಿರಂಜನರು ತನ್ನನ್ನು ಗುರುತಿಸಿಕೊಂಡಿರುವುದು ಇಲ್ಲಿನ ಟಿಪ್ಪಣಿಗಳಿಂದ ಸ್ಪಷ್ಟ. ಪಾತ್ರಗಳಿಂದ ತನ್ನನ್ನು ಬೇರ್ಪಡಿಸಿಕೊಂಡು ತಕ್ಕ ಅಂತರ ಸಾಧಿಸಿಕೊಳ್ಳದಿದ್ದಾಗ, ಕತೆ ಸ್ವಾಭಾವಿಕವಾಗಿ ಆತ್ಮ ಮರುಕಕ್ಕೆ, ಭಾವೋದ್ರೇಕಕ್ಕೆ ತುತ್ತಾಗುತ್ತದೆ. ಇದಕ್ಕೆ ಇಲ್ಲಿನ ಅನೇಕ ಕತೆಗಳೇ ಸಾಕ್ಷಿ.

○

ವಿಮೋಚನೆ

–ಜಯಪ್ರಕಾಶ ಮಾವಿನಕುಳಿ

"What am I myself? What have I done? Everything which I have seen, heard and observed I have collected and utilised. My works have been nurtured by uncounted different individuals, by fools and wisemen, people of spirit and dullards; childhood, maturity, old age have all given me their thoughts, their abilities, hopes and views; I have often reaped what others have sown. My work is that of a collective being bearing the name Gouthe."

–Gouthe

ಪ್ರಿಯ ನಿರಂಜನರೇ,

ನೀವು ೧೯೫೮ರಲ್ಲಿ ಬರೆದ, ರಷ್ಯನ್, ಪೋಲೀಷ್ ಭಾಷೆಗೆ ಈಗಾಗಲೇ ಭಾಷಾಂತರಗೊಂಡು ಲಕ್ಷಗಟ್ಟಲೆ ಪ್ರತಿ ಮಾರಾಟವಾದ ನಿಮ್ಮ ಕಾದಂಬರಿ 'ವಿಮೋಚನೆ'ಯನ್ನು ಓದಿದೆ. 'ತಾವು ಬರೆದದ್ದು ಹತ್ತು ಜನರಿಗೆ ತಿಳಿಯಲಿ ಎಂದೇ ಅಲ್ಲವೇ' ಬರೆಯೋದು.

ಮಂಗಳವಾರದಿಂದ ಆರಂಭವಾಗಿ ಮಂಗಳವಾರವೇ ಮುಗಿಯುವ ೨೦೫ ಪುಟಗಳ ವಿಸ್ತಾರವಾದ ಕಾದಂಬರಿಯಲ್ಲಿ ನೀವು ಬಳಸಿಕೊಂಡ ಫ್ಲಾಶ್‌ಬ್ಯಾಕ್ ತಂತ್ರ ಚೆನ್ನಾಗಿದೆ. ಯಾವುದೇ ಸಾಹಿತ್ಯಕೃತಿಯಲ್ಲಿ ತಂತ್ರಕ್ಕೆ ಹೆಚ್ಚು ಮಹತ್ವ ನೀಡ ಬಾರದು ಎಂದು ಅನೇಕರು ಭಾವಿಸಿದರೂ ತಂತ್ರದ ದುರ್ಬಲತೆಯಿಂದಾಗಿ ಇಡೀ ಕಾದಂಬರಿಯ ಚೌಕಟ್ಟು ಸಡಿಲವಾಗಿ ಬಿಡುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕಾಲದ ಜೊತೆಗೆ ಲೇಖಕ ಹೇಳಬೇಕಾಗಿರುವುದರಿಂದ ತಂತ್ರವನ್ನು ಗುರುತಿಸಿಕೊಳ್ಳು ವುದು, ಯಾರ ಬಾಯಿಂದ ಲೇಖಕ ಮಾತನಾಡಬೇಕು ಎಂಬುದು ಮುಖ್ಯವಾದ ಮಾತೇ. ಹೀಗೆ ಚಂದ್ರಶೇಖರನ ಬಾಯಿಗೆ ಚಲನೆ ಬರುತ್ತದೆ. ಆತ ಬರೆಯುತ್ತಾ ಹೋಗುತ್ತಾನೆ........

ಚಂದ್ರಶೇಖರನಿಗೆ ಬೇಕಾದ್ದು 'ಮಾನವನಾಗಿ ಬಾಳಬೇಕೆಂಬುದಷ್ಟೇ'. ಆದರೆ ಅದು ಸುಲಭವಾಗಿ ಫಲಿಸುವುದಿಲ್ಲ. ಹೀಗೆ ಮಾನವನಾಗುವ ಹಠದಲ್ಲಿ ಅನೇಕ ಬಗೆಯ ಬದುಕನ್ನು ನೋಡುತ್ತಾನೆ. ಎಲ್ಲಿಯೋ ದರಿದ್ರ ಕುಟುಂಬದಲ್ಲಿ ಹುಟ್ಟಿ ಎಲ್ಲೆಲ್ಲೋ ಸೇರಿ, ಏನೇನೋ ಆಗಿ ಕೊನೆಗೆ ಗೆಳೆಯ ಶ್ರೀಕಂಠನ ಉಪ್ಪಿನ ಋಣ ತೀರಿಸ ಲೋಸುಗ ತಾನೇ ತಪ್ಪನ್ನು ಹೊದ್ದುಕೊಂಡು ನೇಣುಕಂಬ ಏರಿ ಹುತಾತ್ಮನಾಗು ತ್ತಾನೆ. ಆತನು ಬಲಿಯಾದದ್ದು ಬೂರ್ಶ್ವಗಳ ತಂತ್ರಕ್ಕೆ, ಕಪಟತೆಗೆ ಇರಬಹುದಲ್ಲವೇ?

ಕಾದಂಬರಿಯ ಸಾಮಗ್ರಿ ತುಂಬಾ ದೊಡ್ಡದು. ಒಂದೊಂದು ಘಟನೆಯೂ ಒಂದೊಂದು ಸವಿಸ್ತಾರವಾದ ಕಾದಂಬರಿ ಆಗಬಹುದು. ಬಹುಶಃ ಇಷ್ಟೆಲ್ಲಾ ವಸ್ತು ಗಳನ್ನು ಇಲ್ಲಿ ತುರುಕಿದ್ದುದರ ಕಾರಣವೋ ಎಂಬಂತೆ ಕಾದಂಬರಿ ಎಲ್ಲೂ ತನ್ನ ಸಮಗ್ರತೆಯನ್ನು ಕಾಯ್ದುಗೊಳ್ಳುವುದಿಲ್ಲ. ಮೇಲು ಮೇಲೇ ವಿಷಯವನ್ನು ಹೇಳುವ ನೀವು ಎಲ್ಲೂ ಆಳಕ್ಕಿಳಿದು ಅವಲೋಕಿಸುವುದಿಲ್ಲ. ಇದಕ್ಕೆ ಕಾರಣ ಬಹುಶಃ ನಿಮ್ಮ ಚಂದ್ರಶೇಖರನನ್ನು ಎಲ್ಲೂ ಕೆಟ್ಟವನನ್ನಾಗಿ ಮಾಡಲಾಗದೇ ಇರುವ, ಹಾಗೆ ಭಾವಿ ಸಲು ನೀವು ಬಳಸುವ 'ಸಂರಕ್ಷಣಾತಂತ್ರ'. ನಿಮ್ಮ ಚಂದ್ರಶೇಖರ ನಮ್ಮ ಸಿನಿಮಾದ ರಾಜಕುಮಾರ ಇದ್ದಹಾಗೆ. ಆತನಿಗೆ ಸೋಲಿಲ್ಲ. ಸೋಲಿನ ಪಾರ್ಟ್ ಆತ ಹಾಕುವುದಿಲ್ಲ.

ಚಂದ್ರಶೇಖರ ನಿಮ್ಮ ಧ್ವನಿ ನಿಜ. ಆದುದರಿಂದ ಒಂದು ರೀತಿಯ ನಿರ್ಲಿಪ್ತತೆ ಯನ್ನು ಕಾಯ್ದುಕೊಂಡು ಹೋಗುವುದು ಬಹಳ ಕಷ್ಟದ ಕೆಲಸ. ಹೀಗಾಗಿ ಅನೇಕ ಬಾರಿ ಕಾದಂಬರಿಯಲ್ಲಿ ಕಂಡ ಎಲ್ಲಾ ಪಾತ್ರಗಳಿಗೂ ನಾವು ನ್ಯಾಯ ದೊರಕಿಸಿ ಕೊಡಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಯಾವುದಾದರೂ ಸಂದರ್ಭವಲ್ಲಿ

ನಾವು ಇಷ್ಟಪಡುವ ಪಾತ್ರಗಳು ನಾಯಕರಾಗಿ ಮೆರೆಯುತ್ತಾರೆ. ತಮ್ಮನ್ನು ತಾವೇ ವೈಭವೀಕರಿಸಿಕೊಂಡು ಆದರ್ಶೀಕೃತ ಮತ್ತು ಅನಂಗರಾಗಿ ಬಿಡುತ್ತಾರೆ. ಹೀಗೆ ಆಗಿ ಬಿಟ್ಟಿದ್ದಾನೆ ನಿಮ್ಮ ಚಂದ್ರು.

ಪ್ರಿಯ ನಿರಂಜನರೇ, ನೋಡಿ ನಿಮ್ಮ ಚಂದ್ರುವಿಗೆ ವನಜಾಳ ಪ್ರೀತಿ ಸಿಗದೆ ನಿರಾಶನಾದಾಗ ಅದನ್ನು ಭರಿಸಲು, ಆ ಖಿನ್ನತೆಯಿಂದ ಹೊರಬರಲು ಉಳಿದ ಹೆಣ್ಣು ಮತ್ತು ಹೆಂಡಬೇಕು. (ನೀವೇ ಕಾದಂಬರಿಯಲ್ಲಿ ಹೇಳಿದ್ದೀರಿ.) ಹೀಗಿದ್ದರೂ ಶ್ರೀಕಂಠನ ಹೆಂಡತಿ ಶಾರದಾ ಆತನ ಮೇಲೆ ಆಸ್ಥೆ ತೋರಿದರೂ - ಅದನ್ನು ಬಾಯಿ ಬಿಟ್ಟು ಹೇಳಿದರೂ - "ನೀವು ಅಲ್ಪ ಸಂತೋಷಿ, ಬರೀ ಕಾಫೀಲೇ ತೃಪ್ತಿಪಟ್ಕೋತೀರಿ"- ನಿಮ್ಮ ಚಂದ್ರು ಏಕಪತ್ನಿವ್ರತಸ್ಥನಂತೆ ವರ್ತಿಸುತ್ತಾನೆ. ಇಂಥ ಅನುಭವ ಮಾನವಾನುಭವ ಆಗುವುದಿಲ್ಲ. ವಾಸ್ತವವನ್ನು ತೀರಾ ಮೀರಿ ಇದು ಅಸಹಜವೂ, ಕೃತ್ರಿಮವೂ ಆಗುತ್ತದೆ. ಆತನನ್ನು ಎಷ್ಟು ಮೇಲೆ ಇಡಲು ನೋಡುತ್ತೀರಿ ಎಂದರೆ ತನ್ನ ಅತಿ ಬಡತನದಲ್ಲೂ ಆತ ದೇಶ ವಿದೇಶದ ಸಾಹಿತ್ಯಗಳು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಪುಸ್ತಕಗಳನ್ನು ಓದುತ್ತಾನೆ! ಇಂಥ ಪ್ರತಿಭಾವಂತ ಕೆಲಸಕ್ಕೆ ಹಾತೊರೆಯುವಂತೆ ಎಲ್ಲೂ ಕಾಣಸಿಗುವುದಿಲ್ಲ. ಬರೀ ಮೂರನೇ ದರ್ಜೆ ಕೆಲಸವೇ ಆತನ ಕಣ್ಣಿಗೆ ಬೀಳುತ್ತದೆ! ಅನಾಥರಾಗಿ ಮುಂಬಯಿಗೆ ಹೋದ ಅನೇಕರು ಉತ್ತಮ ಹುದ್ದೆಯಲ್ಲಿರುವುದು ನಿಮ್ಮ ಕಣ್ಣಿಗೆ ಬಿದ್ದಿಲ್ಲವೇ? ಚಂದ್ರಶೇಖರನ ಬಾಳಿನಲ್ಲಿ ಅನಿರೀಕ್ಷಿತವಾದ ಒರತೆಗಳಿವೆ, ಸುಳಿಗಳಿವೆ. ಇಂಥದು ಹೀಗೆಯೇ ಎಂದು ಹೇಳುವ ಸಾಮರ್ಥ್ಯ ಅವನಿಗಿಲ್ಲದಿದ್ದರೂ ಒಬ್ಬರಾದ ಕೂಡಲೆ ಒಬ್ಬರು - ಅಜ್ಜ, ಚಲಂ, ಶ್ರೀಕಂಠ - ಅವನ ಸಹಾಯಕ್ಕೆ ಸಿದ್ಧರಾಗಿ ಬರುವುದು ಸೋಜಿಗವಾಗಿದೆ!

ಇಷ್ಟೆಲ್ಲಾ ಇದ್ದರು, ನಿರಂಜನರೆ, ನಿಮ್ಮ ಆಶಯಕ್ಕೆ ಭಂಗ ಬಂದಿಲ್ಲ; ಎಲ್ಲೂ ವಿರೋಧಾಭಾಸವಾಗಿಲ್ಲ. ನಿಮ್ಮನ್ನು ಹಿಂದಿನಿಂದ ಗೊತ್ತಿರುವ ಯಾರಿಗಾದರೂ, ಪಠಿಯಾದವರು ಲಕ್ಷಗಟ್ಟಲೇ ಮುದ್ರಿಸಿದ್ದು ತಿಳಿದ ಯಾರಿಗಾದರೂ ಇದು ಯಾವ ಧ್ವನಿಯ ಪುಸ್ತಕ ಎಂಬುದು ತಿಳಿದೇ ತಿಳಿಯುತ್ತದೆ. ಆಶಯದ ಮಾತು ಪ್ರಕಟವಾಗಿಯೇ ಅನೇಕ ಕಡೆ ಬರುತ್ತದೆ. ಶ್ರೀಕಂಠ ಹೇಳ್ತಾನೆ - "ಅವರೇ ಹೇಳೋ ಹಾಗೆ ಇದು ವರ್ಗಸಮರ....ಈ ಸಮರದಲ್ಲಿ ಉಪಯೋಗಿಸದೇ ಇರುವ ಅಸ್ತ್ರವೇ ಇಲ್ಲ." ಮುಷ್ಕರ ಪ್ರಾರಂಭವಾದಾಗ ಚಂದ್ರುವೇ ನೋಡುತ್ತಾನೆ - "ಪರಸ್ಪರ ಎದುರು ಬದುರಾಗಿ ನಿಂತಿದ್ದ ಈ ಎರಡೂ ಶಕ್ತಿಗಳು. ಆ ವರೆಗೆ ಹಣವಂತರ ಪಕ್ಷ ವೊಂದೇ ದೊಡ್ಡ ಶಕ್ತಿಯೆಂದು ನಾನು ಬಗೆದಿದ್ದೆ. ಅದು ನಿಜವಾಗಿರಲಿಲ್ಲ. ಇಲ್ಲಿ ಇನ್ನೊಂದು ಶಕ್ತಿಯಿತ್ತು....ಹಣವಿಲ್ಲದವರ ಶಕ್ತಿ."

ವರ್ಗಸಮರದ ಮಾತು ಕಾರ್ಲ್‌ಮಾರ್ಕ್ಸ್‌ನದು. ಬೂರ್ಶ್ವಾ ಸಮಾಜವನ್ನು ಪ್ರತಿನಿಧಿಸುವ ಶ್ರೀಕಂಠ, ಆತನ ಮಾವ, ಶಾರದಾ ಆದರೆ, ಬೋಲ್‌ಶಿವಿಕ್‌ರನ್ನು ಪ್ರತಿನಿಧಿಸುವ ನಾಣಿ, ಕಮಲ ಮತ್ತಿತರರು - ಇವೆರಡರ ನಡುವೆ ನಡೆಯುವ ಚಾಣಾಕ್ಷಮಯ ಯುದ್ಧವನ್ನು ತುಂಬಾ ಸುಂದರವಾಗಿ ಚಿತ್ರಿಸಿದ್ದೀರಿ. ಗೂಂಡಾ, ಪೊಲೀಸು ದರ್ಬಾರು, ಚೆನ್ನಾಗಿ ಮೂಡಿಬಂದಿದೆ. ನಿಮಗೆ ಗೊತ್ತು ಯಾವತ್ತು ಉಳ್ಳವರು (Haves) ಮತ್ತು ಇಲ್ಲದವರ (Havenots) ಬಗ್ಗೆ ಅಂತರ ಜಾಸ್ತಿ ಆಗ್ತದೋ ಅವತ್ತು ಇಂಥ ಶೀತಲ ಯುದ್ಧ ಅನಿವಾರ್ಯ ಎಂಬುದು ಮಾರ್ಕ್ಸ್‌ನ ತೀರ್ಮಾನ ಎಂದು. ಇಡೀ ಸಮಾಜವೇ ಎರಡು ವರ್ಗಗಳಾದಾಗ ಮೂರನೇ ವರ್ಗದ ಪ್ರಶ್ನೆಯೇ ಬರುವುದಿಲ್ಲ. ಅಂಥವರಿದ್ದರೂ ಅವರು ಬಹಳ ಅಪಾಯಕಾರಿ. ಈ ವರ್ಗದವರು ಇಬ್ಬರಿಗೂ ಮಿತ್ರರು; ಇಬ್ಬರಿಗೂ ಶತ್ರುಗಳು. ಶ್ರೀಕಂಠ ಹೇಳ್ತಾನೆ - "ನಾಣಿಯಂಥವರಿಂದಾನೆ ನಮಗೆ ಆಪತ್ತು ಬರೋದು, ಆನಸ್ಮ್ರಕ್ಳು - ಒಂದು ನೋಡಿದರೆ ಕೂಲಿಕಾರರೂ ಅಲ್ಲ - ಈಚೆಗೆ ನಮ್ಮವರೂ ಅಲ್ಲ. ನಾನ್ಹೇಳ್ತೀನಿ ಚಂದ್ರು- ಈ ಲೋಕದಲ್ಲಿ ಇರ್ಬೇಕಾದ್ದು ಎರಡೇ ವರ್ಗ; ನಮ್ಮದು - ಅವರದ್ದು. ಈ ನಡುವೆ ಮಧ್ಯಮ ವರ್ಗಂತಿರೋದರಲ್ಲಿ ಅರ್ಥವಿಲ್ಲ."

ನಿರಂಜನರೆ, ಚಂದ್ರುವಿನ ಈ ಹೋರಾಟ ಅನೇಕ ಮಗ್ಗಲುಗಳನ್ನು - ಹಳ್ಳಿ, ಪಟ್ಟಣದ ಮಧ್ಯೆ ಇರುವ ಅಗಾಧ ಅಂತರ, ಅಜ್ಜ ಕೊಟ್ಟ ಪ್ರೀತಿಯ ಬದುಕು, ಶಾಲೆಯಲ್ಲಿ ಕಂಡುಬಂದ ವಿರೋಧಾಭಾಸಗಳು, ಸ್ಕೂಲಿನ ಮಾಸ್ತರರ ಅನೀತಿ ವರ್ತನೆ, ಅನಾವಶ್ಯಕ ಹೊಡೆತ - ದಾಟುತ್ತಾ ಹೋಗುತ್ತದೆ. ಎಳೆತನದಲ್ಲಿ ಆದ ಹೊಡೆತ, ಸಮಾಧಾನ ಮಾಡಲು ಅಪ್ಪ ಹೇಳಿದ "ದುಡ್ಡೋರ್ ಸಂಗಡ ಬಹಳ ಜಗಳ ಕಾಯ್ಬೋದಾ?" ಎಂದಿದ್ದು ಆತನಿಗೆ ಇನ್ನಷ್ಟು ಖಿನ್ನತೆಯನ್ನು ಒಡ್ಡುತ್ತದೆ. ಇಲ್ಲಿಯೇ ಆಕ್ರೋಶದ ಬೀಜ ಬಿತ್ತಿದ್ದರೂ ಇರಬಹುದು: ಅಂಕುರವಾಗಿರಬಹುದು - ಬಿಟ್ಟಿ ಸೌದೆ ಒಡೆಸಿಕೊಳ್ಳುವ ಮೇಸ್ಟರು ಮಾಡುವ ಶೋಷಣೆ, ಜುಟ್ಟು ತೆಗೆದು ಕ್ರಾಪು ಮಾಡಿಸುವಾಗಿನ ಆನಂದ, ಮನೆತನಕ್ಕೂ ಇಂಗ್ಲಿಷಿಗೂ ಇರುವ ಸಂಬಂಧದ ಪರಿಕಲ್ಪನೆ, ಮಗನಿಗಾಗಿ ತಂದೆ ಪೊಲೀಸ್‌ಸ್ಟೇಷನ್‌ನ ಮರದ ಕೆಳಗಡೆ ರಾತ್ರಿ ಇಡೀ ಕಾಯುವ ಚಿತ್ರಣ, ಅಜ್ಜಿಯನ್ನು ಬಿಟ್ಟು ಮುಂಬಯಿಗೆ ಹೋಗುವಾಗಿನ ಹೃದಯಂಗಮ ದೃಶ್ಯ, ಮುಂಬಯಿ ದುಡಿತದ ಜೊತೆಗೆ ಹಸಿಹಸಿಯಾಗಿ ಚಿಗುರುವ ಹೊಸಹರೆಯದ ಕನಸುಗಳು, ಅಮೀರ್ - ಶೀಲಾರ ಆತ್ಮೀಯತೆ, ಜೈಲಿನಲ್ಲಿ ಹಣವಂತರಿಗೆ ಸಿಗುವ ಸೌಲಭ್ಯ, ಚಲಂ ಮತ್ತು ಸಾವಿತ್ರಿಯರ ಅನ್ಯೋನ್ಯ ಸಂಬಂಧ - ಹೀಗೆ ಹತ್ತು ಹಲವಾರು ಬಾಳಿನ ಕಡೆಗೆ ಗಮನ ಸೆಳೆಯುತ್ತದೆ - ನಿಮ್ಮ ಕಾದಂಬರಿ ಕಾದಂಬರಿಯ ಹರವು ಅಗಾಧವಾದದ್ದು; ಸವಿಸ್ತಾರವಾದದ್ದು.

ಜೀವನದ ಯಾವ ಹಂತದಲ್ಲಿ ಸುಖ ಸಿಗುತ್ತೆ ಎಂಬ ನಿಮ್ಮ ಮಾತು ತುಂಬಾ ಮಾರ್ಮಿಕವಾಗಿದೆ. ಒಂದು ಕಡೆ ಕಮಲ-ನಾಣಿಯರ ಸಹನಾಬಾಳ್ವೆ, ಮತ್ತೊಂದು ಕಡೆ ಸಿರಿವಂತರಾದರೂ ಅತೃಪ್ತರಾದ ಶ್ರೀಕಂಠ - ಶಾರದಾರ ಬಾಳು - ಹೀಗೆ ಇಡೀ ಮಾನವನ ಸಮಸ್ಯೆಗಳ ಮಹಾಪೂರದ ಸಮೀಕ್ಷೆಯನ್ನು ನೀವು ನಡೆಸಿಕೊಟ್ಟಿದ್ದೀರಿ. ಅದಕ್ಕಾಗಿ ಅಭಿನಂದನೆಗಳು. ನಿರಂಜನರೆ, ನೀವು ಬದ್ಧದೃಷ್ಟಿಯಿಂದ ಈ ಕಾದಂಬರಿ ಬರೆದಿದ್ದರೂ ನಿಮ್ಮ ಆಶಯಕ್ಕೆ ಎಲ್ಲೂ ಭಂಗ ಬರುವುದಿಲ್ಲ. ತನ್ನ ಸಾರ್ಥಕತೆಯನ್ನು ಕೆಡಿಸಿಕೊಳ್ಳುವುದಿಲ್ಲ. ಆ ಮಾತುಗಳು ಇಲ್ಲಿ ಅನುಭವವಾಗುತ್ತದೆ - "ಇಂಗೇ ಇರೋ ಕಾತದ? ಇಂಥ ನಾಯಿ ಬಾಳು ಬಾಳೋಕಾತದ? ಒಂದಿಪ್ಸ - ಎರಡ್ದಿಪ್ಸ ಇಂಗಿರೋದು, ಆದರೆ ಯಾವಾಗ್ಲು ಇಂಗೇ ಇರೋಕಾತದ? ಗಿಡ ಕಡದ್ರೆ ತಿರಗಾ ಚಿಗರ್ತೇತೆ....ಮಳೆ ಬತ್ತದೆ....ಬರಾಕಿಲ್ಲಾ ಅನ್ನೋಕಾದಾತಾ? ಬತ್ತದೆ ಕಣ್ರುಪೋ ಬಂದೇ ಬತ್ತದೆ...." ಎನ್ನುವಲ್ಲಿ ಮತ್ತು ಕೊನೆಯಲ್ಲಿ ಹೇಳುವ ನಿಮ್ಮ ಮಾತು ನಿಮ್ಮ ಸಮನ್ವಯ ದೃಷ್ಟಿ ಯನ್ನು ಬಾಳಿನಲ್ಲಿ ಹುಡಿಯಾಗಿ ಹದಗೊಂಡ ಸ್ಥಿತಿಯನ್ನು ಹೇಳುತ್ತದೆ. "ದಯವಿಟ್ಟು ನನ್ನನ್ನು ಬಡವರ ಬಳಿ ಮಣ್ಣಿನಲ್ಲಿರಿಸಬೇಡಿ. ನನ್ನ ಮನಶ್ಯಾಂತಿ ಅವರ ಗೋಳಾಟ ದಿಂದ ಭಂಗ ಬಂದೀತು. ಹಾಗೆಯೇ ಶ್ರೀಮಂತರಿರುವಲ್ಲಿ ಮಾಡಬೇಡಿ....ಅವರ ಜೀವನ ಕ್ರಮದಿಂದ ನನಗೆ ಉಸಿರುಕಟ್ಟೀತು...." ○

ರಂಗಮ್ಮನ ವಠಾರ

—ಡಿ. ರಘುನಾಥ ರಾವ್

ನಿರಂಜನರ ಸಾಮಾಜಿಕ ಕಾದಂಬರಿಗಳಲ್ಲಿ ನನಗೆ ತುಂಬ ಇಷ್ಟವಾಗಿರುವ ಕಾದಂಬರಿ 'ರಂಗಮ್ಮನ ವಠಾರ'. ಅದು ಅವರ ಉತ್ತಮ ಕೃತಿಗಳಲ್ಲಿ ಒಂದೆಂಬುದರಲ್ಲಿ ಅನುಮಾನವಿಲ್ಲ. 'ರಂಗಮ್ಮನ ವಠಾರ'ದ ವಿಶೇಷತೆಯನ್ನು ಗುರುತಿಸಬೇಕಾದರೆ ನಿರಂಜನರ ಇತರ ಸಾಮಾಜಿಕ ಕಾದಂಬರಿಗಳ ಜತೆ ಹೋಲಿಸಿ ನೋಡಬೇಕಾಗುತ್ತದೆ.

ನಿರಂಜನರ ಮೊದಲ (ಸಾಮಾಜಿಕ) ಕಾದಂಬರಿ 'ವಿಮೋಚನೆ' ಪ್ರಕಟ ವಾದದ್ದು ೧೯೫೩ರಲ್ಲಿ. ೧೯೪೩ರ ಸುಮಾರಿಗೆ ಹುಟ್ಟಿದ ಪ್ರಗತಿಶೀಲ ಚಳುವಳಿ ೧೯೪೮ರ ಹೊತ್ತಿಗೆ ತನ್ನ ಕಾವನ್ನು ಕಳೆದುಕೊಂಡಿತ್ತು. ನವ್ಯ ತನ್ನ ಕಣ್ಣು - ಮೂಗು ಗಳನ್ನು ಪಡೆದು ಕೊಳ್ಳುತ್ತಿದ್ದ ಕಾಲದಲ್ಲಿ ಪ್ರಗತಿಶೀಲ ಪಂಥದ ಪ್ರಮುಖ ಕಾದಂಬರಿಕಾರ ನಿರಂಜನ ತಮ್ಮ ಕಾದಂಬರಿಗಳನ್ನು ಬರೆಯಲು ತೊಡಗಿದರು. ೧೯೫೦ರಿಂದ ಮುಂದೆ

ನವ್ಯ ಪಂಥ ಪ್ರಬಲವಾಗಿ ಬೆಳೆಯುತ್ತಾ ಹೋದದ್ದರಿಂದ ತ.ರಾ.ಸು., ಬಸವರಾಜ ಕಟ್ಟೀಮನಿ ಮತ್ತು ನಿರಂಜನರಂಥ ಒಳ್ಳೆಯ ಪ್ರಗತಿಶೀಲ ಲೇಖಕರ ಕೃತಿಗಳು ವಿಮರ್ಶಕರ ಗಮನಕ್ಕೆ ಬರಲಿಲ್ಲ. 'ರಂಗಮ್ಮನ ವಠಾರ' ಮೊದಲು ಪ್ರಕಟವಾದದ್ದು ಗಳಲ್ಲಿ. ಹೊಸವಸ್ತು - ವಸ್ತುವನ್ನು ನೋಡುವ ದೃಷ್ಟಿ, ವಾಸ್ತವತೆ ಮತ್ತು ಕಲ್ಪನೆಗಳ ಹದ ಹೊಂದಾಣಿಕೆ, ಬದುಕಿನ ಬಗೆಗಿನ ಪ್ರೀತಿ; ಮಾನವೀಯ ದೃಷ್ಟಿ ಕೋನ; ಅಚ್ಚುಕಟ್ಟಾದ - ಬಿಗಿಯಾದ ಬಂಧ; ತಾಂತ್ರಿಕ ಕುಶಲತೆ, ಭಾಷೆಯ ಬಳಕೆಯಲ್ಲಿ ಅನ್ಯ ಪ್ರಗತಿಶೀಲರಲ್ಲಿ ಕಾಣಿಸದ ಸಂಯಮ - ಮಿತಿ; ಒಟ್ಟಿನಲ್ಲಿ ತಮ್ಮ ಅನುಭವವನ್ನು ಕಲೆಯಾಗಿಸುವುದರ ಕಡೆಗೆ ಇರುವ ಕಾಳಜಿ ಮುಂತಾದುವುಗಳಿಂದಾಗಿ ಪ್ರಗತಿಶೀಲರಲ್ಲಿ ನಿರಂಜನರು ಗಮನಾರ್ಹರಾಗುತ್ತಾರೆ.

ಬಡತನ, ಶೋಷಣೆ, ಅವಮಾನ, ನೋವು ಮುಂತಾದುವುಗಳ ಸ್ವಾನುಭವದ ಅಭಾವ; ಮಾನವ ಸಂಬಂಧಗಳ ಹಿಂದೆ ಕೆಲಸ ಮಾಡುತ್ತಿರುವ ಶಕ್ತಿಗಳ ಸರಿಯಾದ ತಿಳುವಳಿಕೆಯ ಕೊರತೆ; ಸಮಾಜವನ್ನು ನಿಯಂತ್ರಿಸುತ್ತಿರುವ ಹಣ - ಆಸ್ತಿಯ ಸೂಕ್ಷ್ಮಗಳ ಬಗೆಗೆ ಖಚಿತ ತಿಳುವಳಿಕೆಯ ಅಭಾವ - ಇವುಗಳಿಂದಾಗಿ ಪ್ರಗತಿಶೀಲರ ಕೃತಿಗಳ ಹೂರಣ ಹಗುರ ಅಥವಾ ಟೊಳ್ಳಾಗುವಂತಾಯಿತು. ವಸ್ತು ಬೇರೆಯಾದರೂ ದೃಷ್ಟಿ ನವೋದಯದ್ದೇ. ಭಾವುಕತೆ ಮತ್ತು ಉತ್ಸಾಹದಿಂದಾಗಿ ಪ್ರಗತಿಶೀಲರ ಅಭಿವ್ಯಕ್ತಿ ಅನವಶ್ಯಕ ಆರ್ಭಟ, ಚೀರಾಟ, ಅಬ್ಬರದ್ದಾಯಿತು. ಅವರ ಕೃತಿಗಳು ಸುಲಭವಾಗಿ ಭಾವಸರನಶತೆಗೆ ಗುರಿಯಾಗಿರುವುದೂ ಇದೇ ಕಾರಣದಿಂದ.

ಈ ಹಿನ್ನೆಲೆಯಲ್ಲಿ ನಿರಂಜನ ಇತರರಿಂದ ಬೇರೆಯಾಗುತ್ತಾರೆ. ಬಡತನ - ಅದರಿಂದಾಗಿ ವ್ಯಕ್ತಿ ಅನುಭವಿಸಬೇಕಾಗಿ ಬರುವ ನೋವು - ಅವಮಾನ - ಹಿಂಸೆ - ಶೋಷಣೆ ಮುಂತಾದುವುಗಳ ನೇರ ಅನುಭವ ನಿರಂಜನರಿಗಿದೆ. ಸಮತಾವಾದಿ ಸಿದ್ಧಾಂತಗಳು; ಮಾನವತಾವಾದ; ಹೋರಾಟದಲ್ಲಿ - ಭವಿಷ್ಯದಲ್ಲಿ ನಂಬುಗೆ; ಸುಂದರ ಬದುಕಿನ ಕನಸು - ಮುಂತಾದುವು ಅವರ ಪ್ರಜ್ಞೆಯನ್ನು ರೂಪಿಸಿವೆ. ವ್ಯಾಪಕ ವಾದ ಮತ್ತು ಆಳವಾದ ಅಭ್ಯಾಸ ಅವರು ಅನುಭವವನ್ನು ಸರಿಯಾಗಿ ಅರ್ಥೈಸಿ ಕೊಳ್ಳಲು ಸಹಾಯ ಮಾಡಿವೆ - 'ವಿಮೋಚನೆ', 'ರಂಗಮ್ಮನ ವಠಾರ', 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ' ಈ ದೃಷ್ಟಿಯಿಂದ ಗಮನಾರ್ಹವಾಗಿವೆ.

ಶೋಷಿತರ, ಅಸಹಾಯಕರ, ಸ್ತ್ರೀಯರ ಪರವಾದ ದನಿ ನಿರಂಜನರದು. ವಾಸ್ತವದ ಅರಿವಿನ ಜತೆಗೇ ಭವಿಷ್ಯದ ಬಗೆಗಿನ ಭರವಸೆಯನ್ನು ಕಳೆದುಕೊಳ್ಳುವುದಿಲ್ಲ. ವಾಸ್ತವ ಮತ್ತು ಕಲ್ಪನೆಗಳ ಸಂಯೋಜನೆ 'ರಂಗಮ್ಮನ ವಠಾರ'ದಂಥ ಕಾದಂಬರಿ ಗಳಲ್ಲಿ ಒಂದು ಹದಕ್ಕೆ ಬಂದಿರುವುದನ್ನು ಕಾಣಬಹುದು. ನವುರಾದ ಹಾಸ್ಯ ಮತ್ತು

ವಾಸ್ತವ ಪ್ರಜ್ಞೆ - 'ರಂಗಮ್ಮನ ವಠಾರ'ದಂಥ ಕಾದಂಬರಿಗಳು ಅತಿ ಭಾವುಕವಾಗದಂತೆ ನಿಯಂತ್ರಿಸಿವೆ.ಸರ್ವೋದಯದ ಭಾವುಕತೆ ಮತ್ತು ಪ್ರಗತಿಶೀಲರ ವೈಚಾರಿಕತೆಯಿಂದಾಗಿ ಅವರ ಕಾದಂಬರಿಗಳಿಗೆ ಒಂದು ಬನಿ ಬಂದಿದೆ. ನಿರಂಜನರು ಪ್ರಗತಿಶೀಲ ಸಾಹಿತ್ಯದ ಧೀಮಂತ ಮತ್ತು ಆರೋಗ್ಯಕರ ದನಿಯಾಗಿದ್ದಾರೆ.

'ರಂಗಮ್ಮನ ವಠಾರ' ನಿಧಾನವಾಗಿ ಬೆಳೆಯುತ್ತದೆ. ಅವರ ಅತ್ಯುತ್ತಮ ಕಾದಂಬರಿ 'ಮೃತ್ಯುಂಜಯ'ವೂ ಕೂಡ ಬೇಸರ ತರಿಸುವಷ್ಟು ನಿಧಾನಗತಿಯನ್ನು ಪಡೆದಿದೆ. ಆದರೆ, ವಠಾರ ಮತ್ತು ಚಿರಸ್ಮರಣೆಗಳು ಚುರುಕಾಗಿ ಸಾಗುತ್ತವೆ. 'ರಂಗಮ್ಮನ ವಠಾರ' ಅಬ್ಬರವಿಲ್ಲದೆ ಬೆಳೆಯುವುದನ್ನು ಗುರುತಿಸಬೇಕಾಗುತ್ತದೆ. ದಕ್ಷಿಣ ಕನ್ನಡದವರಾದರೂ ಅವರ ಕಾದಂಬರಿಗಳ ನಿರೂಪಣೆಯ ಮತ್ತು ಸಂಭಾಷಣೆಯ ಭಾಷೆ ಮೈಸೂರಿನದು. ನಯಗೊಳಿಸಿದ, ಅಚ್ಚುಕಟ್ಟಾದ ಭಾಷೆ ಅವರದು. 'ವಠಾರ' ಕಾದಂಬರಿಯ ನಿರೂಪಣೆಯಲ್ಲೂ ವಸ್ತುವನ್ನು ಆಕರ್ಷಕ ವಾಗಿ ಹೇಳುವುದರ ಮೇಲೆ ಒತ್ತು ಬಿದ್ದಿದೆ ಎನಿಸುತ್ತದೆ. ಹಾಗಿದ್ದರೂ - 'ವಠಾರ'ದ ಭಾಷೆ ಎಲ್ಲೂ ಅಸಹಜವಾಗಿಲ್ಲ.

ದೊಡ್ಡ ನಗರದ ಬ್ರಾಹ್ಮಣ ಕೆಳಮಧ್ಯಮ ವರ್ಗದ - ವಠಾರವೊಂದರ ವಾಸ್ತವ ಚಿತ್ರ 'ರಂಗಮ್ಮನ ವಠಾರ'ದಲ್ಲಿದೆ. ವಠಾರದಲ್ಲಿ ವಾಸಿಸುವ ವಠಾರದ ಒಡತಿ ರಂಗಮ್ಮನಿಂದ ಹಿಡಿದು ಎಲ್ಲರೂ ಬಡವರೇ; ಸಾಮಾನ್ಯರೇ. ಎರಡು ತುಂಡು ಸೌದೆ ಕದ್ದು ಅವಮಾನಿತಳಾಗುವ ನಾರಾಯಣಿ, ಒಂಟಿ ಎತ್ತಿನ ಗಾಡಿಯಲ್ಲಿ ಶಂಕರನಾರಾಯಣಯ್ಯ ತಮ್ಮ ಮನೆಯ ಸಾಮಾನುಗಳನ್ನು ತರುವುದು, ಚಂಪಾವತಿ ಒಂದು ಪಾವು ಹಾಲನ್ನು ವರ್ತನೆಗೆ ಗುರುತುಮಾಡಿಕೊಳ್ಳುವುದು, ಲಕ್ಷ್ಮೀ ನಾರಾಯಣಯ್ಯನ ಹೆಂಡತಿಗೆ ಒಂದು ಫೋಟೋವನ್ನು ಕೂಡ ತೆಗೆಸಿಕೊಳ್ಳಲಾಗ ದಿರುವುದು - ಇಂಥಾ ಅನೇಕ ಸಣ್ಣ ಪುಟ್ಟ ವಿವರಗಳ ಮೂಲಕ ವಠಾರದ ಹದಿನಾಲ್ಕು ಸಂಸಾರಗಳ ಆರ್ಥಿಕ ಸ್ಥಿತಿಗತಿಯನ್ನು ಕಾದಂಬರಿ ತಿಳಿಸುತ್ತದೆ. ವಠಾರದ ಎರಡು ಸಾಲಿನ ಮನೆಗಳ ನಡುವಿನ ಓಣಿಯ ಅಗಲ ಕೇವಲ ಎರಡಡಿ ಮಾತ್ರ. ಮನೆಗಳು 'ನಡುಹಗಲಲ್ಲೂ ಕತ್ತಲಾಗಿಯೇ ಕಾಣಿಸುತ್ತಿದ್ದ' - 'ಗೂಡು' ಗಳಾಗಿವೆ. ರಂಗಮ್ಮನ ಮನೆಯೂ ಒಂದು 'ಗೂಡೇ'. ಕಾದಂಬರಿಯ ಉದ್ದಕ್ಕೂ ವಠಾರದ ಮನೆಗಳನ್ನು ಕಾದಂಬರಿಕಾರರು 'ಬಿಲ' - 'ಗೂಡು' ಎಂದೇ ಕರೆಯು ತ್ತಾರೆ. ವಠಾರದ ಕಕ್ಕಸುಗಳು, ಬಚ್ಚಲು ಮನೆಗಳು - ಅವುಗಳ ಕೊಚ್ಚೆ, ಮಳೆಗಾಲ ದಲ್ಲಿ ಥಬಗುಡಿಸಿ ಸೋರುವ ಮನೆಗಳು, ನೆಗಡಿ - ಕೆಮ್ಮು - ಜ್ವರ ಮುಂತಾದುವು ಗಳು ವಠಾರದ ಸಂಸಾರಗಳ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತವೆ.

ವಠಾರದ ಸಂಸಾರಗಳ ಆರ್ಥಿಕ - ಸಾಮಾಜಿಕ ಹಿನ್ನೆಲೆ ಒಂದೇ ಆಗಿದ್ದರೂ. ಎಲ್ಲರ ವ್ಯಕ್ತಿತ್ವ ಒಂದೇ ರೀತಿಯಲ್ಲಿಲ್ಲ. ವ್ಯವಹಾರ ಕುಶಲಿಯಾದರೂ ಮನುಷ್ಯತ್ವ ವನ್ನು ಕಳೆದುಕೊಳ್ಳದಿರುವ ರಂಗಮ್ಮ; ಬಡತನದಲ್ಲೂ ಬದುಕಿನ ಸೊಗಸನ್ನು ಸವಿ ಯುವ ರಸಿಕ ದಂಪತಿಗಳಾದ ಶಂಕರನಾರಾಯಣಯ್ಯ - ಚಂಪಾ; ಅರಸಿಕ ನಾಗರಾಜ ರಾಯ; ಚಂಪಾಳ ಸಂಗೀತವನ್ನು ಕೇಳುತ್ತಾ ಕುಳಿತಿದ್ದ ಹೆಂಡತಿಯನ್ನು ಹೊಡೆಯುವ ಪೊಲೀಸ್ ಶಿವಸ್ವಾಮಿ; ಯೋಚನೆ ಮಾಡುವ ಶಕ್ತಿಯಿರುವ ಜಯರಾಮು; ಇರುವು ದರಲ್ಲಿಯೇ ಸುಖಿಗಳಾಗಿರುವುದಕ್ಕೆ ಪ್ರಯತ್ನಿಸುವ ಕಾಮಾಕ್ಷಿ - ನಾರಾಯಣರು; ಲವಲವಿಕೆಯಿಂದ ವಠಾರದ ತುಂಬ ಓಡಿಯಾಡುವ ರಾಧಾ - ಅಹಲ್ಯಾ; ಗಂಡನ ಅವಜ್ಞೆಗೆ ಗುರಿಯಾಗಿರುವ ವೆಂಕಟಸುಬ್ಬಮ್ಮ - ಮುಂತಾದವರು ವಠಾರದ ವೈವಿಧ್ಯಕ್ಕೆ ಸಾಕ್ಷಿಯಾಗಿದ್ದಾರೆ. ಕಾದಂಬರಿಯ ಉಪ್ಪಕ್ಕೂ ಬರುವ ಎಲ್ಲ ಪಾತ್ರಗಳೂ ಕಣ್ಣು ಮೂಗುಗಳನ್ನು ಪಡೆದುಕೊಳ್ಳಲಾಗಿಲ್ಲ. ರಂಗಮ್ಮ, ಜಯರಾಮು, ಶಂಕರ ನಾರಾಯಣಯ್ಯ - ಚಂಪಾ ಇವರ ಮೇಲೆ ಕಾದಂಬರಿ ತನ್ನ ಹೆಚ್ಚಿನ ಗಮನವನ್ನು ಹರಿಸಿದೆ. ಅಹಲ್ಯಾ, ರಾಧಾ-ಚಂದ್ರಶೇಖರರನ್ನೂ ಕಾದಂಬರಿ ಗಮನಿಸಿದೆ. ಉಳಿದ ಪಾತ್ರಗಳು - ಸ್ಕೆಚ್ ಆಗಿವೆ. ವಠಾರದ ಬದುಕಿನ ಚಿತ್ರಣ ಈ ಕಾದಂಬರಿಯ ಮುಖ್ಯ - ಉದ್ದೇಶವಾಗಿರುವುದರಿಂದ ಹೀಗಾಗುವುದು ಅನಿವಾರ್ಯ. ಕಾದಂಬರಿಯ ಮೊದಲ ಭಾಗದಲ್ಲಿ ಜಯರಾಮು ಮತ್ತು ರಂಗಮ್ಮ; ಮುಂದಿನ ಭಾಗದಲ್ಲಿ ಶಂಕರನಾರಾಯಣಯ್ಯ ದಂಪತಿಗಳು ಕಾದಂಬರಿಯನ್ನು ಒಂದು ಸೂತ್ರದಲ್ಲಿ ಬಂಧಿಸಿಡಲು ನೆರವಾಗು ತ್ತಾರೆ.

'ರಂಗಮ್ಮನ ವಠಾರ' ಕಾದಂಬರಿಯ ಏಕ ಸೂತ್ರಕ್ಕೆ ಕಾರಣವಾಗಿರುವ ಇನ್ನೊಂದು ಅಂಶವನ್ನು ಇಲ್ಲಿಯೇ ಹೇಳಿಬಿಡಬಹುದು. ವಠಾರ - ಒಂದು ಜೀವಂತ ಪಾತ್ರವಾಗಿ ಬಂದಿದೆ. ರಂಗಮ್ಮ, ಶಂಕರನಾರಾಯಣಯ್ಯ - ಜಯರಾಮು-ಇವರಲ್ಲಿ ಯಾರೂ ಮುಖ್ಯರಾಗುವುದಿಲ್ಲ. ವಠಾರಕ್ಕೆ ಒಂದು ಜೀವಂತ ವ್ಯಕ್ತಿತ್ವ ಬಂದಿದೆ. ನಾರಾಯಣಿ ಸತ್ತಾಗ ಇಡೀ ವಠಾರ ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಿ ಅನುಕಂಪ ಸೂಚಿಸುವುದನ್ನು ಕಾದಂಬರಿಯ ಪ್ರಾರಂಭದಲ್ಲಿಯೇ ನಿರಂಜನರು ತಿಳಿಸುತ್ತಾರೆ. ಮನೆ ನೋಡುವುದಕ್ಕೆ ವಠಾರಕ್ಕೆ ಶಂಕರನಾರಾಯಣಯ್ಯ ಬಂದಾಗ ಇಡೀ ವಠಾರ ಕುತೂಹಲದಿಂದ - ತುದಿಗಾಲ ಮೇಲೆ ನಿಲ್ಲುವುದು; ವೆಂಕಟಸುಬ್ಬಮ್ಮನ ಗಂಡ ಬಂದು ಹೋದಾಗ ವಠಾರ ಜೀವಂತವಾದದ್ದು; ಚಂಪಾಳ ಸಂಗೀತವನ್ನು ವಠಾರಕ್ಕೆ ವಠಾರವೇ ಬಂದು ಕೇಳುವುದು-ಮುಂತಾದುವು ವಠಾರಕ್ಕೆ ಕಾದಂಬರಿಯಲ್ಲಿ ಜೀವಂತವಾದ ಅಸ್ತಿತ್ವವಿದೆ ಎಂಬುದನ್ನು ತಿಳಿಸುತ್ತವೆ. ಕಾದಂಬರಿಯ ಅಚ್ಚುಕಟ್ಟಿಗೆ ಇದು ಮುಖ್ಯ ಕಾರಣವಾಗಿದೆ.

ನಾರಾಯಣಿಯ ಸಾವಿನಿಂದ ಪ್ರಾರಂಭವಾದ ಕಾದಂಬರಿ ಚಂಪಾಳ ಸುಖ ಪ್ರಸವದಲ್ಲಿ ಮುಕ್ತಾಯವಾಗುತ್ತದೆ. ಒಂದು ಸಾವು ಮತ್ತು ಹುಟ್ಟಿನ ನಡುವಿನ ಒಂದು ವರ್ಷದ ವಠಾರದ ಬದುಕನ್ನು ಕಾದಂಬರಿ ಬಿಗಿಯಾಗಿ ಚಿತ್ರಿಸಿದೆ. ಹಾಗೆಯೇ, ಕಾದಂಬರಿ ಬೇಸಗೆಯಲ್ಲಿ ಪ್ರಾರಂಭವಾಗಿ ಮಳೆಗಾಲ, ಚಳಿಗಾಲ ಕಳೆದು ಮತ್ತೆ ಬೇಸಗೆ ಬಂದಾಗ ಮುಗಿಯುತ್ತದೆ. ಯೋಜಿತ ರೀತಿಯಲ್ಲಿ ಕಾದಂಬರಿಯನ್ನು ಬೆಳೆಸುತ್ತಿದ್ದಾರೆಂದೆನ್ನಿಸುವುದಿಲ್ಲವೇ?

ವಠಾರದ ಒಳಗಿನ ಜೀವನಚಿತ್ರಣದ ಕಡೆಗೇ ಕಾದಂಬರಿಯ ಲಕ್ಷ್ಯವಿರುವುದರಿಂದ ಬಂಧದ ಬಿಗಿ ಬಂದಿರುವುದೇನೋ ನಿಜ. ಆದರೆ, ವಠಾರದ ಹೊರಗಿನ ವಿಶಾಲ ಪ್ರಪಂಚದ ವಿಷಯ ಈ ಕಾದಂಬರಿಯಲ್ಲಿ ಬರುವುದೇ ಇಲ್ಲ. ವೆಂಕಟಸುಬ್ಬಮ್ಮನಗಂಡ ಮತ್ತು ದೇವಯ್ಯನ ತಂದೆ ವಠಾರದೊಳಗೆ ಬಂದು ಹೋಗುತ್ತಾರೆ; ಅದೂ ಸ್ವಲ್ಪ ಸಮಯ ಮಾತ್ರ. ಹೊರಗಡೆ ಕೆಲಸ ಮಾಡುತ್ತಿರುವ ವಠಾರದ ಗಂಡಸರ - ಕೆಲಸದ ಸ್ಥಳ, ಸ್ವರೂಪ, ಅಲ್ಲಿನ ಸ್ಥಿತಿಗತಿ, ಮಾಲೀಕರು - ಅವರ ರೀತಿ ನೀತಿಗಳು - ಮುಂತಾದುವುಗಳ ಬಗ್ಗೆ ಕಾದಂಬರಿ ಏನನ್ನೂ ಹೇಳುವುದಿಲ್ಲ. ವಠಾರದ ಹೆಂಗಸರು ಒಂದೆರಡು ಬಾರಿ ಮಾತ್ರ ವಠಾರದಿಂದ ಹೊರಗೆ ಹೋಗುತ್ತಾರೆ. ವಠಾರದ ಹೊರಗಿನ ಸಂಗತಿಗಳು ಆಗೀಗ ಬಂದರೂ ವಠಾರದ ವಿದ್ಯಮಾನಗಳನ್ನು ಹೈಲೈಟ್ ಮಾಡುವುದಕ್ಕೆ ಬರುತ್ತವೆ. ಮದುವೆಯಾಗಿ ವಠಾರದಿಂದ ಹೋದ ಮೇಲೆ ಅಹಲ್ಯೆಯ ಬಗ್ಗೆ ಕಾದಂಬರಿ ಮೌನವಾಗಿಬಿಡುತ್ತದೆ. ರಂಗಮ್ಮನ ಮಕ್ಕಳು ಮೊಮ್ಮಕ್ಕಳು ಯಾರೂ ಕಾದಂಬರಿಯಲ್ಲಿ ಬರುವುದೇ ಇಲ್ಲ. ಈ ಸಂಯಮ ಕೇಂದ್ರೀಕರಣ ಕಾದಂಬರಿಯ ಬಂಧದ ಅಚ್ಚುಕಟ್ಟಿಗೆ ಕಾರಣವಾಗಿದೆ, ನಿಜ. ಇದೇ ಕಾರಣದಿಂದ ವಠಾರದ ಗಂಡಸರ ಅಸಹಾಯಕತೆ, ಆತಂಕ, ನೋವು, ಅವಮಾನ, ಅಭದ್ರತೆ ಮುಂತಾದುವುಗಳನ್ನು ಕಾದಂಬರಿ ಒಳಗೊಳ್ಳಲಾಗಿಲ್ಲ. ಕಾದಂಬರಿ ಇನ್ನಷ್ಟು ಆಳ - ಅಗಲಗಳನ್ನೂ ಪಡೆದುಕೊಳ್ಳಲಾಗಲಿಲ್ಲ.

ಜಯರಾಮು, ಶಂಕರನಾರಾಯಣಯ್ಯ ಮತ್ತು ಚಂದ್ರಶೇಖರಯ್ಯ ಇವರನ್ನು ಬಿಟ್ಟರೆ ಉಳಿದ ಗಂಡಸರಿಗೆ ಈ ಕಾದಂಬರಿಯಲ್ಲಿ ದನಿಯೇ ಇಲ್ಲ. ಜಯರಾಮು ನಾವರೂ ವಠಾರದ ಬಡತನದ ಬಗ್ಗೆ ಯೋಚಿಸುತ್ತಿರುತ್ತಾನೆ. ಶಂಕರನಾರಾಯಣಯ್ಯ ಕೇವಲ ರಸಿಕಪತಿಯಾಗಿ ಮಾತ್ರ ಕಾಣಿಸಿಕೊಳ್ಳುತ್ತಾನೆ. ಹಾಗಾಗಿ, ವಠಾರದಲ್ಲಿ ದಿನವಿಡೀ ಬದುಕುವ ಹೆಂಗಸರು ಈ ಕಾದಂಬರಿಯಲ್ಲಿ ಮುಖ್ಯರಾಗುತ್ತಾರೆ. ಈ ಕಾದಂಬರಿಯ ದೃಷ್ಟಿಯಿಂದ ಅದು ಸಹಜವೇ. ಅವರ ಇತರ ಕಾದಂಬರಿಗಳಲ್ಲೂ ಹೆಂಗಸರು ಪ್ರಮುಖವಾಗಿದ್ದಾರೆ. ಅಸಹಾಯಕ, ಶೋಷಿತ, ಅವಮಾನಿತ ಹೆಂಗಸರನ್ನು ಹೆಚ್ಚು ಉದಾರವಾಗಿ - ಪ್ರೀತಿಯಿಂದ ಚಿತ್ರಿಸುತ್ತಾರೆ. ನಿರಂಜನರ ಹೆಚ್ಚಿನ

ಕಾದಂಬರಿಗಳಲ್ಲಿ ಪುರುಷರಿಗಿಂತ - ಸ್ತ್ರೀಯರೇ ಹೆಚ್ಚು ಪ್ರಭಾವಿಯಾಗಿ ಚಿತ್ರಿತವಾಗಿದ್ದಾರೆ. ಹೆಂಗಸರ ಬಗೆಗಿನ ಈ 'ಅನುಕಂಪ' ತುಸು ಹೆಚ್ಚಾದರೂ ಸಾಕು ಅದು ಭಾವಪರವಶತೆಯತ್ತ ಲೇಖಕರನ್ನು ತಳ್ಳುತ್ತಿರುತ್ತದೆ. ('ಅಭಯ' - 'ಬನಶಂಕರಿ' - ಮುಂ.) ಸ್ತ್ರೀಯರನ್ನೂ ವೈಭವೀಕರಿಸುತ್ತಿದ್ದಾರೇನೋ ಎಂಬ ಅನುಮಾನ ಬರುತ್ತದೆ. ವಸ್ತುವನ್ನೂ ಪರಿಭಾವಿಸುವ ದೃಷ್ಟಿಯೇ ಅಂಥಾ ಕಡೆ ರೊಮ್ಯಾಂಟಿಕ್ ಆಗಿದೆಯೇನೋ ಎನ್ನಿಸುತ್ತದೆ. ಆದರೆ, ವಠಾರದ ಸ್ತ್ರೀ ಪಾತ್ರಗಳು ಈ ಮಿತಿಯನ್ನು ಮೀರಿ ಹೆಚ್ಚು ಜೀವಂತ ಮತ್ತು ಅಧಿಕೃತವಾಗಿವೆ. ಬಡವರ ಸಣ್ಣತನ, ಒಣ ಅಹಂಕಾರ, ಹೊಟ್ಟೆಕಿಚ್ಚು ಮುಂತಾದ ದೌರ್ಬಲ್ಯಗಳನ್ನು ಕಾದಂಬರಿ ಮುಚ್ಚುಮರೆ ಮಾಡದೆ ಚಿತ್ರಿಸಿದೆ. ಕಾದಂಬರಿಯ ಪ್ರಾರಂಭದಲ್ಲಿಯೇ ಬರುವ ನಾರಾಯಣಿಯ ಪಾತ್ರಚಿತ್ರಣವೇ ಅದಕ್ಕೆ ಸಾಕ್ಷಿ. ಅವಳ ಬಗ್ಗೆ, ಅವಳ ಪರಿಸ್ಥಿತಿಯ ಬಗ್ಗೆ ಅನುಕಂಪೆಯಿದ್ದರೂ ಅವಳ ದೌರ್ಬಲ್ಯಗಳನ್ನು ಕಾದಂಬರಿ ಮರೆಯುವುದಿಲ್ಲ. ಅವಳ ಒಳ್ಳೆಯ-ಕೆಟ್ಟ ಗುಣಗಳನ್ನೂ ಒಟ್ಟಿಗೆ ಚಿತ್ರಿಸಿದೆ.

ಮೇಲಿನ ಹಿನ್ನೆಲೆಯಲ್ಲಿ ರಂಗಮ್ಮನ ಪಾತ್ರವನ್ನು ಸ್ವಲ್ಪ ವಿವರವಾಗಿ ನೋಡಬಹುದು. ರಂಗಮ್ಮ ವಠಾರದ ಒಡತಿಯಾಗಿದ್ದರೂ ಶೋಷಕಳೆಂಬಂತೆ ಚಿತ್ರಿತವಾಗಿಲ್ಲ. ಬೆನ್ನು ಬಾಗಿ, ಊರುಗೋಲು ಹಿಡಿದು ನಡೆದಾಡುವ, ಒಂಟಿಯಾಗಿರುವ ಮುದುಕಿ ರಂಗಮ್ಮ ಈ ಕಾದಂಬರಿಯ ಮುಖ್ಯ ಪಾತ್ರವಾಗಿರುವುದನ್ನು ಗಮನಿಸಬೇಕಾಗುತ್ತದೆ. ಸ್ವಾರ್ಥ, ಲೋಭ, ಜಿಪುಣತನ, ಜಾಣತನ ಇದ್ದರೂ ರಂಗಮ್ಮ ಅಮಾನವೀಯವಾಗುವುದಿಲ್ಲ. ನಾರಾಯಣಿಯ ಗಂಡನನ್ನು ಮನೆ ಬಿಡಿಸುವಾಗ ಒರಟಾಗಿ ವರ್ತಿಸುತ್ತಾಳೆ, ನಿಜ. ಮನೆ ಬಿಡಲು ಹೇಳುವಾಗ-ಹಿಂದೇಟು ಹಾಕುವ, ಒದ್ದಾಡುವ ರಂಗಮ್ಮನ ಮನಃಸ್ಥಿತಿಯನ್ನೂ ಕಾದಂಬರಿ ಚಿತ್ರಿಸಿದೆ. ನಾರಾಯಣಿಯ ಗಂಡ ಕೊಡಬೇಕಾಗಿರುವ ಬಾಡಿಗೆಯನ್ನು ಬಿಡಲು ತಯಾರಾದರೂ, ಅನುಕೂಲವಾದಾಗ ಹಣವನ್ನು ಕೊಡು ಎಂದು ಹೇಳುವುದನ್ನು ಮರೆಯುವುದಿಲ್ಲ. ಗೊಣಗುತ್ತಲಾದರೂ ನಾರಾಯಣಿಯ ಶವಸಂಸ್ಕಾರಕ್ಕೆ ಐದು ರೂಪಾಯಿ ಕೊಡುವುದು; ನಾರಾಯಣಿ ಸತ್ತದಿನ ಲೆಕ್ಕಾಚಾರ ಮಾಡದೆ ನೀರನ್ನು ಬಿಡುವುದು; ಭಿಕ್ಷುಕನಿಗೆ ಅನ್ನ ನೀಡುವುದು; ಅಹಲ್ಯೆಯ ನೆಂಟಸ್ತಿಕೆಗಾಗಿ ಪ್ರಯತ್ನಿಸಿ ಸೋತರೂ ರಾಧಾಳ ಬಗ್ಗೆ ಪ್ರಯತ್ನಿಸುವುದು - ಇವುಗಳು ರಂಗಮ್ಮನ ಮಾನವೀಯತೆಯನ್ನು ತಿಳಿಸುತ್ತವೆ. ಇದರ ಜತೆಗೇ ಕಾದಂಬರಿ ಅವಳ ಸ್ವಾರ್ಥ, ಜಿಪುಣತನ, ವ್ಯವಹಾರ ಕುಶಲತೆ, ಲೈಟು - ನೀರುಗಳನ್ನು ನಿಯಂತ್ರಿಸುವಿಕೆ, ಲೋಕಜ್ಞಾನ ಮುಂತಾದುವುಗಳನ್ನೂ ಹೇಳಿದೆ. ನಾರಾಯಣಿ ಇದ್ದ ಮನೆಗೆ ಸುಣ್ಣ ಹಚ್ಚಿಸಿ ಕೊಡಲು ಒಪ್ಪುವುದು; ನಾರಾಯಣಿ ಇದ್ದ ಮನೆಯನ್ನು ಕುಂಟುನೆಪ ಮಾಡಿ ರಾಧಾಳ ಮನೆಯವರಿಗೆ ಕೊಡದಿರುವುದು ಮುಂತಾದುವು ಅವಳ ವ್ಯವಹಾರ ಕುಶಲತೆಗೆ ಸಾಕ್ಷಿ. "ನಿನ್ನ ಹಾಗೆ ಸಪ್ಪಗಿದ್ದರೆ

ಜೇರೆ ಮದುವೆ ಮಾಡಿಕೊಳ್ಳದೇನು ಮಾಡಿಯಾರು?" ಎಂಬುದಾಗಿ ವೆಂಕಟ ಸುಬ್ಬಮ್ಮನ ಬಗ್ಗೆ ಮನಸ್ಸಿನಲ್ಲಿಯೇ ಅಂದುಕೊಳ್ಳುವುದು ಅವಳ - ಲೋಕಜ್ಞಾನಕ್ಕೆ ಉದಾಹರಣೆ. ಚಂದ್ರಶೇಖರಯ್ಯನನ್ನು ಮಾತನಾಡಲು ರಂಗಮ್ಮ ತನ್ನ ಮನೆಗೆ ಕರೆಸಿದಾಗ, ರಾಧಾ ಕಿಟಕಿಯ ಹಿಂದೆ ನಿಂತು ನೋಡುತ್ತಿರುವುದನ್ನು ಗಮನಿಸುವ ಸೂಕ್ಷ್ಮಗ್ರಾಹಿ: ರಂಗಮ್ಮನ ಪಾತ್ರಚಿತ್ರಣ ಏಕಮುಖಿಯಾಗಿಲ್ಲದಿರುವುದು ಮುಖ್ಯವಾಗಿದೆ.

ರಂಗಮ್ಮ ಹಣದ ವಿಷಯ ಬಂದಾಗ ಸ್ವಲ್ಪ ಒರಟಾಗಿ, ವ್ಯಾಪಹಾರಿಕವಾಗಿ ವರ್ತಿಸುತ್ತಾಳೆ. ಹಣದ ಪ್ರಭಾವ ಮತ್ತು ಶಕ್ತಿಯನ್ನು ಕಾದಂಬರಿ ಗುರುತಿಸಿದೆ. ನಾರಾಯಣಿ ವಠಾರದಲ್ಲಿ ಜಗಳಗಂಟಿಯಾಗಲು ಅವಳ ಆರ್ಥಿಕ ಪರಿಸ್ಥಿತಿಯೇ ಕಾರಣ. ರಂಗಮ್ಮನ ವರ್ತನೆಗೂ ಅವಳ ಆರ್ಥಿಕ ಸ್ಥಿತಿಯೇ ಕಾರಣವಾಗಿರುವುದನ್ನು ಕಾದಂಬರಿ ಸೂಚಿಸಿದೆ. ಜಯರಾಮು ರಂಗಮ್ಮನ ಬಗ್ಗೆ ಯೋಚಿಸುವ ಈ ಭಾಗವನ್ನು ನೋಡಿ: "ಹೇಗಿರುತ್ತಾರೆ ಮನುಷ್ಯರು! ಉದಾಹರಣೆಗೆ ರಂಗಮ್ಮ ಅವರಲ್ಲಿ ಜಯರಾಮು ಒಳ್ಳೆಯವೆಂದು ಭಾವಿಸಿದ್ದ, ಎಷ್ಟೋ ಗುಣಗಳಿದ್ದುವು, ಕೆಟ್ಟ ಗುಣಗಳೂ ಇದ್ದುವು....ಆದರೆ ರಂಗಮ್ಮ ವಯಸ್ಸಾದಂತೆ ಹೆಚ್ಚು ಹೆಚ್ಚು ಜಿಪುಣರಾಗುತ್ತಾ ಬಂದಿದ್ದರು. ಹಣ ಎಂದರೆ ಎಷ್ಟೊಂದು ಪ್ರೀತಿ ಅವರಿಗೆ! ಆ ನೀರು ಲೈಟುಗಳ ಲೆಕ್ಕಾಚಾರ."

ಹಣ ನಿಧಾನವಾಗಿ ನಮಗೆ ಗೊತ್ತಿಲ್ಲದಂತೆ ನಮ್ಮಲ್ಲಿ ಬದಲಾವಣೆಯನ್ನು ತರುತ್ತದೆಂಬುದನ್ನು ಕಾದಂಬರಿ ಸೂಚಿಸುವ ಪ್ರಯತ್ನ ಮಾಡಿದೆ. ನಾರಾಯಣಿ ಸತ್ತ ನಂತರ ಉರಿಯುತ್ತಿದ್ದ ದೀಪ ಆರಿ ಹೋದಾಗ ಮತ್ತೆ ಅದನ್ನು ಉರಿಸುವುದರಲ್ಲಿ ಯಾವ ಅರ್ಥವೂ ಇಲ್ಲವೆಂದು ನಾರಾಯಣಿಯ ಗಂಡ ತಿಳಿಯುವುದು; ಸತ್ತ ಮನೆಗೆ ಹಿಂದು ಮುಂದು ನೋಡದೆ ಶಂಕರನಾರಾಯಣಯ್ಯ ಬರಲು ಒಪ್ಪಿಕೊಳ್ಳುವುದು; ಸತ್ತ ಮನೆಗೆ ಹೋಗುವುದಕ್ಕೆ ಜಯರಾಮುವಿನ ತಾಯಿ ಅಂಜಿದರೂ ತಂದೆ ಈಗ ಅದನ್ನೆಲ್ಲ ನೋಡುತ್ತಾ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುವುದು - ರಾಧಾಳನ್ನು ಮೆಚ್ಚಿಕೊಂಡ ಚಂದ್ರಶೇಖರಯ್ಯ ಧೈರ್ಯವಾಗಿ ಅವಳನ್ನು ಮದುವೆಯಾಗಲು ಸಿದ್ಧವಾಗುವುದು - ಇಂಥಾ ಸಣ್ಣ ಪುಟ್ಟ ಅಂಶಗಳ ಮೂಲಕ ನಗರದ ಬದುಕು ನಿಧಾನವಾಗಿಯಾದರೂ ಬದಲಾಗುತ್ತಿರುವುದನ್ನು ಕಾದಂಬರಿ ದಾಖಲಿಸಿದೆ. ಈ ಬದಲಾವಣೆಯ ಹಿಂದೆ ಆರ್ಥಿಕ ಪರಿಸ್ಥಿತಿಯ ಪ್ರಭಾವವಿದೆ. ಆದರೆ, ಈ ಅಂಶ ಕಾದಂಬರಿಯ ಒಂದು ಗಟ್ಟಿ ಎಳೆಯಾಗಿ ಬಂದಿಲ್ಲದಿರುವುದು ಇದರ ಒಂದು ಮಿತಿಯಾಗಿದೆ.

ವಠಾರದ ವಾಸ್ತವಚಿತ್ರಣವೇ ಕಾದಂಬರಿಯ ಮುಖ್ಯ ಉದ್ದೇಶವಾಗಿದ್ದರೂ, ಬಡತನದಲ್ಲೂ ಉತ್ಸಾಹ - ಲವಲವಿಕೆ - ರಸಿಕತೆಯಿಂದ ಬದುಕುತ್ತಿರುವ ವಠಾರದ

ವ್ಯಕ್ತಿಗಳ ಮೇಲೆಯೇ ಕಾದಂಬರಿ ವಿಶೇಷ ಒತ್ತು ಹಾಕಿದೆ. ಸಂತೋಷ-ಸಂಭ್ರಮದ ಸನ್ನಿವೇಶಗಳನ್ನು ಕಾದಂಬರಿ ತುಂಬ ಉತ್ಸಾಹ - ಆತ್ಮೀಯತೆಯಿಂದ ಚಿತ್ರಿಸಿದೆ. ಈ ದೃಷ್ಟಿಯಿಂದ ಶಂಕರನಾರಾಯಣಯ್ಯ - ಚಂಪಾ, ರಾಧಾ ಮತ್ತು ಅಹಲ್ಯಾ - ಇವರ ಪಾತ್ರಗಳನ್ನು ನೋಡಬಹುದು. ರಾಧಾ - ಅಹಲ್ಯೆಯರ ಮುಗ್ಧತೆ, ಕುತೂಹಲ, ಉತ್ಸಾಹ, ಲವಲವಿಕೆಯನ್ನು ಕಾದಂಬರಿ ಸಮರ್ಥವಾಗಿ ಅಭಿವ್ಯಕ್ತಿಸಿದೆ. ಬಡತನದ ಬಿಸಿಲಲ್ಲಿ ಬೆಳೆಯುತ್ತಿರುವ ಈ ಎಳೆಯರ ಜೀವನೋತ್ಸಾಹ ಕಣ್ಣಿಗೆ ಕಟ್ಟುವಂತೆ ಕಾದಂಬರಿಯಲ್ಲಿ ಮೂಡಿದೆ. ಆದರೆ, ಚಿಕ್ಕ ಮಕ್ಕಳ ಗದ್ದಲ ಈ ಕಾದಂಬರಿಯಲ್ಲಿ ಕೇಳಿ ಬರದಿರುವುದು ಒಂದು ಸೋಜಿಗ.

ಬಡತನದ ಕಷ್ಟವನ್ನು, ಬದುಕಿನ ಗೋಳನ್ನು ರಸಿಕತೆ, ಸ್ನೇಹ, ಪ್ರೀತಿ ಮತ್ತು ಕಲೆಗಳ ಮೂಲಕ ಮೀರಲು ಕಾದಂಬರಿಯ ಕೆಲವು ಪಾತ್ರಗಳು ಪ್ರಯತ್ನಿಸುತ್ತವೆ. ಬಡತನದ ಗೋಳು, ಪರದಾಟ, ಕಾಹಿಲೆ, ನೋವು, ಕಷ್ಟ ಮುಂತಾದುವನ್ನು ಮಾತ್ರ ಈ ಕಾದಂಬರಿ ಹೇಳುವುದಿಲ್ಲ. ಬಡತನದಲ್ಲೂ ಬದುಕು ಸುಂದರವಾಗಿರಲು ಸಾಧ್ಯವೆಂಬುದನ್ನು ಕಾದಂಬರಿ ಸೂಚಿಸಲು ಪ್ರಯತ್ನಿಸಿದೆ. ಅಹಲ್ಯೆ-ಚಂಪಾವತಿಯರು ಹಾಡಿದ ಸಂದರ್ಭವನ್ನು ಈ ದೃಷ್ಟಿಯಿಂದ ಪರಿಶೀಲಿಸಿ ಅಹಲ್ಯಾ-ಓಡಿಹೋಗಿ ತನ್ನ ಗೆಳತಿ ರಾಧಾಳನ್ನು ಕರೆದುಕೊಂಡು ಬರುವುದು; ಇಡೀ ವಠಾರಕ್ಕೆ ವಠಾರವೇ ಚಂಪಾಳ ಮನೆಯಲ್ಲಿ ಜಮಾಯಿಸುವುದು; ಅಹಲ್ಯಾ-ರಾಧಾರ ಸಂಭ್ರಮ-ಸಂತೋಷ - ಮುಂತಾದುವನ್ನು ಗಮನಿಸಿ ಬದುಕಿನ ಮಾರ್ದವತೆಗೆ, ಸೊಗಸಿಗೆ ಇವು ಕಾರಣವಾಗುತ್ತವೆಂಬುದನ್ನು ಕಾದಂಬರಿ ಧ್ವನಿಸುತ್ತದೆ. ಆದರೆ, ಮೌಲ್ಯಗಳನ್ನು ಅನ್ವೇಷಿಸುವ ಪ್ರಯತ್ನವನ್ನು ಮಾಡುವುದಿಲ್ಲ. ಆದ್ದರಿಂದ, ಈ ರೀತಿಯ ಸನ್ನಿವೇಶಗಳು ಭಾವುಕವಾಗಿ ಬಿಡುತ್ತವೆ. ಇಂಥಾ ಸನ್ನಿವೇಶಗಳನ್ನು ಗಮನಿಸಿದಾಗ ಬದುಕನ್ನು ರೊಮ್ಯಾಂಟಿಕ್ ಆಗಿ ನೋಡುತ್ತಿದ್ದಾರೆನ್ನಿಸುವುದಿಲ್ಲವೇ? ವಠಾರದಲ್ಲಿ ವಾಸ್ತವ-ಕಲ್ಪನೆಗಳು ಒಂದು ಹದದಲ್ಲಿ ಬೆರೆತಿವೆ, ನಿಜ. ಆದರೂ ಹಲವು ಸಂದರ್ಭಗಳಲ್ಲಿ ಕಲ್ಪನೆಯ ಮೇಲೇಯೇ ಹೆಚ್ಚಿನ ಒತ್ತು ಬಿದ್ದುಬಿಡುತ್ತದೆ. ಅಂಥ ಕಡೆಯ ಚಿತ್ರಣ ರೊಮ್ಯಾಂಟಿಕ್ ಆಗಿ ಬಿಡುತ್ತದೇನೋ ಎನಿಸುತ್ತದೆ.

ಮೇಲಿನ ದೃಷ್ಟಿಯಿಂದ ಶಂಕರನಾರಾಯಣಯ್ಯ-ಚಂಪಾರ ರಸಿಕ ಜೀವನವನ್ನು ನೋಡಬಹುದು. ಅವರ ರಸಿಕತೆಯ ಚಿತ್ರಣಕ್ಕೇ ಕಾದಂಬರಿ ಹೆಚ್ಚು ಗಮನ ಹರಿಸಿರುವುದನ್ನು ಗಮನಿಸಬೇಕಾಗುತ್ತದೆ. ನಿತ್ಯ ಮನೆಗೆ ಬರುವಾಗ 'ಹೂವಿನ ಪೊಟ್ಟಣ' ಹಿಡಿದುಕೊಂಡು ಬರುವ ಶಂಕರನಾರಾಯಣಯ್ಯ, ಬಡತನವಿದ್ದರೂ 'ಸಂಸಾರ ರೌರವ ನರಕವಾಗಬೇಕಿಲ್ಲ' ಎಂಬ ಧೋರಣೆಯವನು. ಚಂಪಾಳ ತುಂಟತನ, ಧೈರ್ಯ, ರಸಿಕತೆ - ವಠಾರಕ್ಕೆ ಹೊಸತು. ಈ ದಂಪತಿಗಳ ಸರಸ

ಚಿತ್ರಣಕ್ಕೆ ಅಧಿಕ ಪುಟಗಳು ಮೀಸಲಾಗಿರುವುದನ್ನು ಗಮನಿಸಿ. ಆರನೆಯ ಅಧ್ಯಾಯದ ಉದ್ದಕ್ಕೂ ಅವರ ಸರಸ ಸಂಭಾಷಣೆ ಬೆಳೆಯುತ್ತದೆ. ಉಳಿದ ಕಡೆಯೂ ಅವರ ಸಂಭಾಷಣೆ ಆರಾಮವಾಗಿ ಸಾಗುತ್ತದೆ. ಉಳಿದ ಎಲ್ಲ ಪಾತ್ರಗಳಿಗಿಂತ ಈ ಎರಡು ಪಾತ್ರಗಳನ್ನು ಢಾಳಾಗಿ ಹೊಳೆಯುವಂತೆ ಮಾಡಿದ್ದಾರೆ.

ಶಂಕರನಾರಾಯಣಯ್ಯ ಮತ್ತು ಚಂಪಾ; ರಾಧಾ ಮತ್ತು ಚಂದ್ರಶೇಖರಯ್ಯನವರ ಚಿತ್ರಣದಲ್ಲಿ ಆದರ್ಶ ಮತ್ತು ವಾಸ್ತವಗಳು ಹದವಾಗಿ ಬೆರೆತಿವೆ ಎನ್ನಿಸಿದರೂ ಆ ಪಾತ್ರಗಳು ಸ್ವಲ್ಪ ರೊಮ್ಯಾಂಟಿಕ್ ಆಗಿ ಕಾಣುತ್ತವೆ. (ಅವರ ಹಲವು ಕಾದಂಬರಿಗಳಲ್ಲಿ ಪ್ರೇಮಿಸಿದವರ ಮದುವೆಗಳು ದಿಢೀರ್ ಆಗಿಬಿಡುತ್ತವೆ. ಆದರೆ, ಈ ಕಾದಂಬರಿಯಲ್ಲಿ ರಾಧಾಳನ್ನು ಚಂದ್ರಶೇಖರಯ್ಯ ಮದುವೆ ಆಗಲು ನಿರ್ಧರಿಸುವುದು ದಿಢೀರ್ ಆಗಿ ಆಗುವುದಿಲ್ಲ. ಆದರೂ ಅವನ ಒಪ್ಪಿಗೆ ಯಾರ ವಿರೋಧವೂ ಇಲ್ಲದೆ ಸಲೀಸಾಗಿಬಿಡುತ್ತದೆ.) ರಸಿಕತೆಯನ್ನು ತಮ್ಮ ಕಾದಂಬರಿಗಳಲ್ಲಿ ನಿರಂಜನರು ರೊಮ್ಯಾಂಟಿಸೈಸ್ ಮಾಡುತ್ತಿದ್ದಾರೆಯೇ? ಅಂಥಾ ಸಂದರ್ಭದಲ್ಲೂ ಅವರು ವಾಸ್ತವವನ್ನು ಮರೆಯುವುದಿಲ್ಲ. ಕಲಾವಿದನಾಗಬೇಕಾಗಿದ್ದ ಶಂಕರನಾರಾಯಣಯ್ಯ ಸಿನಿಮಾ ಪೋಸ್ಟರ್ ಬರೆಯಬೇಕಾಗಿ ಬಂದ ವಾಸ್ತವವನ್ನು ಜಯರಾಮುವಿಗೆ ತಿಳಿಸುತ್ತಾನೆ. ಆದರೆ ಕಾದಂಬರಿಯಲ್ಲಿ ಆ ಮುಖ ಮಸುಕಾಗಿಬಿಡುತ್ತದೆ.

ಕಾದಂಬರಿ ವಿವೇಚಿಸಹೊರಟಿರುವ ಬದುಕಿನ ಬೀಸು ಅದರ ತಂತ್ರದಿಂದಾಗಿ ತುಂಬಾ ಮಿತಿಗೊಳಪಡಬೇಕಾಯಿತೆಂಬುದನ್ನು ಈ ಮೊದಲೇ ಹೇಳಿದೆ. ವಠಾರದ ಸದಸ್ಯರ ಧಾರ್ಮಿಕ, ಜಾತೀಯ ಆಯಾಮಗಳನ್ನು ಮತ್ತು ವಠಾರದ ಹೊರಗಿನ ಬದುಕನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದಿರುವುದರಿಂದ ಕಾದಂಬರಿ ಆಳ - ಅಗಲಗಳನ್ನು ಪಡೆದುಕೊಳ್ಳಲಾಗಿಲ್ಲ ಎಂಬುದನ್ನು ಈ ಹಿಂದೆಯೇ ಗುರುತಿಸಿದ್ದೇವೆ. ಹೀಗೆ ಕೆಲವು ಮಿತಿಗಳಿದ್ದರೂ ಈಗಾಗಲೇ ಗುರುತಿಸಿರುವಂತೆ 'ರಂಗಮ್ಮನ ವಠಾರ' ವಿಶಿಷ್ಟವಾಗಿದೆ. ನಿರಂಜನರ ಮತ್ತು ಕನ್ನಡದ ಒಂದು ಉತ್ತಮ ಕಾದಂಬರಿ ಎಂಬುದರಲ್ಲಿ ಅನುಮಾನವಿಲ್ಲ. ○

ಸ್ಮರಣೆಯೊಂದೇ ಸಾಲದೆ?

-ಕಮಲ ಹಂಪನಾ

ಪ್ರಸಿದ್ಧ ಸಾಹಿತಿ ನಿರಂಜನರ 'ಸ್ಮರಣೆಯೊಂದೇ ಸಾಲದೆ?' ಕಾದಂಬರಿ ನನಗೆ ಹಲವು ದೃಷ್ಟಿಗಳಿಂದ ಮಹತ್ವದ ಕೃತಿಯಾಗಿದೆ.

೧೯೬೦ರಲ್ಲಿ ಬೆಂಗಳೂರಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಈ ಕಾದಂಬರಿ ೧೯೬೨ರಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. ಸುಮಾರು ಇನ್ನೂರ ಮುವ್ವತ್ತು ಪುಟಗಳಲ್ಲಿ ಚೊಕ್ಕವಾಗಿ ನಿರೂಪಣೆಗೊಂಡ ಕಾದಂಬರಿ; ಎಲ್ಲೂ ಅಡೆತಡೆಯಿಲ್ಲದೆ ಕುತೂಹಲವನ್ನು ಕಾಯ್ದುಕೊಂಡು ಓದಿಸಿಕೊಂಡು ಹೋಗುವ ಕೃತಿ ಇದಾಗಿದೆ. ನಿರಂಜನರಂಥ ಖ್ಯಾತ ಕಾದಂಬರಿಕಾರರ ಕಾದಂಬರಿಯ ಬಗ್ಗೆ ನನ್ನ ಈ ಮೇಲಿನ ಹೇಳಿಕೆ ಸಾಮಾನ್ಯವಾದುದೆಂದು ಕಂಡುಬಂದರೂ ಒಂದು ಕೃತಿಯ ಮೂಲಭೂತ ಆಶಯಗಳಲ್ಲಿ ಇದೊಂದು ಬಹಳ ಮುಖ್ಯವಾದ ಅಂಶ ಎನ್ನುವುದು ನನ್ನ ಭಾವನೆ. ಕಾರಣ ಪ್ರಸಿದ್ಧ ಕಾದಂಬರಿಕಾರರಲ್ಲಿಯೂ ಒಮ್ಮೊಮ್ಮೆ ಒಂದೊಂದು ಕೃತಿಗಳಲ್ಲಿ ಈ ಮೇಲಿನ ಸಾಮಾನ್ಯ ಅಂಶವೂ ಕಾಣದೆ ಇರುವಾಗ ನನ್ನ ಹೇಳಿಕೆಗೆ ಸಾಕಷ್ಟು ಪುಷ್ಟಿ ಇದೆ ಎಂದು ತಿಳಿದಿದ್ದೇನೆ.

'ಸ್ಮರಣೆಯೊಂದೇ ಸಾಲದೆ?' ಕಾದಂಬರಿಯ ವಸ್ತು, ಶೈಲಿ, ತಂತ್ರ, ನಿರೂಪಣೆ, ಶಿಲ್ಪ ಹಾಗೂ ಪಾತ್ರಗಳ ಬೆಳವಣಿಗೆ, ಘಟನೆಗಳ ತಿರುವು-ಇವುಗಳನ್ನು ಪ್ರತ್ಯೇಕವಾಗಿ ಗಮನಿಸುವುದರ ಜೊತೆಯಲ್ಲಿಯೇ ಕಾದಂಬರಿಯ ಔಚಿತ್ಯಪೂರ್ಣ ಚೌಕಟ್ಟು, ಕಲಾತ್ಮಕತೆ ಹಾಗೂ ಮೂಲ ಸ್ರೋತವನ್ನು ಗುರುತಿಸುವ ಪ್ರಯತ್ನ ನನ್ನ ಈ ಲೇಖನದ್ದು.

ಈ ಕಾದಂಬರಿಯಲ್ಲಿ ಕಥಾನಾಯಕ ಶಂಕರನಷ್ಟೇ ಮುಖ್ಯಳಾಗಿದ್ದಾಳೆ, ಕಥಾನಾಯಕಿ ಮೀನಾಕ್ಷಿ. ನಾಯಕ ಒಬ್ಬ ಚಿತ್ರಗಾರ, ಕಲೆಗಾರ. ನಾಯಕಿ ಒಬ್ಬ ವಿಧವೆ, ಸಂಗೀತಬಲ್ಲ ಒಬ್ಬ ಕಲೆಗಾತಿ. ಕಥಾನಾಯಕಿಯ ಕಥೆಯಲ್ಲಿಯೇ ಸುರುಳಿ ಬಿಚ್ಚುವ ಕಥಾನಾಯಕನ ಕಥೆ. ಒಂದೇ ನಾಣ್ಯದ ಎರಡು ಮುಖಗಳಂತೆ ಕಥೆ ಭೂತ ಮತ್ತು ವರ್ತಮಾನಗಳನ್ನು ಬೆಸೆದು ನಿಂತಿದೆ. ಒಬ್ಬ ನಿಷ್ಠಾವಂತ ಕಲಾಪ್ರೇಮಿ, ಕಲಾಕಾರನ ಬದುಕಿನ ಸೂಕ್ಷ್ಮ - ಸಂಕಷ್ಟಗಳನ್ನು ಚಿತ್ರಿಸುವುದರ ಜೊತೆಯಲ್ಲಿಯೇ ಆತನ ಹೆಂಡತಿ ಮೀನಾಕ್ಷಿಯ ಪಾತ್ರವೂ ಸೊಗಸಾಗಿ ಮೂಡಿದೆ. ಕಿರಿಯ ವಯಸ್ಸಿನಲ್ಲಿಯೇ ವಿಧವೆಯಾದವಳು, ಅವಳಿ ಮಕ್ಕಳ ತಾಯಾದವಳು, ಗಂಡನ ನೆನಪಿನಲ್ಲಿ ಮಕ್ಕಳನ್ನು ಬೆಳಸುವ ಹೊಣೆಗಾರಿಕೆ ಹೊತ್ತವಳು, ಬದುಕನ್ನು ಸವಾಲಾಗಿ ಸ್ವೀಕರಿಸಿದವಳು, ಮಾನವಂತಳಾಗಿ ಬಾಳಿದವಳು. ಇವಳ ಬದುಕಿನ ನಿಷ್ಠೆಯೇ

ಇಲ್ಲಿಯ ಕಥಾವಸ್ತುವಿನ ಅರ್ಧಭಾಗ. ಉಳಿದರ್ಧ ಶಂಕರನದು. ಕಥಾವಸ್ತು ಇಂದಿಗೂ, ಎಂದೆಂದಿಗೂ ನಮ್ಮ ಜಡ್ಡುಗಟ್ಟಿದ ಸಮಾಜಕ್ಕೆ ಕಣ್ಣು ತೆರೆಸುವ, ಸಾರ್ವಕಾಲಿಕ ಸತ್ಯವನ್ನು ಪ್ರತಿನಿಧಿಸುವ ವಸ್ತುವಾಗಿದೆ.

ಶಂಕರ-ಮೀನಾಕ್ಷಿ ಈ ಎರಡು ಪಾತ್ರಗಳು ಬದುಕಿನ ವಿವಿಧ ಮಜಲುಗಳನ್ನು ಪರಿಚಯಿಸುತ್ತವೆ. ಇಲ್ಲಿ ಪ್ರೇಮ-ಪ್ರೀತಿ, ಕಷ್ಟ-ಸುಖ, ಸಂಗೀತ-ನಾಟಕ, ಅನಾಥಾಶ್ರಮ-ಸಂಸಾರ- ಎಲ್ಲವೂ ಬರುತ್ತವೆ. ಅನಾಥಳಾದ ಹೆಣ್ಣೊಬ್ಬಳು ಅನ್ಯರಿಗೆ ಹಂಗಾಗಿ ಕೂಡುವುದಲ್ಲ, ಇರುವ ಪರಿಸರದಲ್ಲೇ, ಸಿಕ್ಕಿದ ಅವಕಾಶದಲ್ಲೇ ಬದುಕನ್ನು ರೂಪಿಸಿಕೊಳ್ಳುವ ಪ್ರಯತ್ನ ಎಲ್ಲರದು ಆಗಬೇಕು ಎನ್ನುವ ಕಾದಂಬರಿಕಾರರ ಧೋರಣೆ ಇಲ್ಲಿ ವ್ಯಕ್ತವಾಗಿದೆ.

ಮೇಲು ನೋಟಕ್ಕೆ ಕಥಾನಾಯಕ ಶಂಕರ ಸೋತಂತೆ ಕಂಡರೂ ಕಲಾವಿದನಾಗಿ ಆತ ಎಂದೆಂದೂ ಸುಖಿಯೇ! ಬದುಕನ್ನು ಕಾಣುವ, ಬದುಕನ್ನು ಸ್ವೀಕರಿಸುವ, ಬದುಕನ್ನು ಪ್ರೀತಿಸುವ, ಕನಸುಗಳನ್ನು ಕಟ್ಟುವ, ಆಶಾಭಾವನೆಗಳನ್ನು ನೇಯುವ ಶಂಕರ ಎಂದೂ ಅಸುಖಿಯಲ್ಲ; ಹಣದ ಮುಗ್ಗಟ್ಟಿನಲ್ಲಿಯೂ ತನ್ನ ಕಲೆಯನ್ನು ಅಚಲವಾಗಿ ನಂಬಿ ಆನಂದ ಕಂಡುಕೊಂಡವನು.

ಹುಟ್ಟುತ್ತಿದ್ದಂತೆ ತಾಯಿಯನ್ನು ಕಳೆದುಕೊಂಡು ತಂದೆಯ ಪ್ರೀತಿಯಿಂದಲೂ ವಂಚಿತನಾದ ಶಂಕರ ತನ್ನ ನೆಮ್ಮದಿಯನ್ನು, ಆನಂದವನ್ನು ಮತ್ತೆಲ್ಲೋ ಹುಡುಕಿಕೊಳ್ಳಬೇಕು ಎನ್ನುವ ತಿಳಿವಳಿಕೆ ಮೂಡುವ ಮೊದಲೆ ರಂಗುರಂಗಿನ ಚಿತ್ರಗಳನ್ನು ಬರೆಯುವಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ; ಆನಂದ ಹೊಂದುತ್ತಾನೆ. ಓದಿನಲ್ಲಿ ಹಿಂದೆಬಿದ್ದ ಶಂಕರ ತನ್ನ ಗುರಿಯನ್ನು ಸಾಧಿಸಲು ಹಳ್ಳಿಬಿಟ್ಟು ಪಟ್ಟಣ ಸೇರುತ್ತಾನೆ. ಅಲ್ಲಿ ನೀರು ನೆಲೆ ಇಲ್ಲದೆ ಕಳೆದ ದಿವಸಗಳೆಷ್ಟೋ! ಹೊರಗಿನ ಈ ಯಾತನೆ ಆತನ ಒಳಗಿನ ಕಲೆಯನ್ನು ಬತ್ತಿಸಲಿಲ್ಲ. ಶಂಕರನ ನಿರ್ಧಾರ ಅಚಲವಾಗಿತ್ತು. ಕಷ್ಟಗಳ ನಡುವೆಯೇ ಕಲೆಗಾರನಾಗಿ ಬೆಳೆದ ಶಂಕರ. ಅಲ್ಲಿ ಪರಿಚಿತರಾದವರು ಅನೇಕರು. ಮೋಸಗಾರ ನಾರಾಯಣಪ್ಪ, ಶಂಕರನ ಕಲಾಭಿರುಚಿಗೆ ನೀರೆರೆದು ಪೋಷಿಸಿದ ಭವಾನಿ ಶೇಷಪ್ಪ, ನಾಯಕ ನಟಿ ಪ್ರೇಮಾ, ಆತ್ಮೀಯ ಗೆಳೆಯರಾದ ಶ್ರೀನಾಥ, ಬದರಿ- ಇವರೆಲ್ಲರ ಒಡನಾಟದಲ್ಲಿ ಶಂಕರ ಕಲಿತದ್ದು,ಸಂಕೀರ್ಣ ಬದುಕನ್ನುಅರ್ಥೈಸಿಕೊಂಡದ್ದು, ಆತ್ಮೀಯ ಕಲೆಯನ್ನು ಬೆಳಸಿಕೊಂಡದ್ದು, ತಾನೂ ಕಲೆಗಾರನಾಗಿ ಬೆಳೆದದ್ದು ಮಹತ್ವದ ಸಂಗತಿಗಳು. ಐಹಿಕ ಸೌಂದರ್ಯಕ್ಕಿಂತ ಬಾಹ್ಯದ ಬೆರಗಿಗಿಂತ ಆಂತರಿಕ ಸೌಂದರ್ಯಕ್ಕೆ ಮನಸೋತವನು. ಆದ್ದರಿಂದಲೇ ಮೇಲೆ ಬೀಳುತ್ತಿದ್ದ ಸ್ಫುರದ್ರೂಪಿ ಪ್ರೇಮಾಳನ್ನು ಸೋದರಿಭಾವದಿಂದ ಕಂಡು ಬಣ್ಣದಲ್ಲಿ ಕಪ್ಪಾದ ಅಷ್ಟೇನೂ

ರೂಪವತಿಯಲ್ಲದ ಆದರೆ ತುಂಬಾ ಮಧುರವಾಗಿ ಹಾಡುತ್ತಿದ್ದ ಮೀನಾಕ್ಷಿಯನ್ನು ಮೊದಲ ನೋಟದಲ್ಲಿಯೇ ಮೆಚ್ಚಿ ಮದುವೆಯಾದ. ಬದುಕು ಎಂದೂ ಅವನಿಗೆ ಭಾರವಾಗಲಿಲ್ಲ. ಹಣದ ಮುಗ್ಗಟ್ಟಿನಲ್ಲಿಯೂ ಸಂಸಾರ ಸುಖಮಯವಾಗಿ, ಆನಂದ ದಿಂದಲೇ ಕಳೆಯಿತು. ಮೀನಾಕ್ಷಿ ಅವನಿಗೆ ಅನುರೂಪ ಹೆಣ್ಣು. ಮನೆಯಿಂದ, ಮನೆಯವರ ಪ್ರೀತಿಯಿಂದದೂರವಾದ ಶಂಕರ ಅದೇ ಅವಸ್ಥೆಯಿಂದಲೇ ಶಂಕರನ ಮನೆ ಸೇರಿದ ಮೀನಾಕ್ಷಿ - ಇಬ್ಬರೂ ತಮ್ಮ ಬದುಕಿನಲ್ಲಿ ಅರೆಯಾಗಿದ್ದ ಪ್ರೀತಿ - ಪ್ರೇಮ ವನ್ನು ಪರಸ್ಪರರಲ್ಲಿ ಕಂಡುಕೊಂಡರು. ಸಂತೃಪ್ತಿ ಹೊಂದಿದರು. ದಾಂಪತ್ಯ ಸುಖದ ಬದುಕಿನಲ್ಲಿ ವರುಷಗಳು ಬೇಗನೆ ಸರಿದವು. ಜಯ - ವಿಜಯ ಅವಳಿ ಮಕ್ಕಳ ತಂದೆ-ತಾಯಿಯರಾಗಿ ಬದುಕಿಗೊಂದು ಅರ್ಥ ಕಂಡುಕೊಂಡರು. ಆದರೆ ಶಂಕರ ಕಲಾವಿದನಾಗಿ ಸಂಪೂರ್ಣ ಸಫಲತೆಯನ್ನು ಪಡೆಯುವ ಮೊದಲೇ ಆಕಸ್ಮಿಕ ಮರಣಕ್ಕೆ ತುತ್ತಾದ, ಮೀನಾಕ್ಷಿ ಅನಾಥೆಯಾದಳು.

ಅಲ್ಲಿಂದ ಮೀನಾಕ್ಷಿಯ ಬದುಕಿನ ಮತ್ತೊಂದು ಘಟ್ಟ ಪ್ರಾರಂಭ. ಅನಾದರದ ಮಗಳಾಗಿ ತಂದೆ ಮನೆಯಲ್ಲಿ ಬೆಳೆದರೂ, ಶಂಕರನ ಕೈ ಹಿಡಿದು ಸುಖವನ್ನು ಕಂಡಳು. ಮುದ್ದಾದ ಅವಳಿ ಮಕ್ಕಳ ತಾಯಾದಳು. ಆದರೆ ಬದುಕು ನಾವು ಭಾವಿಸಿದಂತೆ ನಡೆಯುವುದಿಲ್ಲ. ಶಂಕರನನ್ನು ಕಳೆದುಕೊಂಡಳು; ಕಿರಿಯ ವಯಸ್ಸಿನಲ್ಲಿಯೇ ವಿಧವೆ ಯಾದಳು. ಅವಳಿಗೆ ಜೀವನ ಬೇಕಿರಲಿಲ್ಲ. ಆದರೆ ಒಂದು ವರುಷದ ಮುದ್ದಾದ ಅವಳಿ ಮಕ್ಕಳು. ಅವರಿಗಾಗಿ ಅನಿವಾರ್ಯವಾಗಿ ಆಕೆ ಬದುಕಲೇ ಬೇಕು. ನಿವಾರಿಸಲಾರದುದನ್ನು ಅನುಭವಿಸಿಯೇ ತೀರಬೇಕಷ್ಟೆ! ಚಿಕ್ಕಂದಿನಲ್ಲಿ ಕಲಿತ ಸಂಗೀತ ಈಗ ಅವಳ ಮುಂದಿನ ಬಾಳಿನ ಬುತ್ತಿಯಾಯಿತು. ಶಂಕರನ ಸ್ಮರಣೆ, ಮಕ್ಕಳ ಪಾಲನೆ ಅವಳ ಬದುಕನ್ನು ನಡೆಸುವ ದಾರಿದೀಪಗಳಾದುವು.

ಭಾರತದಂಥ ದೇಶದಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣಿನ ಬಾಳು ದುರ್ಭರ. ಆಕೆಯ ಜೀವನಕ್ಕೆ ಮಾರ್ಗವಿಲ್ಲದೆ ಇನ್ನೊಬ್ಬರ ಹಂಗಿನಲ್ಲಿ ಭಾರವಾಗಿ ಬದುಕಬೇಕಾದ ದುಃಸ್ಥಿತಿಯಲ್ಲಿ ನರಳುವ ಹೆಣ್ಣುಗಳೆಷ್ಟೊ! ಅಂತಹ ಹೆಣ್ಣುಗಳಿಗೆ ಧೈರ್ಯ ತುಂಬಿ ಮಾರ್ಗದರ್ಶಿಯಾಗಿ ನಿಲ್ಲುವ ಹೆಣ್ಣು ಇಲ್ಲಿನ ಮೀನಾಕ್ಷಿ.

ಕಾದಂಬರಿಯ ಶೈಲಿ ಸರಳ ಸುಂದರ! ಯಾವ ಕ್ಲಿಷ್ಟತೆಯೂ ಇಲ್ಲದೆ ಸಹಜವಾಗಿ, ಪಾತ್ರಕ್ಕೆ ತಕ್ಕಂತೆ, ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಇದೆ. ಶೈಲಿಯಷ್ಟೇ ಸೊಗಸು ನಿರೂಪಣೆ, ಸಂಭಾಷಣೆಯ ಸೊಗಡು ಕಾದಂಬರಿಯ ಕಲಾತ್ಮಕತೆ ಯನ್ನು ಹೆಚ್ಚಿಸಿದೆ. ಕಾದಂಬರಿಯ ಯಾವುದೇ ಪುಟ ತೆಗೆದರೂ ನಿರಾಡಂಬರ ಶೈಲಿ ಯನ್ನು, ಕುತೂಹಲದ ನಿರೂಪಣೆಯನ್ನು ಲವಲವಿಕೆಯ ಸಂಭಾಷಣೆಯನ್ನೂ ಕಾಣ ಬಹುದು. ಉದಾಹರಣೆಗೆ ಪುಟ ಒಂಬತ್ತು ತೆಗೆದು ನೋಡೋಣ;

"ಹೇಗೆ ಆರಂಭಿಸಬೇಕು? ಹೇಗೆ? ಒಮ್ಮೆಲೇ ಮೀನಾಕ್ಷಿ ಬಾಯಿ ತೆರೆದಳು;

"ಒಂದೂರಲ್ಲಿ...."

"ಒಬ್ಬ ರಾಜಕುಮಾರ ಇದ್ದ, ಅದೆ ತಾನೆ?"

"ಉಹೂಂ, ಚಂದ್ರಶೇಖರಯ್ಯ ಅಂತ ಒಬ್ಬರಿದ್ರು. ತುಂಬಾ ಒಳ್ಳೆಯವರು. ಎತ್ತರದ ಮನುಷ್ಯ, ಗೋದಿ ಕೆಂಪು ಬಣ್ಣ, ಭಾರಿ ಮೀಸೆ. ತಲೆಯಲ್ಲಿ ಜುಡಿಕೆ...."

"ಜುಡಿಕೆ ಅಂದ್ರೆ?"

ವಿಜಯ ಕೇಳಿದ.

"ಜುಟ್ಟು"

"ಜುಟ್ಟು? ಹೊ ಹ್ಹೊ!"

ಎಂದು ಜಯ ನಕ್ಕ.

ಉದ್ದಕ್ಕೂ ಇದೇ ರೀತಿಯ ನವಿರಾದ ಶೈಲಿ, ಹೃದ್ಯ ನಿರೂಪಣೆ ಲವಲವಿಕೆಯ ಸಂಭಾಷಣೆಯಿಂದ ಕಾದಂಬರಿ ತನ್ನ ಉತ್ತಮಿಕೆಯನ್ನು ಪಡೆದಿದೆ.

ಮಕ್ಕಳಿಗೆ ತಾಯಿ ಕಥೆ ಹೇಳಲು ತೊಡಗುವ ತಂತ್ರ ಸೊಗಸಾಗಿದೆ. ಮಕ್ಕಳಿಗೆ ತಾಯಿ ಯಾವುದೋ ರಾಜಕುಮಾರನ ಕಥೆಯನ್ನಲ್ಲ ಹೇಳುವುದು, ತನ್ನ ಗಂಡನ ಕಥೆ, ಮಕ್ಕಳ ತಂದೆಯ ಕಥೆ ಇಲ್ಲಿ ಸುರುಳಿ ಬಿಚ್ಚುತ್ತದೆ, ಪುಟ ತೆರೆಯುತ್ತದೆ. ಎಲ್ಲ ಮಕ್ಕಳಿಗೂ ಕಥೆ ಎಂದರೆ ಪಂಚಪ್ರಾಣ. ಅದರಲ್ಲಿ ತಮ್ಮ ತಂದೆಯದೇ ಕಥೆ ಕೇಳುವುದೆಂದರೆ! ಕಥೆಯನ್ನು ತಿಳಿಯುವಲ್ಲಿ ಮಕ್ಕಳ ಕುತೂಹಲ ಓದುಗರ ಕುತೂಹಲವೂ ಆಗುತ್ತದೆ. ಕಥೆ ನೇಯುವಲ್ಲಿ, ನಿರಂಜನರಿಗೆ, ಏಕೆ? ಅನೇಕರಿಗೆ, ಪ್ರಿಯವಾದ ಫ್ಲಾಷ್‌ಬ್ಯಾಕ್ ತಂತ್ರ (ಹಿನ್ನೆಲೆ ತಂತ್ರ) ಕಾದಂಬರಿಗೆ ಚೆನ್ನಾಗಿ ಒಪ್ಪಿದೆ. ವರ್ತಮಾನದ ಕಥೆಯಲ್ಲಿ ಭೂತಕಾಲ ಹಣಿಕಿ, ಎಷ್ಟೋ ಪಾತ್ರಗಳು, ಘಟನೆಗಳೂ ಹಾಸುಹೊಕ್ಕಾಗಿ ಸೇರಿ ಕಥೆಯ ಶಿಲ್ಪಕ್ಕೆ ಮೆರಗು ಕೊಟ್ಟಿವೆ. ಮೀನಾಕ್ಷಿಯ ದೈನಂದಿನ ಇಂದಿನ ಬದುಕಿನಲ್ಲಿ ತಮ್ಮಿಬ್ಬರ ಬದುಕಿನ ನೆನಪು. ಕಥೆ ಹೇಳುವಲ್ಲಿ ಮಕ್ಕಳಿಗೆ ತಿಳಿಸಬಹುದಾದ ಸಂಗತಿಗಳು ಕೆಲವಾದರೆ ತನ್ನಲ್ಲೇ ಕನವರಿಸಿಕೊಳ್ಳಬಹುದಾದ, ದಾಂಪತ್ಯ ಪ್ರಣಯ ಸನ್ನಿವೇಶಗಳು ಹಲವು. ಗಂಡು - ಹೆಣ್ಣಿನ ಸಂಬಂಧದ ಸೂಕ್ಷ್ಮ ಎಳೆಗಳು ಹೃದಯ ಸಂವಾದಿಯಾಗಿ ಮೂಡಿ ನಿಂತಿವೆ. ಅತಿಯಾಗದ ಆದರೆ ಹಿತವಾದ ಮಧುರ ಸನ್ನಿವೇಶಗಳು ಕಾದಂಬರಿಕಾರರ ಸಂಯಮವನ್ನು

ದಾಖಲಿಸಿವೆ. ಯಾರೂ ವಾಚಾಳಿಯಾಗಬಹುದಾದ, ಹತ್ತಾರು ವಾಕ್ಯಗಳಲ್ಲಿ ಹರಡಬಹುದಾದ ಪ್ರಣಯ ಕಲ್ಪನೆಗಳು ಇಲ್ಲಿ ತನ್ನ ಸೂಕ್ಷ್ಮತೆಯಿಂದ ಹೃದ್ಯ, ಪ್ರಿಯವೆನಿಸಿವೆ.

ಶಂಕರನ ಪ್ರತಿಭೆ, ಅವನು ಬಾಲಕನಾಗಿದ್ದಾಗಲೇ ಬಿಳಿ ಅಂಗಿಯ ಮೇಲಿ ಶಾಯಿಯ ಕುಂಚ ಆಡಿಸುವುದರಲ್ಲಿ ಪ್ರಕಾಶಗೊಳ್ಳುತ್ತದೆ. ಕನ್ನಡ ಪಂಡಿತರ ಪ್ರೋತ್ಸಾಹ, ಭವಾನಿ ಶೇಷಪ್ಪನ ಪರಿಚಯ, ಬದರಿ ಶ್ರೀನಾಥರ ಆಸಕ್ತಿ - ಇವನ ಕಲೆಯನ್ನು ಬೆಳಸುವ ಘಟ್ಟಗಳು. ಇವೆಲ್ಲಕ್ಕೂ ಪುಟವಿಟ್ಟಂತೆ ಅವನ ಮನ-ಮನೆ ತುಂಬಿದ ಮೀನಾಕ್ಷಿಯ ಪ್ರವೇಶ. ಶಂಕರನ ಬದುಕಿನ ಈ ಎಲ್ಲ ಘಟನೆಗಳೂ ಕಥೆಗೆ ಹೊಸ ತಿರುವನ್ನು ಕೊಡುವುದಲ್ಲದೆ, ಪಾತ್ರಗಳನ್ನು ಬೆಳಸುತ್ತವೆ; ಕಥೆಯ ಓಟಕ್ಕೆ ಸಹಕಾರಿಯಾಗಿವೆ.

ಮೇಲಿನ ಎಲ್ಲ ಅಂಶಗಳು ಕಾದಂಬರಿಯ ಒಟ್ಟಂದದಲ್ಲಿಯೇ ಅಭಿವ್ಯಕ್ತಗೊಳ್ಳುತ್ತವೆ. ಆದರೂ ಬದುಕನ್ನು ಕಾಣುವ, ಬಂದದ್ದನ್ನು ಧೈರ್ಯದಿಂದ ಸ್ವೀಕರಿಸುವ, ಜಂಜಡದಲ್ಲಿಯೇ ಈಸಿ ಗೆಲ್ಲುವ ಬದುಕಿಗೆ ಎಂದೂ ವಿಮುಖರಾಗದೆ, ಮುಖಾಮುಖಿಯಾಗುವ ಪ್ರಾಮಾಣಿಕ ಪ್ರಯತ್ನ ಎಲ್ಲ ಮಾನವನ ಧ್ಯೇಯವಾಗಬೇಕು. ಅದರಲ್ಲೇ ಅವನು ಗುರಿಕಾಣಬೇಕು ಎನ್ನುವ ಕಾದಂಬರಿಕಾರರ ಧೋರಣೆ ಚೆನ್ನಾಗಿ ಈ ಕಾದಂಬರಿಯಲ್ಲಿ ಪ್ರತಿನಿಧಿತವಾಗಿದೆ.

ಕಾದಂಬರಿಯ ಶೀರ್ಷಿಕೆಯಲ್ಲಿನ ಸಂಕೇತ, ಪ್ರತಿಮೆ ಧ್ವನಿಪೂರ್ಣವಾದುದು. 'ಸ್ಮರಣೆಯೊಂದೇ ಸಾಲದೆ ? ಗೋವಿಂದನಾ ?' ಎನ್ನುವುದು ಅನೇಕರ ಬದುಕಿನ ದೈವ ನಂಬಿಕೆಯಾದರೆ 'ಸ್ಮರಣೆಯೊಂದೇ ಸಾಲದೆ ? ಶಂಕರನ' ಎನ್ನುವುದು ಮೀನಾಕ್ಷಿಯ ದೃಢ ನಂಬಿಕೆ, ಬದುಕನ್ನು ಮುನ್ನಡೆಸುವ ಮಂತ್ರ.

ಕಾದಂಬರಿಯ ಹಂದರದಲ್ಲಿ ಅನೇಕ ರಸಪಾಣಗಳಿವೆ; ಮನಮಿಡಿಯುವ ಉತ್ಕಟ ಭಾವನೆಗಳಿವೆ; ಬುದ್ಧಿ-ಭಾವಕ್ಕೆ ತಣಿಯುಣಿಸುವ ವಿಚಾರಗಳಿವೆ; ಸಂಗೀತ, ಕಲೆಯ ವಿದ್ವತ್ ಪರಿಚಯವಿದೆ. ಹೆಣ್ಣಿನ ಪಾತ್ರಚಿತ್ರಣದಲ್ಲಿ, ಆಕೆಯ ಸೂಕ್ಷ್ಮ ಸಂವೇದನಾಶೀಲ ಗುಣವನ್ನು ಮೈಗೂಡಿಸಿಕೊಂಡು ನಿರೂಪಿಸುವಲ್ಲಿ ನಿರಂಜನರು ನಮ್ಮ ಅಭಿನಂದನೆಗೆ ಪಾತ್ರರಾಗಿದ್ದಾರೆ. ಹೆಣ್ಣಿನ ಅಂತರಂಗದ ತರಂಗವನ್ನು ಮಿಡಿಯುವಲ್ಲಿ ಅವಳು ಅಬಲೆಯಲ್ಲ, ಸಬಲೆ ಎನ್ನುವ ಚಿರಂತನ ಸತ್ಯವನ್ನು ಸಾರುವಲ್ಲಿ ನಿರಂಜನರ 'ಸ್ಮರಣೆಯೊಂದೇ ಸಾಲದೆ ?' ಕಾದಂಬರಿ ಯಶಸ್ವಿಯಾಗಿದೆ. ○

ನಂದಗೋಕುಲ

–ಡಾ। ಪುರುಷೋತ್ತಮ ಬಿಳಿಮಲೆ

ಜಾತಿ ಮತ್ತು ವರ್ಗ ವ್ಯತ್ಯಾಸವುಳ್ಳಂಥ ಸಮಾಜ ಹೆಚ್ಚು ಕಡಮೆ ಸ್ಥಾಯಿಯಾಗಿರುತ್ತದೆ. ಭಾರತದಲ್ಲಿ ಹಾಗಾಗಿತ್ತು. ಅದು ಚಲನಶೀಲವಾದುದು ಮತ್ತು ಬೇರೆ ಬೇರೆ ನೆಲೆಯಲ್ಲಿ ಕ್ರಿಯಾಶೀಲವಾದುದು ಬ್ರಿಟಿಷರು ಆಳತೊಡಗಿದ ಮೇಲೆ. ಇದರ ಪರಿಣಾಮವೆಂದರೆ 'ಮಧ್ಯಮ ವರ್ಗ'ದ ಉದಯ; ಭಾರತೀಯ ಬದುಕಿಗೆ ಹೊಸತಾದದ್ದು. 'ಮಧ್ಯಮ' ಪದವೇ 'ಉತ್ತಮ' ಮತ್ತು 'ಅಧಮ'ದೊಡನೆ ದ್ವಂದ್ವಾತ್ಮಕ ಸಂಬಂಧ ಹೊಂದಿದೆ. ಸಾಮಾಜಿಕವಾಗಿಯೂ ಮಧ್ಯಮ ವರ್ಗವು ಉಳಿದ ಎರಡು ವರ್ಗದೊಡನೆ ಸಂಬಂಧ ಹೊಂದಿದೆ. ಈ ಸಂಬಂಧದ ಸ್ವರೂಪ ಅತ್ಯಂತ ಸೂಕ್ಷ್ಮವಾದುದು ಮತ್ತು ಜಟಿಲವಾದುದು. ಆರ್ಥಿಕಸ್ಥಿತಿ ಆ ಎಲ್ಲ ವ್ಯತ್ಯಾಸಗಳ ಮೂಲವೆಂದು ಸರಳವಾಗಿ ಹೇಳಬಹುದಾದರೂ, ಆಚಾರ, ವಿಚಾರಗಳ-(ಪುರಾಣ, ಕಾವ್ಯ, ನಂಬಿಕೆ, ಸಿದ್ಧಾಂತಗಳ ಸಮೇತ) ಅದರ ಮೇಲ್‌ರಚನೆಯ ಸಂಕೀರ್ಣತೆ ಸುಲಭವಾಗಿ ದೃಗ್ಗೋಚರವಾಗುವಂಥದ್ದಲ್ಲ. ಬ್ರಿಟಿಷರು ಬಂದ ಮೇಲೆ ಉತ್ಪಾದನಾ ವಿಧಾನಗಳಲ್ಲಾದ ಮಾರ್ಪಾಟಿನೊಂದಿಗೆ ಅವುಗಳು ಸಂಬಂಧ ಹೊಂದಿವೆ. ನಿರಂಜನರ 'ನಂದಗೋಕುಲ' ಕಾದಂಬರಿಯಲ್ಲಿ ಸಂಕೀರ್ಣಸ್ವರೂಪದ ಮಧ್ಯಮ ವರ್ಗದ ಜೀವನಕಥನವಿದೆ. ಕನ್ನಡದಲ್ಲಿ ಇಂಥ ಯತ್ನಗಳು ನಡೆದದ್ದು ವಿರಳ.

ಕೃತಿಯ ಉದ್ದಕ್ಕೂ ಸ್ವಲ್ಪ ಹೆಚ್ಚೇ ಎಂದು ಹೇಳಬಹುದಾದಷ್ಟು ಬಂದಿರುವ ಬಾಹ್ಯವಿವರಗಳು ಕೃತಿಯ ಉದ್ದೇಶವನ್ನು ಚೆನ್ನಾಗಿ ವಿವರಿಸುತ್ತವೆ. ಕಾದಂಬರಿಯ ಮುಖ್ಯ ಪಾತ್ರನಾದ ವಿಶ್ವೇಶ್ವರನಿಗೆ ಆತನ ಮಿತ್ರ ಜೇಮ್ಸ್ ಬರೆದ ಪತ್ರದಲ್ಲಿ ಇದರ ಆರಂಭಿಕ ವಿವರಗಳಿವೆ.

"ಭಾವನಗರದಲ್ಲಿರುವುದು ಒಂದೇ ಆಟೋರಿಕ್ಷಾ. ಅದೃಷ್ಟವಿದ್ದರೆ ನಿನಗೆ ಅದು ಸಿಗಲೂಬಹುದು. ಅದು ತಪ್ಪಿದರೆ ಮೋಟರಿಲ್ಲದ ಬೇಬಿ ಟ್ಯಾಕ್ಸಿಗಳಿವೆ. ನೀನು ಕಡುಪಾಪಿ ಎಂದಾದರೆ ಕಡೆಗೆ ಜಟಕಾಬಂಡಿ. ರೈಲು ನಿಲ್ದಾಣದಿಂದ ನಮ್ಮ ವಿಸ್ತರಣಕ್ಕೆ ಮೂರು ಮೈಲಿ. ಎರಡನೆಯ ಬೀದಿಯಲ್ಲಿ ಮೊದಲನೆಯ ಮನೆ, ಹುಡುಗ ಗೇಟು ತೆರೆದು ಕಾದಿರುತ್ತಾನೆ." (ಪುಟ 6). ಕಥೆಯ ಕ್ರಿಯಾಕೇಂದ್ರವಾದ 'ಭಾವನಗರ' ಎಂಬ ಹೆಸರೇ ಮಧ್ಯಮ ವರ್ಗದ ಆಶಯವನ್ನು ಉಳ್ಳದ್ದು. 'ಪಾಪ', 'ಪುಣ್ಯ', 'ಮನೆಗೊಂದು ಆಳು' ಇವೆಲ್ಲ ಅದಕ್ಕೆ ಪೂರಕ. ಭಾವನಗರಕ್ಕೆ ಬಂದಿಳಿದ ವಿಶ್ವೇಶ್ವರ ಕಾಣುವುದೂ ತನ್ನ ಥಿಸಿಸ್‌ಗೆ ಪೂರಕವಾದ ವಿಚಾರಗಳನ್ನು-

"ಭಾವನಗರ ವಾಸ್ತವವಾಗಿ ನಗರವಲ್ಲ. ಸಣ್ಣ ಪಟ್ಟಣಕ್ಕಿಂತ ತುಸು ದೊಡ್ಡದು. ನಿವಾಸಿಗಳು: ನಿವೃತ್ತ ಅಧಿಕಾರಿಗಳು, ರೈತರಿಗೆ ವಿದಾಯ ನುಡಿದು ಹಳ್ಳಿಗಳಿಂದ ಬಂದ ಭೂಮಾಲೀಕರು, ಸಣ್ಣಪುಟ್ಟ ಕಚೇರಿಗಳ ಉದ್ಯೋಗಿಗಳು, ವರ್ತಕರು........" (ಪುಟ 9)

ಇಡೀ ಭಾವನಗರದ ರಚನೆಯೂ ಸರಳವಾದುದು.

"ಇಪ್ಪತ್ತೇ ನಿಮಿಷದಲ್ಲಿ ನಂದಗೋಕುಲವನ್ನು ಸುತ್ತಿ ಬಂದಿದ್ದೆ. ಎಪ್ಪತ್ತು, ಹೆಚ್ಚೆಂದರೆ ಎಂಬತ್ತು ಮನೆಗಳು. ಕಳೆದ ಹತ್ತು ವರ್ಷಗಳಲ್ಲಿ ಹುಟ್ಟಿ ಬೆಳೆದಿರಬೇಕು, ಈ ಗೃಹ ಸಮುಚ್ಚಯ. ಎಂಟು ಹತ್ತು ಮಹಡಿ ಕಟ್ಟಡಗಳು. ಕೆಲವಕ್ಕೆ ಹಿತ್ತಿಲ ಗೋಡೆಗಳಿದ್ದುವು. ಬೇರೆ ಕೆಲವು ಹಿತ್ತಿಲುಗಳಿಗೆ ಮೂರು ಬದಿಗಳಿಗೆ ಮಾತ್ರ ಗೋಡೆ. ನಾಲ್ಕನೆಯದು ಮುಳ್ಳುಬೇಲಿ. ಪಕ್ಕದ ಮನೆಯವನು ದೊಡ್ಡ ಮನಸ್ಸು ಮಾಡಿ ಅಲ್ಲಿ ಗೋಡೆ ಕಟ್ಟಿಸಬೇಕು. ಉಳಿದ ಕೆಲವಕ್ಕೆ ಗೋಡೆಯೂ ಇಲ್ಲ, ಬೇಲಿಯೂ ಇಲ್ಲ....ಇಲ್ಲಿ ವಾಸ ಮಾಡುವ ಜನ ನಾಗರಿಕರು ಎನ್ನದೆ ವಿಧಿಯುಂಟೇ" (ಪುಟ 23).

ಇಂಥ ವಿವರಗಳು ಕೃತಿಯುದ್ದಕ್ಕೂ ಇವೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಈ ವಿವರಗಳ ಒಳಗೆ ಹುದುಗಿರುವ ಪರಸ್ಪರ ವಿರೋಧ ಅನ್ನಿಸುವ ವಿಚಾರಗಳು. ನಗರವಲ್ಲದಿದ್ದರೂ ಊರು 'ಭಾವನಗರ' ಆಗುತ್ತದೆ. ನಾಗರಿಕರಲ್ಲದಿದ್ದರೂ ಜನ 'ನಾಗರಿಕ'ರಾಗುತ್ತಾರೆ. ಆ ಊರಿನ ವಿಸ್ತರಣದ ಹೆಸರು 'ನಂದಗೋಕುಲ'ವಾದರೂ ಅಲ್ಲಿ 'ಕುಡಿಯೋಕೆ ಹಾಲಿಲ್ಲ'(ಪುಟ 30). 'ಸೆಗಣಿಗೆ ಬೇಕು ಎಂದರೂ ಅಲ್ಲಿ ಹಸುವಿಲ್ಲ'(ಪುಟ 24). ಸಾಂಬಶಿವ ಅಯ್ಯರ್ ಅವರು ಉದ್ಯಾನದಲ್ಲಿ ಆಡುವ ಮಾತುಗಳು, ಭಾವನಗರದ ಪುಷ್ಪೋದ್ಯಾನ, ಅರಚುವ ರೇಡಿಯೋ, - ಇವೆಲ್ಲವೂ 'ಮಧ್ಯಮ ವರ್ಗದ ಹಲವು ಸಹಸ್ರ ಕುಟುಂಬಗಳ ಕಥೆ' (ಪುಟ 26), ವಿರೋಧಾಭಾಸಗಳ ತವರು.

ಅಲ್ಲಿನ ಜನ ಮಾತನಾಡುವಾಗ ಪರಸ್ಪರ ಸಂಬೋಧಿಸುವ ಕ್ರಮವನ್ನು ನೋಡಬೇಕು. ಅದು ಕೃತಕವೂ ಅಲ್ಲ, ಗೌರವಸೂಚಕವೂ ಅಲ್ಲ.

1. ಪಾಸ್ಕಲ್ ಪ್ರತಿಸಲವೂ 'ಸರ್' ಎಂದೆನ್ನುವುದು.

2. ಮಿಸೆಸ್, ಮಿಸ್ಟರ್, ಮಿಸ್‌ಗಳೆಲ್ಲ ಹೆಸರಿನೊಂದಿಗೆ ಸೇರಿರುವುದು.

3. ದಿನಾ ಭೇಟಿಯಾದರೂ ಕೃತಕವಾಗಿ 'ಭೇಟಿ ಮಾಡಿಸಿಕೊಳ್ಳುವುದು.'

ಇಂಥವರ ಜೊತೆಗೆ ಇಡೀ ಭಾವನಗರದ ಜೀವನ ಸೇರಿಹೋಗಿದೆ. ಅವುಗಳ ಮಧ್ಯೆ ಅಲ್ಲಿನ ಚಿಂತನಕ್ರಮ ಹರಳುಗಟ್ಟಿದೆ. ಚಾರ್‌ಮಿನಾರ್ ಸಿಗರೇಟ್ ಸೇದುವ ಸಾಂಬಶಿವ ಅಯ್ಯರ್ ತನ್ನನ್ನು ಪರಿಚಯಿಸಿಕೊಳ್ಳುವ ರೀತಿ.

"ಹುಂ ಬಿ. ಎಸ್. ಸಾಂಬಶಿವ ಅಯ್ಯರ್, ಬಿ. ಫಾರ್ ಭಾವನಗರ; ಎಸ್. ಶಿವರಾಮಕೃಷ್ಣ - ನಮ್ಮ ತಂದೆ ಹೆಸರು....ನಾನು ಊರು ಬಿಟ್ಟು ಹೋದ ಮನು ಸದರ್ನ್‌ರೈಲ್ವೆ ಸೇರಿ ಸ್ಟೇಷನ್ ಮಾಸ್ಟರಾಗಿ ರಿಟೈರಾದೆ. ನನ್ನ ಮಗ ಆಫೀಸರು - ಕಮರ್ಷಿಯಲ್ ಟ್ಯಾಕ್ಸ್ ಆಫೀಸರರು. ಹಹ್ಹ...." (ಪುಟ 26).

ವಿಶ್ವೇಶ್ವರನು ಭಾವನಗರಕ್ಕೆ ಬರುವುದು ಕೂಡಾ ಈ ಮಧ್ಯಮ ವರ್ಗವನ್ನು ಅಧ್ಯಯನ ಮಾಡುವುದಕ್ಕೆ. ರೈಲನ್ನೇರಿದ ಆತನಿಗೆ ಮೊದಲಿಗೆ ಗೋಚರವಾಗುವುದು 'ಇಡೀ ಸಮಾಜದ ಸೂಕ್ಷ್ಮ ಪ್ರತಿಬಿಂಬ' (ಪುಟ 7). 'ಕಿಷ್ಕಿಂದೆಯ ನಗರ - ಪಟ್ಟಣಗಳಲ್ಲಿ ಸಮಾಜದ ವರ್ಗೀಕರಣ' ಎಂಬ ಹೆಸರಿನ ಆತನ ನಿಬಂಧಕ್ಕೆ ಆತ ಮಾಡಿಕೊಂಡ ಟಿಪ್ಪಣಿಗಳು ಕೂಡಾ ತಾತ್ತ್ವಿಕವಾಗಿ ಖಚಿತವಾದುವು - "ಹಿಂದೆ ಹಿಂದೂ ಧರ್ಮವನ್ನು ಚತುರ್ವರ್ಣಗಳಾಗಿ ವಿಂಗಡಿಸಿದರು. ಅದು ದುಡಿಮೆಯ ಆಧಾರದ ಮೇಲೆ.... ಈಗಿನ ಪೀಳಿಗೆಯ ಶ್ರೀಮಂತರ ತಾಯ್ತಂದೆಯರೂ ಶ್ರೀಮಂತರೇ ಆಗಿದ್ದರೆಂದು ಹೇಳುವುದು ಕಷ್ಟ. ಪ್ರತಿ ನಗರದಲ್ಲಿಯೂ ಕಳೆದ ಯುದ್ಧದ ಕಾಲದಲ್ಲಿ ಶ್ರೀಮಂತರಾದವರ ಕುಟುಂಬಗಳಿವೆ. ಆದಾದ ಮೇಲೆ ಮಧ್ಯಮ ವರ್ಗ - ಮೇಲಣ ಹಾಗೂ ಕೆಳಗಣ.... ಈ ವಿಚಾರಗಳ ಪ್ರತಿಪಾದನೆಗಾಗಿ ನೂರಾರು ಪುಟಗಳ ಸಾಕ್ಷ್ಯ ಸಾಹಿತ್ಯ...." (ಪುಟ 50)

ಆದರೆ ವಿಶ್ವೇಶ್ವರನಿಗೆ ಇದನ್ನು ಮೂರ್ತಗೊಳಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಆತನೂ ಭಾವನಗರದ ಒಂದು ಭಾಗವಾಗಿ ಮಾರ್ಪಡುತ್ತಾನೆ. ಕಾದಂಬರಿಯ ಪ್ರಧಾನ ಸಂದರ್ಭವೂ ಇದೇ ಆಗಿದೆ. ಈ ಮೂಲಕ ಮಧ್ಯಮ ವರ್ಗದ ಕ್ರಿಯಾಶೀಲತೆಯನ್ನೂ, ಕಾರ್ಯರೂಪವನ್ನೂ ಚಿತ್ರಿಸಲು ನಿರಂಜನರು ಯತ್ನಿಸಿದ್ದಾರೆ. ಈ ಕಾರ್ಯಶೀಲತೆಗೆ ಮುಕುಂದ ಮತ್ತು ಮಾಲತಿಯರ ಅಗತ್ಯವಿದೆ. ಸಾಹಿತ್ಯಪ್ರೀತಿಯ ಮುಕುಂದನ ತೆವಲುಗಳು ಮತ್ತು ವಿಶ್ವೇಶ್ವರ ಮಾಲತಿಯರ ಪ್ರಣಯ ಪ್ರಸಂಗ ಕೃತಿಗೆ ಹೊಸದಾದ ಒಂದು ಆಯಾಮವನ್ನು ನೀಡಿವೆ. ಆದರೆ ಅದು ಮಧ್ಯಮ ವರ್ಗದ ಕ್ರಿಯಾಶೀಲತೆ ಎಂಬುದನ್ನು ಮರೆಯುವಂತಿಲ್ಲ. ಇದನ್ನು ಸ್ವಲ್ಪ ವಿವರವಾಗಿ ಗಮನಿಸಬೇಕು. ಏಕೆಂದರೆ ಕಾದಂಬರಿಯ ದೌರ್ಬಲ್ಯವೂ ಇಲ್ಲಿಂದೇ ಇದೆ.

ವಿಶ್ವೇಶ್ವರನು ಸಾಹಿತಿಯೆಂಬ ಸುದ್ದಿ ಭಾವನಗರದಲ್ಲಿ ನಿಧಾನವಾಗಿ ಹರಡಿದಾಗ ವಿಶ್ವೇಶ್ವರ ಅದಕ್ಕೆ ದ್ವಿಮುಖ ಪ್ರತಿಕ್ರಿಯೆ ನೀಡುತ್ತಾನೆ. ಒಂದೆಡೆಯಿಂದ ಅದನ್ನು ನಿರಾಕರಿಸುತ್ತಾನೆ. ಇನ್ನೊಂದೆಡೆಯಿಂದ ಅದರಿಂದಾಗುವ ಲಾಭದ ಬಗ್ಗೆ ಕಣ್ಣಿಡುತ್ತಾನೆ. ಹಾಗಾಗಿ ಮುಕುಂದನ ಪ್ರಥಮ ಭೇಟಿಯಲ್ಲಿ ಆತ ಅತ್ಯಂತ ಉದಾಸೀನನಾಗಿ "ಅಪಾದನೆಯಿಂದ ವಿಮುಕ್ತನಾಗುವುದು ಸಾಧ್ಯವಾದರೆ ಆಗಲಿ" (ಪುಟ 59) ಎಂದಷ್ಟೇ ಯೋಚಿಸುತ್ತಾನೆ. ಈ ಉದಾಸೀನ ಕೆನೆಗಟ್ಟುವುದು ಆತ ಮಾರ್ಕೆಟ್ಟಿನಲ್ಲಿ 'ಸತ್ಯಪ್ರೇಮ' ಎಂಬ ಕಾದಂಬರಿಯನ್ನು ಕೊಂಡಾಗ. ತನಗೆ ಸಂಬಂಧವಿಲ್ಲದ ವಿಚಾರದಲ್ಲಿ ಆತ ಆಸಕ್ತಿ ವಹಿಸುವಾಗ, ಆತ ಪರೋಕ್ಷವಾಗಿ ಇಷ್ಟಪಡುವ ಸಂಗತಿಯೂ ತಿಳಿಯುತ್ತದೆ. ಸಾಂಬಶಿವ ಅಯ್ಯರ ಜೊತೆ ಮಾತಾಡುವಾಗ 'ನಾಲ್ಕು ದಿವಸ ಇದ್ದು ಹೋಗುವಾತ - ನನಗೇನಂತೆ' (ಪುಟ 78) ಎಂದು ಔದಾಸೀನ್ಯದಿಂದ ವರ್ತಿಸುತ್ತಾನೆ. ಇದನ್ನೆಲ್ಲ ಗಮನಿಸಿದರೆ ಮುಕುಂದ ಈತನ ಸನ್ಮಾನಕ್ಕೆ ತಯಾರು ಮಾಡಿದ್ದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ. ಆದರೆ ಕೊನೆ ಗಳಿಗೆಯಲ್ಲಿ ವಿಶ್ವೇಶ್ವರ ಅದರಿಂದ ತಪ್ಪಿಸಿಕೊಳ್ಳುತ್ತಾನೆ. ಈ ತಪ್ಪಿಸಿಕೊಳ್ಳುವಿಕೆಗೆ ಬೇಕಾದ ಕಾರಣಗಳನ್ನು ಕೃತಿ ಬಲಿಷ್ಠವಾಗಿ ನೀಡಿಲ್ಲ. ಸ್ವಭಾವತಃ ವಿಶ್ವೇಶ್ವರನ ವ್ಯಕ್ತಿತ್ವ ಅಂಥದ್ದಲ್ಲ.

ವಿಶ್ವೇಶ್ವರನ ಬೇಜವಾಬ್ದಾರಿತನದ ಇನ್ನೊಂದು ಮಾದರಿ ಆತನ ಪ್ರಣಯ ಮುಖದಲ್ಲಿದೆ. ಆತನ ಪ್ರಣಯಮುಖ ಎಷ್ಟೊಂದು ಸರಳವಾಗಿದೆಯೆಂದರೆ, ಅದು ಕಾದಂಬರಿಯ ಇತರ ಸಮೃದ್ಧ ವಿವರಗಳೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ಹೊಂದಿಲ್ಲ. ಭಾವನಗರಕ್ಕೆ ಹೊರಟ ರೈಲಿನಲ್ಲಿ ಆತ ಕಂಡದ್ದು 'ಹುಡುಗಿಯ ಬಡಕಲು ಶರೀರ. ಎದೆ ಚಿಗುರಿರಲಿಲ್ಲ....ಹೆಣ್ಣನ್ನು ನಿರ್ಲಜ್ಜವಾಗಿ ನೋಡುವ ಆಸೆ' (ಪುಟ 7). ಭಾವನಗರದಿಂದ ಹಿಂದಿರುಗುವಾಗಲೂ ಆತ ಕಂಡದ್ದು 'ಆ ಪ್ರವಾಸೀ ಸಂಸಾರ. 'ಎದೆ' ಇಲ್ಲದ ಸಣಕಲ ಹುಡುಗಿ' (ಪುಟ 143). ಆತನ ಈ ಸ್ಥಾಯಿ ಗುಣದಿಂದಾಗಿ ಉಳಿದೆಲ್ಲ ವಿವರಗಳು ಸರಾಗವಾಗಿ ಬರುತ್ತವೆ.

1. ನಂದಗೋಕುಲದಲ್ಲಿ ಆತ ಕೆಜ್ಜಲು ಉಣ್ಣುವ ಎಳೆಗರನ್ನು ಕಾಣುವುದು (ಪುಟ 10)

2. ನಂದಗೋಕುಲದಲ್ಲಿ ಕೊರೆದ ಹೆಸರುಗಳಲ್ಲಿ ಮೊದಲು ಕಾಣುವುದು 'ರೇಣುಕಾ' (ಪುಟ 10)

3. ಜೇಮ್ಸ್‌ನ ಮನೆಯಲ್ಲಿ ಆತನ ಕಿವಿಗೆ ಬೀಳುವುದು 'ಹನ್ನೆರಡು ಹದಿಮೂರರ ಹುಡುಗಿಯ ಸ್ವರ' (ಪುಟ 11)

4. ನಂದಗೋಕುಲದ ಮೊದಲನೇ ಬೀದಿಯಲ್ಲಿ 'ಗೇಟಿಗೆ ಆತು ನೋಡುತ್ತಿದ್ದ ಯುವತಿ....ಅವಸರವಸರವಾಗಿ ತೀಡಿಕೊಂಡಿದ್ದ ಮುಂಗುರುಳು' (ಪುಟ 31)

5. ಜೇಮ್ಸ್‌ನ ಪತ್ನಿ 'ತೆರೆಸಾಳ ವಕ್ಷಸ್ಥಲ ಆಕರ್ಷಕವಾಗಿತ್ತು. ಆಕೆಯ ಅರ್ಧ ನಿಮೀಲಿತ ನೇತ್ರ....ಮೂಗು ತುಸು ಚಿಕ್ಕದು' (ಪುಟ 35) ಎಂದು ಆತ ಅಂದುಕೊಳ್ಳುವುದು.

6. ನಿವೃತ್ತ ನ್ಯಾಯಾಧೀಶರ ಪತ್ನಿ ಆಗಾಗ 'ಅಲಂಕೃತೆಯಾಗಿ ಮನೆಯ ಬಾಗಿಲಲ್ಲಿ' ಕಾಣಸಿಗುವುದು. (ಪುಟ 39).

-ಇತ್ಯಾದಿ.

ಯಥೇಚ್ಛವಾಗಿರುವ ಈ ವಿವರಗಳನ್ನು ಗಮನಿಸಿದರೆ ವಿಶ್ವೇಶ್ವರ ಮಾಲತಿಯನ್ನು ಮದುವೆಯಾದದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. 'ಪುಣ್ಯವಾಹಿನಿ'ಯಲ್ಲಿ ಆಕೆಗೋಸ್ಕರ ಕಾದದ್ದು ಕೂಡಾ ಆಕಸ್ಮಿಕವಲ್ಲ. ಇದೇ ಕೃತಿಯ ದುರ್ಬಲ ಅಂಶ ಎಂದೆನ್ನಿಸುತ್ತದೆ. ಏಕೆಂದರೆ ಥಿಸಿಸ್ ಬರೆಯಲೆಂದು ಹೊರಟುಬಂದ ವಿಶ್ವೇಶ್ವರ ಭಾವನಗರದೊಂದಿಗೆ ಯಾವ ಸಂಬಂಧವನ್ನು ಹೊಂದಿದ್ದನೆಂಬುದೇ ಇಲ್ಲಿ ಖಚಿತವಾಗಿಲ್ಲ. ಆತ ಅಲ್ಲಿಂದ ಹೊರಟು ಬರುವಾಗ ಇದ್ದ ಮನೋಭಾವ, ಹೊರಟು ಹೋಗುವಾಗ ಎಲ್ಲಿಯೂ ಬದಲಾದಂತಿಲ್ಲ. ಇದನ್ನು ಗಮನಿಸಿದರೆ ಆತನಿಗೆ ಥಿಸಿಸ್ ಬರೆಯಲಾಗದ ಸಂದರ್ಭ ಹೇಗೆ ಒದಗಿ ಬಂತೆಂಬುದು ತಿಳಿಯುವುದಿಲ್ಲ. ಈ ದೃಷ್ಟಿಯಿಂದ ಕಾದಂಬರಿಯ ಅಂತ್ಯದಲ್ಲಿ ಬರುವ "ನಂದಗೋಕುಲದಲ್ಲಿ ಈ ಒಂದು ತಿಂಗಳಲ್ಲಿ-ಇಪ್ಪತ್ತೊಂಬತ್ತನೆಯ ದಿನ ಇವತ್ತು - ನಾನು ನಡೆಸಿದ ಅಧ್ಯಯನದಿಂದ ಸಮಾಜ ವರ್ಗೀಕರಣಕ್ಕೆ ಸಂಬಂಧಿಸಿ ನಾನು ಮಾಡಿಕೊಂಡು ಬಂದಿದ್ದ ಟಿಪ್ಪಣಿಗಳು ಶಿಥಿಲವಾಗಿ ಕಂಡಿವೆ. ಸಿದ್ಧಾಂತದ ಕಟ್ಟಗಳನ್ನು ವಿಶಿಷ್ಟ ಅನುಭವದ ಒರೆಗಲ್ಲಿಗೆ ತೀಡಿದಂತಾಗಿದೆ" (ಪುಟ 140) ಎಂಬ ವಿಶ್ವೇಶ್ವರನ ಮಾತು ಕೇವಲ ಒಂದು ಹೇಳಿಕೆಯಂತೆ ತೋರುತ್ತದೆ. ಕೃತಿಯ ಒಳಗಿನ ವಿವರಗಳು ವಿಶ್ವೇಶ್ವರನನ್ನು ಕಾಡುವಷ್ಟು ಸಮರ್ಥವಾಗಿಲ್ಲ. ಏಕೆಂದರೆ 'ಪ್ರೇಮ'ದ ಮಟ್ಟಿಗೆ ಆತ ಮೊದಲೇ ಸಿದ್ಧ.

ಆದರೆ ಮಧ್ಯಮ ವರ್ಗದ ಬದುಕು ಕೆಳವರ್ಗ ಮತ್ತು ಮೇಲ್ವರ್ಗದೊಂದಿಗೆ ಹೊಂದಿರುವ ಅಂತರ್ ಸಂಬಂಧದ ಕುರಿತು ಈ ಕೃತಿಯಲ್ಲಿ ಅತ್ಯಂತ ಸೂಕ್ಷ್ಮ ವಿವರಗಳಿವೆ. ಅದು ಮುಕುಂದ ಓಡಿಸಿದ ಭಾವನಗರದ ಸೂಳೆ ಮತ್ತು ಭಾವನಗರದ ಜಡ್ಜನ ಹೆಂಡತಿಯ ಕಾಮುಕ ನಡಾವಳಿಗಳ ಮೂಲಕವಾಗಿ ಮತ್ತು ಇನ್ನೊಂದೆಡೆಯಿಂದ ಪಾಸ್ಕಲ್ ಮತ್ತು ತೋಟದ ಮಾಲಿಯ ಕಳ್ಳತನದ ಮೂಲಕವಾಗಿ ಚಿತ್ರಿತವಾಗಿದೆ. ಈ ಸಂಬಂಧದ ರಾಜಕೀಯ ಸ್ವರೂಪ ಇಂತಿದೆ.

ಅ) ಜಡ್ಜನ ಕಾಮುಕ ಹೆಂಡತಿ
(ಪುಟ51, 106ರಲ್ಲಿಬಂದಿರುವ ವಿವರಗಳು)

ಉ) ಕಾಫಿಗೆ ನಾಲ್ಕಾಣೆ ಬೇಡುವ ಮಾಲಿ
(ಪುಟ : 28)

ಆ) ವ್ಯಾಖ್ಯಾನ : ರುಗ್ಣ ಶಯ್ಯೆಯಲ್ಲಿರುವ ಪಾಳೆಯಗಾರಿಕೆ ಗಂಡ ಆ ಆವರಣದಲ್ಲಿ ತನಗಿಷ್ಟ ಬಂದಂತೆ ಬದುಕುವ ಔದ್ಯೋಗೀಕರಣ ಹೆಂಡತಿ.

(ಊ)
ಪಾಸ್ಕಲ್

ಇ) ಕಾಮ ಸಮಸ್ಯೆಯಾಗದ ವರ್ಗ

ಈ) ವಿಶ್ವೇಶ್ವರ
ಮುಕುಂದ
ಮಾಲತಿ
(ಮಧ್ಯಮ ವರ್ಗ)

ಋ) ಜಡ್ಜ್ ಬಿಡಿ ಓಡುವ ಕೋಳಿ
ನಾಲ್ಕು ನಂದಗೋಕುಲದ ನಾಗರಿಕ
ಜನ (ನಾಗರೀಕ ಪ್ರಜ್ಞೆ ಇಲ್ಲ.)

ಜಡ್ಜನ ಹೆಂಡತಿಯ ಕಾಮುಕ ನಡಾವಳಿ (ಅ ಮತ್ತು ಆ) ಇಡೀ ಭಾವನಗರಕ್ಕೇ ತಿಳಿದಿದ್ದರೂ ಅಲ್ಲಿ ಎಂದೂ ಅಸಮಾಧಾನ ಹುಟ್ಟಿಲ್ಲ. ಸ್ವತಃ ಜಡ್ಜನೇ ಅದನ್ನು ಮುಕ್ತವಾಗಿ ಸ್ವೀಕರಿಸಿಬಿಟ್ಟಿದ್ದಾನೆ. ಪುಟ 52ರಲ್ಲಿ ಪಾಸ್ಕಲ್ ಹೇಳುವ ಮಾತುಗಳು.

"ಮಿಸೆಸ್ ಜಡ್ಜರ ನಡತೆ ಚೆನ್ನಾಗಿಲ್ಲ. ಸರ್........ಒಬ್ಬ ಆಳು ಇದ್ದ. ಅವನ ಜತೆ ಏನೋ ಆಯ್ತು ಸರ್. ನಂದಗೋಕುಲಕ್ಕೆಲ್ಲ ಗೊತ್ತು...."

ಇಷ್ಟಿದ್ದರೂ ಜನರಾಗಲೀ, ನ್ಯಾಯಾಧೀಶರಾಗಲೀ ಊರಿಗೆ ಬಂದ ವೇಶ್ಯೆಯ ಬಗೆಗೆ ತಲೆಕೆಡಿಸಿಕೊಳ್ಳುತ್ತಾರೆ (ಆ⟶ಎ). ಆ ವೇಶ್ಯೆಯನ್ನು ಓಡಿಸಿದರೆ "ಮುಂದಿನ ಸಲ ಪುರಸಭೆ ಚುನಾವಣೆ ಆಗುವಾಗ....ನಿಮ್ಮನ್ನು ಆರಿಸಿ ಕಳಿಸ್ತೀವಿ" ಎಂದು ನ್ಯಾಯಾಧೀಶನು ಮುಕುಂದನಿಗೆ ಹೇಳುತ್ತಾನೆ. ವೇಶ್ಯೆಯನ್ನು ಓಡಿಸುವ ಹವಣಿಕೆಯಲ್ಲಿ ಮುಕುಂದ ಹೇಳುವ ಮಾತುಗಳು ಮಧ್ಯಮವರ್ಗದ ಅಣಿಮುತ್ತುಗಳಾಗಿವೆ.

"ಸಾಂಘಿಕ ಜೀವನಕ್ಕೆ, ಪಾವಿತ್ರ್ಯಕ್ಕೆ, ಪರಿಶುದ್ಧತೆಗೆ ನಂದಗೋಕುಲ ಹೆಸರಾಗಿದೆ. ನಮ್ಮ ಒಕ್ಕಟ್ಟು ಇಡೀ ಭಾರತ ದೇಶಕ್ಕೇ ಮಾದರಿ. ಒಳಹೊಕ್ಕಿರುವ ಪಿಡುಗನ್ನು ಹೊರಕ್ಕೆ ಅಟ್ಟದಿದ್ದರೆ ದೇಶ ಉಳೀತದೆ....ನೆನಪಿಡಿ. ಅಡಿಯ ಮುಂದಿಡೆ ಸ್ವರ್ಗ....ಸ್ತ್ರೀಯ ಮಾನರಕ್ಷಣೆಯ ಹೊಣೆ ನಮ್ಮ ಮೇಲಿದೆ...." (ಪುಟ 87-88). ಇದೇ ಮುಕುಂದ ಜಡ್ಜನ ಹೆಂಡತಿಯ ವಿಷಯ ಬಂದಾಗ ರಾಮಮಂದಿರದ ಯೋಜನೆಯ ಬಗ್ಗೆ ಮಾತಾಡುತ್ತಾನೆ. ವಿಶ್ವೇಶ್ವರ ತನಗೆ ಎದಿರಾದ ತರುಣಿಯರ ಪ್ರೈಮಾಟದ ಬಗ್ಗೆ ಕನಸು ಕಾಣುತ್ತಿರುತ್ತಾನೆ. ಈ ವಿರೋಧಾಭಾಸಗಳ ಚಿತ್ರಣದಲ್ಲಿ ಕಾದಂಬರಿ ತನ್ನ ಅತ್ಯುತ್ತಮ ಭಾಗವನ್ನು ಸೃಜನಾತ್ಮಕವಾಗಿ ತೆರೆದಿಟ್ಟಿದೆ. ಹಣ ತೆಗೆದುಕೊಟ್ಟರೂ ಕೊಳ್ಳದ ಪಾಸ್ಕಲ್ (ಪುಟ 140) ಮತ್ತು ಹಣಮಾಡಿದರೂ ಬಡತನದಲ್ಲಿ ಬೆಂದು ನಾಲ್ಕಾಣೆಗೆ ಕೈ ಒಡ್ಡುವ ಮಾಲಿ (ಪುಟ 28) ತಮ್ಮ ವರ್ಗನೆಲೆಯಲ್ಲಿ ಸ್ಥಗಿತವಾಗಿದ್ದರೂ ಆಕರ್ಷಕವಾದ ಜೀವನವುಳ್ಳವರು, ಪ್ರಾಮಾಣಿಕತೆಯ ದೃಷ್ಟಿಯಿಂದ.

ಹೀಗೆ ಈ ಕೃತಿ ಮಧ್ಯಮ ವರ್ಗದ ಜೀವನಾನುಭವವನ್ನು ಅದರೆಲ್ಲ ಸಂಕೀರ್ಣತೆಗಳ ಮೂಲಕ ದಾಖಲಿಸಲು ಯತ್ನಿಸಿದೆ. ಆದರೆ ಕೃತಿಯೊಳಗಿನ ವಿವರಗಳು ಪಾತ್ರಗಳ ಬೆಳವಣಿಗೆಯೊಂದಿಗೆ ಸಂಬಂಧ ಪಡೆಯದೇ ಇರುವುದರಿಂದ, ಅದೊಂದು ಸಾಮಾನ್ಯ ಕಾದಂಬರಿಯಾಗಿದೆ. ○

ಅಭಯ

—ಎ. ಪಿ. ಮಾಲತಿ

೧೯೫೪ರಲ್ಲಿ ಪ್ರಕಟವಾಗಿ ೧೯೭೬ರ ಅವಧಿಯಲ್ಲಿ ಮೂರನೇ ಮುದ್ರಣ ಕಂಡ, ತೆಲುಗಿನಲ್ಲಿ ಅನುವಾದಿತವಾಗಿ ಜನಪ್ರಿಯತೆ ಗಳಿಸಿದ; ಸ್ತ್ರೀಯರ ಮಾನಸಿಕ ತೊಳಲಾಟ, ದೈಹಿಕ ತೊಂದರೆಗಳು, ಆರ್ಥಿಕ ಕಷ್ಟ, ಅವರ ಗೋಳಿನ ಹಲವು ಸಮಸ್ಯೆಗಳನ್ನು ಉದ್ದೇಶಿಸಿ ರಚಿಸಿದ ನಿರಂಜನರ ಸಾಮಾಜಿಕ ಕಾದಂಬರಿ 'ಅಭಯ'. ಸಮಾಜದಿಂದ ಹೊರತಳ್ಳಲ್ಪಟ್ಟು ಯಾವುದೇ ರಕ್ಷಣೆಯಿಲ್ಲದೆ ಅನಾಥರಾದ ಹತಭಾಗಿನಿ ಸ್ತ್ರೀಯರಿಗೆ ಅನುಕಂಪದ ರಕ್ಷಣೆ ಒದಗಿಸುವುದೇ ಕಾದಂಬರಿಯ ಆಶಯ.

ನಿರಂಜನರು ಈ ಕಾದಂಬರಿಯನ್ನು ರಚಿಸಿದ ಕಾಲದಲ್ಲಿ ಅಂದರೆ ಸುಮಾರು ಮೂರು ದಶಕಗಳ ಹಿಂದೆ ನಮ್ಮ ಸ್ತ್ರೀಯರಿಗೆ ಸಾಕಷ್ಟು ವಿದ್ಯಾಭ್ಯಾಸ ಇರಲಿಲ್ಲ.

ಹೆಚ್ಚಿನ ಸ್ತ್ರೀಯರು ಅನಕ್ಷರಸ್ಥರು ಅಥವಾ ಪ್ರೈಮರಿ ಶಾಲೆಗೆ ಮಾತ್ರ ಹೋದವರು. ಹಿರಿಯರು ವಿಧಿಸಿದ ಕಟ್ಟುಪಾಡುಗಳಿಗೆ ಜೋತುಬಿದ್ದು ವಿವಿಧ ಸಂಪ್ರದಾಯಗಳು, ನಡವಳಿಕೆಗಳು, ರೂಢಮೂಲ ನಂಬಿಕೆಗಳಿಗೆ ಹೆದರುತ್ತ ಅವುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದೇ ಅವರ ಜೀವನದ ಉದ್ದೇಶವಾಗಿತ್ತು. ಸಮಾಜ ವ್ಯವಸ್ಥೆಯನ್ನು ಅತಿಕ್ರಮಿಸಿದ ಹೆಣ್ಣಿಗೆ ಮಾನವೀಯ ಅನುಕಂಪವಿಲ್ಲದೆ ನೀತಿಭ್ರಷ್ಟಳೆಂಬ ಹಣೆಪಟ್ಟಿ. ಸಮಾಜದಿಂದ ಬಹಿಷ್ಕಾರ. ಧೈರ್ಯ, ಆತ್ಮವಿಶ್ವಾಸದ ಕೊರತೆಯಿಂದ ನೊಂದ - ಬೆಂದ, ಬೇಯುತ್ತ ಜೀವನ ಸವೆಯಿಸುವ ಅಭಾಗಿನಿಯರ ಸ್ಥಿತಿ ಶೋಚನೀಯ. ಇಂತಹ ಸ್ತ್ರೀಯರಿಗೆ ಸುಡುತ್ತಿರುವ ಸಮಾಜದಿಂದ ತಪ್ಪಿಸಿಕೊಳ್ಳಲು ಹೊಸ ತಂಪಿನ ನೆರಳು ಬೇಕು. ಧೈರ್ಯ-ಆಶಾವಾದದ ಅಭಯಬೇಕು. ಅಭಯಧಾಮದ ಸೃಷ್ಟಿಯಾದದ್ದು ಹೀಗೆ, ಅಸಂಖ್ಯಾತ ಅಭಾಗಿನಿಯರಿಗೆ ರಕ್ಷಣೆ ಕೊಡುವ ಉದ್ದೇಶದಿಂದ. ಅವು 'ಅಭಯ'ದ ನಾಯಕಿಯ ದೃಷ್ಟಿಯಲ್ಲಿ....

"ನೀತಿಯುತವಲ್ಲವೆಂದು ಪರಿಗಣಿಸಲ್ಪಟ್ಟ ಬದುಕಿನಿಂದ ಪಾರಾಗಿ ಬಂದು ಕಣ್ಣೀರಿನಲ್ಲಿ ಕೈತೊಳೆದು ಪ್ರಾಯಶ್ಚಿತ್ತ ಅನುಭವಿಸಬೇಕಾದ ಆಶ್ರಯ!"

ಹೆಣ್ಣು ಗಂಡಿಗೆ ಸಂಬಂಧಿಸಿದ ಅನೀತಿ, ಅಧರ್ಮಗಳನ್ನು ಅಭಯಧಾಮಗಳು ಸಂಪೂರ್ಣ ಪರಿಹರಿಸದಿದ್ದರೂ ಅದಕ್ಕಾಗಿ ಶ್ರಮಿಸುವುದು ಸಮಾಜದ ಆರೋಗ್ಯಕ್ಕೆ ಹಿತಕಾರಿ ಎನ್ನುತ್ತಾರೆ ನಿರಂಜನರು.

ಈ ಕಾದಂಬರಿಯ ಕಥಾನಾಯಕಿ ತುಂಗಮ್ಮ. ಕೇವಲ ಫೋರ್ತ್‌ಫಾರ್ಮ್ ಓದಿದ ಅಷ್ಟೇನೂ ಸುಂದರಿಯಲ್ಲದ ತುಂಗಮ್ಮನಿಗೆ ಬಡತನದಿಂದಲೂ, ವರನ ಕಡೆಯವರು ಕೇಳುವ ದಕ್ಷಿಣೆಯಿಂದಲೂ ಕಂಕಣಬಲ ಕೂಡಿ ಬಂದಿರಲಿಲ್ಲ. ಅಕ್ಕನ ಮದುವೆಯಲ್ಲಿ ನಾರಾಯಣಮೂರ್ತಿ ಎಂಬ ಯುವಕನ ಪರಿಚಯವಾಗಿ ಸ್ನೇಹ ಬೆಳೆದು ವಯಸ್ಸಿಗನುಗುಣವಾದ ಕಾಮನೆಗಳು ಭುಗಿಲೆದ್ದು ಕ್ಷಣಿಕ ಆಸೆಗೆ ಬಲಿಯಾಗುತ್ತಾಳೆ. ಮಾಮೂಲು ಎಲ್ಲ ಗಂಡಸರಂತೆ ನಾರಾಯಣಮೂರ್ತಿ ಅವಳನ್ನು ಮರೆತ. ಆದರೆ ಆವನ ನೆನಪಿನ ಮೊಳಕೆಯೊಡೆದದ್ದು ತುಂಗಮ್ಮನ ಬಸಿರಿನಲ್ಲಿ. ಅಂದಿನ ಸಂಪ್ರದಾಯಸ್ಥ ಸಮಾಜ ಕನ್ಯೆ ತಾಯಿಯಾಗುವುದನ್ನು ಸಹಿಸುತ್ತಿರಲಿಲ್ಲ. ಸಮಾಜಕ್ಕೆ ಹೆದರಿದ ತುಂಗಮ್ಮ ಗುಟ್ಟಾಗಿ ಅಭಯಧಾಮ ಸೇರುತ್ತಾಳೆ. ಅಲ್ಲೇ ಸತ್ತ ಮಗುವಿಗೆ ಜನ್ಮವೀಯುತ್ತಾಳೆ. ಇಲ್ಲದ ನಾಳೆಗಳಲ್ಲಿ ಆಶಾವಾದವಿಟ್ಟು ಅಭಯಧಾಮವೇ ತನ್ನದೆಂದು ತಿಳಿದವಳಿಗೆ ಕೊನೆಗೂ ವಿವಾಹವಾಗುವ ಸುಯೋಗ ಒದಗಿಬರುತ್ತದೆ. ಇದಿಷ್ಟು ಕಾದಂಬರಿಯ ಹಂದರ.

ಯಾವುದೇ ಕಾದಂಬರಿ ಓದುಗನ ಮೇಲೆ ನಿರೀಕ್ಷಿತ ಪರಿಣಾಮ ಬೀರಲು ಅದಕ್ಕಿರುವ ಅರ್ಹತೆಗಳು ಮುಖ್ಯವಾಗಿ ೧. ಕಥಾವಸ್ತು, ೨. ಪಾತ್ರ ನಿರೂಪಣೆ, ೩. ಭಾಷೆ, ಶೈಲಿ. 'ಅಭಯ'ದಲ್ಲಿ ಭಾಷೆ, ಶೈಲಿ ತಂತ್ರಕ್ಕಿಂತ ಮಿಗಿಲಾಗಿ ಒಂದು ಗಟ್ಟಿಯಾದ ವಸ್ತುವಿದೆ. ಸಮಾಜಕ್ಕೆ ಏನೋ ಒಳಿತನ್ನು ಹೇಳುವ ಪ್ರಾಮಾಣಿಕ ಕಳಕಳಿಯಿದೆ. ಎರಡು ದಶಕಗಳ ಹಿಂದಿನ ಕಾದಂಬರಿಯಾದರೂ ಅದರ ವಸ್ತು ಅಂದಿಗೂ ಇಂದಿಗೂ ಒಂದೇ! ಇಂದಿಗೂ ತುಂಗಮ್ಮನಂತಹ ಮುಗ್ಧೆಯರು, ನಾರಾಯಣ ಮೂರ್ತಿಯಂತೆ ಕಪಟ ಗಂಡಸರು, ನೊಂದ ಜೀವಿಗಳಿಗಾಗಿ ನಿಸ್ವಾರ್ಥದಿಂದ ದುಡಿಯುವ ಸರಸಮ್ಮನವರು, ಅಬಲೆಯರನ್ನು ಅನುಕಂಪದಿಂದ ನೋಡುವ ಸೋಮಶೇಖರರನ್ನು, ನಾವು ದಿನನಿತ್ಯ ನೋಡುತ್ತಿದ್ದೇವೆ. ತುಂಗಮ್ಮ ಅಕ್ಕ, ತಮ್ಮ, ತಂದೆಯಿದ್ದರೂ ಪರಿಸ್ಥಿತಿಯ ಒತ್ತಡಕ್ಕೆ ಬಲಿಯಾದ ಹತಭಾಗಿನಿ. ಜಲಜ ಯಾರೂ ಇಲ್ಲದ ಅನಾಥೆ. ಲಲಿತ, ಸಾವಿತ್ರಿ, ಕಮಲ, ದಮಯಂತಿ ಹೀಗೆ ಒಬ್ಬೊಬ್ಬರೂ ಒಂದೊಂದು ವ್ಯಥೆಯ ಕಥೆಯಾಗಿ ಮಣ್ಣಲ್ಲಿ ಉರುಳಲಿದ್ದ ಪುಷ್ಪಗಳಾಗಿ ಅಭಯಧಾಮ ಸೇರಿದವರು. ಅಭಯಧಾಮ ಇವರ ರಕ್ಷಣೆ ಹೊತ್ತು ಸಮಾಜಕ್ಕೆ ಬೆರಳೆತ್ತಿ ತೋರಿಸುತ್ತದೆ. "ಎಲೈ ಗಂಡಸೇ, ಇವರಿಗೆಲ್ಲ ಕನಿಕರ ತೋರಿಸು. ಉಸಿರಾಡು ವಂತೆ ಮಾಡು. ನಿನ್ನ ನೆರಳಿಗೆ ಕರೆಯಿಸಿಕೋ. ಹಕ್ಕಿಪಕ್ಕಿಗಳಿಗೂ ತಮ್ಮದೆಂಬ ಗೂಡು ಇದೆ. ಅಸಹಾಯಕ ಹೆಣ್ಣಿಗೆ ಅದೂ ಇಲ್ಲ." ಅಭಯಧಾಮದ ಅಧಿಕಾರಿ ಸರಸಮ್ಮನ ಆಳ ಅನುಭವದ ಮಾತು ಹೀಗಿದೆ:

"ಸಣ್ಣದಾಗಲಿ ದೊಡ್ಡದಾಗಲಿ ತಪ್ಪು ಮಾಡ್ದೇ ಇರೋರು ಇಲ್ಲವೇ ಇಲ್ಲ. ತಪ್ಪು ಮಾಡೋದು ಮನುಷ್ಯ ಸ್ವಭಾವ. ತಪ್ಪು ಮಾಡಿದ್ಮೇಲೆ ತಿದ್ದಿಕೊಳ್ಳುವುದೂ ಅವನ ಕರ್ತವ್ಯ. ಕೆಟ್ಟವರೂಂತ ಭಾವಿಸುವವರಲ್ಲೂ ಒಳ್ಳೆತನ ಇರ್ರದೆ. ಒಳ್ಳೆಯವ ರೂಂತ ನಾವು ತಿಳಕೊಂಡವರಲ್ಲಿ ಕೆಟ್ಟತನ ಇರ್ರದೆ."

ನೋಡಲು ಸಜ್ಜನನಂತೆ ಕಾಣುವ ನಾರಾಯಣಮೂರ್ತಿ ತುಂಗಮ್ಮನನ್ನು ಕೆಡಿಸಿ ಮದುವೆಗೆ ನಿರಾಕರಿಸಿದಾಗ ಅವಳ ತಂದೆ, "ಇನ್ನೆಷ್ಟು ಮನೆಗಳಿಗೆ ಬೆಂಕಿ ಇಡ್ತೀಯಪ್ಪ. ನೀನು ಮನುಷ್ಯನಲ್ಲ, ರಾಕ್ಷಸ !" ಎನ್ನುತ್ತಾರೆ. ಸೂಳೆಗೇರಿಗೆ ಸೇರಿದ ಹುಡುಗಿಯೊಬ್ಬಳು ಅಭಯಧಾಮದಲ್ಲಿ ಆಶ್ರಯ ಪಡೆದಾಗ ಅವಳನ್ನು ಕರೆದೊಯ್ಯಲು ಹೆತ್ತತಾಯಿ ಬರುತ್ತಾಳೆ. ಆಗ "ನನ್ನನ್ನು ಕಳುಹಿಸಬೇಡಿ ದೊಡ್ಡಮ್ಮಾ" ಎಂದು ಹುಡುಗಿಯ ಆಕ್ರಂದನ. ಕೊನೆಗೆ ತಿಳಿಯುತ್ತದೆ ಆ ತಾಯಿಯೇ ತನ್ನ ಮಗಳನ್ನು ರಣಹದ್ದುಗಳಿಗೆ ಆಹಾರವಾಗಿತ್ತು ಹಣ ಸಂಪಾದಿಸುತ್ತಿದ್ದಳಂತೆ. ಅಭಯ ಧಾಮದ ಕೆಲವು ಹುಡುಗಿಯರು ತಾವು ಒಳ್ಳೆಯವರಾಗಬೇಕೆಂದು ಇಚ್ಛಿಸಿದ್ದು ಕಡಿಮೆ. ಅಲ್ಲೇ ಗಲಾಟೆ, ಜಗಳ,ಕಳ್ಳತನ, ಪಲಾಯನ ಇವೆಲ್ಲ ಕಾದಂಬರಿಯಲ್ಲಿ ಮಾರ್ಮಿಕವಾಗಿ

ಬಂದಿದೆ. ಇದರಿಂದ ರೋಸಿದ ಸರಸಮ್ಮನಿಗೆ ಇವರನ್ನು ಬಿಟ್ಟು ಬಿಡಬೇಕು ಎಂದೆನಿಸಿದೆ ಎಷ್ಟೋಬಾರಿ. ಆದರೆ ಕಲ್ಲಿನಲ್ಲಿ ಮಿನುಗುವ ಮಾಣಿಕ್ಯದ ಹರಳಿನಂತೆ ತುಂಗಮ್ಮನಂತಹ ತಿಳುವಳಿಕೆಯ ಜೀವ ತಮ್ಮ ಬಳಿ ಇರುವಷ್ಟು ಕಾಲ ತಾವು ಬಲಶಾಲಿ ಎಂಬ ಧೈರ್ಯ ಬರುತ್ತದೆ.

ಆಪತ್ಕಾಲದಲ್ಲಿ ರಕ್ಷಣೆಯಿತ್ತ ಅಭಯಧಾಮಕ್ಕೆ ತಾನು ಕೃತಜ್ಞಳಾಗಿರಬೇಕೆಂದು ತುಂಗಮ್ಮನ ಅನಿಸಿಕೆ. ಹೆರಿಗೆ ನಂತರ ತಂದೆ ಕರೆದೊಯ್ಯಲು ಬಂದಾಗ ತುಂಗಮ್ಮ ಅಲ್ಲೇ ಇರುವ ನಿರ್ಧಾರ ಮಾಡಿದ್ದು ಅವಳ ಕೃತಜ್ಞತಾಭಾವಕ್ಕೆ ಸಾಕ್ಷಿ. ಸರಸಮ್ಮನೂ ಅವಳನ್ನು ಅನಾಥೆಯೆಂದು ತಿಳಿಯದೆ ಆಶ್ರಮದಲ್ಲೇ ಸಂಪಾದನೆಯ ಮಾರ್ಗ ಹೇಳಿದಾಗ ತಂದೆಗೆ "ಬದುಕು ನಿರಾಶಾಮಯವೆಂದು ಯಾವ ಕಾಲದಲ್ಲಿಯೂ ತೋರಲಿಲ್ಲವೇನೋ ಎಂಬ ಭ್ರಮೆ ಹುಟ್ಟಿಸುವಷ್ಟು ಸಶಕ್ತವಾಗಿದ್ದವು ಮಾತುಗಳು" ಎನಿಸಿ ಕಣ್ತುಂಬಿ ಬರುತ್ತದೆ.

ಇಂತಹ ನಿಶ್ಚಿಂತಭಾವ, ನಿರ್ಮಲಸ್ನೇಹ ಅಲ್ಲಿದ್ದರೂ ಅದೊಂದು ಬಂಧನವೆಂದು ತಿಳಿದು ಓಡಿಹೋಗುವ ಹುಡುಗಿಯರಿಗೂ ಕೊರತೆಯಿಲ್ಲ. ಅದೃಷ್ಟವಶಾತ್ ವಿವಾಹವಾದ ಅಭಯಧಾಮದ ಹುಡುಗಿ ಕನಕಲಕ್ಷ್ಮಮ್ಮ ಗಂಡನೊಡನೆ ಬಾಳ್ವೆ ನಡೆಸದೆ ತನ್ನ ಹಳೆಗೆಳೆಯನ ಆಕರ್ಷಣೆಗೆ ಮತ್ತೆ ಬಲಿಯಾದದ್ದು ವಿಷಾದನೀಯ. ತನ್ನ ಬಸಿರಿನ ಭಾರ ಕಳೆಯಲು ಇದೊಂದು ತಂಗುದಾಣ ಎಂದಷ್ಟೇ ತಿಳಿದ ಶ್ರೀಮಂತ ಯುವತಿ ಅಲ್ಲಿರುವಷ್ಟು ಕಾಲ ಕೇವಲ ಅತಿಥಿ. ಪಶ್ಚಾತ್ತಾಪದ ಭಾವನೆ ಇಲ್ಲದ ಆಕೆಗೂ, ಪ್ರಾಯಶ್ಚಿತ್ತದ ತಾಣ ಎಂದು ತಿಳಿದ ತುಂಗಮ್ಮನಿಗೂ ಎಷ್ಟೊಂದು ಅಂತರ! ಆದರೂ ಸರಸಮ್ಮನ ನೋಟದ ತಕ್ಕಡಿಯಲ್ಲಿ ಎಲ್ಲರೂ ಸಮಾನರು. ಎಲ್ಲರಿಗೂ ಒಳಿತನ್ನು ಬಯಸುವ ಜೀವ ಅವರದು. ತುಂಗಮ್ಮನಷ್ಟೇ ಜೀವಂತವಾಗಿ ಎದ್ದು ಬಂದಿದೆ ಸರಸಮ್ಮನ ಪಾತ್ರ. ಅದಕ್ಕೆಂದೇ ಸರಸಮ್ಮ ತುಂಗಮ್ಮನಲ್ಲಿ ಅಪರಿಮಿತ ಸುಪ್ತ ಸಾಮರ್ಥ್ಯವಿದೆ ಎಂದು ಕಂಡುಕೊಳ್ಳಲು ಶಕ್ತರಾದರು.

ಇನ್ನು ಕಾದಂಬರಿಯಲ್ಲಿ ಬರುವ ತುಂಗಮ್ಮನ ತಂದೆ. ವ್ಯವಹಾರಜ್ಞಾನವಿದ್ದರೂ ಸಂಪ್ರದಾಯದ ರೇಖೆ ಮೀರಲಾರದ ಸಂದಿಗ್ಧ ಸ್ಥಿತಿಯಲ್ಲಿ ಓದುಗನ ಮನ ಮಿಡಿಸಿದ ಪಾತ್ರ ಅವರದು. ತುಂಗಮ್ಮ ತನ್ನ ಸ್ಥಿತಿ ವಿವರಿಸಿ, "ತಪ್ಪಾಯ್ತು ಕ್ಷಮಿಸ್ತೀಯಾ ಅಣ್ಣಯ್ಯ" ಎಂದು ಕೇಳಿದಾಗ ಅವರ ಸ್ಥಾನದಲ್ಲಿ ಬೇರೆ ಯಾರಿದ್ದರೂ ದೊಡ್ಡ ಗಲಾಟೆ ಆಗಿಹೋಗುತ್ತಿತ್ತೋ ಏನೋ. ಯಾಕೆಂದರೆ ಮನುಷ್ಯ ತನ್ನ ತಪ್ಪುಗಳನ್ನು ನೋಡದೆ ಇತರರ ತಪ್ಪುಗಳ ಮೇಲೆ ಹೆಚ್ಚು ಟೀಕೆ ಮಾಡುವುದು ಸ್ವಾಭಾವಿಕ. ಇಲ್ಲಿ ತುಂಗಮ್ಮನ ತಂದೆ ಒಂದೇ ಒಂದು ಬಿರುನುಡಿಯಾಡದೆ,

ಮಗಳೆನ್ನು ನಿಂದಿಸದೆ ಸಂಯಮದಿಂದ ಅವಳ ಕಣ್ಣೀರು ಒರಸಿ ಮುಂದಿನ ಕರ್ತವ್ಯಕ್ಕೆ ಸಜ್ಜಾದದ್ದು ಅವರ ಉದಾರ ಹೃದಯವನ್ನು ಪ್ರತಿಬಿಂಬಿಸುತ್ತದೆ. ತಂದೆಯ ವಾತ್ಸಲ್ಯ, ಕರುಣೆಯಹಸ್ತ ನೆತ್ತಿಯ ಮೇಲೆ ಇದ್ದುದರಿಂದಲೇ ತುಂಗಮ್ಮನಿಗೆ ಅಭಯಧಾಮದಲ್ಲಿ ಬದುಕು ನೀರಸವೆನಿಸಲಿಲ್ಲ. ಪ್ರೀತಿ - ಪ್ರೇಮದ ಕೊರತೆ ಬಾಧಿಸಲಿಲ್ಲ. ಅಲ್ಲಿ ಮೂಕಿಯೊಬ್ಬಳನ್ನು ಮೊದಲ ಬಾರಿ ಸಂಧಿಸಿದಾಗ....

"ಎಷ್ಟೊಂದು ಜನ ಎಂತೆಂತಹ ಕಷ್ಟ, ಸಂಕಟಗಳನ್ನು ಅನುಭವಿಸುತ್ತಾರೆ!" ಎಂಬ ಯೋಚನೆ ಬಂದು ತುಂಗಮ್ಮನ ಹೃದಯ ಭಾರವಾಯಿತು. ಲೋಕದಲ್ಲಿ ಕಷ್ಟ ಅನುಭವಿಸುವವಳು ತಾನೊಬ್ಬಳೇ ಅಲ್ಲವೆಂದು ಹಗುರವೂ ಆಯಿತು.
(ಪುಟ 20)

ತಮ್ಮದೇ ಕಷ್ಟ - ನೋವುಗಳಿಗಿಂತ ಇನ್ನೊಬ್ಬರ ಕಷ್ಟ - ನೋವುಗಳಿಗೆ ಸ್ಪಂದಿಸಿದಾಗ ಮನಸ್ಸು ವಿಶಾಲವಾಗಲು ಸಾಧ್ಯ ಎನ್ನುವುದೇ ನಿರಂಜನರ ಕಳಕಳಿ.

ತುಂಗಮ್ಮನ ಜೀವನಕ್ಕೆ ಹೊಸ ತಿರುವು ಕೊಡುವ ಮತ್ತು ಸಮಾಜಕ್ಕೆ ನೂತನ ಬದಲಾವಣೆಯ ಆಯಾಮ ನೀಡುವ ಸೋಮಶೇಖರನ ಪಾತ್ರವೂ ಇಲ್ಲಿ ಅಷ್ಟೇ ಪ್ರಾಮುಖ್ಯ. ಆತ ವೃತ್ತಿಯಲ್ಲಿ ವಕೀಲ. ಶ್ರೀಮಂತ. ಇನ್ನೂ ಚಿಕ್ಕಪ್ರಾಯ. ಆದರೂ ಅಭಯಧಾಮ ಸೇರಿದ ತುಂಗಮ್ಮನನ್ನು ತನ್ನ ಬಾಳಸಂಗತಿಯನ್ನಾಗಿ ಯಾಕೆ ಆರಿಸಿದ ? ಅವಳ ಅಂದ ಚಂದಕ್ಕೆ ಮರುಳಾದನೇ ? ಅವಳ ಹಿನ್ನೆಲೆ ತಿಳಿದು ಅನುಕಂಪ ತೋರಿಸಿದನೇ ? ಮೊದಲ ಬಾರಿ ಅವಳನ್ನು ಸಂಧಿಸಿದಾಗ ಅವನ ಮನದ ತುಮುಲ ವೇನು ? ಯಾವ ಆದರ್ಶಕ್ಕೆ ಬಲಿಯಾದ ? ಇತ್ಯಾದಿ ಸಂಪೂರ್ಣ ವಿವರಣೆ ನಮಗೆ ದೊರೆಯುವುದಿಲ್ಲ. ಕೇವಲ ತುಂಗಮ್ಮನಿಗೆ ಮದುವೆ ಮಾಡಿಸಬೇಕು ಎನ್ನುವ ಏಕೈಕ ಉದ್ದೇಶದಿಂದ ಈ ಪಾತ್ರವನ್ನು ಸೃಷ್ಟಿಸಿದಂತಾಗಿದೆ. ಹೆಣ್ಣಿಗೆ ಮದುವೆಯೊಂದೇ ಎಲ್ಲ ಸಮಸ್ಯೆಗಳಿಗೂ ಪರಿಹಾರವಲ್ಲ. ಸೋಮಶೇಖರ ಬಾರದೇಯಿದ್ದರೂ ತುಂಗಮ್ಮ ಅಭಯಧಾಮದಲ್ಲಿ ತನ್ನ ಜೀವನಕ್ಕೆ ಬೇಕಾದ 'ಅಭಯ' ಕಂಡುಕೊಂಡಿದ್ದಾಳೆ. ನಿರಂಜನರ ಮಾನವೀಯ ದೃಷ್ಟಿಯಲ್ಲಿ ಹೆಣ್ಣುಗಂಡುಗಳ ಸ್ಥಾನಮಾನ ಬದಲಾಗಿ ಬದುಕಿನ ಹೊಸ ಮೌಲ್ಯಗಳು ಸ್ಥಾಪಿತವಾಗಬೇಕು. ಹೊಸ ಮಾನವನ ಉಗಮವಾಗ ಬೇಕು, ನಿಜ. ಆದರೆ ಹತಭಾಗಿನಿ ಸ್ತ್ರೀಯರ ವಿವಾಹದಿಂದ ಸಮಾಜದ ಪುನರ್ಘಟನೆಯಾಗುತ್ತದೆಯೇ?

ಇಲ್ಲ, ಅದು ಕೇವಲ ಆದರ್ಶ. ಸಮಾಜದ ಪುನರ್ಘಟನೆಯಾಗಲು ಮಾನವನ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕು. ಸಮಾಜದ ರೀತಿ ನೀತಿ, ಕಟ್ಟುಪಾಡುಗಳೆಲ್ಲವೂ ಹೆಣ್ಣು - ಗಂಡಿಗೆ ಸಮಾನವಾಗಿರಬೇಕು. ಹೆಣ್ಣಿನ ದೌರ್ಬಲ್ಯದೊಡನೆ

ಆಟವಾಡುವುದಲ್ಲ, ಶಿಕ್ಷಿಸುವುದಲ್ಲ. ಅನುಕಂಪದ ಅಭಯ ಬೇಕು. ತುಂಗಮ್ಮನಿಗೆ ಸೋಮಶೇಖರನ ಹೆಂಡತಿಯಾದ ನಂತರವೂ ಅಭಯಧಾಮದಲ್ಲೇ ಕೆಲಸಮಾಡುವ ಸಂಕಲ್ಪ. ಈ ಒಂದು ಸಂದರ್ಭದಲ್ಲಿ ಸೋಮಶೇಖರ ಅಭಯಧಾಮಕ್ಕೆ ತುಂಗಮ್ಮನ ಸೇವೆ ಅವಶ್ಯಕವೆಂದೂ ತನ್ನ ಮತ್ತು ಅವಳಿಂದಾಗಿ ಸಮಾಜ ಎಚ್ಚೆತ್ತುಕೊಳ್ಳಲಿ ಎಂದೂ ತಳೆದ ಆದರ್ಶದ ನಿಲುವು ಅವನ ಆಶಾವಾದವನ್ನು ಎತ್ತಿತೋರಿಸುತ್ತದೆ.

ನಿರಂಜನರೂ ಆಶಾವಾದಿ. ಕಾದಂಬರಿಯಲ್ಲಿ ಬರುವ ಅಧಿಕ ಸ್ತ್ರೀ ಪಾತ್ರಗಳು ನಿರಾಶಾವಾದದ ಹೊಸ್ತಿಲನ್ನು ದಾಟಿ ಅಭಯ ಪಡೆದವರಂತೆ ಆಶಾವಾದದ ಕಡೆಗೆ ಹೊರಳುವುದನ್ನು ಕಾಣುತ್ತೇವೆ. ಬರವಣಿಗೆಯಲ್ಲಿ ಎಲ್ಲಿಯೂ ಸಿಡಿಲಬ್ಬರವಿಲ್ಲ. ಬಿರುಗಾಳಿಯ ಹೊಡೆತವಿಲ್ಲ. ಆದರೆ ವಿಷಯವನ್ನು ನೇರವಾಗಿ ಹೇಳುತ್ತ ಓದುಗರ ಹೃದಯ ಭೇದಿಸಿ ವಿಚಾರಮಂಥನಕ್ಕೆ ಚಾಲನೆ ನೀಡುವಷ್ಟು ಸಶಕ್ತವಾಗಿದೆ ಅವರ ಲೇಖನಿ. ದಾರಿತಪ್ಪಿದ, ನೈತಿಕ ಅಧಃಪತನವಾದ ಒಬ್ಬಳನ್ನು ಸುಧಾರಿಸಿದರೆ ಸಾಕು, ಸಮಾಜ ಅಲ್ಪಸ್ವಲ್ಪ ಎಚ್ಚೆತ್ತುಕೊಳ್ಳುತ್ತದೆ ಎಂದು ಅವರ ವಿಶ್ವಾಸ. ತನ್ನಂತೆ ಒಂದಿಬ್ಬರು ಅಲ್ಲಲ್ಲಿ ಹೀಗೆ ಚಿಂತಿಸಿದರೂ ಸಮಾಜ ಇಂದಲ್ಲ ನಾಳೆ ಬದಲಾದೀತೆಂಬ ನಿರೀಕ್ಷೆ, ಆಶಾವಾದ. ಈ ನಿಟ್ಟಿನಲ್ಲಿ 'ಅಭಯ' ಕತ್ತಲೆಯಲ್ಲಿ ಮೂಡಿ ಬಂದ ಕಿರುಜ್ಯೋತಿ! ○

ಚಿರಸ್ಮರಣೆ*

–ಕಿ. ರಂ. ನಾಗರಾಜ

ನಿರಂಜನರ 'ಚಿರಸ್ಮರಣೆ' ಇಪ್ಪತ್ತು ವರ್ಷಗಳ ಅನಂತರ ಮತ್ತೆ ಮುದ್ರಣ ಕಂಡಿದೆ. 'ಸಾಹಿತ್ಯಪ್ರಿಯ'ರ ನೆನಪಿನಲ್ಲಿ ಅಚ್ಚಳಿಯದೆ ನೆಲೆಗೊಂಡಿರುವ ಈ ಕಾದಂಬರಿ ಮತ್ತೆ ಮತ್ತೆ ಕನ್ನಡ ಓದುಗರ ಹತ್ತಿರಕ್ಕೆ ಹೋಗದಿದ್ದುದು ಸಾಹಿತ್ಯಕ್ಷೇತ್ರದ ಕುತೂಹಲಗಳಲ್ಲಿ ಒಂದು. ಇದಕ್ಕೆ ಕಾರಣ ಏನೇ ಇರಲಿ ಈಗ ಮತ್ತೊಮ್ಮೆ ಚಿರಸ್ಮರಣೆ ಪ್ರಕಟವಾಗುತ್ತಿದೆ. ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಮತ್ತೊಮ್ಮೆ ಹೊಸ ಚೈತನ್ಯದ ಹೊಸ ಹಾದಿಯ ಧ್ವನಿ ಕೇಳುತ್ತಿರುವ ಈ ಸಮಯದಲ್ಲಿ ಅದಕ್ಕೆ ಸ್ವಾಗತ.

'ಚಿರಸ್ಮರಣೆ'ಯು ಕತೆ ಹೋರಾಟದ ಕತೆ. ಹೋರಾಟಗಾರರ ಕತೆ. ಕಾದಂಬರಿಯ ತುಂಬ ಎಡೆಬಿಡದ ಚಟುವಟಿಕೆಗಳು. ನಿರ್ದಿಷ್ಟ ಆಶಯ ಉದ್ದೇಶವನ್ನು ಹೊತ್ತ ಕೇರಳದ ರೈತರು. ಕಯ್ಯೂರಿನ ಮೂಲೆಯಲ್ಲಿ ಭಾವುಕತೆಯ ಸುಳಿಗೆ ಸಿಕ್ಕದೆ

ರೈತರ ಸಂಘಟನೆ ನಡೆಯುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಅವರ ಬಾಲ ಬುಡುಕ ಗುತ್ತೆದಾರಿಯನ್ನು ತಮ್ಮೆಲ್ಲ ಶಕ್ತಿ ಸಾಮರ್ಥ್ಯಗಳ ಮೂಲಕ ಇದಿರಿಸಿದ ಚಾರಿತ್ರಿಕ ಘಟನೆಯೇ ಈ ಕಾದಂಬರಿಗೆ ಆಧಾರ. ಶೋಷಣೆಗೆ ಸಿಲುಕಿದ ಬಡ ರೈತರು ತಮ್ಮ ಹಕ್ಕುಗಳಿಗಾಗಿ ವ್ಯವಸ್ಥಿತ ಸಂಘಟನೆಯನ್ನು ರೂಪಿಸುತ್ತಾರೆ. ಸಂಘಟನೆಯನ್ನು ಹತ್ತಿಕ್ಕಲು ಸಾಮ್ರಾಜ್ಯಶಾಹಿ ಮತ್ತು ಸಾಮ್ರಾಜ್ಯಶಾಹಿ ಕೈಗೊಂಬೆಗಳು ಅವಿರತ ಪ್ರಯತ್ನ ನಡೆಸುತ್ತವೆ. ಸಾಮ್ರಾಜ್ಯಶಾಹಿಯ ಪ್ರಯತ್ನಗಳೆಲ್ಲವೂ ಸಂಘಟಿತ ರೈತ ಸಮುದಾಯದ ಇದುರಿಗೆ ಹುಸಿಗೊಳ್ಳುತ್ತವೆ. ಗುತ್ತೆದಾರಿಗಳ ಮತ್ತು ಸಾಮ್ರಾಜ್ಯ ಶಾಹಿಯ ಕ್ರೌರ್ಯ ಅಮಾನುಷತೆಗಳ ಮೂಲಕ ಸತ್ಯಬದ್ಧ ಹೋರಾಟಗಾರರು ತೀವ್ರ ಸ್ವರೂಪದ ಶಿಕ್ಷೆಗೆ ಗುರಿಯಾಗುತ್ತಾರೆ. ಸಾಮ್ರಾಜ್ಯಶಾಹಿ ನ್ಯಾಯಾಲಯ ಹೋರಾಟ ಗಾರರಿಗೆ ಗಲ್ಲು ಶಿಕ್ಷೆ ವಿಧಿಸುತ್ತದೆ. ತಮ್ಮ ಹೋರಾಟದ ಫಲ ಈ ನೆಲದಲ್ಲಿ ಸಿದ್ಧಿ ಸುತ್ತದೆಂಬ ಅಚಲ ನಂಬಿಕೆಯಿಂದ ಅವರು ಸಾವಿಗೆ ಗುರಿಯಾಗುತ್ತಾರೆ.

ಕಯ್ಯೂರಿನ ವೀರರು ಚರಿತ್ರೆಯನ್ನು ನಿರ್ಮಿಸಿದವರು. ತಮ್ಮ ಧ್ಯೇಯ ಉದ್ದೇಶಗಳಿಗೆ ಹೋರಾಟದ ಚಾಲನೆಯನ್ನು ಕೊಟ್ಟವರು. ದಿನಪತ್ರಿಕೆಯ ಓದು ಕಯ್ಯೂರಿನ ರೈತ ಸಂಘಟನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಜ್ಞಾನದ ಅನೈಸರ್ಗಿಕ ತೆರೆಯನ್ನು ಕಿತ್ತೊಗೆಯುತ್ತ ಅವರು ಹೋರಾಟದ ಪಾಠವನ್ನು ಕಲಿಯು ತ್ತಾರೆ. ಕಲಿತ ಪಾಠಗಳನ್ನು ಕ್ರಿಯೆಗೆ ತೊಡಗಿಸುತ್ತಾರೆ. ತಮಗೆ ಆಗುತ್ತಿರುವ ಅನ್ಯಾಯ ಪರಂಪರೆಗಳ ವಿರುದ್ಧ ಸಿಡಿದೇಳಲು ಕಯ್ಯೂರಿನ ರೈತರು ಸಿದ್ಧರಾಗುವಾಗ ಭ್ರಾಮಕ ಕಲ್ಪನೆಗಳಿಗೆ ಸಿಲುಕುವುದಿಲ್ಲ. ಅವರೆಲ್ಲರೂ ಚರಿತ್ರೆಯ ಪುನರ್‌ನಿರ್ಮಾಣಕ್ಕೆ ಮಾನವೀಯ ಸಂಬಂಧಗಳ (ಎಲ್ಲ ಅರ್ಥಪೂರ್ಣ ಸ್ಥಿತಿಯೊಡನೆ) ಮೂಲಕ ಮುನ್ನಡೆ ಯುತ್ತಾರೆ. ಹೀಗೆ ಆರ್ಥಿಕ ದುಃಸ್ಥಿತಿಯಿಂದ ಮಾನವೀಯ ಸಂಬಂಧಗಳಿಗೆ ಒದಗಿ ಬರುವ ಸಂಚಕಾರಗಳನ್ನು ಗುರುತಿಸಿಕೊಂಡು ಬೆಳೆಯುವ ವಾತಾವರಣ ನಿರ್ಮಾಣ ಕಾದಂಬರಿಯ ಮಹತ್ವದ ಅಂಶಗಳಲ್ಲಿ ಒಂದು.

ಸಾಲದ ಹೊರೆ, ಭೂಮಿಯನ್ನು ಲಪಟಾಯಿಸಲು ನಡೆಸುವ ಅಮಾನುಷ ಪ್ರಯತ್ನ, ಅಜ್ಞಾನ ಮತ್ತು ಅನಕ್ಷರತೆ ಇವುಗಳ ಕಾರಣದಿಂದ ರೈತರು ತಲೆ ಎತ್ತಿ ನಿಲ್ಲಲು ಸಾಧ್ಯವಾಗದ ಕಾಲದಲ್ಲಿ ಕಯ್ಯೂರಿನ ಹೋರಾಟಗಾರರು ಸಂಘಟಿತರಾಗುತ್ತಾರೆ. ಸಮಾಜವ್ಯವಸ್ಥೆಯ ಸೂಕ್ಷ್ಮತೆಗಳನ್ನು ತಮ್ಮ ದೈನಂದಿನ ಅನುಭವಗಳ ಮೂಲಕ ಅರಿಯುತ್ತಾರೆ. ತಮ್ಮ ಬದುಕಿನ ಗತಿಯನ್ನು ಅರ್ಥಪೂರ್ಣವನ್ನಾಗಿ ಮಾಡಿಕೊಳ್ಳು ವುದೇ ಅವರ ಹೋರಾಟದ ಪ್ರಮುಖ ಉದ್ದೇಶವಾಗುತ್ತದೆ. ಯಾವುದೇ ಅಸಂಬದ್ಧ ಘೋಷಣೆಗಳಿಗೆ ಮಾರುಹೋಗುವ ಪ್ರವೃತ್ತಿ ಅವರದಲ್ಲ. ಉದ್ರೇಕಕ್ಕಾಗಲೀ,

ರಮ್ಯ ಕಲ್ಪನೆಗಳಿಗಾಗಲೀ ಮನಸೋಲುವುದಿಲ್ಲ. ಅಪ್ಪು, ಚಿರುಕಂಡ ಮದುವೆಯಾಗ ಬೇಕೆಂಬ ಆಶಯವನ್ನು ಮಾಸ್ತರರು ಮುಂದಿಡುತ್ತಾರೆ. ಸೂಕ್ಷ್ಮ ಮಾನವೀಯ ಭಾವನೆಗಳ ಮೂಲಕ ಅವರ ಆಲೋಚನೆಗಳಿಗೆ ರೂಪುಕೊಡುತ್ತಾರೆ. ಹೀಗೆ ಅನೇಕ ಅಂತಃಕರಣದ ಸಂಬಂಧಗಳು ಒಟ್ಟಾರೆ ಗುರಿಯ ಒಂದು ಭಾಗವಾಗಿ ರೂಪು ಗೊಳ್ಳುವುದರಿಂದ ಈ ಕೃತಿಯ ಸಾಮಾಜಿಕ ವಾಸ್ತವ ನಿಲುವು ಅತ್ಯಂತ ಪರಿಣಾಮಕ್ಕೆ ಕಾರಣವಾಗುತ್ತದೆ. ವಿಚಾರ ವಿವೇಚನೆಗಳಿಂದ ಬದ್ಧರಾದ ರೈತ ಹೋರಾಟಗಾರರಿಗೆ ಸಮಸ್ಯೆಗಳನ್ನು ಎದುರಿಸುವ ನೈತಿಕಶಕ್ತಿ ದೊಡ್ಡ ಅಸ್ತ್ರವಾಗಿ ಮಾರ್ಪಡುವುದು ಕಾದಂಬರಿಕಾರರ ವಸ್ತುನಿಷ್ಠ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಸಾಮ್ರಾಜ್ಯಶಾಹಿ ಮತ್ತು ಪಟ್ಟಭದ್ರರಿಂದ ನಿರ್ಮಿತವಾದ ವಿಷಜಾಲದ ಸೂಕ್ಷ್ಮ ವಿಶ್ಲೇಷಣೆಯ ಮೂಲಕ ಮಾತ್ರ ಹೋರಾಟದ ರೂಪು ರೇಖೆಗಳನ್ನು ಕಂಡು ಕೊಳ್ಳಲು ಸಾಧ್ಯವಾಗುತ್ತದೆಂಬ ನಂಬಿಕೆ ಅವರಲ್ಲಿ ಕ್ರಮ ಕ್ರಮವಾಗಿ ಉಂಟಾಗು ತ್ತದೆ. ಆರ್ಥಿಕ ವಿಷಮತೆಗಳನ್ನು ಮೂಲೋತ್ಪಾಟಿಸುವುದರ ಮೂಲಕ ಮಾತ್ರ ಚರಿತ್ರೆಯ ನಿರ್ಣಾಯಿಕ ಹಂತವನ್ನು ಮುಟ್ಟಲು ಸಾಧ್ಯವೆಂಬ ಅಚಲ ಶ್ರದ್ಧೆಯಿಂದ ಎಲ್ಲ ವ್ಯಕ್ತಿಗಳೂ ಪಟ್ಟಭದ್ರರನ್ನು ಎದುರಿಸಲು ಸಜ್ಜಾಗುತ್ತಾರೆ. ಅಂತರಂಗದ ಹೋರಾಟ ಕೊನೆಕೊನೆಗೆ ಪ್ರಕಟಗೊಳ್ಳುವ ಸ್ಥಿತಿಯನ್ನು ತಲುಪುತ್ತದೆ. ಸ್ಥಿತಿವಂತ ಜಮೀನ್ದಾರರ ಕ್ರೌರ್ಯ ಮತ್ತು ದಬ್ಬಾಳಿಕೆಗೆ ವ್ಯವಸ್ಥಿತ ಪ್ರತಿಕ್ರಿಯೆ ತೋರುವ ಹೋರಾಟಗಾರರು ಸಾಮ್ರಾಜ್ಯಶಾಹಿಯ ಪತನದ ಜೊತೆಗೇ ತಮ್ಮನ್ನು ಮುತ್ತಿ ಕೊಂಡಿರುವ ಗುಲಾಮ ಸ್ಥಿತಿಯಿಂದ ಹೊರಬರುವ ಸ್ಥೈರ್ಯವನ್ನು ತೋರುತ್ತಾರೆ. ತಮ್ಮ ಭವಿತವ್ಯವನ್ನು ಉಜ್ವಲಗೊಳಿಸಿಕೊಳ್ಳಲು ಹೋರಾಟ ಏಕೈಕ ಮಾರ್ಗವೆಂಬು ದನ್ನು ಅವರ ಕಾರ್ಯೋನ್ಮುಖತೆ ಸ್ಪಷ್ಟಪಡಿಸುತ್ತದೆ. ಅನ್ಯಾಯದ ವಿರುದ್ಧ ಸಂಘಟಿತ ಹೋರಾಟ ನಡೆಯುವಾಗ ಹೋರಾಟದಲ್ಲಿ ಪಾಲ್ಗೊಂಡವರು ಪರಸ್ಪರ ವಿಮರ್ಶೆಯ ಮೂಲಕ ತಮ್ಮ ಭಾವನೆ ಆಲೋಚನೆಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ. ಪರಸ್ಪರ ಅರಿವಿನ ಮಟ್ಟವನ್ನು ಹೆಚ್ಚಿಸಿಕೊಳ್ಳಲು ತಕ್ಕ ವಾತಾವರಣವೇ ಏರ್ಪಡುತ್ತದೆ. 'ಪಂಡಿತ'ರು, ಮಾಸ್ತರು ಇಂಥ ಸನ್ನಿವೇಶಗಳಲ್ಲಿ ವರ್ತಿಸುವ ಬಗೆಯಂತೂ ಕಾದಂಬರಿಯ ಮುಖ್ಯ ಸಾಧನೆಗಳಲ್ಲಿ ಒಂದು.

ಪಂಡಿತರು ಮತ್ತು ಮಾಸ್ತರು ಇವರ ಗ್ರಹಿಕೆಗಳು ವೈಜ್ಞಾನಿಕ ಆಲೋಚನೆಗಳಿಂದ ಪುಷ್ಟವಾದದ್ದು. ಹೀಗಾಗಿ ಕಾದಂಬರಿಕಾರರ ಆಶಯ ಮತ್ತು ನಿರೂಪಣೆಗಳಲ್ಲಿ ಅರ್ಥಪೂರ್ಣವಾದ ತಾತ್ವಿಕ ಏಕತೆಯೊಂದು ಏರ್ಪಟ್ಟಿದೆ. ರಾಜಕೀಯ, ಸಾಂಸಾರಿಕ, ಮಾನವೀಯ ಸಂಬಂಧಗಳು ಎಲ್ಲೂ ಬೇರೆಬೇರೆ ಎನಿಸುವುದಿಲ್ಲ. ಅವೆಲ್ಲವೂ ಹೋರಾಟದ ಹಾದಿಯಲ್ಲಿ ಚಾರಿತ್ರಿಕ ಅನಿವಾರ್ಯವಾಗುತ್ತವೆ.

‘ಚಿರಸ್ಮರಣೆ’ಯ ಅನನ್ಯ ಸಾಧನೆಗಳಲ್ಲಿ ಒಂದಾದ ಹೋರಾಟ ಮತ್ತು ಮಾನವೀಯ ಸಂಬಂಧಗಳ ಬಗ್ಗೆ ಎರಡು ಮಾತು: ವ್ಯಕ್ತಿ ವ್ಯಕ್ತಿಗಳ ಸಂಬಂಧ ನೈಸರ್ಗಿಕವಾಗಿ ಮೂಡುವುದರಿಂದ ಅಲ್ಲಿ ಭಾವುಕತೆಗಳಿಗಾಗಲೀ ವ್ಯಕ್ತಿಗತ ಭಾವನೆಗಳಿಗಾಗಲೀ ಅವಕಾಶವಿಲ್ಲ. ವ್ಯಕ್ತಿಗಳು ತಮ್ಮ ತಮ್ಮ ಸ್ವಭಾವಗಳಲ್ಲಿ ಮಗ್ನರಾದರೂ ಸನ್ನಿವೇಶದ ಗಾಂಭೀರ್ಯಕ್ಕೆ ಧಕ್ಕೆ ಒದಗುವುದಿಲ್ಲ. ತಂದೆ ಮಕ್ಕಳು, ಗಂಡ ಹೆಂಡಿರು, ಮಾಸ್ತರು-ವಿದ್ಯಾರ್ಥಿಗಳು, ಇವರುಗಳೆಲ್ಲ ತಮ್ಮ ಹೋರಾಟದ ನಡುವೆಯೇ ಸುಂದರ-ಅಸುಂದರದ ವ್ಯಾಖ್ಯೆಯನ್ನು ಕಂಡುಕೊಳ್ಳುತ್ತಾರೆ. ರಾಕ್ಷಸ ವಾತಾವರಣದ ಮಧ್ಯೆ ಮಾನವತೆಯ ಅರ್ಥವನ್ನು ರೂಪಿಸಿಕೊಡುವ ಮಾಸ್ತರ್ ಮನುಷ್ಯ - ಸಮಾಜ, ಭೂಮಿ - ರೈತ, ಒಡೆಯ - ಸಾಮ್ರಾಜ್ಯಶಾಹಿ ಇವುಗಳ ಸಂಬಂಧ ಸ್ವರೂಪಗಳನ್ನು ತಮ್ಮ ಸುತ್ತಣ ರೈತರಿಗೆ ಅರಿವು ಮಾಡಿಕೊಡುತ್ತಾರೆ. ಸಾಮ್ರಾಜ್ಯಶಾಹಿ ಮತ್ತು ಅದರ ಬಾಲಬುಡುಕರ ವಿರುದ್ಧದ ತೀವ್ರ ಸ್ವರೂಪದ ಚಳುವಳಿಗೆ ಕಾರಣರಾಗುತ್ತಾರೆ. ಸಂಯಮದ ವ್ಯಕ್ತಿತ್ವ ಅವರದು. ಭಾವಪರವಶತೆಗೆ ಎಂಥ ದುರಂತದ ಕ್ಷಣದಲ್ಲಿಯೂ ತಮ್ಮನ್ನು ಒಪ್ಪಿಸಿಕೊಳ್ಳುವುದಿಲ್ಲ. ಅನೇಕ ಸಾಮಾಜಿಕ ಅರಿವನ್ನು ಪಡೆದುಕೊಂಡ ರೈತರ ಮಧ್ಯೆ ಸಂಘಟನೆಗೆ ನಿಲ್ಲುತ್ತಾರೆ. ಭೂಮಿಯ ಮೇಲಿನ ಒಡೆತನ ಮತ್ತು ಸಾಮ್ರಾಜ್ಯಶಾಹಿಯ ವಿನಾಶ ಇವುಗಳ ಆಧಾರದ ಮೇಲೆ ಹೋರಾಟಕ್ಕೆ ರೈತರನ್ನು ಸಜ್ಜುಗೊಳಿಸುತ್ತಾರೆ. ಸಮುದಾಯ ವಾಸ್ತವದ ಬಗೆಗೆ ಅರಿವನ್ನು ತಂದುಕೊಡುವ ನಿರ್ದಿಷ್ಟ ಧೋರಣೆಯ ಇಂಥ ಪಾತ್ರನಿರ್ಮಾಣದಲ್ಲಿ ಎಲ್ಲಿಯೂ ತೂಕ ತಪ್ಪಿಲ್ಲ. ತೀಕ್ಷ್ಣ ದಬ್ಬಾಳಿಕೆಯ ಎದುರಿಗೂ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳದ ನಿಖರತೆ ಮೃದುತ್ವ ಇವೆರಡರ ಸಮಸ್ಥಿತಿಯಿಂದ ಹೋರಾಟಗಾರರ ಮೇಲೆ ಮಾಡುವ ಪರಿಣಾಮ ಅತ್ಯಂತ ಜೀವಂತಿಕೆಯಿಂದ ಕೂಡಿದೆ.

‘ಚಿರಸ್ಮರಣೆ’ ಕಯ್ಯೂರಿನ ವೀರರ ಕತೆಯಾದರೂ, ಈ ಹೊತ್ತಿನ ನಮ್ಮ ಸಂದರ್ಭಕ್ಕೆ ವಿಶಿಷ್ಟ ಅರ್ಥ ಮತ್ತು ಚೈತನ್ಯವನ್ನು ನೀಡುವ ಕತೆಯಾಗಿದೆ. ಸಂಘಟನೆ ಇಲ್ಲದೆ ಸಾಮ್ರಾಜ್ಯವಾದಿಯಾಗಲಿ, ಅದರ ಕೈಗೊಂಬೆಯಾದ ಗುತ್ತೇದಾರಿಯಾಗಲಿ ನಾಶವಾಗುವುದಿಲ್ಲ. ಕಯ್ಯೂರಿನ ವೀರರ ಈ ‘ಗಾಥೆ’ ಹೊಸ ಜೀವನಕ್ಕೆ ಹೊಸ ಸ್ಥಿತಿಗೆ ವಾತಾವರಣವನ್ನು ನಿರ್ಮಿಸಿಕೊಡುತ್ತದೆ.

‘ಚಿರಸ್ಮರಣೆ’ ಕನ್ನಡದ ಎಲ್ಲ ಕಾಲದ ಕೃತಿಗಳಲ್ಲಿ ಒಂದು. ○

* ‘ಶೂದ್ರ’ ಪತ್ರಿಕೆಯಲ್ಲಿ ಪ್ರಕಟಿತ ಲೇಖನ.

ಮಲಯಾಳದಲ್ಲಿ 'ಚಿರಸ್ಮರಣೆ'*

–ಕೆ. ಟಿ. ಶ್ರೀಧರ್

ನಿರಂಜನರ 'ಚಿರಸ್ಮರಣೆ' ಕಾದಂಬರಿ ೧೯೭೪ರ ಸೋವಿಯೆಟ್‌ಲ್ಯಾಂಡ್ ನೆಹರು ಪ್ರಶಸ್ತಿ ಗಳಿಸಿದೆ. ಕ್ರಾಂತಿಕಾರಿ ಸಾಹಿತ್ಯಕ್ಕೆ ಮೀಸಲಾದ ಈ ಪ್ರಶಸ್ತಿ ಸ್ಥಾಪಿತವಾದುದು ಹತ್ತು ವರುಷಗಳ ಹಿಂದೆ. ಚಿರಸ್ಮರಣೆ ಪ್ರಕಟವಾದುದು ಇದಕ್ಕೂ ಹತ್ತು ವರುಷ ಹಿಂದೆ (೧೯೫೫).

ನಿರಂಜನರದ್ದು ಈಗ ಸೀಮಿತ ಕಾರ್ಯಕ್ಷೇತ್ರ. ಕಠಿಣ ಅಸ್ವಾಸ್ಥ್ಯದ ವೇಳೆಗೂ ಹಠದಿಂದ ಹಗಲು ರಾತ್ರಿ ದುಡಿದು ಜ್ಞಾನಗಂಗೋತ್ರಿಯ ಏಳು ಸಂಪುಟಗಳನ್ನು ಮುಗಿಸಿ ಸದ್ದಿಲ್ಲದೆ ಸಾಹಿತ್ಯ ರಚನೆಗೆ ತೊಡಗಿದ್ದಾಗ ಪ್ರಶಸ್ತಿ ಅವರ ಬೆನ್ನಟ್ಟಿ ಬಂದಿದೆ. ತಡವಾಗಿ ಬಂದಿದೆಯಾದರೂ ಸ್ವಾಗತಿಸಬೇಕಾದುದೆ.

ಆದೇ ವೇಳೆಗೆ ಚಿರಸ್ಮರಣೆಯ ಮಲಯಾಳ ಆವೃತ್ತಿ ಬಂದಿರುವುದು ಇನ್ನೊಂದು ಆಕಸ್ಮಿಕ. ಕನ್ನಡದಲ್ಲಿ ಬರೆಯಲ್ಪಟ್ಟ ಕೇರಳದ ಕತೆ ಭಾಷಾಂತರವಾಗಿ ಮಲಯಾಳಿಗಳು ಓದುವುದು ಕನ್ನಡಕ್ಕೊಂದು ಹೆಗ್ಗಳಿಕೆ. ಈಚೆಗೆ ಅನುವಾದಿತ ಕೃತಿ ಎಂದಾಗ ಸಾಹಿತ್ಯಾಸಕ್ತರ ಮನಸ್ಸು ಮುದುಡುವಂತಾಗಿರುವುದು ಬೇರೆ ಮಾತು. ಕೃತಿಯ ಮರ್ಮವನ್ನು ತಿಳಿಯದೆ ಅಕ್ಷರಾನುವಾದ ಒಪ್ಪಿಸುವ ಅಕಾಡಮಿ ಅನುವಾದಕರು ತಮ್ಮ ಹೆಸರಿನೊಂದಿಗೆ ಹತ್ತಾರು ಅನುವಾದಿತ ಕೃತಿಗಳ ಪಟ್ಟಿ ಹಚ್ಚಿ ಸಾಹಿತಿ ಎಂದು ಮೆರೆಯಬಯಸುವ ಭೂಪರು ಅನುವಾದ ಸಾಹಿತ್ಯವನ್ನು ಕೆಡಿಸಿದ್ದಾರೆ. ಆದರೆ ಚಿರಸ್ಮರಣೆಯ ಅನುವಾದಕ ಸಿ. ರಾಘವನ್ ಈ ಗುಂಪಿಗೆ ಸೇರಿದವರಲ್ಲ, ವಿದ್ಯಾತಜ್ಞ. ಉತ್ತಮ ಆಡಳಿತಗಾರ. ಜೊತೆಗೆ ಸಾಹಿತ್ಯೋಪಾಸನೆ, ಇಂಗ್ಲಿಷ್ ಸಾಹಿತ್ಯದಲ್ಲಿ ಎಂ. ಎ. ಪದವಿ. ಕನ್ನಡದಲ್ಲೂ ಮಲಯಾಳದಲ್ಲೂ ಬರೆಯಬಲ್ಲ ಸವ್ಯಸಾಚಿ. ಕೃತಿಯ ಉತ್ಕೃಷ್ಟತೆ ಮಾತ್ರ ಅವರ ಅನುವಾದಗಳ ಕಾರಣ. ಹಿಂದೊಮ್ಮೆ 'ಓಡಯಿಲ್ ನಿನ್ನ್' ('ಚರಂಡಿಯಿಂದ') ಕನ್ನಡಕ್ಕೆ. ಈಗ 'ಚಿರಸ್ಮರಣೆ' ಕನ್ನಡದಿಂದ ಮಲಯಾಳಕ್ಕೆ.

ಒಂದು ರೀತಿಯಲ್ಲಿ ರಾಘವನವರು ಈ ಕೆಲಸ ವಹಿಸಿಕೊಳ್ಳಲು ನಾನೇ ಕಾರಣ. ಕಳೆದ ಎಂಟು ವರುಷಗಳಲ್ಲಿ ಚಿರಸ್ಮರಣೆ ಅನುವಾದಿಸುವಂತೆ ಹಲವು ಬಾರಿ ಸೂಚಿಸಿದ್ದೆ. ಒಮ್ಮೆ ಚಿರಸ್ಮರಣೆಯ ಪ್ರತಿಯನ್ನು ಒದಗಿಸಿದ್ದೆ. ಜಿಲ್ಲಾ ವಿದ್ಯಾಧಿಕಾರಿಗಳ ಆಪ್ತ ಸಹಾಯಕರಾಗಿ ನೇಮಕಗೊಂಡಾಗ ಅವರ ಸಾಹಿತ್ಯ ಚಟುವಟಿಕೆಗಳಿಗೆ ಪೂರ್ಣವಿರಾಮ ಬಂದಿತೆಂದು ತಿಳಿದಿದ್ದೆ.

ಕಳೆದ ವರುಷ ಅವರು 'ಚಿರಸ್ಮರಣೆ' ಕೇಳಿದಾಗ ನನಗೆ ತಮಾಷೆ ಎನಿಸಿತ್ತು; ಕೋಪವೂ ಬಂದಿತ್ತು. ಉಪಾಧ್ಯಾಯನಾಗಿ ಸಾಕಷ್ಟು ಬಿಡುವಿದ್ದಾಗ ಮಾಡದ ಕೆಲಸವನ್ನು ಹಗಲು ರಾತ್ರಿ ಫೈಲುಗಳಲ್ಲಿ ಮುಳುಗಿರುವಾಗ ಮಾಡುವುದುಂಟೆ? ಕೊನೆಗೆ ಅವರ ಜವಾನನ ಕಾಟ ಸಹಿಸಲಾರದೆ 'ಚಿರಸ್ಮರಣೆ' ನೀಡಿದೆ. ಎರಡೇ ದಿನಗಳಲ್ಲಿ ೫೦ ಪುಟಗಳ ಹಸ್ತಪ್ರತಿ ನನ್ನ ಮುಂದೆ ಹಿಡಿದಾಗ ನನಗೆ ಎಲ್ಲಿಲ್ಲದ ಆಶ್ಚರ್ಯ. ಮತ್ತೆ ಹತ್ತು ಹದಿನೈದು ದಿನಗಳಿಗೆ ಅನುವಾದ ಕೆಲಸ ಮುಗಿದಿತ್ತು. ತಿದ್ದಿ ಬರೆಯುವ ವೇಳೆಗೆ ಕೆಲವು ಭಾಗಗಳನ್ನು ನನಗೆ ಓದಿ ಹೇಳಿದ್ದರು. ಆದರೆ ಈ ಕೆಲಸ ಮಾಡಿಸಿದ ಕೀರ್ತಿ ಮಲಯಾಳದ ಖ್ಯಾತ ಬರಹಗಾರ ಶ್ರೀ ಸಿ. ಪಿ. ಶ್ರೀಧರನ್ ಅವರಿಗೆ ಸೇರಿದೆ. 'ಚಿರಸ್ಮರಣೆ' ಬಗ್ಗೆ ಕೇಳಿದ್ದ ಸಿ. ಪಿ. ಅನುವಾದಿಸುವಂತೆ ಒತ್ತಾಯಿಸಿದ್ದು ಮಾತ್ರವಲ್ಲ ಪ್ರಕಟಣೆಯ ಜವಾಬ್ದಾರಿಕೆಯನ್ನೂ ವಹಿಸಿದ್ದರು.

ಪರತಂತ್ರ ಭಾರತದ ಕರಿನಾಡು ಕೇರಳ. ಅಲ್ಲೊಂದು ಪುಟ್ಟ ಗ್ರಾಮ ಕಯ್ಯೂರು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕಯ್ಯೂರು ನೀಡಿದ್ದು ಬಹು ದೊಡ್ಡ ಕಾಣಿಕೆ. ಅದು ತನ್ನ ನಾಲ್ವರು ತರುಣರನ್ನು ಕೊಲೆಮರಕ್ಕೆ ಕೊಟ್ಟದೆ. ಕಯ್ಯೂರಿನ 'ಇದ್ದವರ' ಮತ್ತು 'ಇಲ್ಲದವರ' ನಡುವಿನ ಹೋರಾಟದ ಸಮಗ್ರ ಚಿತ್ರಣವೆ ಚಿರಸ್ಮರಣೆ ಕಾದಂಬರಿಯ ವಸ್ತು. ಕಯ್ಯೂರಿಗೆ ಸಮೀಪದ ನೀಲೇಶ್ವರ ರಾಜಾಸ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದ ನಿರಂಜನರು ಈ ಘಟನೆಗೆ ತೀರ ಹತ್ತಿರದ ನಿರೀಕ್ಷಕ. ತಕ್ಷಣ ಅವರದನ್ನು ಬರೆದು ಬಿಡುವ ಆತುರ ತೋರಲಿಲ್ಲ. ಈ ವಸ್ತು ಹದಿನಾಲ್ಕು ವರುಷಗಳ ವರೆಗೆ ಅವರ ಮನಸ್ಸಿನ ಮೂಸೆಯಲ್ಲಿ ಕಾದು ಪುತ್ಥಳಿಯಾಗಿದೆ. ವಾಚಕರ ಅಂತರಂಗವನ್ನು ತಟ್ಟುವ ಮಾರ್ಮಿಕ ಶೈಲಿ, ಅನುಭವದ ದಟ್ಟ ಹರವು, ನಾವು ಈಚೆಗೆ ಕೇಳುತ್ತಿರುವ ಮಣ್ಣಿನ ವಾಸನೆ ಎಲ್ಲಾ ಈ ಕೃತಿಯಲ್ಲಿವೆ.

ಕಾದಂಬರಿಯ ಕೊನೆಗೆ ಕಯ್ಯೂರು ವೀರರನ್ನು ನೇಣುಗಂಬಕ್ಕೆ ಹಾಕಿದ ರಾತ್ರಿ ರಚ್ಚೆ ಹಿಡಿದು ಅಳುತ್ತಿದ್ದ ಮಗುವಿಗೆ ಅಪ್ಪುವಿನ ಹೆಂಡತಿ ಆಕಾಶದಲ್ಲಿ ಮಿನುಗು ತ್ತಿದ್ದ ನಕ್ಷತ್ರವೊಂದನ್ನು ಬೊಟ್ಟು ಮಾಡಿ "ಮಗೂ ಅಳಬಾರದು. ಅಪ್ಪ ಅಲ್ಲಿದ್ದಾರೆ ನೋಡು, ಅತ್ತರೆ ಅವರಿಗೆ ನೋವಾಗುವುದು" ಎಂಬ ಮಾತು ವಾಚಕರನ್ನು ಕಲಕುವುದು.

ಕಯ್ಯೂರಿನ ಆ ರಾತ್ರಿ ದೀರ್ಘವಾಗಿತ್ತು. ಆದರೂ ಸಾವಕಾಶವಾಗಿ ಕತ್ತಲು ಕರಗಿ ಬೆಳಕು ಹರಿಯಿತು ಎಂಬಲ್ಲಿ ದುರಂತವೆ ಜೀವನದ ಕೊನೆ ಅಲ್ಲವೆನ್ನುವುದು ವ್ಯಕ್ತವಾಗುತ್ತದೆ.

ಮಲಯಾಳ ಆವೃತ್ತಿಗೆ ಮುನ್ನುಡಿ ಬರೆಯುತ್ತ ಶ್ರೀ ಸಿ. ಪಿ. ಶ್ರೀಧರನ್ "ಕೇರಳದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳ ಸಜೀವವಾಗಿದ್ದ ದಿನಗಳಲ್ಲೂ ಇದ್ದವರ ಇಲ್ಲದವರ ನಡುವಿನ ಹೋರಾಟ ದೇಶೀಯ ಚಳವಳದ ಬಗ್ಗೆ ಯಾವ ಕೃತಿಯೂ ರಚಿಸಲ್ಪಡಲಿಲ್ಲ. ಆದರೆ ಕನ್ನಡದ ಅತಿಕಾಯರಲ್ಲಿ ಒಬ್ಬರಾದ ನಿರಂಜನರು ಕಯ್ಯೂರು ಘಟನೆ ಬಗ್ಗೆ ಉಜ್ವಲ ಕೃತಿಯೊಂದನ್ನು ರಚಿಸಿದರು. ಸಾಹಿತ್ಯರಚನೆಯಲ್ಲಿ ಕೇಂದ್ರ ಬಿಂದು ಎನಿಸಿದ ಪ್ರಚೋದನೆ ಯಾರಲ್ಲಿ ಯಾವಾಗ ಹೊಮ್ಮಿ ಬರುವುದೆಂದು ಹೇಳುವುದು ಸಾಧ್ಯವಿಲ್ಲ. ಈ ಪ್ರಚೋದನೆಯಿಂದ ಮಾತ್ರ ಉತ್ತಮ ಕೃತಿ ರಚನೆ ಸಾಧ್ಯವೆನ್ನುವುದನ್ನು 'ಚಿರಸ್ಮರಣೆ' ಸಾರಿ ಹೇಳಿರುವುದಾಗಿ" ಅಭಿಪ್ರಾಯಪಟ್ಟಿದ್ದಾರೆ.

ಕಾದಂಬರಿಯಲ್ಲಿ ಚಿತ್ರಿತವಾಗಿರುವುದು ಸತ್ಯಕ್ಕೆ ದೂರ. ಬರೇ ಕಮ್ಯೂನಿಸ್ಟ್ ಪ್ರಚಾರ ಎಂಬ ಹುಯಿಲು ಕೇಳದೆ ಇಲ್ಲ. ನಿರಂಜನರೂ ಇದನ್ನು ನಿರೀಕ್ಷಿಸಿದ್ದರು. ಅನನ್ಯ ದೇಶಭಕ್ತಿ, ಉತ್ಕಟ ಸ್ವಾತಂತ್ರ್ಯಪ್ರೇಮದಿಂದ ಪುಟ್ಟ ಗ್ರಾಮವೊಂದರ ರೈತರು ನಡೆಸಿದ ಹೋರಾಟ ಸಾಹಿತ್ಯಕೃತಿಗೆ ಕಚ್ಚಾವಸ್ತುವಾಗಿದೆ. ಮಾನವನ ಮೇಲೆ ನಡೆದ ಅತ್ಯಾಚಾರ, ತುಳಿತದ ವಿರುದ್ಧ ಸೆಟೆದು ನಿಂತ ಮನುಷ್ಯ ಮನಃಸಾಕ್ಷಿ ಪ್ರತಿಭಟನಾ ಸ್ವರಕ್ಕೆ ಕಲಾರೂಪ ನೀಡುವುದು ನಿರಂಜನರ ಉದ್ದೇಶವಾಗಿತ್ತು. ಅದಕ್ಕೆ ತಕ್ಕಂತೆ ಅವರ ಕಲ್ಪನಾಪ್ರತಿಭೆ ಕೆಲಸ ಮಾಡಿದೆ. ಇಂಗ್ಲಿಷರು ಚುಚ್ಚಿಟ್ಟ ಮಾನಸಿಕ ದಾಸ್ಯ ಈಗಲೂ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟಿದ್ದು ಭಗತ್‌ಸಿಂಗ್, ಚಂದ್ರಶೇಖರ ಆಜಾದರನ್ನೆ ಪುಂಡರ ಸಾಲಿಗೆ ಸೇರಿಸಿದವರಿಗೆ ಕಯ್ಯೂರು ವೀರರ ಬಗ್ಗೆ ಹೇಗೆ ಗೌರವ ಬರುವುದು ಸಾಧ್ಯ ? ಚಿರಸ್ಮರಣೆಯಲ್ಲಿ ಮಿಡಿಯುತ್ತಿರುವುದು ಬ್ರಿಟಿಷರ ಬೂಟುಗಾಲಿ ನಡಿಯಲ್ಲಿ ನಲುಗಿದ ಮಾನವತೆಯ ಕುರಿತಾದ ಅಂತಃಕರಣದ ಕಳಕಳಿ. ಇಲ್ಲಿ ಸತ್ಯ ಶೋಧನೆಗೆ ಹೊರಟವರಿಗೆ ಸಾಹಿತ್ಯದ ಬಾಲಪಾಠವೆ ದೊರಕಿಲ್ಲವೆನ್ನಬೇಕು.

ಚಿರಸ್ಮರಣೆಯೊಂದಿಗೆ ಕೇರಳದ ಸಾಹಿತ್ಯ ಪ್ರವರ್ತಕ ಸಹಕರಣ ಸಂಘದ ಪ್ರಕಟಣೆ ೩,000ಕ್ಕೆ ಮುಟ್ಟಿದೆ. ಮಲಯಾಳಿಗಳು ಈ ಕೃತಿಯನ್ನು ಅತ್ಯುತ್ಸಾಹ ದಿಂದ ಸ್ವಾಗತಿಸಿದ್ದಾರೆ. ಈ ಮೊದಲೆ 'ಚಿರಸ್ಮರಣೆ' ಮಲಯಾಳದಲ್ಲಿ ಬರಲಿಲ್ಲವೆಂದು ಹಲವರಿಗೆ ಆತಂಕ. ಸಹೋದರ ಭಾಷಾಸಾಹಿತ್ಯದ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲದಿರುವುದು ಇದರಿಂದ ವಿದಿತವಾಗುತ್ತದೆ. ಹೆಚ್ಚೇಕೆ, ಕನ್ನಡದ ಕೃತಿಗಳ ಬಗೆಗೇ ನಮಗೆ ಸರಿಯಾದ ತಿಳಿವಳಿಕೆ ಇಲ್ಲ. ಈ ಉದ್ದೇಶದಿಂದ ಸ್ಥಾಪಿತವಾಗಿರುವ ಸಾಹಿತ್ಯ ಅಕಾಡಮಿ ಇಲ್ಲಿ ಎಡವಿರುವುದು ಕಾಣಿಸುತ್ತದೆ. 'ಚಿರಸ್ಮರಣೆ' ಮೊದಲ ಶ್ರೇಣಿಯ ಕೃತಿ ಎಂಬುದು ಇದೀಗ ದೃಢಪಟ್ಟಿದೆ. ○

*೧೯–೧–೧೯೭೫ರ 'ಉದಯವಾಣಿ'ಯಲ್ಲಿ ಪ್ರಕಟವಾದ ಲೇಖನ.

ನೆಫರ್‌ಟೀಮ್‌ಳಿಗೊಂದು ಪತ್ರ

–ಕೆ. ವಿ. ತಿರುಮಲೇಶ್

ರಾಣಿ ನೆಫರ್‌ಟೀಮ್, ಮೃತ್ಯುಂಜಯದ ಇತರ ಎಷ್ಟೋ ಮಂದಿಯನ್ನು ಬಿಟ್ಟು ನಿನಗೇ ಈ ಪತ್ರವನ್ನು ಯಾಕೆ ಬರೆಯುತ್ತಿದ್ದೇನೆಂದು ನನ್ನನ್ನು ಕೇಳಬೇಡ. ಇತರ ಯಾರಿಗೇ ಈ ಪತ್ರವನ್ನು ಬರೆಯುತ್ತಿದ್ದರೂ ಇದೇ ಪ್ರಶ್ನೆಯನ್ನು ಕೇಳಬಹುದಲ್ಲ? ಆದರೂ ಕಾರ್ಯಕಾರಣ ಸಂಬಂಧಗಳನ್ನು ಹುಡುಕುವುದು ಮನುಷ್ಯನಿಗೆ ಸಹಜವಾದ ಪ್ರವೃತ್ತಿ. ಆದ್ದರಿಂದ ಇಗೋ - ನೀನು ಸುಂದರಿ, ಬುದ್ಧಿವಂತೆ, ಐಗುಪ್ತದ ರಾಜಕಾರಣದ ಹಿನ್ನೆಲೆಯಲ್ಲಿದ್ದುಕೊಂಡೇ ಜನರನ್ನು ಬೊಂಬೆಗಳಂತೆ ಕುಣಿಸಿದವಳು - ಮೇಲಿನ ಹಾಗೂ ಕೆಳಗಿನ ಐಗುಪ್ತದ ಸಾರ್ವಭೌಮನೂ, ಭೂಮಿಯ ಮೇಲೆ ದೇವರ ಅವತಾರವೂ ಆಗಿರುವ ಪೇರೋ ಪೇಪಿಯ ಪಟ್ಟದರಸಿ. ಕೇವಲ ರಸಿಕತೆಯಲ್ಲೆ ಕಾಲತಳ್ಳುತ್ತ, ಇತರ ಯಾವ ವಿಷಯಗಳಲ್ಲೂ ಆಸಕ್ತಿ ತೋರದೆ ಉತ್ಸವಮೂರ್ತಿಯಂತೆ ಮೂಕನಾಗಿರುವ ನಿನ್ನ ಗಂಡನಿಗಿಂತ ಅದೆಷ್ಟೋ ಚತುರಳು ನೀನು. ಆತನ ದೌರ್ಬಲ್ಯಗಳನ್ನು ಚೆನ್ನಾಗಿ ಅರಿತಿರೋದರಿಂದಲೆ, ಐಗುಪ್ತದ ಅಧಿಕಾರ ಆದಷ್ಟು ಬೇಗನೆ ರಾಜಕುಮಾರನಿಗೆ ಹಸ್ತಾಂತರವಾಗಲಿ ಎಂದು ಬಯಸುತ್ತೀಯಾ. ನಿನ್ನನ್ನು ನಾನು ಗಂಭೀರವಾಗಿ ಪರಿಗಣಿಸುತ್ತೇನೆ.

ನಿರಂಜನರ ಮಾನಸಸೃಷ್ಟಿ! ನೀನು ನಿಜಕ್ಕೂ ಚರಿತ್ರೆಯಲ್ಲಿ ಇದ್ದಿಯಾ? ಅಥವಾ ಸಾಹಿತಿಯೊಬ್ಬನ ಕಲ್ಪನೆಯಲ್ಲಿ ಮಾತ್ರ ನಿನ್ನ ಅಸ್ತಿತ್ವವೊ? ಪೇರೋ ಪೇಪಿ-ಆತ ಇದ್ದಿರಲೂಬಹುದು; ಆತನಿಗೊಬ್ಬಳು ರಾಣಿಯೂ ಇದ್ದಿರಬಹುದು. ಅದು ನೀನೇ ಎಂದು ಹೇಳುವುದಾದರೂ ಹೇಗೆ? ಕಾದಂಬರಿಯೆಂದರೆ ಚರಿತ್ರೆಯಲ್ಲ. ಇನ್ನು ಮೃತ್ಯುಂಜಯದ ತುಂಬ ಬಂದ ಇತರ ಪಾತ್ರಗಳ ವಿಚಾರವೇನು! ಮೆನೆಪ್‌ಟಾ, ನುಟ್‌ಮೋಸ್, ಗೇಬು, ನೆಹನವೇಮ್ಸ್, ನೆಫರುರಾ, ಅಮೆರೆಬ್, ಹೆಪ್ಪೆಟ್, ಹೇಪಾಟ್ ಒಬ್ಬರೇ ಇಬ್ಬರೇ! ಎಲ್ಲರೂ ಸಾಹಿತಿಯ ಕಲ್ಪನೆಯ ಶಿಶುಗಳೇ! ಕೆಲವು ಹೆಸರುಗಳನ್ನಷ್ಟೆ ನಿರಂಜನರು ತಾವು ಓದಿದ ಪುಸ್ತಕಗಳಿಂದ ತೆಗೆದಿರಬಹುದು; ಇನ್ನುಳಿದವರನ್ನು ಅವರು ತಾವಾಗಿಯೆ ನಿರ್ಮಿಸಿರಬೇಕು. ಹಾಗೆಯೇ ನೀರಾನೆ ಪ್ರಾಂತ - ಅಲ್ಲಿ ನಡೆದ ಬಂಡಾಯ, ಅದರ ಪ್ರೇರಣೆ, ಪರಿಣಾಮ ಇವೆಲ್ಲ ಪುರಾತನ ಐಗುಪ್ತದ ಇತಿಹಾಸದಲ್ಲಿ ನಡೆದ ಘಟನೆಗಳೋ ಅಲ್ಲವೋ ಎಂದು ಹೇಳುವುದು ಹೇಗೆ? ಕಲ್ಪನೆಯನ್ನು ಬಡಿದೆಬ್ಬಿಸುವ ಒಂದು ವಾಕ್ಯವೋ ಹೇಳಿಕೆಯೊ ನಿರಂಜನರಿಗೆ ಯಾವುದಾದರೊಂದು ಗ್ರಂಥದಲ್ಲಿ ದೊರಕಿರಬಹುದೆಂದು ಊಹಿಸಬಹುದು. ಉಳಿದುದೆಲ್ಲ ಅವರ ಕಲ್ಪನೆಯೇ ಸರಿ. ಆದರೆ ಐಗುಪ್ತವೆಂಬ ನಾಡು,

ಪೇರೋ ಹೆಸರಿನ ಅರಸು ಮನೆತನ, ರಾ, ಅಮೆನ್ ಇತ್ಯಾದಿ ದೇವರುಗಳ ಕಲ್ಪನೆ, ನೀಲನದಿ, ಪಿರಮಿಡ್ಡುಗಳು ಮುಂತಾದವುಗಳ ಬಗ್ಗೆ ನಮಗೆ ಗೊತ್ತು. ಆದ್ದರಿಂದ ಕಾದಂಬರಿಯು ಹಿನ್ನೆಲೆ ಪೂರ್ತಿ ಫ್ಯಾಂಟಸಿಯಲ್ಲ.

ಚಾರಿತ್ರಿಕ ಕಾದಂಬರಿ ಚರಿತ್ರೆಯ ಘಟನೆಗಳನ್ನೂ, ಪಾತ್ರಗಳನ್ನೂ ಇದ್ದ ಕಿದ್ದಂತೆ ಚಿತ್ರಿಸುವುದಿಲ್ಲ. ಚರಿತ್ರೆ ನಮ್ಮಿಂದ ದೂರ ಸರಿದಷ್ಟೂ ಅಲ್ಲಿ ಕಲ್ಪನೆಗೇ ಪ್ರಾಧಾನ್ಯ. ಆದ್ದರಿಂದಲೆ ಎಲ್ಲಾ ಐತಿಹಾಸಿಕ ಕಾದಂಬರಿಗಳೂ ಒಂದೇ ರೀತಿ ಇರುವುದಿಲ್ಲ. ನಿರಂಜನರ ಚಿರಸ್ಮರಣೆ ಅವರ ನೆನಪಿನಲ್ಲೆ ನಡೆದ ಘಟನೆಗಳನ್ನು ಅಳವಡಿಸಿ ಬರೆದ ಕಾದಂಬರಿ - ಇದು ಐತಿಹಾಸಿಕವೋ ಸಾಮಾಜಿಕವೋ ಎಂಬ ಚರ್ಚೆಯನ್ನು ಇಲ್ಲಿ ನಡೆಸಲಾರೆ. ಆದರೆ ಚಿರಸ್ಮರಣೆಯಲ್ಲಿ ಕೂಡ ಅವರು ಕತೆಗಾರನ ಸ್ವಾತಂತ್ರ್ಯವನ್ನು ಸಾಕಷ್ಟು ತೆಗೆದುಕೊಂಡಿದ್ದಾರೆಂಬುದು ಗಮನಾರ್ಹವಾದ ಸಂಗತಿ. ತನ್ನ 'ಯುದ್ಧ ನೌಕೆ ಪೋಟೆಮ್‌ಕಿನ್' ಕಥಾಚಿತ್ರ ಇತಿಹಾಸದ ಯಥಾವತ್ ಚಿತ್ರಣವಲ್ಲ ಎಂದವರಿಗೆ ಐಸೆನ್‌ಸ್ಟಾಯಿನ್, ಸಮ್ಯಕ್ ಸತ್ಯದ ದರ್ಶನಕ್ಕೆ ಸಣ್ಣಪುಟ್ಟ ಸತ್ಯಾಂಶಗಳು ಅಮುಖ್ಯವಾಗುತ್ತವೆ ಎಂಬ ಗಯಟೆಯ ಮಾತನ್ನು ನೆನಪು ಮಾಡುತ್ತಾನೆ. ಚಿರಸ್ಮರಣೆಯ ಮುನ್ನುಡಿಯಲ್ಲಿ ನಿರಂಜನರು ಇದನ್ನು ಉದ್ಧರಿಸುತ್ತಾರೆ. ಚರಿತ್ರೆಯ ಸತ್ಯ ಮತ್ತು ಸಾಹಿತ್ಯದ ಸತ್ಯ ಇವೆರಡೂ ಸತ್ಯವೇ ಆಗಿದ್ದರೂ ಇವುಗಳ ರೀತಿಗಳು ಬೇರೆ ಬೇರೆ. ಚರಿತ್ರೆ ಸಂಭವಗಳನ್ನು ಮಾತ್ರ ಚಿತ್ರಿಸಿದರೆ, ಸಾಹಿತ್ಯ ಸಂಭವನೀಯಗಳನ್ನು ಚಿತ್ರಿಸುತ್ತದೆ. ಸಂಭವನೀಯದೊಳಗೆ ಸಂಭವವೂ ಸೇರಿರುತ್ತದೆ; ಆದರೆ ಸಂಭವದೊಳಗೆ ಸಂಭವನೀಯವೆಲ್ಲವೂ ಸೇರಿರುವುದಿಲ್ಲವೆಂಬುದನ್ನು ಗಮನಿಸಬೇಕು. ಸಂಭವನೀಯ ಜಗತ್ತು ಸಂಭವ ಜಗತ್ತಿಗಿಂತ ಮುಖ್ಯವಾದದ್ದು. ಆದ್ದರಿಂದ ನೀರಾನೆ ಪ್ರಾಂತವೆಂಬುದೊಂದು ಇತ್ತೆ, ಅಲ್ಲಿ ಮೆನೆಪ್‌ಟಾನ ನಾಯಕತ್ವದಲ್ಲಿ ಪೇರೋ - ಅರ್ಚಕ - ಭೂಮಾಲಿಕ ಸರ್ವಾಧಿಕಾರದ ವಿರುದ್ಧ ಬಂಡಾಯವೊಂದು ನಡೆಯಿತೆ, ಈ ಬಂಡಾಯ ಸಮೂಹ ಹತ್ಯೆಯಲ್ಲಿ ಕೊನೆಗೊಂಡಿತೆ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಐತಿಹಾಸಿಕ ದಾಖಲೆಗಳಲ್ಲಿ ಹುಡುಕಲಾರೆವು. ಇಂಥ ಘಟನೆಗಳು ಸಂಭವನೀಯ ಜಗತ್ತಿಗೆ ಸೇರಿದವು ಹಾಗೂ ಬೇರೆ ಬೇರೆ ರೂಪಗಳಲ್ಲಿ ಮಾನವ ಇತಿಹಾಸದಲ್ಲಿ ಕಾಣಿಸಿಕೊಂಡವು ಎಂದು ತಿಳಿದರೆ ಸಾಕು.

ಆದರೆ ರಾಣಿ ನೆಫರ್‌ಟೀಮ್, ಕಾಲದೇಶಗಳನ್ನು ಒಂದೇ ಬೀಸಿಗೆ ಅದೆಷ್ಟೋ ಪ್ರಮಾಣಗಳಷ್ಟು ಹಿಂದೊಗೆದು ನಿರಂಜನರು ಯಾಕೆ ನಿಮ್ಮನ್ನೆಲ್ಲ ಸೃಷ್ಟಿಸಬೇಕಾಯಿತು ಎಂಬುದು ನನಗೆ ಕುತೂಹಲದ ಸಂಗತಿ. ಸಾಹಿತ್ಯವು ನಮ್ಮ ಸಂಸ್ಕೃತಿಗೆ ಸಮೀಪದ್ದಾಗಿರಬೇಕು, ಅದರ ಭಾಗವೆ ಆಗಿರಬೇಕು, ಓದುಗರಿಗೆ ಸುಲಭವಾಗಿ ತಲುಪುವಂಥದ್ದಿರಬೇಕು ಎಂಬ ಘೋಷಣೆಗಳೇಳುತ್ತಿದ್ದ ಕಾಲದಲ್ಲಿಯೆ ಕನ್ನಡಿಗರ ನಾಲಿಗೆಯಲ್ಲಿ ಸುಲಭವಾಗಿ

ಹೊರಳಲಾರದ ಹೆಸರುಗಳನ್ನೂ, ಅವರಿಗೆ ಅಪರಿಚಿತವಾದ ಶವಲೇಪನ, ಸೆಡ್ ಉತ್ಸವ ಮುಂತಾದ ವಿವರಗಳನ್ನೂ ಉಪಯೋಗಿಸಿಕೊಂಡು ನಿರಂಜನರು ಇಂಥ ದೊಂದು ಕೃತಿಯನ್ನು ರಚಿಸಿದರಲ್ಲ! ಇಂಥ ಘೋಷಣೆಗಳಿಗೂ, ನಿಜವಾದ ಸಾಹಿತ್ಯ ನಿರ್ಮಿತಿಗೂ ಸಂಬಂಧವಿಲ್ಲವೆಂಬುದನ್ನು **ಮೃತ್ಯುಂಜಯ** ತೋರಿಸಿಕೊಟ್ಟಿದೆ. ಒಂದು ವೇಳೆ ಇಂಥ ಘೋಷಣೆಗಳೇ ನಿಜವಾಗಿದ್ದರೆ, ಚಾರಿತ್ರಿಕ ಕೃತಿಗಳಲ್ಲಾಗಲಿ, ಬೇರೆ ದೇಶ ಗಳ, ಬೇರೆ ಭಾಷೆಗಳ ಸಾಹಿತ್ಯದಲ್ಲಾಗಲಿ ಕೇವಲ ಕುತೂಹಲಕ್ಕಿಂತ ಹೆಚ್ಚಿನ ಆಸಕ್ತಿ ಯಾರಿಗೂ ಇರುತ್ತಿರಲಿಲ್ಲ. ಆದರೆ ಡಿಕೆನ್ಸ್, ದಾಸ್ತೊವ್‌ಸ್ಕಿ, ಕಾನ್ರಾಡ್,ಮಾರ್ಕ್ವೆಸ್, ನೆರೂದಾ ಇವರನ್ನೂ ನಾವು ಓದುತ್ತೇವಲ್ಲ? ಇವರು ಹೇಳುತ್ತಿರುವ ಸಂಗತಿಗಳು ನಮಗೆ ಮುಖ್ಯವೆಂದು ಕಾಣಿಸುತ್ತಿರುವುದೇ ಇದಕ್ಕೆ ಕಾರಣ. ನಿಜ, ಅವರು ಚಿತ್ರಿಸುವ ಎಲ್ಲ ವಸ್ತು ವಿಷಯಗಳು ನಮಗೆ ದಕ್ಕದೆ ಇರಬಹುದು; ಕೆಲವೊಮ್ಮೆ ಅವನ್ನು ನಾವು ತಪ್ಪಾಗಿಯೂ ತಿಳಿದುಕೊಂಡಿರಬಹುದು - ಅಷ್ಟರಿಂದಲೆ ಭಾರೀ ನಷ್ಟವೇನೂ ಉಂಟಾಗು ವುದಿಲ್ಲ. ಓದುಗರ ಬುದ್ಧಿಮತ್ತೆಯನ್ನು ಸಂದೇಹದಿಂದ ಕಾಣುವ ವಿಮರ್ಶಕರಷ್ಟೆ ಇವೆಲ್ಲದರ ವಿರುದ್ಧ ಹುಯಿಲೆಬ್ಬಿಸುತ್ತಾರೆ.

ಹೀಗಿದ್ದರೂ, **ಚಿರಸ್ಮರಣೆ**ಯಂಥ ಸಮಕಾಲೀನ ಇತಿಹಾಸ (ಅಂಥ ಪದ ಪ್ರಯೋಗವನ್ನು ಮಾಡಬಹುದಾದರೆ) ವನ್ನೆ ಕಾದಂಬರಿಯಾಗಿ ಕೊಟ್ಟ ಲೇಖಕರು **ಮೃತ್ಯುಂಜಯ**ದಲ್ಲಿ ಕಾಲದೇಶಗಳನ್ನು ಒಮ್ಮೆಲೆ ಯಾಕೆ ಅತಿಕ್ರಮಿಸಿದರು ಎನ್ನುವ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಈ ಎರಡೂ ಕೃತಿಗಳು ಕೂಡ ಮೂಲತಃ ಒಂದೇ ವಸ್ತು ಉದ್ದೇಶಗಳನ್ನು ಹೊಂದಿಕೊಂಡಿವೆಯೆಂಬುದನ್ನು ಒಪ್ಪಿಕೊಂಡರೆ ಈ ಪ್ರಶ್ನೆಗೆ ಇನ್ನಷ್ಟು ಅರ್ಥಬರುತ್ತದೆ. **ಚಿರಸ್ಮರಣೆ**ಯ ಎರಡನೆ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ನಿರಂಜನರು ತಮ್ಮ ಕಯ್ಯೂರು ಭೇಟಿಯ ಬಗ್ಗೆ ಪ್ರಸ್ತಾವಿಸುತ್ತ, "ಈ ಎರಡು ಭೇಟಿಗಳ ವೇಳೆಯಲ್ಲೂ ನಾನಿದ್ದುದು ರಂಗದ ಮೇಲೆ. ಅದರೊಂದಿಗೆ, ವಿಶಿಷ್ಟವಾದ ಇನ್ನೊಂದು ಪಾತ್ರವೂ ಇತ್ತು. ಅದು ರಂಗದ ಮೇಲಿದ್ದಾಗಲೂ ಬರೆಹ ಗಾರನಾಗಿ ತುಸು ದೂರವಿರುವುದು, ನಡೆಯುತ್ತಿದ್ದುದನ್ನು ವಸ್ತುನಿಷ್ಠವಾಗಿ ಈಕ್ಷಿಸಿ ಅರ್ಥಮಾಡಿಕೊಳ್ಳುವುದು ಅದನ್ನೆಲ್ಲ ನನ್ನ ಆಳಕ್ಕೆ ಇಂಗಿಸಿಕೊಳ್ಳುವುದು" ಎನ್ನು ತ್ತಾರೆ. ಇಂಥ ವಸ್ತುನಿಷ್ಠತೆ ಸಾಹಿತ್ಯಕೃತಿಗಳ ನಿರ್ಮಾಣಕ್ಕೆ ಅತ್ಯಗತ್ಯವೆಂಬುದು ಎಲ್ಲ ಸಾಹಿತಿಗಳಿಗೂ ಗೊತ್ತಿರುವ ಸಂಗತಿಯೆ. ಆದರೆ ತನಗೆ ಅತ್ಯಂತ ಆಪ್ತರಾಗಿದ್ದ ವ್ಯಕ್ತಿಗಳ ಬಗ್ಗೆ ಎಷ್ಟು ಮಟ್ಟಿನ ವಸ್ತುನಿಷ್ಠತೆ ಸಾಧ್ಯ? **ಚಿರಸ್ಮರಣೆ**ಯ ಕೊನೆಯ ಅಧ್ಯಾಯಗಳನ್ನು ಬರೆಯುತ್ತ ತಾನು ದುಃಖತಪ್ತನಾದೆನೆಂದು ಲೇಖಕರು ಇದೇ ಮುನ್ನುಡಿಯಲ್ಲಿ ಹೇಳುತ್ತಾರೆ. ಕಯ್ಯೂರು ಮೊಕದ್ದಮೆಯಲ್ಲಿ ಮರಣದಂಡನೆಗೆ ಗುರಿಯಾದ ವ್ಯಕ್ತಿಗಳು, ಅವರಿಗೆ ಸಂಬಂಧಿಸಿದವರು ನಿರಂಜನರ ಬಾಲ್ಯಜೀವನದಲ್ಲಿ ಸುಳಿದುಹೋದವರು - ಎಂದರೆ ಕಾದಂಬರಿಯ ಈ ಮುಖ್ಯ ಪಾತ್ರಗಳು ಕೇವಲ

ಕಥಾಪಾತ್ರಗಳಷ್ಟೆ ಅಲ್ಲ, ಜೀವಂತ ವ್ಯಕ್ತಿಗಳೂ ಹೌದು. ಇಂಥ ಸಂದರ್ಭದಲ್ಲಿ ಲೇಖಕನಿಗೆ ಲಭ್ಯವಾಗಬಹುದಾದ್ದ ವಸ್ತುನಿಷ್ಠತೆಗೆ ಒಂದು ಮಿತಿಯಿದೆ.

ಪುರಾತನ ಐಗುಪ್ತವಾದರೆ ಹಾಗಲ್ಲ; ಅದು ಪೂರ್ತಿಯಾಗಿ ಸಾಹಿತಿಯ ಮನಸ್ಸಿನಿಂದ ವಾಕ್ಯರೂಪದಲ್ಲಿ ಕಾಗದದ ಮೇಲೆ ಹರಿದು ಬರಬೇಕು. ಮೆನೆಪ್‌ಟಾ, ಬಟಾ, ನೆಫರು, ಮೆನ್ನ ಇವರೆಲ್ಲ **ಚಿರಸ್ಮರಣೆ**ಯಲ್ಲಿ ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆ ಹೆಸರಿನಿಂದ ಬಂದು ಹೋದವರೆಂದು ಊಹಿಸಬಹುದಾದರೂ, ಕತೆಯ ಸನ್ನಿವೇಶವೇ ಈಗ ಅವರನ್ನು ಕಲೆಗೆ ಬೇಕಾದ ದೂರದಲ್ಲಿ ನಿಲ್ಲಿಸಿರುವುದರಿಂದ **ಮೃತ್ಯುಂಜಯ**ದಲ್ಲಿ ತಾದಾತ್ಮ್ಯದ ತೊಂದರೆಯಿಲ್ಲ. ಲೇಖಕ ಒಂದು ರೀತಿಯಲ್ಲಿ ತನ್ನ ವಸ್ತುವಿನಿಂದ ಬಿಡುಗಡೆ ಪಡೆದಿದ್ದಾನೆ ಇಲ್ಲಿ ಎಂದು ಹೇಳಬಹುದು - ನಿರಂಜನರಂಥ ತತ್ವಬದ್ಧ ಲೇಖಕರು ಎಷ್ಟರಮಟ್ಟಿಗೆ ಇಂಥ ಬಿಡುಗಡೆಯನ್ನು ಹೊಂದಲು ಸಾಧ್ಯವೋ ಅಷ್ಟರ ಮಟ್ಟಿಗೆ. **ಚಿರಸ್ಮರಣೆ** ಮತ್ತು **ಮೃತ್ಯುಂಜಯ** ಎರಡೂ ಬಂಡಾಯ ಕತೆಗಳೇ - ಅರಸೊತ್ತಿಗೆ, ಧಾರ್ಮಿಕ ದಬ್ಬಾಳಿಕೆ ಹಾಗೂ ಜಮೀನ್ದಾರಿಕೆಯ ವಿರುದ್ಧ ಜನರು ಬಂಡೇಳುವುದು ಕಥಾವಸ್ತು. ಈ ಬಂಡಾಯ ಇನ್ನಷ್ಟು ದಬ್ಬಾಳಿಕೆಯನ್ನು ಬರಮಾಡಿಕೊಳ್ಳುತ್ತದಾದರೂ, ಬಂಡಾಯತನಕ್ಕೆ ಸಾವಿಲ್ಲವೆಂಬ ಆಶಯವನ್ನು ಎರಡೂ ಕಾದಂಬರಿಗಳಲ್ಲಿ ಕಾಣುತ್ತೇವೆ. **ಚಿರಸ್ಮರಣೆ**ಯ ಅಂತ್ಯದಲ್ಲಿ ಇರುಳು ಕಳೆದು ಆಗುವ ಬೆಳಗಿಗೆ ಸಾಂಕೇತಿಕ ಅರ್ಥವಿದೆ. **ಮೃತ್ಯುಂಜಯ**ದ ಕೊನೆಯೂ ಹೀಗೆಯೇ. ಇದು ಇಗ್ನೇಶಿಯೋ ಸಿಲೋನೆಯ **ಫೊಂಟಮಾರಾ**ದ ಕೊನೆಯನ್ನೂ ಹೋಲುತ್ತದೆ. **ಮೃತ್ಯುಂಜಯ** ಮತ್ತು **ಫೊಂಟಮಾರಾ** ಎರಡೂ ಕಾದಂಬರಿಗಳಲ್ಲಿ ಬಂಡಾಯಗಾರರು ಕೊನೆಗೆ ಚಲ್ಲಾಪಿಲ್ಲಿಯಾಗುತ್ತಾರೆ; ಅವರು ತಮ್ಮ ಹಳ್ಳಿಯಿಂದ ದೂರ ಸರಿದು ದೇಶಭ್ರಷ್ಟರಾಗಬೇಕಾಗುತ್ತದೆ. ಇನ್ನು ಮುಂದೇನು ಮಾಡುವುದೆಂದು ತಿಳಿಯದೆ ಕಕ್ಕಾಬಿಕ್ಕಿಯಾಗುತ್ತಾರೆ. ಆದರೂ ಇದು ಇಲ್ಲಿಗೆ ಕೊನೆಗೊಳ್ಳುವುದಿಲ್ಲವೆಂದು ಅವರಿಗೆ ಗೊತ್ತು. ಫೊಂಟಮಾರಾದವರು ನಾವೇನು ಮಾಡಬೇಕೆಂದು ತಮ್ಮ ತಮ್ಮೊಳಗೆ ಕೇಳಿಕೊಳ್ಳುತ್ತಲೇ ತಾವು ನಡೆಸಬೇಕೆಂದುಕೊಂಡಿದ್ದ ಪತ್ರಿಕೆಗೆ ಅದೇ ಹೆಸರನ್ನು, ಎಂದರೆ 'ನಾವೇನು ಮಾಡಬೇಕು?' ಎಂಬ ಹೆಸರನ್ನು ಕೊಡುತ್ತಾರೆ. **ಮೃತ್ಯುಂಜಯ**ದ ಬಂಡಾಯಗಾರರು ಐಗುಪ್ತವನ್ನು ತೊರೆದು ಇನ್ನೊಂದು ದೇಶವನ್ನು ಸೇರಿ ಅಲ್ಲಿ ತಮ್ಮ ಬದುಕನ್ನು ಮುಂದುವರಿಸುತ್ತಾರೆ. "ಕತ್ತಲಾದ ಮೇಲೆ ಬೆಳಕು ಹರೀತದೆ. ಇದು ಸಾಮಾನ್ಯ ಅಂತ ತೋರುವ ಅತಿ ಸಾಮಾನ್ಯ ವಿಷಯ. ನೆನಪಿಡಿ" ಎಂಬ ಮೆನ್ನನ ಮಾತಿನೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ. ಇದು **ಫೊಂಟಮಾರಾ**ದ 'ನಾವೇನು ಮಾಡಬೇಕು?' ಎಂಬ ಅಂತ್ಯದಷ್ಟು ಸೃಜನಾತ್ಮಕವಾಗಿಲ್ಲ ನಿಜ. ಆದರೆ ಈ ಮಾತನ್ನು ಮೆನ್ನ ಆಡುತ್ತಾನೆಂದು ನೆನಪಿಟ್ಟುಕೊಂಡರೆ ಆತನ ಕ್ಲೀಷೆಯನ್ನು ಕ್ಷಮಿಸಬಹುದು.

ರಾಣಿ ನೆಫರ್‌ಟೀಮ್, ನಾನು ಹೇಳಹೊರಟುದು ನಿನ್ನ ಸೃಷ್ಟಿಯ ಅಗತ್ಯವನ್ನು - ಕಾಲದೇಶಗಳಿಗೆ ದೂರವಾದ ನಿನ್ನ ಹಾಗೂ ನಿನ್ನಂಥ ಅನೇಕರ ಸೃಷ್ಟಿಕ್ರಿಯೆ ಯಾಕೆ ಬೇಕಾಯಿತು ಎಂಬುದನ್ನು. ಪೇರೋಪೇಪಿಯ ಪುರಾತನ ಐಗುಪ್ತವನ್ನು ಚಿತ್ರಿಸುತ್ತ ನಿರಂಜನರು ಚಿರಸ್ಮರಣೆಯಲ್ಲಿ ಗಳಿಸಲಾರದ ವಸ್ತುನಿಷ್ಠತೆಯನ್ನು ಮೃತ್ಯುಂಜಯದಲ್ಲಿ ಗಳಿಸಿಕೊಂಡರು. ಕತೆಯ ಸನ್ನಿವೇಶವೇ ಇಂಥ ವಸ್ತುನಿಷ್ಠತೆಯನ್ನು ಒತ್ತಾಯಿಸುತ್ತದೆ. ಉದಾಹರಣೆಗೆ ನಿನ್ನ ಕೇಶಮುಂಡನ, ಕಿರೀಟಧಾರಣೆ ಇತ್ಯಾದಿ ಪ್ರಸಂಗಗಳು. ಕೃತ್ರಿಮ ಕೇಶಕವಚವನ್ನು ನೀನು ವರ್ತಕ ಕೆಫ್ಟುವಿನಿಂದ ಕೊಂಡುಕೊಳ್ಳುತ್ತೀಯಾ. ಹಾಗೂ, ಈ ಕೃತ್ರಿಮ ಕೂದಲು ಯಾವಳೋ ಅಸ್ಸೀರಿಯಾದ ಸುಂದರಿಗೆ ಸೇರಿದ್ದು ಎಂದು ಕೆಫ್ಟು ಹೇಳುತ್ತಾನೆ. ಇದು ವಿದೇಶಿಯವೇ ಆಗಬೇಕು; ಇಲ್ಲದಿದ್ದರೆ ನಿನಗೆ ಅವಮಾನವಾದ ಹಾಗಾಗುತ್ತದೆ - ನಿನ್ನದೇ ಪ್ರಜೆಯ ಕೂದಲನ್ನು ನೀನು ಧರಿಸುವುದೆಂದರೇನು! ಇನ್ನು ಕೈ ಬಳಕೆಯ ಸಾಧನಗಳ ವಿಷಯದಲ್ಲಿ ಲೇಖಕರು ತೋರಬೇಕಾದ ಎಚ್ಚರಿಕೆ: ನಿನ್ನ ಕಾಲದಲ್ಲಿ ಕಬ್ಬಿಣ ಇನ್ನೂ ತಯಾರಾಗಿದ್ದಿಲ್ಲ; ಗಾಜಿನ ಕನ್ನಡಿಯೂ ಇರಲಿಲ್ಲ. ಅದ್ದರಿಂದಲೆ ಅರಸಿಯ ಉಪಯೋಗಕ್ಕೆ ಚಿನ್ನದ ಕತ್ತರಿ, ಕಂಚಿನ ರೂಪದರ್ಶಕ. ಈ ರೂಪದರ್ಶಕವನ್ನು ನೋಡುತ್ತ, ಈ ಜಗತ್ತಿನಲ್ಲಿ ಅತ್ಯಂತ ರೂಪವತಿ ಯಾರು ಎಂದು ನೀನು ಕೇಳಿರಬಹುದಲ್ಲವೆ? ಹೀಗೆ ನಿನ್ನ ಕಾಲದ ಐಗುಪ್ತವನ್ನು ಚಿತ್ರಿಸಲೆಳಸುವ ಯಾವನೆ ಲೇಖಕನಿಗೂ ಕೂಡ ವಸ್ತುನಿಷ್ಠತೆ ತುಂಬ ಮಹತ್ವದ್ದಾಗುತ್ತದೆ. ಕತೆಯ ನಾಯಕ ಮೆನೆಪ್‌ಟಾನ ವಧೆ ಕೂಡ ಲೇಖಕರನ್ನು ಭಾವೋದ್ವೇಗಕ್ಕೆ ಗುರಿಮಾಡುವುದಿಲ್ಲ. ಮುಂದೆ ಅವನ ಶವಲೇಪನ, ಸಮಾಧಿ ಎಲ್ಲವೂ ಚಿತ್ರವತ್ತಾಗಿ ಮೂಡಿಬಂದಿರುವುದು ಇಂಥ ವಸ್ತುನಿಷ್ಠತೆಯಿಂದಾಗಿಯೆ. ಒಂದು ರೀತಿಯಲ್ಲಿ ಮೃತ್ಯುಂಜಯ ಪುರಾತನ ಐಗುಪ್ತದ ಸಂಶೋಧನೆಯೆಂದರೂ ಸರಿಯೆ.

ಹಾಗೂ ನೆಫರ್‌ಟೀಮ್, ನಿನಗೇ ಗೊತ್ತಿರಬಹುದಾದಂತೆ, ಅತ್ಯಂತ ಸಮೀಪವೂ, ಭಾವನಾತ್ಮಕವಾಗಿ ಹತ್ತಿರವೂ ಆದ ಸಂಗತಿಗಳು ಪರಿಣಾಮಕಾರಿಯಾಗಿರಬೇಕೆಂದೇನೂ ಇಲ್ಲ; ಅವು ಹಾಗೆ ಆಗಿರುವುದಕ್ಕಿಂತಲೂ ಆಗದಿರುವುದೇ ಹೆಚ್ಚು. ತನ್ನ ಪಾತ್ರದಲ್ಲಿ ತಲ್ಲೀನನಾಗಿರುವ ನಟ ಚೆನ್ನಾಗಿ ಅಭಿನಯಿಸಲಾರ; ಚೆನ್ನಾಗಿ ಅಭಿನಯಿಸಿದ್ದೇನೆಂದು ಆತನಿಗೆ ತೋರಬಹುದು ಅಷ್ಟೆ. ಅಂಥ ತೋರಿಕೆಯೊಂದು ಭ್ರಮೆ. ಅದೇ ರೀತಿ ನಾಟಕ ನೋಡುವ ಪ್ರೇಕ್ಷಕನೂ ಕೂಡ ನಾಟಕದಲ್ಲಿ ಪೂರ್ತಿ ತಲ್ಲೀನನಾದರೆ ಅದರ ಬಗ್ಗೆ ವಿಮರ್ಶಾಪ್ರಜ್ಞೆ ಬೆಳೆಸಿಕೊಳ್ಳಲಾರ. ಒಂದು ರೀತಿಯ ದೂರೀಕರಣ ಎಲ್ಲಾ ರೀತಿಯ ಕಲೆಯ ನಿರ್ಮಾಣ ಹಾಗೂ ಆಸ್ವಾದನೆಗೆ ಅಗತ್ಯ. ದೂರದ ವಸ್ತುಗಳು ಕೇವಲ ಕುತೂಹಲದ ಕಾರಣದಿಂದಷ್ಟೆ ಸಾಹಿತ್ಯದಲ್ಲಿ

ಉಪಯೋಗಗೊಂಡರೆ ಅದರಲ್ಲೇನೂ ಸ್ವಾರಸ್ಯವಿಲ್ಲ. ಅವು ನಮಗೆ ಭಾವನಾತ್ಮಕ ವಾದ ಲಂಘನಗಳನ್ನು ಸಾಧಿಸುವುದಕ್ಕೆ, ಹೊಸ ಸಂಬಂಧಗಳನ್ನೂ ಸಮಾನಾಂತರ ಗಳನ್ನೂ ಕಂಡುಕೊಳ್ಳುವುದಕ್ಕೆ ಸಹಾಯ ಮಾಡಬಲ್ಲವು. ಬೇರೆ ಭಾಷೆಗಳ ಸಾಹಿತ್ಯಕೃತಿಗಳ ಆಕರ್ಷಣೆಯೂ ಒಂದು ರೀತಿಯಲ್ಲಿ ಇದೇ ಅಲ್ಲವೆ? **ಫೊಂಟಮಾರಾ** ಇಟಲಿಯಲ್ಲಿ ನಡೆದ ಕತೆ - ಅದರ ಸನ್ನಿವೇಶ ನಮಗೆ ಪರಿಚಿತವಲ್ಲ. ಆದರೆ ನಮಗೆ ಪರಿಚಿತವಾದ ಸನ್ನಿವೇಶವನ್ನು ಬಳಸಿಕೊಂಡು ಬರೆದ ಒಂದು ಕಾದಂಬರಿಗಿಂತ ಇದು ಹೆಚ್ಚು ಪರಿಣಾಮಕಾರಿಯಾಗಿರುವುದು ಅಸಾಧ್ಯವೇನಲ್ಲ. **ಮೃತ್ಯುಂಜಯ** ಕೂಡ ಈ ದೃಷ್ಟಿಯಲ್ಲಿ 'ವಿದೇಶೀಯ' ಕಾದಂಬರಿ. ಆದರೂ ಇಲ್ಲಿನ ಸನ್ನಿವೇಶದ ತೊಡಕುಗಳು, ಕಥಾಪಾತ್ರಗಳ ತೊಳಲಾಟಗಳು ನಮ್ಮವೇ ಎಂದು ಎನಿಸು ತ್ತವಲ್ಲ! ಎಂದರೆ ನಮ್ಮನ್ನೇ ನಾವು ಬೇರೊಂದು ಯುಗದಲ್ಲಿ, ಬೇರೊಂದು ರೂಪದಲ್ಲಿ ಸಂಧಿಸಿದ ಹಾಗೆ. ಈ ದೃಷ್ಟಿಯಿಂದ ನೀನಾಗಲಿ, ನಿನ್ನ ಪತಿಯಾಗಲಿ, ಪ್ರಧಾನ ಅರ್ಚಕನಾಗಲಿ, ಅಮಾತ್ಯನಾಗಲಿ ನಮಗೆ ಅಪರಿಚಿತರಲ್ಲ. ನಿನ್ನ ಕಾಲ ದಲ್ಲಿ ಅಧಿಕಾರಕ್ಕಾಗಿ ನಿಮ್ಮ ನಿಮ್ಮೊಳಗೆ ನಡೆದ ಘರ್ಷಣೆಯೂ ನಮಗೆ ಹೊಸತಲ್ಲ. ಇದನ್ನು ಅರ್ಥಮಾಡಿಕೊಳ್ಳಲು 'ಮನುಷ್ಯಕುಲವೊಂದೆ ವಲಂ' ಎಂಬ ಸಾಮಾನ್ಯೀ ಕರಣವನ್ನೇನೂ ಮಾಡಬೇಕಿಲ್ಲ. ಮನುಷ್ಯಕುಲವೊಂದೇ, ಮನುಷ್ಯ ಸ್ವಭಾವವೂ ಒಂದೇ ಎಂಬ ಹೇಳಿಕೆಯಲ್ಲಿ ಸ್ವಾರಸ್ಯವಾದ್ದೇನೂ ಇಲ್ಲ. ಇವು ಒಂದಾಗಿದ್ದೂ ಅನೇಕ ಸಾಧ್ಯತೆಗಳನ್ನು ಹಿಡಿದಿಟ್ಟುಕೊಂಡಿವೆಯಲ್ಲ, ಇದು ಅಚ್ಚರಿಯನ್ನುಂಟುಮಾಡು ವಂಥದು.

ಸೌಂದರ್ಯವತಿಯಾಗಿ ನಿನಗೆ ನಿನ್ನ ಸೌಂದರ್ಯದ ಅರಿವಿದೆ. ಸತಿಯಾಗಿ ನಿನಗೆ ನಿನ್ನ ಗಂಡನ ದೌರ್ಬಲ್ಯಗಳು ಗೊತ್ತು. ಅದೇ ರೀತಿ ರಾಜ್ಞಿಯಾಗಿ ಅರಸು ಮನೆತನಕ್ಕೆ ಬಂದೊದಗಿದ ವಿಪತ್ತನ್ನೂ ನೀನು ಬಲ್ಲೆ. ಐಗುಪ್ತದ ಪೇರೋ ವಂಶಾವಳಿ ಯಾವ ತೊಂದರೆಯೂ ಇಲ್ಲದೆ ಅಧಿಕಾರದಲ್ಲಿ ಮುಂದರಿಯಬೇಕೆಂಬುದೇ ನಿನ್ನ ಆಸಕ್ತಿ. ವಿಷಯಲಂಪಟನಾದ ಪೇಪಿಯಿಂದ ರಾಜಕುಮಾರನಿಗೆ ಅಧಿಕಾರದ ಹಸ್ತಾಂತರವಾಗಬೇಕು - ಅಲ್ಲಿಯ ತನಕ ನಿನಗೆ ಸಮಾಧಾನವಿಲ್ಲ. ಇದರ ಮೊದಲ ಹೆಜ್ಜೆಯೇ ಸೆಡ್ ಉತ್ಸವ. ಮರುಯವ್ವನ ಪಡೆಯಲು ಅರಸನು ಕೈಗೊಳ್ಳುವ ಈ ಧಾರ್ಮಿಕ ವಿಧಿಗೆ ಕೇವಲ ಸಾಂಕೇತಿಕ ಅರ್ಥವೊಂದೇ ಇರುವುದೆಂಬುದು ನಿನಗೆ ಗೊತ್ತು. ಸೆಡ್ ಉತ್ಸವದಿಂದ ಪುನಃಶ್ಚೇತನವನ್ನು ಪಡೆಯಬೇಕಾಗಿದ್ದ ಪೇಪಿ ಬಳಲಿ ಬೆಂಡಾದುದನ್ನು ನೀನು ನೋಡಿದ್ದೀಯ. ಹಾಗೆಯೆ ಕೇಶಮುಂಡನದ ಒಳ ಉದ್ದೇಶ ಬಿಳಿಗೂದಲು ಕಾಣಿಸದೆ ಇರುವುದಕ್ಕಾಗಿ ಎಂದು ನಿನ್ನ ಸಂದೇಹ. ಅದೇನೇ ಇದ್ದರೂ, ಅಧಿಕಾರ ದರ್ಪದಿಂದ ಬೀಗಿದ ಪುರೋಹಿತಶಾಹಿಯನ್ನು ಅಡಗಿಸಲು ಸೆಡ್ ಉತ್ಸವವನ್ನು ಉಪಯೋಗಿಸಿಕೊಂಡ ನಿನ್ನ ಜಾಣ್ಮೆ ಮೆಚ್ಚತಕ್ಕದ್ದು. ಐಗುಪ್ತವನ್ನು

ಆಳುತ್ತಿದ್ದುದು ಫೇರೋ ಒಬ್ಬನೇ ಅಲ್ಲ - ಅರಸ, ಪುರೋಹಿತವರ್ಗ ಮತ್ತು ಭೂಮಾಲಿಕ ವರ್ಗಗಳ ಶಕ್ತಿತ್ರಯ. ಇವು ಒಂದನ್ನೊಂದು ಸಮತೋಲನದಲ್ಲಿರಿಸಿದ ರೇನೇ ಈ ಆಳ್ವಿಕೆ ಸುಗಮವಾಗುವುದು. ಫೇರೋ ಪೇಪಿಯ ಕಾಲದಲ್ಲಿ ಈ ಸಮತೋಲನ ತಪ್ಪುತ್ತಿರುವುದನ್ನು ನೀನು ಗಮನಿಸಿದೆ.ಮತ್ತೆ ಈ ಶಕ್ತಿತ್ರಯಗಳನ್ನು ಒಂದುಗೂಡಿಸುವಲ್ಲಿ ನಿನ್ನ ಕೈವಾಡವೇನೂ ಸಣ್ಣದಿರಲಿಲ್ಲ. ನಿನ್ನನ್ನು ನೋಡಿದೊಡ ನೆಯೆ ಮಹಾ ಅರ್ಚಕ ಹೇಪಾಟ್‌ನ ಬಿಗುಮಾನ ಸಡಿಲಾಗಿಬಿಡುತ್ತದೆ. ಹೇಪಾಟ್‌ನ ಈ ದೌರ್ಬಲ್ಯವನ್ನು ನೀನು ಬಹಳ ಚೆನ್ನಾಗಿಯೆ ಉಪಯೋಗಿಸಿಕೊಳ್ಳುತ್ತೀಯಾ. ನಿನ್ನ ರಾಜಕಾರಣದ ಮುಂದೆ ಉಳಿದವರೆಲ್ಲ ತೀರ ಸಪ್ಪೆಯಾಗಿಬಿಡುತ್ತಾರೆ ಎನ್ನು ವುದು ಉಳಿದವರ ಟೀಕೆಯಲ್ಲ; ನಿನ್ನ ಮುತ್ಸದ್ದಿತನದ ಹೆಚ್ಚುಗಳ. ರಾಣಿ ನೆಫರ್‌ಟೀಮ್, ನಮ್ಮ ನಡುವೆ ಎಂದಿಗೂ ದಾಟಲಾರದ ಕಾಲ ಹಲವು ಸಹಸ್ರ ವರ್ಷಗಳಷ್ಟು ಬಿದ್ದು ಕೊಂಡಿದೆ. ಒಮ್ಮೆ ಒಡೆದ ಮೊಟ್ಟೆಯನ್ನು ಹೇಗೆ ಮತ್ತೆ ಮೊದಲಿನ ಸ್ಥಿತಿಗೆ ತರ ಲಾರೆವೋ ಹಾಗೆಯೇ ಒಮ್ಮೆ ಸರಿದ ಕಾಲವನ್ನು ಹಿಂದಕ್ಕೆ ಕೊಂಡೊಯ್ಯುವುದು ಅಸಾಧ್ಯದ ಮಾತು. ಆದರೂ ಕೆಲವೊಂದು ಸಂಗತಿಗಳು ಮತ್ತೆ ಮತ್ತೆ ಮರುಕಳಿಸು ವುದರಿಂದ ಚರಿತ್ರೆ ನಮಗೆ ನಮ್ಮನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ನೀರಾನೆ ಪ್ರಾಂತದಲ್ಲಿ ನಿನ್ನ ಕಾಲದಲ್ಲಿ ನಡೆದ ಬಂಡಾಯ ಈ ಹಿಂದೆ ಹೇಳಿದಂತೆ ಸಂಭವನೀಯ ಜಗತ್ತಿಗೆ ಸೇರಿದ್ದಾದರೂ, ಇದು ಸಂಭವವಾಗಿ ಪ್ರತಿಯೊಂದು ದೇಶ ದಲ್ಲೂ ಕಾಣಿಸಿಕೊಂಡುದೇ. ಇಂಥ ಬಂಡಾಯದ ಹುಟ್ಟು, ಬೆಳವಣಿಗೆ ಮತ್ತು ಅವಸಾನದಲ್ಲಿ ಕೂಡ ಒಂದು ರೀತಿಯ ಕ್ರಮಬದ್ಧತೆ ಇರುವುದನ್ನು ಕಾಣುತ್ತೇವೆ. ಆದ್ದರಿಂದಲೇ ಮಾರ್ಕ್ಸಿಸ್ಟ್ ಚಿಂತಕರು ಇದನ್ನೊಂದು ಸಿದ್ಧಾಂತವಾಗಿ ಮಾಡಿ ಕೊಂಡಿದ್ದಾರೆ. ಬಂಡಾಯವು ಒಂದು ನಿರಂತರ ಅಗತ್ಯವೆಂದು ಮತ್ತೆ ಕೆಲವರು ಹೇಳಿದರೆ ಮಾರ್ಕ್ಸ್‌ವಾದಿಗಳು ಹಾಗೆ ಭಾವಿಸುವುದಿಲ್ಲ. ಒಂದು ಕಾಲಘಟ್ಟದಲ್ಲಿ ಪೂರ್ಣ ಸಮಾನತೆಯ ಆದರ್ಶರಾಜ್ಯ ಸಾಧ್ಯವೆಂದು ಅವರ ಮತ. ನಿರಂಜನರ ನಿಲುವು ಕೂಡ ಇದೇ ಎಂಬುದು ಅವರ **ಚಿರಸ್ಮರಣೆ** ಮತ್ತು **ಮೃತ್ಯುಂಜಯ** ಗಳೆರಡರಲ್ಲೂ ಸ್ಪಷ್ಟವಾಗುತ್ತದೆ.

ಹೇಗಿದ್ದರೂ ಪುರಾತನ ಐಗುಪ್ತದ ಅಂದಿನ ರಾಜಕಾರಣ, ಸಂಘರ್ಷ, ಸಮೂಹ ಹತ್ಯೆ ಇಂದಿನ ತನಕ ಮರುಕಳಿಸುತ್ತಲೇ ಬಂದಿದೆ. ಈ ಮರುಕಳಿಕೆಯಲ್ಲಿ ಮೆನೆಪ್‌ಟಾನಂಥ ಅದೆಷ್ಟೋ ಮುಗ್ಧರು ಅಸುನೀಗುತ್ತಲೂ ಬಂದಿದ್ದಾರೆ. ಮಹಾ ಅರ್ಚಕ ಹೇಪಾಟ್ ಸೆಡ್ ಉತ್ಸವದಲ್ಲಿ ಭಾಗವಹಿಸಲು ಮೆನೆಪ್‌ಟಾನ ಬಲಿಯನ್ನು ಬೇಡುತ್ತಾನೆ. ಒಂದು ರೀತಿಯಲ್ಲಿ ಈ ಬಲಿ ನಿನ್ನದೇ ಸೂಚನೆ. ಮೆನೆಪ್‌ಟಾನನ್ನು ಮಾತ್ರ ನೀನು ವೈಯಕ್ತಿಕವಾಗಿ ಎಂದೂ ದ್ವೇಷಿಸಲಿಲ್ಲ. ನಿಜವಾದ ರಾಜಕಾರಣದಲ್ಲಿ ಪ್ರೀತಿ ದ್ವೇಷಗಳಿಗೆ ಸ್ಥಾನವಿಲ್ಲ ಅಲ್ಲವೆ? ಅಲ್ಲದಿದ್ದರೆ ಮೆನೆಪ್‌ಟಾನ ಬಲಿಗೆ ನೀನ

ಬಹುಶಃ ಒಪ್ಪುತ್ತಿರಲಿಲ್ಲವೆಂದೇ ಹೇಳಬೇಕು. ಮೆನೆಪ್‌ಟಾನ ಬಗ್ಗೆ ನಿನಗೆ ಒಳಗಿಂದೊಳಗೆ ಮೆಚ್ಚುಗೆಯಿತ್ತು. ಪೇಪಿಯ ಸ್ಥಾನದಲ್ಲಿ ಮೆನೆಪ್‌ಟಾನನ್ನಿರಿಸಿ ನೀನು ನೋಡಿರ ಬಹುದು. ಹಾಗೆ ನೋಡಿದಾಗ ಇಬ್ಬರ ನಡುವಿನ ಅಗಾಧವಾದ ಅಂತರ ನಿನಗೆ ಗೋಚರಿಸಿರಲೇಬೇಕು. ಆದರೆ ಮೆನೆಪ್‌ಟಾ ಎಂದಿಗೂ ಪೇರೋ ಆಗಲಾರನೆಂಬುದೂ ನಿನಗೆ ಗೊತ್ತು. ಹೆಚ್ಚೆಂದರೆ ಆತ ಏರಬಹುದಾದ ಸ್ಥಾನ ಪ್ರಾಂತಪಾಲಕನದು. ಇದೂ ಅವನಿಗೆ ನೀರಾನೆ ಪ್ರಾಂತದ ಜನರು ತಾವಾಗಿಯೆ ಕೊಟ್ಟ ಸ್ಥಾನವೇ ಹೊರತು ಮೇಲಿನಿಂದ ದಯಪಾಲಿಸಿದ್ದಲ್ಲ. ಮೆಂಫಿಸ್‌ಗೆ ಬರಲು ಅವನಿಗೆ ಕರೆಬಂದುದೂ ಅವನಿಗೆ ಪ್ರಾಂತಪಾಲಕನೆಂಬ ಹೆಸರಿನಲ್ಲಿ. ಎಂದರೆ ಮೆನೆಪ್‌ಟಾ ನೀರಾನೆ ಪ್ರಾಂತದ ನಾಯಕ ನಾಗಿ ಮುಂದರಿಯುವುದಕ್ಕೆ ಬಹುಶಃ ಅರಸೊತ್ತಿಗೆಯ ಆಕ್ಷೇಪವೇನೂ ಇರಲಿಲ್ಲ ಎಂದು ಕೊಳ್ಳಬಹುದು. ಆದರೆ ಇಡಿಯ ಅರಸೊತ್ತಿಗೆಯೆ ಭೂಮಾಲಿಕ ಮತ್ತು ಪುರೋಹಿತ ಶಕ್ತಿಗಳ ನಡುವೆ ಸಿಕ್ಕಿ ದುರ್ಬಲವಾಗಿತ್ತಲ್ಲ! ಅರಸೊತ್ತಿಗೆ ತನ್ನ ಶಕ್ತಿಯನ್ನು ಮರಳಿ ಗಳಿಸುವುದಕ್ಕೆ ಮೆನೆಪ್‌ಟಾನ ಬಲಿ ಸೆಡ್ ಉತ್ಸವಕ್ಕಿಂತ ಹೆಚ್ಚು ಅಗತ್ಯವಾಗಿತ್ತು. ಈ ಅಗತ್ಯವನ್ನು ಕಂಡುಕೊಂಡವಳು ನೀನು.

ಆದರೆ ನೆಫರ್‌ಟೀಮ್, ಅರಮನೆಯ ಬಂದಿಯಾಗಿರುವಂತೆ ನೀನು ಸಂಪ್ರ ದಾಯುಗಳ ಬಂದಿಯೂ ಆಗಿರುವೆ. ಹಾಗೆಯೆ, ನಿನ್ನ ಮನಸ್ಸು ನಿನ್ನ ವಿಚಾರಗಳ ಬಂದಿಯೂ ಆಗಿದ್ದಿರಬಹುದಲ್ಲವೆ? ಮೆನೆಪ್‌ಟಾನ ದುರಂತಕ್ಕೆ ಕೇವಲ ನೀನು ಮಾತ್ರವೇ ಕಾರಣವಲ್ಲ; ಬೇಕಿದ್ದರೆ ಮೆನೆಪ್‌ಟಾ ಬಂದೀಖಾನೆಯಿಂದ ತಪ್ಪಿಸಿಕೊಂಡು ಹೋಗಬಹುದಿತ್ತು. ಅದಕ್ಕೆ ನೆರವಾಗಲು ನಿನ್ನ ಅರಮನೆಯೊಳಗೇ ಜನರಿದ್ದರು. ಆದರೆ ಅಂಥ ಪಲಾಯನವನ್ನು ಎಸಗಲು ಮೆನೆಪ್‌ಟಾನ ಮನಸ್ಸು ಒಪ್ಪಲಿಲ್ಲ. **ಒಮರ್‌ಮುಖ್ತಾರ್** ಚಲನಚಿತ್ರದಲ್ಲಿ ಮುಖ್ತಾರ್ ಹೇಳುತ್ತಾನೆ: "ನಾವು ಶರಣಾಗುವವರಲ್ಲ, ಸಾಯುವವರು" ಎಂದು. ಇದು ಯುದ್ಧ ತಂತ್ರವಲ್ಲ, ರಾಜ ಕಾರಣವೂ ಅಲ್ಲ. ಮುಗ್ಧರು ಮಾತ್ರ ಇಂಥ ಮಾತನ್ನು ಆಡಬಲ್ಲರು. ಬರ್ನಾರ್ಡ್ ಶಾನಂಥವರ ಅಭಿಪ್ರಾಯದಲ್ಲಿ ಇದು ಮುಗ್ಧತೆಯೂ ಅಲ್ಲ, ಮೊದ್ದುತನ. ಹಾಗಿದ್ದರೂ ಸಾಕ್ರೆಟೀಸನಿಂದ ಗಾಂಧಿಯ ವರೆಗೆ ಜೀವನದ ಹಂಗುತೊರೆದು ಕೆಲವೊಂದು ಮೌಲ್ಯ ಗಳನ್ನು ಎತ್ತಿಹಿಡಿದವರಿದ್ದಾರೆ. ಇದರ ಸರಿತಪ್ಪುಗಳನ್ನು ನಿರ್ಣಯಿಸುವುದಕ್ಕೆ ನಾವು ಯಾರು? ಏನೇ ಇದ್ದರೂ ಮೆನೆಪ್‌ಟಾ ಪಲಾಯನವನ್ನು ತಿರಸ್ಕರಿಸುವುದರ ಮೂಲಕ ತನ್ನ ಸಾವನ್ನು ಅಧಿಕಾರದ ಮುಖಕ್ಕೆ ಎಸೆದ. ಅವನ ವಧೆಯನ್ನು ಇಡಿಯ ಊರಿಗೆ ಊರೇ ವೀಕ್ಷಿಸಿತು. ಆದರ ನ್ಯಾಯಾನ್ಯಾಯವನ್ನು ಕೊನೆಗೂ ನಿರ್ಣಯಿಸ ಬೇಕಾದ್ದು ಜನತೆಯೇ ಅಲ್ಲವೆ?

ಮೆನೆಪ್‌ಟಾ ಹಾಗೂ ಅವನ ಊರವರ ದುರಂತ ಇಡಿಯ ಐಗುಪ್ತದ ಜನತೆಯ ದುರಂತ. ಹಾಗೂ ಈ ದುರಂತಕ್ಕೆ ಅರಸನಾಗಲಿ, ಅರ್ಚಕನಾಗಲಿ, ಭೂಮಾಲಿಕರಾಗಲಿ ಮಾತ್ರವೇ ಕಾರಣರಲ್ಲ. ಹೇಪಾಟ್‌ನ ದಂಡಯಾತ್ರೆಯನ್ನು ಗ್ರಹಿಸಿಕೊಂಡರೆ ಇದು ಅರ್ಥವಾಗುತ್ತದೆ. ಮೆಂಫಿಸ್‌ನಿಂದ ಸೇನೆ ಬರುತ್ತದೆ ಎಂಬುದು ನೀರಾನೆ ಪ್ರಾಂತದವರಿಗೆ ಗೊತ್ತಿತ್ತು. ಅದನ್ನೆದುರಿಸಲು ಅವರು ಸಾಕಷ್ಟು ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು - ಕೆಫ್ಟುವಿನಿಂದ ಹೊಸ ಬಿಲ್ಲು ಬಾಣಗಳ ಖರೀದಿ ಇತ್ಯಾದಿ. ಆದರೂ ಅವರು ಸೋತುಹೋದರೇಕೆ ? ಐಗುಪ್ತದಲ್ಲಿ ಪ್ರಬಲವಾಗಿದ್ದ ದೈವವಿಶ್ವಾಸವನ್ನು ಹೇಪಾಟ್ ತನಗೆ ಬೇಕಾದಂತೆ ಉಪಯೋಗಿಸಿಕೊಂಡ. ಅವನ ದಂಡಯಾತ್ರೆಯಲ್ಲಿ ಆಳೆತ್ತರದ ಚಿನ್ನದ ಅಮೆನ್ ದೇವತಾಮೂರ್ತಿಯಿತ್ತು. ಈ ಮೂರ್ತಿಯ ಬೆಳಕಿನ ಕಿರಣಗಳು ಕಣ್ಣಿಗೆ ಬಿದ್ದೊಡನೆಯೆ ನೀರಾನೆ ಪ್ರಾಂತದವರು ಆಯುಧಗಳನ್ನು ಕೆಳಕ್ಕೆ ಚೆಲ್ಲಿ ಮಂಡಿಯೂರಿ ನಿಂತರು! ಈ ಮುಗ್ಧ ಜನ ತಮ್ಮ ನಂಬಿಕೆಗೆ ತಾವೇ ಬಲಿಯಾಗಿದ್ದರು. **ಚಿರಸ್ಮರಣೆ** ಮತ್ತು **ಮೃತ್ಯುಂಜಯ**ದ ವಸ್ತು ಒಂದೇ ಎಂದೆ; ಆದರೂ ಈ ಎರಡು ಕಾದಂಬರಿಗಳ ಸನ್ನಿವೇಶಗಳು ಬೇರೆ. ಕಯ್ಯೂರಿನ ಬಂಡಾಯಗಾರರು ಇಂಥ ಯಾವುದೇ ನಂಬಿಕೆಗಳ ಗುಲಾಮರಾಗಿರಲಿಲ್ಲ. ಆದ್ದರಿಂದ ಅವರ ದುರಂತಕ್ಕೆ ಅವರು ಹೊಣೆಯಾಗುವುದಿಲ್ಲ. ನೀರಾನೆ ಪ್ರಾಂತದವರ ಕತೆ ತುಸು ವ್ಯತ್ಯಾಸವಿದೆ - ಇಲ್ಲಿ ಜನ ತಮ್ಮ ದುರಂತಕ್ಕೆ ಕೆಲಮಟ್ಟಿಗಾದರೂ ತಾವೇ ಹೊಣೆಯಾಗುತ್ತಾರೆ. ಇದು ಲೇಖಕರಿಗೆ ಗೊತ್ತಿದೆ - ಆದ್ದರಿಂದಲೆ ಅವರು ಈ ದುರಂತದ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಒಂದು ವೇಳೆ ಈ ಧಾರ್ಮಿಕ ಶ್ರದ್ಧೆಯಿಂದಲೂ ನೀರಾನೆ ಪ್ರಾಂತದ ಬಂಡಾಯಗಾರರು ಮುಕ್ತರಾಗುತ್ತಿದ್ದರೆ ? ನಿರಂಜನರು ಈ ಸಾಧ್ಯತೆಯ ಕುರಿತು ಯೋಚಿಸಿರಲಿಲ್ಲವೆ ? ಇದು ಸುಮಾರು ನಾಲ್ಕುಸಾವಿರ ವರ್ಷಗಳ ಹಿಂದಿನ ಕತೆ - ಇಲ್ಲಿ ಸನ್ನಿವೇಶದ ವಾಸ್ತವತೆಯನ್ನು ಕೂಡ ಲೇಖಕರು ಕಾಪಾಡಿಕೊಳ್ಳಬೇಕು. ಆಧುನಿಕ ಕಾಲಕ್ಕೆ ಸಂಬಂಧಿಸಿದ **ಭಾರತೀಪುರ**ದ ಹರಿಜನರೇ ಪೂಜಾಲಿಂಗವನ್ನು ಮುಟ್ಟುವುದಕ್ಕೆ ಹಿಂದೇಟು ಹಾಕುತ್ತಾರೆ. ಇನ್ನು ಪುರಾತನ ಐಗುಪ್ತದ ಜನರು ಅಮೆನ್ ದೇವರನ್ನು ಧಿಕ್ಕರಿಸಿದರು ಎನ್ನುವುದು ತೀರಾ ಅವಾಸ್ತವವಾಗುತ್ತದೆ. ಧರ್ಮದ ಇಂಥ ಪ್ರಬಲವಾದ ಹಿಡಿತವೇ ಈ ಜನತೆಯ ದುರಂತಕ್ಕೆ ಕಾರಣವೆನ್ನುವುದನ್ನು ನಿರಂಜನರು ಬಹಳ ಚೆನ್ನಾಗಿ ಇಲ್ಲಿ ಸೂಚಿಸಿದ್ದಾರೆ. ಧರ್ಮದ ಇಂಥ ಹಿಡಿತವಿಲ್ಲದಿರುತ್ತಿದ್ದರೆ ಈ ದುರಂತವೂ ಇಲ್ಲ, ಈ ಕಾದಂಬರಿಯೂ ಇಲ್ಲ.

ಮುಗ್ಧ ಜನತೆಯ ಶೋಷಣೆ ಅತ್ಯಂತ ಪುರಾತನ ಕಾಲದಿಂದಲೆ ನಡೆದುಬಂದ ವಿದ್ಯಮಾನ. ಜನರು ಕೆಲವೊಮ್ಮೆ ತಿಳಿದು, ಕೆಲವೊಮ್ಮೆ ತಿಳಿಯದೆಯೆ ಶೋಷಣೆಗೆ ಒಳಗಾಗುತ್ತಾರೆ. ತಿಳಿದಾಗ ಅಪರೂಪಕ್ಕೆ ಬಂಡಾಯವೇಳುತ್ತಾರೆ - ಎಲ್ಲ ಬಂಡಾಯಗಳೂ ತಕ್ಷಣದ ವಿಜಯದಲ್ಲಿ ಕೊನೆಗೊಳ್ಳುತ್ತವೆಂದು ಹೇಳುವುದು ಸಾಧ್ಯವಿಲ್ಲ.

ಗೆಲುವುಗಿಂತ ಸೋಲೇ ಇಲ್ಲಿ ಹೆಚ್ಚು. ಆದರೆ ಎಂದೂ ಸೋಲದ ಬಂಡಾಯವೊಂದಿದೆ - ಅದು ವಿಚಾರದ ಬಂಡಾಯ. ಉಳಿದ ಎಲ್ಲವನ್ನೂ ಹತ್ತಿಕ್ಕಬಹುದು. ಆದರೆ ವಿಚಾರ ವನ್ನು ಮಾತ್ರ ಹತ್ತಿಕ್ಕುವುದು ಅಸಾಧ್ಯ. ಮೆನೆಪ್ಟಾನ ವಧೆಯೊಂದಿಗೆ ಎಲ್ಲವೂ ಮುಗಿಯಿತೆಂದು ಅಖ್ವೆಟ್, ಪೇಪಿ ಹಾಗೂ ನೀನು ತಿಳಿದುಕೊಂಡಿರಬಹುದು. ನೀರಾನೆ ಪ್ರಾಂತದ ಜನರನ್ನು ದಮನಿಸುವುದರೊಂದಿಗೆ ಅಲ್ಲಿನ ಬಂಡಾಯವೂ ನಾಶವಾಯಿತೆಂದು ಹೇಪಾಟ್ ಅಂದುಕೊಂಡಿರಬಹುದು. ಆದರೆ ಅದು ಹಾಗೆ ಮುಗಿಯುವುದಿಲ್ಲ. ಆದ್ದರಿಂದಲೆ ಈ ಕಾದಂಬರಿಗೆ **ಮೃತ್ಯುಂಜಯ** ಎಂಬ ಹೆಸರು. ರಾಣಿ ನೆಫರ್ ಟೀಮ್, ಪೇರೋನ ಹೆಂಡತಿಯಾಗಿ, ಮೇಲಿನ ಹಾಗೂ ಕೆಳಗಿನ ಐಗುಪ್ತದ ರಾಜ್ಞಿ ಯಾಗಿ, ರಾಜಕುಮಾರನ ತಾಯಿಯಾಗಿ ನೀನು ಅರಮನೆಯ ಅರಗಿಣಿ. ಹೆಚ್ಚೆಂದರೆ ನೀನು ನೀಲನದಿಯಲ್ಲಿ ವಿಹಾರಕ್ಕೆಂದು ಹೋಗಿರಬಹುದು; ಉದ್ಯಾನದಲ್ಲಿ ಸುತ್ತಾಡಿರ ಬಹುದು; ಪೇರೋನ ಜತೆ ಬೇಟೆಯಲ್ಲಿ ಭಾಗವಹಿಸಿರಬಹುದು. ಚಾಣಾಕ್ಷಳಾದ ನಿನಗೆ ದೇಶದಲ್ಲಿ ಏನೇನು ನಡೆಯುತ್ತಿದೆಯೆಂದೂ ಗೊತ್ತಿರಬಹುದು. ಆದರೂ ನಿನ್ನ ಅರಿವಿನ ಕ್ಷೇತ್ರ ತುಂಬ ಸೀಮಿತ; ಯಾಕೆಂದರೆ ಪೇರೋನಿಗಿಂತ, ಹೇಪಾಟ್‌ಗಿಂತ, ಅಮಾತ್ಯನಿಗಿಂತ ಯಾವತ್ತೂ ಒಂದು ದೇಶ ದೊಡ್ಡದೇ. ನಿನ್ನ ಸೂಕ್ಷ್ಮಕ್ಕೆ ಸಿಕ್ಕದಂಥ ಹಾಡುಗಳನ್ನು, ಸಂಗೀತವನ್ನು ನೀನು ಕೇಳಿದ್ದೀಯಾ? ಉದಾಹರಣೆಗೆ ಅಂಬಿಗ ಬಟಾನ:

ನನ್ನ ನಲ್ಲೆಯ ಒಲವು ನಲಿದಿದೆ
ನದಿಯ ತಟದಲ್ಲಿ
ಕ್ರೂರ ಮೊಸಳೆಯು ಅನಿತು ಕುಳಿತಿದೆ
ನೆರಳ ಮರೆಯಲ್ಲಿ

ಎಂಬ ಅರ್ಥಪೂರ್ಣ ಹಾಡು. ಅಥವಾ ಮೆನ್ನನ 'ಇಂದು ಯಾರೊಡನೆ ಮಾತಾಡಲೀ....' ಎಂಬ ಹಾಡು. ಇಲ್ಲ, ಇವೊಂದನ್ನೂ ನೀನು ಕೇಳಿರಲಾರೆ. ಈ ಮುಗ್ಧ ಜನರು ಅರಮನೆಯ ಹೊರಗೇ ಇರುವವರು - ನೀನು ಇವರು ಯಾರನ್ನೂ ಕಂಡಿಲ್ಲ. ನೀರಾನೆ ಪ್ರಾಂತದಲ್ಲಿ ದಂಗೆಯೆದ್ದ ಕುರಿತು ಕೇಳಿದ್ದೆಯಷ್ಟೆ ಹೊರತು ಅಲ್ಲಿಗೆ ಹೋಗಿಲ್ಲ. ಆ ಮಂದಿ ಎಷ್ಟು ಸುಂದರವಾದ ಬದುಕನ್ನು ನಿರ್ಮಿಸಹೊರಟರು ಎಂಬುದೂ ನಿನಗೆ ಗೊತ್ತಿಲ್ಲ. ಅಲ್ಲಿ ಕುಶಲಕರ್ಮಿಗಳಿದ್ದರು, ಕೃಷಿಕರಿದ್ದರು, ಕಾರ್ಮಿಕರಿದ್ದರು. ಸೊಪ್ಪು ಕೆಡೆದ ಕಲಾಕೃತಿಗಳು ಮೆಂಫಿಸ್‌ನ ಮಾರುಕಟ್ಟೆ ತನಕ ಬರುತ್ತಿದ್ದುವು. ನಂತರ ಅಲ್ಲಿಗೊಬ್ಬ ವೃದ್ಧಶಿಲ್ಪಿ ಬಂದ. ಆತನ ಕೈಯಲ್ಲಿ ಕಲ್ಲು ಮೆದುವಾಗುತ್ತಿತ್ತು. ಅವನು ಸುಂದರವಾದ ನೀರಾನೆ ವಿಗ್ರಹವೊಂದನ್ನು ಕಡೆದು ನೀಲನದಿಯ ದಂಡೆಯ ಮೇಲೆ ನಿಲ್ಲಿಸಿದ. ಹೇಪಾಟ್‌ನ ದಂಡಯಾತ್ರೆಯಲ್ಲಿ ಈ ವಿಗ್ರಹವನ್ನು ನದಿ ನೀರಲ್ಲಿ ಮುಳುಗಿಸ ಲಾಯಿತು. ನೀರಾನೆ ಪ್ರಾಂತದ ನಾಯಕ ಮೆನೆಪ್ಟಾನನ್ನು ಜನರೇ ಅರಿಸಿದ್ದು:

ಅವನಿಗೆ ಆ ಸ್ಥಾನ ಎಂದೂ ಬೇಕಿರಲಿಲ್ಲ. 'ಇದೊಂದು ಯುತೋಪಿಯಾ! ಕನಸಿನ ರಾಜ್ಯ! ನಿಜ ಜೀವನದಲ್ಲಿ ಇದು ಹೇಗೆ ಸಾಧ್ಯ?' ಎಂದು ನೀನು ಕೇಳಬಹುದು. ಇಂಥ ಸಾಧ್ಯತೆಗಳನ್ನು ಕಾಣುವುದಕ್ಕಾದರೂ ನೀನು ಆಗಾಗ ಅರಮನೆಯ ಅಂಗಣದಿಂದ ಹೊರಬರುವುದು ಅಗತ್ಯ. ಒಂದು ವೇಳೆ ಅದು ನಿನಗೆ ಸಾಧ್ಯವಿರುತ್ತಿದ್ದರೆ, ಮೆನೆಪ್‌ಟಾನ ಬಲಿಯನ್ನು ನೀನು ರಾಜಕೀಯದ ಚೌಕಮಣೆ ಆಟದಲ್ಲಿ ನೀಡುತ್ತಿರಲಿಲ್ಲವೋ ಏನೋ.

ರಾಣಿ ನೆಫರ್‌ಟೀವ್, ನಿನ್ನ ನಿರ್ಮಾತೃ ನಿರಂಜನರ ಸಾಧನೆಯ ಬಗ್ಗೆ ನನಗೆ ಹೆಮ್ಮೆಯಿದೆ. ಆದರೆ ಒಂದು ಮಹಾಕಾವ್ಯವಾಗಬಹುದಾಗಿದ್ದ ಮೃತ್ಯುಂಜಯ ಒಂದು ಬೃಹತ್ ಗದ್ಯಕೃತಿಯಾಗಿ ಮಾತ್ರ ಉಳಿಯಿತಲ್ಲ ಎಂಬ ಬೇಸರವೂ ಇದೆ. ಈ ಮಾತನ್ನು ಕೇವಲ ವಾಚ್ಯಾರ್ಥದಲ್ಲಿ ಮಾತ್ರ ನಾನು ಹೇಳುತ್ತಿಲ್ಲ. ಒಂದು ದೊಡ್ಡ ಕಾದಂಬರಿಯಾಗಿದ್ದೂ ಇದು ಮಹಾಕಾವ್ಯದ ಮೇರುಸ್ಥಿತಿಯನ್ನು ಪಡೆಯುವುದು ಸಾಧ್ಯವಿತ್ತು. ಹಾಗಾಗದಿರುವುದಕ್ಕೆ ಕಾರಣವೇನೆಂದು ನನಗೆ ನಾನೇ ಹಲವು ಬಾರಿ ಕೇಳಿಕೊಂಡಿದ್ದೇನೆ. ನಿರಂಜನರ ರಾಜಕೀಯ ತತ್ವಬದ್ಧತೆಯಲ್ಲಿ ನನಗೆ ಅನುಕಂಪನ ವಿಲ್ಲದ್ದು ಒಂದು ಕಾರಣವಿರಬಹುದೆ ? ಅಥವಾ ಇನ್ನೇನಾದರೂ ಇರಬಹುದೆ - ಕೃತಿಯ ಆಂತರಿಕ ರಚನೆಗೆ ಸಂಬಂಧಿಸಿದಂತೆ ? ಈ ಪ್ರಶ್ನೆಗಳಿಗೆ ನನ್ನ ಬಳಿ ಸ್ಪಷ್ಟವಾದ ಉತ್ತರಗಳಿಲ್ಲದಿದ್ದರೂ ಕೆಲವೊಂದು ಅನುಮಾನಗಳನ್ನು ಇಲ್ಲಿ ನಮೂದಿಸಬಹುದು. ಮುಖ್ಯವಾಗಿ, ಪೂರ್ವಸಿದ್ಧ ಪಾತಳಿಯೊಂದಕ್ಕೆ ಲೇಖಕರು ಕತೆಯನ್ನೂ ಕಥಾಪಾತ್ರ ಗಳನ್ನೂ ತಳ್ಳಿರುವುದು. ಇಲ್ಲಿನ ಕಥಾಪಾತ್ರಗಳಲ್ಲಿ ನಿನ್ನಂಥ ಒಂದಿಬ್ಬರನ್ನು ಬಿಟ್ಟರೆ ವೈರುಧ್ಯವಾಗಲಿ, ದ್ವಂದ್ವಗಳಾಗಲಿ ಇಲ್ಲವೇ ಇಲ್ಲ. ಅದೇ ರೀತಿ ತಂತಮ್ಮ ಕ್ರಿಯೆಗಳ ಬಗ್ಗೆ, ನಿರ್ಣಯಗಳ ಬಗ್ಗೆ ಇವು ತಾತ್ವಿಕ, ನೈತಿಕ ತುಮುಲಗಳನ್ನೂ ತೋರುವುದಿಲ್ಲ. ದಟ್ಟ ಹಗಲಿನಂತೆ ಇಲ್ಲಿನ ಜಗತ್ತು - ಕಥಾ ಪಾತ್ರಗಳು, ಅವುಗಳ ಕ್ರಿಯೆಗಳು ನಮ್ಮ ಕಣ್ಣಿಗೆ ಹೊಡೆಯುತ್ತವೆ. ಮೆನ್ನನಂಥ ವ್ಯಕ್ತಿಗಳನ್ನು ನಾವು ಎರಡನೆ ದರ್ಜೆ ಸಿನಿಮಾ ದಲ್ಲಿ ನೋಡಿದ ಹಾಗೆ ಅನಿಸುತ್ತದೆ. ಅದೇ ರೀತಿ ಮೆನೆಪ್‌ಟಾನ ಶವವನ್ನು ಅಪಹರಿಸುವ ಸಂಚು ಕೂಡ. ಬಂಡಾಯ ನಡೆಯುವ ರೀತಿಯಲ್ಲೂ ಹೊಸತಿಲ್ಲ - **ಚಿರಸ್ಮರಣೆ** ಯಲ್ಲಿ ನಡೆದುದೇ ಇಲ್ಲಿ ಮರುಕಳಿಸುತ್ತದೆ. ಪಾತ್ರ ರಚನೆಯಲ್ಲಿ, ಕಥನದ ವಿಧಾನದಲ್ಲಿ ನಿರಂಜನರು ದೂರೀಕರಣವನ್ನೇನೊ ಸಾಧಿಸಿದರಾದರೂ, ಈ ದೂರೀಕರಣದ ಮೂಲಕ ಅವರು ಇನ್ನೊಂದು ಅಪಾಯವನ್ನೂ ಎದುರು ಹಾಕಿಕೊಂಡರು. **ಚಿರಸ್ಮರಣೆಯ** ಪಾತ್ರಗಳು ನಿಜಜೀವನದ ಅಚ್ಚಿನಿಂದ ಬಂದುವಾದ್ದರಿಂದ ಅವು ಜೀವಂತವಾಗಿವೆ; ಆದರೆ **ಮೃತ್ಯುಂಜಯದ** ಪಾತ್ರಗಳು ಪೂರ್ತಿ ಕಲ್ಪನೆಯಿಂದಲೆ ಬಂದುವು; ಆದ್ದರಿಂದ ಅವು ಪಡಿಯಚ್ಚಿನಂತೆ ತೋರುತ್ತವೆ. ಅವುಗಳ ಚಿತ್ರಣದಲ್ಲಿ ನಿರಂಜನರು ದಟ್ಟವಾದ ಬಣ್ಣಗಳನ್ನೆ ಉಪಯೋಗಿಸುತ್ತಾರೆ. ತೆಳು ಬಣ್ಣದ ಅಸ್ಪಷ್ಟತೆಯಾಗಲಿ, ನಿಗೂಢತೆಯಾಗಲಿ ಕಾದಂಬರಿಯ ಉದ್ದೇಶಕ್ಕೆ ಪೂರಕವಾಗಲಾರವು ಎಂಬ ಸಂದೇಹ

ಅವರಿಗಿದ್ದಿರಬಹುದು. ನಿರಂಜನರು ಪಾತ್ರಗಳನ್ನು ಸೂತ್ರದ ಬೊಂಬೆಯಂತೆ ಆಡಿಸುತ್ತಾರೆ - ಯಾವ ಯಾವ ಸೂತ್ರವನ್ನು ಯಾವ ಯಾವ ಬೆರಳಿನಲ್ಲಿ ಹಿಡಿದು ಕೊಂಡಿದ್ದೇನೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತು. ಕಾದಂಬರಿ ಮಾಧ್ಯಮ ಸಹಜವಾಗಿ ಒಳಗೊಳ್ಳಬಹುದಾದ ಅನಾರ್ಕಿ ಅಥವಾ ಅರಾಜಕತೆಯಲ್ಲಿ ಪ್ರಯೋಗ ಮಾಡುವುದಕ್ಕೆ ಅವರಿಗೆ ಇಷ್ಟವಿಲ್ಲವೋ ಅಥವಾ ಭಯವೋ - ಈ ವಿಷಯವನ್ನು ಇಲ್ಲಿಗೆ ಬಿಡೋಣ. **ಮೃತ್ಯುಂಜಯ** ಒಂದು ಮಹಾಕಾವ್ಯವಾಗದೆ ಇರಬಹುದು, ಆದರೆ ಅದೊಂದು ಶ್ರೇಷ್ಠ ಕೃತಿಯೆಂಬುದರಲ್ಲಿ ಸಂದೇಹವಿಲ್ಲ. ಇಷ್ಟು ಸುದೀರ್ಘವಾದ ಕಾದಂಬರಿಯನ್ನು ಒಟ್ಟಿಗೆ ಹಿಡಿದು ನಿಲ್ಲಿಸುವ ಶಕ್ತಿ ಯಾವುದು? ಓದುಗರಿಗೆ ಹೊಸ ತೆಂದು ತೋರುವ ಪೇರೋ ಕತೆಯೆ? ಆ ಕಾಲದ ಜನಜೀವನದ ದಟ್ಟ ವಿವರಗಳೆ? ನಿರಂಜನರ ಕಥನ ಕಲೆಯೆ? ಅಥವಾ ತನ್ನ ಕಥಾವಸ್ತುವಿನಲ್ಲಿ ಲೇಖಕರು ತೋರುವ ಅಸದಳವಾದ ಪ್ರೀತಿಯೆ? ಬರಹಗಾರನಿಗೆ ತಾನು ಬರೆದುದನ್ನು ಕಲೆಯಾಗಿಸಲು ವಸ್ತುನಿಷ್ಠ ದೃಷ್ಟಿಕೋನಬೇಕು - ಆದರೆ ಅದೊಂದೇ ಸಾಲದು; ತನ್ನ ವಸ್ತುವನ್ನು ಆತ ಗಾಢವಾಗಿ ಪ್ರೀತಿಸಲೂಬೇಕು. ನಿರಂಜನರಲ್ಲಿ ನಾವು ಇಂಥ ಪ್ರೀತಿಯನ್ನು ಕಾಣುತ್ತೇವೆ. ನಾವು ಗಾಢವಾಗಿ ಪ್ರೀತಿಸುವ ವಸ್ತುಗಳು, ಪಾತ್ರಗಳು ನಮ್ಮ ಬದುಕಿನ ಅಂಗವಾಗಿ ಬಿಡುವುದರಿಂದ ಅವು ವಾಸ್ತವ ಜಗತ್ತಿನಷ್ಟೇ ನಿಜವೂ ಆಗಿರುತ್ತವೆ. ಆದ್ದರಿಂದ ಯುತೋಪಿಯಾ ಬರೇ ಯುತೋಪಿಯಾ ಆಗಿ ಉಳಿಯುವುದಿಲ್ಲ. ಕನಸು ಮತ್ತು ನೆನಸಿನ ನಡುವಣ ಗೆರೆ ಮಾಯಲು ಸುರುವಾಗುತ್ತದೆ. ಮೊನ್ನೆ ಮೊನ್ನೆ ನಾನು ಮಂಜೇಶ್ವರ ಗೋವಿಂದ ಪೈ ಜನ್ಮದಿನೋತ್ಸವಕ್ಕೆ ಹೋಗಿದ್ದಾಗ ಅಲ್ಲಿ ಒಬ್ಬರು ಭಾಷಣಕಾರರು ಪೈಯವರ "ತಾಯೆ ಬಾರ ಮೊಗವ ತೋರ" ಪದ್ಯವನ್ನು ವಿವರಿಸುತ್ತ ಭಾವಪರವಶರಾಗಿ ಕನ್ನಡ ನಾಡಿನ ಸಂಪತ್ಸಮೃದ್ಧಿಯನ್ನು ಕೊಂಡಾಡುವುದನ್ನು ಕೇಳಿದೆ. ವಾಸ್ತವದಲ್ಲಿ ಇಡಿಯ ಕರ್ನಾಟಕದ ಅರ್ಧದಷ್ಟು ಭಾಗ ಬರಗಾಲ ಪೀಡಿತವಾದ ಸಂದರ್ಭದಲ್ಲಾಡಿದ ಈ ಮಾತಿಗೆ ಏನರ್ಥ ಎಂದು ಯಾರಾದರೂ ಕೇಳಬಹುದು. ಇಂಥ ಮಾತುಗಳು ಭಾವನಾತ್ಮಕವಾದ ನಮ್ಮ ಮನಸ್ಸಿನ ಧೋರಣೆಯನ್ನಷ್ಟೆ ಪ್ರತಿಬಿಂಬಿಸುತ್ತವಾದರೂ ಈ ಧೋರಣೆಯ ವಾಸ್ತವವನ್ನು ಅಲ್ಲಗಳೆಯುವುದು ಹೇಗೆ? ಮನುಷ್ಯ ಕೇವಲ ವಸ್ತು ಪ್ರಪಂಚದಲ್ಲಷ್ಟೆ ಬದುಕುವುದಲ್ಲ; ಭಾವನಾ ಪ್ರಪಂಚದಲ್ಲೂ ಬದುಕುತ್ತಾನೆ. ಕಮ್ಯೂನಿಸ್ಟ್ - ಮಾರ್ಕ್ಸಿಸ್ಟ್ ಲೇಖಕನೊಬ್ಬ ಇದಕ್ಕೆ ಹೇಗೆ ಉತ್ತರಿಸುತ್ತಾನೆಂದು ನಾನು ಹೇಳಲಾರೆ. ಆದರೆ ಆದರ್ಶದ ನಂಬಿಕೆಯಿರುವ ಎಲ್ಲರೂ ಕನಸುಗಳನ್ನು ಪ್ರೀತಿಸಲೇ ಬೇಕಾಗುತ್ತದೆ; ಹಾಗೂ ನಿರಂಜನರಲ್ಲಿ ಇಂಥ ಪ್ರೀತಿ ಅಗಾಧವಾಗಿ ಇದೆ ಎಂದಷ್ಟೆ ನಾನು ಹೇಳಬಲ್ಲೆ. ಆದ್ದರಿಂದ ನೆಫರ್‌ಟೀಮ್, ಈ ಪತ್ರವನ್ನು ಇಲ್ಲಿಗೆ ನಿಲ್ಲಿಸಿ ನಿನಗೂ ನಿನ್ನ ಸಮಕಾಲೀನರಿಗೂ ಈಗ ವಿದಾಯ ಹೇಳುವೆ. ಆದರೆ ಇದೇನೂ ಕೊನೆಯ ವಿದಾಯವಾಗಿರಲಾರದೆಂದು ಭಾವಿಸೋಣ. ನಿರಂಜನರು

ಇಂಥದೇ ಇನ್ನೊಂದು ಮೇರುಕೃತಿಯನ್ನು ಬರೆದರೆ ಅಲ್ಲಿ ನಿಮ್ಮನ್ನೆಲ್ಲ ಇನ್ನೊಮ್ಮೆ ಭೇಟಿಯಾಗಬಹುದೆಂಬ ಭರವಸೆ ನನಗಿದೆ. ಆಗ ನಿಮ್ಮ ಚಹರೆ ಬೇರೆ ಇರಬಹುದು; ಆದರೂ ಗುರುತಿಗೆ ತೊಂದರೆಯಾಗಲಾರದು ಎಂದು ಅನಿಸುತ್ತದೆ. ○

ನಿರಂಜನರ ಐತಿಹಾಸಿಕ ಕಾದಂಬರಿಗಳು : ಒಂದು ವಿಮರ್ಶೆ*

–ಡಾ। ಸಿ. ಎನ್. ರಾಮಚಂದ್ರನ್

ಸಾಹಿತ್ಯ ಪ್ರಕಾರಗಳಲ್ಲಿಯೇ ಐತಿಹಾಸಿಕ ಕೃತಿಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಏಕೆಂದರೆ ಈ ಕೃತಿಗಳಲ್ಲಿ ಸಾಹಿತ್ಯ ಮತ್ತು ಇತಿಹಾಸಗಳೆರಡೂ ಸಂಧಿಸಿ, ಘರ್ಷಿಸಿ, ಪರಸ್ಪರ ಪೂರಕವಾಗಿ ಒಂದು ವಿನೂತನ ಪಾಕವನ್ನು ಸಿದ್ಧಗೊಳಿಸುತ್ತವೆ. ಐತಿಹಾಸಿಕ ಕೃತಿಗಳು ಪ್ರಥಮತಃ ಸಾಹಿತ್ಯ ಕೃತಿಗಳೇ ಆದರೂ ಹಾಗೂ ಅವುಗಳನ್ನು ಅರ್ಥೈಸುವ, ಅಳೆಯುವ ಮಾನದಂಡಗಳೂ ಸಾಹಿತ್ಯಿಕವೇ ಆದರೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆ ಕೃತಿಗಳಲ್ಲಿ ಇತಿಹಾಸದ ಸ್ವರೂಪದ ಬಗ್ಗೆಯೂ ಚಿಂತನೆ ಕಂಡುಬರುತ್ತದೆ. ಈ ದೃಷ್ಟಿಯಿಂದ - ಅಂದರೆ ಒಂದು ಕೃತಿಯಲ್ಲಿ ಇತಿಹಾಸವನ್ನು ಕುರಿತು ಕಂಡುಬರುವ ಪರಿಕಲ್ಪನೆಯ ದೃಷ್ಟಿಯಿಂದ - ನಾವು ಐತಿಹಾಸಿಕ ಕೃತಿಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು: 1) ಇತಿಹಾಸವೆಂದರೆ ರಾಜ - ಮಹಾರಾಜರ ವೈಯಕ್ತಿಕ ಏಳು - ಬೀಳಿನ ಕಥೆ, ಎಲ್ಲಾ ಸ್ತರಗಳಲ್ಲಿಯೂ ರಾಜ - ರಾಣಿಯರು ಜನಸಾಮಾನ್ಯರಿಗಿಂತ ಭಿನ್ನರಾಗಿದ್ದರೆಂದೂ, ಅವರ ಜೀವನದ ಆಗುಹೋಗುಗಳು ಮಹತ್ವಪೂರ್ಣವಾಗಿದ್ದುವೆಂದೂ ನಾವು ಭಾವಿಸಿರುವುದರಿಂದ ಇಲ್ಲಿ ಕೃತಿಕಾರನಿಗೆ ಇತಿಹಾಸ ಸಿದ್ಧವಸ್ತುವನ್ನು ಒದಗಿಸುತ್ತದೆ. ಮತ್ತು ಅವನ ಲಕ್ಷ್ಯವೆಲ್ಲಾ ಈ ಅಸಾಮಾನ್ಯ ನಾಯಕ - ನಾಯಕಿಯರ ಆಮೋದ - ಪ್ರಮೋದ, ಧೈರ್ಯ ಸ್ಥೈರ್ಯ ಹಾಗೂ ಜಯಾಪಜಯಗಳನ್ನು ಆದಷ್ಟು ರೋಚಕವಾಗಿ ರೋಮಾಂಚಕವಾಗಿ ಪ್ರಸ್ತುತ ಪಡಿಸುವುದರಲ್ಲಿಯೇ ಇರುತ್ತದೆ. ಕನ್ನಡದ ಬಹುತೇಕ ಐತಿಹಾಸಿಕ ಕಾದಂಬರಿಕಾರರೆಲ್ಲಾ-ಉದಾಹರಣೆಗೆ ಗಳಗನಾಥರಿಂದ ಹಿಡಿದು ಅ.ನ.ಕೃ., ವೀರಕೇಸರಿ, ತ.ರಾ.ಸು., ರಾ.ಶಿ., ಬಿ. ಎಲ್. ವೇಣು ಇತ್ಯಾದಿ-ಈ ವರ್ಗಕ್ಕೇ ಸೇರುತ್ತಾರೆ. ತಮ್ಮ ಅಮೋಘ ನಿರೂಪಣಾ ಕ್ರಮದಿಂದ ಹಾಗೂ ರಂಜಿತ ಶೈಲಿಯಿಂದ ತ.ರಾ.ಸು., ಬೇರೆಯವರೆಲ್ಲರಿಗಿಂತ ಮೇಲೆ ನಿಲ್ಲುತ್ತಾರಾದರೂ, ಮೂಲತಃ ಅವರಿಗೂ ಇತಿಹಾಸವೆಂದರೆ ಮಹಾಪುರುಷರ ವೈಭವೀಕೃತ ಕಥೆಯೇ.[1] ಮುಖ್ಯವಾಗಿ ಈ ವರ್ಗಕ್ಕೇ ಸೇರಿದ ಆದರೆ ಸ್ವಲ್ಪ ವಿಭಿನ್ನರಾಗಿ ತೋರುವವರೆಂದರೆ ದೇವುಡು. ಇವರಿಗೆ

ಇತಿಹಾಸ ತನ್ನ ಕಲ್ಪಿತ ಪಾತ್ರಗಳಿಗೆ ಒಂದು ಖಚಿತ ಹಾಗೂ ರೋಚಕ ಪಾರ್ಶ್ವ ಭೂಮಿಯನ್ನು ಒದಗಿಸಿಕೊಡುತ್ತದೆ. 2) ಮತ್ತೊಂದು ವರ್ಗದಲ್ಲಿನ ಕೃತಿಗಳಲ್ಲಿ ಐತಿಹಾಸಿಕ ವ್ಯಕ್ತಿಗಳಿಗಿಂತ ಮಿಗಿಲಾಗಿ ಇತಿಹಾಸದ ಚಲನೆಯ ಬಗ್ಗೆ ಗಂಭೀರ ಚಿಂತನೆ ಕಂಡುಬರುತ್ತದೆ. ಇಲ್ಲಿ ಇತಿಹಾಸವೆಂದರೆ ಯಾವ ತರ್ಕಕ್ಕೂ ಸಿಲುಕದ, ಕಾರ್ಯ - ಕಾರಣ ಸಂಬಂಧ ಖಚಿತವಾಗಿ ಕಂಡುಬರದೆ, ಅಗೋಚರ ಹಾಗೂ ಆಕಸ್ಮಿಕ ಘಟನೆಗಳ ವೃತ್ತಾಂತ. ಈ ಪರಿಕಲ್ಪನೆಯನ್ನು ಇತಿಹಾಸಕಾರರು 'Cataclysmic conception of history' ಎಂದು ಗುರುತಿಸುತ್ತಾರೆ.[2] ಸ್ಥೂಲವಾಗಿ ಮಾಸ್ತಿಯವರ ಎರಡು ಮೇರು ಕೃತಿಗಳು 'ಚೆನ್ನ ಬಸವನಾಯಕ' ಹಾಗೂ 'ಚಿಕವೀರ ರಾಜೇಂದ್ರ' ಇತಿಹಾಸವನ್ನು ಈ ದೃಷ್ಟಿಯಿಂದ ಅರ್ಥೈಸುತ್ತವೆ. 3) ಕೆಲವು ಸಲ ಕೃತಿಕಾರನು ತನ್ನ ಪೂರ್ವ ನಿಶ್ಚಿತ ಸಿದ್ಧಾಂತಗಳಿಗೆ ಅಥವಾ ತತ್ತ್ವಗಳಿಗೆ ನಿದರ್ಶನವನ್ನಾಗಿ ಇತಿಹಾಸವನ್ನು ತನ್ನ ಕೃತಿಗಳಲ್ಲಿ ವ್ಯಾಖ್ಯಾನಿಸಬಹುದು. ಈ ನಿಲುವನ್ನು ''Didactic conception of history'' ಎನ್ನಬಹುದು. ಇತಿಹಾಸದ ಈ ವಿಧದ ಉಪಯೋಗವನ್ನು ನಾವು ಹಿಂದಿಯಲ್ಲಿ ದ್ವಿಜೇಂದ್ರಲಾಲ್ ರಾಯ್ ಅವರು ಬರೆದಿರುವ ಐತಿಹಾಸಿಕ ನಾಟಕ ಚಕ್ರದಲ್ಲಿ (ಅಕ್ಬರನಿಂದ ಹಿಡಿದು ಔರಂಗಜೇಬನ ಕಾಲದವರೆಗಿನ ಮುಘಲ್ ಸಾಮ್ರಾಜ್ಯವನ್ನು ಚಿತ್ರಿಸುವ 'ರಾಣಾ ಪ್ರತಾಪ', 'ಮೇವಾಡ ಪತನ', 'ನೂರ್‌ಜಹಾನ್', 'ಶಹಜಹಾನ್' ಇತ್ಯಾದಿ) ಕಾಣಬಹುದು. ಈ ನಾಟಕ ಚಕ್ರದ ಮೂಲಕ ನಾಟಕಕಾರರು ಪ್ರತಿಪಾದಿಸುವ ತತ್ವವೆಂದರೆ 'ಭಾರತದ ರಾಜಕೀಯ - ಸಾಂಸ್ಕೃತಿಕ ಔನ್ನತ್ಯ ಹಿಂದೂ - ಮುಸ್ಲಿಮ್ ಸಖ್ಯದಲ್ಲಿದೆ. ಈ ಹಿಂದೂ - ಮುಸ್ಲಿಮ್ ಐಕ್ಯಕ್ಕೆ ಭಂಗ ಬಂದಾಗಲೇ ಭಾರತದ ಅವನತಿ ಶುರುವಾಯಿತು; ಇತ್ಯಾದಿ. ಈ ವರ್ಗಕ್ಕೆ ಸೇರುವ ಕೃತಿಗಳು ಕನ್ನಡದಲ್ಲಿ ನನಗೆ ತಿಳಿದಂತೆ ಇಲ್ಲ.

ಓರ್ವ ಸೃಜನಶೀಲ ಸಾಹಿತಿಯು ಇತಿಹಾಸವನ್ನು ಇವೆಲ್ಲಾ ದೃಷ್ಟಿಕೋನಗಳಿಗಿಂತ ಭಿನ್ನವಾಗಿಯೂ ನೋಡಬಹುದು. ಅವನಿಗೆ ಇತಿಹಾಸವೆಂದರೆ ಸಾಮಾನ್ಯ ಜನರ, ಅವರನ್ನೊಳಗೊಂಡ ಸಮಾಜದ, ಆ ಸಮಾಜದ ಆಂತರಿಕ ಸಾಮರ್ಥ್ಯ - ಪೊಳ್ಳುಗಳ ಸಮೀಕ್ಷೆ. ಇತಿಹಾಸದಲ್ಲಿ ಆಕಸ್ಮಿಕ ಅಥವಾ ಅಗೋಚರವಾದುದೇನೂ ಇಲ್ಲ. ಪ್ರತಿಯೊಂದು ಐತಿಹಾಸಿಕ ಘಟನೆಗೂ ತನ್ನದೇ ಆದ ಕಾರಣವಿದೆ. ಮತ್ತು ಎರಡು ಘಟನೆಗಳ ಮಧ್ಯೆ ಕಾರ್ಯ ಕಾರಣ ಸಂಬಂಧವಿದೆ. ಈ ಪರಿಕಲ್ಪನೆಯನ್ನು ನಾವು 'Historical Determinism' ಎಂದು ಗುರುತಿಸಬಹುದು.[3] ಈ ವಿಧದ ಐತಿಹಾಸಿಕ ಪ್ರಜ್ಞೆಯುಳ್ಳ ಸಾಹಿತಿಯ ಕೃತಿಗಳಲ್ಲಿ ರಾಜಪುರುಷರು - ಅಧಿಕಾರಿಗಳು ಕಂಡುಬಂದರೂ ಒತ್ತು ಬೀಳುವುದು ಆ ಕಾಲದ ಸಾಮಾನ್ಯ ಜನರ ಮೇಲೆ - ಅವರ

ಆಶೋತ್ತರಗಳ ಮೇಲೆ; ಮತ್ತು ಮುಖ್ಯವಾಗಿ ಅಂದಿನ ಸಮಾಜದ ರಚನೆಯ ಮೇಲೆ. ನಿರಂಜನರ ಯಶಸ್ವೀ ಐತಿಹಾಸಿಕ ಕಾದಂಬರಿಗಳಲ್ಲಿ ಕಂಡುಬರುವುದು ಈ ವಿಧದ ಐತಿಹಾಸಿಕ ಪ್ರಜ್ಞೆ.

* * * *

2

೧೯೫೫ರಲ್ಲಿ ಪ್ರಕಟವಾದ 'ಚಿರಸ್ಮರಣೆ'ಯನ್ನೂ ನಾವು ಐತಿಹಾಸಿಕ ಕಾದಂಬರಿಯೆಂದು ಪರಿಗಣಿಸಿದರೆ, ಇಲ್ಲಿಯವರೆಗೆ ನಿರಂಜನರು ನಾಲ್ಕು ಕೃತಿಗಳನ್ನು ಇತಿಹಾಸದ ನೆಲೆಯಲ್ಲಿ ರಚಿಸಿದ್ದಾರೆ. 'ಕಲ್ಯಾಣಸ್ವಾಮಿ' (೧೯೫೬), 'ಸ್ವಾಮಿ ಅಪರಂಪಾರ' (೧೯೬೫) ಮತ್ತು 'ಮೃತ್ಯುಂಜಯ' (೧೯೭೬). ಇವುಗಳಲ್ಲಿ ಮೊದಲಿನ ಮೂರು ಕೃತಿಗಳು 'ಮೃತ್ಯುಂಜಯ'ಕ್ಕಿಂತ ವಿಷಯ ಮತ್ತು ಶೈಲಿ ಇವೆರಡರಲ್ಲಿ ಭಿನ್ನವಾಗಿರುವುದರಿಂದ ಮೊದಲು ಅವನ್ನು ವಿವೇಚಿಸಿ ಅನಂತರ 'ಮೃತ್ಯುಂಜಯ' ಒಂದನ್ನೇ ದೀರ್ಘವಾಗಿ ನೋಡಬಹುದು.

'ಚಿರಸ್ಮರಣೆ', 'ಕಲ್ಯಾಣಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ' - ಈ ಮೂರು ಕೃತಿಗಳ ಐತಿಹಾಸಿಕ ಹಿನ್ನೆಲೆ ಭಾರತವು ಬ್ರಿಟಿಷರ ದಾಸ್ಯದ ನೊಗವನ್ನು ದೂರ ಮಾಡಲು ಯತ್ನಿಸುತ್ತಿದ್ದ ಕಾಲ. 'ಚಿರಸ್ಮರಣೆ'ಯಲ್ಲಿ ಈ ಶತಮಾನದ ನಾಲ್ಕನೆಯ ದಶಕದಲ್ಲಿ ಹಾಗೂ ಐದನೆಯ ದಶಕದ ಆರಂಭದಲ್ಲಿ ಕಯ್ಯೂರಿನಲ್ಲಿ ನಡೆದ ರೈತ ಸಂಘಟನೆ - ಸಂಘಟಿತ ರೈತರು ಬ್ರಿಟಿಷರ ಹಾಗೂ ಜಮೀನ್ದಾರರ ವಿರುದ್ಧ ನಡೆಸಿದ ಹೋರಾಟ - ಹಾಗೂ ಆ ಹೋರಾಟದಲ್ಲಿ ಹುತಾತ್ಮರಾದವರ ಚಿತ್ರಣವಿದೆ. ಆ ಕಾಲದಲ್ಲಿ ಸ್ವಾತಂತ್ರ್ಯ ಸಮರ ಹಾಗೂ ವರ್ಗಕಲಹ ಎರಡೂ ಹೇಗೆ ಬೆಸೆದುಕೊಂಡಿದ್ದುವೆಂಬುದನ್ನು ಕೃತಿ ಸಫಲವಾಗಿ ಚಿತ್ರಿಸುತ್ತದೆ. 'ಕಲ್ಯಾಣಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ' ಕಾಲದಲ್ಲಿ ಇನ್ನೂ ಹಿಂದೆ ಹೋಗಿ ಕೊಡಗು ಪ್ರಾಂತ್ಯ ಚಿಕವೀರ ರಾಜೇಂದ್ರನ ಕಾಲದಲ್ಲಿ ಬ್ರಿಟಿಷರ ಅಧೀನಕ್ಕೆ ಬಂದುದು ಮತ್ತು ಆ ಪ್ರಾಂತ್ಯವನ್ನು ಬ್ರಿಟಿಷರಿಂದ ಮರಳಿ ಪಡೆಯಲು ಕಲ್ಯಾಣಸ್ವಾಮಿ ಹಾಗೂ ಸ್ವಾಮಿ ಅಪರಂಪಾರ ಇವರುಗಳು ನಡೆಸಿದ ಹೋರಾಟ - ಇವುಗಳನ್ನು ಚಿತ್ರಿಸುತ್ತವೆ.

ಈ ಮೂರು ಕಾದಂಬರಿಗಳಲ್ಲಿ ಅನೇಕ ಸಾಮ್ಯಗಳಿವೆ. ಸಾಮಾಜಿಕ ಚಿಂತನೆಯ ದೃಷ್ಟಿಯಿಂದ ನೋಡಿದರೆ ಈ ಮೂರು ಕೃತಿಗಳಲ್ಲೂ ಕಥೆ ಒಂದರೊಳಗೊಂದಿರುವ ಎರಡು ವೃತ್ತಗಳಲ್ಲಿ (Concentric Circles) ಸಾಗುತ್ತದೆ. ಕೃತಿಯನ್ನು

ಪೂರ್ತಿ ಆವರಿಸಿಕೊಂಡು ಅದಕ್ಕೆ ಒಂದು ರೂಪುಕೊಡುವ ಬಾಹ್ಯವೃತ್ತದಲ್ಲಿ ಪರಕೀಯರ ಆಳ್ವಿಕೆಯ ವಿರುದ್ಧ ಭಾರತೀಯರು ನಡೆಸುವ ಹೋರಾಟವಿದೆ. ಈ ವೃತ್ತ ದೊಳಗಡೆ ಇದರ ಪ್ರತಿರೂಪಾದ ಅಂತಃವೃತ್ತದಲ್ಲಿ ಶೋಷಕರ ವಿರುದ್ಧ ಶೋಷಿತರು ನಡೆಸುವ ಹೋರಾಟದ ಚಿತ್ರವಿದೆ. ಆದರೆ ಎರಡೂ ವೃತ್ತಗಳ ಕೇಂದ್ರ ಬಿಂದು ಒಂದೇ. ಅಂದರೆ ಕಥೆ ಕೇಂದ್ರ ಬಿಂದುವಿನಿಂದ ಶುರುವಾಗಿ ಸಣ್ಣ ವೃತ್ತದಿಂದ ದೊಡ್ಡ ವೃತ್ತಕ್ಕೆ ಸಹಜವಾಗಿ ಬೆಳೆಯುತ್ತದೆ. ಈ ವಿಧದ ಬೆಳವಣಿಗೆ ಹೇಗೆ ಸಾಧ್ಯವಾಗುತ್ತದೆ ಯೆಂದರೆ ಕೃತಿಕಾರರು ಆಳುವವರು ಮತ್ತು ಆಳಿಸಿಕೊಳ್ಳುವವರು ಇವರ ಮಧ್ಯೆ ಯೋಜಿಸಿರುವ ಸಮೀಕರಣದ ಕಾರಣದಿಂದ. ಈ ಮಾತನ್ನು ಕೃತಿಗಳಿಂದ ಸ್ಪಷ್ಟ ಪಡಿಸಬೇಕೆಂದರೆ 'ಚಿರಸ್ಮರಣೆ'ಯಲ್ಲಿ ಕಯ್ಯೂರಿನ ರೈತರು ಅಪ್ಪು - ಚಿರುಕಂಡ ಇವರ ನೇತೃತ್ವದಲ್ಲಿ ಮೊದಲು ಘರ್ಷಣೆಗಿಳಿಯುವುದು ಕಯ್ಯೂರಿನ ಇಬ್ಬರು ಜಮೀನ್ದಾರ ರೊಡನೆ - ಬ್ರಾಹ್ಮಣ ನಂಬೂದಿರಿ ಹಾಗೂ ನಂಬಿಯಾರ್ ಇವರೊಡನೆ. ನಮ್ಮವರೆ ಆದ ಜಮೀನ್ದಾರರಾಗಲೀ, ಹೊರಗಿನಿಂದ ಬಂದ ಬ್ರಿಟಿಷ್ ಪ್ರಭುಗಳೇ ಆಗಲಿ, ವರ್ಗೀಕೃತ ಸಮಾಜದಲ್ಲಿ ಇರುವವು ಎರಡೇ ವರ್ಗಗಳು: ದುಡಿಯುವವರು ಮತ್ತು ದುಡಿಸಿಕೊಳ್ಳುವವರು - ಉಳ್ಳವರು ಮತ್ತು ಇಲ್ಲದವರು. ನಿರಂಜನರ ಈ ಚಿಂತನೆಯ ಕಾರಣದಿಂದ ಕಯ್ಯೂರಿನ ರೈತರು ತಮ್ಮೂರಿನ ಜಮೀನ್ದಾರರ ವಿರುದ್ಧ ಸಾರಿದ ಸಮರ, ಸಹಜವಾಗಿಯೇ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವೂ ಆಗುತ್ತದೆ. ಹಾಗೆಯೇ 'ಕಲ್ಯಾಣ ಸ್ವಾಮಿ'ಯಲ್ಲಿ ಅಣ್ಣು ಗೌಡ ಹಾಗೂ ಅವನಿಗೆ ಸಹಾಯಕರಾಗಿ ನಿಂತ ಕಲ್ಯಾಣ ಸ್ವಾಮಿ (ಪುಟ್ಟಬಸವ), ರಾಮ ಗೌಡ, ಮಾಚಯ್ಯ ಇವರುಗಳು ಅಮರ ಸುಳ್ಯದ ತುಂಡು ಪಾಳೆಯಗಾರ ರಾಮಪ್ಪಯ್ಯನನ್ನು ಎದುರಿಸುವುದೇ ಮತ್ತೊಂದು ಸ್ತರದಲ್ಲಿ ವಿಸ್ತರಿಸಿ, ಅವರು ಬ್ರಿಟಿಷರ ವಿರುದ್ಧ ಹೋರಾಡುವುದಾಗುತ್ತದೆ.

ಇಂದಿನದನ್ನೇ ಆಗಲಿ ಅಥವಾ ಗತಕಾಲದ ಸಮಾಜವನ್ನೇ ಆಗಲಿ, ಪೂರ್ವ ನಿಶ್ಚಿತ ಭಾವನೆಗಳ ನೆಲೆಯಿಂದ ಚಿತ್ರಿಸುವುದರಲ್ಲಿರುವ ಒಂದು ದೊಡ್ಡ ಅಪಾಯ ವೆಂದರೆ ಆ ಕಾರಣದಿಂದ ಇತಿಹಾಸದ ಸರಳೀಕರಣವಾಗಿಬಿಡುತ್ತದೆ. ಅದಕ್ಕಿಂತ ಮುಖ್ಯವಾಗಿ ಕೃತಿಯಲ್ಲಿ ಪಾತ್ರಗಳ ಜಾಡು, ಭಾವನೆಗಳ ಓಟ ಎಲ್ಲವೂ ಸಾಮಾನ್ಯ ಓದುಗ ಅಪೇಕ್ಷಿಸುವ, ನಿರೀಕ್ಷಿಸುವ ರೀತಿಯಲ್ಲಿಯೇ ಇರುತ್ತವೆ. ಆ ತರಹ ಸುಲಭಸಿದ್ಧ (ರೆಡಿಮೇಡ್) ಪಾತ್ರಗಳು ಮತ್ತು ಭಾವನೆಗಳ ಕಾರಣದಿಂದ ಕೃತಿಕಾರ ಹೊಸತೇನನ್ನೂ ನಿರ್ಮಿಸುವುದಾಗುವುದಿಲ್ಲ. 'ಕಲ್ಯಾಣಸ್ವಾಮಿ', 'ಸ್ವಾಮಿ ಅಪರಂಪಾರ' ಹಾಗೂ 'ಚಿರಸ್ಮರಣೆ'ಗಳ ಐತಿಹಾಸಿಕತೆ ಏನೇ ಇರಲಿ,[4] ಸಾಹಿತ್ಯಿಕ ದೃಷ್ಟಿಯಿಂದ ಅವನ್ನು ನೋಡಿದಾಗ ನಮಗೆ ಎದ್ದು ಕಾಣುವ ಕೊರತೆ ಎಂದರೆ ಇದೇ - ಇತಿಹಾಸದ ಸರಳೀಕರಣ ಮತ್ತು ಸುಲಭಸಿದ್ಧ ಪಾತ್ರ - ಭಾವನೆಗಳ ಚಿತ್ರಣ. ವರ್ಣವಿನ್ಯಾಸದ

ಸೂಕ್ಷ್ಮಾತಿಸೂಕ್ಷ್ಮ ಭಿನ್ನತೆಗಳ ಬದಲು ನಾವು ಕಾಣುವುದು ಅಚ್ಚ ಬಿಳಿ - ಕಪ್ಪು ವರ್ಣಗಳಲ್ಲಿ ಚಿತ್ರಿಸಿದ ಸಮಾಜ. ಉದಾಹರಣೆಗೆ ನಾವು 'ಕಲ್ಯಾಣ ಸ್ವಾಮಿ' ಯನ್ನು ನೋಡೋಣ:

'ಆಳುವವರು ಯಾವ ರೀತಿಯಲ್ಲೂ ಒಳ್ಳೆಯವರಾಗಿರಲು ಸಾಧ್ಯವಿಲ್ಲ ಮತ್ತು ಆಳಿಸಿಕೊಳ್ಳುವವರು ಜಾಗೃತರಾದಾಗ ಅವರನ್ನು ಮೋಸದಿಂದಲೇ ವಿನಹ ಬೇರೆ ಯಾವ ರೀತಿಯಲ್ಲೂ ಸೋಲಿಸಲಾಗುವುದಿಲ್ಲ' - ಈ ವಿಚಾರಸರಣಿಯಿಂದ ಕಾದಂಬರಿಯ ನಿರ್ಮಾಣವಾಗಿರುವುದರಿಂದ ಕಲ್ಯಾಣಸ್ವಾಮಿಯ ಮತ್ತು ಅವನ ಜೊತೆಗಾರರೆಲ್ಲಾ ಉದಾತ್ತ ಭವ್ಯ ವ್ಯಕ್ತಿಗಳಾಗಿಬಿಟ್ಟಿದ್ದಾರೆ. ಕಲ್ಯಾಣಸ್ವಾಮಿ, ಚೆಟ್ಟಿ ಕುಡಿಯ, ನಂಜಯ್ಯ, ಮಾಚಯ್ಯ, ಕರ್ತು, ರಾಮೇಗೌಡ - ಇವರಲ್ಲಿ ಯಾರಿಗೂ ಒಂದೇ ಒಂದು ಕ್ಷಣದಲ್ಲಿಯೂ ಮಾನವ ಸಹಜ ವಿಕಾರಗಳಾಗಲೀ, ಭೀತಿ - ಅಸೂಯೆಗಳಾಗಲೀ ಇಲ್ಲ. ಪರಸ್ಪರ ಗುರುತು ಪರಿಚಯವಿಲ್ಲದಿದ್ದರೂ ನೋಡಿದ ಕ್ಷಣದಲ್ಲೇ ಅವರೆಲ್ಲಾ ಗಾಢಮಿತ್ರರಾಗುತ್ತಾರೆ. ಜಾತಿಮತ ಕುಲಭೇದಗಳನ್ನು ಮರೆತು ಇವರ ಕರೆಗೆ ಓಗೊಟ್ಟು, ಅದಕ್ಕೇ ಕಾಯುತ್ತಿದ್ದರೆಂಬಂತೆ ಹಳ್ಳಿಹಳ್ಳಿಗಳಲ್ಲೆಲ್ಲಾ ಅಸಂಖ್ಯಾತ ಜನರು ಇವರನ್ನು ಸೇರುತ್ತಾರೆ. ಸ್ತ್ರೀಯರೆಲ್ಲಾ 'ಭಾರತೀಯ ವೀರಮಾತೆ' ಗಳು ತಾನೆ ! ಅವರೆಲ್ಲಾ ಸಂತೋಷದಿಂದ ಇವರಿಗೆ ಬುತ್ತಿ ಕಟ್ಟಿಕೊಟ್ಟು ಯುದ್ಧಕ್ಕೆ ಕಳುಹಿಸುತ್ತಾರೆ. ಇಷ್ಟೆಲ್ಲಾ ಅಪ್ರತಿಮ ವೀರರಿದ್ದೂ, ರಾಮೇಗೌಡನಂತಹ - ಕಲ್ಯಾಣಸ್ವಾಮಿಯೇ ಘೋಷಿಸುವಂತೆ - ಸಮರ ಕುಶಲನಿದ್ದೂ, ಒಂದೇ ರಾತ್ರಿಯಲ್ಲಿ ಅತಿ ಸುಲಭವಾಗಿ, ಇವರೆಲ್ಲಾ ಬ್ರಿಟಿಷರಿಗೆ ಏನೂ ಹೋರಾಟವಿಲ್ಲದೆ ಸೆರೆಸಿಕ್ಕುತ್ತಾರೆ, ಅದುಬೇರೆಯೇ ವಿಷಯ.

ಇವರಿಗೆ ವಿರುದ್ಧವಾಗಿರುವ ಬ್ರಿಟಿಷರು ಮೋಸಗಾರರು, ಕಡಲ್ಗಳ್ಳರು, ನೀಚರು ಹಾಗೂ ಹೇಡಿಗಳು. 'ಕಲ್ಯಾಣ ಸ್ವಾಮಿಯ ಬಂಡಾಯದ ಸುದ್ದಿ ಕೇಳಿಯೇ ಮಡಿಕೇರಿಯಲ್ಲಿದ್ದ ಲೀ ಹಾರ್ಡಿಯ ಜಂಘಾಬಲವೇ ಉಡುಗಿಹೋಯಿತು. ಕಂಡು ಕೇಳರಿಯದ ಕಲ್ಯಾಣ ಸ್ವಾಮಿಯ ಹೆಸರನ್ನು ಯಾರಾದರು ಉಚ್ಚರಿಸಿದರೂ ಸಾಕು, ಆತ ಬೆಚ್ಚಿಬೀಳುತ್ತಿದ್ದ....ಯಾವುದೇ ಗುಡ್ಡದಲ್ಲಿ ಹೊಗೆಯಾಡಿದರೆ 'ರೈತರ ದಂಗೆ' ಎಂದು ಹೆದರುತ್ತಿದ್ದ ಆತ. ಕಾಡಿಗೆ ಬೆಂಕಿ ಬಿದ್ದರಂತೂ 'ವಿದ್ರೋಹಿಗಳು' ಎಂದು ನಡುಗುತ್ತಾ ಕೂಗಾಡುತ್ತಿದ್ದ' (ಪುಟ 102). ಇಂತಹ ಹೇಡಿಗಳಿಗೆ ಕೊಡಗು ಪ್ರಾಂತ್ಯವನ್ನು ಗೆಲ್ಲಲು ಹಾಗೂ ಕಲ್ಯಾಣಸ್ವಾಮಿಯ ವೀರ ಸಂಗ್ರಾಮವನ್ನು ಹತ್ತಿಕ್ಕಲು ಹೇಗೆ ಸಾಧ್ಯವಾಯಿತು ? ಉತ್ತರ ಬಹು ಸುಲಭ, ನಮ್ಮವರ ವಿಶ್ವಾಸ ದ್ರೋಹ ಮತ್ತು ಮೋಸ. 'ಕಲ್ಯಾಣ ಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ'

ಇವೆರಡೂ ಕೃತಿಗಳಲ್ಲಿನ ಖಳನಾಯಕ ಜೋಪು ದಿವಾನ. ಪ್ರತಿಯೊಂದು ದುರ್ಘಟನೆಯಲ್ಲೂ ಆತನ ಕೈವಾಡವಿದೆ. ಅವನ ಮೋಸ, ವಂಚನೆ, ದುರಾಸೆ, ಸ್ವಾರ್ಥ ಇವುಗಳ ಸಹಾಯವಿಲ್ಲದಿದ್ದರೆ ಆಂಗ್ಲರಿಗೆ ಏನು ಸಾಧ್ಯವಾಗುತ್ತಿತ್ತು ? ತಮ್ಮ ತಕ್ಕಡಿಯನ್ನು ಕಳೆದುಕೊಂಡು ಎಂದೋ ಓಡಿಹೋಗುತ್ತಿದ್ದರು. ನನಗೊಂದೊಂದು ಸಲ ಗಾಬರಿಯಾಗುತ್ತದೆ: ಭಾರತದಲ್ಲಿ ಜಯಚಂದ್ರ, ಮೀರ್‌ಜಾಫರ್, ಮೀರ್ ಸಾದಿಕ್ ಇವರುಗಳಿಲ್ಲದಿದ್ದರೆ ದೇಶಭಕ್ತ ಭಾರತೀಯ ಇತಿಹಾಸಕಾರರ - ಸಾಹಿತಿಗಳ ಪಾಡೇನಾಗುತ್ತಿತ್ತು ಎಂದು.

ಈ ವಿಧದ ಇತಿಹಾಸದ ಸರಳೀಕರಣದೊಂದಿಗೆ ಅಥವಾ ಸರಳೀಕರಣಕ್ಕೆ ಪೂರಕವಾಗಿ - ಈ ಕೃತಿಗಳಲ್ಲಿನ ಭಾಷೆಯೂ ಭಾವೋನ್ಮಾದದಿಂದ ಹುಚ್ಚುಕುದುರೆಯಂತೆ ಓಡುತ್ತದೆ. ಗಂಗವ್ವ ತನ್ನ ಸೊಸೆಯೊಡನೆ ಮಗನಿಗೆ ಹಂಬಲಿಸಿ ಕಾಯುವಾಗ ಕರುಣಾರಸ ಓತಪ್ರೋತವಾಗಿ ಹರಿದರೆ ಅದಕ್ಕೆ ಸರಿಸಮನಾಗಿ ಸ್ವಾತಂತ್ರ್ಯವೀರರ ಧೈರ್ಯ - ದೇಶಪ್ರೇಮಗಳು ಮೆರೆದಾಡುತ್ತವೆ. ಎಲ್ಲ ಸಂದರ್ಭಗಳೂ ಹೆಚ್ಚುಕಮ್ಮಿ ನಾಟಕೀಯ (ಮೆಲೊಡ್ರಾಮ)ವಾಗಿಯೇ ಇವೆ. ಪುಟ್ಟಬಸಪ್ಪ - ಕಲ್ಯಾಣ ಸ್ವಾಮಿಯಾಗುವ ಮೊದಲು - ಕೊಡಗಿನ ಕರ್ಮಕಥೆಯನ್ನು ಹೀಗೆ ಹೇಳುತ್ತಾನೆ:

"ಕೊಡಗರ ಧಮನಿಯಲ್ಲಿ ಹರಿಯುವುದು ವೀರರಕ್ತವೇ ಅಲ್ಲವೇನು? ಅವರ ಪೀಚುಕತ್ತಿ ಬರಿಯ ಅಲಂಕಾರಕ್ಕೆಂದು ಹೇಳಿದವರು ಯಾರು? ಅವರ ಬಿಚ್ಚುಗತ್ತಿಯ ಅಲಗು ಎಂದು ಮೊಂಡಾಯಿತು? ಅವರು ಗುಲಾಮಗಿರಿಯನ್ನೇ ಅಪ್ಪಿಕೊಳ್ಳ ಬಯಸುವ ಕ್ಷುದ್ರಜೀವಿಗಳೇ...."

"ಪುಟ್ಟಬಸವ ಕಂಪಿಸುತ್ತಿದ್ದ ಧ್ವನಿಯಲ್ಲಿ ಮೈಮರೆತು ಆಡುತ್ತಿದ್ದ ಮಾತುಗಳಿಂದ ಎಲ್ಲರಿಗೂ ರೋಮಾಂಚನವಾಯಿತು. ಆಸಹನೆಯಿಂದ ಪ್ರತಿಯೊಬ್ಬರ ನರನಾಡಿಗಳೂ ಬಿಸಿ ಏರಿದುವು. ಬಾಹುಗಳು ಸ್ಫುರಿಸಿದುವು. ರಕ್ತದ ಒತ್ತಡದಿಂದ ಕಣ್ಣು ಕೆಂಪಡರಿದುವು...." (ಪುಟ 33).

'ಸ್ವಾಮಿ ಅಪರಂಪಾರ'ದಲ್ಲಿಯೂ ಭಾಷೆಯ ಉಪಯೋಗ ಇದೇ ರೀತಿಯದು. 'ಬಂಧನದಲ್ಲಿ ಅಪರಂಪಾರನ ಧೀಮಂತ ವ್ಯಕ್ತಿತ್ವ ಇಮ್ಮಡಿಸಿತ್ತು. ಮುಷ್ಟಿಯ ಆಘಾತದಿಂದ ಬೀಗಿಕೊಂಡಿದ್ದ ತುಟಿಗಳು ಈತ ಅದಮ್ಯ ಎಂಬ ಭಾವನೆಗೆ ಪುಟಗೊಡುತ್ತಿದ್ದುವು' (ಪುಟ 167). ಬಂಧನದಲ್ಲಿಯೂ ಅವನು 'ಮದಗಜ'ದಂತೆ ನಡೆಯುತ್ತಾನೆ. ಅವನನ್ನು ಬ್ರಿಟಿಷರು ಸೆರೆಮನೆಯಲ್ಲಿಟ್ಟಾಗ 'ಸ್ವಾತಂತ್ರ್ಯ ಹೋರಾಟದ ಶಿಲ್ಪಿಯನ್ನು ತನ್ನೊಳಗೆ ಬಚ್ಚಿಟ್ಟು ಕಾರಾಗೃಹದ ಬಾಗಿಲು ಮುಚ್ಚಿಕೊಂಡಿತು' (ಪುಟ 167). 'ಚಿರಸ್ಮರಣೆ'ಯಲ್ಲಂತೂ ಅಳಿದ ಹುತಾತ್ಮರ ನೆನಪಿಗೆ ಚೆಂಗುಲಾಬಿಯ

ಅರ್ಪಣೆಯಾಗುತ್ತದೆ. ಶಿಲೆಯ ಮೇಲೆ ರಕ್ತಾಕ್ಷರಗಳಲ್ಲಿ ಅವರ ನೆನಪನ್ನು ಕೊರೆಯುತ್ತಾರೆ. ಅಗಲಿದ ಸೋದರರಿಗೆ 'ವಿಪ್ಲವ ವಂದನೆ' - 'ರಕ್ತ ನಮಸ್ಕಾರ'ಗಳನ್ನು ಸಲ್ಲಿಸುತ್ತಾರೆ.

*   *   *   *

3

ಇತಿಹಾಸವೆಂದರೆ ರಾಜ - ರಾಣಿಯರ, ಅಧಿಕಾರಕ್ಕಾಗಿ ಅವರು ನಡೆಸಿದ ಕುಟಿಲ ಕಾರಸ್ಥಾನಗಳ ವಿವರವಲ್ಲವೆಂದು ಹೇಳುತ್ತಾ ನಿರಂಜನರು 'ಕಲ್ಯಾಣಸ್ವಾಮಿ'ಯ ಹಿನ್ನುಡಿಯಾಗಿ ಬರುವ 'ಇತಿಹಾಸ ಮತ್ತು ಸೃಷ್ಟಿ ಸಾಹಿತ್ಯ' ಎಂಬ ಪ್ರಬಂಧದಲ್ಲಿ ತಮ್ಮ ವಿಚಾರಗಳನ್ನು ಹೀಗೆ ಮಂಡಿಸುತ್ತಾರೆ: "ಕಾಲಕಾಲಕ್ಕೂ ಬದಲಾಗುತ್ತಾ ಬಂದ ಬದುಕು, ಆಗಿನ ಕಾಲಧರ್ಮ, ಅದರಿಂದ ಪ್ರಭಾವಿತರಾದ ಜನರ ರೀತಿ ನೀತಿಗಳು, ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳು" - ಇವು ಇತಿಹಾಸವನ್ನು ರೂಪಿಸುವ ಮುಖ್ಯ ಅಂಶಗಳು. 'ಗತಜೀವನದ ಪುನರ್‌ಸೃಷ್ಟಿಯೇ ಐತಿಹಾಸಿಕ ಸಾಹಿತ್ಯ ಕೃತಿಗಳಲ್ಲಿರಬೇಕಾದ ಪ್ರಧಾನ ಅಂಶ' (ಪುಟಗಳು 149-151). ಚಿಂತನಶೀಲ ನಿರಂಜನರ ಈ ವಿಚಾರಗಳು ಸಾಹಿತ್ಯಿಕವಾಗಿ ಸಫಲವಾಗುವುದು 'ಮೃತ್ಯುಂಜಯ' ಕೃತಿಯಲ್ಲಿಯೇ. ಭಾಷೆ, ಪಾತ್ರ ರಚನೆ, ಒಟ್ಟು ಕೃತಿಯ ನೆಲೆಗಟ್ಟಾಗಿರುವ ಸಾಮಾಜಿಕ ಸಿದ್ಧಾಂತ - ಪ್ರತಿಯೊಂದರಲ್ಲಿಯೂ 'ಮೃತ್ಯುಂಜಯ' ನಿರಂಜನರ ಇತರ ಐತಿಹಾಸಿಕ ಕೃತಿಗಳಿಗಿಂತ ಪೂರಾ ಭಿನ್ನವಾಗಿದೆ ಮತ್ತು ನಿರಂಜನರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕೊಡುಗೆಯಾಗಿದೆ. ಈ ಅಪ್ರತಿಮ ಯಶಸ್ಸಿಗೆ ಒಂದು ಮುಖ್ಯ ಕಾರಣ ಪ್ರಾಯಶಃ ಕೃತಿಕಾರನಿಗೂ ವಸ್ತುವಿಗೂ ಇರುವ ದೂರ. 'ಮೃತ್ಯುಂಜಯ' ಕನಿಷ್ಠ ಪಕ್ಷ ಮೂರು ಸಾವಿರ ವರ್ಷಗಳ ಹಿಂದೆ ಇದ್ದಿರಬಹುದಾದ ಈಜಿಪ್ತ್ ಸಮಾಜದ ವರ್ಣನೆ ಮತ್ತು ವಿಶ್ಲೇಷಣೆ. ಆದ್ದರಿಂದ ಈ ಕೃತಿಯಲ್ಲಿ ಇತಿಹಾಸದ ಗರ್ಭದಲ್ಲಿ ಹುದುಗಿಹೋದ ಒಂದು ಘಟನೆಯನ್ನು - ಅನಕ್ಷರಸ್ಥ ರೈತರು, ಕುಶಲ ಕೆಲಸಗಾರರು (artisans) ಮತ್ತು ಕೂಲಿಕಾರರು ಶ್ರೇಣೀಕೃತ ಮತ್ತು ವರ್ಗೀಕೃತ ಸಮಾಜ ವ್ಯವಸ್ಥೆಯ ವಿರುದ್ಧ ಎದ್ದುನಿಂತ ಘಟನೆಯನ್ನು - ನಿರುದ್ವೇಗದಿಂದ ನಿಷ್ಪಾಕ್ಷಿಕವಾಗಿ ಇತಿಹಾಸಕಾರನಂತೆ ಚಿತ್ರಿಸಲು ನಿರಂಜನರಿಗೆ ಸಾಧ್ಯವಾಗಿದೆ.

ಒಸೈರಿಸ್ - ಐಸಿಸ್ ಈಜಿಪ್ತ್‌ನ ಪುರಾತನ ಪ್ರಸಿದ್ಧ ದಂತ ಕಥೆ. ಸೂರ್ಯದೇವನ ಪುತ್ರ ಒಸೈರಿಸ್ ಧರ್ಮಿಷ್ಠ. ಆತನ ತಮ್ಮ ಸೆತ್ ಮೋಸದಿಂದ ಒಸೈರಿಸ್‌ನನ್ನು ಕೊಂದು ಅವನನ್ನು ಹದಿನಾಲ್ಕು ಹೋಳುಗಳನ್ನಾಗಿ ಕತ್ತರಿಸಿ ಒಂದೊಂದು

ಹೋಳನ್ನೂ ಒಂದೊಂದು ಕಡೆ ಮುಚ್ಚಿಡುತ್ತಾನೆ. ಒಸ್ಯೆರಿಸ್‌ನ ಪತ್ನಿ ಶೋಕಾರ್ತೆಳಾಗಿ ಪ್ರಲಾಪಿಸುತ್ತಾ ತನ್ನ ಪತಿಯ ದೇಹದ ಚೂರುಗಳನ್ನು ಹುಡುಕುತ್ತಾ ಎಲ್ಲೆಲ್ಲೂ ತಿರುಗುತ್ತಾಳೆ. ಕೊನೆಗೆ ಅವಳಿಗೆ ತನ್ನ ಪತಿಯ ಹದಿಮೂರು ಚೂರುಗಳು ಸಿಕ್ಕಿದರೂ ಹದಿನಾಲ್ಕನೆಯದು ಸಿಕ್ಕುವುದೇ ಇಲ್ಲ. ಜನರ ನಂಬಿಕೆಯಂತೆ ಇಂದಿಗೂ ಅವಳು ಒಸ್ಯೆರಿಸ್‌ನ ಸಿಕ್ಕದ ಹೋಳಿಗಾಗಿ ಹುಡುಕುತ್ತಾ ಅಲೆಯುತ್ತಲೇ ಇದ್ದಾಳೆ. ಕಾಲಾನುಕ್ರಮದಲ್ಲಿ ಐಸಿಸ್‌ನ ಮಗ ಹೋರಸ್ ದೊಡ್ಡವನಾದಾಗ ತನ್ನ ತಂದೆಯನ್ನು ಕೊಂದ ಸೆತ್‌ನ ಜತೆಯಲ್ಲಿ ಹೋರಾಡಿ ಕೊನೆಯಲ್ಲಿ ಅವನನ್ನು ಕೊಂದು ದೇಶದಲ್ಲಿ ಶಾಂತಿ ನೆಲಸುವಂತೆ ಮಾಡುತ್ತಾನೆ.

ಐಸಿಸ್ - ಒಸ್ಯೆರಿಸ್‌ನ ಕಥೆಯನ್ನು, ಐಸಿಸ್‌ನ ಶೋಕವನ್ನು ಮತ್ತು ಅವಳ ಚಿರಂತನ ಶೋಧವನ್ನು - ಅನೇಕ ಕವಿ - ನಾಟಕಕಾರರು ರೂಪಕವಾಗಿ, ಸಂಕೇತವಾಗಿ, ರೋಚಕ ಕಥೆಯಾಗಿ ಉಪಯೋಗಿಸಿಕೊಂಡಿದ್ದಾರೆ. ತನ್ನ The Man Who Died ಕೃತಿಯಲ್ಲಿ ಡಿ.ಎಚ್. ಲಾರೆನ್ಸ್ ಐಸಿಸ್‌ನ ಶೋಧವನ್ನು ಸಫಲ ಸಂಪೂರ್ಣ ಪ್ರೇಮದ ಶೋಧಕ್ಕೆ ಸಂಕೇತವಾಗಿ ಉಪಯೋಗಿಸಿದ್ದಾನೆ. 'ಮೃತ್ಯುಂಜಯ'ದಲ್ಲಿ ಈ ಕಥೆ ಕೃತಿಯ ಉದ್ದಕ್ಕೂ ಹಾಸುಹೊಕ್ಕಾಗಿ ಬೆಳೆದು ಕೃತಿಗೊಂದು ಸಮಗ್ರತೆ ಮತ್ತು ಸೈದ್ಧಾಂತಿಕ ಪಾತಳಿಯನ್ನು ಕೊಡುವ ಸಫಲ ಪ್ರತೀಕವಾಗುತ್ತದೆ. ಈ ಕೃತಿಯಲ್ಲಿ ಐಸಿಸ್ ಶೋಷಿತರ ಸಂಕೇತ - ಆಕೆಯ ಹೋರಾಟ 'ಲೋಕದೆಲ್ಲಾ ಸಂತ್ರಸ್ತರ ಹೋರಾಟ'. ಅವಳ ಶೋಧ - ಎಂದೆಂದಿಗೂ ಮುಗಿಯದ ಶೋಧ - ವರ್ಗಹೀನ ತಾರತಮ್ಯರಹಿತ ಆದರ್ಶ ಸಮಾಜಕ್ಕಾಗಿ.

ಕೃತಿ ಆರಂಭವಾಗುವುದೂ ಐಸಿಸ್‌ನ ನೆನಪಿಗಾಗಿ ಪ್ರತಿವರ್ಷವೂ ಪುಣ್ಯಕ್ಷೇತ್ರವಾದ ಅಬ್ಟುವಿನಲ್ಲಿ ನಡೆಯುವ ದೊಡ್ಡ ಜಾತ್ರೆಯಿಂದಲೇ. ಈ ಜಾತ್ರೆಯ ಸಂದರ್ಭವನ್ನು ಅತಿ ಕುಶಲತೆಯಿಂದ ಲೇಖಕರು ಅಂದಿನ ವರ್ಗೀಕೃತ - ಶ್ರೇಣೀಕೃತ ಸಮಾಜವನ್ನು, ನಮ್ಮ ಮುಂದಿಡಲು ಉಪಯೋಗಿಸುತ್ತಾರೆ. ನಮಗರಿವಿಲ್ಲದಂತೆಯೇ ನಾವು ರೈತರಾದ ಮೆನೆಪ್‌ಟಾ ಮತ್ತಿತರ ಯಾತ್ರಿಕರು, ಕುಶಲಕರ್ಮಿಗಳಾದ ಅಂಬಿಗ ಬಟಾ ಮತ್ತವನ ಸಹಾಯಕರು ಇವರಿಂದ ಪ್ರಾರಂಭಿಸಿ, ಯಾತ್ರೆಯು ಮುಂದುವರಿದಂತೆಲ್ಲಾ ಸಮಾಜದ ಒಂದೊಂದೇ ವರ್ಗವನ್ನೂ ಮತ್ತವರ ಸಾಮಾಜಿಕ ಸ್ಥಾನಮಾನಗಳನ್ನೂ ಅರ್ಥಮಾಡಿಕೊಳ್ಳುತ್ತೇವೆ. ಸಮಾಜದ ಅತಿ ಕೆಳಗೆ ಭಿಕ್ಷುಕರು - ಅವರಿಗಿಂತ ತುಸು ಮೇಲೆ ದೈಹಿಕ ದುಡಿಮೆಯನ್ನೇ ಅವಲಂಬಿಸಿರುವ ರೈತರು - ಅವರ ಮೇಲೆ ನೇಯುವ, ನೂಲುವ, ಮರ - ಕಬ್ಬಿಣ ಕೆಲಸ ಮಾಡುವ ಕುಶಲಕರ್ಮಿಗಳು (artisans) - ಅವರ ನಂತರ ವರ್ತಕರು - ವರ್ತಕರಿಗಿಂತ ಕೊಂಚ ಮೇಲೆ

ಭೂಮಾಲಿಕರು, ಪ್ರಾಂತಪಾಲರು - ಈ ದೈತ್ಯಾಕೃತಿಯ ಪಿರಮಿಡ್‌ನ ತುದಿಯಲ್ಲಿ ಸರಿಸಮನಾಗಿ ಅಧಿಕಾರ ಹಂಚಿಕೊಂಡಿರುವ ಮತ್ತು ಆ ಕಾರಣದಿಂದಲೇ ಸದಾ ಪರಸ್ಪರ ಸಂದೇಹ - ದ್ವೇಷಗಳಿಂದ ತುಂಬಿರುವ ಚಕ್ರವರ್ತಿ ಪೆರೋ ಮತ್ತು ಧರ್ಮ ಗುರು ಹೇಪಾಟ್ . ಇಂತಹ ಸಮಾಜದ ಚಿತ್ರ ಅತ್ಯಂತ ಸಹಜವಾಗಿಯೇ ಯಾತ್ರೆಯ ಸಂದರ್ಭದಲ್ಲಿ ನಮ್ಮ ಕಣ್ಮುಂದೆ ನಿಲ್ಲುತ್ತದೆ. ಅಬ್ಬುವಿನ ದೋಣಿಕಟ್ಟೆಯಲ್ಲಿ ಪ್ರತಿಯೊಂದು ವರ್ಗಕ್ಕೂ ತನ್ನದೇ ಆದ ಸ್ಥಾನ ದೋಣಿ ನಿಲ್ಲಿಸಲು, ಆ ಸ್ಥಾನ ಪಲ್ಲಟವಾಗದಂತೆ ಶಿಸ್ತು ಕಾಯಲು ಸದಾ ಚಾಟಿ ಹಿಡಿದು ನಿಂತಿರುವ ಸೈನಿಕರು.

ಅಲ್ಲದೆ, ಸಮಾಜ ಚಿತ್ರಣಕ್ಕಿಂತ ಹೆಚ್ಚಾಗಿ ಈ ಸಂದರ್ಭವನ್ನು ನಿರಂಜನರು ಸಾಮಾಜಿಕ ಶೋಷಣೆಯ ವಿವಿಧ ಮುಖಗಳನ್ನು - ಎಲ್ಲೆಲ್ಲೊ ಅಡಗಿಸಿಟ್ಟ ಒಸೈರಿಸ್‌ನ ದೇಹದ ಹೋಳುಗಳನ್ನು ನಮಗೆ ಪರಿಚಯಿಸಲು ಉಪಯೋಗಿಸುತ್ತಾರೆ. ಕೆಳಗಿನ ವರ್ಗದವರ ಶೋಷಣೆ ಕೇವಲ ರಾಜಕೀಯ ಸತ್ತೆಯ ಮೂಲಕವೇ ಆಗುವುದಿಲ್ಲ, ಅದಕ್ಕಿಂತ ಮುಖ್ಯವಾಗಿ ಸತ್ತೆಯನ್ನು ಸದಾ ಭದ್ರವಾಗಿಡುವ ಧರ್ಮ - ಧಾರ್ಮಿಕ ನಂಬಿಕೆಗಳು ಮತ್ತು ಸೀಮಿತ ವಿದ್ಯಾಧಿಕಾರಗಳೂ ಇಲ್ಲಿ ಅತಿ ಮುಖ್ಯ ಪಾತ್ರವಹಿಸು ತ್ತವೆ. ಉತ್ಸವದ ಒಂದು ಹಂತದಲ್ಲಿ ಒಸೈರಿಸ್‌ನ ಗೋರಿಯ ಸುತ್ತಲೂ ರಾಜಭಟರು ವ್ಯೂಹ ರಚಿಸಿ ಜನಸಾಮಾನ್ಯರು ಹತ್ತಿರ ಬರದಂತೆ ತಡೆಯುತ್ತಾರೆ. ಒಬ್ಬ ಯಾತ್ರಿಕ ಹೇಳುವಂತೆ ಗೋರಿಯ ಹತ್ತಿರ ಹಾಗೂ ಅದರೊಳಗಡೆ ಏನು ನಡೆಯುತ್ತದೆಂದು ಬಹುತೇಕ ಜನರಿಗೆ ಏನೂ ಗೊತ್ತಾಗುವುದಿಲ್ಲ. ಅವರಿಗೆ ಪ್ರತ್ಯಕ್ಷ ಅನುಭವವಾಗು ವುದು ರಾಜಭಟರ ಚಾಟಿ ಏಟು ಮಾತ್ರ. ಮತ್ತು ಅವರಿಗೆ ಗೊತ್ತಿರುವುದು ಅಥವಾ ಅವರ ತಲೆಯಲ್ಲಿ ಸತ್ತೆ ತುಂಬಿರುವುದು - ಮೂಢನಂಬಿಕೆಗಳು ಮಾತ್ರ. (ಪರಲೋಕ ಯಾತ್ರೆಯಲ್ಲಿ ತುಂಬಿರುವ ಅಪಾಯಗಳು, ಆ ಭೀತಿಯಿಂದ ಮುಕ್ತ ರಾಗಲು ಈ ಲೋಕದಲ್ಲಿ ಮಾಡಬೇಕಾದ ಪೂಜೆ - ದಾನ - ಧರ್ಮಗಳು ಇತ್ಯಾದಿ.) ಅಂದರೆ ಎಲ್ಲಿಯ ತನಕ ಸಾಮಾನ್ಯ ಜನತೆಗೆ ಮತೀಯ - ಧಾರ್ಮಿಕ ಕ್ರಿಯೆ - ಆಚರಣೆ ಗಳು ಒಂದು ರಹಸ್ಯವಾಗಿರುತ್ತವೆಯೋ, ಅಲ್ಲಿಯ ತನಕ ಮಾತ್ರ ಮತ - ಧರ್ಮಗಳ ಹೆಸರಿನಲ್ಲಿ ಸುಲಿಗೆ - ಶೋಷಣೆ ಸಾಧ್ಯ.

ಅಲ್ಲದೆ, ಮತೀಯ ಧಾರ್ಮಿಕ ಶೋಷಣೆಗೆ ಜನರ ಅಜ್ಞಾನವೂ ಆವಶ್ಯಕ. ಯಾತ್ರೆಯಲ್ಲಿ ಒಬ್ಬ ಲಿಪಿಕಾರ ಹೇಳುವಂತೆ 'ಅಕ್ಷರ ಕಲಿತವ ಆಳಬಲ್ಲ', ಆದ್ದರಿಂದ ಆಳುವವರು ಇತರರನ್ನು ಅಕ್ಷರಜ್ಞಾನದಿಂದ ದೂರವಿಡುತ್ತಾರೆ. ಮೆನೆಪ್‌ಟಾ ಮತ್ತಿತರರು ಅಕ್ಷರಜ್ಞಾನವಿಲ್ಲದವರು. ಮುಂದೆ ಮೆನೆಪ್‌ಟಾ ಮತ್ತಿತರ ನೀರಾನೆ ಪ್ರಾಂತ್ಯದವರು ಮಹಾ ಅರ್ಚಕನ ಕೋಪಕ್ಕೆ ಗುರಿಯಾಗಲು ಒಂದು ಮುಖ್ಯ ಕಾರಣ ಮೆನೆಪ್‌ಟಾ ತನ್ನ ಮಗನಿಗೆ ಮತ್ತು ಇತರ ಮಕ್ಕಳಿಗೆ ವಿದ್ಯೆ ಕಲಿಸಲು

ಪ್ರಯತ್ನಿಸುವುದೇ. ದುಡಿಯುವವರೂ ಅಕ್ಷರಸ್ಥರಾದರೆ ದುಡಿಸಿಕೊಳ್ಳುವವರ ಸತ್ತೆ ಎಲ್ಲಿಯ ತನಕ ನಿಲ್ಲುತ್ತದೆ? ಇಲ್ಲಿ ೧೫ನೇ ಶತಮಾನದ ಯುರೋಪಿನಲ್ಲಿ ಬೈಬಲ್ ಅನ್ನು ಇಂಗ್ಲಿಷಿಗೆ ಹಾಗೂ ಇತರ ದೇಶ ಭಾಷೆಗಳಿಗೆ ಅನುವಾದ ಮಾಡಿದ ಅಪರಾಧ ಕ್ಕಾಗಿ ಜಾನ್ ವಿಕ್ಲಿಫ್, ಹೆಸ್ ಮುಂತಾದವರನ್ನು ರೋಮನ್ ಕ್ಯಾಥೋಲಿಕ್ ಚರ್ಚು ಸಜೀವ ದಹನ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು.

ವರ್ಗೀಕೃತ ಸಮಾಜದ ಒಂದು ಚಾರಿತ್ರಿಕ ಅನಿವಾರ್ಯತೆ ಎಂದರೆ ವರ್ಗ - ಪ್ರತಿಭಟನೆ ಹಾಗೂ ಸಂಘರ್ಷ. ಅಂತಹ ಸಮಾಜದಲ್ಲಿ ದುಡಿಯುವವರ ಪ್ರತಿಭಟನೆ ಎಲ್ಲಿ ಯಾವಾಗ ಬೇಕಾದರೂ ಪೂರ್ವಯೋಜನೆ ಇಲ್ಲದೆ ಹಾಗೂ ತನ್ನಿಂದ ತಾನೇ ಉದ್ಭವಿಸಬಹುದು. ಇದನ್ನೇ ಇತಿಹಾಸಕಾರರು 'Primary Resistance' ಎಂದು ಕರೆಯುವುದು. ನೀರಾನೆ ಪ್ರಾಂತ್ಯದಲ್ಲಿ ಆಗುವುದು ಹೀಗೆಯೇ. ಕರ ವಸೂಲಿಯ ಸಮಯದಲ್ಲಿ ತಮ್ಮೆಲ್ಲರ ಪರವಾಗಿ ಅಧಿಕಾರಿಯೊಡನೆ ಮಾತನಾಡಲು ಅನಕ್ಷರಸ್ಥ ಮೆನೆಪ್‌ಟಾನನ್ನು ಜನರು ಕೇಳಿಕೊಳ್ಳುತ್ತಾರೆ. ಈ ಆಕಸ್ಮಿಕ ಘಟನೆಯೇ ಬೆಳೆಯುತ್ತಾ ಹೋಗಿ ಅಧಿಕಾರಿಗಳ ವಿರುದ್ಧ ಸಶಸ್ತ್ರ ಸಂಘರ್ಷಕ್ಕೆ ಎಡೆಕೊಟ್ಟು ಜನತೆಗೆ ಗೆಲುವು ದೊರಕಿ ಮೆನೆಪ್‌ಟಾ ನೀರಾನೆ ಪ್ರಾಂತ್ಯದ ಜನನಾಯಕನಾಗುತ್ತಾನೆ. ಆ ಪ್ರದೇಶ ದಲ್ಲಿ ಸ್ವಲ್ಪಕಾಲ ಸಮಾನತೆಯ ತತ್ವಗಳ ಆಧಾರದ ಮೇಲೆ ನಡೆಯುವ ಸಮಾಜದ ಒಂದು ಆದರ್ಶ ಪ್ರಯೋಗವಾಗುತ್ತದೆ.

ಮೇಲ್ನೋಟಕ್ಕೆ 'ಮೃತ್ಯುಂಜಯ'ದ ಉತ್ತರಾರ್ಧ - ಅಂದರೆ ಮೆನೆಪ್‌ಟಾ ರಾಜಧಾನಿ ಮೆಂಫಿಸ್ ತಲಪಿದ ನಂತರದ ಭಾಗ - ಅನವಶ್ಯಕವಾಗಿ ದೀರ್ಘವಾಗಿರುವಂತೆ ಕಾಣುತ್ತದೆ. ಆದರೆ ಈ ಭಾಗ ಕೃತಿಯ ಸೈದ್ಧಾಂತಿಕ ದೃಷ್ಟಿಕೋನದಿಂದ ಅತಿ ಮುಖ್ಯ ಹಾಗೂ ಆವಶ್ಯಕ. ಏಕೆಂದರೆ ಕೃತಿಯ ಪೂರ್ವಾರ್ಧದಲ್ಲಿ ಬರುವ ನೀರಾನೆ ಪ್ರಾಂತ್ಯ ದಲ್ಲಿ ಸ್ಥಾಪಿಸಲ್ಪಡುವ ಪ್ರಾಯೋಗಿಕ ಸಮಾಜಕ್ಕೂ ಹೊರಗಡೆ ಇರುವ ವರ್ಗೀಕೃತ- ಸತ್ತಾತ್ಮಕ ಸಮಾಜಕ್ಕೂ ಇರುವ ಅಂತರವನ್ನು ಇಲ್ಲಿ ನಿರಂಜನರು ಅತ್ಯಂತ ಕುಶಲತೆ ಯಿಂದ ಚಿತ್ರಿಸುತ್ತಾರೆ. ಅಲ್ಲದೆ ಅಂತಹ ಆದರ್ಶ ಸಮಾಜ ಯಾವ ಸಾಮಾಜಿಕ ಕಾರಣಗಳಿಗಾಗಿ ಪ್ರಯೋಗವಾಗಿಯೇ ಉಳಿಯುತ್ತದೆ ಅನ್ನುವುದನ್ನೂ ಕೃತಿಯ ಉತ್ತರಾರ್ಧದಲ್ಲಿ ಸ್ಪಷ್ಟಪಡಿಸುತ್ತಾರೆ. ಕೃತಿಯ ಈ ಭಾಗದ ಮುಖ್ಯ ಪ್ರತೀಕವೆಂದರೆ 'ಚೌಕಮಣೆ'ಯ ಆಟ.

ರಾಜಧಾನಿಯಲ್ಲಿ ಅಧಿಕಾರ ಹಾಗೂ ಸಂಪತ್ತು, ಇವುಗಳಿಗಾಗಿ ನಡೆಯುವ 'ಚೌಕಮಣೆ'ಯ ಆಟದಲ್ಲಿ ಎದುರಾಳಿಗಳು ರಾಜಕೀಯಸತ್ತೆಯ ಪ್ರಭು ಪೆರೋ ಮತ್ತು ಧಾರ್ಮಿಕ ಸತ್ತೆಯ ಪ್ರಭು ಹೇಪಾಟ್, ಇವರಿಬ್ಬರಿಗೂ ತಮ್ಮದೇ ಆದ

ಗುಪ್ತಚಾರ ದಳಗಳಿವೆ ಮತ್ತು ಇಬ್ಬರೂ ಪರಸ್ಪರ ಸಂಶಯ - ಅಸೂಯೆಯಿಂದ ವರ್ತಿಸುತ್ತಾರೆ. ಆದರೆ ಹೊರಗಡೆ ತೋರಿಕೆಗೆ ಮಾತ್ರ ಇಬ್ಬರೂ ಒಟ್ಟಾಗಿದ್ದಾರೆ. ರಾಜ್ಯದ ಗಡಿಯ ಪ್ರಾಂತಪಾಲರು ಧಾರ್ಮಿಕ ಗುರುವಿನ ಕಡೆಗಾದರೆ, ರಾಜಧಾನಿಯ ಸುತ್ತುಮುತ್ತಿನ ಪ್ರಾಂತಪಾಲರು, ಮಂತ್ರಿಗಳು ಪೆರೋ ಕಡೆ. ಭೂಮಾಲೀಕರು ಈ ಸ್ಪರ್ಧೆಯಲ್ಲಿ ಗೆದ್ದವನ ಕಾಲು ಹಿಡಿಯಲು ಕಾಯುತ್ತಾ ಇರುವರು. ಅಧಿಕಾರ ಸಂಪತ್ತುಗಳಿಗಾಗಿ ನಡೆಯುವ ಸ್ಪರ್ಧೆ ಎಷ್ಟು ತೀವ್ರವಾಗಿದೆಯೆಂದರೆ ಮಹಾರಾಣಿಯೂ ಕೂಡಾ ಆಂತರಿಕವಾಗಿ ಧರ್ಮಗುರುವಿನ ಕಡೆ. ಏಕೆಂದರೆ ಧರ್ಮಗುರುವಿನ ಕಡೆಯಿಂದ ಪೆರೋವಿನ ಪತನವಾದರೆ ತನ್ನ ಚಿಕ್ಕಮಗನ ಹೆಸರಿನಲ್ಲಿ ತಾನೇ ರಾಜ್ಯವಾಳುವ ಆಸೆ ಆವಳಿಗೆ. ದುರ್ದೈವವಶಾತ್ ಮೆನೆಪ್‌ಟಾ ಅಸಹಾಯಕನಾಗಿ ಇವರ ಚೌಕಮಣೆಯ ಆಟದಲ್ಲಿ ಒಂದು ಕಾಯಿಯಾಗಿ ಸಿಕ್ಕು ಬೀಳುತ್ತಾನೆ.

ಮೆನೆಪ್‌ಟಾ ರಾಜಧಾನಿಗೆ ಬಂದ ಹೊಸದರಲ್ಲಿ ಮಂತ್ರಿಗಳ, ರಾಜರಾಣಿಯರ, ಸೈನಿಕರ ಮೆಚ್ಚುಗೆಗೆ ಪಾತ್ರನಾಗುತ್ತಾನೆಯಲ್ಲದೆ ರಾಜಾತಿಥ್ಯವನ್ನೂ ಪಡೆಯುತ್ತಾನೆ. ಮಹಾರಾಣಿ ನೆಫರ್‌ಟೀಮ್‌ಗಂತೂ ಮೆನೆಪ್‌ಟಾನೆಂದರೆ ಅಚ್ಚುಮೆಚ್ಚು. ಆದರೆ ಧಾರ್ಮಿಕ ಗುರು ಹೇಪಾಟ್, ಮೆನೆಪ್‌ಟಾನನ್ನು ಯಾವ ಕಾರಣಕ್ಕೂ ಕ್ಷಮಿಸಲಾರ. ಏಕೆಂದರೆ ಮೆನೆಪ್‌ಟಾ ಒಂದು, ದುಡಿಯುವವರ ಮಕ್ಕಳಿಗೆಲ್ಲಾ ವಿದ್ಯೆ ಕಲಿಸಲು ಪ್ರಾರಂಭಿಸಿದ್ದು. ಮತ್ತೊಂದು, ಕೇವಲ ಶ್ರೀಮಂತರಿಗೆ ಮೀಸಲಾಗಿದ್ದ ಕೆಲವು ಧಾರ್ಮಿಕ ಅಂತ್ಯಕ್ರಿಯೆಗಳನ್ನು ಶ್ರಮಜೀವಿಗಳಿಗೂ ಸಲ್ಲಿಸಿದ್ದು. (ಶ್ರಮಿಕ ಆನ್ನು ಸತ್ತಾಗ ಅವನ ದೇಹವನ್ನು ಶವಪೆಟ್ಟಿಗೆಯಲ್ಲಿಟ್ಟು 'ಬೆಳಕಿಗೆ ಆಗಮನ'ದ ಪಠಣವಾಗುವಂತೆ ಮೆನೆಪ್‌ಟಾ ಯೋಜಿಸುತ್ತಾನೆ.) ಇಷ್ಟೇ ಅಲ್ಲದೆ ನೀರಾನೆ ಪ್ರಾಂತ್ಯ ಶ್ರಮಿಕರ ಕೈಗೆ ಬಂದ ಕೂಡಲೇ ಅರಮನೆಯಲ್ಲಿ ಅಧಿಕಾರಿಗಳ ಸೇವೆಗಿದ್ದ ಅನೇಕ ಸುಂದರ ಸ್ತ್ರೀಯರಿಗೆ ದಾಸ್ಯಮುಕ್ತವಾಗಿ ಅವರು ಸ್ವತಂತ್ರ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ನೀರಾನೆ ಪ್ರಾಂತ್ಯದ ದೇವಸೇವಕ ಅಪಟ್ ಹೇಳುವಂತೆ "ಮೆನೆಪ್‌ಟಾ ದಾಸಿಯರನ್ನೆಲ್ಲಾ ವಿಮುಕ್ತಗೊಳಿಸಿದನಲ್ಲ. ಅದರ ಆಗತ್ಯವೇನಿತ್ತು? ಅವರನ್ನು ಮಂದಿರಕ್ಕೆ ಕೊಡಬಹುದಾಗಿತ್ತು. ಈ ಹೊಸ ವಾತಾವರಣದಲ್ಲಿ ಬಿಟ್ಟಿ ದುಡಿಮೆಗೆ ಜನ ಸಿಗುವುದುಂಟೇ ಇನ್ನು?" (ಪುಟ 120). ಅಂದರೆ ಧಾರ್ಮಿಕ ಗುರುವಿನ ನಿರಂಕುಶ ಸತ್ತೆಯ ಆಧಾರಸ್ತಂಭಗಳಾದ ಜನರ ಅನಕ್ಷರತೆ, ಅಂಧವಿಶ್ವಾಸ, ರಹಸ್ಯಾತಿರಹಸ್ಯವಾಗಿ ಇಟ್ಟಿರುವ ಧಾರ್ಮಿಕ ಆಚರಣೆಗಳು ಇವುಗಳನ್ನೇ ಕೆದಕಲು ಮೆನೆಪ್‌ಟಾ ಪ್ರಯತ್ನಿಸುತ್ತಾನೆ. ಇನ್ನು ಧಾರ್ಮಿಕ ಗುರು ಹೇಪಾಟ್ ಅವನನ್ನು ಕ್ಷಮಿಸುವುದು ಹೇಗೆ? ಸೆತ್ ಉತ್ಸವದಲ್ಲಿ ತಾನು ಭಾಗವಹಿಸುವುದಕ್ಕೆ ಹೇಪಾಟ್ ಹಾಕುವ ಮುಖ್ಯ ಶರತ್ತೆಂದರೆ ಮೆನೆಪ್‌ಟಾನ ತಲೆದಂಡ. ತಮ್ಮತಮ್ಮಲ್ಲಿ ಎಷ್ಟೇ ದ್ವೇಷ ಭಿನ್ನಾಭಿಪ್ರಾಯಗಳಿದ್ದರೂ ತಂತಮ್ಮ ಸತ್ತೆಯನ್ನುಳಿಸಿಕೊಳ್ಳಲು, ಕೂಡಲೇ ಪೆರೋ, ಮಹಾರಾಣಿ,

ಮಂತ್ರಿ, ಪ್ರಾಂತಪಾಲರು ಎಲ್ಲರೂ ಹೇಪಾಟ್‌ನ ಮಾತಿಗೆ ಒಪ್ಪಿ ಮೆನೆಪ್‌ಟಾನ ಬಲಿಗೊಡಲು ಸಿದ್ಧರಾಗುತ್ತಾರೆ. ಅಂದರೆ ಇಲ್ಲಿ ಲೇಖಕರು ಅತಿಸೂಕ್ಷ್ಮವಾಗಿ ತೋರಿಸಿರುವ ವಿಚಾರಗಳು ಎರಡು: 1) ಸತ್ತೆಯ ಮೂಲಕ ನಡೆಯುವ ಶೋಷಣೆಗಿಂತ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಹೆಚ್ಚು ಕರಾಳವಾದುದು ಮತ್ತು ತೊಡೆಯಲು ಕಠಿಣವಾದುದೆಂದು. 2) ಪರಸ್ಪರ ಭಿನ್ನಾಭಿಪ್ರಾಯಗಳೇನೇ ಇರಲಿ, ತಂತಮ್ಮ ಸತ್ತೆಗೆ ಅಪಾಯ ಬಂದರೆ ಎಲ್ಲರೂ ಒಂದಾಗುತ್ತಾರೆ. ತೋರಿಕೆಗೆ ನೂರಾರು ವರ್ಗಗಳಿದ್ದರೂ ಇಂತಹ ನಿರ್ಣಯಾತ್ಮಕ ಸಂದರ್ಭಗಳಲ್ಲಿ ಉಳಿಯುವುವು ಎರಡೇ ಎರಡು ವರ್ಗಗಳು: ಉಳ್ಳವರು ಮತ್ತು ಇಲ್ಲದವರು.

ಹೇಪಾಟ್ ಮತ್ತು ಪೆರೋ ಇವರುಗಳ ಚೌಕಮಣೆ ಆಟದಲ್ಲಿ ಅಸಹಾಯಕ ಮೆನೆಪ್‌ಟಾನ ಬಲಿಯಾಗಿ ನೀರಾನೆ ಪ್ರಾಂತ್ಯ ಮತ್ತೆ ಮೊದಲಿನ ವ್ಯವಸ್ಥೆಗೆ ಮರಳಿ, ಮೆನೆಪ್‌ಟಾನ ಆದರ್ಶ ಸಮಾಜದ ಪ್ರಯೋಗ ಕೇವಲ ಪ್ರಯೋಗವಾಗಿಯೇ ಉಳಿಯುತ್ತದೆ; ನಿಜ. ಅಲ್ಲದೆ ಐಸಿಸ್‌ನ ಶೋಧ ಒಸೈರಿಸ್‌ನ ದೇಹದ ಭಾಗಗಳಿಗಾಗಿ ಚಿರಂತನ ನಡೆಯುತ್ತಲೇ ಇರುತ್ತದೆ, ನಿಜ. ಆದರೆ ಇಷ್ಟಕ್ಕೇ ದುಡಿಯುವವರ ಪ್ರತಿಭಟನೆ ಎಲ್ಲಾ ಕಾಲಕ್ಕೂ ನಿರ್ನಾಮವಾಗುವುದಿಲ್ಲ. ಇಂದು ನೀರಾನೆ ಪ್ರಾಂತ್ಯದಲ್ಲಿ ಆದುದು ನಾಳೆ ಮೊಸಳೆ ಪ್ರಾಂತ್ಯದಲ್ಲಿ, ಜಿಂಕೆ ಪ್ರಾಂತ್ಯದಲ್ಲಾಗಬಹುದು.ಮೂರು ಸಾವಿರ ವರ್ಷಗಳ ಹಿಂದೆ ಈಜಿಪ್ಟಿನಲ್ಲಿ ನಡೆದ ಸಾಮಾಜಿಕ ಪ್ರಯೋಗ ಸಫಲವಾಗಿ ಇಂದು ಬೇರೊಂದು ದೇಶದಲ್ಲಿ ಆಗಬಹುದು - ಆಗಿರಬಹುದು. ತನ್ನ ಅಣಕು ವಿಚಾರಣೆಯ ಸಮಯದಲ್ಲಿ ಮೆನೆಪ್‌ಟಾ ಹೇಳುತ್ತಾನೆ:

"ಮಹಾ ಪ್ರಭುಗಳೇ, ಮಹಾ ಅರ್ಚಕರೇ, ಅಮಾತ್ಯರೇ, ಪ್ರತಿಷ್ಠಿತರೇ, ಕಿವಿಗೊಟ್ಟು ಕೇಳಿ: ನಮಗೆ - ಜನರಿಗೆ ಸಿಟ್ಟುಬಂದಾಗ ಅದು ಮಹಾಪೂರವಾಗುತ್ತದೆ. ಅದರಲ್ಲಿ ನೀವೆಲ್ಲಾ ಕೊಚ್ಚಿಹೋಗುತ್ತೀರಿ. ಮಹಾಪೂರ ಇಳಿದಾಗ ಕಂಡುಬರೋ ಜಗತ್ತು ಹೊಸದು - ಹೊಚ್ಚಹೊಸದು?" (ಪುಟ 549)

ಹೊಸ ಜಗತ್ತಿನ ಆಸೆಯನ್ನು ಹೊತ್ತು ಬಟಾ, ಸತ್ತ ನಾಯಕನ ಹೆಂಡತಿ-ಮಗು ರಾಮೆರಿಪ್‌ಟಾರನ್ನು ಕರೆದುಕೊಂಡು ನೆಲೆಯನ್ನರಸುತ್ತಾ ಹೋಗುವಲ್ಲಿಗೆ, ಒಸೈರಿಸ್‌ನನ್ನು ಕೊಂದ ಸೈತಾನ ಸೆತ್ ಅನ್ನು ಹೋರಸ್ ಸೋಲಿಸಿ ಜಯ ಪಡೆಯುವ ನೆನಪಿನೊಂದಿಗೆ ಕೃತಿಯು ಮುಕ್ತಾಯವಾಗುತ್ತದೆ. ಕೃತಿಯ ಕೊನೆಯ ವಾಕ್ಯ - ಬಟಾ ಹೇಳುವುದು - ಎಲ್ಲಾ ವರ್ಗೀಯ ಸಮಾಜಗಳ ದಲಿತರಿಗೆ, ಶೋಷಿತರಿಗೆ ಕೊಡುವ ಆಶ್ವಾಸನೆ: "ಕತ್ತಲಾದ ಮೇಲೆ ಬೆಳಕು ಹರೀತದೆ, ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ, ನೆನಪಿಡಿ."

ಇಲ್ಲಿಯವರೆಗೆ ನಾನು ಸ್ಪಷ್ಟಪಡಿಸಲು ಪ್ರಯತ್ನಿಸಿರುವುದು ಹೀಗೆ : 'ಮೃತ್ಯುಂಜಯ' ಕೃತಿ ಒಂದು ಭದ್ರ ಸೈದ್ಧಾಂತಿಕ ತಳಹದಿಯ ಮೇಲೆ ನಿಂತಿದೆ ಎಂಬುದು. ಇಲ್ಲಿ ಒಂದು ಎಚ್ಚರಿಕೆಯ ಮಾತು ಅವಶ್ಯ. ಸಾಧಾರಣವಾಗಿ ಒಂದು ಸಿದ್ಧಾಂತವನ್ನು ಪ್ರತಿಪಾದಿಸಲು ಹೊರಡುವ ಯಾವುದೇ ಸಾಹಿತ್ಯ ಕೃತಿಯೂ ಒಂದು ಶಾಸ್ತ್ರದ ಟಿಪ್ಪಣಿ ಮಾತ್ರ ಆಗಿ 'ಥೀಸಿಸ್ ನಾವೆಲ್' ಆಗಿ ಉಳಿದುಬಿಡುವ ಅಪಾಯವಿದೆ. ಆದರೆ 'ಮೃತ್ಯುಂಜಯ' ಈ ಅಪಾಯದಿಂದ ದೂರವಾಗಿ ಒಂದು ಸಮರ್ಥ ಸಜೀವ ಸಾಹಿತ್ಯ ಕೃತಿಯಾಗುವುದು ಮುಖ್ಯವಾಗಿ ಎರಡು ಕಾರಣಗಳಿಂದ : 1) ಕೃತಿಯಲ್ಲಿ ಅತ್ಯಂತ ಸಹಜವಾಗಿ ಸಾಚಾ ಆಗಿ ದಟ್ಟವಾಗಿ ಹೆಣೆದುಕೊಂಡಿರುವ ದೈನಂದಿನ ಜೀವನದ ವಿವರಗಳಿಂದ. ಈ ವಿವರಗಳು ಎಷ್ಟು ಸಹಜವಾಗಿ ಅಂದಿನ ಸಮಾಜದ ಚಿತ್ರವನ್ನು ಜೀವಂತವಾಗಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸಲು ಮತ್ತೊಂದು ಪ್ರಬಂಧವನ್ನೇ ಬರೆಯಬೇಕಾಗುತ್ತದೆ.* ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ ವಿವರಗಳ ಸಾಚಾತನದಲ್ಲಿ, ಸಾಂದ್ರತೆಯಲ್ಲಿ, 'ಮೃತ್ಯುಂಜಯ' ಕನ್ನಡದ ಇತರ ಮಹಾಕೃತಿಗಳಾದ 'ಮರಳಿ ಮಣ್ಣಿಗೆ', 'ಮಲೆಗಳಲ್ಲಿ ಮದುಮಗಳು', 'ವೈಶಾಖ' ಇವುಗಳಿಗೆ ಸರಿಸಾಟಿಯಾಗಿ ನಿಲ್ಲುತ್ತದೆ. 2) ಎರಡನೆಯದಾಗಿ 'ಮೃತ್ಯುಂಜಯ'ದ ಭಾಷೆ ಜೀವಂತ ಭಾಷೆ. 'ಕಲ್ಯಾಣ ಸ್ವಾಮಿ', 'ಅಪರಂಪಾರ' ಇವುಗಳಲ್ಲಿನ ಭಾವಾವೇಶಪೂರಿತ ನಾಟಕೀಯ ಭಾಷೆ ಇಲ್ಲಿಲ್ಲ. ಅದರ ಬದಲು ಕೃತಿ ಸೃಷ್ಟಿಸುವ ಸಮಾಜದ ಜನರು ತಮ್ಮ ದೈನಂದಿನ ವ್ಯವಹಾರದಲ್ಲಿ ಕನ್ನಡವನ್ನು ಬಳಸುತ್ತಿದ್ದರೆ ಯಾವ ಭಾಷಾ ಪ್ರಭೇದವನ್ನುಪಯೋಗಿಸುತ್ತಿದ್ದರೊ, ಅದರ ಉಪಯೋಗ ಕೃತಿಯಲ್ಲಿದೆ. ಅಲ್ಲದೆ ಒಂದು ಭಾಷಾ ಪ್ರಭೇದಕ್ಕೂ ಅದನ್ನು ಬಳಸುವ ಸಾಮಾಜಿಕ ವರ್ಗಕ್ಕೂ ಇರುವ ನಂಟನ್ನು ಲೇಖಕರು ಕೃತಿಯಲ್ಲಿ ಅನೇಕ ಸಲ ಸ್ಪಷ್ಟಗೊಳಿಸುತ್ತಾರೆ. ಉದಾಹರಣೆಗೆ ಧರ್ಮಾಧಿಕಾರಿ - ಮಹಾರಾಜ ಇವರುಗಳ ಆಹಾರ - ವೇಷಭೂಷಣದಂತೆಯೇ ಭಾಷೆಯೂ ದಲಿತರ ಭಾಷೆಗಿಂತ ಬೇರೆ. ರಾಜಧಾನಿಯಲ್ಲಿ ಮೆನೆಪ್‌ಟಾ ಅನೇಕ ಸಲ 'ಊಟ' ಎನ್ನಲು ಹೋಗಿ ತನ್ನನ್ನು ತಿದ್ದಿಕೊಂಡು ಎಚ್ಚರದಿಂದ 'ಭೋಜನ' ಶಬ್ದವನ್ನುಪಯೋಗಿಸುತ್ತಾನೆ. ವಿಶೇಷ ಶ್ರೀಮಂತ ಪಾನೀಯಗಳ ಮಧ್ಯೆ ತನ್ನ ಗ್ರಾಮದಲ್ಲಿ ಸಿಕ್ಕುತ್ತಿದ್ದ 'ಖಿಮವ'ವನ್ನು ನೆನಪಿಸಿಕೊಳ್ಳುತ್ತಾನೆ. ಅಂದರೆ, ಒಂದು ಖಚಿತ ದೃಷ್ಟಿಕೋನವುಳ್ಳ ಇತಿಹಾಸವಾಗಿಯೂ, ದೃಢ ಸೈದ್ಧಾಂತಿಕ ನೆಲೆಯಿಂದ ಮಾಡಿದ ಒಂದು ಸಮಾಜದ ವಿಶ್ಲೇಷಣೆಯೂ, ತನ್ನ ಕಲ್ಪನಾಶಕ್ತಿಯಿಂದ ಸಾವಿರಾರು ವರ್ಷಗಳ ಹಿಂದಿನ ಸಮಾಜವನ್ನು ಪುನರ್ನಿರ್ಮಿಸುವ ಸಾಹಿತ್ಯ ಕೃತಿಯೂ ಆಗಿ 'ಮೃತ್ಯುಂಜಯ' ಸಫಲವಾಗುತ್ತದೆ.

* ಪುತ್ತೂರಿನ ಸಂತ ಫಿಲೋಮಿನಾ ಕಾಲೇಜನ ಕನ್ನಡ ಸಂಘ ಏರ್ಪಡಿಸಿದ "ನಿರಂಜನ ಸಾಹಿತ್ಯ" ವಿಚಾರ ಸಂಕಿರಣದಲ್ಲಿ ೩೦–೧೧–೧೯೮೫ ರಂದು ಮಂಡಿಸಿದ ಪ್ರಬಂಧ.

ಟಿಪ್ಪಣಿಗಳು:

1. ಅಂದರೆ ಇಲ್ಲಿ ಒಂದು ಸ್ಪಷ್ಟೀಕರಣದ ಆವಶ್ಯಕತೆಯಿದೆ. ತ.ರಾ.ಸು. ಅವರ ಸಫಲ ಕೃತಿಗಳಲ್ಲಿ - ಅಂದರೆ 'ನೃಪತುಂಗ', 'ದುರ್ಗಾಸ್ತಮಾನ' ಇಂತಹ ಕೃತಿಗಳಲ್ಲಿ - ಮಹಾಪುರುಷರ ಪಾತ್ರಗಳಲ್ಲಿಯೂ ಮಾನವ ಸಹಜ ದ್ವಂದ್ವಗಳನ್ನು ಗುರುತಿಸುವುದರಲ್ಲಿ ತ.ರಾ.ಸು. ಸಫಲರಾಗುತ್ತಾರೆ. ಮುಖ್ಯತಃ 'ದುರ್ಗಾಸ್ತಮಾನ'ದಲ್ಲಿ ತನ್ನ ಸುತ್ತಲಿನ ಪರಿಸರದ ಮೇಲಿನ ಹಿಡಿತ ತಪ್ಪಿ ತನಗರಿವಿಲ್ಲದಂತೆಯೇ ಅಸಹಾಯಕನಾಗಿ ಸಾವಿನ ಕಡೆ - ಸೋಲಿನ ಕಡೆ ಜಾರುವ ದುರಂತ ನಾಯಕನ ಚಿತ್ರಣವಿದೆ. 'ಇತಿಹಾಸಕ್ಕೆ ತನ್ನದೇ ಆದ ಗತಿಯಿದೆ. ಅದನ್ನು ಅರಿಯಲು ಅಥವಾ ಅದರ ದಿಕ್ಕನ್ನು ಬದಲಾಯಿಸಲು ಅನೇಕ ವೇಳೆ ಇತಿಹಾಸದ ಸುಳಿಯಲ್ಲಿ ಸಿಕ್ಕವರಿಗೆ ಸಾಧ್ಯವಿಲ್ಲ' ಎಂಬ ಪರಿಕಲ್ಪನೆ 'ದುರ್ಗಾಸ್ತಮಾನ'ದಲ್ಲಿ ಸಫಲವಾಗಿ ಮೂಡಿಬಂದಿದೆ.

2. ಇತಿಹಾಸ ಶಾಸ್ತ್ರದ ಈ ವಿಧದ ಅನೇಕ ಪರಿಕಲ್ಪನೆಗಳಿಗೆ ಹಾಗೂ 'ಪ್ರಾಥಮಿಕ ಪ್ರತಿಭಟನೆ' (Primary Resistance) ಇದರ ಪರಿಚಯಕ್ಕೆ ನಾನು ಡಾ। ಸುರೇಂದ್ರ ರಾವ್ ಅವರಿಗೆ ಋಣಿಯಾಗಿದ್ದೇನೆ. ಈ ಪರಿಕಲ್ಪನೆಯನ್ನು ನಾವು Sir Charles Oman, H.A.L. Fisher ಇವರುಗಳಲ್ಲಿ ಕಾಣಬಹುದು.

3. 'Historical Determinism' - ಈ ಪರಿಕಲ್ಪನೆಯ ಪ್ರಕಾರ ಗತಕಾಲದಲ್ಲಿ ಆಗುವುದಕ್ಕೆಲ್ಲಾ ಕಾರಣಗಳಿವೆ. ಮತ್ತು ಆ ಕಾರಣಗಳು ಬೇರೆಯಾಗಿದ್ದರೆ ಪರಿಣಾಮಗಳೂ ಬೇರೆಯಾಗುತ್ತಿದ್ದುವು. ಇದೇ ದೃಷ್ಟಿಕೋನದಿಂದ ಆರ್ಥಿಕ ಕಾರ್ಯ - ಕಾರಣ ಸಂಬಂಧಕ್ಕೆ ಒತ್ತು ಕೊಡುತ್ತಾ ಇತಿಹಾಸವನ್ನು ವಿಶ್ಲೇಷಿಸಿದರೆ ಆ ವೈಚಾರಿಕ ಕ್ರಮವನ್ನು 'Marxism' ಅಥವಾ 'Dialectic Determinism' ಎಂದು ಕರೆಯಬಹುದು. 'ಮೃತ್ಯುಂಜಯ' ದಲ್ಲಿನ ನಿರಂಜನರ ವೈಚಾರಿಕ ಪಾತಳಿಯನ್ನು 'ಮಾರ್ಕ್ಸಿಸ್ಟ್' ಎಂದು ಸುಲಭವಾಗಿ ಗುರುತಿಸಬಹುದಾದರೂ ನಾನು ಉದ್ದೇಶಪೂರ್ವಕವಾಗಿ ಆ ಶಬ್ದವನ್ನು ಬಳಸಿಲ್ಲ.

4. ಐತಿಹಾಸಿಕ ಸತ್ಯದ ದೃಷ್ಟಿಯಿಂದ ಕಲ್ಯಾಣ ಸ್ವಾಮಿ ಅತ್ಯಂತ ವಿವಾದಾಸ್ಪದ ವ್ಯಕ್ತಿ ಮತ್ತು ಇಬ್ಬರು 'ಕಲ್ಯಾಣಸ್ವಾಮಿ' ಎಂಬ ಹೆಸರಿನಿಂದ ಇದ್ದರೆಂದೂ, ಚಿಕವೀರ ರಾಜೇಂದ್ರನ ಆಪ್ತ ಸರದಾರ ಕಲ್ಯಾಣ ಸ್ವಾಮಿ ಮತ್ತು ದಂಡುಕಟ್ಟಿ ಮಂಗಳೂರನ್ನು ಕೆಲವು ಕಾಲ ವಶಪಡಿಸಿಕೊಂಡಿದ್ದ ಕಲ್ಯಾಣ ಸ್ವಾಮಿ - ಇವರುಗಳು ಬೇರೆ ಬೇರೆ ಎನ್ನುವ ಒಂದು ಮತವಿದೆ. ಇದರ ಕಡೆಗೆ ನನ್ನ ಗಮನವನ್ನು ಸೆಳೆದವರು ಡಾ। ಸುರೇಂದ್ರ ರಾವ್.

5. ಈ ದೃಷ್ಟಿಯಿಂದ ವಿವರಗಳಲ್ಲಿ, ವಿವರಗಳನ್ನು ಒಂದುಗೂಡಿಸುವ ವೈಚಾರಿಕ ನೆಲೆಯಲ್ಲಿ 'ಮೃತ್ಯುಂಜಯ' ಮತ್ತು 'ವೈಶಾಖ' ಈ ಕೃತಿಗಳಲ್ಲಿ ಅನೇಕ ಸಾಮ್ಯತೆಗಳನ್ನು ನಾವು ಕಾಣಬಹುದು.

6. ಈ ಹೇಳಿಕೆಗೆ ಅಪವಾದವೆಂದರೆ - ಮೆನೆಪ್‌ಟಾ ಸತ್ತ ನಂತರ ಬರುವ ಕೃತಿಯ ಭಾಗ, 130 ಪುಟಗಳಷ್ಟಿರುವ ಈ ಭಾಗದಲ್ಲಿ ಮೆನೆಪ್‌ಟಾನ ದೇಹಕ್ಕೆ ಮಾಡುವ ಸಂಸ್ಕಾರ, ಅವನ ಬಗ್ಗೆ ಶೋಕ ಇತ್ಯಾದಿ ವಿವರಗಳು ಅನವಶ್ಯಕವೆಂದು ಹಾಗೂ ಕೃತಿ ಮೆನೆಪ್‌ಟಾನ ಮರಣದೊಂದಿಗೇ ಮುಕ್ತಾಯವಾಗಿದ್ದರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿರುತ್ತಿತ್ತೆಂದೂ ನನ್ನ ಅಭಿಪ್ರಾಯ.

ನಿರಂಜನರ ಕೆಲವು ಪ್ರಾರಂಭಿಕ ರಚನೆಗಳು - ತುಳುವಿನಲ್ಲಿ

-ಅಮೃತ ಸೋಮೇಶ್ವರ

ನಿರಂಜನರು ತುಳುವರೆಂದೂ, ಈಗಲೂ ತುಳುವಿನ ತುಂಬು ಅಭಿಮಾನಿ ಎಂದೂ, ಮೊದಮೊದಲು ಕೆಲವೊಂದು ಬರೆಹಗಳನ್ನು ಅವರು ತುಳುವಿನಲ್ಲಿ ಬರೆಯಲು ಉತ್ಸಾಹ ತಾಳಿದ್ದರೆಂಬುದೂ ಅನೇಕರಿಗೆ ಪ್ರಾಯಶಃ ತಿಳಿಯದು. ತುಳುವಿನ ಪುನರುಜ್ಜೀವನ ಪ್ರಯತ್ನದ ಆದೊಂದು ಕಾಲಘಟ್ಟದಲ್ಲಿ ತಾನೂ ಸ್ಫೂರ್ತಿಗೊಂಡು ಬರೆಯಲು ಇವರು ಉಪಕ್ರಮಿಸಿದರೂ ಅದೇಕೋ ಆ ಹವ್ಯಾಸವನ್ನು ಮುಂದುವರಿಸ ದಾದರು. ವಿಶಾಲ ಕರ್ನಾಟಕದಲ್ಲಿ ಕ್ರಮೇಣ ವ್ಯಾಪಿಸಿಕೊಂಡ ಅವರ ಚಟುವಟಿಕೆಗಳ ಪರಿಧಿಯೇ ಅದಕ್ಕೆ ಕಾರಣವಾಗಿರಬಹುದು.

ತಮ್ಮ ಪ್ರಾರಂಭಿಕ ತುಳು ಬರೆಹಗಳ ಕುರಿತಾಗಿ ನಿರಂಜನರು ತಮ್ಮ 'ಬುದ್ಧಿ ಭಾವ ಬದುಕು' ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ. "1937ರಲ್ಲಿ ನನ್ನ ಹದಿಮೂರನೆಯ ವರ್ಷದಲ್ಲಿ, ಪೂರ್ವಾರ್ಧದಲ್ಲಿ ಇದ್ದಕ್ಕಿದ್ದಂತೆ ತುಳು ಭಾಷಾ ಲೇಖಕ ನಾದೆ. ಉತ್ತರಾರ್ಧದಲ್ಲಿ ಅಷ್ಟೇ ಅನಿರೀಕ್ಷಿತವಾಗಿ ಕನ್ನಡ ಕತೆಗಾರನಾದೆ. ಸುಳ್ಯದ ಹಾಯರ್ ಎಲಿಮೆಂಟರಿ ಶಾಲೆಗೆ ಬಂದಾಗ ನನ್ನ ಹುಡುಗಾಟದ ಹುಡುಕಾಟದ ಬಯಲು ವಿಸ್ತಾರವಾಯಿತು. ಆಗ ನಾನು ಪಡೆದದ್ದರಲ್ಲಿ ವೈವಿಧ್ಯವಿತ್ತು. ನೋವು, ಅವಮಾನ, ಹೆಗ್ಗಳಿಕೆ, ಅನುಕಂಪ, ವಾತ್ಸಲ್ಯ, ಸ್ನೇಹ.... ಸಿಕ್ಕಿದ್ದನ್ನೆಲ್ಲ ಓದಿದೆ.... ಆಗ ಕಣ್ಣಿಗೆ ಬಿತ್ತು ಪಣಿಯಾಡಿಯವರ 'ತುಳುನಾಡ್' ಪತ್ರಿಕೆ. ಸುತ್ತಮುತ್ತ ಜನ ಆಡುವ ತುಳುಭಾಷೆ. ಅದರಲ್ಲಿ ಪ್ರಕಟವಾಗುತ್ತಿದ್ದವು, ಎಂ. ವಿ. ಹೆಗ್ಡೆಯವರ ಗೀತೆಗಳು. ಓದಿ ಪುಲಕಗೊಳ್ಳುತ್ತಿದ್ದೆ. ಮನೆಯಲ್ಲಿ ತಾಯಿ ನನ್ನೊಡನೆ ಆಡುತ್ತಿದ್ದದ್ದು ಅವಳ ವಿಶಿಷ್ಟ ತುಳು ಭಾಷೆ. ಆದರೆ ಹೊರಗೆ ಸರ್ವಮಾನ್ಯ ತುಳು ಮೆರೆಯುತ್ತಿತ್ತು. ಎಲ್ಲ ಧರ್ಮಗಳ ಎಲ್ಲ ಪಂಗಡಗಳ ಜನರೂ ಪರಸ್ಪರರೊಡನೆ ವ್ಯವಹಾರಕ್ಕಾಗಿ ಬಳಸುತ್ತಿದ್ದ ಭಾಷೆ. ಆ ಸರ್ವಮಾನ್ಯ ತುಳು ಭಾಷೆಯಲ್ಲಿ ನಾನು ಕವಿತೆಗಳನ್ನೂ ಕತೆಗಳನ್ನೂ ಬರೆದೆ. ಅವೆಲ್ಲ ಅಚ್ಚಾದುವು." (ಪುಟ 246-247).

ನಿರಂಜನರ ತುಳು ಬರೆಹಗಳು ಅಲಭ್ಯವಾಗಿದ್ದು, ಈ ಕುರಿತು ಅವರಲ್ಲಿ ವಿಚಾರಿಸಿದಾಗ ಈ ಕೆಳಗಿನಂತೆ ಬರೆದರು: "ನನ್ನ ಹತ್ತಾರು ಪುಟ್ಟ ತುಳು ಬರೆಹಗಳು 1937ರ ಪೂರ್ವಾರ್ಧದಲ್ಲಿ 'ತುಳುನಾಡ್' ಮಾಸಿಕದಲ್ಲಿ ಅಚ್ಚಾದವು. ಮಮ್ಮದೆ ಬ್ಯಾರಿ (ಈಗ ಮಹಮ್ಮದ್ ಹಾಜಿ, ಸುಳ್ಯ) ಅಂಚೆ ವೆಚ್ಚಕ್ಕೆ ದುಡ್ಡುಕೊಡುತ್ತಿದ್ದರು. ನನ್ನ ಸಹಪಾಠಿ ಮತ್ತು ಗೆಳೆಯ. ಅವರ ಹೆಸರಲ್ಲೂ ಒಂದೊಂದು ಕವಿತೆ ಬರೆದು

ಕೊಡುತ್ತಿದ್ದೆ. 'ಕಿಶೋರ', 'ಕು. ಶಿ. ರಾಯ', 'ಮಮ್ಮದೆ ಬ್ಯಾರಿ' ಎಂಬೆಲ್ಲ ಹೆಸರು ಗಳನ್ನು ಬಳಸಿದೆ....1937ರ ಉತ್ತರಾರ್ಧದಲ್ಲಿ ಕನ್ನಡದಲ್ಲಿ 'ಕಿಶೋರ' ಬರೆಯುವುದು ಶುರು. ಕತೆಗಳು ವಸ್ತುದೃಷ್ಟಿಯಿಂದ ತುಳು ಬರವಣಿಗೆಯ ಮುಂದುವರಿಕೆ. ಒಂದು ತುಳು ಕತೆಯ ಶೀರ್ಷಿಕೆ 'ಸಮಾಜೊಗಾಹುತಿ' ಮುಂದೆ ಕನ್ನಡದಲ್ಲೂ ಅಂಥದನ್ನು ಬರೆದೆ ಅನ್ನಿ." (ಶ್ರೀಯುತರ ತಾ. 25-2-1986ರ ಪತ್ರ.)

ನಿರಂಜನರೆಂದ 'ತುಳುನಾಡ್' ಸಂಚಿಕೆಗಳು ಕಾಣಸಿಗಲಿಲ್ಲ. ಆದರೆ ಹೊನ್ನಯ್ಯ ಶೆಟ್ಟರ ಸಂಪಾದಕತ್ವದ 'ನವಯುಗ'ದ ಕೆಲವು ಹಳೆಯ ಸಂಚಿಕೆಗಳ ತುಳು ವಿಭಾಗಗಳಲ್ಲಿ ನಿರಂಜನರದೆಂದು ಖಚಿತಗೊಳಿಸಲಾದ ಕೆಲವು ಬರೆಹಗಳು ದೊರಕಿದುವು.[1] ಅವುಗಳ ಒಂದು ಕಿರುಪರಿಚಯ ಈ ಲೇಖನ.

ರಾಮೆ (ಕತೆ) : 'ನವಯುಗ' ಸಂಪುಟ ೧. ಸಂಚಿಕೆ ೮. ಎಪ್ರಿಲ್ ೨೨ ೧೯೩೭. ಇದು, 'ಸುಳ್ಯೊತ ಮಮ್ಮದೆ' ಬಾಲವೃಂದ, ಸುಳ್ಯ ಎಂಬ ಹೆಸರಲ್ಲಿ ಅಚ್ಚಾಗಿದೆ.

ಮಲತಾಯಿಯ ಕಾಟದಿಂದ ತಪ್ಪಿಸಿಕೊಂಡ ಹುಡುಗನೊಬ್ಬ ಮೈಸೂರಿಗೆ ಓಡಿ ಹೋಗಿ ಹೆಸರು ಬದಲಿಸಿ ಮತ್ತೊಬ್ಬರ ಮನೆಯಲ್ಲಿ ಬಳೆದು ಆ ಮನೆಯ ಹುಡುಗಿಯನ್ನು ಮದುವೆಯಾಗಿ ಕೊನೆಗೆ ತಂದೆ ಹಾಗೂ ಮಲತಾಯಿಯ ಮನಸ್ಸನ್ನು ಗೆಲ್ಲುವುದು ಕಥೆಯ ವಸ್ತು. ಅಂತರ್ಜಾತೀಯ ವಿವಾಹ ಯಶಸ್ವಿಯಾಗಿ ಜರಗುವುದು ಈ ಕಥೆಯ ವೈಶಿಷ್ಟ್ಯ. ಕಥಾನಾಯಕನಿಗೆ ಪ್ರಾರಂಭಿಕ ಕಷ್ಟ ಕೆಲವನ್ನು ಬಿಟ್ಟರೆ ಉಳಿದುದೆಲ್ಲವೂ ಸರಾಗ, ಸುಖಾಂತ! ನಿರ್ದಿಷ್ಟ ಸಂಕೀರ್ಣ ಸಮಸ್ಯೆಗಳಾವುವೂ ಇದಿರಾಗದೆ ನಾಯಕ ನೇರವಾಗಿ ಗುರಿಮುಟ್ಟುತ್ತಾನೆ. ಜಾತಿ ಭೇದದ ಕುರಿತಾದ ಒಂದೆರಡು ಆಕ್ರೋಶಯುಕ್ತ ಉಕ್ತಿಗಳು ಗಮನ ಸೆಳೆಯುತ್ತವೆ. 'ಜಾತಿಗ್ ಸೂ ಬೂರ್‌ಂಡ್! ಈತಾನೆಟ ಎನನ್ ಸಾಂಕ್‌ತ್‌ಜೆರಾ? (ಜಾತಿಗೆ ಬೆಂಕಿ ಬಿತ್ತು! ಈ ವರೆಗೆ ನನ್ನನ್ನು ಸಾಕಿಲ್ಲವೆ?) ಎಂಬ ಮಾತು, ಹನ್ನೆರಡು ಹದಿಮೂರರ ಹರೆಯದ ಬಾಲ ಕತೆಗಾರನ ಮನಸ್ಸು ಹೇಗೆ ರೂಪುಗೊಳ್ಳುತ್ತಿತ್ತು ಎಂಬುದನ್ನು ಸೂಚಿಸುತ್ತದೆ.

ತಪ್ಪು ಏರೆನ? (ತಪ್ಪು ಯಾರದು?) : ಶಿವಣ್ಣೆ, ಸುಳ್ಯೊದಾರ್,ಬಾಲವೃಂದ ಎಂಬ ಹೆಸರಲ್ಲಿ ಅದೇ ಸಂಚಿಕೆಯಲ್ಲಿ ಪ್ರಕಟವಾದ ಕಥೆಯಿದು. ಮೊದಲ ಕಥೆಗಿಂತ ದೀರ್ಘವೂ ಸ್ವಲ್ಪ ಸಂಕೀರ್ಣವೂ ಆಗಿದೆ. ಒಂದು ವಿಷಮ ದಾಂಪತ್ಯದ ಕಾರಣ, ಪರಿಣಾಮಗಳನ್ನು ಚಿತ್ರಿಸುವ ಪ್ರಯತ್ನ ಇಲ್ಲಿ ನಡೆದಿದೆ.

ಸೋಮಣ್ಣ ಮೂಸೂರಿನ ತಕ್ಕಮಟ್ಟಿನ ಸ್ಥಿತಿವಂತ ವಿಧುರ. ಅವನ ಒಬ್ಬನೇ ಹುಡುಗ ಲಿಂಗಣ್ಣ. ಅದೇ ಊರಿನ ವೆಂಕಮ್ಮನ ಮಗಳು ಗಂಗಮ್ಮ ಇವನ ಬಾಲ್ಯದ ಸಹಪಾಠಿ. ಆದರೆ ಲಿಂಗಣ್ಣನ ವಿದ್ಯಾಭ್ಯಾಸ ನಾಲ್ಕನೇ ತರಗತಿಗೆ ನಿಲ್ಲುತ್ತದೆ. ಗಂಗಮ್ಮ ಮುಂದಕ್ಕೆ ಓದುತ್ತಾಳೆ. ಓದುತ್ತಿದ್ದಂತೆ ಆಧುನಿಕ ಫ್ಯಾಶನ್ ಗಳಿಗೆ ಮಾರುಹೋದ ವಯ್ಯಾರಿಯಾಗುತ್ತಾಳೆ.

ಸೋಮಣ್ಣನಿಗೆ ಗಂಗಮ್ಮನನ್ನು ಲಿಂಗಣ್ಣನಿಗೆ ತಂದುಕೊಳ್ಳುವ ಆಲೋಚನೆ. ಆದರೆ ವೆಂಕಮ್ಮನಿಗೆ ದೊಡ್ಡ ಪೇಟೆಯೂರಿನ ಷೋಕಿವಾಲಾನಿಗೆ ಅವಳನ್ನು ಕೊಡುವ ಮನಸ್ಸು. ಮಗಳ ಬಯಕೆಯೂ ಹಾಗೆಯೇ. ಲಿಂಗಣ್ಣನಿಗೆ ಗಂಗಮ್ಮನ ಮೇಲೆ ಕಣ್ಣು. ಅಂತೂ ಒತ್ತಾಯದ ಮಾಘಸ್ನಾನವಾಗಿ ಇವರಿಬ್ಬರಿಗೆ ಮದುವೆಯಾಗುತ್ತದೆ. ಅದರ ಬೆನ್ನಿಗೇ ಸೋಮಣ್ಣನಿಗೆ ವಿಷಮುಟ್ಟಿ ಸಾವು!

ಹೊಸ ಸಂಸಾರ ಬೇಗನೇ ವಿಷಮುಕ್ಕಿಟ್ಟುಕೊಳ್ಳುತ್ತದೆ. ಗಂಗಮ್ಮ ಗಂಡನನ್ನು ತಿರಸ್ಕಾರ ದೃಷ್ಟಿಯಿಂದ ಕಾಣುತ್ತಾಳೆ. ಲಿಂಗಣ್ಣ ಕೆಟ್ಟ ಸಹವಾಸಕ್ಕೆ ಬಿದ್ದು ಜುಗಾರಾಡಿ ಹಣಕಳಕೊಳ್ಳುತ್ತಾನೆ. ವೆಂಕಮ್ಮನಿಗೆ ಸೋಮಣ್ಣನ ಪ್ರೇತಬಾಧೆ ತೊಡಗುತ್ತದೆ. ಗಂಗಮ್ಮ ವ್ಯಗ್ರವಾಗುತ್ತಾಳೆ. ಒಮ್ಮೆ ಲಿಂಗಣ್ಣ ಪಶ್ಚಾತ್ತಾಪ ಪಟ್ಟು ಆವಳ ಕಾಲಿಗೆರಗುತ್ತಾನೆ. ಮತ್ತೆ ದುಡ್ಡು ಇಸಕೊಂಡು ಪುನಃ ಜುಗಾರಾಡಿ ಕಳಕೊಳ್ಳುತ್ತಾನೆ. ಮತ್ತೊಮ್ಮೆ ಜುಗಾರಿಯ ಠಾಣಕ್ಕೆ ಧಾವಿಸಲೆಂದಿರುವಾಗ ಹೆಂಡತಿ ತಡೆಯುತ್ತಾಳೆ. ಅವಳ ಮುಸುಡಿಗೆ ಗುದ್ದಿ ಲಿಂಗಣ್ಣ ಓಡುತ್ತಾನೆ. ಜುಗಾರಾಟದೊಂದಿಗೆ ವೇಶ್ಯಾಸಹವಾಸವೂ ಉಂಟಾಗುತ್ತದೆ. ಜಾರುವ ದಾರಿಯಲ್ಲಿ ರಭಸದಿಂದ ಸಾಗುತ್ತಾನೆ. ಮನೆಯ ನೆನಪು ಮಾಯವಾಗುತ್ತದೆ. ಗಂಗಮ್ಮನ ಜೀವನ ನಿಸ್ಸಾರವಾಗುತ್ತದೆ.

ಆ ಊರಿನ ರಿಜಿಸ್ಟ್ರಿ ಆಫೀಸಿನ ಗುಮಾಸ್ತೆ ಊರಿಗೆ ಹೊಸಬ. ಆತ ಗಂಗಮ್ಮನ ಮನೆಯ ಉಪ್ಪರಿಗೆಯಲ್ಲಿ ಒಂದು ಕೊಠಡಿ ಬಾಡಿಗೆಗೆ ಹಿಡಿಯುತ್ತಾನೆ. ಕಾಲಕ್ರಮೇಣ ಇವರಿಬ್ಬರಲ್ಲಿ ಪರಸ್ಪರ ವಿಶ್ವಾಸವುಂಟಾಗುತ್ತದೆ. ಕಥೆ ಇಲ್ಲಿಗೇ ಕೊನೆಗೊಂಡಿದೆ. ಒಂದು ರೀತಿಯಲ್ಲಿ ಅರ್ಧದಲ್ಲೆ ನಿಂತಂತಾಗಿದೆ. ಬೆಳವಣಿಗೆಗೆ ಅವಕಾಶವಿದ್ದರೂ ಅದೇಕೋ ಕತೆಗಾರರು ಅಲ್ಲಿಗೇ ಮೊಟಕುಗೊಳಿಸಿದ್ದಾರೆ.

ಈ ಕಥೆಯ ನಿರೂಪಣೆ ಮೊದಲ ಕಥೆಗಿಂತ ಚೆಲುವಾಗಿದೆಯೆನ್ನಬೇಕು. ಹಾಸ್ಯಮಿಶ್ರಿತವಾದ ಶೈಲಿ ಕಥೆಗೆ ಮೆರುಗನ್ನಿತ್ತಿದೆ.ಒಂದೆರಡು ಉದಾಹರಣೆಗಳು:

"ಗಂಗಮ್ಮನ ಮನಸ್ಸ್‌ಡ್ಲಾ ಸೆಂಟ್ ದೀದ್ ಮೂಕುಗು ಕನ್ನಡಿ ಏರ್ಸಾದ್ (ಕುದ್ರೆಗ್ ಜೀನ್ ಪಾಡಿಲೆಕ್ಕೊ) ಕೈಕ್ ರಿಸ್ಟ್‌ವಾಚಿ ಕಟ್ಟ್‌ದ್ ಚಲ್ಲಣ ಪಾಡ್ದ್ ಬೂಟೀಸ್ ಮೆಟ್ಟ್‌ಣ ಷೋಕಿವಾಲನೇ ಆವೊಡುಂದಿತ್ತ್‌ಂಡ್." [ಗಂಗಮ್ಮನ ಮನಸ್ಸಿನಲ್ಲಿಯೂ, ಸೆಂಟು ಹಾಕಿ, ಮೂಗಿಗೆ ಕನ್ನಡಿ ಏರಿಸಿ (ಕುದುರೆಗೆ ಜೀನ್ ಹಾಕಿ ದಂತೆ) ಕೈಗೆ ಕೈಗಡಿಯಾರ ಕಟ್ಟಿ, ಚಲ್ಲಣ ಹಾಕಿ ಬೂಟ್ಸ್ ಮೆಟ್ಟುವ ಷೋಕಿವಾಲನೇ ಆಗಬೇಕೆಂದಿತ್ತು.]

"ಬಯ್ಯಗ್ ಗಂಗಮ್ಮ ಸಾಲೆಡ್ದ್ ಬರ್ಪುನೆನ್ ಲಿಂಗಣ್ಣೆ ಕಾತೊಂದಿತ್ತೆ. ಬನ್ನಗ ಆಳೆಗೆದ್ರು ಪೋದು ಗುಡ್‌ಮೋಣಿ ಡೀಯರ್‌ಂದ್‌ತ್ ರಡ್ಡ್ ಪೊಟ್ಟಿಂಗ್ಲಿಸ್ ಪಂಡ್ರಿಯೆ. ಆಳೆಗ್ ಓಲಿಜ್ಜಾಂದಿನ ಕೋಪೊ ಬತ್ತ್‌ಂಡ್. ದೆತ್ತಿ ಬಾಯಿಗ್ 'ಯು ರೆಚ್ಚೆಡ್ ಫೂಲ್'ಂದ್‌ತ್ ನೆರ್‍ಯಳ್. ಪೆಲಕಾಯಿದ ರೆಚ್ಚೆಡ್ ಈ ಬೂರ್‌ಂದ್ ಪಂಡೊಂದು ಆಳೆ ಕೈ ಪತ್ಯೆ. ಆಳ್ ಪಿಸ್ರ್‌ಡ್ ಲಿಂಗಣ್ಣನ ಕೆನ್ನೆಗ್‌ರಡ್ಡ್ ಏರ್ಸಾಯಾಳ್." (ಬೈಗಿಗೆ ಗಂಗಮ್ಮ ಶಾಲೆಯಿಂದ ಬರುವುದನ್ನು ಲಿಂಗಣ್ಣ ಕಾಯುತ್ತಿದ್ದ. ಬರುವಾಗ ಅವಳ ಎದುರು ಹೋಗಿ ಗುಡ್‌ಮೋಣಿ ಡಿಯರ್ ಎಂದು ಎರಡು ಹೊಟ್ಟು ಇಂಗ್ಲಿಷ್ ಹೇಳಿಬಿಟ್ಟ. ಅವಳಿಗೆ ಎಲ್ಲಿಲ್ಲದ ಕೋಪ ಬಂದಿತು. ತೆರೆದ ಬಾಯಿಗೆ 'ಯು ರೆಚ್ಚೆಡ್ ಫೂಲ್' ಎಂದು ಬಯ್ದಳು. ಹಲಸಿನ ಕಾಯಿಯ 'ರಚ್ಚೆ'ಯಲ್ಲಿ ನೀನು ಬೀಳೆಂದು ಅವಳ ಕೈ ಹಿಡಿದ. ಅವಳು ಕೋಪದಲ್ಲಿ ಲಿಂಗಣ್ಣನ ಕೆನ್ನೆಗೆ ಎರಡು ಏರಿಸಿದಳು.)

ಕಥೆ ನೀತಿಯನ್ನೂ ಸಾರುವ ಉದ್ದೇಶವುಳ್ಳದ್ದಾಗಿದೆ. ಹಾಗಾಗಿ ನಡುವೆ ಉಪದೇಶವೂ ತಲೆದೋರಿದೆ. ಉದಾ: "ಯೌವನೊಗು ಕಾರ್‌ದೀತಿ ವೀರರೆಗ್ ಉಪದೇಶ: ಜುಗಾರಿ, ಅಮಲ್ ದೆಪ್ಪುನವು, ವ್ಯಭಿಚಾರೊ ಮಾತಲಾ ಒಂಜಪ್ಪೆ ಬಾಲೆಳು. ಜಾಗ್ರತೆ, ನೆನ್ನ ವಿಷಯೊ ಜಾಗ್ರತೆ!" (ಯೌವನಕ್ಕೆ ಕಾಲಿಟ್ಟ ವೀರರಿಗೆ ಉಪದೇಶ: ಜುಗಾರಿ, ಅಮಲು ತಕ್ಕೊಳ್ಳುವುದು, ವ್ಯಭಿಚಾರ ಎಲ್ಲವೂ ಒಂದೇ ತಾಯಿಯ ಮಕ್ಕಳು. ಜಾಗ್ರತೆ, ಇದರ ವಿಷಯ ಜಾಗ್ರತೆ!)

ಸಂಸ್ಕಾರವಿಲ್ಲದ ಬದುಕು, ಒಮ್ಮನಸ್ಸಿಲ್ಲದ ದಾಂಪತ್ಯ, ಆಡಂಬರಗಳಿಗೆ ಸೋಲುವ ಮನೋವೃತ್ತಿ ಇತ್ಯಾದಿಗಳ ಬಗೆಗೆ ಕತೆಗಾರ ತೋರುಬೆರಳು ತೋರಿಸಿ, ಬದುಕು ದುರಂತವಾಗುವ ಕಾರಣಗಳ ಕಡೆಗೆ ಓದುಗರ ಲಕ್ಷ್ಯ ಸೆಳೆಯುತ್ತಾನೆ. ಪಾತ್ರ ಗಳ ಮನೋವ್ಯಾಪಾರಗಳ ವಿಶ್ಲೇಷಣೆ ಅಷ್ಟಾಗಿ ಇಲ್ಲಿ ನಡೆದಿಲ್ಲ.

ಸಮಾಜೊಗಾಹುತಿ: ಇದು 26–8–1937ರ 'ನವಯುಗ' ಸಂಚಿಕೆ ಯಲ್ಲಿ 'ಕಿಶೋರೆ' ಎಂಬ ಹೆಸರಲ್ಲಿ ಪ್ರಕಟವಾಗಿದೆ. ಈ ಕತೆಯಲ್ಲಿ ದಿನಚರಿಯ ಬರವಣಿಗೆಯ ತಂತ್ರವನ್ನು ಬಳಸಲಾಗಿದೆ.

ಸಾಹುಕಾರ ಸದಾಶಿವರಾಯನಿಗೆ ರಮೇಶ - ಶ್ಯಾಮುಲ ಮಕ್ಕಳು. ಅವನ ಹೆಂಡತಿ ತೀರಿಕೊಳ್ಳುತ್ತಾಳೆ. ವ್ಯಾಪಾರ ದಿವಾಳಿಯಾಗುತ್ತದೆ. ರಮೇಶ ಊರು ಬಿಟ್ಟು ಓಡುತ್ತಾನೆ. ಸನ್ನಿವೇಶಕ್ಕೆ ಕಟ್ಟುಬಿದ್ದು ಶ್ಯಾಮುಲೆಯನ್ನು ಮುದಿ ವೆಂಕಟೇಶಯ್ಯನಿಗೆ ಮದುವೆಮಾಡಿ ಕೊಡಲಾಗುತ್ತದೆ. ಸದಾಶಿವರಾಯನ ಅಂತ್ಯ ಕಾಲದಲ್ಲಿ ಲಂಡನಿನಿಂದ ರಮೇಶನ ಕಾಗದ ಬರುತ್ತದೆ. ಸಂತೋಷದಿಂದ ಆತ ಸಾಯುತ್ತಾನೆ. ವೆಂಕಟೇಶಯ್ಯನೂ ಕಾಲರಾದಿಂದ ಸತ್ತು ಹದಿಹರೆಯದ ಹುಡುಗಿ ಶ್ಯಾಮುಲಳನ್ನು ವಿಧವೆಯನ್ನಾಗಿಸುತ್ತಾನೆ.

ರಮೇಶ ಊರಿಗೆ ಬಂದು ಶ್ಯಾಮುಲೆಯನ್ನು ಸತೀಶ ಎಂಬವನಿಗೆ ಲಗ್ನ ಮಾಡಿಕೊಡುತ್ತಾನೆ. ಸಮಾಜ ಉರಿಕಾರಲು ಪ್ರಾರಂಭಿಸುತ್ತದೆ. ದಂಪತಿಗಳಿಗೆ ಬಹಿಷ್ಕಾರ ಹಾಕುತ್ತದೆ. ಅಷ್ಟಲ್ಲದೆ ಮೊಕ್ತೇಸರ ಶ್ಯಾಮುಲೆಯ ಕತ್ತು ಹಿಡಿದು ನೂಕಿದ ಭರಕ್ಕೆ ಆಕೆಯ ತಲೆ ಕಲ್ಲಿಗೆ ಜಜ್ಜಿ ಆಕೆ ಸಾಯುತ್ತಾಳೆ. ರಮೇಶ ಊರಿಗೆ ಬಂದು ವಿಚಾರ ತಿಳಿಯುತ್ತಾನೆ. ಆ ಬಳಿಕ, ರಮೇಶ ಮತ್ತು ಸತೀಶರನ್ನು ಊರಲ್ಲಿ ಯಾರೂ ಕಾಣುವುದಿಲ್ಲ.

ದುರಂತವಸ್ತುವುಳ್ಳ ಈ ಕಥೆ ಸಾಕಷ್ಟು ಅರಳಿಕೊಳ್ಳದೆ ಇದ್ದರೂ, ಸಮಾಜದ ಕುರಿತಾದ ಆಕ್ರೋಶದ ಉಕ್ತಿಗಳಿಂದ ಬಿಸಿಯಾಗಿದೆ. ಕತೆಗಾರನ ಸಾಮಾಜಿಕ ಕಳಕಳಿ ನಿಚ್ಚಳವಾಗಿ ಇಲ್ಲಿ ಒಡೆದು ಕಾಣುತ್ತದೆ. ವಿಧವಾವಿವಾಹವನ್ನು ಸಮಾಜವು ದಿಟ್ಟಿಸುವ ಬಗೆಯನ್ನು ಇಲ್ಲಿ ಎತ್ತಿ ತೋರಿಸಲಾಗಿದೆ. ವಿಧವಾವಿವಾಹದ ದಂಪತಿಗಳಿಗೆ ಬಹಿಷ್ಕಾರವಿಟ್ಟ ಸಮಾಜದ ಮೇಲೆ ಕತೆಗಾರನಿಗೆ ಎಂಥಾ ಕೋಪವಿದೆಯೆಂದರೆ, ವಾಕ್ಯದ ಕೊನೆಗೆ ಕಂಸದಲ್ಲಿ 'ಥೂ!' ಎಂಬ ತಿರಸ್ಕಾರದ ಉದ್ಗಾರ ಕಾಣಿಸಿಕೊಂಡಿದೆ!

"ಹೇ ಕ್ರೂರ ಸಮಾಜೊನೇ, ನಿಕ್ಕ್ ಈತ್ನೆಟ ತಿಕ್ಕಿ ಆಹುತಿಲ್ ಯ್ಯಾಜಾ?" ಎಂಬುದಾಗಿ ಕತೆ ಕೊನೆಯಾಗುತ್ತದೆ. ಬಾಲಕತೆಗಾರನ ಮನಸ್ಸನ್ನು ಬಹುವಾಗಿ ಕಲಕಿದ ಯಾವುದೋ ಘಟನೆ ಈ ಕಥೆಗೆ ವಸ್ತುವನ್ನು ಒದಗಿಸಿರಬೇಕೆಂಬುದಕ್ಕೆ ಸಂಶಯವಿಲ್ಲ.

ಮೂತಲಾ ಇಂಚನೇ (ನಾಟಕ) ಅಥವಾ **ಮಡಿತ್ತ ಭೆಡಿ** : ಇದು ೨೭-೫-೧೯೩೭ರ ನವಯುಗ ಸಂಚಿಕೆಯಲ್ಲಿ 'ಬಾಲಬಂಧು' ಬಾಲವೃಂದೊ ಸುಳ್ಯ - ಎಂಬ ಹೆಸರಲ್ಲಿ ಪ್ರಕಟವಾಗಿದೆ. ಇದೊಂದು ಪುಟ್ಟ ಪ್ರಹಸನ. ಹಳ್ಳಿಯೂರಿನ ವ್ಯಾಪಾರಸಾಪಾರ, ಬಡ್ಡಿ ವ್ಯವಹಾರ, ಜಾತಿ ವಿಚಾರ, ಮಡಿ, ಕ್ಷುಲ್ಲಕ ಕಲಹ, ಪಂಚಾಯ್ತಿಕೆ ಇತ್ಯಾದಿಗಳನ್ನೊಳಗೊಂಡ ಈ ಕಿರುನಾಟಕ ರಂಗಪ್ರದರ್ಶನಕ್ಕೂ ತಕ್ಕಮಟ್ಟಿಗೆ ತಕ್ಕುದಾಗಿದೆ.

ತಿಮ್ಮಣ್ಣ ಭಟ್ಟ ಮತ್ತು ಆತನ ಮಡಿ ಹೆಂಡತಿ ಚಿಕ್ಕಮ್ಮ ಆ ಊರಿನ ‘ಚಪ್ಡಿ’ ವ್ಯಾಪಾರದ, ‘ಬೆಬ್ಬೆಬ್ಬೆ’ ಮಾತಿನ ಅಂದು ಬ್ಯಾರಿಯ ಅಂಗಡಿಯಲ್ಲಿ ಹೊಗೆಸೊಪ್ಪು ತೆಕ್ಕೊಳ್ಳಬಂದವರು ಒಣಮೀನಿನ ನಾತದ ಬಗ್ಗೆ ದೂರುತ್ತಾರೆ; ಜಗಳವಾಗುತ್ತದೆ. ಅಂದು ಇದನ್ನು ನೆನಪಿಟ್ಟುಕೊಂಡು ಬಡ್ಡಿಗೆ ಹಣಕೊಡುವ ಕುಳಗಳಾದ ತಿಮ್ಮಣ್ಣ ಭಟ್ಟ ಹಾಗೂ ಸಂಕಪ್ಪ ರೈ ಇವರೊಳಗೆ ಉಪಾಯವಾಗಿ ಜಗಳವನ್ನು ಬೆಸೆಯುತ್ತಾನೆ. ಬಡ್ಡಿಗೆ ಹಣ ಪಡೆಯುವ ಬಡ ಬೋರಣ್ಣ ನಡುವೆ ಪಾಡು ಪಡುತ್ತಾನೆ. ಅವನಿಗೆ ಅಂದುವಿನ ಗಂಡಾಗುಂಡಿ ತಿಳಿಯುತ್ತದೆ. ಊರ ಪಟೇಲರಲ್ಲಿ ಭಟ್ಟನ ದೂರು ಹೋಗಿ ಪಂಚಾಯತಿಕೆ ನಡೆಯುತ್ತದೆ. ಕೊನೆಗೆ ರಾಜಿಯಾಗುತ್ತದೆ. ‘ರೈಲ್‌ನ್ ನಂಬಡೆ’ (ರೈಲನ್ನು ನಂಬಬೇಡಿ)ಎಂಬುದು ‘ರೈಲೆನ್’ (ರೈಗಳನ್ನು) ಎಂಬುದಾಗಿ ತಪ್ಪಾಗಿ ಕೇಳಿಸಿ ರಾದ್ಧಾಂತವಾಯಿತು ಎಂಬಂತೆ ಪ್ರಕರಣವನ್ನು ವಿಶ್ಲೇಷಿಸಿ ತೀರ್ಮಾನ ನೀಡುತ್ತಾರೆ ಪಠೇಲ ವಾಮನ ಕಮ್ತಿ.

ಊರಿನ ಬೇರೆ ಬೇರೆ ಪ್ರಾತಿನಿಧಿಕವೆನ್ನಬಹುದಾದ ವ್ಯಕ್ತಿಗಳ ಸ್ವಭಾವ, ಮಾತಿನ ವೈಖರಿ, ನಡವಳಿಕೆಗಳು ಇಲ್ಲಿ ವಿಡಂಬನೆಗೊಂಡಿವೆ. ಪಾತ್ರ ಸಹಜತೆಗೋಸ್ಕರ ಅಂದುಬ್ಯಾರಿಯ ಮಾತಿನಲ್ಲಿ ಮಾಪಿಳ್ಳೆ ಮಲೆಯಾಳದ ಶಬ್ದಗಳನ್ನೂ, ಭಟ್ಟರ ಬಾಯಲ್ಲಿ ಶಿವಳ್ಳಿ ತುಳು ಮಾತುಗಳನ್ನೂ ಬಳಸಲಾಗಿದೆ. ಸಮಯೋಚಿತವಾಗಿ ಗಾದೆ ಮಾತುಗಳನ್ನೂ ಸಂಭಾಷಣೆಯಲ್ಲಿ ಜೋಡಿಸಿಕೊಳ್ಳಲಾಗಿದೆ. ಉದಾ: ಮಾಮಿ ಸಯ್ನಗ, ಮರ್ಮಾಲ್ ಬೊಲ್ಪುಗೇತರಿ ಮಾಮಿ, ಬಯ್ಯಗೇತರಿಂದ್‌ದ್ ಕೇನ್ತಲ್ಗೆ’ (ಅತ್ತೆ ಸಾಯುವಾಗ, ಸೊಸೆ ಬೆಳಿಗ್ಗೆಗೆ ಎಷ್ಟು ಅಕ್ಕಿ ಅತ್ತೆ, ಸಂಜೆಗೆ ಎಷ್ಟು ಅಕ್ಕಿ ಅತ್ತೆ ಎಂದು ಕೇಳಿದ್ದಾಳಂತೆ) ಒಂದು ಜಾತಿ ಇನ್ನೊಂದು ಜಾತಿಯನ್ನು ಜರೆಯುವ ರೀತಿಯನ್ನು ಇಲ್ಲಿನ ಜಗಳದಲ್ಲಿ ನೋಡಬಹುದು. ಒಟ್ಟಿನಲ್ಲಿ, ಅತಿಲೋಭ, ಜಾತೀಯತೆ, ಮೋಸ, ಡಂಭಾಚಾರಗಳು ಹೇಗೆ ಸಮಾಜಕ್ಕೆ ಅಹಿತವೆಂದೂ ಪರಸ್ಪರ ವಿಶ್ವಾಸ, ಸಹನೆ, ಒಕ್ಕಟ್ಟುಗಳು ವಿಹಿತವೆಂದೂ ಕೆಲವೇ ನಿಮಿಷಗಳ ಈ ವೈನೋದಿಕ ನಾಟಕ ಪ್ರತಿಪಾದಿಸುತ್ತದೆ.

ಇಲ್ಲಿ ಪರಿಚಯಿಸಿದ ಕೃತಿಗಳು ವಿಶೇಷ ಕಲಾಕೃತಿಗಳ ಮಟ್ಟಕ್ಕೆ ಮುಟ್ಟಿದೆಯೆಂದು ನಾನು ಹೇಳಲು ಹೊರಟಿಲ್ಲ. ಆದರೆ ಹನ್ನೆರಡು ಹದಿಮೂರರ ಆ ಕಿಶೋರ ಪ್ರಾಯದಲ್ಲಿ ಇಷ್ಟನ್ನಾದರೂ ಸೃಜಿಸುವುದು ವಿಶೇಷವೇ ಎನ್ನಬೇಕು. ಆ ಕಿರುಹರೆಯದಲ್ಲೆ, ಸಮಾಜದೊಳಗೆ ನಡೆಯುತ್ತಿದ್ದ ಕೆಲವೊಂದು ಆಗುಹೋಗುಗಳನ್ನು ತಾಗುಬಾಗುಗಳನ್ನೂ ಈ ಪ್ರತಿಭಾವಂತ ಬಾಲಕ ಚೆನ್ನಾಗಿ ಗಮನಿಸುತ್ತಿದ್ದ ಎಂಬುದು ಈ ಕೃತಿಗಳಿಂದ ಸಿದ್ಧವಾಗುತ್ತದೆ. ಬಾಲ್ಯದ ಈ ಸೂಕ್ಷ್ಮ ನಿರೀಕ್ಷಣೆ, ಸ್ಪಂದನ, ಅನುಕಂಪೆ,

ಅಭಿವ್ಯಕ್ತಿ ಪ್ರಯತ್ನಗಳೇ ಮುಂದೆ ಅತ್ಯಂತ ಪ್ರಶಸ್ತವಾಗಿ ವಿಕಾಸವಾದ ಬೆಡಗನ್ನು ಕಾಣುತ್ತೇವೆ. ಅಂತೂ ಬೆಳೆಯು ಸಿರಿ ಮೊಳೆಯಲ್ಲಿ ಎಂಬ ಹಳೆಯ ಗಾದೆಯನ್ನು ನಿರಂಜನರ ಸಾಹಿತ್ಯವಿಚಾರದಲ್ಲಿ ಬಳಸಿದರೆ ಅದು ಹಳಸಲು ಎನಿಸದು ಎನ್ನಬೇಕು.

1. ಈ ಸಂಚಿಕೆಗಳನ್ನು ನೋಡಲು ಅವಕಾಶ ಕಲ್ಪಿಸಿದ ಮಂಗಳೂರು ವಿ. ವಿ. ನಿಲಯದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ। ಬಿ. ಎ. ವಿವೇಕ ರೈ ಅವರಿಗೆ ಕೃತಜ್ಞ. ○

ಮನುಷ್ಯ : ನಿರಂಜನ ಸಾಹಿತ್ಯದ ಕೇಂದ್ರ ಬಿಂದು

–ಡಾ। ಬಿ. ಕೃಷ್ಣಮೂರ್ತಿ

ನಿರಂಜನ ಸಾಹಿತ್ಯದ ಕೊಡುಗೆಯಲ್ಲಿರುವ ವಿಶಿಷ್ಟತೆಯ ಮೂಲ ಅವರು ತಮ್ಮನ್ನು ತಾವು ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡದ್ದು: ಇದಕ್ಕೆ ಮೂಲ ಪ್ರೇರಣೆ ಮನುಷ್ಯನ ಬಗ್ಗೆ ಅವರಿಗಿದ್ದ ಕಾಳಜಿ.

ಮನುಷ್ಯನಲ್ಲಿ ಏನೇನು ಸಾಧ್ಯತೆಗಳನ್ನು ಕಂಡಿಲ್ಲ! ಅವನಲ್ಲಿ ಅಪಾರವಾದ ನಂಬಿಕೆ. ಆದರೆ ಈ ನಂಬಿಕೆ ಅವರ ಆಳವಾದ ಚಾರಿತ್ರಿಕ ಪ್ರಜ್ಞೆಯಿಂದ, ಜೀವನಾನುಭವದಿಂದ ಉದ್ಭವಿಸಿದ್ದು. ಮಾನವ ಚರಿತ್ರೆಯಲ್ಲಿ ಹೋರಾಟ ಸತತ: ಕೆಲವೊಮ್ಮೆ ಬಹಿರಂಗ, ಬಹಳ ಮಟ್ಟಿಗೆ ಗುಪ್ತ; ಆದರೆ ಹೋರಾಟ ಮಾತ್ರ ನಡೆದೇ ಇದೆ. ಚರಿತ್ರೆಯಲ್ಲಿ ತನ್ನೆಲ್ಲಾ ಹೋರಾಟಗಳಿಂದ ಮನುಷ್ಯ ನಿರೂಪಿಸುವುದೇನೆಂದರೆ: ತಾನು ಚರಿತ್ರೆಯುದ್ದಕ್ಕೂ ಬೆಳೆದಿದ್ದೇನೆ, ಇನ್ನೂ ಬೆಳೆಯುತ್ತಲೇ ಇದ್ದೇನೆ; ಜನವಿರೋಧಿ ಶಕ್ತಿಗಳು - ವರ್ಗವಾಗಲಿ, ಜಾತಿಯಾಗಲಿ, ಮತ್ತಿನ್ನಾವ ಪ್ರತಿಗಾಮಿ ಶಕ್ತಿಯೇ ಆಗಲಿ, ತನ್ನ ಬೆಳವಣಿಗೆಯನ್ನು ಸ್ಥಗಿತಗೊಳಿಸಲು ಸಾಧ್ಯವಿಲ್ಲ; ತನ್ನಲ್ಲಿರುವ ಎಲ್ಲಾ ಗುಣಗಳು ತಮ್ಮೆಲ್ಲಾ ಭವ್ಯತೆಯಲ್ಲಿ ರೂಪುಗೊಂಡು ಹೊರಹೊಮ್ಮುತ್ತವೆ. ಆದುದರಿಂದ ನಿರಂಜನ ಮನುಷ್ಯನಲ್ಲಿಟ್ಟಿರುವ ನಂಬಿಕೆ ವೈಜ್ಞಾನಿಕ. ಮೇಲಾಗಿ ಇವರು ತುಳಿದದ್ದು ಕ್ರಾಂತಿಕಾರಿದಾರಿ. ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡದ್ದು ಭಾರತದ ಚರಿತ್ರೆಯ ಒಂದು ಸಕ್ರಿಯ ಪ್ರಕ್ರಿಯೆಯಾಗಿ: ತಮ್ಮನ್ನು ತಾವು ಚರಿತ್ರೆಯ ಚಲನಶೀಲ ಶಕ್ತಿಗಳಿಗೆ ಅರ್ಪಿಸಿಕೊಂಡು, ಚರಿತ್ರೆಯನ್ನು ಸೃಷ್ಟಿಸುವುದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮನ್ನು ರೂಪಿಸಿಕೊಂಡರು. ಈ ಕಾರಣಕ್ಕಾಗಿಯೇ ಅವರ ವಾಸ್ತವದ ಅನುಭವ, ಅವರ ಕಲೆಗೆ ನಿಲುಕುವ ವಾಸ್ತವದ ಹರವು, ಹೆಚ್ಚು ಶಕ್ತಿಶಾಲಿಯಾದದ್ದು. ಭಾರತಕ್ಕೆ ಮುಖ್ಯವಾದದ್ದು.

ಅಲ್ಲದೆ, ನಿರಂಜನರ ವಾಸ್ತವತೆಯನ್ನು ವಿಶ್ಲೇಷಿಸುವ ತಾತ್ವಿಕ, ಸಾಮಾಜಿಕ ಚೌಕಟ್ಟು ಮನುಷ್ಯನಲ್ಲಿರುವ ಭವ್ಯತೆಯನ್ನು ಗ್ರಹಿಸಲು ಪೂರಕವಾಗಿದ್ದುವು. ಹಾಗೂ ನಮ್ಮ ಯುಗದ ಸವಾಲುಗಳಿಗೆ ತೀವ್ರವಾಗಿ, ಕ್ರಿಯಾತ್ಮಕವಾಗಿ ತುಡಿಯುವಂತೆ ಮಾಡಿದ್ದುವು. ರಷ್ಯಾದ ಕ್ರಾಂತಿ ಮತ್ತು ಎರಡನೇ ಜಾಗತಿಕ ಯುದ್ಧ ಈ ಶತಮಾನದ ಬರಹಗಾರರ ಮೇಲೆ ಅಗಾಧವಾದ ಪರಿಣಾಮ ಬೀರಿದ್ದುವು; ಮೇಲಾಗಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ಮತ್ತು ಅದರಲ್ಲಿ ಸಕ್ರಿಯ ಪಾತ್ರ-ಈ ಘಟನೆಗಳೆಲ್ಲಾ ನಿರಂಜನರನ್ನು ಮನುಷ್ಯನ ಬಗ್ಗೆ, ಸಾಮಾಜಿಕ-ರಾಜಕೀಯ ವ್ಯವಸ್ಥೆಯ ಬಗ್ಗೆ ಗಾಢವಾಗಿ ಆಲೋಚಿಸಲು, ಆಳವಾದ ಶೋಧನೆ ಮಾಡಲು ಪ್ರೇರೇಪಿಸಿದುವು. ಈ ಹಿನ್ನೆಲೆಯಲ್ಲಿ ಗಂಭೀರ ಬರಹಗಾರರೆಲ್ಲಾ ಮನುಷ್ಯ ಇದುವರೆಗೂ ರೂಪಿಸಿರುವ ವ್ಯವಸ್ಥೆಯನ್ನು ವೈಜ್ಞಾನಿಕವಾದ ಚಾರಿತ್ರಿಕ ವಿಶ್ಲೇಷಣೆಗೆ ಒಡ್ಡಿರುವ ಮಾರ್ಕ್ಸ್‌ವಾದದ ಬಗ್ಗೆ ಒಂದು ನಿಲುವಿಗೆ ಬರಬೇಕಾದ ಸಂದರ್ಭ. ಜೀವನಾನುಭವ ನಿರಂಜನರನ್ನು ಮಾರ್ಕ್ಸ್‌ನೆಡೆಗೆ ಎಳೆಯಿತು. ಬದುಕನ್ನು ಮತ್ತು ಮನುಷ್ಯನನ್ನು ಎರಡನ್ನೂ ಕ್ರಾಂತಿಕಾರಿಯಾಗಿಯೇ ಬದಲಾಯಿಸಬೇಕೆನ್ನುವ ಧೋರಣೆ ಅವರ ಬುದ್ಧಿ, ಭಾವ ಮತ್ತು ಬದುಕಿನ ಅತಿಮುಖ್ಯ ಪ್ರಜ್ಞಾಪೂರ್ವಕ ಅಂಶವಾಯಿತು. "ಮನುಷ್ಯನೇ ಪರಮ ಸತ್ಯ; ಸಕಲವೂ ಮನುಷ್ಯನಿಗಾಗಿಯೇ" ಎನ್ನುವ ಸತ್ಯವನ್ನು ಗಾರ್ಕಿಯ ಹಾಗೆ ನಿರಂಜನರು ತಮ್ಮ ಅನುಭವದಿಂದ ಕಂಡುಕೊಂಡರು. ಚರಿತ್ರೆಯು ಮಾನವನ ಪ್ರಗತಿಯ ದಾಖಲೆ. ಮನುಷ್ಯನನ್ನು ಒಂದುಕ್ಷಣ ಮರೆತರೂ ಪ್ರಗತಿಯ ಉದ್ದೇಶ ಮುಸುಕಾಗುತ್ತದೆ!

ಈ ಹಿನ್ನೆಲೆಯಲ್ಲಿ ಬರಹಗಾರರಾಗಿ ಸಾಹಿತ್ಯ ಕೃಷಿಯ ಬಗ್ಗೆ ಗಂಭೀರ ನಿಲುವು ತಾಳಿದರು: "ನಮ್ಮ ಕಾಲದ ಸಮಸ್ಯೆಗಳ ಸಾರವೇನು? ಜನತೆಯ ಆಶೋತ್ತರಗಳೇನು? ಯಾವುದು ನಡೆದು ಬಂದ ದಾರಿ? ಸಾಮಾಜಿಕ, ಸಾಂಸ್ಕೃತಿಕ ರೂಪರೇಖೆಗಳಾವುವು? ಎಂಬುದನ್ನು ಅರಿತಿರುವ ಬರಹಗಾರ ಮಾತ್ರ ಅರ್ಥಪೂರ್ಣ ಕೃತಿಗಳನ್ನು ರಚಿಸಬಲ್ಲ" (ಬುದ್ಧಿ ಭಾವ ಬದುಕು; ಪುಟ, 198). ಆಳವಾದ ಚಾರಿತ್ರಿಕ ಜ್ಞಾನವಿದ್ದಲ್ಲಿ ಮಾತ್ರ ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಪಡೆಯಲು ಸಾಧ್ಯ. ಆಗ ಮಾತ್ರ ಆ ಜ್ಞಾನ ಬರಹಗಾರನ ಪ್ರಜ್ಞೆಯ ಒಂದಂಶವಾಗಿ ಕೃತಿರಚನೆಯಲ್ಲಿ ಪಾಲ್ಗೊಳ್ಳಲು ಸಾಧ್ಯ. ಈ ಚಾರಿತ್ರಿಕಪ್ರಜ್ಞೆಯನ್ನು ನಿರಂಜನರು ನಡೆದು ಬಂದ ದಾರಿ ಗಟ್ಟಿಯಾಗಿಯೇ ರೂಪಿಸಿತ್ತು.

ಮೇಲಾಗಿ ಬದುಕಿನ ಚಲನಶೀಲತೆಯ ಬುನಾದಿಯ ಮೇಲೆ ರೂಪಿತವಾಗಿರುವ ಮಾರ್ಕ್ಸಿಸ್ಟ್ ದ್ವಂದ್ವವಾದದ ಚೌಕಟ್ಟಿನಲ್ಲಿ ತಮ್ಮ ಸುತ್ತಮುತ್ತಲಿನ ಜೀವನವನ್ನು ಅರ್ಥೈಸುತ್ತಾ ಈ ಬದುಕನ್ನು ಆಮೂಲಾಗ್ರವಾಗಿ ಬದಲಾಯಿಸಬಲ್ಲ

ಮನುಷ್ಯನಿಗಾಗಿ ನಿರಂಜನರಿಂದ ಸತತ ಹುಡುಕಾಟ. ಮುಖ್ಯವಾಗಿ ನಿರಂಜನರ ಬದುಕೇ (ಆದುದರಿಂದ ಅವರ ಬುದ್ಧಿ, ಭಾವ) ಅಂತಹ ಮನುಷ್ಯನ ಮೂರ್ತರೂಪ - ಆದುದರಿಂದ ಅಂತಹ ಮನುಷ್ಯನಿಗಾಗಿ ಅವರು ನಡೆಸಿದ ಹುಡುಕಾಟ ಬಹಳ ಸಹಜ. ಅವರ ಈ ಹುಡುಕಾಟದ ತಾತ್ವಿಕ, ಕಲಾತ್ಮಕ ಚೌಕಟ್ಟು ಬಹಳ ಮೂರ್ತವಾಗಿ 'ಚಿರಸ್ಮರಣೆ'ಯಲ್ಲಿ ಬಿಂಬಿತವಾಗಿದೆ. ಅವರ ಸಾಹಿತ್ಯಿಕ ವೈಶಿಷ್ಟ್ಯವೂ ಈ ಕೃತಿಯಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ.

'ಚಿರಸ್ಮರಣೆ' ನಿರಂಜನರಿಗೂ ಬದುಕಿಗೂ ಇರುವ ಸಂಬಂಧದ ಪ್ರತೀಕ. ಅವರ ಪ್ರಗತಿಪರ ಚಾರಿತ್ರಿಕ ಪ್ರಜ್ಞೆಗೆ, ಅಂತಹ ಚಾರಿತ್ರಿಕ ಪ್ರಜ್ಞೆಯಿಂದ ಉದ್ಭವಿಸುವ ವಾಸ್ತವತೆಯನ್ನು ವಿಶ್ಲೇಷಿಸುವ ವೈಜ್ಞಾನಿಕ ದೃಷ್ಟಿಕೋನಕ್ಕೆ ಸಾಕ್ಷಿ. ಮನುಷ್ಯ ಹೇಗೆ ನಿರಂಜನ ಸಾಹಿತ್ಯದ ಕೇಂದ್ರ ಬಿಂದು ಎನ್ನುವ ಅಂಶ ಇಲ್ಲಿ ಮೂರ್ತವಾಗಿ ಪ್ರತಿನಿಧಿಸಲ್ಪಟ್ಟಿದೆ. ಆದುದರಿಂದ ಈ ಕೃತಿಯಲ್ಲಿ ಬಿಂಬಿತವಾಗಿರುವ ವಾಸ್ತವತೆಯ ವಿಶ್ಲೇಷಣೆ ನಿರಂಜನರ ಮನುಷ್ಯನ ಕಲ್ಪನೆ ಮತ್ತು ಮನುಷ್ಯನ ಸಾಧ್ಯತೆಗಳನ್ನು ನಮ್ಮ ಮುಂದಿಡುತ್ತದೆ.

'ಚಿರಸ್ಮರಣೆ'ಯ ಓದುಗ ತನ್ನ ಸುತ್ತಮುತ್ತಲೇ, ಸಾಮಾನ್ಯ ಜನರ ನಡುವೆಯೇ ಅತ್ಯಂತ ಧೀಮಂತ ವ್ಯಕ್ತಿಗಳನ್ನು ನೋಡುವ ದೃಷ್ಟಿಕೋನವನ್ನು ಪಡೆಯುತ್ತಾನೆ - ಒಮ್ಮೆಲೇ ಅಂತಹ ವ್ಯಕ್ತಿಗಳು 'ಹುಟ್ಟು'ತ್ತಾರೆ. ಈ ಕೃತಿಯಲ್ಲಿ ಸಾಮಾಜಿಕ ವಾಸ್ತವವನ್ನು ಸ್ವೀಕರಿಸುವ ಮತ್ತು ಅರ್ಥೈಸುವ ದೃಷ್ಟಿಕೋನ ಆಮೂಲಾಗ್ರವಾಗಿಯೇ ಬದಲಾಯಿಸಲ್ಪಟ್ಟಿರುವುದರಿಂದ ಈ ಹೊಸ ಮನುಷ್ಯ, ಈ ಸಮಾಜವನ್ನೇ ಬದಲಾಯಿಸುತ್ತೇನೆನ್ನುವ ಭವ್ಯ ಮನುಷ್ಯ, ನಮ್ಮ ನಡುವೆಯೇ ಹುಟ್ಟು ಹಾಕಲ್ಪಡುತ್ತಾನೆ.

ಈ ಕೃತಿಯಲ್ಲಿ ಬಿಂಬಿತವಾಗಿರುವ ವಾಸ್ತವ ಜನಪರ ವರ್ಗದೃಷ್ಟಿಯಲ್ಲಿ ಕೋನದ ಚೌಕಟ್ಟಿನಲ್ಲಿ ಅರ್ಥೈಸಲ್ಪಟ್ಟಿರುವುದರಿಂದ, ಈ ಹೊಸ ಮನುಷ್ಯ, ಕ್ರಾಂತಿಕಾರಿ ಅಂಶಗಳನ್ನು ಮೈಗೂಡಿಸಿಕೊಂಡ ಮನುಷ್ಯ, ಸಾಮಾನ್ಯ ಜನರ ನಡುವೆಯೇ ಮೂಡಿ ಬರಲು ಸಾಹಿತ್ಯಿಕವಾಗಿ ಸಾಧ್ಯವಾಗುತ್ತದೆ. ಈ ಜನಪರ ವರ್ಗದೃಷ್ಟಿಕೋಣವಿರದೆ ವಾಸ್ತವವನ್ನು ಚಾರಿತ್ರಿಕ ವಿಶ್ಲೇಷಣೆಗೆ ಒಡ್ಡುವುದಾಗಲಿ, ಅದರಲ್ಲಿ ಅಡಕವಾಗಿರುವ ಚಲನಶೀಲತೆಯನ್ನು, ಪ್ರಗತಿಪರತೆಯನ್ನು ಗುರುತಿಸುವುದಾಗಲಿ ಸಾಧ್ಯವಿಲ್ಲ.

'ಚಿರಸ್ಮರಣೆ'ಯಲ್ಲಿ ಶೋಷಣೆಗೆ ಒಳಗಾದ ಜನರ ಬದುಕಿನ ಘಟನೆಗಳು (ಕಯ್ಯೂರಿನ ರೈತ ಹೋರಾಟದ ಮುಖ್ಯ ಚೌಕಟ್ಟಿನಲ್ಲಿ) ಚಿತ್ರಿಸಲ್ಪಟ್ಟಿರುವ ಹಿನ್ನೆಲೆ ಯಲ್ಲಿ ನಿರಂಜನರ ಕ್ರಾಂತಿಕಾರಿ ಚಾರಿತ್ರಿಕ ಪ್ರಜ್ಞೆ ಸದಾ ಜಾಗೃತವಾಗಿ ಕೆಲಸ

ಮಾಡಿರುವುದು ಗಮನಾರ್ಹ. ಈ ಕಾರಣಕ್ಕಾಗಿ ಇಲ್ಲಿ ಬರುವ ಮುಖ್ಯ ಪಾತ್ರಗಳು ನಮ್ಮ ವ್ಯವಸ್ಥೆಯಲ್ಲಿರುವ ಶೋಷಣಾತ್ಮಕ ಅಂಶಗಳನ್ನು ತೊಡೆದು ಹಾಕುವ ಸವಾಲನ್ನು ಒಪ್ಪಿಕೊಂಡು ಹೋರಾಟ ನಡೆಸಿ ಹೊಸ ಸಮಾಜವನ್ನು ಸೃಷ್ಟಿಸುವ ಕಡೆ ಹೆಜ್ಜೆ ಹಾಕುತ್ತವೆ.

ಹಾಗೆಯೇ ಪ್ರತಿ ಮುಖ್ಯ ಘಟನೆಯ ಅರ್ಥವ್ಯಾಪ್ತಿ ಆ ಘಟನೆಯನ್ನು ಮೀರಿ ಮಾನವನ ಬದುಕಿನ ಅಂಶವಾಗಿ, ಹೊಸ ಜೀವನಕ್ಕಾಗಿ ಅವನು ಸತತವಾಗಿ ನಡೆಸುತ್ತಿರುವ ಹೋರಾಟದ ಅಂಶವಾಗಿ, ಮಾನವನ ಬದುಕು ಹಸನಾಗುವುದರಲ್ಲಿ ಸಂದೇಹವಿಲ್ಲವೆನ್ನುವ ಆಶಾವಾದದ ಕಡೆ ಓದುಗನನ್ನು ಎಳೆಯುತ್ತದೆ. ವ್ಯಕ್ತಿ ಜೀವನಕ್ಕೆ ಅತಿನಿಕಟವಾಗಿ ಸಂಬಂಧಿಸಿದ ಅಂಶ, ಅವನ ಬದುಕಿನ ಬೆಳವಣಿಗೆಗೆ ಸಂಬಂಧಿಸಿದ ಅಂಶ, ವ್ಯಕ್ತಿ ಜೀವನದ ವ್ಯಾಪ್ತಿಯನ್ನು ಮೀರಿ ಮಾನವ ಜನಾಂಗಕ್ಕೆ ಸೇರಿದೆ ಎನ್ನುವ ನಂಬಿಕೆಯನ್ನು ಓದುಗನಲ್ಲಿ ಉಂಟುಮಾಡುತ್ತದೆ. 'ಚಿರಸ್ಮರಣೆ'ಯ ಮುಖ್ಯಪಾತ್ರಗಳ ತ್ಯಾಗಮನೋಭಾವ ಮತ್ತು ಜನಪ್ರೇಮ ಕ್ರಾಂತಿಕಾರಿಯಾದದ್ದೆಂದು ಓದುಗನಿಗೆ ಮನದಟ್ಟಾಗುತ್ತದೆ.

ಈ ಕೃತಿಯಲ್ಲಿ ನಿರಂಜನರ ಚಾರಿತ್ರಿಕ ಪ್ರಜ್ಞೆ, ಕ್ರಾಂತಿಕಾರಿ ಮನುಷ್ಯನನ್ನು ಸೃಷ್ಟಿಸಬಲ್ಲ ಬದುಕಿನ ಅಂಶಗಳನ್ನು ಗುರುತಿಸಿರುವುದು ಮತ್ತು ಅಂತಹ ಅಂಶಗಳು ಭಾರತದ ಸಂದರ್ಭದಲ್ಲಿ ಕ್ರಾಂತಿಕಾರಿಗಳನ್ನು ನಮ್ಮ ಸುತ್ತಮುತ್ತಲೇ, ಸಾಮಾನ್ಯ ಜನರ ನಡುವೆಯೇ, ಸೃಷ್ಟಿಸಿವೆ ಎಂದು ಕಲಾತ್ಮಕವಾಗಿ ನಿರೂಪಿಸಿರುವುದು ಗಮನಾರ್ಹ. ಕನ್ನಡ ಸಾಹಿತ್ಯಸಂದರ್ಭದಲ್ಲಿ ಇದು ಒಂದು ಮಹತ್ತರ ಸಾಧನೆ.

ನಿರಂಜನರ ಈ ಸಾಧನೆಯ ಹಿನ್ನೆಲೆಯಲ್ಲಿ ತಾತ್ವಿಕದೃಷ್ಟಿಯಿಂದ ಬಹಳಷ್ಟು ಸೃಷ್ಟಿಕಾರ್ಯ ನಡೆಯಬೇಕಿತ್ತು. ಕನ್ನಡ ಸಾಹಿತ್ಯದಲ್ಲಿ ಭಾವನಾತ್ಮಕ ಚೌಕಟ್ಟಿನಲ್ಲಿ ಹುದುಗಿಹೋಗಿದ್ದ ಮನುಷ್ಯನನ್ನು ಹೊರತೆಗೆದು ಅವನಿಗೆ ನಿಜ ಬದುಕಿನ ಚಲನಶೀಲತೆಯಲ್ಲಿ ಸಕ್ರಿಯಪಾತ್ರ ಸೃಷ್ಟಿಸಿಕೊಡಬೇಕಾದ ಸವಾಲನ್ನು ನಿರಂಜನರು ಎದುರಿಸಿದ್ದರು. ಇದಕ್ಕಾಗಿ ಅವರು ಮನುಷ್ಯನ ಮತ್ತು ಚರಿತ್ರೆಯ ಆಳವಾದ ಶೋಧನೆಯನ್ನೇ ಮಾಡಿದರು.

ಕಾಫ್ಕನು ಸೃಷ್ಟಿಸಿದ ಮನುಷ್ಯ ಒಂದು ಕೊಳೆತ ಆದರೆ ದಕ್ಷ ವ್ಯವಸ್ಥೆಗೆ ಸಿಕ್ಕು, ಜೀವನದಲ್ಲಿ ಎಲ್ಲಾ ಅರ್ಥವನ್ನು ಕಳೆದುಕೊಂಡು ನಿರಾಶೆಗೆ ತುತ್ತಾಗಿರುವ ಮನುಷ್ಯ. ಆದೇ ಕೊಳೆತ ವ್ಯವಸ್ಥೆಯಲ್ಲಿಯೇ ತನ್ನ ಬದುಕನ್ನು ಕ್ರಾಂತಿಕಾರಿಯಾಗಿಯೇ ಬದಲಾಯಿಸಬಲ್ಲೆನೆನ್ನುವ ಧ್ಯೇಯೋದ್ದೇಶವನ್ನಿಟ್ಟುಕೊಂಡು ಹೋರಾಡಬಲ್ಲ

ಮನುಷ್ಯನನ್ನು ಸಾಹಿತ್ಯದಲ್ಲಿ ಸೃಷ್ಟಿಸಿದ ಗಾರ್ಕಿ, ಥಾಮಸ್ ಮ್ಯಾನ್ ಮತ್ತಿತರರೂ ಇದ್ದಾರೆ. ಗಾರ್ಕಿ ಮತ್ತು ಮ್ಯಾನ್‌ರ ಹಾಗೆ ಕನ್ನಡ ಸಾಹಿತ್ಯ ಸಂದರ್ಭ ದಲ್ಲಿ (ಕಾಫ್ಕಾನ ಮನುಷ್ಯನಾಗಲಿ ಬೇರೆ ಇನ್ಯಾವ 'ಮಾದರಿ' ಮನುಷ್ಯನಾಗಲಿ ನಮ್ಮಲ್ಲಿ ಸೃಷ್ಟಿಯಾಗದಿದ್ದರೂ) ಚರಿತ್ರೆಯ ಸವಾಲುಗಳನ್ನು ಸರಿಯಾಗಿ ಗುರುತಿಸಿ ಅವನ್ನು ಕ್ರಿಯಾತ್ಮಕವಾಗಿ ಎದುರಿಸುವ ಮನುಷ್ಯ ಸ್ಪಷ್ಟವಾಗಿ ಮೊದಲಿಗೆ ಸೃಷ್ಟಿಯಾಗಿರುವುದು ನಿರಂಜನ ಸಾಹಿತ್ಯದಲ್ಲಿ. ಈ ಮನುಷ್ಯನಿಗೆ ತನ್ನ ಚಾರಿತ್ರಿಕ ಗುರಿಮುಟ್ಟುವಲ್ಲಿ ಯಾವ ರೀತಿಯ ಹೋರಾಟ ನಡೆಸಿ, ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೋ ಅಂತಹ ಕ್ರಿಯೆ ಮತ್ತು ಪ್ರಜ್ಞೆ ಇವೆ. ನಿರಂಜನರ ಮನುಷ್ಯ ಸಮಾಜದ ಬದಲಾವಣೆಗೆ ಹೋರಾಡುತ್ತ, ಈ ಹೋರಾಟದ ಮೂಲಕ ತನ್ನನ್ನು ತಾನು ರೂಪಿಸಿಕೊಳ್ಳುತ್ತಾ ಮುಂದಕ್ಕೆ ಹೆಜ್ಜೆ ಹಾಕುವವನು. "ಚಿರಸ್ಮರಣೆ"ಯ ಈ ಮನುಷ್ಯ ಕನ್ನಡಸಾಹಿತ್ಯದಲ್ಲಿ ಇನ್ನೂ ಒಂಟಿಯಾಗಿಯೇ ಹೆಜ್ಜೆ ಹಾಕುತ್ತಿದ್ದಾನೆ!

○

ನಿರಂಜನರ ಕಾದಂಬರಿಗಳಲ್ಲಿ ಬಂಡಾಯದ ಧ್ವನಿ

–ಆರ್. ವಿ. ಭಂಡಾರಿ

ಬಂಡಾಯ ಸಾಹಿತ್ಯ ಇಂದಿನ ಸಾಹಿತ್ಯದ ಮುಖ್ಯಪ್ರವಾಹ. ಜನಪರವಾದ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕಿಡಿಯನ್ನು ಒಡಲಿನಲ್ಲಿ ಹೊತ್ತುಕೊಂಡು ಕಾವುಗೊಳ್ಳುವುದು ಅದರ ಶಿಸ್ತು. ಶೀತಲವಾಗಿ ಪ್ರವಹಿಸಬಹುದು. ಗುಡುಗಾಗಿ ಸಿಡಿಯಬಹುದು. 'ಬರಿಮೈ ತಣ್ಣಗೆ ಮನದಲಿ ಬಿಸಿಹಗೆ' ಎಂಬ ರೀತಿಯದು. ಹೇಗಿದ್ದರೂ ಅದರ ಜನಪರವಾದ ಆಶಯ ಗಂಭೀರ ಕಾಳಜಿ ಉಳ್ಳದ್ದು. ಆದ್ದರಿಂದ ಅದು ನಾಲ್ಕು ಜನರ ತೆವಲಾಗದೆ ತನ್ನ ನಡತೆಯಲ್ಲಿ ತನ್ನ ಆಳ-ಅಗಲಗಳನ್ನು ಖಚಿತ ಪಡಿಸಿಕೊಳ್ಳುತ್ತಲೇ ಹೋಗುವಂತಹದು.

ಎಂತಲೇ ಬಂಡಾಯ ಸಾಹಿತ್ಯ ತನ್ನ ಪರಂಪರೆಯನ್ನು ಗುರುತಿಸಿಕೊಳ್ಳುವಲ್ಲಿ ಕುರುಡಾಗಲಾರದು. ಲೋಕಾಯತ ದರ್ಶನದಿಂದ ಹಿಡಿದು ಬುದ್ಧ, ಬಸವ, ಅಂಬೇಡ್ಕರ, ಲೋಹಿಯಾ, ಮಾರ್ಕ್ಸ್ ಚಿಂತನೆಯಲ್ಲೂ, ವಚನ, ಪ್ರಗತಿಶೀಲ ಮೊದಲಾದ ಸಾಹಿತ್ಯಕ ಚಳವಳಿಯಲ್ಲೂ ತನ್ನ ಪರಂಪರೆಯನ್ನು ಗುರುತಿಸಿಕೊಳ್ಳುತ್ತದೆ. ಅದೇ ಹೊತ್ತಿಗೆ ಯಾವ ಭಯ ಭಕ್ತಿಗೂ ಪಕ್ಕಾಗದೆ ಅದರ ಮಿತಿಯನ್ನು ಗುರುತಿಸುತ್ತದೆ.

ಬಂಡಾಯಕ್ಕೆ ಹತ್ತಿರವಾದ ಸಾಹಿತ್ಯಕ - ಚಳುವಳಿಯೆಂದರೆ 'ಪ್ರಗತಿಶೀಲ' ಚಳವಳಿ. "ಪ್ರಗತಿಶೀಲ ಚಳವಳಿ ಸಾಹಿತ್ಯವನ್ನು ಸಂಪ್ರದಾಯವಾದಿ ಪಟ್ಟಭದ್ರರ ಕೈಯಿಂದ ಪಾರುಮಾಡಿ, ಅದಕ್ಕೆ ಜೀವಶಕ್ತಿ ತುಂಬಿ, ಕ್ರಿಯಾಶೀಲವನ್ನಾಗಿ ಮಾಡುವುದೇ ಆಗಿದೆ."[1] ಅಂತಹವರಲ್ಲಿ ನಿರಂಜನ ನಿಖರವಾದ ಚಾರಿತ್ರಿಕ ಪ್ರಜ್ಞೆ ಯಿಂದ ಬರೆದವರು. ಬಸವರಾಜ ಕಟ್ಟೀಮನಿಯವರು ನಗರ ಕಾರ್ಮಿಕ ಹೋರಾಟದ ಕಡೆಗೆ ಮತ್ತು ನಿರಂಜನರು ರೈತ ಹೋರಾಟದ ಕಡೆಗೆ ಒತ್ತುಕೊಟ್ಟಂತೆ ಕಂಡರೂ "ಪ್ರಗತಿಶೀಲರಲ್ಲೆಲ್ಲ ಹೆಚ್ಚಿನ ಮಟ್ಟದ ವೈಚಾರಿಕ ಧೋರಣೆಯಲ್ಲಿ ಕ್ರೂರ ವಾಸ್ತವತೆ ಯನ್ನು ನೋಡುವುದರಿಂದ ಸಮಸ್ಯೆಯ ಇತರ ಚಹರೆಗಳೂ ನಿರಂಜನರಿಗೆ ಗೋಚರಿ ಸುವುದುಂಟು. ಸಮಾಜ ಮತ್ತು ದೇಶದಲ್ಲಿ ಹುಟ್ಟಿಕೊಳ್ಳುವ ಒಂದು ವ್ಯಕ್ತ್ಯತೀತ (impersonal) ಪರಿಸ್ಥಿತಿ ಅಥವಾ ವ್ಯಕ್ತಿಗೇ ವಿಶಿಷ್ಟವಾದ ಕೌಟುಂಬಿಕ, ಸಾಂಪ್ರ ದಾಯಿಕ ಆವರಣಗಳು, ಸಂಕೋಚಗಳು ಅಥವಾ ಅಸಹಾಯಕತೆಗೆ, ಪಾಡಿಗೆ ಕಾರಣ ವಾಗಬಹುದಾದುದನ್ನು ನಿರಂಜನರು ಗುರುತಿಸುತ್ತಾರೆ."[2] ಈ ಹಿನ್ನೆಲೆಯಲ್ಲಿ ನಿರಂಜನರ ಬಂಡಾಯದ ದನಿಯನ್ನು ಗುರುತಿಸುವ ಒಂದು ಪ್ರಯತ್ನವಿದು.

ಸಮಾಜವಾದಿ ಬದ್ಧತೆ ಶ್ರೇಷ್ಠ ಕಲಾಕೃತಿ ನಿರ್ಮಾಣಕ್ಕೆ ಮಾರಕವಾಗ ಬೇಕಿಲ್ಲ. ರಷ್ಯಾದ ಗಾರ್ಕಿ ಪಕ್ಷಕ್ಕೆ ಬದ್ಧನಾಗಿದ್ದೇ ಜಾಗತಿಕವಾಗಿ ಶ್ರೇಷ್ಠ ಕಾದಂಬರಿ ಯೆನಿಸಿದ 'ತಾಯಿ'ಯನ್ನು ಬರೆದ. ನಿರಂಜನರು ಪಕ್ಷಕ್ಕೆ ರಾಜಿನಾಮೆ ಇತ್ತು, ಆದರಿಂದಾಚೆಗೆ 'ವಿಮೋಚನೆ'ಯಿಂದ ಕಾದಂಬರಿ ರಚನೆಗೆ ತೊಡಗಿದರು. ೧೯೫೫ರಲ್ಲಿ 'ಚಿರಸ್ಮರಣೆ' ಬರೆದರು.

'ಚಿರಸ್ಮರಣೆ' ಯಾವ ಅಳತೆಗೋಲಿನಿಂದ ಅಳೆದರೂ ಶ್ರೇಷ್ಠ ಕೃತಿ ಎನ್ನುವು ದರಲ್ಲಿ ಸಂದೇಹವಿಲ್ಲ. ಇಲ್ಲಿಯ ವಸ್ತು ವಾಸ್ತವಿಕ. ನಿರಂಜನರೇ ಅದರ ಮುನ್ನುಡಿ ಯಲ್ಲಿ, "ನಾನು ಮಾಡಿದ್ದು ಕಯ್ಯೂರಿನ ಹೋರಾಟದ ಅಂತಸ್ಸತ್ವವನ್ನು - ಚೇತನ ವನ್ನು - ಕಲೆಯಲ್ಲಿ ಸೆರೆಹಿಡಿಯುವ ಯತ್ನ.... ಚಿರಸ್ಮರಣೆಯ ಅನೇಕ ಪಾತ್ರಗಳು ನಿಜ - ಜೀವನದಿಂದಲೇ ಕಾದಂಬರಿಯ ಪುಟಗಳಿಗೆ ನಡೆದುಬಂದಿವೆ" ಎಂದಿದ್ದಾರೆ. ವಾಸ್ತವವಾದಿ ಸಮಾಜವಾದಿ ಲೇಖಕನ ಮುಖ್ಯ ಹೊಣೆ ಇದು. ಆತ ವಾಸ್ತವತೆಗೆ ದ್ರೋಹ ಬಗೆಯಲಾಗದು. ಆತನಿಗೊಂದು ಆಶಯವಿದೆ - ಅದು ಜನಪರವಾದ ಬಂಡಾಯದ ನಿಲುವು. ಅದಕ್ಕೆ ಕಲಾತ್ಮಕವಾದ, ಚಾರಿತ್ರಿಕವಾದ ದೃಷ್ಟಿಕೋನ ದಿಂದ ಅಭಿವ್ಯಕ್ತಿ ಸ್ಫುಟಗೊಳ್ಳಬೇಕು - ಅಂತಹ ಕೃತಿ 'ಚಿರಸ್ಮರಣೆ'.

'ಚಿರಸ್ಮರಣೆ' ವರ್ಗಹೋರಾಟದ ಜೀವಂತ ಜ್ವಲಂತ ಉದಾಹರಣೆ. ಇಲ್ಲಿ ಸ್ಪಷ್ಟವಾಗಿ ರೂಪುಗೊಂಡದ್ದು ಭೂಮಾಲಕ ಹಾಗೂ ಜೀತಗಾರರ ಜೀವನಕ್ರಮ.

ಒಂದು ಕಡೆ ಜಮೀನುದಾರರಾದ ನಂಬೂದಿರಿ, ನಂಬಿಯಾರರ ದೌರ್ಜನ್ಯ ಉಳಿದವರನ್ನೆಲ್ಲ ಭೂರಹಿತರನ್ನಾಗಿ ಜೀತದವರನ್ನಾಗಿ ಮಾಡುತ್ತಿರುವಂತೆ, ಭೂರಹಿತರು ತಮ್ಮ ಸಮಾನತೆಯನ್ನು ಗುರುತಿಸಿಕೊಳ್ಳುತ್ತ ಒಂದು ಹೋರಾಟದ ನೆಲೆಗೆ ತಲುಪುತ್ತಾರೆ.

ಬಂಡಾಯ ಚಾರಿತ್ರಿಕವೇ ಆಗಿದ್ದರೂ ಕೇವಲ ಸಾಂದರ್ಭಿಕ, ವೈಯಕ್ತಿಕವಾದಾಗ ಅದು ಗಂಭೀರವಾಗುವುದಿಲ್ಲ; ಅದು ಚಿರಸ್ಮರಣೆಯೂ ಆಗುವುದಿಲ್ಲ. ಬದಲಾಗಿ ಪ್ರಜ್ಞಾಪೂರ್ವಕವಾದ ಒಗ್ಗಟ್ಟು, ಬೆಳವಣಿಗೆ ಮತ್ತು ಹೋರಾಟದಿಂದ ಚಾರಿತ್ರಿಕವಾಗುತ್ತದೆ; ಉಜ್ವಲವಾಗುತ್ತದೆ. 'ಚಿರಸ್ಮರಣೆ'ಯಲ್ಲಿ ನಡೆಯುವುದು ಹೀಗೆ. ಕಯ್ಯೂರಿನ ರೈತಸಮುದಾಯ ಜಮೀನುದಾರರ ದೌರ್ಜನ್ಯಕ್ಕೆ, ಅಮಾನುಷ ತುಳಿತಕ್ಕೆ ಗುರಿಯಾಗುತ್ತಿದ್ದಂತೆ 'ಮಾಸ್ತರ'ರ ಹೋರಾಟದ ಸಂದೇಶ, ಮಣ್ಣಿನೊಳಗಿನ ಬೀಜಕ್ಕೆ ಮಳೆಯ ಸೇಚನವಾಗುತ್ತದೆ. ಈ ಬೀಜದ ಸ್ವಾಭಾವಿಕ ಮೊಳಕೆಯೇ 'ಚಿರುಕಂಡ'. ಇವರೆಲ್ಲ ಸಮಾಜದಿಂದ ಪ್ರತ್ಯೇಕವಾಗಿರದೆ ಇಡೀ ಸಮಾಜದ ಆಶಯದ ಹೊಸಕನಸಿನ ಮೂರ್ತಸ್ವರೂಪವಾಗುತ್ತಾರೆ. "ಪ್ರತಿಯೊಂದೂ ಹಾಗೆಯೇ - ಬೀಜ ಮೊಳೆತು ಗಿಡವಾಗಿ ಮರವಾಗಿ ಫಲ ಬಿಡೋದಕ್ಕೆ ಸಮಯ ಬೇಕು. ತಾಳ್ಮೆಯಿಂದ ನಾವು ಕಾಯುತ್ತ ದುಡೀಬೇಕು. ಪ್ರತಿಯೊಂದೂ ಹಾಗೆಯೇ"- ಎಂದು ಮಾಸ್ತರು ಹೇಳುವ ಮಾತು ಬಂಡಾಯಕ್ಕೆ ಭಾಷ್ಯವಾಗಿದೆ.

ಕಯ್ಯೂರಿನಲ್ಲಿ ರಾತ್ರಿಶಾಲೆ ಶುರುವಾಯಿತು. ಪತ್ರಿಕೆ ಓದುವುದು, ಅಕ್ಷರ ಕಲಿಯುವುದೇ ಮೊದಲಾಯಿತು. ಅಕ್ಷರ ಜ್ಞಾನ ಸಂಘಟನೆಗೆ, ಕ್ರಾಂತಿಗೆ ಮೂಲವಾಗುತ್ತದೆ. "........ಪತ್ರಿಕೆ ಪುಸ್ತಕ ಎರಡೂ ಓದಬೇಕು. ಓದಿದಷ್ಟೂ ಜ್ಞಾನ ಹೆಚ್ಚಾಗುತ್ತದೆ........ ಮೊದಮೊದಲು ಗುಪ್ತವಾಗಿಯೇ ಪ್ರಚಾರ. ಹೆಚ್ಚು ರೈತ ಬೆಂಬಲ ಪಡೆದ ಮೇಲೆ ಬಹಿರಂಗವಾಗಿ ರೈತ ಸಂಘದ ಸ್ಥಾಪನೆ. ಜನಜಾಗೃತಿಯನ್ನುಂಟುಮಾಡುವುದು; ರಾಜಕೀಯ ಜ್ಞಾನ ಪಡೆಯುವುದು." ಮಾಸ್ತರು ಹೇಳುವ ಕ್ರಾಂತಿಯ ಬೀಜವಿದು. ಅಪ್ಪು, ಚಿರುಕಂಡ ಅವರಿಗೆ ತಕ್ಕ ಶಿಷ್ಯರು; ಕ್ರಾಂತಿಯ ವಾಹಕರು.

ಕ್ರಾಂತಿಯ ಕಿಡಿ ಸ್ಥಳೀಕವಾದುದಲ್ಲ. ಅದಕ್ಕೆ ಹೊರಗಿನ ಸಂಪರ್ಕದ ಗಾಳಿ ಬೀಸಿದಾಗ ಭುಗಿಲೆನ್ನುತ್ತದೆ. ಪಂಡಿತರು ಅಂತಹ ಗಾಳಿ ಒದಗಿಸುತ್ತಾರೆ.

ಕಯ್ಯೂರಲ್ಲಿ'ರೈತ ಸಂಘಟನೆ'ಯಾಗುತ್ತಿದ್ದಂತೆ ಜಮೀನುದಾರರ ಕ್ರೌರ್ಯವೂ ಹೆಚ್ಚುತ್ತದೆ. ಆದರೆ ರೈತರು ಬರಿಗೈ ಬಂಟರು, ಹಿಂಸಾಪ್ರಿಯರಲ್ಲ. ಅವರ ಶಕ್ತಿ ಅಡಗಿರುವುದು ಸಂಘಟನೆಯಲ್ಲಿ. ಅಂತಹ ಸಂಘಟನೆ ಜಮೀನುದಾರರಾದ ನಂಬಿಯಾರರ

ಎದೆ ಆಲುಗಿಸುತ್ತದೆ. ಆದರೆ ಸರಕಾರ ಅವರ ಪರ ಇದೆ, ಅವರ ಕೈಯಲ್ಲಿ ಪೊಲೀಸು ಲಾಠಿ, ಬಂದೂಕುಗಳಿವೆ, ಅದು ಕೈಕಟ್ಟಿ ಕೂಡ್ರುವುದಿಲ್ಲ, ಅದು ದುಡಿಸುವವರ ವರ್ಗ ಸ್ವಭಾವ. ರೈತನಾದ 'ಕೋರ' ವಿಧವೆ ದೇವಕಿಯನ್ನು ಪ್ರೀತಿಸಿ, ಮದುವೆಯಾಗಿ ಆವಳಿಗೊಂದು ನೆಲೆಯನ್ನು ಕೊಟ್ಟರೆ, ರೈತರನ್ನು ಹತ್ತಿಕ್ಕುವುದಕ್ಕಾಗಿ ಬಂದ ಪೊಲೀಸ ಕ್ಯಾಪ್ಟನ್‌ನಿಗೆ ಜಮೀನುದಾರ ತನ್ನ ಅಂತಃಪುರದಲ್ಲಿ ಪಾಲುಕೊಡಬೇಕಾಗುತ್ತದೆ. ಈ ದುಡಿಸುವ ವರ್ಗದ ಅಶ್ಲೀಲ ಸ್ವಭಾವವನ್ನು 'ವಿಮೋಚನೆ'ಯ ಶ್ರೀಕಂಠ ಮತ್ತು ಶಾರದೆಯ ವ್ಯವಹಾರದಲ್ಲೂ, 'ಮೃತ್ಯುಂಜಯ'ದ ಪುರೋಹಿತರ ಲಂಪಟತನದಲ್ಲೂ ಯಥಾವತ್ತಾಗಿ ಕಾಣಬಹುದಾಗಿದೆ.

ದೇಶದ ಸಂಪತ್ತಿನ ಉತ್ಪಾದಕರು ರೈತರು, ಕಾರ್ಮಿಕರು. ಆದರೆ ದೇಶದ ರಕ್ಷಕರು - ಪೊಲೀಸರು, ಸೈನಿಕರು ತಾನೇ? ಅವರೂ ದುಡಿಯುವ ವರ್ಗದ ಸ್ನೇಹಿತರೇ! ಕಯ್ಯೂರಿನಲ್ಲಿ ಸೈನ್ಯಕ್ಕೆ ಸೇರಲು ಕರೆಬಂದಾಗ ಸೇರಿದವರು ರೈತ ಮಕ್ಕಳು; 'ಕಲ್ಯಾಣಸ್ವಾಮಿ'ಯಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆಗೆ ಕೈ ಎತ್ತಿದವರು ರೈತರು; 'ಮೃತ್ಯುಂಜಯ'ದಲ್ಲಿ ಬಂಡಾಯದ ಕತ್ತಿ ಎತ್ತಿದವರು ರೈತರು; ಇದು ನಿರಂಜನರ ಬಂಡಾಯದ ವೈಚಾರಿಕತೆ ಕೂಡ.

ಚಿರುಕಂಡನೇ ಮೊದಲಾದವರನ್ನು ಬಂಧಿಸಿ ಬಂಡಿಯಲ್ಲಿ ತುಂಬಿಕೊಂಡು ಹೋಗುವಾಗ, ಪತ್ರಿಕೆ ಓದುವ ಆಸೆಯಾದ ಸೆರೆಯಾಳುಗಳಿಗೆ ಪೊಲೀಸನೊಬ್ಬ ಪತ್ರಿಕೆ ಕೊಟ್ಟಾಗ ಚಿರುಕಂಡನ ಮನಸ್ಸಿನಲ್ಲಿ ಸುಳಿಯುವ ಆಲೋಚನೆ, "....ಇದ್ದರೂ ಇರಬಾರದೇಕೆ? ಕಯ್ಯೂರಿನಿಂದ ಸೈನ್ಯ ಸೇರಿದವರಲ್ಲೇ ನಮ್ಮವರಿಲ್ಲವೆ?.... ಹೆಚ್ಚಿನ ಪೊಲೀಸರೆಲ್ಲ ರೈತ ಮಕ್ಕಳೇ ಎನ್ನುವುದು ಗಮನಾರ್ಹ..... ಆದರೆ ಅವರು ಜನರನ್ನು ಸೇರುವುದು ಕೊನೆಯದಾಗಿ - ಕ್ರಾಂತಿಯ ವಿಜಯ ಸನ್ನಿಹಿತವಾಗುತ್ತ ಬಂದಂತೆ ಪೊಲೀಸರು, ಮಿಲಿಟರಿ ಎಲ್ಲಾ ಜನರ ಪಕ್ಷವನ್ನು ಸೇರುವರು."

ಸುಬ್ಬಯ್ಯನೆಂಬ ಪೊಲೀಸು ಸತ್ತ ನೆಪವನ್ನೇ ಮುಂದುಮಾಡಿ ಜಮೀನುದಾರ ಸರಕಾರದ ಸಹಾಯ ಪಡೆದ. ಸರಕಾರ ಕಯ್ಯೂರಿನ ರೈತ ಸಂಘವನ್ನು ಹಾಳುಗೆಡವಿತು. ಪೊಲೀಸರು ಹೆಂಗಸರನ್ನು ಅತಿಕ್ರಮಿಸಿದರು. ಇಡೀ ಊರಿನ ರೈತರನ್ನು ಸೆರೆಯಾಳುಗಳನ್ನಾಗಿಸಿದರು. ಮುಖ್ಯವಾಗಿ ಚಿರುಕಂಡ, ಅಪ್ಪು, ಅಬೂಬಕರ್‌ರಿಗೆ ಮರಣದಂಡನೆ ವಿಧಿಸಲಾಯಿತು.

ರೈತವರ್ಗ - ದುಡಿಯುವ ವರ್ಗ - ಒಂದು. ಆದಕ್ಕೆ ಧರ್ಮ ಭೇದವಿಲ್ಲ. ಬಂಡಾಯ ಒಂದು ಚಾರಿತ್ರಿಕ ಅಭಿವ್ಯಕ್ತಿಯಾದಾಗ, ಬಂಡಾಯ ಒಂದು ತತ್ತ್ವವಾಗಿ

ಸಾಮಾಜಿಕ ಪ್ರೇರಣ ಶಕ್ತಿಯಾದಾಗ ಅದು ಭೌತಿಕವಾಗುತ್ತದೆ. ಆಗ ಅದಕ್ಕೆ ಜೀವನವನ್ನು ಪಣವೊಡ್ಡಿದ್ದಕ್ಕಾಗಿ ಜನ ಅಭಿಮಾನ ಪಡುತ್ತದೆಯೇ ಹೊರತು ಪಶ್ಚಾತ್ತಾಪ ಪಡುವುದಿಲ್ಲ; ನಾಚಿಕೆ ಪಡುವುದಿಲ್ಲ. ಅದರಲ್ಲೂ ನೇತಾರರ ಗಾಂಭೀರ್ಯ ಬಂಡಾಯವನ್ನು ಪವಿತ್ರಗೊಳಿಸುತ್ತದೆ. ಕಯ್ಯೂರಿನಲ್ಲಿ ಆದದ್ದು ಹಾಗೆ. ಚರಿತ್ರೆಯ ಕುರಿತು ನಿರ್ಣಯ ಕೊಡುವವನು ಮತ್ತು ಅದನ್ನು ಚರಿತ್ರೆಯ ಪುಟಗಳಲ್ಲಿ ಅಚ್ಚಾಗಿಸುವವನು ಬಂಡಾಯಪರನಾಗಬೇಕಾಗುತ್ತದೆ. ಮಾತ್ರವಲ್ಲ ಸಮರ್ಪಕವಾದ ದಸ್ತಾವೇಜನ್ನು ಒದಗಿಸಬೇಕಾಗುತ್ತದೆ. ಅಂತಹ ಒಂದು ಶಿಖರಕೃತಿ 'ಚಿರಸ್ಮರಣೆ'.

ಹೋರಾಟ ಜಾಗತಿಕವಾಗಬೇಕು - ಅದರ ಲಕ್ಷಣವೇ ಜಾಗತಿಕವಾದುದು. ಅದರ ಜಾಗತಿಕ ಲಕ್ಷಣಗಳ ಸಂದರ್ಭ - ಸ್ವರೂಪವನ್ನು ಸಮಾಜವಾದಿ ವಾಸ್ತವವಾದಿ ಲೇಖಕ ದಾಖಲಿಸುತ್ತಾನೆ. ಕೇವಲ ದಾಖಲಿಸುವುದಲ್ಲ, ಪ್ರಭಾವಿತಗೊಳಿಸುತ್ತಾನೆ. ಆ ಪ್ರಭಾವದ ಪರಿಣಾಮ ತಾತ್ವಿಕ ಶಕ್ತಿಯಾದಾಗ ಭೌತಿಕ ಶಕ್ತಿಯಾಗುತ್ತದೆ. ಈ ಭೌತಿಕ ಶಕ್ತಿ ವರ್ಗಸ್ವಭಾವವುಳ್ಳದ್ದು. ಅದು ಬಂಡಾಯದ ಬೆಳವಣಿಗೆಯಾಗುತ್ತದೆ. ಹೀಗೆ ಒಬ್ಬ ಕಲಾಗಾರ ಬಂಡಾಯಗಾರನಾಗುತ್ತಾನೆ. ಅಂತಹ ಒಬ್ಬ ಚಿರಬಂಡಾಯಗಾರ 'ಮೃತ್ಯುಂಜಯ'ದಲ್ಲಿದ್ದಾನೆ. ಈಜಿಪ್ತದ ಪ್ರಾಗೈತಿಹಾಸಿಕ ಸಂಗತಿ ಇಲ್ಲಿದೆ. ವರ್ಗಭೇದವಿರುವ ಸಮಾಜದಲ್ಲಿ ನಾವು ಕಾಣುವುದೇನು? "ಜೀವ ತೇದು ದುಡಿವ ಜನಕ್ಕೆ ಅರೆಹೊಟ್ಟೆ, ಚಾಟಿ ಏಟು; ಕೊಬ್ಬಿದ ಭೂಮಾಲಕರಿಗೆ ಅರಮನೆ, ಪಲ್ಲಕ್ಕಿ! ದರಿದ್ರರ ಶವಗಳ ಮೇಲೆ ತುಣುಕು ಬಟ್ಟೆಯೂ ಇಲ್ಲ. ಆದರೆ ಮಂದಿರದ ಸೋಮಾರಿ ಬೆಕ್ಕು ಸತ್ತಾಗ ಅದಕ್ಕೆ ಶವಲೇಪನ! ಅರ್ಚಕ ವರ್ಗದ ಕಾಮತೃಷೆಗೆ ದೇವಸೇವಕಿಯರ ಬಲಿ; ಮುದ್ದುಮಕ್ಕಳ ತಾಯಂದಿರಾಗಬೇಕಾದ ಹೆಂಗಳೆಯರಿಗೆ ಮಂದಿರದ ಪವಿತ್ರ ಗೂಳಿ, ಪವಿತ್ರ ಟಗರುಗಳ ಜತೆ ಕಡ್ಡಾಯ ಸಂಭೋಗ!" ಇದು 'ಮೃತ್ಯುಂಜಯ'ದ ನಾಯಕ ತನ್ನ ವಿಚಾರಣಾ ನಾಟಕದಲ್ಲಿ ಸಿಡಿಯುವ ಮಾತು. ಆತ ಮುಂದೂ ಹೇಳುತ್ತಾನೆ, "ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ....ಸಮಾಜವನ್ನು ಬಿಗಿಯಾಗಿ ಹಿಡಿದಿರುವ ಶಕ್ತಿಗಳು ಮೂರು - ಸಮೀಪದಿಂದ ಭೂಮಾಲಕಗಣ, ದೂರದಿಂದ ಪೆರೋ (ರಾಜ) ಮತ್ತು ಮಹಾಅರ್ಚಕ (ಪುರೋಹಿತ)". ಇದು ಬಂಡಾಯಕ್ಕೆ ಬಂಡವಾಳ ಒದಗಿಸುತ್ತದೆ. ಹಾಗಾದರೆ ಬಂಡಾಯದ ಕನಸಾದರೂ ಏನು? "ಹೊಸವ್ಯವಸ್ಥೆಯಲ್ಲಿ ದಾಸರಿಲ್ಲ, ದಾಸಿಯರಿಲ್ಲ. ಎಲ್ಲರೂ ಮುಕ್ತರು, ವಿಮುಕ್ತ ದುಡಿಮೆಗಾರರು." ಅಲ್ಲಿ ಪೌರೋಹಿತ್ಯ, ಆಡಳಿತ ಹೇಗೆ ಶ್ರೇಷ್ಠವೋ ಹಾಗೆಯೇ ಗದ್ದೆ ಹೂಡುವುದು, ದೋಣಿತೆಗೆಯುವುದೂ ಶ್ರೇಷ್ಠ.

ಇಂತಹ ವ್ಯವಸ್ಥೆಯನ್ನು ಜನ ತರಬಲ್ಲರು. ಯಾಕೆಂದರೆ, "ಜನ ಹುಲ್ಲಿನ ಬಣವೆ ಇದ್ದ ಹಾಗೆ. ಮೆತ್ತಗಿದ್ದರೆ ಎತ್ತು, ದನಕರುಗಳಿಗೆ ಆಹಾರ, ಒಣಗಿದವೆ ಮತಿಗೆಟ್ಟ ಒಬ್ಬನ ಒಂದು ಕೊಳ್ಳಿ ಸಾಕು. ಬೆಂಕಿ - ಬೂದಿ."

ನೀರಾನೆ ಪ್ರಾಂತದ ರೈತರು ತಮ್ಮ ಮೇಲಾದ ಅನ್ಯಾಯಕ್ಕೆ ಬಂಡೆದ್ದರು. ಮೆನೆಪ್‌ಟಾ ಅವರಲ್ಲೇ ಮೂಡಿಬಂದ ಧೀಮಂತ ನಾಯಕನಾದ. ರೈತರಿಗೆ ಸಹಜವಾದ ಪ್ರಾಮಾಣಿಕತೆ, ದೃಢತೆ, ಅಹಿಂಸಾಪರತೆ ಅವನಲ್ಲಿದೆ. ಒಂದು ಹಂತದಲ್ಲಿ ಸೆರೆಯಿಂದ ತಪ್ಪಿಸಿಕೊಳ್ಳಬಹುದಾದ ಈತ ಅದಕ್ಕೆ ಮನಸ್ಸು ಮಾಡುವುದಿಲ್ಲ. ಜಮೀನುದಾರರು, ಪುರೋಹಿತರು ರಾಜನನ್ನು ನಿಷ್ಕ್ರಿಯಗೊಳಿಸುತ್ತಾರೆ. ಯಾವ ದೇಶವಾದರೇನು ? ರಾಜ ಪ್ರಭುತ್ವದಲ್ಲಿ ಪುರೋಹಿತಶಾಹಿಯದೇ ವಿಲಾಸ. ಯಾಕೆಂದರೆ ಅಕ್ಷರಗಳನ್ನು ಸೆರೆಯಲ್ಲಿಟ್ಟು, ಧರ್ಮದೇವರ ಗುತ್ತೇದಾರರಾಗಿ ನಲಿಯುವುದೇ ಪುರೋಹಿತಶಾಹಿ. ಕಾಣಲು ಬೇರೆ ಬೇರೆಯಾಗಿದ್ದರೂ ಆಳುವುದು ಪುರೋಹಿತಶಾಹಿಯೇ. ಮೆನೆಪ್‌ಟಾನ ಮಗ ರಾಮೇರಿ ಲಿಪಿ ಸುರುಳಿಯನ್ನು ಕೊಂಡಾಗ ಅಂದುಕೊಳ್ಳುವ ಮಾತು, “ಅಸಾಧಾರಣ ಘಟನೆ, ಆ ದುಡಿಯುವ ಕುಟುಂಬಗಳು ಎಂದೂ ಯಾವ ತಲೆಮಾರಿನಲ್ಲೂ ಲಿಪಿ ಸುರುಳಿಯನ್ನು ಮುಟ್ಟಿರಲಿಲ್ಲ.” ಆದ್ದರಿಂದ “ಅರಮನೆ-ಗುರುಮನೆ ವಿರಸ ರಾಜವಂಶಕ್ಕೂ ಗಂಡಾಂತರಕಾರಿ” ಎಂಬುದು ಸಿದ್ಧಾಂತ. ಇವರೆಲ್ಲ ಕೂಡಿ ನಿಜರೈತ ಬಂಡಾಯವನ್ನು ಸದೆಬಡಿಯುತ್ತಾರೆ. ನಾಯಕನಿಗೆ ಶಿರಚ್ಛೇದನ ಶಿಕ್ಷೆ. ಆದರೆ ಕೃತಿಯ ಭರತವಾಕ್ಯ, “ಕತ್ತಲಾದ ಮೇಲೆ ಬೆಳಕು ಹರೀತದೆ. ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ, ನೆನಪಿಡಿ.”

‘ವಿಮೋಚನೆ’ ನಿರಂಜನರ ಇನ್ನೊಂದು ಮುಖ್ಯ ಕೃತಿ. ಸಂದರ್ಭದ ಅಡಕೊತ್ತಿನಲ್ಲಿ ಸಿಕ್ಕ ಚಂದ್ರು ಸೆರೆಮನೆಯಲ್ಲಿ ಬರೆಯುವ ಡೈರಿ ಸುರುಳಿಸುತ್ತು ಬಿಚ್ಚಿಕೊಳ್ಳುವುದೇ ಇಲ್ಲಿ ಕಾದಂಬರಿ. ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಕರಾಳ ಕರಾಮತ್ತನ್ನು ಬಯಲಿಗೆಳೆವ ಈ ಕೃತಿಯಲ್ಲಿ ಪರಿಸರದ ಫಲಿತ ವ್ಯಕ್ತಿಯಾಗಿ ಬೆಳೆಯುವ ಚಂದ್ರು ದೃಶ್ಯ ನಿವೇದಕ. ಅವನ ಜೀವನದ ಸುತ್ತಲೂ ಹೆಣೆದುಕೊಳ್ಳುವ ಶೋಷಣಾಮಯ ಜಗತ್ತು - ವಿವಿಧ ಮಜಲಿನಲ್ಲಿ ವಿವಿಧ ವರ್ಗಗಳ ದರ್ಶನ ಮಾಡಿಸುತ್ತದೆ. ತೀರದ ಬಡತನ, ಅಸ್ಥಿರವಾದ ಬದುಕು, ಅವುಗಳ ಮಧ್ಯೆ ಇರುವ ಸಂಕಟದೊಡನೆಯೇ ಅಲ್ಲಲ್ಲಿ ಅರಳಿಕೊಳ್ಳುವ ಆತ್ಮೀಯತೆ, ಸ್ನೇಹ ಒಂದೆಡೆಯಾದರೆ ಬಂಡವಾಳಶಾಹಿಗಳ ಬದುಕಿನ ಒಳನರಕದರ್ಶನವೂ ಇನ್ನೊಂದು ಕಡೆ ಇದೆ. ಕಥಾನಾಯಕ ಚಂದ್ರು ತನ್ನ ವರ್ಗವಲ್ಲದ ಗೆಳೆಯ ಶ್ರೀಕಂಠನಲ್ಲಿ ಇರುವುದಾದರೂ ಒಲವು - ನಿಲುವುಗಳೆಲ್ಲ ಕಾರ್ಖಾನೆಯ ಕಾರ್ಮಿಕ ನಾಣಿಯ ಜೊತೆಗೆ. ಶ್ರೀಕಂಠ, ನಾಣಿ ಸಹಪಾಠಿಗಳೇ ಆಗಿದ್ದರೂ ವರ್ಗಭೇದದಿಂದಾಗಿ ಶ್ರೀಕಂಠ - ನಾಣಿ ಮುಖಾಮುಖಿಯಾಗುವುದು ವರ್ಗವೈದೃಶ್ಯಕ್ಕೆ ಸಾಕ್ಷಿಯಾಗಿದೆ.

ಹಣದ ಹಿಂದೆ ಬಿದ್ದ ಸೈತಾನ ಬಂಡವಾಳಶಾಹಿ ತನ್ನ ಒಳಬದುಕಿನಲ್ಲಿ ಅಶ್ಲೀಲವೂ, ನೆಮ್ಮದಿರಹಿತವೂ ಆಗಿರುವ ವಾಸ್ತವ ಎಳೆಎಳೆಯಾಗಿ ಶ್ರೀಕಂಠ -

ಶಾರದೆಯರ ದಾಂಪತ್ಯದಲ್ಲಿ ಮೂಡಿದೆ. ಮಾಲಿಕರು ಎಷ್ಟೇ ಕಠಿಣರಾಗಿದ್ದರೂ ಕಾರ್ಮಿಕರ ಒಗ್ಗಟ್ಟು ಕಾರ್ಮಿಕ ಮುಂದಾಳು ನಾಣಿಯಂಥವರಲ್ಲಿ ಚಿಮ್ಮುವ ಕೆಚ್ಚು ಬಂಡವಾಳಶಾಹಿಯನ್ನು ಅಲುಗಿಸಿಬಿಡುವಷ್ಟು ಶಕ್ತಿಯುತವಾದುದನ್ನು ಇಲ್ಲಿ ಕಾಣು ತ್ತೇವೆ. ಕಾರ್ಮಿಕರನ್ನೆಲ್ಲ ಒಂದು ಎಳೆಯಲ್ಲಿ ಬಂಧಿಸುವುದು ದುಡಿಯುವ ವರ್ಗದ ವರ್ಗಸ್ವಭಾವವಾಗಿದೆ.

ನಮ್ಮ ಸಾಂಪ್ರದಾಯಿಕ ಸಮಾಜ ವ್ಯವಸ್ಥೆ ಹೇಗೆ ಮಹಿಳೆಯರನ್ನು ಶೋಷಿಸುತ್ತದೆ ಎನ್ನುವ ವಸ್ತು 'ಬನಶಂಕರಿ'ಯದು. ಎಳೆವರೆಯದಲ್ಲೇ ವಿಧವೆಯಾದ ಬನಶಂಕರಿ ಅನಾಥಳಾಗುತ್ತಾಳೆ. ಅಲ್ಲೇ ಬರುವ ಬನಶಂಕರಿಯ ಗೆಳತಿ ಸುಂದರಮ್ಮ ಅನ್ನುವ ಮಾತು - "ನಮ್ಗೂ ವಿದ್ಯಾಭ್ಯಾಸ ಇದ್ದಿದ್ರೆ, ನಾವೂ ಸಂಪಾದ್ನೆಮಾಡಿ, ಯಾರ ಹಂಗೂ ಇಲ್ದೆ ಇರೋ ಸ್ಥಿತಿ ಇದ್ದಿದ್ರೆ?" ಹೆಂಗಸಿನ ದುಡಿಮೆ ಹಣವಾಗುವ ವ್ಯವಸ್ಥೆಯ ಆವಶ್ಯಕತೆಯನ್ನು ಸಾರುತ್ತಿದೆ.

ಜಾತಿ ನಿರಂಜನರ ಕೃತಿಯಲ್ಲಿ ಹೆಚ್ಚು ತಲೆಹಾಕುವುದಿಲ್ಲ. ಹಾಗೆಂದರೆ, ಅವರಿಗೆ ಆ ಅನುಭವ ಸಾಹಿತ್ಯದ ಉಪಯೋಗಕ್ಕೆ ತಕ್ಕದ್ದೆನಿಸಲಿಲ್ಲ ಎಂದೇನೂ ಅಲ್ಲ. ಬನಶಂಕರಿ ಸಂಪ್ರದಾಯದಲ್ಲಿ ಬೆಳೆದವಳು. ಕಷ್ಟದಲ್ಲಿ ನರಳಿದರೂ ತನ್ನ ಎರಡನೇ ಗಂಡ ನಾರಾಯಣರಾಯ ಸತ್ತಾಗ ತಿರುಪತಿಗೆ ಹೋಗಿ ಬೋಳು ಕೆತ್ತಿಸಿಕೊಂಡು ಬಿಡುತ್ತಾಳೆ! ಆದರೆ ಅವಳ ಮನಸ್ಸು ಅನುಭವದ ಮೂಸೆಯಲ್ಲಿ ಬೆಂದು ಹದವಾಗು ತ್ತದೆ. ಅವಳು ಕೊನೆಯಲ್ಲಿ, "ಮುದ್ದು ಮಕ್ಕಳು, ಪರಸ್ಪರ ಎಷ್ಟೊಂದು ಪ್ರೇಮ, ಅನುನಯ!.... ಜಾತಿ, ಜಾತಕ, ಧರ್ಮ, ಆಚಾರ ಅಂತ ಎಷ್ಟು ಬಡಕೊಂಡರೇನು? ತನ್ನ ಜೀವನದಲ್ಲೇ ಅದನ್ನೆಲ್ಲ ಅನುಸರಿಸಿ ಏನಾಯಿತು?" ಎಂದು ತನ್ನ ಜಾತಿಯವಳಲ್ಲದ ರಮೆಯನ್ನು ತನ್ನ ಮಗನಿಗೆ ಹೆಂಡತಿಯಾಗಿಸುವುದಾಗಿದೆ.

ಒಬ್ಬ ಬಂಡಾಯದೊಲವಿನ ಲೇಖಕ ತನ್ನ ಕೃತಿಯೊಳಗೆ ಕಡ್ಡಾಯವಾಗಿ ಪರಿಹಾರ ಸೂಚಿಸಲೇಬೇಕಾಗಿಲ್ಲ. ಒಂದು ಪರಿಸರವನ್ನು ತೆರೆದಿಡುವುದೇ ಆ ಕೆಲಸ ವನ್ನು ಮಾಡಬಹುದೆನ್ನುವುದಕ್ಕೆ 'ರಂಗಮ್ಮನ ವಠಾರ'ವನ್ನು ಗಮನಿಸಬೇಕು.

ಸಂಪ್ರದಾಯದ ಚೌಕಟ್ಟನ್ನು ಮೀರಿ ನಿಜವಾದ ಮಾನವೀಯತೆಯನ್ನು ಮಿಡಿಯುವ ಪಾತ್ರಗಳ ಮೂಲಕವೂ ನಿರಂಜನರು ತಮ್ಮ ಹೊಸ ಜಗತ್ತಿನ ಜನಪರ ಆಶಯವನ್ನು ಮೂಡಿಸುತ್ತಾರೆ. ನಿರಂಜನರ ಸಾಮಾನ್ಯ ಎನಿಸುವ ಕೃತಿಗಳಲ್ಲೂ ಚಾರಿತ್ರಿಕ ಭೌತವಾದದ ಎಳೆಯನ್ನು ಕಾಣಬಹುದು - 'ನೂರು ಜುಟ್ಟು ಮೂರು ಜಡೆ' (ಪುನರ್ಮುದ್ರಣದಲ್ಲಿ 'ನೋವು') ಕಾದಂಬರಿಯು ಬೃಹತ್ ಕೈಗಾರಿಕೆಗಳು

ಕೃಷಿಯನ್ನು ಪ್ಲೇಂಟೇಶನ್ನಿನ ಯಾಂತ್ರೀಕರಣಕ್ಕೊಳಪಡಿಸುವುದನ್ನೂ, ಕೌಟುಂಬಿಕ ವಿಘಟನೆ ನಡೆಯುತ್ತಿರುವುದನ್ನೂ ಚಿತ್ರಿಸುತ್ತದೆ.

ನಿರಂಜನರ ಐತಿಹಾಸಿಕ ಕಾದಂಬರಿಗಳ ಕುರಿತು ಬಂಡಾಯ ಲೇಖಕ ಬರೆಯದೇ ಇದ್ದರೆ ಅವರ ಕೃತಿಗಳ ಕುರಿತಾದ ಇಣುಕು ನೋಟವೂ ಪೂರ್ತಿಯಾಗುವುದಿಲ್ಲ. "ಇತಿಹಾಸದ ನಿರ್ಮಾತೃಗಳು ಜನರೇ ಎಂಬ ಸಾರ್ವಕಾಲಿಕ ಸತ್ಯವನ್ನು ಮರೆಯದೆ ಈ ಕಾದಂಬರಿಯನ್ನು ರಚಿಸಿದ್ದೇನೆ" ಎಂದು 'ಕಲ್ಯಾಣಸ್ವಾಮಿ'ಯ ಹಿನ್ನುಡಿಯಲ್ಲಿ ಹೇಳಿದ್ದಾರೆ. ಇದು ವಾಸ್ತವವಾದಿ ಸಮಾಜವಾದಿ ಲೇಖಕನಿಗಿರಬೇಕಾದ ಪ್ರಜ್ಞೆ. ಇದರಿಂದಾಗಿ "ನಾನಾ ಭಾಷೆಗಳು, ನಾನಾ ಜಾತಿಗಳ - ಲಿಂಗವಂತರು, ಕೊಡವರು, ಮಾಪಿಳ್ಳೆಯರು, ಕೊಂಕಣರು, ಬ್ರಾಹ್ಮಣರು - ಹೀಗಿದ್ದರೂ ನಾವೆಲ್ಲಾ ಒಂದೇ ಧ್ಯೇಯಕ್ಕಾಗಿ ಒಟ್ಟಾಗಿದ್ದೇವೆ" ಎಂದು ಅಲ್ಲೇ ಹೇಳಿಕೊಳ್ಳುವುದು ಸಾರ್ಥಕವಾಗುತ್ತದೆ.

ಇತಿಹಾಸ ರಾಜರಾಣಿಯರ ಚರಿತ್ರೆಯಲ್ಲ. ಬದಲಾಗಿ ಅದು ಜನಸಾಮಾನ್ಯರ ದುಡಿಮೆಯ, ಐಕ್ಯದ, ಹೋರಾಟದ ಬದುಕಿನ ಘಟ್ಟವಾಗಿದೆ. ಈ ದೃಷ್ಟಿಯಿಂದಲೇ ನಿರಂಜನ 'ಕಲ್ಯಾಣ ಸ್ವಾಮಿ', 'ಸ್ವಾಮಿ ಅಪರಂಪಾರ'ಗಳನ್ನು ರಚಿಸಿದ್ದಾರೆ. ಹೀಗೆ ನಿರಂಜನರ ಐತಿಹಾಸಿಕ ಕಾದಂಬರಿಗಳು 'ಗತಿತಾರ್ಕಿಕ'ವಾಗಿ ಜನಪರವಾದ ದೃಷ್ಟಿಕೋನದಿಂದಲೇ ರಚನೆಗೊಂಡಿವೆ.

ಬಂಡಾಯದ ಇಂದಿನ ಸಂದರ್ಭದಲ್ಲಿ ಪ್ರಗತಿಶೀಲರ ಕೃತಿಗಳು (ಉದಾ: ಬಸವರಾಜ ಕಟ್ಟೀಮನಿ) ಪುನರ್ಮೌಲ್ಯಮಾಪನಕ್ಕೆ ಒಳಪಡಬೇಕಾದುದು ಒಂದು ಚಾರಿತ್ರಿಕ ಆವಶ್ಯಕತೆ ಕೂಡ ಆಗಿದೆ. ಹಾಗೆಂದುಕೊಳ್ಳುವ ವಿಮರ್ಶಕನಿಗೆ ಗಕ್ಕನೆ ಸಿಕ್ಕುವ ಲೇಖಕ 'ನಿರಂಜನ'.

○

1. ಗೌರೀಶ ಕಾಯ್ಕಿಣಿಯವರು ನನಗೆ ಬರೆದ ಒಂದು ಖಾಸಗೀ ಪತ್ರದಲ್ಲಿ ಉಲ್ಲೇಖಿಸಿದ ಪ್ರಗತಿಶೀಲರ ಕಲ್ಕತ್ತಾ ಅಧಿವೇಶನದ ಪ್ರಣಾಳಿಕೆಯ ಮಾತು.
2. 'ಸಣ್ಣ ಕತೆಗಳು' - ಜಿ. ಎಚ್. ನಾಯಕ - ಮುನ್ನುಡಿಯಿಂದ ಉದ್ಧೃತ.

ನೋವು

–ಡಾ। ಶ್ರೀಕೃಷ್ಣ ಭಟ್ ಅರ್ತಿಕಜೆ

'ನೋವು' ಕಾದಂಬರಿ 'ನೂರು ಜುಟ್ಟು ಮೂರು ಜಡೆ' ಎಂಬ ಹೆಸರಿನಲ್ಲಿ ಎರಡು ಭಾಗಗಳಾಗಿ ೧೯೬೫ ಮತ್ತು ೧೯೬೬ರಲ್ಲಿ 'ಪ್ರಕಾಶ ಸಾಹಿತ್ಯ'ದವರ ಮೂಲಕ ಮೊದಲು ಬೆಳಕು ಕಂಡಿತು. ಬಳಿಕ ಅದು ನಿರಂಜನರ ಅಪೇಕ್ಷೆಯಂತೆ ಹೊಸ ಶೀರ್ಷಿಕೆ ಹೊತ್ತು 'ಕಥಾಸಾಹಿತ್ಯ'ದ ಮುಖಾಂತರ ೧೯೭೬ರಲ್ಲಿ ದ್ವಿತೀಯ ಮುದ್ರಣವಾಗಿ ಹೊರಬಂತು. ಇದರ ಕುರಿತು ಈ ವರೆಗೆ ಯಾವುದೇ ವಿಮರ್ಶಾ ಲೇಖನ ಪ್ರಕಟವಾದಂತಿಲ್ಲ.

ಘಟನೆಗಳೇ ಪ್ರಧಾನವಾಗಿರುವ ಈ ಕಾದಂಬರಿಯ ಕಥಾವಸ್ತುವಿನ ಹರಹು ಸಣ್ಣದು. ಅದಕ್ಕೆ ಹೆಚ್ಚಿನ ಬೆಳವಣಿಗೆಯೂ ಇಲ್ಲ. ಆದರೆ ಕೇವಲ ಕಥೆಯನ್ನು ಹೇಳುವುದು ಮಾತ್ರ ಲೇಖಕರ ಉದ್ದೇಶವಾಗಿರದೆ ಅದಕ್ಕಿಂತ ಹೆಚ್ಚಿನದಾದ ಗುರಿಯೊಂದನ್ನು ಅವರು ದೃಷ್ಟಿಯಲ್ಲಿಟ್ಟುಕೊಂಡಿದ್ದಂತೆ ತೋರುತ್ತದೆ. "ಸಾಮಾಜಿಕ ಸ್ಥಿತ್ಯಂತರವನ್ನು ಚಿತ್ರಿಸುವ ಈ ಕೃತಿಯಲ್ಲಿ ಬದಲಾವಣೆ ಉಂಟುಮಾಡುವ ನೋವು ಪ್ರಧಾನಸ್ಥಾನ ಪಡೆದಿದೆ" ಎನ್ನುವ ಪ್ರಕಾಶಕರ ನುಡಿಯಲ್ಲಿ ಈ ಅಂಶ ವ್ಯಕ್ತವಾಗಿದೆ.

ಆಧುನಿಕ ನಾಗರಿಕತೆಯ ಪ್ರಭಾವಕ್ಕೊಳಗಾಗಿ ಕಾದಂಬರಿಯ ಪ್ರಮುಖ ಕೇಂದ್ರವಾದ ಕಣಿವೇಹಳ್ಳಿಯು ಹಂತಹಂತವಾಗಿ ಪರಿವರ್ತನೆಗೊಂಡು ಪ್ರಗತಿಪಥದಲ್ಲಿ ಸಾಗುತ್ತದೆ. ಗೋವಿಂದ, ವಿಷ್ಣುಮೂರ್ತಿ, ಚಂದ್ರಶೇಖರ ಮುಂತಾದ ಪಾತ್ರಗಳ ಮೂಲಕ ಹಳ್ಳಿಯಲ್ಲಿ ಆಗಬೇಕಾಗಿರುವ ನೂತನ ವಾತಾವರಣ ಸೃಷ್ಟಿಗೆ ಪ್ರೋತ್ಸಾಹ ಸಿಗುತ್ತದೆ. ಅವರೆಲ್ಲ ನಾಗರಿಕತೆಯನ್ನು ಹೆಡೆಮುರಿ ಕಟ್ಟಿ ಕಣಿವೇಹಳ್ಳಿಗೆ ತರಲು ಪ್ರಯತ್ನಿಸುತ್ತಾರೆ. ಆದರೆ ಪರಂಪರೆಗೆ ಬಲವಾಗಿ ಅಂಟಿಕೊಂಡ ಸಂಪ್ರದಾಯಶರಣ ವ್ಯಕ್ತಿಗಳಿಗೆ ಈ ಪರಿವರ್ತನೆಗಳಿಂದ ಉಂಟಾಗುವ ನೋವಿನ ಸಹಜ ಚಿತ್ರಣವೂ, ಕೆಲವು ಆಕಸ್ಮಿಕ ಘಟನೆಗಳಿಂದ ಉಂಟಾಗುವ ಮಾನಸಿಕ ವೇದನೆಯ ವರ್ಣನೆಯೂ ಈ ಕಾದಂಬರಿಯಲ್ಲಿ ಮೂಡಿಬಂದಿರುವುದರಿಂದ 'ನೋವು' ಎಂಬ ಹೆಸರು ಸಾರ್ಥಕವಾಗಿದೆ.

ಕಾದಂಬರಿಯಲ್ಲಿ ಬರುವ ಮೊದಲ ಸನ್ನಿವೇಶ ಪಟೇಲ ಶಾಮೇಗೌಡರ ಮಗಳು ಸುಭದ್ರೆ ಹಾಗೂ ಬ್ರಾಹ್ಮಣ ಜಾತಿಯ ಶ್ರೀನಿವಾಸಯ್ಯನವರ ಮಗ ಪದ್ಮನಾಭರೊಳಗಿನ ಪ್ರೇಮ ವ್ಯವಹಾರ. ಗೌಡರ ಮಗ ರಂಗಣ್ಣ ಇದನ್ನು ಬಲವಾಗಿ

ವಿರೋಧಿಸುತ್ತಾನೆ. ಪದ್ಧತಿ - ಪರಂಪರೆಗಳಿಗೆ ವಿರೋಧವಾಗಿ ಸಮಾಜವನ್ನೆದುರಿಸಿ ಸುಭದ್ರೆಯನ್ನು ತನ್ನವಳಾಗಿ ಸ್ವೀಕರಿಸುವ ಧೈರ್ಯವಿಲ್ಲದ ಪದ್ಮನಾಭ ಕುಲಕ್ಕೆ ಕಳಂಕ ಬಂದೀತೆಂಬ ದೊಡ್ಡಮ್ಮನ ಎಚ್ಚರಿಕೆಯ ಮಾತಿಗೆ ಮಣಿದು ಅಂತರ್ಜಾತೀಯ ಮದುವೆಯ ಪ್ರಸ್ತಾಪವನ್ನೇ ಕೈಬಿಡುತ್ತಾನೆ.

ಹಳ್ಳಿಯ ಎಲ್ಲ ವ್ಯವಹಾರಗಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಲು ಸರ್ವಾಧಿಕಾರಿಯಂತೆ ವರ್ತಿಸುವ ಪಟೇಲ ಶಾಮೇಗೌಡರು ಗ್ರಾಮಕ್ಕೆ ಹೈಸ್ಕೂಲು, ಹೋಟೆಲು, ದಿನಸಿ ಅಂಗಡಿ ಇತ್ಯಾದಿಗಳು ಬರುವುದನ್ನು ವಿರೋಧಿಸುತ್ತಾರೆ. "ಒಂದು ಜೀವ ಹೋಯ್ತೂಂತ ಇನ್ನೊಂದು ಜೀವ ತೆಗೆಯೋದು ಮನುಷ್ಯ ಮಾಡಿದ ಕಾನೂನು. ಅದು ಸರಿಯಲ್ಲ" ಎಂದು ನಂಬಿದ್ದ ಅವರು ಮುನಿಯನ ಕೊಲೆ ಮಾಡಿದ ತಪ್ಪನ್ನು ಒಪ್ಪಿಕೊಂಡ ಅಬ್ದುಲ್ಲನನ್ನು ಕ್ಷಮಿಸಿ ಅವನಿಗೆ ರಕ್ಷಣೆ ನೀಡುತ್ತಾರೆ. ಕುಲ ಗೌರವದ ಬಗೆಗೆ ಬಹಳಷ್ಟು ಕಾಳಜಿ ಹೊಂದಿದ್ದ ಗೌಡರು ತರುಣರಾದ ಗೋವಿಂದ, ಪದ್ಮನಾಭರ ವ್ಯವಹಾರಗಳಿಂದ ಹಳ್ಳಿ ಕೆಟ್ಟು ಹೋಗುವುದೆಂದು ಭಾವಿಸುತ್ತಾರೆ.

ಗ್ರಾಮೋದ್ಧಾರದ ಸೋಗು ಹಾಕಿಕೊಂಡು ಸ್ವಾರ್ಥ ಸಾಧಿಸಲು ಹೆಣಗುವ ಪುಢಾರಿ ಗೋವಿಂದ 'ನೋವು' ಕಾದಂಬರಿಯ ಇನ್ನೊಂದು ಪ್ರಮುಖ ಪಾತ್ರ. ಆಧುನಿಕ ಸಂಗತಿಗಳನ್ನು ಅಂಗೈ ಅಡ್ಡಹಿಡಿದು ತಡೆಯೋದಕ್ಕೆ ಸಾಧ್ಯವಿಲ್ಲ ಎನ್ನುವ ಆತ 'ಸೊಸೈಟಿ, ನಗರ ಅಂತ ಮಾತಿನ ಗುಡ್ಡ ಕಡಿದೇ ದಿನ ತಳ್ಳುವವ.' ಹಳ್ಳಿಯಲ್ಲಿ ಏನಾದರೊಂದು ಕಿತಾಪತಿ ಎಬ್ಬಿಸುವ ಇವನನ್ನು ಗೌಡರು ಗುಳ್ಳೇನರಿಗೆ ಹೋಲಿಸುತ್ತಾರೆ. ಕೊನೆಗೆ ಗೋವಿಂದ ತನ್ನ ಪೂರ್ವಜರ ಆಸ್ತಿಯನ್ನೇ ಹಣದಾಸೆಯಿಂದ ಹರಿಭಾಯಿ ಸೇಠರಿಗೆ ಮಾರುವ ವ್ಯವಸ್ಥೆ ಮಾಡುತ್ತಾನೆ. ಇದರಿಂದ ಹಳ್ಳಿಗೆ ಸಕ್ಕರೆ ಕಾರ್ಖಾನೆ, ಹೌಸಿಂಗ್ ಕಾಲನಿ, ಸಿನಿಮಾ, ಪೇಟೆ, ಹೈಸ್ಕೂಲು, ಕಾಲೇಜು, ಆಸ್ಪತ್ರೆ, ಪೋಸ್ಟಾಫೀಸು, ತಂತಿ ಕಛೇರಿ, ಪೋಲೀಸ್‌ಪಡೆ - ಎಲ್ಲ ಬರುತ್ತದೆ; ಹಳ್ಳಿ ನಗರವಾಗುತ್ತದೆ. ಹಾಗಾದರೆ ಇದಕ್ಕೆಲ್ಲಾ ತಾನೇ ಕಾರಣನಾಗುತ್ತೇನೆ - ಎಂದು ತಿಳಿಯುತ್ತಾನೆ.

ಗೋವಿಂದ ಮತ್ತು ಅಧ್ಯಾಪಕ ಚಂದ್ರಶೇಖರರ ಸಂಭಾಷಣೆಗಳಲ್ಲಿ ಬರುವ -

"ಪಂಚಾಯತಿ ರಾಜ್ಯ ಬಂದ್ಮೇಲೆ ವಂಶಪಾರಂಪರ್ಯ ಹುದ್ದೆಗಳಿರೋದಿಲ್ಲ. ಎಲ್ಲಾ ಪ್ರಜಾಪ್ರಭುತ್ವ. ಪ್ರತಿಯೊಂದೂ ಡಿಸ್ಟ್ರಿಕ್ಟ್ ಬೋರ್ಡ್, ತಾಲ್ಲೋಕ್ ಬೋರ್ಡ್‌ಗಳ ಅಧೀನಕ್ಕೆ; ಅಧಿಕಾರದ ವಿಕೇಂದ್ರೀಕರಣ. ಹಳೇ ಪಾಳೆಯಗಾರ ವ್ಯವಸ್ಥೆಯೆಲ್ಲ ನಿರ್ನಾಮವಾಗುತ್ತೆ"

"ಆಗ್ಬೇಕು ಸಾರ್. ಎಲ್ಲ ನಿಂತ ನೀರಿನ ಹಾಗೆ ಕೆಟ್ಟಿದೆ. ಬರೇ ಬೇಜಾರು. ಬದಲಾವಣೆ ಆಗ್ದೇ ಇದ್ರೆ ದೇಶ ಸೊರಗಿ ಸತ್ಹೋಗುತ್ತೆ."

"ನಮ್ಮ ದೇಶ ಹತ್ತು ನಿಮಿಷ ಅಲ್ಲ; ಹತ್ತು ವರ್ಷ - ನೂರು ವರ್ಷ-ಹಿಂದಿದೆ!"

-ಎಂಬ ಮಾತುಗಳಲ್ಲಿ ಬದಲಾವಣೆಗಾಗಿ ತುಡಿಯುವ ಜನರ ದನಿಯನ್ನು ಲೇಖಕರು ಗುರುತಿಸಿದ್ದಾರೆ.

ಭಾಗ್ಯನಗರದಲ್ಲಿ ಹೋಟೆಲ್ ಮಾಲಿಕರಾದ ವಿಷ್ಣುಮೂರ್ತಿಯವರು ತಮ್ಮ ಸಂಬಂಧಿ ಗಜಾನನನಿಗಾಗಿ ಕಣಿವೇಹಳ್ಳಿಯಲ್ಲಿ ಹೋಟೆಲೊಂದನ್ನು ಪ್ರಾರಂಭಿಸುವ ಮೂಲಕ ಅಲ್ಲಿಗೆ ನಾಗರಿಕತೆ ಕಾಲಿರಿಸಲು ಕಾರಣರಾಗುತ್ತಾರೆ. "ಇಷ್ಟು ದೊಡ್ಡ ಸಿಟಿ ಹತ್ರ ಇದ್ರೂನೂ ನಿಮ್ಮೂರಲ್ಲಿ ಲೈಟಿಲ್ಲ, ಪೋಸ್ಟಾಫೀಸಿಲ್ಲ, ಆಸ್ಪತ್ರೆ ಇಲ್ಲ, ಬಸ್ಸಿಲ್ಲ. ಇದನ್ನೆಲ್ಲಾ ಕಣಿವೇಹಳ್ಳಿಯವರು ಹ್ಯಾಗೆ ಸಹಿಸ್ಕೊಂಡಿದ್ದಾರೆ ಅಂತ" ಅವರು ಅಚ್ಚರಿಪಡುತ್ತಾರೆ.

ಕಾದಂಬರಿಯುದ್ದಕ್ಕೂ ಬಹಳ ಹಿಂದುಳಿದಿರುವ ಕಣಿವೇಹಳ್ಳಿಗೆ ಆಧುನಿಕತೆ ಕಾಲಿಟ್ಟು ಮುನ್ನಡೆಯುವುದನ್ನು ಲೇಖಕರು ಚಿತ್ರಿಸುತ್ತಾರೆ. ರಂಗಣ್ಣ, ಪದ್ಮನಾಭ, ಗೋವಿಂದ, ವಿಷ್ಣುಮೂರ್ತಿ, ಕಾಮಾಕ್ಷಿ, ಆರತಿ, ಮೋಹನ ರಾವ್ ಮೊದಲಾದ ಪಾತ್ರಗಳು ಆಧುನಿಕ ನಗರ ಜೀವನವನ್ನು ಪ್ರತಿನಿಧಿಸಿದರೆ, ಶಾಮೇಗೌಡ, ನಾಗಮ್ಮ, ಶ್ರೀನಿವಾಸಯ್ಯ, ದೊಡ್ಡಮ್ಮ, ಭಾಗೀರಥಿ, ಗೋಪಾಲ ಮುಂತಾದವರು ಹಳೆ ಸಂಪ್ರದಾಯದ ಹಳ್ಳಿಯ ಬಾಳನ್ನು ಪ್ರತಿನಿಧಿಸುತ್ತಾರೆ. ದೊಡ್ಡಮ್ಮನ ನಾರು - ಬೇರು ಔಷಧಿ ಹೋಗಿ ರಂಗಣ್ಣನ ಮೂಲಕ ಆ ಹಳ್ಳಿಗೆ ಇಂಗ್ಲಿಷ್ ಔಷಧಿ ಬರುತ್ತದೆ. ವೆಂಕಟಪ್ಪನ ಅಂಗಡಿ ಮುಖೇನ ಬೀಡಿ, ಸಿಗರೇಟುಗಳು; ಗಜಾನನ ಹೋಟೆಲಿನ ಮೂಲಕ ಪೇಟೆಯ ಕಾಫಿ, ತಿಂಡಿಗಳು ಕಣಿವೇಹಳ್ಳಿಯನ್ನು ಪ್ರವೇಶಿಸುತ್ತವೆ. ವಿದ್ಯಾಭ್ಯಾಸಕ್ಕೆಂದು ನಗರಕ್ಕೆ ಹೋದ ಗೋವಿಂದ ಮತ್ತು ಪದ್ಮನಾಭ ಆಧುನಿಕತೆಗೆ ಮನಸೋತು ತಾವು ಇಟ್ಟುಕೊಂಡಿದ್ದ ಜಂಡಿಕೆಯನ್ನು ಕತ್ತರಿಸಿ ಕ್ರಾಪ್‌ಮಾಡಿಸಿಕೊಂಡರು. ಅಂತೆಯೇ ಗೋಪಾಲನ ಜುಟ್ಟನ್ನು ಕತ್ತರಿಸುವಂತೆ ಮಾಡಿದರು. ಆದರೆ ಜುಟ್ಟು ಹೋದದ್ದರಿಂದ ಗೋಪಾಲ ನಾಗರಿಕನಾಗಲಿಲ್ಲ. "ಕ್ರಾಪು ಬಿಟ್ಟವರೆಲ್ಲ ಸುಸಂಸ್ಕೃತರಾಗುವುದಾದರೆ ಲೋಕ ಹೀಗೆ ಯಾಕಿರುತ್ತಿತ್ತು?" ಎನ್ನುವ ಮಾತು ಹೊರನೋಟಕ್ಕೆ ಕಾಣುವ ನಾಗರಿಕತೆಗಿಂತಲೂ ಮಾನವನಿಗೆ ಅಂತರಂಗಿಕ ಸಂಸ್ಕೃತಿ ಮುಖ್ಯ ಎನ್ನುವುದನ್ನು ತಿಳಿಸುತ್ತದೆ.

ಕಾದಂಬರಿಯಲ್ಲಿ ಬರುವ ಮಹಿಳಾ ಪಾತ್ರಗಳ ಪೈಕಿ ಶ್ರೀನಿವಾಸಯ್ಯನವರ ತಾಯಿ ದೊಡ್ಡಮ್ಮ ಲೋಕಾನುಭವಿ. ಹಳ್ಳಿಯ ಜನರಿಗೆ ನಾರು - ಬೇರುಗಳ ಮದ್ದನ್ನು ಕೊಡುವ ಅವಳು ಕಣಿವೇಹಳ್ಳಿಯಲ್ಲಿ ಎಲ್ಲರಿಗೆ ಬೇಕಾದವಳು. ಮಕ್ಕಳಿಗೆ, ಮೊಮ್ಮಕ್ಕಳಿಗೆ ಸಮಯೋಚಿತ ಉಪದೇಶ ನೀಡುವವಳು. ತಾನು ಹಳ್ಳಿ ಔಷಧಿ ನೀಡುವವಳಾದರೂ ಇಂಗ್ಲಿಷ್ ಔಷಧಿ ಬಗ್ಗೆ ಅವಳ ವಿರೋಧವಿಲ್ಲ. "ಗಂಡಸರ ಹೊರಗಿನ ಸಂಕಷ್ಟ ನಮಗೇನು ಗೊತ್ತಾಗುತ್ತೆ? ದುಡಿದು ಸಂಪಾದಿಸಿ ತಂದು ಹಾಕೋರು ಅವರು. ಚಾಪೆಯ ಉದ್ದ ನೋಡಿ ಅಷ್ಟಕ್ಕೆ ಕಾಲುಚಾಚಿ ಸಂಸಾರ ವನ್ನು ನಾವು ತೂಗಿಸಿಕೊಂಡು ಹೋದರಾಯ್ತು" ಎಂದು ನಂಬಿದ ಆಕೆ "ಇನ್ನೊಬ್ಬರ ವಿಷಯ ನಾವು ಒಳ್ಳೆದು ಯೋಚಿಸ್ಬೇಕೇ ಹೊರತು ಕೆಟ್ಟದೆಲ್ಲ ಯೋಚಿಸ್ಬಾರ್ದು" ಎಂದು ಹೇಳುತ್ತಿದ್ದಳು. ವರದಕ್ಷಿಣೆ ಪದ್ಧತಿಯನ್ನು ವಿರೋಧಿಸುವ ದೊಡ್ಡಮ್ಮ ಶ್ರೀನಿವಾಸಯ್ಯನವರ ಕುಟುಂಬದ ಆಧಾರಸ್ತಂಭವಾಗಿದ್ದು ತಾಳ್ಮೆಯಿಂದ ವ್ಯವಹಾರ ನಡೆಸಿಕೊಂಡು ಹೋಗುತ್ತಾಳೆ. ಗೋವಿಂದ, ಪದ್ಮನಾಭರ ಮಡದಿಯರ ವರ್ತನೆ ನೋಡಿ ಇಳಿವಯಸ್ಸಿನಲ್ಲಿ ತನಗೆ ಇಂತಹದನ್ನು ನೋಡುವ ದುರ್ಗತಿ ಬಂತಲ್ಲಾ ಎಂದು ದುಃಖಿಸುತ್ತಾಳೆ.

ಗೋಪಾಲನ ಹೆಂಡತಿ ಭಾಗೀರಥಿ ಮನೆಗೆ ಬರಲಿರುವ ವಿದ್ಯಾವಂತ, ಶ್ರೀಮಂತ ಓರಗಿತ್ತಿಯರ ಕುರಿತು ಯೋಚಿಸಿ ತಲೆಕೆಡಿಸಿಕೊಳ್ಳುತ್ತಾಳೆ. 'ತಾನಾಯಿತು ತನ್ನ ದುಡಿಮೆಯಾಯಿತು' ಎಂದುಕೊಂಡ ಗೋಪಾಲ ಅವಳ ಆಸೆ ಆಕಾಂಕ್ಷೆಗಳ ಕಡೆಗೆ ಗಮನ ಹರಿಸುವುದಿಲ್ಲ. ಕೆಟ್ಟ ಕನಸೊಂದರ ಪರಿಣಾಮವಾಗಿ ಭಾಗೀರಥಿ ಹಿಸ್ಟೀರಿಯಾ ಬಾಧೆಗೊಳಗಾಗುತ್ತಾಳೆ. ಆಕಸ್ಮಿಕವಾಗಿ ವಿಷ್ಣುಮೂರ್ತಿಯವರ ಹೆಂಡತಿಯ ಕಾಸಿನ ಸರ ತೆಗೆದು ಅಪವಾದಕ್ಕೆ, ಅವಹೇಳನಕ್ಕೆ ಗುರಿಯಾಗುತ್ತಾಳೆ. ಆಕೆಗೆ ಜೀವನದಲ್ಲಿ ಸ್ವಲ್ಪವಾದರೂ ಸಂತೋಷ ನೀಡುವವನು ಮಗ ಶ್ರೀಪಾದ.

ತನ್ನನ್ನು ಪ್ರೇಮಿಸಿ ಮದುವೆಯಾಗುವುದಾಗಿ ಒಪ್ಪಿದ ಪದ್ಮನಾಭ ಬಳಿಕ ತನ್ನ ಕೈಬಿಟ್ಟಾಗ ನೋವನ್ನನುಭವಿಸಿ ಕೊನೆಗೆ ಬದಲಾದ ಪರಿಸ್ಥಿತಿಯಲ್ಲಿ ಹೆತ್ತವರು ಸೂಚಿಸಿದ ವರನನ್ನು ವಿವಾಹವಾಗಲು ಸಿದ್ಧಳಾಗುವ ಸುಭದ್ರೆ, ಕಾದಂಬರಿಯ ಇನ್ನೊಂದು ಗಮನ ಸೆಳೆಯುವ ಪಾತ್ರ. ಒಟ್ಟಿನಲ್ಲಿ ಇಲ್ಲಿನ ವಿವಿಧ ಪಾತ್ರಗಳು ಸಹಜ ವಾಗಿ ಮೂಡಿಬಂದಿವೆ.

ಹಳ್ಳಿಯ ಭಾಷೆಯಲ್ಲಿರುವ ಕಾದಂಬರಿಯೊಳಗಿನ ಸಂಭಾಷಣೆಗಳು ಚುರು ಕಾಗಿದ್ದು ಸ್ವಾರಸ್ಯಪೂರ್ಣವಾಗಿವೆ. ಕೆಲವು ಗಾದೆಗಳು, ಸೂಕ್ತಿಗಳು, ನೀತಿಮಾತುಗಳು ಮತ್ತು ನುಡಿಗಟ್ಟುಗಳು ಸಂದರ್ಭೋಚಿತವಾಗಿ ಬಂದಿವೆ. ಜನಜೀವನದ ಯಥಾರ್ಥ

ದರ್ಶನ ಮತ್ತು ಆದರ್ಶವಾದದ ಛಾಯೆಯಿರುವ ಕಾದಂಬರಿಯು ನಿರೂಪಣೆ ವಾಸ್ತವತೆ ಮತ್ತು ಸೂಕ್ಷ್ಮತೆಗಳಿಂದ ಕೂಡಿದೆ.

ಜನಸಾಮಾನ್ಯರ ಮತ್ತು ಮಧ್ಯಮ ವರ್ಗದವರ ಕೌಟುಂಬಿಕ ಹಾಗೂ ಸಾಮಾಜಿಕ ನೋವು-ನಲಿವುಗಳ ಚಿತ್ರಣವನ್ನು ನೀಡುವ ಈ ಕೃತಿಯಲ್ಲಿ ಆ ಜನರ ಆಸೆ ಆಕಾಂಕ್ಷೆಗಳು, ಸಮಸ್ಯೆಗಳು, ಆದರ್ಶಗಳು ಮತ್ತು ಸಂಘರ್ಷಗಳು ಪ್ರತಿಬಿಂಬಿತ ವಾಗಿವೆ.

ಗ್ರಾಮೀಣ ಪರಿಸರದ ಪರಂಪರಾಗತ ಜೀವನಕ್ರಮ, ನಂಬಿಕೆಗಳನ್ನು ನಗರ ಜೀವನದ ಸಂಕೀರ್ಣತೆಯ ಜತೆಗೆ ತೆರೆದಿಟ್ಟು, ನಾಗರಿಕತೆಯು ತನ್ನ ವಿವಿಧ ಗುಣ-ದೋಷಗಳೊಂದಿಗೆ ಹಳ್ಳಿಯೊಂದನ್ನು ಆವರಿಸಿಕೊಂಡಾಗ ಉಂಟಾಗುವ ಪರಿಣಾಮ ವನ್ನು ಸೂಕ್ಷ್ಮವಾಗಿ ಚಿತ್ರಿಸುವುದು ಕಾದಂಬರಿಯ ಮುಖ್ಯ ಆಶಯವಾದರೂ ಪರೋಕ್ಷವಾಗಿ ದೇಶದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳ ವಿವರಣೆಯೂ ಇದರಲ್ಲಿ ಮೂಡಿಬಂದಿದೆ.

'ಚಿರಸ್ಮರಣೆ', 'ರಂಗಮ್ಮನ ವಠಾರ', 'ಬನಶಂಕರಿ' 'ವಿಮೋಚನೆ' ಮೊದಲಾದ ನಿರಂಜನರ ಖ್ಯಾತ ಕಾದಂಬರಿಗಳ ಮಟ್ಟಕ್ಕೆ ಏರಿಲ್ಲವಾದರೂ ಸಂಕ್ರಮಣ ಕಾಲ ಘಟ್ಟವೊಂದರಲ್ಲಿ ಗ್ರಾಮೀಣ ಜನಸಾಮಾನ್ಯರು ಅನುಭವಿಸುವ ನೋವುಗಳ ನೈಜ ಚಿತ್ರಣದಿಂದ 'ನೋವು' ಗಮನಾರ್ಹ ಕೃತಿ ಎನ್ನಬಹುದು. ○

ನಿರಂಜನರ 'ಬುದ್ಧಿ ಭಾವ ಬದುಕು'

–ಡಾ| ಬಿ. ಸಿ. ರಾಮಚಂದ್ರಶರ್ಮ

ಪ್ರಪಂಚದ ಯಾವ ಸಾಹಿತ್ಯವೇ ಆಗಲಿ, ನಿರಂಜನರಂತಹ ಬರಹಗಾರರು ಆಗ ಈಗ ಅಪರೂಪಕ್ಕೆ ಕಾಣುವ ಉಲ್ಕೆಯ ಹಾಗೆ. ಅವರ ಹಾಗೆ ಚಿಕ್ಕ ವಯಸ್ಸಿಗೇ ತಮ್ಮೊಳಗಿನ ಬರಹದ ತೆವಲನ್ನುಗುರುತಿಸಿಕೊಂಡು ಬರೆದೇ ಬದುಕುವೆನೆಂಬ ಹಟವನ್ನು ಸಾಧಿಸಿಕೊಂಡು ಬಂದವರಂತೂ ನಮ್ಮ ದೇಶದ ಇತಿಹಾಸದಲ್ಲಿ ವಿರಳ. ನಿರಂಜನರ ವೈಶಿಷ್ಟ್ಯ ಅದೊಂದು ಛಲಕ್ಕೆ ಮಾತ್ರ ಸೀಮಿತವಾಗಿದ್ದರೆ ಅವರು ನಮ್ಮ ಕನ್ನಡ ಸಾಹಿತ್ಯದ ಸಂದರ್ಭದಲ್ಲೇ ಕಂಡು ಬಂದ ಇನ್ನು ಕೆಲವರಿಂದ ಭಿನ್ನರಾಗುತ್ತಿರಲಿಲ್ಲ. ಅವರ ವ್ಯಕ್ತಿತ್ವದ ವೈಶಿಷ್ಟ್ಯವಿರುವುದು ತಮ್ಮ ವಿಚಾರ ಹಾಗೂ ದೃಷ್ಟಿಕೋನದಲ್ಲಿ.

ಅವರು ಸುಮಾರು ನಲವತ್ತು ವರ್ಷಗಳವರೆಗೆ ತೋರುತ್ತ ಬಂದಿರುವ ವಿಚಲತೆಯಲ್ಲಿ, ನಿಷ್ಠೆಯಲ್ಲಿ. ಎಷ್ಟೆಷ್ಟು ನೀರು ಉಕ್ಕುಕ್ಕಿ ಬಂದಪ್ಪಳಿಸಿದರೂ ಅಲ್ಲಾಡದೇ ನಿರ್ವಿಕಾರ ವಾಗಿ ಬಂಡೆಯಂತೆ ನಿಂತಿರುವ ಇಂತಹ ಗುಣ ಪ್ರಶಂಸನೀಯವಾದರೂ, ಅದೊಂದು ಮೊಂಡುತನವೂ ಆಗಿರುವ ಸಾಧ್ಯತೆಯನ್ನು ನಿರಂಜನರೂ ಒಪ್ಪಿಯಾರೆನ್ನುವುದು ನನ್ನ ಅಭಿಪ್ರಾಯ. ಅತಿ ತೀವ್ರ ಗತಿಯಲ್ಲಿ ಬದಲಾಗುತ್ತಿರುವ ಈ ಶತಮಾನದ ಬದುಕಿಗೆ ಸ್ಪಂದಿಸದ ಅಥವಾ ಸ್ಪಂದಿಸಬಾರದೆಂಬ ಛಲ ತೊಟ್ಟ ವ್ಯಕ್ತಿಗೆ ಮಾತ್ರ ಇಂತಹ ಬದ್ಧತೆ ಸಾಧ್ಯವೆನ್ನುವ ಮಾತು ಕೊಂಚ ಕ್ರೂರವಾದರೂ, ಮಾತಿನಲ್ಲಿ ಅಷ್ಟಿಷ್ಟು ಸತ್ಯವಿದೆ. ಹಾಗೇ, ಇಂತಹ ಮೊಂಡುತನ ಇತಿಹಾಸದಲ್ಲಿ ಹತ್ತು ಕಾಲ ಉಳಿಯುವುದರ ಪ್ರಧಾನ ಲಕ್ಷಣಗಳಲ್ಲಿ ಒಂದಲ್ಲವೇ ಅನ್ನುವ ಪ್ರಶ್ನೆ. ಎಂದೇ ನಿರಂಜನರು ಐತಿಹಾಸಿಕವಾಗಿ ನಮಗೆ ಮುಖ್ಯರಾಗುತ್ತಾರೆ.

ನಿರಂಜನರಂತಹ ಸಾಹಿತಿಗಳ ಎಲ್ಲ ವಿಚಾರಗಳ ಕೇಂದ್ರಸ್ಥಾನದಲ್ಲಿ ಮನುಷ್ಯ ನಿರುವುದು ಸಹಜ. ಅವರ ಸಾಹಿತ್ಯಸೃಷ್ಟಿಯ ಕ್ರತುಶಕ್ತಿಯಾಗಿ ಮಾನವಕುಲದ ಕಲ್ಯಾಣದ ಕನಸು, ಆ ಕನಸು ನನಸಾಗಿಯೇ ಆಗುವುದು ಅನ್ನುವ ದೃಢ ವಿಶ್ವಾಸ. ದೇವರ ಅಸ್ತಿತ್ವದಲ್ಲಿ, ಮನುಷ್ಯ ವ್ಯಾಪಾರಗಳ ಸೂತ್ರಧಾರನಾದ ಅವನ ಅನಂತ ಅನುಕಂಪದಲ್ಲಿ ಮಾಸ್ತಿಯಂತಹವರಿಗಿರುವ ಶ್ರದ್ಧೆಯಷ್ಟೇ ಅಚಲವಾದ ಶ್ರದ್ಧೆಯನ್ನು ಮಾನವ ಎಂದಾದರೂ ಒಂದು ದಿನ ಪಡೆಯಬಹುದಾದ ಔನ್ನತ್ಯದಲ್ಲಿಟ್ಟುಕೊಂಡ ನಿರಂಜನರಿಗೆ ನನ್ನಂತಹ ಸಾಹಿತಿಗಳು ಅಭಿವ್ಯಕ್ತಿಗೊಳಿಸುವ ನಿರಾಶೆಯ ಅನುಭವ ಒಂದು ಪೋಸು, ಇವೊತ್ತಿನ ಫ್ಯಾಷನ್ ಎಂದು ಧರಿಸಿದ ಮೊಗವಾಡ. ರೊಮ್ಯಾಂಟಿಕ್ ಮನೋಭಾವದ ಉತ್ಕರ್ಷವನ್ನು ಅಲ್ಲಗಳೆಯುವ ಇವರಿಗೆ ತಮ್ಮದೂ ರೊಮ್ಯಾಂಟಿಕ್ ಮನೋಭಾವವೆನ್ನುವ ಸತ್ಯ ಹೊಳೆಯದೇ ಹೋಗುವಷ್ಟು ದೃಷ್ಟಿ ವಿಕಾರ. ಮೂವತ್ತರ ದಶಕದಲ್ಲಿ ಆಡೆನ್ ಕವಿ ಬರೆದ ಸಾಮಾಜಿಕ ಹಾಗೂ ಫ್ಯಾಸಿಸಮ್ಮಿನ ವಿರುದ್ಧವಾಗಿ ಬರೆದ ಕವನಗಳು ಪ್ರಿಯವಾದರೂ, ಅದೇ ಕವಿ ೧೯೩೯ರಲ್ಲಿ ಏಟ್ಸ್ ಕವಿ ಸತ್ತಾಗ Poetry makes nothing happen ಅಂತ ಹೇಳಿದ್ದನ್ನು ಮರೆತುಬಿಡುವಷ್ಟು ಸಾಹಿತ್ಯ ಕ್ಕಿರುವ ಸಾಮಾಜಿಕ ಸುಧಾರಣೆಯ ಸಾಧ್ಯತೆಯಲ್ಲಿ ವಿಶ್ವಾಸ. 'ಸಮಾಜವಾದದ ಗುರಿಯನ್ನು ಬರಿಯ ಘೋಷಣೆ ಭಾಷಣಗಳಿಂದ ಸಾಧಿಸುವುದು ಶಕ್ಯವಿದ್ದಿದ್ದರೆ, ಭಾರತ, ಈ ಹೊತ್ತಿಗೆ ಭೂಮಿಯ ಮೇಲಿನ ಸ್ವರ್ಗವಾಗುತ್ತಿತ್ತು' ಎಂದು ಬರೆಯು ವಾಗಲೂ (ಬುದ್ಧಿ ಭಾವ ಬದುಕು, ಪುಟ 206) ನಿರಂಜನರಿಗೆ ಘೋಷಣೆ ಭಾಷಣ ಗಳು ಸಾಧಿಸಲಾರದ್ದನ್ನು ಸಾಹಿತ್ಯ ಅನಕ್ಷರಸ್ಥರೇ ತುಂಬಿರುವ ನಮ್ಮ ದೇಶದಲ್ಲಿ ಸಾಧಿಸಬಹುದೆನ್ನುವ ಭ್ರಾಂತಿ. ಇದು ಒಂದು ತರಹದ ಮುಗ್ಧತೆಯೆನ್ನದೇ ವಿಧಿ ಯಿಲ್ಲ. ಬದುಕಿನ ಸಂಕೀರ್ಣತೆಯನ್ನೂ ಕಡೆಗಣಿಸಿ ಎಲ್ಲವನ್ನೂ ಒಂದು ಸರಳ ಸೂತ್ರಕ್ಕೆ ಒಗ್ಗುವ ಹಾಗೆ ಮಾಡಿಬಿಡುವ ಚಪಲ. ಬುದ್ಧಿ ಭಾವ ಬದುಕು ನಿರಂಜನರು

೧೯೪೩ರಿಂದ ೧೯೭೪ರವರೆಗೆ ಸಾಹಿತ್ಯದ ಬಗ್ಗೆ ಬರೆದ ಲೇಖನಗಳ ಹಾಗೂ ಮಾಡಿದ ಭಾಷಣಗಳ ಸಂಕಲನ. ಕಾಲಕಾಲಕ್ಕೆ ಬದಲಾಗುತ್ತ ಬಂದ ಸಾಹಿತ್ಯಕ ಒಲವುಗಳ ಬಗ್ಗೆ ಸಾಕ್ಷಿಪ್ರಜ್ಞೆಯಂತೆ ನಿಂತೊಂದು ಜೀತನದ ಕಮೆಂಟರಿಯಂತೆ ಇರುವ ಈ ಪುಸ್ತಕಕ್ಕೆ ಸಹಜವಾಗಿಯೇ ಒಂದು ಐತಿಹಾಸಿಕ ಮೌಲ್ಯವಿದೆ. ೧೯೪೦ರ ದಶಕದಲ್ಲಿ ತನ್ನ ಹಿಂದಿನ ನವೋದಯ ಸಾಹಿತ್ಯಕ್ಕೆ ಪ್ರತಿಭಟಿಸಿ ಬಂದ ಪ್ರಗತಿಶೀಲ ಸಾಹಿತ್ಯದ ಬಗ್ಗೆ ಆಸಕ್ತಿಯಿರುವ ಎಲ್ಲರೂ ಓದಲೇಬೇಕಾದ ಗ್ರಂಥವಿದೆನ್ನಬಹುದು. ಸಜ್ಜದ್ ಜಾಹೀರ್ ಹಾಗೂ ಮುಲ್ಕ್ ರಾಜ್ ಆನಂದ್ ಅಂತಹವರು ಎರಡನೇ ಮಹಾಯುದ್ಧದ ಪೂರ್ವದಲ್ಲಿ ತಮ್ಮ ಯುರೋಪ್ ಅನುಭವಗಳ ಆಧಾರದ ಮೇಲೆ ಸ್ವಾತಂತ್ರ್ಯದ ಆಂದೋಳನದಲ್ಲಿ ಕುದಿಕುದಿಯುತ್ತಿದ್ದ ಭಾರತದ ಪರಿಸರಕ್ಕೆ ತಂದ ವಿಚಾರಗಳು, ಕನ್ನಡದಲ್ಲಿ ಅವು ಪಡೆದುಕೊಂಡ ಆನುರಣನ, ಕ್ರಮಕ್ರಮವಾಗಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಹಳಿ ತಪ್ಪಿದ್ದಕ್ಕೆ ಕಾರಣವಾದ ಕೆಲವೊಂದು ನಾಯಕರ ಕೊರತೆಗಳು-ಅಷ್ಟನ್ನೂ ಒಳಗೊಂಡಿರುವ ಈ ಪುಸ್ತಕದ ಕೇಂದ್ರಪಾಠಗಳು ಇವೊತ್ತಿನ ಬಂಡಾಯ ಸಾಹಿತಿಗಳಿಗೆ ಪ್ರಸ್ತುತವಾಗಬಲ್ಲವು. ಇಲ್ಲಿರುವ 'ಪ್ರಗತಿಶೀಲ ಸಾಹಿತ್ಯ - ಗೊತ್ತು ಗುರಿ' 'ಬೆಲಿನ್‌ಸ್ಕಿಯ ಕಾವ್ಯ ಮೀಮಾಂಸೆ', 'ವಿಚಾರ ಸಾಹಿತ್ಯ' ಹಾಗೂ ಇಂಗ್ಲಿಷಿನಲ್ಲಿರುವ 'Man, the Pivot, Humanism, the Creed' ಲೇಖನಗಳು ಮುಖ್ಯವಾದುವು.

ನಿರಂಜನರ ಒಂದು Blind Spot ಅಂದರೆ ಕಾವ್ಯವೆನ್ನುವ ನನ್ನ ಮೂವತ್ತು ವರ್ಷಗಳ ಅನ್ನಿಸಿಕೆಗೆ ಸಮರ್ಥನೆ ಕೊಡುವಂತಹ ಕೆಲವು ಲೇಖನಗಳು ಇಲ್ಲಿರುವುದು ಕುತೂಹಲಕಾರಿಯಾಗಿದೆ. ನನ್ನ ಮೊದಲ ಕವನ ಸಂಕಲನ 'ಹೃದಯ ಗೀತ'ಕ್ಕೆ ಹಿನ್ನುಡಿಗಳನ್ನು ಬರೆದಿರುವ ಗೋಪಾಲಕೃಷ್ಣ ಅಡಿಗ ಹಾಗೂ ಎಕ್ಕುಂಡಿ ಅವರ ಮೆಚ್ಚಿಕೆಯ ಮಾತುಗಳಲ್ಲಿ ಕಂಡುಬರುವ ವೈರುಧ್ಯ ನಿರಂಜನರ ವಿಡಂಬನೆಗೆ ಗುರಿಯಾಗುವುದು ಧರ್ಮವಾದರೂ, ವಿಮರ್ಶಕರಾಗಿ ಅವರ ಗಮನ ಕವನವೊಂದರ ವಸ್ತುವಿಗೆ ಮಾತ್ರ ಸೀಮಿತವಾಗಿದೆಯೆನ್ನುವುದು ಅವರ ಬರಹದಲ್ಲಿ ಎದ್ದು ಕಾಣುತ್ತದೆ. ಕಾವ್ಯವನ್ನು ಪರಿಗಣಿಸುವಾಗ ಇಟ್ಟುಕೊಳ್ಳಬೇಕಾದ ಮಾನದಂಡಗಳು ನಿರಂಜನ ಬಯಸುವಷ್ಟು ಸರಳವಲ್ಲ. ನವ್ಯಕಾವ್ಯ ಯಾಕೆ ತನ್ನ ವಿಶಿಷ್ಟ ಅಭಿವ್ಯಕ್ತಿ ಕ್ರಮವನ್ನು ರೂಢಿಸಿಕೊಂಡಿತು, ಆದಕ್ಕೆ ಅನಿವಾರ್ಯವೆನ್ನಬಹುದಾದ ರೂಪವನ್ನು ನಿಯಂತ್ರಿಸಿದ ಒತ್ತಡಗಳೇನು ಅನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳುವ ಗೋಜಿಗೆ ಹೋಗದೇ, 'ನಿರರ್ಥಕ ಸಾಹಿತ್ಯ ಸೃಷ್ಟಿಯಲ್ಲಿ ನವ್ಯತೆಯಿಂದ ಆಕರ್ಷಿತರಾದ ಬರಹಗಾರರು ನಿರತರಾದರು' ಅಥವಾ 'ಕಾಮ ಕೇಂದ್ರಿತ ವಸ್ತುಗಳಲ್ಲಿ ಪ್ರಾಧಾನ್ಯ ಕಂಡರು' ಅನ್ನುವಂತಹ ಮಾತುಗಳು ಉಪೇಕ್ಷೆಯ ರೀತಿಯವು.

ಸಾಹಿತ್ಯದಲ್ಲಿ ಹೊಸದಕ್ಕೆ ಬಾಗಿಲು ತೆರೆಯುವ ಮನಸ್ಸು ನಿರಂಜನರಂತಹ ಕಮಿಟೆಡ್ ಸಾಹಿತಿಗಳಿಗೆ ಸಾಧ್ಯವಿಲ್ಲವೆನೋ.

ಅಷ್ಟಾದರೂ, ಯಾವ ಧರ್ಮಕ್ಕಾಗಲೀ ಜಾತಿಗಾಗಲೀ ತಮ್ಮನ್ನು ಮಾರಿಕೊಳ್ಳದೇ, ಎಂಥೆಂಥ ಕಷ್ಟಗಳು ಬಂದರೂ ದೇವರ ಮೇಲೆ ಭಾರ ಹಾಕುವ ದೌರ್ಬಲ್ಯಕ್ಕೆ ಶರಣಾಗದೇ, ತಮ್ಮ ಬಗೆಗೇ ಬರೆಯುವಾಗ ನಮ್ಮಲ್ಲಿಯ ಅನೇಕರ ಹಾಗೆ ಸುಳ್ಳುಗಳ ಮೊರೆಹೋಗದೇ, ಮನುಷ್ಯನನ್ನು ಸದಾ ತಮ್ಮ ಮನಸ್ಸಿನಲ್ಲಿ ಹಾಗೂ ಕಣ್ಣಮುಂದೆ ಇಟ್ಟುಕೊಂಡು ಬರೆಯುತ್ತ ಬಂದಿರುವ ನಿರಂಜನ ಐತಿಹಾಸಿಕವಾಗಿ ಮುಖ್ಯರು; ನನಗೆ ಪ್ರಿಯರಾದವರು.

ಅಂತಹ ಸಾಹಿತ್ಯಕ ವ್ಯಕ್ತಿಯ ವಿಚಾರಗಳನ್ನೊಳಗೊಂಡ **ಬುದ್ಧಿ ಭಾವ ಬದುಕು** ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯಿರುವ ಎಲ್ಲರೂ ಗಣನೆಗೆ ತೆಗೆದುಕೊಳ್ಳಬೇಕಾದ ಒಂದು ಗ್ರಂಥ. ○

ಬನಶಂಕರಿ ೧

–ಹರಿನಾರಾಯಣ ಮಾಡಾವು

ಬನಶಂಕರಿಯ ಬದುಕಿನ ಸಾಹಸದ ಕತೆಯನ್ನು ಹೇಳುವುದರೊಂದಿಗೆ ಬಾಲ ವಿಧವೆಯ ಜೀವನದ ದಾರುಣತೆಯನ್ನು ಚಿತ್ರಿಸುತ್ತ ಘೋರ ಸಾಮಾಜಿಕ ಸಮಸ್ಯೆಯೊಂದರ ಮೇಲೆ ಬೆಳಕುಚೆಲ್ಲುವ ಕಾದಂಬರಿ - ನಿರಂಜನರ 'ಬನಶಂಕರಿ'. (ಈ ಕೃತಿಯ ಪ್ರಥಮ ಆವೃತ್ತಿ ೧೯೫೪ರಲ್ಲಿ ಪ್ರಕಟವಾಯಿತು. ಪ್ರಸ್ತುತ ಲೇಖನಕ್ಕಾಗಿ ೧೯೭೭ರಲ್ಲಿ 'ಕಥಾಸಾಹಿತ್ಯ'ದ ವತಿಯಿಂದ ಪ್ರಕಾಶನಗೊಂಡ ಮೂರನೆಯ ಆವೃತ್ತಿಯನ್ನು ಗಮನಿಸಲಾಗಿದೆ.) ಜೀವನಹಳ್ಳಿಯಲ್ಲಿ ವೈದಿಕ ಮನೆತನವೊಂದರಲ್ಲಿ ಜನನ; 'ಅಮ್ಮಿ' ಅವಳ ಮೊದಲ ಹೆಸರು. ಹುಟ್ಟುವುದಕ್ಕಿಂತ ಮೊದಲೇ ತಂದೆ, ಹುಟ್ಟುತ್ತಲೇ ತಾಯಿ ತೀರಿಹೋದರು. ಅಜ್ಜಿ ಸಾಕಿದ ಮಗಳು ಅಮ್ಮಿ. ಹನ್ನೊಂದನೆ ವಯಸ್ಸಿನಲ್ಲಿ ವಿವಾಹವಾಗಿ ರಾಯನ ಹಳ್ಳಿಯ ಪತಿಗೃಹ ಸೇರಿದಾಗ 'ಬನಶಂಕರಿ' ಎಂಬ ಹೊಸ ಹೆಸರು. ಆದರೂ ಅತ್ತೆ, ಮಾವಂದಿರ ವಾತ್ಸಲ್ಯದ ಹೊನಲಿನಲ್ಲಿ ಅಮ್ಮಿಯಾಗಿಯೇ ಉಳಿಯುತ್ತಾಳೆ. ಚಿಕ್ಕಮಗಳೂರಿನಲ್ಲಿ ಉದ್ಯೋಗದಲ್ಲಿದ್ದ ಗಂಡ ರಾಮಚಂದ್ರ ಮೂರೇ ದಿವಸದ ಜ್ವರದಲ್ಲಿ ತೀರಿಕೊಂಡ ವಾರ್ತೆ. ಹದಿಮೂರರ ಪುಟ್ಟ ಹುಡುಗಿ ಅಮ್ಮಿ ವಿಧವೆ; ಗಂಡ ಸತ್ತ ಆರು ತಿಂಗಳಲ್ಲಿ ಮೈನೆರೆಯುತ್ತಾಳೆ. ಅಣ್ಣ ರಾಮಕೃಷ್ಣ ಮದುವೆಗೆ ಎರಡೇ ದಿನಗಳಿರುವಾಗ ಹಾವಿನ ಕಡಿತದಿಂದ ಮರಣವನ್ನಪ್ಪುತ್ತಾನೆ. ಅಮ್ಮಿಗೆ ಉಳಿದ ಒಬ್ಬಳೇ ಆಸರೆ ಅಜ್ಜಿ, ಅರುವತ್ತಾರ ಹರೆಯದ ಸುಬ್ಬಕ್ಕ. ಅವಳೊಡನೆ

ಬಾಳೆ ಮಣ್ಣೂರಿಗೆ. ಅಲ್ಲಿ ಹಲವು ನಂಜಿನ ನಾಲಗೆಗಳಿಂದ ವಿಷವುಂಡೂ ಸಾಯು ವುದಿಲ್ಲ. ಅಜ್ಜಿಯ ಮರಣಾನಂತರ ಬದುಕಿನಲ್ಲಿ ಹೊಸ ತಿರುವು. 'ಶಂಕರಿ'ಯಾಗಿ ಸಂಸಾರ ಪ್ರಾರಂಭ. ಇಬ್ಬರು (ಗಂಡು, ಹೆಣ್ಣು) ಮಕ್ಕಳನ್ನು ಪಡೆಯುತ್ತಾಳೆ. ಬದುಕಿನ ಹೋರಾಟದಲ್ಲಿ ಮುನ್ನಡೆಯುತ್ತ ಹಾಸನ, ಬೆಂಗಳೂರು ಸೇರುತ್ತಾಳೆ. ಮಗಳ ಮದುವೆ, ಮಗನ ಕಾಲೇಜು ವಿದ್ಯಾಭ್ಯಾಸ ನಡೆದಿದೆ. ಮಕ್ಕಳು ಒಂದು ನೆಲೆಗೆ ಬಂದುದನ್ನು ಕಾಣುತ್ತಲೇ ಹುಟ್ಟೂರಿನ ಕರೆಗೆ ಓಗೊಟ್ಟು ಜೀವನಹಳ್ಳಿ ಸೇರುತ್ತಾಳೆ. ಬಾಲ್ಯದ ಒಡನಾಡಿ ಕಾವೇರಿಯ ಮನೆಯಲ್ಲಿ, ತನ್ನ ಐವತ್ತರ ಹರೆಯದಲ್ಲಿ, ಅಮ್ಮಿಯ ಅವಸಾನವಾಗುತ್ತದೆ. ಹಳ್ಳಿಯಲ್ಲಿ ಜನಿಸಿ, ರಾಜ್ಯದ ರಾಜಧಾನಿಯ ತನಕ ಪರಿಶ್ರಮ ದಿಂದ ಸಾಗಿ ಮತ್ತೆ ಹಳ್ಳಿ ಸೇರಿದ ಅವಳ ಬಾಳಿನ ಚಕ್ರ ತನ್ನ ಪರಿಭ್ರಮಣವನ್ನು ಪೂರೈಸುತ್ತದೆ. ಹೀಗೆ, ನಿರಂಜನ ಇಪ್ಪತ್ತು ಅಧ್ಯಾಯಗಳಲ್ಲಿ, ಬನಶಂಕರಿಯ ಶಿಲ್ಪ ವನ್ನು ಒಪ್ಪವಾಗಿ ಕಡೆದಿದ್ದಾರೆ; ಆಳವಾದ ಜೀವನಾನುಭವದಿಂದ ಮೂಡಿನಿಂತಿರುವ ಈ ಕೃತಿಯಲ್ಲಿನ ಯಾವುದೇ ಸಾಲನ್ನಾದರೂ ಅನವಶ್ಯ ಎನ್ನುವಂತಿಲ್ಲ.

'ಸಾವಿನ ಜತೆಯಲ್ಲಿ ಸರಸವಾಡುತ್ತಲೇ ಹುಟ್ಟಿದ' ಬನಶಂಕರಿಯ ಬದುಕಿನ ಮಹದಾಸೆ ತನ್ನ ಮಗು 'ದೊಡ್ಡೋನಾಗುವುದನ್ನು ನೋಡಿ ಸಾಯಬೇಕೆಂಬುದೇ' ಆಗಿತ್ತು. ಆ ದೃಷ್ಟಿಯಿಂದ ಅವಳದು ಸಾರ್ಥಕತೆಯನ್ನು ಸಾಧಿಸಿದ ಬದುಕು. ಎದುರಾದ ವಿರೋಧಗಳನ್ನೆಲ್ಲ ಗೆದ್ದು ಬದುಕಿದ್ದು ಆ ಜೀವದ ಹಿರಿಮೆ. ಅದಕ್ಕೆ ಅವಳು ಹಲವು ಹಿತೈಷಿಗಳಿಗೆ ಋಣಿ. ಕರುಣಾರ್ದ್ರ ಹೃದಯಿಯಾದ ಮಾವ ಅಮ್ಮಿಯ ಕೇಶಮುಂಡನ ಮಾಡಿಸಲಿಲ್ಲ. ಆಚಾರ ವಿಚಾರಗಳಲ್ಲಿ ತುಂಬ ಕಟ್ಟುನಿಟ್ಟಿ ನವಳಾದ ಅಜ್ಜಿಯೂ ಅಮ್ಮಿಯ ತಲೆಗೂದಲಿನ ಬಗೆಗೆ ಎಷ್ಟೋ ಬಾರಿ ಯೋಚಿಸಿ ದ್ದಳು. ಮೊಗ್ಗು ಅರಳುವುದಕ್ಕೆ ಮುಂಚೆಯೇ ಅದನ್ನು ಹಿಸುಕಿ ಎಸೆಯಬಯಸು ವವರು ಅವಳ ಅಭಿಪ್ರಾಯದಲ್ಲಿ ನಿಜವಾಗಿಯೂ ದುರಾತ್ಮರು (ಪುಟ 44). ಬಾಳೆಮಣ್ಣೂರಿನ ವೃದ್ಧ ಯತಿಗಳೂ ಸಕೇಶಿಯಾಗಿದ್ದ ಅಮ್ಮಿಯ ಬಗೆಗೆ ಕನಿಕರವನ್ನೇ ತೋರುತ್ತಾರೆ. ಒಡನಾಡಿ ಕಾವೇರಿ ತೋರಿದ ಆತ್ಮೀಯತೆ, ಬಾಳೆಮಣ್ಣೂರಿನಲ್ಲಿ ನೆರೆಮನೆಯವರಾಗಿದ್ದ ರಾಮಶಾಸ್ತ್ರಿ-ಸುಂದರಮ್ಮ ದಂಪತಿಗಳ ನೆರವು, ಪಾರುಪತ್ಯಗಾರ ನಾರಾಯಣರಾಯರ ಆಸರೆ - ಸಾಹಚರ್ಯ, ಹಾಸನದಲ್ಲಿ ಕೇಶವಮೂರ್ತಿ - ಸಾವಿತ್ರಿ ದಂಪತಿಗಳ ಸಹಾಯಹಸ್ತ, ಬೆಂಗಳೂರಿನಲ್ಲಿ ಯುವಕ ಮಾಧವನ ಉದಾರ ಮನೋಧರ್ಮ, ಆತ ಅಳಿಯನಾಗಿ ದೊರಕಿದುದು - ಇವೆಲ್ಲ ಹಲವು ಬಗೆಯಲ್ಲಿ ಅವಳ ಜೀವನ ಸಾಧನೆಗೆ ಪೂರಕ ಶಕ್ತಿಗಳಾಗಿವೆ. ಈ ಮಧ್ಯೆ ಕುಟಿಲ ಜನರ ಕುಹಕ ನುಡಿ ಗಳು, ಕೆಣಕು ನಡೆಗಳು ಎಷ್ಟೋ ವೇಳೆ ತೊಡರುಗಾಲನ್ನಿಕ್ಕಿವೆ. ವಿಷಯಲಂಪಟ ತನಕ್ಕೆಲ್ಲಿಯದು ಜಾತಿಯ ಗೀಳು? ದೇವಸ್ಥಾನ ಮಠದವರೂ ಅಷ್ಟೆ, ಮಂಡಿ - ಮಳಿಗೆ ಯವರೂ ಅಷ್ಟೆ (ಪುಟ 67). ಹೀಗಾಗಿಯೇ 'ತಾನಿನ್ನು ಬಯಸಿದವರೆಲ್ಲ ಕೈಯೊಡ್ಡುವ

ಕಳಿತೆ ಫಲವೆ ಹಾಗಾದರೆ?' (ಪುಟ 67) ಎಂದು ಅಂತರಾಳದಲ್ಲಿ ಅಮ್ಮಿ ನೋಯು ವಂತಾಗುತ್ತದೆ. ಬಾಳೆಮಣ್ಣೂರು ಮಠದಲ್ಲಿ, ಆಕೆ ವಶವಾಗದ್ದರಿಂದ, ಹತಾಶನಾದ ಯುವಕ ಸ್ವಾಮಿ ಬಹಿಷ್ಕಾರದ ಘೋಷಣೆ ಮಾಡುತ್ತ ಅವಳನ್ನು ಜಾತಿಬಾಹಿರಳೆಂದು ಸಾರಿದ್ದು ಎಂಥ ವಿರೋಧಾಭಾಸ!

*   *   *   *

ಸಾವು - ಹುಟ್ಟು, ನೋವು - ನಲಿವು, ಹಳತು - ಹೊಸತುಗಳ ದ್ವಂದ್ವ ನಿರೂಪಣೆ ಈ ಕೃತಿಯಲ್ಲಿ ಅಲ್ಲಲ್ಲಿ ಕಾಣಿಸುತ್ತದೆ; ಬದುಕಿನ ಯಥಾಸ್ಥಿತಿಗೆ ಒತ್ತು ನೀಡಿದ ಸರಳ ಸುಂದರ ವಾಕ್ಯಗಳಲ್ಲಿ ಪಾತ್ರ ಪೋಷಣೆ ಪರಿಣಾಮಕಾರಿಯಾಗಿದೆ. ಕಾದಂಬರಿಯ ಪ್ರಾರಂಭದಲ್ಲಿ ಬಳಸಿದ ಹಿನ್ನೋಟ ತಂತ್ರ ಕುತೂಹಲಜನಕವಾಗಿದೆ.

*   *   *   *

ನಿರಂಜನರ ಸಣ್ಣಪುಟ್ಟ ವಾಕ್ಯಗಳು, ಸಂಕೇತಗಳಿಂದ ಕೂಡಿದ ಸಂಕ್ಷಿಪ್ತ ನಿರೂಪಣೆ ತುಂಬ ಆಳವಾದ ಅರ್ಥವನ್ನು ಧ್ವನಿಸುವಂತಿವೆ. ಕಾದಂಬರಿಯುದ್ದಕ್ಕೂ ಇಂಥ ಹಲವು ಉದಾಹರಣೆಗಳು ಸಿಗುತ್ತವೆ. ದೀಪಾವಳಿ ಹಬ್ಬ; ಸಾಲುದೀಪ ಹಚ್ಚುವ, ಪಟಾಕಿ ಹಾರಿಸುವ ಸಡಗರ. ಕತ್ತಲು - ಬೆಳಕುಗಳ ನಡುವೆ ಕಣ್ಣು ಮುಚ್ಚಾಲೆಯಾಟ ನಡೆದಿದೆ. ಅದನ್ನು ಅಮ್ಮಿ ಬಾಗಿಲ ಬಳಿ ನಿಂತು ನೋಡುತ್ತಿದ್ದಾಳೆ (ಪುಟ 3). ಇಂಥ ಸಂದರ್ಭದಲ್ಲೆ ಅಂಚೆಯಾಳು ಒಂಟಿಯಾಗಿ ಬಂದವನೇ ಅವಳ ಗಂಡನ ಮರಣವಾರ್ತೆ ತರುತ್ತಾನೆ!

ಬಳೆಗಳಿಲ್ಲದ ಕೈ, ಹಾರವಿಲ್ಲದ ಕೊರಳು, ತಿಲಕವಿಲ್ಲದ ಹಣೆ....ವಯಸ್ಸಿಗೆ ಮೀರಿದ ಗಾಂಭೀರ್ಯ ಅವಳಲ್ಲಿ ಮನೆ ಮಾಡಿತು . ಖಾಲಿ ಮನೆಯನ್ನು ಹೊಕ್ಕ ಮೌನ ಪಿಶಾಚಿ (ಪುಟ 20). ಗಾಡಿಯವನು ಎತ್ತುಗಳಿಗೆ ಬಾರು ಕೋಲಿನಿಂದ ಹೊಡೆಯುತ್ತಾ ಗದರಿಸುತ್ತಿದ್ದ: 'ನಿಮ್ ಮುಂಡಮೋಚ್ತ್ತು', 'ನಿಮ್ ತಲೆ ಬೋಳಿಸ್ತು', ಪಾಪ ಮೃದು ದನಿಯಲ್ಲಿ ಅಂದರು: "ಹಾಗನ್ಬಾರದಪ್ಪಾ - ಮೂಕ ದನಗಳಿಗೆ ಹಾಗೆ ಅಂತಾರೇನು? ಆ ರೀತಿ ಹೊಡೀತಾರೇನು?" (ಪುಟ 29). ಹೀಗೆ ನುಡಿದಾಗ ಅವರ ಮನದ ತುಂಬ ಅಮ್ಮಿಯೇ ತುಂಬಿದ್ದಿರಬೇಕು. ಅಜ್ಜಿಯ ಕುರಿತು: ಬದುಕಿನಲ್ಲಿ ಹಲವು ಸಹಸ್ರ ಬಾರಿ ಅತ್ತರೂ ಇಂಗದ ಅಳಲಿನ ಕಡಲು ಅವಳು (ಪುಟ 30). ಕಾವೇರಿ ತನ್ನ ಪ್ರೀತಿಯ ಗೆಳತಿ ಅಮ್ಮಿಯನ್ನು ಬೀಳ್ಕೊಡುವಾಗ ಧರ್ಮಾವರದ ಸೀರೆಯನ್ನು ಬಚ್ಚಿಟ್ಟು ಕೊಡುವುದೂ (ಪುಟ 49) ತುಂಬ ಸಾಂಕೇತಿಕವಾಗಿದೆ. ಭದ್ರಾನದಿಗೆ ಸೇತುವೆ ಕಟ್ಟುವ ಕೆಲಸ ಆರಂಭವಾಯಿತು. ಸೇತುವೆಯ ನಿರ್ಮಾಣಕ್ಕೂ ಅಮ್ಮಿಯ ಜೀವನಕ್ಕೂ ಸಂಬಂಧವಿತ್ತೆನ್ನುವುದನ್ನು ವಿವರಿಸುವುದು ಕಷ್ಟ. ಅವರೆ

ಪರ ಊರವರಿಂದ ತುಂಬಿ ಹೊಸ ರೂಪು ತಳೆದ ಆ ಊರು ಚಿತ್ರ ವಿಚಿತ್ರವಾಗಿ ತೋರುತ್ತ ಆಕೆಯ ಹೃದಯ ಸರೋವರದಲ್ಲಿ ತೆರೆಗಳನ್ನೆಬ್ಬಿಸುತ್ತಿತ್ತು (ಪುಟ 55) ....ಧರ್ಮನಿಷ್ಠರೆದುರು ಸ್ವಾಮಿ ಬಾಳಿಮಣ್ಣೂರಿನಲ್ಲಿ ಬಹಿಷ್ಕಾರದ ಘೋಷಣೆ ಮಾಡುತ್ತಿದ್ದರು. ಇನ್ನು ಮುಂದೆ ಬನಶಂಕರಿ ಬಹಿಷ್ಕೃತೆ, ಜಾತಿ ಬಾಹಿರಳು. ಆದರೆ ಆಗಲೆ, ಆ ಘೋಷಣೆ ಕೇಳಿಸದಷ್ಟು ದೂರ, ಬನಶಂಕರಿ ತನ್ನ ಮಕ್ಕಳೊಡನೆ ಹೊರಟು ಹೋಗಿದ್ದಳು (ಪುಟ 141). ಲೋಕದೊಂದು ಭಾಗದಲ್ಲಿ ನಾಲ್ಕು ವರ್ಷಗಳ ಕಾಲ ಘೋರವಾದೊಂದು ಯುದ್ಧ ನಡೆದು ಶಾಂತಿನೆಲೆಯಾದುದು ಅಮ್ಮಿಗೆ ತಿಳಿದಿರಲಿಲ್ಲ. ಆಕೆಯ ಪ್ರಪಂಚ ಕಿರಿದಾಗಿತ್ತು. ಅಲ್ಲಿಯೋ - ಇದ್ದುದೊಂದೇ, ಅಶಾಂತಿ; ಬಿರುಗಾಳಿ ಬೀಸುತ್ತಿತ್ತು. ಒಂದೇ ಸಮನೆ (ಪುಟ 141). ಅಮ್ಮಿ ತಲೆ ಬೋಳಿಸಿಕೊಂಡುದರಿಂದ ದುಗುಡತಾಳಿದ್ದ ರಾಜಣ್ಣ ಕಾಲೇಜಿಗೆ ತಡವಾಯಿತೆಂದು ಬೇಗನೆ ನಡೆಯುತ್ತಿದ್ದಾಗ ಅವನ ಕಣ್ಣಿಗೆ ಮುಂದೆ ನಡೆಯುತ್ತಿದ್ದ ಹುಡುಗಿಯ ನೀಳವಾದ ಜಡೆ ಕಾಣಿಸುತ್ತದೆ. ಎಷ್ಟು ಮಾಟವಾಗಿದ್ದ ಹೆರಳು! (ಪುಟ 197).

* * * *

ಬನಶಂಕರಿಯ ಜೀವನದಲ್ಲಿ ಕೆಲವು ತಿರುವುಗಳನ್ನು ನಾವು ಗುರುತಿಸಬಹುದು. ಮುಗ್ಧತೆಯೇ ಮೂರ್ತಿವೆತ್ತಂತಿದ್ದ ಅವಳಿಗೆ ಬಾಳಸುತ್ತಿಗೆಯಲ್ಲಿ ಬಿದ್ದ ಏಟುಗಳು ಹಲವು. ಆಕೆ ಅಣ್ಣನ ಚಿತೆಗೆ ಬೆಂಕಿಯಿಟ್ಟು ಮನೆಗೆ ಹಿಂತಿರುಗುತ್ತ ಹಾದಿಯಲ್ಲಿ ಒಂದು ಮಾತು ಅನ್ನುತ್ತಾಳೆ: "ಅಣ್ಣ ಇವತ್ತೇ ಸತ್ತದ್ದು ಒಳ್ಳೆಯದಾಯಿತು, ಅಲ್ವಾ ಮಾವ?" (ಪುಟ 41). ಅತ್ತಿಗೆಯಾಗಿ ಬರಲಿದ್ದ ಹುಡುಗಿಯ ವೈಧವ್ಯ ತಪ್ಪಿತಲ್ಲಾ ಎಂದೆಣಿಸಿಕೊಂಡು ಹೀಗೆಂದಿರಬೇಕು ಆಕೆ. ಹೆಣ್ಣಿನ ಸಂಕಟ ಹೆಣ್ಣೇ ಬಲ್ಲಳು (ಪುಟ 42). ಅಜ್ಜಿಯ ಆಸರೆ ದೊರೆತು ಬಾಳಿಮಣ್ಣೂರಿಗೆ ಹೊರಡಲು ಸಿದ್ಧಳಾಗುತ್ತಾಳೆ. ಗೊತ್ತುಗುರಿ ಇಲ್ಲದ ಯೋಚನೆ, ಗೊತ್ತುಗುರಿ ಇಲ್ಲದ ಜೀವನ (ಪುಟ 48). ಧೈರ್ಯವೊ, ಆತ್ಮವಿಶ್ವಾಸವೊ ಅಂತೂ ಬನಶಂಕರಿ ಎದೆಗುಂದಲಿಲ್ಲ. ತನ್ನ ಬಾಳಿನ ದೋಣಿಯ ಅಂಬಿಗಳೂ ಅವಳಾಗಿರಲಿಲ್ಲ. ಅವಳ ಕೈಯಲ್ಲಿ ಚುಕ್ಕಾಣಿ ಇರಲಿಲ್ಲ. ಹಾಯಿ ಇರಲಿಲ್ಲ ದೋಣಿಗೆ. ಸುಮ್ಮಸುಮ್ಮನೆ ಗೊತ್ತುಗುರಿ ಇಲ್ಲದೆ ಅದು ನೀರಮೇಲೆ ತೇಲುತ್ತಿತ್ತು. ಮುಳುಗಿರಲಿಲ್ಲ, ತೇಲುತ್ತಿತ್ತು (ಪುಟ 78). ಈ ಬಗೆಯಲ್ಲಿ ಸ್ವಂತದ ನಿರ್ಧಾರ ಏನೂ ಇಲ್ಲದೆ, ಅಜ್ಜಿಯ ಆಸರೆಯ ಬಲದಲ್ಲಿ ಮುನ್ನಡೆದಿದ್ದ ಅವಳು ಪುಂಡರ ಉಪಟಳದಿಂದ ಬೇಸತ್ತು ಸಾವಿನ ಯೋಚನೆ ಮಾಡಿದ್ದುಂಟು. ಬಾಳ್ವೆಯ ಸಂಕಟಗಳಿಗೆಲ್ಲ ಸಾವು ಪರಿಹಾರವೆಂದು ತೋರುತ್ತಿತ್ತು. ಆದರೆ ಅಮ್ಮಿ ಸಾವಿನ ಮಾತೆತ್ತಿದಾಗ ಸುಂದರಮ್ಮ ರೇಗಿ ಪ್ರತಿಭಟಿಸುತ್ತಿದ್ದಳು. "....ಇನ್ನು ಮುಂದೆ ಯಾವತ್ತಾದರೂ ಇಂಥ ಮಾತು ಆಡ್ದೆಂತಂದ್ರೆ ನಿನ್ನನ್ನು ಮಾತ್ನಾಡ್ಸೋದೇ ಬಿಟ್ಬಿಡ್ತೀನಿ. ನಮ್ಮನೇಗೂ ನೀನು

ಬರ್ಬೇಡ". ಆಗ ಸುಂದರಮ್ಮನ ಗೆಳೆತನವನ್ನು ಕಳೆದುಕೊಳ್ಳುವುದು ಸಾವಿಗಿಂತಲೂ ಹೆಚ್ಚು ಕಠಿಣವಾಗಿ ಅಮ್ಮಿಗೆ ತೋರುತ್ತಿತ್ತು. (ಪುಟ 71). "ಇನ್ನೊಂದು ಮದುವೆ ಪಾಪವಲ್ಲ ಬನೂ.... ಖಂಡಿತ ಪಾಪವಲ್ಲ. ಧರ್ಮಶಾಸ್ತ್ರದ ಹೆಸರಲ್ಲಿ ನಿನಗೆ ಹಿಂಸೆ ಕೊಡೋದಿದೆಯಲ್ಲ, ಅದು ಪಾಪ.... ಗಂಡ್ಸು ಎರಡನೇ ಮೂರನೇ ಮದುವೆ ಮಾಡಿಕೊಳ್ಳೋವಾಗ ಹೆಂಗಸು - ವಿಧವೆ - ಮತ್ತೊಮ್ಮೆ ಮದುವೆಯಾಗೋದು ಪಾಪವಲ್ಲ" (ಪುಟ 72) - ಹೀಗೆಂದ ಸುಂದರಮ್ಮ ಅಮ್ಮಿಗೆ ಲೋಕಜ್ಞಾನ ನೀಡುತ್ತ ಅವಳ ತಲೆಯಲ್ಲಿ ಹೊಸ ಆದರ್ಶ ತುಂಬುತ್ತಾಳೆ. ಅವಳ ಬಾಳಿನ ಏಳಿಗೆಗೆ ತನ್ನ ಹಾಗೂ ಪತಿಯ ಎಲ್ಲ ನೆರವಿನ ಭರವಸೆ ಕೊಡುತ್ತಾಳೆ. 'ದುರ್ಗೇಶ ನಂದಿನಿ', 'ಮಾಯಾವಿನಿ' ಕಾದಂಬರಿಗಳನ್ನು ಓದಲು ಒದಗಿಸಿದ್ದಾಳೆ. ಇಂಥ ನೆರವಿನ ಬೆಳಕಿನಲ್ಲಿ ಅಮ್ಮಿ ನಿಧಾನವಾಗಿ ಹೊಸ ಭಾವನೆ, ಆದರ್ಶಗಳನ್ನು ಕಟ್ಟಿಕೊಳ್ಳುತ್ತಿರಲು ಅಜ್ಜಿಯ ದೇಹಸ್ಥಿತಿ ವಿಷಮಿಸಿ ಒಂದು ರಾತ್ರಿ ನಿದ್ರೆಯಲ್ಲಿ ಅಸು ನೀಗುತ್ತಾಳೆ. ಇಷ್ಟು ವರ್ಷ ಸ್ವಲ್ಪ ಸ್ವಲ್ಪವಾಗಿಯೇ ನಿರ್ಗತಿಕಳಾಗುತ್ತ ಬಂದಿದ್ದ ಅಮ್ಮಿ ಈಗ ಸಂಪೂರ್ಣ ಅನಾಥಳಾಗುತ್ತಾಳೆ. ಈ ಸಂದರ್ಭದಲ್ಲಿ ನಾರಾಯಣ ರಾಯರ ನೆರವಿನ ಭರವಸೆ, ಬೇರೆ ಮನೆ ಮಾಡಿಕೊಡುವ ಆಶ್ವಾಸನೆ ದೊರೆಯುತ್ತದೆ. "....ಹ್ಯಾಗೂ ಸಾಯೋವರೆಗೂ ಒಬ್ಬಳೇ ಇರೋಕೆ ಆಗುತ್ತೇನು ?" ಅವರ ಈ ಪ್ರಶ್ನೆ ಒಂದು ಎಚ್ಚರಿಕೆಯಂತೆಯೂ ಇದೆ. ತನ್ನ ಬದುಕಿನ ಆಗುಹೋಗುಗಳನ್ನು ತಾನೇ ನಿರ್ಧರಿಸಬೇಕಾದ ಪ್ರಸಂಗ ಎದುರಾಗಿದೆ. ಸಾಯುವುದು ತಪ್ಪು, ಬದಕಬೇಕಾದರೆ ಬೇರೆ ಹಾದೀನೆ ಇಲ್ಲ. ಒಳ್ಳೇದೊ ಕೆಟ್ಟದ್ದೊ ಧರ್ಮವೊ ಅಧರ್ಮವೊ ಗೊತ್ತಿಲ್ಲ, ಆಕೆಗೆ. 'ಬಾ ಅಂತ ಕರೆದಿದ್ದಾರೆ. ಹೊಗ್ತೀನಿ' ಎಂದು ತೀರ್ಮಾನಿಸಿಕೊಂಡಾಗ ಬಹುಪಾಲು ಆದರ್ಶವೇ ಅವಳನ್ನು ಆಳುತ್ತಿದ್ದಿರಬೇಕು. ಹೀಗೆ, ಧರ್ಮದ ಕಟ್ಟುಪಾಡುಗಳ ಕೈದಿಯಾಗಿದ್ದ ಬನಶಂಕರಿ ಬಂಧವಿಮುಕ್ತಳಾಗಿದ್ದಳು. (ಪುಟ 115). ಸುಖಸ್ವಪ್ನ ಕಾಣುತ್ತ ನಿದ್ರೆಹೋಗುವ ಅವಕಾಶ ಅವಳದಾಯಿತು. ಆದರೆ ಲೋಕದ ಕಟು ವಾಸ್ತವದಲ್ಲಿ 'ರಾಯರು ಇಟ್ಟುಕೊಂಡ ಹೆಂಗಸಾಗಿದ್ದಳು ಬನಶಂಕರಿ' (ಪುಟ 117).

ಬಾಳುವೆಯ ದಾರಿಯಲ್ಲಿ ಬಲುದೂರ ಸಾಗಿಬಂದ ಬನಶಂಕರಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾಗ, ನಾರಾಯಣ ರಾಯರು ಹೃದಯ ಸ್ತಂಭನದಿಂದ ತೀರಿಕೊಂಡ ವಾರ್ತೆ ಮಗನಿಂದ ತಿಳಿಯುತ್ತಾಳೆ. ಕಣ್ಣು ಕತ್ತಲು ಕವಿದಂತಾಗುತ್ತದೆ..... 'ಅಂತೂ ಅವರು ತೀರಿಕೊಂಡರು. ಮುತ್ತೈದೆ ಸಾವಿಗಿಂತ ಮಿಗಿಲಾದ ಭಾಗ್ಯವಿಲ್ಲ ಹೆಂಗಸಿಗೆ. ಆದರೆ ತಾನು ಪಾಪಿ. ಎರಡು ಸಾರೆ ತಾನು ವಿಧವೆ, ಎರಡು ಸಾರೆ' (ಪುಟ 193). ನದಿಯ ದಂಡೆಯ ಮೇಲೆ ನಾರಾಯಣ ರಾಯರು ತನ್ನ ಗುಂಗುರು ಕೂದಲು ನೇವರಿಸಿದ್ದ ದಿನದಿಂದ ಈವರೆಗೆ - ಈ ಇಪ್ಪತ್ತೆರಡು ವರ್ಷಗಳು.... ಅವರ ಜತೆಯಲ್ಲಿ

ತಾನು ಕಳೆದದ್ದು ಕೇವಲ ಮೂರು ವರ್ಷ ಆದರೂ ಆತ ಒಳ್ಳೆಯವರು. ತನ್ನ ಜೀವನವನ್ನು ಪರಿಪೂರ್ಣಗೊಳಿಸಿದ ವ್ಯಕ್ತಿ (ಪುಟ 193) ಎನ್ನುವ ಅಮ್ಮಿ ತನ್ನ ಸೌಭಾಗ್ಯವನ್ನು ಹಳಿದುಕೊಳ್ಳುತ್ತಾಳೆ. ಅಂದಿನಿಂದ ಅಮ್ಮಿ ಪೂರ್ಣ ಬದಲಾಗುತ್ತಾಳೆ. ಕೂತರೆ ಮಡಿ, ನಿಂತರೆ ಮಡಿ; ತಿರುಪತಿ ಯಾತ್ರೆಯಲ್ಲಿ ಕೇಶಮುಂಡನ ಮಾಡಿಸಿಕೊಂಡು ಹಿಂತಿರುಗುತ್ತಾಳೆ. ಎಳವೆಯಿಂದಲೇ ಸಕೇಶಿ ವಿಧವೆಯಾಗಿ ಬದುಕಿದ ಅವಳ ಬದುಕಿನಲ್ಲಿ ಎಂತಹ ಬದಲಾವಣೆ! ಮಗ ರಾಜಣ್ಣನಿಗಂತೂ ದುಃಖ ತಡೆಯಲಾಗುವುದಿಲ್ಲ. "ಅಮ್ಮೀ! ಯಾಕಮ್ಮಿ ಹೀಗ್ಮಾಡಿಕ್ಕೆ?" ಎಂದು ಗೋಳಾಡುತ್ತಾನೆ. ಅದು, ತಾನು 'ಮನಸ್ಸಾಕ್ಷಿಯ ಪ್ರೇರಣೆಯಿಂದ ಮಾಡಿಕೊಂಡ ಪ್ರಾಯಶ್ಚಿತ್ತ' ಎಂದು ಆಕೆ ಸಮಾಧಾನ ನೀಡಿದರೆ ಮಗನ ಚಾಟಿಯೇಟಿನಂಥ ಉತ್ತರ ಕ್ರಾಂತಿಕಾರಿ ಧೋರಣೆಯನ್ನು ಧ್ವನಿಸುವಂತಿದೆ. "ಒಬ್ಬ ಪುಟ್ಟ ಹುಡುಗನ್ನ ಕೈಹಿಡಿದ್ಮ್ಯಾಲೆ ನೀನು ವಿಧವೆಯಾದ್ದಕ್ಕೆ ಪ್ರಾಯಶ್ಚಿತ್ತ. ಒಲಿಸ್ಕೊಂಡ ನಾರಾಯಣರಾಯರು ನಾಲ್ಕು ಜನಕ್ಕೆ ಹೆದರಿ ನಿನ್ನ ಕೈಬಿಟ್ಟದಕ್ಕೆ ಪ್ರಾಯಶ್ಚಿತ್ತ. ಕೆಟ್ಟ ಜನ ನಿನಗೆ ಸಾವಿರ ಮಾತಂದು ಸಾವಿರ ಹಿಂಸೆ ಕೊಟ್ಟದ್ದಕ್ಕೆ ಈ ಪ್ರಾಯಶ್ಚಿತ್ತ. ಅಲ್ವೆ ಅಮ್ಮಿ?" (ಪುಟ 196). ಇಂಥ ಮಾತಿನಿಂದ ತಾಯಿಕರುಳನ್ನು ಉರಿಸಬಾರದಾಗಿ ಯಾಚಿಸುವ ಆಕೆ "ಇದನ್ನು ಮನಸ್ಸಿಗೆ ಹಚ್ಕೋಬೇಡ ರಾಜ. ಮರೆತ್ಬಿಡಪ್ಪ. ಅಳಬೇಡ ಮಗು" (ಪುಟ 197) ಎನ್ನುತ್ತಾಳೆ. ರಾಜ ಅಳಲಿಲ್ಲ, ಆದರೆ ಅವನ ಹೃದಯ ಗೋಳಾಡುತ್ತದೆ. ತನ್ನ ಕ್ರಾಪನ್ನು ಹಿಡಿಹಿಡಿಯಾಗಿ ಕೀಳಲೆತ್ನಿಸಿ ತಲೆ ನೋಯಿಸಿಕೊಳ್ಳುತ್ತಾನೆ.

ಸಂಕಷ್ಟಗಳನ್ನೆಲ್ಲ ಸಹನೆಯಿಂದಲೇ ಎದುರಿಸಿದ ಉದಾತ್ತ ಗುಣ ಬನಶಂಕರಿಯದು. ಸಂಪ್ರದಾಯಬದ್ಧ ನಡವಳಿಕೆಯವಳಾದರೂ ಹೊಸತನಕ್ಕೆ ಹೊಂದಿಕೊಳ್ಳುವ ಸ್ವಭಾವವೂ ಅವಳಲ್ಲಿದೆ. ಬೆನ್ನುನೋವಿನ ಬಾಧೆಗೀಡಾಗಿದ್ದಾಗ ಮಗನ ಒತ್ತಾಯದಿಂದ ಹೊಸ ಡಾಕ್ಟರರ 'ಸೀಮೆ ಔಷಧಿ' ಸೇವಿಸಲು ಸಮ್ಮತಿಸುತ್ತಾಳೆ. ಡಾಕ್ಟ್ರ ಆತ್ಮೀಯತೆಯಿಂದ ಮಾತಾಡುತ್ತ ರಾಜಣ್ಣ ಜುಟ್ಟು ತೆಗೆದುಹಾಕಿ ತಮ್ಮ ಹಾಗೆ ಕ್ರಾಪು ಬಿಡಿಸಿಕೊಳ್ಳಲು ನೀಡಿದ ಸಲಹೆ ಅಣ್ಣ, ತಂಗಿ ಇಬ್ಬರಿಗೂ ಒಪ್ಪಿಗೆಯಾಗುತ್ತದೆ. "ಶಾಸ್ತ್ರಕ್ಕೆ ಒಂದಿಷ್ಟು ಪಿಳ್ಳಂಜುಟ್ಟು ಇರಿಸ್ಕೊಂಡು ಮುಂದ್ಗಡೆ ಕ್ರಾಪು ಬಿಡಿಸ್ಕೊಳ್ಳೊ" (ಪು. 166) ಎನ್ನುತ್ತಾಳೆ ತಾಯಿ. ರಾಜಣ್ಣ ಪೂರ್ತಿ ಜುಟ್ಟು ಕತ್ತರಿಸಿಕೊಂಡು ಬಂದಾಗ ಅಮ್ಮಿಗೆ ಸ್ವಲ್ಪ ಕೆಡುಕೆನಿಸಿದರೂ ತೋರಿಸಿಕೊಳ್ಳದೆ ಮಗನ ಸ್ನಾನ ಮಾಡಿಸಿ ಅವನ ಮೊದಲ ಕ್ರಾಪನ್ನ ತಪ್ಪು ತಪ್ಪಾಗಿ ತಾನೇ ಬಿಡಿಸುತ್ತಾಳೆ. ಮಗಳ ಮದುವೆ ಸಂದರ್ಭದಲ್ಲಿ 'ಜಾತಕ ನೋಡಬೇಕಾಗಿಲ್ಲ' ಎಂಬ ಧೋರಣೆಗೂ ಸಮ್ಮತಿ ನೀಡಬೇಕಾಗುತ್ತದೆ. ಎಲ್ಲಕ್ಕೂ ಹೆಚ್ಚಾಗಿ, ಮಗ ಕೈಹಿಡಿಯಲು ಉದ್ದೇಶಿಸಿದ ಹುಡುಗಿ ರಮಾ ಯಾವ ಜಾತಿಯವಳೆಂಬ ವಿಚಾರ ಮಾಡದೆ, ಗುಣವನ್ನೆ ಗಮನಿಸಿ ಆಕೆ ತನ್ನ

ಮಗಳ ಸಮಾನವೆಂದು ಸ್ವೀಕರಿಸುವ ಹೃದಯವೈಶಾಲ್ಯವನ್ನು, ಮರಣ ಶಯ್ಯೆಯಲ್ಲಿ, ತೋರುತ್ತಾಳೆ. ಅಮ್ಮ ಕಣ್ಣ ಸನ್ನೆಯಿಂದ ರಾಜನನ್ನು ಹತ್ತಿರಕ್ಕೆ ಕರೆದಳು. ರಮೆಯ ಕೈ ಮತ್ತು ಆತನ ಕೈ....ನಿಶ್ಶಕ್ತಳಾದ ಅಮ್ಮ ಬಲು ಪ್ರಯಾಸದಿಂದ ಅವುಗಳನ್ನು ಒಂದುಗೂಡಿಸಿದಳು...."ಗಂಡ....ಹೆಂಡತಿಯಾಗಿ....ಸುಖವಾಗಿ ಬಾಳಿ." ಅದು ಅಮ್ಮ ಕೊಟ್ಟ ಆಶೀರ್ವಾದ (ಪುಟ 219).

ಅಮ್ಮಯ ಅವಸಾನವಾದ ಬಳಿಕ ರಾಜಣ್ಣನೂ ರಮೆಯೂ ಬೆಂಗಳೂರಿಗೆ ಹೊರಡುತ್ತಾರೆ. ಹಾದಿಯಲ್ಲಿ ರಮೆಯ ಅಂಗೈಯನ್ನು ಭದ್ರವಾಗಿ ಹಿಡಿಯುತ್ತ ರಾಜಣ್ಣ ಹೇಳಿದ: "ಅಮ್ಮ ಕೊನೆಗೂ ಹೋಗಿಯೇ ಬಿಟ್ಟಳು ರಮಾ. ಅಂತೂ ಒಂದು ಕತೆ ಮುಗಿಯಿತು, ಎಂಥ ರುದ್ರ ಕತೆ!" "ದೇವಿ ಅಂತಾರೆ....ದೇವಿ ಅಂದರೇನೊ ನನಗೆ ತಿಳೀದು ರಮಾ. ಆದರೆ ಯಾವುದೇ ಭವ್ಯದೇವಿಯ ಕಲ್ಪನೆ ಈ ವಾಸ್ತವತೆಗಿಂತ ಯಾವತ್ತೂ ಹೆಚ್ಚಿನದಾಗದು". ಉತ್ತರವಾಗಿ, ರಮಾ "ಹೌದು ರಾಜ. ಆಕೆ ದೇವಿ" (ಪುಟ 219) ಎನ್ನುತ್ತಾಳೆ. ಈ ಭಾವುಕ ಉದ್ಗಾರವೇ, ವಾಸ್ತವವಾಗಿ,ಬನಶಂಕರಿಯ ವ್ಯಕ್ತಿತ್ವದ ಮಾಪನವೆಂದು ಸಮ್ಮತಿಸುವ ಸಹೃದಯರು ಕೃತಿಯ ಸಾರ್ಥಕತೆಯನ್ನು ಗುರುತಿಸಲು ಶಕ್ತರಾಗುತ್ತಾರೆ. ○

ವಿಶ್ವಕಥಾಲೋಕದ ಮನುಷ್ಯ

-ಬಿದರಹಳ್ಳಿ ನರಸಿಂಹಮೂರ್ತಿ

೧

'ಕಥೆ' ಎಂಬುದು 'ಇತಿಹಾಸ'ಕ್ಕೆ ತತ್ಸಮ. ಇವೆರಡೂ ಮನುಷ್ಯನನ್ನು ಕುರಿತು ಬರೆಯುತ್ತವೆ. ಒಂದು ವ್ಯತ್ಯಾಸವೆಂದರೆ ಕಥೆಗಾರ ಕಲ್ಪಿಸಿಕೊಳ್ಳುವ ಮನುಷ್ಯ ಪುರಾವೆ-ದಾಖಲೆಗಳಿಗಿಂತ ಕಥೆಗಾರನ ವೈಯಕ್ತಿಕ ತರ್ಕವನ್ನು ಹೆಚ್ಚು ಅವಲಂಬಿಸಿ ಹುತ್ತಾನೆ. ಇತಿಹಾಸಕಾರ ಕಲ್ಪಿಸುವ ಮನುಷ್ಯ ಇತಿಹಾಸಕಾರನ ವೈಯಕ್ತಿಕ ತರ್ಕಕ್ಕಿಂತ ಹೆಚ್ಚು ಪುರಾವೆ-ದಾಖಲೆಗಳನ್ನು ಅವಲಂಬಿಸಿರುತ್ತಾನೆ. ಆದರೂ ಇತಿಹಾಸಕಾರ ಕಥೆ ಹೇಳಿಬಿಟ್ಟಿರುವ ಹಾಗೂ ಕಥೆಗಾರ ಇತಿಹಾಸ ಕಟ್ಟಿಕೊಟ್ಟಿರುವ ಉದಾಹರಣೆಗಳಿಗೆ ಕೊರತೆ ಇಲ್ಲ. ಈ ದೃಷ್ಟಿಯಿಂದ 'ವಿಶ್ವಕಥಾಕೋಶ' ನಮಗೆ ಮುಖ್ಯವಾಗುತ್ತದೆ.

ಇನ್ನೊಂದು ರೀತಿಯಲ್ಲಿ 'ಕಥೆ' 'ಬದುಕು' ಎಂಬುದರ ತದ್ಭವ. ಬದುಕಿನ ಅನುಭವ ಕಥೆಗೆ ಹುಟ್ಟುಹಾಕುತ್ತದೆ. ಪ್ರತಿಯೊಬ್ಬ ಮನುಷ್ಯನ ಬದುಕೂ ತನ್ನದೇ ಆದ ದೃಷ್ಟಿಕೋನದಿಂದ ವಿಶಿಷ್ಟವಾಗಿರುತ್ತದೆ. ಹಾಗೆಯೇ ಪ್ರತಿಯೊಂದು ಕಥೆಯೂ ಒಂದು ವಿಶಿಷ್ಟ ಅನುಭವಕ್ಕೆ ಮಾಯಾದರ್ಪಣವಾಗಲು ಹವಣಿಸುತ್ತದೆ. ವಿಶ್ವದ ಮೂಲೆ ಮೂಲೆಗಳಿಂದ, ಕಾಲದ ಬೇರೆ ಬೇರೆ ಘಟ್ಟಗಳಿಂದ ಆಯ್ದ ಇಂಥ ನೂರಾರು ಅನುಭವಗಳ ಸಮುದಾಯ ಇಡಿಯಾದ ಮನುಷ್ಯ ಬದುಕಿನ ಆಳ - ಅಗಲಗಳನ್ನು ಪರಿಚಯಿಸುತ್ತದೆ. ದೇಶ ಮತ್ತು ಕಾಲಗಳ ವ್ಯಾಪ್ತಿಯಲ್ಲಿ ಮನುಷ್ಯನ ಸಮಗ್ರತೆಯ ಪಕ್ಷಿನೋಟ ನೀಡುವ ದೃಷ್ಟಿಯಿಂದಲೂ 'ವಿಶ್ವಕಥಾಕೋಶ' ನಮಗೆ ಮುಖ್ಯವಾಗುತ್ತದೆ.

'ವಿಶ್ವಕಥಾಲೋಕ'ದ 'ಮನುಷ್ಯ'ನಿಗೆ ಕುತೂಹಲಕರ ಮುಖಗಳು: ಸಂಗೀತ ಧರ್ಮಶಾಸ್ತ್ರಗಳು ದಕ್ಕದೆ ಯುದ್ಧ ಕಲೆ ಹಿಂಸಾಚಾರಗಳಿಗೆ ಹೆಸರುವಾಸಿಯಾಗಿ ಹಳವಂಡಗಳಲ್ಲಿ ಬೀಳುವ ಕ್ರೂರ ಸೇನಾನಿ; ತನಗೆ ಮಕ್ಕಳಿಲ್ಲದೆ ಹಳ್ಳಿಯ ಮಕ್ಕಳ ಹಸಿವೆಗೆಲ್ಲಾ ತಪ್ಪಲೆ ಹೃದಯವಾಗುವ ತಾಯಿ; ಕೂಡಲು ನೆರೆತರೂ ಹರೆಯದ ಹುಡುಗಿಯರೆದುರು ಪ್ರೇಮಕಾವ್ಯದ ಹೊಳೆ ಹರಿಸುವ ಮುದಿಕವಿ; ಮ್ಯಾಟನಿಯ ಕಡೇ ಘಳಿಗೆಯಲ್ಲಿ ತಡೆಯಲಾರದೆ ಚಡ್ಡಿಯಲ್ಲಿ ಉಚ್ಚೆ ಹೊಯ್ದುಕೊಳ್ಳುವ ಪುಟ್ಟ ಹುಡುಗ; ದೇಶ ಸರ್ವಾಧಿಕಾರದಡಿ ಕಂಗೆಟ್ಟಾಗ ಹೆಲಿಕಾಪ್ಟರ್‌ನಿಂದ ಕರಪತ್ರ ತೂರಾಡಿ ಶತ್ರುಗಳ ಗುಂಡಿಗೆ ಬಲಿಯಾಗುವ ಕ್ರಾಂತಿಕಾರಿ; ಟ್ರಾಮು ಬಸ್ಸುಗಳಲ್ಲಿ ಪ್ರಯಾಣಿಸುವಾಗ ಕೈಕಾಲು ತಾಕಿಸಲು ತವಕಿಸುವ ಗಂಡಸರ ವ್ಯಕ್ತಿತ್ವ ವಿಶ್ಲೇಷಿಸುವ ಕಿಲಾಡಿ ಹುಡುಗಿ; ತನ್ನ ಬಿಡುಗಡೆಗೆ ಶಿಫಾರ್ಸು ಮಾಡುವ ಮೇಜರ್‌ನ ಪತ್ನಿಯನ್ನು ಮಾತಾಡಿಸುತ್ತಲೇ ಅವಳ ಕಿವಿಯ ಹರಳುಗಳನ್ನು ಗೊತ್ತಾಗದಂತೆ ಕದಿಯುವ ಚಾಣಾಕ್ಷ ಕಳ್ಳ; ಪುಟ್ಟ ಬೆರಳುಗಳನ್ನು ಪಿಯಾನೊ ಮೇಲಾಡಿಸಿ ಕನಸಿನ ರಾಜ್ಯ ನಿರ್ಮಿಸಿದ ಹರೆಯದ ಹುಡುಗಿ, ಕಲಾವಿಮರ್ಶಕ, ವೃದ್ಧ ರಾಜಕುಮಾರಿ, ಎಲ್ಲರ ಹೃದಯ ಸೂರೆಗೊಳ್ಳುವ ಬಾಲಮೇಧಾವಿ; ಹೆರಿಗೆ ನೋವು ತಾಳದೆ ಸತ್ತ ಹೆಂಡತಿಯ ಹೆಣದ ಬಟ್ಟೆಗೆಂದು ಭಿಕ್ಷೆ ಎತ್ತಿ ಹೆಂಡ ಕುಡಿದು ಕುಣಿದಾಡುವ ಕ್ಷುದ್ರಗಂಡ; ದಾಂತೆಯ ಮಹಾಕಾವ್ಯ ಚರ್ಚಿಸುವುದು ಮತ್ತು ಹದವಾಗಿ ಬೇಯಿಸಿದ ಏಡಿಯನ್ನು ತಿನ್ನುವುದರ ನಡುವೆ ಓಲಾಡುವ ಮಧ್ಯಮ ವರ್ಗದ ವಿದ್ಯಾರ್ಥಿ; ಬಂಗಾರದ ಬೆನ್ನು ಹತ್ತಿದ ಬಿಳಿಯರು ಸ್ಥಳೀಯ ಕರಿಯರ ಹಳ್ಳಿಗಳನ್ನು ಆಕ್ರಮಿಸಿಕೊಂಡು ಅವರನ್ನು ಕಾಡಿಗೆ ಓಡಿಸಿ ರಾತ್ರೋರಾತ್ರಿ ತನ್ನ ಹಟ್ಟಿಗೆ ವಾಪಸ್ ಬಂದು ಪ್ರಾಣ ಬಿಡುವ ಆದಿವಾಸಿ ಮುದುಕ; ಗಂಡ ತಾಯಿ ಅಣ್ಣ ಅತ್ತಿಗೆ ಯಾರ ಪ್ರೀತಿಯೂ ಸಿಕ್ಕದೆ ಅವರ ಸ್ವಾರ್ಥಕ್ಕೆ ಜೀತದಾಳಿನಂತೆ ದುಡಿದು ಸಾಯುವ ಮಣ್ಣಿನ ಬೊಂಬೆಯಂಥ ಹೆಣ್ಣು ಜೀವ; ಉಪವಾಸವನ್ನೇ ಅಭ್ಯಾಸ ಮಾಡಿಕೊಂಡು ಪ್ರದರ್ಶನದ ವಸ್ತುವಾಗುವ

ಪರಾವಲಂಬಿ ದಲಿತ; ಕ್ಷುಲ್ಲಕ ವಿಷಯಕ್ಕೆ ಜಿದ್ದು ಕಟ್ಟಿ ಸೆರೆಮನೆ ಸೇರಿ ಹದಿನೈದು ವರ್ಷವಿಡೀ ಸಿಕ್ಕ ಸಿಕ್ಕ ಪುಸ್ತಕ ಓದಿ ಮಿದುಳಿಗೆ ಅಜೀರ್ಣ ಮಾಡಿಕೊಳ್ಳುವ ಭ್ರಾಂತ ಯುವಕ; ಮನೆಯಲ್ಲಿ ಯಾರಾದರೂ ಸತ್ತರೆ ಮಾತ್ರ ನೆರೆಯವರು ಕರುಣೆಯಿಂದ ತಿನ್ನಲು ಏನಾದರೂ ಕೊಟ್ಟಾರು ಎಂಬ ಬರಗಾಲದಲ್ಲಿ ಹಾಸಿಗೆ ಹಿಡಿದ ಅಣ್ಣ ಬೇಗನೆ ಸಾಯಲಿ ಎಂದು ಪರಿತಪಿಸುವ ಕಂಗಾಲು ಹುಡುಗ - ಹೀಗೆ ಪಟ್ಟಿ ಬೆಳೆಯುತ್ತದೆ.

ಇಲ್ಲಿನ ಕಥೆಗಳನ್ನು ವಿಶ್ಲೇಷಿಸಿದಾಗ ವಿಶ್ವಕಥಾಲೋಕದ ಮನುಷ್ಯ ಪ್ರತಿನಿಧಿ ನಮಗೆ ಮತ್ತಷ್ಟು ಸ್ಪಷ್ಟವಾಗುತ್ತಾನೆ. ಬದುಕು ಮತ್ತು ಇತಿಹಾಸ ಕುರಿತ ನಮ್ಮ ಅರಿವನ್ನು ಹಿಗ್ಗಿಸುತ್ತಾನೆ. ಕಥಾಕೋಶದ ಉತ್ತಮ ಕತೆಗಳಷ್ಟನ್ನೇ ಪಟ್ಟಿ ಮಾಡಿದರೂ ಅವೆಲ್ಲವನ್ನೂ ಈ ಪ್ರಬಂಧದ ಚೌಕಟ್ಟಿನಲ್ಲಿ ಚರ್ಚಿಸಲು ಸಾಧ್ಯವಿಲ್ಲ. ನನ್ನನ್ನು ತುಂಬ ಕಾಡಿದ ಕಥೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಚರ್ಚಿಸುತ್ತೇನೆ. ಈ ಕೆಲವು ಕಥೆಗಳನ್ನು ಆಯ್ದುಕೊಳ್ಳಲು ಮುಖ್ಯ ಕಾರಣವೆಂದರೆ ಅವು ಒಂದಕ್ಕೊಂದು ಸಾಕಷ್ಟು ಭಿನ್ನವಾಗಿದ್ದು ವಿಶ್ವಮಾನವನ ವಿಭಿನ್ನ ಚಹರೆ ಪಟ್ಟಿಗಳನ್ನು ಚಿತ್ರಿಸುವ ಪ್ರಯತ್ನ ಮಾಡಿರುವುದು.

೨

ಪಿ. ಲಂಕೇಶರ 'ಕುರುಡು ಕಾಂಚಾಣ' (ಸಂಪುಟ 1) ಎಂಬ ಕಥೆ ಹಣ ಹೇಗೆ ಮನುಷ್ಯ ಸಂಬಂಧಗಳನ್ನು ನಿಯಂತ್ರಿಸುತ್ತದೆ ಎಂಬುದನ್ನು ತೋರಿಸುತ್ತದೆ. ಇಲ್ಲಿನ ನಾಯಕ ಸ್ವಂತ ಖುಷಿಗಳ ಲೆಖ್ಖಾಚಾರದಲ್ಲಿ ಮುಳುಗಿರುವ ಮಧ್ಯಮ ವರ್ಗದ ವ್ಯಕ್ತಿ. ಬೆಚ್ಚಗೆ ಬಾಡಿಗೆ ಮನೆ, ವೆಚ್ಚಕ್ಕೆ ಕೈತುಂಬ ಸಂಬಳ, ಇಚ್ಛೆಯನ್ನರಿಯಲು ಹೆಣಗಾಡುವ ಹೆಂಡತಿ ಇದ್ದಾರೆ. ಮನೆ ಮುಂದಿನ ಮಲ್ಲಿಗೆ ಬಳ್ಳಿ ಕಮಾನು ಹತ್ತಿ ಹೂಬಿಡಲು ಹೊರಟಾಗ ಇವನಿಗೆ ಪ್ರಪಂಚ ತನ್ನ ಬಗ್ಗೆ ಎಷ್ಟು ಒಳ್ಳೆಯದಾಗಿದೆ ಎನಿಸುತ್ತದೆ. ತಿಂಗಳ ಕೊನೆ ದಿನ ಆರಾಮಾಗಿ ಕೂತು ಐರಿಷ್ ಕ್ರಾಂತಿಯ ಬಗ್ಗೆ ಪುಸ್ತಕವೊಂದನ್ನು ಓದುತ್ತಿದ್ದಾನೆ. ಮರುದಿನ ಸಿಗುವ ಸಂಬಳದಿಂದಾಗಿ ಈ ಓದು ಅವನಿಗೆ ತುಂಬ ಹಿತ ಕೊಡುತ್ತದೆ. ಹೆಂಡತಿ ಕಾಫಿ ಕೊಟ್ಟು ಮಲ್ಲಿಗೆ ಬಳ್ಳಿ ಮೇಲೆ ಕೂತ ಹಕ್ಕಿಯ ಬಗ್ಗೆ ಪುಟ್ಟ ಪ್ರಶ್ನೆ ಕೇಳುತ್ತಾಳೆ. ಕ್ಷೌರಕ್ಕೆ ಹೋಗಲು ನೆನಪಿಸುತ್ತಾಳೆ. ನಾಯಕ ಸಾಕಷ್ಟು ಮಾತುಗಾರನಾದರೂ ಇನ್ನೊಬ್ಬರು ಮಾತಾಡುವುದನ್ನು ಸಹಿಸಲಾರ. ಅದರಲ್ಲೂ ಕ್ಷೌರಿಕನ ಮಾತೆಂದರೆ ಆಗದು. ಹೀಗಾಗಿ ಮಿತಭಾಷಿ, ಮೈಲಿಮುಖದ ಕ್ಷೌರಿಕನ ಅಂಗಡಿಗೆ ಹೋಗುತ್ತಾನೆ. ಅವನ ಬಗ್ಗೆ ಇವನ ಮಾತು ನೋಡಿ: "ನನ್ನ ಪಾಲಿಗೆ ಅವನು ಯಂತ್ರವಾಗಿದ್ದ. ನಾನು ಅವನ ಯಂತ್ರವಾಗಿದ್ದೆ. ಹಜಾಮನ ಸ್ನೇಹ ನನಗೇಕೆ ಬೇಕು?" ಯಾವತ್ತೂ ಮಾತಾಡದ ಕ್ಷೌರಿಕ ಅವತ್ತು ಇವನ ತಾಯಿಯ ಬಗ್ಗೆ ವಿಚಾರಿಸುತ್ತಾನೆ. ಯಾಕೆ ಅಂದರೆ "ಸುಮ್ಮನೆ" ಎನ್ನುತ್ತಾನೆ.

ಮರುದಿನ ನಾಯಕ ಸಂಬಳಕ್ಕೆ ಹೋಗುವ ಸಡಗರದಲ್ಲಿದ್ದಾಗ ಕ್ಷೌರಿಕ ಅನಿರೀಕ್ಷಿತವಾಗಿ ಗೇಟು ತೆರೆದು ಬರುತ್ತಾನೆ. ಅವನ ತಾಯಿ ಸತ್ತಿದ್ದಾಳೆ. "ಹೆಣ ಹಾಗೆ ಬಿದ್ದಿದೆ ಸಾರ್....ಹದಿನೈದು ರೂಪಾಯಿ ಬೇಕಿತ್ತು" ಅನ್ನುತ್ತಾನೆ. ಭಾವನೆಗಳನ್ನು ತೋರುವುದು ದೌರ್ಬಲ್ಯ ಎಂಬುದು ನಾಯಕನ ಅಭಿಮತ. "ಮಧ್ಯಾಹ್ನ ಬಾ" ಎನ್ನುತ್ತಾನೆ. ಸರಿ, ಮನೆ ಬಾಡಿಗೆ, ಹೊಸ ಮಂಚ, ಮಗುವಿಗೆ ಚೈನು, ಸ್ವೆಟರು, ಕಾಲುಚೀಲ ಇತ್ಯಾದಿ ಬಜೆಟ್ ತಯಾರಿಸಿರುವ ಹೆಂಡತಿ "ಹಾದಿಯಲ್ಲಿ ಹೋಗುವ ಭಿಕಾರಿಗಳಿಗೆಲ್ಲ" ದುಡ್ಡು ಚೆಲ್ಲುವುದನ್ನು ಖಂಡಿಸುತ್ತಾಳೆ. ಮಧ್ಯಾಹ್ನ ಬಂದಾಗ "ಇನ್ನೂ ಸಂಬಳ ತಗೊಂಡಿಲ್ಲ. ಸಂಜೆ ಬಾ" ಎನ್ನುತ್ತಾನೆ. "ಐದು ರೂಪಾಯಿ ಮಾತ್ರ ಕೊಡಬಹುದು" ಎಂದು ಅವನ ಕುಲಗೋತ್ರ ವಿಚಾರಿಸುತ್ತಾನೆ. ಅವನ ಸ್ಥಿತಿಗತಿ ನೋಡಿದರೆ ವಾಪಸ್ ಕೊಡದೆ ಹೋದರೆ ಎಂದು ಹೆದರಿಕೆಯಾಗುತ್ತದೆ. ಸಂಜೆ ಅವನು ಬಂದಾಗ ಮನೆಯಲ್ಲಿಲ್ಲ ಎಂದು ಹೇಳಿಸುತ್ತಾನೆ. ಅದೇ ಹಣದಲ್ಲಿ ಹೆಂಡತಿಗೆ ವಾಯಿಲ್ ಸೀರೆ ಕೊಡಿಸಬಹುದು. ಇಂಗ್ಲಿಷ್ ಸಿನೆಮಾ ನೋಡಬಹುದು. ಮಸಾಲೆದೋಸೆ ತಿನ್ನಬಹುದು ಎಂದುಕೊಳ್ಳುತ್ತಾನೆ.

ಮುಂದಿನ ತಿಂಗಳು ಕ್ಷೌರಕ್ಕೆ ಹೋದಾಗ ಸೆಲೂನ್ ಬಾಗಿಲು ಮುಚ್ಚಿ ಹೋಗಿರುತ್ತದೆ. ಅತ್ಯಂತ ಮಾನವೀಯ ಪ್ರಸಂಗದಲ್ಲೂ ಕ್ಷೌರಿಕನ ಕಷ್ಟಕ್ಕೆ ಒದಗಲಾರದಂತೆ ನಾಯಕನನ್ನು ತಡೆಯುವುದು ಅವನ ವರ್ಗಪ್ರಜ್ಞೆ. ಹಣ ಈ ವರ್ಗಪ್ರಜ್ಞೆಯನ್ನು ಕಾಯ್ದಿರಿಸುವ ಶಕ್ತಿ. ಅತಿಯಾದ ಸ್ವಹಿತಚಿಂತನೆ ಇತರರ ಒಳ್ಳೆಯತನವನ್ನೆ ಅಲ್ಲಗಳೆಯುತ್ತದೆ ಎಂಬುದಕ್ಕೆ ನಾಯಕನ ಹೆದರಿಕೆಗಳೇ ಸಾಕ್ಷಿ. ತಾನು ಸಾಲ ಕೊಡದಿದ್ದುದಕ್ಕೆ ಮುಂದಿನ ಸಲ ಕ್ಷೌರ ಮಾಡುವಾಗ ಆತ ತನ್ನ ಕುತ್ತಿಗೆಯನ್ನೇ ಕೊಯ್ದಾನು ಎಂಬ ಮಟ್ಟಿಗೆ ಹೋಗುತ್ತದೆ ಈ ಹೆದರಿಕೆ. ಆದರೆ ವ್ಯತಿರಿಕ್ತವಾಗಿ ಆ ಬಡವ ಸೆಲೂನು ಮುಚ್ಚಿ ದಾರಿದ್ರ್ಯದ ಹಾದಿ ಹಿಡಿದಿರುತ್ತಾನೆ. ಹಣದಿಂದ ಪ್ರೇರಿತವಾದ ಇಂಥ ಹೆದರಿಕೆಗಳು ಮತ್ತು ಇಲ್ಲದವರ ಕುರಿತ ತಿರಸ್ಕಾರ ವರ್ಗಗಳ ನಡುವಿನ ಕಂದರವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಪರ್ಯಾಯವಾಗಿ ನಾವು ಪೋಷಿಸುತ್ತಿರುವ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತವೆ. ಕ್ರಿಯಾಶಾಲಿಯಾಗದ ನಾಯಕನ ತೊಳಲಾಟ ತನ್ನಷ್ಟಕ್ಕೆ ತಾನೆ ವ್ಯಂಗ್ಯವಾಗುತ್ತದೆ.

ಹೀಗೆ ಮಧ್ಯಮ ವರ್ಗದ ಬದುಕಿನ ಮೂಲಕ ಇಡಿ ವ್ಯವಸ್ಥೆಯನ್ನು ವ್ಯಾಖ್ಯಾನಿಸುವ ಕತೆಗಳೆಂದರೆ 'ದಾಂತೆ ಮತ್ತು ಏಡಿ' (ಸಂ. 10) 'ಪ್ರೇಮ ಮತ್ತು ರೊಟ್ಟಿ' (ಸಂ. 14) 'ಕಮಿಷನರ್ ಸಾಹೇಬರ ಕ್ರಿಸ್‌ಮಸ್' (ಸಂ. 12) ಮತ್ತು 'ಇರುವೆಗಳು' (ಸಂ. 5).

ನೈಜೀರಿಯಾದ ಚಿನುವ ಅಚೀಬೆಯ ಕಥೆ 'ಸೇಡಿನ ಸಾಲಗಾರ' (ಸಂ. 2) ನಾಗರಿಕ ಕ್ರೌರ್ಯದ ಒಂದು ಮಾದರಿಯನ್ನು ಚಿತ್ರಿಸುತ್ತದೆ. ಶ್ರೀ ಮತ್ತು ಶ್ರೀಮತಿ

ಎಮೆನಿಕೆ ಗೌರವಾನ್ವಿತ ಹುದ್ದೆಗಳಲ್ಲಿರುವವರು. ದೇಶೀಯರೆ ಆದರೂ ವಿದ್ಯಾಭ್ಯಾಸ ದಿಂದಾಗಿ ಪ್ರತಿಷ್ಠಿತರೆನಿಸಿ ಸಾಮಾಜಿಕ ಘನತೆಯ ಏಣಿ ಏರಿದವರು. ಇಬ್ಬರೂ ಕಾರು ಗಳಲ್ಲಿ ಕೆಲಸಕ್ಕೆ ಹೋದಾಗ ಇವರ ಮಕ್ಕಳನ್ನು ನೋಡಿಕೊಳ್ಳಲು ಹಾಗೂ ಆರೈಕೆ ಮಾಡಲು ಯಾರಾದರೂ ಬೇಕು. ಆದರೆ ಇತ್ತೀಚೆಗೆ ಸರಕಾರ ತೆರೆದಿರುವ ಉಚಿತ ಪ್ರಾಥಮಿಕ ಶಿಕ್ಷಣದ ತರಗತಿಗಳಿಂದ ಆಕರ್ಷಿತರಾಗಿ ಕೆಲಸದವರೆಲ್ಲ ಬಿಟ್ಟು ಹೋಗು ತ್ತಿರುವುದು ಶ್ರೀ ಮತ್ತು ಶ್ರೀಮತಿ ಎಮೆನಿಕೆಗೆ ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ಸರ್ಕಾರ ಈ ಯೋಜನೆಯನ್ನು ರದ್ದುಗೊಳಿಸಬೇಕೆಂದು ಮಧ್ಯಮ ವರ್ಗದ ಮೇಧಾವಿಗಳು ಹಾಗೂ ರಾಷ್ಟ್ರೀಯ ಪತ್ರಿಕೆಗಳು ತರುತ್ತಿರುವ ಒತ್ತಾಯದಲ್ಲಿ ಈ ದಂಪತಿಗಳೂ ಭಾಗಿ ಯಾಗಿದ್ದಾರೆ.

ಈ ನಡುವೆ ಇವರು ತಮ್ಮ ಮರ್ಸಿಡಿಸ್ - 220 - ಎಸ್. ಕಾರಲ್ಲಿ ಹಳ್ಳಿಗೆ ಹೋಗಿ ಮಾರ್ಥಾ ಎಂಬ ಬಡವಿಧವೆಯ ಹತ್ತು ವರ್ಷದ ಮಗಳು ವೆರೋನಿಕಳನ್ನು ಕೆಲಸದಾಳಾಗಿ ತರುತ್ತಾರೆ. ವರ್ಷಕ್ಕೆ ಐದು ಪೌಂಡು ಸಂಬಳ-ಊಟ-ಬಟ್ಟೆ ಕರಾರಿಗೆ ತಾಯಿ ಸುಲಭವಾಗಿ ಒಪ್ಪಿದರೂ ಮಗಳನ್ನು ಹೇಗೆ ನೋಡಿಕೊಳ್ಳುತ್ತಾರೋ ಎಂದು ಅನುಮಾನಿಸುತ್ತಾಳೆ. ಶ್ರೀ ಎಮೆನಿಕೆ "ನನ್ನ ಹೆಂಡತಿ ಒಬ್ಬ ಸಮಾಜಕಲ್ಯಾಣ ಅಧಿಕಾರಿ. ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕೆಂದು ಅವಳಿಗೆ ಗೊತ್ತು. ನಿನ್ನ ಮಗಳು ನಮ್ಮ ಮನೆಯಲ್ಲಿ ಸಂತೋಷವಾಗಿರ್ತಾಳೆ ಅಂತ ಹೇಳಬಲ್ಲೆ. ಆಕೆ ಮಾಡ ಬೇಕಾದುದಿಷ್ಟೆ: ನನ್ನ ಹೆಂಡತಿ ಕಛೇರಿಗೆ, ಹಿರಿಯ ಮಕ್ಕಳು ಶಾಲೆಗೆ ಹೋದಾಗ ನಮ್ಮ ಪುಟ್ಟ ಮಗುವಿಗೆ ಹಾಲು ಕುಡಿಸಬೇಕು" ಎನ್ನುತ್ತಾನೆ. ವೆರೋನಿಕಳಿಗೆ ಶಾಲೆಗೆ ಹೋಗಬೇಕೆಂಬ ಆಸೆಯಿದೆ ಎಂದು ತಾಯಿ ಹೇಳಿದಾಗ "ಅವಳಿನ್ನೂ ಮಗು. ಶಾಲೆಗೆ ಹೋಗಲು ಇನ್ನೂ ಬೇಕಾದಷ್ಟು ಕಾಲವಿದೆ." ಎನ್ನುತ್ತಾರೆ! ನಮ್ಮ ಮಗು ದೊಡ್ಡದಾದ ಮೇಲೆ ತಾವೇ ಅವಳನ್ನು ಶಾಲೆಗೆ ಕಳಿಸುತ್ತೇವೆ ಇತ್ಯಾದಿ ವರಸಾ ಮಾತಾಡಿ ಹುಡುಗಿಯನ್ನು ಒಯ್ಯುತ್ತಾರೆ.

ವೆರೋ ಹೊಂದಿಕೊಳ್ಳುತ್ತಾಳೆ. ಅಳುವ ಮಗುವನ್ನು ಸಾಂತ್ವನಗೊಳಿಸಲು ಚುಟುಕಗಳನ್ನು ಕಟ್ಟಿ ಹಾಡುತ್ತಾಳೆ. ತನ್ನನ್ನು ಶಾಲೆಗೆ ಕರೆದೊಯ್ಯೆಂದು ಕಾರಿಗೆ ಹೇಳುವ ಅವಳ ಚುಟುಕ ಎಲ್ಲರಿಗೆ ಮೆಚ್ಚುಗೆಯಾಗುತ್ತದೆ. ಇನ್ನೊಂದು ದಿನ ಕೆಂಪು ಮಸಿಯನ್ನು ತುಟಿಗೆ ಬಳಿದುಕೊಂಡಿರುತ್ತಾಳೆ. ದಂಪತಿಗಳು ಬಂದು ನಗುತ್ತಾರೆ. ಅದು ಲಿಪ್‌ಸ್ಟಿಕ್ ಅಲ್ಲ, ವಿಷ ಎಂದು ಎಚ್ಚರಿಸುತ್ತಾರೆ. ಮಗು ಬೇಗನೆ ಬೆಳೆಯು ತ್ತಿಲ್ಲ ಎಂದು ಅಸಹನೆಯಾಗುತ್ತದೆ ವೆರೋಗೆ. ಒಂದು ದಿನ ಅದಕ್ಕೆ ಕೆಂಪು ಮಸಿ ಕುಡಿಸುತ್ತಾಳೆ. ಬಟ್ಟೆಗೆ ಕರೆಯಾದಾಗ ಒಗೆದು ಹಾಕುತ್ತಾಳೆ. ಶ್ರೀಮತಿ ಎಮೆನಿಕೆ ಬಂದು ರಕ್ತ ಹರಿಯುವಂತೆ ಬಾರಿಸುತ್ತಾಳೆ. ಕೂಡಲೇ ಹಳ್ಳಿಗೆ ಒಯ್ದು ಬಿಟ್ಟು,

ಬರುತ್ತಾರೆ. ವಿಷಯ ಕೇಳಿ ಕಂಗಾಲಾದ ಮಾರ್ಥಾ ಮಗಳನ್ನು ಶಿಕ್ಷಿಸಲು ಹೋದಾಗ ಶ್ರೀಮತಿ ಎಮೆನಿಕೆ ಹೇಳುವ ಮಾತು ಕೇಳಿ: "ನೀನು ನನ್ನೆದುರಿಗೆ ದಿಗ್ಭ್ರಮೆ ತೋರಿಸಬೇಕಾ....ನಿನ್ನ ಮಗಳು ಕೊಲೆ ಮಾಡುವುದನ್ನ ನನ್ನ ಮನೆಯಲ್ಲಿ ಕಲಿಯಲಿಲ್ಲ." ತಾಯಿ ಒಳಗೇ ಕುಸಿಯುತ್ತಾಳೆ. ಮಗಳನ್ನು ಹುಚ್ಚಾಬಟ್ಟೆ ಹೊಡೆದು ತಾನೇ ಅಳುತ್ತಾಳೆ. "ಅವನ ಎಲ್ಲ ಮಕ್ಕಳೂ ಶಾಲೆಗೆ ಹೋಗುತ್ತಾರೆ. ಎರಡು ವರ್ಷದ ಮಗು ಕೂಡ. ಅದು ಹುಚ್ಚಲ್ಲ. ನನ್ನಂಥ ಬಡವಿಧವೆಯ ಮಕ್ಕಳು ಹೋಗಬಯಸಿದಾಗ ಮಾತ್ರ ಅದು ಹುಚ್ಚು. ಇದೇನು ಜೀವನ? ದೇವರೆ" ಎಂದು ಕೊರಗುತ್ತಾಳೆ.

ದಲಿತರಲ್ಲೆ ಆರ್ಥಿಕವಾಗಿ ಮುಂದುವರೆದವರು ಉಳಿದವರನ್ನು ಮೆಟ್ಟಿನಿಲ್ಲುವ ಶೀತಲ ಕ್ರೌರ್ಯ ಕಥೆಯ ಉದ್ದಕ್ಕೂ ಹಾಸುಹೊಕ್ಕಾಗಿದೆ. ವಿದೇಶಿ ವಸಾಹತುಶಾಹಿಗಳ ಹಿಂಸೆ, ಮುಂದುವರಿದ ಜನಾಂಗಗಳು ನಡೆಸುವ ಶೋಷಣೆ ಒಂದು ತೆರನಾದರೆ ಇದು ಇನ್ನೊಂದು ತೆರನಾದದ್ದು. ಬೇಲಿಯೇ ಹೊಲ ಮೆಯ್ದಂತೆ. ಮಗುವನ್ನು ಕೊಲ್ಲುವಂತೆ ವೆರೋಳನ್ನು ಪ್ರೇರೇಪಿಸುವುದು ಶಾಲೆಯ ತೀವ್ರ ಆಕರ್ಷಣೆ. ಇದೊಂದು ಹುಚ್ಚು ಎಂಬುದು ಎಮೆನಿಕೆಗಳಂತಹ ಬೂರ್ಷ್ವಾಗಳ ಮೂದಲಿಕೆ. ಜ್ಞಾನದ ಹಕ್ಕು ಯಾರಿಗುಂಟು? ಯಾರಿಗಿಲ್ಲ? ಅದನ್ನು ನಿರ್ಧರಿಸುವ ಅಧಿಕಾರ ಇವರಿಗೆ ಕೊಟ್ಟವರು ಯಾರು? ಬಡವರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ತಮ್ಮ ವೈಭವ ಕಾಪಾಡಿಕೊಳ್ಳುವ ಶ್ರೀಮಂತರ ಹಾಗೂ ಮಧ್ಯಮ ವರ್ಗಗಳ ಮಸಲತ್ತು, ಅಧಿಕಾರಸ್ಥರ ಬೇಕಾಬಿಟ್ಟಿತನ ಕತೆಯಲ್ಲಿ ದೀರ್ಘವಾಗಿ ಚರ್ಚಿತವಾಗಿದ್ದು ವೆರೋಳ ಕತೆಗೆ ಒಂದು ದಾರುಣ ಚೌಕಟ್ಟು ಒದಗಿಸುತ್ತವೆ. ಜನಾಂಗದ್ವೇಷದ ಮಾದರಿಗಾಗಿ 'ಪರಿಶುದ್ಧ ಮಾನವಕುಲ' (ಸಂ. 14) ಮತ್ತು 'ವರದಿ' (ಸಂ. 13) ಕತೆಗಳನ್ನೂ, ಶೋಷಿತರ ಹೃದಯವಂತಿಕೆ ಕುರಿತಂತೆ 'ಎನ್‌ಗೂಲ' (ಸಂ. 8), 'ಮಾರಿಕೊಂಡವರು' (ಸಂ. 1) ಹಾಗೂ 'ಮೊಗಸಾಲೆಯಲ್ಲಿ ಆತಿಥ್ಯ' (ಸಂ. 2) ಕತೆಗಳನ್ನೂ ನೋಡಬಹುದು.

ಚಾರ್ಲ್ಸ್‌ಡಿಕೆನ್ಸ್‌ನ 'ವಿಚಿತ್ರ ಕಕ್ಷಿದಾರ' (ಸಂ. 9) ಶೋಷಿತರ ಸೇಡಿನ ಮನೋಭಾವವನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. ಲಂಡನ್ನಿನ ಕುಪ್ರಸಿದ್ಧ ವಕೀಲನೊಬ್ಬನನ್ನು ಕಾಣಲು ಜಾರ್ಜ್ ಹೆಯ್ಲಿಂಗ್ ಎಂಬ ಶ್ರೀಮಂತ 'ಕಕ್ಷಿದಾರ' ಬರುತ್ತಾನೆ. ಯಾವುದೋ ಒಬ್ಬ ವ್ಯಕ್ತಿಯ ಅನೇಕ ದೊಡ್ಡ ಮೊತ್ತದ ಸಾಲಪತ್ರಗಳನ್ನು ವಕೀಲನ ವಶಕ್ಕೆ ಕೊಟ್ಟು "ಕಾನೂನಿನ ಸರ್ವಶಕ್ತಿಯನ್ನು ಉಪಯೋಗಿಸಿ ಅವನನ್ನು ನಾಶಮಾಡಿ ಬೀದಿಯ ಭಿಕಾರಿಯಾಗಿ ಕೊಳೆತು ಸಾಯೋ ಹಾಗೆ ಮಾಡಿ" ಎನ್ನುತ್ತಾನೆ. ಈ ಕೆಲಸಕ್ಕಾಗಿ ವಕೀಲ ಕೇಳುವ ಭಾರಿ ಮೊತ್ತಕ್ಕೆ ಕೂಡಲೆ ಚೆಕ್ ಬರೆದುಕೊಡುತ್ತಾನೆ. ಆ ಸಾಲಪತ್ರಗಳನ್ನು ಬರೆಯುವವರಿಂದ ಅವುಗಳ

ಮೂರು ನಾಲ್ಕು ಪಟ್ಟು ಹಣಕೊಟ್ಟು ಕೊಂಡಿರುತ್ತಾನೆ. ಮೂರು ವರ್ಷಗಳವರೆಗೆ ಆ ವ್ಯಕ್ತಿಯನ್ನು ಹಣ್ಣುಗಾಯಿ, ನೀರುಗಾಯಿ ಮಾಡಲಾಗುತ್ತದೆ. ನಂತರ ಅವನು ತಲೆಮರೆಸಿಕೊಂಡಿರುವ ಜಾಗ ಪತ್ತೆಮಾಡಿ ಹೆಯ್ಲಿಂಗ್ ಅವನನ್ನ ಮೂದಲಿಸುತ್ತಾನೆ. ಸೆರೆಮನೆಗೆ ಕಳಿಸುವೆ ಎನ್ನುತ್ತಾನೆ. ಮಗಳನ್ನು, ಮೊಮ್ಮಗುವನ್ನು ಜೈಲಲ್ಲಿ ಕೊಳೆಸಿ ಸಾಯಿಸಿದ ಪಶ್ಚಾತ್ತಾಪದಿಂದ, ಮಗನನ್ನು ಸಮುದ್ರದಲ್ಲಿ ಕಳೆದುಕೊಂಡ ಅತೀವ ನೋವಿನಿಂದ ಆ ನಿರ್ವಿಣ್ಣ ಮುದುಕ ಪ್ರಾಣ ಬಿಡುತ್ತಾನೆ. ಅವನು ಮತ್ಯಾರೂ ಅಲ್ಲ, ಜಾರ್ಜ್ ಹೆಯ್ಲಿಂಗನ ಮಾವ.

ರಕ್ತ ಸಂಬಂಧಿಗಳಲ್ಲೇ ಇಂಥ ವಿಚಿತ್ರ ಪ್ರತೀಕಾರದ ಬಯಕೆ. ತಮ್ಮಿಷ್ಟ ದಂತೆ ಮದುವೆಯಾದದ್ದಕ್ಕೊ ಏನೋ ಹುಡುಗ - ಹುಡುಗಿಯರ ಶ್ರೀಮಂತ ತಂದೆ ಗಳಿಬ್ಬರೂ ಅವರನ್ನು ಬೀದಿಗೆ ತಳ್ಳುತ್ತಾರೆ. ಅಳಿಯನಿಗೆ ಸಾಲಕೊಟ್ಟವರನ್ನು ಬಳಸಿಕೊಂಡು ಮಾವ ಅವನನ್ನು ನಿಗೂಢವಾದ ಮಾರ್ಷಲ್ಸೀ ಸೆರೆಮನೆಗೆ ತಳ್ಳುತ್ತಾನೆ "ಅಂದಿನ ದಿನಗಳಲ್ಲಿ ಕಾರಾಗೃಹದಲ್ಲಿ ಕೊಳೆಯುತ್ತಿದ್ದ ಸಾಲಗಾರರಿಗೆ ಬಿಡುಗಡೆಯ ಭರವಸೆಯಾಗಲಿ, ಸ್ವಾತಂತ್ರ್ಯದ ನಿರೀಕ್ಷೆಯಾಗಲೀ ಇದ್ದಿರಲಿಲ್ಲ ಎನ್ನುವ ಮಾತು ಕೇವಲ ಆಲಂಕಾರಿಕವಲ್ಲ." ಇಪ್ಪತ್ತು ವರ್ಷಗಳ ದಾರುಣ ಸೆರೆವಾಸ ಯುವಕನ ಆಸೆಗಳನ್ನು ಕಮರಿಸುತ್ತವೆ. ಸಾಲದೆಂಬಂತೆ ಅವನ ಮಗು ಹೊಟ್ಟೆಗಿಲ್ಲದೇ ಸಾಯುತ್ತದೆ. ಅವನ ಹೆಂಡತಿ ಕೊರಗಿ ಕೊರಗಿ ಅವನ ತೋಳುಗಳಲ್ಲೇ ಸಾಯುತ್ತಾಳೆ. ಈ ದುರ್ಭರ ಪ್ರಸಂಗಗಳು ಅವನ ಮಾನವೀಯ ಭಾವನೆಗಳನ್ನು ಪುಟ್ಟಪೂರಾ ಸುಟ್ಟು ಹಾಕುತ್ತವೆ. ಅವನ ಕನಸುಗಳು ಸೇಡನ್ನು ಅಭಿನಯಿಸುತ್ತವೆ.

ತನ್ನ ಐಶ್ವರ್ಯ ಮಗನಿಗೆ ದಕ್ಕದಂತೆ ಉಯಿಲು ಬರೆಯುವುದರೊಳಗಾಗಿಯೇ ದಿಢೀರ್ ಸಾಯುವ ತಂದೆಯಿಂದಾಗಿ ಹೆಯ್ಲಿಂಗ್ ಬಿಡುಗಡೆಹೊಂದಿ ಧನಿಕನಾಗುತ್ತಾನೆ. ಹೆಂಡತಿಯ ಹೆಣದ ಮುಂದೆ ಮಾಡಿದ ಶಪಥ ಕಣ್ಣುಮುಂದೆ ನಿಲ್ಲುತ್ತದೆ. ಆಕಸ್ಮಾತ್ತಾಗಿ ಸಮುದ್ರತೀರದಲ್ಲಿ ಭೇಟಿಯಾಗುವ ಮಾವನ ಮಗ ಮುಳುಗಿ ಸಾಯುವ ಹೊತ್ತಿನಲ್ಲಿ ನಿರ್ದಯಿಯಾಗುತ್ತಾನೆ. ನಂತರ ಮಾವನನ್ನು ಬಲಿ ತೆಗೆದುಕೊಳ್ಳುತ್ತಾನೆ.

ಸಾಮಾನ್ಯ ಬರಹಗಾರನ ಕೈಯಲ್ಲಿ ಜಾಳಾಗಿ ಹೋಗುತ್ತಿದ್ದ ವಸ್ತು ಡಿಕನ್ಸ್‌ನ ಕಲಾವಂತಿಕೆಯಿಂದ ಉತ್ತಮ ಕತೆಯಾಗಿದೆ. ಲಂಡನ್ನಿನ ವಾಸ್ತವ ವಿವರಗಳು, ಸೆರೆಮನೆಯ ವರ್ಣನೆ, ಮನೋವಿಶ್ಲೇಷಣಾತ್ಮಕ ಕನಸು ಹಾಗೂ ಹಳವಂಡಗಳು, ಭೂತ ವರ್ತಮಾನಗಳನ್ನ ತಳಿಕೆಹಾಕುವ ತಂತ್ರಗಳಿಂದಾಗಿ ಕತೆ ಪರಿಣಾಮದಲ್ಲಿ ಗೆಲ್ಲುತ್ತದೆ. ಸೇಡಿಗೆ ಸೇಡು ಎಂಬ ಸರಳೀಕರಣವಾಗದೆ ನೊಂದ ಮನಸ್ಸು ಹೇಗೆ

ಅಮಾನುಷವಾಗಬಲ್ಲದು, ಅತ್ಯಂತ ಹೇಗೆ ಕ್ರೌರ್ಯಕ್ಕಿಳಿಯಬಲ್ಲದು ಎಂಬುದನ್ನು ತೋರಿಸುತ್ತದೆ. ಹಣ ಹೇಗೆ ಕೌಟುಂಬಿಕ ಸಂಬಂಧವನ್ನೂ ಕೆಡಿಸುತ್ತದೆ, ರಕ್ತ ಸಂಬಂಧವನ್ನೂ ಅಲ್ಲಗಳೆಯುತ್ತದೆ ಎಂಬುದನ್ನು ಚಿತ್ರಿಸುತ್ತದೆ. ಪರ್ಯಾಯವಾಗಿ ಅನಗತ್ಯವಾದಷ್ಟು ಸಂಪತ್ತಿನ ಶೇಖರಣೆ ಮನುಷ್ಯನನ್ನು ಕುರುಡಾಗಿಸುವ ಬಗ್ಗೆ ಎಚ್ಚರಿಸುತ್ತದೆ. ಆರ್ಥಿಕ ಅಸಮಾನತೆ ಹೆಚ್ಚುತ್ತಾ ಹೋದಾಗ ಆತ್ಮೀಯ ವಲಯದಲ್ಲೇ ವರ್ಗಸಂಘರ್ಷ ಅನಿವಾರ್ಯವಾಗುವುದನ್ನು ಧ್ವನಿಸುತ್ತದೆ.

ಹಸಿವು, ಬಡತನ, ರೋಗ ಹೇಗೆ ಮಾನವೀಯ ಭಾವನೆಯ ದಿಕ್ಕು ತಪ್ಪಿಸುತ್ತವೆ ಎನ್ನುವುದಕ್ಕೆ 'ಸತ್ತವನ ಸಮಾರಾಧನೆ' (ಸಂ. 16), 'ಹೆಣದ ಬಟ್ಟೆ' (ಸಂ. 5), 'ಎರಡು ಪ್ರಪಂಚಗಳು' (ಸಂ. 14) ಸ್ವಾರ್ಥ, ಐಶ್ವರ್ಯ, ಅಧಿಕಾರ ಎಂಥ ಧಿಮಾಕಿಗೆ ಎಡೆಕೊಡುತ್ತವೆ ಎಂಬುದಕ್ಕೆ 'ಅವಳ ಮುದ್ದು ಮರಿ' (ಸಂ. 11), 'ಪ್ರಶಾಂತ ಹುಲ್ಲುಗಾವಲು' (ಸಂ. 9), 'ಜಾನ್ ಪ್ರೈಸ್‌ನ ಉಕ್ಕಿನ ಸರಳು'(ಸಂ. 8) ಕಥೆಗಳನ್ನು ನೋಡಬಹುದು.

ಆಸ್ಟ್ರೇಲಿಯನ್ ಕಥೆಗಾರ ಕ್ಸೇವಿಯರ್ ಹರ್ಬರ್ಟ್ ಬರೆದಿರುವ 'ಹಾಡುಗಾರ ಕೈಜೆಕ್' (ಸಂ. 8) ಒಂದು ಅದ್ಭುತವಾದ ಕಥೆ. ಕೈಜೆಕ್ ಮತ್ತು ಅವನ ಹೆಂಡತಿ ನಿನ್ಯೈಲ್ ಹೊಳೆ ದಂಡೆಯ ಮೇಲೆ ನಡೆಯುತ್ತಿದ್ದಾರೆ. ಕೊಳಕು ಬಟ್ಟೆಯ ಲಂಗೋಟಿಯಷ್ಟೇ ಅವನ ಉಡುಪು. ಎಸೆಗೋಲು ಹಿಡಿದು ಮೈತುಂಬ ಬೆವರುತ್ತ ದುಡುದುಡು ನಡೆದಿದ್ದಾನೆ. ಆದಿವಾಸಿಗಳ ನಾಡಿನಲ್ಲೇ ಅತ್ಯಂತ ಖ್ಯಾತ ಹಾಡುಗಾರ ಅವ. ಬರುವ ಹುಣ್ಣಿಮೆ ದಿನ ಅವನು ಪೇಪರ್ ಬಾರ್ಕ್ ಪ್ರದೇಶದ ಮರ್ರಾಥೀಲಾ ಪಂಗಡದ ಮಹಾಮೇಳದಲ್ಲಿ ಹಾಜರಿರಬೇಕು. ತನ್ನ ದಿವ್ಯ ಹಾಡಿನಿಂದ ಎಲ್ಲರೂ ಮೈಮರೆತು ಕುಣಿಯುವಂತೆ ಮಾಡಬೇಕು. ಆದರೆ ಅವನ ಹೊಸ ಹಾಡು ಇನ್ನೂ ಸಿದ್ಧವಾಗೇ ಇಲ್ಲ. ಅವನನ್ನು ನೆರಳಿನಂತೆ ಹಿಂಬಾಲಿಸುವ ನಿನ್ಯೈಲ್ ಅವನಿಗೆ ಸ್ಫೂರ್ತಿ ಸಿಗುವ ಕ್ಷಣಕ್ಕಾಗಿ ಕಾಯುತ್ತ ಸಂಸಾರದ ಗುಡ್ಡುಗಾಪೆಯ ಮೂಟೆ ಹೊತ್ತು ಅವನ ಹಿಂದೆ ಸಾಗಿದ್ದಾಳೆ. ಗುಂಗುರು ಕೂದಲಿನ ತೋರ ಮೈಯಿನ ನಿನ್ಯೈಲ್‌ಗೆ ಗಂಡನ ಪ್ರತಿಭೆ ಕುರಿತು ಅಪಾರ ಹೆಮ್ಮೆ.

ಮರದ ಗೆಲ್ಲುಗಳು, ಕೊಕಾಟೋ ಹಕ್ಕಿಗಳು, ಕ್ಯಾಂಗರೂಗಳ ನಡುವೆ ಡುಗುಡದಿಂದ ಸಾಗುವ ಕೈಜೆಕ್‌ಗೆ ನಾಯಿ ಬೊಗಳುವುದು ಕೇಳಿಸುತ್ತದೆ. ಅಂದರೆ ಹತ್ತಿರದಲ್ಲೆಲ್ಲೋ ಬಿಳಿಯ ಮನುಷ್ಯ ಬಂಗಾರದ ಹುಡುಕಾಟದಲ್ಲಿದ್ದಾನೆ ಎಂದರ್ಥ. ಅವನ ಬಳಿ ತಂಬಾಕು ಇರುತ್ತದೆ ಎಂಬ ಸಂಗತಿ ಕೈಜೆಕ್‌ನನ್ನು ಉತ್ತೇಜಿಸುತ್ತದೆ. ಬಿಳಿಯನ ಡೇರೆಗೆ ಧಾವಿಸುತ್ತಾನೆ. ಐವತ್ತು ವರ್ಷದ ಬಿಳಿಯ ಆ್ಯಂಡಿಗ್ರಾಂಟ್‌ಗೆ

ಎಷ್ಟು ಹುಡುಕಿದರೂ ಬಂಗಾರ ಸಿಗದೆ ಹತಾಶೆಯಾಗಿದೆ. ಹಸಿ ಒಗ್ಗದೆ ಅವನ ಪಿತ್ತಕೋಶ ಕೆಟ್ಟು ಮೈಮೇಲಿ ತುರಿಕಜ್ಜಿಯಾಗಿದೆ. ತನ್ನ ಹುಡುಕಾಟವನ್ನು ಅರ್ಥ ಮಾಡಿಕೊಳ್ಳದ, ಬಂಗಾರದ ಬೆಲೆಯನ್ನು ಅರಿಯದ ಕರಿಯನನ್ನು ಕಂಡರೆ ಕೆಂಡದಷ್ಟು ಕೋಪ ಅವನಿಗೆ. ಕ್ರೈಜೆಕ್‌ನ ಸ್ನೇಹದ ಭಂಗಿ, ಒಲಿಸುವ ಮಾತುಗಳಿಗೆ ರೇಗುತ್ತಾನೆ. "ನಾನು ಚೆನ್ನಾಗಿ ಕೆಲಸ ಮಾಡಬಲ್ಲೆ ಬಾಸ್. ಸೂರ್ಯ ಹುಟ್ಟೋಕಿಂತ ಮುಂಚೇನೆ ಎದ್ದುಬಿಡ್ತೀನಿ" ಎಂದು ಕ್ರೈಜೆಕ್ ಪಟ್ಟುಹಿಡಿದಾಗ "ಬೋಳಿಮಗನೇ" ಎನ್ನುತ್ತ ಪಿಕಾಸಿ ಎತ್ತಿ ಹೊಡೆಯಲು ಬರುತ್ತಾನೆ. ನಾಯಿ ಛೂ ಬಿಡುತ್ತಾನೆ. ಉಪಾಯ ವಿಲ್ಲದೆ ಹೊರಡುತ್ತಾನೆ ಕ್ರೈಜೆಕ್. ಸ್ವಲ್ಪ ದೂರ ಹೋದಾಗ ದೊಡ್ಡ ನೀಲಗಿರಿ ಮರ ವೊಂದು ಬಿರುಗಾಳಿಗೆ ಬಿದ್ದಿರುತ್ತದೆ. ಅದರ ಬೊಡ್ಡೆಯಲ್ಲಿ ತಿನ್ನಲು ಮರಹುಳುಗಳು ಸಿಗಬಹುದೆಂದು ಆಸೆಯಿಂದ ಗಂಡ ಹೆಂಡತಿ ಹೋಗುತ್ತಾರೆ. ಅಲ್ಲಿನ ಕಲ್ಲುಗಳ ನಡುವೆ ಬಂಗಾರದ ಗಟ್ಟಿಯೊಂದು ಸಿಗುತ್ತದೆ. 'ತಂಬಾಕಿಗೆ ತೊಂದರೆಯಿಲ್ಲ' ಎಂದು ಹಲ್ಲುಕಿರಿದು ಬಿಳಿಯನ ಬಳಿ ಓಡುತ್ತಾನೆ. ಬಂಗಾರ ಕಂಡದ್ದೇ ಆ್ಯಂಡಿಯ ರಕ್ತದ ಒತ್ತಡ ಹೆಚ್ಚುತ್ತದೆ. ಹಾರೆ ಗುದ್ದಲಿ ಹೊರಿಸಿಕೊಂಡು ಹೋಗಿ ನೋಡುತ್ತಾನೆ. ಅಲ್ಲಿ ಇನ್ನೂ ಬಂಗಾರದ ಗಟ್ಟಿಗಳು ಸಿಗುತ್ತವೆ. "ಥ್ಯಾಂಕ್ಸ್ ತಮ್ಮಯ್ಯ. ಇದಕ್ಕಾಗಿ ಜೀವಮಾನವಿಡೀ ಹುಡುಕ್ತಾ ಇದ್ದೆ....ಇಷ್ಟರ ತನಕ ಯಾವ ಕರಿಯ ಮನುಷ್ಯನಿಗೂ ಸಿಗದಷ್ಟು ಸಂಬಳ ನಿನಗೆ ಕೊಡುತ್ತೇನೆ. ನಿನ್ನ ಮೇಲೆ ನನಗೆ ತುಂಬಾ ಪ್ರೀತಿ." ಇತ್ಯಾದಿ ಬಡಬಡಿಸುತ್ತ ನೆಲ ಅಗೆಯುತ್ತಾನೆ, ದುರಾಸೆಯಿಂದ. ಕ್ರೈಜೆಕ್ ತಂಬಾಕಿನ ಬಗ್ಗೆ, ಊಟದ ಬಗ್ಗೆ ಪ್ರಸ್ತಾಪಿಸಿದಾಗ ಡೇರೆಗೆ ಹೋಗಿ ಬೇಕಾದ್ದು ತಿಂದು ಕುಡಿ ಯಿರಿ ಎನ್ನುತ್ತಾನೆ. ಹೆಂಡತಿಯೊಡನೆ ಡೇರೆಗೆ ಓಡಿ ಬಿಸಿರೊಟ್ಟಿ, ಮಾಂಸ ತಿನ್ನು ತ್ತಾನೆ. ಬಿಳಿಯನ ಪೈಪಿಗೆ ತಂಬಾಕು ತುಂಬಿ ಸರದಿಯಲ್ಲಿ ಸೇದುತ್ತಾರೆ. ಕ್ರೈಜೆಕ್ ಉರಿಯುವ ಬೆಂಕಿಗೆ ಕಣ್ಣು ನೆಟ್ಟು ಲೋಕವನ್ನೇ ಮರೆಯುತ್ತಾನೆ. ಥಟ್ಟನೆ ಎದ್ದು ಆವೇಶದಿಂದ ತಾಳ ಹಾಕುತ್ತ ಕುಣಿಯುತ್ತಾನೆ.

"ಓ ಮುನ್ನಿಜುರ್ರಾ ಕಾರ್ಜಿನ್ ಜೈ, ಈ ಮಿನಿ ಕಿನ್ನಿ ಗೂಲ್ಟ್
ವ್ಹಾ! ನಾರ್ರಾ ಆಕಿನಿನ್ಯಾ ಕೂರಿ ಮುಂಗವಡ್ಡಿಯೂ...."

ಎಂದು ಕಾಡಿನಹಾಡು ಹುಟ್ಟುತ್ತದೆ. ನಿನ್ನ್ಯಲ್‌ಳ ಕಣ್ಣು ಮಿನುಗುತ್ತದೆ. ತುಟಿ ತೃಪ್ತಿಯಿಂದ ಅಲುಗುತ್ತದೆ.

"ಬಾ ತಮ್ಮಯ್ಯ, ನೋಡು ದೇವರು ಕೊಟ್ಟಿರುವ ನಿಧಿಯನ್ನು" ಎಂದು ಕೂಗುತ್ತ ಬಿಕ್ಕಳಿಕೆ ಹತ್ತಿಸಿಕೊಂಡ ಬಂಗಾರದ ಬೇಟೆಗಾರನನ್ನು ಅವನ ಅವಸ್ಥೆಗೆ ಬಿಟ್ಟು ಕಾಡಿನ ರಾಜ-ರಾಣಿಯರಂತೆ, ಧನ್ಯವಾದ ಕೂಡ ಹೇಳದೆ ಪೇಪರ್ ಬಾರ್ಕ್ ಪ್ರದೇಶದ ಕಡೆ ಹೆಜ್ಜೆ ಹಾಕುತ್ತಾರೆ ಕ್ರೈಜೆಕ್ ಮತ್ತು ನಿನ್ನ್ಯಲ್.

ಸಂಪೂರ್ಣ ಬಹಿರ್ಮುಖಿಯಾಗಿ ಭೌತಿಕ ಸುಖಗಳ ದುರಾಸೆಯಲ್ಲಿ ಕೊಳೆಯುವ ಆ್ಯಂಡಿ ಮತ್ತು ಅಂತರ್ಮುಖಿಯಾಗಿ ಕಲಾತ್ಮಕತೆಯ ಖುಷಿ ಸಾಧಿಸುವ ಕೈಜೆಕ್ ಮನುಷ್ಯ ಸ್ವಭಾವದ ಎರಡು ವಿರುದ್ಧ ಮಾದರಿಗಳನ್ನು ಪ್ರತಿನಿಧಿಸುತ್ತಾರೆ. ಮುಗ್ಧತೆಯ ಅಡಿಗಲ್ಲಾದ ಆದಿವಾಸಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹಣ ಒಂದೇ ಮೌಲ್ಯವಾಗಿರುವ ಆಧುನಿಕ ನಾಗರೀಕತೆಯನ್ನು ವಿಡಂಬಿಸಲಾಗಿದೆ. ಕ್ರಿಶ್ಚಿಯನ್ ಧರ್ಮದ ಬ್ಯಾಟರಿಯನ್ನು ಹಿಡಿದು ನಾಗರೀಕತೆ ಬಿತ್ತಲು ಖಂಡಾಂತರಗಳಿಗೆ ನುಗ್ಗಿದ ಬಿಳಿಯರು ಅಲ್ಲಲ್ಲಿನ ಆದಿವಾಸಿಗಳನ್ನು ಹತ್ತಿಕ್ಕಿದ ಪರಿಯನ್ನು ಸೂಚಿಸುತ್ತ ಕತೆ ಐತಿಹಾಸಿಕ ಆಯಾಮವನ್ನೂ ಗಳಿಸುತ್ತದೆ. ಕೈಜೆಕ್-ನಿನ್ಯುಲ್‌ರ ಕಾಡಿನೊಡಲಿನ ಬದುಕು, ಅಂತರ್ಗಾಮಿಯಾದ ಗಾಢ ಪ್ರೀತಿ, 'ಇಂದು ಇಂದಿಗೆ, ನಾಳೆ ನಾಳೆಗೆ' ಎಂಬ ತೃಪ್ತಿ ಕಥೆಯ ಮಾನವೀಯ ಮೌಲ್ಯವನ್ನು ಹೆಚ್ಚಿಸುತ್ತದೆ. ಇದೊಂದು ಶ್ರೇಷ್ಠ ಕಥೆ.

ಕಲೆ ಬದುಕಿಗೆ ತಳಿಕೆ ಹಾಕಿಕೊಳ್ಳುವ, ವಿವಿಧ ಮಲುಕುಗಳನ್ನು 'ಹಾಯಿ ಪಟಲ' (ಸಂ. 9), 'ಕೊನೆಯ ಎಲೆ' (ಸಂ. 13), 'ದೇವಶಿಲ್ಪಿ' (ಸಂ. 9), 'ಬಾಲಮೇಧಾವಿ' (ಸಂ. 18), 'ಸೇಬಿನ ಮರ' (ಸಂ. 9), 'ಹೆಣ್ಣು ಮತ್ತು ಮಧುಪಾತ್ರೆ' (ಸಂ. 5), 'ಬೂದಿ ಮುಚ್ಚಿದ ಕಿಡಿ' (ಸಂ. 5) ಈ ಕತೆಗಳಲ್ಲಿ ಕಾಣಬಹುದು.

ಜನಪ್ರಿಯ ರಷ್ಯನ್ ಲೇಖಕ ಮ್ಯಾಕ್ಸಿಂ ಗೋರ್ಕಿಯ 'ಮಕರ್‌ಚುದ್ರ' (ಸಂ. 9) ಮತ್ತೊಂದು ಮಾರ್ಮಿಕ ಕಥೆ. ಸಾಹಸಿ ಅಲೆಮಾರಿ ಬದುಕನ್ನುಸಮರ್ಥಿಸುವ ಜಿಪ್ಸಿ ಮುದುಕಿ ಮಕರ್‌ಚುದ್ರ ಕಥೆಗಾರನಿಗೆ ನಿರೂಪಿಸುವ ವೃತ್ತಾಂತವು ಪ್ರೀತಿ ಮತ್ತು ಅಹಂಕಾರ ಪರಸ್ಪರ ತೀಡಿಕೊಂಡಾಗ ಉಂಟಾಗುವ ದುರಂತವನ್ನು ವರ್ಣಿಸುತ್ತದೆ. ರಾದ ಜಿಪ್ಸಿ ಸುಂದರಿ. ಅವಳ ಲಾವಣ್ಯವನ್ನು ವರ್ಣಿಸಲು ತಕ್ಕ ಪದಗಳೇ ಇಲ್ಲ. ಎಷ್ಟೋ ಯುವಕರ ಹೃದಯಗಳನ್ನು ನುಚ್ಚುನೂರು ಮಾಡಿದವಳು. ಶ್ರೀಮಂತ ಜಮೀನ್ದಾರನೊಬ್ಬ ದುಂಬಾಲು ಬಿದ್ದಾಗ ಅವನ ಹಣದ ಥೈಲಿಯನ್ನು ಕಾಲಿಂದ ಒದ್ದು ಅವಮಾನ ಮಾಡಿದವಳು. ಅವಳನ್ನು ಮದುವೆಯಾಗಲು ಎಷ್ಟು ಬೇಕಾದರೂ ಹಣ ಕೊಡುವೆವು ಎಂದಾಗ ರಾದಳ ಅಪ್ಪ ದುನ್ನಿಲಾ ಹೇಳುವ ಮಾತು: "ಶ್ರೀಮಂತರು ಮಾತ್ರ ತಮ್ಮ ಹಂದಿಗಳಿಂದ ಹಿಡಿದು ಆತ್ಮಸಾಕ್ಷಿಯ ವರೆಗೆ ಎಲ್ಲವನ್ನೂ ಮಾರಿಕೊಳ್ಳುತ್ತಾರೆ. ನಾನು.... ಹಾಗೆಲ್ಲ ಮಾರಾಟ ಮಾಡುವಂಥ ಹಲ್ಕ ಮನುಷ್ಯ ಅಲ್ಲ". ನಂತರ ರಾದಳ ಸೌಂದರ್ಯಕ್ಕೆ ಮರ್ದಾಮರ್ದಿಯಾಗುವ ಶೌರ್ಯ ಸಾಹಸದ ಜಿಪ್ಸಿ ಯುವಕ ಲೋಯ್ಕೊ ಬರುತ್ತಾನೆ. ಅವನು ಪಿಟೀಲು ನುಡಿಸುವುದನ್ನು ಅವಳು ಮೆಚ್ಚುತ್ತಾಳೆ. ಪಿಟೀಲನ್ನು ಯಾರು ಮಾಡಿಕೊಟ್ಟರೆಂದು ಕೇಳಿದಾಗ ಲೋಯ್ಕೊ "ನಾನೇ ಮಾಡಿಕೊಂಡೆ. ಮರದಿಂದ ಮಾಡಲಿಲ್ಲ. ನಾನು

ಗಾಢವಾಗಿ ಪ್ರೇಮಿಸಿದ ತರುಣಿಯೊಬ್ಬಳ ವಕ್ಷದಿಂದ ಮಾಡಿದೆ. ನಾನು ನುಡಿಸೋ ತಂತಿಗಳೆಲ್ಲ ಅವಳ ಹೃದಯದ ಎಳೆಗಳು. ಪಿಟೀಲು ಆಗಾಗ ನಿಷ್ಠೆಗೆಟ್ಟು ಅಪಸ್ವರ ಹೊಮ್ಮಿಸುತ್ತದೆ. ಆದರೆ ಕಮಾನನ್ನು ಹೇಗೆ ಬಳಸಬೇಕು ಅಂತ ನನಗೆ ಗೊತ್ತು" ಅನ್ನುತ್ತಾನೆ. ಈ ಮಾತು ರಾದಳ ಅಹಂಭಾವಕ್ಕೆ ನಾಟುತ್ತದೆ. ಅವನಿಗೆ ಬಗ್ಗ ಬಾರದೆಂಬ ಶಪಥದಿಂದ ಪ್ರೀತಿಯನ್ನು ಹತ್ತಿಕ್ಕುತ್ತಾಳೆ. ತಂಡದ ಹಿರಿಯರಿಗೆ ಇವರ ನಡಾವಳಿ ಹೆದರಿಕೆ ಹುಟ್ಟಿಸುತ್ತದೆ. "ಎರಡು ಹೆಬ್ಬಂಡೆಗಳು ಒಂದಕ್ಕಿದಿರಾಗಿ ಇನ್ನೊಂದು ಉರುಳುತ್ತಿರುವಂತೆ" ಅವರಿಗೆ ಭಾಸವಾಗುತ್ತದೆ. ಇಬ್ಬರೂ ವೈಯಕ್ತಿಕ ಸ್ವಾತಂತ್ರ್ಯ ವನ್ನು ವೈಭವೀಕರಿಸಿಕೊಂಡು ಪ್ರೇಮಿಯ ದಾಸ್ಯ ದಕ್ಕಿಸಿಕೊಳ್ಳಲು ಹೆಣಗುತ್ತಾರೆ. ಲೋಯ್ಕೊನ್ನ ರಾದ ಚಾಟಿ ಬೀಸಿ ಕಾಲೆಳೆದು ಬೀಳಿಸುತ್ತಾಳೆ. ಅವನು ಅವಳನ್ನು ಇರಿಯ ಹೋದಾಗ, ಪಿಸ್ತೂಲು ಗುರಿ ಇಟ್ಟು ಅವನ ಶರಣಾಗತಿ ಕೇಳುತ್ತಾಳೆ. ಕಡೆಗೆ ಮದುವೆಯಾಗಿ ಒಬ್ಬರನ್ನೊಬ್ಬರು ಹದ್‌ಬಸ್ತಿಗೆ ತರುವ ಆಲೋಚನೆಯಲ್ಲಿ ಉರಿಯು ತ್ತಾರೆ. ಪ್ರೀತಿಯನ್ನು ಪ್ರಕಟಿಸುವ ನುಡಿಗಟ್ಟುಗಳಲ್ಲಿ ಅಹಂಕಾರವನ್ನೆ ಮೆರೆಸುತ್ತಾರೆ. ತನ್ನ ಮುಂದೆ ಮಂಡಿಯೂರಿ ಬೇಡಿಕೊಂಡರೆ ಮದುವೆಯಾಗುವುದಾಗಿ ರಾದ ಹೇಳು ತ್ತಾಳೆ. ಹಾಗೆ ಮಾಡಲು ಒಪ್ಪಿ ಲೋಯ್ಕೊ ಮದುವೆ ದಿನ ಅವಳನ್ನು ಹಠಾತ್ತಾಗಿ ಇರಿದು ಕೊಲ್ಲುತ್ತಾನೆ. ರಾದಳ ಅಪ್ಪ ದಿಗ್ಭ್ರಮೆಯಲ್ಲಿ ಲೋಯ್ಕೊನನ್ನು ಇರಿದು ಕೊಲ್ಲುತ್ತಾನೆ. ಹೀಗೆ ಕೊನೆಗೊಳ್ಳುತ್ತದೆ.

ಮೇಲುನೋಟಕ್ಕೆ ಮೆಲೊಡ್ರಮ್ಯಾಟಿಕ್ ಅನ್ನಿಸಬಹುದಾದ ಈ ಕಥೆ ಪ್ರೇಮದ ಒಳತೋಟಿಗಳನ್ನು ಹಾಗೂ ಪ್ರೇಮ ವಿಫಲವಾಗುವ ಹೆದರಿಕೆಯಿಂದ ಹುಟ್ಟುವ ರೋಷವನ್ನು ಅಭಿನಯಿಸಿ ತೋರಿಸುತ್ತದೆ. ಪ್ರೀತಿ ಎಂಬುದು ಪಡೆದು ಕೊಳ್ಳುವುದರಲ್ಲಿಲ್ಲ - ಎಲ್ಲವನ್ನೂ ಕೊಟ್ಟುಕೊಳ್ಳುವುದರಲ್ಲಿದೆ ಎಂದು ಪರ್ಯಾಯವಾಗಿ ವ್ಯಾಖ್ಯಾನಿಸುತ್ತದೆ. ಅಹಂಕಾರ ಮೂಲದಿಂದ ಹುಟ್ಟುವುದು ಕೇವಲ ಆಕರ್ಷಣೆ; ಸಮರ್ಪಣ ಭಾವದಿಂದ ಹುಟ್ಟುವುದು ನಿಜವಾದ ಪ್ರೀತಿ.

ಇದೇ ರೀತಿ ಪ್ರೀತಿಯ ನೂರೆಂಟು ಮಗ್ಗುಲುಗಳನ್ನು ಶೋಧಿಸುವ ಕತೆ ಗಳೆಂದರೆ 'ಮರಳುಗಾಡಿನ ಮದುವೆ' (ಸಂ. 23), 'ಡೇಗೆ ಹಕ್ಕಿ' (ಸಂ. 15), 'ಸ್ಯಾಮ್ಸನ್ ಮತ್ತು ಡಿಲೈಲ' (ಸಂ. 19), 'ಹೆಣ್ಣು ಮತ್ತು ಮಧುಪಾತ್ರೆ' (ಸಂ. 5), ಕಣ್ಮರೆಯಾದ ಫೀಬಿ' (ಸಂ. 13), 'ಅಂತ್ಯವಿಲ್ಲದ ಪ್ರೇಮಗೀತೆ' (ಸಂ. 9) ಹಾಗೂ 'ಪ್ರೇಮಕ್ಕೆ ಸ್ಥಾನ' (ಸಂ. 4).

ವೆಲ್ಷ್ ಕತೆಗಾರ ರೈಸ್ ಡೇವಿಸ್‌ನ ಕಥೆ 'ಕ್ಯಾಲೆಬನ ದೋಣಿ' (ಸಂ. 10) ಮನುಷ್ಯನನ್ನು ಕಾಡುತ್ತ ಬಂದಿರುವ ಪುರಾಣ ಪ್ರಜ್ಞೆ ಮತ್ತು ಅದಕ್ಕಂಟಿಕೊಂಡ ಅಧ್ಯಾತ್ಮದ ಪೂರ್ವಗ್ರಹಗಳನ್ನು ಚಿತ್ರವತ್ತಾಗಿ ವಿಡಂಬಿಸುತ್ತದೆ. 'ಗಿಲ್ಗಮೇಶ್'

ಮಹಾಕಾವ್ಯದ 'ಜಲಪ್ರಳಯ ಪ್ರಕರಣ' ಹಾಗೂ ಬೈಬಲಿನ 'ನೋವಾನ ದೋಣಿ' ಪುರಾಣಗಳ ಅಣಕವೇ ಈ ಕಥೆಗೆ ವಸ್ತು. ಮದುವೆಯಾಗದೇ ನಡುವಯಸ್ಸಿಗೆ ಬಂದ ಬಡಕಲು ಶರೀರದ ಬಡವ ಕ್ಯಾಲೆಬನಿಗೆ ದೃಷ್ಟಿ ಸರಿಯಾಗಿಲ್ಲದಿದ್ದರೂ ಬೈಬಲಿನ 'ಕಾಲಜ್ಞಾನ ಪರ್ವ'ವನ್ನು ಓದುವ, ವ್ಯಾಖ್ಯಾನಿಸುವ ಗೀಳು. ಓದಿ ಓದಿ ಕೂಚುಭಟ್ಟನಾದ ಅವನಿಗೆ ಜಗತ್ತು ಮತ್ತೊಮ್ಮೆ ಅತ್ಯುಗ್ರ ರೀತಿಯಲ್ಲಿ ನಾಶವಾಗುವ ಹೆದರಿಕೆ ಶುರುವಾಗುತ್ತದೆ. ಇದನ್ನು ಸಮರ್ಥಿಸುವಂತೆ ಕಾಕತಾಳೀಯವಾಗಿ ಆ ವರ್ಷ ವಿಪರೀತವೆನ್ನಿಸುವ ಚಂಡಮಾರುತವೆದ್ದು ಸಮುದ್ರ ಹುಯ್ಲಿಡುತ್ತದೆ. ಸರಿ. ಟ್ರಾಮ್ ಪ್ರಾಸರ್ ಎಂಬುವನ ಮುರುಕು ದೋಣಿಯನ್ನು ಕೊಂಡು ಕ್ಯಾಲೆಬ್ ನೋವಾನ ಪಾತ್ರದ ತಾಲೀಮಿಗೆ ತೊಡಗುತ್ತಾನೆ. ಅಂಚೆ ವಿತರಕಿ ಮಾರ್ಗಿಯೆಡ್‌ಳ ವಾಸ್ತವವಾದಿ ಮಾತುಗಳನ್ನು ಅಧ್ಯಾತ್ಮದ ಧಿಮಾಕಿನಲ್ಲಿ ತಿರಸ್ಕರಿಸುತ್ತಾನೆ. ಕಡೆಗೆ ಸುಸ್ತಾಗಿ ತೀವ್ರ ನ್ಯೂಮೋನಿಯಾಕ್ಕೆ ತುತ್ತಾಗಿ ಅವಳ ಮಡಿಲಿಗೆ ಬಿದ್ದು ಬದುಕುತ್ತಾನೆ.ಅವಳು ಅವನನ್ನು ಸಾವಿನಿಂದ ರಕ್ಷಿಸಿ ತನ್ನ ಗಂಡನನ್ನಾಗಿ ಮಾಡಿಕೊಳ್ಳುತ್ತಾಳೆ.

ಕಥೆಗಾರ ತಿಳಿ ವ್ಯಂಗ್ಯ ಹಾಗೂ ಚುರುಕು ಹಾಸ್ಯ ಬೆರೆತ ಸಾಂಕೇತಿಕ ಶೈಲಿಯಲ್ಲಿ ಮನುಷ್ಯನ ನೆಲಕ್ಕಂಟುವ ಹಾಗೂ ಆಕಾಶಕ್ಕೆ ನೆಗೆಯುವ ಆಕಾಂಕ್ಷೆಗಳ ಧ್ರುವೀಕರಣವನ್ನು ತೆರೆದಿಡುತ್ತಾನೆ. ಮೌಢ್ಯದಿಂದಾಗಿ ಗಾಳಿ ಗುದ್ದುವ ಕ್ಯಾಲೆಬ್ ಓದುಗನ ಅನುಕಂಪಕ್ಕೆ ಬಿದ್ದರೆ ದಟ್ಟ ವಾಸ್ತವಪ್ರಜ್ಞೆ, ಜೀವಂತಿಕೆ ಹಾಗೂ ದಿಟ್ಟತನಗಳ ಮಾರ್ಗಿಯೆಡ್ ಪ್ರಶಂಸೆ ಗಿಟ್ಟಿಸುತ್ತಾಳೆ. ಕ್ಯಾಲೆಬ್ ಕೊಂಡ ದೋಣಿಯನ್ನು ಬೆಟ್ಟದ ಮೇಲೆ ಸಾಗಿಸುವ ಪ್ರಶ್ನೆ ಬಂದಾಗ ಕೆಲಸದಾಳುಗಳು "ನಿನ್ನನ್ನು ಬಿಟ್ಟು ನಾವೆಲ್ಲರೂ ಮುಳುಗಿ ಹೋಗ್ತೀವೆ. ಇನ್ನು ನಿನ್ನ ಹತ್ತು ಷಿಲ್ಲಿಂಗ್ ತಗೊಂಡು ಏನು ಮಾಡಬೇಕು? ಸ್ವರ್ಗದಲ್ಲಿ ಖಂಡಿತ ಅಂಗಡಿಗಳಾಗಲೀ, ಬ್ಯಾಂಕುಗಳಾಗಲೀ ಇರೋದಿಲ್ಲ" ಎನ್ನುತ್ತಾರೆ. ಇದು ಅವರ ಹಾಸ್ಯಪ್ರಜ್ಞೆ, ಬದುಕನ್ನು ಲಘುವಾಗಿ ಅನುಭವಿಸಬೇಕೆಂಬ ಸಾಮಾನ್ಯ ಜ್ಞಾನ ಹಾಗೂ ಪ್ರಾಪಂಚಿಕತೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಕ್ಯಾಲೆಬನ ಸಂತನ ಪೋಜೇನೂ ಕಡಿಮೆ ಇಲ್ಲ. "ಈ ಹತ್ತು ಷಿಲ್ಲಿಂಗ್ ಕೊಟ್ಟು ಶುಭ್ರವಾದ ಶವವಸ್ತ್ರ ಕೊಂಡಿಟ್ಟುಕೊಳ್ಳಬಹುದು. ಇವತ್ತಿನಿಂದ ಸರಿಯಾಗಿ ಆರನೆ ದಿನ ಅದನ್ನು ಹೊದ್ದು ಮಲಗಿ. ಪ್ರಳಯ ಬೆನ್ನಟ್ಟಿ ಬರ್‍ತಿದೆ" ಎನ್ನುತ್ತಾನೆ. ಅವನ ನಾಲಿಗೆಯಲ್ಲಿ ಪ್ರವಾಹದ ಅಗ್ನಿಯೇ ಇದೆಯೋ ಎಂದು ಅವರಿಗೆ ಭಾಸವಾಗುತ್ತದೆ. ಇಂಥ ಇನ್ನೊಂದು ಪ್ರಸಂಗದಲ್ಲಿ ಅವನ ಮಾತಿಗೆ ಹೆದರಿ "ಬೆಂಕಿಯ ಮುಂದೆ ಎತ್ತಿ ಹಿಡಿದಿದ್ದ ತನ್ನ ಒಳಲಂಗವನ್ನು" ಕೆಳಕ್ಕೆ ಬಿಡುತ್ತಾಳೆ ಮಾರ್ಗಿಯೆಡ್. ಇವನ ಉಪದ್ವ್ಯಾಪವನ್ನು ಕಂಡು ಆಕ್ಷೇಪಿಸುವ ಇಗರ್ಜಿಯ ಮುಖ್ಯಸ್ಥನನ್ನೂ ಓಡಿಸುತ್ತದೆ, ಕ್ಯಾಲೆಬನ ನಾಲಿಗೆ. ಮಾತಿನ ಮೋಡಿಯ ಬುರುಡೆಬಿಟ್ಟು ಸಾಮಾನ್ಯರನ್ನು ತಪ್ಪುದಾರಿಗೆ ಎಳೆಯುವ ಸಂತರ ತಳಿಯವರ ಪ್ರದರ್ಶನರತಿಯನ್ನು ಈ

ಘಟನೆಗಳು ವಿಡಂಬಿಸುತ್ತವೆ. ಬದುಕಿನ ಸುಖ ಸಂತೋಷಗಳನ್ನು ಅಲ್ಲಗಳೆದು ಆತ್ಮಾರ್ಪಣೆಯ ಅಮಾನವೀಯ ಆದರ್ಶವನ್ನು ಹುಟ್ಟುಹಾಕುವುದು ಎಂಥ ದೊಡ್ಡ ತಪ್ಪು ಎನ್ನುವುದು ಕಥೆಯ ಕಡೆಗೆ ಮುನವರಿಕೆಯಾಗುತ್ತದೆ.

ದೇವರು - ಧರ್ಮ, ಆಧ್ಯಾತ್ಮ - ಪುರಾಣಗಳ ಹೆಸರಿನಲ್ಲಿ ಮುಗ್ಧ ಜನಗಳ ಕಣ್ಣಿಗೆ ಮಣ್ಣೆರಚುವ ಷಡ್ಯಂತ್ರಗಳನ್ನು ಕುರಿತು ಇಲ್ಲಿನ ಉತ್ತಮ ಕಥೆಗಳೆಂದರೆ 'ಕೊನೆಯ ದೇವದೂತ' (ಸಂ. 19), 'ಅಕ್ಕ ಆಂತೋನಿಯಾ' (ಸಂ. 19), 'ಬೂದು ಬಣ್ಣದ ಕತ್ತೆ' (ಸಂ. 16) ಹಾಗೂ 'ಒಬ್ಬ ಬುಲೆರೋಗೆ ಲಾಜರು ಸಲ್ಲಿಸಿದ ಸೇವೆ' (ಸಂ. 19).

ಪೋಲೆಂಡಿನ ಕತೆಗಾರ ಬೊಲಿಸ್ಲಾವ್ ಪ್ರೂಶ್ ಬರೆದ 'ಮಾನವ ತಂತಿ' (ಸಂ. 11), ವಿಶ್ವಕಥಾಕೋಶದ ಅತ್ಯುತ್ತಮ ಕಥೆಗಳಲ್ಲಿ ಒಂದು. ಐದು ನಿಮಿಷಗಳಲ್ಲಿ ಓದಬಹುದಾದ ಮೂರು ಪುಟದ ಈ ಪುಟ್ಟ ಕಥೆ ಬದುಕಿನ ಬಗ್ಗೆ ಆಳವಾಗಿ ಯೋಚಿಸಲು ಹಚ್ಚುತ್ತದೆ. ವಸ್ತು ಹೀಗಿದೆ: ಶ್ರೀಮಂತ ಕೌಂಟೆಸ್ ಒಬ್ಬಳು ಅನಾಥಾಲಯಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಮಕ್ಕಳು ಪುಸ್ತಕಕ್ಕಾಗಿ ಕಚ್ಚಾಡುತ್ತಿರುತ್ತವೆ. ಮೇಲ್ವಿಚಾರಣೆಯ ದಾದಿಯನ್ನು ಕೇಳಿದಾಗ ಮಕ್ಕಳಿಗೆ ಪುಸ್ತಕವೆಂದರೆ ಪ್ರಾಣ, ಆದರೆ ಅನಾಥಾಲಯದಲ್ಲಿ ಪುಸ್ತಕಗಳೇ ಇಲ್ಲ ಎಂದು ತಿಳಿಯುತ್ತದೆ. ಕೌಂಟೆಸ್‌ಗೆ ಛೆ ಅನ್ನಿಸುತ್ತದೆ. ಆದರೆ ಹೆಚ್ಚು ಯೋಚಿಸಿದರೆ ಅವಳಿಗೆ ಆಯಾಸವಾಗುತ್ತದೆ. ಮುಂದೊಂದು ದಿನ, ಧಾರ್ಮಿಕ ಪ್ರಶ್ನೆಗಳನ್ನು ಚರ್ಚಿಸಲು ಅವಳ ಮುಖ್ಯ ಸಲಹಾಧಿಕಾರಿಯ ಮನೆಗೆ ಹೋದಾಗ ಪ್ರಾಸಂಗಿಕವಾಗಿ ಈ ಅನಾಥ ಮಕ್ಕಳ ಓದಿನ ಹಸಿವನ್ನು ಪ್ರಸ್ತಾಪಿಸುತ್ತಾಳೆ. ಸಲಹಾಧಿಕಾರಿಗೆ ಮನಸ್ಸು ನೊಂದಹಾಗಾಗುತ್ತದೆ. ತನ್ನ ಮಕ್ಕಳಿಗೆಂದು ಪೆಟ್ಟಿಗೆಯಲ್ಲಿ ತಂದಿಟ್ಟ ಪುಸ್ತಕಗಳೇ ಇವೆ. ಆದರೆ ಅವನ್ನ ತಡಕಾಡಿ ತೆಗೆಯುವುದು ಬೇಜಾರಿನ ಕೆಲಸ. ಹೀಗಾಗಿ ಕೆಳವರ್ಗದ ಜನರ ಸೇವೆಗೆಂದೇ ಜೀವನ ಮೀಸಲಿಟ್ಟ ಒಬ್ಬ ಮಹಾತ್ಮನ ಮನೆಗೆ ಹೋಗಿ ಈ ವಿಷಯ ತಿಳಿಸುತ್ತಾನೆ. ಅವನು ಮರುದಿನವೇ ಹೋಗಿ ಸುಪ್ರಸಿದ್ಧ ದಿನಪತ್ರಿಕೆಯವರಿಗೆ ಈ ಸಂಗತಿ ತಿಳಿಸುತ್ತಾನೆ. ಕೋಲಾಹಲಕರ ಸುದ್ದಿಗಾಗಿ ಕಾಯುತ್ತಿದ್ದ ಪತ್ರಕರ್ತ 'ಪುಟಾಣಿ ಕಂದಮ್ಮಗಳು ಜ್ಞಾನದಾಹದಿಂದ ಪರಿತಪಿಸುತ್ತಿವೆ' ಎಂಬ ಲೇಖನ ಸಿದ್ಧಪಡಿಸಿ ಸಂತೃಪ್ತಿಯಿಂದ ಶಿಳ್ಳೆಹಾಕುತ್ತ ಊಟಕ್ಕೆ ಹೋಗುತ್ತಾನೆ. ಇದಾದ ನಂತರ ಭಾನುವಾರ ಬೇಗ ಜಡಿದ ಪತ್ರಿಕಾಲಯದ ಮುಂದೆ ಕೊಳಕು ಬಟ್ಟೆಯ ಒಬ್ಬ ಬಡವ, ಬಿಳಿಚಿ ಕೃಶನಾದ ಅವನ ಪುಟ್ಟ ಮಗಳು ಒಂದಿಷ್ಟು ಹಳೆಯ ಪುಸ್ತಕಗಳನ್ನು ಹಿಡಿದು ನಿಂತಿದ್ದಾರೆ. ನಮ್ಮ ಲೇಖಕ ಅವರನ್ನು ವಿಚಾರಿಸಿದಾಗ, ಅವರು ಪುಟಾಣಿ ಕಂದಮ್ಮಗಳಿಗೆ ಪುಸ್ತಕ ಕೊಡಲು ಬಂದದ್ದು ತಿಳಿಯುವುದು. ಅಪ್ಪ ಮಗಳು ಅಂಜುತ್ತ

ಕೈಜೋಡಿಸಿ ಪುಸ್ತಕಗಳನ್ನು ಒಪ್ಪಿಸಿ ಹೊರಡುತ್ತಾರೆ. ಪತ್ರಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಹೆಸರೇನು ಎಂದು ಕೇಳಿದರೆ ಮುಜುಗರದಿಂದ "ಅದೇನು ಬ್ಯಾಡ ಸರ್, ದಯವಿಟ್ಟು. ನಾನೊಬ್ಬ ಬಡವ, ಹ್ಯಾಟ್ ಕಾರ್ಖಾನೆಯಲ್ಲಿ ಕೆಲಸ ಮಾಡ್ತಿದೀನಿ." ಎನ್ನುತ್ತಾನೆ: ತನ್ನ ಈ ವಸ್ತುವನ್ನು ತಾನೇ ವ್ಯಾಖ್ಯಾನಿಸುತ್ತ ಕತೆಗಾರ ಕೊನೆ ಪ್ಯಾರಾದಲ್ಲಿ ಹೀಗೆ ಹೇಳುತ್ತಾನೆ: "ನನಗೆ ಒಂದು ಹೊಸಕ್ರಮದಲ್ಲಿ ತಂತಿ ಸುದ್ದಿ ಕಳಿಸುವ ಯೋಚನೆ ಬಂತು. ಮುಖ್ಯ ತಂತಿ ಕಛೇರಿ ಅನಾಥಾಲಯ - ಹ್ಯಾಟ್ ಫ್ಯಾಕ್ಟರಿಯು ಆ ಬಡ ಕೆಲಸಗಾರ ಸ್ವೀಕಾರ ಕೇಂದ್ರ. ಮುಖ್ಯ ಕೇಂದ್ರ ಅಟೆನ್‌ಷನ್ ಎಂದು ಸಂಜ್ಞೆ ಕೊಟ್ಟಾಗ ಸ್ವೀಕಾರ ಕೇಂದ್ರ ತಕ್ಷಣವೇ ಪಡಿಮಿಡಿದು ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ. ಒಂದು 'ಬೇಕು' ಎಂದಾಗ ಇನ್ನೊಂದು 'ಇಕೊ ತೆಗೆದುಕೊ' ಎನ್ನುತ್ತದೆ. ಉಳಿದ ನಾವೆಲ್ಲರೂ ತಂತಿ ಕಂಬಗಳು."

ಮಿದುಳಿನಲ್ಲಿ ಪ್ರೀತಿ ಅನುಕಂಪಗಳ ತರಂಗಗಳನ್ನೆಬ್ಬಿಸುವ ಈ ಕಥೆ ಎರಡು ಮುಖ್ಯ ಸಂಗತಿಗಳನ್ನು ಸಾರುತ್ತದೆ. ಮೊದಲನೆಯದಾಗಿ ದೀನರ ಎದೆ ಬಡಿತ ದೀನರಿಗೆ ಮಾತ್ರ ಕೇಳಿಸುತ್ತದೆ ಎಂಬುದು; ಸುಲಭವಾಗಿ ದಕ್ಕಿದ ಹಣದಲ್ಲಿ, ಐಷಾರಾಮದಲ್ಲಿ ತೇಲುವವರಿಗೆ ಆ ಎದೆ ಬಡಿತ ಕೇಳಿಸುವುದೇ ಇಲ್ಲ. ಅವರ ಎದೆ ಕದಗಳನ್ನು ಅವು ತಟ್ಟುವುದೇ ಇಲ್ಲ ಎಂಬುದು. ಎರಡನೆಯದಾಗಿ ಕ್ರಿಯಾಶಾಲಿಗಳಾಗುವುದು ನೆರೆಹೊರೆಯವರ ಬೇಕು ಬೇಡಗಳಿಗೆ, ಕಷ್ಟಗಳಿಗೆ ತುಡಿಯುವುದು ಅಂಥದೇ ಕಷ್ಟ ಅನುಭವಿಸುವ ಬಡವರಿಗೆ ಮಾತ್ರ ಸಾಧ್ಯ ಎಂಬುದು. ಪರೋಕ್ಷವಾಗಿ ಇದು ಬದಲಾವಣೆ ಕುರಿತೂ ಹೇಳುವಂತಿದೆ. ಬಡವರು ದೀನರು ದಲಿತರು ಶೋಷಿತರು ನೋವು ಉಂಡವರು ಮಾತ್ರ ಬದಲಾವಣೆ ತರುವ ದಿಕ್ಕಿನಲ್ಲಿ ಕ್ರಿಯಾಶಾಲಿಗಳಾಗ ಬಲ್ಲರೆ ಹೊರತು ಮಧ್ಯಮ ವರ್ಗದವರಲ್ಲ. ಹೊಟ್ಟೆ ತುಂಬಿದ ಮಂದಿಯ ಮರುಕವೂ ಅಸಹ್ಯವಾಗಿರಬಲ್ಲುದು, ಅಪ್ರಾಮಾಣಿಕವಾಗಿರಬಲ್ಲುದು. ಹೆಚ್ಚೆಂದರೆ ಮಧ್ಯಮ ವರ್ಗದವರು ಸಂದೇಶವಾಹಕ ಕಂಬಗಳಾದಾರು ಅಷ್ಟೆ. ನಮ್ಮ ಇಡೀ ನಡಾವಳಿಯ ಪ್ರತಿಯೊಂದು ಹೆಜ್ಜೆಯೂ ನಮ್ಮ ನಮ್ಮ ಆರ್ಥಿಕಮಟ್ಟ ಹಾಗೂ ಅದರಿಂದ ಉಗಮವಾಗುವ ಮನೋಭಾವವನ್ನವಲಂಬಿಸಿದೆ ಎಂದು ಸೂಚಿಸುವ ಇದು ಒಂದು ಶ್ರೇಷ್ಠ ಕತೆ.

ಈ ಮಾನವೀಯ ತುಡಿತ ಎಂಥ ಉದಾತ್ತತೆಗೆ, ತ್ಯಾಗಕ್ಕೆ ಒಯ್ಯುತ್ತದೆ ಎನ್ನುವುದಕ್ಕೆ 'ಪದಕ' (ಸಂ. 7), 'ಕೊನೆಯ ಎಲೆ' (ಸಂ. 13) ಕಥೆಗಳನ್ನೂ ಅಂಥ ತುಡಿತದ ಅಭಾವದಿಂದ ಎಂಥ ಹಿಂಸೆ ಸಾಧ್ಯ ಎಂಬುದಕ್ಕೆ 'ಪಾಶ' (ಸಂ. 21), 'ಮುಸ್ತಾಫಾ ಮಜದರ್' (ಸಂ. 12), 'ಸುಭಾಷಿಣಿ' (ಸಂ. 5) ಮತ್ತು 'ಬೂದು ಬಣ್ಣದ ಕ್ಯಾಂಗರೂ' ಕಥೆಗಳನ್ನು ನೋಡಬಹುದು.

ಯುಗೋಸ್ಲಾವಿಯಾದ ಕಥೆಗಾರ ಮಿಲೋವನ್ ಜಿಲಾಸ್‌ನ ಕಥೆ 'ಯುದ್ಧ' (ಸಂ. 12) ಯುದ್ಧವೆಂಬುದರ ಉದ್ದೇಶ - ಪರಿಣಾಮಗಳನ್ನು ವಿಶ್ಲೇಷಿಸುತ್ತ ಮನಸ್ಸಿಗೆ ನೆಟ್ಟು ನಿಲ್ಲುತ್ತದೆ. ಎರಡು ನದಿಗಳ ನಡುವಿನ ಒಂದು ಗಡಿ ಪ್ರದೇಶದಲ್ಲಿ ರಣರಂಗವೇರ್ಪಟ್ಟಿದೆ. ಹಳ್ಳಿಗಳನ್ನು, ದ್ರಾಕ್ಷಿ ತೋಟಗಳನ್ನು ಹೊತ್ತ ನೆಲ ಚಿತ್ರ ಹಿಂಸೆಯನ್ನು ಅನುಭವಿಸುತ್ತಿದೆ. "ಯಾವುದನ್ನೂ ಬಿಡದೆ ಎಲ್ಲವನ್ನೂ ನಾಶ ಮಾಡುವುದೇ" ಯುದ್ಧದಲ್ಲಿ ಅತ್ಯಂತ ಜಾಣತನದ ಕಾರ್ಯತಂತ್ರವಾಗಿ ಪರಿಣಮಿಸುತ್ತದೆ. ಪರಿಣಾಮವಾಗಿ ಮನೆಗಳು, ಬೆಳೆದುನಿಂತ ಹೊಲಗಳು, ಸೇತುವೆಗಳು, ವಸ್ತುಸಂಗ್ರಹಾಲಯಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲಕ್ಕಿಂತ ಮೇಲಾಗಿ ಮನುಷ್ಯರು ಮತ್ತು ಅವರ ಜೀವನಾಧಾರಗಳು ಅದಕ್ಕೆ ಬಲಿಯಾಗುತ್ತವೆ." ಹೀಗೆ ಯುದ್ಧದ ಹಿಂಸೆ - ಭೀಕರತೆಗಳ ಒಟ್ಟು ಪರಿಣಾಮವನ್ನು ಕಟ್ಟಿಕೊಡುತ್ತ ಸಾಗುವ ಕಥೆ ಒಮ್ಮೆಲೆ ಒಂದು ನಿರ್ದಿಷ್ಟ ಘಟನೆಯ ಮೂಲಕ ಕ್ರೌರ್ಯದ ಆಯಾಮವನ್ನು ಪಡೆದುಕೊಳ್ಳುತ್ತದೆ. ಯುದ್ಧದ ಮಧ್ಯದಲ್ಲೂ ಜನ ಬದುಕಬೇಕಲ್ಲ. ಒಂದು ಸೇತುವೆಯಾಗಲಿ, ಹಾಯ್ಗಡುವಾಗಲಿ, ತೆಪ್ಪವಾಗಲಿ ಉಳಿಯದೆ ಎಲ್ಲ ನಾಶವಾದಾಗ ಜನ ನದಿ ದಾಟಲು ಮಿಲಿಟರಿಯವರ ಮೋಟಾರ್ ಬೋಟನ್ನೇ ಅವಲಂಬಿಸಬೇಕಾಗುತ್ತದೆ. "ಸೈನಿಕರಲ್ಲದಿದ್ದಾಗ ಎಲ್ಲ ಸೈನಿಕರೂ ಒಳ್ಳೆಯವರೇ." ಸ್ಥಳೀಯ ಜನರ ಸೇವೆಗೂ ಅವರು ತಯಾರು. ಮೋಡ ಮುಸುಕಿ ಚಳಿ ಬಿದ್ದ ಒಂದು ಮಧ್ಯಾಹ್ನ ಒಬ್ಬ ರೈತ ಮುದುಕ ಹಾಗೂ ಮುದುಕಿ ಕುದುರೆಗಾಡಿಯಲ್ಲಿ ಒಂದು ಶವಪೆಟ್ಟಿಗೆ ಸಾಗಿಸುತ್ತಿದ್ದಾರೆ. ಅವರ ಆಕ್ರಂದನ ಎಲ್ಲರ ಮನಸೆಳೆಯುತ್ತದೆ. ಆಚೆ ದಡಕ್ಕೆ ಒಯ್ಯಲು ಗಾಡಿಯನ್ನೇ ಮೋಟಾರು ಬೋಟಿನಲ್ಲಿ ನಿಲ್ಲಿಸುತ್ತಾರೆ. ಕ್ಯಾಪ್ಟನ್ ಆ ಮುದುಕನನ್ನು ಸಮಾಧಾನಪಡಿಸುತ್ತ "ಯಾರದು ಶವ-ಪೆಟ್ಟಿಗೆಯಲ್ಲಿ" ಎಂದು ಕೇಳಿದಾಗ "ನನ್ನ ಒಬ್ಬನೇ ಮಗ. ಈಗಾಗಲೇ ಇಬ್ಬರನ್ನು ಯುದ್ಧದಲ್ಲಿ ಕಳೆದುಕೊಂಡಿದ್ದೆ. ಈಗ ಉಳಿದೊಬ್ಬನನ್ನೂ ಕಳೆದುಕೊಂಡೆ" ಎಂಬ ವಿದ್ರಾವಕ ಉತ್ತರ ಕೇಳಿಬರುತ್ತದೆ. ಎತ್ತರದ ನಿಲುವಿನ ಮತ್ತೊಬ್ಬ ರೈತ ತಾನೂ ಮಗನನ್ನು ಕಳೆದುಕೊಂಡದ್ದಾಗಿಯೂ ಅವನ ಹೆಣವನ್ನು ಸಂಗಾತಿಗಳ ಹೆಣಗಳ ಜೊತೆಗೇ ಬಿಟ್ಟು ಬಂದುದಾಗಿಯೂ ಹೇಳುತ್ತಾನೆ. ಈ ಮುದುಕ, ಮುದುಕಿಗೆ ಯುದ್ಧರಂಗದಲ್ಲಿ ಅಚ್ಚುಕಟ್ಟಾದ ಶವಪೆಟ್ಟಿಗೆ ಎಲ್ಲಿಂದ ಸಿಕ್ಕಿತು ಎಂದು ಗುಮಾನಿಸಪಡುತ್ತಾನೆ. ಆಚೆ ದಡ ತಲುಪಿದ ಕೂಡಲೆ ತನ್ನ ಗುಮಾನಿಯನ್ನು ಮೇಜರ್‌ನ ಕಿವಿಯಲ್ಲಿ ಊದುತ್ತಾನೆ. ಮೇಜರ್ ಹಾಗೂ ಕ್ಯಾಪ್ಟನ್ ಕುದುರೆ ಗಾಡಿಯನ್ನು ತಡೆದು ನಿಲ್ಲಿಸಿ ಶವಪೆಟ್ಟಿಗೆ ತೆರೆಸುತ್ತಾರೆ. ಅದರಲ್ಲಿ ಕಪ್ಪು ಕೂದಲಿನ, ಸುಣುಪಾಗಿ ಮುಖಕ್ಷೌರ ಮಾಡಿದ ಹರೆಯದ ಯುವಕ. "ಸೈನ್ಯದಿಂದ ತಪ್ಪಿಸಿಕೊಂಡು ಬರ್ತಿದಾನಾ ?" ಎಂಬ ಪ್ರಶ್ನೆಗೆ ಮುದುಕನ ಉತ್ತರ ನೋಡಿ: "ಅಲ್ಲ, ಅವನನ್ನು ನಾನು ಉಳಿಸಬೇಕಿತ್ತು. ನಾನು ನನ್ನ ಸಂಸಾರ

ಮುಂದುವರಿಸಬೇಕು.ನನ್ನ ಸಂಸಾರವೇ ನಾಶವಾದ ಮೇಲೆ ನನ್ನ ಭೂಮಿ ಇದ್ದು, ನನ್ನ ಮನೆ ಇದ್ದು, ನನ್ನ ದೇಶ ಇದ್ದು ಏನು ಪ್ರಯೋಜನ ?" ಮೇಜರ್ ತನ್ನ ಮಿಲಿಟರಿ ಗತ್ತಿನಲ್ಲಿ ಆಜ್ಞೆ ನೀಡುತ್ತಾನೆ. ಮುದುಕ ಮುದುಕಿಯ ದೈನ್ಯಾಸ ಬೇಡಿಕೆಗಳನ್ನು ಅಲಕ್ಷಿಸಿ ಅವರ ಮಗನನ್ನು ಗುಂಡಿಟ್ಟು ಕೊಲ್ಲಲಾಗುತ್ತದೆ.

ಕೇವಲ ಕೆಲವರ ಅಧಿಕಾರದಾಹ, ಕೀರ್ತಿದಾಹ, ಪ್ರತಿಷ್ಠೆಗಳಿಂದ ಉದ್ಭವಿಸುವ ಈ ಯುದ್ಧಗಳು ಎಷ್ಟು ಅಮಾನುಷವಾಗುತ್ತವೆ, ಎಂಥ ಜೀವ ವಿರೋಧಿ ನಿಲುವು ತಳೆಯುತ್ತದೆ ಎಂಬುದನ್ನು ಈ ಕತೆ ಬಿತ್ತರಿಸುತ್ತದೆ. ಯುವಕನನ್ನು ಕೊಲ್ಲಿಸಿದ ನಂತರ ಮೇಜರ್ ಹೇಳುವ "ನಾವು ನಮ್ಮ ಕರ್ತವ್ಯವನ್ನು ಮಾತ್ರ ಮಾಡಿದ್ದೇವೆ. ಇನ್ನು ಮುಂದೆಯೂ ಅದನ್ನು ಮಾಡಿಯೇ ಮಾಡುತ್ತೇವೆ." ಎಂಬ ಮಾತು ಭಳಕು ಮೂಡಿಸಿ ಅಸಹ್ಯ ಹುಟ್ಟಿಸುತ್ತದೆ. ಕ್ರೂರ ವ್ಯಂಗ್ಯವಾಗುತ್ತದೆ. ತನ್ನ ಗುಮಾನಿಯಿಂದ ಇಂಥ ಎಡವಟ್ಟು ಮಾಡಿಟ್ಟ ಮತ್ತೊಬ್ಬ ರೈತ "ನನಗೆ ಇಂಥ ದುರ್ಬುದ್ಧಿ ಯಾಕಾದ್ರು ಬಂತಪ್ಪ!" ಎಂದು ಹಲುಬುವುದು ಅವನ ಜೀವಪರ ವಿಚಾರವನ್ನು, ಆದರಿಂದಾಗಿ ಹುಟ್ಟುವ ಪಶ್ಚಾತ್ತಾಪವನ್ನು ಎತ್ತಿತೋರಿಸುತ್ತದೆ; ಅಲ್ಲದೆ ಶುಷ್ಕ ಸತ್ಯಸಂಧತೆಯನ್ನು, ಬದುಕನ್ನೇ ಧಿಕ್ಕರಿಸುವ ಕರ್ತವ್ಯಪ್ರಜ್ಞೆಯನ್ನು ಅಲ್ಲಗಳೆಯುತ್ತದೆ. ವ್ಯಂಗ್ಯ ವಿಡಂಬನೆ ಧ್ವನಿ ಸಾಧ್ಯತೆಗಳಿಂದಾಗಿ ಈ ಕಥೆ ಯುದ್ಧವೆಂಬ ಪ್ರವೃತ್ತಿಯನ್ನು ಬೇರು ಸಮೇತ ಅಲ್ಲಾಡಿಸುತ್ತದೆ.

ಮಾನವನ ಇತಿಹಾಸದುದ್ದಕ್ಕೂ ಯುದ್ಧದ ಪ್ರವಾಹ ಹರಿದಿದೆ. ನಮ್ಮ ಶತಮಾನದಲ್ಲಂತೂ ಭೂಮಂಡಲವನ್ನೇ ನಡುಗಿಸಿದ ಮಹಾಯುದ್ಧಗಳು ಜರುಗಿವೆ. ಜರುಗುವ ಭೀತಿ ತೂಗುತ್ತಿದೆ. ಈ ಹಿನ್ನೆಲೆಯಲ್ಲಿ ಕಥಾಕೋಶದ ಯುದ್ಧದ ಕಥೆಗಳು ತುಂಬ ಮುಖ್ಯವಾಗುತ್ತವೆ. ವಿಯೆಟ್ನಾಮಿನಂಥ ಒಂದು ದೇಶದಲ್ಲಿ ಯುದ್ಧದ ಕಥೆಗಳದೇ ಹೇರಳ ಬೆಳೆ ಯಾಕೆ ಸಾಧ್ಯವಾಗಿದೆ ಎಂಬುದನ್ನು ಚಾರಿತ್ರಿಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ. 'ದೂರದ ತಾರೆಗಳು' (ಸಂ. 3), 'ದಂತದ ಹಣಿಗೆ' (ಸಂ. 3), 'ಕೈದಿಗಳು' (ಸಂ. 21), 'ಕ್ಷಮಿಸವರನೆಲೆ ತಂದೆ' (ಸಂ. 18), 'ಕ್ಷಣಗಳು' (ಸಂ. 19), 'ಮುಸ್ತಾಫಾ ಮಜದರ್' (ಸಂ. 12), 'ಒಂದು ಚಿಟಿಕೆ ಉಪ್ಪು' (ಸಂ. 11), 'ಮಹಾಯುದ್ಧದಲ್ಲಿ ಶ್ವೀಕ್‌ನ ಮಧ್ಯಪ್ರವೇಶ' (ಸಂ. 11), 'ನನ್ನ ಸಾವಿನ ಕಥೆ' (ಸಂ. 15) ಹೀಗೆ ಅಭ್ಯಾಸಯೋಗ್ಯ ಯುದ್ಧದ ಕತೆಗಳ ಒಂದು ದೊಡ್ಡ ಪಟ್ಟಿಯೇ ಇದೆ.

ಸುಪ್ರಸಿದ್ಧ ಸ್ಪಾನಿಷ್ ಲೇಖಕ ಮಿಗ್ವಾಲ್ ಸರ್ವಾಂತೆಷ್‌ನ 'ಇಬ್ಬರು ಗೆಳೆಯರು' (ಸಂ. 19) ಎಂಬ ಕಥೆ ತೀರ ಹದಗೆಟ್ಟ ನಾಗರಿಕ ಸಮಾಜವೊಂದರ ಒಳಸುಳಿಗಳ ಮೇಲೆ ಕ್ಷ-ಕಿರಣ ಬೀರುತ್ತದೆ. 'ಫುಟಾಣಿ ಗಾಳಿ ಗಿರಣಿ' ಎಂಬ

ವಿಶ್ರಾಂತಿಗೃಹದ ಮುಂದೆ ಇಬ್ಬರು ಹುಡುಗರು ಸಂಧಿಸುತ್ತಾರೆ. ಒಬ್ಬ ಚಿಂದಿ ಅಂಗಿ ಮತ್ತೊಬ್ಬ ಹರಕು ಶರಾಯಿ ತೊಟ್ಟಿದ್ದಾರೆ. ಕೆದರಿದ ಕೊಳಕು ಕೂದಲು. ಕಾಲಿಗೆ ಹುಲ್ಲು, ಹರಕುಬಟ್ಟೆಯನ್ನೇ ಬೂಟಿನಂತೆ ಸುತ್ತಿಕೊಂಡಿದ್ದಾರೆ. ಪೋಪರ ಕ್ಷಮಾಪತ್ರ ಮಾರುವ ದಂಧೆಯಲ್ಲಿದ್ದ ತಂದೆಯ ಹಣ ಲಪಟಾಯಿಸಿಕೊಂಡು ಬಂದವ ಒಬ್ಬ. ಮೋಚಿ ಅಪ್ಪ ಕತ್ತರಿ ಬಳಸುವುದನ್ನು ಹೇಳಿಕೊಟ್ಟಿದ್ದನ್ನು ಜೇಬು ಕತ್ತರಿಸಲು ಉಪಯೋಗಿಸಿಕೊಂಡು ಗಡಿಪಾರಾಗಿ ಓಡಿ ಬಂದವ ಇನ್ನೊಬ್ಬ. ಹದಿನಾಲ್ಕು ವರ್ಷದ ಕೊರ್ತಾದೋ ಪಕ್ಕಾ ಜೇಬುಗಳ್ಳ. ಹದಿನೇಳು ವರ್ಷದ ರಿಂಕಾನ್ ಇಸ್ಪೀಟಿನ ಇಪ್ಪತ್ತೊಂದರ ಆಟ ಆಡಿ ದುಡ್ಡು ಹೊಡೆಯುವ ನಿಸ್ಸೀಮ. ಇಬ್ಬರೂ ಒಬ್ಬರ ನ್ನೊಬ್ಬರು ಸಭ್ಯಜನಗಳ ಗೌರವಾನ್ವಿತ ನುಡಿಗಟ್ಟುಗಳಲ್ಲಿ ಅಭಿನಂದಿಸಿ ಸ್ನೇಹ ಕುದುರಿಸಿಕೊಳ್ಳುತ್ತಾರೆ. ಸಿಕ್ಕ ಒಬ್ಬ ಗಿರಾಕಿಗೆ ಟೋಪಿ ಹಾಕುವಷ್ಟರಲ್ಲಿ ದಂಡಯಾತ್ರೆ ಮುಗಿಸಿ ಸೆವಿಲ್ ನಗರಕ್ಕೆ ಹೊರಟ ಕಳ್ಳರ ಪಡೆ ಇವರನ್ನು ಆಕರ್ಷಿಸುತ್ತದೆ. ತಮ್ಮ ಚೂರಿ, ಚಾಕು, ಇಸ್ಪೀಟುಗಳನ್ನು ಬಳಸುತ್ತ ಹೋಗುತ್ತಾರೆ. ಕೂಲಿ ಹುಡುಗರಂತೆ ಹೋಗಿ ಗಿರಾಕಿಗಳಿಗೆ ಚಾಲಾಕಿನಿಂದ ಕೈಕೊಡುತ್ತಾರೆ. ಸಿಕ್ಕಿಹಾಕಿಕೊಳ್ಳುವ ಪ್ರಸಂಗದಲ್ಲಿ ಒಳ್ಳೆ ಸುಶಿಕ್ಷಿತ ವಿದ್ಯಾರ್ಥಿಗಳಂತೆ ಚಾಣಾಕ್ಷ ತರ್ಕ ಹೂಡಿ ತಪ್ಪಿಸಿ ಕೊಳ್ಳುತ್ತಾರೆ. ನಗರದ ಚೋರಗುರು ಮೋನಿಪಾದ್ಯುವಿನ ಆಸ್ಥಾನಕ್ಕೆ ಇವರನ್ನು ಒಯ್ಯಲಾಗುತ್ತದೆ. ಕುರುಡರು, ಕುಂಟರು, ಮಠದ ಶಿಷ್ಯರಂತೆ ವೇಷತೊಟ್ಟವರು, ಮಧ್ಯಮ ವರ್ಗದ ಸೋಗಿನ ತಂಪು ಕನ್ನಡಕ ತೊಟ್ಟವರು, ದೈನ್ಯ ನಟಿಸುವ ಮುದುಕಿ, ಸನ್ಯಾಸಿನಿಯರ ಮಾರುವೇಷದ ಹುಡುಗಿಯರು, ರಾಜಾರೋಷದ ಕೊಲೆ ಗಡುಕರು ಹೀಗೆ ಎಲ್ಲ ತರದ ಸದಸ್ಯರೂ ಇದ್ದಾರೆ ಅಲ್ಲಿ. ಎಂಥೆಂಥ ಕೃತ್ಯಗಳಿಗೆ ಎಷ್ಟೆಷ್ಟು ಶುಲ್ಕ ಹಾಗೂ ವಾರದ ಯಾವಯಾವ ದಿನ ಏನೇನು ಕಾರ್ಯಕ್ರಮ ನಿಗದಿ ಯಾಗಿದೆ ಎಂಬುದರ ಒಂದು ವ್ಯವಸ್ಥಿತ ದಾಖಲೆ ಪುಸ್ತಕವೇ ಇದೆ, ಮೋನಿಪಾದ್ಯು ಬಳಿ. ಪ್ರತಿಯೊಬ್ಬರೂ ತಮ್ಮ ಆದಾಯದ ಒಂದು ಭಾಗವನ್ನು ದೇವರ ಕರುಣೆ, ಸಮೂಹದ ಒಳಿತು, ಸಂಘಟನೆಯ ಪರವಾಗಿ ವಾದಿಸುವ ವಕೀಲರ ಕಾಣಿಕೆ, ಸಲಹೆ ನೀಡುವ ಧರ್ಮಗುರುಗಳ ಶುಲ್ಕ, ಕಾಪಾಡುವ ರಕ್ಷಣಾಧಿಕಾರಿಗಳ ಭಕ್ಷೀಸು ಇತ್ಯಾದಿ ಉದ್ದೇಶ ಗಳಿಗೆ ಮೀಸಲಿಡುವ ಒಪ್ಪಂದವಿದೆ. ರಕ್ಷಣಾಧಿಕಾರಿಯ ಮಿತ್ರರ ವಸ್ತುಗಳೇ ಕಳ ವಾದಾಗ ಅವನು ಬಂದು ದಬಾಯಿಸುತ್ತಾನೆ. "ಕೋಳಿನೇ ಕೊಟ್ಟವನಿಗೆ ಒಂದು ಕಾಲು ಕೊಟ್ಟರೇನಾಯಿತು" ಎಂಬ ಸೂತ್ರದಂತೆ ಇವರು ಕದ್ದವಸ್ತುವನ್ನು ಹಿಂತಿರುಗಿ ಸುತ್ತಾರೆ. ವ್ಯಾಪಾರಿಯೊಬ್ಬನನ್ನು ಕೊಲ್ಲಲು ಹಣಕೊಟ್ಟಿರುವ ಅವನ ಶತ್ರು ಬಂದು ವಿಚಾರಿಸಿದಾಗ ವ್ಯಾಪಾರಿಯ ಬದಲು ಅವನ ಸೇವಕನಿಗೆ ಹದಿನಾಲ್ಕು ಚೂರಿ ಇರಿತ ಕೊಟ್ಟಿದ್ದಾಗಿ ಸುದ್ದಿ ಸಿಗುತ್ತದೆ. ಅದು ಸರಿಯಲ್ಲವೆಂದು ವಾದಿಸಿದಾಗ "ನನ್ನನ್ನು ದ್ವೇಷಿಸೋದಾದರೆ ನನ್ನ ನಾಯಿಯನ್ನೂ ದ್ವೇಷಿಸು" ಎಂಬ ಸೂತ್ರದ ಪ್ರಕಾರ ಅದು ಸರಿ ಎಂದು ಮೋನಿಪಾದ್ಯು ವಾದಿಸಿ ಆತನಿಂದ ಮತ್ತಷ್ಟು ಹಣ ಕಿತ್ತು

ವ್ಯಾಪಾರಿಯ ಕೊಲೆಗಾಗಿ ಹೊಸ ಕರಾರು ಮಾಡಿಸುತ್ತಾನೆ. ಪ್ರಾರ್ಥನೆ ಮಾಡುತ್ತಾರೆ ಸದಸ್ಯರೆಲ್ಲ. ನಂತರ ಈ ವಾರ ಯಾರ್ಯಾರಿಗೆ ಕಾಲು ಮುರೀಬೇಕು, ಯಾರ್ಯಾರಿಗೆ ದೊಣ್ಣೆಪೆಟ್ಟು ಕೊಡಬೇಕು, ಎಲ್ಲಿ ಕಳ್ಳತನಕ್ಕೆ ಅನುಕೂಲವಿದೆ ಎಲ್ಲ ಚರ್ಚಿಸಿ ಭಾನುವಾರ ಸಾಮಾನ್ಯ ಸಭೆ ಸೇರುವುದಾಗಿ ತೀರ್ಮಾನಿಸಿ, ಎಲ್ಲ ಹೊರಡುತ್ತಾರೆ. ಕೊರ್ತಾದೊ ಮತ್ತು ರಿಂಕಾನ್‌ರ ಹೆಸರು ಬದಲಾಯಿಸಿ ಅವರಿಗೆ ಈ ಕಲೆಯನ್ನು ಉತ್ತಮಗೊಳಿಸಿಕೊಳ್ಳಲು ಒಂದು ಉಪನ್ಯಾಸ ಕೊಡುವುದಾಗಿ ಹೇಳುತ್ತಾನೆ. ಹುಡುಗರಿಗೆ ಆನಂದ, ತೃಪ್ತಿ ಸಿಕ್ಕಾಗ ಕಥೆ ಮುಗಿಯುತ್ತದೆ.

ಮನುಷ್ಯತ್ವದ ತೀವ್ರ ಅಭಾವ, ಮಿತಿ ಮೀರಿದ ಸ್ವಾರ್ಥ, ಇನ್ನಿಲ್ಲದಂಥ ಹಣದ ಹುಚ್ಚು ಇವು ಒಂದು ಸಮಾಜವನ್ನು ಹುಳಹಿಡಿಯುವಂತೆ ಮಾಡಬಲ್ಲವು ಎಂಬುದೇ ಈ ಕಥೆಯ ಸಾರ. ಕೌಟುಂಬಿಕ ಜೀವನ ಹದಗೆಡುವುದು ಇಂಥ ದುರಂತದ ಮುಖ್ಯ ಲಕ್ಷಣ. ಬಾಲಾಪರಾಧ ಸ್ವಾಭಾವಿಕವಾಗಿಯೇ ಹೆಚ್ಚುತ್ತ ಹೋಗುತ್ತದೆ. ಹೂವುಗಳಂತೆ ನಗುತ್ತ, ಹಕ್ಕಿಗಳಂತೆ ಹಾರಾಡುತ್ತ, ಎಲ್ಲಕ್ಕೂ ಕುತೂಹಲದ ಕಣ್ಣಾಗಿ ಬದುಕುವ ಮಕ್ಕಳು ಒಂದು ಸಮಾಜದ ಆರೋಗ್ಯವನ್ನು ಪ್ರತಿನಿಧಿಸುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ ಗೊತ್ತಾಗಬಾರದ್ದೆಲ್ಲ ಗೊತ್ತಾಗಿಹೋಗಿ ಬಾಲ್ಯದ ಲಕ್ಷಣಗಳು ಕಿಂಚಿತ್ತೂ ಉಳಿಯದ ಇಲ್ಲಿನ ಮಕ್ಕಳು, ಅವರ ಚಾಲಕಿತನ, ಅವ್ಯವಹಾರಗಳು, ಮಾನವೀಯ ಹಾಗೂ ಸಾಮಾಜಿಕ ಮೌಲ್ಯಗಳ ಅನುಪಸ್ಥಿತಿ ಓದುಗರನ್ನು ದಂಗುಬಡಿಸುತ್ತವೆ. ಈ ಇಬ್ಬರು ಗೆಳೆಯರನ್ನು ಕಥೆಗಾರ ತನ್ನ ರೋಗಿಷ್ಠ ಸಮಾಜವನ್ನು ಅಳೆಯಲು ಉಷ್ಣಮಾಪಕದಂತೆ ಬಳಸಿದ್ದಾನೆ. ಕೇವಲ ಹಣಕ್ಕೆ ಜೋತುಬೀಳುವ ನಾಗರೀಕತೆ ಹೇಗೆ ತತ್ತರಿಸುತ್ತದೆ ಎಂಬುದನ್ನು ಬಿಚ್ಚಿಟ್ಟು ಧೃತಿಗೆಡಿಸುತ್ತಾನೆ.

ಇದೇ ರೀತಿ ಅನಾರೋಗ್ಯಪೀಡಿತ ಸಮಾಜದ ಚಿತ್ರಗಳನ್ನು 'ಚಂದ್ರಕಿರಣದ ಓಣಿ' (ಸಂ. 15), 'ಹುಚ್ಚನ ದಿನಚರಿ' (ಸಂ. 4), 'ಕ್ರಿಸ್‌ಮಸ್ ವೃಕ್ಷ ಮತ್ತು ಮದುವೆ' (ಸಂ. 9), 'ಬಂಡಾಯ' (ಸಂ. 16), 'ಎಚ್ಚೆತ್ತ ಜನರು' (ಸಂ. 16), 'ಮನೆಯನ್ನು ಕೊಳ್ಳುವ ಬಗೆ' (ಸಂ. 16) ಇತ್ಯಾದಿ ಕತೆಗಳಲ್ಲಿ ಕಾಣಬಹುದಾಗಿದೆ.

ಫ್ರಾನ್ಸಿನ ನವ್ಯ ಲೇಖಕ ಆಲ್ಬರ್ಟ್ ಕಾಮೂನ ಕಥೆ 'ವ್ಯಭಿಚಾರಿಣಿ' (ಸಂ. 21) ಹೆಣ್ಣು - ಜಗತ್ತಿನ ಒಳತೋಟಿಗೆ ಬ್ಯಾಟರಿ ಹಾಕುತ್ತದೆ. ಜಾನಿನ್ ತಾರುಣ್ಯ ಕಳೆದುಕೊಂಡ ಹೆಣ್ಣು. ಆದರೂ "ಹೊಳೆಯುವ ಕಣ್ಣುಗಳಿಂದಲೂ ಬಾಲಿಶ ಮುಖದಿಂದಲೂ ಕೂಡಿದ ತನ್ನ ದುಂಡಗಿನ ದೇಹ ನೋಡಿದವರನ್ನು ಆಮಂತ್ರಿಸುವಂತಿದೆ" ಎಂಬುದು ಅವಳಿಗೆ ಗೊತ್ತು. ಅವಳ ಗಂಡ ಮಾರ್ಸೆಲ್ ಅವಳಿಗಿಂತ ಕುಳ್ಳ. ಚಿಕ್ಕ ಹಣೆಯ, ನೆರೆಗೂದಲಿನ, ಅಗಲ ಮೂಗಿನ, ಮೆತ್ತಗಿನ ಬಾಯಿಯ

ಅವನು ಪಕ್ಕಾ ವ್ಯಾಪಾರಸ್ಥ. “ಆತ ಎಲ್ಲಕ್ಕಿಂತ ಹೆಚ್ಚಾಗಿ ಹಣವನ್ನು ಪ್ರೀತಿಸು ತ್ತಿದ್ದನೆಂದು ಅವಳಿಗೆ ಅನಿಸಿತ್ತು. ಇದು ಅವಳಿಗೆ ಇಷ್ಟವಾಗಿರಲಿಲ್ಲ.” ಸಾಲದ್ದಕ್ಕೆ ಅವರಿಗೆ ಮಕ್ಕಳಿರಲಿಲ್ಲ. ಇಂಥ ಗಂಡ ಹೆಂಡತಿ ಅರಬ್ ನಗರವೊಂದಕ್ಕೆ ಹೊರಟ ದ್ದಾರೆ ವ್ಯಾಪಾರ ಕುದುರಿಸಲು. ಚಳಿಗಾಲದ ಮುಂಜಾನೆಯ ಥಂಡಿ. ಮರಳು ಗಾಳಿ. ಅರಬ್ ಪ್ರಯಾಣಿಕರ ನಿರ್ಲಕ್ಷ್ಯ. ಗೊರಕೆ ಹೊಡೆಯುತ್ತ ಮೈಮೇಲೆ ಬೀಳುವ ಗಂಡ ನಿಂದಾಗಿ ಜಾನಿನ್‌ಳ ಬೇಸರ ಹೆಚ್ಚುತ್ತದೆ. ನರಿ ಮುಖದ ಫ್ರೆಂಚ್ ಸೈನಿಕನೊಬ್ಬ ಮಾತ್ರ ಅವಳನ್ನು ಎವೆ ಇಕ್ಕದೆ ದಿಟ್ಟಿಸುತ್ತಾನೆ - ಬಸ್ಸು ಪ್ರಯಾಣದುದ್ದಕ್ಕೂ.

ಮಿನಾರುಗಳ, ತಾಳೆ ವೃಕ್ಷಗಳ ಅರಬ್ ನಗರದಲ್ಲಿ ಹೊಲಸು ಕಿಟಕಿಗಳ ಒಂದು ಹೋಟೆಲಿನಲ್ಲಿ ತಂಗುತ್ತಾರೆ. ಛಾವಣಿಯ ಗವಾಕ್ಷಿ, ನದಿ ನೀರಿನ ಸಪ್ಪಳ, ಹೊಸಗಾಳಿ ಜಡ್ಡುಗಟ್ಟಿದ ಅವಳ ಜೀವದ ಬೇಸರದ ಪದರಗಳನ್ನು ನಿಧಾನವಾಗಿ ಸರಿಸುತ್ತದೆ. ಆದರೂ ಗಂಡನ ಚೌಕಾಶಿ ವ್ಯಾಪಾರ, ಒಣಮಾತು, ಗಿರಾಕಿಗಳ ಕೊಂಕು ಅವಳನ್ನು ತಿವಿಯುತ್ತದೆ. ನಿಲುವಂಗಿ ಧರಿಸಿದ ಹುಮ್ಮಸ್ಸಿನ ಅರಬ್ ಗಂಡಸರು ಇವಳನ್ನು ನೋಡಿಯೂ ನೋಡದಂತೆ, ದೃಷ್ಟಿ ಇವಳನ್ನು ದಾಟಿ ದೂರದಲ್ಲಿ ನೆಟ್ಟಂತೆ, ನಡೆದು ಹೋದಾಗ ಇವಳ ಹೆಣ್ತನ ಘಾಸಿಗೊಳ್ಳುತ್ತದೆ.

ಸಂಜೆ ಹೊತ್ತಿಗೆ ಆಕಾಶವೆಲ್ಲ ಸ್ವಚ್ಛ ನೀಲಿ ಬಣ್ಣಕ್ಕೆ ತಿರುಗುತ್ತದೆ. ಕೋಟೆಯ ಪ್ರಾಕಾರದ ಮಾಳಿಗೆಯಮೇಲೆ ನಿಂತು ಸುತ್ತಲೂ ಕಾಣಿಸುವ ವಿಶಾಲ ಮರುಭೂಮಿಯ ಅಂಚನ್ನು ನೋಡಿದಾಗ ಅವಳಿಗೆ ಪ್ರಶಾಂತತೆಯ ಅನುಭವವಾಗುತ್ತದೆ. ಹಸಿರು ತಾಳೆ ತೋಪಿನ ಬಳಿಯ ಅಗಲವಾದ ಕಪ್ಪು ಡೇರೆಗಳು ಅವಳನ್ನು ವಿಚಿತ್ರವಾಗಿ ಸೆಳೆಯುತ್ತವೆ. “ಸ್ಫಟಿಕದಂತಿದ್ದ ಬೆಳಕು ದ್ರವರೂಪಕ್ಕೆ ತಿರುಗತೊಡಗಿದಂತೆ ಅವಳಲ್ಲಿ ಭಾವತರಂಗಗಳು ಏಳುತ್ತವೆ. ಕೇವಲ ಆಕಸ್ಮಿಕವಾಗಿ ಅಲ್ಲಿಗೆ ಬಂದಿದ್ದ ಆ ಹೆಣ್ಣಿನ ಹೃದಯದಲ್ಲಿ ಕಾಲ, ಅಭ್ಯಾಸ ಮತ್ತು ಬೇಸರಗಳು ಗಟ್ಟಿಯಾಗಿ ಬಿಗಿದಿದ್ದ ಗಂಟೊಂದು ಮೆಲ್ಲಮೆಲ್ಲನೆ ಬಿಚ್ಚತೊಡಗುತ್ತದೆ. ದುಡಿಯುವ ಜನಗಳ ಕಪ್ಪು ಡೇರೆಗಳು, ಅವರ ಕಸುವಿನ ಬದುಕು, ಅವರ ನಿಸರ್ಗಸಹಜ ಸ್ವಾತಂತ್ರ್ಯ ಅವಳಲ್ಲಿ ಉಮ್ಮಳ ಹುಟ್ಟಿಸು ತ್ತವೆ. ತನ್ನ ವರ್ಗಪ್ರಜ್ಞೆಯ ಗಡಿಯಲ್ಲಿ ಒದ್ದಾಡುತ್ತಾಳೆ.

ರಾತ್ರಿ ಅವಳಿಗೆ ನಿದ್ದೆ ಹತ್ತುವುದಿಲ್ಲ. ಗಂಡ ಗಡದ್ದಾಗಿ ನಿದ್ದೆ ಹೋದ ಹೊತ್ತಿನಲ್ಲಿ “ನಿಜವಾದ ಸ್ವಾತಂತ್ರ್ಯ ಅನುಭವಿಸದೆ ತಾನು ಸಾಯುತ್ತಿದ್ದೇನೆಂದು” ಅನ್ನಿಸುತ್ತದೆ. ನಿಧಾನ ಎದ್ದು ನಿಸರ್ಗದ ಕರೆಯಂಥ ಪಹರೆಯವನ ಧ್ವನಿಗೆ “ಬಂದ್ಬಿಟ್ಟೆ” ಎಂದುತ್ತರಿಸಿ ಕೋಟೆಯ ಕತ್ತಲಲ್ಲಿ ಹೋಗಿಬಿಡುತ್ತಾಳೆ. “ಕ್ಷಣಕ್ಷಣಕ್ಕೂ....ಆ ರಾತ್ರಿಗೆ ತನ್ನ ಹೃದಯವನ್ನು ತೆರೆಯುತ್ತ ತನ್ನ ಬೇರುಗಳನ್ನು ಮರಳಿ ಪಡೆದಂತಾಗಿ

ದೇಹದಲ್ಲಿ ಹೊಸ ಚೈತನ್ಯ" ಅನುಭವಿಸುತ್ತಾಳೆ. ಚುಕ್ಕೆಗಳ ಆಕಾಶ ಅವಳ ಮೇಲೆ ತಿರುಗುತ್ತದೆ.

ಈ ಮಾರ್ಮಿಕ ಅನುಭವದಿಂದ ವಾಸ್ತ್ರವ್ಯಕ್ಕೆ, ಗಂಡನ ಕೋಣೆಗೆ ವಾಪಸ್ ಬಂದಾಗ ತಡೆಯಲಾರದೆ ಅಳುತ್ತಾಳೆ ಒಂದೇ ಸಮನೆ. ಗಂಡ ಎಚ್ಚರಗೊಂಡು ಪ್ರಶ್ನಾರ್ಥಕವಾಗಿ ನೋಡಿದಾಗ "ಏನೂ ಇಲ್ಲ ಬಿಡು" ಎಂದು ಬಿಕ್ಕುತ್ತಾಳೆ.

ಗಂಡನೇ ಸರ್ವಸ್ವ, ಅವನೊಂದಿಗಿನ ಬದುಕೇ ತನ್ನ ಜಗತ್ತು ಎಂಬ ಹೇರಲ್ಪಟ್ಟ ಭ್ರಮೆಯಿಂದ ಗರಕ್ಕನೆ ಹೊರಬಂದ ಹೆಣ್ಣರಿವು ಆಘಾತಗೊಳ್ಳುವ ಪರಿಯನ್ನು ಕಾಮೂ ನಾಟಕೀಯವಾಗಿ ಚಿತ್ರಿಸಿದ್ದಾನೆ. ಕೇವಲ ಪುರುಷ ಪ್ರಧಾನವಾದ ಈ ವರೆಗಿನ ಮನುಷ್ಯ ಇತಿಹಾಸ ಏಕಮುಖ ದಾಖಲೆಯಾಗಿಬಿಟ್ಟಿದೆ. ಈಗ ಜಗತ್ತನ್ನು ತನ್ನದೇ ದೃಷ್ಟಿಯಲ್ಲಿ ನೋಡಲು, ಬದುಕನ್ನು ತನ್ನ ಪ್ರವೃತ್ತಿಗಳಿಗೆ ಒಗ್ಗಿಸಿಕೊಳ್ಳಲು, ಇತಿಹಾಸವನ್ನು ಹೊಸ ರೀತಿಯಲ್ಲಿ ದಾಖಲಿಸಲು ಹೆಣ್ಣರಿವು ಸಿದ್ಧವಾಗುತ್ತಿದೆ. ಈ ಹೊಸ ಆರಂಭದ ಹರಿಕಾರ್ತಿಯಾಗಿ ನಿಲ್ಲುತ್ತಾಳೆ ಈ ಕಥೆಯ ನಾಯಕಿ. ತನಗರಿವಿಲ್ಲದೆ ಹೊಸ ಅನುಭವಕ್ಕೆ ಕೊಟ್ಟುಕೊಂಡ ಸುಖದಾಘಾತ, ಅದರಿಂದ ಬೇಸರದ ಪೊರೆ ಕಳೆದು ಮೊಳೆಯುವ ಜೀವಂತಿಕೆ, ಈ ವರೆಗೆ ತಾನು ಗಂಡನ ಪಂಜರದಲ್ಲಿ ಬಂಧಿಯಾಗಿ ಬದುಕನ್ನು ಕಳೆದುಕೊಂಡದ್ದರ ಸಂತಾಪ ಅವಳಲ್ಲಿ ಮಡುಗಟ್ಟಿದೆ. ಜೊತೆಗೇ ತಾನು ದಾಟಿರುವ ಲಕ್ಷ್ಮಣರೇಖೆ ಅವಳಲ್ಲಿ ವಿಧಿ ನಿಷೇಧಗಳ ಆತಂಕ, ಸರಿಯೋ ತಪ್ಪೋ ಎಂಬ ಅನುಮಾನಗಳನ್ನು ನೆಟ್ಟಿದೆ. ಅದಕ್ಕೇ ಅವಳು ತಡೆಯಲಾರದೆ ಅಳುತ್ತಿರುವುದು. ಈ ದುಃಖದ ಮಜಲು ದಾಟಿ ಅವಳು ಕಾರ್ಯಪ್ರವೃತ್ತಳಾಗಿರುವುದನ್ನು ಇಂದಿನ ಎಚ್ಚೆತ್ತ ಮಹಿಳೆಯಲ್ಲಿ ನಾವು ಕಾಣುತ್ತಿದ್ದೇವೆ. ಹೀಗೆ ಕಥಾನಾಯಕಿ ಐತಿಹಾಸಿಕವಾಗಿ ಹೆಣ್ಣಿನ ಸಂಕ್ರಮಣ ಪರಿಸ್ಥಿತಿಯ ಸಂಕೇತವಾಗುತ್ತಾಳೆ.

೩

ವಿಶ್ವಕಥಾಕೋಶದ 25 ಸಂಪುಟಗಳ 320 ಕಥೆಗಳನ್ನು ಬಿಡಿಸಿ ನೋಡಿದಾಗ ಸ್ಪಷ್ಟವಾಗುವ ಅಂಶ: 'ಕಥೆ' ಎಂಬುದರ ಹರಹು 'ಇತಿಹಾಸ'ಕ್ಕಿಂತ ವಿಶಾಲವಾದದ್ದು ಮತ್ತು ಉದಾತ್ತವಾದದ್ದು. ಇತಿಹಾಸ ನಿರ್ದಿಷ್ಟ ವ್ಯಕ್ತಿಗಳನ್ನು, ನಿರ್ದಿಷ್ಟ ಘಟನೆಗಳನ್ನು ಮಾತ್ರ ದಾಖಲಿಸುತ್ತದೆ; ಅಲ್ಲದೆ ಈ ವರೆಗಿನ ಇತಿಹಾಸಕಾರರು ಕೀರ್ತಿಯನ್ನು ಮುಖ್ಯ ಮಾನದಂಡವಾಗಿಟ್ಟುಕೊಂಡು ವೈಭವೋಪೇತ ವ್ಯಕ್ತಿಗಳನ್ನು ಮಾತ್ರ ವರ್ಣಿಸಿದ್ದಾರೆ. ತಿಕ್ಕಲು ಮನುಷ್ಯರನ್ನು ಅದ್ಭುತ ಪ್ರತಿಮೆಗಳನ್ನಾಗಿಸಿದ್ದಾರೆ. ಇಷ್ಟಾದರೂ ಅವರು ಕೊಡುವ ವ್ಯಕ್ತಿಚಿತ್ರಗಳು ಸಮಗ್ರವಾಗಿರುವುದಿಲ್ಲ.

ಕಥೆಯಾದರೋ ಸಾಮಾನ್ಯ ಮನುಷ್ಯನ ಮುಖಗಳನ್ನು, ಮುಖವಾಡಗಳನ್ನು ಬಿಡಿಸಿ ತೋರಿಸುತ್ತದೆ. ಹೀಗೆ ಮಾಡುವಲ್ಲಿ ಬದುಕಿಗೆ ಅತ್ಯಂತ ನಿಷ್ಠವಾಗಿ ದುಡಿಯುತ್ತದೆ. ಯಾವುದೋ ದಾಖಲೆಪತ್ರಗಳನ್ನು ಆಧರಿಸದೆ ಯಥಾರ್ಥ ಜೀವನಾನುಭವದ ಅಡಿಗಲ್ಲ ಮೇಲೆ ನಿಂತು ಕೆಲಸ ನಿಭಾಯಿಸುತ್ತದೆ. ಕೀರ್ತಿ - ಯುದ್ಧ - ಶೌರ್ಯ - ಜನಾನಾ ವೈಭವಗಳಂಥ ಮುಟ್ಠಾಳ ಮಾನದಂಡಗಳನ್ನು ಬದಿಗೊತ್ತಿ ಮಾನವೀಯತೆ - ಬದುಕನ್ನು ಸಹ್ಯವಾಗಿಸುವ ಅದಮ್ಯ ಉತ್ಸಾಹ - ಎಚ್ಚರ ತಪ್ಪದ ಅರಿವುಗಳಂಥ ಮಾನದಂಡಗಳಿಂದ ಜೀವನವನ್ನು ಅಳೆಯುತ್ತ ಓದುಗರ ಭಾವ - ಪ್ರಪಂಚದ ವಿಸ್ತರಣೆಗೆ ಕಾರಣವಾಗುತ್ತದೆ.

ವಿಶ್ವಕಥಾಲೋಕದ ಮನುಷ್ಯನಿಂದಾಗುವ ಇನ್ನೊಂದು ಪ್ರಯೋಜನವೆಂದರೆ ಪ್ರಪಂಚದ ಅಸಂಖ್ಯಾತ ಸಂಸ್ಕೃತಿಗಳ ನಡುವಣ ದೂರವನ್ನು ಅಳಿಸಿ ಜಗತ್ತಿನಾದ್ಯಂತ ಹರಿಯುವ ಜೀವನಧಾರೆ ಒಂದೇ ಎಂದು ಸಾಬೀತುಪಡಿಸುವುದು. ಹಡಗು - ವಿಮಾನಗಳು ಖಂಡಗಳ ಭೌಗೋಳಿಕ ದೂರವನ್ನು ಕಡಿಮೆ ಮಾಡಿದವು. 'ವಿಶ್ವಕಥಾಕೋಶ'ದ ಕಥೆಗಳು ನಮ್ಮ ಅರಿವಿನ ಪ್ರಪಂಚದಲ್ಲಿ ಇತರ ಸಾಂಸ್ಕೃತಿಕ ಜಗತ್ತುಗಳಿಗೆ ಸ್ಥಾನ ಕಲ್ಪಿಸಿ 'ವಿಶ್ವಮಾನವ' ಪರಿಕಲ್ಪನೆಗೆ ಹಾದಿಮಾಡಿಕೊಡುತ್ತವೆ. ಹೀಗಾಗಿ ಇದನ್ನು ಓದಿದವನಿಗೆ ಆಫ್ರಿಕದ ದಲಿತ ಹುಡುಗಿ ನಮ್ಮಲ್ಲಿನ ದಲಿತ ಹುಡುಗಿಗಿಂತ ದೂರವೆನ್ನಿಸುವುದಿಲ್ಲ; ಯೂಗೋಸ್ಲಾವಿಯಾದ ಕರ್ಮಠ ಹುಚ್ಚ ನಮ್ಮಲ್ಲಿನ ಕರ್ಮಠರಿಗಿಂತ ಭಿನ್ನವೆನಿಸುವುದಿಲ್ಲ; ಪೋಲೆಂಡಿನ ಬಡಮಕ್ಕಳು ಇಂಡಿಯಾದ ಬಡಮಕ್ಕಳಿಗಿಂತ ಬೇರೆ ಎನಿಸುವುದಿಲ್ಲ. ಈ ಕಾರಣದಿಂದಲೇ, ತನ್ನ ಎಲ್ಲ ಇತಿಮಿತಿಗಳಲ್ಲೂ, ವಿಶ್ವಕಥಾಕೋಶ ಕನ್ನಡಕ್ಕೆ ಒಂದು ಅತ್ಯಂತ ವಿಶಿಷ್ಟ ಕಾಣಿಕೆ.

ಕಥೆಗೆ ಚೌಕಟ್ಟು ಕೊಡಲು ಪ್ರಧಾನ ಸಂಪಾದಕರಾದ ನಿರಂಜನ ನಡೆಸಿರುವ ವಿಶೇಷ ಅಧ್ಯಯನದ ಫಲ ಪ್ರತಿ ಸಂಪುಟದ ಮೊದಲಲ್ಲಿ ಕಾಣಿಸುವ ಯಥಾರ್ಥ ಪ್ರಸ್ತಾವನೆಗಳು. ಸೃಷ್ಟಿಶೀಲ ಲೇಖಕನೊಬ್ಬ ಇತಿಹಾಸವನ್ನು ಎಷ್ಟು ಅಚ್ಚುಕಟ್ಟಾಗಿ ಕಟ್ಟಿಕೊಡಬಲ್ಲ, ಓದುವುದಕ್ಕೆ ಒತ್ತಾಯಿಸಬಲ್ಲ ಎಂಬುದಕ್ಕೆ ಇವೇ ಸಾಕ್ಷಿ. ಇವನ್ನೇ ಒಂದು ಸಂಕಲನ ಮಾಡಿ 'ಇತಿಹಾಸ ಒಣ ವಿಷಯ' ಎಂದು ಕಡೆಗಣಿಸುವ ನಮ್ಮ ವಿದ್ಯಾರ್ಥಿಗಳಿಗೆ ಪಠ್ಯವನ್ನಾಗಿಸಬಹುದು. ಈ ಪ್ರಸ್ತಾವನೆಗಳು ಆಯಾ ದೇಶದ ಭೌಗೋಳಿಕ + ಸಾಮಾಜಿಕ + ಆರ್ಥಿಕ + ಸಾಂಸ್ಕೃತಿಕ +ಸಾಹಿತ್ಯಕ + ರಾಜಕೀಯ ವಿವರಗಳನ್ನು ಒಟ್ಟೊಟ್ಟಿಗೆ ಒಳಗೊಂಡ ಅಪೂರ್ವ ಲೇಖನಗಳು.

ಅನುವಾದ ಮೂಲಕೃತಿಯನ್ನು ಸಾಕಷ್ಟು ಜರಡಿ ಹಿಡಿಯುತ್ತದೆ ಎಂಬ ಮಾತನ್ನು ಅಲ್ಲಗಳೆಯುವಷ್ಟು ಶಕ್ತವಾದ ಅನುವಾದಗಳೇ ಹೆಚ್ಚಾಗಿವೆ ಇಲ್ಲಿ.

ಆರಿಸಿರುವ ಕಥೆಗಳಲ್ಲಿ ಕೆಲವಂತೂ ಅತ್ಯಂತ ಸತ್ವಶಾಲಿಯಾಗಿದ್ದು ಸರಳ ಶೈಲಿಯಲ್ಲಿದ್ದು ಅನಾಯಾಸವೆಂಬಂತೆ ಅನುವಾದಗೊಂಡಿವೆ. ಉಳಿದಂತೆ ಸಾಕಷ್ಟು ಅನುವಾದಕರು ತಮ್ಮ ಕೆಲಸವನ್ನು ಸೃಷ್ಟ್ಯಾತ್ಮಕ ಸವಾಲಾಗಿ ಸ್ವೀಕರಿಸಿ ಯಶಸ್ವಿಯಾಗಿದ್ದಾರೆ. ಅವರಲ್ಲಿ ಹೆಸರಿಸಬಹುದಾದವರೆಂದರೆ ಕೆ.ವಿ. ನಾರಾಯಣ, ಕೆ.ಎಸ್.ನಿಸಾರ್‌ಅಹ್ಮದ್, ಎಚ್.ಎಸ್. ರಾಘವೇಂದ್ರರಾವ್, ಬಸವರಾಜ ನಾಯ್ಕರ, ಪಾ. ಸಂಜೀವ ಬೋಳಾರ, ಎಚ್. ಕೆ. ರಾಮಚಂದ್ರಮೂರ್ತಿ, ಈಶ್ವರಯ್ಯ, ಜಿ. ಎಸ್. ಸದಾಶಿವ, ಕೆ. ಎಸ್. ನಾರಾಯಣಸ್ವಾಮಿ, ಚಿ. ಶ್ರೀನಿವಾಸರಾಜು, ವೀಣಾ ಶಾಂತೇಶ್ವರ ಹಾಗೂ ಎಸ್. ಅನಂತನಾರಾಯಣ. ಗ್ರಾಂಥಿಕವಾಗಿ ಶಬ್ದಕೋಶದ ಅನುವಾದ ಮಾಡಿದವರೂ ಕೆಲವರಿದ್ದಾರೆ.

ಈ ವಿಶ್ವಕಥಾಲೋಕ ಮನುಷ್ಯನ ಅನಂತ ಮುಖಗಳ ಸಾಧ್ಯತೆಯನ್ನು ಸೂಚಿಸುತ್ತ, ಅವನ ಸ್ವರೂಪದರ್ಶನದತ್ತ ಓದುಗರನ್ನು ಒಯ್ಯುತ್ತ ಇಡಿ ವಿಶ್ವ ಹಾಗೂ ಒಟ್ಟು ಮಾನವಕುಲದ ಬಗ್ಗೆ ಇನ್ನಷ್ಟು ಸಾಧ್ಯವಾದರೆ ಅಷ್ಟನ್ನೂ ತಿಳಿಯುವ ಕುತೂಹಲ ಹುಟ್ಟುಹಾಕುತ್ತದೆ. ಇದು ನವ ಕರ್ನಾಟಕ ಪ್ರಕಾಶನದ ಸಾಧನೆ. ○

ಕನ್ನಡ ಕಾದಂಬರಿಕಾರರಲ್ಲಿ ನಿರಂಜನರ ಸ್ಥಾನ*

–ಡಾ। ಡಿ. ಆರ್. ನಾಗರಾಜ್

'ನಿರಂಜನ ಕನ್ನಡದ ಮಹತ್ತ್ವದ ಬರಹಗಾರ-ಯಾಕೆ ?' ಎನ್ನುವ ಪ್ರಶ್ನೆಗೆ ಉತ್ತರವಾಗಿ ನಿರಂಜನರನ್ನ ಗಮನದಲ್ಲಿರಿಸಿ ವಿವೇಚನೆ ನಡೆಸಿದಾಗ, ಮೊದಲಿಗೆ ಕನ್ನಡ ಕಾದಂಬರಿಯಲ್ಲಿ ಪ್ರಧಾನವಾಗಿರುವ ಸೃಜನಶೀಲ ಚೌಕಟ್ಟು ಎದುರಾಗುತ್ತದೆ. ಅದು ಯಾವತ್ತೂ ಚರಿತ್ರೆಯೊಂದಿಗೆ ನೇರವಾಗಿ ಮುಖಾಮುಖಿಯಾಗುವುದಿಲ್ಲ. ಕನ್ನಡ ಕಾದಂಬರಿ ಚರಿತ್ರೆಯ ನೇರ ಪ್ರಭಾವದಿಂದ, ಘಟನಾವಳಿಯಿಂದ ತಪ್ಪಿಸಿಕೊಂಡು ಹೋಗಲು ನಿರಂತರವಾಗಿ ಪ್ರಯತ್ನಿಸುತ್ತಿರುತ್ತದೆ.

ಕನ್ನಡದಲ್ಲಿ 'War and Peace' ನಂತಹ ಉತ್ಕೃಷ್ಟ ಕಾದಂಬರಿ ಒಂದಿಲ್ಲ ಎನ್ನುವುದನ್ನು ದೌರ್ಬಲ್ಯವೆಂದು ಪರಿಗಣಿಸಬೇಕಿಲ್ಲ. ಇದು ಕನ್ನಡ ಕಾದಂಬರಿಯ ಒಂದು ವಿಶಿಷ್ಟ ಹಾಗೂ ಬಹುಮುಖ್ಯ ಗುಣವಾಗಿದೆ. ಚರಿತ್ರೆಯ ಮಹಾಚಲನೆ

ಜೀವನದ ಇನ್ನಿತರ ಸಣ್ಣಪುಟ್ಟ ಕ್ಷೇತ್ರಗಳಲ್ಲಿ ಬಿದ್ದ ರೀತಿಯನ್ನು ಕನ್ನಡ ಕಾದಂಬರಿ ಹಿಡಿದುಕೊಳ್ಳುತ್ತದೆ. ಚೆಕಾವ್ ಒಂದು ಕಡೆ "ನೀನು ಚಂದ್ರನ ವರ್ಣನೆಯನ್ನು ನೇರವಾಗಿ ಚಂದ್ರನನ್ನು ವರ್ಣಿಸುವುದರ ಮೂಲಕ ಮಾಡಬೇಡ. ಅದಕ್ಕೆ ಅಸಾಧ್ಯವಾದ ಸೃಜನಶೀಲತೆ ಬೇಕು, ಅಸಾಧ್ಯ ಶಕ್ತಿಬೇಕು. ಅದರ ಬದಲಾಗಿ ನೀನು ಏನು ಮಾಡಬೇಕೆಂದರೆ, ಆ ಚಂದ್ರನ ಬೆಳದಿಂಗಳು ತುಂಡುಗಾಜಿನಲ್ಲಿ ಹೇಗೆ ಬಿದ್ದಿದೆ ಅನ್ನೋದನ್ನಷ್ಟು ಮಾತ್ರ ಹೇಳು" ಎಂದಿದ್ದಾನೆ. ಕನ್ನಡ ಕಾದಂಬರಿ ಇದೇ ಮಾರ್ಗವನ್ನು ಆಯ್ದುಕೊಂಡಿದೆ. ಪುಟ್ಟಪ್ಪನವರ 'ಮಲೆಗಳಲ್ಲಿ ಮದುಮಗಳು', ಕಾರಂತರ 'ಮರಳಿ ಮಣ್ಣಿಗೆ' ಇದಕ್ಕೆ ನಿದರ್ಶನಗಳು.

ಪುಟ್ಟಪ್ಪನವರ 'ಮಲೆಗಳಲ್ಲಿ ಮದುಮಗಳು' ಮುಗಿಯುವ ವೇಳೆಗಾಗಲೇ ಚರಿತ್ರೆಯ ಒಂದು ಮಹಾ ಅಧ್ಯಾಯ ಮುಗಿದುಹೋಗಿದೆ; ಅತ್ಯಂತ ದೊಡ್ಡ ಬದಲಾವಣೆ ಆಗಿ ಹೋಗಿದೆ. ಆದರೆ ಆ ಬದಲಾವಣೆಯ ಕ್ರಮವನ್ನು ಕಾದಂಬರಿ ಆ ಬದಲಾವಣೆಯ ಸಂಭವದ ವಾಸ್ತವ ವಿವರದಲ್ಲಿ ಹಿಡಿಯುವುದಕ್ಕೆ ಪ್ರಯತ್ನಿಸುವುದೇ ಇಲ್ಲ. ಉದಾಹರಣೆಗೆ, ಮಲೆನಾಡಿನ ಕುಗ್ರಾಮದಲ್ಲಿ ಸೈಕಲ್ ಕಲಿಸುವ ಪ್ರಸಂಗದ ದೀರ್ಘ ವಿವರಣೆ ಬರುತ್ತದೆ. ಮೇಲ್ನೋಟಕ್ಕೆ ಇದು ಅಮುಖ್ಯವಾದರೂ ಕನ್ನಡ ಕಾದಂಬರಿ ಚರಿತ್ರೆಯನ್ನು ಆವಾಹಿಸಿ ಅರಗಿಸಿಕೊಳ್ಳುವ ಒಂದು ಕ್ರಮವಾಗಿ ತೋರುತ್ತದೆ. 'ಸೈಕಲ್‌ಸವಾರಿ (ಬೀಸೇಕಲ್ಲಿನ ಸವಾರಿ)'ಯ ಮೂಲಕ ಕರ್ನಾಟಕದ - ಅಷ್ಟೇ ಅಲ್ಲ - ಭಾರತದ ಚರಿತ್ರೆಯಲ್ಲಿ ಸಂಭವಿಸಿದ ಅತ್ಯಂತ ದೊಡ್ಡ ಬದಲಾವಣೆಯನ್ನು ಸೂಚಿಸುತ್ತಾರೆ. ಈ 'Dominant mode of creativity'- ಕನ್ನಡ ಕಾದಂಬರಿಯ ಕ್ರಮ; "Never the shade was ....only the shadow"- "ಆ ಬಣ್ಣಗಳನ್ನು ಮೂಲರೂಪದಲ್ಲಿ, ಆ ದಟ್ಟತೆಯಲ್ಲಿ ಹಿಡಿಯಬೇಡ, ಅದರ ನೆರಳನ್ನು ಹಿಡಿ" ಎನ್ನುವಂತೆ.

ಜಗತ್ತಿನ ಮಹಾನ್ ಕಾದಂಬರಿಗಳನ್ನು ಓದಿದರೆ, ಆ ಕೃತಿಗಳೆಲ್ಲ ಮೂಲತಃ ಒಂದು ಬಗೆಯ ಚರಿತ್ರೆಯ ಲೇಖನಗಳೇ ಆಗಿರುವುದನ್ನು ಕಾಣುತ್ತೇವೆ. Fiction ಯಾವಾಗಲೂ ಚರಿತ್ರೆಯ ಲೇಖನ ಹೊರತು ಇನ್ನೇನೂ ಅಲ್ಲ. ಆದರೆ Novel ಅನ್ನುವುದು ಚರಿತ್ರೆಯನ್ನು ಅರಗಿಸಿಕೊಳ್ಳುವ, ಅದನ್ನು ತನ್ನೊಡಲಿನೊಳಕ್ಕೆ ತಕ್ಕೊಳ್ಳುವ ಕ್ರಮದಲ್ಲಿ ವ್ಯತ್ಯಾಸವಿರುತ್ತದೆ. ಹೀಗೆ ತೋರಿಬರುವ ಎರಡು ವಿಧಾನಗಳಲ್ಲಿ ಕನ್ನಡಕಾದಂಬರಿಯದು ಮುಖಾಮುಖಿಯಾಗುವ ರೂಪದ್ದಲ್ಲ. ಆದರೆ ನಿರಂಜನರು ಮೊದಲಿಗೆ ನೇರವಾಗಿ ಈ ವಿಧಾನವನ್ನು ಕನ್ನಡದಲ್ಲಿ ತಂದರು. ಅವರ ಕಲ್ಯಾಣ ಸ್ವಾಮಿ, ಸ್ವಾಮಿ ಅಪರಂಪಾರ - ಆ ವ್ಯಕ್ತಿಗಳ ಬಗ್ಗೆ, ಆ ಕಾಲದ ಬದುಕನ್ನು ಅಲ್ಲೇ ಕುಳಿತು ಚಿತ್ರಿಸುವುದಕ್ಕೆ ಪ್ರಯತ್ನಿಸುವುದು. ಹೀಗೆ ಒಂದು ಹೊಸಬಗೆಯ ಸೃಜನಶೀಲ

ಮಾರ್ಗದ ಸಾಧ್ಯತೆಯನ್ನು ತೋರಿದವರು ನಿರಂಜನ. ಅವರು ಈ ಹೊಸ ಬಗೆಯ ಕಾದಂಬರಿ ರಚನೆ ಮಾಡಿದುದರ ಹಿಂದಿನ ರಹಸ್ಯ ಏನು?

ಕಾರಂತ-ನಿರಂಜನರನ್ನು ಹೋಲಿಸಿ ನೋಡೋಣ. ಕಾರಂತರ ಅಥವಾ ಕನ್ನಡ ನವೋದಯ ಕಾದಂಬರಿಯ ಬಹುಮುಖ್ಯ ಗುಣ - ಚರಿತ್ರೆಯ ಚೌಕಟ್ಟು; ಸಮಾಜದ ಚೌಕಟ್ಟು. ಅದರೊಳಗೆ, ಅದರ ಮೂಲಕ ಅವರು ಶೋಧನೆ ಮಾಡುವುದು- ಮಾನವ ಜೀವನ ಪ್ರಕೃತಿಯ, ಮಾನವ ಸ್ವಭಾವದ ಮೂಲಭೂತ ಸತ್ಯಗಳನ್ನು ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಉಪ್ಪಿನಕಾಯಿ ಹಾಕೋದು, ಗದ್ದೆ ಮಾಡೋದು, ಚಪ್ಪರ ಹಾಕೋದು, ಮಳೆ ಬರೋದು, ಮೆರವಣಿಗೆ ಮಾಡೋದು - ಇವೆಲ್ಲ ಏನು ? ಈ ದೈನಂದಿನ ವಿವರಗಳೆಲ್ಲ ಯಾವ ಪುರುಷಾರ್ಥಕ್ಕೆ? ಎಂದು ಮೊದಲಿಗೆ ಅನ್ನಿಸಬಹುದು. ಕಾರಂತರು ಈ ದೈನಂದಿನ ಜೀವನ ಚಕ್ರಗಳ ಮೂಲಕ ಅದರಾಚೆಗಿನ ಏನನ್ನೋ ಹುಡುಕುತ್ತಾ ಇರುತ್ತಾರೆ. ಅದಕ್ಕೇ 'ಮರಳಿ ಮಣ್ಣಿಗೆ'ಯ ಮಟ್ಟಿಗೆ ಸ್ವಾತಂತ್ರ್ಯ ಸಂಗ್ರಾಮ ಬಹಳ insignificant ಅಂಶ. ಈ ಗುಣವೇ ಮುಖ್ಯವಾಗಿ ಕನ್ನಡ ನವೋದಯದ ದೊಡ್ಡ ಕಾದಂಬರಿಕಾರರಾದ ಕಾರಂತ, ಪುಟ್ಟಪ್ಪ ಇವರಲ್ಲಿ ಗೋಚರವಾಗುತ್ತದೆ. ಇವರಿಗೆ ಸಮಾಜದ ಚೌಕಟ್ಟು, ಚರಿತ್ರೆಯ ಚೌಕಟ್ಟು ಮುಖ್ಯ; ಸಮಾಜ, ಚರಿತ್ರೆಗಳು ಗೌಣ. ಇದರ ಮೂಲಕ ಇವರು ಮಾನವನ ದೈನಂದಿನ ಬದುಕಿನಲ್ಲಿರುವ ಧಾರಣ ಶಕ್ತಿ ಯಾವುದೆಂದು ಹುಡುಕುತ್ತಿರುತ್ತಾರೆ. ಕನ್ನಡ ಸಾಹಿತ್ಯದ ಗಮನಾರ್ಹ ಪಾತ್ರಗಳಾದ ಸರಸೋತಿ, ಪಾರೋತಿ, ಮರಳಿ ಮಣ್ಣಿಗೆಯ ಬದುಕು, ಇಡೀ ಕಾದಂಬರಿಯನ್ನು ಕಟ್ಟಿದ ರೀತಿ ಅದಕ್ಕಾಗಿಯೇ ವಿಶಿಷ್ಟ ವಾಗಿದೆ. ಆ ದೈನಂದಿನ ಏಕತಾನತೆಯ ಜೀವನಕ್ರಮ ಮೇಲ್ನೋಟಕ್ಕೆ bore ಹೊಡೆಸುತ್ತದೆ. ಆದರೆ ಅದನ್ನು ಶೋಧಿಸಿ, ಅದರಾಚೆಗಿನ ಚರಿತ್ರೆಯನ್ನು ಮೂಲಭೂತ ಅಂಶವಾಗಿ ಗುರುತಿಸಲು ಈ ವಿವರಗಳನ್ನು ಪಟ್ಟಿ ಮಾಡುತ್ತಾರೆ. ಈ ಕಥನದಲ್ಲಿ ಅವರು ಶೋಧಿಸುವುದು ಸಾಮಾಜಿಕ ಮನುಷ್ಯನನ್ನು.

'ಮಾನವ ಜೀವನವನ್ನು ನಿಯಂತ್ರಿಸುತ್ತಿರೋ ಶಕ್ತಿಗಳು ಯಾವುವು?' ಈ ಪ್ರಶ್ನೆಯತ್ತ ನಿರಂಜನರ ಗಮನ. ಅದಕ್ಕೆ ಅವರು ಕಂಡುಕೊಂಡ ಸಮಾಜದ ವಾಸ್ತವ ಶಕ್ತಿಗಳ - ಶೋಷಣೆ, ದಬ್ಬಾಳಿಕೆಗಳ-ಬಗ್ಗೆ Concentration ಮಾಡಿದರು. ಹಾಗೆ, ಕನ್ನಡ ಕಾದಂಬರಿಯಲ್ಲಿ ಮೊದಲ ಬಾರಿಗೆ 'ಸಾಮಾಜಿಕ ಪ್ರವಾದಿ'ಯ ಧ್ವನಿ ಕೇಳಿ ಸಲು ಆರಂಭವಾಯಿತು. ಕಾರಂತ, ಪುಟ್ಟಪ್ಪರಿಗೆ ಶೈಲಿಯಲ್ಲಿ ಒಂದು ನಿರಾಳವಾದ ಬಿಡುವು ಇದೆ. ಒಂದು ಮಳೆಗಾಲ, ಮಳೆಯ ರಾತ್ರಿ, ಬೆಳದಿಂಗಳ ರಾತ್ರಿ, ಸೂರ್ಯೋದಯಗಳನ್ನು ಏನೂ ಕೆಲಸವಿಲ್ಲದ, ಸೌಂದರ್ಯ ಪ್ರಜ್ಞೆಯುಳ್ಳ ಒಬ್ಬ

ಸಾಮಾನ್ಯಸಂತೆ ಅವರು ವರ್ಣಿಸಬಲ್ಲರು. (ಕಾರಂತರ ಬೆಟ್ಟದ ಜೀವ, ಮರಳಿ ಮಣ್ಣಿಗೆ ಕಾದಂಬರಿಗಳನ್ನು ಲಕ್ಷಿಸಿ ಈ ಮಾತು.) ನಿರಂಜನರಿಗಾದರೋ ಈ ರೀತಿಯ 'ಬಿಡುವು' ಇಲ್ಲ. ಅವರಿಗೆ ಯಾವ ರೀತಿಯ ಒಂದು ಆತುರ, ಒಂದು ಆರ್ತತೆ ಇದೆಯೆಂಪರೆ "ಮನುಷ್ಯ ಯಾಕೆ ಹೀಗಾಗಿದ್ದಾನೆ?"....ಎಂಬುದೇ ಆ ತುಡಿತ. ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಬಸವಣ್ಣನಿಗೆ ಬಿಜ್ಜಳ ಹೇಳುವ ಒಂದು ಮಾತು ಹೀಗಿದೆ: "ಬಡವರ ಚಿಂದಿ ಬಟ್ಟೆಗಳ ಮೇಲೆ ಕಣ್ಣುನೆಟ್ಟಿರುವವನಿಗೆ ಅವರ ಗಂಧವತೀ ಪೃಥ್ವಿಯ ಅರಿವು ಹೇಗಾದರೂ ಆಗಬೇಕು?" ಅದು ಕಲೆ ಮತ್ತು ಕ್ರಾಂತಿಯ ಶಾಶ್ವತ ಸಮಸ್ಯೆ; ಕುವೆಂಪು, ಕಾರಂತರ ಕಲೆಯ ದೊಡ್ಡ ಶಕ್ತಿ. ಅವರು ಏಕಕಾಲಕ್ಕೆ ಬಡವರ ಚಿಂದಿ ಬಟ್ಟೆಯ ಬಗ್ಗೆ, ಗಂಧವತೀ ಪೃಥ್ವಿಯ ಬಗ್ಗೆ ಬರೆಯಬಲ್ಲರು. (ಗಂಧವತೀ ಪೃಥ್ವಿ ಎಂದರೆ - ಅದು ಜೀವನದ ಗೂಢ ಸಂಗತಿಗಳ ಮತ್ತು ದೈನಂದಿನ ಸುಖ ಸಂತೋಷ ಗಳ Metaphor). ನಿರಂಜನರು ಬಸವಣ್ಣನವರಂಥ ಆರ್ತತೆ, ತೀವ್ರತೆ ಇರುವ ಬರಹಗಾರ.

'ಮೃತ್ಯುಂಜಯ' ನಿರಂಜನರ ತುಂಬ ಕುತೂಹಲಕಾರಿ ಕೃತಿ. ನಿರಂಜನ ತಮ್ಮ ಬಹುಪಾಲು ಕೃತಿಗಳಲ್ಲಿ ಮನುಷ್ಯಜೀವನದ ದಾರಿದ್ರ್ಯದ, ಅಧಃಪತನದ ಮೂಲ ಎಲ್ಲಿ ಎಂದು ಶೋಧಿಸುವುದಕ್ಕೆ ಹೊರಟರು. 'ಶೋಷಣೆ' ಇದಕ್ಕೆ ಉತ್ತರ ವಾಯಿತು. ಯಾವುದನ್ನು ಸಮಾಜದ ವಿವರಗಳಲ್ಲಿ ಕಾಣುತ್ತ ಬಂದರೋ ಅದು ಒಂದು ಮಹಾನ್ ರೂಪಕ ಆಗಿ, Socialistic Myth ಆಗಿ ರೂಪು ತಾಳಿತು. ಆದುದರಿಂದ ಕನ್ನಡ ಕಾದಂಬರಿಗಳ ಕುರಿತು ಚರ್ಚಿಸುವಾಗ 'ಮೃತ್ಯುಂಜಯ' ಮಹತ್ತ್ವಪೂರ್ಣವಾಗುತ್ತದೆ. ಅದು ನಿರಂಜನರ ಈ ವರೆಗಿನ ಎಲ್ಲ ಸೃಜನಶೀಲ ಸಾಮಾಜಿಕ ಕಳಕಳಿಗಳನ್ನು ಮೂರ್ತೀಭವಿಸಿದಂತೆ ಕಾಣುವ ಕೃತಿ. ಪ್ರಗತಿಶೀಲ ಕಳಕಳಿ ಸಾಹಿತ್ಯ ರೂಪದಲ್ಲಿ ಬಂದಾಗ ಅದಕ್ಕೊದಗಬಹುದಾದ ಶಕ್ತಿ ಮತ್ತು ಮಿತಿಯ ಸಂಕೇತ ನಿರಂಜನ. ಒಂದು ದೃಷ್ಟಿಯಲ್ಲಿ ಸಮಕಾಲೀನ ಬಂಡಾಯ ಲೇಖಕರೇ ಮೊದಲಾದವರ ಅಭಿವ್ಯಕ್ತಿ ವಿಧಾನದ ಮಿತಿಯನ್ನು ಆಗಲೇ ನಿರಂಜನರು ಸ್ಥಾಪಿಸಿ ಬಿಟ್ಟಿದ್ದಾರೆ.

ನಿರಂಜನರ ಕೃತಿಗಳಲ್ಲಿ ಚಾರಿತ್ರಿಕ ಮೂಲರೂಪಗಳನ್ನು ಹುಡುಕುವ ಒಂದು ಹಟ (a search for social archetype) ಇದೆ. ಪ್ರತಿ ಸಂದರ್ಭದಲ್ಲೂ - ಸಾಮಾನ್ಯ ವೇಶ್ಯೆಯ ಬಗ್ಗೆ ಬರೆಯುತ್ತಿದ್ದರೂ - ಅದು ವ್ಯಕ್ತವಾಗುವುದು ಪ್ರವಾದಿಯ ಮಾತುಗಾರಿಕೆಯ ಧಾಟಿಯಲ್ಲಿ. ನಿರಂಜನರ ಪ್ರತಿ ಪಾತ್ರದಲ್ಲಿ ಚರಿತ್ರೆ ತನ್ನ ಎಲ್ಲ ಭಾರದೊಂದಿಗೆ ಕೂತಿರುತ್ತದೆ. ಅದನ್ನು ದಾಟಬೇಕಿದ್ದರೆ ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಬರಬೇಕಾಯಿತು. ಮೃತ್ಯುಂಜಯ ಮತ್ತು ಮುಸ್ಸಂಜೆಯ

ಕಥಾಪ್ರಸಂಗವನ್ನು ಹೋಲಿಸಿದಾಗ ಎರಡನೆಯದರಲ್ಲಿನ ಆಣೆ ಬಡ್ಡಿ ರಂಗಮ್ಮನಂಥವರಿಗೆ ಚರಿತ್ರೆಯ ಯಾವುದೇ ವಿಧವಾದ ನೇರವಾದ ಭಾರ ಇಲ್ಲ. ನಿರಂಜನರ ಬರವಣಿಗೆಯ ರೀತಿ ಯಾವುದೆಂದರೆ ಅವರ 'ಕೊನೆಯ ಗಿರಾಕಿ'ಯ ಬಗ್ಗೆ ಮಾತಾಡುವಾಗ ಆ ಇಡೀ ಕಥೆಗೆ 'ಮೃತ್ಯುಂಜಯ'ದಂಥ ಒಂದು ಆಕೃತಿ ಇದೆ; ಒಂದು ಸಮಾಜವಾದೀ ಪುರಾಣದ ಆಕೃತಿ ಇದೆ ಅನ್ನುವುದು ತಿಳಿಯುತ್ತದೆ. ಸಾಹಿತ್ಯವನ್ನು ಅದರ ವಾಸ್ತವತೆಯಿಂದ ಮೇಲೆತ್ತಿ ಮಹಾನ್ ರೂಪಕವಾಗಿ, Myth ಆಗಿ, ಮಹೋನ್ನತಿಯನ್ನಾಗಿ ಬರೆಯುವ ಛಲ ಇದೆ. (ಸಮಾಜವಾದೀ ಬರಹಗಾರರಿಗೆಲ್ಲ ಇದು ಸಾಮಾನ್ಯ - ಯುರೋಪ್‌ನಲ್ಲಿ ಗಾರ್ಕಿಯಂಥವರು ಇತ್ಯಾದಿ.) ನಿರಂಜನರ ಈ 'ಸಮಾಜವಾದೀ ಛಲ'ಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಕನ್ನಡ ಸಾಹಿತ್ಯದಲ್ಲಿ ಈ ರೀತಿಯ ಅಖಂಡ ಶೈಲಿ ಇರುವವರು ನಿರಂಜನರೊಬ್ಬರೇ. ಆದುದರಿಂದ ಸಮಾಜವಾದದಲ್ಲಿ, ಸಾಹಿತ್ಯದಲ್ಲಿ ಆಸಕ್ತಿ ಇರುವ ತರುಣ ಲೇಖಕರು ಅವರಿಂದ ಕಲಿಯಬೇಕಾದುದನ್ನೆಲ್ಲ ಕಲಿತು ಅವರಿಗಿಂತ ಭಿನ್ನವಾಗಿ ಬರೆಯಬೇಕು. ನಿರಂಜನರನ್ನು ಅಭಿನಂದಿಸಬಹುದಾದ ರೀತಿ ಇದೆಂದು ನನಗನ್ನಿಸುತ್ತದೆ.

*ದಿನಾಂಕ ೩೦–೧೧–೧೯೮೭ರಂದು - ಕನ್ನಡ ಸಂಘ, ಸಂತ ಫಿಲೋಮಿನಾ ಕಾಲೇಜು, ಪುತ್ತೂರು ಇದರ ಆಶ್ರಯದಲ್ಲಿ ಜರಗಿದ 'ನಿರಂಜನ ಸಾಹಿತ್ಯ - ವಿಚಾರ ಸಂಕಿರಣ'ದ ಮೊದಲ ಗೋಷ್ಠಿಯ ಅಧ್ಯಕ್ಷ ಭಾಷಣದ ಸಾರಾಂಶ.

ನಿರಂಜನರ ಕಾದಂಬರಿಗಳು - ಕೆಲವು ಟಿಪ್ಪಣಿಗಳು

-ಎಚ್. ಎಸ್. ರಾಘವೇಂದ್ರ ರಾವ್

ಪ್ರಗತಿಶೀಲ ಪರಂಪರೆಯ ಅತ್ಯುತ್ತಮ ಪ್ರತಿನಿಧಿಯ ಸಮಗ್ರ ಕಾದಂಬರೀ ಸಾಹಿತ್ಯವನ್ನು ಕುರಿತ ಯಾವುದೇ ಕಿರುಪ್ರಬಂಧವು ಅಸಮಗ್ರವೂ, ಸ್ವಲ್ಪಮಟ್ಟಿಗೆ ಕ್ರೂರವೂ ಆಗಿರುವುದು ಅನಿವಾರ್ಯ. ಆದ್ದರಿಂದ ನಾನು ಅಂತಹ ಪ್ರಯತ್ನದಲ್ಲಿ ತೊಡಗದೆ ಅವರ ಕಾದಂಬರಿಗಳ ಸಂದರ್ಭದಲ್ಲಿ ಗಮನಿಸಬಹುದಾದ ಕೆಲವು ಅಂಶಗಳ ನಿರೂಪಣೆಯಿಂದ ತೃಪ್ತನಾಗುತ್ತೇನೆ. ಈ ಟಿಪ್ಪಣಿಗಳು ಪರಸ್ಪರ ತಾರ್ಕಿಕ ಸಂಬಂಧ ರಾಹಿತ್ಯ ಮತ್ತು ವಿವರಹೀನತೆಗಳ ದೋಷದಿಂದ ಕೂಡಿವೆ. ನಿರಂಜನರ ಎಲ್ಲ ಕಾದಂಬರಿಗಳ ಸರ್ವೇಕ್ಷಣವನ್ನಾಗಲೀ, ಯಾವುದಾದರೂ ಒಂದು ಕಾದಂಬರಿಯ ವಿವರವಾದ ಅಧ್ಯಯನವನ್ನಾಗಲೀ ಇಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ.

೧೯೫೩ರಿಂದ ರಚಿತವಾಗುತ್ತಿರುವ ನಿರಂಜನರ ಕಾದಂಬರಿಗಳನ್ನು ವಿಮರ್ಶೆ ಮಾಡುವಾಗ ಎರಡು ತಾತ್ವಿಕ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ನಿರ್ದಿಷ್ಟ ವಾದ ಸಾಹಿತ್ಯ ಪ್ರಕಾರವೊಂದು ತನ್ನದೇ ಆದ ರೀತಿಯಲ್ಲಿ ಬೆಳೆಯುತ್ತಾ ಒಂದು ಹಂತವನ್ನು ತಲುಪಿರುವಾಗ, ಅದಕ್ಕಿಂತ ಹಿಂದಿನ ಹಂತಗಳಲ್ಲಿ ರಚಿತವಾದ ಕೃತಿಗಳು ತಮ್ಮ ಜೀವಂತತೆಯನ್ನು, ಸಾಂದರ್ಭಿಕತೆ (Relevance)ಯನ್ನು ಉಳಿಸಿಕೊಳ್ಳುವ ಬಗೆ ಹೇಗೆ ಎನ್ನುವುದು ಮಹತ್ವದ ಪ್ರಶ್ನೆ. ಕೇವಲ ಸಮಕಾಲೀನ ಪ್ರಸ್ತುತತೆ ಮತ್ತು ತಾಂತ್ರಿಕ ಪರಿಣತಿಗಳನ್ನು ಬಯಸುವ ವಿಮರ್ಶಕನು ಹಿಂದಿನ ಕೃತಿಗಳಿಗೆ ಅನ್ಯಾಯವಮಾಡುತ್ತಿರುತ್ತಾನೆ. ಇಷ್ಟಕ್ಕೂ ಸಾಹಿತ್ಯಾಸಕ್ತನೊಬ್ಬನು ಬೇರೆ ಬೇರೆ ಕಾಲಖಂಡಗಳಲ್ಲಿ ರಚಿತವಾದ ಕೃತಿಗಳನ್ನು ಏಕಕಾಲದಲ್ಲಿ ಓದುವ ಅವಕಾಶ ಪಡೆಯುವುದರಿಂದ, ಅವನಿಗೆ ಕೃತಿರಚನೆಯ ಕಾಲದ ಐತಿಹಾಸಿಕ ಸಂದರ್ಭಕ್ಕಿಂತ ಆ ಕೃತಿಯ ಸಾಹಿತ್ಯಕ ಮೌಲ್ಯವೇ ಹೆಚ್ಚು ಮುಖ್ಯವಾಗುತ್ತದೆ. ಮನುಷ್ಯನ ಅನುಭವ, ಅನಿಸಿಕೆ ಮತ್ತು ಭಾವನೆಗಳ ಲೋಕವನ್ನು ಕಲೆಯಾಗಿ ಕಟ್ಟುವ ಪ್ರಕ್ರಿಯೆಯಲ್ಲಿ ಸಾಹಿತಿ ಪಡೆದಿರುವ ಯಶಸ್ಸು ಮಾತ್ರ ನಮಗೆ ಮುಖ್ಯ. ಅವನ ಕೃತಿಗಳು ಆ ಕಾಲದ ಸಾಹಿತ್ಯಕ ಗ್ರಹಿಕೆಗಳಿಂದ, ತಾಂತ್ರಿಕ ಆವಿಷ್ಕಾರಗಳಿಂದ ಪರಿಮಿತವಾಗಿರುತ್ತದೆ; ಹಲವು ಬಾರಿ ಅವನ್ನು ಮೀರಿ ನಿಲ್ಲುತ್ತವೆ. ಅದೇ ರೀತಿಯಲ್ಲಿ ಪ್ರತಿಯೊಂದು ಯುಗವೂ ಕೂಡ ತನಗೆ ವಿಶಿಷ್ಟವಾದ ಸಂಗತಿಗಳ ಸಾಹಿತ್ಯಕ ಅಭಿವ್ಯಕ್ತಿಗೆ ಅತ್ಯಂತ ಸೂಕ್ತವಾದ ರೂಪವನ್ನು, ತಾಂತ್ರಿಕ ಸಲಕರಣೆಗಳನ್ನು ರೂಪಿಸಿಕೊಳ್ಳುತ್ತದೆಯೆನ್ನುವ ಮಾತಿನಲ್ಲಿಯೂ ಸಾಕಷ್ಟು ಸತ್ಯವಿದೆ.

ಆದರೆ ಕಾಲು ಶತಮಾನದಿಂದ ಒಂದು ಸಾಹಿತ್ಯಪ್ರಕಾರವನ್ನು ಬಳಸುತ್ತಾ ಬಂದಿರುವ, ಸಾಹಿತಿಯೊಬ್ಬನು ಆ ಪ್ರಕಾರದಲ್ಲಿ ಆಗುತ್ತಿರುವ ಬೆಳವಣಿಗೆ ಮತ್ತು ಆವಿಷ್ಕರಣಗಳನ್ನು ಎಚ್ಚರದಿಂದ ಗಮನಿಸಿ, ಅವಕ್ಕೆ ತನ್ನ ಬರವಣಿಗೆಯಲ್ಲಿ ಪ್ರತಿಸ್ಪಂದಿಸಬೇಕಾಗುತ್ತದೆ. ಹಾಗಲ್ಲದೆ ಅವನು ತನ್ನ ಸುತ್ತಾ ಅನಾಸಕ್ತಿ, ಹಟಮಾರಿತನ ಮತ್ತು ತಿರಸ್ಕಾರಗಳ ಗೋಡೆಯನ್ನು ಕಟ್ಟಿಕೊಂಡು ಬದಲಾಗದೆ ಉಳಿದುಬಿಟ್ಟರೆ ಅವನ ಬರವಣಿಗೆಯು ಪುನರುಕ್ತಿ ಪರಂಪರೆಯಾಗಿ ಬಿಡುತ್ತದೆ. ಸರ್ವಮಂಗಳಾ, ಸ್ವರೂಪ ಮತ್ತು ಬಿರುಕು ಕಾದಂಬರಿಗಳನ್ನು ಬರೆದವರು, ಎಪ್ಪತ್ತೇ ಕಾಲದ ನಂತರ ವೈಶಾಖ, ಕರ್ವಾಲೋ, ಮುಸ್ಸಂಜೆಯ ಕಥಾಪ್ರಸಂಗಗಳಂತಹ ಮಹತ್ವದ ಕೃತಿಗಳನ್ನು ರಚಿಸಿದ್ದು ಈ ಬಗೆಯ ಪ್ರತಿಸ್ಪಂದನಕ್ಕೆ ಸಾಕ್ಷಿ. ಅದೇ ೧೯೮೦ರ ಮೃತ್ಯುಂಜಯಕ್ಕೂ ೧೯೫೪ರ ಚಿರಸ್ಮರಣೆಗೂ ಇರುವ ವ್ಯತ್ಯಾಸ. ಕಾಲ, ದೇಶ, ಗಾತ್ರ ಮತ್ತು ವಿವರಗಳಲ್ಲಿ ಮಾತ್ರವೆನಿಸಿದರೆ ಅದು ಒಂದು ಬಗೆಯ ಸ್ಥಗಿತ ಮನೋಧರ್ಮಕ್ಕೆ ಸಾಕ್ಷಿಯಾಗುತ್ತದೆ. ಹರಿಯುವ ನದಿಯ ಬದಿಯಲ್ಲಿ ಹರಿಯದೆ ನಿಂತ ನೀರು

ಆರೋಗ್ಯದಿಂದಲೇ ವಂಚಿತವಾಗಿರುತ್ತದೆ. ತನ್ನ ವಿಕಸನದ ಸಾಧ್ಯತೆಗಳನ್ನು ಮೊಟಕು ಮಾಡಿಕೊಂಡಿರುತ್ತದೆ. ಆದ್ದರಿಂದ ಚಿರಸ್ಮರಣೆಯು ಯಾವ ಕಾರಣಗಳಿಗೋಸ್ಕರ, ಹೇಗೆ ಮುಖ್ಯ ಆತ್ಮೀಯ ಎನಿಸಿತೋ ಅದೇ ಕಾರಣಗಳಿಗೋಸ್ಕರ ಮೃತ್ಯುಂಜಯ ಕೂಡ ಮುಖ್ಯವಾಗುತ್ತದೆ. ಕಾದಂಬರಿಕಾರರು ಬೆಳೆದಿದ್ದಾರೆ ಎನ್ನಿಸುವುದಿಲ್ಲ.

* * * *

ನಿರಂಜನರ ಬದುಕಿನಲ್ಲಿ ಹಲವು ಮಹತ್ವದ ಘಟ್ಟಗಳಿದ್ದು, ಅವು ಅವರ ಬರವಣಿಗೆಯಮೇಲೆ ಪ್ರಭಾವ ಬೀರಿವೆಯೆಂದು ನನ್ನಅಭಿಪ್ರಾಯ.ಅವರು ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿದ್ದು, ಭೂಗತವಾಗಿದ್ದು, ಜನಶಕ್ತಿಯ ಸಂಪಾದಕರಾಗಿದ್ದುದು ೧೯೪೧ ರಿಂದ ೧೯೫೧ರ ವರೆಗಿನ ಅವಧಿಯಲ್ಲಿ. ಎಂದರೆ ಹದಿನೆಂಟರಿಂದ ಇಪ್ಪತ್ತೆಂಟರ ವಯಸ್ಸಿನಲ್ಲಿ. ಹಲವು ಕಾರಣಗಳಿಂದ ರಾಜಕೀಯ ಚಟುವಟಿಕೆಗಳಿಂದ ಬಿಡುಗಡೆ ಪಡೆದ ನಂತರ ಎಂದರೆ ೧೯೫೪ರಲ್ಲಿ ಅವರ ಮೊದಲ ಕಾದಂಬರಿ ಪ್ರಕಟವಾಯಿತು (ವಿಮೋಚನೆ). ಆಗ ಅವರಿಗೆ ಮೂವತ್ತು ವರ್ಷ. ಅದರ ನಂತರ ಅವರು ರಾಜಕೀಯ ಸಿದ್ಧಾಂತವೊಂದರ ಬೆಂಬಲಿಗರಾಗಿ ಉಳಿದರೇ ವಿನಾ, ಸಾಹಿತಿಗಳಾದರೇ ವಿನಾ ರಾಜಕೀಯ ಹೋರಾಟಗಾರರಾಗಲಿಲ್ಲ. ಆದ್ದರಿಂದ ಕ್ರಾಂತಿಪರವಾದ, ಜನತೆಯ ಹೋರಾಟವನ್ನು ಸಮರ್ಥಿಸುವ ಅವರ ಕೃತಿಗಳೆಲ್ಲವೂ ಅವರು ಮೂವತ್ತನೆಯ ವಯಸ್ಸಿನಲ್ಲಿ ರಾಜಕೀಯ ನಿವೃತ್ತಿಯನ್ನು ಪಡೆದ ನಂತರವೇ ರಚಿತವಾದವು. ಇದು ತಪ್ಪೆಂದು ನಾನು ಹೇಳುತ್ತಿಲ್ಲ. ಇದು ಪ್ರಾಯಶಃ ಆ ಕಾಲದ ವಾಮಪಂಥೀಯ ಹೋರಾಟಗಳ ವಸ್ತುಸ್ಥಿತಿಯನ್ನು ಪ್ರತಿಫಲಿಸುತ್ತಿರಬಹುದು. ಆದರೆ ತನ್ನ ಬದುಕಿನ ಕೊನೆಯವರೆಗೂ ಹೋರಾಟದಲ್ಲಿ ನಿರತನಾಗಿದ್ದ ಪಾಬ್ಲೋ ನೆರುದಾ ಅಂತಹವರ ಬರವಣಿಗೆಗೂ ಇದಕ್ಕೂ ವ್ಯತ್ಯಾಸವಿದೆಯೆಂದು ನನಗೆ ತೋರುತ್ತದೆ.

ಆದರೆ ಒಂದು ಮುಖ್ಯ ಮಾತು. ತನ್ನ ಬದುಕಿನ ಒಂದು ಹಂತದ ಅನುಭವಗಳನ್ನು ಕುರಿತು, ನಂತರದ ಹಂತದಲ್ಲಿ ಬರೆದಾಗ, ಹಾಗೆ ಬರೆದಿದ್ದರಿಂದಲೇ ನಿರಂಜನರ ಕಾದಂಬರಿಗಳಿಗೆ ಹಲವು ಗುಣಗಳು ಪ್ರಾಪ್ತವಾದವು. ಅವರ ಅನುಭವಗಳು ನೆನಪಿನ ಗಣಿಯಿಂದ ಹೊರತೆಗೆದವೂ, ದೂರದಿಂದ 'ಧ್ಯಾನಿತ'ವಾಗಿ ಹಿನ್ನೋಟದ (Hind Sight) ಲಾಭ ಪಡೆದವೂ ಆದ್ದರಿಂದ ಅವಕ್ಕೆ ಪರಿಪಕ್ವತೆಯ ಗುಣ ಲಭಿಸಿತು. ಮತ್ತು ಇದು ಲೇಖಕರ ತಾರುಣ್ಯದಲ್ಲೇ ಸಂಭವಿಸಿದುದರಿಂದ ಸೃಜನಶೀಲತೆಯ ಸೆಲೆಗಳು ಜೀವಂತವಾಗಿರುವಾಗಲೇ ಆವೇಶರಹಿತವಾಗಿ ಬರೆಯಲು ಅವರಿಗೆ ಸಾಧ್ಯವಾಯಿತು.

ಕಮ್ಯೂನಿಸ್ಟ್ ಪಕ್ಷದ ಬಗೆಗಿನ ಭ್ರಮನಿರಸನ ಮತ್ತು ಮಾರ್ಕ್ಸಿಸ್ಟ್ ಸಿದ್ಧಾಂತಗಳ ಬಗೆಗಿನ ಒಲವು ಎರಡನ್ನೂ ಉಳಿಸಿಕೊಂಡಿದ್ದರಿಂದ, ಅವರ ಕಾದಂಬರಿಗಳಿಗೆ

ಆ ಪಕ್ಷದ ಒಳಜಗಳಗಳು ಎಂದಿಗೂ ವಸ್ತುವಾಗಲಿಲ್ಲವೆನ್ನುವುದು ಮಹತ್ವದ ಮಾತು. ವ್ಯಕ್ತಿಗಳ ಮತ್ತು ಪಕ್ಷದ ವಾಸ್ತವ ಸ್ವರೂಪವನ್ನು ಬಯಲಿಗೆಳೆಯುವು ದರಿಂದ ತಾನು ನಂಬಿರುವ ತತ್ವಗಳಿಗೆ ಮತ್ತು ಅವುಗಳ ಪ್ರಸಾರಕ್ಕೆ ದ್ರೋಹ ಬಗೆದಂತಾಗುವುದೆಂದು ಅವರು ತಿಳಿದಿರಬೇಕು. ಬಸವರಾಜ ಕಟ್ಟೀಮನಿಯವರ ಬರಹ ಗಳು ಸಮಾಜವಾದೀ ಪಕ್ಷದ ವಿಘಟನೆಯನ್ನು ನಿರ್ಭಿಡೆಯಿಂದ ಚಿತ್ರಿಸುತ್ತವೆ. ಅನಂತ ಮೂರ್ತಿಯವರ ಭಾರತೀಪುರ ಮತ್ತು ಅವಸ್ಥೆಗಳಲ್ಲಿಯೂ ಹೀಗೆಯೇ ರಾಜಕೀಯ ಸಿದ್ಧಾಂತವನ್ನು ಕುರಿತಾದ ಆಕರ್ಷಣೆ ಮತ್ತು ಸಕ್ರಿಯ ರಾಜಕೀಯವನ್ನು ಕುರಿತಾದ ವಿಕರ್ಷಣೆಗಳು ಸ್ಪಷ್ಟವಾಗಿ, ಏಕಕಾಲದಲ್ಲಿ ಮೈದಳೆಯುತ್ತವೆ. ಆದರೆ ನಿರಂಜನರು ತಮ್ಮ ಮನಸ್ಸಿನೊಳಗೆ ಪರಿಶುದ್ಧವಾಗಿಯೇ ಉಳಿದ ರಾಜಕೀಯ ಹೋರಾಟವನ್ನು, ಅದರ ಎಲ್ಲ ಆದರ್ಶವಾದೀ ತುಡಿತಗಳೊಂದಿಗೆ, ಎದೆ ಝಲ್ ಎನ್ನುವಂತೆ ಚಿತ್ರಿಸು ತ್ತಾರೆ. ವಿಮೋಚನೆಯಿಂದ ಮೃತ್ಯುಂಜಯದವರೆಗಿನ ಎಲ್ಲ ಕಾದಂಬರಿಗಳಲ್ಲಿ ಜನಪರ ಹೋರಾಟಗಾರರು ಪರಸ್ಪರ ಕಚ್ಚಾಡುವುದು ಇಲ್ಲವೇ ಇಲ್ಲ. ಹೀಗೆ ಸ್ವಾರ್ಥ ಮತ್ತು ಈರ್ಷೆಗಳ ಮೂಲಕ ಕಲುಷಿತವಾಗಿರಬಹುದಾದ ರಾಜಕೀಯ ಹೋರಾಟವನ್ನು ಚಿತ್ರಿಸಿ ಚಳುವಳಿಯನ್ನು ದುರ್ಬಲಗೊಳಿಸಬಾರದೆನ್ನುವ ಬುದ್ಧಿಪೂರ್ವಕ ಆಯ್ಕೆಯು ನಿರಂಜನರ ಕಾದಂಬರಿಗಳ ಆಕರ್ಷಣೆ ಮತ್ತು ಪರಿಮಿತಿಗಳೆರಡಕ್ಕೂ ಕಾರಣವಾಗಿದೆ ಯೆಂದು ನನಗೆ ಅನ್ನಿಸುತ್ತದೆ. ಏಕೆಂದರೆ ರಾಜಕೀಯ ಹೋರಾಟದ ಆದರ್ಶಮಯ, ಸ್ಫೂರ್ತಿದಾಯಕ ಮಾದರಿಯನ್ನು ಸರಿಯಾಗಿ ಕೊಡುವ ನಿರಂಜನರು, ತಮಗೂ ತಿಳಿದಿರುವ ಹೋರಾಟಗಾರರ ಅಂತರಂಗದ ತುಮುಲಗಳಿಂದ ನಮ್ಮನ್ನು ವಂಚಿತ ರನ್ನಾಗಿ ಮಾಡುತ್ತಾರೆ.

*　　*　　*　　*

ಪ್ರಗತಿಶೀಲ ಸಾಹಿತ್ಯಕ್ಕೂ ನಿರಂಜನರ ಕಾದಂಬರಿಗಳಿಗೂ ಇರುವ ಸಂಬಂಧ ವನ್ನು ಕುರಿತು ಒಂದೆರಡು ಮಾತುಗಳು ಅಗತ್ಯ. ೧೯೪೩ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ತಾವು ಶ್ರೀ ಅ. ನ. ಕೃ. ಜೊತೆಯಲ್ಲಿ ಪ್ರಗತಿಶೀಲತೆಯ ತುತೂರಿ ಊದಿದೆವೆಂದು ನಿರಂಜನರು ಹೇಳುತ್ತಾರೆ. ಆಗ ಅವರಿಗೆ ಇಪ್ಪತ್ತು ವರ್ಷ. ೧೯೪೪ರಲ್ಲಿ ಎಂದರೆ ಒಂದು ವರ್ಷದ ನಂತರ, "ಪ್ರಗತಿಶೀಲ ಸಾಹಿತ್ಯಾಸಕ್ತರ ಸಭೆಯಲ್ಲಿ ಶ್ರೀ ಅ. ನ. ಕೃ. ಅವರ ಕಾರ್ಯವಿಧಾನವನ್ನು ಟೀಕಿಸಿ ಭಾಷಣ" ಮಾಡುತ್ತಾರೆ. ೧೯೪೭ರಲ್ಲಿ "ಶ್ರೀ ಅ.ನ.ಕೃ. ಬಳಗದವರಿಗೆ (ಸಹಜವಾಗಿಯೇ) ಅಸ್ಪೃಶ್ಯರಾಗುತ್ತಾರೆ." ಹೀಗೆ ನಾವು ಪ್ರಗತಿಶೀಲ ಸಾಹಿತ್ಯವೆಂದು ಕರೆಯುವ ಚಳುವಳಿಯ ಮೊದಲ ಹಂತ ದಿಂದಲೂ, ನಿರಂಜನರದು ಅ. ನ. ಕೃ. ಮತ್ತು ತ. ರಾ. ಸು. ಅವರಿಗಿಂತ ಭಿನ್ನವಾದ ಧೋರಣೆಯಾದುದರಿಂದ, ಅವರ ಕಾದಂಬರಿಗೆ ಅ. ನ. ಕೃ. ಅನುಕರಣೀಯ ಮಾದರಿ ಎನ್ನಿಸುವುದಿಲ್ಲ. ತಮ್ಮ ಮೊದಲ ಕಾದಂಬರಿಯ ಪ್ರಕಟಣೆಗಿಂತಲೂ ಮುಂಚಿನಿಂದಲೂ

ಅವರು ಬೆಳೆಸಿಕೊಂಡ ವಿಮರ್ಶಾತ್ಮಕ ನೆಲೆಯು ನಿರಂಜನರು ಪ್ರಗತಿಶೀಲರ ನಡುವೆ ವಿಶಿಷ್ಟರಾಗಲು ಕಾರಣವಾಯಿತು. ಅಲ್ಲದೆ ಹಿಂದೂ ಧರ್ಮದ ತಾತ್ವಿಕ ಮೌಲ್ಯಗಳ ಕಡೆಗೆ ಅ. ನ. ಕೃ. ಮತ್ತು ತ. ರಾ. ಸು. ಅವರ ಆಸಕ್ತಿಯು ಮತ್ತೆ ಜೀವಂತವಾದರೆ ನಿರಂಜನರು ಇಂದಿನ ವರೆಗೂ ಕಟ್ಟಾ ನಾಸ್ತಿಕರಾಗಿಯೇ ಉಳಿದಿದ್ದಾರೆ. ಅವರ ಯಾವ ಬರೆಹದಲ್ಲಿಯೂ ದೇವರು, ಧರ್ಮಗಳು ಮಾನವೀಯ ಸಂಬಂಧಗಳಿಗಿಂತ ಮುಖ್ಯವಾಗುವುದಿಲ್ಲ. ಇಲ್ಲಿಯೇ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪ್ರಗತಿಶೀಲರ 'ಕಾಮಪ್ರಚೋದಕ ಬರವಣಿಗೆ'ಯ ವಿರುದ್ಧ ನಿರಂಜನರು ವ್ಯಕ್ತಪಡಿಸಿದ ತೀವ್ರ ಪ್ರತಿಭಟನೆ. ಅವರು ಅದನ್ನು ಸ್ವಚ್ಛಂದತೆಗೆ ಲೈಸೆನ್ಸ್ ಎಂದು ಕರೆದರು. ಪ್ರಗತಿಶೀಲರ ಕಮ್ಯೂನಿಸ್ಟ್ ವಿರೋಧವನ್ನು ಖಂಡಿಸುವುದರ ಮೂಲಕ ಅವರು ಇನ್ನಷ್ಟು ಏಕಾಂಗಿಯಾದರು. ಹೀಗೆ ಬುದ್ಧಿಪೂರ್ವಕವಾಗಿ ಬೆಳೆಸಿಕೊಂಡ ವಿರೋಧ ಮತ್ತು ಭ್ರಮನಿರಸನಗಳೇ ಅವರ ಕಾದಂಬರಿಗಳ ಹಲವು ಒಳ್ಳೆಯ ಗುಣಗಳಿಗೆ ಕಾರಣವಾಗುವುದನ್ನು ಗಮನಿಸಬಹುದು.

* * * *

ಮುಂದಿನ ಟಿಪ್ಪಣಿಯು ನಿರಂಜನರ ಕಾದಂಬರಿಗಳಲ್ಲಿ ಬರುವ ಪಾತ್ರಗಳ ಸ್ವರೂಪಕ್ಕೆ ಸಂಬಂಧಪಟ್ಟುದಾಗಿದೆ. ತಮ್ಮ ಹಲವು ಬರೆಹಗಳಲ್ಲಿ ವಾಸ್ತವವಾದವನ್ನು ಸಮರ್ಥಿಸುವ ಅವರು ಪಾತ್ರಗಳ ಚಿತ್ರಣದಲ್ಲಿ ಎರಡು ಮಾರ್ಗಗಳನ್ನು ಅನುಸರಿಸುವರೆಂದು ತೋರುತ್ತದೆ. ಸಾಮಾಜಿಕ ಸನ್ನಿವೇಶವೊಂದರಲ್ಲಿ ಉಪಸ್ಥಿತವಾಗಿರುವ ನಿರ್ದಿಷ್ಟ ದೃಷ್ಟಿಕೋನಗಳನ್ನು ಪ್ರತಿನಿಧಿಸುವ ಪಾತ್ರಗಳ ಸೃಷ್ಟಿಯು ಮೊದಲನೆಯ ಬಗೆ. ಇಲ್ಲಿ ಮನುಷ್ಯ ತಾನು ಹೇಗೆ ಇರುವನೋ ಹಾಗೆ ಕಾಣಿಸಿಕೊಳ್ಳುವುದಿಲ್ಲ. ಆದರೆ ತಾನು ಯಾವ ವರ್ಗದ, ವರ್ಣದ ಹಿತಾಸಕ್ತಿಗಳನ್ನು ಪ್ರತಿನಿಧಿಸುವನೋ ಅದಕ್ಕೆ ಅನುಗುಣವಾಗಿ ಚಿತ್ರಿತನಾಗುತ್ತಾನೆ. ಎಂದರೆ ಕಾದಂಬರಿಕಾರರಿಗೆ ಮುಖ್ಯವಾಗುವುದು ಪಾತ್ರದ ಅಂತರಂಗದಲ್ಲಿ ನಡೆಯಬಹುದಾದ ತುಮುಲದ ವಾಸ್ತವತೆಯಲ್ಲ. ಸಾಮಾಜಿಕ ಸನ್ನಿವೇಶದಲ್ಲಿ ತನ್ನ ವರ್ತನೆಯ ಮೂಲಕವೇ ನಿಜವಾಗುವ ಬಾಹ್ಯದ ವಾಸ್ತವತೆ. ಹೀಗೆ ಮಾಡುವುದು ತಪ್ಪೆಂದು ನಾನು ವಾದಿಸುತ್ತಿಲ್ಲ. ಅಪ್ಪು, ಚಿರುಕಂಡ, ನಂಬಿಯಾರ್, ಸುಬ್ಬಯ್ಯ ಮುಂತಾದವರು ನಿರ್ದಿಷ್ಟ Typeಗಳನ್ನು ಸಮರ್ಥವಾಗಿಯೇ ಪ್ರತಿನಿಧಿಸುತ್ತಾರೆ. ಆದ್ದರಿಂದಲೇ ಅವರೆಲ್ಲರೂ ಒಟ್ಟಾಗಿ ಭಾಗವಹಿಸುವ ಸನ್ನಿವೇಶಗಳಲ್ಲಿ ವಾಸ್ತವವಾಗಿಯೇ ತೋರುತ್ತಾರೆ. ಆದರೆ ಅವರು ನಿಜ ಅಲ್ಲ ಎನ್ನಿಸುವುದು ಅವರ ಅಂತರಂಗದ ಆಯಾಮರಹಿತ ಸ್ಥಿತಿಯಲ್ಲಿ. ಅಂತಹ ಪಾತ್ರಗಳು ಹೇಗೆ ಯೋಚಿಸಬೇಕು, ಭಾವಿಸಬೇಕು ಎಂದು ಕಾದಂಬರಿಕಾರರ ಪ್ರಜ್ಞೆಯು ತೀರ್ಮಾನಿಸುತ್ತದೆಯೋ ಹಾಗೆ ಅವರು ಯೋಚಿಸುತ್ತಾರೆ, ಭಾವಿಸುತ್ತಾರೆ. ಅದಕ್ಕಿಂತ ಆಳಕ್ಕೆ ಹೋಗಿ ದೇವತೆಯೊಳಗೂ ಇರಬಹುದಾದ ರಾಕ್ಷಸನೊಡನೆ

ಮುಖಾಮುಖಿಯಾಗುವ ಪ್ರಯತ್ನವನ್ನು ಅವರ ಕಾದಂಬರಿಗಳು ಮಾಡುವುದಿಲ್ಲ. ಯಾರ ಕಣ್ಣುಗಳಿಂದ ನೋಡಿದರೂ ಅವರ ಒಳ್ಳೆಯ ಪಾತ್ರಗಳು ಒಳ್ಳೆಯವರಾಗಿಯೇ ಉಳಿಯುತ್ತಾರೆ; ಕೆಟ್ಟವರೂ ಹಾಗೆಯೇ ಇರುತ್ತಾರೆ.

ನಿರಂಜನರ ಕಾದಂಬರಿಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿಯೇ ಪತಿತರಾಗುವ, ಆದರೂ ಅಂತರಂಗದ ಪರಿಶುದ್ಧತೆಯನ್ನು ಉಳಿಸಿಕೊಳ್ಳುವ ಪಾತ್ರಗಳ ಪರಂಪರೆಯೇ ಇದೆ. ವಿಮೋಚನೆ, ಬನಶಂಕರಿ, ಅಭಯ ಹೀಗೆಯೇ ಹಲವು ಕಾದಂಬರಿಗಳಲ್ಲಿ ನಿದರ್ಶನಗಳು ದೊರೆಯುತ್ತವೆ. ಇಂತಹ ಪಾತ್ರಗಳ ಅಂತರಂಗ ಪರಿವೀಕ್ಷಣೆಯಲ್ಲಿ ಸ್ವಸಮರ್ಥನೆಯ ಧಾಟಿಯೊಂದು ಸದಾ ಸಕ್ರಿಯವಾಗಿರುತ್ತದೆ. ಇದು ತಪ್ಪಲ್ಲ. ಆದರೆ ಅವೇ ಕಾದಂಬರಿಗಳ ದುಷ್ಟಪಾತ್ರಗಳು ಇಂತಹ ಸಮರ್ಥನೆಯ ಸೌಲಭ್ಯದಿಂದ ವಂಚಿತರಾಗಿರುತ್ತಾರೆ. ನವ್ಯ ಕಾದಂಬರಿಯ ನಾಯಕ ಪಾತ್ರಗಳಲ್ಲಿ ಸ್ಪಷ್ಟವಾಗಿ ಮೈದಳೆದ ಸ್ವವಿಮರ್ಶೆಯ ಧೋರಣೆಯನ್ನು ನಿರಂಜನರ ಇತ್ತೀಚಿನ ಕೃತಿಗಳಾದರೂ ರೂಢಿಸಿಕೊಂಡಿದ್ದರೆ ಅವರ ಕಾದಂಬರಿಗಳು ಇನ್ನಷ್ಟು ಅರ್ಥಪೂರ್ಣವಾಗುತ್ತಿದ್ದವು. ಇದು ಮನುಷ್ಯನ ಸ್ವಭಾವವನ್ನು ಗಮನಿಸದೆ, ಅರ್ಥಮಾಡಿಕೊಳ್ಳದೆ ಇರುವುದರಿಂದ ಆಗಿರುವ ತಪ್ಪಲ್ಲ. ಆದರೆ ಕಾದಂಬರಿಯಲ್ಲಿ ಪಾತ್ರಗಳು ಏಕೆ ಮತ್ತು ಹೇಗೆ ಬರಬೇಕೆಂಬುದರ ಬಗ್ಗೆ ತೆಗೆದುಕೊಂಡ ತೀರ್ಮಾನಗಳ ಪರಿಣಾಮ.

ಇಷ್ಟಾದರೂ ಇವರು ತಾವು ಸೃಷ್ಟಿಸಿದ ಪಾತ್ರಗಳಿಗೆ ವಿಶಿಷ್ಟತೆಯ ಮುದ್ರೆಯನ್ನು ಕೊಡುತ್ತಾರೆಂಬುದನ್ನು ಮರೆಯಲಾಗುವುದಿಲ್ಲ. ಇದು ಆಯಾ ಪಾತ್ರಗಳ ವರ್ತನೆಯ ಸೂಕ್ಷ್ಮವಾದ ನಿರೀಕ್ಷಣೆ ಮತ್ತು ಅಪರೂಪವಾದ ವಿವರಗಳನ್ನು ಕೊಡುವುದರಿಂದ ಸಾಧ್ಯವಾಗುತ್ತದೆ. ಉದಾಹರಣೆಗೆ ಚಿರಸ್ಮರಣೆಯ ಅಪ್ಪು, ಚಿರುಕಂಡರಿಬ್ಬರೂ ಜೀವವನ್ನೇ ಬಲಿಕೊಡುವ ಕ್ರಾಂತಿಕಾರರಾದರೂ ಪರಸ್ಪರ ವಿಭಿನ್ನ ವ್ಯಕ್ತಿಗಳಾಗಿಯೇ ಮೂಡಿಬರುತ್ತಾರೆ. ನಂಬಿಯಾರ್ ಮನೆಯಿಂದ ತಂದ ಪಪ್ಪಾಯಿ ಹಣ್ಣಿನ ಬಗ್ಗೆ ಅಪ್ಪು ತೋರಿಸುವ ಆಸಕ್ತಿಯಲ್ಲಿ, ಮಾಸ್ತರು ತನಗೆ ಕೊಡಬಂದ ಕೈಗಡಿಯಾರವನ್ನು ಅಪ್ಪುವಿನ ಕೈಗೆ ಕಟ್ಟಿಸುವುದರಲ್ಲಿ ಚಿರುಕಂಡ ತೋರಿಸುವ ಸಹೃದಯತೆಯಲ್ಲಿ ಇಂತಹ ಪಾತ್ರಚಿತ್ರಣದ ಎಳೆಗಳು ರೂಪಿತವಾಗುತ್ತದೆ. ಇಂತಹ ಒಂದು ಕಲೆಗಾರಿಕೆಯ ಸಂದರ್ಭವೆಂದರೆ, ಮಾಸ್ತರು ಊರು ಬಿಟ್ಟು ಹೊರಡುವಾಗ ಸಾಮಾನ್ಯ ರೈತನಾದ ಕೋರನ ವರ್ತನೆ. ಅವನು ರೈಲು ನಿಲ್ದಾಣಕ್ಕೆ ಓಡೋಡಿ ಬರುತ್ತಾನೆ. ಆಗ:

ಅಪ್ಪು ಕೇಳಿದ "ಏನು ಕೋರ"

"ಏನಿಲ್ಲ" ಎಂದು ತನ್ನ ವಕ್ರವಕ್ರವಾಗಿದ್ದ ಹಲ್ಲುಗಳನ್ನು ತೋರಿಸಿ ಏದುಸಿರುಬಿಡುತ್ತಾ ಕೋರ ಹೇಳಿದ.

"ಗುಂಡಿನಿಂದ ತಪ್ಪಿಸಿಕೊಂಡು ಬಂದ್ಯಾ" ಎಂದು ಮಾಸ್ತರು ಒಲವು ತುಂಬಿದ ನೋಟದಿಂದ ಆತನನ್ನು ನೋಡುತ್ತಾ ಕೇಳಿದರು.

ಕೋರ ಲಜ್ಜೆಯಿಂದ ದೂರ ನಿಂತನೇ ಹೊರತು ಮಾತನಾಡಲಿಲ್ಲ.

ಕೋರನ ಈ ಲಜ್ಜೆ ಮತ್ತು ಮೌನಗಳು ಪುಟಗಟ್ಟಲೆ ಮಾತುಗಳಿಗಿಂತ ಹೆಚ್ಚು ಪರಿಣಾಮಕಾರಿಯಾದವು. ಇಂತಹ ಸನ್ನಿವೇಶವು ಬಹುತೇಕ ಪ್ರಗತಿಶೀಲರ ಕಾದಂಬರಿಗಳಲ್ಲಿ ಹುಡುಕಿದರೂ ಸಿಗುವುದಿಲ್ಲ.

*   *   *   *

ಈ ಟಿಪ್ಪಣಿಯಲ್ಲಿ, ಹಿಂದಿನ ಟಿಪ್ಪಣಿಯ ಕೊನೆಯ ಭಾಗವನ್ನು ಮುಂದು ವರಿಸಿ, ಇತರ ಪ್ರಗತಿಶೀಲರ ಕಾದಂಬರಿಗಳಲ್ಲಿ ವಿರಳವಾದ, ನಿರಂಜನರ ಬರವಣಿಗೆಯ ಕೆಲವು ವಿಶಿಷ್ಟ ಗುಣಗಳನ್ನು ಗುರುತಿಸುತ್ತೇನೆ. ಇವು ಬಹುಮಟ್ಟಿಗೆ ಕಾದಂಬರಿಯ ರೂಪ ಮತ್ತು ನಿರೂಪಣಾ ತಂತ್ರಗಳಿಗೆ ಸಂಬಂಧಪಟ್ಟವು. ಪ್ರಗತಿಶೀಲರು ಈ ವಿಷಯಗಳ ಬಗ್ಗೆ ಬಹಳ ಕಡಿಮೆ ಆಸಕ್ತಿಯನ್ನು ತೋರಿಸಿದರೆನ್ನುವ ಆಕ್ಷೇಪಣೆಯನ್ನು ಸುಳ್ಳು ಮಾಡುವಂತೆ, ನಿರಂಜನರು ತಮ್ಮ ಸೃಜನಶೀಲ ಪ್ರತಿಭೆ ಮತ್ತು ವಿಶಾಲ ಓದಿನ ಫಲವಾದ ಹಲವು ಉಪಕರಣಗಳನ್ನು ಸಾರ್ಥಕವಾಗಿ ಬಳಸಿಕೊಳ್ಳುತ್ತಾರೆ.

ಕಾದಂಬರಿಯ ಸಮಗ್ರ ಶರೀರವನ್ನೇ ವ್ಯಾಪಿಸಿ, ಮನುಷ್ಯಲೋಕದ ಆಗು ಹೋಗುಗಳಿಗೆ ಸಂವಾದಿಯಾಗಿ ಸ್ಪಂದಿಸುವ ಪ್ರತಿಮೆಗಳ ಬಳಕೆ ಮೊದಲನೆಯದು. ಉದಾಹರಣೆಗೆ ಚಿರಸ್ಮರಣೆಯಲ್ಲಿ ಅಪ್ಪು ಮತ್ತು ಚಿರುಕಂಡರ ಮಾಸ್ತರು, ಹುಡುಗ ರಿಬ್ಬರ ಜೊತೆಯಲ್ಲಿಯೇ ಬೆಳೆಸುವ ಜೋಡಿ ಮಾವಿನ ಮರಗಳು.

"ಬೀಜ ಮೊಳೆತು ಪುಟ್ಟ ಗಿಡವಾಗಿದೆ. ಈ ಗಿಡ ಮರವಾಗಿ ಮಾವಿನಹಣ್ಣು ಕೊಡೋದಕ್ಕೆ ಎಷ್ಟು ಕಾಲವಾದಿತೂಂತ ಯೋಚಿಸ್ತಾ ಇದ್ದೇನೆ."

"ಪ್ರತಿಯೊಂದೂ ಹಾಗೆಯೇ. ಬೀಜ ಮೊಳೆತು ಗಿಡವಾಗಿ, ಮರವಾಗಿ, ಫಲ ಬಿಡೋದಕ್ಕೂ ಸಮಯ ಬೇಕು. ತಾಳ್ಮೆಯಿಂದ ನಾವು ಕಾಯುತ್ತಾ ದುಡೀ ಬೇಕು. ಪ್ರತಿಯೊಂದೂ ಹಾಗೆಯೇ."

....

....

ಅಲ್ಲಿ ಮಾಸ್ತರು ನಟ್ಟುಹೋಗಿದ್ದ ಕಾಡುಮಾವಿನ ಎರಡು ಮರಗಳು ಇಪ್ಪತ್ತೈದರ ಜವ್ವನಿಗರಂತೆ ಸೆಟೆದು ನಿಂತು ಫಲಬಿಟ್ಟಿದ್ದವು.

"ಇವನ್ನು ಕಡಿದು ಉರುಳಿಸಿ" ಎಂದು ನಂಬಿಯಾರರು ಆಜ್ಞಾಪಿಸಿದರು.

ಅವು ಬಲಿಷ್ಠವಾಗಿದ್ದವು. ಎರಡರಲ್ಲಿ ನಾಲ್ಕು ಮರಗಳ ಶಕ್ತಿ ಇದ್ದಂತೆ ತೋರಿದ ಆ ಮರಗಳನ್ನು ಜಮೀನುದಾರರ ಊಳಿಗದ ಆಳುಗಳು ಪ್ರಯಾಸಪಟ್ಟು ಕಡಿದು ಕೆಡವಿದರು.

....ಬಲು ದೀರ್ಘವಾಗಿತ್ತು. ಕಯ್ಯೂರಿನಲ್ಲಿ ಆ ರಾತ್ರಿ.

ಹಾಗಿದ್ದರೂ ಇರುಳು ಕಳೆದು ಮೆಲ್ಲಮೆಲ್ಲನೆ ಬೆಳಗಾಯಿತು.

ಇಂತಹ ಕಡೆ ನಿರಂಜನರು ಮಾತನಾಡುವುದು ಸಶಕ್ತವಾದರೂ ವಾಚಾಳಿಯಲ್ಲದ ಪ್ರತಿಮೆಗಳ ಭಾಷೆಯಲ್ಲಿ. ಮೇಲೆ ಉದ್ಧರಿಸಿದ ಕೊನೆಯ ಮಾತಿನಲ್ಲಿ ಧ್ವನಿತವಾದ ಅದಮ್ಯ ಆಶಾವಾದವು ಹುಸಿಯಾಗಲಿಲ್ಲವೆನ್ನುವುದಕ್ಕೆ ಕಾದಂಬರಿಯ ಮೊದಲ ಭಾಗವೇ ಸಾಕ್ಷಿ. ಹೀಗೆ ಉಪನ್ಯಾಸಗಳಿಗಿಂತ ಭಿನ್ನವಾದ ನಿರೂಪಣಾ ವಿಧಾನ ಇಲ್ಲಿದೆ. ಹೆಚ್ಚು ಸೊಫಿಸ್ಟಿಕೇಟೆಡ್ ಆದ ಓದುಗರಿಗೆ ಮಾವಿನಮರಗಳ ಪ್ರತಿಮೆ ತುಂಬಾ obvious ಎನ್ನಿಸಬಹುದು. ಆದರೆ ಕಾದಂಬರಿಕಾರರು ತಲುಪಬಯಸುವ ಸಾವಿರಾರು ಓದುಗರ ಮೇಲೆ ನಿರೀಕ್ಷಿತವಾದ ಭಾವನಾತ್ಮಕ ಪರಿಣಾಮವನ್ನು ಬೀರುವುದರಲ್ಲಿ ಅವು ಖಂಡಿತವಾಗಿಯೂ ಯಶಸ್ವಿಯಾಗುತ್ತವೆ.

ಎರಡನೆಯ ಉಪಕರಣವೆಂದರೆ ಸನ್ನಿವೇಶಕ್ಕೆ ಸಹಜವಾದ, ಕಾಲ್ಪನಿಕವಲ್ಲದ ಸಂಭಾಷಣೆಯೊಂದನ್ನು ರಚಿಸುತ್ತಿರುವಾಗಲೇ, ಮತ್ತೊಂದು ನೆಲೆಯಲ್ಲಿ ಬೇರೆ ಯಾವುದೋ ಅರ್ಥಗಳನ್ನು ಧ್ವನಿಸುತ್ತಾ ಹೋಗುವುದರಿಂದ ಕಾದಂಬರಿಗೆ ಶಕ್ತಿ ತುಂಬುತ್ತಾ ಹೋಗುವುದು. ಉದಾಹರಣೆಗೆ ಅಪ್ಪು ಮತ್ತು ಚಿರುಕಂಡರು, ಅಪ್ಪುವಿನ ತಾಯಿಯೊಂದಿಗೆ ಹೊಲದಿಂದ ಮನೆಗೆ ಹಿಂದಿರುಗುವಾಗ ನಡೆಯುವ ಸಂಭಾಷಣೆ:

ಅಪ್ಪು ತಾಯಿಯನ್ನು ಕೇಳಿದ:

"ಹೊತ್ತಾದ ಮೇಲೆ ಇಂಥ ದಾರೀಲಿ ನಡಕೊಂಡು ಹೋಗೋದು ಕಷ್ಟ, ಅಲ್ವ ಅಮ್ಮ? ಜಾರಿ ಬೀಳೋದೇ ! ಹಾವುಗಳು ಬೇರೆ."

ತಾಯಿ ಆ ಮಾತುಗಳನ್ನು ಉಪಯೋಗಿಸಿಕೊಳ್ಳುತ್ತಾ ಅಂದಳು:

"ಅದಕ್ಕೆ ಹೇಳೋದು. ಹುಡುಗರು ಸೂರ್ಯ ಕಂತೋದರೊಳಗೆ ಮನೆ ಸೇರಬೇಕು ಅಂತ."

"ಹುಡುಗರು ದೊಡ್ಡವರು ಎಲ್ಲಾ ಒಂದೇ ಅಮ್ಮ: ಕತ್ತಲೇಲಿ ಯಾರಾದರೂ ಅಷ್ಟೆ. ನನ್ನ ಕೇಳಿದರೆ ಒಂದೊಂದು ಮನೆಗೂ ಒಂದೊಂದು ಸಣ್ಣ ಕೈಬ್ಯಾಟರಿ ಇರಬೇಕು. ಅಲ್ವ ಚಿರುಕಂಡ?"

ರಾತ್ರಿ ತಿರುಗಾಡುವ ಸಾಹಸದ ಸಂಚಾರಗಳಿಗಾಗಿ ಅಪ್ಪು ಬ್ಯಾಟರಿ ಬೇಕೆನ್ನುತ್ತಿದ್ದಾನೆ ಎಂದು ಚಿರುಕಂಡನೆಂದ.

"ಹೂಂ, ಬ್ಯಾಟರಿ ಇದ್ದರೆ ತುಂಬಾ ಪ್ರಯೋಜನವಾಗ್ತದೆ."

"ಹಾಗೇ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ಒಳ್ಳೆಯ ಬೆತ್ತವೂ ಇರಬೇಕು ಅಲ್ವ?"

ಮೊದಲನೆಯ ಹಂತದಲ್ಲಿ ಇದು ತಾಯಿ, ಮಗ ಮತ್ತು ಗೆಳೆಯರ ನಡುವೆ ನಡೆಯುವ ಮುಗ್ಧ ಸಂಭಾಷಣೆ. ಎರಡನೆಯದಾಗಿ, ತನ್ನ ತಾಯಿಯಿಂದ ಬ್ಯಾಟರಿ ಗಿಟ್ಟಿಸುವ ಒಳಉದ್ದೇಶದಿಂದ ಅಪ್ಪು ಹೂಡುವ ಒಂದು ತಂತ್ರ. ಆದರೆ ಇವೆರಡಕ್ಕಿಂತ ಹೆಚ್ಚಾಗಿ ಬ್ಯಾಟರಿ, ಹಾವು, ಬೆತ್ತ ಮುಂತಾದ ಪದಗಳಿಗೆ ಪ್ರಾಪ್ತವಾಗುವ ಸಾಂಕೇತಿಕ ಅರ್ಥಗಳನ್ನು ಗ್ರಹಿಸಿದಾಗ, ಶೋಷಕರ ವಿರುದ್ಧವಾದ ಹೋರಾಟದಲ್ಲಿ ಜ್ಞಾನದ ಬೆಳಕು ಮತ್ತು ಸಂಘಟನೆಯ ಆಯುಧಗಳಿಗೆ ಇರುವ ಮಹತ್ವವು ಸೂಚಿತವಾಗುತ್ತದೆ. ಹೀಗೆ ಭಾಷೆಯ ನೆರವಿನಿಂದಲೇ ಅರ್ಥದ ಹಲವು ಪದರಗಳನ್ನು ಪ್ರವೇಶಿಸುವುದು ಮಹತ್ವದ ಸಂಗತಿ. ಹಾಗೆಯೇ ತನ್ನ ಭಾವೀ ಹೆಂಡತಿಯ ಮನೆಗೆ ಹೋದಾಗ ಅಪ್ಪು ಲವಲವಿಕೆಯಿಂದ ಮಾತನಾಡತೊಡಗುತ್ತಾನೆ: "ಹೆಂಗಸರು ಮುಖ್ಯವಾಗಿ ದೇವಕಿ ಜಾನಕಿಯರು. ಜಾನಕಿ ದೇವಕಿಯರು ತಮ್ಮ ಸಂಭಾಷಣೆಗೆ ಕಿವಿಗೊಡುತ್ತಿರುವ ಅರಿವಿನಿಂದಲೇ ಆ ವಿಷಯ ಈ ವಿಷಯ ಪ್ರಸ್ತಾಪಿಸಿ ಸ್ವಾರಸ್ಯವಾಗಿ ಮಾತನಾಡಿದ." ಇಲ್ಲಿ ಹೆಸರುಗಳ ಕ್ರಮವನ್ನು ಬದಲಿಸುವುದರಿಂದಲೇ ಪ್ರೇಮದ ಅರುಣೋದಯವನ್ನು ಸೂಚಿಸುವ ಕಲೆಗಾರಿಕೆಯು ಚೀರುದನಿಯ ಪ್ರಗತಿಶೀಲರ ನಡುವೆ ಬಹಳ ಅಪರೂಪವಾದುದು.

ಬೇರೆಬೇರೆ ಮಹಾಕಾವ್ಯಗಳ ಸಂದರ್ಭದಲ್ಲಿ ವಿಮರ್ಶಕರು ಗಮನಿಸಿರುವ ತಂತ್ರವೊಂದನ್ನು 'ಚಿರಸ್ಮರಣೆ'ಯಲ್ಲಿಯೂ ಗಮನಿಸಿದಾಗ ನನಗೆ ಸಂತೋಷ ಮತ್ತು ಆಶ್ಚರ್ಯಗಳಾದವು. ಕಾದಂಬರಿಯ ಯಾವುದೋ ಒಂದು ಸಂದರ್ಭದಲ್ಲಿ ಮಾಡಬಹುದಾಗಿದ್ದ ವರ್ಣನೆಯನ್ನು ಅಲ್ಲಿ ಮಾಡದೆ ತಡೆಹಿಡಿದು, ಮುಂದೆ ಯಾವಾಗಲೋ

ಅದು ಹೆಚ್ಚು ಪರಿಣಾಮಕಾರಿಯಾಗಬಹುದಾದಾಗ ಅದನ್ನು ತರುವುದೇ ಆ ತಂತ್ರ. ಕಾಲಕ್ರಮಬದ್ಧ ನಿರೂಪಣೆಗಿಂತ ಈ ಬಗೆ ಭಿನ್ನ. ಇದು ಕೇವಲ ಹಿನ್ನೋಟವಲ್ಲ (Flashback). ಉದಾಹರಣೆಗೆ ಅಪ್ಪು ಮತ್ತು ಚಿರುಕಂಡರು ಪಕ್ಕದ ಊರಿಗೆ ಹೋಗಿ ಪಂಡಿತರ ಭಾಷಣವನ್ನು ಕೇಳುತ್ತಾರೆ. ಶೋಷಣೆಯ ಬಗೆಗಿನ ಅವರ ಮಾತುಗಳು ಅಪ್ಪುವಿಗೆ ಪೂರ್ತಿ ಅರ್ಥವಾಗುವುದಿಲ್ಲ. ಅವನೊಂದು ಬಗೆಯ ಭಾವಸಮಾಧಿಯಲ್ಲಿರುತ್ತಾನೆ. ಆದರೆ ಕೆಲವು ದಿನಗಳ ನಂತರ ಅವನ ಸಂಗಾತಿ ಚಿರುಕಂಡನ ತಂದೆ ತನ್ನ ಹೊಲವನ್ನು ಜಮೀನ್ದಾರರಿಗೆ ಕಳೆದುಕೊಂಡಾಗ, ಅದರ ಬಗ್ಗೆ ಯೋಚಿಸುವ ಅಪ್ಪುವಿನಲ್ಲಿ ಪಂಡಿತರ ಮಾತುಗಳು ಹೊಸ ಜೀವ ಪಡೆಯುತ್ತವೆ.

"ಈ ಮಣ್ಣು ಯಾರದು? ನಮ್ಮದು. ಇದು ನಮ್ಮ ತಾಯ್ನೆಲ. ಈ ದೇಶ ಯಾರದು? ನಮ್ಮದು. ನಮ್ಮ ರಾಷ್ಟ್ರ. ಹೊಲ ಯಾರದು? ಉಳುವವನದು. ಉಳುವವನೇ ಹೊಲದ ಒಡೆಯ. ಹೌದೋ ಅಲ್ಲವೋ?"

ಅದೇ ರೀತಿ ರೈತನೊಬ್ಬನನ್ನು ಜಮೀನ್ದಾರರು ಹೊಡೆದು ಹಿಂಸಿಸುವುದನ್ನು ನೋಡಿದ್ದ ಚಿರುಕಂಡನ ನೆನಪು ಮತ್ತೆ ಜೀವಂತವಾಗುವುದು ಸ್ವತಃ ತನ್ನದೇ ತಂದೆ, ಜಮೀನ್ದಾರರ ಮನೆಯಿಂದ ರಾತ್ರಿ ಎಷ್ಟು ಹೊತ್ತಾದರೂ ಹಿಂದಿರುಗದೆ ಹೋದಾಗ. ತಂದೆಯ ಬಗೆಗಿನ ಕಾಳಜಿಯು ರೈತನ ನೋವಿಗೆ ಹೊಸ ಮಹತ್ವವನ್ನು ಕೊಡುತ್ತದೆ. ಇಂತಹ ಹಲವು ನಿದರ್ಶನಗಳನ್ನು ಕೊಡಬಹುದು.

ಕೇವಲ ಘಟನೆಗಳಿಗೆ ಮಹತ್ವವನ್ನು ಕೊಟ್ಟು, ವಿವರಗಳನ್ನು ನಿರ್ಲಕ್ಷಿಸುವ, ವ್ಯವಧಾನವಿಲ್ಲದ ಆತುರದ ಶೈಲಿ ನಿರಂಜನರಿಗೆ ಇಷ್ಟವಿಲ್ಲ. ಪ್ರಕೃತಿಲೋಕ ಮತ್ತು ಮನುಷ್ಯನ ದೈನಿಕಲೋಕಗಳ ವಿವರಗಳನ್ನು ಬಿಡಿಬಿಡಿಯಾಗಿ ಎಳೆಎಳೆಯಾಗಿ ತೋರಿಸುತ್ತಾ, ಆ ಮೂಲಕವೇ ಕೃತಿಗೆ ಒಂದು ಬಗೆಯ ಅಧಿಕೃತತೆಯನ್ನು, ವ್ಯಾಪ್ತಿಯನ್ನು ಕೊಡುವುದು ನಿರಂಜನರಿಗೆ ವಿಶಿಷ್ಟವಾದ ಮತ್ತೊಂದು ಗುಣ. ಇಂತಹ ಕಡೆ ಅವರಿಗೆ ಮಾದರಿ ಕುವೆಂಪು, ಕಾರಂತರಂತಹವರೇ ಹೊರತು ಅ.ನ.ಕೃ. ಅಲ್ಲ. ಉದಾಹರಣೆಗೆ ಗಮನಿಸಿ:

"ಇಬ್ಬರೂ ಸಮೀಪವೇ ಇದ್ದ ಬೆಟ್ಟದತ್ತ ನಡೆದರು. ಆ ಬೆಟ್ಟದ ಇಳಿಜಾರಿನಲ್ಲಿ ಅಲ್ಲೊಂದು ಇಲ್ಲೊಂದರಂತೆ ಗೋಡಂಬಿ ಮರಗಳಿದ್ದವು. ಆ ಮರಗಳೆಲ್ಲ ಹಣ್ಣು ಬಿಟ್ಟು ಮೈತಳೆದು ನಿಂತಿದ್ದವು.

"ಅಂಥದೊಂದು ಮರದ ಕೆಳಗೆ ಅವರು ಕುಳಿತರು. ತರಗೆಲೆಗಳಿಂದ ನೆಲ ತುಂಬಿತ್ತು. ಮನುಷ್ಯರು ಬಂದರೆಂದು ಓತಿಯೊಂದು ಎಡಗಡೆಯಿಂದ ಸದ್ದು ಮಾಡುತ್ತ

ದೂರ ಹೊರಟು ಅಲ್ಲಿಯೇ ಇದ್ದ ಕಾಡುಗಿಡಗಳ ಪೊದೆಯನ್ನು ಸೇರಿತು. ಅಪ್ಪು ಮರಕ್ಕೆ ಸಮೀಪದಲ್ಲಿ ಕುಳಿತು ಕಾಂಡದ ಒಂದೆಡೆಯಿಂದ ಒಸರಿ ಗಟ್ಟಿಯಾಗಿದ್ದ ಗೋಂದನ್ನು ನೋಡಿದ. ಅದನ್ನು ಮುಟ್ಟುವ, ತೆಗೆಯುವ ಮನಸ್ಸಾದರೂ ಚಿರುಕಂಡ ನತ್ತ ನೋಡಿ ಸುಮ್ಮನಾದ. ಬೇರೆ ದಿನಗಳಲ್ಲಾಗಿದ್ದರೆ ಆ ಅಂಟನ್ನು ಆತ ತೆಗೆಯು ವುದು ಪದ್ಧತಿ. ಹಾಗೆ ತೆಗೆದಿಟ್ಟು ಶಾಲೆಯ ಉಪಯೋಗಕ್ಕೆಂದು ಮಾಸ್ತರಿಗೆ ಅದನ್ನು ತಿಂಗಳಿಗೊಮ್ಮೆ ಆತ ಒಯ್ದುಕೊಡುತ್ತಿದ್ದ. ಚಿರುಕಂಡನಿಗೆ ಈ ದಿನ ಸುತ್ತಮುತ್ತಲಿನ ಯಾವುದರಲ್ಲೂ ಆಸಕ್ತಿಯಿರಲಿಲ್ಲ. ಆತ ದೊಡ್ಡದೊಂದು ತರಗೆಲೆಯ ಮೇಲೆ ಬೆರಳಿ ನಿಂದ ಗೀರುಹಾಕುತ್ತ ಕುಳಿತ."

ಇಂತಹ ಸಂಗತಿಗಳನ್ನು ಗಮನಿಸುವುದು ದೊಡ್ಡದಲ್ಲ. ಆದರೆ ಪ್ರಗತಿಶೀಲ ಬರವಣಿಗೆಯ ಏರುದಿನಗಳಲ್ಲಿ ಕೂಡ, ತಾವು ಪ್ರಗತಿಶೀಲರೆಂದು ಒಪ್ಪಿಕೊಳ್ಳುವ ಕಾದಂಬರಿಕಾರರು ಚಿರಸ್ಮರಣೆಯಂತಹ ಕೃತಿಯ ಒಳನೆಯ್ಗೆಯಲ್ಲಿ ವಿವರಗಳಿಗೆ ಅವಕಾಶ ಕೊಟ್ಟರೆನ್ನುವುದು ಮಹತ್ವದ ಮಾತು.

ತಾನು ಚಿತ್ರಿಸುತ್ತಿರುವ ಸನ್ನಿವೇಶದಲ್ಲಿ ತಲ್ಲೀನವಾಗಿ ಬರೆಯುತ್ತಿರು ವಾಗಲೂ, ಮನಸ್ಸನ್ನು ಆಳದಲ್ಲಿ ತಟ್ಟಿಬಿಡುವ ಭಾವನೆಗಳಿಗೆ ರೂಪು ಕೊಡುತ್ತಿರು ವಾಗಲೂ, ಬರವಣಿಗೆಯ ಮೇಲಿನ ಬೌದ್ಧಿಕ ಹಿಡಿತವನ್ನು ಕಳೆದುಕೊಳ್ಳದಿರುವುದು ಇವರ ಕಾದಂಬರಿಗಳ ಮತ್ತೊಂದು ಗುಣ. ಭಾವನಾಮಯತೆ ಮತ್ತು ಜಾಣತನಗಳ ಈ ಸಂಯೋಜನೆಯು ಬಹಳ ಉಪಯುಕ್ತವಾದುದು. ಭಾವನೆಗಳ ಮಹಾಪೂರದಲ್ಲಿ ತನ್ನನ್ನು ತಾನೇ ಕಳೆದುಕೊಂಡ ಕಾದಂಬರಿಕಾರನಲ್ಲಿ ಭಾಷೆಯ ದುಂದುವೆಚ್ಚವಾಗು ತ್ತದೆ. ಉದ್ದೇಶಿತ ಪರಿಣಾಮ ಮೂಡುವುದಿಲ್ಲ. ಹೃದಯ ವಿದ್ರಾವಕವಾಗಲೆಂದು ಬರೆದ ಸನ್ನಿವೇಶವು ಕಾಮಿಕ್ ಆಗಿಬಿಡುತ್ತದೆ. ಆದರೆ ಬೌದ್ಧಿಕಪ್ರಜ್ಞೆಯನ್ನು ಉಳಿಸಿಕೊಂಡ ಕಲಾವಿದನು ಭಾಷೆ, ಭಾವನೆ, ವಿವರ ಎಲ್ಲವನ್ನೂ ತನ್ನ ಉದ್ದೇಶ ಸಾಧನೆಗಾಗಿ ಉಪಯೋಗಿಸಿಕೊಳ್ಳುತ್ತಾನೆ. ತಮ್ಮ ಅತ್ಯುತ್ತಮ ಬರವಣಿಗೆಯಲ್ಲಿ ನಿರಂಜನರು ಇಂತಹ ಹಿಡಿತವನ್ನು ಸಾಧಿಸುತ್ತಾರೆ. ಉದಾಹರಣೆಗೆ 'ವಿಮೋಚನೆ' ಯಲ್ಲಿ ಚಂದ್ರಶೇಖರನ ತಾಯಿಯು ಹೇಮಾವತಿಯಲ್ಲಿ ಮುಳುಗಿಹೋಗುವ ಸನ್ನಿವೇಶ ವನ್ನು ಗಮನಿಸಬಹುದು.

"ನನ್ನ ತಾಯಿ ತೇಲಿಹೋಗಿದ್ದಳು. ಹೇಮಾವತಿ ನದಿ ಎಲ್ಲಿಗೋ ಅವಳನ್ನು ಒಯ್ದಿತ್ತು. ನಾನು ಅಪ್ಪಾ, ಅಪ್ಪಾ ಎಂದೆ. ತಂದೆ ಮೆಲ್ಲಮೆಲ್ಲನೆ ಬಂಡೆಯನ್ನಿಳಿದು ದಂಡೆಯನ್ನೇರಿ ನನ್ನ ಬಳಿಗೆ ಬಂದ. ನನ್ನನ್ನು ತಬ್ಬಿಕೊಂಡ. ಮಳೆ ಸುರಿಯುತ್ತಿತ್ತು. ನಮ್ಮ ಕಣ್ಣುಗಳಿಂದ ಕೂಡ. ತಣ್ಣಗಿನ ಮಳೆಯ ನೀರಲ್ಲಿ ನಮ್ಮ ಕಣ್ಣಹನಿ ಬಿಸಿ ಯಾಗಿತ್ತು."

....

"ಆಕೆಯೊಡನೆ ನಮ್ಮ ಸರ್ವಸ್ವವಾಗಿದ್ದ ಅರಿವೆ ಅಂಚಡಿಯ ಗಂಟು ತೇಲಿ ಹೋಗಿತ್ತು. ಗಂಟಿನಲ್ಲಿದ್ದ ದೇವರೂ ತೇಲಿಹೋಗಿದ್ದರು."

ಒಂದೆರಡು ಮಾತುಗಳ ನಂತರವೇ ನೋಡಿ:

"ಕಾಡಿನಲ್ಲೇ ಸಾಯಲು ಸುಮ್ಮಸುಮ್ಮನೆ ಯಾರು ಇಷ್ಟಪಡುತ್ತಾರೆ? ನಾವು ಮತ್ತೆ ಮನುಷ್ಯರ ಮುಖ ನೋಡಿದೆವು. ಬದುಕಬೇಕೆಂಬ ಬಯಕೆ ನಮ್ಮನ್ನು ಮುಂದುಮುಂದಕ್ಕೆ ತಳ್ಳಿತು."

ತಾಯಿಯ ಸಾವನ್ನು ಮೆಲೋಡ್ರಮಾಟಿಕ್ ಆಗದಂತೆ ಚಿತ್ರಿಸುವ ತಂತಿ ನಡಿಗೆಯಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಅದಕ್ಕೆ ಅವರ ಬೌದ್ಧಿಕ ಎಚ್ಚರವೇ ಕಾರಣ.

* * * *

ನಿರಂಜನರ ಒಟ್ಟು ಕಾದಂಬರಿಗಳಲ್ಲಿ ಪುನರಾವರ್ತಿತವಾಗುವ ಕೆಲವು ಸಂಗತಿಗಳು, ಆಶಯಗಳು (Motiffs) ಅವರ ಸಮಗ್ರ ಬರವಣಿಗೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ನೆರವಾಗಬಹುದು. ನಾನು ಇಲ್ಲಿ ಅವುಗಳನ್ನು ಕೇವಲ ಹೆಸರಿಸುತ್ತೇನೆ. ಕಾದಂಬರಿಯ ಮುಖ್ಯಪಾತ್ರಗಳಿಗೆ ಉಂಟಾಗುವ ಸಾವು ಅಥವಾ ಮರಣದಂಡನೆ ಅಂತಹ ಒಂದು ಅಂಶ. ಇಂತಹ ಪಾತ್ರಗಳು ಸಾವಿನ ನೆಲೆಯಲ್ಲಿ ನಿಂತು ಬದುಕಿನ ಪುನರವಲೋಕನ ಮಾಡುವಾಗಲೂ ಬದುಕಿನ ಸಾತತ್ಯವನ್ನು ಮರೆಯುವುದಿಲ್ಲ. ವಿದ್ಯಾಭ್ಯಾಸದಿಂದ ಇನ್ನೂ ಭ್ರಮನಿರಸನವಾಗದ ಮಧ್ಯಮ ವರ್ಗದ ಸಂವೇದನೆಗಳು ಓದಿಗೆ ಕೊಡುತ್ತಿದ್ದ ಮಹತ್ವವು ಅವರ ಕೃತಿಗಳಲ್ಲಿ ಪದೇ ಪದೇ ಮೂಡಿಬರುತ್ತದೆ. 'ಮೃತ್ಯುಂಜಯ'ದ ಮೆನೆಪ್‌ಟಾ ತನ್ನ ಮಗನಿಗೆ ಆರಿಸಿ ಕೊಡುವ ಆಟದ ಸಾಮಾನೆಂದರೆ ಪಪ್ಪೈರಸ್ ಹಾಳೆಯ ಮೇಲೆ ಬರೆದ ಜಾಣ್ನುಡಿಯ ಸುರುಳಿಗಳು. ಬದುಕಿನಲ್ಲಿರುವ ಸಾಮಾಜಿಕ ಆಯಾಮಗಳನ್ನು ಓದುಗರ ಗ್ರಹಿಕೆಯೊಳಗೆ ತರಲು ಯತ್ನಿಸುತ್ತಿರುವಾಗಲೂ ಕೌಟುಂಬಿಕ ಸಂಬಂಧಗಳ ಘನತೆ ಹಾಗೂ ಅಗತ್ಯಗಳನ್ನು ಎತ್ತಿ ಹಿಡಿಯುವುದು, ಕಲೆ, ಸಾಹಿತ್ಯಗಳು ಮನುಷ್ಯನನ್ನು ಮನುಷ್ಯನಾಗಿ ಮಾಡುವುದರಲ್ಲಿ ನೆರವಾಗುತ್ತವೆಂಬ ನಂಬಿಕೆ, ಹೀಗೆಯೇ ಕೆಲವು ವಿಚಾರಗಳು ಅವರ ಕಾದಂಬರಿಗಳ ಪರಸ್ಪರ ಸಂಬಂಧವನ್ನು ನಿರ್ಧರಿಸುವ ಸೇತುವೆಗಳಾಗಬಹುದು.

ಇದುವರೆಗಿನ ಸಂಕ್ಷಿಪ್ತ ಚರ್ಚೆಯ ಫಲಿತವಿಷ್ಟೇ. ನಿರಂಜನರು ಪ್ರಗತಿಶೀಲ ಸಾಹಿತ್ಯದ ಉಚ್ಛ್ರಾಯದ ದಿನಗಳಲ್ಲಿ ಅದರ ಕೊಡೆಯಡಿಯಲ್ಲಿ ಕೃತಿರಚನೆ ಮಾಡಿದರೂ, ಅವರು ಕೇವಲ ಪ್ರಗತಿಶೀಲ ಸಾಹಿತಿಯಲ್ಲ. ಪ್ರಗತಿಶೀಲವಾದ, ಜನಪರವಾದ

ನಿಲುವುಗಳು ಅವರ ಎಲ್ಲ ಬರೆಹಗಳ ಹಿಂದೆಯೂ ನಿಸ್ಸಂದೇಹವಾಗಿ ಕೆಲಸ ಮಾಡಿವೆ. ಆದರೆ ಅವರು ಇತರ ಪ್ರಗತಿಶೀಲ ಸಾಹಿತಿಗಳಲ್ಲಿ ಕಂಡುಬರದ, ಕುವೆಂಪು, ಕಾರಂತ ಮುಂತಾದವರಲ್ಲಿ ವಿಪುಲವಾಗಿರುವ ಕೆಲವು ಮಹತ್ವದ ಸಾಹಿತ್ಯಕ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಈ ಸಂಯೋಜನೆಯ ಪರಿಣಾಮವಾಗಿ ಅವರು ಕನ್ನಡದ ಪ್ರಗತಿಶೀಲ ಕಾದಂಬರಿಕಾರರಲ್ಲಿ ಅತ್ಯುತ್ತಮರಾಗಿದ್ದಾರೆ. ಹೀಗೆ ಹೇಳುವಾಗ ನಾನು ಈಚೆಗೆ ರಚಿತವಾಗುತ್ತಿರುವ ಜನಪರ ಕೃತಿಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ○

ಅಂಕಣಕಾರ ನಿರಂಜನ

–ಎ. ವಿ. ನಾವಡ

ಕನ್ನಡದ ಮೊದಲ ಅಂಕಣಕಾರ ಯಾರು ಎನ್ನುವುದು ಇನ್ನೂ ಬೆಳಕಿಗೆ ಬಾರದೆ ಸಂಗತಿ. ಆದರೆ ಕನ್ನಡದ 'ಅಂಕಣ'ಕ್ಕೆ ಸ್ಪಷ್ಟರೂಪವನ್ನಿತ್ತು ಅದನ್ನು ಒಂದು ಪ್ರಕಾರವಾಗಿ ನೆಲೆಗೊಳಿಸಿದವರು ನಿರಂಜನರು. "ಕಾಲದ ಮೂಸೆಯಲ್ಲಿ ಇಂಥ ಬರವಣಿಗೆ ಸುಲಭವಾಗಿ ಕರಗುತ್ತದೆ" ಎಂಬ ಅಭಿಪ್ರಾಯವಿದ್ದರೂ ಕಾಲನ ಒರೆಗಲ್ಲಿನಲ್ಲಿ ನಿರಂಜನರ ಅಂಕಣಗಳ ಬಣ್ಣ ಮಸುಳಿಸಿಲ್ಲ. ಕುಳುಕುಂದ ಶಿವರಾವ್ ಆಗಿದ್ದಾಗಿನಿಂದ ತೊಡಗಿ ನಿರಂಜನರಾದ ಸುಮಾರು ಇಪ್ಪತ್ತೈದು ವರ್ಷಗಳ ಕಾಲಾಂತರದಲ್ಲಿ ರೂಪಿತವಾದ ಅಂಕಣಗಳಲ್ಲಿನ ವೈಚಾರಿಕ ಏಕಸೂತ್ರತೆ ಗಮನಾರ್ಹವಾದುದು. ಕಮ್ಯೂನಿಸಂ ಸಿದ್ಧಾಂತದ ಬಗೆಗೆ ಅವರ ನಿಲವು ಒಂದಿಷ್ಟು ಬದಲಾದರೂ ಬದುಕಿಗೆ ಬದ್ಧವಾಗಿರುವ ಅವರ ನಿಲವು ಇಂದಿಗೂ ಅಚಲ. ಹೀಗಾಗಿ ಅವರ ಅಂಕಣಗಳ ವಸ್ತುವಿನಲ್ಲಿ ವಿರೋಧಾಭಾಸವಿಲ್ಲ, ಅಂತರ್ ವಿರೋಧಿ ಅಂಶಗಳಿಲ್ಲ. ಸುದೀರ್ಘ ಕಾಲಾವಧಿಯಲ್ಲಿ ವಸ್ತುವನ್ನು ಕೆದಕಿ ನೋಡುವ ಬಗೆಯಲ್ಲಿ, ವಿಷಯವನ್ನು ಪ್ರತಿಪಾದಿಸುವ ವಿಧಾನದಲ್ಲಿ, ಭಾಷೆಯ ಹಾತಳಿಕೆಯಲ್ಲಿ ಅಷ್ಟಿಷ್ಟು ಬದಲಾಗಿರಬಹುದು. ವೈಚಾರಿಕ ಧಾಟಿಯಲ್ಲಿ ಹೆಚ್ಚಿನ ಪಕ್ವತೆ ತಲೆಹಾಕಿರಬಹುದು. ಇದು ವ್ಯಕ್ತಿತ್ವದ ಬೆಳವಣಿಗೆಯ ಫಲ

ನಿರಂಜನರ ಅಂಕಣಗಳು ವೈತಳೆದ ಕಾಲಾವಧಿ ೧೯೪೫ ರಿಂದ ೧೯೭೦. ೧೯೪೫ರ 'ಪ್ರಜಾಮತ'ದ **'ಸರೂ ಕೇಳಿದೆಯಾ'** ಅವರ ಮೊದಲ ಅಂಕಣ. ಮುಂದೆ **'ಸರೋಜಸಂಚಯ'** (ಉಷಾ ೧೯೪೬), **'ಸಂಗಾತಿಯ ಸಂಚಯ'** (ಜನಶಕ್ತಿ ೧೯೪೭), **'ಸಾಧನ ಸಂಚಯ'** (ಉಷಾ ೧೯೫೧), **'ಓದುಗರೊಡನೆ ಐದು ನಿಮಿಷ'**, **'ಕಾಲಕ್ಷೇಪ'**, **'ಸಾಹಿತ್ಯ ಸಮೀಕ್ಷೆ'** (ಚಿತ್ರಗುಪ್ತ ೧೯೫೧),

'ಬಿಸಿಲು ಬೆಳದಿಂಗಳು' (ದಾವಣಗೆರೆಯ ಶ್ರೀ ರೇವಣಸಿದ್ಧಯ್ಯನವರ ವಾರ ಪತ್ರಿಕೆ ನವಶಕ್ತಿ), 'ಮಧು ಸಂಚಯ' (ಸಾಧನಾ ೧೯೫೬), 'ಬೇವುಬೆಲ್ಲ' (ಪ್ರಜಾವಾಣಿ ೧೯೬೨-೬೬), 'ರಾಜಧಾನಿಯಿಂದ' (ಇನ್ನಾ ೧೯೬೫), 'ದಿನಚರಿಯಿಂದ' (ಕರ್ಮವೀರ ೧೯೬೫) - ಇವಿಷ್ಟು ಅವರ ಸಾಪ್ತಾಹಿಕ ಅಂಕಣಗಳ ಇತಿವೃತ್ತ. ಸಂಕಲನ ರೂಪದಲ್ಲಿ ಅಚ್ಚಾಗಿರುವ ಅಂಕಣ ಬರೆಹಗಳು ಏಳು. ಪತ್ರ ಸಂಕಲನಗಳ ರೂಪದಲ್ಲಿ ಸಾಧನಾ (೧೯೫೩) ಹಾಗೂ ಪುಷ್ಪಹಾರ (೧೯೫೭), ಲೇಖನ ಸಂಕಲನ ರೂಪದಲ್ಲಿ ಐದು ನಿಮಿಷ (೧೯೫೩), 'ಕಾಲಕ್ಷೇಪ' (೧೯೫೭), 'ರಾಜಧಾನಿಯಿಂದ' (೧೯೭೨), 'ದಿನಚರಿಯಿಂದ' (೧೯೭೨), 'ಅಂಕಣ' (೧೯೭೨).

ಸಾಮಾನ್ಯವಾಗಿ ಅಂಕಣವೆಂದರೆ ವಾರವಾರದ ಸಾಮಯಿಕ ಕ್ರಿಯೆಗಳಿಗೆ - ಘಟನಾಪರಂಪರೆಗಳಿಗೆ ಸೂಕ್ಷ್ಮದರ್ಶಿಯಾದ ಬರಹಗಾರನೊಬ್ಬ ಕೊಡುವ ಪ್ರತಿಕ್ರಿಯೆ. ಹೀಗಾಗಿ ಅವುಗಳು ಎಲ್ಲ ಕಾಲಕ್ಕೂ ಸಲ್ಲಬೇಕಿಲ್ಲ. ಆದರೆ ನಿರಂಜನರ ಅಂಕಣ ವಿಶಿಷ್ಟ ಮಾದರಿಯದು. ಅವರ ಅಂಕಣಕ್ಕೆ ಕೆಲವೊಮ್ಮೆ ಒಂದು ಸಣ್ಣ ಸುದ್ದಿ, ಒಂದು ಘಟನೆ, ಒಂದು ಸಮಸ್ಯೆ - ಹೀಗೆ ಹೊರನೋಟಕ್ಕೆ ಸಾಮಾನ್ಯವೇ ಇರಬಹುದು. ಆದರೆ ಅವರ ವ್ಯಕ್ತಿವಿಶಿಷ್ಟವಾದ ಒಳನೋಟ, ಚಿಕಿತ್ಸಕ ದೃಷ್ಟಿ, ಕಾಣ್ಕೆಯ ಮೂಸೆಯಲ್ಲಿ ಪುಟಕ್ಕಿಟ್ಟ ಅನುಭವ - ನಿರೀಕ್ಷೆಗಳ ಹಿನ್ನೆಲೆಯಲ್ಲಿ ಅವುಗಳಿಗೆ ಸಾರ್ವಕಾಲಿಕತೆಯ ಒಪ್ಪ ಬಂದುಬಿಡುತ್ತದೆ. ಅವುಗಳಿಗೆ ವರ್ತಮಾನದ ಕಟ್ಟು ಹರಿದು ಎಲ್ಲ ಕಾಲಕ್ಕೆ ಸಲ್ಲುವ ಅನನ್ಯತೆ ಸಿದ್ಧಿಸುತ್ತದೆ. ಹೀಗಾಗಿ ಅವರ ಅಂಕಣಗಳು ಕನ್ನಡದ ವಿಚಾರ ಸಾಹಿತ್ಯಕ್ಕೆ ಮಹತ್ವದ ಕೊಡುಗೆ. ಆಧುನಿಕ ಸಾಹಿತ್ಯ ಚರಿತ್ರಕಾರರಿಗೆ ಸಮೃದ್ಧ ಆಕರ.

ಅವರ ಬರೆಹಕ್ಕೆ ವಸ್ತುವಾಗುವ ವಿಷಯ ವೈವಿಧ್ಯ ಕಂಡರೆ ಬೆರಗಾಗುತ್ತೇವೆ. ಅವರ ದೃಷ್ಟಿ ಕಣ್‌ಪಟ್ಟಿ ಕಟ್ಟಿಕೊಂಡ ಕುದುರೆಯಂತಲ್ಲ. ಬದುಕಿನ ಎಲ್ಲ ಆಗು ಹೋಗುಗಳು ಅವರ ತೆಕ್ಕೆಯೊಳಗೆ. ಕನ್ನಡದ ಸಾಹಿತಿ / ಕಲಾವಿದನೊಬ್ಬ ಅವರ ಗಮನಸೆಳೆದಂತೆ ಜಗತ್ತಿನ ಮೂಲೆಯ ಸಾಹಿತಿಯೊಬ್ಬನ / ಕಲಾವಿದನೊಬ್ಬನ ನಿಟ್ಟುಸಿರು ಭೋರ್ಗರೆವ ದನಿಯಾಗಿ ಅವರಿಗೆ ಕೇಳಿಸುತ್ತದೆ; ಅವನ ಅಂತರಂಗದ ಒಳನೋಟವನ್ನು ರೇಖಿಸಲು ಅವರಿಗೆ ಬರುತ್ತದೆ. ಅವರ ವಿಷಯ ವೈವಿಧ್ಯ ಯಾರಿಗಾದರೂ ಬೆಕ್ಕಸ ತರುವಂತಹದು. ಭಾವೈಕ್ಯ, ಏಕೀಕರಣ, ಶೀಲ, ಅಶ್ಲೀಲ, ವೇಶ್ಯಾ ಸಮಸ್ಯೆ, ವರದಕ್ಷಿಣೆಯ ಪಿಡುಗು, ಜನಾಂಗದ್ವೇಷ, ಪ್ರಕೃತಿಯಿಂದ ದೂರಸರಿಯುತ್ತಿರುವ ಮಾನವ, ಸಮೂಹ ಮಾಧ್ಯಮಗಳ ಪೇಲವತನ, ಭಾಷೆಯ ದುರುಪಯೋಗ, ಸ್ವಾತಂತ್ರ್ಯಾನಂತರ ನಮ್ಮ ಸಾಂಸ್ಕೃತಿಕ ಪತನ, ಚೀನೀ, ಪಾಕಿಸ್ತಾನಿ ಆಕ್ರಮಣದ ಸಂದರ್ಭದಲ್ಲಿ ನಮ್ಮಲ್ಲಿ ಮೂಡಿದ ಸ್ಪಂದನ, ಮುದ್ದಣ, ಪಂಜೆಯವರಿಂದ ತೊಡಗಿ

ಚಿತ್ತಾಲ, ಕೊರಟ ಮುಂತಾದ ನೂರಾರು ಸಾಹಿತಿ - ಕಲಾವಿದರನ್ನು ಕುರಿತು...., ಸಾರ್ತ್ರೆ, ಹಕ್ಸ್‌ಲಿ, ಪ್ರೊ! ಫ್ಯುಂಗ್, ಎಲಿಯೆಟ್, ಸ್ಟೀನ್‌ಬೆಕ್, ಶುಮಾ ಮುಂತಾದ ಪಾಶ್ಚಾತ್ಯ - ಪೌರ್ವಾತ್ಯ ದಾರ್ಶನಿಕ / ಕಲಾವಿದ / ಕವಿಗಳ ಒಳನೋಟ....ಒಂದೇ, ಎರಡೇ, ಹತ್ತು, ಹಲವು ನೂರು.

ಅವರೇ ಒಂದೆಡೆ ಹೇಳಿದ ಮಾತು: "ಅನುಭವ ಆಳವಾದಾಗ, ನಿರೀಕ್ಷಣೆ ಸೂಕ್ಷ್ಮವಾದಾಗ ಕೃತಿ ಭವ್ಯವಾಗುತ್ತದೆ." ಈ ಮಾತನ್ನು ಅವರ ಕೃತಿಗೂ ಮಾನದಂಡವಾಗಿ ಬಳಸಬಹುದು. ಅವರ ಅಂಕಣಗಳು ಸೃಜನಶೀಲ. ಅದು ಬರಿಯ ವೈಚಾರಿಕ ನೆಲೆಗಟ್ಟಿನಿಂದಷ್ಟೇ ಮೂಡಿಬಂದ ಬೌದ್ಧಿಕ ಕಸರತ್ತು ಅಲ್ಲ. "ಎಲ್ಲ ಸೃಜನಶೀಲರಿಗೂ ಬದುಕೇ ಮೂಲಸೆಲೆ. ಬುದ್ಧಿಭಾವ ಸಮತೋಲ ಸಾಧಿಸಿದಾಗ ಒಳ್ಳೆಯ ಕೃತಿ ಹುಟ್ಟುತ್ತದೆ. ಆ ಸಾಮರಸ್ಯವಿಲ್ಲದಿದ್ದರೆ ಬರವಣಿಗೆ ಬರೇ 'ಬೌದ್ಧಿಕ' ವೆನಿಸಬಹುದು, ಅಥವಾ 'ಭಾವನಾತ್ಮಕ'ವಾಗಬಹುದು. ಒಮ್ಮೊಮ್ಮೆ ವಿಚಾರಗಳು ಕೈಕೈ ಮಿಲಾಯಿಸಿ ನನ್ನ ಮೆದುಳು ತಪ್ತವಾಗುತ್ತದೆ. ಕೆಲವೊಮ್ಮೆ ಭಾವೋದ್ವೇಗ ದಿಂದಲೂ ಬಿಸಿಯೇರುತ್ತದೆ. ಈ ಗೊಂದಲದಲ್ಲೂ ಒಂದು 'ಹದ' ಸಾಧ್ಯವಾದಾಗ 'ಸೃಷ್ಟಿಕಾರ್ಯ' ಮುದ ನೀಡುತ್ತದೆ. ಬದುಕಿಗೆ ನಾನು ಸದಾ ಬದ್ಧ. ಇದು ನನ್ನ ಬಂಡವಾಳ" (ನಿರಂಜನ 'ಬುದ್ಧಿಭಾವ ಬದುಕು' - ಮುನ್ನುಡಿ ೧೯೮೪) ನಿರಂಜನರ ಈ ಮಾತು ಅವರ ಬರವಣಿಗೆಯ ದೃಷ್ಟಿಧೋರಣೆಯನ್ನು ಸ್ಪಷ್ಟಪಡಿಸುತ್ತದೆ.

ಬದುಕಿಗೆ ಬದ್ಧರಾಗಿ ಬರೆದ ಅವರ ಬರೆಹಗಳಲ್ಲಿ ಉದ್ದಕ್ಕೂ ಒಂದು ಏಕಸೂತ್ರತೆ, ಖಚಿತತೆ ಗೋಚರವಾಗುತ್ತದೆ. ಇಪ್ಪತ್ತೈದು ವರ್ಷಗಳ ಕಾಲಪ್ರವಾಹ ದಲ್ಲಿ ಸಾಗಿ ಬಂದಾಗಲೂ ವಿಚಾರಧೋರಣೆಯಲ್ಲಿ ವಿಕಾಸಕಾಣುತ್ತೇವೆಯೇ ಹೊರತು ವಿರೋಧಾಭಾಸ ತಲೆಹಾಕಿಲ್ಲ. ರಾಜಿಮನೋಧರ್ಮ ಅವರ ಬದುಕಿಗೆ ಸಲ್ಲದ ಗುಣ. ಹೀಗಾಗಿ ಎಲ್ಲೆಲ್ಲೂ ಹೊಂದಾಣಿಕೆ ಅಥವಾ ರಾಜಿ ಇಲ್ಲವೇ ಇಲ್ಲ. ತಾತ್ತ್ವಿಕ ಸಿದ್ಧಾಂತ ವನ್ನು ವಿರೋಧಿಸುತ್ತಾರಲ್ಲದೆ ವ್ಯಕ್ತಿಯನ್ನಲ್ಲ. (ಉದಾ: ಕಾರಂತ, ಅ.ನ.ಕೃ.) ಎಲ್ಲ ಬರೆಹಗಳ ಒಳನೋಟ ರಾಗದ್ವೇಷ ವಿರಹಿತವಾದ ಸಂಯಮದ ನೋಟ. ಪರಿಕಾಣದುದನ್ನು ತರ್ಕಬದ್ಧವಾಗಿ ಸಕಾರಣವಾಗಿ ವಿವೇಚಿಸುವ ಧೋರಣೆ. ವಸ್ತು ವನ್ನು ಎಲ್ಲ ಮಗ್ಗುಲಿಂದ ನೋಡುವ ಕುತೂಹಲ.

ಅವರ ಮೊದಲ ಪತ್ರಸಂಕಲನ 'ಸಾಧನಾ' ತಮ್ಮ ಪ್ರೀತಿಯ ಸಾಧನಾಗೆ 'ಉಷಾ' ಪತ್ರಿಕೆಯಲ್ಲಿ ಬರೆದ ಪತ್ರಗಳ ಆಯ್ದ ಬರೆಹಗಳು (೧೯೫೩). ಮುನ್ನುಡಿ ಬರೆದ ಎಸ್.ಎಸ್. ಸೀತಾರಾಮ ಶಾಸ್ತ್ರಿಗಳು "ನಿರಂಜನರು ತಮ್ಮ ಸಾಧನಾಗೆ ಬರೆದ ಪ್ರೇಮಪತ್ರಗಳಲ್ಲಿ ಲೋಕವ್ಯವಹಾರಗಳನ್ನೂ, ತಮ್ಮ ಮನೋವಿಕಾರಗಳನ್ನೂ

ಬಳಸಿಕೊಂಡಿದ್ದಾರೆ. ನಿರಂಜನರ ಪತ್ರವಿಧಾನವು ಸರಳವೂ ಸ್ವಾರಸ್ಯವೂ ಆಗಿದೆ. ಈತಿ ಬಾಧೆಗಳಿಗೆ ಒಳಗಾಗದ ಆತ್ಮೀಯತೆಯಲ್ಲಿ ಲೋಕದ ಡಂಭಾಚಾರವೇಕೆ? ಕಟ್ಟುಪಾಡುಗಳೇಕೆ? ನೇರವಾಗಿ ನವುರಾಗಿ ಎಳೆಸು ಎಳೆಸಾಗಿ ಸಮಾಚಾರ ವಿಚಾರಗಳನ್ನೂ ಅವರು ರೇಖಿಸಿದ್ದಾರೆ....ಇದೊಂದು ಲೋಕ ಸುದ್ದಿಯ ವರದಿ ಎಂದು ನಿಮಗೆ ಅನ್ನಿಸುವುದಿಲ್ಲ. ಅಂಥ ಸುದ್ದಿ ಸಮಾಚಾರಗಳ ಮೇಲೆ ಕಾವ್ಯರಂಜನೆಯ ಮಾಯಾಜಾಲವನ್ನು ನವುರಾಗಿ ಬೀಸಿದ್ದಾರೆ. ಅದೇ ಅವರ ಸಾರ್ಥಕತೆ, ಅದೇ ಅವರ ವೈಶಿಷ್ಟ್ಯ." ಪ್ರತಿ ಬರೆಹಕ್ಕೂ ಒಂದು ವಿಶಿಷ್ಟ ಆಶಯವಿದ್ದೇ ಇರುತ್ತದೆ. ಬಳಸಿದ ತಂತ್ರ ಅದಕ್ಕೊಂದು ಆತ್ಮೀಯ ಪರಿವೇಶವನ್ನು ಕಟ್ಟಿಕೊಡುತ್ತದೆ. ಅಂದಮಾತ್ರಕ್ಕೆ ಭಾವುಕತೆಯ ಕಳೆಕಟ್ಟಿಸಿ ಎಲ್ಲೆಡೆ ಸುಗಂಧವಾತಾವರಣ ಬೀರುತ್ತದೆ ಎಂದರ್ಥವಲ್ಲ. ಬರವಣಿಗೆಗೆ ಭಾವಗೀತದ ಕಳೆಕಟ್ಟಿದೆ ಅಷ್ಟೆ. ತೀರಾ ಆತ್ಮೀಯ ಸಂಬೋಧನೆ, ಕೊನೆಗಳಿಂದ ಬರೆಹಗಳು ಓದುಗನಿಗೆ ಕಚಗುಳಿಯಿಡುತ್ತವೆ. ಹಾಗೆಂದು ಅವು ಪತ್ರದ ಒಡಲಿಗೆ ಪೂರಕವಾಗಿ, ನವುರಾಗಿ ಮೂಡಿಬರುತ್ತಿರುವುದನ್ನು ಗಮನಿಸಬೇಕು. ದೃಷ್ಟಾಂತವಾಗಿ 'ಸಾಧನಾ'ದ ಒಂದು ಪತ್ರದ ಆರಂಭ ಮತ್ತು ಕೊನೆಯನ್ನು ನೋಡೋಣ. ಹಿರಿಯೂರಿನಲ್ಲಿ ಪ್ರಗತಿಶೀಲ ಚಳುವಳಿಯ ಹೆಸರಿನಲ್ಲಿ ನಡೆದ ಸಾಹಿತ್ಯಿಕ ಡೊಂಬರಾಟವನ್ನು ಕುರಿತು ಸಾಧನಾಗೆ ಪತ್ರ. ಅಲ್ಲಿನ ಘಟನೆ ನಿರಂಜನರ ಮನಸ್ಸಿನಲ್ಲಿ ಮೂಡಿಸಿದ ಯಾತನೆ, ಆಕ್ರೋಶ ಪತ್ರದ ಮೊದಲಲ್ಲೇ ಕಿಡಿಕಾರುತ್ತದೆ.

ಬೆಂಗಳೂರು
ಜೂನ್ ೧೯೫೩

ಪ್ರೀತಿಯ ಪ್ರಗತಿಶೀಲೆ,

ನಿನ್ನ ಸಿಟ್ಟಿಗೆ ಒಂದು ಹಿಡಿ ಬೆಂಕಿ ಹಾಕಿತು. ಕಾಗದ ನಾಲ್ಕು ದಿನ ತಡವಾಯಿತೆಂದು ಇಷ್ಟೆಲ್ಲ ಸಿಡಿಮಿಡಿಗೊಳ್ಳಬೇಕೆ?

ಹೋಗಲಿ ಬಿಡು, ರಾಜಿಯಾಗೋಣ. ಅದಕ್ಕೆ ಲಂಚವೆಂದು, ಇಗೋ ಈ ಸ್ವಾರಸ್ಯದ ಕತೆ

....

....

ಅಂತೂ ಸಮ್ಮೇಳನ ಮುಗಿಯಿತು. ಪ್ರಗತಿಶೀಲತೆಗೆ ಹೊಸ ಅರ್ಥ ಕೊಡುವ ಯತ್ನ ನಡೆಯಿತು......

ಬೇಸರವಾಯಿತೆ ಇವನ್ನೋದಿ ?
......ಹೇಗಿದ್ದಿಯಾ ?

ನಿಮ್ಮ ಪ್ರಗತಿಶೀಲ
ನಿರಂಜನ

ಸಾಧನಾ ಮೂವತ್ತಮೂರು ಪತ್ರಗಳ ಗೊಂಚಲು. ಪ್ರಗತಿಶೀಲ ಚಳುವಳಿಯ ದಂಡಧಾರಿಯಾಗಿ ಓಡಾಡಿದ ನಿರಂಜನರ ಸ್ನೇಹವಲಯಕ್ಕೆ ಬಂದ ಮಿತ್ರರ ಒಳಗು - ಹೊರಗು, ಕಾಮತ್, ಮಾಸ್ತಿ, ಕುವೆಂಪು, ಬೇಂದ್ರೆ, ಕಾರಂತ, ಅ.ನ.ಕೃ., ಎಕ್ಕುಂಡಿ, ವಿ.ಜಿ. ಭಟ್ಟ ಮುಂತಾದವರ ವಿಶಿಷ್ಟ ದರ್ಶನ ಇಲ್ಲಿನ ಬರೆಹಗಳ ಒಂದು ಪಾಲು. ಇಲ್ಲಿನ ಬರೆಹಗಳ ಹಿನ್ನೆಲೆಯಲ್ಲಿ ನಮ್ಮ ನಾಡಿನ ಪುರೋಗಾಮಿ ಸಾಂಸ್ಕೃತಿಕ ಚಳುವಳಿಯ ಮುನ್ನಡೆಯ ದನಿ ಸ್ಪಷ್ಟವಾಗಿ ಕೇಳಿಬರುತ್ತದೆ. ನಮ್ಮ ಕಲೆ, ಸಾಹಿತ್ಯ, ರಾಷ್ಟ್ರೀಯ ಪರಂಪರೆಗೆ, ಮಹಾಪ್ರವಾಹಕ್ಕೆ ಸ್ಪಂದಿಸಬೇಕೆನ್ನುವ ಕಳಕಳಿ ಗೋಚರಿಸುತ್ತದೆ. ಮಾಸ್ತಿಯವರ ಕೃತಿಗಳು ಸ್ವಾತಂತ್ರ್ಯ ಹೋರಾಟದ ಕಾಲದ ಜನಮನವನ್ನು ಪ್ರತಿಬಿಂಬಿಸದಿದ್ದರೂ (ವಾತಾವರಣದ ಕೈದಿಯಾಗಿ) ಅವರ ಸಾಹಿತ್ಯ ಸಾಂಸ್ಕೃತಿಕ ಪುನರುದ್ದೀಪನಕ್ಕೆ ನೆರವಾಯಿತೆಂದು ಗುರುತಿಸುತ್ತಾರೆ.ಆದರೆ ಬಿರುದು ಬಾವಲಿಗಳನ್ನು ಕಿತ್ತೊಗೆದ ಠಾಗೂರ್ ಪರಂಪರೆ,ಪ್ರಗತಿಶೀಲ ಪರಂಪರೆ ನಮಗಿಲ್ಲದಿರುವುದು ದೌರ್ಭಾಗ್ಯವೆಂದು ಸೂಚಿಸುತ್ತಾರೆ. ವೃತ್ತಿ ವಿಶ್ರಾಂತರಾದ ಮೇಲೆ ಮಾಸ್ತಿಯವರ ಧೋರಣೆಯಲ್ಲಿ ಬದಲಾದುದನ್ನು ಗುರುತಿಸಿದರೂ "ನಮ್ಮ ನಾಡಿನ ಲೇಖಕರ ಕಷ್ಟಕಾರ್ಪಣ್ಯಗಳ ಬಗ್ಗೆ ಅವರು ಕನಿಕರಿಸುತ್ತಾರೆ. ಆದರೆ ಮೂಲಕ್ಕೆ ಹೋಗಿ ರೋಗ ನಿದಾನ ಮಾಡುವುದಿಲ್ಲ. ಈಗಿನ ಸಮಾಜ ಪದ್ಧತಿಗೂ ಆ ದುಃಸ್ಥಿತಿಗೂ ಸಂಬಂಧವಿದೆಯೆಂದು ಅವರು ಒಪ್ಪುವುದಿಲ್ಲ. ತಮ್ಮ ಕೈಲಾದಷ್ಟು ಮಟ್ಟಿಗೆ ಹತ್ತಾರು ಜನರಿಗೆ, ತಮ್ಮ ವೈಯಕ್ತಿಕ ಕಷ್ಟಗಳನ್ನೂ ಗಣಿಸದೆ ಅವರು ನೆರವಾಗುತ್ತಾರೆ. ನೆರವು ಪಡೆದವರು ಆಜನ್ಮ ಕೃತಜ್ಞತೆಗೆ ಪಾತ್ರರಾಗುತ್ತಾರೆ. ಸಮಾಜದ ಸಂಪ್ರದಾಯಗಳನ್ನೆಲ್ಲ ಅವರು ಎತ್ತಿ ಹಿಡಿಯುವರು. ಎರಡು ದಶಕಗಳ ಹಿಂದೆ ಸಾಹಿತ್ಯ ರಚನೆಯ ಸ್ವರೂಪಗಳಲ್ಲಿ ನವೀನತೆಯನ್ನು ಶ್ರೀಯವರು, ಮಾಸ್ತಿಯವರು, ಪಂಜೆಯವರು ಮತ್ತಿತರರು ತಂದು ಪುರೋಗಾಮಿಗಳಾಗಲಿಲ್ಲವೆ? ಈಗ ಸ್ವರೂಪದಲ್ಲಷ್ಟೇ ಅಲ್ಲ, ತಿರುಳಿನಲ್ಲೂ ನವೀನತೆ ತರುತ್ತಿದ್ದೇವೆ - ಎಂದು ಪ್ರಗತಿಶೀಲರು ಹೇಳುವಾಗ ಅವರು ಒಪ್ಪುವುದಿಲ್ಲ." ಮಾಸ್ತಿಯವರನ್ನು ಕುರಿತಂತೆ ಸಾಂದರ್ಭಿಕವಾಗಿ ಆಡಿದ ಮೇಲಿನ ಮಾತುಗಳು ಪರಿವರ್ತನೆಯ ಘಟ್ಟವನ್ನು ಕಂಡುಕೊಳ್ಳುವ ಎಲ್ಲ ಸಾಹಿತ್ಯಕ ಸಂದರ್ಭಕ್ಕೂ ಅನ್ವಯಿಸಬಹುದಾದದ್ದು. ಪರಂಪರೆಗೂ ಪ್ರಗತಿಗೂ ಮುಖಾಮುಖಿಯ ಫಲ- ಅಲ್ಲಿಯೇ ಇರುವುದು ನವೀನತೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಂಡ ಕನಸು ಸ್ವಾತಂತ್ರ್ಯದ ಹೊಸ್ತಿಲಲ್ಲೇ ಒಡೆದು ನುಚ್ಚುನೂರಾಗಿ ಜನತೆಯ ಸಾಂಸ್ಕೃತಿಕ - ಸಾಮಾಜಿಕ ಬದುಕು ಮೂರಾಬಟ್ಟೆಯಾದ ಬಗ್ಗೆ ಅವರ ಕೆಲವಾರು ಲೇಖನಗಳು ಹಳಹಳಿಸುತ್ತವೆ. ದೇಶಕ್ಕೆ ಸ್ವಾತಂತ್ರ್ಯ ಬಂದು ನಾಲ್ಕು ವರ್ಷಗಳಾದ ಒಂದು ಸಂಭ್ರಮದ ದಿನ ಅವರ ಮನಸ್ಸು ಹೀಗೆ ಚಿಂತಿಸುತ್ತದೆ. "ಜನತೆಯ ಅಸಂಖ್ಯ ಬಲಿದಾನದ ಮೇಲೆ ತಮ್ಮ ಅಧಿಕಾರದ ಬಾವುಟ ಏರಿಸಿದ ಪಾಪಿಗಳು, ಆ ದಿನ ಅಳಿದವರಿಗಾಗಿ ಮೊಸಳೆ ಕಣ್ಣೀರಿನ ಒಂದು ಹನಿಯನ್ನೂ ಉರುಳಿಸಲಿಲ್ಲವಲ್ಲ" ಎನ್ನುವಲ್ಲಿ ಅವರ ಮಾತು ಖಡ್ಗವಾಗುತ್ತದೆ. ಮುಂದುವರಿದು

ಅದೇ ಲೇಖನದ ಇನ್ನೊಂದೆಡೆ "ಹಿಂದೆ ಬಂಗಾಲವನ್ನು ಬ್ರಿಟಿಷರಿಗೆ ಮಾರಿದ, ವೀರ ಟಿಪ್ಪು ವನ್ನು ವಂಚಿಸಿ ಪಾಪಿಗಳಾದ ಜಾಫರ್ - ಸಾದಿಕ್‌ಗಳಿಗೆ ಈಗಲೂ ಕೊರತೆಯಿಲ್ಲ. ವಿದೇಶೀಯ ಸುಲಿಗೆಗಾರರ ಬೂಟುಕಾಲುಗಳಿಗೆ ಅಭಿಷೇಕ ಮಾಡುವವರು ಈಗಲೂ ನಮ್ಮಲ್ಲಿ ಇದ್ದಾರೆ. ಎಂತಲೇ ನಮ್ಮ ಬಾಳು ಇಷ್ಟು ಅಸಹನೀಯವಾಗಿದೆ". ಈ ಮಾತು ಇದೀಗ ಮೂವತ್ತೈದು ವರ್ಷಗಳ ಬಳಿಕವೂ ಪೂರ್ತಿ ಸುಳ್ಳಾಗಲಿಲ್ಲ. ಆದರ ಕೊನೆಯಂತೂ ಭಾರತದ ಎಲ್ಲ ಕಾಲದ ದುಃಸ್ಥಿತಿಗೆ ಒಡ್ಡಿದ ಪ್ರತಿಮೆ. "ರಾತ್ರೆ ಹನ್ನೊಂದಾಗುತ್ತಾ ಬಂತು... ಅದೇ ಹೆಂಗಸು ಕರುಳು ಕತ್ತರಿಸುವ ಹಾಗೆ ಕೂಗುತ್ತಾ ಬರುತ್ತಿದ್ದಾಳೆ. 'ಕವಳ ತಾಯೀ ಕವಳಾ ಅಮ್ಮಾ...' ಪ್ರತಿ ರಾತ್ರೆಯೂ ಅದೇ ಸ್ವರ. ಗೋಪುರದ ಗಡಿಯಾರ ಚಲಿಸದೆ ಇರಬಹುದು. ಆದರೆ ಆಕೆ ಬಂದೇ ಬರುತ್ತಾಳೆ, ಹೊತ್ತಿಗೆ. ರಾತ್ರೆಯೂ - ನಾಳೆ - ಪುನಃ ಆ ಮೇಲೆಯೂ."

ಈ ಸಂಕಲನದ ಅವರ ಬರವಣಿಗೆಗಳಲ್ಲೆಲ್ಲ ಪ್ರಗತಿಶೀಲತೆಯ ಕೆಂಪು ಗೋಚರಿಸುತ್ತದೆ. ಸಮಸ್ಯೆಗಳನ್ನು ಆ ಬೆಳಕಿನಲ್ಲಿ ವಿಶ್ಲೇಷಿಸುತ್ತಾರೆ. ಆದರೆ ಎಲ್ಲೂ ವೈಯಕ್ತಿಕ ಧೋರಣೆಯ ಅಡ್ಡಗೋಡೆ ವಸ್ತುಸ್ಥಿತಿಯನ್ನು ಮರೆಮಾಚಿಲ್ಲ. ವೈಯಕ್ತಿಕ ದೌರ್ಬಲ್ಯ ಅಸಹನೆಯಾಗಿ ಕಾಡಲಿಲ್ಲ. ಸಿದ್ಧಾಂತದ ತಳಪಾಯದಲ್ಲೇ ಎಲ್ಲಾ ಸಂಗತಿಗಳು ಬೆಳೆದು ನಿಂತಿವೆ. ಈ ನೆಲೆಯಲ್ಲಿ ಬೇಂದ್ರೆಯವರನ್ನು, ಕಾರಂತರನ್ನು ಹಾಗೂ ಅ. ನ. ಕೃ. ಅವರನ್ನು ಕುರಿತು ಅವರು ಬರೆದ ಲೇಖನಗಳನ್ನು ಗಮನಿಸಬೇಕು. ಕನ್ನಡ ಪುನರುದ್ದೀಪನ ಚಳುವಳಿಯ ಸಾಂಸ್ಕೃತಿಕ ಯೋಧನಾಗಿ ಮೆರೆದ ಬೇಂದ್ರೆಯವರು ಇತಿಹಾಸದಲ್ಲಿ ಮಾಡಬೇಕಾದ ಕೆಲಸ ಮಾಡಿದ್ದಾರೆ ಎಂಬ ಗೌರವವಿದ್ದರೂ ಅವರನ್ನು ಆ ಕಾಲದ ಸೈದ್ಧಾಂತಿಕ ಚಳುವಳಿ - ಪ್ರಗತಿಶೀಲತೆಯ ಕಣ್ಣುಗಳಿಂದ ಕಂಡಾಗ ಬೇಂದ್ರೆಯವರು ಜೀವನದ ಕಹಿಮುಖದಿಂದ - ವಸ್ತುಸ್ಥಿತಿಯಿಂದ ಪಲಾಯನ ಮಾಡಿ ಆದರ್ಶವಾದದಲ್ಲಿ, ರಹಸ್ಯವಾದದಲ್ಲಿ ದಿನತಳ್ಳಿದ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿದ್ದಾರೆ.

ಅ. ನ. ಕೃ. ಗರಡಿಯಲ್ಲಿ ಪ್ರಗತಿಶೀಲತೆಯ ಕಾವು ಕಟ್ಟಿಸಿಕೊಂಡ ನಿರಂಜನರು ಸೈದ್ಧಾಂತಿಕವಾಗಿ ಅವರನ್ನು ವಿರೋಧಿಸಿದ್ದರೂ, ಅವರ ಸಜ್ಜನಿಕೆಯನ್ನು ಮೆಚ್ಚಿ ನುಡಿದಿದ್ದಾರೆ. "ಸಾಹಿತ್ಯದ ಗಾಳಿ ಬೀಸಿರುವ ಪ್ರತಿಯೊಂದು ಕನ್ನಡದ ಮನೆಯಲ್ಲೂ ಪರಿಚಿತವಾದ ಹೆಸರು ರಾಯರದು - ಅವರು ಈಗ ಏನು ಬರೆದರೂ ಜನ ಓದುತ್ತಾರೆ. ಎಂತಲೇ ಇಷ್ಟು ಕಾತರ - ಅವರು ಬರೆಯುವುದೆಲ್ಲವೂ ತೂಗಿ ತೂಗಿ ಬರಲಿ, ಗಂಭೀರವಾಗಿ ಬರಲಿ, ಪರಿಣಾಮಕಾರಿಯಾಗಿ ಬರಲಿ ಎಂಬ ಅಪೇಕ್ಷೆ." ಇಲ್ಲಿ ಸಾಹಿತಿಯೊಬ್ಬನ ಸಾಮಾಜಿಕ ಜವಾಬ್ದಾರಿಯನ್ನು ಗುರುತಿಸಬಹುದಾಗಿದೆ. ಅವರೇ ಒಂದೆಡೆ ಹೇಳಿರುವಂತೆ 'ನನ್ನ ನಿಷ್ಠೆ ಬದುಕಿಗೆ.' ಈ ಮೂಲಕ ಸಾಹಿತ್ಯಕ್ಕೂ ಸಮಾಜಕ್ಕೂ ಇರುವ ಸಂಬಂಧದ ಬಗ್ಗೆ ಅವರು ಗಾಢವಾಗಿ ಚಿಂತಿಸಿದಂತೆ ಕಾಣುತ್ತದೆ. ವ್ಯಕ್ತಿಗತವಾದ ಪ್ರೀತಿ - ಗೌರವಕ್ಕಿಂತ ಸಿದ್ಧಾಂತಕ್ಕೆ, ನಿಲುಮೆಗೆ ಮನ್ನಣೆ ನೀಡುವರೆಂಬುದಕ್ಕೆ 'ಅ.ನ.ಕೃ.

ಅಸಂಬದ್ಧತೆ' ಎಂಬ ಲೇಖನ ಒಳ್ಳೆಯ ಉದಾಹರಣೆ. ತರ್ಕಬದ್ಧವಾದ ಬರೆಹ ಅದು. ಇದೇ ಜಾಡಿನ ಬರೆಹ 'ಸಾಹಿತಿ ಕಾರಂತರ ರಾಜಕಾರಣ'. ಕಾರಂತರು ರಷ್ಯಾದ ಕಲಾ ಪ್ರಪಂಚದ ಹಿರಿಮೆಯನ್ನು ಒಪ್ಪಿಕೊಂಡರೂ ಆ ದೇಶದ ಹಾದಿ ಸುಗಮವಾದುದಕ್ಕೆ ಸಮಾಜವಾದಿ ಕ್ರಾಂತಿ ಕಾರಣ ಎಂದು ಅವರು ಭಾವಿಸಲಿಲ್ಲ. ಇಲ್ಲಿಯ ಸಮಾಜ ವ್ಯವಸ್ಥೆಯಲ್ಲಿ ಮೂಲ ಬದಲಾವಣೆಯಾಗದ ಹೊರತು, ಪಾರತಂತ್ರ್ಯ ಮತ್ತು ಪಾಳೆಯಗಾರ ಪದ್ಧತಿ ತೊಲಗದ ಹೊರತು ಬೇರೆ ಗತಿಯಿಲ್ಲವೆಂದು ಅವರು ತೀರ್ಮಾನಿಸಲಿಲ್ಲ (ಸಾಧನಾ, ಪುಟ 55) ಎಂಬುದು ನಿರಂಜನರ ಆಕ್ಷೇಪ. 'ಪುಷ್ಪಹಾರ' (೧೯೫೭) ಸಂಕಲನದ 'ಕಾರಂತರ ದೃಷ್ಟಿಯಲ್ಲಿ ಕನ್ನಡ ಸಾಹಿತ್ಯ' ಎಂಬ ಬರೆಹದಲ್ಲೂ ಕಾರಂತರ ಅಪೂರ್ಣತೆಯನ್ನು ವಿಶೇಷವಾಗಿ ಪ್ರಗತಿಶೀಲ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತುಂಬ ತರ್ಕಬದ್ಧವಾಗಿ ವಿವೇಚಿಸಿದ್ದಾರೆ. ಹಾಗೆ ಹೇಳಿ ಅವರ ಒಳಿತನ್ನು ಎತ್ತಿ ಆಡಿದ್ದುಂಟು. 'ಆಪರೆ ಗಳಿಗೆಗೊಂದು ಸ್ವರವಿಲ್ಲ ಅವರಲ್ಲಿ. ಇದೇ ಅವರ ಹಿರಿಯ ಗುಣ. ಜನರನ್ನು ಮೆಚ್ಚಿಸಬೇಕೆನ್ನುವ ಆತುರವಿಲ್ಲ. (ಸಾಧನಾ, ಪುಟ 56)

ಅವರ ಅಂಕಣಗಳುದ್ದಕ್ಕೂ ಕವಿ ಕಲಾವಿದರ ಬಗೆಗೆ ಔದಾರ್ಯದ ಸವಿ ಹೊನಲು ಹರಿಯುತ್ತಿರುವುದನ್ನು ಗಮನಿಸಬೇಕು. ಸಮಾಜಕ್ಕೆ ಅವರನ್ನು (ಕವಿ, ಕಲಾವಿದರನ್ನು) ಬೆಳೆಸುವ, ಕಾಪಿಡುವ ನೈತಿಕ ಹೊಣೆಗಾರಿಕೆಯಿದೆ ಎಂಬ ನಿಲುವು ಅವರದು. ವೀಣೆ ವೆಂಕಟಪ್ಪನವರ ಬದುಕನ್ನು ಕುರಿತ ಬರವಣಿಗೆ ಓದಿದಾಗ ಕಣ್ಣು ಮಂಜಾಗುತ್ತದೆ. "ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸುವುದು ನಮ್ಮ ಸಮಾಜ ವ್ಯವಸ್ಥೆಯಲ್ಲಿ ಸಾಮಾನ್ಯ ವಿಷಯ. ಆತ್ಮಹತ್ಯೆ ಮಾಡಿಕೊಂಡೇ ಪರಿಹಾರವನ್ನು ಕಂಡ ಸಾಹಿತಿಗಳೂ ಚಿತ್ರಕಾರರೂ ನಮ್ಮ ದೇಶದಲ್ಲಿದ್ದಾರೆ. ಶೋಷಣೆ - ಸುಲಿಗೆಯ ಮೇಲೆಯೇ ನಿಂತಿರುವ ಈ ಸಮಾಜ ಪದ್ಧತಿಯ 'ಹಿರಿಮೆ'ಗೆ ಅವರು ಪ್ರತೀಕಗಳಾಗಿದ್ದಾರೆ." (ಸಾಧನಾ, ಪುಟ 81)

ನಿರಂಜನರ ಎಷ್ಟೋ ಅಂಕಣಗಳು ಸಾಹಿತ್ಯ ಚರಿತ್ರಕಾರರಿಗೆ ಬಹಳಷ್ಟು ಮೂಲಮಾಹಿತಿ ಒದಗಿಸುವುದು ಖಂಡಿತ. ಯಾವುದೇ ಒಂದು ಸೈದ್ಧಾಂತಿಕ ಚಳುವಳಿಯ ಹಿಂದೆ ಕೆಲವು ಆಸಕ್ತರ - ಅಜ್ಞಾನಿಗಳ ಆಟ (ಹೂಟ!) ನಡೆದು ಚಳುವಳಿಯ ದಿಕ್ಕುದೆಸೆಯೇ ತಪ್ಪುತ್ತದೆ ಎನ್ನುವುದಕ್ಕೆ ಹಿರಿಯೂರಿನಲ್ಲಿ ನಡೆದ ಪ್ರಗತಿಶೀಲ ಚಳುವಳಿಯ ಅಧಿವೇಶನ ಒಂದು ಜ್ವಲಂತ ನಿದರ್ಶನ. ಪ್ರಗತಿಶೀಲ ಚಳುವಳಿಯ ಸಮ್ಮೇಳನದ ಹೆಸರಲ್ಲಿ ನಡೆದ ಒಳನಾಟಕಗಳು, ಕಮ್ಯೂನಿಸ್ಟ್ ಭರ್ತ್ಸನೆ, ಕಾಮೋದ್ದೀಪಕ ಕೃತಿಗಳನ್ನು ಖಂಡಿಸಿದವರಿಗೆ ಪರದೇಶಿ ಎಂಬ ನಿಂದನೆ, ಕಾಮೋದ್ದೀಪನ ಸಾಹಿತ್ಯರಚನೆಯನ್ನು ವಿರೋಧಿಸಿ ಜನಹಿತ ದೃಷ್ಟಿಯಿಂದ ಇಂಥ ಕೃತಿಗಳನ್ನು ರಚಿಸಬಾರದೆನ್ನುವ ನಿರ್ಣಯವನ್ನು ಖಂಡಿಸಿ ಹೀಗೆ ಮಾಡುವುದರಿಂದ ಲೇಖನಸ್ವಾತಂತ್ರ್ಯಕ್ಕೆ ತಡೆಯೊಡ್ಡಿದಂತಾಗುತ್ತದೆ ಎನ್ನುವ ವಿಚಿತ್ರ ವಾದ, ಕಾಮ ಪ್ರಚೋದಕ ಸಾಹಿತ್ಯವಿದೆ ಎಂದು ಹೇಳಿಕೊಳ್ಳುತ್ತಾ ಬರುವುದರಿಂದ ಸರಕಾರ

ಕೈಹಾಕಲು ಆಸ್ಪದ ಕೊಟ್ಟಂತಾಗುತ್ತದೆ ಎಂಬ ಅಸಹಜ ವಿಚಾರಧೋರಣೆಗಳು - ಒಂದು ಕಾಲದ ಸಾಹಿತ್ಯಕ - ವೈಚಾರಿಕ ಸಂಘರ್ಷವನ್ನು ಹೇಳುತ್ತವೆ.

ನಿರಂಜನರು ಸ್ವಭಾವತಃ ಮಾನವತಾವಾದಿ, ವಾಸ್ತವವಾದಿ. "ಕಾಲಧರ್ಮ ವನ್ನು ಪ್ರತಿಬಿಂಬಿಸಿದ ಬದುಕಿನಿಂದ ಚಿಮ್ಮಿದ, ಮಾನವರನ್ನು ಕುರಿತ ಓದುಗರ ಬೋಧೆಯನ್ನು ಹೆಚ್ಚಿಸಿದ ಸಾಹಿತ್ಯ ಮಾತ್ರವೇ ಚಿರಕಾಲ ಬದುಕುವ ಸಾಮರ್ಥ್ಯವನ್ನು ಗಳಿಸಿದೆ" (ಬುದ್ಧಿಭಾವ ಬದುಕು, ಪುಟ 115) ಈ ಮೌಲ್ಯಗಳನ್ನೇ ತನ್ನ ಬದುಕಿನಲ್ಲಿ - ಸಾಹಿತ್ಯದಲ್ಲಿ ಬಿಂಬಿಸಲು ಯತ್ನಿಸಿದವರು ಅವರು. ತುಂಬು ಜೀವನಕ್ಕಾಗಿ ಹಾತೊರೆದವರು. "ಮಾನವ ಮಾನವ ನನ್ನು ನಿರ್ಮಲ ಪ್ರೇಮದಿಂದ ಕಾಣುವ, ಸುಲಿಗೆ ಶೋಷಣೆಯಿಲ್ಲದೆ ಪ್ರತಿಯೊಬ್ಬನೂ ಎತ್ತರ - ಎತ್ತರಕ್ಕೆ ಪರಿಪೂರ್ಣ ಮಾನವನಾಗುವಂತೆ ಬೆಳೆಯುವ, ರೋಗರುಜಿನಗಳಿಲ್ಲದ, ನೋವು ನರಳಾಟವಿಲ್ಲದ ಎಲ್ಲವೂ ಅರಳು ಮಲ್ಲಿಗೆಯ ಕಂಪಿನ ಬೆಳುದಿಂಗಳ ತಂಪಿನ, ಆ ಭವ್ಯ ಭೂಮಿ! ಅದರತ್ತ ಸಾಗಿರುವ ಹಾದಿಯಾದರೋ ಬಲು ದೀರ್ಘ....ಬಲು ದೀರ್ಘ.... ಅದೂ ಎಂಥ ಹಾದಿ! ಹೆಜ್ಜೆ ಹೆಜ್ಜೆಗೂ ಹೋರಾಡಬೇಕು. ಎಂಥ ಸ್ಥಿತಿಯಲ್ಲೂ ಧೃತಿಗೆಡದೆ ವಜ್ರಹೃದಯಿಗಳಾಗಬೇಕು. ಕುರುಡುನಂಬಿಕೆಯ ಮಿಥ್ಯರಾಶಿಯನ್ನು ಪುಡಿಗೂಡಿಸುತ್ತ ಸಾಗಬೇಕು...." (ಸಾಧನಾ, ಪುಟ 98) 'ಸಾಧನಾ'ದ ಕೊನೆ ಕೊನೆಯ ಲೇಖನ ಬರೆವ ಹೊತ್ತಿಗೆ ಅವರು ಕಮ್ಯೂನಿಸಂನಿಂದ ಹೊರಬಂದಿದ್ದರೂ ಅವರ ವೈಚಾರಿಕತೆಗೆ ಯಾವತ್ತೂ ತುಕ್ಕು ಹಿಡಿಯಲಿಲ್ಲ. ಅಂಧ ಶ್ರದ್ಧೆ ಕಡಮೆಯಾಗಿ ವೈಜ್ಞಾನಿಕ ವಿಚಾರಗಳು ಹೆಚ್ಚಬೇಕು ಎನ್ನುವವರು ಅವರು. "ಅಗೋಚರ ವಿಷಯದಲ್ಲಿ ನಂಬುಗೆ ಇಡುವುದು ಬಿಡುವುದು ವೈಯಕ್ತಿಕ ವಿಷಯ" ಎನ್ನುತ್ತಾ "ಸಂಕಷ್ಟ ಪೀಡಿತರಿಂದ ದೇವರನ್ನು ಕಸಿದುಕೊಂಡು ಯಾವನೂ ಉದ್ಧಾರ ವಾಗಿಲ್ಲ" ಎನ್ನುವುದು ಕೆಲವರಿಗೆ ಅವರ ವ್ಯಕ್ತಿತ್ವದ ಬಿರುಕಾಗಿ ಕಾಣಬಹುದಾದರೂ ಎಲ್ಲ ಮಾನವತಾವಾದಿಗಳು ಒಪ್ಪತಕ್ಕ ವಿಚಾರ. ಆದರೆ ಮಾತು ಮಾತಿಗೆ 'ಪ್ರಾರಬ್ಧ ಕರ್ಮ', 'ವಿಧಿ' ಎನ್ನುವ ಪುರುಷಾರ್ಥ ಶೂನ್ಯವಾದಿಗಳೊಂದಿಗೆ ಅವರಿಗೆ ರಾಜಿಯಿಲ್ಲ.

'ಪುಷ್ಪಹಾರ' (೧೯೫೭) 'ಜನಪ್ರಗತಿ'ಯಲ್ಲಿ ಪ್ರಕಟವಾದ 'ಸಾಧನ ಸಂಚಯ'ದ ಮುಂದಿನಭಾಗ. ಈ ಬರೆಹಗಳನ್ನು ಬರೆವ ಹೊತ್ತಿಗೆ ಅವರಿನ್ನೂ ಕುಳುಕುಂದ ಶಿವರಾಯ ರಾಗಿದ್ದು, ಕಮ್ಯೂನಿಸಂ ತಾನು ಅನುಸರಿಸುವ ಮಾನವ ಧರ್ಮವೆಂದು ತಿಳಿದಿದ್ದರು. ಮುಂದೆ 'ಕಲ್ಪನೆಗೂ ವಸ್ತುಸ್ಥಿತಿಗೂ ಇರುವ ಅಂತರವನ್ನು ಕ್ರಮಶಃ ತಿಳಿದುಕೊಳ್ಳಲು ಆ ದಾರಿಯಿಂದ ದೂರ ಸರಿದು ತಮ್ಮದೇ ಆದ ತತ್ವಜ್ಞಾನವನ್ನು ರೂಪಿಸಿಕೊಂಡವರು ಹೆಚ್ಚು ಜನ' (ಪುಷ್ಪಹಾರದ 'ನಾಂದಿ') . ಅಂಥವರಲ್ಲಿ ನಿರಂಜನರೂ ಒಬ್ಬರು. ಈ ಸಂಕಲನದ ಕೆಲವು ಲೇಖನಗಳಲ್ಲಿ 'ಕಣ್‌ಪಟ್ಟಿ ದೃಷ್ಟಿ' ಕಾಣಿಸುವುದಾಗಿ ಅವರೇ ಹೇಳಿ ಕೊಂಡುದುಂಟು. ರಶಿಯಾ, ಚೀನ ದೇಶದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಬಗೆಗಿನ ಒಲವು ಕಮ್ಯೂನಿಸಂ ಅಂದೊಡನೆ ಉರಿದು ಬೀಳುವವರಿಗೆ ಕೊಂಚ ಒಗರಾಗಬಹುದು. 'ದೂರ ದೇಶದಲ್ಲಿ ಭಾರತೀಯ ಚಿತ್ರಕಲೆ', 'ಚೀನೀ ಬರಹಗಾರ್ತಿ ಟಿಂಗ್‌ಲಿಂಗ್', 'ಸಾಹಿತ್ಯ

ನಿರ್ಮಾಣ ಶಾಲೆ', 'ಬರೆಹಗಾರನ ಬದುಕು' - ಲೇಖನಗಳಲ್ಲಿ ಅವರ ಕಮ್ಯೂನಿಸಂನ ಒಲವು ಎದ್ದು ತೋರುವುದೇನೋ ನಿಜ.

ಈ ಸಂಕಲನದ ಬರೆಹಗಳ ದೃಷ್ಟಿ - ವಸ್ತು - ಧೋರಣೆಗಳಿಗನುಗುಣವಾಗಿ ಮೂರಾಗಿ ವಿಂಗಡಿಸಬಹುದು.

೧. ಕನ್ನಡ ಸಾಹಿತ್ಯ - ಸಾಹಿತಿ - ಕಲೆಗಳಿಗೆ ಸಂಬಂಧಿಸಿದವು / ವಿಶ್ವಸಾಹಿತ್ಯ - ಸಾಹಿತಿ - ಕಲೆ - ಕಲಾವಿದರಿಗೆ ಸಂಬಂಧಿಸಿದವು.

೨. ರಾಜಕಾರಣಿಗಳ ಸಾಹಿತ್ಯಕ - ರಾಜಕೀಯ ಧೋರಣೆ.

೩. ಮಾನವೀಯತೆ, ವೈಚಾರಿಕತೆಯನ್ನು ಕುರಿತವುಗಳು.

ಮೊದಲೆರಡು ಗುಂಪಿಗೆ ಸೇರಿದ ಬರೆಹಗಳು 'ಸಾಧನಾ'ದಲ್ಲಿ ಸಾಕಷ್ಟು ಬಂದಿವೆ. ಸಾಮಯಿಕ ಸಾಹಿತ್ಯ ಕೃತಿ ಅಥವಾ ಸಾಹಿತಿಗಳನ್ನು ಕುರಿತ ಬರೆಹಗಳು, ಕರ್ನಾಟಕ ಏಕೀಕರಣದ ಬಗ್ಗೆ ರಾಜಕಾರಣಿಗಳು ತಳೆದಿದ್ದ ಹೆಣ್ಣಿಗ ಧೋರಣೆ ('ರಾಜಕೀಯ ರೋಗ') ಇಂದಿಗೂ ತನ್ನ 'ಸಕಾಲಿಕತೆ'ಯನ್ನು ಉಳಿಸಿಕೊಂಡಿರುವುದು ಗಮನಿಸತಕ್ಕ ಸಂಗತಿ.

ನಾಡು ಎಚ್ಚರಗೊಳ್ಳಬೇಕಾದರೆ ನಮ್ಮ ಜನರಲ್ಲಿ ವೈಜ್ಞಾನಿಕ ದೃಷ್ಟಿಕೋನ ಹಾಗೂ ವೈಚಾರಿಕ ಪ್ರಜ್ಞೆ ಬೆಳೆಯಬೇಕು. ವೈಚಾರಿಕತೆ ಎಂದರೆ ವಾಸ್ತವಿಕತೆಯ ಅರಿವು. ಈ ಮನೋಧರ್ಮಕ್ಕೆ ಒತ್ತುನೀಡುವ 'ಹೆಣ್ಣು-ಗಂಡು' (ಪುಟ 91) 'ಅದ್ಭುತ ಪವಾಡ'(ಪುಟ 110), 'ಲೋಕಕಲ್ಯಾಣಕ್ಕಾಗಿ ಮಹಾಕೋಟಿ ಹೋಮ'(ಪುಟ 71) ಲೇಖನಗಳನ್ನು ಓದಬೇಕು. ಪವಾಡ ಪ್ರಚಾರವನ್ನು ಕುರಿತ ಅವರ ನಿಲವು: "ಈ ಪವಾಡ ಪ್ರಚಾರವೆಲ್ಲ ವಿಜ್ಞಾನಕ್ಕೆ ವಿರೋಧಿಯಾಗಿದೆ. ಮಾನವನ ಈ ವರೆಗಿನ ಸಂಶೋಧನೆಗಳಲ್ಲೆಲ್ಲಾ ಅಪನಂಬಿಕೆಯನ್ನ ಆ ಪ್ರಚಾರ ಹುಟ್ಟಿಸುತ್ತದೆ. ವೈದ್ಯಕೀಯ ವಿಚಕ್ಷಣತೆಯನ್ನೆಲ್ಲ (ಪಾಶ್ಚಾತ್ಯ ಹಾಗೂ ಪೌರಸ್ತ್ಯ) ಅದು ನಗೆಗೀಡು ಮಾಡುತ್ತದೆ. ಮಾನವನ ಆತ್ಮ ವಿಶ್ವಾಸವನ್ನು ಕುಂಠಿತಗೊಳಿಸುತ್ತದೆ. ಕುರುಡುನಂಬಿಕೆಯನ್ನೂ ವಿಧಿವಾದವನ್ನೂ ಹೆಚ್ಚಿಸುತ್ತದೆ. ಮಾನವ ಕುಲವನ್ನು ನಿರ್ವೀರ್ಯವಾಗಿ ಮಾಡುತ್ತದೆ, ನಾಗರಿಕತೆಯ ಮುನ್ನಡೆಗೆ ತಡೆಬಂಡೆಯಾಗುತ್ತದೆ."

'ಕಾಲಕ್ಷೇಪ' ೧೯೫೦ರಲ್ಲಿ ಮುದ್ರಣವಾಗಿ ಬಂದರೂ ೧೯೫೦ರ ಸುಮಾರಿಗೆ ಧಾರಾವಾಹಿಯಾಗಿ ಪ್ರಕಟಗೊಂಡವುಗಳು. 'ಪುಷ್ಪಹಾರ'ದ ಬರವಣಿಗೆಯಂತೆ ಇಲ್ಲಿಯೂ ಅವರ ಒಳನೋಟ ಬದಲಾದುದು ನಿಚ್ಚಳವಾಗಿ ಗೋಚರಿಸುತ್ತದೆ. "ಒಂದು ಕಾಲದಲ್ಲಿ ಕಮ್ಯೂನಿಸಂನ ತೊಗಟೆಯೊಳಗೆ ಮಾನವೀಯ ತಿರುಳನ್ನು ಕಂಡೆನೆಂದು

ಭ್ರಮಿಸಿದವನು ನಾನು. ಆಕರ್ಷಣೀಯವಾದ ತತ್ವಕ್ಕೂ ಒರಟಾದ ಆಚರಣೆಗೂ ವ್ಯತ್ಯಾಸವಿದೆ ಎಂಬುದನ್ನು ಮನಗಂಡುದು ಆ ಬಳಿಕ. ಸೃಷ್ಟ್ಯಾತ್ಮಕ ಕಲಾವಿದ ಯಾವುದೇ ರಾಜಕೀಯ ಸಂಕೋಲೆಯ ಗೊಣಸಾಗಬಾರದೆಂದು ಆಗ ಮನವರಿಕೆಯಾಯಿತು. ದೂರ ಸರಿದು ಕಣ್ಣುತೆರೆದು ನೋಡಿದ ಅನಂತರದ ದಿನಗಳಲ್ಲಿ ಅವರೆಗೂ ಮಸುಕಾಗಿದ್ದ ಎಷ್ಟೋ ಅಂಶಗಳು ಸ್ಫುಟವಾಗಿ ತೋರಿದವು." ಈ ಧೋರಣೆ ನಿರಂಜನರ ವ್ಯಕ್ತಿತ್ವಕ್ಕೆ ಪುಟಕೊಟ್ಟ ಅಂಶ. ಸೀಮಿತ ವೈಚಾರಿಕ ಲಕ್ಷ್ಮಣರೇಖೆಯಿಂದ ಹೊರಬಂದ ಅವರ ವಿರಾಟ್‌ಪ್ರತಿಭೆ ಮುಕ್ತ ಚಿಂತನಕ್ಕೆ ಅನುವು ಮಾಡಿಕೊಟ್ಟಿತು. ಅವರ ಚಿಂತನೆಯ ಧಾಟಿ ಕೂಪಮಂಡೂಕತ್ವ ದಿಂದ ಹೊರನೆಗೆಯಿತು. ಜಾಗತಿಕ ವಲಯವನ್ನು ಆಕ್ರಮಿಸಿಕೊಂಡಿತು. ಸಾಹಿತ್ಯಕ ಸಮಸ್ಯೆಗಳಿಗಿಂತಲೂ ಹೆಚ್ಚಾಗಿ ಇಲ್ಲಿ ಅವರನ್ನು ಕಾಡಿದ್ದು, ಸ್ಪಂದಿಸಿದ್ದು ಜಾನಾಂಗಿಕ ದ್ವೇಷ, ಜಾನಾಂಗಿಕ ಭೇದ, ಹದಗೆಟ್ಟ ಪ್ರಕೃತಿ ಮಾನವ ಸಂಬಂಧ, ವರದಕ್ಷಿಣೆ, ವೇಶ್ಯಾ ಸಮಸ್ಯೆ, ಆರ್ಥಿಕ ಅಸಮಾನತೆ ಇತ್ಯಾದಿ ಇತ್ಯಾದಿ.

ಕಮ್ಯೂನಿಸಂನ ತೊಗಟೆಯೊಳಗಿಂದ ಹೊರಬಂದ ನಿರಂಜನ ಸ್ವಾತಂತ್ರ್ಯ ನಂತರದ ದುರ್ದಿನಗಳಿಂದ ಕಸಿವಿಸಿಗೊಂಡರೂ ಒಳ್ಳೆಯ ದಿನಗಳಿಗಾಗಿ ಹಾರೈಸುವ ಆಶಾವಾದಿ. ಹೋರಾಡುವ ಜನರ ಪಕ್ಷಪಾತಿ. ಬ್ರಿಟಿಷ್ ಗಿಯಾನದ ಬಂಧಿತ ಯುವಕವಿ ಕಾರ್ಟರ್‌ನ ಬಗೆಗೆ ಬರೆಯುತ್ತಾ "ಸುತ್ತಲೂ ದಾಸ್ಯ ಸಂಕೋಲೆಗಳ ಝಣತ್ಕಾರ ಕೇಳಿಸಿದರೂ ಕವಿ ನಿರಾಶನಾಗುವುದಿಲ್ಲ. ಆ ಊರು ಗೊಂದಲಪುರವಾಗಿ ಆತನಿಗೆ ತೋರುವುದಿಲ್ಲ. ಹಿಮಗಿರಿಯ ಕಂದರವನ್ನಾತ ಬಯಸುವುದಿಲ್ಲ. ಹೋರಾಡುವ ಜನ ಹೊಸ ಇತಿಹಾಸವನ್ನು ಬರೆಯುತ್ತಿರುವ ಹಾಗೆ ಆತನಿಗೆ ಭಾಸವಾಗುತ್ತದೆ. ಈ ಭೂಮಿಯಲ್ಲಿ ವೀರರ ಜನನವನ್ನು ಆತ ಕಾಣುತ್ತಿದ್ದಾನೆ. ಷಂಡರ ಉದಯವನ್ನಲ್ಲ. ಸುತ್ತುಮುತ್ತಲೂ ಇರುವುದು ಕಾರ್ಗತ್ತಲೆ ಯಾದರೂ ಚಿರಂತನ ಆಶಾವಾದಿಯಾಗಿ ನಾಳೆಯ ಮುಂಬೆಳಗನ್ನು ಕವಿ ಇದಿರು ನೋಡುತ್ತಾನೆ." ಎನ್ನುತ್ತಾರೆ. ಹೊಸ ಇತಿಹಾಸವನ್ನು ಬರೆಯುವುದರಲ್ಲಿ ಬರೆಹಗಾರ - ಕಲಾವಿದರ ಜವಾಬ್ದಾರಿಯನ್ನು ಹೀಗೆ ಗುರುತಿಸುತ್ತಾರೆ. ಮಾನವ ಪ್ರಯತ್ನದಿಂದಲೇ ಈ ಸಮಾಜದ ಬದಲಾವಣೆ ಸಾಧ್ಯ ಎಂಬ ನಿಲುವು ಅವರದು. 'ಸಮಾಜದೊಳಗೇ ಯತ್ನ ಸಾಗಬೇಕು - ಒಳಿತಿನ ಕೈ ಮೇಲಾಗುವಂತೆ, ಕತ್ತಲೆ ತೊಲಗಿ ಬೆಳಕು ಬರುವಂತೆ.' 'ನಿರಾಶೆ ಎಂದೂ ಸಲ್ಲದು.... ನಿರಾಶೆಯ ಆ ಭಾವನೆಯನ್ನು ಇದಿರಿಸಿ ಹೊಸ ಚೇತನ ತನ್ನ ಪ್ರಭುತ್ವ ಸ್ಥಾಪಿಸಬೇಕು.' ಈ ಆಶಾವಾದದ ಧೋರಣೆ ನಿರಂಜನರ ಬದುಕಿನ ಮೂಲಸತ್ವ.

ಹಿಂದಿ ಹೇರಿಕೆಯ ಪ್ರತಿಭಟನೆ ಅವರ ಅಂಕಣಗಳಲ್ಲೆಲ್ಲಾ ಕಾಣುವ ಒಂದು ಸಾಮಾನ್ಯ ವಸ್ತು (ದಿಲ್ಲೀಶ್ವರರ ದೃಷ್ಟಿಯಲ್ಲಿ ಕನ್ನಡ). ನಮ್ಮ ಎಲ್ಲಾ ಆರ್ಥಿಕ, ಸಾಮಾಜಿಕ ಯೋಜನೆಗಳು ಯಶಸ್ವಿಯಾಗಬೇಕಾದರೆ ಸಮಾಜದ ಬುಡದಲ್ಲಿನ ಸಾಂಸ್ಕೃತಿಕ ಪದರುಗಳಲ್ಲಿ ಬದಲಾವಣೆ ತೋರಿಬರಬೇಕು ಎನ್ನುವ ಮೂಲಭೂತ

ಸಿದ್ಧಾಂತಕ್ಕೆ ಒತ್ತುಕೊಟ್ಟು 'ವಿಶ್ವಕವಿ ವರ್ಧಂತಿ ವೈಖರಿ'ಯಲ್ಲಿ ಹೀಗೆ ಬರೆದಿದ್ದಾರೆ: "ಇಲ್ಲಿ ನಮ್ಮ ದೃಷ್ಟಿ ಬದಲಾಗಬೇಕು. ಸಾಂಸ್ಕೃತಿಕ ಚಳುವಳಿಯೊಂದು ಕೆಲಸಕ್ಕೆ ಬಾರದವರ ಕಾಟಾಚಾರ ಎನ್ನುವ ಭಾವನೆ ರಾಜಕೀಯ ಜನರ ಮನಸ್ಸಿನಿಂದ ತೊಲಗಬೇಕು." 'ಚೋರೀ ಲಾಲರ ಹೊಸ ಅಂಗಡಿ', 'ನಮ್ಮ ಮೇಸ್ತ್ರು ನಮಗೆ ಬೇಕು', 'ಕರೆಗಂಟೆ ಕಳ್ಳ' - ಇವು ನಮ್ಮ ಮಾನವೀಯತೆಗೆ ಒಡ್ಡಿದ ಆಹ್ವಾನಗಳು..

'ಅಂಕಣ' (೧೯೭೨) ನಿರಂಜನರ ಅಂಕಣಸೃಷ್ಟಿಯ ಪರಮೋತ್ಕೃಷ್ಟ ಮಾದರಿ. ಡೆಮಿ ಅಷ್ಟದಳಾಕೃತಿಯ ೫೪೪ ಪುಟಗಳ ಈ ಗ್ರಂಥದ ಹರಹು ವಿಶ್ವಕೋಶ ಮಾದರಿಯದು. ೧೯೬೧–೧೯೬೬ ಈ ಕಾಲಾವಧಿಯಲ್ಲಿ 'ಪ್ರಜಾವಾಣಿ'ಯ 'ಬೇವು ಬೆಲ್ಲ' ಅಂಕಣದ ಸಂಚಯನ ರೂಪವೇ ಈ 'ಅಂಕಣ' ಕೃತಿ. ಈ ಬರೆಹಗಳು ಮೂಡಿದ ಕಾಲಕ್ಕೆ ತುಂಬ ಲಿಬರಲ್ ಆಗಿದ್ದಂತೆ ಕಾಣಿಸುತ್ತದೆ. ಮಾರ್ಕ್ಸ್‌ವಾದಿ, ಸಮಾಜವಾದಿ ಮುಂತಾದ ಎಲ್ಲ ಇಸಂಗಳನ್ನು ಅರಗಿಸಿಕೊಂಡೂ ಬದುಕಿಗೆ ಮಾತ್ರ 'ಬದ್ಧ'ನಾಗುವ ಪಕ್ವತೆ ಸಿದ್ಧಿಸಿತ್ತು. ಒಂದು ಕಾಲದಲ್ಲಿ ಮಾರ್ಕ್ಸ್‌ವಾದದ ಮೋಡಿಯ ಗುಂಗಿನಲ್ಲೇ ಬರೆಯುತ್ತಿದ್ದ ಅವರ 'ಅಂಕಣ'ದ 'ತನ್ನನ್ನು ತಾನೇ ಕಂಡ ಜಿಲಾಸ್', 'ಪ್ರೊ| ಫುಂಗರ ಬಂಧವಿಮೋಚನೆ', 'ಮನಸ್ಸಾಕ್ಷಿ ಮೆಚ್ಚಿದ ಸೇಬುಗಳು', 'ಚೀನಿ ಕವಿಗಳ ಪರ್ವತ ಗಾನ', 'ಆಸ್ಥಾನ ಕವಿಗೆ ಅರ್ಧಚಂದ್ರ' - ಇವುಗಳನ್ನು ಓದಿದವರು ಅವರು ಕಮ್ಯೂನಿಸ್ಟ್ ವಿರೋಧಿ ಎಂದುದುಂಟು. ಇದು ಕಮ್ಯೂನಿಸಂ ವಿರೋಧಿ ನೀತಿ ಅಲ್ಲ. ಮಾನವೀಯತೆಗೆ, ಸೃಜನಶೀಲತೆಗೆ ಕುತ್ತು ಬಂದಾಗ ಕಠೋರವಾಗುವ ದನಿ ಅವರದು. ಚೀನ, ಸೋವಿಯತ್ ನಾಡು ಎಂದೊಡನೆ ದಾಕ್ಷಿಣ್ಯ ತೋರಿಸಬೇಕೆಂದೇನು? ("ಮನುಷ್ಯನಿಗೆ ಕಮ್ಯೂನಿಸಂ ದೀಕ್ಷೆ, ಕುದುರೆಗೆ ಕಣ್‌ಪಟ್ಟಿ ಕಟ್ಟಿದ ಹಾಗೆ. ರೈಲು ಹಳಿಗಳ ಮೇಲೆ ಉಗಿಯಂತ್ರವನ್ನಿಟ್ಟು ಚಾಲನೆ ಕೊಟ್ಟ ಹಾಗೆ. ಕಲ್ಪಿಸಿಕೊಂಡಿರುವ ಗುರಿಯ ಕಡೆಗೆ ಅದರ ಓಟ ನೇರ, ಅಬಾಧಿತ" - 'ತನ್ನನ್ನು ತಾನೇ ಕಂಡ ಜಿಲಾಸ್' ಪುಟ 101.)

ಒಂದು ಕಾಲದಲ್ಲಿ ವೈಚಾರಿಕ ಹಾಗೂ ತಾರ್ಕಿಕ ಬೆಳವಣಿಗೆಗೆ ಹೆಸರಾಗಿದ್ದ ದೇಶ (ಚೀನ) ಮಾವೋ ಅವರ 'ಮುಖವಾಡ'ದ ಉಪಕ್ರಮಕ್ಕೆ ಒಳಗಾದುದನ್ನು ವಿವರಿಸುವ ಧಾಟಿ ಗದ್ಯವಾದರೂ ಕವಿತೆಯ ಮಾದರಿ. ಓದುಗರಲ್ಲಿ ಪರಿಣಾಮಕಾರಿ ಸಂವೇದನೆ ಮೂಡಿಸಬಲ್ಲ ಧಾಟಿ.

ಮಾವೊ ಘೋಷಣೆ ಕೇಳಿ ಮೊದಲು ದಂಗಾದ ಜನ, ಚೇತರಿಸಿಕೊಂಡ ಬಳಿಕ, ಮೆಲ್ಲ ಮೆಲ್ಲನೆ ತುಟಿಗಳನ್ನು ತೆರೆದರು. ಲೇಖನಿಗಳೂ ಕುಂಚಗಳೂ ತುಸು ಸರಾಗವಾಗಿ ಚಲಿಸಿದುವು. ಗಿಡ ಬಳ್ಳಿಗಳಲ್ಲೇ ಮುದುಡಿದ್ದ ನೂರು ಮೊಗ್ಗುಗಳು ನಾಚುತ್ತ ನಾಚುತ್ತ ಅರಳಿದುವು.

ಮೊದಲು ಅಳುಕುತ್ತ, ಬಳಿಕ ತುಸು ಧೈರ್ಯವಾಗಿ,ವಿವಿಧ ವಿಚಾರಸರಣಿಗಳು ತಾಕಲಾಡಿದುವು. ಮುಂದೆ ಏನಾಯಿತು?

* * * *

ಕಳೆದುದು ಆರೆಂಟು ತಿಂಗಳು.

ಮೀನುಗಳೆಲ್ಲ ಕಾಣಿಸಿದೊಡನೆಯೇ ಬೆಸ್ತ ಬಲೆ ಬೀಸಿದ. ಎಂಥೆಂಥ 'ಪ್ರತಿಗಾಮಿ' ಮೀನುಗಳು ಮಾವೋಗೆ ದೊರೆತುವು! ಪುಷ್ಪೋದ್ಯಾನದ ಕಡೆಗೆ ತೋಟಗಾರ ಧಾವಿಸಿದ. ಅರಳಿದ ಹೂಗಳನ್ನೆಲ್ಲ ಕಿತ್ತು ಬುಟ್ಟಿಗೆ ತುಂಬಿಸಿದ.

ಗಿಡಬಳ್ಳಿಗಳು ಬಾಡಿದುವು. ಅರಳದೇ ಇದ್ದ ಮೊಗ್ಗುಗಳು ಮುರುಟಿಕೊಂಡವು. ವಿವಿಧ ವಿಚಾರ ಸರಣಿಗಳು ಆವಿಯಾಗಿಹೋದುವು.

'ಚೀನವೀಗ ಶುಚಿರ್ಭೂತವಾಗಿದೆ' ಎಂದು ಸಾರಿತು, ಚೀನಿ ಕಮ್ಯುನಿಸ್ಟ್ ಪಕ್ಷ.

ಬಿಡುಗಡೆ ಹೊಂದಿದ್ದ ಬಂದಿಗಳ ಬೆನ್ನ ಹಿಂದೆಯೇ ಇದ್ದುವು, ಸಶಸ್ತ್ರ ನೆರಳುಗಳು. ಆಯಕಟ್ಟಿನ ಸ್ಥಳದಲ್ಲಿ, ಆ ನೆರಳುಗಳೆಂದುವು: 'ಕೈಗಳನ್ನು ಮೇಲಕ್ಕೆತ್ತಿ.' ('ಅಂಕಣ' ಪುಟ 130)

* * * *

'ಕಳೆದ ಒಂದು ದಶಕದಲ್ಲಿ (೧೯೬೨) ವಿಚಾರವಂತರನ್ನೆಲ್ಲ ಕಮ್ಯೂನಿಸಂನ ಎಣ್ಣೆಯ ಗಾಣಕ್ಕೆ ಮಾವೊ-ತ್ಸ-ತುಂಗ್ ಹೂಡಿದ ರೀತಿ'ಯ ಒಂದು ವಾಸ್ತವ ಚಿತ್ರಣ ಇಲ್ಲಿ ದೊರೆಯುತ್ತದೆ. "ಚೀನದಲ್ಲಿ ಮೆದುಳು ಹೃದಯಗಳೆರಡನ್ನೂ ಕಿತ್ತು ಪರಮಗುರುವಿನ ಪದತಲಕ್ಕೆ ಒಪ್ಪಿಸಬೇಕು. ಹಾಗೆ ಒಪ್ಪಿಸಿದಾಗಲೇ ತನ್ನ ಬಂಧ ವಿಮೋಚನೆಯಾಯ್ತು ಎಂದು ಶಿಷ್ಯನಿಗೆ ಭಾಸವಾಗುತ್ತದೆ" - ಇಂತಹ ವಿವರಣೆಗಳು ಹಲವರಿಗೆ ಕಮ್ಯೂನಿಸ್ಟ್ ವಿರೋಧಿ ನಿಲವಾಗಿ ತೋರಿರಬೇಕು. ಅವರು ವಿರೋಧಿಸಿದ್ದು, ಕೆಲವು ನಿರ್ದಿಷ್ಟ ಧೋರಣೆಗಳನ್ನು ಮಾತ್ರ ಎಂಬುದನ್ನು ಗಮನಿಸಬೇಕು.

ಸೃಜನಶೀಲ ಸಾಹಿತಿ ಯಾವುದೇ ಏಕಧ್ಯೇಯಕ್ಕೆ ಬದ್ಧನಾಗುವುದು ಅವರಿಗೆ ಒಪ್ಪದ ಮಾತು. ಸ್ವಾತಂತ್ರ್ಯ ಅವನ ಉಸಿರಾಗಿರಬೇಕು. ಅದಿಲ್ಲದೆ ಹೋದಾಗ ದುರಂತ ಅನಿವಾರ್ಯ ಎಂಬ ಅಭಿಪ್ರಾಯ ಅವರದು. 'ಅಂಕಣ'ದ ಮಿಖೇಯಿಲ್ ಶೊಲೊಖೋವ್', 'ಆಸ್ಥಾನಕವಿಗೆ ಅರ್ಧಚಂದ್ರ' ಇವು ಅವರ ಆ ನಿಲವನ್ನು ಖಚಿತಪಡಿಸುತ್ತವೆ. ನಮ್ಮ ನಾಡಿನ ಕೆಲವು ಧೀಮಂತರು ನಿರಂಜನರ ಈ ನಿಲವನ್ನು ವಿರೋಧಿಸಬಹುದು. (ಡಿ. ಆರ್. ನಾಗರಾಜ. ಒಕ್ಕೂಟ, ಪ್ರಗತಿಪಂಥ ಇತ್ಯಾದಿ - ನಿರಂಜನರ ವಿಚಾರಗಳು ೧೯೭೬) "ಜಾತಿ - ವರ್ಗಗಳಿರುವ ಸಮಾಜದಲ್ಲಿ ಸೃಜನಶೀಲ ಪ್ರಜ್ಞೆಗೆ ಸ್ವಾತಂತ್ರ್ಯ ಕೇವಲ ಕನಸು" - ಇದು ಡಾ| ಡಿ. ಆರ್. ನಾಗರಾಜ ಅವರ ಹೇಳಿಕೆ. ಇಂದಿರಾ ಗಾಂಧಿಯವರ 'ಗಂಡಾಂತರ ಕಾಲಾವಧಿ'ಯನ್ನು ಉಳಿದು ಇತರ ಕಾಲದಲ್ಲಿ ಭಾರತದಲ್ಲಿ ಕವಿ - ಕಲಾವಿದರಿಗೆ ರಶಿಯಾ - ಚೀನಗಳಲ್ಲಿ ಇರುವಂತೆ ನಿರ್ಬಂಧವಿಲ್ಲ ಎನ್ನುವುದು ಎಲ್ಲರೂ ಬಲ್ಲ ಮಾತು.

ನಮ್ಮ ದೇಶದ ಎಲ್ಲ ಸಾಧನೆ (ಸಾಹಿತ್ಯಕ, ಕಲೆ)ಯು ಕಮರಿರುವುದು ಸರಕಾರಿ ಗಾಲಿಯಡಿಗೆ ಸಿಕ್ಕಿ ನುಗ್ಗಾಗಿರುವ ಫಲವಾಗಿ ಎನ್ನುವುದು ನಿರಂಜನರ ಅಭಿಪ್ರಾಯ. ಸಮತಾವಾದಿ ರಾಷ್ಟ್ರಗಳು ಸಾಹಿತ್ಯ ಕಲಾ ಪ್ರಪಂಚದಲ್ಲಿ ಮುನ್ನಡೆ ಸಾಧಿಸಿಲ್ಲವೇ ಎಂದು ಕೆಲವರು ಕೇಳಬಹುದು. ಆದರೆ ನಮ್ಮ ದೇಶ ಸಮಾಜವಾದದ ಕಣ್ಕಾಪಿನಲ್ಲಿ ರಾಷ್ಟ್ರೀಕರಣದ ನೆಪದಲ್ಲಿ 'ಬಂಡವಾಳಶಾಹಿ'ಯನ್ನು ಬೆಳೆಯಿಸುತ್ತಿರುವ ದೇಶ. ಇಲ್ಲಿ ರಾಷ್ಟ್ರೀಕರಣ ಸಾಧಿಸಬೇಕಾದ ಸಾಧನೆಯನ್ನು ತೋರಿಲ್ಲ; ಗುರಿಯತ್ತ ಸಾಗುವ ಲಕ್ಷಣವನ್ನೂ ತೋರುತ್ತಿಲ್ಲ. ಪಠ್ಯಪುಸ್ತಕಗಳ ರಾಷ್ಟ್ರೀಕರಣ ತಂದ ಶಾಪ ವನ್ನು ವಿವರಿಸುವ ನಾಲ್ಕಾರು ಅಂಕಣಗಳು 'ಅಂಕಣ'ದಲ್ಲಿದೆ.

"ಪಠ್ಯ ಪುಸ್ತಕಗಳ ರಾಷ್ಟ್ರೀಕರಣದಿಂದ ವಿದ್ಯಾಕ್ಷೇತ್ರದ ಕಾಹಿಲೆ ಉಲ್ಬಣಗೊಳ್ಳುತ್ತದೆ. ▪ ಚಿಕಿತ್ಸೆಯ ಬದಲು ಬೇರೇನನ್ನಾದರೂ ಸರಕಾರ ಕೈಗೊಳ್ಳಬೇಕು" (ಪುಟ 357)

"ಸರಕಾರ ಮುಟ್ಟಿದ್ದೆಲ್ಲ ಕೆಡುಕು ಎನ್ನುತ್ತಾರೆ. ಇತರರ ವಿಷಯದಲ್ಲಿ ಹೇಗೇ ಇರಲಿ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಾತ್ರ ▪ ಮಾತು ಪೂರ್ತಿ ಸತ್ಯ" (ಪುಟ 55)

"ಅತ್ಯದ್ಭುತ ವೈಜ್ಞಾನಿಕ ಸಾಧನೆಗಳ ರಾಷ್ಟ್ರದಲ್ಲಿ ಕವಿ,ಕಿಲುಬು ಹಿಡಿದ ಸರಕಾರಿ ಪಾತ್ರೆ ಯಲ್ಲೇ ತನ್ನ ಅನ್ನ ಬೇಯಿಸಬೇಕಾಗಿರುವುದು (ಬೇಳೆ ಬೇಯಿಸುವುದಂತೂ ಅವನಿಗೆ ತಿಳಿಯದು) ಈ ಶತಮಾನದ ಮಹಾದುರಂತ." (ಪುಟ 220)

'ಅಂಕಣ'ದ ಬರೆಹಗಳಲ್ಲಿ ಕವಿ - ಕಲಾವಿದರನ್ನು ಕುರಿತವುಗಳದು ಸಿಂಹ ಪಾಲು. ಯಾವುದೇ ನೆಪದಲ್ಲಿ (ಹುಟ್ಟುಹಬ್ಬ, ಪ್ರಶಸ್ತಿಗಳಿಕೆ ಇತ್ಯಾದಿ ಇತ್ಯಾದಿ) ಆತನನ್ನು ಹೊಗಳಿ ಹೊನ್ನಶೂಲಕ್ಕೆ ಹಾಕುವುದು ಇಲ್ಲಿನ ಧೋರಣೆಯಲ್ಲ. ಬದುಕಿನ ಮಹಾಸಂಭವದಲ್ಲಿ ಆತ ವಿಶಿಷ್ಟನಾಗಿ ಎದ್ದು ಬಂದಾಗ ಅವನ ಆ 'ವಿಶಿಷ್ಟತೆ'ಯನ್ನು ಗುರುತಿಸುವ ಪ್ರಯತ್ನ ಅವರದು. ಉದಾಹರಣೆಗೆ 'ಹೊಸಧ್ವನಿ - ಜರ್ಮನಿಯ ಡೀಟ್ರಿಶ್ ಕ್ರುಶೆ','ರುಗ್ಣಶಯ್ಯೆಯಲ್ಲಿ ಸಾಹಿತ್ಯ 'ದೈತ್ಯ'(ರಾಹುಲ್ ಸಾಂಕೃತ್ಯಾಯನ), 'ಗುಮ್ಮಟನಿಗೆ ಮನ್ನಣೆ' (ಮ. ಪ್ರ. ಪೂಜಾರ), 'ತನ್ನನ್ನು ತಾನೇ ಕಂಡ ಜಿಲಾಸ್', 'ಅವಿಶ್ರಾಂತ ಜೀವ-ಆರ್ಥರ್ ಕ್ಲಾರ್ಕ್', 'ವಿಶ್ವರಂಗದಲ್ಲಿ ಸ್ಟೀನ್‌ಬೆಕ್', 'ಭಾರತರತ್ನ ಕಾಣೆ', 'ಮಹಾಕ್ಷತ್ರಿಯಗೆ ನಮನ', 'ಮಿನುಗುವ ನಕ್ಷತ್ರ' (ಹಕ್ಸ್ಲಿ) ಇತ್ಯಾದಿ.

'ಅಂಕಣ'ದ ಹೊತ್ತಿಗೆ ನಿರಂಜನರ ಭಾಷೆಯ ಸ್ವರೂಪವೂ ಬದಲಾಗಿದೆ. ವ್ಯಾಕರಣದ 'ಬೇಲಿ' ದಾಟಿ ಅವರ ಭಾಷೆ ಸಂವಹನಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಿದೆ. (ಕವಿಗೆ ಕರ್ಣಂ ಪ್ರಮಾಣಂ ವ್ಯಾಕರಣಂ ಅಲ್ತು - ಕುವೆಂಪು)

ಹಂಬಲ, ಶ್ರದ್ಧೆ, ನಡುನಡುವೆ ನಿರಾಶೆ, ಅದೃಷ್ಟ ಖುಲಾಯಿಸಿದಾಗ ಕೀರ್ತಿಕಾಂಚನ (ಪುಟ 11)

ತಾಯಿ ನುಡಿಯ ಮೂಲಕವೇ ಜ್ಞಾನಾರ್ಜನೆ, ಸಹಜವಾದ ನೈಸರ್ಗಿಕವಾದ ಕಾರ್ಯ ವಿಧಾನ.

"ಬೆಳೆಯುವ ಭಾಷೆ ಜೀವಂತ ಸಮಾಜದ ಲಕ್ಷಣ. ಈ ನಿತ್ಯ ಬೆಳವಣಿಗೆಗೆ ಕೆಲವೊಂದು ಕಟ್ಟುಪಾಡುಗಳು ತೊಡಕಾದರೆ ಅವುಗಳನ್ನು ಬಿಚ್ಚಿ ಹಾಕಬೇಕು" - ಎನ್ನುವ ಅವರ ಧೋರಣೆ ಸ್ವಾಗತಾರ್ಹವಾದುದು.

ಮೇಲುನೋಟಕ್ಕೆ 'ರಾಜಧಾನಿಯಿಂದ' (೧೯೬೫-'೬೭) ಕರ್ಮವೀರ ಪತ್ರಿಕೆಗಾಗಿ ಬರೆದ 'ವಸ್ತುನಿಷ್ಠ' ಟಿಪ್ಪಣಿ. ಆದರೆ 'ಅಲ್ಲಲ್ಲಿ ಗಾಂಭೀರ್ಯದ ಮುಖ ವಾಡದ ಸಂದಿನೊಳಗಿಂದ ಲೇಖಕನ ವ್ಯಕ್ತಿತ್ವ ಮುಗುಳುನಕ್ಕಿರುವುದುಂಟು. ಒಮ್ಮೊಮ್ಮೆ ಮೈಕೊಡವಿದಾಗ ಸೂಕ್ಷ್ಮ ವ್ಯಂಗ್ಯವೋ ವಿಡಂಬನೆಯೋ ಬರವಣಿಗೆ ಯಲ್ಲಿ ಬೆರೆತುದುಂಟು.' ಈ ಸಂಕಲನದ ಒಂದು ಅಂಕಣ ಒಂದೇ ವಿಷಯಕ್ಕೆ ಸೀಮಿತ ಎಂದಿಲ್ಲ. ಸಂಗತವಾದ ಬೆಳವಣಿಗೆ ಉಳ್ಳ ಬೇರೆ ಬೇರೆ ವಿಷಯಗಳು ಒಂದೇ ಅಂಕಣದಡಿಯಲ್ಲಿ ಬಂದಿರುವುದೇ ಹೆಚ್ಚು. ಒಂದು ವಾರದ ಕಾಲಾವಧಿಯಲ್ಲಿ ಬರೆಹಗಾರರ ಮನಸ್ಸನ್ನು ಸ್ಪಂದಿಸಿದ ಸಮಗತಿಯ ಹಲವು ವಿಚಾರಗಳಿಗೆ ಇಲ್ಲಿ ಆಸ್ಪದ ದೊರೆತಿದೆ. ಆದರೆ ವ್ಯಕ್ತಿಪ್ರಧಾನವಾದ ಬರೆಹಗಳು ಇಲ್ಲಿ ಹೆಚ್ಚು ತಲೆ ಹಾಕಿಲ್ಲ. ವಿಚಾರದ ಹಿನ್ನೆಲೆಯಲ್ಲಿ 'ವ್ಯಕ್ತಿ' ತಲೆಹಾಕಿರಬಹುದು ಅಷ್ಟೆ. ರಾಜ್ಯದ ರಾಜಧಾನಿಯೇ ಎಲ್ಲ ಬರೆಹಗಳಿಗೆ ನಿಮಿತ್ತ. ವಿಷಯ ಮಾತ್ರ ನಿಸ್ಸೀಮವಾಗಿ ಬೆಳೆಯುಬಹುದು. ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ, ಆರ್ಥಿಕ, ಸಾಮಾಜಿಕ, ಭಾಷಿಕ, ಧರ್ಮ, ತತ್ವಜ್ಞಾನ - ಹೀಗೆ ನೂರು ನೂರು ವಿಷಯಗಳಿಗೆ ಈ ಅಂಕಣ ತನ್ನೊಳಗೆ ಅವಕಾಶ ನೀಡಿದೆ. ಹೀಗೆ ೩೪೩ ಪುಟಗಳ ೧೧೩ ಅಂಕಣಗಳ ಸಂಕಲನ 'ರಾಜಧಾನಿಯಿಂದ'.

'ದಿನಚರಿಯಿಂದ' ೧೯೬೮–೭೦ರ ಕಾಲಾವಧಿಯಲ್ಲಿ ಇನ್ನಾದ ಪರವಾಗಿ 'ಕರ್ಮವೀರ'ದಲ್ಲಿ ಬರೆದ ಅಂಕಣಗಳು. ಹೆಸರೇ ಹೇಳುವಂತೆ ಹಿಂದಿನ ಅಂಕಣಗಳಿಗಿಂತ, ಭಿನ್ನಧಾಟಿಯಲ್ಲಿ ಬರೆಹಗಳು ಸಾಗಿವೆ. ಮಾತಿನ ಮೊನೆ, ವ್ಯಂಗ್ಯದ ಚೂಪು, ಕಚಗುಳಿಯಿಡುವ ವಿಚಾರದ ವೈಭವಕ್ಕೇನೂ ಕೊರತೆಯಿಲ್ಲ. 'ವೈಯಕ್ತಿಕತೆ'ಯ ಲೇಪನ, ಆರ್ದ್ರತೆಯ ನಂಟಿನಿಂದಾಗಿ ಬರೆಹಗಳು ಹೆಚ್ಚು ಆತ್ಮೀಯವಾಗುತ್ತವೆ. ಓದು ಗರಿಗೆ ಉಪಯುಕ್ತವಾಗಲೆಂದು ಲೇಖನಗಳನ್ನು 'ವ್ಯಕ್ತಿಪ್ರಧಾನ', 'ರಾಷ್ಟ್ರ - ನಾಡು', 'ಸರಕಾರ - ಸಾಹಿತ್ಯ', 'ಸರಸ - ಸಂಕಟ' - ಎಂದು ನಾಲ್ಕು ವಿಭಾಗ ಮಾಡಿದ್ದಾರೆ. 'ವ್ಯಕ್ತಿಪ್ರಧಾನ'ದಲ್ಲಿನ ಬರೆಹಗಳು ವ್ಯಕ್ತಿಚಿತ್ರಣಗಳ ಒಂದು ನೂತನ ಮಾದರಿ.

ವ್ಯಕ್ತಿವಿಶಿಷ್ಟತೆಯನ್ನು ನಾಲ್ಕೇ ಗೆರೆಗಳಲ್ಲಿ ಬಿಂಬಿಸಬಲ್ಲ ಸಮರ್ಥ ಕಲಾವಿದನ ಮಾದರಿ. ಎಲ್ಲ ಲೇಖನಗಳಲ್ಲೂ ನಿರಂಜನರ ವ್ಯಕ್ತಿವಿಶಿಷ್ಟವಾದ ವಿಶ್ಲೇಷಣೆಯ ಛಾಪು ಉಂಟು. ಒಬ್ಬನ ಬದುಕನ್ನೋ, ಘಟನೆಯನ್ನೋ, ಮಾತನ್ನೋ ಮೊದಲಿಗೆ ಹಿಂಜಿ ಹಿಂಜಿ ನಮ್ಮ ಮುಂದಿರಿಸುತ್ತಾರೆ. ಸಮಸ್ಯೆಯನ್ನು ನೇರವಾಗಿ ಎಲ್ಲ ಮಗ್ಗುಲುಗಳಿಂದ ನೋಡುತ್ತಾರೆ. ಕೊನೆಯಲ್ಲಿ ನ್ಯಾಯಾಧೀಶನಂತೆ ಒಂದು 'ನಿರ್ಧಾರ' ಪ್ರಕಟಿಸುವ ಚಪಲ ಎಲ್ಲೂ ಗೋಚರಿಸುವುದಿಲ್ಲ. ಓದುಗನನ್ನು ಚಿಂತನೆಗೆ ಹಚ್ಚುವ ರೂಪದಲ್ಲಿ ಒಂದು ಸೊಗಸಾದ ತಿರುವು ತರುವ ವಾಕ್ಯದೊಂದಿಗೆ ಲೇಖನವನ್ನು ಅಂತ್ಯಗೊಳಿಸುತ್ತಾರೆ.

ನಿರಂಜನರ ಸುಮಾರು ಎರಡು ಸಾವಿರ ಅಂಕಣಗಳಲ್ಲಿ ಕೇಳಿಸುವ ಪ್ರಧಾನ ಸ್ವರ ಬದುಕಿಗೆ ಬದ್ಧತೆ. ಪಂಥ, ಬಳಗ, ಪಕ್ಷಕ್ಕಿಂತ ಅಂತಃಸ್ಸಾಕ್ಷಿಯ ಧೋರಣೆಗೆ ಮೊದಲ ಮಣೆ. ನಾಡು, ನುಡಿ, ಕವಿ ಕಲಾವಿದರ ಬಗೆಗೆ ಅಪಾರ ಅನುಕಂಪೆ. ನಾಡಿನ ಸಾಂಸ್ಕೃತಿಕ ಚೌಕಟ್ಟು ಸಡಿಲಾದಾಗ ಮಿಡಿವ ಮನ - ಭಾವಾಗೀತಾತ್ಮಕತೆ, ಕನಸುತನ ಮೊದಮೊದಲ ಬರೆಹಗಳ ಗುಣ. ಮುಂದೆ ನಾಟಕೀಯತೆ, ವ್ಯಂಗ್ಯ, ವಿಷಾದ ಆ ಜಾಗವನ್ನು ಆಕ್ರಮಿಸಿಕೊಂಡವು. ನವುರಾಗಿ ಸಾಗುವ ಮಾತು ಕೆಲವೊಮ್ಮೆ ಕಠೋರವೂ ಆಗುತ್ತದೆ. ವಿಶ್ವವಿಚಾರಗಳ ಕಡೆಗೆ ಅವರು ದನಿ ಎತ್ತುವುದಿದ್ದರೂ ಕನ್ನಡ, ಕರ್ನಾಟಕದ ಬಗೆಗೆ ಧಕ್ಕೆ ಉಂಟಾಗಬಹುದಾಗಲೆಲ್ಲ ಅಪಾಯದ ಕರೆಗಂಟೆ ಬಾರಿಸಿದ್ದಾರೆ. ನಿಷ್ಠುರವಾಗಿ ನುಡಿಯಬೇಕಾದಾಗ ಸಿದ್ಧಾಂತದ ಹಿನ್ನೆಲೆಯಲ್ಲಿ ವಿರೋಧಿಸಿದ್ದಾರೆ.

ಅಂಕಣಗಳ, ಅದರಲ್ಲೂ ಇತ್ತೀಚಿನ ಮೂರು ಕೃತಿಗಳ ಗದ್ಯ ಕನ್ನಡ ಗದ್ಯ ಸಾಹಿತ್ಯಕ್ಕೆ ಬೆಲೆಬಾಳ್ವ ಕೊಡುಗೆ. ಜೊತೆಗೆ ಅಧ್ಯಯನಕ್ಕೆ ಒಂದು ವಸ್ತು ಕೂಡಾ. ಅಂಕಣಗಳ ಮೂಲಕ ನಿರಂಜನರ ವ್ಯಕ್ತಿತ್ವದ ಅರಸುವಿಕೆ ಸಮಗ್ರವಾಗಿ ನಡೆಯಬೇಕಾದ ಕೆಲಸ. ಆಗುವುದೋ ನೋಡಬೇಕು.*

ಟಿಪ್ಪಣಿ:

* ಈ ಲೇಖನ ಬರೆದಾದ ಮೇಲೆ ತಮ್ಮ ಅಂಕಣಗಳನ್ನು ಕುರಿತಂತೆ ಹಳೆಯ ನೆನಪುಗಳನ್ನು ಕುರಿತು ಬರೆವಂತೆ ನಿರಂಜನರಿಗೆ ನಾನು ಬರೆದ ಪತ್ರಕ್ಕೆ ಉತ್ತರ ಬಂತು. ಅದು ಹೀಗಿದೆ: 'ಸರೂ ಕೇಳಿದೆಯಾ?' (೧೯೪೫) ನನ್ನ ಮೊದಲ ಅಂಕಣ. ನನಗೆ ನೆನಪಿರುವಂತೆ 'ರಾಷ್ಟ್ರಬಂಧು'ವಿನಲ್ಲಿ ಕಡೆಂಗೋಡ್ಲು ಶಂಕರ ಭಟ್ಟರು 'ಅಲ್ಲಲ್ಲಿ ಇಷ್ಟಿಷ್ಟು' ಕಾಲಂ ಬರೆಯುತ್ತಿದ್ದರು. 'ಕುತರ್ಕ ವಾಚಸ್ಪತಿ' ಎಂಬ ಅಂಕಿತ ಇರುತ್ತಿತ್ತು. 'ವಾಹಿನಿ' ಸಾಪ್ತಾಹಿಕ ೧೯೪೬ರಲ್ಲಿ ಆರಂಭವಾಯಿತು. ಹುಬ್ಬಳ್ಳಿ ಸೇರಿದ್ದ ನಾನು ಅದನ್ನು ಓದುತ್ತಿದ್ದೆ. 'ವಾಹಿನಿ'ಯು

ಹೊಣೆ ಹೊರುವಂತೆ ಚಿಂತಾಮಣಿ ಆಗ್ರಹಿಸಿದ್ದರು. ಒಪ್ಪಿರಲಿಲ್ಲ. ತ.ರಾ.ಸು. ಅದನ್ನು ಸೇರಿದ್ದರು. 'ತೋಚಿದ್ದು ಗೀಚಿದ್ದು' ಎಂಬ ಅಂಕಣ ಅವರು ಅದರಲ್ಲಿ ಬರೆಯುತ್ತಿದ್ದಂತೆ ನೆನಪು. ಆ ಮೇಲೆ ಸಿದ್ಧವನಹಳ್ಳಿ 'ಚಿಂತನ ಮಂಥನ' ಶುರುಮಾಡಿದರು. 'ವಾಹಿನಿ' ನಿಂತ ಮೇಲೆ ಅದು 'ಜನಪ್ರಗತಿ'ಗೆ ಬಂತು. ಅಲ್ಲಿ ಅಷ್ಟರಲ್ಲಿ ನನ್ನ 'ಸಾಧನ ಸಂಚಯ' ಮೊದಲಾಗಿತ್ತು. 'ಉಷಾ'ದಲ್ಲಿ 'ಸರೋಜ ಸಂಚಯ' ಒಂದು ವರ್ಷ (೧೯೪೬) ಬರೆದಿದ್ದೆ. ೧೯೫೧ರಲ್ಲಿ 'ಉಷಾ'ದಲ್ಲೇ 'ಸಾಧನ ಸಂಚಯ' ಆರಂಭಿಸಿ ಮೂರು ತಿಂಗಳ ಬಳಿಕ 'ಜನಪ್ರಗತಿ'ಯಲ್ಲಿ ಮುಂದುವರಿಸಿದೆ. (ಪತ್ರ ೨-೯-೧೯೪೬)

ಲಿಂಗಾಧರಿತ ಅಸಮಾನತೆ : ನಿರಂಜನರ ದೃಷ್ಟಿಕೋನ

–ವಿಜಯಾ ದಬ್ಬೆ

ಈ ಶ್ರೇಣೀಕೃತ ಸಮಾಜ ವ್ಯವಸ್ಥೆಯ ತಳಪಾಯ ಅನೇಕ ಅಸಮಾನ ನೆಲೆಗಳ ಮೇಲೆ ನಿಂತಿದೆ. ವರ್ಣಾಧರಿತ, ಆರ್ಥಾಧರಿತ ಅಸಮಾನತೆಗಳ ನೆಲೆಗಳಂತೆಯೇ ಮುಖ್ಯವಾದ ಹಾಗೂ ಅದೇ ಬಗೆಯ ಅಮಾನವೀಯ ಕ್ರೌರ್ಯಕ್ಕೆ ಕಾರಣವಾಗುವ ಒಂದು ನೆಲೆ ಲಿಂಗಾಧರಿತ ಅಸಮಾನತೆ. ಈ ನೆಲೆ ಚಿಮ್ಮುವ ಅನೇಕ ಸಿಕ್ಕು, ಕ್ರೌರ್ಯ, ವಂಚನೆ, ನೋವುಗಳು ನಮ್ಮ ಬದುಕಿನ ಕರಾಳ ಮುಖದ ಅವಿಭಾಜ್ಯ ಅಂಗವಾಗಿದ್ದರೂ ಆಧುನಿಕಪೂರ್ವ ಕನ್ನಡಸಾಹಿತ್ಯ ಇದಕ್ಕೆ ಸ್ಪಂದಿಸಿರುವ ರೀತಿ ಇಂದಿನ ನಮಗೆ ತೀರ ನಿರಾಶಾದಾಯಕ. ಹಾಗಾಗಲು ಸ್ಪಷ್ಟವಾದ ಕಾರಣಗಳಿವೆ. ಪರದ ನೆರಳಿನಲ್ಲಿಯೋ ಸಿಂಹಾಸನದ ಅಡಿಯಲ್ಲಿಯೋ ತಮ್ಮ ಲೇಖನಿಗಳನ್ನು ಓಡಿಸಬೇಕಾಗಿ ಬಂದ ಆ ಲೇಖಕರು ಈ ಅಸಮಾನತೆಯ ಆಳಕ್ಕೆ ಹೋಗಲು ಬೇಕಾದ ಬೌದ್ಧಿಕ, ಭೌತಿಕ ಸಂದರ್ಭ, ಸಿದ್ಧತೆಗಳು ಇರಲಿಲ್ಲ. ಈ ಅಪೇಕ್ಷಿತ ಪ್ರಯತ್ನ ಕನ್ನಡದಲ್ಲಿ ಪ್ರಾರಂಭವಾದ್ದು ಆಧುನಿಕ ಕಾಲದಲ್ಲಿ. ಆಧುನಿಕ ಸಾಹಿತ್ಯದ ಮೊದಲ ಹಂತವಾದ ನವೋದಯ ಸಾಹಿತ್ಯದ ಬೇರುಗಳು ಇಂಗ್ಲಿಷಿನ ರೊಮ್ಯಾಂಟಿಕ್ ಸಾಹಿತ್ಯ, ಅರವಿಂದ, ಪರಮಹಂಸ, ಗಾಂಧೀವಾದ ಮೊದಲಾದವುಗಳಲ್ಲಿ ಇದ್ದು, ಈ ಅಸಮಾನತೆಯ ನೆಲೆಯನ್ನು ಭಾವುಕವಾಗಿ, ಅಸಮಗ್ರವಾಗಿ ವಿವರಿಸಿರುವುದನ್ನೇ ಬಹುಮಟ್ಟಿಗೆ ಕಾಣುತ್ತೇವೆ ಅಥವಾ ಯಾವ ನಿರ್ದಿಷ್ಟ ಉತ್ತರದತ್ತಲೂ ಕೈಚಾಚದ ಪ್ರಾಮಾಣಿಕ, ತೀವ್ರ ಪ್ರಶ್ನೆಗಳು ಕೇಳಿಬರುತ್ತವೆ. ಕನ್ನಡಸಾಹಿತ್ಯದ ಇತಿಹಾಸದ ಹೆಜ್ಜೆಗಳು ಈ ದಿಕ್ಕಿನಿಂದ ನಮಗೆ ಉಂಟುಮಾಡುವ ನಿರುತ್ಸಾಹದ ಮೂಲಕ ನಾವು ಹಾದುಬರುವಾಗಲೇ ಈ ಅಸಮಾನತೆಯ ನೆಲೆಯ ಆಳವಾದ ವಿಶ್ಲೇಷಣೆ, ಸಮಾನತೆಯ ಪ್ರತಿಪಾದನೆ ತನ್ನ ಆಶಯವೆಂದು ಹೇಳುತ್ತಾ ನಮಗೆ ಇದಿರಾಗುವ ಪ್ರಗತಿಶೀಲತೆ ನಮ್ಮಲ್ಲಿ ಹೊಸ

ಆಸೆಯನ್ನು ಮೂಡಿಸುತ್ತದೆ. ಆದರೆ ಅನೇಕ ಪ್ರಗತಿಶೀಲ ಲೇಖಕರ ಸತ್ತ್ವದಲ್ಲಿ ಪ್ರಗತಿಶೀಲತೆಯ ಹೊಳಹುಗಳಿದ್ದವೇ ಹೊರತು ಅವರ ಚಿಂತನದ್ರವ್ಯವೇ ಪೂರ್ಣವಾಗಿ ಪ್ರಗತಿಶೀಲ ಸತ್ತ್ವದಿಂದಾದ್ದಾಗಿರಲಿಲ್ಲ. ಇದರ ಪರಿಣಾಮವಾಗಿ ಪ್ರಗತಿಶೀಲವೆಂದು ಕೊಂಡು ಬಂದ ಕೃತಿಗಳಲ್ಲಿ ಅದಕ್ಕೆ ವಿರುದ್ಧವಾದ ಅನೇಕ ಅಂಶಗಳಿವೆ, ಕೆಲವು ಕೃತಿಗಳನ್ನಂತೂ ಯಾವ ಅರ್ಥದಲ್ಲಿ ಪ್ರಗತಿಶೀಲವೆನ್ನಬೇಕೋ ತಿಳಿಯುವುದಿಲ್ಲ. ವಸ್ತುಸ್ಥಿತಿಯ ಈ ಹತಾಶೆಯಲ್ಲಿ ಅಪವಾದದ ಬೆಳಕಾಗಿ ಹೊಳೆಯುತ್ತವೆ ನಿರಂಜನರ ಕೃತಿಗಳು. ಅವರ ಕೃತಿಗಳ ವಸ್ತು ಏನೇ ಇರಲಿ, ಅವುಗಳ ಗುಣಮಟ್ಟದಲ್ಲಿನ ಹೆಚ್ಚು ಕಡಿಮೆಗಳು ಏನೇ ಇರಲಿ ಅವರೆಲ್ಲ ಕೃತಿಗಳ ಹಿಂದೆ ಒಂದು ಸುಸಂಗತವಾದ, ಸತತವಾದ ಮಾನವತಾವಾದ ಹರಿಯುತ್ತದೆ. 'ಪ್ರಗತಿಶೀಲತೆ' ಎಂಬುದನ್ನು ವೈಯಕ್ತಿಕ ಚಟಕ್ಕಾಗಿ ಅಪವ್ಯಯ ಮಾಡದ ಲೇಖಕರು ನಿರಂಜನರು. ನಿರಂಜನರ ಕೃತಿಗಳಿಗೆ ಮುಂದಿನ ದಾರಿಗೆ ಬೆಳಕು ತೋರುವ ಇಚ್ಛೆಯಿದೆಯೇ ಹೊರತು ಹಿಮ್ಮುಖವಾಗಿ ಓದುಗರನ್ನು ಬೆಳಕಿನ ಭ್ರಮೆಯ ಕತ್ತಲೆಗೆ ತಳ್ಳುವ ಆಸೆಯಿಲ್ಲ. ಅಂತೆಯೇ ಅವರ ಕೃತಿಗಳಿಂದ ಇನ್ನೂ ಮುಂದೆ ನಾವು ಹೋಗಬಹುದು, ಆದರೆ ಅವರು ನಮ್ಮನ್ನು ಹಿಂದಕ್ಕೆ ತಳ್ಳುತ್ತಾರೆಂದು ದೂರಲಾರೆವು. ಲಿಂಗಾಧರಿತ ಅಸಮಾನತೆಯ ಬಗೆಗಿನ ನಿರಂಜನರ ಈ ಮುಮ್ಮುಖ ನೋಟದ ಕೆಲವು ಅಂಶಗಳನ್ನು ಪ್ರಸ್ತಾಪಿಸುವುದು ಈ ಕಿರುಲೇಖನದ ಆಶಯ.

'ಬನಶಂಕರಿ'ಯ ಬನಶಂಕರಿ, 'ಅಭಯ'ದ ತುಂಗಮ್ಮ, ಮತ್ತಿತರರು, 'ಸ್ಮರಣೆಯೊಂದೇ ಸಾಲದೆ'ಯ ಮೀನಾಕ್ಷಿ, 'ವಿಶಾಲಾಕ್ಷಿ'ಯ ವಿಶಾಲಾಕ್ಷಿ, 'ಹೆಣ್ಣಾಗಿ ಕಾಡಿತ್ತು ಮಾಯೆ'ಯ ದೇವಕಿ, 'ಕೊನೇ ನಮಸ್ಕಾರ'ದ ವಿಶಾಲಿ ಮೊದಲಾದವರ ಮೂಲಕ ನಿರಂಜನರು ಲಿಂಗಾಧರಿತ ಅಸಮಾನತೆಯ ನೆಲೆಯಿಂದ ಏಳುವ ಅನೇಕ ಸಮಸ್ಯೆಗಳನ್ನು ಕಾಣಿಸಿದ್ದಾರೆ, ಸಮಸ್ಯೆಯನ್ನು ಪರಿಹರಿಸಿಕೊಳ್ಳುವಲ್ಲಿ ಆಯಾ ಸಂದರ್ಭಗಳಲ್ಲಿ ಸಿಗಬಹುದಾದ ಕೆಲವು ಸಾಧ್ಯತೆಗಳನ್ನು ಸೂಚಿಸಿದ್ದಾರೆ. ಈ ಎಲ್ಲರ ಸಮಸ್ಯೆಗಳು ಕೇವಲ ಅವರವರ ಜೀವನಸಂದರ್ಭದಿಂದಷ್ಟೇ ಸೃಷ್ಟಿಯಾದುವಲ್ಲ, ಗಂಡು ಹೆಣ್ಣಿನ ನಡುವಿನ ದೈಹಿಕ ವ್ಯತ್ಯಾಸಗಳ ಮೂಲದಿಂದ ಪ್ರಾರಂಭವಾಗಿ ಅನೇಕ ಶತಮಾನಗಳಲ್ಲಿ ಸಾಗಿಬಂದ ನಮ್ಮ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳ ಇತಿಹಾಸದಲ್ಲಿ ಅವುಗಳ ಬೇರುಗಳಿವೆ. ಆದ್ದರಿಂದ ಈ ಸಮಸ್ಯೆಗಳ ಮೂಲೋತ್ಪಾಟನೆ ಮೂಲಭೂತವಾದ ವ್ಯತ್ಯಾಸಗಳನ್ನು ಬಯಸುತ್ತದೆ. ಈ ಸಮಸ್ಯೆಯ ವಿಷವೃಕ್ಷದ ಬೇರುಗಳಿಗೆ ನೀರೂಡುತ್ತಾ ಅದರ ರೆಂಬೆಕೊಂಬೆಗಳನ್ನು ಸವರುವುದರಿಂದ ಪ್ರಯೋಜನವಿಲ್ಲ. ಈ ಕುರಿತಾದ ನಮ್ಮ ಭಾವನಾತ್ಮಕ ಸ್ಪಂದನ, ಬಿಡಿಪ್ರಕರಣಗಳತ್ತ ನಮ್ಮ ಗಮನ ಅವಶ್ಯವಾದರೂ ಇದು ಕೇವಲ ಪ್ರಾಥಮಿಕ

ಪ್ರತಿಕ್ರಿಯೆ ಮಾತ್ರ ಎಂಬುದನ್ನು ನಾವು ಮರೆಯುವಂತಿಲ್ಲ. ಈ ಪ್ರಾಥಮಿಕ ಪ್ರತಿಕ್ರಿಯೆಯಿಂದ ನಾವು ಪರಿಸ್ಥಿತಿಯನ್ನು ಸುಧಾರಿಸಬಹುದೇ ವಿನಾ ಸಮಸ್ಯೆಯನ್ನು ಪರಿಹರಿಸುವುದು ಅಸಾಧ್ಯ. ಸುಧಾರಣೆಯ ಈ ಅನಿವಾರ್ಯತೆ ಮತ್ತು ಮಿತಿಗಳನ್ನೂ ಸುಧಾರಣೆ ಮತ್ತು ಬದಲಾವಣೆಯ ನಡುವಿನ ಅಂತರವನ್ನೂ ಸ್ಪಷ್ಟವಾಗಿ ಬಲ್ಲ ಲೇಖಕರು ನಿರಂಜನ: "ದುಡಿಯುವ ದುಡಿಸುವ ಆರ್ಥಿಕ ಸಂಬಂಧಗಳು ಬದಲಾಗಿ, ಹೆಣ್ಣು - ಗಂಡುಗಳ ಸಂಬಂಧದಲ್ಲಿ ಬದಲಾವಣೆಯಾಗಿ, ಬದುಕಿನ ಹೊಸ ಮೌಲ್ಯಗಳು ಸ್ಥಾಪಿತವಾಗುವ ತನಕ ಈಗಿನ ಸಮಾಜ ವ್ಯವಸ್ಥೆಯ ಪುನರ್ಘಟನೆಯಾಗುವ ತನಕ - 'ಅಸಂಖ್ಯ ಅಭಾಗಿನಿ'ಯರ ಪ್ರಶ್ನೆ ಬಗೆಹರಿಯಲಾರದೆಂಬುದು ನನ್ನ ಅಭಿಪ್ರಾಯ. ಸಮಾಜದ ಪುನರ್ಘಟನೆಯಾದೊಡನೆಯೇ ಕಾಮ ವ್ಯಭಿಚಾರಗಳ ಪ್ರಶ್ನೆ ಮಾಯವಾಗುವುದೆಂದು ನಾನು ಹೇಳುವುದಿಲ್ಲ. ಸಮಾಜದಲ್ಲಿ ಹಾಗಾಗಲು ಹೊಸ ಮಾನವನ ಉದಯವಾಗಬೇಕು. ಅದು ದೂರದ ಕನಸು.... 'ಅಭಯ' ಸದ್ಯಕ್ಕಂತೂ ನಮ್ಮ ಓದುಗರನ್ನು ವಿಚಾರಪರರಾಗಿ ಮಾಡಿದರೆ, ಸಹೃದಯ ಸ್ತ್ರೀ ಪುರುಷರಲ್ಲಿರುವ ಮಾನವೀಯ ಭಾವನೆಗಳನ್ನು ಮತ್ತಷ್ಟು ಸ್ಫುಟಗೊಳಿಸಿದರೆ, ನನಗೆ ಅಷ್ಟರಿಂದಲೇ ತೃಪ್ತಿ." [1] ಈ ಹೊಸ ಮನುಷ್ಯನ ಹುಟ್ಟು, ಆಮೂಲಾಗ್ರ ಬದಲಾವಣೆ ದೂರವಷ್ಟೇ ಏಕೆ ದೂರದೂರದ ಕನಸು. ಈ ಕನಸು ಅಷ್ಟು ದೂರವಾಗಿರುವುದರಿಂದ ಈಗಿನ ರೋದನಕ್ಕೆ ಅದು ಓಗೊಡಲಾರದು, ಆದ್ದರಿಂದಲೇ ಅಭಯಧಾಮಗಳು ವರ್ತಮಾನದ ಅನಿವಾರ್ಯಗಳಾಗಿವೆ. 'ಈಗಿನ ಸಾಮಾಜಿಕ ಚೌಕಟ್ಟಿನೊಳಗೇ ಸಂಸ್ಕಾರಗೊಳಿಸುವ' ಯತ್ನಗಳು ನಡೆಯುತ್ತಲೇ ಇವೆ. ಈ ವಾಸ್ತವ್ಯದ ಗ್ರಹಿಕೆ ನಿರಂಜನರಿಗಿರುವುದು ಈ ಕಾದಂಬರಿಯ ಚೌಕಟ್ಟಿನೊಳಗೂ ಅವರ ವೈಚಾರಿಕ ಬರಹಗಳಲ್ಲೂ ಸ್ಪಷ್ಟವಾಗಿದೆ. ಇಲ್ಲಿಯ ಸೋಮಶೇಖರನಂಥ ಪಾತ್ರಕ್ಕೆ ಅಭಯಧಾಮದ ಮಿತಿಗಳೂ ಗೊತ್ತು, ಅದರ ಪ್ರಸ್ತುತತೆಯೂ ಗೊತ್ತು. ಅಂತೆಯೇ ಒಂದೆಡೆ ಅಭಯಧಾಮದ ಬಗೆಗೆ ಅವನ ವಿಮರ್ಶೆ ಮತ್ತೊಂದೆಡೆ ಅದಕ್ಕೆ ಅವನ ಸಕ್ರಿಯ ಸಹಕಾರ. ಸರಸಮ್ಮನಂಥವರಿಗೆ ತಮ್ಮ ಪ್ರಯತ್ನಗಳ ಅನೇಕ ಪಾಲುಗಳು ವಿಫಲವಾಗುತ್ತಿರುವುದು ಅನುಭವಕ್ಕೆ ಬರುತ್ತದೆಯಾದರೂ ತಮ್ಮ ಪ್ರಯತ್ನಗಳನ್ನು ನಿಲ್ಲಿಸಲಾರರು. ಆದರ್ಶ, 'ದೂರದ ಕನಸು'ಗಳು ನಿರಂಜನರನ್ನು ತಮ್ಮೆಡೆಗೆ ಎಳೆಯುತ್ತವೆ. ಅದೇ ಹೊತ್ತಿಗೆ ಹತ್ತಿರದ ವಾಸ್ತವ್ಯ ತನ್ನೆಡೆಗೆ ಜಗ್ಗಿಕೊಳ್ಳುತ್ತದೆ. ಇದು ನಿರಂಜನರ, ನಿರಂಜನರಂಥ ಮನಸ್ಸುಳ್ಳವರ ಇಲ್ಲಿನ ಸ್ಥಿತಿಯಾಗಿವೆ. ಸುಧಾರಣೆ ಸಮಸ್ಯೆಗೆ ಪರಿಹಾರವಲ್ಲವಾದರೂ ಅಪರಿಹಾರ್ಯವಾಗಿದೆ. ಆದರೆ 'ಅಭಯ'ವು ಅಭಯಧಾಮದಾಚೆಗೂ ತನ್ನ ಕೈಯನ್ನು ಚಾಚಲು ಅಸ್ಪಷ್ಟವಾಗಿಯಾದರೂ ಯತ್ನಿಸಿರುವುದು ತುಂಬ ಮುಖ್ಯವಾದ ಸಂಗತಿ. ಅಭಯಧಾಮದ ಆಶ್ರಯದ ತೆಕ್ಕೆಗೆ ಬರುವ ಮಹಿಳೆಯರ ಸಮಸ್ಯೆಯ ಹಿಂದೆ ಆರ್ಥಿಕ, ಸಾಮಾಜಿಕ ಕಾರಣಗಳಿರುವುದನ್ನೂ ನಮ್ಮ

ವಿದ್ಯಾಭ್ಯಾಸ ಪದ್ಧತಿ, ನಮ್ಮ ಸಮೂಹ ಮಾಧ್ಯಮಗಳು, ನಮ್ಮ ಮೌಲ್ಯ ಪದ್ಧತಿ - ಈ ಎಲ್ಲವೂ ಆ ಸಮಸ್ಯೆಯ ಸೃಷ್ಟಿಯ ಹೊಣೆಯನ್ನು ಹೊರಲೇಬೇಕಾಗಿದೆ ಎಂಬುದನ್ನೂ ಕಾದಂಬರಿ ಸೂಚಿಸುತ್ತದೆ. ಆದರೆ ಈ ಮುನ್ನೋಟ ಕಾದಂಬರಿಯ ಕೊನೆಗೆ ಬಂದಾಗ ಎಲ್ಲೋ ನಿಂತಂತೆ ಭಾಸವಾಗುತ್ತದೆ. ಪ್ರೀತಿಸುವ ಸಹೃದಯಿ, ವಿಚಾರವಂತ ಜೀವನಸಂಗಾತಿಯಾಗಿ ದೊರಕುವುದು ಅನೇಕರ ಬದುಕಿನ ಅಪೇಕ್ಷಣೀಯ ಸಂಗತಿ. ಇಲ್ಲಿ ತುಂಗಮ್ಮನಿಗೆ ಅಂಥ ಸಂಗಾತಿ ದೊರಕಿದ್ದು ಹಾಗೆ ಅಪೇಕ್ಷಿಸಬಹುದಾದಂಥ ಘಟನೆಯೇ ಆಗಿದೆ. ಆದರೆ ತುಂಗಮ್ಮ ಈಗ ಪ್ರವೇಶಿಸುವ ಕೌಟುಂಬಿಕ ಚೌಕಟ್ಟು ಕೂಡ ಮಹಿಳೆಯರಿಗೆ ಸಮಸ್ಯೆಗಳನ್ನು ಒಡ್ಡುವಂಥದೇ ಆಗಿದೆ. ನಮ್ಮ ಈಗಿನ ಕುಟುಂಬ - ಸ್ವರೂಪದಲ್ಲಿ ಮದುವೆ ಒಂದು ಹಂತದ ಸಮಸ್ಯೆಗೆ ಮುಕ್ತಾಯ ಹಾಡುತ್ತಲೇ ಮತ್ತೊಂದು ಬಗೆಯ ಸಮಸ್ಯೆಗೆ ನಾಂದಿ ಹಾಡುತ್ತದೆ.ಈ ಸಮಸ್ಯೆ ಕೂಡ ಪ್ರಾರಂಭದಲ್ಲಿ ಸೂಚಿಸಿದ ಲಿಂಗಾಧರಿತ ಅಸಮಾನತೆಯ ನೆಲೆಯಿಂದಲೇ ಬಂದದ್ದು. ಆದ್ದರಿಂದ 'ತುಂಗಮ್ಮನಿಗೆ ಮದುವೆಯಾಯಿತೆಂದು ಅಂಥ ಎಲ್ಲರಿಗೂ ಆಗುವುದಿಲ್ಲ'.[3] ಎಂಬ ಮಾತಿನಲ್ಲಿ ಮದುವೆ ಈ ಸಮಸ್ಯೆಗೆ ದಾರಿ ಎಂಬ ಅರ್ಥಕ್ಕೆ ಎಡೆಗೊಟ್ಟೀತೇನೋ ಎಂಬ ತೆಳುವಾದ ಒಂದು ಸಂಶಯ ಸುಳಿದುಹೋಗುತ್ತದೆ· ತುಂಗಮ್ಮನಂಥ ಎಲ್ಲರಿಗೂ ಹಾಗೆ ಮದುವೆಯಾಗುವುದಿಲ್ಲವೆಂಬ ಸತ್ಯದಂತೆ ಹಾಗೆ ಆಗಲೂ ಬೇಕಿಲ್ಲ ಎಂಬ ಸಾಧ್ಯತೆಯ ಇರವಿನ ಸತ್ಯವನ್ನೂ ಗಮನಿಸಬೇಕಾಗುತ್ತದೆ. ಆದ್ದರಿಂದ ಒಂದು ದಿಕ್ಕಿನ ಸಾಧ್ಯತೆಯನ್ನು ಸಾರ್ವತ್ರಿಕವಾದ ಏಕೈಕ ಸಾಧ್ಯತೆ ಎನ್ನುವುದಕ್ಕಿಂತ ಅನೇಕ ಸಾಧ್ಯತೆಗಳಲ್ಲಿ ವೈಯಕ್ತಿಕವಾಗಿ ಆರಿಸಿಕೊಳ್ಳಬಹುದಾದ ಒಂದು ಸಾಧ್ಯತೆ ಅದು ಎಂದು ಮಾತ್ರ ಸೂಚಿಸಬಹುದು. ನಮ್ಮ ಗ್ರಹಿಕೆಯಲ್ಲಿ ಆಗಬೇಕಾಗಿರುವ ಈ ಬದಲಾವಣೆ ಸ್ತ್ರೀಯರ ಬಗೆಗಿನ ನಮ್ಮ ಮೌಲ್ಯಪದ್ಧತಿಯಲ್ಲಿನ ಮೂಲಭೂತ ಬದಲಾವಣೆಯನ್ನು ಬಯಸುತ್ತದೆ. ನಿರಂಜನರು ಈ ಸಾಧ್ಯತೆಯನ್ನು ಬಲ್ಲವರಲ್ಲವೆಂದು ನನ್ನ ಮಾತಿನ ಅರ್ಥವಲ್ಲ. ಆದರೆ ನಿರಂಜನರ ಕಾದಂಬರಿಗಳು ತೋರಿಸುವ ಬೆಳಕಿನಲ್ಲಿ ನಾವು ಮುಂದೆ ಹೋಗಬಹುದಾದ ದಾರಿಯನ್ನು ಮಾತ್ರ ಕುರಿತು ನಾನಿಲ್ಲಿ ಹೇಳುತ್ತಿದ್ದೇನೆ.

ಮನೆಯೊಳಗಿನ ದುಡಿಮೆಯನ್ನು ಹೆಂಗಸೂ ಮನೆಯ ಹೊರಗಿನ ದುಡಿಮೆಯನ್ನು ಗಂಡಸೂ ನಿರ್ವಹಿಸಲು ಪ್ರಾರಂಭಿಸಿ ಅದೆಷ್ಟೋ ಶತಮಾನಗಳು ಸಂದಿವೆ. ಅನಿವಾರ್ಯವಾದಾಗ ಈ ದುಡಿಮೆಯ ಕ್ಷೇತ್ರಗಳು ಸ್ವಲ್ಪ ಅದಲುಬದಲಾಗಬಹುದಾದರೂ ಸಾಂಪ್ರದಾಯಿಕವಾಗಿ ನಿಗದಿಯಾದ ಕ್ಷೇತ್ರಗಳಲ್ಲಿ ಗಂಡಸರು ಮತ್ತು ಹೆಂಗಸರು ತಮ್ಮ ತಮ್ಮ ಕಾರ್ಯನಿರ್ವಹಿಸುವುದೇ ಒಪ್ಪಿತ ಮೌಲ್ಯ. ಹೀಗೆ ನಿಗದಿಯಾದ ಕಾರ್ಯಕ್ಷೇತ್ರ ಹೆಂಗಸನ್ನು ಆರ್ಥಿಕ ಪರಾವಲಂಬನೆಗೆ ನೂಕಿತು ಹಾಗೂ ಮನೆಯ ಹೊರಗಿನ ಕ್ಷೇತ್ರಗಳು ಆಕೆಗೆ ಅಪರಿಚಿತವಾದವು. ಇದರಿಂದಾಗಿ ಗಂಡಿನ ಅನುಭವಲೋಕದ ಒಂದು ಮಗ್ಗುಲಿನ ಶ್ರೀಮಂತಿಕೆಯೂ ಕುಗ್ಗಿತು, ಗಂಡು ಹೆಣ್ಣಿನ

ನಡುವಣ ಸಾಹಚರ್ಯ, ಒಟ್ಟಾಗಿ ಮಾಡುವ ದುಡಿಮೆ, ಪರಸ್ಪರರನ್ನು ಕುರಿತ ತಿಳಿವಳಿಕೆ ಎಲ್ಲವೂ ಕುಂಠಿತವಾದವು. ಆರೋಗ್ಯಕರವಾದ ಸಮಾಜೀಕರಣ ಇಬ್ಬರಿಗೂ ತಪ್ಪಿತು. ಇದೆಲ್ಲದರ ಪರಿಣಾಮವಾಗಿ ಒಂದು ರೋಗಗ್ರಸ್ತ ಸಮಾಜ ಸೃಷ್ಟಿಯಾಯಿತು. ಇಂಥ ಪದ್ಧತಿಯನ್ನು ಸ್ವೀಕರಿಸಿದಂದಿನಿಂದ ಇಂದಿಗೆ ವೈಚಾರಿಕವಾಗಿ, ವೈಜ್ಞಾನಿಕವಾಗಿ ಮನುಷ್ಯ ಸಾಕಷ್ಟು ಮುನ್ನಡೆದಿದ್ದಾನೆ. ಆದರೂ ಹಳೆಯ ಮೌಲ್ಯದ ಭೂತ ನಮ್ಮನ್ನು ಕಾಡುವುದನ್ನು ಬಿಟ್ಟಿಲ್ಲ. ಮನೆಯ ಹೊರಗಿನ ದುಡಿಮೆ ಅವಳ ಕಾರ್ಯಕ್ಷೇತ್ರದ ವಿಸ್ತರಣೆಗೂ ಆರ್ಥಿಕ ಸ್ವಾತಂತ್ರ್ಯಕ್ಕೂ ತನ್ಮೂಲಕ ಅವಳ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗೂ ದಾರಿಮಾಡಿಕೊಡುತ್ತದೆ. ದುಡಿಮೆಯ ಕ್ಷೇತ್ರಗಳ ಬಗೆಗಿರುವ ಈ ಸಾಂಪ್ರದಾಯಿಕ ಪರಿಕಲ್ಪನೆಯಿಂದ ಈಚೆಗೆ ಬರಲು ನಮ್ಮ ಅನೇಕ ಲೇಖಕರು ಸಿದ್ಧರಿಲ್ಲ ಅಥವಾ ಇನ್ನೂ ಮುಜುಗರಪಡುತ್ತಿದ್ದಾರೆ. ಇದುವರೆಗೂ ಪುರುಷಕ್ಷೇತ್ರಗಳೆನಿಸಿಕೊಂಡ ದುಡಿಮೆಯ ಕ್ಷೇತ್ರಗಳಿಗೆ ಹೆಂಗಸು ಪ್ರವೇಶಿಸುತ್ತಿರುವುದಕ್ಕೆ ಹೊಂದಿಕೊಳ್ಳಲು ಸಮಾಜ ಇನ್ನೂ ಕಸಿವಿಸಿಪಡುತ್ತಿದೆ. ಸಮಾಜದಲ್ಲಿನ ಹೆಂಗಸಿನ ಈ ಹೊಸ ಮುಖವನ್ನು, ಬದಲಾಗುತ್ತಿರುವ ಆಕೆಯ ಪಾತ್ರವನ್ನು, ಅದರಿಂದಾಗಿ ಬದಲಾಗಬೇಕಾಗಿರುವ ಗಂಡಸಿನ ಪಾತ್ರವನ್ನು ಅರಗಿಸಿಕೊಳ್ಳುವುದು ಗಂಡಸಿಗೆ ಸುಲಭವಾಗಿಲ್ಲ. ಅದರಲ್ಲೂ ವೈಚಾರಿಕತೆಯ ಅಭಾವ, ಮಾನವೀಯ ಸಹಾನುಭೂತಿಯ ಕೊರತೆ ಇರುವ ಮನಸ್ಸು ಈ ಹೊಸ ನೋಟದಿಂದ ಹೇಗೆ ಜರ್ಜರಿತವಾಗುತ್ತದೆಂಬುದನ್ನು ೧೯೬೪ರಲ್ಲಿ ಪ್ರಕಟವಾಗಿರುವ ಎಸ್. ಎಲ್. ಭೈರಪ್ಪನವರ 'ನೆಲೆ' ಕಾಣಿಸುತ್ತದೆ. 'ಗಂಡಸಿನ' ದುಡಿಮೆಯ ಕ್ಷೇತ್ರವನ್ನು ಪ್ರವೇಶಿಸುವ ಹೆಂಗಸು ಮನುಷ್ಯಳಾಗಿಯೇ ಉಳಿಯುವುದಿಲ್ಲ ಎಂದು ಈ ಕಾದಂಬರಿ ಬೆದರಿಸುವಂತಿದೆ. ಇಂಥ ಪರಿಸ್ಥಿತಿ ನಮ್ಮ ಸಮಾಜದಲ್ಲಿ, ಸಾಹಿತ್ಯದಲ್ಲಿ ಇನ್ನೂ ಮುಂದುವರಿಯುತ್ತಿರುವಾಗ ೧೯೫೦ರಲ್ಲಿ ಪ್ರಕಟವಾದ 'ಸೌಭಾಗ್ಯ' ಕಾದಂಬರಿಯು ಮನೆಯ ಹೊರಗಿನ ಹೆಂಗಸಿನ ದುಡಿಮೆಯ ಪರವಾಗಿರುವುದು ನಿರಂಜನರ ವಿಚಾರಶೀಲ ಮನಸ್ಸಿನ ಮುನ್ನೋಟದ ಅಭಿವ್ಯಕ್ತಿ. ಇದಕ್ಕಿರುವ ಐತಿಹಾಸಿಕ ಮಹತ್ವ ಮತ್ತು ಪ್ರಸ್ತುತತೆ ಗಮನಿಸಲೇಬೇಕಾದ್ದು. ಮೀನಾಕ್ಷಿ, ವಿಶಾಲಾಕ್ಷಿಯಂಥವರು ಅನಿವಾರ್ಯವಾಗಿ ಹೊರಬಂದಿದ್ದಾರಾದರೂ ಮಹಿಳೆಯ ಮನೆಯ ಹೊರಗಿನ ಈ ದುಡಿತಕ್ಕೆ ಈ ಅನಿವಾರ್ಯತೆಯ ಒತ್ತಡ ಬೇಕಿಲ್ಲ ಎಂಬುದನ್ನು ನಿರಂಜನರು ಒಪ್ಪುತ್ತಾರೆ. 4 ಸಾಂಪ್ರದಾಯಿಕ ಸಮಾಜವ್ಯವಸ್ಥೆಯಿಂದ ವಿಭಿನ್ನವಾದ ಈ ಸ್ಥಿತಿಯನ್ನು ಒಪ್ಪಿಕೊಳ್ಳುವಾಗ ಪ್ರಾರಂಭದ ಹಂತದಲ್ಲಿ ಗಂಡಸಿಗೆ ಉಂಟಾಗಬಹುದಾದ ಮುಜುಗರವನ್ನೂ 'ಸೌಭಾಗ್ಯ'ದಲ್ಲಿ ಕಾಣಿಸಿದ್ದಾರೆ: "ತಮ್ಮದು ಮುಂದುವರಿದ ಮನೋವೃತ್ತಿ ಎಂಬುದು ಆತನ ದೃಢನಂಬಿಕೆಯಾಗಿತ್ತು. ಹಾಗಿದ್ದರೂ ರಮೆ ಉಪಾಧ್ಯಾಯಿನಿಯಾಗುವಳೆಂಬ ಅಂಶ ಮಾತಿನ ಬದಲು ನಿರ್ದಿಷ್ಟರೂಪು ತಳೆದಾಗ, ಚಿಕ್ಕ ಇರುವೆಯೊಂದು ಆತನ

ಹೃದಯವನ್ನು ಮೆಲ್ಲನೆ ಕಚ್ಚಿ ನೋಯಿಸಿದ ಹಾಗಾಗಿತ್ತು." 5 ಆದರೆ ಮರುಕ್ಷಣ ದಲ್ಲೇ ತನ್ನಲ್ಲಿ ಅಡಗಿದ್ದ ಹಳೆಯ ವಿಚಾರಗಳ ಬಗ್ಗೆ ಆಶ್ಚರ್ಯಪಟ್ಟ "ರಮಾ ದುಡಿಯಲು ಹೊರಟಿರುವಳೆಂದು ತಾನು ಸಂತೋಷಪಡುವುದರ ಬದಲು ಬೇಸರ ಗೊಳ್ಳುವುದೆಂದರೆ! ಆ ಪ್ರಕರಣ ತನ್ನ ಗಂಡಸುತನಕ್ಕೆ ಸವಾಲು ಹಾಕಿದೆಯೆಂದೆ? ಹೆಂಡತಿ ದುಡಿಯುವುದು ನನಗೆ ಅವಮಾನವೆಂದೆ?" 6 ಎಂದು 'ಸೌಭಾಗ್ಯ'ದ ನಾಯಕ ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಾನೆ. ಹೊರಗಿನ ದುಡಿಮೆಯ ಬಗೆಗಿರುವ ಹಳೆಯ ಮೌಲ್ಯಪದ್ಧತಿ ಗಂಡಸಿಗೂ ಕುತ್ತಾಗಬಲ್ಲದೆಂಬುದನ್ನೂ ನಿರಂಜನರು ಈ ಕಾದಂಬರಿ ಯಲ್ಲಿ ಸೂಚಿಸಿದ್ದಾರೆ. ಮಹಿಳೆಯ ಬಗೆಗಿರುವ ಮೌಲ್ಯಪದ್ಧತಿ, ಆಕೆಯನ್ನು ಸಮಾಜೀ ಕರಿಸುವ ವಿಧಾನ ಹೇಗೆ ಒಟ್ಟು ಸಮಾಜದ ಮೇಲೆಯೇ ಹಾನಿಕಾರಕ ಪರಿಣಾಮವನ್ನು ಬೀರುತ್ತದೆಂಬುದನ್ನು ನಿರಂಜನರು ತಮ್ಮ ಕಾದಂಬರಿಗಳಲ್ಲಿ ಕಾಣಿಸುವ ಯತ್ನ ಮಾಡಿರುವುದಕ್ಕೆ 'ಸೌಭಾಗ್ಯ'ವೂ ಒಂದು ನಿದರ್ಶನವಾಗಿದೆ.

ಲಿಂಗಾಧರಿತ ಅಸಮಾನತೆ ನಮ್ಮ ಸಮಾಜಕ್ಕೆ ಕೊಟ್ಟ ಫಲಗಳಲ್ಲಿ ವೇಶ್ಯಾ ಸಮಸ್ಯೆಯೂ ಒಂದು. ಶೋಷಣೆಗೆ ಒಳಗಾದ ವರ್ಗಗಳ ಬಗ್ಗೆ ಗಮನ ಹರಿಸುವ ಆಶಯದ ಪ್ರಗತಿಶೀಲ ಸಾಹಿತ್ಯ ಈ ಸಮಸ್ಯೆಯ ಬಗೆಗೂ ಸಹಜವಾಗಿ ತನ್ನ ಗಮನ ಹರಿಸಿತು. ಆದರೆ ಅನೇಕ ಸಂದರ್ಭಗಳಲ್ಲಿ ಲೇಖಕರ ಮನಸ್ಸಿನಾಳದ, ಪ್ರಗತಿಶೀಲತೆ ಯಿಂದ ಬಹುದೂರವಿದ್ದ ಸೆಲೆಗಳ ಸ್ಫೂರ್ತಿಯಿಂದ ಸ್ತ್ರೀಯ ದೇಹದ ವೈಭವೀಕರಣ, ಲಂಪಟತನದ ಅಭಿವ್ಯಕ್ತಿಗೂ ಕಾರಣವಾಯಿತು. ಇಂಥ ಪ್ರವೃತ್ತಿ ಉಕ್ಕೇರುತ್ತಿದ್ದ ಕಾಲದಲ್ಲಿ ನಿರಂಜನರ ಮುನ್ನೋಟ ಅದನ್ನು ಖಂಡಿಸಿತು. ಈ ನೋಟವನ್ನು ಅದು ಕೆಲಸ ಮಾಡಿದ ಪರಿಸರದ ಹಿನ್ನೆಲೆಯಲ್ಲಿ ಗಮನಿಸಿದರೆ ಅದರ ಪ್ರಾಮುಖ್ಯತೆ ನಮ್ಮ ಮನಸ್ಸನ್ನು ಮತ್ತಷ್ಟು ತಟ್ಟುತ್ತದೆ. ಆ ಪರಿಸರದ ಇಣಿಕುನೋಟಕ್ಕಾಗಿ ಈ ಸಮಸ್ಯೆ ಯನ್ನು ಕುರಿತು ಬರದದ್ದೆಂದು ಹೇಳಿಕೊಂಡು ಬಂದ ಅ.ನ.ಕೃ. ಅವರ ಪ್ರಸಿದ್ಧವಾದ 'ನಗ್ನಸತ್ಯ' ಮಾಲಿಕೆಯ ಕಾದಂಬರಿಗಳನ್ನು ಗಮನಿಸಬಹುದು. ಹೆಂಗಸನ್ನು ವೇಶ್ಯಾ ವಾಟಕ್ಕೆ ದೂಡುವಲ್ಲಿ ರಾಷ್ಟ್ರದ ಸಾಂಘಿಕ, ಆರ್ಥಿಕ, ನೈತಿಕವ್ಯವಸ್ಥೆ ಕಾರಣವೆಂದು ಆ ಮಾಲಿಕೆಯ ಮುನ್ನುಡಿಯಲ್ಲಿ ಲೇಖಕರು ಹೇಳುತ್ತಾರಾದರೂ ಕಾದಂಬರಿಯ ಒಳಮೈ ಯಲ್ಲಿ ಅವರು ಕಾಣಿಸಬಯಸುವ ಸಂಗತಿಯೇ ಬೇರೆ. 'ಸೂಳೆಯ ಬಾಳಿಗೆ ಸತ್ಯವೆಲ್ಲಿಂದ ಬರಬೇಕು ? ಕಮಲನ ರಕ್ತವೇ ಕೆಟ್ಟ ರಕ್ತ. ಅದರಲ್ಲಿ ಧರ್ಮ, ನೀತಿ, ಸ್ಥಿರಚಿತ್ತ ಹುಡುಕಿದರೆ ತಪ್ಪು ಯಾರದು?'.... ಎಂಬಂಥ ಕಾದಂಬರಿಯ ಘೋಷಿತ ಆಶಯಕ್ಕೆ ವಿರುದ್ಧವಾದ ಅಭಿಪ್ರಾಯಗಳಿಗೇ ಕಾದಂಬರಿಯಲ್ಲಿ ಹೆಚ್ಚಿನ ಸಮರ್ಥನೆ ದೊರಕಿದೆ. ಈ ಕಾದಂಬರಿ ವೇಶ್ಯಾಸಮಸ್ಯೆಗಿಂತ ಹೆಚ್ಚಾಗಿ ಇಂಥ ವೇಶ್ಯಾಸಮಸ್ಯೆಯನ್ನು ಹೋಗಿಸಿ ಅದರ ಬದಲಿಗೆ ಕಟ್ಟುನಿಟ್ಟಾದ ಏಕಪತಿತ್ವವನ್ನು ತರಲು ಇನ್ನಿಲ್ಲದ 'ತ್ಯಾಗ'

ಮಾಡಿ ಕೊನೆಗೆ ಜೀವವನ್ನೂ ಕೊಡುವ ನಾಯಕನ ವೈಭವೀಕರಣವಾಗಿದೆ. ಯಾವ ಪ್ರಗತಿಶೀಲ ದೃಷ್ಟಿಯೂ ಇಲ್ಲದ ಒಬ್ಬ ಸಂಪ್ರದಾಯವಾದಿ ಬರೆದಿದ್ದರೂ ಈ ಕಾದಂಬರಿಗಳು ಹೀಗೇ ಇರುತ್ತಿದ್ದವೆಂದು ತೋರುತ್ತದೆ. ಆದರೆ ಇಂಥ ವಸ್ತುವನ್ನು ಆರಿಸಿಕೊಂಡಾಗಲೂ ನಿರಂಜನರ ಲೇಖನಿ ಓಡುವ ಜಾಡು ಪ್ರಗತಿಶೀಲರಲ್ಲೇ ಅನನ್ಯವಾದ್ದು. ಈ ಮಾತಿಗೆ ನಿರಂಜನ ಸಾಹಿತ್ಯ ಒದಗಿಸುವ ನಿದರ್ಶನ ವಲಯಕ್ಕೆ 'ಕೊನೆಯ ಗಿರಾಕಿ' ಕೈಮರವಾಗಿದೆ. 'ಹೆಣ್ಣನ್ನು ವರ್ಣನಾರ್ಹ ವಸ್ತುವಾಗಿ ಇಟ್ಟುಕೊಂಡು, ವೈಭವಿಸುವುದಿದೆಯಲ್ಲಾ ಇದು ನಮ್ಮ ಸಮಾಜದ ಪ್ರಗತಿಗೆ ಮಾರಕ' [7] ಎಂಬ ಎಚ್ಚರ ಅವರೇ ಬರವಣಿಗೆಯಲ್ಲಿ ತೊಡಗಿದಾಗಲೂ ಮರೆಯಾಗುವುದಿಲ್ಲ. 'ನಂದಗೋಕುಲ' ಕಾದಂಬರಿಯಲ್ಲಿ ವೇಶ್ಯೆಯನ್ನು ನಂದಗೋಕುಲದಿಂದ ಓಡಿಸುವ ಪ್ರಸಂಗವು ಈ ಸಮಸ್ಯೆಯ ಬಗೆಗಿನ ಜನರ ಆಷಾಢಭೂತಿತನದಿಂದ ಕೂಡಿದ ಪ್ರತಿಕ್ರಿಯೆಗಳು, ಸಮಸ್ಯೆಯನ್ನು ತಮ್ಮ ಕಣ್ಣಿಂದಾಚೆಗೆ ದೂಡುವುದರಲ್ಲಷ್ಟೇ ಇರುವ ಸಮಾಜದ ಆಸಕ್ತಿ, ಜನರ ಹುಸಿ ಶುದ್ಧತೆಯ ಡೌಲು ಇವೆಲ್ಲವುಗಳ ಮಧ್ಯದಲ್ಲಿ ಈ ಸಮಸ್ಯೆ ವೈಚಾರಿಕ ವಿಶ್ಲೇಷಣೆಗೆ ಒಳಗಾಗದೆ ಬೇರುಸಮೇತ ಕಿತ್ತೊಗೆಯುವಿಕೆಯಿಂದ ದೂರ ಉಳಿದಿರುವ ಬಗೆಯನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ, ವಸ್ತುಸ್ಥಿತಿಯನ್ನು ನವಿರಾಗಿ ವಿಡಂಬಿಸುತ್ತದೆ. 'ಸ್ತ್ರೀಯ ಮಾನರಕ್ಷಣೆಯ ಹೊಣೆ ನಮ್ಮ ಮೇಲಿದೆ. ಭಾರತೀಯ ವೀರ ಪರಂಪರೆಯ ದಾಸಾನುದಾಸರಾಗಿರುವ ನಾವು ನಮ್ಮ ಕರ್ತವ್ಯವನ್ನು ದಕ್ಷತೆಯಿಂದ ಪಾಲಿಸೋಣ' [8] ಎಂಬ ಆ ವೇಶ್ಯೆಯನ್ನು ನಂದಗೋಕುಲದಿಂದ ಓಡಿಸುವ 'ಪವಿತ್ರ' ಕಾರ್ಯದಲ್ಲಿ ತೊಡಗಲಿದ್ದ ಗುಂಪಿನ ನಾಯಕನ ಮಾತುಗಳು ಆ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಸ್ಥಿತಿಯನ್ನು ಕುರಿತ ಮೊನಚಾದ ವಿಡಂಬನೆಯಾಗಿದೆ.

ಈ ಅಸಮಾನತೆಯ ನೆಲೆಯಿಂದ ಉದ್ಭವವಾಗುವ ಹತ್ತಾರು ಸಮಸ್ಯೆಗಳನ್ನು ಪ್ರತಿಮಿಸುವ ನಿರಂಜನರ ಸ್ತ್ರೀ ಪಾತ್ರ ಚಿತ್ರಣದಲ್ಲಿ ವಾಸ್ತವ್ಯಪ್ರಜ್ಞೆ ಮತ್ತು ಬಹುಕೋನಗ್ರಹಿಕೆ ಬಹುಮುಖ್ಯವಾಗಿ ಕೆಲಸ ಮಾಡುತ್ತವೆ. 'ಅಭಯ'ದ ಸರಸಮ್ಮ ಅಭಯಧಾಮದಲ್ಲಿ ಸಮಾಜದ ದೃಷ್ಟಿಯಿಂದ 'ದಾರಿತಪ್ಪಿದವರನ್ನು' ದಾರಿಗೆ ತರುವ ಆದರ್ಶದಿಂದ ಹಗಲಿರುಳು ದುಡಿಯುತ್ತಿದ್ದರೂ, ವಾಸ್ತವಲೋಕದ ಅಂಕುಡೊಂಕುಗಳು ತಮ್ಮ ಮೂಗಿನ ನೇರಕ್ಕಿಲ್ಲ ಎಂಬುದನ್ನು ಕಾಣುತ್ತಿರುವವರೇ ಆಗಿದ್ದಾರೆ. 'ಅಡ್ಡ ಹಾದಿ' ಬಿದ್ದು ಅಭಯಧಾಮ ಸೇರಿದ್ದ ಕನಕಲಕ್ಷ್ಮಮ್ಮನಿಗೆ ಮದುವೆ ಮಾಡಿಸಿದರೂ, ಅವಳು ಹಿಡಿದದ್ದು ಹಳೆಯ ಜಾಡನ್ನೇ; 'ಕಸಬಿ'ನ ಸುಮತಿ ಪ್ರತಿಭಟನೆ ಇಲ್ಲದೆ ಬಂದು ಅಭಯಧಾಮ ಸೇರಿದ್ದರೂ ಕೃಷ್ಣನಾಗಿ, ಬೇಟೆಗಾತಿಯಾಗಿ ನರ್ತಿಸಿದ ದಿನ ರಾತ್ರಿ 'ಸರಸಮ್ಮ ನೋಡಿದರು-ಸುಮತಿಯ ಹಾಸಿಗೆ ಖಾಲಿಯಾಗಿತ್ತು. ಆಕೆಯನ್ನು ಹುಡುಕುವುದು ಕಷ್ಟವಾಗಿರಲಿಲ್ಲ. ಲಲಿತೆಯ ಹಾಸಿಗೆಯಲ್ಲಿದ್ದ ಆಕೆ ಮೈಮುದುಡಿಕೊಂಡು, ಲಲಿತೆಗೆ ಅಂಟಿಕೊಂಡು' [9] - ಅಭಯಧಾಮದ ಈ ಮುಖಗಳೂ ಕಾದಂಬರಿಯಿಂದ

ತಪ್ಪಿಸಿಕೊಂಡಿಲ್ಲ. ತುಂಗಮ್ಮ, ಜಲಜನಂಥವರೂ ಅಲ್ಲಿದ್ದಾರೆ, 'ಕಸಬಿ'ಗೆ ಓಡಿ ಹೋಗುವ, ಕದಿಯುವ ಹುಡುಗಿಯರು, ಜೀವನ ನಿರ್ವಹಣೆಗೆ ಮಗಳನ್ನೇ ಸೂಳೆಗಾರಿಕೆಗೆ ತಳ್ಳುವ ತಾಯಿಯೂ ಅಲ್ಲಿದ್ದಾರೆ. 'ಅಭಯ'ದ ಸರಸಮ್ಮನ ವ್ಯಕ್ತಿತ್ವ, ಸಾಧನೆಯ ಇರವನ್ನು ಒಪ್ಪಿಕೊಳ್ಳುವ ನಿರಂಜನರೇ 'ಕೊನೇ ನಮಸ್ಕಾರ'ದ ಪುಟ್ಟವ್ವನ ಇರವನ್ನೂ ಕಾಣಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ 'ಆಕೆಗೂ ಈಕೆಗೂ ಇರುವುದು ಎರಡು ಧ್ರುವಗಳ ಅಂತರ'.[10] ಅಂತೆಯೇ ಸರಸಮ್ಮನನ್ನು ಆಶ್ರಯಿಸಿದ ತುಂಗಮ್ಮನಿಗೆ ಕಾಣುವ ದಾರಿಗೂ ಪುಟ್ಟವ್ವನನ್ನು ಆಶ್ರಯಿಸಿದ ವಿಶಾಲಿಗೆ ಕಾಣುವ ದಾರಿಗೂ ಅಜಗಜಾಂತರ. ಈ ವೈದೃಶ್ಯಪ್ರಪಂಚ ನಿರಂಜನರ ಕಣ್ಣಿಂದ ಮರೆಯಾಗುವುದಿಲ್ಲ. ಭೌತಿಕಸುಖ, ಆಡಂಬರಗಳ ಬೆನ್ನುಹತ್ತಿ ದುರಂತಗಳನ್ನು ಸೃಷ್ಟಿಸುವವರು ಗಂಡಸರಲ್ಲೆಂತೋ ಅಂತೆ ಹೆಂಗಸರಲ್ಲಿರುವುದನ್ನೂ ಅವರ ಜತೆಯಲ್ಲೇ ಬದುಕಿನ ದಳ್ಳುರಿಗೆ ಸಿಕ್ಕಿ ಸಾಮಾಜಿಕ ನ್ಯಾಯದಿಂದ ವಂಚಿತರಾಗಿ ದುರಂತಕ್ಕೆ ಈಡಾಗುವವರೂ ಇರುವುದನ್ನೂ 'ಹೆಣ್ಣಾಗಿ ಕಾಡಿತ್ತು ಮಾಯೆ'ಯ ತಾರಾ ಮತ್ತು ದೇವಕಿಯಂಥವರು ಬಿಂಬಿಸುತ್ತಾರೆ. ಈ ಎಲ್ಲ ವಾಸ್ತವ ಗ್ರಹಿಕೆಗಳನ್ನು ಬಿಚ್ಚುಮನದಿಂದ ನೋಡ ಬಯಸುವ ನಿರಂಜನರ ಆಶಯವೇ ಮಹತ್ತ್ವದ್ದೆಂದು ನನ್ನ ಅನಿಸಿಕೆ. ಯಾಕೆಂದರೆ ನಮ್ಮ ಸಾಹಿತ್ಯದಲ್ಲಿ ಒಂದಲ್ಲ ಒಂದು ಬಗೆಯ ವೈಭವೀಕರಣದಿಂದ ಸ್ತ್ರೀ ನರಳಿದ್ದಾಳೆ, ತಾಯಿಯಾಗಿ, ವೇಶ್ಯೆಯಾಗಿ, ವರ್ಣನೆಯ ಆಟಿಗೆಯಾಗಿ, ಕಾಮದ ಗೊಂಬೆಯಾಗಿ ವೈಭವೀಕರಿಸಲ್ಪಟ್ಟಿದ್ದಾಳೆ. ಅನೇಕ ಬಗೆಯ ಪೂರ್ವಗ್ರಹಗಳು ನಿಜವಾದ ಮಹಿಳೆಯ ಮೇಲೆ ಮುಸುಕೆಳೆದಿವೆ. ಒಂದಲ್ಲ ಒಂದು ಭಾವಾತಿರೇಕದ ಸೆರೆ ಅವಳಿಗೆ. ಇಂಥ ಸಂದರ್ಭದಲ್ಲಿ ಅವಳೆಲ್ಲ ವಾಸ್ತವ ಮುಖಗಳೊಂದಿಗೆ ಹೊರಬರಬೇಕಾದ ಅಗತ್ಯವಿದೆ.ಈ ಕೊರತೆಯನ್ನು ತುಂಬುವಲ್ಲಿ ನಿರಂಜನರಿತ್ತಿರುವ ಕೊಡುಗೆಗಳಲ್ಲಿ 'ಬನಶಂಕರಿ' ಮುಖ್ಯವಾದುದು. 'ಬನಶಂಕರಿ'ಗೆ ಇರಬಹುದಾದ ಮಾನವ ಸಹಜ ಕಾಮನೆಗಳನ್ನು ಅಲ್ಲಗಳೆದೇ ನಾವು ಆಕೆಯ ಬಗ್ಗೆ ಅನುಕಂಪೆ ತೋರಬೇಕಿಲ್ಲ ಎಂಬುದನ್ನು ಕಾಣಿಸಿದ್ದಾರೆ.

ಕುರುಡು ಪುರುಷ ಪ್ರಧಾನ ವ್ಯವಸ್ಥೆಯ ಪತಾಕೆಗಳಂತಿರುವ ನಮ್ಮ ನಿತ್ಯ ಜೀವನದ ಅನೇಕ ನಡವಳಿಕೆಗಳನ್ನು ವಿಮರ್ಶಿಸುವುದನ್ನು ನಿರಂಜನರ ಲೇಖನಿ ಮರೆಯುವುದಿಲ್ಲ. 'ಬನಶಂಕರಿ'ಯಲ್ಲಿ ಶಾಲೆಗೆ ಸೇರಿದಾಗ ತನ್ನ ತಂದೆಯ ಹೆಸರನ್ನು ಮಾತ್ರ ಬರೆದುಕೊಂಡಾಗ 'ನಮಮ್ಮಿ ಹೆಸರೂ ಬರ್ಕೊಳ್ಳಿ' ಎಂಬ ಬಾಲಕ ರಾಜಣ್ಣನ ಆಗ್ರಹವನ್ನು 'ಅಪ್ಪನ್ದೊಂದೇ ಸಾಕು ಕಣೋ' ಎಂದು ಆ ಮುಖ್ಯೋಪಾಧ್ಯಾಯರು ಶಾಂತವಾಗಿ ತಳ್ಳಿಹಾಕುತ್ತಾರೆ. ಇಡೀ ಕಾದಂಬರಿಯ ಹಿನ್ನೆಲೆಯಲ್ಲಿ ಈ ಪ್ರಸಂಗ ನಮ್ಮ ಕುರುಡು ವ್ಯವಸ್ಥೆಯ ಪುರುಷ ಪ್ರಾಧಾನ್ಯತೆಯನ್ನು ಮಾರ್ಮಿಕವಾಗಿ ಲೇವಡಿ ಮಾಡುತ್ತದೆ. ಇಂಥ ಪದ್ಧತಿಗಳು ಮಹಿಳೆಯರನ್ನೇ ಅಲಕ್ಷಿಸಿ, ಅವಮಾನಿಸುತ್ತಿದ್ದರೂ

ಆ ಎಚ್ಚರವಿಲ್ಲದೆ ಅವರೇ ಅಂಥ ರೂಢಿಗಳಿಗೆ ನೀರೂಡುವ ದುರಂತವನ್ನೂ ಗಮನಿಸುತ್ತಾರೆ: "ಜಲಜ ತಾರೆಯನ್ನು ಕರೆಯುತ್ತಿದ್ದುದು 'ಮಿಸೆಸ್ ಸದಾನಂದ' ಎಂದು - ತಾರೆಯ ಪಾಲಿಗೆ ಜಲಜ 'ಮಿಸೆಸ್ ರಾಜಶೇಖರ್!' ಪಾಪ, ಇವರಿಗೆ ಸ್ವಂತದ ಹೆಸರು-ವ್ಯಕ್ತಿತ್ವಗಳೇ ಇಲ್ಲವೇನೋ; ಇವರು ಗಂಡಂದಿರ ಬರಿಯ ಛಾಯೆಗಳೇನೋ - ಎಂದು ಯಾರಿಗಾದರೂ ಅನಿಸಬೇಕು" [11]

ಗಂಡುಹೆಣ್ಣಿನ ನಡುವೆ ಈಗಿರುವ ಅಸಮಾನತೆಯ ನೆಲೆಯನ್ನು ನಿರಂಜನರು ಸ್ಪಷ್ಟವಾಗಿ ಖಂಡಿಸುತ್ತಾರಷ್ಟೇ ಅಲ್ಲದೆ ಸಮಾನತೆಯ ನೆಲೆಯಿಂದ ಮತ್ತೂ ಮುಂದೆ ಹೋಗಿ ಮತ್ತೊಂದು ಅಸಮಾನತೆಯ ನೆಲೆಯಲ್ಲಿ ನಿಲ್ಲುತ್ತಾರೆ, ಸಮಾಜದಲ್ಲಿ ಗಂಡಸಿಗಿಂತ ಹೆಂಗಸಿನ ಪಾತ್ರ ಮಹತ್ತ್ವದ್ದೆನ್ನುತ್ತಾರೆ. 'ಹೆಂಗ್ಸು ಗಂಡಸಿಗಿಂತಲೂ ಮೇಲು. ಆಕೆ ಜವಾಬ್ದಾರಿ ಗಂಡಸಿಗಿಂತಲೂ ಹೆಚ್ಚು. ಹೊತ್ತು ಹೆತ್ತು ಸಂತಾನಾನಾ ಕಾಪಾಡೋರು ಯಾರು?' ಎಂಬುದು 'ಬನಶಂಕರಿ'ಯ ಸುಂದರಮ್ಮನ ಪ್ರಶ್ನೆ.[12] ಇದು ಕೇವಲ ನಿರಂಜನರ ಕಾದಂಬರಿಗಳ ಪಾತ್ರಗಳು ಎತ್ತುವ ಪ್ರಶ್ನೆಯಲ್ಲ, 'ನನ್ನ ದೃಷ್ಟಿಯಲ್ಲಿ ಗಂಡಿಗಿಂತ ಹೆಣ್ಣು ಸಮಾಜವ್ಯವಸ್ಥೆಯಲ್ಲಿ ಹೆಚ್ಚು ಮಹತ್ವದ ವ್ಯಕ್ತಿ. ಯಾಕೆಂದರೆ, ಹೆಣ್ಣಿಗೆ ಸಮಾಜದಲ್ಲಿ ವಿಶೇಷವಾದ ಜವಾಬ್ದಾರಿಗಳಿವೆ' [13] ಎಂಬುದು ನಿರಂಜನರ ದೃಷ್ಟಿ. ಹೆಣ್ಣಿನ ದೈಹಿಕರಚನೆಯ ಸ್ವರೂಪದಿಂದಾಗಿ ಸಮಾಜದಲ್ಲಿ ಹೆಂಗಸು ನಿರ್ವಹಿಸಬಹುದಾದ ಕೆಲವು ವಿಶೇಷ ಹೊಣೆಗಾರಿಕೆಗಳಿವೆ. ಅದಕ್ಕೊಂದು ಪರ್ಯಾಯ ವ್ಯವಸ್ಥೆಯನ್ನು ರೂಢಿಸುವ ಪ್ರಯತ್ನಗಳು ವಿಜ್ಞಾನರಂಗದಲ್ಲಿ ಕಣ್ಣು ತೆರೆಯುತ್ತಿವೆಯಾದರೂ ಸದ್ಯದ ಭವಿಷ್ಯದಲ್ಲಿ ವಸ್ತುಸ್ಥಿತಿ ಮುಂದುವರಿಯುತ್ತದೆ. ಆದರೆ ಸಂತಾನದ ಪೋಷಣೆಯ ಎಷ್ಟೋ ಜವಾಬ್ದಾರಿಗಳು ಗಂಡುಹೆಣ್ಣುಗಳಿಬ್ಬರೂ ಹಂಚಿಕೊಳ್ಳಬಹುದಾದವು/ಬೇಕಾದವು. ಹಾಗೆ ಮನೆಯ ಹೊರಗಿನ ಮತ್ತು ಒಳಗಿನ ದುಡಿಮೆಯ ಕ್ಷೇತ್ರಗಳನ್ನು ಗಂಡು ಮತ್ತು ಹೆಣ್ಣು ಮುಕ್ತವಾಗಿ ಹಂಚಿಕೊಳ್ಳುವುದು ಅವರಿಬ್ಬರ ಆರೋಗ್ಯಕ್ಕೂ ತನ್ಮೂಲಕ ಸಮಾಜದ ಆರೋಗ್ಯಕ್ಕೂ ಅವಶ್ಯವಾಗಿದೆ. ಈ ವಿನಿಮಯ, ಸಾಹಚರ್ಯ ಹೆಚ್ಚಿದಂತೆ ಹೆಂಗಸಿಗೆ ಸಂಬಂಧಿಸಿದಂತೆ ಇರುವ ಅರ್ಥಹೀನ, ಜೀವವಿರೋಧಿ ಮೌಲ್ಯಗಳು ಕುಸಿದು ಹೊಸ ಮಹಿಳೆಯ, ಹೊಸ ಮನುಷ್ಯನ, ಹೊಸ ಚರಿತ್ರೆಯ ಪುಟಗಳಿಗೆ ದಾರಿಯಾಗುತ್ತದೆ. ನಿರಂಜನರ ಹಾಗೂ ನಮ್ಮೆಲ್ಲರ ಈ 'ದೂರದ ಕನಸ'ನ್ನು ನನಸಾಗಿಸುವ ದಿಕ್ಕಿನಲ್ಲಿ ದುಡಿಯುವ ನಿರಂಜನರ ಬರಹಗಳು ಅಂದಿಗೂ ಇಂದಿಗೂ ಮುಂದಿಗೂ ಪ್ರಸ್ತುತ. ಈ ನಿರ್ದಿಷ್ಟ ಸಮಸ್ಯೆಯನ್ನು ಕಣ್ಣಿನಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯಚರಿತ್ರೆಯನ್ನು ಗಮನಿಸುವವರಿಗಂತೂ ನಿರಂಜನರ ಬರಹಗಳು ಒಂದು ಮುಖ್ಯ ಮೈಲಿಗಲ್ಲು. ○

ಟಿಪ್ಪಣಿಗಳು :

1. ಅಭಯ, ಕಥಾಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೭೬, ಪುಟ x.
2. ಅದೇ, ಪುಟ 192-194.
3. ಅದೇ, ಪುಟ x.
4. ಮುಖತಃ, ಸ್ಪಂದನ ಪ್ರಕಾಶನ, ಬೆಂಗಳೂರು, ೧೯೮೫, ಪುಟ 51.
5. ಸೌಭಾಗ್ಯ, ವಿದ್ಯಾನಿಧಿ ಪ್ರಕಾಶನ, ಮೈಸೂರು, ೧೯೫೪, ಪುಟ 29.
6. ಅದೇ, ಪುಟ 30.
7. ಮುಖತಃ, ಪೂರ್ವೋಕ್ತ, ಪುಟ 52.
8. ನಂದಗೋಕುಲ, ಕಥಾಸಾಹಿತ್ಯ, ಬೆಂಗಳೂರು, ೧೯೭೬, ಪುಟ 88
9. ಅಭಯ, ಪೂರ್ವೋಕ್ತ, ಪುಟ 104
10. ಕೊನೇ ನಮಸ್ಕಾರ, ವಿದ್ಯಾನಿಧಿ ಬುಕ್‌ಡಿಪೋ, ಮೈಸೂರು, ೧೯೫೫, ಹಿನ್ನುಡಿ
11. ಹೆಣ್ಣಾಗಿ ಕಾಡಿತ್ತು ಮಾಯೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೨, ಪುಟ 113
12. ಸುದರ್ಶನ ಪ್ರಕಾಶನ, ತಿಪಟೂರು, ೧೯೫೮, ಪುಟ 149
13. ಮುಖತಃ, ಪೂರ್ವೋಕ್ತ, ಪುಟ 47

೩ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಅಮೂಲ್ಯ ಕೊಡುಗೆ

-ಡಾ| ಬಿ. ಎ. ವಿವೇಕ ರೈ

ನಿರಂಜನರು ೧೯೪೨ರಿಂದ ೧೯೮೪ರ ವರೆಗಿನ ಅವಧಿಯಲ್ಲಿ ಸಾಹಿತ್ಯ ವಿಷಯಗಳಿಗೆ ಸ್ಪಂದಿಸಿದ ರೀತಿಯ ಸಮಗ್ರ ಪರಿಚಯವನ್ನು ಕೊಡುವ ಗ್ರಂಥ 'ಬುದ್ಧಿ ಭಾವ ಬದುಕು'. ಮೂವತ್ತಾರು ಲೇಖನಗಳುಳ್ಳ ಈ ಸಂಕಲನ ಸುಮಾರು ೪೨ ವರ್ಷಗಳ ಕಾಲಾವಧಿಯ ಕನ್ನಡ ಸಾಹಿತ್ಯದ ಆಗು-ಹೋಗುಗಳ ಪ್ರಾತಿನಿಧಿಕ ಕೃತಿಯಾಗಿ ಮಹತ್ತ್ವದ್ದಾಗಿದೆ. ಕನ್ನಡ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರವರ್ತಕರಲ್ಲಿ ಮುಖ್ಯರಾಗಿ ಮತ್ತು ಕನ್ನಡ ಪ್ರಗತಿಶೀಲ ಸಾಹಿತ್ಯ ಸೃಷ್ಟಿಯ ಪ್ರಮುಖ ಲೇಖಕರಾಗಿ ಕೆಲಸ ಮಾಡಿದ ನಿರಂಜನರ ಕಾಲಕಾಲದ ವೈಚಾರಿಕ ನೆಲೆಗಳನ್ನು ಈ ಲೇಖನಗಳಲ್ಲಿ ಕಾಣಬಹುದು. ಎಡಪಂಥೀಯ ಧೋರಣೆಗಳ ಮೂಲಕ

ಸಾಹಿತ್ಯದಲ್ಲಿ ಪ್ರಗತಿಯನ್ನು ಸಾಧಿಸಲು ಬಯಸಿದ ಪ್ರಯತ್ನದ ಮಹತ್ತ್ವಾಕಾಂಕ್ಷೆಯ, ಗೊಂದಲ, ಇತಿ-ಮಿತಿ ಸಾಧನೆ, ತಾತ್ತ್ವಿಕ ಭಿನ್ನತೆ ಇವುಗಳನ್ನು ಇಲ್ಲಿನ ಲೇಖನಗಳು ಕೊಡುವ ಕಾರಣವಾಗಿಯೇ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಇವು ಬಹು ಮುಖ್ಯ ಐತಿಹಾಸಿಕ ಮಹತ್ತ್ವವುಳ್ಳ ದಾಖಲೆಗಳಾಗಿವೆ. ಉತ್ಸಾಹ, ಕೆಚ್ಚು, ಆದರ್ಶಪ್ರಿಯತೆ, ಬಂಡಾಯ ಇಂತಹ ಗುಣಗಳ ನಿರಂಜನರು ಪ್ರಧಾನವಾಗಿ ಎಡ ಪಂಥೀಯ ಸಾಹಿತ್ಯ-ಸಂಸ್ಕೃತಿಯಿಂದ ಪ್ರಭಾವಿತವಾಗಿದ್ದರೆ ಅದು ನಿರ್ದಿಷ್ಟ ವೈಚಾರಿಕ ನೆಲೆಯಲ್ಲಿ ಬದುಕು ಮತ್ತು ಸಾಹಿತ್ಯಗಳನ್ನು ನೋಡುವ ಖಚಿತ ನಿಲುವನ್ನು ಉಳ್ಳದ್ದಾಗಿದೆ. ನಿರಂಜನರ ವೈಚಾರಿಕತೆಯ ಬೆಳವಣಿಗೆ ಮತ್ತು ಪಕ್ವತೆಯನ್ನು ಇಲ್ಲಿನ ಲೇಖನಗಳು ಹಂತ ಹಂತವಾಗಿ ದಾಖಲಿಸುತ್ತವೆ. 'ಬಿಡುಗಡೆಯ ಬೆಲೆ', 'ಕನ್ನಡ ಸಾಹಿತ್ಯದ ಪ್ರಗತಿಶೀಲರು ಎತ್ತ ಸಾಗಿದ್ದಾರೆ?', 'ಪ್ರಗತಿಶೀಲ ಸಾಹಿತ್ಯ - ಗೊತ್ತು ಗುರಿ', 'ಪ್ರಗತಿಶೀಲತೆಯ ಹುಟ್ಟು' ಇಂತಹ ಆರಂಭದ ಲೇಖನಗಳಲ್ಲಿ, 'ಕಮಿಟ್‌ಮೆಂಟ್ ಯಾರಿಗೆ? ಯಾವುದಕ್ಕೆ?', 'ಪ್ರಗತಿಪಂಥದ ಘೋಷಣೆ', 'ಕರ್ನಾಟಕ ಪ್ರಗತಿಪಂಥ ಸ್ಥಾಪನಾ ಸಮ್ಮೇಳನದ ಅಧ್ಯಕ್ಷ ಭಾಷಣ', 'ಪಂಥವೆಂದರೆ ದಾರಿ, ಮಾರ್ಗ, ಗುಂಪಲ್ಲ, ಮಠವಲ್ಲ' ಈ ಲೇಖನಗಳಲ್ಲಿ ವಿಚಾರ ಧೋರಣೆಗೆ ಇರುವ ಅಂತರ ಮತ್ತು ಬೆಳವಣಿಗೆಯನ್ನು ಗಮನಿಸಬೇಕು. ಸಾಹಿತ್ಯಪಂಥವನ್ನು ಒಂದು ಗುಂಪು ಅಥವಾ ಮಠವನ್ನಾಗಿ ಮಾಡಿ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ ಎನ್ನುವ ನಿಲುವು ನಿರಂಜನರ ಬಳಿಕದ ಬರಹಗಳಲ್ಲಿ ಹೆಚ್ಚು ಸ್ಪಷ್ಟವಾಗಿದೆ.

'ಸಾಹಿತ್ಯ ಮತ್ತು ಇತಿಹಾಸ ಪ್ರಜ್ಞೆ' ಎನ್ನುವ ಲೇಖನ ತಮ್ಮ ಸಾಹಿತ್ಯ ಮತ್ತು ಇತರ ಸಾಹಿತ್ಯಗಳನ್ನು ಆಧರಿಸಿಕೊಂಡು ಬಹಳ ತಾತ್ತ್ವಿಕವಾಗಿ ಬದುಕನ್ನು ಗ್ರಹಿಸುವ ಕೆಲಸವನ್ನು ಮಾಡಿದೆ. 'ಉತ್ತಮ ಬದುಕಿನ ಎತ್ತರಕ್ಕೆ ಸಾಹಿತ್ಯದ ಏಣಿ' ಎನ್ನುವ ಲೇಖನದಲ್ಲಿ ತಮ್ಮ ಬದುಕಿನ ಏಣಿಯ ಮೆಟ್ಟಲುಗಳನ್ನು ಗುರುತಿಸುತ್ತಾ ಸಾಹಿತ್ಯ ಶಕ್ತಿಯ ಮಹತ್ತ್ವವನ್ನು ನಿರಂಜನರು ತಿಳಿಸಿದ್ದಾರೆ - "ಬದುಕು ಎಷ್ಟೋ ಪಾಠಗಳನ್ನು ಕಲಿಸುತ್ತದೆ. ಬದುಕಿನಿಂದ ಪ್ರೇರಿತವಾದ ಸಾಹಿತ್ಯ ಕೂಡ. ಒಂದು ಕಾಲದ ಹುಚ್ಚು ಆದರ್ಶಗಳು ಬಾಳ್ವೆಯ ಮೂಸೆಯಲ್ಲಿ ಕರಕಾಗುತ್ತವೆ. ವಾಸ್ತವತೆಯೊಂದೇ ನಿತ್ಯ ಸವಾಲಾಗುತ್ತದೆ." "ಬಾಲ್ಯದ ಹುಚ್ಚು ಆವೇಶ ಈಗ ಇಲ್ಲ. ಆದರೆ ಆಸೆ ಆಗಿನದೇ. ಈಗಲೂ ಹೇಳುತ್ತೇನೆ: ಬದುಕನ್ನು ಒಳ್ಳಿತಿಗೆ ಬದಲಾಯಿಸಲು ಸಾಹಿತ್ಯ ನೆರವಾಗಬೇಕು." "ಪ್ರಜ್ಞಾವಂತ ಬರೆಹಗಾರ - ಕಾಲ, ಇತಿಹಾಸ, ಸಮಾಜ, ಪ್ರಗತಿಗಳ ಪ್ರಜ್ಞೆ ಇರುವ ಬರೆಹಗಾರ - ಅರ್ಥಪೂರ್ಣ ಸಾಹಿತ್ಯವನ್ನು ನಿರ್ಮಿಸಲು ಶಕ್ತ. ಅಂತಹ ಸಾಹಿತ್ಯದಿಂದ ಬದುಕು ಹಸನಾಗುತ್ತದೆ, ಮಾನವ ಉನ್ನತಿಯತ್ತ ಸಾಗುತ್ತಾನೆ."

ಆತ್ಮೀಯತೆ, ನೆನಪುಗಳು, ಒಟ್ಟು ಸೇರಿದ ಲೇಖನ 'ಸಾಹಿತ್ಯ ಪ್ರೇರಣೆಯ ಮೊದಲ ಹೆಜ್ಜೆಗಳು' ನಿರಂಜನರ ಸಾಹಿತ್ಯಪ್ರೇರಣೆಯ ಹೆಜ್ಜೆ ಗುರುತುಗಳನ್ನು ಬಹಳ ಸ್ವಾರಸ್ಯಪೂರ್ಣವಾಗಿ ಸೂಚಿಸುತ್ತವೆ. ತನ್ನ ಹದಿಮೂರನೆಯ ವರ್ಷದಲ್ಲಿ ೧೯೩೭ರಲ್ಲಿ ತುಳುಭಾಷಾ ಲೇಖಕನಾದ ನಿರಂಜನರ ಸಾಹಿತ್ಯದ ಪೂರ್ವಜನ್ಮದ ವಿವರಗಳು ಬಹಳ ಅಮೂಲ್ಯವಾದುವು. ಗ್ರಂಥದ 'ಬಂಧ ಅನುಬಂಧ' ಕಾಲಾನು ಕ್ರಮಣಿಕೆಯ ರೂಪದಲ್ಲಿ ನಿರಂಜನರ ಬದುಕಿನ ಹೆಜ್ಜೆಗುರುತುಗಳನ್ನು ಎಲ್ಲಾ ವೈಯಕ್ತಿಕ ವಿವರಗಳ ಸಹಿತ ಕ್ರಮ ಕ್ರಮವಾಗಿ ತಿಳಿಸುತ್ತವೆ. ೧೯೨೪ರಲ್ಲಿ ದಕ್ಷಿಣ ಕನ್ನಡದ ಕುಳುಕುಂದ ಹಳ್ಳಿಯಲ್ಲಿ ಜನಿಸಿದ ಶಿವರಾಯ ೧೯೪೬ರ ವರೆಗೆ ನಿರಂಜನರಾಗಿ ಬಳೆದುಬಂದ ಅಪೂರ್ವ ವಿವರಗಳು ಆತ್ಮೀಯ ದಿನಚರಿಯ ರೂಪದಲ್ಲಿ ಇಲ್ಲಿ ದೊರೆಯುತ್ತವೆ.

ಲೇಖಕನೊಬ್ಬನ ವೈಚಾರಿಕ ನಿಲುವು, ಸಾಹಿತ್ಯದ ಬಗ್ಗೆ ಆತನ ಧೋರಣೆಗಳು ತನ್ನ ಸಾಹಿತ್ಯಸೃಷ್ಟಿಯ ಬಗ್ಗೆ ಆತನೇ ಹೇಳಿಕೊಂಡ ಸಂಗತಿಗಳು, ತನ್ನ ಸಾಹಿತ್ಯಪ್ರೇರಣೆಯ ವಿವಿಧ ಮೂಲಗಳು ಮತ್ತು ಶಕ್ತಿಗಳು ಇಂತಹ ಅನೇಕ ಅಂಶಗಳು, ಸಾಹಿತಿಯೊಬ್ಬನ ಸಾಹಿತ್ಯ ಮೀಮಾಂಸೆಯನ್ನು ರೂಪಿಸುತ್ತವೆ. ಬೆಲಿನ್‌ಸ್ಕಿಯ ಕಾವ್ಯ ಮೀಮಾಂಸೆಯ ಕುರಿತ ಲೇಖನ ಬರೆದ ನಿರಂಜನರ ಸಾಹಿತ್ಯ ಮೀಮಾಂಸೆಯ ಸ್ವರೂಪವನ್ನು 'ಬುದ್ಧಿ ಭಾವ ಬದುಕು' ಸಂಕಲನದ ಲೇಖನಗಳು ಶ್ರುತಪಡಿಸುತ್ತವೆ. "ಒಮ್ಮೊಮ್ಮೆ ವಿಚಾರಗಳು ಕೈ ಕೈ ಮಿಲಾಯಿಸಿ ನನ್ನ ಮೆದುಳು ತಪ್ತವಾಗುತ್ತದೆ; ಕೆಲವೊಮ್ಮೆ ಭಾವೋದ್ವೇಗದಿಂದಲೂ ಬಿಸಿಯೇರುತ್ತದೆ. ಈ ಗೊಂದಲದಲ್ಲೂ 'ಹದ' ಸಾಧ್ಯವಾದಾಗ 'ಸೃಷ್ಟಿಕಾರ್ಯ' ಮುದನೀಡುತ್ತದೆ. ಬದುಕಿಗೆ ನಾನು ಸದಾ ಬದ್ಧ. ಇದು ನನ್ನ ಬಂಡವಾಳ." ಈ ಮಾತುಗಳನ್ನು ಹೇಳುವ ನಿರಂಜನರ ಬುದ್ಧಿ - ಭಾವಗಳು ಬದುಕಿನೊಡನೆ ಮಾಡಿದ ಸೆಣೆಸಾಟಗಳನ್ನು ಮತ್ತು ಸಾಧನೆಗಳನ್ನು ಇಲ್ಲಿನ ಲೇಖನಗಳು ಬಹಳ ಪ್ರಾಮಾಣಿಕವಾಗಿ ದಾಖಲಿಸುತ್ತವೆ ಎನ್ನುವುದು ಈ ಕೃತಿಯ ವೈಶಿಷ್ಟ್ಯ. ಆತ್ಮಕತೆಯ ಬರವಣಿಗೆಗಿಂತ ಭಿನ್ನವಾದ, ಸಾಹಿತ್ಯ ಮೀಮಾಂಸೆಯ ಲೇಖನಗಳಿಗಿಂತಲೂ ಪ್ರತ್ಯೇಕವಾದ, ಆದರೆ ಅವೆರಡರ ಗುಣಗಳನ್ನು ಬಹಳ ಸಮರ್ಪಕವಾಗಿ ಮೈಗೂಡಿಸಿಕೊಂಡಿರುವ ಇಂತಹ ಬರವಣಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಪೂರ್ವವಾದ ಮತ್ತು ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ.

○

ನಿರಂಜನರ ಅನುವಾದ ಸಾಹಿತ್ಯ

-ಡಾ। ತಾಳ್ತಜೆ ವಸಂತಕುಮಾರ

ಸೃಷ್ಟಿಶೀಲ ಕೃತಿಗಳ ಭಾಷಾಂತರಕಾರರನ್ನು traitors ಎಂದಿದ್ದಾರೆ ವಿಮರ್ಶ ಕರು! ಮೂಲದ ಅರ್ಥಶ್ರೀಮಂತಿಕೆ, ಆಶಯ, ಅಭಿವ್ಯಕ್ತಿ ವಿಧಾನಗಳನ್ನು ಭಿನ್ನ ಪರಿಸರದ ಭಾಷೆಯೊಂದಕ್ಕೆ ಯಥಾವತ್ತಾಗಿ ಭಟ್ಟಿಯಿಳಿಸುವುದೇನೋ ಕಷ್ಟಸಾಧ್ಯ ವಾದ ವಿಚಾರವೇ. ಎ.ಎಲ್. ಸ್ಮಿತ್ ಎಂಬ ವಿದ್ವಾಂಸ ಭಾಷಾಂತರ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತಾ, "Translation is to change into another language retaining as much as the sense one can, for some the original effect is almost always lost" ಎಂದಿರುವುದನ್ನು ಇಲ್ಲಿ ಗಮನಿಸಬೇಕು. ಇದು ಭಾಷಾಂತರಕಾರನ ಸಾಮರ್ಥ್ಯದ ಮಿತಿಯನ್ನು ಹೇಳುತ್ತದೆ. ಒಮ್ಮೆ ಒಂದು ಭಾಷೆ ಯಲ್ಲಿ ಸೃಷ್ಟಿಯಾದ ವಸ್ತು ಭಾಷಾಂತರಕಾರನಲ್ಲಿ ಪುನಃಸೃಷ್ಟಿಯಾದಾಗಲಷ್ಟೇ ಆತ ಆ ವಸ್ತುವಿಗೆ ನ್ಯಾಯ ಸಲ್ಲಿಸಬಲ್ಲ. ಇಲ್ಲವಾದಲ್ಲಿ ಅನುವಾದ ಬರಿಯ ಭಾಷಿಕ ಪಟ್ಟದಲ್ಲೇ ಉಳಿದುಬಿಡುತ್ತದೆ. ಒಂದರ್ಥದಲ್ಲಿ ಭಾಷಾಂತರಕಾರ ಮೂಲ ಲೇಖಕ ನಿಗಿಂತ ಹೆಚ್ಚು ಜಾಗರೂಕನಾಗಿರಬೇಕಾಗುತ್ತದೆ. ಅರ್ಥ ಸಂದಿಗ್ಧತೆಯಿರಬಾರದು; ಮೂಲದ ಆಶಯಕ್ಕೆ ಧಕ್ಕೆಯುಂಟಾಗಬಾರದು, ಬಳಸುವ ಭಾಷೆಗೆ ಅಸಹಜವೆನಿಸುವ ಪ್ರಯೋಗಗಳು ತಲೆದೋರಬಾರದು, ಪರಿಣಾಮ ತೀವ್ರತೆ ಕೆಡಬಾರದು-ಈ ದಿಗ್ಬಂಧನ ದಲ್ಲಿ ಭಾಷಾಂತರಕಾರ್ಯ ನಡೆಯಬೇಕಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವು ದಾದರೆ, ಭಾಷಾಂತರಕಾರ ಭಾಷೆ-ಭಾವಗಳ ಸಮತೋಲನವನ್ನು ಯಶಸ್ವಿಯಾಗಿ ಕಾಯ್ದುಕೊಳ್ಳಬೇಕಾಗುತ್ತದೆ. ಇಂಥ ಜಾಗರೂಕತೆ ವಹಿಸಿದಲ್ಲಿ ಮೊದಲಿಗೆ ಹೇಳಿದ ಆಪಾದನೆ ನಿಲ್ಲಲಾರದೇನೋ.

ನಿರಂಜನರು ಸ್ವತಂತ್ರ ವಿಚಾರಧಾರೆಯುಳ್ಳ ಸಾಹಿತಿ. ಸೃಷ್ಟಿಶೀಲ ಕೃತಿ ಗಳಷ್ಟೇ ಸಮರ್ಥವಾಗಿ ಭಾಷಾಂತರದಲ್ಲೂ ಕೈಯಾಡಿಸಿ, ಅಲ್ಲೂ ಇಲ್ಲೂ ಸಂದ ಪ್ರತಿಭಾವಂತ. ಇವರ ಕೈಯಲ್ಲಿ ಈ ಭಾಷಾಂತರಕಾರ್ಯ ಎಷ್ಟರಮಟ್ಟಿಗೆ ಸಫಲ ವಾಗಿದೆ ಎಂಬುದನ್ನು ಸೂಚಿಸುವುದಷ್ಟೇ ಇಲ್ಲಿಯ ಉದ್ದೇಶ.

"ನಿಜವಾದ ಭಾಷಾಂತರ ಪರಕಾಯ ಪ್ರವೇಶವಿದ್ದಂತೆ" ಎಂಬ (ವಿಲಮೋನಿಟ್ಸ್) ಮಾತಿಗೆ ನಿರಂಜನರ ಕೃತಿಗಳು - ಬಹುಮಟ್ಟಿಗೆ - ನಿದರ್ಶನಗಳಾಗುತ್ತವೆ. ತಮ್ಮೆಲ್ಲ ಮಿತಿಗಳ ನಡುವೆಯೂ ಭಿನ್ನಭಾಷೆಯಲ್ಲಿ ಅಭಿವ್ಯಕ್ತಿ ಪಡೆಯುವ ಸಾಹಿತಿಗಳ ವಿಚಾರ ಪ್ರಣಾಳಿಯನ್ನಿವು ಯಶಸ್ವಿಯಾಗಿ ಕನ್ನಡಿಗರಿಗೆ ಪರಿಚಯಿಸುತ್ತವೆ. ಅಷ್ಟೇ ಅಲ್ಲದೆ ನಿರಂಜನರಿಗಿದ್ದ ಎರಡೂ ಸಂಸ್ಕೃತಿಗಳ ಪರಿಜ್ಞಾನವೂ ಇಲ್ಲಿ ಎದ್ದುತೋರುತ್ತದೆ.

ಮ್ಯಾಕ್ಸಿಂ ಗಾರ್ಕಿಯವರದು ರಷ್ಯನ್ ಮಾತ್ರವಲ್ಲ, ಜಾಗತಿಕ ಸಾಹಿತಿಗಳಲ್ಲೇ ಹಿರಿಯ ಹೆಸರು. ಬದುಕಿನುದ್ದಕ್ಕೂ ಋಷಿಯಂತೆ ಬದುಕಿದ ಅವರ ಬದುಕಿನಂತೆ ಅವರ ಸಾಹಿತ್ಯವೂ ನಿರಂಜನರ ಮೇಲೆ ಗಾಢಪ್ರಭಾವ ಬೀರಿತ್ತು. ಹಾಗಾಗಿಯೇ ನಿರಂಜನರು ಪ್ರಮುಖವಾಗಿ ಭಾಷಾಂತರಿಸಿದ್ದು ಗಾರ್ಕಿಯವರ ಕೃತಿಗಳನ್ನು. (ಅಧಃ ಪತನ, ತಾಯಿ ಮುಂತಾದ ಸೃಷ್ಟಿಶೀಲ ಕೃತಿಗಳು, ನನ್ನ ಬಾಲ್ಯ, ನನ್ನ ವಿಶ್ವವಿದ್ಯಾಲಯ ಗಳು ಮುಂತಾದ ಅವರ ಆತ್ಮಚರಿತ್ರೆಯ ಭಾಗಗಳು - ಇತ್ಯಾದಿ). ಆ ಬಳಿಕ ಅವರು ಅನುವಾದಕ್ಕಾಗಿ ಆಯ್ದುಕೊಂಡುದು ಚೆಕಾವನ ಕಥೆಗಳನ್ನು. (ಕಂದರದ ಬದುಕು ಇತ್ಯಾದಿ.) ಇಲ್ಲಿಯ ಮಟ್ಟಿಗೆ ಆಯಾ ಕೃತಿಗಳ ಇಂಗ್ಲಿಷ್ ಅನುವಾದಗಳನ್ನು ಮಾದರಿಗಳಾಗಿ ಪರಿಗಣಿಸಿ ತುಲನೆಯ ಪ್ರಯತ್ನವನ್ನು ಮಾಡಿದ್ದೇನೆ.

ಭಾಷಾಂತರಕಾರನಿಗೆ ಮೂಲಭಾಷೆಯಲ್ಲಿ ವಿಮರ್ಶಾತ್ಮಕ ಜ್ಞಾನವೂ, ಉದ್ದಿಷ್ಟ ಭಾಷೆಯಲ್ಲಿ ಪ್ರಾಯೋಗಿಕ ಕೌಶಲವೂ ಇದ್ದರೆ ಭಾಷೆಯ ಮಟ್ಟಿಗೆ ಆತ ಭಾಷಾಂತರಕಾರನಾಗಲು ಅರ್ಹನಾದಂತೆ. ಆದರೆ ಸಂಸ್ಕೃತಿಯ ವಿಚಾರ ಹಾಗಲ್ಲ. ಅನುವಾದಕನಿಗೆ ಮೂಲ ಸಂಸ್ಕೃತಿಯ ಪರಿಚಯದೊಡನೆ ಅದನ್ನು ಉದ್ದಿಷ್ಟ ಭಾಷೆಯ ಸಂಸ್ಕೃತಿಗೆ ಸಂವಹಿಸುವ ಸಾಮರ್ಥ್ಯವೂ ಇರಬೇಕಾಗುತ್ತದೆ. ಮೂಲ ಸಾಹಿತಿಯ ವ್ಯಕ್ತಿ - ವೈಶಿಷ್ಟ್ಯಗಳನ್ನಾತ ಅರಗಿಸಿಕೊಳ್ಳದಿದ್ದರೆ ಇದನ್ನು ಸಾಧಿಸು ವುದು ಕಷ್ಟವಾಗುತ್ತದೆ. ಇವೆಲ್ಲಾ ಅಂಶಗಳನ್ನು ಗಮನಿಸಿಕೊಂಡು ನಿರಂಜನರ ಅನುವಾದಗಳನ್ನು ಅಭ್ಯಸಿಸಬೇಕಾಗುತ್ತದೆ. ಅವರ ಭಾಷಾಂತರಗಳ ಬಗೆಗೆ ಹೇಳು ವಾಗ ಮೂಲ ಪಾತ್ರಗಳ ಬಗೆಗಿನ ವಿಶ್ಲೇಷಣೆ ಅಗತ್ಯವಿಲ್ಲವೆನಿಸುತ್ತದೆ. ಆದುದರಿಂದ ಇಲ್ಲಿಯ ಅಭ್ಯಾಸದ ವಸ್ತು ಅನುವಾದದ ಭಾಷೆ, ಮೂಲದ ಆಶಯ, ಒಟ್ಟು ಪರಿಣಾಮ ಎಷ್ಟರಮಟ್ಟಿಗೆ ಕನ್ನಡದಲ್ಲೂ ಕಾಣುತ್ತದೆ ಎಂಬಷ್ಟಕ್ಕೆ ಸೀಮಿತ ವಾಗುತ್ತದೆ.

'ಮದುವಣಗಿತ್ತಿ' ಚೆಕಾವನ ಎರಡು ನೀಳ್ಗತೆಗಳು (ಕಂದರದ ಬದುಕು, ನೀರಸ ಕಥೆ) ಮತ್ತು ಒಂದು ಸಣ್ಣಕತೆ (ಮದುವಣಗಿತ್ತಿ) - ಇವುಗಳ ಸಂಕಲನ. ಈ ಅನುವಾದವು ೧೯೫೭ರಲ್ಲಿ ಪ್ರಕಟವಾಯಿತು. ನಿರಂಕುಶ ಪ್ರಭುತ್ವವನ್ನು ಸಾಂಕೇತಿಕ ವಾಗಿ ಟೀಕಿಸುವ 'ಕಂದರದ ಬದುಕು' ಇದರಲ್ಲಿ ಉಕ್ಲಿಯಿವೋದ ಗ್ರಾಮಾಂತರ ಜೀವನದ ಚಿತ್ರಣವಿದೆ. ಅಲ್ಲಿಯ ಗ್ರಿಗೊರಿ ಪೆಟ್ರೊವಿಚ್ (ಟ್ಸಬೂಕಿನ್) ಆರ್ಥಿಕ ವಾಗಿ ಅನುಕೂಲವಂತ. ಪೋಲೀಸ್ ದಳದಲ್ಲಿ ಗೂಢಚಾರಿಯಾಗಿದ್ದ ಅನಿಸಿಮ್, ಕಿವುಡನೂ ರೋಗಿಷ್ಠನೂ ಆಗಿದ್ದ ಸ್ಟಿಪಾನ್ - ಅವನ ಮಕ್ಕಳು. ಸ್ಟಿಪಾನನ ಹೆಂಡತಿ ಅಕ್ಸೀನಿಯಾ ಈ ಕುಟುಂಬದ ವಿಷಯದಲ್ಲಿ ನಿರ್ಣಾಯಕ ಪಾತ್ರ ವಹಿಸುವ ಹೆಣ್ಣು. ಅಲ್ಲಿ ಅವಳ ಬಿಗಿ ಮುಷ್ಟಿಯ ನಿಯಂತ್ರಣದಿಂದಾಚೆ ಏನೂ ನಡೆಯುವಂತಿರಲಿಲ್ಲ.

ಅವಳೆದುರು ಮನೆಯ ಗಂಡುಮಕ್ಕಳಿಗಾಗಲಿ, ಹಿರಿಯ ಸೊಸೆ ಲಿಪಾಳಿಗಾಗಲಿ, ಟ್ರಿಬೂಕಿನ್ನನ ಎರಡನೆಯ ಹೆಂಡತಿ ವಾರ್ವರಾಳಿಗಾಗಲಿ ಅಷ್ಟೇಕೆ ಸ್ವತಃ ಟ್ರಿಬೂಕಿನ್ನನಿಗಾಗಲಿ ಅಸ್ತಿತ್ವವೇ ಇರಲಿಲ್ಲ. ಲಿಪಾಳ ಮುದ್ದುಮಗುವನ್ನು ಕುದಿಯುವ ನೀರೆರಚಿ ಸಾಯಿಸಿದ ಅವಳ ಕ್ರೌರ್ಯ, ಅಧಿಕಾರದಾಹ ಏರುತ್ತಲೇ ಹೋಗುತ್ತದೆ. ಇಲ್ಲಿ ಬೂರ್ಶ್ವಾ ವರ್ಗದೊಡನೆ ಕಡು ಬಡತನದ ರೇಖೆಯಿಂದ ಮೇಲೇರಲಾರದ ವರ್ಗದ ಮುಖಾಮುಖಿಯ ನಿರೂಪಣೆಯಿದೆ. ಭವ್ಯ ಭವಿಷ್ಯದ ಯಾವುದೇ ಮುಂಗಾಣ್ಕೆಯಿಲ್ಲದೆ, ಸೂರ್ಯ ಮುಳುಗಿದ, ಕತ್ತಲಾವರಿಸಿದ, ಚಳಿ - ಮಂಜು ಮುಸುಕಿದ ನಿರ್ಜೀವ ವಾತಾವರಣದಲ್ಲಿ ಕತೆ ಕೊನೆಯಾಗುತ್ತದೆ; ಆ ಕಾಲದ ಹತಾಶೆಯನ್ನು ರಾಜೀ ಪ್ರವೃತ್ತಿಯನ್ನು ಧ್ವನಿಸುತ್ತದೆ.

ವ್ಯಕ್ತಿ ಬರಿಯ ಸಮಾಜದ ಘಟಕವಲ್ಲ; ಇದಕ್ಕಿಂತ ಭಿನ್ನವಾದ ವೈಯುಕ್ತಿಕ ಬದುಕು ಆತನಿಗಿದೆ ಎಂಬುದನ್ನು 'ನೀರಸಕಥೆ' ಸೂಚಿಸುತ್ತದೆ. ವ್ಯಕ್ತಿಯ ಜೀವನದ ದೈನಂದಿನ ಆಗುಹೋಗುಗಳು, ಸಮಾಜದ ವಿವಿಧ ಅಂಗಗಳು ಅವನ ಮೇಲೆ ಪರಿಣಾಮ ಬೀರುವ ರೀತಿ, ಅವನ ಭಾವನೆಗಳ ಗತಿ - ಇವುಗಳತ್ತ ಈ ಕತೆಯ ಗಮನ ಕೇಂದ್ರೀಕೃತವಾಗಿದೆ. ವ್ಯಕ್ತಿಯ ಆಂತರಿಕ ತಳಮಳ ಅವನ ಸಾಮಾಜಿಕ ಬದುಕನ್ನು ಅಲ್ಲೋಲಕಲ್ಲೋಲವಾಗಿಸುವ ಬಗೆ ಇಲ್ಲಿ ನಿರೂಪಿತವಾಗಿದೆ.

ಮೇಲ್ನೋಟಕ್ಕೆ ಇದರ ನಾಯಕ ನಿಕೊಲಾಯಿಯದು ಸಂತೃಪ್ತ ಕುಟುಂಬ. ಅತ್ಯುಚ್ಚ ಮಟ್ಟದ ಪ್ರತಿಭಾಶಾಲಿಯಾಗಿದ್ದ ಆತ ಸಫಲ ಪ್ರಾಧ್ಯಾಪಕನೂ ಆಗಿದ್ದ. ಆದರೆ ಅಸಹನೀಯ ಒಂಟಿತನ ಅವನನ್ನು ಸದಾ ಬಾಧಿಸುತ್ತಿತ್ತು. ತನ್ನನ್ನು ತಾನು ತೆರೆದುಕೊಳ್ಳಲು ಯೋಗ್ಯ ವ್ಯಕ್ತಿಗಾಗಿ ಅನ್ವೇಷಿಸುತ್ತಾ ಅನ್ವೇಷಿಸುತ್ತಾ ಅವನ ಭ್ರಮೆಗಳು ಕರಗುತ್ತವೆ. ಆತ ಸಾವಿನಲ್ಲಿ ಸಾಂತ್ವನವನ್ನು ಹುಡುಕುತ್ತಾನೆ. ಸರಳವೆನಿಸುವ ಈ ಕಥಾವಸ್ತುವಿನ ಸುತ್ತ ಹೆಪ್ಪುಗಟ್ಟಿದ ನಿರಾಶೆಯಿದೆ; ಹುತ್ತ ಕಟ್ಟಿಕೊಂಡ ನಿಗೂಢ ಭಾವನೆಗಳಿವೆ. ಆ ಯುಗದ ರಷ್ಯನ್ ಜನತೆಯ ಅನಿಶ್ಚಿತತೆಯ, ಅಸಹಾಯಕತೆಯ ಪ್ರತೀಕವಾಗಿ ಈ ಕತೆ ವಿಶಿಷ್ಟವಾಗುತ್ತದೆ.

ಆಶಯದ ದೃಷ್ಟಿಯಿಂದ ಈ ಸಂಕಲನದ ಕೊನೆಯ ಕತೆ, 'ಮದುವಣಗಿತ್ತಿ' ಉಳಿದೆರಡಕ್ಕಿಂತ ಭಿನ್ನವಾಗಿದೆ. ವರ್ಷವರ್ಷಗಳಿಂದ ಜೊತೆಗಾರನಿಗಾಗಿ ಹಂಬಲಿಸುತ್ತಿದ್ದ ನಾದಿಯಾ ಇದರ ನಾಯಕಿ. ಬದುಕು ಒಂದು ಹಂತದಿಂದ ಇನ್ನೊಂದಕ್ಕೆ ಸಂಕ್ರಮಣಗೊಳ್ಳುವ ಕಾಲ ಹತ್ತಿರ ಬಂದಂತೆ, ಅವಳ ಒಳಗನ್ನು ತುಂಬುವುದು ಅಸ್ಪಷ್ಟ ವ್ಯಥೆ. ಆಂದ್ರಿ ಆಂದ್ರೇಯಿಶ್‌ನೊಡನೆ ಮದುವೆ ಗೊತ್ತಾದ ಮೇಲೂ ತಾನಾತನನ್ನು ಪ್ರೀತಿಸುತ್ತಾ ಇಲ್ಲ ಎಂಬ ಭಯಂಕರ ಸತ್ಯ ಆಕೆಗೆ ಗೋಚರವಾಗುತ್ತದೆ.

ಟ್ರೆಬೂಕಿನ್ - ನಿಕೊಲಾಯಿಗಳು ವ್ಯವಸ್ಥೆಯ ವಿರುದ್ಧ ಸೆಣಸಾಡಲಾರದೆ ಹೋದರಾದರೆ ನಾದಿಯಾ ಗೆಲ್ಲುತ್ತಾಳೆ. ತನ್ನ ನಿಷ್ಕ್ರಿಯ ಬದುಕನ್ನು ದ್ವೇಷಿಸುವುದರ ಮೂಲಕ ಜನತೆಯ ಹೊಸ ಆಶೋತ್ತರಗಳನ್ನು ಪ್ರತಿನಿಧಿಸುತ್ತಾಳೆ. ಇವಳಿಗೆ ತೀರಾ ವಿರುದ್ಧವಾದ ಮನೋಧರ್ಮ ಉಳ್ಳ ಸಾಶಾ, ಅವಳಿಗೆ ತನ್ನನ್ನು ತಾನು ಗುರುತಿಸಿಕೊಳ್ಳಲು ನೆರವಾಗುತ್ತಾನೆ. ತಾನು ಸಾವಿನ ತೆಕ್ಕೆಯಲ್ಲಿದ್ದರೂ ನಾದಿಯಾಳಿಗೆ ಬದುಕುವ ದಾರಿ ತೋರಿಸುತ್ತಾನೆ. ನಾದಿಯಾ ವ್ಯವಸ್ಥೆಯನ್ನು ಧಿಕ್ಕರಿಸುವುದರ ಮೂಲಕ ನಿರಾಳ ಬದುಕನ್ನು ತ್ಯಜಿಸಿ, ನಿರಂತರ ಹೋರಾಟದ ಅಸ್ಪಷ್ಟ ಭವಿಷ್ಯದ ಗೊಂದಲಮಯ ಜೀವನಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಾಳೆ. ಒಂದು ಧ್ಯೇಯದ 'ಮದುವಣಗಿತ್ತಿ'ಯಾಗುತ್ತಾಳೆ. ಗಾತ್ರದಲ್ಲಿ ಕಿರಿದಾದರೂ ಬಹಳಷ್ಟನ್ನು ಹೇಳುವ ಈ ಕತೆ ಹೆಚ್ಚುತ್ತಿರುವ ಜ್ಞಾನದಾಹವನ್ನು, ಕ್ರಾಂತಿಯನ್ನು, ಸ್ವಂತಿಕೆಯನ್ನು ತೋರಿಸುತ್ತದೆ; ಆ ದೃಷ್ಟಿಯಿಂದಲೇ ಮಹತ್ವದ್ದಾಗುತ್ತದೆ.

ಮೌಲಿಕತೆಯ ದೃಷ್ಟಿಯಿಂದ ಈ ಅನುವಾದವನ್ನು ಗಮನಿಸುವುದಾದರೆ, ಇದು ಗಾರ್ಕಿಯವರ 'ಅಧಃಪತನ'ಕ್ಕಿಂತ ಭಿನ್ನವಾಗಿಲ್ಲ. ನಿರಂಜನರು ಒಟ್ಟಾರೆಯಾಗಿ ರಷ್ಯಾದ ಗ್ರಾಮಾಂತರ ಬದುಕಿನ ಬಗೆಗಿನ ಸ್ಪಷ್ಟಚಿತ್ರವೊಂದನ್ನು ಕನ್ನಡಿಗರಲ್ಲಿ ಮೂಡಿಸುವಲ್ಲಿ ಸಫಲರಾಗಿದ್ದಾರೆ. ದಿನಕ್ಕೆ ಆರು ಬಾರಿ ಚಹಾ ಕುಡಿಯುವ, ನಾಲ್ಕು ಬಾರಿ ಉಣ್ಣುವ, ಕೊಳೆತ ದನದ ಮಾಂಸವನ್ನು ಮಾರುವ ಜೀವನ ವಿಧಾನ ನಮ್ಮ ಅನುಭವದ ಪರಿಧಿಯಿಂದಾಚೆಗೇ ನಿಲ್ಲುತ್ತದಾದರೂ, ಇದಕ್ಕೆ ಸಮಾನಾಂತರವಾಗಿ ಅಲ್ಲಿಯ ಸಾಂಸಾರಿಕ ಬದುಕೂ ಬಿಚ್ಚಿಕೊಳ್ಳುತ್ತಾ ಹೋಗುವುದರಿಂದ ಆ ಪರಿಸರ ನಮಗೆ ಪರಿಚಿತವಾಗುತ್ತದೆ. ಆದುದರಿಂದಲೇ ಮದುವೆಗೆ ಒಪ್ಪದ ಮಗನನ್ನು ಒತ್ತಾಯಿಸುವ, ಹಣದ ಬಲದಿಂದ ಕುರೂಪಿಗೆ ಸುಂದರ ಯುವತಿಯನ್ನು ಗಂಟು ಹಾಕುವ ಪಾತ್ರಗಳನ್ನು ನಮ್ಮ ಹತ್ತಿರಕ್ಕೆ ತರುವಲ್ಲಿ ಅನುವಾದಕರು ಯಶಸ್ವಿಯಾಗಿದ್ದಾರೆ.

"ಪುನಃ ಪುನಃ ಬೇಸರ ಹುಟ್ಟಿಸುವ ಕ್ಷೀಣ ಸ್ವರದಲ್ಲಿ ಛೆ-ಛೆ-ಛೆ ಎನ್ನುವುದರ ಹೊರತಾಗಿ ಬೇರೇನನ್ನೂ ಆಕೆ ಹೇಳುತ್ತಲೇ ಇರಲಿಲ್ಲವೇನೋ ಎನಿಸುತ್ತಿತ್ತು, ಮಗ್ಗುಲು ಕೊಠಡಿಯಲ್ಲಿದ್ದವರಿಗೆ" "ಮೌನ ನೆಲಸಿತು, ಒಮ್ಮೆಲೆ" ಇಂಥ ವಾಕ್ಯರಚನೆಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತವೆ. ಕೆಲವೆಡೆ ಶೈಲಿಯ ಏಕತಾನತೆ ಇರಿಸುಮುರುಸಾಗುವ ಮಟ್ಟಕ್ಕೆ ಬೆಳೆದುಬಿಡುತ್ತದೆ.

ಭಯ ಸ್ಥಾಯಿಯಾಗಿರುವ ಲಿಪಾಳ ತಾಯಿಯ ವ್ಯಕ್ತಿಚಿತ್ರಣ, ಮಗುವನ್ನು ಕಳೆದುಕೊಂಡ ಲಿಪಾಳ ವೇದನೆಯ ನಿರೂಪಣೆ - ಈ ಭಾಗಗಳಲ್ಲಿ ಅನುವಾದ

ತುಂಬ ಸೊಗಸಾಗಿದೆ. ನಿದ್ರಾಶೂನ್ಯನಾಗಿ ಇರುಳೆಲ್ಲವನ್ನೂ ಯಾತನೆಯ ನಿಟ್ಟುಸಿರು ಗಳಿಂದ ತುಂಬುವ ನಿಕೊಲಾಯಿಯಾಗಲಿ (ನೀರಸಕಥೆ), ವ್ಯವಸ್ಥೆಯನ್ನು ಧಿಕ್ಕರಿಸಿ ಏಕಾಂಗಿಯಾಗಿ ತಲೆಎತ್ತಿ ನಿಂತ ನಾದಿಯಾ ಆಗಲಿ, ಅನುವಾದದಲ್ಲೂ ಸತ್ವಪೂರ್ಣ ರಾಗಿಯೇ ಉಳಿದಿದ್ದಾರೆ. ವಿಜ್ಞಾನದ ಪ್ರಭುವಾಗಿರದೆ ಸೇವಕನಾಗಿರುವ ಪಿಯೋತಾರ್ ಇಗ್ನಾತಿವಿಶ್‌ನ (ನೀರಸಕಥೆ ಪುಟ 99) ವ್ಯಕ್ತಿಚಿತ್ರ ಚಿಕ್ಕ ಚಿಕ್ಕ ವಾಕ್ಯಖಂಡ ಗಳಲ್ಲಿ ಮೂಡಿಬಂದಿದೆ. ಇಷ್ಟೇ ಪ್ರಭಾವಿಯಾಗಿರುವ ಇನ್ನೊಂದು ಚಿತ್ರಣವೆಂದರೆ, ಒಂದು ಕಾಲಕ್ಕೆ ಸಮರ್ಥ ಪ್ರಾಧ್ಯಾಪಕನಾಗಿದ್ದ ನಿಕೊಲಾಯಿ ವಿದ್ಯಾರ್ಥಿಗಳೆದುರು ದುರ್ಬಲನಾಗಿಬಿಡುವ ಸಂದರ್ಭ. ಮೂಲದ ರಸಸ್ಥಾನಗಳನ್ನು ಗುರುತಿಸುವುದು ಪ್ರಸ್ತುತ ಬರೆಹದ ವ್ಯಾಪ್ತಿಯ ಹೊರಗಿರುವುದರಿಂದ, ಅನುವಾದ ಸೊಗಸಾಗಿ ಬಂದ ಭಾಗಗಳನ್ನಷ್ಟೇ ಇಲ್ಲಿ ಸೂಚಿಸಲಾಗಿದೆ.

"ನಾನು ಕಣ್ರೀ ನಾನು, ಕಾತ್ಯಾ" (ನೀರಸಕಥೆ), "ಆಂದ್ರೆ ಆಂದ್ರೇಯಿಶ್ ಪಿಟೀಲು ಬಾರಿಸಿದ, ಎಲ್ಲರೂ ಮೌನವಾಗಿ ಆಲಿಸಿದರು" (ಮದುವಣಗಿತ್ತಿ) ಮುಂತಾದ ವಾಕ್ಯಗಳಲ್ಲಿ ಕನ್ನಡತನ ಎದ್ದು ತೋರುತ್ತದೆ. ಆಂದ್ರಿ ಆಂದ್ರೇಯಿಶ್‌ನ ಆಲಿಂಗನ ದಲ್ಲಿ ಅಸಹ್ಯವಾದುದೇನನ್ನೋ ಕಾಣುವ ನಾದಿಯಾ ಇದ್ದಕ್ಕಿದ್ದಂತೆ ಆಪ್ತಳಾಗಿ ಬಿಡುತ್ತಾಳೆ.

'ಅನ್ಯೆಜ, ಭವ್ಯಮಹಿಳೆ, ದಯಾವಂತಳು' ಮುಂತಾದ ಪದಗಳು 'ಈ ಜೀವನ ವನ್ನು ಕಂಡರಾಗೋದಿಲ್ಲ, ನನಗೆ' ಮೊದಲಾದ ವಾಕ್ಯಗಳು ಹೇರಳವಾಗಿ ಕಂಡುಬರುತ್ತ ವಾದರೂ, ಅನುವಾದದ ಮೌಲಿಕತೆಗೆ ಇದರಿಂದ ಭಂಗ ಬರುವುದಿಲ್ಲ. ವಿಶಿಷ್ಟವಸ್ತುವಿಗನು ಗುಣವಾದ ವಿಶಿಷ್ಟ ಭಾಷೆಯ ಬಳಕೆಯಿಂದಾಗಿ ಅನುವಾದ ಸ್ವಂತಿಕೆಯನ್ನು ಮೆರೆಯು ತ್ತದೆ. ಈ ದೃಷ್ಟಿಯಿಂದ ಅನುವಾದ ಸಫಲವೆನಿಸುತ್ತದೆ.

ಗಾರ್ಕಿಯವರದು ಅಪೂರ್ವ ಸಂಯಮದ ಬರೆವಣಿಗೆ. ಅವರ ಕೃತಿಗಳನ್ನು ಕನ್ನಡಿಸುವಾಗ ನಿರಂಜನರು ಅವರ ದೃಷ್ಟಿಯಿಂದ ಆ ಕಾಲದ ಜನಜೀವನವನ್ನು ಗಮನಿಸಿದ್ದಾರೆ. ಒಂದು ಕಾಲಕ್ಕೆ ಬದ್ಧವಾದ ಸಾಮಾಜಿಕ ಮೌಲ್ಯಗಳನ್ನು, ಧಾರ್ಮಿಕ ನಂಬಿಕೆಗಳನ್ನು, ಸಾಂಸ್ಕೃತಿಕ ಬದುಕನ್ನು ಸಾರ್ವಕಾಲಿಕ ಚೌಕಟ್ಟಿನಲ್ಲಿಟ್ಟು ನೋಡಲು ಯತ್ನಿಸಿದ್ದಾರೆ. ಸಂಕ್ಷಿಪ್ತತೆ ಕೆಡದಂತೆ, ಉದ್ದುದ್ದ ವಿವರಣೆ ನೀಡದಂತೆ ಅಪರಿಚಿತ ಭಾಷೆಯೊಂದರ ಅರ್ಥಛಾಯೆಯನ್ನು ಕನ್ನಡದಲ್ಲಿ ಮೂಡಿಸಲು ಶ್ರಮಿಸಿದ್ದಾರೆ. ಆದರೆ ಈ ಕಟ್ಟೆಚ್ಚರವನ್ನೂ ಮೀರಿ ಮೂಲದ ಭಾವ ಅವರ ಕೈಜಾರಿ ಹೋಗಿ ಭಾಷಾಂತರ ನಿರ್ಜೀವವಾದ ನಿದರ್ಶನಗಳೂ ಇಲ್ಲದಿಲ್ಲ. ಆದರೆ ಅವು ಕಡಮೆಯೆಂಬು ದಷ್ಟೇ ಇಲ್ಲಿ ಸಮಾಧಾನಕರ ಅಂಶ.

'ಅಧಃಪತನ' ಕೃತಿಯು ಗಾರ್ಕಿಯವರ 'ಫೋಮಾ ಗಾರ್ದೆಯಿಒವ್' ಕಾದಂಬರಿಯ ಭಾಷಾಂತರ. ನಿರಂಜನರು ಇದನ್ನು ೧೯೫೫ರಲ್ಲಿ ಕನ್ನಡಿಸಿದರು. ವೋಲ್ಗಾ ನದೀ ತಟಾಕದ ಒಂದು ಶತಮಾನದ ಹಿಂದಿನ ಜನಜೀವನದ ಚಿತ್ರಣ ಈ ಕಾದಂಬರಿಯ ವಸ್ತು. ಗಾರ್ಕಿಯವರು ತಮ್ಮ ಕಥಾನಾಯಕನ ಹೆಸರನ್ನೇ ಕಾದಂಬರಿಗಿಟ್ಟಿದ್ದರೆ, ನಿರಂಜನರು ಆ ಕಾಲದ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿದ್ದ ರೀತಿಯನ್ನು ಪ್ರಧಾನವಾಗಿ ಪರಿಗಣಿಸಿ ಅದನ್ನು 'ಅಧಃಪತನ'ವೆಂದು ಕರೆದಿದ್ದಾರೆ. ಇದು ರೂಢಮೂಲವಾಗಿದ್ದ ಸಾಮಾಜಿಕ ಪಿಡುಗುಗಳ ವಿರುದ್ಧ ಏಕಾಂಗಿ ಫೋಮಾನ ಹೋರಾಟದ ನಿರೂಪಣೆಯೂ ಹೌದು. ಪಟ್ಟಭದ್ರ ಹಿತಾಸಕ್ತಿಗಳ ಕೈಯ ದಾಳವಾಗಿ ಅವನ ಬದುಕಿನ ಧ್ಯೇಯಾದರ್ಶಗಳು ಹುಡಿಗೂಡುವ ರೀತಿಯೂ ಹೌದು. ಹೀಗಾಗಿ ಕಾದಂಬರಿಯ ಶಿರೋನಾಮೆಯೇ ಮೂಲದ ಆಶಯವನ್ನು ಬಹುಮಟ್ಟಿಗೆ ತನ್ನ ಓದುಗನಿಗೆ ದಾಟಿಸುತ್ತದೆ. ಕಾದಂಬರಿಯ ಹತ್ತು ಹಲವು ಪಾತ್ರಗಳಲ್ಲಿ ಕೆಲವು ಪ್ರಮುಖ; ಹಲವು ಗೌಣ. ಮಾನವ ಜನಾಂಗವನ್ನು ಅನಾದಿ ಕಾಲದಿಂದ ಬಾಧಿಸುತ್ತಲೇ ಬಂದಿರುವ, ಅನಂತ ಕಾಲದವರೆಗೂ ಕಾಡುತ್ತಲೇ ಇರಬಹುದಾದ ಕೊನೆಗಾಣದ ಪ್ರಶ್ನೆಗಳು, ಬದುಕಿನ ಗೂಢತರ ರಹಸ್ಯಗಳು-ಪಕಳೆ ಬಿಚ್ಚುತ್ತಾ ಬಿಚ್ಚುತ್ತಾ ಬೆಳೆಯುವ ರೀತಿ - ಈ ಬಿಚ್ಚುವಿಕೆಯಲ್ಲಿಯೂ ನಿಜವಾಗಲಾರದ - ಚಿಪ್ಪನ್ನೊಡೆದು ಹೊರಬರಲಾರದ ಬದುಕುಗಳು ಮುದುಡುವ ಬಗೆ - ಈ ಪರಿಧಿಯೊಳಗೆ ಫೋಮಾನ ನಿರಂತರ ಹೋರಾಟದ ಕಥೆ ಜೀವ ತಳೆಯುತ್ತದೆ; ವಾಸ್ತವದ ಅನ್ವೇಷಣೆಗೆ ತೊಡಗುತ್ತದೆ.

ಸ್ವಂತ ದುಡಿಮೆಯ ಬಲದಿಂದ ಸಾರಿಗೆ ನೌಕರನ ಮಟ್ಟದಿಂದ ನೌಕಾಧಿಪತಿಯ ಹಂತಕ್ಕೆ ಏರಿದ ಇಗ್ನಾತ್ ಗಾರ್ದೆಯಿಎವ್. ಇವನದು ವಿಕ್ಷಿಪ್ತ ವ್ಯಕ್ತಿತ್ವ. ಹಣದ ವ್ಯಾಮೋಹ ಕಾವ್ಯೋನ್ಮಾದದ ಮಟ್ಟಕ್ಕೆ ಏರಿದಾಗ ಉಳಿದೆಲ್ಲ ಪ್ರಾಪಂಚಿಕ ವಿಚಾರಗಳೂ ಅವನಿಂದ ಮರೆಯಾಗುತ್ತಿದ್ದುವು. ಇವನ ಮಗ ಫೋಮಾ ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡ ನತದೃಷ್ಟ ಫೋಮಾ ತನ್ನ ಅತ್ತೆ ಆನ್‌ಫಿಸಾಳ ಮೂಲಕ ಹೊಸಲೋಕವೊಂದರ ಪರಿಚಯ ಮಾಡಿಕೊಳ್ಳುತ್ತಾನೆ. ಇದು ಅವನಿಗೆ ಪ್ರಿಯವಾದ ಲೋಕ. ಅವನ ಅಸ್ತಿತ್ವವನ್ನು ಗೌರವಿಸುವ ಲೋಕ. ಇದಕ್ಕೆ ತೀರಾ ವ್ಯತಿರಿಕ್ತವಾದುದು ವ್ಯಾಪಾರಿಯಾದ ತಂದೆಯ ಹಡಗಿನಲ್ಲಿ ಸಮುದ್ರದಲ್ಲಿ ಸಂಚರಿಸುತ್ತಿದ್ದಾಗ ಆತನೆದುರು ಬಿಚ್ಚಿಕೊಂಡ ಬದುಕು. ಅದರ ಕಟುವಾಸ್ತವತೆಯ ಎದುರು ಅವನ ಚೈತನ್ಯ ಉಡುಗುತ್ತದೆ. ಒಬ್ಬರನ್ನೊಬ್ಬರು ಶೋಷಿಸಿಯೇ ಬದುಕಬೇಕಾಗಿರುವ ಜಗತ್ತಿನ ಕ್ರೂರ ನಿಯಮ ಅವನಲ್ಲಿ ಬಂಡಾಯದ ಬೀಜ ಬಿತ್ತುತ್ತದೆ.

ಫೋಮಾನ ಬದುಕಿನಲ್ಲಿ ಹಾದುಹೋಗುವ ವ್ಯಕ್ತಿಗಳ ಸಂಖ್ಯೆ ಅಪಾರ. ನಿಷ್ಠುರ ವ್ಯವಹಾರಪ್ರಜ್ಞೆಯುಳ್ಳ ಫೋಮಾನ ಧರ್ಮಪಿತ ಮಾಯಕಿನ್ - ತನ್ನನ್ನು

ತಾನೇ ಶ್ರೇಷ್ಠಳೆಂದುಕೊಂಡಿದ್ದ ಲ್ಯೂಬಾ, ಬಾಲ್ಯದ ಬದುಕಿಗೆ ರೋಮಾಂಚಕಾರೀ ತಿರುವನ್ನು ಕೊಟ್ಟ ಸಹಪಾಠಿ ಸ್ಕೋರೈಲಿನ್, ಯಾತನೆಯ ಮುಗುಳ್ನಗೆಯನ್ನು ಸದಾ ಧರಿಸಿದ್ದ ಸಂಗಾತಿ ಪೆಲಾಜಿಯಾ, ಅವನಿಗೆಂದೂ ತೆರೆದುಕೊಳ್ಳದೆ ರಹಸ್ಯವಾಗಿಯೇ ಉಳಿದ ಸೋಫಿಯಾ....ಹೀಗೇ....ಹೀಗೇ. ಈ ಎಲ್ಲಾ ವ್ಯಾವಹಾರಿಕ ಸಂಬಂಧಗಳನ್ನೂ ಮೀರಿ ಆತನೊಳಗೊಂದು ಏಕಾಕಿಯಾದ ಆತ್ಮ ಬೆಳೆಯುತ್ತಿತ್ತು. ಆತ ಹೆಚ್ಚು ಹೆಚ್ಚು ಅಂತರ್ಮುಖಿಯಾಗುತ್ತಿದ್ದ. ಅವನ ಸಂಪರ್ಕಕ್ಕೆ ಬಂದವರೆಲ್ಲರೂ ಬದುಕನ್ನು ದೂರುತ್ತಲೇ ನಡೆದಾಗ ಆತನ ನಂಬಿಕೆಯ ಬುಡವೇ ಅಲುಗಾಡುತ್ತಿತ್ತು. ಇದೆಲ್ಲಕ್ಕೆ ಏನು ಅರ್ಥವೆಂಬ ಪ್ರಶ್ನೆ ಅವನನ್ನು ಸದಾ ಬಾಧಿಸತೊಡಗಿತ್ತು. ಮನುಷ್ಯರ ನಿಟ್ಟುಸಿರು, ಗೋಳಾಟ, ನರಳಾಟಗಳಿಗೆ ಬೆಲೆಯೇ ಇಲ್ಲವೆಂಬ ಅರಿವು ಅವನಲ್ಲಿ ಹುಟ್ಟಿಸಿದ ದಿಗ್ಭ್ರಮೆ ವ್ಯವಸ್ಥೆಯ ವಿರುದ್ಧ ಆತ ಸಿಡಿದೇಳುವಂತೆ ಮಾಡಿತ್ತು.

ವ್ಯಕ್ತಿಯಾಗಿ ಫೋಮಾನ ಬದುಕಿನ ಅಧಃಪತನ ಕಾದಂಬರಿಯ ಇನ್ನೊಂದು ಆಯಾಮವನ್ನು ತೋರಿಸುತ್ತದೆ. ನಿರಂತರ ಕುಡಿತಕ್ಕೆ ಬಲಿಯಾಗಿ ಹೆಣ್ಣಿನ ತೋಳಿಂದ ತೋಳಿಗೆ ಸಾಗುತ್ತಾ ಕುಸಿದುಬಿದ್ದ ಅವನ ನೈತಿಕ ನಿಲುವು - ಅತೃಪ್ತವಾಗಿಯೇ ಉಳಿದ ದಾಹ ಅವನ ವೈಯುಕ್ತಿಕ ದುರಂತಕ್ಕೆ ಕಾರಣವಾದ ಅಂಶಗಳು. ಸಂಖ್ಯಾ ಬಾಹುಳ್ಯದ ಬಲದಿಂದ ಕೊನೆಗೂ ವರ್ತಕ ವರ್ಗ ಅಜೇಯವಾಗಿಯೇ ಉಳಿಯುತ್ತದೆ. ಬೌದ್ಧಿಕ ಸಮತೋಲನವನ್ನೂ ಕಳೆದುಕೊಂಡು ಸೋತು ಕುಸಿಯುವ ಫೋಮಾ ಒಂದು ತತ್ತ್ವದ ಸೋಲಿನ ಪ್ರತೀಕವಾಗುತ್ತಾನೆ. ಹೀಗೆ ಒಂದು ರೀತಿಯ ಗೊಂದಲವನ್ನೇ ಚಿತ್ರಿಸುತ್ತಾ ಬೆಳೆಯುವ ಕಾದಂಬರಿ ಗೊಂದಲದಲ್ಲೇ ಮುಗಿತಾಯವನ್ನು ಕಾಣುತ್ತದೆ.

ಇದರಲ್ಲಿ ಸ್ವತಂತ್ರ ಸತ್ವವಿರುವ ಚಿತ್ರಣಗಳು ಅಲ್ಲಲ್ಲಿ ಮಿಂಚಿ ಅನುವಾದದ ತೂಕವನ್ನು ಹೆಚ್ಚಿಸಿವೆ. "ಹೀಗೆ ನಿಧಾನವಾಗಿ ಫೋಮಾನ ಬದುಕು ವಿಸ್ತಾರಗೊಳ್ಳುತ್ತ ನಡೆಯಿತು. ....ಯಾವುದಾದರೂ ಕಾರಣಕ್ಕೆ ಆತ ಸಿಟ್ಟಾದನೆಂದರೆ ಕಣ್ಣುಗಳು ಮತ್ತಷ್ಟು ವಿಸ್ತಾರಗೊಳ್ಳುತ್ತಿದ್ದುವು. ತುಟಿಗಳು ಬಿಗಿದುಕೊಂಡು ಒಂದು ಗೆರೆಯಾಗುತ್ತಿದ್ದುವು. ಮುಖ ಕಠಿಣವಾಗುತ್ತಿತ್ತು" (ಪುಟ 77) ಎಂದಾಗ ಉದ್ವಿಗ್ನ ಫೋಮಾನ ಚಿತ್ರ ಸ್ಫುಟವಾಗಿ ಕಣ್ಣೆದುರು ಬರುತ್ತದೆ.

ಮಾಯಕಿನ್ನನ ಒರಟು ಮಾತುಗಳ ಹಿಂದಿನ ಕಳಕಳಿಯನ್ನು ಅವರು ಬಹು ಸರಳವಾಗಿ ಕಂಡರಿಸುತ್ತಾರೆ.

"ಆದರೆ ಅವರು ಬದುಕುತ್ತಲೇ ಇದ್ದಾರೆ. ಸುಖಪಡುತ್ತಲೇ ಇದ್ದಾರೆ. ಈ ಕಾಡು ಜೀವನ ನನಗೆ ಸಾಕಾಗಿದೆ. ಪುನಃ ಪುನಃ ಒಂದೇ ಬಗೆಯ ಬದುಕು.

ಇದರಿಂದ ನನ್ನ ರಕ್ತ ಕುದಿಯೋ ಹಾಗಾಗ್ತದೆ.... ಇವರು ಯಾತಕ್ಕೋಸ್ಕರ ಜೀವಿಸ್ತಿದಾರೆ? (ಪುಟ 282) ಬದುಕು stagnate ಆಗುವ ರೀತಿಯ ನಿರೂಪಣೆ ನೈಜವಾಗಿದೆ. ಫೋಮಾನ ಆಂತರಿಕ ದ್ವಂದ್ವವನ್ನು ಚಿತ್ರಿಸುವ ಸಂದರ್ಭಗಳಲ್ಲಂತೂ ನಿರಂಜನರ ಬರೆವಣಿಗೆಗೆ ಮೂಲವನ್ನು ಮರೆಸುವ ಶಕ್ತಿಯಿದೆ. ಉದಾಹರಣೆಗೆ - "ಆತನಲ್ಲಿ ಆ ದೃಶ್ಯ ಮಿಶ್ರ ಭಾವನೆಗಳನ್ನು ಕೆರಳಿಸಿತು....ಒಬ್ಬನೇ ಉಳಿಡ. ಅತಿಯಾಗಿ ಕುಡಿಯುದಿದ್ದ ಮರುಗಳಿಗೆಯಲ್ಲಿ ಅರ್ಧಪ್ರಜ್ಞೆಯ ಆ ಉನ್ಮತ್ತಸ್ಥಿತಿ ಮರಳಿ ಬರುತ್ತಿತ್ತು.ತನ್ನ ಭಾರದಿಂದ ಆತನನ್ನು ನುಚ್ಚುನುರಿ ಮಾಡುತ್ತಿತ್ತು.ಸ್ವಾತಂತ್ರ್ಯಕಾಂಕ್ಷೆ ಆತನೊಳಗೆ ಬೆಳೆಯಿತು, ಬಲಗೊಂಡಿತು. ಆದರೆ ತನ್ನ ಶ್ರೀಮಂತಿಕೆಯ ಶೃಂಖಲೆಗಳನ್ನು ಕಿತ್ತೆಸೆಯಲು ಆತ ಅಶಕ್ತನಾಗಿದ್ದ" (ಪುಟ 303) - ಈ ಭಾಗವನ್ನು ಗಮನಿಸಬಹುದು.

ಕಾದಂಬರಿಯ ಕೊನೆಯ ಭಾಗದಲ್ಲಿ ಉದ್ರಿಕ್ತ ಫೋಮಾನ ವಿವರಣೆ ಸಾಧಿಸಿದ ಪರಿಣಾಮ, ತೀವ್ರತೆ ಇಲ್ಲಿ ಉಲ್ಲೇಖಾರ್ಹವಾಗಿದೆ. "ಕೈಗಳನ್ನು ಕಟ್ಟಿದರೂ ಬಿಚ್ಚಿದರೂ ಒಂದೇ" ಎಂದು ನಿರ್ವಿಕಾರವಾಗಿ ಹೇಳುವ ಸಂದರ್ಭದಲ್ಲಿ ಮೂಲದ ಧ್ವನಿಶಕ್ತಿ ಕುಂದುವುದರ ಬದಲಿಗೆ ಮತ್ತಷ್ಟು ಗಾಢವಾಗುತ್ತದೆ; ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. "ಯಾತಕ್ಕೋಸ್ಕರ ನೀನು ಜೀವಿಸ್ತೀಯಾ?" (ಪುಟ 296) ಫೋಮಾನ ಪ್ರಶ್ನೆ ನಮ್ಮಲ್ಲೂ ಮರುಹುಟ್ಟು ಪಡೆಯುವಷ್ಟು ಪ್ರಭಾವಿಯಾಗಿದೆ.

ನಿರಂಜನರು ತಮ್ಮ ಸಾಹಿತ್ತಿಕ ಜೀವನದ ಮೊದಲ ವರ್ಷಗಳಲ್ಲಿ ಈ ಕಾದಂಬರಿಯನ್ನು ಅನುವಾದಿಸಿದ್ದಾರೆ. ಈ ಅಂಶವೇ ಅವರ ಅನುವಾದದ ಮಿತಿಯಾಗಿ, ಆಮೇಲಿನ ವರ್ಷಗಳಲ್ಲಿ ಅವರು ಸಾಧಿಸಿದ ಶೈಲಿಯ ಪಕ್ವತೆ ಇಲ್ಲಿ ಕಂಡು ಬರುವುದಿಲ್ಲ ಎಂದೇ ಹೇಳಬೇಕಾಗುತ್ತದೆ. ಇಲ್ಲಿ ಅವರು ಎದುರಿಸಬೇಕಾಗಿದ್ದ ಸಮಸ್ಯೆಗಳೂ ಹಲವಾರು ಎಂಬ ಅಂಶವನ್ನೂ ಮರೆಯುವಂತಿಲ್ಲ. ಭಿನ್ನದೇಶ - ಕಾಲ - ಸಂಸ್ಕೃತಿಯ ಚಿತ್ರಣವಿರುವ ಕೃತಿಯನ್ನು ಅನುವಾದಿಸುವಾಗ ಈ ತೊಡಕುಗಳು ಅನಿವಾರ್ಯವೇ. ಒಂದು ಯುಗದ ಜೀವನ ವಿಧಾನವನ್ನು ಅಪರಿಚಿತ ಜನಾಂಗವೊಂದಕ್ಕೆ ಪರಿಚಯಿಸಲು ಭಾಷೆಯೊಂದರ ಸಹಾಯ ಸಾಕಾಗುವುದಿಲ್ಲ.

ನಿರಂಜನರ ಬರೆವಣಿಗೆಯ ಮೇಲಿನ ಅಪಾರ ಗೌರವವನ್ನೂ ಮೀರಿ ಅವರ ಅನುವಾದದ ಮಿತಿಗಳು ಕಣ್ಣಿಗೆ ಹೊಡೆಯುತ್ತವೆ.

"ವಿಶಾಲವಾದ ಬಲಿಷ್ಠವಾದ ನದಿಯಂತೆ ಹರಿಯುತ್ತಿದ್ದ ಆ ಜಪಮಂತ್ರದ ಒಂದಂಗವಾಗಲು, ಲೋಹದ ಖಣಖಣ ಕಿರಿಕಿರಿ ಸದ್ದಿನೊಡನೆಯೂ, ತೆರೆಗಳ

ಭೋರ್ಗರೆತದೊಡನೆಯೂ ಸಮರಸಹೊಂದಲು, ಆತ ಹೃತ್ಪೂರ್ವಕವಾಗಿ ಹಾತೊರೆದ ಆ ಬಯಕೆಯ ಒತ್ತಡದಿಂದ ಹಣೆಯ ಮೇಲೆ ಬೆವರೊಡೆಯಿತು, ಮುಖ ವಿವರ್ಣವಾಯಿತು" (ಪುಟ 275). ಇಂಥ ದೀರ್ಘ ವಾಕ್ಯಗಳು ಇಂಗ್ಲಿಷಿನ ಜಾಯಮಾನಕ್ಕೆ ಸರಿಹೋಗುತ್ತದಾದರೂ ಕನ್ನಡ ವಾಕ್ಯರಚನೆಗಳಿಂದ ಭಿನ್ನವಾಗಿ ಉಳಿಯುತ್ತದೆ. ಇಂಗ್ಲಿಷಿನ Lastಗೆ ಕನ್ನಡದಲ್ಲಿ ಹಿಂದಿನ ಎಂದೂ ಅರ್ಥವಿದೆ. 'ಕೊನೆಯ ಪಾನ' ಮುಂತಾದ ಪ್ರಯೋಗಗಳು ಕನ್ನಡದಲ್ಲಿ ಬೇರೆಯೇ ಅರ್ಥ ಕೊಡುತ್ತವೆ.

'ಪರಿಶುದ್ಧ ಸೋಮವಾರ' ಮುಂತಾದ concept ಗಳು ಭಾರತೀಯ ಬದುಕಿನಿಂದ ಬಹುದೂರ ಉಳಿದುಬಿಡುತ್ತವಾದರೂ, ಈ ತೊಡಕನ್ನು ಪರಿಹರಿಸುವುದು ಅನುವಾದಕಾರನ ಮಿತಿಗೆ ಮೀರಿದ ವಿಚಾರವಾದುದರಿಂದ ಅವನ್ನು ಪ್ರಸ್ತಾಪಿಸದಿರುವುದೇ ಒಳಿತು. ಇಂಗ್ಲಿಷಿನಲ್ಲಿ ಹಡಗನ್ನು 'she' ಎಂದೇ ಸಂಬೋಧಿಸಲಾಗುತ್ತಿದ್ದರೂ ಕನ್ನಡದಲ್ಲಿ ನಪುಂಸಕಲಿಂಗದ ಬಳಕೆಯೇ ಸಾಧುವೆನಿಸುತ್ತದೆ. 'ಆದರೆ ಬಹಳ ಕಾಲ ಇರುತ್ತಿರಲಿಲ್ಲ, ಇದು' ಮುಂತಾದ ವಾಕ್ಯರಚನೆಗಳಲ್ಲಿ ಕನ್ನಡತನ ಕಂಡುಬರುವುದಿಲ್ಲ.

"ಸ್ತ್ರೀಯ ಸಮಯ ಸಮೀಪಿಸಿದಾಗ ಕೈಚೌಕ ಹೋಲೀತಾ ಕೂತಿರೋದಕ್ಕೆ ಸಮಯವಿರೋದಿಲ್ಲ" (ಪುಟ 273) ಇಲ್ಲಿಯ ಹೋಲಿಕೆ ಕನ್ನಡಿಗರ ಭಾವಕೋಶಕ್ಕೆ ಸಂವಹನವಾಗುವುದು ಕಷ್ಟ.

"ಧಾನ್ಯದಿಂದ ಗೊಂಚಲು ಹುಟ್ಟುತ್ತದೆ" (ಪುಟ 257) ('ಕಾಳಿನಿಂದ ತೆನೆ ಹುಟ್ಟುತ್ತದೆ' ಎಂದರೆ ಹೆಚ್ಚು ಸಹಜವಲ್ಲವೇ ?)

'ಹುಬ್ಬಿನ ಮೇಲಿನ ಬೆವರು' (ಕನ್ನಡಿಗರು ಹಣೆಯ ಮೇಲಿನ ಬೆವರು ಒರಸುತ್ತಾರೆ!) ಕರಿದು, ಸರಳತರ, ತುಟಿಗಳನ್ನು ಬಿಗಿಮುಚ್ಚಿ ಮುಂತಾದ - ವ್ಯಾಕರಣಕ್ಕೆ ಸರಿಯಾದರೂ - ಅಸಹಜವೆನಿಸುವ ಪದಪ್ರಯೋಗಗಳು, ಬಂಜೆಕ್ರೋಧ, ನಾಯಿಮಗ ಮುಂತಾದ ವಿಶೇಷಣಗಳು, ಮೀಸೆಯನ್ನುವೃತ್ತಾಕಾರವಾಗಿ ಚಲಿಸುತ್ತಿದ್ದ (ಪುಟ 373) ಪ್ರತಿಯೊಂದು ಪದವನ್ನೂ ಸೇವಿಸುತ್ತ ಮುಂತಾದ ಕ್ಲಿಷ್ಟ ವಾಕ್ಯರಚನೆಗಳು ಅಲ್ಲಲ್ಲಿ ಕಂಡುಬರುತ್ತವೆ. ದೇಶ - ಕಾಲಗಳನ್ನು ಮೀರಿದ ಮಾನವೀಯ ಸಂಬಂಧಗಳನ್ನು ಹೃದಯಂಗಮವಾಗಿ ಚಿತ್ರಿಸಬಲ್ಲ ನಿರಂಜನರ ಲೇಖನಿ ಅಪರಿಚಿತ ಜೀವನ ವಿಧಾನವನ್ನು ಚಿತ್ರಿಸುವಾಗ ಕುಂಟುತ್ತದೆನ್ನುವುದಕ್ಕೆ ಕಾದಂಬರಿಯಲ್ಲಿ ಹಲವಾರು ನಿದರ್ಶನಗಳಿವೆ.

ಈ ಮಿತಿಗಳಲ್ಲಿ ಹಲವು ಅನಿವಾರ್ಯವೂ ಹೌದು. ಆದೇನಿದ್ದರೂ ಒಂದು ಯುಗದ, ಕ್ರಾಂತಿಯ ಮುಖವಾಣಿಯಾಗಿರುವ ಕಾದಂಬರಿಯೊಂದನ್ನು ತೃಪ್ತಿಕರವಾಗಿ

ಕನ್ನಡಿಗರಿಗೆ ಪರಿಚಯಿಸಿದ ಸ್ತುತ್ಯಕಾರ್ಯದ ಮುಂದೆ ಈ ಸಣ್ಣಪುಟ್ಟ ದೋಷಗಳು ಗೌಣವಾಗುತ್ತವೆ; ಕಾದಂಬರಿಯ ಮೌಲ್ಯವನ್ನು ಕುಂದಿಸುವುದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿಕೊಂಡು ಮುಂದುವರಿಯಬಹುದು.

ಗಾರ್ಕಿಯವರಿಗೆ ಚೆಕಾವನೊಡನಿದ್ದ ಸಂಬಂಧ ಬಹು ಆತ್ಮೀಯವಾದುದು. ಅದರಂತೆ ಅವರ ಸಾಹಿತ್ಯಗಳೂ ಒಂದಕ್ಕೊಂದು ಪೂರಕವಾಗಿಯೇ ಇವೆ. ಚೆಕಾವನ ಕೃತಿಗಳಲ್ಲಿ ಅಸ್ಪಷ್ಟವಾಗಿ ರೂಪು ತಾಳುವ ಭವಿಷ್ಯದರ್ಶನ ಗಾರ್ಕಿಯವರಲ್ಲಿ ನಿಖರವಾಗಿದೆ. ಅಖಂಡ ಮಾನವಪ್ರೇಮ ಇಬ್ಬರಲ್ಲೂ ಸಮಾನವಾಗಿದ್ದುದರಿಂದಲೇ ಅವರು ಆಯ್ದುಕೊಂಡ ವಸ್ತುಗಳಲ್ಲೂ ಅಪೂರ್ವ ಸಾಮ್ಯ ಕಂಡುಬರುತ್ತದೆ.

ನಿರಂಜನರು ಗಾರ್ಕಿಯವರ, 'Mother' (೧೯೦೭)ನ್ನು ೧೯೫೮ರಲ್ಲಿ 'ತಾಯಿ' ಎಂಬ ಹೆಸರಿನಿಂದ ಭಾಷಾಂತರಿಸಿದರು. ಇದು ಭಾಷಾಂತರ ಮಾತ್ರವಲ್ಲ, ಭಾವಾಂತರವೂ ಹೌದು. ಆದುದರಿಂದಲೇ ಉತ್ತಮ ಅನುವಾದಕ್ಕೆ ನಿದರ್ಶನವಾಗಬಲ್ಲುದು. ನಿರಂಜನರ ಪಕ್ವಗೊಂಡ ಜೀವನಾನುಭವ ಸಾಹಿತ್ತಿಕಾನುಭವದೊಡನೆ ಸಮರಸಗೊಂಡುದರ ಪ್ರತಿಫಲನ ಇಲ್ಲಿದೆ. ಭಾಷೆಯಲ್ಲಿ ಕನ್ನಡತನವಿದೆ, ಸ್ವಂತಿಕೆಯಿದೆ. ಇದರ ಓದುಗ ಬಹುಮಟ್ಟಿಗೆ ಇದೊಂದು ಅನುವಾದಿತ ಕೃತಿಯೆಂಬುದನ್ನು ಮರೆತುಬಿಡುತ್ತಾನೆ.

ಶ್ರಮಜೀವಿಗಳು ಬಂಡವಾಳಶಾಹಿಗಳ ವಿರುದ್ಧ ಹೂಡಿದ ಹೋರಾಟ, ಅದರ ಪರಿಣಾಮ, ಬಡ ಶ್ರಮಜೀವಿಗಳ ಮೇಲಾಗುವ ಅನ್ಯಾಯಗಳ ನಿರೂಪಣೆಯೇ ಈ ಕಾದಂಬರಿಯ ವಸ್ತು. ರಷ್ಯಾದ ೧೯೦೩ರ ಚಳುವಳಿಯಲ್ಲಿ ಸೋಷಿಯಲ್ ಡೆಮೊಕ್ರಾಟಿಕ್ ಪಕ್ಷದ ಸಂಘಟಕರಲ್ಲೊಬ್ಬನಾದ ಪ್ಯೊತ್ರ್ ಜಲೊಮೊವ್ ಮತ್ತು ಅವನ ತಾಯಿ ಅನ್ನ ಕಿರಿಲೊವ್ನ ಜಲೊಮೊವ್‌ರಿಂದ ಸ್ಫೂರ್ತಿಗೊಂಡು ಗಾರ್ಕಿಯವರು ಈ ಕೃತಿಯನ್ನು ಬರೆದರೆಂದು Motherನ ಮುನ್ನುಡಿಕಾರ ಬರೀಸ್ ಬ್ಯಾರಿಕ್ ಹೇಳಿದ್ದಾರೆ.

ಇಲ್ಲಿಯ 'ತಾಯಿ' ಬರಿಯ ಭಾವನಾಜೀವಿಯಲ್ಲ. ವಾತ್ಸಲ್ಯದೊಡನೆ ಅವಳಲ್ಲಿ ಅಸೀಮ ತತ್ವನಿಷ್ಠೆಯೂ ಕಂಡುಬರುತ್ತದೆ. ಅವಳೊಂದು ಶಕ್ತಿಯ ಸಂಕೇತವಾಗುತ್ತಾಳೆ. ಆದುದರಿಂದಲೇ ಯಾವನೇ ಕಾರ್ಮಿಕ ನಾಯಕ ಕೃತಿಯ ನಾಯಕನಾಗದೆ, 'ಕಾರ್ಮಿಕನೊಬ್ಬನ ವಿಧವೆ, ಕಾರ್ಮಿಕನೊಬ್ಬನ ತಾಯಿ' ಪೆಲಗೇಯಾ ನಿಲೋವ್ನಾ ವಾಸ್ಸೋವಾಳಿಗೆ ಆ ಜಾಗೆ ದಕ್ಕಿದೆ. 'ಉಕ್ಕಿನ ಮನುಷ್ಯ'ನಿಗಿಂತ ಹೆಚ್ಚಿನ ಗೌರವ ಅವನನ್ನು ಉಕ್ಕಾಗಿ ರೂಪಿಸಿದ ಚೈತನ್ಯಕ್ಕೆ ಸಂದಿದೆ. ಆಕೆಯಾದರೋ ಸಾಮಾನ್ಯರಲ್ಲಿ

ಸಾಮಾನ್ಯಳು. ಜೀವನದ ಸಾರವತ್ತಾಗಿರಬಹುದಾದ ಭಾಗವನ್ನು ದಾಟಿದವಳು. ಈ ಹೋರಾಟದ ಬೆಳಕಿನಲ್ಲಿ ಅವಳು ಜಗತ್ತನ್ನು ಹೊಸತಾಗಿ ನೋಡುತ್ತಾಳೆ. ತನ್ನ ಬದುಕಿಗೆ ಹೊಸ ಅರ್ಥವನ್ನು ಕಂಡುಕೊಳ್ಳುತ್ತಾಳೆ. ಅವಳ ಪಾತ್ರ ಹಂತಹಂತವಾಗಿ ಗಟ್ಟಿಗೊಳ್ಳುವ ಕ್ರಿಯೆಯಲ್ಲಿಯೇ ಒಂದು ಸಮುದಾಯದ ಸ್ಥೈರ್ಯ ರೂಪುಪಡೆಯುತ್ತದೆ. ವಾಸ್ತವತೆಯ ಭದ್ರ ನೆಲೆಗಟ್ಟಿನಲ್ಲಿ ಅರಳುವ, ಬೆಳೆಯುವ ಪಾತ್ರಗಳು ಸಮಾಜದ ಮನೋಭಾವವನ್ನು ಪ್ರತಿನಿಧಿಸುತ್ತವೆ. ಕಾದಂಬರಿ ದುರಂತದಲ್ಲಿಯೇ ಕೊನೆಗಂಡರೂ ಅದರ ಒಡಲಲ್ಲಿ ಈ ಹೋರಾಟ ನಿರಂತರವಾಗುವ, ಸತ್ಯವೇ ಗೆಲ್ಲುವ ಸೂಚನೆಯಿದೆ; ಕ್ರಾಂತಿ ಚಿರಾಯುವಾಗುವುದೆಂಬ ದೃಢ ನಂಬಿಕೆಯಿದೆ. ಈ ಎಲ್ಲ ದೃಷ್ಟಿಯಿಂದಲೂ ಇದೊಂದು ಮಹತ್ವಪೂರ್ಣ ಕೃತಿಯಾಗುತ್ತದೆ.

ಕ್ರಾಂತಿಯ ಕತೆಯಾದರೂ ಇಲ್ಲಿ ನಿರಂಜನರ ಭಾಷೆ ಕಾವ್ಯಾತ್ಮಕತೆಯತ್ತ ಒಲಿದಿದೆ; ಶೈಲಿ ನಯವಾಗಿದೆ. ಕೆಲವೆಡೆ ಸುಂದರ ಭಾವಗೀತೆಯ ಸತ್ವವನ್ನು ಮೈಗೂಡಿಸಿಕೊಂಡಿರುವ ಭಾಷೆ ಹಲವೆಡೆ ಅಷ್ಟೇ ಉಗ್ರವೂ ಸಶಕ್ತವೂ ಆಗಿದೆ.

"ನಮಗೆ ಪ್ರತಿಯೊಂದೂ ಕಾಣಿಸುತ್ತೆ. ನಾವು ಮೂರ್ಖರಲ್ಲ. ತುಂಬಿದ ಹೊಟ್ಟೆಗಾಗಿ ಮಾತ್ರ ಆಸೆಪಡೋಕೆ ನಾವೇನೂ ಮೃಗಗಳಲ್ಲ....ಈ ಕೊಳಕು ಜೀವನದ ಕೆಸರಿನ ಮೇಲೆ ನಾವು ಸೇತುವೆ ಕಟ್ಟಬೇಕು, ಸಂಗಾತಿಗಳೇ."

"ನೀನು ಒಂದೇ ಸಮನೆ ಕೆಲಸ ಮಾಡು. ಇನ್ನಷ್ಟು ಕೆಲಸ ಮಾಡು. ನಿನ್ನ ಶ್ರಮದಿಂದ ನಾನು ಹಣ ಉಳಿಸಿ ನನ್ನ ಸೂಳೆಗಾಗಿ ಒಂದು ಚಿನ್ನದ ಪೀಕದಾನಿ ಕೊಂಡುಕೋತೀನಿ" (ಪುಟ 271) ತೀರಾ ರೂಕ್ಷವೆನಿಸುವ ಭಾಷೆ ಮರುಕ್ಷಣ ಮೃದುವಾಗುತ್ತದೆ.

"ಹೃದಯದೊಳಗಿಂದ ಉಕ್ಕೇರಿ ಬಂತು, ಕಣ್ಣೀರು. ಮಗನು ಶಾಂತವಾದ ಆತ್ಮವಿಶ್ವಾಸದಿಂದ ಬರಲಿರುವ ಅಪಾಯದ ಬಗೆಗೆ ಮಾತಾಡಿದ್ದ. ಆ ನಿರೀಕ್ಷೆ ಹೃದಯದಲ್ಲಿ ತೊಯ್ದಾಡಿತು - ರಾತ್ರೆ ಹೊತ್ತು ಪತಂಗ ಕುರುಡಾಗಿ ಪಟಪಟಿಸಿದ ಹಾಗೆ - ಹಿಮಾಚ್ಛಾದಿತ ಬಯಲೊಂದು ತನ್ನೆದುರು ಹರಡಿದ್ದ ಹಾಗೆ ಅವಳಿಗೆ ಭಾಸವಾಗುತ್ತಿತ್ತು" (ಪುಟ 54).

ಈ ಎರಡು ಸಂದರ್ಭಗಳನ್ನು ಹೋಲಿಸಿದಾಗ ಭಿನ್ನಸ್ತರಗಳಲ್ಲಿ ಬಳಕೆಯಾಗಿರುವ ಭಾಷೆ ಸಾಧಿಸಿರುವ ಪರಿಣಾಮ ತೀವ್ರತೆ ಸ್ಪಷ್ಟವಾಗುತ್ತದೆ.

ಹಿಂದಿನ ಅನುವಾದಗಳಲ್ಲಿ ಕಂಡುಬಾರದ ಅಡಿಟಿಪ್ಪಣಿಗಳು ಇಲ್ಲಿ ಅರ್ಥ ವಿಶದಗೊಳ್ಳಲು ಸಹಕರಿಸುತ್ತವೆ.

"ಅವರು ವ್ಯಕ್ತಿತ್ವವನ್ನೇ ಮುರೀತಾರಮ್ಮ. ವ್ಯಕ್ತಿತ್ವದ ಮೇಲೆ ಅವರು ತಮ್ಮ ಕೊಳಕು ಕೈ ಇಟ್ಟಾಗ ಎಲ್ಲದಕ್ಕಿಂತ ಹೆಚ್ಚು ನೋವಾಗುತ್ತೆ" (ಪುಟ 11) ಮುಂತಾದ ವಾಕ್ಯಗಳಲ್ಲಿ ಬಿಚ್ಚಿಕೊಳ್ಳುವ ಭಾವನೆಗಳ ಪದರಗಳು, 'ಅವ್ವಾ, ನನ್ನವ್ವಾ' ಮುಂತಾದ ಸಂಬೋಧನೆಗಳು ಉಕ್ಕಿಸುವ ಆತ್ಮೀಯತೆಯ ಸೆಲೆ,'ಕೆಚ್ಚಲು ಬರಡಾಗೋ ವರೆಗೂ ಹಾಲುಹಿಂಡು'ವಂಥ ಉಪಮೆಗಳು ಕನ್ನಡಿಗರಿಗೆ ಬಹುಬೇಗ ಸಂವಹನವಾಗ ಬಲ್ಲುವು.

'ಅನ್ಯಾಯವಾಗಿ ಕೊಲೆಯಾದವರೆ, ಕೇಳಿ
ಸತ್ಯದ ಶಕ್ತಿ ನೀಡುವುದು ನಿಮಗೆ ಪುನರ್ಜನ್ಮ'

ಮುಂತಾದ ಇಡಿಯ ಕಾದಂಬರಿಯ ಸಾರಸರ್ವಸ್ವವನ್ನೇ ಸಂಗ್ರಹಿಸುವ ವಾಕ್ಯಗಳು ಅಲ್ಲಲ್ಲಿ ಬಂದು ಅನುವಾದವನ್ನು ಶ್ರೀಮಂತವಾಗಿಸಿವೆ.

'ಹೋರಾಟಿಗ' ಇತ್ಯಾದಿ ಅಪರಿಚಿತ ವಾಸನೆ ಹೊಡೆಯುವ ಪದಗಳು ದೃಷ್ಟಿಬೊಟ್ಟಿನಂತೆ ಅಲ್ಲೊಮ್ಮೆ, ಇಲ್ಲೊಮ್ಮೆ ನುಸುಳುತ್ತವೆ.

"ಆಕೆಯ ಭೀತಿ ಗಂಟಲಿಗೆ ಸುತ್ತಿಕೊಂಡಿದ್ದ ವಿಷದ ಪರೆಯಂತಿದ್ದು ಉಸಿರಾಟವನ್ನು ದುಸ್ತರಗೊಳಿಸಿತು. ವಿಚಾರಣೆಯ ದಿನ ಬಂದಾಗ ಹೃದಯದ ಮೇಲಿದ್ದ ಬಲು ಭಾರವಾದ ಹೊರೆಯಿಂದ ಬಾಗಿ ತಾಯಿ ನ್ಯಾಯಸ್ಥಾನಕ್ಕೆ ಹೋದಳು." (ಪುಟ 396) ಮೂಲದ ಭಾವತೀವ್ರತೆ ಅನುವಾದದಲ್ಲಿ ಸೋತಿದೆ. ಕೆಲವೆಡೆ ವಿವರಣೆ ಜಾಳಾಗಿದೆ. ಈ ಕೆಲವು ಅಲ್ಪ ವಿಷಯಗಳನ್ನು ಬಿಟ್ಟರೆ, 'ತಾಯಿ' ನಿರಂಜನರ ಅನುವಾದಿತ ಕೃತಿಗಳಲ್ಲೇ ಅಗ್ರಸ್ಥಾನವನ್ನು ಪಡೆಯುತ್ತದೆ. ಭಾವ ಸೂಕ್ಷ್ಮತೆಯನ್ನು ವ್ಯಕ್ತಪಡಿಸುತ್ತಿದ್ದರೂ, ವಾಸ್ತವತೆಯ ಎಲ್ಲೆಯನ್ನು ಮೀರದ ಪಾತ್ರಗಳನ್ನು ಎಚ್ಚರಿಕೆಯಿಂದ ಚಿತ್ರಿಸಲಾಗಿದೆ; ಇವುಗಳ ಸಮತೋಲನವನ್ನು ಕಾಯ್ದುಕೊಳ್ಳಲಾಗಿದೆ. ನಿರಂಜನರು Motherನ್ನು ಕನ್ನಡಿಸುವುದರ ಮೂಲಕ ಕನ್ನಡಿಗರಿಗೊಂದು ಉತ್ತಮ ಕೃತಿಯನ್ನು ಪರಿಚಯಿಸುವ ಸಾರ್ಥಕ ಕಾರ್ಯ ಮಾಡಿದ್ದಾರೆ.

ಗಾರ್ಕಿಯವರು ತಮ್ಮ ಆತ್ಮಚರಿತ್ರೆಯನ್ನೂ ಸೃಷ್ಟಿಶೀಲ ಕೃತಿಗಳಷ್ಟೇ ನಿರ್ಲಿಪ್ತಿಯಿಂದ ಚಿತ್ರಿಸಿದ್ದಾರೆ.ಒಂದರ್ಥದಲ್ಲಿ ಅವರ Childhood, My Universities ಮುಂತಾದುವುಗಳು ಆತ್ಮಚರಿತ್ರಾತ್ಮಕವಾದ ಕಾದಂಬರಿಗಳೇ ಆಗಿವೆ. ಆದುದರಿಂದ ಇವೂ ಸೃಷ್ಟಿಶೀಲ ಕೃತಿಗಳ ವ್ಯಾಪ್ತಿಯಲ್ಲಿಯೇ ಬರುತ್ತವೆ. ನಿರಂಜನರು ಇವುಗಳನ್ನು ಕ್ರಮವಾಗಿ 'ನನ್ನ ಬಾಲ್ಯ'(೧೯೫೬)ಮತ್ತು 'ನನ್ನ ವಿಶ್ವವಿದ್ಯಾನಿಲಯಗಳು' (೧೯೬೧)

ಎಂಬ ಹೆಸರುಗಳಲ್ಲಿ ಭಾಷಾಂತರಿಸಿದ್ದಾರೆ. ಅವರ ಅನುವಾದಿತ ಕೃತಿಗಳೆಲ್ಲವನ್ನೂ ಅಭ್ಯಸಿಸಹೊರಟರೆ ಪ್ರಬಂಧದ ಗಾತ್ರ ಮಿತಿಮೀರುವ ಭಯವಿರುವುದರಿಂದ, ಇಲ್ಲಿ ಪ್ರಾತಿನಿಧಿಕವಾಗಿ ಕೆಲವನ್ನಷ್ಟೇ ಆಯ್ದುಕೊಳ್ಳಲಾಗಿದೆ. ಆದುದರಿಂದ ಈ ಸರಣಿಯ 'ನನ್ನ ಪ್ರಪಂಚ'ದ ಅಭ್ಯಾಸವನ್ನು ಕೈಬಿಡಲಾಗಿದೆ.

'ನನ್ನ ಬಾಲ್ಯ'ದಲ್ಲಿ ಎಳೆಯ ಗಾರ್ಕಿಯವರಿಗೆ ಪಿತೃವಿಯೋಗವಾಗುವ ಘಟನೆಯಿಂದ, ಮಾತೃವಿಯೋಗದಿಂದಾಗಿ ಅವರು 'ಪ್ರಪಂಚಕ್ಕಿಳಿಯುವ' ಹಂತದ ವರೆಗಿನ ಅವರ ಬದುಕಿನ ಆಗುಹೋಗುಗಳ ನಿರೂಪಣೆಯಿದೆ, ಅವರ ನೆನಪಿನ ಸುರುಳಿ ಬಿಚ್ಚುತ್ತಾ ಹೋಗಿದೆ. ಈ ಬರೆಹದುದ್ದಕ್ಕೂ ಎದ್ದು ಕಾಣುವುದು ಗಾರ್ಕಿಯವರ ಪ್ರಾಮಾಣಿಕತೆ. ಅವರ ಮಾತಿನಲ್ಲೇ ಹೇಳುವುದಾದರೆ, "But the truth is beyond all commiseration and it is not about myself I am writing but about the stifling and horrifying surroundings in which the ordinary Russian lived and still lives".

'ನನ್ನ ಬಾಲ್ಯ'ದಲ್ಲಿ "ಆ ಅಂಗುಲಿ ರಕ್ಷೆಗೆ ಸಂಬಂಧಿಸಿ ಶನಿವಾರ ದಿನ ಸಾಶಾನಿಗೆ ಒಂದು ಸೊಗಸಾದ ಸಣ್ಣ ಸಿಗಿತ ಸಿಗುತ್ತೆ" (ಪುಟ 21)ಮುಂತಾದ ಅರ್ಥ ಸಂದಿಗ್ಧತೆಗೆ ಎಡೆಕೊಡುವ ವಾಕ್ಯಗಳು ಕಂಡುಬರುವಂತೆಯೇ ಅತ್ಯುತ್ಕೃಷ್ಟವಾಗಿ ಅನುವಾದಿತವಾದ ಭಾಗಗಳೂ ಇವೆ. "ಆಕೆಯ ಪರಿಚಯವಾಗುವವರೆಗೂ ನಾನು ಕತ್ತಲೆಯಲ್ಲೆಲ್ಲೋ ಮೂಲೆಗುಂಪಾಗಿ ನಿದ್ದೆಹೋದ ಹಾಗಿತ್ತು. ಆದರೆ ಆಕೆ ಬಂದು ನನ್ನನ್ನೆಬ್ಬಿಸಿ ಬೆಳಕಿಗೆ ಕರೆತಂದಳು. ನನ್ನ ಸುತ್ತಮುತ್ತೆಲ್ಲವನ್ನೂ ಕಡಿಯದ ಒಂದೇ ಎಳೆಯಾಗಿ ಹೊಸೆದು ಬಳಿಕ ಅದನ್ನು ಬಣ್ಣಬಣ್ಣದ ಜರಿಯಾಗಿ ಹೆಣೆದಳು. ಆ ಕ್ಷಣವೇ ಆಕೆ ನಾನು ಅತ್ಯಂತ ಚೆನ್ನಾಗಿ ತಿಳಿದುಕೊಂಡ, ನನಗೆ ಅತ್ಯಂತ ಆತ್ಮೀಯಳೂ, ಆಪ್ತಳೂ ಆದ ನನ್ನ ಜೀವಮಾನದ ಸ್ನೇಹಿತೆಯಾದಳು. ಆಕೆ ಬದುಕನ್ನು ನಿಸ್ವಾರ್ಥ ವಾಗಿ ಪ್ರೀತಿಸುತ್ತಿದ್ದ ರೀತಿ, ನನ್ನ ಹೃದಯವನ್ನು ಶ್ರೀಮಂತವಾಗಿ ಮಾಡಿ ಕಷ್ಟಮಯ ವಾದ ನನ್ನ ಭವಿತವ್ಯವನ್ನು ಇದಿರಿಸಲು ನನಗೆ ಶಕ್ತಿಕೊಟ್ಟಿತು"* (ಪುಟ 10).

ಇಲ್ಲಿ ಮೂಲದ ಭಾವಕ್ಕೆ ಭಂಗ ಬಂದಿಲ್ಲ. ಮೂಲದಲ್ಲಿ ಬಹು ಗಾಢವಾಗಿ ತಟ್ಟುವ ಗಾರ್ಕಿ ಹಾಗೂ ಅವರ ಅಜ್ಜಿಯ ಬಾಂಧವ್ಯ ಕನ್ನಡದಲ್ಲೂ ಅಷ್ಟೇ ಪರಿಣಾಮ ಕಾರಿಯಾಗಿ ಮೂಡಿಬಂದಿದೆ. ಬೆಟ್ಟಪ್ಪ (fig) ಮುಂತಾದ ಪದಗಳ ಬಳಕೆಯಲ್ಲಿ ಕನ್ನಡತನವಿದೆ.

'ಹಸಿರುಹಲ್ಲು' ಮುಂತಾದ ವಿಶೇಷಣಗಳು, ಕಪ್ಪೆಗಳನ್ನು ಶವದೊಂದಿಗೆ ಹೂಳುವಂಥ (ಪುಟ 8) ಧಾರ್ಮಿಕ ಸಂಪ್ರದಾಯಗಳು ಕನ್ನಡಿಗರನ್ನು ತಲುಪುವಲ್ಲಿ

ತೊಡಕುಂಟುಮಾಡಬಲ್ಲ ಅಂಶಗಳು. ಇಂಗ್ಲಿಷಿಗೆ ಸಹಜವಾಗಿರುವ ಪುನರುಕ್ತಿಗಳು ಹಾಗೇ ಅನುವಾದಿತವಾದಾಗ ಭಾವದ ಓಟಕ್ಕೆ ತಡೆಯುಂಟಾಗುತ್ತದೆ. ಉಳಿದಂತೆ, 'ನನ್ನ ಬಾಲ್ಯ'ದ ಅನುವಾದದ ಸಮರ್ಪಕತೆಯ ಬಗೆಗೆ ಎರಡು ಮಾತಿಲ್ಲ.

'ನನ್ನ ವಿಶ್ವವಿದ್ಯಾನಿಲಯ'ಗಳು ಗಾರ್ಕಿಯವರ ಜೀವನ ಚರಿತ್ರೆಯ ಮುಂದಿನ ಭಾಗ. ಬಾಲ್ಯದ ದಿನಗಳನ್ನು ಗೊಂದಲದಲ್ಲಿಯೇ ಕಳೆದ ಅವರ ಬದುಕು ವಿಶಿಷ್ಟ ತಿರುವೊಂದನ್ನು ಪಡೆದ ಸಂಧಿಕಾಲದ ಬಗೆಗೆ ಈ ಪುಸ್ತಕ ಮಾಹಿತಿ ನೀಡುತ್ತದೆ. ವಿಶ್ವವಿದ್ಯಾಲಯದ ಹೊಸತಿಲಲ್ಲಿ ನಿಂತ ಅವರನ್ನು ಅದರ ಅನುಪಮ ಜ್ಞಾನಭಂಡಾರ ಕೈಬೀಸಿ ಕರೆಯುತ್ತಿತ್ತು. ಸುಪ್ತ ಪ್ರತಿಭೆಗೆ ಚಾಲನೆ ದೊರೆಯುವುದರಲ್ಲಿತ್ತು. ಆದರೆ ವಿಶ್ವವಿದ್ಯಾಲಯದ ಬದುಕಿನ ಪ್ರತ್ಯಕ್ಷ ದರ್ಶನ ಅವರಲ್ಲಿ ಮಿಶ್ರಭಾವನೆಗಳನ್ನು ಕೆರಳಿಸಿತ್ತು. ಈ ಪುಸ್ತಕದಲ್ಲಿ ಅವರ ಬದುಕಿನಲ್ಲಿ ಹಾದುಹೋದ ಹಲವು ವ್ಯಕ್ತಿಗಳ, ಅವರ ಮೇಲೆ ಪ್ರಭಾವ ಬೀರಿದ ಘಟನೆಗಳ, ಅವರ ಆಂತರಿಕ ಬೆಳವಣಿಗೆಗೆ ಕಾರಣ ರಾದ ವ್ಯಕ್ತಿ-ವಿಷಯಗಳ ವಿವರವಾದ ಸಮೀಕ್ಷೆಯಿದೆ. ವಾಸ್ತವ ಬದುಕಿನತ್ತ ಅವರ ಗಮನ ಹೆಚ್ಚು ಹೆಚ್ಚು ಕೇಂದ್ರೀಕೃತವಾದುದರ ಪ್ರಸ್ತಾಪವಿದೆ.

"ಏನೇ ಇರಲಿ, ಕಟ್ಟುಗಳನ್ನು ಬಿಚ್ಚಲು ಅವರು ಮಾಡಬಹುದಾದುದ ಕ್ಕಿಂತಲೂ ಕಡಮೆ ಅವಸರವನ್ನು ತೋರುತ್ತಿದ್ದರು" (ಪುಟ 121). "ಆ ಎಲುಬು ಮುಖದ ಕರಿಯ ಗವಿಗಳಲ್ಲಿ ಹೂತುಹೋಗಿದ್ದ ಕಪ್ಪುಕಣ್ಣುಗಳ ಆಳಕ್ಕಿರಿಯುವ ಪ್ರಭೆಯಲ್ಲಿ ಅಪಾಯವೂ ಆಜ್ಞೆಯೂ ಮಿನುಗಿದುವು" (ಪುಟ 55). ಈ ತೆರನಾದ ಸಂಕೀರ್ಣತೆ ಕನ್ನಡಕ್ಕೆ ಸರಿಹೊಂದುವುದಿಲ್ಲ.

"ನೀಚರೆಂದು ತೀರ್ಪು ಕೊಡೋಕೆ ಆತುರ ಪಡಬೇಡ! ಹಾಗೆ ತೀರ್ಪು ಕೊಡೋದು ಅತ್ಯಂತ ಸುಲಭವಾದ ದಾರಿ. ಅಂಥನಾಗಿ ಆ ದಾರೀನ ಹಿಡೀಬೇಡ. ಘಟನೆಗಳನ್ನು ಇಷ್ಟೊಂದು ಮನಸ್ಸಿಗೆ ಹಚ್ಚಿಕೋ ಬೇಡ" (ಪುಟ 156). ಸಂಕ್ಷಿಪ್ತ ವಾಗಿದ್ದರೂ ಸ್ಪಷ್ಟ ತಿಳಿವಳಿಕೆ ನೀಡುವ ಇಂಥ ಭಾಗಗಳು ಅನುವಾದಕರು ಸಾಧಿಸಿದ ಯಶಸ್ಸಿಗೆ ಸಾಕ್ಷಿಗಳಾಗುತ್ತವೆ.

ಮಹಾನ್ ಸಾಹಿತಿಯೊಬ್ಬನ ಆತ್ಮನಿರೀಕ್ಷಣೆಯ ಈ ಕೃತಿಗಳನ್ನು ಭಾಷಾಂತರಿಸುವುದರ ಮೂಲಕ ನಿರಂಜನರು ಕನ್ನಡಿಗರಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಆ ಯುಗದ ಚಿಂತನೆ ಹರಿದ ದಿಕ್ಕನ್ನು, ಅದರ ಹರವನ್ನು ಯಥಾವತ್ತಾಗಿ ಚಿತ್ರಿಸುವ ಇವುಗಳು ಆ ದೃಷ್ಟಿಯಿಂದಲೂ ಗಮನಾರ್ಹವಾಗುತ್ತವೆ.

ನಿರಂಜನರ ಅನುವಾದಗಳ ಬಗೆಗೆ ಬರೆಯುವಾಗ ಸೃಜನೇತರ ಕೃತಿಗಳಲ್ಲಿ. ಪ್ರಮುಖವಾಗಿ - 'ಸಂಗಮ್ ರಾಜಕೀಯ - ಸಾಮಾಜಿಕ ವ್ಯವಸ್ಥೆ'ಯನ್ನು ಹೆಸರಿಸ ಬಹುದು. ಇದು ಡಾ| ಎಸ್. ಸುಬ್ರಮಣಿಯನ್ ಇವರ ಪ್ರೌಢ ಪ್ರಬಂಧದ ಅನುವಾದವಾಗಿದೆ. ಇದು ೧೯೭೪ರಲ್ಲಿ ಪ್ರಕಟವಾಯಿತು. ಹೆಸರೇ ಹೇಳುವಂತೆ ಇದು ತಮಿಳರ ಸಂಗಮ್ ಯುಗದ ರಾಜಕೀಯ - ಸಾಮಾಜಿಕ ವ್ಯವಸ್ಥೆಯನ್ನು ವಿವರವಾಗಿ ವಿಶ್ಲೇಷಿಸುತ್ತದೆ.

ಸಾಹಿತ್ಯೇತರ ಕೃತಿಯ ಅನುವಾದಕನಿಗೆ ಸಾಹಿತ್ಯದ ಅನುವಾದಕನಿಗಿಂತ ಹೆಚ್ಚಿನ ಸ್ವಾತಂತ್ರ್ಯವಿದೆ. ಇಲ್ಲಿ ಭಾಷೆ ಸಂವಹನ ಮಾಧ್ಯಮವಾಗಿ ಮಾತ್ರ ದುಡಿಯುತ್ತದೆ. ಆದುದರಿಂದ ಭಾಷೆಯ ದೃಷ್ಟಿಯಿಂದ ಇದರ ಅಧ್ಯಯನ ಅನಗತ್ಯ ವೆನಿಸುತ್ತದೆ. ತಮಿಳು ಇತಿಹಾಸ - ಸಂಸ್ಕೃತಿಗಳನ್ನು ಅಭ್ಯಸಿಸುವವರಿಗೆ ಇದೊಂದು ಅಗತ್ಯ ಕೃತಿಯಾಗಿದೆ.

ಉತ್ತಮ ಅನುವಾದ ಮೂಲಕ್ಕೆ ಬದ್ಧವಾಗಿರಬೇಕೆಂಬುದು ಅನುವಾದದ ಮೂಲಭೂತ ನಿಯಮಗಳಲ್ಲಿ ಒಂದು. ಕಟ್ಟುನಿಟ್ಟಾಗಿ ವಿಮರ್ಶಿಸುವುದಾದಲ್ಲಿ, ಅನುವಾದ ಮೂಲಕ್ಕಿಂತ ಹೆಚ್ಚು ಉಜ್ವಲವಾಗಿ ಬಂದರೂ ಅದು ಅನುವಾದದ ದೋಷವೇ ಆಗುತ್ತದೆ. ನಿರಂಜನರಂಥ ಸೃಷ್ಟಿಶೀಲ ಸಾಹಿತಿಗಳು ಅನುವಾದಕರೂ ಆದಾಗ ಇಂಥ ಸಂದರ್ಭಗಳು ತಲೆಹಾಕುವುದು ತೀರ ಸಹಜ. ಆದರೆ ಕೃತಿಯ ಮೌಲಿಕತೆಗೆ ಅದರಿಂದ ಬಾಧೆಯಿಲ್ಲವಾದುದರಿಂದ ಅಂಥವನ್ನು ತೇಲಿಸಿ ಬಿಡಬಹುದೆನಿಸುತ್ತದೆ. ಅನುವಾದಕ ಮೂಲದ ಹಲವು ವಿವರಗಳನ್ನು ಅನಿವಾರ್ಯವಾಗಿ ಕೈಬಿಡಬೇಕಾಗು ತ್ತದೆ; ಅರ್ಥ ಸ್ಪಷ್ಟತೆಗಾಗಿ ಕೆಲವನ್ನು ಸೇರಿಸಬೇಕಾಗುತ್ತದೆ. ಇದು ನಿರಂಜನರಿಗೇ ವಿಶಿಷ್ಟವಲ್ಲವಾದುದರಿಂದ ಅಂಥವನ್ನು ಇಲ್ಲಿ ಗಣನೆಗೆ ತಂದುಕೊಂಡಿಲ್ಲ. ಮೂಲ ಕೃತಿಕಾರನ ವಿಧಾನವನ್ನೇ ಅನುಸರಿಸಿ ಆ ಚೌಕಟ್ಟು ಕೆಡದಂತೆ ಅನುವಾದ ಎಷ್ಟು ಸಮರ್ಪಕವಾಗಿ ಬಂದಿದೆ. ಕನ್ನಡತನವನ್ನು ಎಷ್ಟರಮಟ್ಟಿಗೆ ಮೈಗೂಡಿಸಿಕೊಂಡಿದೆ ಎಂಬುದನ್ನು ವಿಶ್ಲೇಷಿಸುವುದಷ್ಟೇ ಇಲ್ಲಿಯ ಲಕ್ಷ್ಯವಾಗಿದೆ. ಆದುದರಿಂದಲೇ ಒಟ್ಟು ಅನುವಾದಿತ ಕೃತಿಗಳಿಗೇ ಸಮಾನವಾಗಿರುವ ಅಂಶಗಳು ಇಲ್ಲಿ ಕ್ವಚಿತ್ತಾಗಿ ಬಂದಿವೆ. ನಿರಂಜನರ ಅನುವಾದಗಳಲ್ಲಿ 'clear glass translation' ಹಾಗೂ 'coloured glass translation' - ಈ ಎರಡೂ ವಿಧಗಳಿಗೆ ನಿದರ್ಶನಗಳು ದೊರೆಯುತ್ತವೆ. ದೇಶ - ಕಾಲದ ಪರಿಮಿತಿಯನ್ನು ಬಹುಮಟ್ಟಿಗೆ ಮೀರಿದ ಸಾಹಿತ್ಯಸೃಷ್ಟಿಯಲ್ಲಿ ನಿರಂಜನರಿಗೆ ಹಿರಿಯ ಸ್ಥಾನವನ್ನು ಕಲ್ಪಿಸಿಕೊಡುವಲ್ಲಿ ಅವರ ಅನುವಾದಗಳ ಪಾತ್ರವೂ ಕಿರಿದೇನಲ್ಲ.

೦

ಟಿಪ್ಪಣಿ :

* ಈ ಭಾಗದ ಮೂಲರೂಪದೊಡನೆ ಹೋಲಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

It seemed that until her arrival, I had been sleeping hidden away in the darkness. But she came and woke me up and led me out into the light. She spun all my surroundings into a single unbroken thread, then wove it into multi-coloured lace; she immediately became my friend for life, the one who was nearest and dearest to me and the one I most understood. Her selfless love of life enriched me and gave me the strength to cope with my hard future. (Childhood Page 23-24)

ಚಿರಸ್ಮರಣೆಯ ಅನುವಾದಕನಾಗಿ

– ಕೆದಂಬಾಡಿ ಜತ್ತಪ್ಪ ರೈ

ನಾನು ಸಾಹಿತ್ಯ ಕ್ಷೇತ್ರಕ್ಕಿಳಿದುದೇ ೧೯೭೯ರ ಸುಮಾರಿಗೆ. "ಅಷ್ಟರ ತನಕ ಏನನ್ನೂ ಬರೆದಿಲ್ಲವೇ?" ಎಂದು ಮಿತ್ರರಾರಾದರೂ ಕೇಳಿದರೆ "ಇದೆ. ಗರ್ಜಿಯ ಕಾಲದಲ್ಲಿ ಪ್ರೋನೋಟು. ನನಗಾಗದವರ ಮೇಲೆ ತಳ್ಳಿಯರ್ಜಿ" ಎನ್ನುತ್ತಿದ್ದೆ. ಎಪ್ಪತ್ತೊಂಬತ್ತರಲ್ಲಿ ನನ್ನ ಮೊದಲ ಕೃತಿ ಹೊರಬಂದಾಗ ಅನೇಕ ಸಾಹಿತಿಗಳ ಪರಿಚಯವಾಯಿತು. ತುಳುವರು ನನಗೆ ಪ್ರೋತ್ಸಾಹ ಕೊಟ್ಟದ್ದಲ್ಲದೆ ತುಳುವಿನಲ್ಲಿ ಬರೆಯುವಂತೆ ಪ್ರೇರೇಪಿಸಿದರು. ಅವರ ಆಶಯದಂತೆ ಮುನ್ನೂರು ತುಳು ಸುಭಾಷಿತಗಳ 'ಅಜ್ಜ ಬಿರು'ವನ್ನು ಅವರ ಕೈಗಿತ್ತೆ.

ಹಿಂದೆ ನಾನು ಬರೆದ ಕನ್ನಡ ಕೃತಿಗಳೆಲ್ಲವನ್ನೂ ನಿರಂಜನರಿಗೆ ಕೊಟ್ಟಿದ್ದೆ. ಇತರ ಸಾಹಿತಿಗಳಂತೆ ಅವರೂ ಒಳ್ನುಡಿಗಳನ್ನು ಬರೆದಿದ್ದರು. ಅಜ್ಜ ಬಿರುವನ್ನು ಓದಿದ ಅವರು "ತುಂಬಾ ಸಂತೋಷವಾಯಿತು. ಮರೆತ ನನ್ನ ತುಳುಮೋಕೆ ಜಾಗೃತವಾಯಿತು. ಮುಂದುವರಿಸಿ" ಎಂದು ಹೇಳಿದರು.

ಮುಂದುವರಿಸಿದೆ. ತುಳು ಚೋಮನದುಡಿ ಮತ್ತು ಯಮನ ಸೋಲು ಏಕಕಾಲದಲ್ಲಿ ಹೊರಬಂದುವು. ಎರಡು ಪುಸ್ತಕಗಳನ್ನೂ ನಿರಂಜನರಿಗೆ ಕಳುಹಿಸಿಕೊಟ್ಟು ತಿಂಗಳೊಪ್ಪತ್ತಿಗೆ ಬೆಂಗಳೂರಿಗೆ ಹೋದವನು. ಅವರೊಂದಿಗೆ ಮಾತಾಡುತ್ತಿದ್ದಾಗ "ಚೋಮನ ದುಡಿ ಅನುವಾದದ ಕುರಿತು ನಿಮ್ಮ ಅಭಿಪ್ರಾಯವೇನು?" ಎಂದು

ಕೇಳಿದೆ. ಆ ಬಗೆಗೆ ಚಕಾರವೆತ್ತದ ನಿರಂಜನರು "ಯಮುನಸೋಲು ನೀವು ತುಳುವಿನಲ್ಲಿ ಓದುವುದು ಕೇಳಿದರೆ ಕುವೆಂಪು ತುಂಬಾ ಸಂತೋಷಪಟ್ಟಾರು. ತುಳುಭಾಷೆ ನಿಮ್ಮ ಹಿಡಿತದಲ್ಲಿದೆ. ಸಾಧ್ಯವಿದ್ದಷ್ಟು ತುಳು ಸಾಹಿತ್ಯ ಸೇವೆ ನಡೆಸಿ" ಎಂದು ಹಾರೈಸಿದರು. ಕೂಡಲೇ ನನ್ನಲ್ಲಿ ಆಸೆಯೊಂದು ಅಂಕುರಿಸಿತು.

ತುಳುವಿನಲ್ಲಿ ಹಿಡಿತವಿದೆಯೆಂಬ ಅವರ ಶಿಫಾರಸು ಪತ್ರ ದೊರೆಯಿತು. ಹಾಗಿದ್ದಲ್ಲಿ ಅವರದೇ ಒಂದು ಕೃತಿಯನ್ನು ಅನುವಾದಿಸಿದರೇನು? ಎಂದು ಯೋಚಿಸಿದಾಗ ನೆನಪಿಗೆ ಬಂದ ಪುಸ್ತಕ ಈಗಾಗಲೇ ಹಲವು ಭಾಷೆಗಳಿಗೆ ಅನುವಾದಿತವಾದ 'ಚಿರಸ್ಮರಣೆ'. ನಾನು ಕುಡಿಯುವ ನೀರು, ಉಣ್ಣುವ ಅನ್ನದ ಮಣ್ಣಿಗೆ ಒಗ್ಗುವ ಕೃತಿ. ಧೈರ್ಯಮಾಡಿ ಕೇಳಿಯೇ ಬಿಟ್ಟೆ: "ನಿಮ್ಮ ಚಿರಸ್ಮರಣೆಯನ್ನು ತುಳುವಿಗೆ ಅನುವಾದಿಸಲೇ?"

ಮೊದಲು ಹಿಂದೇಟು ಹೊಡೆದರು. ಜ್ಞಾನಪೀಠ ಪ್ರಶಸ್ತಿ ವಿಜೇತರ ಕೃತಿಗಳನ್ನು ಅನುವಾದಿಸಿದ ನಾನು ಅವರ ಕಾದಂಬರಿಯನ್ನು ತುಳುವಿಗೆ ಅನುವಾದಿಸಲು ಅಸಮರ್ಥನೆಂದಲ್ಲ. ನನ್ನ ಈ ಎಪ್ಪತ್ತರ ವಯಸ್ಸಿನಲ್ಲಿ, ದೇಹಾರೋಗ್ಯ ಸರಿಯಿಲ್ಲದ ಸಮಯ, ನಾನ್ನೂರು ಪುಟಗಳಿಗೂ ಮಿಕ್ಕಿದ ಕೃತಿಯನ್ನು ಭಾಷಾಂತರಿಸುವ ಕಷ್ಟ ಕೊಡಬೇಕಲ್ಲಾ ಎಂಬ ಸಂಕೋಚ. ನಾನು ಇದನ್ನು ನಿಮ್ಮ ಸವಾಲೆಂದು ಸ್ವೀಕರಿಸುವುದಾಗಿ ಪಂಥಾಹ್ವಾನ ಒಡ್ಡಿದಾಗ ಒಪ್ಪಿಗೆ ಕೊಟ್ಟರು: "ಹಾಗಾದರೆ ನನ್ನ ಚಿರಸ್ಮರಣೆ 'ಮದಪ್ಪಂದಿ ನೆಂಪು' ಆಗಿ ತುಳುವಿನಲ್ಲೂ ಉಳಿಯುವುದು. ಆಗಲಿ" ಎಂದರು.

ಚಿರಸ್ಮರಣೆಯನ್ನು ಹಿಂದೆ ಎಂದೋ ಓದಿದ ನೆನಪು. ಅದರ ಪ್ರತಿಗಳು ಕೂಡಾ ಎಲ್ಲಿ ದೊರೆಯುವವೆಂದು ನಾನು ಅರಿತವನಲ್ಲ. ಅದರೆ ಹಲವು ಮರುಮುದ್ರಣಗಳನ್ನು ಕಂಡ ಆ ಕೃತಿಯ ಒಂದು ಪ್ರತಿಯೂ ಲೇಖಕರ ಪುಸ್ತಕ ಭಂಡಾರದಲ್ಲಿ ಅಲಭ್ಯ. ಕೊನೆಗೆ ಸೀಮಂತಿನಿಯ ಹುಡುಕಾಟದ ಫಲವಾಗಿ ಒಂದು ಜೀರ್ಣ ಪ್ರತಿ ದೊರೆಯಿತು. ಕೃತಿಯ ಆಂಗ್ಲಾನುವಾದವನ್ನು ನೋಡೋಣವೆಂದರೆ ಅದೂ ಸಿಕ್ಕಲಿಲ್ಲ. ಪರವಾಗಿಲ್ಲವೆಂದುಕೊಂಡು ಚಿರಸ್ಮರಣೆಯ ಹಳೆಯ ಪ್ರತಿಯೊಂದಿಗೆ ಮನೆಗೆ ಮರಳಿದೆ.

ಎಸ್.ಎಸ್.ಎಲ್.ಸಿ.ಯಲ್ಲಿ ಕಲಿಯುವ ಮಗಳಿಗೆ ಪಾರ್ಲೆ ಬಿಸ್ಕತ್ತಿನ 'ಲಂಚ' ನೀಡಿ ಅವಳು ಕಾದಂಬರಿಯನ್ನು ನಿಧಾನವಾಗಿ ಓದುವಂತೆ ಏರ್ಪಾಟು ಮಾಡಿದೆ. ನಾನು ತುಳುವಿನಲ್ಲಿ ಅನುವಾದಿಸುತ್ತಾ ಹೋದೆ.

ಈಗ ನಿರಂಜನರಿಂದ ನನಗೆ ವಾರಕ್ಕೊಂದು ಪತ್ರ - ಅನುವಾದ ಹೇಗೆ ಸಾಗುತ್ತಿದೆ? ಎಂದು ವಿಚಾರಿಸಿ. ನಿರಂಜನರಿಗೆ ತುಳು ಪತ್ರವೆಂದರೆ ತುಂಬಾ ಆನಂದ. ಆದ್ದರಿಂದ ಅವರಿಗೆ ತುಳುವಿನಲ್ಲೇ ಉತ್ತರ ಬರೆಯುತ್ತಿದ್ದೆ. ಸೀಮಂತಿನಿಗೆ ಅದು ಅರ್ಥ ವಾಗದ್ದರಿಂದ ಅವಳೊಂದಿಗೆ ವ್ಯವಹಾರ ಕನ್ನಡದಲ್ಲಿ. ನಿರಂಜನರಿಗಾದರೋ ಆತುರ; ಅನುವಾದ ಹೇಗೆ ಬಂದಿದೆ ನೋಡೋಣವೆಂದು. ನನಗೋ ಭಯ; ಈ ಇಳಿವಯಸ್ಸಿ ನಲ್ಲಿ, ಅದೂ ಇತ್ತೀಚೆಗೆ ಬರೆಯಲಾರಂಭಿಸಿದ್ದರಿಂದ ಎಷ್ಟು ತಪ್ಪು, ದೋಷ ಗಳಿವೆಯೋ ಎಂದು. ನನ್ನ ಪರಿಸ್ಥಿತಿಯನ್ನರಿತ ಅವರು ಬರೆದರು: "ಮಲ್ಲೆಯಿದ್ದಿ ಮಾರಾಯರೇ! ಈರ್ ಬರೆಯಿನೆನ್ ಓದ್ಯರೆ ಬೋಡಾಯಿನಾತ್ ತುಳು ಯಾನ್ ಇತ್ತೆ ಪಿರಪಿಂಬೆ. ಯಾನ್ ತುಳುಡ್ದು ದೂರ ಆದ್ ಒಸೊರ್ಂ ನಲ್ಪ - ನಲ್ಪತ್ತೈನ್ ಕರಿಂಡಲಾ ಅವು ಯೆನನ್ ದೂರ ಮಲ್ತ್‌ದ್‌ಜಿ. ಈರೆ ತುಳು ಯೆನ್ನನ್ ಏಪೊಲಾ ಬೊಡಿಪ್ಪಾವಂದ್. ಕಡಪ್ಪುಡ್ದು ಕೊರ್ಲೆ."

ಬರೆದಾದ ಏಳು ಅಧ್ಯಾಯಗಳನ್ನು ಬರೆಯಲು ತೊಡಗಿದ ಏಳನೇ ದಿನವೇ ಕಳುಹಿಸಿದೆ. ನಿರಂಜನರಿಂದ ಮರುತ್ತರ: "ಓದಿ ನೋಡಿದೆ. ತೃಪ್ತಿಪಟ್ಟೆ. ನಿಮ್ಮ ಬರವಣಿಗೆಯು ಶರವೇಗದಿಂದ ಸಾಗಿದೆ. ಕೆಲವು ವರ್ಷಗಳಿಗೆ ಮೊದಲೇ ನೀವು ಈ ವೃತ್ತಿಗೆ ಇಳಿಯುತ್ತಿದ್ದರೆ ಅದು ಮನೋವೇಗಕ್ಕೆ ಮುಟ್ಟುತ್ತಿತ್ತು. ಮುಂದುವರಿಸಿ".

ತಿಂಗಳೊಪ್ಪತ್ತಿನಲ್ಲಿ ಅವರ ಆಶಯದಂತೆ ಚಿರಸ್ಮರಣೆಯ ಅನುವಾದ 'ಮದಪ್ಪಂದಿ ನೆಂಪು' ಆಗಿ ಮುಗಿಯಿತು. ಬರೆದಂತೆ ಬರೆದುದನ್ನು ಹಿಂದಿರುಗಿ ನೋಡದೆ ಕಳುಹಿಸಿದೆ. ಕೊನೆಯ ಅಧ್ಯಾಯವನ್ನು ಬರೆದು ಮುಗಿಸುವಾಗ ನನಗೆ ಪುನಃ ಹೃದಯಾಘಾತವಾದಷ್ಟು ವೇದನೆ.

ಅಳುತ್ತಾ ಅಳುತ್ತಾ ನನ್ನ ಮಗಳು ಓದಿ ಹೇಳುತ್ತಿದ್ದಳು. ಕಣ್ಣೀರನ್ನು ಒರಸಲೂ ಮರೆತು ನಾನು ಬರೆಯುತ್ತಿದ್ದೆ. ಮನೆಮಕ್ಕಳು ಇದೇನು ವಿಚಿತ್ರವೆಂದು ಕಣ್ಣಗಲಿಸಿ ನೋಡುತ್ತಿದ್ದರು. ಆ ಕೊನೆಯ ಸಾಲು ನಿರಂಜನರ ಒಡಲಾಳದಿಂದ ಹೊರಬಂದ ರೈತನ ಮರುಕದ ಧ್ವನಿ: "ಕಯ್ಯೂರ್ದ ರೈತೆರೆಗ್ ನೆತ್ತೆರ್ದ ಸೊಲ್ಮೆ."

'ಮದಪ್ಪಂದಿ ನೆಂಪು' ಅಚ್ಚಾಗಿ ಬರುವುದಕ್ಕೆ ಮೊದಲೇ ನನ್ನ ಕಣ್ಣು ನಂಬದ, ನಾನು ಊಹಿಸದೇ ಇದ್ದ, ಸಾಹಿತಿಯೊಬ್ಬನ ಬದುಕಿನಲ್ಲಿಯೇ ಅಪೂರ್ವವೆನ್ನಬಹುದಾದ ಪ್ರಸಂಗ.... ಗಣ್ಯ ಸಾಹಿತಿಯೊಬ್ಬರ ಕೃತಿಯನ್ನು ಕಿರಿಯನೊಬ್ಬನು ಅನುವಾದಿಸ ಬೇಕಾದರೆ ಸಾಕಷ್ಟು ರಾಯಧನವನ್ನು ಕೊಟ್ಟು ಅನುಮತಿ ಪಡೆಯಬೇಕಾಗುತ್ತದೆ. ಆದರೆ ನಿರಂಜನರು ನನಗೆ ತಮ್ಮ ಅಪೂರ್ವ ಕೃತಿಯನ್ನು ಭಾಷಾಂತರಿಸಲು ಅವಕಾಶ ಕೊಟ್ಟದ್ದಲ್ಲದೆ ಮೆಚ್ಚಿನುಡುಗೊರೆಯಾಗಿ ಒಂದುಸಾವಿರ ರೂಪಾಯಿಗಳ ಡ್ರಾಫ್ಟ್

ಕಳುಹಿಸಿಕೊಟ್ಟರು. ನಾನದನ್ನು ಪ್ರತಿಫಲಾಪೇಕ್ಷೆಯಿಂದ ಬರೆದುದಲ್ಲವೆಂದು ತಿಳಿಸಿದಾಗ ಅವರು "ನಾನು ಪುಕ್ಕಟೆ ಯಾರನ್ನೂ ದುಡಿಸಲು ಸಿದ್ಧನಿಲ್ಲ" ಎಂದು ಸ್ಪಷ್ಟಪಡಿಸಿದರು.

'ಮದಪ್ಪಂದಿ ನೆಂಪು' ಅಚ್ಚಾಗಿ ಮಂಗಳೂರಿನಲ್ಲಿ ದ್ವಿತೀಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಂದು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಿಂದ ಡಾ। ಹಂ.ಪ.ನಾ. ಅವರ ಹಿರಿತನದಲ್ಲಿ ಬಿಡುಗಡೆಗೊಂಡಾಗ ಪುಸ್ತಕ ನೋಡಿದ ನನಗೆ ಅಚ್ಚರಿ: ಇದು ನಾನು ಬರೆದುದೇ - ಎಂದು. ಹೌದು! ತುಳು ನನ್ನದೇ. ಅಚ್ಚು ತಪ್ಪಿನ ಮಾತು ಒತ್ತಟ್ಟಿಗಿರಲಿ. ಅನುವಾದದಲ್ಲಿ ಅನಿವಾರ್ಯವಾಗಿ ಬರುವ ಪುನರುಕ್ತಿ ಕೂಡ ಇಲ್ಲಿ ಇಲ್ಲವಾಗಿದೆ. ನನ್ನ ಉದ್ದುದ್ದ ವಾಕ್ಯಗಳು ಚಿಕ್ಕದಾಗಿ ಆಶಯಕ್ಕೆ ಲೋಪಬಾರದಂತೆ ತಿದ್ದಿ ಬಂದಿದೆ.

ತುಳುವಿನಿಂದ ದೂರವಾದೆನೆಂದು ಕೊರಗುವ ನಿರಂಜನರು ತುಳುವರಿಂದ, ತುಳುವಪ್ಪೆಯಿಂದ, ತುಳುನಾಡಿನಿಂದ ದೂರವಾಗಿಲ್ಲವೆಂದು ಧ್ವನಿಯೆತ್ತಿ ಹೇಳುವೆ. ಅವರು ಇನ್ನೂ ತುಳು ಕವಿತೆ, ಕಾದಂಬರಿ ಬರೆಯತೊಡಗಿದರೆ ಓದಿದವರು ಎದ್ದು ನಿಲ್ಲುವಂತೆ ಮಾಡುವ ಶಕ್ತಿ ಅವರ ಕೈಗಳಲ್ಲಿದೆ. ○

ಜ್ಞಾನಗಂಗೋತ್ರಿ : ಯಾತ್ರೆ*

–ಅಡ್ಯನಡ್ಕ ಕೃಷ್ಣ ಭಟ್*

ವಿಶ್ವಕೋಶವೆಂದರೆ ಸಮಗ್ರ ವೃತ್ತದ ಜ್ಞಾನವನ್ನೊಳಗೊಂಡ ಜ್ಞಾನಕೋಶ. ಅಕ್ಷರಾನುಕ್ರಮದಲ್ಲಿ ಶೀರ್ಷಿಕೆಗಳಿರುವ ಲೇಖನ ರೂಪದ ಜ್ಞಾನಖಂಡಗಳಿರುವುದು ಇಲ್ಲಿನ ಕ್ರಮ. ಹೀಗೆ ಕನ್ನಡದ ಕಿರಿಯರಿಗಾಗಿ ರೂಪುಗೊಂಡ ಮೊತ್ತಮೊದಲ ವಿಶ್ವಕೋಶ ಏಳು ಸಂಪುಟಗಳ 'ಜ್ಞಾನಗಂಗೋತ್ರಿ'.

ಕಿರಿಯರ ವಿಶ್ವಕೋಶದ ಕಲ್ಪನೆ ಯೋಜನೆಯಾಗಿ ಹರಳುಗಟ್ಟಿದ್ದು ೧೯೬೮ರಲ್ಲಿ. ಉದ್ಘಾಟನೆಯೊಂದಿಗೆ ಯೋಜನೆ ದಡ ಬಿಟ್ಟದ್ದು ೧೯೬೯ರ ಜೂನ್ ೧೦ರಂದು. ನೋವು, ಸಾವು, ಸಂಕಷ್ಟಗಳು ಎದುರಾದರೂ ಪರದಾಟದ ಮೊದಲ ಸಂಪುಟಕ್ಕೆ ಒಂದು ವರ್ಷ ಎರಡು ತಿಂಗಳು ಬೇಕಾಯಿತು. ಮುಂದೆ ಸರಾಸರಿ ವರ್ಷಕ್ಕೆರಡು ಬಾರಿ ಹೇರಿಳಿಸುತ್ತ ಎಲ್ಲೂ ಲಂಗರು ಹಾಕದೆ ದಂಡೆಯಲ್ಲಿ ನಿಂತವರೆಲ್ಲ

ಚಪ್ಪಾಳೆ ತಟ್ಟುತ್ತಿದ್ದಂತೆ ಮತ್ತೊಂದು ದಡ ಸೇರಿ ಮಂಗಳ ಹಾಡಿದ್ದು ೧೯೭೪ರ ಮಾರ್ಚ್ ೧೧ರಂದು - ಹೋಳಿಯ ದಿನ. ಆಗ ಯೋಜನೆ ಮುಗಿದಿತ್ತು; ಸಾಲ ತೀರಿತ್ತು. ಮೊದಲಿಂದ ಕೊನೆಯ ವರೆಗೂ ಅದರ ಕರ್ಣಧಾರರಾಗಿದ್ದವರು ನಿರಂಜನ. ಪಯಣ ಪ್ರಾರಂಭವಾದ ಮೇಲೆ ಹೇಗಿದೆ ನೋಡೋಣ ಎಂದುಕೊಂಡು ಪೂರ್ಣ ಅಪರಿಚಿತನಾದರೂ ಹಿಂದೆ ಮುಂದೆ ನೋಡದೆ ನೆಗೆದವನು ನಾನು. ಕೆಲಸದ ಅಮಲಿನಲ್ಲಿ ನಾಲ್ಕು ವರ್ಷಗಳನ್ನು ಕಳೆದೆ. ಇಂದಿಗೂ ಒಟ್ಟಾರೆ ನೆನಪಾಗುವುದು ಆ ಗಾಢ ಅಮಲು.

ಸಂಪುಟ ರೂಪದಲ್ಲಿ ಹೇರಳಿಸುವಾಗಲೆಲ್ಲ ನಿರಂಜನರು ಜ್ಞಾನಗಂಗೋತ್ರಿ ಪಯಣದ ಕತೆಯನ್ನು ಚುಟುಕಾಗಿ ನಿರೂಪಿಸಿದ್ದಾರೆ. ಕೊನೆಗೆ ಹೋಳಿಯ ದಿನ ಹೃದಯಸ್ಪರ್ಶಿ ನಮಸ್ಕಾರ ಹೇಳಿದ್ದಾರೆ. ನಾನು ಏನು ಹೇಳುವುದಿದ್ದರೂ ಅದಕ್ಕೆ ಪೂರಕವಾಗಿ ಅಷ್ಟೆ.

ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದ ಬೃಹತ್ ಯೋಜನೆಯಾಗಿ ಜ್ಞಾನಗಂಗೋತ್ರಿ ಹುಟ್ಟಿಕೊಂಡಿತು. ನಿರಂಜನರೇ ಅದರ ಪ್ರಧಾನ ಸಂಪಾದಕರೆಂದು ಹೇಳುವುದರಿಂದ ಅವರು ವಹಿಸಿದ ಪಾತ್ರದ ಪೂರ್ಣ ಕಲ್ಪನೆಯಾಗದು. ಯೋಜನೆ ಚಾಲೂ ಆದದ್ದು ಸರಕಾರ ನೀಡಿದ ೯ ಲಕ್ಷದ ಸಾಲೋಗರದಿಂದ. ಸಾಲದ ಕರಾರು ಪತ್ರಕ್ಕೆ ನಿರಂಜನರೂ ಸಹಿ ಹಾಕಿದ್ದರು. ಅಂದಿನಿಂದಲೇ ನಿಯತ ಕಾಲದಲ್ಲಿ ಸಾಲ ತೀರಿಸುವುದಕ್ಕೂ ಅವರು ಮಾನಸಿಕವಾಗಿ ಬದ್ಧರಾಗಿದ್ದರು. ಯೋಜನಾವಧಿಯಲ್ಲಿಡೀ ಅವರು ಕಾತರರಾಗಿದ್ದ ಒಂದು ಅಂಶ ಸಾಲದ ಕಂತು ತೀರಿಕೆ ಮತ್ತು ಆಯ-ವ್ಯಯ ತೋಲನೆ. ಅವರು ಗಂಭೀರವಾಗಿ ತೆಗೆದುಕೊಂಡ ಮತ್ತೊಂದು ವಿಚಾರ - ಕನ್ನಡದ ಜಾಣ-ಜಾಣೆಯರಿಗೆ ಉಪಯುಕ್ತವೂ ಆಕರ್ಷಕವೂ ಆಗುವಂತೆ ಜ್ಞಾನಗಂಗೋತ್ರಿಯ ಸಂಪುಟಗಳನ್ನು ತುಂಬುವ ಜವಾಬ್ದಾರಿ. ಜಗತ್ತಿನ ಎಲ್ಲ ಜ್ಞಾನಕ್ಷೇತ್ರಗಳಿಂದ ಆಯ್ದ ಹರಳುಗಳ ರಾಶಿ ಜ್ಞಾನಗಂಗೋತ್ರಿಯ ಸರಕಾಗಬೇಕಾಗಿತ್ತು. ಹರಳುಗಳಲ್ಲಿ ಒಂದೊಂದನ್ನೇ ಕಡೆದು, ಸಾಣೆ ಹಿಡಿದು ಪಟ್ಟೆ ಕಟ್ಟಿ ಸಾಧ್ಯವಿದ್ದಷ್ಟೂ ಮೆರುಗು ಹೆಚ್ಚಿಸುವ ಕೆಲಸ ಜ್ಞಾನಗಂಗೋತ್ರಿಯ ಸಿಬ್ಬಂದಿಯಿಂದ ಆಗಬೇಕಿತ್ತು. ಶೀರ್ಷಿಕೆಗಳ ಆಯ್ಕೆಯಿಂದ ಹಿಡಿದು ಮುದ್ರಣವಾಗಿ ಸಂಪುಟಗಳು ಬಿಡುಗಡೆಯಾಗುವ ವರೆಗಿನ ಎಲ್ಲ ಹಂತಗಳೂ ಸುಲಲಿತವಾಗಿ ಸಾಗಲು ಪ್ರಕಾಶನ ಮಂದಿರದ ಆಡಳಿತ ಸಮಿತಿಯಷ್ಟೇ ಅಲ್ಲದೆ ಸಂಪಾದಕ ಮಂಡಳಿ, ಸಂಯೋಜನಾ ಸಮಿತಿ, ತಾಂತ್ರಿಕ ಸಮಿತಿ, ಸಂಪಾದಕೀಯ ಸಮಿತಿ, ಸಂಪಾದಕ ವರ್ಗ, ಕಚೇರಿ ಸಿಬ್ಬಂದಿ, ಸರ್ಕಾರೀ ಮುದ್ರಣಾಲಯದ ಸಿಬ್ಬಂದಿ ಎಲ್ಲರೂ ಲಕ್ಷ್ಯದತ್ತ ಕೇಂದ್ರೀಕರಿಸಬೇಕಾಗಿತ್ತು. ಇವೆಲ್ಲದರಲ್ಲೂ ನಿರಂಜನ ಎಲ್ಲದಕ್ಕೂ ಚಾಲಕದಂಡದಂತಿದ್ದರು.

ಶೀರ್ಷಿಕೆಯ ಆಯ್ಕೆಯಿಂದ ಹಿಡಿದು ಸಂಪುಟವೊಂದು ಪೂರ್ಣರೂಪ ತಾಳುವ ವರೆಗೆ ಹಲವು ಹಂತಗಳನ್ನು ದಾಟಬೇಕಾಗಿತ್ತು. ಬುದ್ಧಿ ಪ್ರಧಾನವಾದ, ಯಾಂತ್ರಿಕ ರೀತಿಯ ಹಾಗೂ ಕಲಾತ್ಮಕ ಕೆಲಸಗಳು ಒಂದರ ಮೇಲೊಂದು ಬಂದು ಬೀಳುತ್ತಿದ್ದಾಗ ಸಂಘಾಹ್ವಾನವನ್ನು ಸ್ವೀಕರಿಸಲೇಬೇಕಾಗಿತ್ತು. ಕೊನೆಗೆ ಮೈದಾಳಿದ ಜ್ಞಾನಗಂಗೋತ್ರಿ ಬರಿಯ ಕಾಗದದ ಮೇಲಿನ ಲೇಖನ ಚಿತ್ರ - ವ್ಯವಸ್ಥೆ ಎಂದಿಟ್ಟು ಕೊಂಡರೂ ಒಟ್ಟು ೩೭೮೨ ಲೇಖನಗಳು, ೩೮೦೦ ರೇಖಾಚಿತ್ರಗಳು, ೩೭೫೦ ಛಾಯಾ ಚಿತ್ರಗಳು, ೨೯೧ ವರ್ಣ ಚಿತ್ರಗಳು, ೨೦ ಸಾವಿರ ಸಂದರ್ಭ ಸೂಚಿ ಪದಗಳು, ಶಬ್ದ ಕೋಶದ ೬೭೦೦ ಪದಗಳು ಕಂಡುಬರುತ್ತವೆ. ಇವೆಲ್ಲ ಡೆಮ್ಮಿ ಚತುರ್ಥ ಆಕೃತಿಯ ೫೦೦೦ ಪುಟಗಳಲ್ಲಿ ಹರಡಿವೆ. ಆದರೆ ಭಾವನಾತ್ಮಕವಾಗಿ ಬೆಸೆದ ಜ್ಞಾನಗಂಗೋತ್ರಿಯ ಬಳಗಕ್ಕೆ ನಿರಂಜನರು ಹೇಳುವಂತೆ “ಜ್ಞಾನಗಂಗೋತ್ರಿ ಎಂದರೆ ಉಸಿರು ರಕ್ತ ಮಾಂಸ ತುಂಬಿಕೊಂಡಿರುವ ಜೀವರೂಪ”.

ಶಾಲೆಗಳಿಗೆ ವಿತರಣೆಗಾಗಿ ಸರಕಾರ ೧೫೦೦೦ ಪ್ರತಿಗಳನ್ನು ಮುದ್ರಣ ಖರ್ಚಿನ ಆಧಾರದ ಮೇಲೆ ಪಡೆದುಕೊಳ್ಳಲು ಒಪ್ಪಿತ್ತು. ಬಿಡುಗಡೆಯಾದ ಕೂಡಲೇ ಜ್ಞಾನಗಂಗೋತ್ರಿ ಸಂಪುಟಗಳು ಸಾಧ್ಯವಿದ್ದಷ್ಟು ತ್ವರಿತವಾಗಿ ಎಲ್ಲ ಕೇಂದ್ರಗಳಿಗೂ ತಲಪಬೇಕೆಂದು ನಿರಂಜನರು ಚಡಪಡಿಸುತ್ತಿದ್ದರು. ಬರಿಯ ಶಾಲೆಗಳಿಗೆ ಹೋದರೆ ಸಾಲದು, ಮನೆಮನೆಗಳಿಗೂ ತಲಪಬೇಕೆಂದು ಆಸಕ್ತರಿಗೆ ಪ್ರಕಟಣ ಪೂರ್ವ ರಿಯಾಯತಿ ಬೆಲೆಯಲ್ಲಿ ಜ್ಞಾನಗಂಗೋತ್ರಿ ಕೊಳ್ಳಲು ಸಾಲನೀಡುವಂತೆ ಕೆನರಾ, ಸಿಂಡಿಕೇಟ್, ವಿಜಯಾ, ಕರ್ಣಾಟಕ, ವೈಶ್ಯ ಬ್ಯಾಂಕುಗಳನ್ನು ಒಪ್ಪಿಸುವ ಕೆಲಸ ಮಾಡಿದರು. ಹೀಗೆ ನಿರಂಜನರು ಮುಖ್ಯವಾಗಿ ಆಸಕ್ತಿ ವಹಿಸಿದ ಮೂರನೆಯ ಅಂಶ ಸಲ್ಲಬೇಕಾದವರಿಗೆ ತಲಪುವಂತೆ ಜ್ಞಾನಗಂಗೋತ್ರಿಯ ವಿತರಣೆ. ಸುರಕ್ಷತೆಗಾಗಿ ಪ್ಲಾಸ್ಟಿಕ್ ಜ್ಯಾಕೆಟ್ ಹಾಕಿದರೆ ಹೇಗೆ? ರಟ್ಟಿನ ಪೆಟ್ಟಿಗೆಯ ವಿನ್ಯಾಸ ಎಂಥದು? ಕಡಮೆ ವೆಚ್ಚದಲ್ಲಿ ಹೇಗೆ ತಯಾರಿ ? ವಿವರಗಳ ಚರ್ಚೆ ಮತ್ತು ನಿಷ್ಕರ್ಷೆ ಅವರಿಗೆ ಸಹಜವಾಗಿತ್ತು.

ಪ್ರಧಾನ ಸಂಪಾದಕನಾದವನೊಬ್ಬ ಸಂಪುಟ ಸಂಪಾದನೆಯೊಂದಿಗೆ ಇವೆಲ್ಲವನ್ನೂ ಮಾಡಬೇಕಾಗಿತ್ತೆ? ಜ್ಞಾನಗಂಗೋತ್ರಿಯ ಸಾಂಸ್ಥಿಕ ಚೌಕಟ್ಟಿನಲ್ಲಿ ಅದು ಅನಿವಾರ್ಯವಾಗಿತ್ತು. ಮೇಲಾಗಿ ಸಂಪುಟಗಳನ್ನು ಹೊರತಂದು ಸಾಲ ತೀರಿಸುವುದು ತನ್ನ ವೈಯಕ್ತಿಕ ಹೊಣೆಯೆಂದು ನಿರಂಜನ ನ್ಯಾಯವಾಗಿ ನಂಬಿದ್ದರು. ‘ಲಕ್ಷಾಂತರ ರೂಪಾಯಿ ವ್ಯವಹಾರ’ ಎಂಬ ಸಂಶಯದ ದೃಷ್ಟಿ, ‘ವಿಶ್ವಕೋಶ ಎಂದರೆ ಕಥೆ ಕಾದಂಬರಿಯಲ್ಲ. ಕೆಲಸ ಮುಗಿಸಲು ೧೦–೧೫ ವರ್ಷಗಳಾದರೂ ಬೇಕಾದಾವು’ ಎಂಬ ಲಕ್ಷ್ಯಹೀನ ಮಾತು ನಮ್ಮ ಸಾಮಾಜಿಕ ಸ್ಥಿತಿಯಲ್ಲಿ ದೊಡ್ಡದಲ್ಲದಿರಬಹುದು.

ಆದರೆ ನಿರಂಜನರ ಸೂಕ್ಷ್ಮ ಮನಸ್ಸು ಅಂಥ ಮಾತುಗಳಿಂದ ನೊಂದಿತ್ತು. ಸತ್ಯವೊಂದು ಸತ್ಯವಾಗುವುದು ಲೋಕ ನಂಬಿದರೆ ತಾನೆ ? ಹಾಗೆ ಲೋಕ ನಂಬುವಂಥ ವ್ಯವಸ್ಥೆಯನ್ನು ಹಣದ ವಹಿವಾಟು ಮತ್ತು ದಿನನಿತ್ಯದ ಆಡಳಿತದಲ್ಲಿ ನಿರಂಜನರು ಕಟ್ಟಿದರು. ಸರಕಾರಿ ಮುದ್ರಣಾಲಯದಲ್ಲೇ ಬ್ಲಾಕು ತಯಾರಿ ಮತ್ತು ಮುದ್ರಣ ನಡೆದು ಹಣ ಪಾವತಿಯಾದದ್ದು ಇಂಥ ವ್ಯವಸ್ಥೆಯಿಂದಾಗಿ.

ಸಂಪಾದಕ ವರ್ಗದ ನೇಮಕಾತಿಯಲ್ಲಿದ್ದುದು ಮುಕ್ತ ವ್ಯವಹಾರದ ನೀತಿ. ಅಲ್ಪಕಾಲೀನ ಯೋಜನೆಯಲ್ಲಿ ಉದ್ಯೋಗಾರ್ಥಿಗೆ ದೀರ್ಘಕಾಲೀನ ಭದ್ರತೆಯ ಭರವಸೆ ಇಲ್ಲವಷ್ಟೆ? ವಿಶಿಷ್ಟ ಯೋಜನೆಯೆಂದು ಸಿಬ್ಬಂದಿಗೆ ಪರವಾದ ಕ್ರಮಗಳನ್ನು ತೆಗೆದುಕೊಂಡರೂ ಸಹಕಾರೀ ಸಂಸ್ಥೆಗಳ ನಿಯಮಗಳಿಗನುಗುಣವಾದ ಸಂಬಳ - ರಜೆ ಸೌಲಭ್ಯಗಳಿಂದ ತೀರ ದೂರ ಹೋಗುವಂತಿರಲಿಲ್ಲ. ಆದ್ದರಿಂದ ಇರುವಷ್ಟು ದಿನ ದುಡಿಯುವ, ಕಲಿಯುವ, ಕಲಿತು ತಿಳಿಸುವ ಮನಸ್ಸೇ ಸಂಪಾದಕ ವರ್ಗಕ್ಕೆ ಸೇರುವ ಅಭ್ಯರ್ಥಿಗೆ ಮುಖ್ಯವಾಗಿತ್ತು. ಹೀಗೆ ಬಂದ ಹಲವು ಬಂಧುಗಳು ಬರೆಹದ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ತಂಡದ ಕೆಲಸದಿಂದ ಬರಿಯ ವಿಶ್ವಕೋಶ ಸಂಪುಟಗಳಷ್ಟೇ ಅಲ್ಲದೆ ಅಂಥ ಸೃಷ್ಟಿಕ್ರಿಯೆಯಲ್ಲಿ ತೊಡಗಬಲ್ಲ ಅನೇಕ ಯುವಕರು ತಯಾರಾದದ್ದೂ ಒಂದು ಲಾಭ.

ಸಂಪಾದಕ ಮಂಡಲಿ, ಸಮಾಲೋಚಕರು, ಲೇಖಕರ ಪಟ್ಟಿಯಲ್ಲಿ ಕರ್ನಾಟಕದ ಖ್ಯಾತ ವಿದ್ವಾಂಸರು, ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರು, ಕ್ರೀಡಾ ಪರಿಣತರು ಸೇರಿದರು. ಗುಣ ಸಾಮರ್ಥ್ಯಕ್ಕೆ ಮೊದಲ ಮಣೆ ಸಂದಾಗ ಹೀಗಾಗುವುದು ಸಹಜ. ವ್ಯಕ್ತಿ ವೈವಿಧ್ಯ ಮತ್ತು ಪ್ರದೇಶ ವೈವಿಧ್ಯಗಳ ಮೇಳನದಿಂದ ಹುಟ್ಟುವ ವಿಶಿಷ್ಟ ಮೆರುಗು ಕೂಡ ನಿರಂಜನರಿಗೆ ಮೆಚ್ಚಿನದು. ತಲಚೇರಿಕರ್, ಡಿ.ವಿ.ಜಿ., ಮೂರ್ತಿರಾವ್, ಮು. ಗು. ಹಂದ್ರಾಳ, ಮಿರ್ಜಿ ಅಣ್ಣಾರಾಯ್, ಆಚಾರ್ಯ ಬುದ್ಧ ರಕ್ಷಿತ ಥೇರ, ಸಿಂಪಿ ಲಿಂಗಣ್ಣ, ಎಂ.ಎಚ್. ಮರಿಗೌಡ, ಎಂ.ಸಿರ್ಸಿ, ಹಮ್‌ಜು ಜಗಳೂರು ಇಮಾಮ್, ಶ್ರೀ ಶ್ರೀ ನಿರಂಜನ ಪ್ರಣವ ಸ್ವರೂಪಿ ಶ್ರೀ ಶಿವಕುಮಾರ ಸ್ವಾಮಿಗಳವರು, ಎಚ್.ನರಸಿಂಹಯ್ಯ, ಭಾಸ್ಕರ ಯೇಸುಪ್ರಿಯ - ನೂರಾರು ಸಮಾಲೋಚಕರಲ್ಲಿ ಕೆಲವರು.

ಬರೆಹ, ಪರಿಷ್ಕರಣ, ಟೈಪಿಂಗ್, ಮರುಪರಿಷ್ಕರಣ, ರೇಖಾಚಿತ್ರ ತಯಾರಿ, ಛಾಯಾಚಿತ್ರ ಸಂಗ್ರಹ, ಕಿರಿಯರಿಂದ ಲೇಖನ ಪರೀಕ್ಷೆ, ಸಮಾಲೋಚಕರಿಂದ ಮೌಲ್ಯಮಾಪನ, ಮುದ್ರಣದ ವಿವಿಧ ಹಂತಗಳು - ಪ್ರೂಫ್‌ಗಳು, ಪ್ರತಿಯೊಂದು ಪುಟದ ವಿನ್ಯಾಸ, ಸಂದರ್ಭಸೂಚಿ, ಶಬ್ದಕೋಶ - ಹೀಗೆ ೧೦-೧೫ ಹಂತಗಳಲ್ಲಿ

ಎರಡು - ಮೂರು ಗುಂಪುಗಳ ಕೆಲಸ ಏಕಕಾಲದಲ್ಲಿ ನಡೆಯುತ್ತಿದ್ದಾಗ ಬೇರೆ ಬೇರೆ ಹಂತಗಳಾವುವು ಎಂದು ಗುರುತಿಸಿ ನಡೆಯುವಷ್ಟು ವ್ಯವಧಾನವಿರಲಿಲ್ಲ; ಅಗತ್ಯವೂ ಇರಲಿಲ್ಲ. ನಳಿಗೆಯ ಒಳಗೆ ನಳಿಗೆ ನಿಂತು ದೂರದರ್ಶಕ ರೂಪುಗೊಂಡಂತೆ ಒಂದು ಸಂಪುಟದ ಕೆಲಸ ಮುಗಿಯುತ್ತಿದ್ದಂತೆ, ಅನಂತರದ್ದು ಮಧ್ಯದ ಯಾವುದೋ ಹಂತದಲ್ಲಿರುತ್ತಿತ್ತು; ಅಪರ ಮತ್ತಿನದು ಪ್ರಾರಂಭವಾಗಿಬಿಡುತ್ತಿತ್ತು.

ಬರೆಹ, ಲೇಖನ ಪರಿಷ್ಕರಣ, ಪ್ರೂಫ್ ಓದು, ಪುಟ ವಿನ್ಯಾಸ ಹೀಗೆ ಅಕ್ಷರ ಸ್ನೇಹದಲ್ಲಿ ಕಳೆಯುತ್ತಿದ್ದ ಕಾಲವೇ ಅಧಿಕವಾದರೂ ಯೋಜನಾವಧಿಯಲ್ಲಿ ನಡೆಯುತ್ತಿದ್ದ ಹಲವು ಕೂಟಗಳು ಸ್ಮರಣಾರ್ಹ. ಮೊದಲನೆಯದು ಪ್ರತಿದಿನ ಬೆಳಗ್ಗೆ ನಡೆಯುತ್ತಿದ್ದ ಸಂಪಾದಕ ವರ್ಗದ ಸಭೆ. ಒಬ್ಬೊಬ್ಬನೂ ಒಂದೊಂದು ಶೀರ್ಷಿಕೆಯನ್ನು ಆರಿಸಿ ಪ್ರತಿದಿನವೂ ಲೇಖನವೊಂದನ್ನು ಬರೆಯಬೇಕಾಗಿತ್ತು. ಹೆಚ್ಚಿನ ಬಾರಿ ವಿಷಯ ವ್ಯಾಪ್ತಿ, ಲೇಖನ ಬೆಳವಣಿಗೆ, ನಿರೂಪಣೆಗಳಿಗೆಲ್ಲ ಸಭೆಯಿಂದಲೇ ಹೊಳವುಗಳು.

ಎರಡನೆಯದು, ವಾರಕ್ಕೊಮ್ಮೆ ನಡೆಯುತ್ತಿದ್ದ ಸಂಪಾದಕೀಯ ಸಮಿತಿಸಭೆ. ಪ್ರಧಾನ ಸಂಪಾದಕ,ಸಂಪಾದಕರು, ಆಡಳಿತಾಧಿಕಾರಿಗಳೊಳಗೆ ಇಲ್ಲಿ ಅನ್ಯೋನ್ಯ ಚರ್ಚೆ; ಆದ ಕೆಲಸ ಮತ್ತು ಆಗಬೇಕಾದ ಕೆಲಸಗಳ ನಿಷ್ಕರ್ಷೆ, ಕಾರ್ಯವಿಧಾನದ ಸಮೀಕ್ಷೆ, ಜವಾಬ್ದಾರಿ ಹಂಚೋಣ ಮತ್ತು ನಿರ್ಣಯ ದಾಖಲೆ. ಲೇಖನ, ಚಿತ್ರ, ಮುದ್ರಣ ಸಾಲಸಂದಾಯ, ಸಂಪುಟ ವಿತರಣೆ, ಸಿಬ್ಬಂದಿ ತೊಂದರೆ ಇತ್ಯಾದಿ ಸರ್ವ ಸಂಗತಿಗಳೂ ಚರ್ಚಿಸಲ್ಪಟ್ಟು ಮುಂದಿನವಾರ ಕಾರ್ಯೋನ್ಮುಖರಾಗುವ ದಾರಿ ನಿರ್ಧಾರವಾಗುತ್ತಿತ್ತು.

ಮೂರನೆಯದು, ಕಲಾವಿದ ಹಾಗೂ ಛಾಯಾಚಿತ್ರಗ್ರಾಹಕರೊಂದಿಗೆ ಚಿತ್ರಗಳ ತಯಾರಿ ಮತ್ತು ಆಯ್ಕೆಯಲ್ಲಿ ಕಳೆದ ಕ್ಷಣಗಳು. ಜೀವ ಜಗತ್ತಿನಲ್ಲಿ ರಾಜ್ಯ, ವಂಶ, ವರ್ಗ, ಬಳಗ, ಕುಲ, ಜಾತಿಗಳನ್ನೆಲ್ಲ ಒಮ್ಮೆಗೇ ತೋರಿಸುವ ಚಿತ್ರ ಹೇಗಿರಬೇಕು? 'ಕುಂತಿ' ಲೇಖನಕ್ಕೊಂದು ಚಿತ್ರ ಬೇಕು. ಯಾವ ಸನ್ನಿವೇಶವನ್ನು ಚಿತ್ರಿಸೋಣ ? ಸೂರ್ಯಾನುಗ್ರಹಕ್ಕಾಗಿ ನದಿಯ ದಂಡೆಯಲ್ಲಿ ಪ್ರಾರ್ಥಿಸುತ್ತಿರುವ ಕುಂತಿಯ ವೇಷಭೂಷಣಗಳು ಹೇಗಿರಬೇಕು ? ರೇಖಾಚಿತ್ರಸ್ತರದಲ್ಲಿ ಚಾಚಬೇಕಾದರೆ ಎಷ್ಟಗಲ ? ಸ್ತಂಭವಾಗಿ ನಿಲ್ಲಬೇಕಾದರೆ ಎಷ್ಟುದ್ದ? ಇಂಥ ಮಾತುಕತೆಗಳು ಆಗ ಸಾಮಾನ್ಯ.

ಏಳು ಮುದ್ರಣ ಯಂತ್ರಗಳು ಏಳು ವಾರಗಳಲ್ಲಿ ಸಂಪುಟವೊಂದನ್ನು ಜೋಡಲು ಆವರ್ತಿಸಹೊರಟಾಗ ಮುದ್ರಣಾಲಯದ ಬಂಧುಗಳೊಂದಿಗಿನ ಸಹವಾಸ

ಮತ್ತೊಂದು ರೀತಿಯದು. 'ಅದೋ, ಆ ತಪ್ಪು ಇನ್ನೂ ಇದೆ' ಎಂದಾಗ ಯಂತ್ರ ಸ್ಥಗಿತ. ಫಾರ್ಮುಗಳು ಒಂದರ ಮೇಲೊಂದು ಪೇರಿದಂತೆ ಸಂತೋಷದಿಂದ ನಸು ಬಿರಿಯುವ ನಗು.

ಇದೇ ರೀತಿ ಅನಿರೀಕ್ಷಿತ ಸಂದೇಹಗಳನ್ನೂ ಸುಧಾರಣೆಯ ಅವಶ್ಯವನ್ನೂ ತೋರಿಸುತ್ತಿದ್ದ ಜ್ಞಾನ ಪ್ರಯೋಗಾಲಯ ಹಾಗೂ ಅಂತಿಮವಾಗಿ ಸಹೋದ್ಯೋಗಿಗಳ ಸ್ವಲೇಖನ - ಪರಲೇಖನಗಳ ನಿರ್ದಯ ವಸ್ತುನಿಷ್ಠ ಪರೀಕ್ಷಾ ಸಭೆಗಳೂ ಸ್ಮರಣೀಯ.

ಪ್ರೂಫನ್ನು ನಮ್ಮಲ್ಲೇ ೩-೪ ಜನ ನಾಲ್ಕೈದು ಹಂತಗಳಲ್ಲಿ ನೋಡುತ್ತಿದ್ದುದು ಸಾಮಾನ್ಯ. ಮುದ್ರಣವಾಗುವವರೆಗೂ ಪರಿಷ್ಕರಣ ನಿಂತುದಿಲ್ಲ. ಪುಟ ವಿನ್ಯಾಸಕ್ಕೆಂದು ಪ್ರತ್ಯೇಕ ಕಲಾವಿದರಿರಲಿಲ್ಲ. ಹೀಗೆ ಒಂದು ಕೆಲಸವನ್ನು ಹಲವರೂ, ಹಲವು ಕೆಲಸಗಳನ್ನು ಒಬ್ಬರೂ ಗೊಂದಲವಿಲ್ಲದೆ ಮಾಡುತ್ತಿದ್ದಾಗ ಕೆಲಸ ಹಗಲಿರುಳು ನಡೆದುದರಲ್ಲಿ ಆಶ್ಚರ್ಯವಿಲ್ಲ. ಅಷ್ಟೇ ಅಲ್ಲ, ಕಚೇರಿ ಮತ್ತು ಮನೆಗಳ ನಡುವಿನ ಅಂತರ ಕಡಮೆಯಾದದ್ದೂ ಸಹಜ. ಮನೆ, ಕಚೇರಿ, ಮುದ್ರಣಾಲಯಗಳು ಫೋನ್ ಸಂಪರ್ಕದಿಂದ ಒಂದಾಗಿ ಏಕಲಕ್ಷ್ಯದತ್ತ ನಿಂತಂತೆ ತೋರಿದ್ದರೂ ಅತಿಶಯವಲ್ಲ. ನಿರಂಜನ ಬೇರೆ ಎಲ್ಲ ಬರವಣಿಗೆಗಳನ್ನು, ಅಂಕಣಗಳನ್ನು ತೊರೆದಿದ್ದರು. ಮೊದಲ ಬಾರಿಗೆ ಅನುಪಮಾ ನಿರಂಜನರಿಗಾದ ಶಸ್ತ್ರಚಿಕಿತ್ಸೆ; ತಾಯಿಗೆ ಸಿಟಿ ಮಾರ್ಕೆಟಿನಿಂದ ಹೊಗೆಸೊಪ್ಪು, ವೀಳ್ಯದೆಲೆ ಸರಬರಾಜು, ತೇಜಸ್ವಿನಿ ಸೀಮಂತಿನಿಯರನ್ನು ಶಾಲೆಗೆ ಬಿಡುವ ಕೆಲಸ - ಇವೆಲ್ಲ ಎಷ್ಟೇ ಗಂಭೀರವಾಗಿರಲಿ, ಸಾಮಾನ್ಯವಾಗಿರಲಿ ಜ್ಞಾನ ಗಂಗೋತ್ರಿಯೊಂದಿಗೆ ಸಾಗಬೇಕಾಗಿತ್ತು. ಆ ಬದುಕಿನ ವೈಖರಿ ತೀವ್ರವಾಯಿತು. ೧೯೭೧ರ ಮಾರ್ಚ್ ೨೪ರಂದು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಹಠಾತ್ತನೆ ನಿರಂಜನರ ಕಾಲು ಕುಸಿಯಿತು. ಆದರೆ ಪಾರ್ಶ್ವವಾಯು ಬಲಭಾಗವನ್ನು ಬಲಿತೆಗೆದುಕೊಂಡಿರಲಿಲ್ಲ; ಬುದ್ಧಿ, ದೃಷ್ಟಿ, ಸ್ಮರಣೆಗಳಿಗೆ ಊನ ಬರಲಿಲ್ಲ. ಹಲವರೆಣಿಕೆಗೆ ಮೀರಿ ನಿರಂಜನ ಜ್ಞಾನಗಂಗೋತ್ರಿ ರಥವನ್ನು ಇನ್ನೂ ಹೆಚ್ಚಿನ ಛಲದಿಂದ ಎಳೆಯ ತೊಡಗಿದರು.

ಜ್ಞಾನಗಂಗೋತ್ರಿಯ ಕಾರ್ಯಶೈಲಿ ಯಾವುದೇ ಇತರ ಯೋಜನೆಯಿಂದ ಎರವಲು ತಂದುದಲ್ಲ; ಸ್ವಾನುಭವ ಹೆಚ್ಚಿದಂತೆ ಆರೆಕೊರೆಗಳನ್ನು ತಿದ್ದುತ್ತ ವಿಕಾಸ ವಾದಂಥ ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು.

'ಎನ್‌ಸೈಕ್ಲೊಪಿಡಿಯದ ಲೇಖನವೋ! ದೂಳಿನಷ್ಟು ಶುಷ್ಕ' ಎಂಬ ಯಾರದೋ ಮಾತು ನಿರಂಜನರಿಗೆ ಆಗಾಗ ನೆನಪಾಗುತ್ತಿತ್ತು. ಜ್ಞಾನಗಂಗೋತ್ರಿ ಇದಕ್ಕೆ ಅಪವಾದವಾಗಬೇಕಿತ್ತು. ಲೇಖನದ ಮೊದಲ ವಾಕ್ಯ ಅಥವಾ ಪ್ಯಾರದಲ್ಲಿ

ಕಿರಿಯರನ್ನು ಆಕರ್ಷಿಸಿ ಕೊನೆಯ ವರೆಗೆ ಅವರ ಮನಸ್ಸನ್ನು ಸೆರೆಹಿಡಿಯಬೇಕಿತ್ತು. ವಿಷಯಕ್ಕೆ ನೇರ ಪ್ರವೇಶ ಇಲ್ಲವೇ ವಿಷಯವನ್ನು ಹರಳುಗಟ್ಟಿಸುವ ನಿರ್ವಚನ (ಗ್ರೀಕ್ ಪುರಾಣದಲ್ಲಿ ಚಿರಯೌವನ, ಪೌರುಷಗಳಿಗೆ ಹೆಸರಾದ ಸೂರ್ಯ ದೇವತೆ **ಅಪೊಲೊ**; ಪರಿಧಿಯ ಉದ್ದಕ್ಕೂ ಒಂದೇ ಗಾತ್ರ ಮತ್ತು ಆಕಾರಗಳ ಕಚ್ಚು ಅಥವಾ ಹಲ್ಲು ಗಳಿರುವ ಚಕ್ರವೇ **ಗೇರ್**), ಘಟನೆ (೧೮೨೩ರಲ್ಲಿ ನಡೆದ ಒಂದು ಫುಟ್‌ಬಾಲ್ ಆಟ ದಲ್ಲಿ ಚೆಂಡನ್ನು ಕೈಯಲ್ಲಿ ತೆಗೆದುಕೊಂಡು ಒಬ್ಬ ಆಟಗಾರ ಓಡಿದ. ಈ ಹೊಸ ರೀತಿ ಯನ್ನು ಬಹುಬೇಗ ಅನೇಕ ತಂಡಗಳು ಅಳವಡಿಸಿಕೊಂಡವು. ಹೀಗೆ ಆಟಗಾರನ ತಪ್ಪಿನಿಂದ ಆರಂಭವಾಯಿತು. **ಅಮೆರಿಕನ್ ಫುಟ್‌ಬಾಲ್**); ವ್ಯಕ್ತಿ ವೈಶಿಷ್ಟ್ಯ (ಶ್ರಮದಾಯಕ ಕೆಲಸಕ್ಕಿಂತ ಹೆಚ್ಚಿನ ತಮಾಷೆ ಮತ್ತೊಂದಿಲ್ಲ ಎಂದು ಹೇಳುತ್ತಿದ್ದ **ಗಾಟ್ ಲೀಬ್ ಡೈಮ್ಲರ್**); ಇದಕ್ಕೆ ಅನುಕೂಲವಾದುವು.

ಮೂರು ತಿಂಗಳಿಗೊಮ್ಮೆ ಮಾದರಿ ಲೇಖನಗಳನ್ನು ೧೧–೧೮ ವಯಸ್ಸಿನ ಕಿರಿಯರ ಮುಂದೆ ಓದಿ ಹೇಳಿ ವಿಷಯ ನಿರೂಪಣೆ, ಪದ, ವಾಕ್ಯಗಳ ಬಗ್ಗೆ ಅವರ ಪ್ರತಿಕ್ರಿಯೆಯನ್ನು ಕೇಳಿ ನಾವು ತಿದ್ದಿಕೊಳ್ಳುತ್ತಿದ್ದೆವು. ಮೊದಲಿಗೆ ಬೆಂಗಳೂರಿನ ವಿವಿಧ ವಿದ್ಯಾಸಂಸ್ಥೆಗಳಿಂದ ಆಯ್ದ ವಿದ್ಯಾರ್ಥಿಗಳು ಬರುತ್ತಿದ್ದರು. ಆದರೆ ಅವರ ಪ್ರತಿಕ್ರಿಯೆ ಸಾಮಾನ್ಯ ವಿದ್ಯಾರ್ಥಿಗಳಂತಲ್ಲ ಎಂದು ತಿಳಿದಾಗ ಒಂದೇ ಹೈಸ್ಕೂಲಿನ ಮೂರು ತರಗತಿಗಳ ಮಕ್ಕಳನ್ನು ಕೂಡಿಸಿ ಆ ಕಾರ್ಯಕ್ರಮ ನಡೆಸಿದೆವು. ಬೆಂಗಳೂರಿನ ಜಯನಗರ ಹೈಸ್ಕೂಲ್ ಇದಕ್ಕೆ ತಕ್ಕ ಸಹಕಾರ ನೀಡಿತು. ನಿರಂಜನ ಈ ಕಾರ್ಯಕ್ರಮವನ್ನು 'ಜ್ಞಾನ ಪ್ರಯೋಗಾಲಯ' ಎಂದು ಕರೆದರು.

ಸರಳತೆ, ಉಪಯುಕ್ತತೆ, ಸುಲಭ ಗ್ರಾಹ್ಯತೆ, ವಸ್ತು ನಿಷ್ಠತೆಗಳು ಪ್ರತಿ ಲೇಖನದ ಬೆಲೆಯನ್ನು ನಿರ್ಧರಿಸುವ ಮಾನದಂಡಗಳು. ಆದರೆ ಇವನ್ನು ಸಾಧಿಸಲು ಬೇರೆ ಬೇರೆ ಸಂಪುಟಗಳಲ್ಲಿ ಬೇರೆ ದಾರಿಗಳನ್ನು ಕೆಲವೊಮ್ಮೆ ಹಿಡಿಯಬೇಕಾಯಿತು. ಸಂಪುಟಗಳ ಕ್ಷೇತ್ರಗಳು ಭಿನ್ನವಾಗಿದ್ದುದೇ ಇದಕ್ಕೆ ಕಾರಣ. ಲೇಖನದ ಮಧ್ಯೆ ಇಂಗ್ಲಿಷ್ ಪದ ಬರುವಾಗ ಅಥವಾ ಕನ್ನಡ ಪದದ ಸಮಾನ ಪದವನ್ನು ಆವರಣದಲ್ಲಿ ಕೊಡುವಾಗ ಕನ್ನಡ ಲಿಪಿಯಲ್ಲಿ ಕೊಟ್ಟೆವೇ ವಿನಾ ಇಂಗ್ಲಿಷ್ ಲಿಪಿಯಲ್ಲಲ್ಲ. ಅರಿಸ್ಟಾಟಲ್, ಪ್ಲೇಟೊ, ಕಣಾದ ಏಕವಚನದಲ್ಲಿ ಬಂದರೂ ರಾಮಕೃಷ್ಣ, ರಾಮನ್ ಬಹುವಚನದಲ್ಲಿ ಕರೆಯಲ್ಪಟ್ಟರು. ದೈನಂದಿನ ವ್ಯವಹಾರದಲ್ಲಿ ಬಳಕೆಗೆ ಬಂದಿರುವ ಹಾಗೂ ಬರುತ್ತಿರುವ ಪಂಪು, ಕಂಪ್ಯೂಟರ್, ಟೆಲಿಫೋನುಗಳು ಹಾಗೆಯೇ ಉಳಿದುವು ವಿನಾ ರೇಚಕ, ಗಣಕ ಯಂತ್ರ, ದೂರವಾಣಿಗಳಾಗಿ ಶೀರ್ಷಿಕೆಗಳಲ್ಲಿ ಬರಲಿಲ್ಲ. ಹೊಮೋಸ್ಟೈರ, ಸಿರೊಸಿಸ್, ಜೆಲ್ಲಿಗಳೂ ಕನ್ನಡದವೇ ಎಂಬಷ್ಟು ಸಲೀಸಾಗಿ

ಲೇಖನಗಳಲ್ಲಿ ಬಂದವು. ಇಂಗ್ಲಿಷಿನ ವೆಲ್ಡಿಂಗ್, ಮಾಡ್ಯುಲೇಶನ್‌ಗಳು ವೆಲ್ಡನ, ಮಾಡ್ಯುಲನಗಳಾದರೆ ಹರ್ಲಿಂಗ್, ಕರ್ಲಿಂಗ್ ಆಟಗಳು ಹರ್ಲ್ ಆಟ, ಕರ್ಲ್ ಆಟಗಳಾದವು.

ಶಬ್ದಗಳ ಮೋಡಿಗೆ ನಿರಂಜನ ಮರುಳಾಗುತ್ತಿದ್ದಂತೆ ಅವುಗಳ ಖಚಿತ ರೂಪದ ಬಗ್ಗೆಯೂ ಮೆಲುಕು ಹಾಕುತ್ತ ಚರ್ಚಿಸುತ್ತಾ ನಿರ್ಧಾರಕ್ಕೆ ಬಂದ ಮೇಲೆ ಏಕರೂಪತೆಗೆ ಪ್ರಾಧಾನ್ಯ ನೀಡುತ್ತಿದ್ದರು. ಕಡೆಂಗೋಡ್ಲು, ತೆಕ್ಕುಂಜೆಯವರಂಥ ವಿದ್ವಾಂಸರು ತಾರ್ಕಿಕವಾಗಿ ತಲಪಿದ ನಿರ್ಣಯಕ್ಕೆ ಬೇರೆ ಸೊಲ್ಲಿಲ್ಲ. ಹಜ್ಜೆ - ಹೆಜ್ಜೆ, ಪಾರಿತೋಷಕ - ಪಾರಿತೋಷಿಕ, ವಾರಣಾಸಿ - ವಾರಾಣಸಿ, ನಲಂದಾ - ನಾಲಂದಾ, ವಿಕ್ರಮ ಶಿಲಾ - ವಿಕ್ರಮ ಶೀಲ - ಇವುಗಳಲ್ಲೆಲ್ಲ ಸರಿಯೆನಿಸಿದ ರೂಪವನ್ನು ಏಕ ಪ್ರಕಾರವಾಗಿ ಇಡಲು ಪ್ರಯತ್ನ ನಡೆಯಿತು. ಉಪಯೋಗಿಸುವ ರೂಪ ತಪ್ಪೆಂದಾದರೆ ಅದನ್ನು ಕೈಬಿಟ್ಟೇ ನಡೆದದ್ದು. ಎರಡನೆಯ ಸಂಪುಟದಲ್ಲಿ 'ಮೊಟ್ಟ ಮೊದಲು' ಎಂದು ಬಳಕೆಯಾದರೆ ಮುಂದೆ 'ಮೊತ್ತ ಮೊದಲು' ಎಂದಾದದ್ದು ಹೀಗೆ - ತೆಕ್ಕುಂಜೆಯವರು 'ಕಟ್ಟಕಡೆಗೆ'ಯಲ್ಲಿ ಇರುವ 'ಟ' 'ಮೊತ್ತ ಮೊದಲ'ಲ್ಲಿ ಬರುವುದು ವಿಹಿತವಲ್ಲವೆಂದು ಒಂದು ಲೇಖನದಲ್ಲಿ ಸಕಾರಣವಾಗಿ ಹೇಳಿದ ಮೇಲೆ. ಸಾಮಾನ್ಯವಾಗಿ ಉಪಯೋಗಿಸುವ 'ಪರಾಗಸ್ಪರ್ಶಕ್ರಿಯೆ' ಎಂಬ ಉದ್ದವಾದ ಪದಸಮೂಹದ ಬದಲಿಗೆ ಎರಡನೆಯ ಸಂಪುಟದಲ್ಲಿ 'ಪರಾಗಣ' ಎಂದು ಉಪಯೋಗಿಸಿದೆವು. ವಿಜ್ಞಾನದ ಈ ಪದವನ್ನು ವಿಶೇಷವಾಗಿ ಹಚ್ಚಿಕೊಂಡ ನಿರಂಜನರು ನಮ್ಮದೊಂದು 'ಪರಾಗಣ ವಿಧಾನ' ಎಂದು ಸಾಹಿತ್ಯಿಕವಾಗಿ ಅದಕ್ಕೆ ವಿಶೇಷ ಆಯಾಮ ನೀಡಿದರು. ಪತಿ - ಪತ್ನಿ ಸೇರಿ 'ದಂಪತಿ' ಹೊರತು 'ದಂಪತಿಗಳು' ಅಲ್ಲ ಎಂದು ಅವರು ಮುಂದಿಟ್ಟು ಮಾಡಿದ್ದುಂಟು.

ಅಕ್ಷರಾನುಕ್ರಮದಲ್ಲಿ ಲೇಖನಗಳನ್ನು ಪೇರಿಸಿದ್ದರಿಂದ ಸಮಗ್ರ ಚಿತ್ರ ಸಿಗದಿದ್ದರೆ ಆಗಬಹುದಾದ ತೊಂದರೆಯನ್ನು ನಿವಾರಿಸಲು ಪ್ರತಿ ಸಂಪುಟದಲ್ಲೂ ಸಚಿತ್ರ ಸಮೀಕ್ಷೆ ಬಂತು. ಕೊನೆಯ ಸಂಪುಟದಲ್ಲಿ ಜಗತ್ತಿನ ಹಿನ್ನೆಲೆಯಲ್ಲಿ ಭಾರತದ ಕಥೆಯಿದ್ದುದರಿಂದ ಸಮೀಕ್ಷೆಯೂ 'ವಿಶ್ವಭಾರತಿ' ಮತ್ತು 'ಭಾರತದರ್ಶನ'ಗಳಾಗಿ ಕವಲೊಡೆಯಿತು.

ಮುದ್ರಣದಲ್ಲೂ ಅಗತ್ಯವಾದಾಗ ಬದಲಾವಣೆ ನಡೆಯಿತು. ಮೊದಲ ಸಂಪುಟದಲ್ಲಿ ಛಾಯಾಚಿತ್ರ - ರೇಖಾಚಿತ್ರಗಳಿಗೆ ಬಣ್ಣದ ಹಿನ್ನೆಲೆಯಿತ್ತು. 'ವಿಜ್ಞಾನ ಲೋಕ'ದ ಮುದ್ರಣ ರೀತಿ ವಿಜ್ಞಾನ ಸಂಪುಟಗಳಿಗೆ ಚೆನ್ನಾಗಬಹುದೆಂದು ಕಂಡಾಗ ರೇಖಾಚಿತ್ರಗಳು ಬಣ್ಣದಲ್ಲಿ ಬಂದವು; ಛಾಯಾಚಿತ್ರಗಳು ಕಪ್ಪು - ಬಿಳುಪಿನಲ್ಲಿ ಬಂದವು. ಮೊದಲ ಸಂಪುಟಗಳ ಕೆಲವು ಪ್ರತಿಗಳನ್ನು ಆರ್ಟ್ ಪೇಪರಿನಲ್ಲಿ

ಮುದ್ರಿಸುತ್ತಿದ್ದರು. 'ಸಾವಿರಾರು ಜನರಿಗೆ ಸಿಗದಿರುವುದು ಕೆಲವರಿಗೆ ಯಾಕೆ?' ಎಂದು ಅನ್ನಿಸಿದಾಗ ೫ನೇ ಸಂಪುಟದಿಂದ ಆ ಕ್ರಮ ಇಲ್ಲದಾಯಿತು. ಇದರಿಂದ ಹಣದ ಉಳಿತಾಯವಾದುದು ಮತ್ತೊಂದು ಲಾಭ.

ಅನಾನುಕೂಲದ ಸನ್ನಿವೇಶವನ್ನು ಯೋಜನೆಯ ಅನುಕೂಲಕ್ಕೆ ಬಳಸುವುದರಲ್ಲಿ ನಿರಂಜನ ಕ್ಷಿಪ್ರವಾಗಿ ಕಾರ್ಯೋನ್ಮುಖರಾಗುತ್ತಿದ್ದರು. ಮೊದಲಿಗೆ ಶಂಕರಮಠ ರಸ್ತೆಯಲ್ಲಿನ ಪ್ರಕಾಶನ ಮಂದಿರದ ಸ್ವಂತ ಕಟ್ಟಡ 'ಜಯನಿವಾಸ'ದಲ್ಲಿ ಜ್ಞಾನ ಗಂಗೋತ್ರಿಯ ಕೆಲಸ ನಡೆಯುತ್ತಿತ್ತು. ತಿಂಗಳಿಗೆ ೧೫೦೦ ರೂ. ಬಾಡಿಗೆಯ ಆ ಕಟ್ಟಡವನ್ನು ಬಿಡಬೇಕಾಗಿ ಬಂದಾಗ, ಜಯನಗರದ ೪೦೦ ರೂ. ಬಾಡಿಗೆಯ ಒಂದು ಹೊಸ ಮನೆಗೆ ೧೯೭೧ರಲ್ಲಿ ಕಚೇರಿ ವರ್ಗಾವಣೆಯಾಯಿತು. ಸದ್ದು ಗದ್ದಲವಿಲ್ಲದ ವಾತಾವರಣದಿಂದ ಕೆಲಸದ ಭರ ಹೆಚ್ಚಿತು; ಕಡಮೆ ಬಾಡಿಗೆಯಿಂದ ಹಣವೂ ಉಳಿಯಿತು.

ವಿಜ್ಞಾನ ಸಾರ್ವತ್ರಿಕವಾದದ್ದು. ವಿಜ್ಞಾನಿಗಳು ಹಾಗೂ ವಿಜ್ಞಾನ ಸಂಸ್ಥೆಗಳನ್ನು ಬಿಟ್ಟರೆ ವಿಜ್ಞಾನ ಸಂಪುಟಗಳಲ್ಲಿ ರಾಜ್ಯ ಅಥವಾ ದೇಶಕ್ಕೆ ಸಂಬಂಧಿಸಿದ ವಿಷಯಗಳೇನೆಂದು ಹುಡುಕುವ ಕೆಲಸ ವಿಶೇಷವಿರಲಿಲ್ಲ. ಆದರೆ ಕಲೆ - ಸಾಹಿತ್ಯ, ಕ್ರೀಡೆ - ಮನೋಲ್ಲಾಸ, ಭಾರತದ ಕಥೆಗಳಲ್ಲಿ ನಮ್ಮದೆನ್ನಿಸುವಂಥವನ್ನು ಪತ್ತೆಹಚ್ಚಿ ವಿವರ ಸಂಗ್ರಹಿಸುವ ಜವಾಬ್ದಾರಿ ಬಿತ್ತು. 'ಹಾಸಿ ಬೀಸಿ ನೆಲ್ಲಕ್ಕಿ', 'ಕುಂಟೇ ಕುಂಟೇ ಕುರುವತ್ತಿ', 'ಬಾರಪ್ಪ ಬೆಳದಿಂಗಳೇ' ಇತ್ಯಾದಿ ಜ್ಞಾನಗಂಗೋತ್ರಿಯಲ್ಲಿ ಬಾರದಿದ್ದರೆ ಬೇರೆಲ್ಲಿ ಬರಬೇಕು? ಈ ಕೆಲಸವನ್ನೂ ಸಾಕಷ್ಟು ನಿರ್ವಹಿಸಿದ್ದರಿಂದ 'ಸಂಶೋಧನೆ ಮಾಡಿದಿರೇನೋ' ಎಂದು ಕೆಲವರು ಕೇಳುವಂತಾಯಿತು.

ಎಷ್ಟೋ ಜನ ಹಿತೈಷಿಗಳು ಜ್ಞಾನಗಂಗೋತ್ರಿ ಕಚೇರಿಗೆ ಬಂದು ನಮ್ಮ ಕೆಲಸ ನೋಡಿ ಹೋಗುತ್ತಿದ್ದರು. ಸಂಪುಟಗಳು ಬಂದಂತೆ 'ಇಷ್ಟು ಕ್ಷಿಪ್ರವಾಗಿ ಹೇಗೆ ತರುತ್ತೀರಿ?' ಎಂದು ಅವರು ಕೇಳಿದಾಗ ನಿರಂಜನರು ನಗುತ್ತಾ 'ನಮ್ಮಲ್ಲೊಂದು ಟೈಮ್ ಕಂಪ್ರೆಸ್ಸರ್ ಇದೆ. ಅದರಿಂದ ಕಾಲವೇ ಸಂಕುಚಿತವಾಗುತ್ತದೆ' ಎನ್ನುತ್ತಿದ್ದುದುಂಟು. ಕೊನೆಗೆ ಆರು ವರ್ಷಗಳ ಯೋಜನಾವಧಿ ೧೫ ತಿಂಗಳುಗಳಷ್ಟು ಕುಗ್ಗಿ ಹೋದದ್ದು ಸತ್ಯ. ಆದರೆ ಈ ಟೈಮ್ ಕಂಪ್ರೆಸ್ಸರ್ ಕಚೇರಿಯ ಯಾವ ಮೂಲೆಯಲ್ಲೂ ಇರಲಿಲ್ಲ. ಜ್ಞಾನಗಂಗೋತ್ರಿಯ ಕಾರ್ಯಶೈಲಿಯಲ್ಲಿ ಹುದುಗಿಹೋಗಿತ್ತು. ನನಗೋ ಕಾರ್ಯ ಪ್ರಮಾಣ, ಮಾನಸಿಕ ಲೋಕ ಸಂಚಾರಗಳಿಂದ ಜ್ಞಾನಗಂಗೋತ್ರಿಯ ವರ್ಷಗಳು ಅಖಂಡವಾಗಿಯೂ ಗಟ್ಟಿಯಾಗಿಯೂ ನಿಡಿದಾಗಿಯೂ ತೋರುತ್ತಿವೆ. ○

*ಸಂತ ಫಿಲೋಮಿನಾ ಕಾಲೇಜು ಕನ್ನಡ ಸಂಘದ 'ನಿರಂಜನ ಸಾಹಿತ್ಯ - ವಿಚಾರ ಸಂಕಿರಣ'ದಲ್ಲಿ ದಿನಾಂಕ ೩೦-೧೧-೧೯೮೫ರಂದು ಮಂಡಿಸಿದ ಪ್ರಬಂಧ.

೭ "ಜ್ಞಾನಗಂಗೋತ್ರಿ" : ಒಂದು ಅಪೂರ್ವ ಸಾಧನೆ

-ಡಾ। ಬಿ. ವಿ. ಸುಬ್ಬರಾಯಪ್ಪ

'ಕನ್ನಡ ವಿಶ್ವಕೋಶ' ಸಂಪುಟಗಳ ಸಂಪಾದನೆಯು ಕಾರಣಾಂತರಗಳಿಂದ ಕುಂಟುತ್ತಿರುವಾಗ ಮೂಡಿಬಂದ ಒಂದು ಕಲ್ಪನೆ - ಕಿರಿಯರಿಗಾಗಿ ಒಂದು ವಿಶ್ವಕೋಶ - ಕೂಡಲೇ ಆರು ವರ್ಷಗಳ ಯೋಜನೆಯ ರೂಪವೊಂದನ್ನು ತಾಳಿತು, ೧೯೬೮ರಲ್ಲಿ. ಅಂದಿನ ಅರ್ಥಸಚಿವ ಶ್ರೀ ರಾಮಕೃಷ್ಣ ಹೆಗಡೆಯವರು ಹಾಗೂ ವಿದ್ಯಾಸಚಿವ ಶ್ರೀ ಕೆ.ವಿ.ಶಂಕರ ಗೌಡರು ಈ ಯೋಜನೆ ಕಾರ್ಯಗತವಾಗಲು, ಸರಕಾರದ ಮನ್ನಣೆ ನೀಡುವುದರ ಜೊತೆಗೆ ೯ ಲಕ್ಷ ರೂಪಾಯಿ ಬಡ್ಡಿರಹಿತ ಸಾಲ ನೀಡಲೂ, ೧೫,೦೦೦ ಪ್ರತಿಗಳನ್ನು ಕೊಳ್ಳಲೂ ಒಪ್ಪಿಗೆಯನ್ನು ಕೊಟ್ಟರು. ಈ ಯೋಜನೆಗೆ ಬುನಾದಿ ಹಾಕಿದುದು ಕರ್ನಾಟಕ ಸಹಕಾರೀ ಪ್ರಕಾಶನ (ಲಿಮಿಟೆಡ್). ಒಂದು ಉದಾತ್ತಧ್ಯೇಯದಿಂದ, ನಿಷ್ಠೆಯಿಂದ, ಆರು ವರ್ಷಗಳ ಯೋಜನೆ ಇದ್ದರೂ ಏಳು ಸಂಪುಟಗಳ ಪ್ರಕಟಣೆಯನ್ನು ೪ ವರ್ಷ ೯ ತಿಂಗಳಲ್ಲಿ ಸಾಧಿಸಿದವರು ಬಹುತೇಕವಾಗಿ ನಿರಂಜನರು. ಇದೊಂದು ಅಪೂರ್ವ ಸಾಧನೆ.

ಈ ಏಳು ಸಂಪುಟಗಳು ಜ್ಞಾನ ಪ್ರಕಾಶದ ಏಳು ಬಣ್ಣಗಳು; ಅನೇಕತೆಯಲ್ಲಿ ಏಕತೆ; ಜ್ಞಾನದ ಉಗಮ ಹಾಗೂ ಪ್ರಸರಣ. ಅಂತೆಯೇ ಈ ಸಪ್ತ ಸಂಪುಟಗಳ ವಿಶ್ವಕೋಶಕ್ಕೆ ಇಟ್ಟಿರುವ ಹೆಸರು **ಜ್ಞಾನಗಂಗೋತ್ರಿ** ಅರ್ಥಗರ್ಭಿತವಾಗಿದೆ. ಜ್ಞಾನಸಾಗರ ಅಪಾರವಾದದ್ದು. ಅದರ ಪರಿಚಯವನ್ನು ನಿರ್ದುಷ್ಟನಾಗಿ, ಸುಲಲಿತವಾಗಿ ಕಿರಿಯರಿಗೆ ಮಾಡಿಕೊಡುವುದು ಕಷ್ಟಸಾಧ್ಯ ಕೆಲಸ. ಈ ದಿಕ್ಕಿನಲ್ಲಿ **ಜ್ಞಾನಗಂಗೋತ್ರಿ**ಯು ಬಹುಮಟ್ಟಿಗೆ ಸಫಲವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಡೆಮಿ ಚತುರ್ಥ ಆಕೃತಿಯ ಒಟ್ಟು ೫೦೦೦ ಪುಟಗಳು ಇರುವ ಈ ವಿಶ್ವಕೋಶದ ಪರಿಪೂರ್ಣ ವಿಮರ್ಶೆ ಈ ಲೇಖನದ ಉದ್ದೇಶವಲ್ಲ. **ಜ್ಞಾನಗಂಗೋತ್ರಿ**ಯ ಏಳು ಸಂಪುಟಗಳಲ್ಲಿ ೩೭೮೨ ಲೇಖನಗಳಿವೆ. ೩೭೦೦ ರೇಖಾಚಿತ್ರಗಳು, ೩೭೫೦ ಛಾಯಾ ಚಿತ್ರಗಳು ಮತ್ತು ೨೯೧ ವರ್ಣಚಿತ್ರಗಳಿವೆ. ಒಟ್ಟು ೧೭ ಲಕ್ಷ ಪದಗಳಿವೆ. ಇಂತಹ ಬೃಹತ್ ಸಂಪಾದನೆಯನ್ನು ಸಮಗ್ರ ದೃಷ್ಟಿಯಿಂದ, ಗುಣಗ್ರಾಹಿಗಳಾಗಿ ವಿವೇಚಿಸುವುದು ಒಳ್ಳೆಯದು.

ಮೊದಲನೆಯ ಸಂಪುಟ - ಮನುಕುಲದ ಕಥೆ. ನಿರಂಜನರೇ ಹೇಳಿರುವಂತೆ ಇದು 'ಗವಿಮಾನವನಿಂದ ಹಿಡಿದು ಗಗನ ಯಾತ್ರಿಯವರೆಗಿನ ಸಾಧನೆಗಳಿಗೆ ಮೀಸಲು.'

೬೦೦ ಲೇಖನಗಳು ಹಾಗೂ ೫೦೦ ಚಿತ್ರಗಳನ್ನೊಳಗೊಂಡ ಈ ಸಂಪುಟವು ಮನ ಮುಟ್ಟುವ, ಸರಳ ಭಾಷೆಯ, ೭೪೫ ಪುಟಗಳ ಒಂದು ಆಕರ್ಷಕ ಸಂಕಲನ. 'ಅಂಕೆ'ಯಿಂದ ಆರಂಭವಾಗಿ,'ಹೊಚಿಮಿನ್'ನಲ್ಲಿ ಕೊನೆಗೊಳ್ಳುತ್ತದೆ. 'ಹೊಚಿಮಿನ್' ಎಂದರೆ 'ಬೆಳಕು ಕಂಡವ' ಎಂದರ್ಥ. ಇದೇ ರೀತಿ ಈ ಸಂಪುಟದಲ್ಲಿ ಅನೇಕ ನಾಗರಿಕತೆಗಳ, ಧರ್ಮಗಳ, ತತ್ವಜಿಜ್ಞಾಸೆಗಳ, ರಾಜಕೀಯ ಹಾಗೂ ವಾಣಿಜ್ಯ, ಕೈಗಾರಿಕೆಗಳ, ಭೌಗೋಳಿಕ ವಿಚಾರಗಳ, ಅನೇಕಾನೇಕ ಸುಪ್ರಸಿದ್ಧ ಮಹನೀಯರುಗಳ ಬಗೆಗೆ ಕೊಟ್ಟಿರುವ ಮಾಹಿತಿ ಮತ್ತು ಇತರ ವಿಷಯಗಳನ್ನು ಓದಿದಾಗ ಕೊನೆಯಲ್ಲಿ ಜ್ಞಾನದ ಬೆಳಕಿನ ಅನುಭವವಾಗುತ್ತದೆ.ಮನುಷ್ಯನ ಇತಿಹಾಸದ ನಾನಾಪ್ರಕಾರಗಳು, ಏರುಪೇರುಗಳು, ಬೌದ್ಧಿಕ ಆಯಾಮಗಳು - ಇವೇ ಮೊದಲಾದವುಗಳ ನಿರೂಪಣೆ ಈ ಸಂಪುಟದಲ್ಲಿ ಎತ್ತರದ ಮಟ್ಟದಲ್ಲಿದೆ. ಜ್ಞಾನಗಂಗೋತ್ರಿಯ ಮೊತ್ತಮೊದಲನೆಯ ಸಂಪುಟಕ್ಕೆ 'ಮನುಕುಲದ ಕಥೆ' ಎಂದು ಹೆಸರಿಟ್ಟಿರುವ ಔಚಿತ್ಯವನ್ನು ಒತ್ತಿಹೇಳಬೇಕಾಗಿಲ್ಲ. 'Man is the measure of all things' ಎಂದು ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಗ್ರೀಕ್ ಚಿಂತಕ ಪ್ರೊಟೊಗಾರೆಸ್ ಒಂದು ಮಹತ್ವದ ಮಾತನ್ನೇ ನುಡಿದಿದ್ದ. ಇಂದಿಗೂ ಅದು ಸತ್ಯವಾಗಿಯೇ ಉಳಿದಿದೆ. ಮನುಷ್ಯನ ಇತಿಹಾಸದ ಬಹುಮುಖಗಳನ್ನು ಮೊದಲು ಚೆನ್ನಾಗಿ ಪರಿಚಯ ಮಾಡಿಕೊಂಡರೆ ಮಾತ್ರ ಇತರ ವಿಚಾರಗಳನ್ನು ಸಮಗ್ರವಾಗಿ ಅರಿಯಲು ಸಾಧ್ಯ.

ಎರಡನೆಯ ಸಂಪುಟ - ಜೀವಜಗತ್ತು. ಇದರಲ್ಲಿ ೪೦೦ ಲೇಖನಗಳೂ, ೭೭೩ ರೇಖಾ ಚಿತ್ರಗಳೂ, ೨೫೩ ಛಾಯಾ ಚಿತ್ರಗಳೂ ಇವೆ. ಮಿಗಿಲಾಗಿ ೫೦ ವರ್ಣಚಿತ್ರಗಳು ಮನಮೋಹಕವಾಗಿ ಮುದ್ರಿತವಾಗಿವೆ. ವೈದ್ಯಕ್ಕೆ, ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ವರ್ಣಚಿತ್ರಗಳು, ನೂರಾರು ಪುಟಗಳಲ್ಲಿ ಬರೆಯಬಹುದಾದ ತಾಂತ್ರಿಕ ವಿಷಯಗಳನ್ನು ಒಮ್ಮೆಗೇ ವಿಶ್ರುತಪಡಿಸುತ್ತವೆ. ಈ ಸಂಪುಟದಲ್ಲಿರುವ ಅನೇಕ ಪ್ರಮುಖ ವಿಷಯಗಳ ನಿರೂಪಣೆಯು ಸಚಿತ್ರವಾಗಿ ಬೋಧಪ್ರದವಾಗಿದೆ. ಜೀವದ ಹುಟ್ಟು, ವಿಕಾಸ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ಶರೀರ ವಿಜ್ಞಾನ, ವೈದ್ಯ, ಕೃಷಿ ಪದ್ಧತಿಗಳು ಜಗತ್ತಿನ ಹೆಸರಾಂತ ವಿಜ್ಞಾನಿಗಳು - ಇವುಗಳ ಉಲ್ಲೇಖನದ ಜೊತೆಗೆ ಮನೋವಿಜ್ಞಾನದ ಹಲವಾರು ವಿಷಯಗಳಿವೆ. ಕಳೆದ ಎರಡು ಶತಮಾನಗಳಲ್ಲಿ ಜೀವ ಜಗತ್ತಿಗೆ ಸಂಬಂಧಿಸಿದ ಜ್ಞಾನ-ವಿಜ್ಞಾನವು ಅಪಾರವಾಗಿ ಬೆಳೆದು ಬಂದಿದೆ. ಹೊಸ ಹೊಸ ಆಯಾಮಗಳು ಏರಿ ಬರುತ್ತಿವೆ. ಇವುಗಳಲ್ಲಿ ಅನೇಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಹಾಗೆಯೇ ಅರ್ಥಮಾಡಿಕೊಂಡವುಗಳನ್ನು ಸರಳ ರೀತಿಯಲ್ಲಿ ಬರೆದು ತಿಳಿಯಪಡಿಸುವುದೂ ಕಷ್ಟ ಸಾಧ್ಯ. ಸೂಕ್ಷ್ಮ ಜೀವಿಗಳು, ತಳಿಗಳು, ಭ್ರೂಣ ವಿಜ್ಞಾನ, ಜೈವಿಕ ಲಯಗತಿ - ಸಮರ, ಅನುವಂಶತೆ, ನ್ಯೂಕ್ಲಿಕ್ ಆಮ್ಲ, ಪ್ರೊಟೋಜೋಲಿ - ಮುಂತಾದ ಕ್ಲಿಷ್ಟವಿಷಯಗಳನ್ನು ಈ ಸಂಪುಟದಲ್ಲಿ

ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಜೀವ ಜಗತ್ತಿನ ನಿಖರ ಜ್ಞಾನ ಹಿಂದಿಗಿಂತ ಇಂದು ಮಹತ್ವದ್ದಾಗಿದೆ. ಅಂತೆಯೇ ಈ ಸಂಪುಟಕ್ಕೆ ವಿಶಿಷ್ಟ ಸ್ಥಾನವಿದೆ.

ಭೌತ ಜಗತ್ತು: ಮೂರನೆಯ ಸಂಪುಟ. ಜೀವ ಜಗತ್ತಿಗೆ ಹಾಸು - ಹೊಕ್ಕಾಗಿ ಹೆಣೆದು ಕೊಂಡಿರುವುದು ಭೌತ ಜಗತ್ತು. ಒಂದಕ್ಕೆ ಇನ್ನೊಂದು ಪೂರಕ. ನಿರಂಜನರು ಈ ಸಂಪುಟವನ್ನು ಕುರಿತು ಬರೆದಿರುವುದು ಇದರ ವ್ಯಾಪಕತೆಯನ್ನೂ ಗಹನವಾದ ವಿಷಯ - ವೈವಿಧ್ಯವನ್ನೂ ಎತ್ತಿ ತೋರಿಸುತ್ತದೆ: “ನಕ್ಷತ್ರ ವೀಕ್ಷಣೆ ಯಿಂದ ವ್ಯೋಮ ಅನ್ವೇಷಣೆಯ ತನಕ ನಾಗರಿಕತೆ ಸಾಗಿ ಬಂದಿರುವ ಐದು ಸಾವಿರ ವರ್ಷಗಳ ಅಥವಾ ಅದಕ್ಕಿಂತಲೂ ಹೆಚ್ಚು ಉದ್ದದ ದಾರಿ; ಪ್ಲೇಟೋ - ಅರಿಸ್ಟಾಟಲ ರಿಂದ ಮೊದಲಾಗಿ, ಕೊಪರ್ನಿಕಸ್ - ನ್ಯೂಟನ್‌ರ ದಾರಿಯಾಗಿ ಐನ್‌ಸ್ಟೀನನ್ನು ಮುಟ್ಟಿ ಮುಂದುವರಿದಿರುವ ವಿಶ್ವ ಕಲ್ಪನೆ; ಪ್ರಾಚೀನ ಗ್ರೀಸಿನ ಡೆಮಾಕ್ರಿಟಸ್‌ನಿಂದ ಪಾಶ್ಚಾತ್ಯ ವಿಜ್ಞಾನಿಗಳಾದ ಡಾಲ್ಟನ್ - ರುದರ್‌ಫರ್ಡ್‌ರ ತನಕ, ಪುರಾತನ ಭಾರತದ ಕಣಾದನಿಂದ ನವಭಾರತದ ಭಾಭಾ - ಸಾರಾಭಾಯಿಯರ ವರೆಗೆ, ಪ್ರವಹಿಸಿ ಮೂರ್ತ ಗೊಂಡಿರುವ ಪರಮಾಣು ವಿದ್ಯಮಾನ; ಶತಶತಮಾನಗಳಲ್ಲಿ ಪ್ರಕೃತಿಯ ನಿಯಮ ಗಳನ್ನು ಹಾಗೂ ಅವುಗಳ ಸಾರ್ವತ್ರಿಕತೆಯನ್ನು ಕುರಿತ ಅಧ್ಯಯನದಿಂದ ಮೂಡಿ ಬಂದ ಸಿದ್ಧಾಂತಗಳು, ಮತ್ತೂ ಹೆಚ್ಚಿನ ಶೋಧನೆಗಳಿಂದ ಅವು ತಳೆದ ಹೊಸರೂಪ ಗಳು; ಭೂಖಂಡಗಳನ್ನೂ ಆವರಿಸಿರುವ ವಿದ್ಯುತ್‌ಬಂಧ; ವಸುಂಧರೆ ತೆರೆದು ನೀಡಿರುವ ರತ್ನ ಭಂಡಾರ; ಸಾಗರ ತಳದ ಸಂಪತ್ತು - ಇವು ಜ್ಞಾನಗಂಗೋತ್ರಿಯ ‘ಭೌತ ಜಗತ್ತು’ ಸಂಪುಟದ ಹೂರಣ.”

ಈ ಸಂಪುಟದಲ್ಲಿ ೪೦೦ ಲೇಖನಗಳೂ, ೭೫೦ ರೇಖಾ ಚಿತ್ರಗಳೂ, ೨೭೫ಛಾಯಾ ಚಿತ್ರಗಳೂ ಇವೆ. ಆರು ವರ್ಣಚಿತ್ರಗಳು ಬಹು ಆಕರ್ಷಕವಾಗಿ ಮುದ್ರಿತವಾಗಿವೆ. ಜೀವ ಜಗತ್ತಿನಂತೆಯೇ, ಭೌತಜಗತ್ತಿನ ಇತ್ತೀಚಿನ ಆಯಾಮುಗಳನ್ನು ಸುಲಲಿತವಾಗಿ ಬರೆದು ತಿಳಿಯಪಡಿಸುವುದು ಬಹು ಕಷ್ಟ. ಅನೇಕಾನೇಕ ಕ್ಲಿಷ್ಟ ತಾಂತ್ರಿಕಪದಗಳನ್ನು ಸಮಯೋಚಿತವಾಗಿ ಉಪಯೋಗಿಸಿಕೊಂಡು, ಅಧಿಕೃತವಾಗಿ, ನಿಖರವಾಗಿ ಹಲವಾರು ಆಧುನಿಕ ಭೌತವಿಚಾರಗಳನ್ನೂ ಚೆನ್ನಾಗಿ ಅರ್ಥವಾಗುವಂತೆ ವಿವರಿಸಿರುವುದನ್ನು ಈ ಸಂಪುಟದಲ್ಲಿ ಕಾಣಬಹುದು. ಭೌತವಿಜ್ಞಾನ, ರಸಾಯನಶಾಸ್ತ್ರ, ಖಗೋಲಶಾಸ್ತ್ರ, ಗಣಿತ, ವ್ಯೋಮಯಾನಗಳಲ್ಲಿ ಪ್ರಸಿದ್ಧರಾಗಿರುವ ಅನೇಕ ವಿಜ್ಞಾನಿಗಳ ಜೀವನ ಪರಿಚಯ, ಸಾಧನೆಗಳು ಚೆನ್ನಾಗಿ ಮೂಡಿಬಂದಿವೆ.

ನಾಲ್ಕನೆಯ ಸಂಪುಟ: ಯಂತ್ರ ಜಗತ್ತು. ವಿವಿಧ ಎಂಜಿನಿಯರಿಂಗ್, ತಾಂತ್ರಿಕತೆ, ಘನ.ಲಘು-ಬೃಹತ್ ಪ್ರಮಾಣದ ಕೈಗಾರಿಕೋದ್ಯಮಗಳು, ದೂರ ಸಂಪರ್ಕ ಸಾಧನ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್, ರೆಫ್ರಿಜರೇಟರ್ಸ್, ವಿಮಾನಶಾಸ್ತ್ರ-

ಇವೇ ಮೊದಲಾದವುಗಳನ್ನೂ ಕುರಿತ ೪೬೫ ಲೇಖನಗಳು, ೪೭೫ ರೇಖಾಚಿತ್ರಗಳು, ೮೪೯ ಛಾಯಾ ಚಿತ್ರಗಳು ಮತ್ತು ೭೪ ವರ್ಣ ಚಿತ್ರಗಳು ಈ ಸಂಪುಟವನ್ನು ರೂಪಿಸಿವೆ. ಚಿತ್ರಗಳ ಸಹಾಯದಿಂದ ತಾಂತ್ರಿಕ ವಿಷಯ ನಿರೂಪಣೆಯು ಸಾಕಷ್ಟು ಮಟ್ಟಿಗೆ ಅರ್ಥವಾಗುವಂತೆ ಮುಂದುವರಿದಿದೆ. ಇಲ್ಲಿ ತಿಳಿಯಪಡಿಸಿರುವ ಅನೇಕ ತಾಂತ್ರಿಕ ವಿಚಾರಗಳು ಕೆಲವು ಪಾಶ್ಚಿಮಾತ್ಯ ತಾಂತ್ರಿಕ ವಿಶ್ವಕೋಶಗಳಲ್ಲಿರುವವುಗಳಿಗಿಂತಲೂ ಹೆಚ್ಚು ಬೋಧಪ್ರದವಾಗಿರುವುದನ್ನು ಕಾಣಬಹುದು. ಒಂದು ಗಮನಾರ್ಹ ಅಂಶವೆಂದರೆ, ಈ ಸಂಪುಟದಲ್ಲಿ ಅನೇಕ ಕಡೆಗಳಲ್ಲಿ ಅಂತರರಾಷ್ಟ್ರೀಯ ಬಳಕೆಯ ಪದ ರೂಪಗಳನ್ನು ಉಳಿಸಿಕೊಂಡಿರುವುದು.

ಕಲೆ ಮತ್ತು ಸಾಹಿತ್ಯದ ವಿವಿಧ ಪ್ರಕಾರಗಳನ್ನು ೫೪೪ ಲೇಖನಗಳಲ್ಲಿ, ೪೪೭ ರೇಖಾಚಿತ್ರಗಳು, ೫೪೫ ಛಾಯಾ ಚಿತ್ರಗಳು ಮತ್ತು ೩೮ ವರ್ಣಚಿತ್ರಗಳೊಡನೆ, ಓದುಗರ ಮುಂದಿಟ್ಟಿರುವುದು ಐದನೆಯ ಸಂಪುಟ. ಇತರ ಸಂಪುಟಗಳಲ್ಲಿ ಅನೇಕ ಪರಿಣತರಿಂದ ಲೇಖನಗಳನ್ನು ಪಡೆದು, ಸಂಪಾದಕ ವರ್ಗದವರೂ ಅವಶ್ಯ ಲೇಖನಗಳನ್ನು ಬರೆದು, ಎಲ್ಲವನ್ನೂ ಪರಿಷ್ಕರಿಸಿ, ಸಂಕಲನ ಮಾಡಿದ ಪ್ರಯತ್ನಗಳಿದ್ದರೆ, ಈ ಐದನೆಯ ಸಂಪುಟದಲ್ಲಿರುವ ಎಲ್ಲ ಲೇಖನಗಳನ್ನೂ ಸಂಪಾದಕ ವರ್ಗದವರೇ ಬರೆದಿದ್ದಾರೆ. ಅವಶ್ಯವಿದ್ದೆಡೆ, ಪರಿಣತರೊಡನೆ ಸಮಾಲೋಚನೆ ನಡೆಸಿದ್ದಾರೆ. ನಿರಂಜನರು ಮುನ್ನುಡಿಯಲ್ಲಿ ತಿಳಿಸಿರುವಂತೆ, 'ಸಾಹಿತ್ಯ ಕಲೆಗಳಿಗೆ ಸಂಬಂಧಿಸಿದಂತೆ ಒಂದು ಸಹಸ್ರ ಶೀರ್ಷಿಕೆಗಳನ್ನು ಆಣಿಗೊಳಿಸಬಹುದು. ಕ್ಷೇತ್ರವನ್ನು ಹಿಗ್ಗಿಸಿ ಆ ಸಂಖ್ಯೆಯನ್ನು ಇಮ್ಮಡಿ - ಮುಮ್ಮಡಿಗೊಳಿಸುವುದೂ ಸಾಧ್ಯ. ಆದರೆ ನಮಗಿರುವುದು ಏಳುನೂರು ಪುಟಗಳ ವಿಸ್ತಾರ ಮಾತ್ರ. ಇಷ್ಟರಲ್ಲೇ ಅಡಕವಾಗುವಂತೆ ೫೪೪ ಲೇಖನಗಳನ್ನು ಸಿದ್ಧಪಡಿಸಿದ್ದೇವೆ. ಕಲಾ - ಸಾಹಿತ್ಯ ವಿಷಯವಾಗಿ ಕಿರಿಯರು ಅರಿಯಲೇಬೇಕಾದ ಎಲ್ಲ ಅಂಶಗಳನ್ನೂ ಸಿದ್ಧ ಆಹಾರದ ರೂಪದಲ್ಲಿ ಇಲ್ಲಿ ನೀಡಿದ್ದೇವೆ.' ನಿಜಕ್ಕೂ ಈ ಸಂಪುಟ ಇಂತಹ ಸಿದ್ಧಾನ್ನ. ನೃತ್ಯ, ಸಂಗೀತ, ನಾಟಕ ಕಲೆ, ಚಿತ್ರಕಲೆ, ಶಿಲ್ಪ, ವಾಸ್ತುಶಿಲ್ಪ, ಸಾಹಿತ್ಯದ ಬಹುಮುಖಗಳು, ಭಾರತೀಯ ಮತ್ತು ಗ್ರೀಕ್ ಮಹಾಕಾವ್ಯಗಳು, ದೇಶವಿದೇಶಗಳ ಪ್ರತಿಭಾವಂತ ಕಲಾವಿದರು ಹಾಗೂ ಸಾಹಿತಿಗಳ ಜೀವನ ಪರಿಚಯ, ಅವರ ಸಾಧನೆಗಳು - ಇವುಗಳ ರಸವತ್ತಾದ ನಿರೂಪಣೆಯಿಂದ ಈ ಸಂಪುಟವು ಪುಷ್ಟವಾಗಿದೆ.

ಕ್ರೀಡೆ, ಮನೋಲ್ಲಾಸ, ಆರನೆಯ ಸಂಪುಟ - ಮನೋರಂಜಕ. ಜಗತ್ತಿನ ಸಂಪುಟ, ಬಗೆ ಬಗೆಯ ಕ್ರೀಡೆಗಳು, ಶಾರೀರಿಕ ಶಿಕ್ಷಣ, ಹೆಸರಾಂತ ಕ್ರೀಡಾಪಟುಗಳು, ಒಲಿಂಪಿಕ್‌ನ ಪ್ರಸಿದ್ಧ ವೀರರು, ಮನೋಲ್ಲಾಸವನ್ನುಂಟುಮಾಡುವ ಆಟಗಳು - ಇವೇ ಮೊದಲಾದವುಗಳನ್ನು ೧೨೦೦ ಲೇಖನಗಳ ಮೂಲಕ, ನಿಷ್ಕೃಷ್ಟವಾಗಿ ತಿಳಿಸಲಾಗಿದೆ.

೪೬೫ ರೇಖಾಚಿತ್ರಗಳು, ೯೮೦ ಛಾಯಾಚಿತ್ರಗಳು, ೫೭ ವರ್ಣಚಿತ್ರಗಳು ಈ ಸಂಪುಟಕ್ಕೆ ಶೋಭೆಯನ್ನು ನೀಡಿವೆ. 'ಅಂಕಿ ಸಂಖ್ಯೆ ಆಟ'ದಿಂದ ಆರಂಭವಾಗಿ 'ಹೊಳೆದಾಟುವ ಆಟ'ದೊಡನೆ ಈ ಸಂಪುಟ ಮುಕ್ತಾಯವಾಗುತ್ತದೆ. ಈ ಸಂಪುಟದ ಸಮಾಲೋಚಕರು ಕ್ರೀಡಾ ಪ್ರಪಂಚದ ಪರಿಣತರಾಗಿರುವುದರಿಂದ, ವಿಚಾರಗಳ ಅಧಿಕೃತತೆಯ ಬಗೆಗೆ ಒತ್ತಿಹೇಳಬೇಕಾಗಿಲ್ಲ. ಪಾರಿಭಾಷಿಕ ಪದಗಳನ್ನುಸಮಯೋಚಿತ ವಾಗಿ ಬಳಸಲಾಗಿದೆ. ಎಲ್ಲ ಲೇಖನಗಳನ್ನೂ ಸಂಪಾದಕ ವರ್ಗದವರೇ ಬರೆದು ಮನ ಮುಟ್ಟುವಂತೆ ವಿಷಯಗಳ ಪ್ರತಿಪಾದನೆಯನ್ನು ಮಾಡಿದ್ದಾರೆ.

ಕೊನೆಯ (ಏಳನೆಯ) ಸಂಪುಟ ಭಾರತದ ಕಥೆ. ಇದು ಅಂತಿಮ ಮಹತ್ ಸಾಧನೆ. ೧೩೭೩ ಲೇಖನಗಳು, ೧೩೦೦ಕ್ಕೂ ಮೇಲ್ಪಟ್ಟ ರೇಖಾ ಹಾಗೂ ಛಾಯಾ ಚಿತ್ರಗಳು, ೭೧ ವರ್ಣಚಿತ್ರಗಳು. ಆಶ್ಚರ್ಯಕರ ಸಂಗತಿ ಎಂದರೆ ಈ ಸಂಪುಟದ ಮುದ್ರಣ ಕೇವಲ ಆರೇ ವಾರಗಳಲ್ಲಿ ಮುಗಿದುದು. ವಿಷಯಗಳ ವ್ಯಾಪ್ತಿ ವಿಶಾಲ ವಾಗಿದೆ - ಚರಿತ್ರಪೂರ್ವ ಕಾಲದಿಂದ ಗಾಂಧೀಯುಗದವರೆಗೆ; ಪ್ರಾಚೀನ ಭಾರತದ ವೈಜ್ಞಾನಿಕ ಹೆಗ್ಗಳಿಕೆ; ಸಾಹಿತ್ಯ; ಧರ್ಮೋಪದೇಶಕರು, ರಾಷ್ಟ್ರ ನಿರ್ಮಾಪಕರು, ದಕ್ಷ ಆಡಳಿತಗಾರರು, ಪ್ರವಾಸಿಗರು ಕಂಡ ಭಾರತ; ಕೃಷಿ, ಕೈಗಾರಿಕೋದ್ಯಮ; ಭಾರತ ಮತ್ತು ವ್ಯೋಮ ಯುಗ, ವೈವಿಧ್ಯದಲ್ಲಿ ಏಕತೆಯನ್ನು ಪಾಲಿಸಿಕೊಂಡು ಬಂದಿರುವ ಭಾರತೀಯ ಮೌಲ್ಯಗಳು, ಇತ್ಯಾದಿ. ಹಿಂದಿನ ಸಂಪುಟಗಳಲ್ಲಿ ಭಾರತಕ್ಕೆ ಸಂಬಂಧಿಸಿ ದಂತೆ ನಿರೂಪಿತವಾಗಿರುವ ಹಲವಾರು ಲೇಖನಗಳನ್ನು ಪರಿಗಣಿಸಿದರೆ, ಭಾರತದ ಕಥೆ ನಿಜಕ್ಕೂ ವಿಸ್ತಾರವಾಗಿ, ಅಧಿಕೃತವಾಗಿ ಚಿತ್ರಿತವಾಗಿದೆ.

ಜ್ಞಾನಗಂಗೋತ್ರಿಯ ಸಂಪುಟಗಳು ಉನ್ನತಮಟ್ಟದಲ್ಲಿ ಸುಲಲಿತವಾಗಿರಲು ನಿರಂಜನರ ವಿದ್ವತ್‌ಪೂರ್ಣ ಸಮಗ್ರ ದೃಷ್ಟಿ, ಲೇಖಕರ ಪರಿಶ್ರಮ ಹಾಗೂ ಸಂಪಾದಕ ವರ್ಗದವರ ಕಾರ್ಯತತ್ಪರತೆಗಳು ಮುಖ್ಯ ಕಾರಣಗಳಾಗಿದ್ದರೂ, ಅವರು ಅನುಸರಿಸಿದ ನೂತನ ವಿಧಾನ - ಜ್ಞಾನ ಪ್ರಯೋಗಾಲಯ - ಮಹತ್ವಪೂರ್ಣವಾದದ್ದು. ೬೦ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಅವರ ಅಧ್ಯಾಪಕ ಅಧ್ಯಾಪಿಕೆಯರು ಮೂರು ತಿಂಗಳಿಗೊಮ್ಮೆ ಸಮಾವೇಶಗೊಂಡು ಸಂಪಾದಕ ವರ್ಗದವರಿಂದ ಮಂಡಿಸಿದ ಕರಡು ಲೇಖನಗಳ ಬಗೆಗೆ ಜಿಜ್ಞಾಸೆ ನಡೆಸಿದರು. ಅವರ ಪ್ರತಿಕ್ರಿಯೆಗಳ ನೆರವಿನಿಂದ ಲೇಖನಗಳ ಮೌಲ್ಯಮಾಪನ ಹಾಗೂ ಪುನಃ ಪರಿಶೀಲನೆ ನಡೆಯಿತು. ಕಿರಿಯರಿಗಾಗಿರುವ ವಿಶ್ವ ಕೋಶದ ರಚನೆ ಕಿರಿಯರಿಂದ ಮನ್ನಣೆ ಪಡೆದುದು ಈ ರೀತಿ. "ಕನ್ನಡ ಕಿರಿಯರ ಜ್ಞಾನವಿಕಾಸದ ಮಹಾಯಜ್ಞಕ್ಕೆ ಅಲ್ಪಕಾಣಿಕೆ, ನಾನೂ ನನ್ನ ಸಹೋದ್ಯೋಗಿಗಳೂ ಸಿದ್ಧಗೊಳಿಸಿರುವ 'ಜ್ಞಾನಗಂಗೋತ್ರಿ' ಸಂಪುಟಗಳು." ನಿರಂಜನರ ಈ ಮಾತು ಅವರ ನಮ್ರತೆಯನ್ನು ಎತ್ತಿತೋರಿಸುತ್ತದೆ. ವಾಸ್ತವವಾಗಿ, ಈ ಏಳು ಸಂಪುಟಗಳೂ

ಅಪಾರ ಜ್ಞಾನರಾಶಿ. ಪ್ರತಿಯೊಂದು ಸಂಪುಟದ ಆರಂಭದಲ್ಲಿರುವ ಸಮೀಕ್ಷೆಗಳು ಗಹನ ವಿಚಾರಗಳನ್ನು ತುಲನಾತ್ಮಕವಾಗಿ ವಿವೇಚಿಸಿ, ಉತ್ತಮ ಶೈಲಿಯಲ್ಲಿ ಓದುಗರ ಮನಸ್ಸನ್ನು ವಿಶಾಲಗೊಳಿಸುತ್ತವೆ. ಜ್ಞಾನಗಂಗೋತ್ರಿಯಲ್ಲಿ 'ಹಚ್ಚಿರುವ ಕನ್ನಡದ ಏಳು ಹಣತೆಗಳು ಕನ್ನಡಿಗರ ಮನೆ - ಮನ ಬೆಳಗಬೇಕು' ಎಂಬ ನಿರಂಜನರ ಆಶಯ ಸಫಲಗೊಳ್ಳುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಕಿರಿಯರಿಗೂ ಹಿರಿಯರಿಗೂ ಈ ಸಪ್ತ ಸಂಪುಟಗಳು ಬಹುಮುಖ ಆಧಾರ ಗ್ರಂಥಗಳು. ವಿದ್ವತ್, ಶ್ರದ್ಧೆ, ನಿಷ್ಠೆಗಳ ಪ್ರತೀಕಗಳು. ಇಂಥ ಒಂದು ಮಹತ್‌ಸಾಧನೆಯನ್ನು ಮಾಡಿದ ನಿರಂಜನ ಅವರಿಗೆ, ಅವರೊಡನೆ ಸಹಕರಿಸಿದ ಎಲ್ಲರಿಗೆ ಕನ್ನಡ ಜನ ಆಭಾರಿಯಾಗಿದ್ದಾರೆ. ೫೦೦೦ ಪುಟ ಗಳಲ್ಲಿರುವ ಜ್ಞಾನ ಶ್ರೀಮಂತಿಕೆಯನ್ನು ಕೇವಲ ೩೫೦ ರೂಪಾಯಿಗಳಿಗೆ ಕೊಳ್ಳಲು ಸಹಾಯ ಮಾಡಿರುವ ಕರ್ನಾಟಕ ಸರಕಾರಕ್ಕೆ, ಮುಖ್ಯವಾಗಿ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಶ್ರೀ ಕೆ. ವಿ. ಶಂಕರ ಗೌಡ ಅವರಿಗೆ ನಾವೆಲ್ಲ ಋಣಿಗಳು.

ಮೇಲೆ ತಿಳಿಸಿರುವುದು ಜ್ಞಾನಗಂಗೋತ್ರಿಯ ಸ್ಥೂಲ - ಅತಿಸ್ಥೂಲ - ಪರಿಚಯ; ಕೇವಲ ಒಂದು ಪಕ್ಷಿನೋಟ. 'Seeing is believing' ಎಂಬ ಇಂಗ್ಲಿಷ್ ನಾಣ್ನುಡಿಯಿದೆ. 'Reading is believing' ಎಂಬುದು ಜ್ಞಾನಗಂಗೋತ್ರಿಯ ಅಸಾಧಾರಣ ಮೌಲ್ಯಕ್ಕೆ ಸರಿಹೊಂದುತ್ತದೆ. ಇತ್ತೀಚಿನ ಕನ್ನಡ ಸಾಹಿತ್ಯದಲ್ಲಿ, ಈ ವಿಶ್ವಕೋಶವು ತನ್ನದೇ ಆದ ಪ್ರತಿಭಾನ್ವಿತ ಸ್ಥಾನವನ್ನು ಹೊಂದಿದೆ. ಒಂದು ಹೊಸ ಧ್ಯೇಯ ಸಾಧನೆಯ ಮಾರ್ಗದರ್ಶಿಯಾಗಿದೆ.

ಪ್ರತಿಯೊಂದು ಧ್ಯೇಯ ಸಾಧನೆಯ ಹಿನ್ನೆಲೆಯಲ್ಲಿ ಬಹುತೇಕವಾಗಿ ಒಂದು ವಿಶಿಷ್ಟ ವ್ಯಕ್ತಿಯ ಧೀಮಂತಿಕೆ ಇದ್ದೇ ಇರುತ್ತದೆ. ಅದಕ್ಕೆ ಪೋಷಕವಾಗಿ ಸಹಾಯಕ ವರ್ಗವೂ ಉಂಟು. ಆದರೆ ಆ ಧೀಮಂತ ವ್ಯಕ್ತಿಯ ನಿಷ್ಠೆ, ಕಾರ್ಯತತ್ಪರತೆಗಳೇ ಸಹಾಯಕ ವರ್ಗಕ್ಕೆ ಸ್ಫೂರ್ತಿ. ಜ್ಞಾನಗಂಗೋತ್ರಿಯ ಏಳು ಸಂಪುಟಗಳ ಮೂಲಾಧಾರವಾಗಿ, ಹಗಲಿರುಳೂ ದುಡಿದು, ಅಂದಾಜು ವೆಚ್ಚದಲ್ಲಿ ಇಳಿತಾಯವನ್ನು ಮಾಡಿ, ಸರಕಾರದ ಸಾಲವನ್ನು ಪೂರ್ತಿಯಾಗಿ ಹಿಂದಿರುಗಿಸಿ, ಪ್ರಕಟಣಾ ಯೋಜನೆ ಯನ್ನು ನಿಶ್ಚಿತ ಅವಧಿಗಿಂತ ಮುಂಚಿತವಾಗಿ ಮುಗಿಸಿದರೂ ಸಂಪುಟಗಳ ಗುಣಕ್ಕೆ ಕುಂದಾಗದಂತೆ ಸತತ ಪ್ರಯತ್ನ ಮಾಡಿದವರು ನಿರಂಜನರು.

ಏಳನೆಯ ಸಂಪುಟ - ಭಾರತದ ಕಥೆ - ಬಿಡುಗಡೆಯಾಗುವ ಮುನ್ನ ಶ್ರೀ ರಾಮಕೃಷ್ಣ ಹೆಗಡೆಯವರು ತಿಳಿಸಿದ ಅಭಿಪ್ರಾಯವನ್ನು ಇಲ್ಲಿ ಸ್ಮರಿಸುವುದು ಉಚಿತ. "ಜ್ಞಾನಗಂಗೋತ್ರಿಯ ಉಗಮದ ಸಂದರ್ಭವನ್ನು ಈಗ ನೆನೆದುಕೊಂಡರೆ ಅದೊಂದು ಊಹಾತೀತವಾದ ಸಂದರ್ಭವಾಗಿ ಕಾಣುತ್ತದೆ. ವಿಶ್ವಕೋಶವನ್ನು

ಸಿದ್ಧಪಡಿಸುವುದು ಹುಡುಗಾಟವಲ್ಲವೆಂದು ಅನೇಕರ ವ್ಯಂಗ್ಯಕ್ಕೆ ಈ ದೊಡ್ಡ ಸಾಹಸವು ಪ್ರಾರಂಭದಲ್ಲಿ ಗುರಿಯಾಗಿದ್ದರೂ, ನಿರಂಜನರ ಅಸೀಮ ಸಾಹಸ, ದೃಢ ನಿಶ್ಚಯ ಮತ್ತು ಏಕಾಗ್ರ ಪ್ರಯತ್ನದಿಂದಾಗಿ ಈ ಕೆಲಸವು ಯಶಸ್ವಿಯಾಗಿ ನೆರವೇರಿದೆ. ಇದಕ್ಕಾಗಿ ಮನಮುಟ್ಟಿ ದುಡಿದವರು ಅನೇಕರು. ಅವರೆಲ್ಲರಿಗೆ, ವಿಶೇಷತಃ ನಿರಂಜನರಿಗೆ, ಕನ್ನಡ ನಾಡಿನ ಜನತೆ ಅದರಲ್ಲೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಋಣಿಗಳಾಗಿದ್ದಾರೆ. ಮೊದಲು ಹುಚ್ಚು ಸಾಹಸವೆಂದು ಕಂಡು ಬಂದ ಈ ಒಂದು ಮೇರು ಪ್ರಯತ್ನ ಕ್ಲಪ್ತಕಾಲಕ್ಕಿಂತ ಮೊದಲೇ ಯಶಸ್ವಿಯಾಗಿ ಮುಗಿದುದಲ್ಲದೆ ಸರಕಾರದ ಋಣವನ್ನು ನಿರ್ದಿಷ್ಟ ಕಾಲಕ್ಕಿಂತ ಮುಂಚೆ ತೀರಿಸಿರುವುದು ಬಹುಶಃ ಇಂಥ ಪ್ರಕಟಣೆಗಳ ಇತಿಹಾಸದಲ್ಲೇ ಮೊದಲನೆಯ ಸಂದರ್ಭವಾಗಿರಬೇಕು. ತಮ್ಮ ಶಾರೀರಿಕ ಅನಾರೋಗ್ಯವನ್ನೂ ಲೆಕ್ಕಿಸದೆ ಹಗಲಿರುಳೂ ಈ ಕೆಲಸದಲ್ಲಿ ತಾದಾತ್ಮ್ಯವನ್ನು ಹೊಂದಿ ಸಮರ್ಪಣಭಾವನೆಯಿಂದ ದುಡಿದು ನಿರಂಜನರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಈ ಕೊಡುಗೆ ಅಪಾರವಾದುದು.”

ಎರಡನೆಯ ಸಂಪುಟದ - ಜೀವ ಜಗತ್ತು - ಎಂಬುದರ ಕೊನೆಯ ಹದಿನಾರು ಪುಟಗಳು ಮುದ್ರಿತವಾಗುತ್ತಿರುವಾಗ, ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾಗ, ನಿರಂಜನರು ದುರ್ದೈವವಶಾತ್ ‘ಲಕ್ವ’ದಿಂದ ಪೀಡಿತರಾದರು. ಹಗಲಿರುಳು ದುಡಿತ, ಮಾನಸಿಕ ಶ್ರಮದ ಪರಿಣಾಮವಾಗಿ ದೇಹ ಶಕ್ತಿ ಕುಂದಿ, ನರದೌರ್ಬಲ್ಯ ಪ್ರಕೋಪಗೊಂಡು ಅವರು ತೀವ್ರ ಅಸ್ವಸ್ಥರಾದರು. ಆದರೂ ಅವರ ದೃಢ ಸಂಕಲ್ಪ, ಮನೋ ನಿಶ್ಚಯಗಳು ದೈಹಿಕ ಅಸಾಮರ್ಥ್ಯವನ್ನು ಬದಿಗೊತ್ತಿದವು. ಸ್ವಲ್ಪಕಾಲವಾದ ಮೇಲೆ, ನಿರಂಜನರು ಎಂದಿನಂತೆ ‘ಜ್ಞಾನಗಂಗೋತ್ರಿ’ಯ ಕಾರ್ಯದಲ್ಲಿ ನಿರತರಾದರು. ಡಾ। ಶಿವರಾಮ್ ಅವರು ಒಮ್ಮೆ ಹೇಳಿದಂತೆ, ನಿರಂಜನರ ದೈಹಿಕ ಅನಾರೋಗ್ಯಕ್ಕೆ ‘ಜ್ಞಾನಗಂಗೋತ್ರಿ’ ಕಾರಣವೊ ಅಲ್ಲವೊ, ಅಂತೂ ಈ ಬೃಹತ್ ಸಾಧನೆಯಿಂದ ಅವರು ಗುಣಮುಖರಾಗುತ್ತಿರುವುದರಲ್ಲಿ ಸಂದೇಹವಿಲ್ಲ, ಎಂಬುದು ಸಾಧನಾ ಸಂತೃಪ್ತಿಯ ಮಹತ್ತನ್ನು ತೋರಿಸುತ್ತದೆ. ನಿಶ್ಚಿತ ಅವಧಿಯಲ್ಲಿ ಮುಂದಿನ ಸಂಪುಟಗಳನ್ನು ನಿರಂಜನರು ಪ್ರಕಟಿಸಿದರು. ಅವರ ಕಾರ್ಯನಿರ್ವಹಣೆಯಲ್ಲಿ ಮುಖ್ಯವಾಗಿ ಅಡ್ಯನಡ್ಕ ಕೃಷ್ಣಭಟ್, ಮಾ.ನಾ. ಚೌಡಪ್ಪ ಮತ್ತು ಸರಕಾರ ಪ್ರೆಸ್‌ನ ನಿರ್ದೇಶಕ ಶ್ರೀರಾಮ್ ಅವರು ಸತತ ಬೆಂಬಲ ನೀಡಿದರು. ಜ್ಞಾನಗಂಗೋತ್ರಿಯ ಯೋಜನೆ ಕೆಲವೇ ವರ್ಷಗಳದ್ದು ಎಂಬ ಕಾರಣದಿಂದ, ಬೇರೆ ಉದ್ಯೋಗ ದೊರೆತಾಗ ಕೆಲವರು ಮಧ್ಯೆ ಬಿಟ್ಟುಹೋದರು. ಕೊನೆಯ ಸಂಪುಟದ ವೇಳೆಗೆ ಉಳಿದವರು ಕೆಲವೇ ಜನ. ನಿರಂಜನರದು ಮಾತ್ರ ಅವಿಶ್ರಾಂತ ದುಡಿಮೆ.

ಒಂದು ಬೃಹತ್ ಯೋಜನೆಯನ್ನು ಸತತ ದುಡಿಮೆಯಿಂದ ಸಾರ್ಥಕಗೊಳಿಸಿದ ನಿರಂಜನರಿಗೆ, 'ನಾನು - ನನ್ನದು' ಎಂಬ ಅಹಂಕಾರ, ವಿಪರೀತಮತಿ ಲವಲೇಶವೂ ಇಲ್ಲ. ತಾನು ಮಾಡಿದ ಕಾರ್ಯವು ಅಚ್ಚಳಿಯದೆ ಇರಬೇಕು, ಅದನ್ನು ಮತ್ತೆ ಪರಿಷ್ಕರಿಸಲು ಇನ್ನಾರಿಗೂ ಸಾಧ್ಯವಿಲ್ಲ ಎಂಬ ಭ್ರಮೆಯೂ ಇಲ್ಲ. "ನಾವು ರಚಿಸಿರುವ ಸಂಪುಟಗಳು ದೋಷರಹಿತ ಎಂದು ಸಾರಲಾರೆ" ಎಂದು ಕೊನೆಯ ಸಂಪುಟದ ಪ್ರಸ್ತಾವನೆಯಲ್ಲಿ ಅವರೇ ತಿಳಿಸಿದ್ದಾರೆ. ಆಗ ಸರಕಾರಿ ಮುದ್ರಣಾಲಯದ ನಿರ್ದೇಶಕರಾಗಿದ್ದ ಎಂ. ಎ. ಶ್ರೀರಾಮ್ ಅವರು, **ಜ್ಞಾನಗಂಗೋತ್ರಿ** ಸಂಪುಟಗಳನ್ನು ಬಟ್ಟೆ ಚಿಂದಿ ಬೆರೆಸಿದ ಪಲ್ಪಿನಿಂದ ಮಾಡಿದ ಕಾಗದದ ಮೇಲೆ ಅಚ್ಚು ಮಾಡಿದರೆ, ಅವು ಬಹುಕಾಲ ಬಾಳಬಲ್ಲವು ಎಂದು ಒಮ್ಮೆ ಸಲಹೆ ಮಾಡಿದರು. ಸಾಮಾನ್ಯ ಹೊಳಪು ಕಾಗದ ನೋಡುವುದಕ್ಕೆ ಚೆನ್ನಾಗಿರುತ್ತೆ, ಆದರೆ ಬಾಳಿಕೆ ಬರುವುದಿಲ್ಲ ಎಂದಾಗ, ನಿರಂಜನರ ಪ್ರತಿಕ್ರಿಯೆ: "ನೋಡೋಕೆ ಚೆನ್ನಾಗಿದ್ದು ಎಲ್ರೂ ಮುಟ್ಟಿ ಮುಟ್ಟಿ .... ಹತ್ತೇ ವರ್ಷಗಳಲ್ಲಿ ಹಾಳಾಗಿ ಹೋಗಬೇಕು. ಪ್ರತಿಗಳು ಸಿಗಬಾರ್ದು. ಆಗ ಈ ಸಂಪುಟಗಳ ಪರಿಷ್ಕೃತ ಆವೃತ್ತಿ ಬರುತ್ತೆ. ಅಥವಾ ಇನ್ನೊಂದು ತಂಡ ಬಂದು, ಇದಕ್ಕಿಂತಲೂ ಉತ್ತಮವಾದ ಕಿರಿಯರ ವಿಶ್ವಕೋಶ ತಯಾರಿಸುತ್ತೆ." ಪ್ರತಿ ವರ್ಷ ಏಳು ಸಂಪುಟಗಳಿಗೆ ಸಂಬಂಧಿಸಿದಂತೆ, ಏಳು ಅಧ್ಯಾಯಗಳಿರುವ 'ಜ್ಞಾನಗಂಗೋತ್ರಿ ಅನುಬಂಧ' ಅಚ್ಚಾದರೆ, ಈ ಅನುಬಂಧಗಳ ಆಧಾರದ ಮೇಲೆ, ಹತ್ತು ವರ್ಷಗಳಿಗೊಮ್ಮೆ **ಜ್ಞಾನಗಂಗೋತ್ರಿ**ಯ ಪರಿಷ್ಕೃತ ಆವೃತ್ತಿ ಸಿದ್ಧವಾಗುತ್ತದೆ ಎಂಬ ನಂಬುಗೆಯನ್ನೂ ನಿರಂಜನರು ವ್ಯಕ್ತಪಡಿಸಿದ್ದಾರೆ. ಕಾರಣಾಂತರಗಳಿಂದ ಇದು ಇನ್ನೂ ಕಾರ್ಯಗತವಾಗಿಲ್ಲ.

ಒಂದು ಸಾಮೂಹಿಕ ಪ್ರಯತ್ನದಲ್ಲಿ, ಭಿನ್ನಾಭಿಪ್ರಾಯಗಳು ಬರುವುದುಂಟು; ಪರಸ್ಪರ ಈರ್ಷ್ಯಾಸೂಯೆಗಳು ತಲೆದೋರುವುದುಂಟು. ಮುಂದೆ ನಿಂತು, ತಲೆ ಒಡ್ಡುವವನಿಗೆ ಇತರರಿಂದ ಕೆಲವುವೇಳೆ ವಿನಾಕಾರಣ ನಿಂದೆ, ಅವಹೇಳನಗಳ ಆಘಾತವಾಗುವುದುಂಟು. ನಿರಂಜನರೂ ಇಂಥ ಸನ್ನಿವೇಶನಗಳನ್ನು ಅನುಭವಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ತಮ್ಮ ಎದುರಾಳಿಗಳ ಬಗೆಗೆ, ತಮಗೆ ತೊಂದರೆ ಮಾಡಿದವರಿಗೆ, ಅವರು ಪ್ರತೀಕಾರ ಮನೋಭಾವವನ್ನು ಎಂದೂ ತೋರಿಸಿಲ್ಲ. ಅನಾರೋಗ್ಯದ ನಿಮಿತ್ತ, ಹೆಚ್ಚು ರಕ್ತ ಒತ್ತಡದ ಕಾರಣ, ದೈನಂದಿನ ಕಾರ್ಯನಿರ್ವಹಣೆಯಲ್ಲಿ, ಅವರ ಮನಸ್ಸು ಒಮ್ಮೊಮ್ಮೆ ಉದ್ವೇಗದಿಂದಿದ್ದಿರಬಹುದು. ಇಂತಹ ಸ್ಥಿತಿಯನ್ನು ಅವರೇ ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿ ಅವರ ಸಹಕಾರವನ್ನು ಕೋರುತ್ತಿದ್ದುದೂ ಉಂಟು. ಹೃದಯ ವೈಶಾಲ್ಯ, ಆತ್ಮೀಯತೆಗಳೇ ನಿರಂಜನರ ಪ್ರಧಾನ ಗುಣಗಳು. ○

ನಿರಂಜನರ ನಾಟಕಗಳು : ಒಂದು ಪರಿಚಯ

– ಚಿ. ಶ್ರೀನಿವಾಸರಾಜು

ನಿರಂಜನರನ್ನು ನಾವು ಸಾಮಾನ್ಯವಾಗಿ ಇಂದು ಸಾಹಿತ್ಯಕ್ಷೇತ್ರದಲ್ಲಿ ಗುರುತಿಸುವುದು ಕಥಾಸಾಹಿತ್ಯದ ಬರಹಗಾರರೆಂದು. ಆದರೆ ಅವರು ನಾಟಕಗಳನ್ನು, ಅಂಕಣ ಬರಹಗಳನ್ನು, ಭಾಷಾಂತರಗಳನ್ನು ಮತ್ತು ಅನೇಕ ಲೇಖನಗಳನ್ನು ಬರೆದಿದ್ದಾರೆ ಎನ್ನುವ ವಿಷಯ ಯುವ ಪೀಳಿಗೆಯವರಿಗೆ ಪರಿಚಯವಿಲ್ಲ. ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಆರಂಭವಾದ ಸಾಂಸ್ಕೃತಿಕ ಸಂದರ್ಭದಲ್ಲಿ ಮೂಡಿಬಂದ ಲೇಖಕರು ನಿರಂಜನ. ಆದ್ದರಿಂದ ಅವರ ಕೃತಿಗಳಲ್ಲಿ ಸಹಜವಾಗಿ ಪ್ರಗತಿಶೀಲ ಮನೋಧರ್ಮದ ಚಿಂತನೆಗಳನ್ನು ಕಾಣಬಹುದು. ಸಮತಾವಾದದ ಹಿನ್ನೆಲೆಯಲ್ಲಿ ಕೃತಿರಚನೆ ಮಾಡುತ್ತಿರುವವರಲ್ಲಿ ಇವರು ಮುಖ್ಯರು. ಇವರ ಈ ಒಲವನ್ನು ಭಾಷಾಂತರಗಳಲ್ಲೂ ಗಮನಿಸಬಹುದು.

ನಿರಂಜನರು ಒಟ್ಟು ನಾಲ್ಕು ನಾಟಕಗಳನ್ನು ಪ್ರಕಟಿಸಿದ್ದಾರೆ. ಉಳಿದ ಹನ್ನೆರಡು (ಬಾನುಲಿ ರೂಪಕಗಳು, ನಾಟಕಗಳು) ಹಸ್ತಪ್ರತಿಯ ರೂಪದಲ್ಲಿವೆ. ನನ್ನ ಅನಿಸಿಕೆಗಳನ್ನು ಪ್ರಕಟಿಸಿರುವ ನಾಲ್ಕು ನಾಟಕಗಳಿಗೆ ಸೀಮಿತಗೊಳಿಸಿಕೊಳ್ಳುತ್ತೇನೆ. ನಿರಂಜನರಿಗೂ, ರಂಗಭೂಮಿಗೂ ಇರುವ ಸಂಬಂಧ ಹಳೆಯದು. ಈ ಸಂಬಂಧವನ್ನು ಅವರು ತಮ್ಮ 'ಬಣ್ಣದ ಬಯಲು' (ನಾವೂ ಮನುಷ್ಯರು!) ಲೇಖನದಲ್ಲಿ ವಿಸ್ತಾರವಾಗಿ ತಿಳಿಸಿದ್ದಾರೆ. ಈ ಸಂಬಂಧ ಹಳೆಯದಾದರೂ ನಿರಂಜನರು ರಂಗಭೂಮಿ ಮತ್ತು ನಾಟಕ ಪ್ರಕಾರಗಳ ಸಂಬಂಧವನ್ನು ಗಂಭೀರವಾಗಿ ಪರಿಗಣಿಸಿ ಕೃತಿರಚನೆ ಮಾಡಿಲ್ಲ ಎಂಬುದು ಸ್ಪಷ್ಟ. ಸಾಮಾನ್ಯವಾಗಿ ಅವರು ಬರೆದಿರುವ ನಾಟಕಗಳೆಲ್ಲ ಯಾವುದಾದರೂ ಒಂದು ಸಂದರ್ಭದ ಒತ್ತಡದಿಂದ ರಚಿಸಲ್ಪಟ್ಟಿವೆ. ಇಂದು ಇವು ಒಂದು ಚಾರಿತ್ರಿಕ ದಾಖಲೆಯಾಗಿ, ಅವರ ಕಥಾಸಾಹಿತ್ಯದ ಮನೋಧರ್ಮವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿವೆ. ಪ್ರಕಟವಾಗಿರುವ ನಾಲ್ಕು ನಾಟಕಗಳಲ್ಲಿ 'ಆಹ್ವಾನ' ಪ್ರಸಾರನಾಟಕ ಮಾಲಿಕೆಯ ಗುಂಪಿಗೆ ಸೇರುತ್ತದೆ. ಅವರು ರಂಗಭೂಮಿಗೆಂದೇ ಬರೆದ ನಾಟಕಗಳು ಮೂರು.

ಸಂಗಮ ಸ್ನಾನ (೧೯೬೧) : ಇದು ನಿರಂಜನರು ಪ್ರಕಟಿಸಿದ ಮೊದಲ ನಾಟಕ. ಎರಡೆರಡು ದೃಶ್ಯಗಳಿರುವ ಎರಡು ಅಂಕದ ನಾಟಕ. ಬದಲಾಗುತ್ತಿರುವ ರಾಷ್ಟ್ರ ಜೀವನದ ಹಿನ್ನೆಲೆಯಲ್ಲಿ ಕುಟುಂಬದ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ. ಮಧ್ಯಮ ವರ್ಗದ ಕುಟುಂಬದಲ್ಲಿ ಜರಗುವ ಅಂತರ್ಜಾತೀಯ ವಿವಾಹವೇ ಈ ನಾಟಕದ ಕಥಾವಸ್ತು. ಎರಡು ತಲೆಮಾರುಗಳ ಮಧ್ಯೆ ಕಾಣಿಸಿಕೊಳ್ಳುವ

ಘರ್ಷಣೆಯನ್ನು ತೋರಿಸಲು ಪ್ರಯತ್ನಿಸಿದ್ದಾರೆ. ಶ್ರೀರಂಗರು ಮತ್ತು ಕೈಲಾಸಂ ಸೃಷ್ಟಿಸಿದ ನಾಟಕಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಮಧ್ಯಮವರ್ಗದ ಪಾತ್ರಗಳು ಇಲ್ಲಿಯೂ ಕಂಡು ಬರುತ್ತವೆ. ಮೂವತ್ತು ನಲವತ್ತು ವರ್ಷಗಳಷ್ಟು ಹಿಂದಿನ ಮಧ್ಯಮವರ್ಗದ ಕುಟುಂಬದ ಚಿತ್ರಣದಲ್ಲಿ ಪ್ರಗತಿಶೀಲ ಮನೋಧರ್ಮದ ಚಿಂತನೆಯ ಬೀಜಗಳನ್ನು ಹಾಕಲು ಪ್ರಯತ್ನಿಸಿದ್ದಾರೆ. ಈ ನಾಟಕದಲ್ಲಿ ಬರುವ ಸ್ತ್ರೀಪಾತ್ರಗಳು (ರಮಣಿ, ಲಲಿತಾಂಬ, ಪಾರ್ವತಮ್ಮ) ಸಂಪ್ರದಾಯ ಕುಟುಂಬದಲ್ಲಾಗುವ ಬದಲಾವಣೆಗಳನ್ನು ಪುರುಷಪಾತ್ರಗಳಿಗಿಂತ ಮೊದಲು ಒಪ್ಪಿಕೊಳ್ಳುವಂತೆ ಚಿತ್ರಿಸಿರುವುದು; ನಾಟಕದಲ್ಲಿನ ಒಂದು ಪಾತ್ರ (ಚಂದ್ರಶೇಖರಯ್ಯ) ಮಾತ್ರ ಬದಲಾವಣೆಗೆ ವಿರೋಧವನ್ನು ಸೂಚಿಸುವುದು; ನಾಟಕದ ಘರ್ಷಣೆಯ ಅಂಶವನ್ನು ಮೆದುವಾಗಿಸಿದೆ. ನಾಟಕಕಾರರಿಗೆ ಕಥಾವಸ್ತುವಿನ ಮೇಲಿರುವ ಮೋಹ, ನಾಟಕದ ಪಾತ್ರಗಳ ಸಹಜ ವಿಕಾಸಕ್ಕೆ ಅಡಚಣೆಯನ್ನುಂಟುಮಾಡಿದೆ. ನಾಟಕದ ಎಲ್ಲ ಹಂತಗಳಲ್ಲಿ ಕಾಣಿಸಿಕೊಂಡಿರುವ 'ಸಮಾಜದ ಸ್ಥಿತಿಗತಿ ಮಾರ್ಪಾಟಾಗ್ತಿದೆ' (ಪುಟ 43) 'ಮನುಷ್ಯನೂ ಮಣ್ಣಿನ ಹಾಗೇ ನೋಡು, ಕೆಟ್ಟ ವಿಚಾರದ ಕಳೇಸೆಲ್ಲಾ ಕಿತ್ತರೆ, ಮನಸ್ಸನ್ನೂ ದೊಡ್ಡದು ಮಾಡ್ಕೊಂಡರೆ ದೇವತ್ವ ಅವನಲ್ಲಿ ಬಲಿಯೋವಕ್ಕೆ ಶುರುವಾಗುತ್ತೆ' (ಪುಟ 62) 'ಈ ಮನೆಗೆ ಹೊಸ ಗಡಿಯಾರ ಬಂತು! ಇಲ್ಲೂ ಕಾಲ ಚಲಿಸ್ತಿದೆ! ನೀರು ಹರೀತಿದೆ' (ಪುಟ 65) 'ಹಳೇಮನೆ ಬಿಡೋದು ಹೊಸಮನೆ ಚನ್ನಾಗಿದೆ ಅಂತ, ಸಾಮಾನು ಸರಂಜಾಮುಗಳೆಲ್ಲ ಇವತ್ತು ಅಸ್ತವ್ಯಸ್ತವಾಗಿ ಕಂಡರೂ, ನಾಳೆ ಹೊಸಮನೇಲಿ ಸುವ್ಯವಸ್ಥೆ ಏರ್ಪಾಟಾಗಿಯೇ ಆಗಿರುತ್ತೆ' (ಪುಟ 75) 'ಹಳೇ ವ್ಯವಸ್ಥೆ ಕುಸಿದು ಬೀಳ್ತಿರೋದು ನಿಜ. ಆದರೆ ಅದರ ಜಾಗದಲ್ಲೇ ಹೊಸ ವ್ಯವಸ್ಥೆ ರೂಪು ತಾಳ್ತಿದೆ ಅನ್ನೋದನ್ನು ಮರೀಬೇಡ' (ಪುಟ 75) ಇಂತಹ ಮಾತುಗಳ ಒತ್ತಡದಿಂದ ನಾಟಕದ ಸಂಭಾಷಣೆ ನಿರೀಕ್ಷಿತ ಯಶಸ್ಸನ್ನು ಪಡೆದಿಲ್ಲ. ನಾಟಕ ಹೇಳಿಕೆಗಳ ಮಟ್ಟದಲ್ಲೇ ಉಳಿದು ಬಿಡುವ ಅಪಾಯವಿದೆ. ನಾಟಕಕಾರರು ಪಾತ್ರಗಳ ಉಡುಗೆ-ತೊಡುಗೆಗಳ ಸೂಕ್ಷ್ಮ ವಿವರಗಳಿಗೆ ನೀಡಿರುವ ಗಮನವನ್ನು (........ ಉಟ್ಟಿರುವುದು ಈರುಳ್ಳಿ ಬಣ್ಣದ ಆರ್ಟ್‌ಸಿಲ್ಕಿಸೀರೆ, ಎಡಗೈಯಲ್ಲಿ ಬಂಗಾರ ಸರಪಣಿಯ ರಿಸ್ಟ್‌ವಾಚ್, ಬಲಗೈಯಲ್ಲಿ ಬಂಗಾರದ ಬಳೆಗಳೆರಡು, ಹಳದಿ ರವಿಕೆಯೊಳಗೆ ಇದ್ದೂ ಇಲ್ಲದಂತಹ ಬ್ರೇಸರ್ಸ್........) ನಾಟಕದಲ್ಲಿನ ಮನುಷ್ಯ ಸಂಬಂಧಗಳ ಕಡೆಗೆ ಹರಿಸಿದ್ದರೆ ಒಳ್ಳೆಯದಾಗುತ್ತಿತ್ತು. ನಾಟಕದ ಒಂದು ಘಟ್ಟದಲ್ಲಿ ವಿಶ್ವನಾಥ 'ಅರ್ಥ ಕಳಕೊಂಡಿರೋ ಎಷ್ಟೋ ಮಾತುಗಳಲ್ಲಿ ಅದೂ ಒಂದು' ಎಂಬ ಮಾತನ್ನು ಆಡುತ್ತಾನೆ. ಇದನ್ನೇ ನಾವು ನಾಟಕದ ಬಹುಪಾಲು ಮಾತುಗಳಿಗೂ ಅನ್ವಯಿಸಬಹುದು. ನಾಟಕದ ರಚನೆಯಲ್ಲಿ ತೀರ ಆವಶ್ಯಕವಾದ ಮಾತಿನ ಸಂಯಮ, ತರ್ಕ, ಗುರಿ, ಸೊಗಡು ಇಲ್ಲಿ ಸಾಕಷ್ಟು ಕಂಡು ಬರುವುದಿಲ್ಲ. ನಾಟಕಕಾರರ ಆಶಯವೇನೋ

ದೊಡ್ಡದು. ಆದರೆ ಅದನ್ನು ಹಿಡಿದಿಟ್ಟಿರುವ ರೂಪ ಶಿಥಿಲ. ನಾಟಕದ ಶಿಲ್ಪ ಮತ್ತು ನಾಟಕದ ಕ್ರಿಯೆ ತೆಳುವಾದ್ದರಿಂದ ನಿರೀಕ್ಷಿಸಿದ್ದ ತೀವ್ರತೆಯನ್ನು ನಾಟಕ ಪಡೆದು ಕೊಂಡಿಲ್ಲ. ನಾಟಕದ ಶೀರ್ಷಿಕೆ ಎರಡು ತಲೆಮಾರುಗಳ, ಎರಡು ಕುಟುಂಬಗಳ, ಎರಡು ಸಂಸ್ಕೃತಿಗಳ ಸಂಕ್ರಮಣ ಕಾಲದ ಸೂಚನೆಯನ್ನು ಭಾವುಕವಾಗಿ ಕಟ್ಟಿಕೊಡುತ್ತದೆ.

ಆಹ್ವಾನ (೧೯೬೩) : ಇದು ನಿರಂಜನರ ಎರಡನೆಯ ಪ್ರಕಟಿತ ನಾಟಕ ಮಾಲಿಕೆ. 'ಆರು ಭಾಗಗಳುಳ್ಳ ಈ ಕೃತಿಯ ವಸ್ತು : ಭಾರತ'. ಧಾರವಾಡದ ಆಕಾಶವಾಣಿಯವರ ಪ್ರೇರಣೆಯಿಂದ ಸಿದ್ಧಪಡಿಸಿದ ಈ ಮಾಲಿಕೆ ಬಾನುಲಿ ಪ್ರಸಾರಕ್ಕೋಸ್ಕರ. ಈ ಮಾಲಿಕೆಯನ್ನು ಓದಿದಾಗ ನಿರಂಜನರ ಅಧ್ಯಯನ, ಪರಿಶ್ರಮ, ಕಳಕಳಿ ಮನವರಿಕೆಯಾಗುತ್ತದೆ. ಅವರು ಅಚ್ಚುಕಟ್ಟಾಗಿ ವಿಷಯಗಳನ್ನು ಸಂಗ್ರಹಿಸಿ, ಜೋಡಿಸಿರುವ ರೀತಿ ಮೆಚ್ಚುವಂತಹ ಅಂಶ. ಈ ಮಾಲಿಕೆಯನ್ನು ಭಾರತ ಗಾಥಾ, ವಿರೋಧಾಭಾಸ, ಇತಿಹಾಸ ಕಲಿಸುವ ಪಾಠ, ದುಃಸ್ವಪ್ನ, 'ಇದು ಬರಿ ಬೆಳಗಲ್ಲೋ ಅಣ್ಣಾ', ಕಾಮನಬಿಲ್ಲು ಭಾಗಗಳಾಗಿ ವಿಂಗಡಿಸಿ ಭಾರತದ ಇತಿಹಾಸವನ್ನು, ಮನೋಧರ್ಮವನ್ನು ಚೆನ್ನಾಗಿ ಹಿಡಿದಿಟ್ಟಿದ್ದಾರೆ. ಯುವಗಣಕ್ಕೆ ಭಾರತದ ಬಗ್ಗೆ ಆಸಕ್ತಿ, ಅಭಿಮಾನ, ತಿಳುವಳಿಕೆ ಮೂಡುವಂತೆ ಈ ಮಾಲಿಕೆ ರಚಿಸುವಲ್ಲಿ ನಿರಂಜನರು ಯಶಸ್ವಿಯಾಗಿದ್ದಾರೆ. ಇಲ್ಲಿ ಒಬ್ಬ ಸೃಜನಶೀಲ ಲೇಖಕ ಇತಿಹಾಸವನ್ನು ಅವಲೋಕನ ಮಾಡುವ ದೃಷ್ಟಿ,ಅದನ್ನು ವ್ಯಾಖ್ಯಾನಿಸುವ ರೀತಿಯನ್ನು ಕಾಣಬಹುದು. ಇತಿಹಾಸದ ಪ್ರಸ್ತುತ ಸಂದರ್ಭದ ದಾಖಲೆಗಳನ್ನು ಮಾತ್ರ ನೀಡದೆ ಅದಕ್ಕೊಂದು ಕಲಾತ್ಮಕ ಚೌಕಟ್ಟು ಹಾಕಿರುವುದು ಈ ಪ್ರಸಾರ ನಾಟಕ ಮಾಲಿಕೆಯ ಹೆಗ್ಗಳಿಕೆ.

'ಅನೈಕ್ಯ ಗೃಹಛಿದ್ರ ತಾಂಡವಾಡಿದಾಗಲೆಲ್ಲ ರಾಷ್ಟ್ರದ ಸ್ವಾತಂತ್ರ್ಯ ನಷ್ಟವಾಗ್ತದೆ' ಎಂಬ ಇತಿಹಾಸದ ಪಾಠವನ್ನು ಸ್ಥಾಯಿಯಾಗಿ ಉಳ್ಳದ್ದಾಗಿದೆ ಈ ಮಾಲಿಕೆ. ಇದಕ್ಕೆ ಬೇಕಾಗುವ ಅಂಕಿ - ಅಂಶಗಳನ್ನು, ಕಥಾಭಾಗಗಳನ್ನು ಹೊಂದಿಕೊಳ್ಳುವಂತೆ ಅಳವಡಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಬಂದು ಹದಿನೈದು (ಈ ಮಾಲಿಕೆ ಬರೆಯುವ ಕಾಲಕ್ಕೆ) ವರ್ಷಗಳಾದರೂ ದೇಶದಲ್ಲಿ ವಿಜೃಂಭಿಸುವ ನಿರಾಶೆ, ಬಡತನ, ದುಃಖ, ಸ್ವಾರ್ಥ ಹೇಗೆ ಭಾರತೀಯನ ಸ್ವಪ್ನಸೌಧದ ಕುಸಿತಕ್ಕೆ ಕಾರಣವಾಯಿತು ಎಂಬುದನ್ನು ತಿಳಿಸಿದ್ದಾರೆ. ಜೊತೆಗೆ ರಷ್ಯಾ ದೇಶದ ಬೃಹತ್ ಕೈಗಾರಿಕೀಕರಣದ ಪ್ರಭಾವದಿಂದ ಭಾರತದಲ್ಲಿ ನಿರ್ಮಿಸಲಾಗುತ್ತಿದ್ದ ಬೃಹತ್ ಕೈಗಾರಿಕೆಗಳ ಬಗ್ಗೆ (ವಿರೋಧಾಭಾಸ ಪುಟ 63, 64) ಲೇಖಕರ ಒಲವು ಮತ್ತು ನೆಹರೂ ಭಾರತದ ಸಾಧನೆಗಳ ಬಗ್ಗೆ ಮೆಚ್ಚುಗೆಯ ದೃಷ್ಟಿಯೂ ಇಲ್ಲಿ ಕಂಡುಬರುತ್ತದೆ. 'ಇದು ಬರಿ ಬೆಳಗಲ್ಲೊ ಅಣ್ಣಾ' ಭಾಗದಲ್ಲಿ 'ಬೆಳಗು' ಕವನ ಆ ರೂಪಕದ ವಸ್ತುವಿಗೆ ಸರಿಯಾಗಿ

ಹೊಂದಿಕೊಂಡಿಲ್ಲ. ಮಾಲಿಕೆಯ ಕೊನೆಯ ಭಾಗವಾದ 'ಕಾಮನಬಿಲ್ಲು' ಇಡೀ ನಾಟಕ ಮಾಲಿಕೆಯಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ಲೇಖಕರು ಪಾತ್ರಗಳಿಗೆ ನೀಡಿರುವ ಗಂಗಾಚರಣ್, ಕಾವೇರಿ, ಭರತೇಶ್ ಎಂಬ ಹೆಸರುಗಳು ನಾಟಕದ ಆಶಯ ವನ್ನು ಸೂಚಿಸುತ್ತವೆ. ಭಾರತ ಬಲಿಷ್ಠವಾಗಬೇಕು; ಭಾವೈಕ್ಯದಿಂದ ಎದ್ದು ನಿಲ್ಲಬೇಕು; ಉತ್ತರ ದಕ್ಷಿಣಗಳು ಒಂದಾಗಬೇಕು ಎಂಬ ಭಾವನೆಯಿಂದ ಈ ನಾಟಕಮಾಲಿಕೆ ಯನ್ನು ಮುಗಿಸುತ್ತಾರೆ. ಈ ನಾಟಕಮಾಲಿಕೆಯಲ್ಲಿ ನಿರಂತರ ದೃಶ್ಯ ಬದಲಾವಣೆ ಗಳಿರುವುದರಿಂದ ರಂಗಪ್ರಯೋಗಕ್ಕೆ ತೊಡಕಾಗುತ್ತದೆ.

ಈ ಮಾಲಿಕೆಯನ್ನು ಓದಿದಾಗ ಒಂದು ಪ್ರಶ್ನೆ ಕಾಡುತ್ತದೆ. ಈ ದೇಶ ಪ್ರಜ್ಞಾಪೂರ್ವಕವಾಗಿ ಭಾವೈಕ್ಯದಿಂದ ಎಂದಾದರೂ ಒಂದಾಗಿತ್ತೆ? ಎಂಬ ಕಟು ವಾಸ್ತವ ಎದುರಾಗುತ್ತದೆ.ಈ ದೇಶದ ಒಗ್ಗಟ್ಟಿನ ಬಗ್ಗೆ ಭಾವನಾತ್ಮಕವಾದ ಆಲಾಪ - ಪ್ರಲಾಪಗಳು ಕೇಳಿ ಬಂದರೂ ಮೂಲತಃ ಭಾರತೀಯ ಮನೋಧರ್ಮ ಸ್ವಾರ್ಥದಿಂದ ಆತ್ಮರತಿಯಿಂದ ಕೂಡಿದ್ದು. ಮುಖ್ಯವಾಗಿ ವಿಘಟನೆಯನ್ನೆ ಕಟ್ಟಿಕೊಂಡಿರುವ ಜೀವನ ಮನೋಧರ್ಮ, ಅಲ್ಲವೆ? ಎಲ್ಲಿಯವರೆಗೆ ಭಾರತೀಯ ಮನೋಧರ್ಮ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಭಾವೈಕ್ಯದ ಎಲ್ಲ ಪ್ರಯತ್ನಗಳು ಒಳಗೊಳಗೇ ಹುಸಿಯಾಗುತ್ತಾ ಹೋಗುತ್ತವೆ. ಕಾಮನಬಿಲ್ಲು ಕ್ಷಣಿಕ. ಅದೇ ಹೆಸರನ್ನು ಹೊತ್ತ ಈ ಮಾಲಿಕೆಯ ಕೊನೆಯ ಶೀರ್ಷಿಕೆ ಮೇಲಿನ ಮಾತನ್ನೇ ಪರೋಕ್ಷವಾಗಿ ಸಮರ್ಥಿಸುವಂತೆ ಧ್ವನಿತವಾಗುತ್ತದೆ.

ಸಮ್ರಾಜ್ಞಿ (೧೯೬೭) : ಇದು ನಿರಂಜನರ ಮೂರನೆಯ ಪ್ರಕಟಿತ ಚಾರಿತ್ರಿಕ ನಾಟಕ. ಮಂಗೋಲ ಸಾಮ್ರಾಜ್ಯದ ತೈಮೂರನಿಗೆ ಸಂಬಂಧಿಸಿದ ಚಾರಿತ್ರಿಕ, ಜಾನಪದ ಅಂಶಗಳ ಆಧಾರದ ಮೇಲೆ ಈ ನಾಟಕವನ್ನು ರಚಿಸಿದ್ದಾರೆ. ತೈಮೂರನ ಆಕ್ರಮಣ, ದಂಡಯಾತ್ರೆಗಳ ಹಿಂದೆ ಅವನ ದುರಂತವನ್ನು ಚಿತ್ರಿಸಬೇಕೆಂಬ ಹಂಬಲ ನಾಟಕಕಾರರಿಗೆ ಒಂದು ಕಡೆಯಾದರೆ, ಅವನ ಪತ್ನಿ ಸಾಮ್ರಾಜ್ಞಿ ಬೀಬಿ ಹಾನಿಮಾಳ ಮಾನವೀಯ ತುಡಿತವನ್ನು ಸೆರೆಹಿಡಿಯುವ ಆಸಕ್ತಿ ಇನ್ನೊಂದು ಕಡೆ. ಅನೈಕ್ಯ, ಅಂತಃಕಲಹದಿಂದ ಹಿಂದೂಸ್ಥಾನ ಆಕ್ರಮಣಕಾರರ ಪಾಲಾಯಿತು ಎಂಬುದನ್ನು ನಾಟಕದಲ್ಲಿ ಸ್ಪಷ್ಟಪಡಿಸಲು ಪ್ರಯತ್ನಿಸಿದ್ದಾರೆ. ಸದಾ ಯುದ್ಧಪ್ರಿಯನಾದ ತೈಮೂರ ಮತ್ತು ಸೌಂದರ್ಯದ ಸಾಕ್ಷಾತ್ಕಾರದಂತಿದ್ದ ಬೀಬಿ ಹಾನಿಮಳ ಮಧ್ಯೆ ಕಂಡು ಬರುವ ಅಂತರಂಗದ ಶೀತಲ ಘರ್ಷಣೆಯನ್ನು ನಾಟಕಕಾರರು ಇನ್ನಷ್ಟು ಶೋಧಿಸಿ ದ್ದರೆ ನಾಟಕ ಇನ್ನೂ ಚೆನ್ನಾಗಿ ರೂಪುಗೊಳ್ಳುತ್ತಿತ್ತು. ಇವರಿಬ್ಬರ ಮಧ್ಯೆ ಬರುವ ಶಿಲ್ಪಿ ದಾವೂದ್ ಪಾತ್ರ ಪ್ರಾರಂಭದ ಹಂತದಲ್ಲಿ ಚೆನ್ನಾಗಿ ಮೂಡಿಬಂದರೂ, ಅನಂತರದ ಬೆಳವಣಿಗೆ ಕುಂಠಿತವಾಗಿದೆ. ತೈಮೂರ್, ಬೀಬಿ ಹಾನಿಮ್, ಮಗ

ಷಾ ರುಖ್, ಶಿಲ್ಪಿ ದಾವೂದ್, ಸೇವಕಿ ಅಮೀನಾ ಪಾತ್ರಗಳು ನಾಟಕದ ಸಂಘರ್ಷದ ಮೂಸೆಯಲ್ಲಿ ನಾಟಕಕ್ರಿಯೆಯನ್ನು ಉದ್ದೀಪನಗೊಳಿಸುವುದರ ಬದಲು ಪ್ರತ್ಯೇಕ ದ್ವೀಪಗಳಾಗಿ ಉಳಿದುಬಿಡುತ್ತಾರೆ. ನಾಟಕದ ತೀವ್ರತೆ ಪೇಲವವಾಗುತ್ತದೆ. 'ಲೋಕದ ಗಂಡ'ನಾಗಲು ತೈಮೂರ ಸಾಮ್ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆಯವನಾದರೂ, ಮನೆಯ ಗಂಡನಾಗಿ ಬೀಬಿ ಹಾನಿಮಳ ಹೃದಯ ಸಾಮ್ರಾಜ್ಯವನ್ನು ಗೆಲ್ಲಲಾರದೆ, ರಣರಂಗದಲ್ಲಿ ಸಾವಿಗೆ ಗುರಿಯಾಗುತ್ತಾನೆ. ಈ ಅಂಶವನ್ನು ನಾಟಕಕಾರರು ಇನ್ನಷ್ಟು ಸ್ಪಷ್ಟವಾಗಿ ಧ್ವನಿಸಿದ್ದರೆ ನಾಟಕ ಒಂದು ಕಲಾತ್ಮಕ ಸೃಷ್ಟಿಯಾಗುತ್ತಿತ್ತು. ನಾಟಕಕಾರರ ಒಲವು ಕಥಾವಸ್ತುವನ್ನು ಶ್ರದ್ಧೆಯಿಂದ, ಪ್ರಾಮಾಣಿಕವಾಗಿ ನಿರೂಪಿಸುವುದರ ಕಡೆಗೇ ಕೇಂದ್ರೀಕೃತವಾಗಿದೆ. ಮಾನವನ ಅತಿಯಾದ ಮಹತ್ವಾಕಾಂಕ್ಷೆ ಹೇಗೆ ದುರಂತದಲ್ಲಿ ಪರ್ಯವಸಾನಗೊಳ್ಳುತ್ತದೆ ಎಂಬ ಮಹತ್ವದ ಎಳೆಯನ್ನು ಮತ್ತು ಸಮಕಾಲೀನ ರಾಜಕೀಯ ಗತಿ - ಸ್ಥಿತಿಗಳ ಸೂಚನೆಗಳನ್ನು ನಾಟಕದ ವಸ್ತುವಿನ ಅಂತರಂಗದಲ್ಲಿ ಹುದುಗಿಸಿಡಲು ನಾಟಕದಲ್ಲಿ ಸಾಕಷ್ಟು ಅವಕಾಶಗಳಿದ್ದುವು. ಆದರೆ ಅವು ಇಲ್ಲಿ ಮುಖ್ಯವಾಗದೆ ಬೀಬಿ ಹಾನಿಮಳ ಒಳಬೇಗುದಿಯ ಭಾವನೆಗಳಿಗೆ ಒತ್ತುಬಿದ್ದು ತೈಮೂರನ ಮಹತ್ವಾಕಾಂಕ್ಷೆಯ ಮತ್ತು ಸಮಕಾಲೀನ ರಾಜಕೀಯ ದುರಂತದ ಧ್ವನಿಯ ಕಡೆ ಗಮನ ಹರಿಸಿಲ್ಲ. ನಾಟಕದ ಶೀರ್ಷಿಕೆಯೂ ಇದನ್ನೇ ಸಮರ್ಥಿಸುತ್ತದೆ. ನಾಟಕದ ಎರಡನೆಯ ಅಂಕದಲ್ಲಿ ಸಮರ್ಕಂದ, ದಿಲ್ಲಿಗಳ ನಡುವಿನ ದೃಶ್ಯ ಬದಲಾವಣೆ ನಾಟಕದ ಓಟಕ್ಕೆ ತೊಡರಾಗಿದೆ. ತಂದೆ - ತಾಯಿಗಳ ಭಿನ್ನ ಹಂಬಲಗಳ ನಡುವೆ ಮಗ ಷಾ ರುಖ್ ತಬ್ಬಲಿಯಾಗುವ ಸ್ಥಿತಿಯನ್ನು ಕಾಣಿಸಿದ್ದರೆ ಈ ನಾಟಕಕ್ಕೆ ಹೊಸದೊಂದು ಆಯಾಮವೇ ಒದಗಿಬರುತ್ತಿತ್ತು.

ನಾವೂ ಮನುಷ್ಯರು! (೧೯೪೫) ಇದು ನಿರಂಜನರು ಪ್ರಕಟಿಸಿರುವ ನಾಲ್ಕನೆಯ ನಾಟಕ. ಆದರೂ ಇದು ಅವರು ರಚಿಸಿದ ಮೊದಲ (೧೯೪೪) ನಾಟಕ. ಇದನ್ನು ಮೊದಲ ಬಾರಿಗೆ ಅವರೇ ನಿರ್ದೇಶಿಸಿ, ಮಂಗಳೂರಿನಲ್ಲಿ ಪ್ರಯೋಗಿಸಿರುವುದು ಒಂದು ವಿಶೇಷ. ಹತ್ತೊಂಬತ್ತು ಪುಟಗಳದ್ದು ಈ ಕಿರುನಾಟಕ. 'ಬಡತನ, ಹಸಿವು, ಅಜ್ಞಾನ, ರೋಗರುಜಿನಗಳಿಂದ ನೊಂದು, ಬೇಯುತ್ತಿರುವ ಕಾರ್ಮಿಕರ, ನೇಕಾರರ ಬದುಕನ್ನು- ಸಂಘಟನೆಯನ್ನು ಒಡೆಯುಲು ಯತ್ನಿಸುವ' ಶಕ್ತಿಗಳನ್ನು ಬಯಲಿಗೆಳೆಯುವುದು ನಾಟಕದ ವಸ್ತು. ನಿರಂಜನರು ಸಮತಾವಾದಕ್ಕೆ ಹೆಚ್ಚು ಆಕರ್ಷಿತರಾಗಿದ್ದ ಕಾಲದ ಬರವಣಿಗೆ. ಸಹಜವಾಗಿ ಅಂತಹ ಬರವಣಿಗೆಯಲ್ಲಿ ಕಂಡುಬರುವ ಮನೋಧರ್ಮ, ಉದ್ವೇಗ ಇಲ್ಲಿ ಕಂಡು ಬಂದಿರುವುದು ಆಶ್ಚರ್ಯವೇನಲ್ಲ. ನಾಟಕದಲ್ಲಿ ಕಾಣಿಸಿಕೊಳ್ಳುವ ರಾಮಣ್ಣ, ರುಕ್ಕು, ಕಿಟ್ಟು, ಕಾಮತ್, ಲಸ್ರಾದೋ, ಆದಂ ಸಾಹೇಬ್ ಪಾತ್ರಗಳೆಲ್ಲಾ ಸಿದ್ಧಪಾತ್ರಗಳು. ಇಲ್ಲಿ ನಾಟಕಕಾರರಿಗೆ ಯೂನಿಯನ್ ಸಂಘಟನೆ ಪರವಾದ ಪ್ರಚಾರವೇ ಮುಖ್ಯ, ಕಲಾತ್ಮಕತೆಯಲ್ಲ. ಸಿರಿತನ, ಬಡತನ,

ಶೋಷಣೆ, ಯುದ್ಧದ ಕಾವು ಮುಂತಾದುವನ್ನು ಹಿಡಿದಿಡುವಾಗ ಯಾವುದೇ ರೀತಿಯ ಘರ್ಷಣೆಯನ್ನಾಗಲಿ, ವಿಕಾಸವನ್ನಾಗಲಿ ಕಾಣದೆ ಪಾತ್ರಗಳು ಸೊರಗಿವೆ. ಪರಿವರ್ತನೆಯ ಸಂಕ್ರಮಣ ಸ್ಥಿತಿಯ ಪದರುಗಳನ್ನಾಗಲಿ, ಹೊಸದನ್ನು ಸ್ವೀಕರಿಸುವಾಗ ಉಂಟಾಗುವ ತಾಕಲಾಟವಾಗಲಿ ಇಲ್ಲಿನ ಪಾತ್ರಗಳು ಅನುಭವಿಸುವುದಿಲ್ಲ. ಆದ್ದರಿಂದ ನಾಟಕದಲ್ಲಿ ಅನಿವಾರ್ಯವಾಗಿ ಕಾಣಿಸಿಕೊಳ್ಳಲೇಬೇಕಾದ ಮನುಷ್ಯ ಸಂಬಂಧಗಳ ಗಾಢತೆಯ ನೋಟ ಮೂಡಿ ಬಂದಿಲ್ಲ. 'ನಾವೂ ಮನುಷ್ಯರು!' ನಾಟಕ ನಿರಂಜನರು ಬರೆದ ಕಾಲಕ್ಕೆ ಒಂದು ಅರ್ಥವನ್ನು ತಂದುಕೊಟ್ಟರೂ, ಇಂದು ಯಶಸ್ವಿ ನಾಟಕಗಳ ಸಾಲಿನಲ್ಲಿ ಸ್ಥಾನ ಪಡೆಯಲಾರದು.

ನಿರಂಜನರು ಈ ನಾಲ್ಕು ನಾಟಕಗಳನ್ನಲ್ಲದೆ ಅಪ್ರಕಟಿತವಾಗಿರುವ ಮೂರು ಮನೆಗಳು (೧೯೫೬) ಕಲ್ಯಾಣ ಸ್ವಾಮಿ (೧೯೫೭) ನದಿಯ ಮಕ್ಕಳು (೧೯೫೭) ಪುರುಷೋತ್ತಮ (೧೯೬೪) ಮಣ್ಣು ಉಕ್ಕಾಯಿತು ಕಾಡು ಊರಾಯಿತು (೧೯೫೮) ಸೂತ್ರಕಿತ್ತ ಪಟ (೧೯೬೦) ಕಣ್ಣಿದ್ದವರಿಗೂ ನೀನೆ ಶಿವಾ! (೧೯೬೨) ಕನ್ನಡ ಮಹಿಳೆಯರ ಜೀವನಪರಂಪರೆ(೧೯೬೩?)ಮಾತಾಯ ಮಡಿಲೋ ಯಾತರ ಭಯವೋ (೧೯೬೩) ಕರ್ನಾಟಕ ಸ್ವಾತಂತ್ರ್ಯ ಚೇತನ (೧೯೬೪) ಕಂಪಿಸಿತು ಕನ್ನಡದ ನೆಲ (೧೯೬೪) ಪಾಪಾಸುಕಳ್ಳಿ (೧೯೬೫) ಪ್ರಸಾರ ನಾಟಕಗಳನ್ನೂ, ರೂಪಕಗಳನ್ನೂ ರಚಿಸಿದ್ದಾರೆ.

ನಿರಂಜನರ ನಾಟಕಗಳು ಆ ಕಾಲದ ಲೇಖಕರ ಮನೋಧರ್ಮವನ್ನು ಸೂಚಿಸುವ ಚಾರಿತ್ರಿಕ ದಾಖಲೆಗಳಾಗಿ ಉಳಿದಿವೆ. ನಾಟಕಕಾರರಾಗಲು ಪ್ರಯತ್ನಿಸಿ ಕಥಾಸಾಹಿತ್ಯದ ಪ್ರಕಾರಕ್ಕೆ ಲೇಖಕರು ಹೊರಳಿದ ಸೂಚನೆಗಳು ಈ ನಾಟಕಗಳಿಂದ ಮನವರಿಕೆಯಾಗುತ್ತದೆ. ನಿರಂಜನರ ಬರವಣಿಗೆಯ ಶ್ರೇಷ್ಠತೆಯನ್ನು, ಸೃಜನಶೀಲ ಶಕ್ತಿಯನ್ನು, ಅವರ ಸಾಧನೆಯನ್ನು ಈ ನಾಟಕಗಳ ಅಧ್ಯಯನದಿಂದಲೇ ನಿರ್ಧರಿಸುವುದು ತಪ್ಪು. ಒಬ್ಬ ಸೃಜನಶೀಲ ಲೇಖಕ ತನ್ನ ಬರವಣಿಗೆಯ ದಾರಿಯನ್ನು ಕಂಡುಕೊಳ್ಳುವ ಸಂಧಿಕಾಲದಲ್ಲಿ ಅವನು ಎದುರಿಸುವ ಸೃಜನಶೀಲ ಸಮಸ್ಯೆಗಳನ್ನು ಈ ನಾಟಕಗಳು ದಾಖಲಿಸುತ್ತವೆ.

ಈ ನಾಲ್ಕು ನಾಟಕಗಳನ್ನು ಒಟ್ಟಾರೆ ಗಮನಿಸಿದಾಗ ನಿರಂಜನರಿಗೆ ರಾಷ್ಟ್ರದ ಬಗ್ಗೆ ಇರುವ ಪ್ರಾಮಾಣಿಕ ಕಳಕಳಿ, ಬದಲಾವಣೆಯ ಕಡೆಗೆ ರಾಷ್ಟ್ರ ಮುಖ ಮಾಡಬೇಕೆನ್ನುವ ತುಡಿತ ವ್ಯಕ್ತವಾಗುತ್ತದೆ. ಈ ನಾಟಕಗಳನ್ನು ಬರೆಯುವ ಸಂದರ್ಭದಲ್ಲಿ ನಿರಂಜನರು ಗಾಢವಾಗಿ ನಂಬಿದ್ದ ನಿಲುವು, ಪಾತ್ರಗಳ ವಿಕಾಸದಲ್ಲಿ, ನಾಟಕ ಶಿಲ್ಪದಲ್ಲಿ, ನಾಟಕ ಕ್ರಿಯೆಯಲ್ಲಿ, ವಸ್ತು ವೈವಿಧ್ಯವನ್ನು ತರುವಲ್ಲಿ ತೊಡಕಾಯಿತೋ ಅಥವಾ ಆ ನಿಲುವನ್ನು ಸಮರ್ಥವಾಗಿ, ಕಲಾತ್ಮಕವಾಗಿ ಅರಳಿಸುವ ರಂಗಭೂಮಿಯ ಶಿಸ್ತು ಮತ್ತು ಅಧ್ಯಯನಗಳನ್ನು ಗಂಭೀರವಾಗಿ ಪರಿಗಣಿಸದೇ ಇದ್ದುದು ಕಾರಣವಾಯಿತೋ ಎಂಬ ಪ್ರಶ್ನೆ ನಮ್ಮೆಲ್ಲರ ಮುಂದಿದೆ. ○


ವಿದೇಶೀ
ಭಾಷೆಗಳಲ್ಲಿ

ಇತರ
ಭಾರತೀಯ
ಭಾಷೆಗಳಲ್ಲಿ



LIVING IS ALL
[FOR NIRANJANA]

-K. Raghavendra Rao

Between the monsoon turbulence of the coastal skies
and the calm destruction by summer sun's eyes,
you grew straight, an areca-nut tree,
firm, slim, rooted yet rotated by history's winds -
you grew away from the ancestral lores,
from the stench of ancient cruelties,
from the secure ports of bouergeois boredom,
and burst for a decade or so into our skies
like a scorching sun -
revolutionary storms ruffled your hair,
and then you, holding body, mind and soul,
fast into a ceaseless dynamo,

soared into other golden realms,
an eagle tearing apart other skies,
pouring words in torrential violence -
nothing defeats you,
neither public calumny nor nature's enmity,
and you are still there,
a tall, firm, slim (perhaps not so slim) tree,
a pole waving the flag of man,
and may it fly for ever.

MY FRIEND NIRANJANA

-Bhisham Sahni

In my relations with Niranjana, it was a case of love at first sight. I had never met him before, nor read anything written by him. I had vaguely heard his name mentioned among those who had been active in the progressive writers and artists' movement of the 40s and 50s.

I have even forgotten the precise / exact year of our first meeting. There was to be a conference of the Pragathi Pantha and I had been invited to attend it. I had been received and lodged in some hostel and there I was told that Niranjana was in one of the rooms.

He had a radiant face, with a soft, welcoming smile on his lips. He nodded his head as I entered:

"I won't get up to meet you.

But you are welcome." and then pointed to a chair close to him.

He chuckled, as he looked at me closely.

"Yes, you do resemble

Balraj. It is a family resemblance."

There was such warmth, such a kind, fraternal expression in his eyes, that I felt as though I had come home, come to my own people, come to Balraj's friends and my own.

Till then I did not know that he was handicapped. It was when he lifted up a file from the table that I sensed that there was something wrong.

He explained to me the programme, while his wife was busy tidying up the room and also doing some packing. It was this total sense of informality too that made me feel at ease. It was not an outsider who had come, but a member of their own fraternity, one of the kith and kin. It was such a heart-warming experience.

Sometimes I wonder why this deep sense of fellow-feeling has grown feeble now? Why have people begun to weigh and assess one - another with a critical glint in their eyes, critical and very often disapproving? Why don't the eyes of friends make me feel at ease now? Niranjana had looked at me as though he was taking me in his embrace, and I knew that even if he criticized me sharply, and tore up my view of things threadbare, that loving look in his eyes would still remain the same. People who have a mission in their heart have that look in their eyes, who want to draw the best out of others in a common cause, who regard every comrade as an asset to the movement, have that look in their eyes, so benign, so trusting, so full of faith and confidence.

It was at that conference that I learnt how good Niranjana was as an organiser. Of course there was a team of dedicated people who had arranged and organised and mobilised resources, but he was the moving spirit behind it all. How much he could work, in a cool, planned manner was very revealing to me.

While a public meeting was on, at Davangere, and Niranjana sat next to me on the dais, he whispered into my ear,

> "You have been paid
> a hundred rupees in
> excess of the expenses
> incurred by you. You
> have to pay back this
> excess amount. We are
> short of funds."

I did as I was told and I noticed the same nodding smile on his face.

This first meeting was a brief one. The conference was soon over. We returned to Bangalore, and after another small meeting with activists of Pragathi Pantha and the intelligentsia, in which Niranjana got worked up emotionally and his speech failed him, and which had made everyone sitting in the room so anxious and touched, I soon returned to Delhi.

Niranjana had done a wonderful job of organising the conference and bringing together fellow cultural workers after years. But during the return - journey I felt again and again, that Niranjana should take less of the organising work on himself.

But soon enough I was to learn that Niranjana had ventured into a project - a project which much younger and healthier people would hesitate to plunge into - of a 25 volume collection of world short stories in the Kannada language. And Niranjana was to be the editor. The news was breath - taking. And the Project was time - bound, which meant hectic activity at all levels - selection, translation, printing, the editorial work being the most exacting.

Yet, it was done, and done on time, and done superbly well. It was the first venture of its kind in India, in any Indian

language. I had the good fortune to be invited again on one of the occasions for the release of a volume. Niranjana was his usual self, cheerful, kind, full of beams.

Occasional letters have been the link of communication between us. And letters sometime bring sad news, news which make you anxious and concerned. Niranjana has had more than his share of pain in life. His letters at times are very disturbing. But behind these letters, as I read them, I see his benign face, his radiant, kindly smile, as patient with life, as with the foibles of his friends, as one,

> "Who suffering all, that suffers nothing
> A man that fortunes buffets and rewards
> Has taken with equal thanks ...."

It has been an honour to know Niranjana and to deem myself as one of his friends.

NIRANJANA AND SHRIRANGA

-Shashi Deshpande

As the daughter of one of Kannada's literary greats, Shriranga, I was from childhood familiar with many literary names. Niranjana was, like so many others, only a name at first. Trying to remember when I first heard the name is like trying to get at the beginning of consciousness. It was only in the late fifties when we, as a family, stayed with the Niranjanas (he was married to Anupama by then) in Mysore that Niranjana became for me a distinct personality. An incident that occured on that visit has stayed etched on my mind since then. Like any memory of an incident, the details are vague and blurred, but the impressions of it on my mind are clear and strong.

We were driving up Chamundi Hills, my father was driving and Niranjana was sitting beside him when rude cries from a

vehicle going the other way informed us that we were going the wrong way on a one-way road. The point, once we realised this, was: would we go back and start afresh on the right road? My father and Niranjana were, I remember, absolutely against this law abiding course. We would go on, right way or wrong way. As a young girl, terribly sensitive to public opinion, I was full of apprehension and embarrassment as we went on, but the two men were, I remember this too, quite unperturbed. Unperturbed? No, perhaps this is not quite the right word. It only now occurs to me that the thought of going the wrong way gave them greater pleasure than the thought of visiting Chamundi Devi.

Actually, it was this kind of a law - flouting operation that brought my father and Niranjana together. I am again vague about dates and times, but my father did tell us about how Niranjana, as a fugitive, stayed with us when he had gone 'underground'. He also referred gleefully to the fact that he could once extricate Niranjana from a case against him. It was Niranjana who gave body to these skeletal outlines. Apart from providing him with a hideout, Niranjana told us, my father, after providing him with a breakfast boldy walked out with him, regardless of the consequences of his being a government servant. As for the help which my father gave to 'that boy', as my father some times referred to Niranjana, it was a letter given by my father to the judicial officer who was to try the case. The officer also happened to be my father's ex-student. This is such a long-ago story that it can surely be quite safely revealed now that the case was dropped and Niranjana set free. Of course it is possible that my father's praise and support of Niranjana had nothing to do with this; but Niranjana will never believe this !

It must have been the impressions left on my mind by hearing of these incidents that made me expect Niranjana to be a fiery, bearded, revolutionary ideas spouting kind of a man. Instead, when we first visited their home in Mysore, I saw a soft-speaking man, a family man, living like any other with his wife and mother. The only thing in character seemed to be

what I thought was a bust of Lenin. But even that turned to be only George Bernard Shaw after all ! Anyway it wasn't long before I found the reality better than my adolescent fantasy. I appreciated the harmony in which a most unorthodox man lived with his orthodox mother and medical student wife. Then too Niranjana impressed me with his ability to relate to everyone with the same ease. It he enjoyed conversing with my father (a man who was choosy about his company), he showed the same ease in gently teasing an old aunt of ours about the gods she was carrying around ! My sister and I, when we stayed with the Niranjanas later, found that he put aside all differences in age, his intellectual stature or achievements, when he spoke with us. And, as for G.B.S., I, an admirer of his, could not be disappointed with him for long for not being Lenin. Certainly, I realise now, G.B.S. belonged there, for Niranjana is, like my father was, deeply imbued with Shavian rationalism and iconoclasm.

My father's regard for Niranjana (he admired him for being what he himself was: a self - made man and one willing to suffer for his convictions) became a soft corner for the couple after his marriage. The fact of their settling down in Dharwad perhaps added to this. We visited them once in Dharwad and I am left with an endearing memory of my father warning Anupama against eating a 'double - barrelled' banana. 'You may get twins' he laughed. Fortunately, the result was not twins, but Tejaswini.

Niranjana, whose own second daughter Seemantini was born in the same hospital five days before, was with my father the day my first child was born. It was Niranjana who cheered up my father, a very anxious expectant grandfather, and persuaded him to go home for some rest, promising him that the grandchild would wait until he returned.

It was years later, when my husband and I came to settle down in Bangalore, that we took up with the Niranjana family afresh. By now, due to various circumstances, my father and

Niranjana could not meet very often and I unwittingly became a sort of link, retailing news of one to the other. I felt very much at home in the Niranjanas' home. The atmosphere of their book-filled home, so liberal and open, reminded me of my own childhood home. Like that one, this too was a democracy, and being daughters didn't detract from one's freedom. Moreover my husband and I were very much struck with the positiveness with which Niranjana guided his daughters in so many matters. To see him as a parent was to learn how a parent could make children confident and selfreliant. To me too, who had just begun, very hesitantly, my writing career, Niranjana became a sort of guide, particularly in the tricky matter of dealing with publishers.

Once, wanting to consult him about the terms of the contracts I had signed with my publisher, I gave them to him. They came back to me neatly filed, the file duly superscribed with the necessary information. It reminded me of my father who also unlike the stereotyped image of a writer, was extremely methodical, specially in any matter concerning his work. This came for him from his pure professionalism, something which Niranjana also has in full measure. In fact, only as I began writing this, did I realise how much the two men shared in common. A healthy sense of humour that enables a person to laugh even at himself. A healthy interest in human beings. An inability to put up with fools. The raconteur's touch in telling a story which made it fascinating for any listener.

When my father's 75th birthday was celebrated at a public function, Niranjana made it a point to be present. Knowing how little he went out, my father was deeply touched. The very last social occasion my father attended was Tejaswini's wedding reception. In spite of not very good health, he came with us. He went straight, I remember, to Niranjana and clasped his hands in his. A photograph of him and my mother, taken on this occasion,was sent by the Niranjanas to my parents. Characteristically my father replied promptly to thank

them, and also complained that he looked so old and my mother so young, that she looked like his second wife! The Niranjanas were with us in our hour of sorrow when my father left us. They shared our grief; so much so that my husband told me he was worried about Niranjana's shaken state. It was my husband who had to comfort him.

'How odious all authors are and how doubly so to each other.' Henry Edward Fox, the Fourth Lord Holland is supposed to have said this. In general this is true. Which makes it all the more of a privilege for me to have seen the mutual regard and respect between two literary men, O

A GREAT FIGHTER

-M. B. Rao

Way back in 1943 I first met Niranjana. I do not remember exactly why he had come to Bombay. I have a vague idea that it was for the conference of progressive writers. He became instantly popular among those of us who knew Kannada. He was also keenly interested in everyone he met. In fact at that time he wrote a short story based on the life of one of us, Ganesh Byndoor.

He was a young man then. A very handsome person - like the statue of a Greek god, with large intelligent eyes, thick mop of hair, fair complexion, muscular body and overflowing energy.

Some time later I heard that he had given up his newspaper job in Mangalore, later in Bangalore and shifted to Hubli to edit the Kannada weekly of the Communist Party. I met him there on my way to attend the kisan conference in Karwar along with the president - elect S.S. Mirajkar.

Next time I saw him was at the end of 1950 when he had come to Bombay to consult with S.V. Parulekar on the differences in the party. This was in the house of a sympathiser who was the host to several of us who were in hiding. Under the circumstances neither of us recognised the other.

Then came the great catastrophe in 1951 when the party policy was roundly denounced as adventurism by the international communist journal **For a Lasting Peace** etc. To have accepted a wrong policy, to have implemented it blindly, to have carried it forward to the absurd limit, all this was a shock to many.

The party lost 75 per cent of the membership in the aftermath. The intelligentsia that had flocked to the party banner during the war period, enthused by the spectacular victories of the Red Army, lost faith and left the party.

Meanwhile Niranjana also came to the conclusion that he was a misfit in a political party. He was essentially a writer and he had no interest in the party apparatus nor in the interminable squabbles and accusations and counteraccusations that were eating into the vitals of the party.

Thus Kulkunda Shiva Rao the writer-cum-potitical worker became Niranjana the writer. That does not mean that he had given up his ideals nor turned his back on the toiling masses. He was still fighting the same battle - but by other means.

So his first major work was the story of Kayyur martyrs - **Chirasmarane.** This revealed once and for all his hatred of exploitation, his feeling of oneness with the exploited. More than that it revealed his photographic memory of events that had taken place over a decade before. Thus **Chirasmarane** is historical fiction or fiction that is history. The characters are drawn with a fine brush, just like Mughal miniatures, not a hair is out of place, not a detail is missing, yet they seem more than life - size and can never be forgotten by the reader. The same quality is there in his other works.

This sense of realism is what made him a progressive writer. He is wholly on the side of the poor and the exploited, not out of sympathy but because it is branded on his flesh and soul from his childhood. Abandoned by his father when yet a child, he struggled for a morsel of rice and for some education. His entire life has been one long struggle against poverty, exploitation and degradation of mankind.

Many an author who has been a progressive writer in the early years has later fallen on the wayside. His stock of sympathy for the underdog soon gets exhausted, and then he falls a victim to "middle class morality" - just as Alfred Doolittle in Shaw's **Pygmalion.** Sympathy is too fragile a stick to lean on heavily.

In Niranjana's case it is the recognition of the fact that exploitation is not only unjust socially but harmful productively. It is bound to end by the action of the exploited themselves and not by the sympathy of do-gooders. Pragathi Pantha which he started with so much hope ultimately fell a victim to these do-gooders.

Thus Niranjana has all his life been a fighter. This, not only in his literary career but in his personal life too. I saw this when I met him again after 40 years.

My wife, daughter and I were on a South India tour in 1983, and we halted in Bangalore for a few days. We spent a couple of days in Niranjana's house and I had wide-ranging talks with him.

Of course, the discussions were interesting. But more interesting was the man himself. Two strokes had left him paralysed on the left side. But he refuses to be an invalid. Just as he is so bold in his social outlook, he is fiercely self-reliant in his personal life. In spite of his disability, he insists on looking after himself. He does all his personal chores like washing

clothes and arranging his things himself. He is proud that he can move about with the help of chair on which he has had castors put. And with the same self - reliance he faces the petty attacks of his erstwhile colleagues and one time friends and admirers.

Yes, the statue has been chipped and broken here and there, all the same it is still the Greek god. I am sure it will weather all the storms and stresses of life and stand before us bold as ever for years to come. O

A SELF MADE MAN

-K. Krishna Marar

The Rajah's High School, Nileshwar, can be proud of having produced many a brilliant individual who may be seen all over the country. The good name of the school and its popular Head Master Sri Ramakrishna Rao attracted students to Nileshwar from the interior parts of the district. The hostel attached to the school, the cheap living conditions of the locality, the quiet atmosphere of the place and above all the munificence of the Nileshwar Rajah, the then Manager of the school, were other attractions. Besides, High Schools were few and far between in the district (former South Kanara). Between Mangalore and Payyanur this was the only aided school. For the sake of Kannada students parallel classes in Kannada were run in the high school sections. Qualified Kannada knowing teachers were also appointed.

Niranjana (the then Kulkunda Shiva Rao), the well known Kannada writer, is one of the worthy sons of this great institution. Niranjana, from far off Puttur, joined the school, if I remember correct, in form IV in the year 1938. I was one of the science teachers of the school. My contact with Niranjana was in form V and VI. I was handling English Composition and Grammar

Classes. Shiva Rao was an above - average student, very quiet, well - behaved, and hard working. He could then write simple correct English. Often, his compositions were worth reading in the open class and I used to do so. He was a good reader and used to take library books every week. He never used to return them without reading as some other pupils did.

I would like to mention here an incident which made him very endearing to me. One evening, I was passing along the road in the main bazaar when I met him coming from the opposite side. He was having newspapers in his hand. I could understand that it was a hobby to him to enter big shops and search for news papers containing good articles in Kannada and English and return them after reading. I could also understand that he used to write articles in Kannada for magazines and earn money. I learnt that he was not a hostel student. He was residing in a private house with his mother. The family was in poor circumstances, living on whatever little they had. Ever since the occurrense of this incident, I used to observe the boy very closely. From enquiry, I could understand that other teachers also had a very good opinion of the boy. Slowly, he too could understand that Marar Master had a soft corner for him.

Another incident. Shiva Rao knew that I was in charge of supplying hand-pound rice to the hostel. Once he requested me to give him a 'mura' of rice, the price of which could be paid only after a month. I at once consented. - The very next day in the evening he followed me to my house. I specially noted his poor dress and knew he was in financial difficulties. A mura of rice bound in hay was given. He carried it on his head to his house five miles away. He paid the price in full before the end of the month. Oh God, how I wish now I should have given it free to him. But I am sure he wouldn't accept it free. It is an old story. Still it is fresh in my mind.

I have already mentioned that he was a wide reader and devoured books. He might have exhausted reading all the books

in the library. He took part in all extra curricular activities of the school and became well-known in that 'little world'. While in form VI he became a student leader. For the first time in the school he organised a Students' Union and got printed a Magazine. He became a good speaker and writer. At the condolence meeting held on the sad demise of the school Kannada Pandit, Sri Shastri, I even now remember the splendid English speech he delivered beginning with 'ಇವತ್ತು ಒಂದು ಕೆಟ್ಟ ದಿನ'.

While being busy with his literary activities he did not forget to take care of his physique. He joined Sri Narayana Pidarar's Gymnasium and practised 'asanas' and other exercises. He also studied Hindi in private under Comrade Madhavan. I am afraid whether he was even drawn to politics. It was at this time the famous Kayyoor murder case took place. Fourteen years later while residing in Bangalore he wrote a novel in Kannada based on this theme.

Passing the S.S.L.C. Examination was no concern or problem to him. However, some days before the examination he took from me an alarm time-piece for intensive preparation. He returned it after the examination. It seems that he had already planned his future life, with greater ambitions. Let me not be misunderstood when I reveal that he did not care even to receive his S.S.L.C. Book. I am sure his early life in Nileshwar had taught him to shoulder responsibilities and to stand on his own legs.

After the examination I had no news of him. I was even afraid whether he had turned a Revolutionary. I was busy with my own professional work and domestic worries. Many years later I came to know that Shiva Rao had settled in Bangalore writing Novels and Short Stories. In 1965 I became the Head Master of the school. In 1968 the school was celebrating its Golden Jubilee. Some of us paid a visit to Karnataka. Our object was to collect funds for the celebration and also to invite some worthy old student to preside over the old students day'

celebration. Sri Vittaldas Shetty,the Minister for Agriculture (Old Student), could not oblige us on grounds of pressure of work. Next, we tried Niranjana who readily accepted the offer. Our joy knew no bounds when we met after a long interval. We had a long talk on odd topics. We met Dr. Anupama Niranjana, his wife. I was immensely pleased with his vast achievements. He spread before me the many books (over fifty) he had written and wanted me to carry a few for the school library. When we bade good - bye, he gave us a sum of rupees 101 towards the celebration fund.

In due course, the printed invitation letter was sent. On the day of the function both Mr. & Mrs. Niranjana with their daughter reached the school sufficiently early to participate in the function. They were given a cordial welcome by the students and teachers. In his presidential address, he spoke high of his Almamater and paid glowing tributes to his teachers. He referred, in the course of his speech, to the alarm (time - piece) I had given him while he was at Nileshwar. After the function he recorded a brief account of his visit to the school in the Visitors' Book beginning with the sentence in Kannada 'ಇವತ್ತು ಒಂದು ಒಳ್ಳೆ ದಿನ'.

About two years back, in 1984 he sent me an invitation for his daughter's marriage. I was very happy. I sent him a reply thanking him for the invitation and also touching his past life in Nileshwar in our midst. Exactly after two months he wrote a precious letter wherein he mentioned how he had an attack of paralysis as back as 1971 and how it was resisted with all his might. Fortunately the brain was spared, though not completely cured.

Let me conclude this account after mentioning another striking incident. I had already expressed that Niranjana, while at Nileshwar, had been receiving training in physical education under Sri Narayana Pidarar. At that time he was not in a positi-on to give him 'Guru Dakshina'. In 1984 he sent him through

a friend a sum of rupees 101 to be given as 'Guru Dakshina'. It is said that tears of joy rolled over his cheek as he received the amount. Such sense of gratitude can rarely be seen. May God give this Self Made Man health and strength to serve his fellowmen through his brilliant writings. ○

NIRANJANA, THE N'ER - SAY - DIE

-KVR

It is getting more and more difficult nowadays to come across such a high - spirited veteran of leftist movement as Niranjana whom one is loath to describe old. When I first met him on the occasion of the inauguration of Bandaya Sahitya Sammelan in his house, I had little or no idea of his literary eminence. But I returned with the indelible impression, based on fact, that both he and his wife and their young daughter were all literary personalities, each in his or her way. And that impression was not superficial. On the contrary, a reading of their literary output confirmed it so much so I am now an admirer, especially of Niranjana as a remarkable novelist of our times.

The very fact that Niranjana had chosen to fraternise with the REBEL WRITERS' CONFERENCE in sheer disdain for Kannada Sahitya Sammelan at Dharmasthal where orthodoxy was to rub shoulders with Modernity a la the decadent west, speaks for itself. The preponderance of the DALIT element in the Bangalore Conference must have been why that choice was made. Anti - elitist, vibrant with the energy and new - found awareness among the literary champions of the down - trodden masses, oppressed by the twin-curses of caste and class, the Bandaya Sahitya Sammelan was an event, while the other was only of a routine character. A communist by conviction, if not by affiliation, has to be right here where writers find their feet

